START

START

MICRO FILMED
BY

KARNATAKA STATE
ARCHIVES
1992

MICRO FILMED
BY

KARNATAKA STATE
ARCHIVES
1992

ARS 38 APP 90-91

"ಜಯಂತಿ" ಮಾಸ ಪತ್ರಿಕೆ

ಜೂನ್ 1957 ರ ಪುಟ 1

ರಿಂದ ಮುಂದುವರಿಸಲಾಗಿದೆ

ARS 38 APP 90-91

"ಜಯಂತಿ" ಮಾಸ ಪತ್ರಿಕೆ ಜೂನ್ 1957 ರ ಪ್ರತಿ 1 ರಿಂದ ಮುಂದುವರಿಸಲಾಗಿದೆ.

ಜಯಂತಿ

ಸಂಪುಟ ೨೦ — ಸಂಚಿಕೆ ೧

೧೯೫೭ — ಜೂನ್

ಯಾವುದು ಸಾಹಿತ್ಯ?

卐

ಇದ್ದುದನು ಇದ್ದಂತೆಯೆ ಬರೆದೊರೆವುದು ಅದೆಂತಹ ಸಾಹಿತ್ಯವಯ್ಯಾ !
ಅಯ್ಯಾ ಸಾಹಿತ್ಯವೆನಿಸೀತೇ ಕರಣಿಕರ ಕರಣದ ಕಡತಂಗಳು ?
ಸಾಹಿತ್ಯವೆನಿಸೀತೇ ಹಿರಿಯರ ಮರಣದ ಶಾಸನಂಗಳು ?
ಸಾಹಿತ್ಯವೆನಿಸೀತೇನಯ್ಯಾ, ಸರಕಾರಕ್ಕೆ ಬರೆವ ಬಿನ್ನವತ್ತಳೆ
ಮೊರೆಯೋಲೆಗಳು ?
ಸಾಹಿತ್ಯವೇನಯ್ಯಾ ದಿನ-ವಾರಪತ್ರಿಕೆಗಳ ಸ್ತಂಭಗಳ ತುಂಬುವ
ಸುದ್ದಿಯೋಲೆಗಳು— ಜಾಹೀರಾತಿನ ಜಾಲಂಗಳು ?

ಸಾಹಿತ್ಯವೆನಿಸೀತೇನಯ್ಯಾ, ಆಡಳಿತದ ಹುಕುಮ್-
ಫರ್ಮಾನುಗಳು— ಜಾಹೀರ್ ನಾಮಾಗಳು ?
ವಾಸ್ತವವನ್ನು ಆದರ್ಶದ ಕಡೆಗೆ ಒಲಿಸುವ
ಆದರ್ಶವನ್ನು ವಾಸ್ತವಪ್ರಪಂಚಕ್ಕೆ ಎಳೆಯುವ
ಎದೆಯ ಮಾತುಗಳ ಸ್ರೋತವೇ ನಿಜವಾದ ಸಾಹಿತ್ಯವೆನ್ನುವಳಯ್ಯಾ
ನಮ್ಮ ಭಾವರಾಜ್ಯದ ರಾಣಿ ವಾಗೀಶ್ವರಿ !

—ಸಾಮಾಜೀ

JAYANTI

ಈ ಸಂಚಿಕೆಯಲ್ಲಿ:

ಈ ಸಲದ ಸಾಹಿತ್ಯಸಮ್ಮೇಳನ (ಸಂಪಾದಕೀಯ)

ಸಂಪಾದಕನು ೧

ನಾಡನಡೆ (ಪ್ರಾಸಂಗಿಕ ಟಿಪ್ಪಣಿಗಳು)

'ಕಾಲಭೈರವ' ೩

ಪರಿವರ್ತನೆ (ಸಣ್ಣಕತೆ)

ಶ್ರೀಮತಿ ಎಂ. ಕೆ. ಜಯಲಕ್ಷ್ಮಿ, ಕರಗದ ೫

ಪ್ರತಿಧ್ವನಿ (ನವ್ಯಕವನ)

"ಶ್ರೀಹರಿ" ಬೆಳಗಾಂವಿ ೧೬

ಹಿಂದೂಸಂಸ್ಕೃತಿ—ಆಚಾರಗಳು (ವಿವೇಚನಾತ್ಮಕ)

ಶ್ರೀ. ಲಕ್ಷ್ಮಣ ಜೋಶಿ ಬಿ. ಎ., ಬಿ. ಇಡಿ. ಕೂಡ್ಲಿಗಿ ೧೭

ಅಮರತೆಯ ಶಿಲ್ಪಿ (ಕವನ)

ಸೌ. ಪಾರ್ವತೀದೇವಿ ಹೆಗಡೆ, ಧಾರವಾಡ ೨೧

ಭಕ್ತಿಚಂದ್ರೋದಯ (ವ್ಯಂಗ್ಯರೂಪಕ)

ಶ್ರೀ. ಉಡುಪಿ ವೆಂಕಟಕೃಷ್ಣರಾವ್ ಎಂ. ಎ, ಮದ್ರಾಸ್ ೨೨

ನಾ ಕಂಡ ಬೆಂಗಳೂರು (ಪ್ರವಾಸ ಪರಿಚಯ)

ಶ್ರೀ. ಸಗರ ಕೃಷ್ಣಾಚಾರ್ಯ ಬಿ. ಎ., ಬಿ. ಇಡಿ. ರಂಗಂಪೇಟೆ ... ೨೬

ಕನ್ನಡದಲ್ಲಿ ಸಣ್ಣಕಥೆಗಳು (ಲೇಖಾಂಕ ೨)

ಶ್ರೀ. ಸಿ. ಎಸ್. ಕುಲಕರ್ಣಿ ಎಂ. ಎ., ಬಿ. ಟಿ. ಧಾರವಾಡ ೩೦

ತಾಜಮಹಾಲ್ (ಕವನ)

ಶ್ರೀ. ಎಂ. ರಾಧಾಕೃಷ್ಣರಾವ್ ಬಿ. ಎ., ಬಿ. ಟಿ. ಕಾಸರಗೋಡು ... ೩೪

ಸಾಹಿತ್ಯವಿಮರ್ಶೆಯ ಶಿಕ್ಷಣರಂಗ

ಶ್ರೀ. ಕೆ. ಎಸ್. ಶರ್ಮಾ 'ವಿದ್ವಾನ್' ಕಾಸರಗೋಡು ... ೩೫

ಸಾಹಿತ್ಯವನವಿಹಾರ (ಪುಸ್ತಕಪರಿಚಯ)

ಶ್ರೀ. ಬಿ. ಪಿ. ಎಸ್. ರಾವ್ ೪೦

ಸಾದರ ಸ್ವೀಕಾರ .... ಹೊದಿಕೆಯ ೩ನೆಯ ಪುಟ

ಜಯಂತಿ

ಸಂಪುಟ ೨೦ ಸಂಚಿಕೆ ೧

ಕುಟುಂಬದಲ್ಲಿಯ ಎಲ್ಲರೂ
ಜ್ಞಾನವನ್ನೂ ರಸಾನಂದವನ್ನೂ
ಪಡೆಯಬಹುದಾದ
ಮಾಸಪತ್ರಿಕೆ

●

ಸಂಪಾದಕರು:
ಡಾ. ಬೆಟಗೇರಿ ಕೃಷ್ಣಶರ್ಮ

●

ಸಂಚಿಕೆ ಪ್ರತಿತಿಂಗಳ
ಮೊದಲನೆಯ ತಾರೀಖಿಗೆ
ಪ್ರಕಟವಾಗುವುದು.

ವಾರ್ಷಿಕ ವರ್ಗಣಿ ೫ ರೂ.
ಬಿಡಿ ಸಂಚಿಕೆಗೆ ೮ ಆಣೆ.

ಜಾಹೀರಾತು ಕೊಡಬಯಸುವವರು
ದರಗಳಿಗಾಗಿ ಬರೆದು ಕೇಳಬೇಕು.

●

ಅನೇಕ ಊರುಗಳಲ್ಲಿ
ಜಯಂತಿ ಮಾರುವ
ಏಜಂಟರು
ಬೇಕಾಗಿದ್ದಾರೆ

ಸಂಪಾದಕೀಯ

ಈ ಸಲದ ಕನ್ನಡ ಸಾಹಿತ್ಯಸಮ್ಮೇಳನ

ಕಳೆದ ತಿಂಗಳ ೭-೮-೯ನೆಯ ದಿನಾಂಕಗಳಲ್ಲಿ, ಧಾರವಾಡದಲ್ಲಿ ೩೯ನೆಯ ಕನ್ನಡ ಸಾಹಿತ್ಯ ಸಮ್ಮೇಳನದ ಸಮಾರಂಭವು ಜರುಗಿತು. ಸಮ್ಮೇಳನಕ್ಕಾಗಿ ಕನ್ನಡ ನಾಡಿನ ಮೂಲೆ-ಮೂಲೆಗಳಿಂದಲೂ ಗುಂಪುಗಟ್ಟಿ ಬಂದಿದ್ದ—ಉತ್ಸಾಹಿಗಳಾದ—ಸಾಹಿತ್ಯಪ್ರಿಯ ಜನರನ್ನು ನೋಡಿದರೆ, ಸಮ್ಮೇಳನದ ಸಮಾರಂಭವು ಮೂರು ದಿನ ವಿಜೃಂಭಣೆಯಿಂದಲೇ ನಡೆಯಿತೆಂದು ಹೇಳಬಹುದು.

ಈ ಸಲದ ಸಮ್ಮೇಳನ ಕಾರ್ಯಮಂಡಲಿಯ ವೈಶಿಷ್ಟ್ಯಪೂರ್ಣ ವ್ಯವಸ್ಥೆಯ ಮೂಲಕ, ಸಾಹಿತ್ಯಕ್ಕೆ ಸಂಬಂಧವಿಲ್ಲದ ಜನರು ಸಮ್ಮೇಳನದ ಪ್ರತಿನಿಧಿಗಳಾಗಿದ್ದರು; ಪ್ರತಿನಿಧಿಗಳಾಗಬೇಕೆನ್ನುವ ಹಲವು ಜನ ಸಾಹಿತಿಕರು, ಅದಕ್ಕೆ ಅವಕಾಶ ದೊರೆಯದೆ ಸಾಮಾನ್ಯ ಪ್ರೇಕ್ಷಕರಾಗಿ ಕುಳಿತುಕೊಂಡಿದ್ದರು.

‘ಇಷ್ಟಮಿತ್ರರೊಂದಿಗೆ ಸಮ್ಮೇಳನಕ್ಕೆ ದಯೆಮಾಡಿಸಬೇಕು,’ ಎಂಬುದಾಗಿ ಕಾರ್ಯ-ಮಂಡಲಿಯಿಂದ ಬಂದ ಔತಣದೋಲೆಯನ್ನು ನೆಚ್ಚಿ ಸಮ್ಮೇಳನ ಮಂಟಪಕ್ಕೆ ಹೋದವರು, ಒಳಗೆ ಪ್ರವೇಶ ದೊರೆಯದೆ ಪೇಚಾಡಬೇಕಾಯಿತು. ಕಾಯ್ದಿಟ್ಟ ಮುಂದಿನ ಗದ್ದುಗೆಗಳೆಲ್ಲ ಸರಕಾರದ ಅಧಿಕಾರಿಗಳಿಗೆ. ಸಮ್ಮೇಳನದ ಕಾರ್ಯಕ್ರಮದಲ್ಲಿ ಭಾಗವಹಿಸಬೇಕೆಂದು ಮೊದಲೇ ಆಮಂತ್ರಣ ಕೊಟ್ಟ ಸಾಹಿತಿಕರಿಗೆ, ಕುಳಿತುಕೊಳ್ಳಲು ಗೊತ್ತುಮಾಡಿದ ಸ್ಥಳವೇ ಇರಲಿಲ್ಲ. ಅವರ ವ್ಯವಸ್ಥೆಯನ್ನು ಅವರವರ ದೈವಕ್ಕೇ ಒಪ್ಪಿಸಿಕೊಡಲಾಗಿತ್ತು. ಆಸನ ದೊರೆತ ಪುಣ್ಯಾತ್ಮರು ಎಲ್ಲೆಲ್ಲಿಯೋ ಕುಳಿತುಕೊಂಡರು; ಆಸನ ದೊರೆಯದವರು ಎಲ್ಲೆಲ್ಲಿಯೋ ನಿಂತುಕೊಂಡರು.

ಅಧ್ಯಕ್ಷರಾಗಿ ಬಂದ ಶ್ರೀಮಾನ್ ಕೆ. ವಿ. ಪುಟ್ಟಪ್ಪನವರನ್ನು ಕಣ್ಣಾರೆ ನೋಡುವುದು, ಅವರ ಮಾತುಗಳನ್ನು ಕಿವಿಯಾರೆ ಕೇಳುವುದು—ಅನೇಕ ಜನರಿಗೆ ಕುತೂಹಲದ ವಿಷಯವಾಗಿತ್ತು. ಇದರ ಪರಿಣಾಮವಾಗಿ ಸಮ್ಮೇಳನದ ಸಂಚಾಲಕ ಮಂಡಲಿಗೆ ಆರ್ಥಿಕಚಿಂತೆ ಖಂಡಿತವಾಗಿಯೂ ಕಡಮೆಯಾಗಿರಬಹುದು. ಇದೊಂದು ಸಮಾಧಾನಪಡಬೇಕಾದ ಸಂಗತಿಯು.

ಹೊರಗಿನಿಂದ ಬಂದವರ ಆತಿಥ್ಯದ ಏರ್ಪಾಡಿನ ಬಗೆಗೆ ನಾವೇನು ಬರೆಯುವ ಅಗತ್ಯವೇ ಇಲ್ಲ. ಅನನುಭವಿಕರಾದ ಕಾರ್ಯಕರ್ತರಿಂದಾದ ವ್ಯವಸ್ಥೆಯಲ್ಲಿ ಅನೇಕ ಕೊರತೆ-ಗಳು ಒದಗಿರಬಹುದು. ತಾವು ಬಂದ ಮಹೋದ್ದೇಶದ ಕಡೆಗೆ ದೃಷ್ಟಿಯಿರಿಸಿ ಅತಿಥಿಗಳು ಆ ಕೊರತೆಗಳನ್ನು ಸಹಿಸಿರಲೂ ಬಹುದು. ಆದುದರಿಂದ ಸಮ್ಮೇಳನದ ಕಾರ್ಯಕಲಾಪ-ಗಳನ್ನು ಕುರಿತೇ ನಾವಿಲ್ಲಿ ಚರ್ಚೆಮಾಡಬೇಕು.

ಮೊದಲ ದಿನದ ಕಾರ್ಯಕ್ರಮದ ಪ್ರಾರಂಭ ಹಗಲಹೊತ್ತಿನ ಐದುಗಂಟೆಗೆಂದು ಇದ್ದರೂ, ಆರುವರೆಗೆ ಮೊದಲಾಯಿತು. ಸಮ್ಮೇಳನ ಪ್ರಾರಂಭದಲ್ಲಿ ಹಾಡಿದ ‘ವಂದೇ ಕರ್ನಾಟಕ’ ಎಂಬ ಗೀತವು, ತನ್ನ ವಿಶಿಷ್ಟ ರೀತಿಯ ಮೂಲಕ ಒಳ್ಳೆಯದಾಗಿಯೆ ಇದ್ದರೂ, ಪ್ರಾರಂಭದ ಮಂಗಲಗೀತವಾಗುವ ಗುಣ ಅದರಲ್ಲಿಲ್ಲ. ಅದು ಹುಟ್ಟಿ ಬಂದುದು ಒಂದು ವ್ಯಂಗ್ಯ—ವಿಡಂಬಕ ಸಂದರ್ಭದಲ್ಲಿ. ವ್ಯಂಗ್ಯ ಕವಿವಾಣಿಯಾಗಿ! ಅಂದು ಕೊನೆಯ ಭಾಗವಾಗಿ ಮತ್ತೆ ಮತ್ತೆ ಹಾಡಿದ ‘ಉಗ್ಗಡಿಸಿರಿ ನಾಡಿಗೆ ಜಯ ಜಯ ಜನುಮೆಂದೇ’ ಎಂಬ ಮಾತನ್ನು ಸಮ್ಮೇಳನದ ಸಂಚಾಲಕವರ್ಗ ಒಪ್ಪಿಕೊಳ್ಳುವುದೆ? ಕನ್ನಡಜನತೆ

ಒಪ್ಪಿಕೊಳ್ಳುವುದೇ? ಇಂತಹ ಅನೌಚಿತ್ಯದಿಂದಲೇ ಸಮ್ಮೇಳನವು ಏಕೆ ಪ್ರಾರಂಭವಾಯಿತೆಂಬುದನ್ನು, ಅನೇಕ ಜನ ಔಚಿತ್ಯಪ್ರಿಯರು ಅಂದು ಆಡಿಕೊಂಡರು.

ಅಂದಿನ ಕಾರ್ಯಕಲಾಪದ ಮೂರುಗಂಟೆಗಳ ಅವಧಿಯಲ್ಲಿ ಸಮ್ಮೇಳನದ ಸದಸ್ಯರು, ಡೆಮಿ ಅಷ್ಟಪತ್ರದ ಸುಮಾರು ಎಪ್ಪತ್ತು ಪುಟಗಳ ಭಾಷಣವಾಚನವನ್ನು ಕೇಳಬೇಕಾಯಿತು. ಸ್ವಾಗತಾಧ್ಯಕ್ಷರ ಮತ್ತು ಉದ್ಘಾಟಕರ ೨೪ ಪುಟಗಳ ಭಾಷಣವಾಚನವನ್ನು ಕೇಳಿದ ಸದಸ್ಯರಿಗೆ ಎದ್ದ ಶಿರೋವೇದನೆಯನ್ನು, ಪರಿಷತ್ತಿನ ಅಧ್ಯಕ್ಷರಾದ ಶ್ರೀಮಾನ್ ಶಿವಮೂರ್ತಿ ಶಾಸ್ತ್ರಿಗಳು ತಮ್ಮ 'ಕೀರ್ತನ ಕೇಸರಿತನ' ದಿಂದ ಕಳೆಯದೆ ಹೋಗಿದ್ದರೆ, ಮುಂದಿನ—ಸಮ್ಮೇಳನಾಧ್ಯಕ್ಷರ—ಭಾಷಣವನ್ನು ಕೇಳುವ ತಾಳ್ಮೆ ಬಹುಜನರಲ್ಲಿ ಉಳಿಯುತ್ತಿರಲಿಲ್ಲ. ಸಾಂಪ್ರದಾಯಿಕವಾಗಿ ಅಧ್ಯಕ್ಷರ ಆಯ್ಕೆಯ ಕುರಿತು ಮಾತನಾಡಲು ಮುಂದೆ ಬಂದ ಮಹನೀಯರಲ್ಲಿಯ ಕೆಲವರೂ ವೇಳೆಯನ್ನು ದುರುಪಯೋಗ ಮಾಡದೆ ಇರಲಿಲ್ಲ. ಅಧ್ಯಕ್ಷರ ಆ ದೀರ್ಘಭಾಷಣವನ್ನು ಬಹಳ ಜನರು, ಶ್ರೀಮಾನ್ ಪುಟ್ಟಪ್ಪನವರ ಮೇಲಿನ ಆದರದ ಮೂಲಕವೇ ತಾಳ್ಮೆಯಿಂದ ಕೇಳಿದರು.

ಸ್ವಾಗತಾಧ್ಯಕ್ಷರ ಭಾಷಣದಲ್ಲಿಯ ಧಾರವಾಡದ ಮತ್ತು ಪರಿಸರ ಪ್ರದೇಶದ ಐತಿಹಾಸಿಕ ಪರಿಚಯ ಹೊಸದೆನಿಸುವಂತಿತ್ತು. ಆದರೆ ಮಂಟಪದಲ್ಲಿ ಕೂಡಿದ ಜನಜಂಗುಳಿಗೆ ಅದರ ಬೆಲೆ ತಿಳಿಯುವ ಬಗೆ ಹೇಗೆ? ಮಾನ್ಯ ಮಂತ್ರಿ ನಿಜಲಿಂಗಪ್ಪನವರ ಭಾಷಣ ಅವರ ಸಾಹಿತ್ಯಪ್ರಿಯತೆಯನ್ನು ಹೊರಹೊಮ್ಮಿಸುವಂತಿತ್ತು. ಅಧ್ಯಕ್ಷರ ಭಾಷಣ ಪ್ರಾರಂಭದಲ್ಲಿ ಬರಿ ಕವಿವಾಣಿಯಾಗಿದ್ದರೂ, ಉತ್ತರಾರ್ಧದಲ್ಲಿ ಅವರು ಬಿತ್ತರಿಸಿದ ಬೇರೆ ಬೇರೆ ಭಾಷೆಗಳ ಸ್ಥಾನನಿರ್ದೇಶದ ವಿವರಣೆಯೂ ಕನ್ನಡಕ್ಕೆ ಯಾವ ಪ್ರಧಾನಸ್ಥಾನವು ದೊರೆಯಬೇಕೆಂಬುದನ್ನು ಗಟ್ಟಿಮುಟ್ಟಾಗಿ ಹೇಳಿದುದೂ ವಿಚಾರಪೂರ್ಣವಾದವುಗಳಾಗಿವೆ. ವೈಜ್ಞಾನಿಕ ಪರಿಭಾಷೆಗಳ ಬಳಕೆ-ಸ್ವೀಕಾರಗಳ ಬಗೆಗೆ ಪಟ್ಟ ಅವರ ಅಭಿಪ್ರಾಯ ಸ್ಪಷ್ಟವಾಗಿದ್ದರೂ, ಅದನ್ನು ಸಂಪೂರ್ಣವಾಗಿ ಒಪ್ಪದ ವಿಚಾರಿಗಳೂ ನಮ್ಮಲ್ಲಿ ದೊರೆಯಬಹುದು.

ಮರುದಿನ ಬೆಳಗಿನಲ್ಲಿ ಸಮ್ಮೇಳನ ಮಂಟಪದಲ್ಲಿ ಕಾವ್ಯಗಾಯನದ ಕಾರ್ಯಕ್ರಮ ನಡೆದರೆ ಬೇರೊಂದು ದೊಡ್ಡ ಕೋಣೆಯಲ್ಲಿ ಪ್ರೊ. ಕುಂದಣಗಾರರ ಅಧ್ಯಕ್ಷತೆಯಲ್ಲಿ ಭಾಷಾವಿಷಯಕವಾದ ಚರ್ಚೆ ನಡೆಯಿತು. ಒಂದೆಡೆ ಸವಿಯೂಟದ ಸಮಾರಂಭ ಇನ್ನೊಂದೆಡೆ ಕಹಿಮದ್ದಿನ ಹಂಚಿಕೆ. ಸಾಮಾನ್ಯಜನತೆ ಯಾವುದನ್ನು ಆರಿಸಬಹುದು? ಭಾಷಾವಿಷಯಕವಾದ ಚರ್ಚೆಯಲ್ಲಿ ಭಾಗವಹಿಸಿದ ಮಹನೀಯರಲ್ಲಿ ಅನೇಕರು, ತವಗಿರುವ ಆ ವಿಷಯದ ದೂರದ ಪರಿಚಯವನ್ನೇ ಪ್ರಕಟಿಸಿದರು.

ಮಧ್ಯಾಹ್ನ ಕಳೆದು ಮೂರು ಗಂಟೆಗೆ, ಡಾ. ರಂಗನಾಥ ಮುಗುಳಿಯವರ ಅಧ್ಯಕ್ಷತೆಯಲ್ಲಿ, ೧೯ನೆಯ ಶತಮಾನದ ಸಾಹಿತ್ಯ ನಿರ್ಮಿತಿಯ ಬಗೆಗೆ ವಿಚಾರ ಸಂಕಿರಣ ನಡೆಯಿತು. ಈ ಸಂಕಿರಣದಲ್ಲಿ ಭಾಗ ವಹಿಸಬೇಕಾಗಿದ್ದವರು ೩೦ ಜನರು ಇದ್ದ ವೇಳೆಯಲ್ಲಿ ಹಂಚಿಕೊಟ್ಟರೆ ಒಬ್ಬೊಬ್ಬರ ಪಾಲಿಗೆ ೫-೬ ನಿಮಿಷಗಳೂ ಬರಲಿಲ್ಲ. ಇಷ್ಟು ಚಿಕ್ಕ ಅವಧಿಯಲ್ಲಿ ಮಾತನಾಡುವವರು ಏನು ಮಾತನಾಡುವರು? ವಿಷಯಕ್ಕೆ ಬರುವುದರಲ್ಲಿಯೇ ಗಂಟೆಯ ನಿಷ್ಠುರ ಧ್ವನಿ ಕೇಳಬರುತ್ತಿತ್ತು. ಅಂದು ಸದಸ್ಯರಿಗೆ ಬೇರೆ ಬೇರೆ ಸಾಹಿತ್ಯಿಕರ ಮುಖ ನೋಡಲು ದೊರೆತ ಸಮಾಧಾನವೇ ಸಮಾಧಾನ!

ಇದಾದ ಕೂಡಲೇ ಅದೇ ವ್ಯಾಸಪೀಠದ ಮೇಲೆ, ಪ್ರಿನ್ಸಿಪಾಲ್ ಗೋಕಾಕ ಅವರ ನೇತೃತ್ವದಲ್ಲಿ ಮತ್ತೊಂದು ವಿಚಾರಗೋಷ್ಠಿ ನಡೆಯಿತು ಈ ಗೋಷ್ಠಿಯಲ್ಲಿ ಐವಾರು ಜನರು ಮಾತನಾಡಿದರಾದರೂ ಶ್ರೀ. ದ ರಾ ಬೇಂದ್ರೆ ಮತ್ತು ಶ್ರೀ. ಆದ್ಯ ರಂಗಾಚಾರ್ಯ ಇವರಿಬ್ಬರನ್ನು ಬಿಟ್ಟರೆ, ಮಿಕ್ಕವರೆಲ್ಲ ಸದಸ್ಯರಿಗೆ ಏನೂ ತಿಳಿಯದಂತೆ ಮಾತನಾಡಿದರು. ಅಧ್ಯಕ್ಷರ ಪ್ರಾಸ್ತಾವಿಕ—ಉಪಸಂಹಾರದ ಭಾಷಣಗಳು ವಿಷಯಕ್ಕನುಗುಣವಾಗಿದ್ದು ವಿಚಾರಪ್ರಚೋದಕವಾಗಿದ್ದುವು.

ಅಂದಿನಿರುಳು ಸೇರಿದ ವಿಷಯನಿಯಾಮಕ ಸಮಿತಿಯ ಸಭೆಯು ಸರಿಯಾಗಿ ನಡೆಯಲಿಲ್ಲವೇನೊ? ಏಕೆಂದರೆ ಮರುದಿನದ ಬಹಿರಂಗ ಸಭೆಯಲ್ಲಿ ಮುಂದೆ ಬಂದ ಮುಖ್ಯ ಮುಖ್ಯ ಗೊತ್ತುವಳಿಗಳೂ ಸಂಪೂರ್ಣವಾಗಿ ರೂಪುಗೊಂಡು ಬಂದಿರಲಿಲ್ಲ.

ಮೂರನೆಯ ದಿನ ಬೆಳಗಿನ ಸೇರುವೆಯಲ್ಲಿ ನಲವತ್ತು ಜನ ಕವಿಗಳ ಕವಿತಾವಾಚನದ ಕಾರ್ಯಕ್ರಮ ನಡೆಯಿತು. ಸಮ್ಮೇಳನದ ಅಧ್ಯಕ್ಷರೇ ಇದಕ್ಕೂ ಅಧ್ಯಕ್ಷರಾಗಿದ್ದರು. ಅಂದು ಜನರಿಗೆ ಕವಿತೆಯೆಂದು ಎನಿಸುವಂತಹ ಕವಿತೆಗಳನ್ನು ಓದಿದವರ ಸಂಖ್ಯೆ ಒಂದು ಕೈ ಬೆರಳೆಣಿಕೆಯನ್ನು ಮೀರಲಿಲ್ಲವಂತೆ.

ಇದಕ್ಕೆ ಸಮಾಂತರವಾಗಿಯೇ ಡಾ. ಅಷ್ಟುಂಡಿಯವರ ಅಧ್ಯಕ್ಷತೆಯಲ್ಲಿ, ವೈಜ್ಞಾನಿಕ ವಿಷಯಚರ್ಚೆ ನಡೆಯಿತು. ಕವಿಗಳ ಕೂಗಿಗೆ ಬೇಸತ್ತ ಕೆಲವರು ಅಲ್ಲಿಗಾದರೂ ಹೋಗಿ ಕೇಳೋಣನೆಂದು ಹೋದರೆ, ಆ ಕಿರುಮನೆಯಲ್ಲಿ ಕುಳಿತುಕೊಳ್ಳಲು ಸ್ಥಳವೇ ಇರಲಿಲ್ಲ.

ಮಧ್ಯಾಹ್ನದ ಅಧಿವೇಶನ ಸಮ್ಮೇಳನದ ಬಹಿರಂಗ ಅಧಿವೇಶನವಾಗಿತ್ತು. ಸಂಖ್ಯೆಯಲ್ಲಿ ಇಪ್ಪತ್ತನ್ನು ಮಿಕ್ಕ ಗೊತ್ತುವಳಿಗಳು ಮುಂದೆ ಬಂದು ಮನ್ನಣೆಪಡೆದುವಾದರೂ 'ನಮ್ಮ ರಾಜ್ಯಕ್ಕೆ ಕರ್ನಾಟಕ ಎಂಬ ಹೆಸರನ್ನೇ ಇರಿಸಬೇಕು' ಎಂಬುದೊಂದನ್ನು ಬಿಟ್ಟರೆ, ಮಿಕ್ಕುವೆಲ್ಲ ಮಾಮೂಲಿಯವೇ ಆಗಿವೆ.

ಇನ್ನೊಂದು ಗೊತ್ತುವಳಿ ಸಾಹಿತ್ಯಿಕರೊಬ್ಬರ ದುಡುಕುತನವನ್ನು ನಿಷೇಧಿಸಲು ಮುಂದೆ ಬಂದು, ಸಭಿಕರಲ್ಲಿ ಸ್ವಲ್ಪ ಕಾವನ್ನು ಹುಟ್ಟಿಸಿತ್ತಾದರೂ, ಹಿರಿಹಿರಿಯ ಸಾಹಿತ್ಯಿಕರೂ ಚರ್ಚೆಯಲ್ಲಿ ಭಾಗವಹಿಸಿ, ಆ ಗೊತ್ತುವಳಿಯ ನಿರರ್ಥಕತೆಯನ್ನು ಮನವರಿಕೆ ಮಾಡಿಕೊಟ್ಟುದರಿಂದ, ಮುಂದೆ ಬಂದ— ಮನ್ನಣೆಪಡೆದಂತೆಯೇ ಆಗಿದ್ದ— ಆ ಗೊತ್ತುವಳಿ ಹಿಂದೆ ಸರಿದುಕೊಂಡಿತು 'ಆದದ್ದೆಲ್ಲಾ ಒಳ್ಳೆತಾಯಿತು!'

(೪ನೆಯ ಪುಟ ನೋಡಿರಿ.)

ನಾಡ ನಡೆ

卐

ಅಣ್ವಸ್ತ್ರದ ಅನಾಹುತ

ಪುರಾಣಕಾಲದಲ್ಲಿ ಶಿವನ ವರದಿಂದ ಭಸ್ಮಾಸುರನು ಹುಟ್ಟಿ, ಜಗತ್ತಿನಲ್ಲೆಲ್ಲ ಹಾವಳಿ ನಡೆಸಿದನಂತೆ. ಕೊನೆಗೆ ತನಗೆ, ವರದಾತೃವಾದ ಶಿವನನ್ನು ಕೂಡ—ಕೃತಘ್ನತೆಯಿಂದ—ಉರಿಸಿ ಬಿಡಲು ನಿಂತಿದ್ದನಂತೆ. ಸತ್ತ್ವಪೂರ್ಣವಾದ ವೈಷ್ಣವಶಕ್ತಿ ಆ ಭಸ್ಮಾಸುರನನ್ನು ಮಂಕುಗೊಳಿಸಿ, ತನ್ನ ಕೈಯಿಂದ ತಾನೇ ಭಸ್ಮವಾಗುವಂತೆ ಮಾಡಿ, ಲೋಕದ ಗಂಡಾಂತರವನ್ನು ದೂರಗೊಳಿಸಿತಂತೆ.

ಇಂದಿನ ವಿಜ್ಞಾನವಿಧಾತೃ, ಅಣ್ವಸ್ತ್ರವೆಂಬ ನೂತನ ರಕ್ಕಸನನ್ನು ನಿರ್ಮಿಸಿದ್ದಾನೆ. ಈ ರಕ್ಕಸ ತನ್ನ ಲೀಲೆಗಳನ್ನು ಇದೀಗ, ಅಲ್ಲಲ್ಲಿ ನಡೆಸಿದ್ದಾನೆ. ಅವನ ರುದ್ರಲೀಲೆಯ ಉಪಯೋಗವನ್ನು ಮಾಡಿಕೊಂಡು, ಕೆಲವು ರಾಷ್ಟ್ರಗಳು ಜಗಜ್ಜೇತೃಗಳಾಗಿ ಮೆರೆಯಬೇಕೆಂಬ ಹವಣಿಕೆಯಲ್ಲಿವೆ; ಈ ವಿಜ್ಞಾನ ರಹಸ್ಯ ಗೊತ್ತಿಲ್ಲದ—ಗೊತ್ತುಮಾಡಿಕೊಳ್ಳಲು ಸಾಧ್ಯವಿದ್ದರೂ—ಜಗತ್ತಿನಲ್ಲಿ ಸಾತ್ತ್ವಿಕ ಶಾಂತಿಯನ್ನು ಪ್ರಸ್ಥಾಪಿಸಬೇಕೆಂದು ದುಡಿಯುತ್ತಿರುವ ವಿಶ್ವ ರಾಷ್ಟ್ರಗಳನ್ನು ಬೆದರಿಸುತ್ತಲಿವೆ.

ಯಾವ ವಿಜ್ಞಾನವಿಧಾತೃ ಈ ಅಣ್ವಸ್ತ್ರಾಸುರನನ್ನು ಸೃಷ್ಟಿಸಿರುವನೋ, ಆತನ ಹಿರಿ-ಹಿರಿಯ ಭಕ್ತರೇ ಇಂದು, ಆ ಅಸುರ ಮಾನವ ಕುಲಕಂಟಕನೆಂಬುದನ್ನು ವೈಯಕ್ತಿಕವಾಗಿ ಲೋಕಕ್ಕೆ ಎಚ್ಚರಿಕೆಯಿತ್ತುಯುತ್ತಲಿದ್ದಾರೆ. ಆದರೂ ಆ ಅಸುರನ ಮೋಹಕರೌದ್ರಶಕ್ತಿಗೆ ಮೆಚ್ಚಿ ಅವನ ಬೆನ್ನು ಹತ್ತಿದ ಅಮೇರಿಕೆ, ಇಂಗ್ಲಂಡ್, ರಷಿಯಾ ರಾಷ್ಟ್ರಗಳು, ತಾವೂ ಮಾನವಕುಲದ ಆಶ್ರಯಸ್ಥಾನಗಳೆಂಬುದನ್ನು ಮರೆತು ದುಡುಕಿ ನಡೆಯುತ್ತಲಿವೆ.

ಅಮೇರಿಕೆ ಅಣ್ವಸ್ತ್ರದ ಪ್ರಯೋಗಕ್ಕಾಗಿ ಮಾರ್ಸೆಲ್ಸ್ ದ್ವೀಪಗಳ ಜನತೆಯ ಜೀವನವನ್ನೇ ಅಸ್ಥಿರಗೊಳಿಸಿದೆ. ಇಂಗ್ಲಂಡು ತನ್ನ ಮೊದಲಿನ ಸತ್ತ್ವವನ್ನೆಲ್ಲ ಕಳೆದುಕೊಂಡಿದ್ದರೂ, ಅಣ್ವಸ್ತ್ರಗಳು ತನ್ನಲ್ಲಿವೆಯೆಂಬುದನ್ನು ಪ್ರದರ್ಶಿಸಿ ಜನರನ್ನು ಭೀತಿಗೊಳಿಸಲು, ಈ ಅಸ್ತ್ರದ ಪ್ರಯೋಗಕ್ಕೆ ತೊಡಗಿ, ವಾತಾವರಣದಲ್ಲಿ ವಿಷವನ್ನು ಹರಡುತ್ತಿದೆ. ಇತ್ತ ರಷ್ಯಾದೇಶವು ನಿಮಗಿಂತ ನಾನೇನೂ ಕಡಿಮೆಯಿಲ್ಲವೆಂಬುದನ್ನು ಅಮೇರಿಕೆ-ಇಂಗ್ಲಂಡ್ ರಾಷ್ಟ್ರಗಳಿಗೆ ತೋರಿಸಿಕೊಳ್ಳಬೇಕಾಗಿದೆ. ಅದಕ್ಕಾಗಿಯೇ ಅದು ಕೂಡ ಅಣ್ವಸ್ತ್ರ-ಜಲಜನಕ ಶಸ್ತ್ರಗಳ ಪ್ರಯೋಗ ನಡೆಯಿಸಿ, ಮಾನವತೆಯನ್ನು ನಾಶಮಾಡುವ ಭೀತಿಯನ್ನು ಉಂಟುಮಾಡತೊಡಗಿದೆ.

ಇದೆಲ್ಲವನ್ನೂ ನಿಲ್ಲಿಸುವ ಶಕ್ತಿ ಯಾರಲ್ಲಿದೆ? ಅಣ್ವಸ್ತ್ರದ ರಹಸ್ಯವನ್ನು ಬಲ್ಲ ರಾಷ್ಟ್ರಗಳೆಲ್ಲ ಅದರ ಹೆಮ್ಮೆಯಿಂದ ಅಂಧ-ಬಧಿರಗಳಾಗಿಬಿಟ್ಟಿವೆ. ಅವುಗಳಿಗೆ ಭವಿಷ್ಯ ಕಾಣುವುದಿಲ್ಲ; ಹಿತವಚನ ಕೇಳುವುದಿಲ್ಲ ತಮ್ಮ ಈ ಪ್ರಯೋಗದ ಪರಿಣಾಮವನ್ನು ಜಗತ್ತಿನ ಎಲ್ಲ ಜನರಂತೆ ತಮ್ಮ ಜನರೂ ಭೋಗಿಸಬೇಕಾಗಿ ಬರುವುದೆಂಬುದರ ಕಡೆಗೆ ಅವರ ಲಕ್ಷ್ಯವೇ ಇಲ್ಲ.

ಇಂದು ಪೌರ್ವಾತ್ಯರಾಷ್ಟ್ರಗಳೆಲ್ಲ ಒಂದುಗೂಡಿ ಬಲ ಬೆಳಸಿ ವಿರೋಧಿಗಳಾಗಿ ನಿಂತರೆ, ಅಣ್ವಸ್ತ್ರದ ಅನಾಹುತದಿಂದ ಲೋಕವನ್ನು ಉಳುಹಬಹುದು. ಆದರೆ ಹಾಗೆ ಒಂದುಗೂಡುವುದು ಸಾಧ್ಯವಾದೀತೆ?

ಪಾಕಿಸ್ತಾನದ ವಿಪರೀತಬುದ್ಧಿ

ಪೂರ್ವದ ವಿಶ್ವ ರಾಷ್ಟ್ರಗಳು ಒಂದುಗೂಡುವ ಹದದ ಹೃದಯಕ್ಕೆ ಬಂದರೂ, ಪಾಕಿಸ್ತಾನದ ಭಾರತದ್ವೇಷದ ವಿಪರೀತಬುದ್ಧಿ, ಆ ಹದವನ್ನೆಲ್ಲ ಕೆಡಿಸಿಬಿಡುತ್ತಲಿದೆ ಪೌರ್ವಾತ್ಯರಾಷ್ಟ್ರಗಳ ಒಕ್ಕೂಟವನ್ನುಂಟುಮಾಡಲು ಮುಖವೆತ್ತಿದ ಬಾಂಡುಂಗ್ ಪರಿಷತ್ತಿನಲ್ಲಿ ಪಾಕಿಸ್ತಾನ ಭಾಗವಹಿಸಿದರೂ, ಅದರ ನಿರ್ಣಯಗಳನ್ನು ಪುರಸ್ಕರಿಸುವ ವಿವೇಕವನ್ನು ತೋರಿಸಿಲ್ಲ ಆದರೆ, ಪೌರ್ವಾತ್ಯಮಾನವತೆಗೆ ವಿಘಾತಕವಾಗಿ ಪರಿಣಮಿಸಲಿದ್ದ ಬಗದಾದ್ ಒಪ್ಪಂದ ರಾಷ್ಟ್ರವಿ. ತಿಯ ನಾಟಕದಲ್ಲಿ ಮುಖ್ಯಪಾತ್ರವನ್ನು ವಹಿಸಿ ಕುಣಿಯುತ್ತಲಿದೆ. ಹುಂಬತನದಲ್ಲಿ ತನಗಿಂತಲೂ ಮೇಲೆನಿಸಬಲ್ಲ ಇರಾಕ್, ಇರಾಣ, ಸೌದೀ-ಅರೇಬಿಯಾ—ಈ ರಾಷ್ಟ್ರಗಳನ್ನು ತನ್ನಂತೆಯೇ ಕುಣಿಯಲು ಪ್ರಚೋದಿಸುತ್ತಲಿದೆ.

ಈ ಹುಂಬರ ಮೂಗಿಗೆ ಮೂಲಂಗಿಯನ್ನು ಕಟ್ಟಿ, ತಮ್ಮ ಮಹತ್ತ್ವಾಕಾಂಕ್ಷೆಯನ್ನು ಮುಂದುವರಿಸಬೇಕೆನ್ನುವ ಅಮೇರಿಕೆ-ಇಂಗ್ಲಂಡುಗಳು, ಪಾಕಿಸ್ತಾನದ ಹುಂಬಕುಣಿತದೊಂದಿಗೆ ಡೊಳ್ಳುಗಳನ್ನು ಬಾರಿಸಿ, ಅದರ ಮತ್ತು ಅದರ ಜೊತೆಯ ರಾಷ್ಟ್ರಗಳನ್ನು ಇನ್ನಿಷ್ಟು ಭ್ರಾಂತಿಯಲ್ಲಿ ಕೆಡಹುತ್ತಲಿವೆ.

ಮೊನ್ನೆ ಮೊನ್ನೆ ಕರಾಚಿಯಲ್ಲಿ ಸೇರಿದ ಬಗದಾದ್ ಒಪ್ಪಂದ-ರಾಷ್ಟ್ರಗಳ ಕೂಟದಲ್ಲಿ, ಅಮೇರಿಕೆಯು ಭಾಗ ವಹಿಸಿದುದೂ, ಮುಂದೆ ಪ್ರತ್ಯಕ್ಷ ಸದಸ್ಯನಾಗಲು ಒಪ್ಪಿದುದೂ, ಪಾಕಿಸ್ತಾನಕ್ಕೆ ಪಕ್ಕಗಳನ್ನು ಮೂಡಿಸಿದಂತಾಗಿದೆ. ಜಗತ್ತೆಲ್ಲ ಹೇಗಾದರೂ ಇರಲಿ; ಭಾರತವು ಮಾತ್ರ ಹಾಳಾಗಬೇಕೆಂಬುದು ಪಾಕಿಸ್ತಾನದ ಅಪೇಕ್ಷೆ ಆದರೆ ಪಾಕಿಸ್ತಾನದಂತೆಯೆ ಭಾರತದ ನಿಜವಾದ ಮಿತ್ರತ್ವವನ್ನೂ ಬಯಸುವ ಇಂಗ್ಲಂಡ್-ಅಮೇರಿಕೆಗಳು, ಪಾಕಿಸ್ತಾನದ ಈ ಅಪೇಕ್ಷೆಯನ್ನು ಪೂರಯಿಸಲು ನೆರವಾಗಬಹುದೆ? ಒಂದಿಲ್ಲೊಂದು ದಿನ ಪಾಕಿಸ್ತಾನಕ್ಕೆ ವಸ್ತುಸ್ಥಿತಿಯ ಕಲ್ಪನೆ ಉಂಟಾಗದೆ ಹೋಗದು; ಆದರೆ ಹಾಗದು ಉಂಟಾಗುವುದರಲ್ಲಿಯೇ, ಅಮೇರಿಕೆ-ಇಂಗ್ಲಂಡುಗಳು, ಪಾಕಿಸ್ತಾನದ ಎದೆಯ ಮೇಲೆ ಕಾಲಿಟ್ಟು ನಿಂತು, ತಮ್ಮ ಸ್ವಾರ್ಥವನ್ನು ಸಾಧಿಸಿಕೊಳ್ಳಲು ಎಷ್ಟೋ ಅನುಕೂಲಾವಕಾಶ ದೊರೆಯಬಹುದು.

ಹುಬ್ಬಳ್ಳಿಯಲ್ಲಿ ಮೆಡಿಕಲ್ ಕಾಲೇಜು

ಉತ್ತರ ಕರ್ನಾಟಕದ ಅನೇಕ ದಿನದ ಒಂದು ದೊಡ್ಡ ಕೊರತೆಯೆನಿಸಿದ್ದ ಮೆಡಿಕಲ್ ಕಾಲೇಜು ಹುಬ್ಬಳ್ಳಿಯಲ್ಲಿ ನೆಲೆ ನಿಲ್ಲುವುದು ನಿರ್ಣಯವಾಗಿ, ಅದರ ಕಟ್ಟಡದ ಕೋಣಶಿಲಾ ಪ್ರತಿಷ್ಠಾಪನೆಯ ಸಮಾರಂಭವೂ ಕಳೆದ ತಿಂಗಳ ಎರಡನೆಯ ವಾರದಲ್ಲಿ ನಡೆಯಿತು. ಅಂದಿನ ಸಮಾರಂಭದಲ್ಲಿ ಮಾಡಿದ ರಾಜ್ಯದ ಮುಖ್ಯ ಮಂತ್ರಿ—ಆರೋಗ್ಯಮಂತ್ರಿ—ಇವರ ಭಾಷಣಗಳನ್ನೂ, ಕಾಲೇಜಿನ ಪೂರ್ಣ ಸ್ವರೂಪದ ವಿವರಣೆಯನ್ನೂ ನೋಡಿದರೆ, ಈ ಕಾಲೇಜು ಕರ್ನಾಟಕಕ್ಕೊಂದು ಭೂಷಣವಾಗಿ ನಿಲ್ಲಬಲ್ಲುದೆಂದು ಎಲ್ಲರೂ ಭಾವಿಸುವಂತಿದೆ. ಧಾರವಾಡದ ಮೆಡಿಕಲ್ ಅಸೋಶಿಯೇಶನ್ನಿನ ಬಹುಕಾಲದ ಪ್ರಯತ್ನ, ಈಗ ಹುಬ್ಬಳ್ಳಿಯ ಮೆಡಿಕಲ್ ಅಸೋಶಿಯೇಶನ್ನಿನ ಸಹಕಾರದಿಂದ ಯೋಗ್ಯ ಫಲವನ್ನು ಪಡೆದಂತಾಯಿತು.

ಮೆಡಿಕಲ್ ಶಿಕ್ಷಣಕ್ಕಾಗಿ ಪರಪ್ರಾಂತಗಳಲ್ಲಿರುವ ಕಾಲೇಜುಗಳಲ್ಲಿ ಸ್ಥಳ ದೊರಕಿಸುವುದೆಂದರೆ, ಕರ್ನಾಟಕದ ವಿದ್ಯಾರ್ಥಿಗಳಿಗೊಂದು ಕಷ್ಟದ ವಿಷಯವೇ ಆಗಿತ್ತು. ಪರಸ್ಥಳದ ವಸತಿಯ ವೆಚ್ಚ, ಶಿಕ್ಷಣದ ವೆಚ್ಚ ಎರಡನ್ನೂ ನಿರ್ವಹಿಸುವುದೆಂದರೆ, ನಮ್ಮಲ್ಲಿಯ ಸಾಮಾನ್ಯ ಆರ್ಥಿಕ ಸ್ಥಿತಿಯವರಿಗೆ ಸಾಧ್ಯವೇ ಇರಲಿಲ್ಲ. ಆದುದರಿಂದಲೇ ಕರ್ನಾಟಕದಲ್ಲಿ ಕನ್ನಡಿಗರೇ ಆದ ಡಾಕ್ಟರರ ಸಂಖ್ಯೆ ತೀರ ಕಡಮೆ ಈ ಕೊರತೆಯ ಮೂಲಕ ಕನ್ನಡ ಸಾಮಾಜಿಕ ಸಾಂಸ್ಕೃತಿಕ ಪರಿಸ್ಥಿತಿಗಳಲ್ಲಿ ಸಾಕಷ್ಟು ದುಷ್ಪರಿಣಾಮವಾಗಿದೆಯೆಂಬುದಕ್ಕೆ ಅನೇಕ ಉದಾಹರಣೆಗಳಿವೆ. ಕನ್ನಡಿಗರ ರಾಜ್ಯ ಪ್ರಾರಂಭವಾಗುವುದರಲ್ಲಿಯೇ ಕನ್ನಡಿಗರದೊಂದು ದೊಡ್ಡ ಕೊರತೆ ಇಲ್ಲದಂತಾಯಿತು. ಹೀಗೆಯೆ ನಮ್ಮ ಎಷ್ಟೆಷ್ಟೋ ಬೇರೆ ಕೊರತೆಗಳ ನಿವಾರಣೆಯೂ ಆಗಬಹುದು. ಕರ್ನಾಟಕ ಏಕೀಕರಣವನ್ನು ಉಪೇಕ್ಷೆಯಿಂದ ಕಾಣುತ್ತಿದ್ದವರು ಬುದ್ಧಿ ಕಲಿಯುವಂತಹ ಸಂಗತಿಯಿದು. ಹುಬ್ಬಳ್ಳಿಯ ಮೆಡಿಕಲ್ ಕಾಲೇಜು ಬೆಳೆದು, ಕನ್ನಡಿಗರ ಜೀವನವನ್ನು ನಿರೋಗಿಯಾಗಿಸಲಿ!

೨೦ನೆಯ ವರ್ಷ ಪ್ರಾರಂಭ

卐

ಈ ಸಂಚಿಕೆಯಿಂದ ಜಯಂತಿ ತನ್ನ ೨೦ನೆಯ ವರ್ಷವನ್ನು ಪ್ರಾರಂಭಿಸಿತು. ನಮ್ಮ ನಾಡಿನಲ್ಲಿ ಇಷ್ಟು ಕಾಲ ಬಾಳಿದ ಈ ಬಗೆಯ ಮಾಸಪತ್ರಿಕೆಗಳು ಕಡಮೆಯೆಂದೇ ಹೇಳಬಹುದು.

ಚಂದಾದಾರರ ಬಳಗ ಬೆಳೆಯಲಿ

卐

ಇಪ್ಪತ್ತು ವರ್ಷಕಾಲ ನಿಷ್ಠೆಯಿಂದ ಜನತೆಯ ಸೇವೆ ಮಾಡಿದ ಜಯಂತಿಯ ಜೀವನಕ್ಕೆ ಸ್ಥೈರ್ಯವನ್ನು ಒದಗಿಸುವ ಹೊಣೆಗಾರಿಕೆ, ಕನ್ನಡ ಜನರ ತಲೆಯ ಮೇಲಿದೆ. ನಮ್ಮ ನಾಡಿನ ಓದುಬಲ್ಲ ಪ್ರತಿಯೊಂದು ಕುಟುಂಬದಲ್ಲಿಯೂ ಜಯಂತಿಗೆ ಸ್ವಾಗತ ದೊರೆಯಬೇಕು. ಚಂದಾದಾರರ ಬಲದಿಂದಲೇ ಜಯಂತಿ ಬಲಶಾಲಿಯಾಗಬಲ್ಲದು

— ಬೆಟಗೇರಿ ಕೃಷ್ಣಶರ್ಮ

(೨ನೆಯ ಪುಟದಿಂದ ಬಂದುದು)

ಮೂರು ದಿನದ ರಾತ್ರಿಯಲ್ಲಿಯೂ ಮನೋರಂಜಕ ಕಾರ್ಯಕ್ರಮಗಳು ನಡೆದುವು. ಎರಡನೆಯ ದಿನ ಗದುಗಿನ ಕಲಾವಿದರು ಪ್ರದರ್ಶಿಸಿದ 'ಜಾಗೃತ ರಾಷ್ಟ್ರ' ಎಂಬುದೊಂದನ್ನು ಬಿಟ್ಟರೆ, ಮಿಕ್ಕ ಯಾವ ಕಾರ್ಯಕ್ರಮವೂ ಕಳೆಗೊಂಡು ನಿಲ್ಲಲಿಲ್ಲವೆಂದು ಬಹುಜನ ಪ್ರೇಕ್ಷಕರ ಅಭಿಪ್ರಾಯ. ಬೆಂಗಳೂರಿನಿಂದ ಇಲ್ಲಿಯ ವರೆಗೆ ಬಂದು ಕಲಾಸೇವೆ ಸಲ್ಲಿಸಬೇಕೆಂದಿದ್ದ ಸಂಗೀತ ವಿದುಷಿಯರ—ವಿದ್ವಾಂಸರ—ದಾಕ್ಷಿಣಾತ್ಯ ಗಾಯನಪದ್ಧತಿ, ಇತ್ತಣ ಭಾಗದವರಿಗೆ ರುಚಿಸದಿದ್ದುದು ವಿಷಾದದ ಸಂಗತಿ. ನಮ್ಮ ರಸಿಕರು ಕಲಾಭಿರುಚಿಯ ಪ್ರಪಂಚದಲ್ಲಿ ಒಮ್ಮೊಗದವರಾಗಿ ನಡೆಯಬಾರದು. ವಿವಿಧ ಸೌಂದರ್ಯಗಳನ್ನೂ ಹೃದಯಕ್ಕೆ ಅಳವಡಿಸಿಕೊಳ್ಳಬೇಕು.

ಕೂಡಿದ ಜನಸಂಗುಳಿ, ಕುತೂಹಲದ ವಾತಾವರಣ ಇವುಗಳನ್ನು ನೋಡಿದರೆ, ಈ ಸಲದ ಸಾಹಿತ್ಯ ಸಮ್ಮೇಳನವು ತನ್ನ ರೀತಿಯಲ್ಲಿ ಯಶಸ್ವಿಯಾಯಿತೆಂದೇ ಹೇಳಬಹುದು. ಆದರೆ ಇನ್ನು ಮುಂದೆ ಸೇರುವ ಸಾಹಿತ್ಯ ಸಮ್ಮೇಳನಗಳು ಇದೇ ಬಗೆಯ ಪರಿಸೆಗಳಾಗಿ ಪರಿಣಮಿಸಿದರೆ, ಅವುಗಳಿಂದ ಸಾಹಿತ್ಯದ ನಿರ್ಮಿತಿ—ಉನ್ನತಿಗಳಿಗೆ ಹೆಚ್ಚಿನ ಸಹಾಯವಾದೀತೆಂದು ನಮಗೆ ಎನಿಸುವುದಿಲ್ಲ. ಹೊಸ ಜೀವನಕ್ಕೆ ತಕ್ಕಂತೆ ಸಮ್ಮೇಳನಗಳೂ ಕಾಲಕಾಲಕ್ಕೆ ಹೊಸ ಹೊಸ ವೇಳಾಪತ್ರಿಕೆಗಳನ್ನು ರಚಿಸಿಕೊಳ್ಳುವುದು ಒಳ್ಳೆಯದು.

ಪರಿವರ್ತನೆ

(ಸಣ್ಣ ಕತೆ)

ಶ್ರೀ. ಶ್ರೀಮತಿ ಎಂ. ಕೆ. ಜಯಲಕ್ಷ್ಮೀ, ಕರಗದ

卐

ಮಕ್ಕಳು ಸುಸಂಸ್ಕೃತರಾಗಿ ಮುಂದಿನ ಬಾಳಲ್ಲಿ ಸುಖ-ಸಮಾಧಾನಗಳನ್ನು ತಂದುಕೊಳ್ಳಬೇಕೆಂದು ತಂದೆ-ತಾಯಿಗಳು ಬಯಸುವುದು ಸ್ವಾಭಾವಿಕ; ಆದರೆ ಹಾಗೆ ಮಕ್ಕಳನ್ನು ಪಳಗಿಸುವುದಕ್ಕಾಗಿ ತಂದೆ ತಾಯಿಗಳು ಕೈಕೊಳ್ಳುವ ಕ್ರಮ ಎಂತಹದಿರಬೇಕು? ಡಾ. ಜಯರಾಜರಿಂದ ತಿಳಿದುಕೊಳ್ಳಬೇಕು.

卐

ಸಂಜೆಯ ಸಮಯ. ಹಕ್ಕಿಪಕ್ಕಿಗಳೆಲ್ಲಾ ಗೂಡಿನತ್ತ ಹಾರುತ್ತಿದ್ದುವು.

ಸಿದ್ದಮ್ಮ ಹೊರಬಾಗಿಲ ಬಳಿ ನಿಂತು, ರಸ್ತೆಯುದ್ದಕ್ಕೂ ಕಣ್ಣು ಹಾಯಿಸಿ ನೋಡಿದಳು—ರಾಮು ಬರುತ್ತಿದ್ದಾನೆಯೇ—ಎಂದು. ಇಲ್ಲ, ಕಾಣಲಿಲ್ಲ. ರಾಮುನ ಓರಗೆಯ ಹುಡುಗರೆಲ್ಲಾ ಮನೆ ಸೇರಿಕೊಂಡು ಎಷ್ಟೋ ಹೊತ್ತಾಗಿತ್ತು. ಆದರೂ ರಾಮುನ ಸುಳಿವಿಲ್ಲ.

ಸಿದ್ದಮ್ಮ ನಿಡುಸುಯ್ದು; ಮತ್ತೆ ಒಳಕ್ಕೆ ನಡೆದಳು.

"ರೊಟ್ಟಿ ಆರಿಹೋಯ್ತು ರಾಮು. ಆದರೂ ಬರಲಿಲ್ಲವಲ್ಲಾ.... ಎಷ್ಟು ಹೇಳಿದರೂ ಕೇಳದೆ ಹೀಗೆ ತಡ ಮಾಡ್ತಾನಲ್ಲಾ....ಶಾಲೆ ಬಿಟ್ಟ ಕೂಡಲೆ ಮನೆಗೆ ಬಂದು ತಿಂಡಿ ತಿಂದುಕೊಂಡು ಆಟಕ್ಕೆ ಹೋಗಬಾರದೇ?...." ಎಂದು ನೊಂದುಕೊಂಡಳು.

ರಾಮು ಬರುವ ವೇಳೆಗೆ ಆಗಲೇ ಕತ್ತಲಾಗಿತ್ತು. ದೀಪ ಹೊತ್ತಿಸಿದ್ದಳು ಸಿದ್ದಮ್ಮ.

ರಾಮುನಿಗೆ ಹದಿನಾಲ್ಕು ಹದಿನೈದು ವರ್ಷ; ಆದರೆ ಅವನ ಹುಟ್ಟು ಸಣ್ಣದು. ನೋಡಲು ಹತ್ತು ಹನ್ನೊಂದರ ಹುಡುಗನಂತೆ ಕಾಣುವ. ಸಣ್ಣಮುಖ, ತೀವ್ರವಾದ ನೋಟ, ಮುಖದಲ್ಲಿ ನಗೆಯಿಲ್ಲ, ಹಿಗ್ಗಿಲ್ಲ. ಹುಬ್ಬುಗಂಟಿಕ್ಕಿ, ಏನೋ ಚಿಂತೆಯಲ್ಲಿರುವವನಂತೆ ಕಾಣುವ.

ರಾಮುನನ್ನು ಕಂಡೊಡನೆ ಸಿದ್ದಮ್ಮನ ಮನ ಹಿಗ್ಗಿತು ತಿಂಡಿ ಕೊಟ್ಟಳು.

"ಎಷ್ಟು ದಿನ ಹೇಳ್ತೀನಿ—ತಿಂಡೀ ತಿಂದುಕೊಂಡು ಆಟಕೆ ಹೋಗು ಅಂತ, ನೀ ಕೇಳೋದೇ ಇಲ್ಲಪ್ಪಾ. ಆದಕ್ಕೇ ನೋಡ ಹೀಗೆ ಕಡ್ಡೀ ಪೈಲ್ವಾನ್ ಆಗಿರೋದು. ಇರೋನು ಒಬ್ಬ; ಅವನಿಗೂ ಹೊಟ್ಟೆಗೆ ಸರಿಯಾಗಿ ಹಾಕದೆ ನಲುಗಿಸುತ್ತೀರಿ ಅಂತ ಜನಾ ನನ್ನ ಆಕ್ಷೇಪ ಮಾಡ್ತಾರೆ. ನಾಳೆಯಿಂದ ನೀ ತಿಂಡೀಗೆ ಬರದೆ ಇದ್ದರೆ, ನಾನು ರಾತ್ರಿ ಊಟಾನೇ ಮಾಡೋದಿಲ್ಲಪ್ಪಾ...." ಎಂದಳು—ತುಂಬಿಬಂದ ವಾತ್ಸಲ್ಯದಿಂದ, ಅವನು ತಿಂಡಿ ತಿನ್ನುವುದನ್ನು ನೋಡುತ್ತಾ.

ಅವನ ಹುಬ್ಬುಗಂಟು ಸಡಿಲವಾಗಲಿಲ್ಲ. ಆ ಮಾತುಗಳು ಕಿವಿಗೇ ಬೀಳದವನಂತೆ ಗಬಗಬನೆ ತಿಂಡಿ ತಿಂದ. ತಟ್ಟೆಯೊಳಕ್ಕೇ ಕೈತೊಳೆದ.

ತನ್ನ ಮಾತು ಅವನ ಮೇಲೆ ಯಾವ ಪರಿಣಾಮವನ್ನೂ ಮಾಡದುದನ್ನು ಕಂಡರೂ ಸಿದ್ದಮ್ಮ ಸುಮ್ಮನಾಗಲಿಲ್ಲ. ಮತ್ತೆ ಉತ್ಸಾಹದಿಂದ ಹೇಳಿದಳು:

"ನಿನಗೆ ಸರ್ಟಿನ ಬಟ್ಟೆ ತಂದಿದ್ದಾರೆ ನಿಮ್ಮಪ್ಪ, ನೋಡಿದೆಯಾ? ಬೆಳಿಗ್ಗೆ ಸಂಬಳ ಆಯ್ತಂತೆ. ತಕ್ಷಣವೇ ಹೋಗಿ ತಂದಿದ್ದಾರೆ. ಆ ದಿನ ನೀನು ಹೇಳಿರಲಿಲ್ಲವೇ—ರಾಜು ಹಾಕಿಕೊಂಡಿದ್ದ ಅಂತ? ಅದೇ ತರಹದ ಬಟ್ಟೆ."

"ಎಲ್ಲಿ?"—ಸ್ವಲ್ಪ ಕುತೂಹಲದಿಂದ ಕೇಳಿದ ರಾಮು.

ಸಿದ್ದಮ್ಮ ಬಟ್ಟೆಯನ್ನು ತೋರಿಸಿದಳು. ಒಳ್ಳೆಯ ಬಟ್ಟೆ—ಮೂರೂವರೆ ಗಜಕ್ಕೆ ನೀಲಿಯ ಬಣ್ಣ, ಒಳಗೆಲ್ಲಾ ಕೆಂಪು ಗೋಪುರಗಳು. ರಾಮು ಬಟ್ಟೆಯನ್ನು ಮುಟ್ಟಿ ನೋಡಿದ. ಅವನ ಮುಖ ಸ್ವಲ್ಪ ಗೆಲುವಾಯಿತು.

ಸಿದ್ದಮ್ಮ ಹೇಳಿದಳು:—

"ನೋಡೋ ರಾಮು, ನಿಮ್ಮಪ್ಪನಿಗೆ ನಿನ್ನ ಕಂಡರೆ ಎಷ್ಟು ಪ್ರೀತಿ ಅಂತ—ನೀ ಬಾಯ್ಬಿಟ್ಟು ಹೇಳುವುದೇ ತಡ-ಎಷ್ಟು ಹಣವಾದರೂ ತಂದ್ಬಿಡ್ತಾರೆ. ಆದರೆ ನೀನು? ಅವರ ಮನಸಿಗೆ ಸಮಾಧಾನವಾಗುವಂತೆ ಒಂದು ಕೆಲಸ ಮಾಡಿದೀಯಾ? ಅವರು ಅಷ್ಟೆಲ್ಲಾ ಹೇಳೋದು ಮಾಡೋದು ಏಕಪ್ಪಾ—ನೀನು ಬುದ್ಧಿವಂತನಾಗಿ ಮುಂದೆ ಬರಲಿ .. ಅಂತ ಅಲ್ಲವೇ?"

ಹಿತದ ಸುದ್ದಿ ಕೇಳುವಾಗಿನಂತೆ, ರಾಮುನ ಮುಖ ಮತ್ತೆ ಗಂಟಾಯಿತು. ನಿರಾಸಕ್ತಿಯಿಂದ ಬಟ್ಟೆಯನ್ನು ಮುಚ್ಚಿಟ್ಟ.

"ಬುದ್ಧಿವಂತನಾಗಿ ಮುಂದಕ್ಕೆ ಬರಬೇಕು ಅಂತಾನೇ ನಾನು ಮಾಡ್ತಿರೋದು—ಆದರೆ ನಾನು ಏನಾದರೆ ಯಾರಿಗೇನಂತೆ ?" ಎಂದುಕೊಂಡ ಮನಸ್ಸಿನಲ್ಲೇ, ಕಹಿಯಾಗಿ.

"ನಿಮ್ಮಪ್ಪ ತುಂಬಾ ಸಿಟ್ಟಿನ ಮನುಷ್ಯರು. ಆದರೂ ಅವರ ಮನಸು ತುಂಬಾ ಮೆದು. ಅವರು ಅಂದು—ಆಡಿದ್ದನ್ನ ನೀ ಮನಸಿಗೆ ತೆಗೆದುಕೋಬೇಡ—ನಿನಗಾಗಿ ಎಷ್ಟು ಪಾಡುಪಡ್ತಾರೆ ನೆನೆದುಕೋ! "

ಸಿದ್ಧಮ್ಮ ಇನ್ನೂ ಮುಂದೆ ಹೇಳುವವಳಿದ್ದಳು. ರಾಮು ಅಲ್ಲಿ ನಿಲ್ಲಲಿಲ್ಲ. 'ಶುರುವಾಯಿತು ಇನ್ನು ಇವಳ ಉಪದೇಶ' ಎಂದು-ಕೊಂಡು ಬೇಸರದಿಂದ ಹೊರಟೇಬಿಟ್ಟ.

ಮಗ ತನ್ನ ಮಾತನ್ನೂ ಕೇಳಿಸಿಕೊಳ್ಳದೆ ಹೋಗುವುದನ್ನು ಕಂಡು ಸಿದ್ಧಮ್ಮ ನಿಡುಸುಯ್ದಳು. ಮಗ ತಮ್ಮ ಕೈತಪ್ಪಿ ಹೋಗುತ್ತಿ-ದ್ದಾನೆಂದು ನೊಂದುಕೊಂಡಳು.

ರಾಮು ಹೋದ ಸ್ವಲ್ಪ ಹೊತ್ತಿಗೇ ಸಿದ್ದಣ್ಣ ಬಂದ. ಸಿದ್ದಣ್ಣ ಎತ್ತರವಾದ ಬಲಿಷ್ಠವಾದ ಆಳು. ಸಿದ್ದಣ್ಣನ ಮುಖ ಕಳೆಗುಂದಿತ್ತು. ಹೆಂಡತಿ ಕೊಟ್ಟ ತಿಂಡಿ ತಿಂದು, "ಇನ್ನೂ ಅವನು ಬರಲಿಲ್ಲಾ ಮನೇಗೆ ? " ಎಂದ.

"ಬಂದಿದ್ದ. ಈಗ ತಾನೇ ಎಲ್ಲೋ ಹೋದ....ಮತ್ತೆ ಏಕೋ ಮೊದಲಿನಂತೆ ಆಗ್ಬಿಟ್ಟಿದ್ದಾನೆ. ಮಾತುಕತೆ ಏನೂ ಇಲ್ಲ. ಸದಾ ಮಂಕಾಗಿರ್ತಾನೆ...."

ಸಿದ್ದಣ್ಣನ ಮುಖದ ಯಾತನೆ ನೋಡಿ ಅಷ್ಟಕ್ಕೇ ಮಾತು ನಿಲ್ಲಿಸಿದಳು.

"ನಮ್ಮ ಹಣೇಬರಹಕ್ಕೆ ಯಾರೇನು ಮಾಡ್ತಾರೆ?—ಓದಿ ಬುದ್ಧಿ ವಂತನಾಗಲಿ ಅಂತ ನಾನೂ ಬೇಕಾದಷ್ಟು ಮಾಡಿದೆ. ಎಲ್ಲಾ ಹೊಳೇಲಿ ಹುಣಿಸೇಹಣ್ಣು ಕದಡಿದಂತೇನೇ. ಆ ಕೆಂಚಪ್ಪನ ಮಗ ರಾಜು ! ಇದ್ದರೆ ಅಂತ ಮಕ್ಕಳಿರಬೇಕು. ಓದಿನಲ್ಲಿ ನಡತೇಲಿ ...... ನಾಲ್ಕು ಮಂದೀಲಿ ಕೀರ್ತಿ ತರುವಂತೆ ಇದ್ದಾನೆ—ನಿನ್ನ ಮಗನೂ ಇದ್ದಾನೆ, ಭೂಮಿಗೆ ಭಾರವಾಗಿ ! " ಎಂದು ನಿಡುಸುಯ್ದ.

ಸಿದ್ಧಮ್ಮನ ಮನಸ್ಸು 'ಚುರ್' ಎಂದಿತು. ಮಗನ ಬಗ್ಗೆ ಅವಳಿಗೆ ಎಷ್ಟೋ ಅಸಮಾಧಾನವಿದ್ದರೂ, ಬೇರೆಯವರು ಅವನನ್ನು ನಿಂದಿಸುವುದನ್ನು ಕೇಳಿ ಸುಮ್ಮನಿರಲಾಗಲಿಲ್ಲ.

"ಅವನ್ನ ಅಂದು ಏನು ಪ್ರಯೋಜನ? ಗ್ರಹಗಳು ಅವನನ್ನು ಪೀಡನೆ ಮಾಡ್ತಿವೆ. ಇಲ್ಲದೆಯಿದ್ದರೆ ಏಕೆ ಹಾಗ್ಮಾಡ್ತಾ ಇದ್ದ ? ?"

ಸಿದ್ದಣ್ಣನಿಗೆ ಅವಳ ಸಮಾಧಾನ ತೃಪ್ತಿಕೊಡಲಿಲ್ಲ. ಗುಡಿಯ ಬಳಿಗೆ ಹೋಗಿ ಬರುತ್ತೇನೆಂದು ಹೇಳಿ ಹೋದ.

ಸಿದ್ದಣ್ಣ ಗಾರೆಕೆಲಸ ಮಾಡುತ್ತಿದ್ದ. ಒಳ್ಳೆಯ ನುರಿತ ಕೆಲಸ-ಗಾರ. ರಾಮು ಒಬ್ಬನೇ ಮಗ—ಅವನಿಗೆ. ಅದೂ ಬಹುಕಾಲದ ಮೇಲೆ ಹುಟ್ಟಿದ ಮಗ. ಮಗನ ಬಗ್ಗೆ ನೂರೆಂಟು ಕನಸು ಕಂಡಿದ್ದ ಸಿದ್ದಣ್ಣ. ಮಗನನ್ನು ಎಲ್ಲರಂತೆ ಸಾಕದೆ ಆದರ್ಶವಾಗಿ ಸಾಕುವೆ-ನೆಂದು ಮನಸ್ಸು ಮಾಡಿದ್ದ. ಮಗನಲ್ಲಿ ಯಾವ ದೋಷಗಳೂ ಇಲ್ಲ-ದಂತೆ ತಿದ್ದುವೆನೆಂದುಕೊಂಡು, ಚಿಕ್ಕಂದಿನಿಂದಲೂ ಅವನನ್ನು ಎಚ್ಚರಿಕೆಯಿಂದ ಸಲಹಿದ್ದ. ಅವನ ಅಲ್ಪಸ್ವಲ್ಪ ತಪ್ಪುಗಳನ್ನು ಸಹ ಕಡೆಗಣಿಸದೆ ಶಿಕ್ಷಿಸುತ್ತಿದ್ದ

ಆದರೆ ಅವನ ಹೊಟ್ಟೆಬಟ್ಟೆಯ ವಿಷಯದಲ್ಲಿ ಯಾವ ಕಟ್ಟು ನಿಟ್ಟನ್ನೂ ಮಾಡುತ್ತಿರಲಿಲ್ಲ. ತಮ್ಮ ಬಡತನ ಲೆಕ್ಕಿಸದೇ, ಮಕ್ಕಳ ಬೆಳವಣಿಗೆಗೆ ಹಾಲು ಅಗತ್ಯವೆಂದು ಅವನಿಗೆ ಒಂದು ಪಾವು ಹಾಲು ಕೊಳ್ಳುತ್ತಿದ್ದ. ಮಗನು ಶಾಲೆಯಲ್ಲಿ ನಾಲ್ಕು ಮಂದಿಯೆದುರು ತಲೆತಗ್ಗಿಸಬಾರದೆಂದು ತನ್ನ ಯೋಗ್ಯತೆಗೆ ಮೀರಿದ ಬಟ್ಟೆ ಹೊಲಿಸಿ-ಕೊಡುತ್ತಿದ್ದ.

ಆದರೂ.......

ರಾಮು ಅವನ ಎಲ್ಲ ನಿರೀಕ್ಷೆಯನ್ನೂ ವಿಫಲಗೊಳಿಸಿದ್ದ. ಅವನ ಕನಸುಗಳನ್ನೆಲ್ಲಾ ಭಗ್ನಗೊಳಿಸಿದ್ದ.

ಕೆಂಚಪ್ಪನ ಮಗ ರಾಜುವನ್ನು ಕಂಡಾಗಲೆಲ್ಲಾ ಸಿದ್ದಪ್ಪನ ಮನಸ್ಸು ತಪಿಸುವುದು—ಅಂತಹ ಮಗ ತನಗಿದ್ದಿದ್ದರೆ ! ಎಂದು. ಕೆಂಚಪ್ಪ ಕುಡುಕ, ಲಂಪಟ. ಆದರೆ ರಾಜು—ರಾಮುನ ಓರಗೆಯ ಹುಡುಗನಾದರೂ—ನಡತೆಯಲ್ಲಿ, ಮಾತು-ಕತೆಗಳಲ್ಲಿ ಎಲ್ಲರ ಮೆಚ್ಚಿಗೆ ಗಳಿಸಿದ್ದ.

ಸಿದ್ದಣ್ಣ ಮಗನನ್ನು ತಿದ್ದಲು ಅರಿತಿದ್ದ ಮಾರ್ಗ ಒಂದೇ—ಹೊಡೆತ! ಕೋಲು ಮುರಿಯುವ ವರೆಗೂ ಹೊಡೆತ ! ಆದರೆ ಹೊಡೆತ-ದಿಂದಲೂ ರಾಮು ತಿದ್ದಲಾರದಂತಾದಾಗ ಸಿದ್ದಣ್ಣ ಭ್ರಮಿತನಾದ ಏನು ಮಾಡುವುದೆಂದು ತಿಳಿಯದಾದ.

ಸಿದ್ದಣ್ಣ ಯೋಗ್ಯ, ಸಂಭಾವಿತ. ಅವನ ಮತಸ್ಥರಿಗೆಲ್ಲಾ ಅವನೇ ಮುಖಂಡ. ಆದರೂ ಅವನಿಗೆ ನೆಮ್ಮದಿಯಿಲ್ಲ. ತನ್ನ ಮಗನೇ ಹೀಗೆ ಕೈಹತ್ತದೆ, ಯಾವ ಪ್ರಯೋಜನಕ್ಕೂ ಬಾರದೆ 'ಮುಸುಂಡಿ'ಯಾಗಿರುವನಲ್ಲಾ—ಎಂದು ನೆನೆದು ವಿಹ್ವಲನಾಗು-ವನು.

ರಾಮು ಊಟದ ವೇಳೆಗೆ ಬಂದ. ಸಿದ್ದಮ್ಮ ಊಟಕ್ಕಿಟ್ಟಳು. ಅನಂತರ ನೆನಪಿಸಿಕೊಂಡು,

"ಓ, ಬಡುವಿನ ಮೇಲೆ ಜಿಲೇಬಿ ಇಟ್ಟಿದ್ದೆ ತೆಗೆದುಕೋ. ನಿಮ್ಮಪ್ಪ ಸ್ನೇಹಿತರ ಸಂಗಡ ಹೋಟಲಿಗೆ ಹೋಗಿದ್ರಂತೆ......ನಿನಗೆ ಜಿಲೇಬಿ ಕಂಡರೆ ಆಸೆ ಅಂತ, ಕಟ್ಟಿಸಿಕೊಂಡು ಬಂದಿದಾರೆ ..." ಎಂದಳು.

ರಾಮು ಜಿಲೇಬಿ ತಿಂದ. ಅವನ ಮನಸ್ಸು ಸ್ವಲ್ಪ ಮೃದು-ವಾಯಿತು. ಯಾವುದೋ ಪುಸ್ತಕ ನೋಡುತ್ತಿದ್ದವನು, ಹಾಗೇ ಮಲಗಿ ನಿದ್ದೆಹೋದ.

ಸಿದ್ದಣ್ಣ ಬರುವ ವೇಳೆಗೆ ರಾತ್ರಿ ಒಂಬತ್ತು-ಹತ್ತು ಗಂಟೆ. ಅವನಿಗೆ ತುಂಬ ಸಿಟ್ಟೇರಿರುವುದನ್ನು ಸಿದ್ದಮ್ಮ ತತ್‌ಕ್ಷಣ ಗುರುತಿಸಿದಳು.

“ ಬಂದಿದಾನೇನೇ ಅವನು ಮನೇಗೆ ? ” ಎಂದು ಅಬ್ಬರಿಸಿದ—ಒಳಗೆ ಕಾಲಿಡುತ್ತಲೇ.

ಸಿದ್ದಮ್ಮ ನಡುಗಿದಳು. ಇನ್ನು ಅನಾಹುತವಾಗುವುದೆಂದು ತಿಳಿದುಬಿಟ್ಟಳು.

“ ಹೂಂ. ಮಲಗಿದಾನೆ. ಕೈಕಾಲು ತೊಳೆದುಕೊಂಡು ಊಟ. ಮಾಡಿ, ಏಳಿ....ಎಂದಳು....'' ಅಂಜುತ್ತ.

“ ಓಹೋ, ಇಂತಹ ಮಗನ್ನ ಪಡೆದಾಗಲೇ ಹೊಟ್ಟೆತುಂಬಿತು ! ಅವನ್ನ ಈ ದಿನ ಹುಟ್ಟಲಿಲ್ಲಾ ಅನ್ನಿಸಿಬಿಡ್ತೀನೆ ..ಎಲ್ಲಿದಾನೆ...? ” ಎಂದು ನುಗ್ಗಿ ಬಂದನು.

ನಿದ್ದೆ ಮಾಡುತ್ತಿದ್ದ ರಾಮನ ಎರಡು ಕಿವಿಗಳನ್ನೂ ಹಿಡಿದು ಅಲ್ಲಾಡಿಸಿ ಮೇಲಕ್ಕೆ ಎತ್ತಿದನು. ರಾಮು ಬೆಚ್ಚಿ, ಬೆದರಿ ಕಣ್ಬಿಟ್ಟ. ಎದುರಿಗೆ, ಉಗ್ರನಾಗಿ ನಿಂತಿದ್ದ ಸಿದ್ದಣ್ಣನನ್ನು ನೋಡಿ ಭೀತನಾಗಿ ನಡುಗಿದ.

“ ಬಿಡಿ ನಿದ್ದೆಗಣ್ಣು ಅವನಿಗೆ. ಏನಿದ್ದರೂ ಬೆಳಗ್ಗೆ ಹೇಳೀ-ರಂತೆ '' ಎಂದು ಅಂಗಲಾಚಿ ಬೇಡಿದಳು ಸಿದ್ದಮ್ಮ.

“ ನಿನ್ನ ಮುದ್ದಿನಿಂದಲೇ ಇವನು ಹಾಳಾಗಿರೋದು ! ಏನು ನೋಡ್ತೀಯೋ ಹಾಗೆ ? ಬೊಗಳು—ರಂಗಪ್ಪನ ಹತ್ತಿರ ಐದು ರೂಪಾಯಿ ಸಾಲ ತಂದಿದೀಯಂತಲ್ಲಾ—ಏಕೆ ತಂದೆ ? ಅದೂ ನಾನು ಹೇಳಿಕಳಿಸಿದೆ—ಅಂತ ಹೇಳಿ ? ಮೊನ್ನೆ ರಾಚಪ್ಪನ ಮನೇಲಿ ಎರಡು ತೆಗೆದುಕೊಂಡಿದೀಯಂತೆ—ನನ್ನ ಜೇಬಿನಿಂದ ಕಳ್ಳತನ ಮಾಡ್ತಿದ್ದಿ—ಅದು ಸಾಲದು ಅಂತ ಹೊರಗಡೆಯೂ ಪ್ರಾರಂಭ ಮಾಡಿದೀಯಾ ?”

ರಾಮು ಮಾತನಾಡಲಿಲ್ಲ. ಮಂಕು ಹಿಡಿದಂತೆ ಸಿದ್ದಣ್ಣನ ಮುಖವನ್ನೇ ನೋಡಿದ

ಸಿದ್ದಣ್ಣ ಸಿಟ್ಟಿನಿಂದ ಮೈಮರೆತ. ಬೆತ್ತವನ್ನೆಳೆದುಕೊಂಡು ತನ್ನ ಸಿಟ್ಟು ಹರಿಬಿಟ್ಟು ಥಳಿಸಲಾರಂಭಿಸಿದ. ಸೊಯ್, ಸೊಯ್-ಎಂದು ಮುಟ್ಟಿದೆಡೆಯಲ್ಲೆಲ್ಲಾ ಬಾಸುಂಡೆಗಳನ್ನೆಬ್ಬಿಸಿತು ಬೆತ್ತ. ಸಿದ್ದಮ್ಮ ಮಧ್ಯೆ ಬಿಡಿಸಲು ಬಂದು ತಾನೂ ನಾಲ್ಕೇಟು ತಿಂದಳು.

ರಾಮು ಗರ ಬಡಿದವನಂತೆ ಸುಮ್ಮನೆ ನಿಂತು ಏಟು ತಿನ್ನುತ್ತಿದ್ದ. ವಿರೋಧಿಸಲಿಲ್ಲ, ತಪ್ಪಿಸಿಕೊಳ್ಳಲು ಯತ್ನಿಸಲೂ ಇಲ್ಲ.

ಈ ಗಲಾಟೆ ಕೇಳಿ ರಾಜು ಬಂದು ಬಿಡಿಸದಿದ್ದರೆ, ಕೈಸೋತು ಕೋಲು ಮುರಿವ ವರೆಗೆ ಸಿದ್ದಣ್ಣನ ಸಿಟ್ಟು ಶಾಂತವಾಗುತ್ತಿರಲಿಲ್ಲ-ವೇನೋ........

ರಾಜು ಬಂದು ಸಿದ್ದಣ್ಣನಿಗೆ ಕೈಮುಗಿದು ಹೇಳಿದ :

“ ಬಿಡಿ ಸಿದ್ದಣ್ಣ. ಅವನು ಯಾವ ತಪ್ಪು ಮಾಡಿದ್ದರೂ ಹೀಗೆ ಹೊಡೆಯೋದುಂಟೇ ? ಸಿಟ್ಟಿನ ಭರದಲ್ಲಿ ಪೆಟ್ಟು ಬೀಳುತ್ತೆ, ಅಷ್ಟೇನೇ ! ''

ರಾಜುವನ್ನು ನೋಡಿದೊಡನೇ ಸಿದ್ದಣ್ಣನ ಮನಸ್ಸು ಸ್ವಲ್ಪ ಶಾಂತವಾಯಿತು. ಅವನ ಮಾತನ್ನು ಕೇಳಿ ಕೈಚೆಲ್ಲಿಸಿದ.

“ ಸಿಂಹದ ಹೊಟ್ಟೇಲಿ ನರಿ ಹುಟ್ಟಿದಂತೆ ಹುಟ್ಟಿದೆ ನನ್ನ ಹೊಟ್ಟೇಲಿ ! ಏನು ಮಾಡಲಿ ರಾಜಣ್ಣಾ....ಒಂದೊಂದು ಸಲ ಎಷ್ಟು ರೇಗುತ್ತೆ ಅಂತ; ಕತ್ತು ಅದುಮಿ ಹಾಕಿಬಿಡಲೇ ಅನ್ನಿಸುತ್ತೆ. ನಿನ್ನಂತೆ ಇರೋದಕ್ಕೆ ಇವನಿಗೇನು ಧಾಡಿ ? ”

ರಾಜು ಹಿತವಾಗಿ ನಕ್ಕ—ಅನುಕಂಪದಿಂದ ರಾಮುನತ್ತ ನೋಡಿದ. ರಾಮುನ ಮುಖಭಾವ ನೋಡಿ ಚಕಿತನಾದ. ರಾಮುನ ಕಣ್ಣುಗಳಲ್ಲಿ ದ್ವೇಷವಿತ್ತು, ಸೇಡಿತ್ತು. ಉತ್ಕಟ ಅಹಿತಭಾವ ಇತ್ತು.

ಸಿದ್ದಣ್ಣ ಕೈಕಾಲು ತೊಳೆಯಲು ಹೋದ.

ರಾಜು ರಾಮುನಿಗೆ ಏನಾದರೂ ಸಮಾಧಾನ ಹೇಳಬೇಕೆಂದು ಅವನ ಬಳಿಗೆ ಬಂದ.

“ ತುಂಬಾ ನೋವಾಯ್ತಾ ರಾಮು ? ಪಾಪ, ನಿಮ್ಮ ತಂದೆಗೆ ಏಕೆ ಅಷ್ಟು ಕೋಪ ಬಂತು ? ನೀನೇನು ಮಾಡಿದೆ ......?''

ರಾಮುನಿಗೆ ಏನು ಆಯಿತೋ ಏನೋ; ಭಾವೋದ್ವೇಗದ ಒತ್ತಡ ತಾಳಲಾರದೆ, ತಟ್ಟನೆ ರಾಜುವಿನ ಮುಖಕ್ಕೆ ಒಂದೇಟು ಕೊಟ್ಟ. ರಾಜು ತತ್ತರಿಸಿ ಹಿಂದಕ್ಕೆ ಹೆಜ್ಜೆಯಿಟ್ಟ. ರಾಮು ಅವನ ಮೈಮೇಲೇರಿ ಹೋಗಿ, ರಾಜುವನ್ನು ಕೆಳಕ್ಕೆ ಕೆಡವಿಕೊಂಡು ಅವನ ಮೇಲೆ ಕುಳಿತು ಎದೆಗೆ ಗುದ್ದಹತ್ತಿದ.

ರಾಜು ರಾಮುವಿಗಿಂತಲೂ ದೃಢಕಾಯ, ಬಲಿಷ್ಠ. ಆದರೆ ಈ ಅನಿರೀಕ್ಷಿತ ಆಕ್ರಮಣದಿಂದ ಭ್ರಮಿತನಾಗಿ ಕೆಳಗೆ ಬಿದ್ದಿದ್ದ.

ಸಿದ್ದಮ್ಮ ಇದನ್ನು ಕಂಡು ಭೀತಳಾಗಿ ಕಿರುಚಿಕೊಂಡಳು. ಸಿದ್ದಣ್ಣ ಗಾಬರಿಯಿಂದ ಓಡಿಬಂದ. ರಾಮುನ ರೋಷಾವೇಶ ನೋಡಿ ಅವನಿಗೂ ಏನೋ ಒಂದು ಬಗೆಯ ಭಯವಾಯಿತು.

“ ಕಳ್ಳತನ ಆಯ್ತು. ಇನ್ನು ಖೂನೀನೂ ಮಾಡ್ತೀಯೇನೋ ” ಎಂದವನೇ ಓಡಿ ಬಂದು, ರಾಮುನನ್ನು ಎಳೆದ. ರಾಮು ಎಲ್ಲ ಬಲ-ವನ್ನೂ ಕಳೆದುಕೊಂಡವನಂತೆ ನೆಲದಮೇಲೆ ದೊಪ್ಪನೆ ಕುಕ್ಕರಿಸಿಕೊಂಡ.

ರಾಜು ಎದೆ ಸವರಿಕೊಳ್ಳುತ್ತಾ, ತನ ಬಟ್ಟೆಗಳನ್ನೆಲ್ಲಾ ಕೊಡಹಿಕೊಳ್ಳುತ್ತಾ ರಾಮುನತ್ತ ನೋಡಲೂ ಅಂಜುತ್ತಾ:

“ ನಾ ಬರ್ತೀನಿ, ಸಿದ್ದಣ್ಣ....'' ಎಂದು ಹೋದ.

ಸಿದ್ದಣ್ಣ ರಾಮುನತ್ತ ತೀಕ್ಷ್ಣ ನೋಟ ಬೀರಿದ.

“ ನಿನ್ನ ಜನ್ಮಕ್ಕೆ ನಾಚಿಕೆ ಬೇಡ್ವೇ? ಆ ರಾಜು-ಬಂಗಾರದಂತಹ ಹುಡುಗ. ಅವನ ಕೈಲೇ ಜಗಳಕ್ಕೆ ಹೋಗಿದ್ದಾನೆ ! ಅವನ ಪಾದದ ಧೂಳಿ ಹೊರುವ ಯೋಗ್ಯತೆಯಿಲ್ಲ ನಿನಗೆ; ಭಡವಾ...ಥೂ ನಿನ್ನ ಮುಖಕ್ಕೆ! ”

—ರಾಮುನ ನಿರ್ಭಾವಮುಖ ನೋಡಿ ತಡೆಯಲಾರದೆ ಉಗುಳಿ, ಸಿದ್ದಣ್ಣ ಊಟಕ್ಕೆ ಹೋದ

ಒಂದು ತುತ್ತು ಅನ್ನವೂ ಅವನ ಗಂಟಲೊಳಗಿಳಿಯಲಿಲ್ಲ. ಊಟದ ಶಾಸ್ತ್ರ ಮಾಡಿ ತಟ್ಟೆಯೊಳಕ್ಕೇ ಕೈ ತೊಳೆದು ಮೇಲೆದ್ದ.

ಅವನು ಹೊರಗಡೆ ಬಂದು ನೋಡಿದ. ರಾಮು ಕೋಣೆಯಲ್ಲಿರಲಿಲ್ಲ ಹೊರಗಿನ ಅಂಗಳದಲ್ಲಿ ಮಲಗಿಕೊಳ್ಳಲು ಹೋಗಿದ್ದ.

ಸಿದ್ದಣ್ಣ ತೀವ್ರಚಿಂತೆಯಿಂದ, ಗಲ್ಲಕ್ಕೆ ಕೈ ಕೊಟ್ಟು ಯೋಚಿಸುತ್ತ ಕುಳಿತುಬಿಟ್ಟ. ಇರುವವನೊಬ್ಬ ಮಗ. ಅವನೂ ಹೀಗೆ ಆಗಬೇಕೇ? ಈ ಅವಿಧೇಯತೆ, ಈ ಕಳ್ಳತನ ಸುಳ್ಳು, ಮೋಸ—ತಂದೆ-ತಾಯಿಯರಿಗೆ ಹೆಸರು ತರುತ್ತಾನೆಯೇ ಇವನು? ರಾಜುವಿನ ತಂದೆಯಂತೆ ಮಗನ ಬಗ್ಗೆ ಹೆಮ್ಮೆಪಡುವ ಭಾಗ್ಯ ಇಲ್ಲ ತನಗೆ; ಮಗನ ಸುದ್ದಿ ಕೇಳಿದೊಡನೆ ತಲೆ ತಗ್ಗಿಸಬೇಕಾಗಿದೆ.

ಸಿದ್ದಮ್ಮ ಊಟ ಕೆಲಸ ಮುಗಿಸಿ ತಾನೂ ಕೋಣೆಗೆ ಬಂದಳು. ಗಂಡನ ದುಃಖ ನಿರಾಶೆ ಕಂಡು ಅವಳಿಗೂ ಸಂಕಟವಾಯಿತು.

" ಬಿಡಿ, ನೀವೇಕೆ ಹಾಗೆ ಚಿಂತೆ ಮಾಡ್ತೀರಿ? ಹುಡುಗ ಬುದ್ಧಿ—ನಾಲ್ಕು ದಿನವಾದ ಮೇಲೆ ಸರಿಹೋಗ್ತಾನೆ! "

" ನಾಲ್ಕುದಿನವೇ? ನಾಲ್ಕುವರ್ಷವಾದರೂ ಸರಿಹೋಗೋದಿಲ್ಲ.... ಸ್ವಲ್ಪವಾದರೂ ನಮ್ಮ ಮಾತು ಅಂದರೆ ಲಕ್ಷವಿದೆಯೋ ಅವನಿಗೆ? ಅವ ಮಗ ಅಲ್ಲ—ಶತ್ರು! ಯಾವ ಜನ್ಮದ ಶತ್ರುವೋ ಮಗನಾಗಿ ಹುಟ್ಟಿದಾನೆ, ಸೇಡು ತೀರಿಸಿಕೊಳ್ಳೋಕೆ! "

" ನಮ್ಮ ಹಣೆಯಬರಹಕ್ಕೆ ಯಾರೇನು ಮಾಡ್ತಾರೆ?—ನಾವು ಪಡೆದು ಬಂದಿರೋದೇ ಇಷ್ಟು—ಎಂದು ಸಮಾಧಾನ ಮಾಡ್ಕೋಬೇಕು. ಇನ್ನೇನು ಮಾಡೋದು? " ಎಂದು ನಿಡುಸುಯ್ದಳು ಸಿದ್ದಮ್ಮ.

ಸಿದ್ದಣ್ಣನಿಗೆ ರಾತ್ರಿ ನಿದ್ರೆ ಹತ್ತಲಿಲ್ಲ. ಶೂನ್ಯದೃಷ್ಟಿಯಿಂದ ಹೆಂಚು ನೋಡುತ್ತಿದ್ದ. ಮಗನ ಬಗ್ಗೆ ಅವನು ಕಟ್ಟಿದ ಹೊಂಗನಸುಗಳೆಲ್ಲಾ ಭಗ್ನವಾಗಿದ್ದುವು. ಸಿದ್ದಮ್ಮನಿಗೆ ಗಂಡನ ನಿರಾಶೆ, ಮನೋವೇದನೆ ಅರ್ಥವಾಯಿತು. ರಾಮುನ ಬಗ್ಗೆ ಅವಳಿಗೂ ತುಂಬ ಅಸಮಾಧಾನವಾಯಿತು.

ಇತ್ತ ಹೊರಗಡೆ ಮಲಗಿದ ರಾಮುನಿಗೂ ನಿದ್ದೆ ಬರಲಿಲ್ಲ. ಕಣ್ತೆರೆದು ಮೇಲೆ ನೋಡಿದ—ಆಕಾಶದಲ್ಲಿ ಮಿನ-ಮಿನುಗುವ ತಾರೆಗಳು. ಮತ್ತೆ ಕಣ್ಮುಚ್ಚಿದ. ಎಲ್ಲೆಲ್ಲೂ ಸಂತೋಷ, ಎಲ್ಲೆಲ್ಲೂ ಆನಂದ. ಆದರೆ ತನ್ನ ಪಾಲಿಗೆ ಏನೂ ಇಲ್ಲ, ಏನೂ ಇಲ್ಲ!

ರಾಮು ನಿಡುಸುಯ್ದ. ನೋವಿನಿಂದ, ಯಾತನೆಯಿಂದ ಚಡಪಡಿಸಿದ.

ಪ್ರೀತಿಗಾಗಿ, ಮೆಚ್ಚಿಗೆಗಾಗಿ ಹಾತೊರೆಯುತ್ತಿದ್ದಿತು ಅವನ ಹೃದಯ. ತನ್ನನ್ನು ಅರ್ಥಮಾಡಿಕೊಳ್ಳುವವರು, ಪ್ರೀತಿ ತೋರಿಸುವವರು ಯಾರೂ ಇಲ್ಲ, ಯಾರೂ ಇಲ್ಲ—ಎಂದು ಹಲುಬುವ.

ಅಪ್ಪ—ಅಬ್ಬಾ, ಅವನಿಗೆಷ್ಟು ದ್ವೇಷ ತನ್ನ ಮೇಲೆ! ಅಪ್ಪ ಅಂದಂತೆ ಎಲ್ಲೋ ಹಿಂದಿನ ಜನ್ಮದ ಶತ್ರುವಿರಬೇಕು! ಇಲ್ಲದಿದ್ದರೆ ಏಕೆಷ್ಟು ದ್ವೇಷ? ಏನು ಮಾಡಿದರೂ ತಪ್ಪು. ಏನು ಆಡಿದರೂ ತಪ್ಪು. ಅಪ್ಪನ ಮನ ಮೆಚ್ಚಿಸಲು ತಾನೆಷ್ಟು ಯತ್ನಿಸಿಲ್ಲ? ಊಹುಂ. ಅಪ್ಪನನ್ನು ಮೆಚ್ಚಿಸಲು ಸಾಧ್ಯವಿಲ್ಲ. ಸಾಧ್ಯವಿಲ್ಲ. ತಲೆಕೆಳಗಾದ್ರೂ 'ಸೋರೆಬುರುಡೆ' ಎಂಬ ಜಾತಿ ಅವನದು.

ಅವ್ವ? ಅವಳಿಗೆ ತಾನೇ ತನ್ನ ಮೇಲೆ ಪ್ರೀತಿಯೇ? ಅಪ್ಪ ಏನು ಮಾಡಿದರೂ ಅವಳಿಗೆ ಸರಿಯಾಗಿ ಕಾಣುತ್ತೆ. ಅಪ್ಪನ್ನ ಹೊಗಳ್ತಾಳೆ. ಅಪ್ಪ ಒಳ್ಳೆಯೋರು, ನಾನು ಕೆಟ್ಟೋನು—ಅದೇ ಅವಳ ಕೊರಗು.

ನಾನು ಕೆಟ್ಟೋನೇ?........ನಿಜವಾಗಿಯೂ ಕೆಟ್ಟೋನೇ? ಅದಕ್ಕೇ ನನ್ನನ್ನು ಯಾರೂ ಪ್ರೀತಿಸೋದಿಲ್ಲವೇ? ಅದಕ್ಕೇ ಎಲ್ಲರೂ ನನ್ನ ದ್ವೇಷ ಮಾಡ್ತಾರೆಯೇ?........?

ರಾಮು ವ್ಯಗ್ರನಾಗಿ ತನ್ನನ್ನು ತಾನೇ ಕೇಳಿಕೊಂಡ:

" ಹೌದು, ನಾನು ಕೆಟ್ಟೋನು, ತುಂಬಾ ಕೆಟ್ಟೋನು. ಅದಕ್ಕೇ ಎಲ್ಲರೂ ನನ್ನ ದೂರ ಮಾಡ್ತಾರೆ. ನನ್ನ ಜೊತೆ ಸೇರೋದಿಲ್ಲ...., ನನ್ನ ಪ್ರೀತಿ ಮಾಡೋದಿಲ್ಲ...."

ಅವನೆದೆಯಾಳದಿಂದ ದುಃಖ ಉಕ್ಕಿ ಉಕ್ಕಿ ಬಂದಿತು. ದೀನತೆಯಿಂದ, ಮಗುವಿನಂತೆ ಬಿಕ್ಕಿ ಬಿಕ್ಕಿ ಅತ್ತನು. ಯಾರಿಗೂ ಸದ್ದು ಕೇಳದಂತೆ, ನೀರವವಾಗಿ ಉಸಿರು ಹಿಡಿದು ಅತ್ತ.

ಒಮ್ಮೆಗೇ ಅವನಿಗೆ ರಾಜುವಿನ ನೆನಪಾಯಿತು. ಅವನೆದೆಗೆ ಕಿಚ್ಚಿಕ್ಕಿದಂತಾಯಿತು. ಉತ್ಕಟ ದ್ವೇಷ ಎದೆಯಲ್ಲಿ ಹೊಗೆಯಾಡಿತು. ಅವನ ಕಣ್ಣೀರು ಹಿಂಗಿತು.

ಹೌದು, ರಾಜುವೇ ಇವರ ಕಣ್ಮಣಿ. ಸದಾ ಅವನ ಹೊಗಳಿಕೆಯೇ—ಅವನೇ ಅವನೇ ಮಗನಾಗಬೇಕಾಗಿತ್ತಂತೆ. ಯಾರು ಬೇಡ! ಅಂದಿದ್ದರು? ಅವನನ್ನೇ ಮಗನನ್ನಾಗಿ ಮಾಡಿಕೊಳ್ಳಬೇಕಾಗಿತ್ತು.

ಎಂದಾದರೂ ರಾಜುವನ್ನೇ ಹೊಗಳುವುದು—ಒಂದು ದಿನವಾದರೂ ತನ್ನನ್ನು ಅದೇ ಆದರದಿಂದ, ಪ್ರೀತಿಯಿಂದ ಮಾತನಾಡಿಸಿರುವುದುಂಟೇ? ಇಲ್ಲ. ಇಲ್ಲ.

ದೀನತೆಯಿಂದ, ದುಃಖದಿಂದ ಮೃದುವಾಗಿದ್ದ ಅವನ ಹೃದಯ ಛಲದಿಂದ, ಸೇಡಿನಿಂದ ಉಕ್ಕಾಯಿತು.

ಹೌದು, ನನ್ನ ಕಂಡರೆ ಯಾರಿಗೂ ಆಗದು. ಎಲ್ಲರಿಗೂ ದ್ವೇಷ! ನಾ ಏನು ಮಾಡಿದರೂ ಅವರಿಗೆ ಹರ್ಷವಿಲ್ಲ. ತೃಪ್ತಿಯಿಲ್ಲ. ಬೇಡ, ನನಗೂ ಅವರ ಹಂಗು ಬೇಡ. ಅವರ ಜಿಲೇಬಿಯೂ ಬೇಡ. ಅವರ ಬಡಿತವೂ ಬೇಡ........

ರಾಮು ಎದ್ದು ಕುಳಿತ. ತಡೆಯಲಾರದ ಕ್ರೋಧದಿಂದ ಕುದಿದ. ಅತ್ತಿತ್ತ ನೋಡಿದ. ಸೂರಿನಡಿಯಲ್ಲಿ ಸಿದ್ದಣ್ಣ ಮಮತೆಯಿಂದ ಬೆಳಸಿದ ಸಂಪಿಗೆ ಗಿಡವಿತ್ತು—ಇನ್ನೂ ಮೂರಡಿ ಮೇಲೆದ್ದಿದ್ದ ಗಿಡ—ರಾಮು ಗಿಡುಗಚ್ಚಿಕೊಂಡು ಎಲ್ಲ ಕೊಂಬೆಗಳನ್ನೂ ಪಟಪಟನೆ ಮುರಿದ. ಗಿಡ ಬೋಳಾಗಿ ನಿಂತಿತು.

ರಾಮು ಸ್ವಲ್ಪ ಶಾಂತನಾಗಿ ಮುರಿದು ಬಿದ್ದ ಕೊಂಬೆಗಳತ್ತ ನೋಡಿದ. ಅವನಿಗೆ ಆಗ ಭಯವಾಯಿತು. ಬೆಳಗ್ಗೆ ಸಿದ್ದಣ್ಣ ನೋಡಿದರೆ? ಎಷ್ಟು ಸಂಕಟಪಡುತ್ತಾನೋ?

ತಂದೆಗೆ ಸಂಕಟವಾಗುವುದೆಂಬ ಯೋಚನೆಯೇ ಅವನಿಗೆ ಅವ್ಯಕ್ತ ಆನಂದ ಕೊಟ್ಟಿತು. ಅದರ ಜೊತೆಗೇ ಭಯ; ಇದು ನನ್ನ ಕೆಲಸವೆಂದರೆ ಸುಮ್ಮನಿರುತ್ತಾನೆಯೇ? ಮೈಮೂಳೆ ಮುರಿಯುತ್ತಾನೆ.... ರಾಮು—ಒಂದು ಎಲೆಯೂ ಅಲ್ಲಿ ಬೀಳದಂತೆ ಆಯ್ದುಕೊಂಡು ಹೋಗಿ—ಕೆಂಚಪ್ಪನ ಮನೆಯ ಹಿತ್ತಲಿಗೆ ಹಾಕಿದ. ಮತ್ತೆ ಬಂದು ಏನೂ ತಿಳಿಯದವನಂತೆ ಮಲಗಿದ. ಆದರೆ ನಿದ್ದೆ ಬರಲಿಲ್ಲ. ಮನಸ್ಸು ಉದ್ವಿಗ್ನವಾಗಿ, ಮರುದಿನ ಏನಾಗುವುದೋ ಎಂದು ನೆನೆದು ವ್ಯಗ್ರವಾಗುತ್ತಿತ್ತು.

ಬೆಳಗ್ಗೆ ಎದ್ದು ಬೀದಿಯ ನಲ್ಲಿಯಲ್ಲಿ ಮುಖ ತೊಳೆಯಲು ಹೋದ. ಇವನ ಮುಖ ಕಂಡೊಡನೆ ಕೆಂಪಿ—ರಾಜನ ತಾಯಿ—ಮುಖ ಗಂಟಿಕ್ಕಿದಳು. ರಾಮು ಮುಖ ತೊಳೆದು ಬೆನ್ನು ತಿರುಗಿಸಿದೊಡನೆಯೇ, ಕೆಂಪಿ ನೀರು ಹಿಡಿಯಲು ಬಂದವರೊತನೆ ಹೇಳಿದಳು:

"ಎಲ್ಲೋ ಒಂದು ಗೂಗೆ! ಆ ಸಿದ್ದಣ್ಣ ಎಂತಹ ಧರ್ಮಾತ್ಮ. ಅವನ ಹೊಟ್ಟೇಲಿ ಏನೂಂತ ಹುಟ್ಟಿ ಬಂತೋ ಇದು!"

ರಾಮುನಿಗೆ ಕಶೆಯಿಂದ ಹೊಡೆದಂತಾಯಿತು ಆ ಮಾತು ಕೇಳಿ. ಔಡುಗಚ್ಚಿ, ತನ್ನ ಸಂತಾಪವನ್ನಡಗಿಸಿಕೊಂಡು ಬೇಗ ಬೇಗ ನಡೆದ.

'ಹಾಳು ಜನ—ಹಾಳು ಲೋಕ! ನನ್ನ ಕಂಡರೆ ಎಲ್ಲರಿಗೂ ದ್ವೇಷ, ಎಲ್ಲರಿಗೂ ದ್ವೇಷ.'

ಅವನು ತನ್ನ ಮನೆಗೆ ಬರುವಾಗ ಕೆಂಪಿಯ ಮನೆಯ ಮುಂದೆಯೇ ಹಾಯ್ದು ಬರಬೇಕು. ಕೆಂಪಿಯ ಮನೆಯ ಬಾಗಿಲು ತೆರೆದಿತ್ತು. ಅವಳ ಐದುವರ್ಷದ ಮಗ—ರಂಗ—ಬಾಗಿಲಲ್ಲಿ ನಿಂತಿದ್ದ.

ರಂಗ ರಾಮುನ ಮುಖ ಕಂಡೊಡನೆ ಹುಬ್ಬನ್ನು ವಕ್ರಮಾಡಿ,

"ಲೋ ಕಳ್ಳ! ಏಕೋ ನಮ್ಮಣ್ಣನ್ನ ಹೊಡೆದಿದ್ದು—ಬಾ ನಮ್ಮ ಮನೇಗೆ—ಅವ್ವ ನಿನಗೆ ಚಮಡಾ ಸುಲೀತಾಳಂತೆ!" ಅಂದ.

ರಾಮು ಗಕ್ಕನೆ ನಿಂತ. ಅವನ ಮುಖಕ್ಕೆ ರಕ್ತವೇರಿ, ಉಸಿರು ಸಿಕ್ಕಿಕೊಂಡಿತು. ತನ್ನ ವೇದನೆ ಹೋಗಬೇಕಾದರೆ ಏನಾದರೂ ಮಾಡಬೇಕು, ಏನಾದರೂ ಮಾಡಬೇಕು. ರಾಮು ಮೈಮರೆತು ತನ್ನ ದುಗುಡವನ್ನೆಲ್ಲಾ ಹರಿಯಬಿಟ್ಟು ಎತ್ತಿ ಒಂದೇಟು ಕೆನ್ನೆಗೆ ಬಿಗಿದ

"ಯವ್ವಾ...ಸತ್ತೆ.." ಎಂದು ಲಬಲಬ ಬಾಯಿಬಡಿದುಕೊಂಡ ರಂಗ.

ಕೆಂಪಿ ಒಂದೇ ಉಸಿರಿಗೆ ಓಡಿಬಂದಳು. ತನ್ನ ಕಾರ್ಯಕ್ಕೆ ತಾನೇ ಬೆರಗಾಗಿ ಪಿಳಿಪಿಳಿ ನೋಡುತ್ತ ನಿಂತಿದ್ದ ರಾಮುನನ್ನು ಕಂಡಳು.

"ಅಯ್ಯೋ, ನಿನ್ಮನೆ ಹಾಳಾಗ—ನನ್ನ ಮಗನ್ನ ಬಲಿ ತೆಗೆದು ಕೊಂಡೆಯೇನೋ...." ಎಂದವಳೇ ರಾಮುನ ಬೆನ್ನ ಮೇಲೆ ದಪದಪನೆ ಗುದ್ದಿದಳು.

ಈ ಗಲಾಟೆ ಕೇಳಿ ಸಿದ್ದಣ್ಣ ಓಡಿಬಂದ. ಕೆಂಪಿ ಉಪ್ಪುಕಾರ ಹಚ್ಚಿ ವಿಷಯ ತಿಳಿಸಿದಳು. ರಂಗ ತನ್ನ ಅಪಮಾನ ಮಾಡಿದುದನ್ನು ಹೇಳಬೇಕೆಂದು ರಾಮ ಬಾಯಿ ತೆರೆಯ ಹೋದ. ತಂದೆಯ ಉಗ್ರ ಮುಖ, ತಿರಸ್ಕಾರದ ನೋಟ ಕಂಡು ಅವನ ಮಾತು ಅಲ್ಲೇ ಅಡಗಿತು. ಅಭಿಮಾನದಿಂದ, ಛಲದಿಂದ ಸೆಟೆದು ನಿಂತಿತು ಮನಸ್ಸು. ತಲೆ ತಗ್ಗಿಸಿ ಸುಮ್ಮನೆ ನಿಂತ.

ಸಿದ್ದಣ್ಣನಿಗೆ ಅಸಾಧ್ಯ ರೇಗಿತು.

"ಈ ಮೂಳನಿಗೆ ಏನು ಮಾಡಲಪ್ಪಾ! ನಿನ್ನೆ ಕೊಲು ಮುರಿಯುವಂತೆ ಹೊಡೆದಿದ್ದೇನೆ. ಆದರೂ ಬುದ್ಧಿ ಬಂದಿಲ್ಲ... ಅವನ ಕಣ್ಣು ನೋಡು......ಸತ್ತ ಮಿಗದಂತೆ! ನಡೆಯೋ ಮನೆಗೆ......" ಎಂದು ಕತ್ತುಹಿಡಿದು ದಬ್ಬಿಕೊಂಡು ಬಂದ.

"ಈ ದಿನ ಅವನಿಗೆ ಅನ್ನ ನೀರು ಕೊಟ್ಟೀಯಾ—ಕೋಣೇಲಿ ಕೂಡ್ಬಿಡು" ಎಂದು ಸಿದ್ದಮ್ಮನಿಗೆ ಆಜ್ಞೆಮಾಡಿದ

ಅವನು ಕೆಲಸಕ್ಕೆಂದು ಹೊರಟಾಗಲೇ ಸಂಪಿಗೆಯ ಗಿಡದ ಸ್ಥಿತಿಯೂ ಕಣ್ಣಿಗೆ ಬೀಳಬೇಕೇ?

ಸಿದ್ದಣ್ಣ ಸರ್ರನೆ ಒಳಕ್ಕೆ ಬಂದು ಬೆತ್ತ ತೆಗೆದುಕೊಂಡ. ರಾಮು ತಕ್ಷಣ ಕಾರಣ ಗ್ರಹಿಸಿದ: ಮಿಂಚಿನ ವೇಗದಲ್ಲಿ ಬಾಗಿಲಿನಿಂದ ಓಟ ಕಿತ್ತ. ಸಿದ್ದಣ್ಣ ಬೆತ್ತವನ್ನು ಬಿಸುಟ, ಅವನ ಬೆನ್ನುಹತ್ತಿದ. ಅವನನ್ನು ಓಡಿಸಿಕೊಂಡು ಹೋಗಿ, ಎಳೆದುಕೊಂಡು ಬಂದ. ಗಂಡನ ಭೀಷಣ ಮುಖ ನೋಡಿ ಸಿದ್ದಮ್ಮ ನಡುಗಿದಳು. ಈ ದಿನ ರಾಮುನ ಗತಿ ಪೂರಯಿಸಿ ಹೋಗುವುದೆಂದು ತಿಳಿದುಬಿಟ್ಟಳು. "ಹೋ..." ಎಂದು ದೊಡ್ಡ ಧ್ವನಿಯಲ್ಲಿ ಅಳಹತ್ತಿದಳು.

ಸಿದ್ದಣ್ಣ ಬಾಗಿಲುಮುಚ್ಚಿ ಅಗಳಿ ಹಾಕಿಕೊಂಡು ರಾಮುನನ್ನು ಬಚ್ಚಿದ.

"ನಾನಲ್ಲ, ನಾನಲ್ಲ ರಾಜು." ಎಂದು ತೊದಲಿದ ರಾಮು.

"ಮಾಡಿರೋದು ಅನಾಚಾರ. ಮತ್ತೆ ಸುಳ್ಳು ಬೇರೆ. ಅವನೇಕೆ ಮುರೀತಾನೋ....?"

"ರಾತ್ರಿ ಮುರಿದ. ಅವನ ಮನೆಯ ಹಿಡಿಗೆ ಹಾಕಿದಾನೆ. ಅವನ ಮನೆ ಹಿತ್ತಲದಾಗೆ ನೋಡಿ ಬೇಕಾದರೆ—" ರಾಮು ಸಮಯಸ್ಫೂರ್ತಿಯಿಂದ ಮಾತು ಪೋಣಿಸಿ ಹೇಳಿದ.

ಸಿದ್ದಣ್ಣ ಆ ಮಾತನ್ನು ನಂಬಲಿಲ್ಲ. ಆದರೂ ಅವರ ಮನಸ್ಸಿಗೆ ಸಂಶಯ ಬಂದಿತು. ಮನಸ್ಸು ಚಲಿತವಾದ್ದರಿಂದ ಕೈಹಾಗೇ ನಿಂತಿತು. ಬೆತ್ತ ಬಿಸುಟು, ಬಯ್ದುಕೊಳ್ಳುತ್ತಾ, ಬಾಗಿಲು ತೆಗೆದ. ಜನ ನೆರೆದಿದ್ದರು—ಸಿದ್ದಮ್ಮನ ಗೋಳಾಟ ಕೇಳಿ. ಸಿದ್ದಣ್ಣ ಯಾರೊಡನೆಯೂ ಮಾತನಾಡದೆ ಭರ ಭರ ನಡೆದ.

ರಾಮು ಒಂದು ಮೂಲೆಯಲ್ಲಿ ನಿಂತಿದ್ದ. ನೆರೆದ ಜನ ಅವನತ್ತ ತಿರಸ್ಕಾರದಿಂದ ನೋಡಿದರು. ಸಿದ್ದಮ್ಮನಿಗೆ, ಒಳ್ಳೆಯ ತಂದೆ-ತಾಯಿಯರಿಗೆ ಒಳ್ಳೆಯ ಮಕ್ಕಳು ಹುಟ್ಟುವುದಿಲ್ಲವೆಂದು ಸಮಾಧಾನ ಹೇಳಿದರು.

ರಾಮುನಿಗೆ ಇನ್ನು ನಿಲ್ಲಲಾಗಲಿಲ್ಲ. ತಲೆತಗ್ಗಿಸಿ ಹೊರಟುಬಿಟ್ಟ. ಈ ಜನ, ಈ ತಂದೆ, ಈ ತಾಯಿ—ಎಲ್ಲರ ಬಗ್ಗೆಯೂ ದ್ವೇಷ ಸಂತಾಪಗಳು ಉಕ್ಕೇರಿದುವು ಅವನ ಎದೆಯಲ್ಲಿ

ಸಿದ್ದಮ್ಮನ ತಮ್ಮ ವೀರಯ್ಯ ಹಳ್ಳಿಯಿಂದ ಅಕ್ಕನನ್ನು ನೋಡಲು ಬಂದ. ವೀರಯ್ಯ ಹಳ್ಳಿಯಲ್ಲಿ ಅಮ್ಮನ ಗುಡಿಯ ಪೂಜಾರಿ. ಮಂತ್ರ-ತಂತ್ರಗಳಲ್ಲೂ ಪರಿಶ್ರಮವಿದ್ದಿತು. ಸಿದ್ದಮ್ಮ ತಮ್ಮನೆದುರಿಗೆ ತನ್ನ ಮಗನ ವಿಷಯ ಹೇಳಿಕೊಂಡು ಪೇಚಾಡಿದಳು.

ವೀರಯ್ಯ ತಿಳಿವಳಿಕಸ್ಥನಂತೆ ಹೇಳಿದ:

"ತಿಳೀತಕ್ಕ—ನನಗೆ ಎಲ್ಲಾ ತಿಳೀತು. ಅದು ರಾಮುನ ತಪ್ಪಲ್ಲ. ಅವನಿಚ್ಛೆಯಲ್ಲ. ಸದಾ ಮಂಕಾಗಿ, ಮುಸುಂಡಿಯಾಗಿರ್ತಾನೆ—ಒಮ್ಮೊಮ್ಮೆ ಮೈಮೇಲೆ ಬೀಳೋಕೆ ಬರ್ತಾನೆ-ಹೌದಲ್ಲೋ ?"

"ಹೌದು ಹೌದು! ಏನು ಮಾಡೋದು ಅದಕ್ಕೆ ?"

"ಅವನೇನು ಮಾಡ್ತಾನೆ—ಪಾಪ, ಅವನ ಮೇಲಿರೋ ಗಾಳೀದು ಈ ಆಟಾಟೋಪ ಎಲ್ಲಾ! ನನ್ನ ಜೊತೆ ಕಳಿಸಿ........ಪೂಜೆ ಹಾಕಿ ಎಲ್ಲಾ ಗುಣಮಾಡಿ ಕಳಿಸುತೀನೆ...."

ಸಿದ್ದಮ್ಮನ ಮನಸ್ಸಿಗೆ ನಾಟಿದುವು ಆ ಮಾತುಗಳು. ಗಂಡನೊಡನೆ ಹೇಳಿದಳು. ಯಾವ ಮಾರ್ಗದಿಂದಲಾದರೂ ಮಗ ಸರಿ ಹೋದರೆ ಸಾಕೆಂದಿದ್ದ ಸಿದ್ದಣ್ಣ ಒಪ್ಪಿದ ಅವನ ಮನಸ್ಸಿನಲ್ಲೂ ರಾಮುನ ಬಗ್ಗೆ ಒಮ್ಮೆ ವಾತ್ಸಲ್ಯ, ಒಮ್ಮೆ ಸಂತಾಪ ಉಕ್ಕುತ್ತಿತ್ತು. ವೀರಯ್ಯ ಹೇಳಿದ ಕಾರಣ ಅವನಿಗೆ ಪೂರ್ತಿ ಸಮಾಧಾನ ಕೊಟ್ಟಿತು.

"ಇರ್ಬೇಕು. ರಾಮು ಅಂತಹವನಲ್ಲ. ಹೀಗೆಲ್ಲಾ ಮಾಡೋಕೆ ಅದೇ ಕಾರಣ ಇರ್ಬೇಕು-ಏನೋ ಅವನ ಮೈಯುಂಡುಕೊಂಡಿರುವುದೇ ನಿಜ." ಎಂದುಕೊಂಡ.

ವೀರಯ್ಯನೊಡನೆ ರಾಮು ಹರ್ಷದಿಂದಲೇ ಹೊರಟ. ಸದ್ಯ ತಂದೆ-ತಾಯಿಯರ ಸೆರೆಯಿಂದ ಬಿಡುಗಡೆಯಾದರೆ ಸಾಕೆಂದು ಹೊರಟ. ರಾಮುವಿಗೆ ವೀರಯ್ಯನ ಉದ್ದ, ಗಾತ್ರ ಕಂಡು ಸ್ವಲ್ಪ ಅಂಜಿಕೆಯೇ—ಆದರೂ ವೀರಯ್ಯ ಉಳಿದವರಂತೆ ತನ್ನನ್ನು ಅಕ್ಷೇಪಿಸದೆ-ತನಗೆ ದೋಷ ಕೊಡದೆ—ಸಾನುಭೂತಿಯಿಂದ ತನ್ನನ್ನು ನೋಡುವುದನ್ನು ಕಂಡು ಸಮಾಧಾನಮಾಡಿಕೊಂಡ.

× × × ×

ವೀರಯ್ಯ ರಾಮುವಿಗೆ ಸ್ನಾನ ಮಾಡಿಸಿ ಗುಡಿಗೆ ಕರೆದುಕೊಂಡು ಹೋದ. ಗುಡಿಯಲ್ಲಿ ದೇವಿಗೆ ಪೂಜೆಯಾಯಿತು. ರಾತ್ರಿಯ ವೇಳೆ. ಮಂಗಳಾರತಿ ಮಾಡಿಸಲು ಬಂದಿದ್ದ ಒಬ್ಬಿಬ್ಬರು ಮನೆಗೆ ಹೋದರು. ವೀರಯ್ಯ ಬಹಳ ಹೊತ್ತು ಪೂಜೆಮಾಡಿದ. ರಾಮು ಸುಮ್ಮನೆ ನೋಡುತ್ತಿದ್ದ.

ವೀರಯ್ಯ ಕೈ ಚಪ್ಪಾಳೆ ತಟ್ಟಿಕೊಂಡು ಮೇಲೆದ್ದ. ರಾಮು ತಾನೂ ನಿಂತ. ವೀರಯ್ಯ ಗಂಭೀರವಾಗಿ ಹೇಳಿದ:—

"ರಾಮು ನಾ ಹೇಳೋದನ್ನ ಕೇಳು—ನಿನಗೂ ಸಿದ್ದಣ್ಣನಿಗೂ ಆಗೋದಿಲ್ಲವಂತೆ. ಇದಕ್ಕೆ ಕಾರಣ ನನಗೆ ಗೊತ್ತು. ಇದರಲ್ಲಿ ನಿನ್ನ ತಪ್ಪಿಲ್ಲ"

ರಾಮು ಆಶ್ಚರ್ಯದಿಂದ ಮಾವನ ಮುಖ ನೋಡುತ್ತಿದ್ದ.

"ನಿನ್ನ ಮೇಲೆ ಗಾಳಿ ಇದೆ. ಅದನ್ನ ಬಿಡಿಸಿ ಓಡಿಸಿಬಿಡುತ್ತೀನೆ. ಎಲ್ಲಾ ನಿನ್ನ ಒಳ್ಳೆಯದಕ್ಕೇನೆ—ಅನಂತರ, ತಂದೆ-ಮಗ ಕೂಡಿ ನಡೀತೀರಿ........"

ರಾಮು ಬೆರಗುವಡೆದು ನೋಡಿದ; ವೀರಯ್ಯನ ಭಾವ ಬದಲಿಸಿತು. ವೀರಯ್ಯ ಉಗ್ರನಾದ. ಅವನ ಕಣ್ಣು ಕೆಂಪೇರಿದುವು. ದೇವಿಯ ಛಡಿ ಹಿಡಿದು "ಹುಂ. ಇಲ್ಲಿ ಬಂದು ನಿಲ್ಲು."

ಎಂದು ಜಾಗ ತೋರಿಸಿದ.

ರಾಮು ಬೆದರಿದ; ಆದರೂ ವಿರೋಧಿಸದೆ ಆ ಜಾಗದಲ್ಲಿ ನಡುಗುತ್ತಾ ನಿಂತ.

"ಹುಂ, ಹೊರಡು. ರಾಮುನ ಮೈಬಿಟ್ಟು ಹೊರಡು. ಹೊರಡು ....!"

ವೀರಯ್ಯ ವೀರಭದ್ರಾವತಾರ ತಾಳಿ, ರಾಮುವನ್ನು ಥಳಿಸಿದ ... ಚೆನ್ನಾಗಿ ಥಳಿಸಿದ. ರಾಮು ಹಲ್ಲು ಕಚ್ಚಿ ಎಲ್ಲವನೂ ಸಹಿಸಿದ. ರಾಮುನ ಮೈತುಂಬ ಬಾಸುಂಡೆಗಳೆದ್ದುವು.

ವೀರಯ್ಯ ಗಣಬಂದವನಂತೆ ಥಳಿಸಿ ಥಳಿಸಿ ಸೋತ. ಮೇಲುಸಿರೆಳೆಯುತ್ತಾ ಹೊಡೆತವನ್ನು ಸ್ವಲ್ಪ ನಿಧಾನವಮಾಡಿದ ರಾಮು ಛಂಗನೆ ಮುಂದಕ್ಕೆ ನೆಗೆದ.

"ಸಾಕು ನಿಲ್ಲಿಸು ಮಾವ! ನನ್ನ ಕೊಲ್ಲಬೇಡ!" ಎಂದು ಕಿರುಚಿದ.

ವೀರಯ್ಯ ಛಡಿಯನ್ನು ಎಸೆದು ರಾಮುವನ್ನು ತಬ್ಬಿಕೊಂಡ—"ಇನ್ನು ಭಯವಿಲ್ಲ. ಮೈಬಿಟ್ಟು ಹೋಯಿತು. ಇನ್ನೆಲ್ಲಾ ಒಳ್ಳೇದಾಗುತ್ತೆ." ಎಂದ, ತೃಪ್ತಿಯಿಂದ.

ರಾಮು ಅವನ ತೆಕ್ಕೆಯಲ್ಲಿ ಶೀತಲವಾಗಿ ಸೆಟೆದುಕೊಂಡಿದ್ದ. ಅವನು ಮಾತನಾಡಲಿಲ್ಲ. ಉಸಿರುಕಟ್ಟಿಕೊಳ್ಳುವಂತೆ ಯಾವುದೋ ಭಾವೋದ್ವೇಗ ಅವನ ಎದೆಯಿಂದ ಚಿಮ್ಮಿ ಬಂದಿತು.

"ಮಾವ, ನಾ ಊರಿಗೆ ಹೋಗಬೇಕು, ಈಗಲೇನೇ" ಎಂದು ಸಿಡಿದು ಹೇಳಿದ.

ಹಿಂದಿನ ದೀನತೆ ಹೋಗಿತ್ತು, ಬದಲಾಗಿ ದುಡುಕಿತ್ತು, ಛಲವಿತ್ತು. ಅವನ ಸಣ್ಣ ಕಣ್ಣುಗಳು ದ್ವೇಷವನ್ನು ಕಾರುತ್ತ ಜ್ವಲಿಸುತ್ತಿದ್ದುವು.

ಆಗಲೇ ತಂದೆ-ತಾಯಿಯರ 'ಧ್ಯಾಸ' ಬಂದಿದೆ—ಗಾಳಿ ಮೈಬಿಟ್ಟು ಹೋಗಿದೆ—ಎಂದು ತೃಪ್ತನಾದ ವೀರಯ್ಯ. ಆಗಲೇ ಗಾಡಿ ಕಟ್ಟಿಸಿಕೊಂಡು ಬಂದು ಊರಿಗೆ ತಂದು ಬಿಟ್ಟುಹೋದ.

ರಾಮುವಲ್ಲಿ ತುಂಬ ಬದಲಾವಣೆಯಾದಂತೆ ಕಂಡಿತು ಸಿದ್ದಮ್ಮನಿಗೆ. ಅವನ ತೀವ್ರ ಧ್ವನಿ, ಮಾತಿನ ಗಡುಸು ಕಂಡು ಹೆಮ್ಮೆಪಟ್ಟಳು.

ರಾಮುನ ನಡತೆಯೂ ಸ್ವಲ್ಪಮಟ್ಟಿಗೆ ಬದಲಿಸಿತು. ಅವನು ಮನೆಯಲ್ಲಿರುತ್ತಿದ್ದುದೇ ಅಪರೂಪ. ಊಟ ತಿಂಡಿಯವೇಳೆಗೆ ಮಾತ್ರ ಬರುವ. ಆಗಲೂ ಅದಷ್ಟು ತಂದೆಗೆ ಕಣ್ಮರೆಯಾಗಿಯೇ ಇರುವ.

ಶಾಲೆಯಲ್ಲಿ ಪರೀಕ್ಷೆ ಆಯಿತು. ರಾಜು ಕ್ಲಾಸಿಗೆ ಮೊದಲನೆಯವನಾಗಿ ಪಾಸ್ ಆಗಿದ್ದ. ರಾಮು ನಾಪಾಸ್ ಆಗಿದ್ದ.

ಸಿದ್ದಣ್ಣನಿಗೆ ರಾಜುವೇ ವಿಷಯ ತಿಳಿಸಿದ್ದ. ಸಿದ್ದಣ್ಣ ಪೆಚ್ಚಾಗಿ, ಯೋಚಿಸುತ್ತಾ, ಹೆಂಡತಿಯೊಡನೆ ತನ್ನ ಅದೃಷ್ಟವನ್ನು ಹಳಿದುಕೊಳ್ಳುತ್ತಿದ್ದ.

ರಾಮು ಮನೆಯೊಳಕ್ಕೆ ಬಂದ. ತಂದೆಯ ಮುಖ ನೋಡಿಯೇ ಕಾರಣ ಗ್ರಹಿಸಿದ. ಟ್ಟು ತುಂಡಿಕ್ಕಿದಂತೆ ಹೇಳಿದ:—

"ವಿದ್ಯೆ ನನಗೆ ಹತ್ತೋದಿಲ್ಲ. ನಾ ಶಾಲೆಗೆ ಹೋಗೋದಿಲ್ಲ ನಾ ಕೆಲಸಕ್ಕೆ ಸೇರ್ತೀನಿ. ಸಂಪಾದನೆ ಮಾಡ್ತೀನಿ."

ಸಿದ್ದಣ್ಣ ಬೇಡವೆಂದ. ಬೈದ, ಹೊಡೆದ. ಯಾವುದಕ್ಕೂ ಜಗ್ಗಲಿಲ್ಲ ರಾಮು. ಶೆಟ್ಟರ ಅಂಗಡಿಯಲ್ಲಿ ಸಾಮಾನು ತೆಗೆದುಕೊಡುವ ಕೆಲಸಕ್ಕೆ ಸೇರಿದ. ಸಂಬಳ ಹತ್ತು ರೂಪಾಯಿ.

ಸಿದ್ದಣ್ಣನ ಮನಸ್ಸಿಗೆ ತುಂಬಾ ನೋವಾಯಿತು. ಮಗ ಮುಂದಕ್ಕೆ ಬರಲಿ ಎಂದು ಎಷ್ಟು ಮಾಡಿದರೂ ಹೀಗಾಗಬೇಕೇ — ಎಂದು ಹಲುಬಿದ.

ರಾಮುವಿಗೆ ತಾನು ಸ್ವತಂತ್ರನೆಂದು ಒಂದು ತೃಪ್ತಿ. ಆದರೂ ಯಾವುದೋ ಅಶಾಂತಿ, ಯಾವುದೋ ದ್ವೇಷ ಅವನೆದೆಯನ್ನು ದಹಿಸುತ್ತಿತ್ತು.

ಬರುತ್ತಿದ್ದ ಹತ್ತು ರೂಪಾಯಿ ಅವನ ಬೀಡಿಗೆ, ಸಿನಿಮಾಕ್ಕೆ ಗೆಳೆಯರಿಗೆ ತಿಂಡಿಕೊಡಿಸಲಿಕ್ಕೆ—ಸಾಕಾಗುತ್ತಿರಲಿಲ್ಲ. ಸುತ್ತಮುತ್ತ ಸಾಲಮಾಡಿದ.

ಸಾಲಗಾರರ ತಗಾದೆ ಹೆಚ್ಚಿತು. ಅಂಗಡಿಯಲ್ಲಿ ಐದುರೂಪಾಯಿ ಕದ್ದ.

ಸಿದ್ದಣ್ಣನಿಗೆ ಇದೊಂದೂ ತಿಳಿಯದು ಅವನು ಡಾಕ್ಟರ್ ಜೈರಾಜರ ಮನೆಯಲ್ಲಿ ಗಾರೆ ಕೆಲಸಮಾಡುತ್ತಿದ್ದ. ಆ ದಿನ ಸಂಬಳ ಕೇಳಲು ಡಾಕ್ಟರರ ಷಾಪಿಗೆ ಹೋಗಿದ್ದ. ಷಾಪಿನ ತುಂಬಾ ಜನರಿದ್ದರು· ಶೆಟ್ಟರೂ ಅಲ್ಲಿಗೆ ಬಂದಿದ್ದರು.

ಸಿದ್ದಣ್ಣನನ್ನು ನೋಡಿದವರೇ,

"ಓ, ಸಿದ್ದಣ್ಣ—ನಿನ್ನ ಮಗಾ ಅಂತ ನಾ ನಂಬಿಕೇ ಮೇಲೆ ಕೆಲಸಕ್ಕಿಟ್ಟುಕೊಂಡೆ. ಸರಿಯಾಗಿ ಕೊಟ್ಟೆ ಕೈನಾ—ಕಳ್ಳತನ ಮಾಡಿ. ದಾನೆ—ಈ ದಿನ ಐದು, ನಾಳೆ ನೂರು—ಕೈಬಾಯಿ ಚೆನ್ನಾಗಿಲ್ಲದ ಮೇಲೆ ನಂಬಬಾರದು ಆ ಮನುಷ್ಯನ್ನ. ಕೆಲಸ ಬಿಡಿಸಿ ಓಡಿಸಿದೆ." ಎಂದರು.

ಸಿದ್ದಣ್ಣನಿಗೆ ತುಂಬಾ ಅವಮಾನವಾಯಿತು. ದುಡ್ಡನ್ನೂ ಕೇಳದೆ ಸೀದಾ ಮನೆಗೆ ಬಂದ. ಸಿದ್ದಮ್ಮ ಎಲ್ಲೋ ಹೋಗಿದ್ದಳು. ತಂದೆ ಬರುವನೆಂದು ನಿರೀಕ್ಷಿಸದೆ ರಾಮು ಮನೆಯಲ್ಲೇ ಬೀಡಿ ಸೇದುತ್ತಿದ್ದ.

ಸಿದ್ದಣ್ಣ ಅದನ್ನು ಕಂಡು ಮತ್ತೂ ಸಿಟ್ಟಾದ.

"ಮನೆ ಹಾಳುಮಾಡೋಕೆ ಇವನ್ನ ಬೇರೆ ಕಲಿತಿಯೋನೋ.... ಎಂದು ಅಬ್ಬರಿಸಿದ.

ಅವನ ಅಬ್ಬರ ಕೇಳಿ ರಾಮುವಿಗೆ ವಿಚಿತ್ರ ತೃಪ್ತಿಯಾಯಿತು.

"ಯಾರೂ ಮಾಡದೆ ಇರೋದನ್ನ ನಾ ಮಾಡ್ತಾ ಇಲ್ಲ...ನೀವೇ ಕಲಿತಿಲ್ವಾ ಆ ಚಟಾನಾ?" ರಾಮು ಬಾಣ ಬಿಟ್ಟಂತೆ ನೇರವಾಗಿ ಕೇಳಿದ.

ಕೇಳಿ, ಸಿದ್ದಣ್ಣ ಚಕಿತನಾದ; ಮರುಕ್ಷಣ ಕ್ರೋಧದಿಂದ ಕಂಪಿಸಿದ. "ಏನಂದಿ? ನನಗೇ ಉತ್ತರ ಹೇಳ್ತೀಯಾ? ನಿನ್ನಂತೆ ಕಳ್ಳತನಮಾಡಿ ಕತ್ತುಹಿಡಿದು ದಬ್ಬಿಸಿಕೊಂಡು ಬಂದಿಲ್ಲ ನಾನು! ನನ್ನಮನೆ ಅನ್ನ ತಿಂತಾ, ನನಗೆ ಅಪಮಾನ ಮಾಡ್ತೀಯಾ...ಈ ದಿನ ನಿನ್ನ ಹುಟ್ಟಡಗಿಸಿಬಿಡ್ತೇನೆ...." ಎಂದವನೇ ಬೆಲ್ಟನ್ನು ಸೆಳೆದುಕೊಂಡ.

ರಾಮು ಛಂಗನೆ ನೆಗೆದು ದೂರ ನಿಂತ. ಸೇಡನ್ನು ಕಾರುತ್ತಾ, ತಾನೂ ಅಬ್ಬರಿಸಿದ.

"ನೀ ಏನೂ ಹೊಡೀಬೇಕಾಗಿಲ್ಲ! ನಿನ್ನ ಮನೆಯ ಅನ್ನವೂ ಬೇಡ—ಈ ಹಂಗೂ ಬೇಡ. ನನಗೆ ಗೊತ್ತು. ನೀ ನನ್ನ ಕಂಡರಾಗೋದಿಲ್ಲ. ನಾನು ಸತ್ತರೂ ನಿಮಗೆ ದುಃಖವಿಲ್ಲ. ಪೀಡೆ ಕಳೀತು ಅಂತ ಹೊಟ್ಟೆಗೆ ಹಾಲು ಹುಯ್ದುಕೊಳ್ತೀರಿ ಅಂತ. ನನ್ನ ಅನ್ನಾನ ನಾ ದುಡಿದು ತಿಂದ್ಕೊಳ್ತೇನೆ. ನಿಮ್ಮನೆಯೂ ಬೇಡ. ನಿಮ್ಮ ಕೂಳೂ ಬೇಡ. ನಿಮ್ಮ ಸಾವಾಸಾನೂ ಬೇಡ."

ಸಿದ್ದಣ್ಣ ಬೆಲ್ಟನ್ನು ಹಾಗೆಯೇ ಕೈಬಿಟ್ಟು ಬೆರಗಾಗಿ ನೋಡ್ತಿದ್ದ. ರಾಮು ಇಷ್ಟು ಮಾತಾಡಿ ಹೀಗೆ ಎದುರು ಬೀಳುವನೆಂದು ಕನಸಿನಲ್ಲೂ ನೆನೆದಿರಲಿಲ್ಲ ಅವನು. ಅತ್ತಣಿಂದ ಸಿದ್ದಮ್ಮನೂ, ಬಂದಳು. ಇತ್ತಣಿಂದ ರಾಮುನೂ ಬಾಗಿಲು ದಾಟಿದ.

"ನಾ ಕೆಟ್ಟೋನು, ಹಾಳಾಗಿ ಹೋಗ್ತೀನೆ; ನೀವಿಬ್ಬರೇ ಒಳ್ಳೆಯೋರು—ಸುಖವಾಗಿರಿ." ಎಂದು ತೀಕ್ಷ್ಣವಾಗಿ ಅವಳತ್ತ ನೋಡಿ ಬೇಗ ಬೇಗ ನಡೆದ.

ಸಿದ್ದಣ್ಣ ಬಾಯಿ ಕಟ್ಟಿದಂತೆ ಸುಮ್ಮನೆ ನಿಂತಿದ್ದ. ಸಿದ್ದಮ್ಮ ಹೀಗಾಗಿರಬಹುದೆಂದು ಊಹಿಸಿ, ಗೋಳಾಡುತ್ತ ರಾಮನನ್ನು ಕೂಗುತ್ತ ಹಿಂದೆ ಹಿಂದೆ ಹೋದಳು. ರಾಮು ಕೈಗೆ ಸಿಕ್ಕದೆ ಕಣ್ಣಿಂದ ಮರೆಯಾದ.

ಸಿದ್ದಮ್ಮ ಬಿಕ್ಕಿ ಬಿಕ್ಕಿ ಅಳುತ್ತಾ ಸಿದ್ದಣ್ಣನ ಬಳಿಗೆ ಬಂದಳು.

"ಏನಾಯ್ತು ಹೇಳಿ? ಏಕೆ ಹಾಗೆ ಹೋದ—ಏನಂದಿರಿ? ಎಲ್ಲಾರಾ ಅಪಾಯ ಮಾಡಿಕೊಂಡಾನು, ಹೋಗಿ.......ಶಿವನೇ ಈ ಸುಖಕ್ಕೆ ಹಡೆದೆನೇ ನಾನು...." ಎಂದು ರೋದಿಸಿದಳು.

ಸಿದ್ದಣ್ಣ ತಲೆಯ ಮೇಲೆ ಕೈಹೊತ್ತು ಕೂತಿದ್ದವನು ಮಿಸುಕಾಡಲಿಲ್ಲ. ಶೂನ್ಯ ನೋಟ ನೋಡುತ್ತ ಸುಮ್ಮನಿದ್ದ ಸಿದ್ದಮ್ಮ ಅವನ

ಸ್ಥಿತಿ ಕಂಡು ಮಿಡುಕಿದಳು. ಅವನ ಮನಸ್ಸು ತುಂಬ ಕ್ಷೋಭೆಗೊಂಡಿದೆಯೆಂದು ತಿಳಿದಳು.

"ಹಾಗಾರೆ ನಾ ಹೋಗಿ ಡಾಕ್ಟರ್ ಸಾಹೇಬರಿಗಾದರೂ ಹೇಳ್ತೀನೆ—ಏನಾರೂ ವ್ಯವಸ್ಥೆ ಮಾಡ್ತಾರೆ—ರಾಮು....ಅಯ್ಯೋ.... ನಿನಗೇಕೆ ಇಂತಹ ಬುದ್ಧಿ ಬಂತಪ್ಪಾ ......"

ಸಿದ್ದಮ್ಮ ದುಃಖಿಸುತ್ತ, ತನಗೆ ತಾನೇ ಮಾತಾಡಿಕೊಳ್ಳುತ್ತ, ಡಾ. ಜೈರಾಜರ ಮನೆಗೆ ಹೋದಳು. ಜೈರಾಜರ ಕಾಲು ಹಿಡಿದುಕೊಂಡು ಎಲ್ಲ ತಿಳಿಸಿದಳು.

"ನಾ ಹೇಗೆ ಹೊಟ್ಟೆ ಹಿಡಿದಿರಲಿ ಸ್ವಾಮಿ! ರಾಮು ಎಂದೂ ಇಷ್ಟು ಸಿಟ್ಟಾಗಿ ಮನೆ ಬಿಟ್ಟಿಲ್ಲ. ಅವ ಏನಾರೂ ಅಪಾಯ ಮಾಡಿಕೊಂಡರೆ ಏನು ಗತಿ? ಏನಾರಾ ಮಾಡಿ ಮಗನ್ನ ಹುಡುಕಿಕೊಡಿ ನನ್ನ ಮಗ ಅಲ್ಲ ಸ್ವಾಮಿ; ಇನ್ನು–ನಿಮ್ಮ ಮಗಾ–ನಿಮ್ಮ ಖುದೀಗೆ ಹಾಕಿದೀನಿ" ಎಂದು ಗೋಳಿಟ್ಟಳು.

ಜೈರಾಜ್ ಅವಳಿಗೆ ಸಮಾಧಾನ ಹೇಳಿ, ತಮ್ಮ ಜವಾನ ಮಾರನನ್ನು ಕರೆದು, ಸೈಕಲ್‌ಮೇಲೆ ಹೋಗಿ ರಾಮನನ್ನು ಎಲ್ಲಿದ್ದರೂ ಹುಡುಕಿ ತರುವಂತೆ ಹೇಳಿದರು.

ಸಿದ್ದಮ್ಮನನ್ನು ಹುಡುಕಿಕೊಂಡು ಸಿದ್ದಣ್ಣನೂ ಅಲ್ಲಿಗೆ ಬಂದ. ಅವನ ಕಳೆಗುಂದಿದ ಮುಖ, ದೀನ ನೋಟ ನೋಡಿ ಡಾಕ್ಟರಿಗೆ ತುಂಬಾ ಕಸಿವಿಸಿಯಾಯಿತು. ರಾಮನ ವಿಚಾರವನ್ನೆಲ್ಲ ವಿವರಿಸುವಂತೆ ಕೇಳಿದರು.

ಸಿದ್ದಮ್ಮ ನಿಡುಸುಯ್ದು, ದುಃಖದಿಂದ ಎಲ್ಲವನ್ನೂ ವಿವರಿಸಿದಳು. ಅವನ ಬಗ್ಗೆ ತಮ್ಮ ಆಸೆ–ಭರವಸೆಗಳು, ಒಬ್ಬನೇ ಮಗನೆಂದು ಅವನಿಗೆ ವಿದ್ಯೆ ಕಲಿಸಲು ಮಾಡಿದ ಶತಪ್ರಯತ್ನ, ಅವನ ಅವಿಧೇಯತೆ, ದ್ವೇಷ, ಕಳ್ಳತನ, ಸುಳ್ಳುಗಾರಿಕೆ—ಎಲ್ಲವನ್ನೂ ವಿವರಿಸಿದಳು.

ಅದುವರೆಗೂ ಸುಮ್ಮನಿದ್ದ ಸಿದ್ದಣ್ಣ ತಲೆ ಎತ್ತಿ, ಗಂಭೀರವಾಗಿ ಹೇಳಿದ–"ಸ್ವಾಮಿ, ತಂದೆ, ತಾಯೀರು ಹೆಮ್ಮೆಪಡುವಂತೆ ಬಾಳುವ ಮಗನೇ ಮಗ. ಇದ್ದರೆ ಅಂತಹ ಮಕ್ಕಳಿರಬೇಕು. ಇಂತಹ ಮಕ್ಕಳು ಇದ್ದರೆಷ್ಟು, ಸತ್ತರೆಷ್ಟು? ಇವು ಮಕ್ಕಳಲ್ಲ ಸ್ವಾಮಿ, ಜನ್ಮಾಂತರದ ಶತ್ರುಗಳು! ಹುಟ್ಟಿ ಹೊಟ್ಟೆಯುರಿಸಿ ಸೇಡು ತೀರಿಸಿಕೊಳ್ಳೋಕೆ ಬಂದಿರುವ ಶತ್ರುಗಳು!"

ಸಿದ್ದಣ್ಣನ ಮನಸು ಎಷ್ಟು ಕಲಕಿದೆ, ಎಷ್ಟು ಶೋಕತಪ್ತನಾಗಿದೆ—ಎಂದು ಜೈರಾಜ ಅರಿತು ಮರುಗಿದರು.

"ಅಷ್ಟು ಮನಸಿಗೆ ಹಚ್ಚಿಕೋಬೇಡ, ಸಿದ್ದಣ್ಣ. ಇನ್ನೂ ಹುಡುಗ. ಹೀಗಾಡ್ತಾನೆ—ಮುಂದೆ ಸರಿಹೋಗ್ತಾನೆ."

ಆದರೂ ಆ ಮಾತಿನಿಂದ ಸಿದ್ದಣ್ಣನ ದುಗುಡ ಕಡಿಮೆಯಾಗಲಿಲ್ಲ.

ಮಾರ ಸೈಕಲ್‌ಬೆಲ್ ಮಾಡಿದ. ಕುತೂಹಲದಿಂದ ಮೂವರೂ ಎದ್ದು ನಿಂತರು ರಾಮು,—ತಂದೆ-ತಾಯಿಯರು ಅಲ್ಲಿಗೆ ಬಂದಿರುವರೆಂದು ತಿಳಿಯದೆ—ಡಾಕ್ಟರಿದುರಿಗೆ ತನ್ನ ಅಳಲು ತೋಡಿಕೊಂಡು ಕೆಲಸ ಬೇಡಬೇಕೆಂದು ತಲೆತಗ್ಗಿಸಿ, ಯೋಚಿಸುತ್ತಾ ಬರುತ್ತಿದ್ದ. ಪಕ್ಕದಲ್ಲೇ ಮಾರನೂ ಬಂದ.

"ಕೆರೆಯ ಹತ್ತಿರ ಯೋಚಿಸ್ತಾ ಕೂತಿದ್ದ, ಸಾರ್! ನಾನು ನಿಮ್ಮ ಹತ್ತಿರ ಕೆಲಸ ಕೊಡಿಸುತೀನಿ ಅಂತ ಕರೆದುಕೊಂಡು ಬಂದೆ...." ಎಂದ ಮಾರ. ಬಾಗಿಲು ದಾಟುತ್ತಾ, ರಾಮು ತಲೆ ಎತ್ತಿನೋಡಿದ ತಟ್ಟನೆ ಅವನ ಮುಖಭಾವ ಬದಲಿಸಿತು. ದ್ವೇಷದಿಂದ ಅವನ ಮುಖ ವಕ್ರವಾಯಿತು. ತಕ್ಷಣ ಓಡಲು-ಆ ಸ್ಥಳದಿಂದಲೇ ಓಡಲು ಹಿಂದಕ್ಕೆ ಹೆಜ್ಜೆಯಿಟ್ಟ. ಆದರೆ ಮಾರ ತುಂಬ ಚುರುಕು. ಅವನ ಕೈಯನ್ನು ಗಟ್ಟಿಯಾಗಿ ಹಿಡಿದ.

"ಬಿಡು, ಮಾರ ಬಿಡು. ನಾ ಹೋಗ್ಬೇಕು. ಅವರು ಇಲ್ಲೇ! ಶತ್ರುಗಳು, ಮೃತ್ಯುಗಳು...."

ರಾಮು ಉಗ್ರನಾಗಿ ಕಿಡಿ ಕಾರುತ್ತ ಕಿರುಚಿದ. ಆದರೂ ಮಾರ ಹಿಡಿತ ಸಡಿಲಿಸಲಿಲ್ಲ.

ಆಗ, ಆಗ,

ಉದ್ರೇಕಿತನಾದ ರಾಮು ಪಟ್ಟನೆ ಮಾರನ ಕೈಕಡಿದ.

"ಅಯ್ಯೋ, ನಿನ್ಮನೆ ಹಾಳಾಗ...."

ಮಾರ ನೋವಿನಿಂದ ಮುಖ ಕಿವಿಚಿಕೊಂಡು ಕೈ ಸಡಲಿಸಿದ. ರಾಮು ಸರ್ರನೆ ಓಡಿ ಹೋದ.

ಗರ ಬಡಿದವರಂತೆ ನೋಡುತ್ತಿದ್ದರು ಒಳಗಿದ್ದವರು. ಅವರ ಬಾಯಿ ಕಟ್ಟಿಹೋಗಿತ್ತು

ಜೈರಾಜ್ ಎಚ್ಚೆತ್ತು, ಹಲ್ಲು ಊರಿ ರಕ್ತ ಹರಿಯುತ್ತಿದ್ದ ಅವನ ಕೈಗೆ ಬ್ಯಾಂಡೇಜ್ ಕಟ್ಟಿದರು.

"ಬಿಡಿ, ಸ್ವಾಮಿ. ಎಲ್ಲಾದರೂ ಸತ್ತುಹೋಗಲಿ, ಅವನು ಹುಟ್ಟಲಿಲ್ಲ ಅಂದುಕೊಳ್ತೀನೆ." ಎಷ್ಟು ತಡೆದರೂ ಉಕ್ಕುತ್ತಿದ್ದ ರೋಷದಿಂದ ಹೇಳಿದ ಸಿದ್ದಣ್ಣ.

ಸಿದ್ದಮ್ಮ ಸತ್ತ್ವವೆಲ್ಲಾ ಹೋದವಳಂತೆ, ಗೋಡೆಗೆ ಒರಗಿಕೊಂಡು ಬೆಪ್ಪಾಗಿ ನಿಂತುಬಿಟ್ಟಳು.

"ಅವನಿಗೆ ನೀವಿರೋದು ತಿಳಿಯದು. ಅವನ ಮನಸ್ಸು ಇಷ್ಟು ಕೆಟ್ಟಿದೆ ಅಂತ ತಿಳಿದಿದ್ದರೆ, ನಿಮ್ಮನ್ನ ಅವನ ಕಣ್ಣಿಗೆ ಬೀಳಿಸುತ್ತಿರಲಿಲ್ಲ...ಮಾರ, ಅವನ ಮೇಲೆ ಕೋಪಿಸಬೇಡ....ಹೋಗು. ಬೀಡಿ ದೋಸ್ತಿ ಬೆಳಸಿ ಅವನ ಸಿಟ್ಟನ್ನ ಶಾಂತಮಾಡು. ನಾಳೆ ನಾನೊಬ್ಬನೇ ಇರುವಾಗ ಕರೆದುಕೊಂಡು ಬಾ...."

ಮಾರ ತಕ್ಷಣ ಹೊರಟುಹೋದ. ಡಾಕ್ಟರ್ ಅವರಿಬ್ಬರನ್ನೂ ಸಮಾಧಾನಗೊಳಿಸಿ ಕಳುಹಿದರು

ಮಾರನೆಯ ದಿನ ಬೆಳಗ್ಗೆ ಮಾರ ರಾಮನನ್ನು ಸಂಗಡ ಕರೆತಂದು, ಜೈರಾಜ್ ಒಬ್ಬರೇ ಇದ್ದಾಗ ಬಂದ. ಜೈರಾಜ್ ರಾಮನನ್ನು ಈಕ್ಷಿ

ಸಿದರು—ಇಷ್ಟು ಚಿಕ್ಕವನಲ್ಲಿ ಅಷ್ಟು ದ್ವೇಷ ಬೆಳೆಯಲು ಕಾರಣ ಏನು ಎಂದು ಚಕಿತರಾದರು. ರಾಮನ ಮುಖ ನಿರ್ಭಾವದಿಂದಿತ್ತು. ಎಲ್ಲರಂತೆ ಡಾಕ್ಟರರೂ ತನ್ನ ತೆಗಳಿ, ತಂದೆ-ತಾಯಿಯರನ್ನು ಹೊಗಳುವರೆಂದುಕೊಂಡು ಅದಕ್ಕೆ ಸಿದ್ಧನಾಗಿ ಬಂದಿದ್ದ. ಅವನಿಗೆ ಅಗತ್ಯವಾಗಿ ಬೇಕಾಗಿದ್ದುದು ಒಂದು ಕೆಲಸ-ತಂದೆಯ ಹಂಗಿನ ಅನ್ನ ಉಣ್ಣದಿರುವಂತೆ ಒಂದು ಕೆಲಸ—

ಆದರೆ ಡಾಕ್ಟರ್ ಅವನನ್ನು ಆಕ್ಷೇಪಿಸಲಿಲ್ಲ, ಅವನ ಮನದ ಸ್ಥಿತಿಯನ್ನು ಸೂಕ್ಷ್ಮವಾಗಿ ಗಮನಿಸಿದರು. ಉಪದೇಶ ಹೇಳುವ ವೇಳೆಯಲ್ಲ ಅದು. ಅಷ್ಟು ಕಹಿ, ಅಷ್ಟು ದ್ವೇಷ ಉಕ್ಕುತ್ತಿರುವಾಗ ಹಿತವಾದ ಹಿಡಿಸುವುದಿಲ್ಲ. ಅನುಕಂಪ—ಆತ್ಮೀಯತೆಗಾಗಿ ಹಾತೊರೆಯುವುದು ಹೃದಯ.

"ಸರಿಯಪ್ಪ. ನಾಳೆಯಿಂದ ಆಸ್ಪತ್ರೇಲಿ ಕೆಲಸಕ್ಕೆ ಬಾ! ನಿನ್ನೆ ನಿನ್ನ ಹುಡುಕಿಕೊಂಡು ಇಲ್ಲಿಗೇ ನಿಮ್ಮಪ್ಪ ಅಮ್ಮ ಬಂದಿದ್ದರು. ಅವರೂ ಎಲ್ಲಾ ಹೇಳಿದರು. ನನಗೇನೋ ನಿಮ್ಮಪ್ಪನದೇ ತಪ್ಪೆಲ್ಲಾ ಅನ್ನಿಸಿತು."

ರಾಮು ಚಕಿತನಾಗಿ ತಲೆ ಎತ್ತಿದ. ಅಪಾರ ಗೌರವ ಕೃತಜ್ಞತೆ ತುಂಬಿತ್ತು ಅವನ ನೋಟದಲ್ಲಿ.

"ಹೌದು, ಸಾರ್! ನಮ್ಮಪ್ಪ ಅಮ್ಮ ಇಬ್ಬರಿಗೂ ನನ್ನ ಕಂಡರೆ ಆಗೋದಿಲ್ಲ. ಅಮ್ಮ ಬಯ್ತಾಳೆ; ಅಪ್ಪ ಬಡೀತಾನೆ. ಅವರ ಹೊಟ್ಟೇಲಿ ನಾನು ಹುಟ್ಟಬಾರದಾಗಿತ್ತಂತೆ. ಆ ಕೆಂಚಣ್ಣನ ಮನೆಯ ರಾಜ ಹುಟ್ಟಬೇಕಾಗಿತ್ತಂತೆ." ರಾಮು ಕಹಿಯನಾಗಿ, ನೋವಿನಿಂದ ಹೇಳಿದ.

ಡೈರಾಜಗೆ ಅವನ ಮೇಲೆ ಕನಿಕರ ಉಕ್ಕಿತು. ಎಷ್ಟಾದರೂ ಹುಡುಗ. ಅವನು ಇಷ್ಟು ಕಹಿಯಾಗಿರಬೇಕಾದರೆ ಅವನ ಮನಸ್ಸೆಷ್ಟು ನೊಂದಿರಬೇಡ?

"ನೀನು ಸ್ವತಂತ್ರನಾಗಿ ಯಾರ ಹಂಗೂ ಇಲ್ಲದೆ ಇರಬೇಕೆನ್ನುವುದೂ ಸರಿಯೇ! ನಿನಗೆಷ್ಟು ವಯಸ್ಸು? ಹದಿನಾರೇ? ಹಾಗಾದರೆ ತಂದೆತಾಯಿಯರ ನೆರಳನ್ನು ನೀನು ಬಿಡಬೇಕು. ಆದರೆ ಎಲ್ಲಿರ್ತೀಯಾ? ನಮ್ಮ ಮಾರನ ಮನೆಯಲ್ಲಿರ್ತೀಯಾ?"

"ಆಗಲಿ ಸಾರ್. ಯಾವ ನರಕದಲ್ಲಾದರೂ ಇರ್ತೀನಿ—ಆದರೆ ಅವರ ಜೊತೇಲಿ ಮಾತ್ರ ಬೇಡ!"

ರಾಮು ಮಾರನ ಮನೆಯಲ್ಲಿ ನಿಂತ. ಮಾರ, ಮಾರನ ಹೆಂಡತಿ ಲಕ್ವಹೊಡೆದು ಹಾಸಿಗೆ ಹಿಡಿದ ಮಾರನ ತಂದೆ, ಮಾರನ ವರ್ಷದ ಮಗು—ಇಷ್ಟು ಜನ ಮನೆಯಲ್ಲಿ. ಡೈರಾಜ ಮಾರನಿಗೂ ಕೆಲವು ಸಲಹೆ ಕೊಟ್ಟಿದ್ದರು. ಮಾರ ಅವುಗಳಂತೆ ನಡೆಯುತ್ತಿದ್ದ. ಮಾರ, ತಂದೆಯಲ್ಲಿ ತೋರುತ್ತಿದ್ದ ಗೌರವ ವಿಶ್ವಾಸ ನೋಡಿ ರಾಮುವಿಗೆ ಅಚ್ಚರಿಯಾಗುವುದು. ಮಾರನ ತಂದೆ—ಎರಡುವರ್ಷಗಳಿಂದ ನಡೆದಾಡಲಾರದವನು—ಸದಾ ಸಿಡುಕುತ್ತಾ, ಬಡಬಡಿಸುತ್ತಾ ಇರುವವನು. ಮಾರ ನಕ್ಕರೆ ಸಹಿಸ; ಮಾತನಾಡಿದರೆ ಸಹಿಸ. ಸಿಕ್ಕಿದಂತೆ ರೇಗುವವನು. ರಾಮುವಿಗೇ ಒಮ್ಮೊಮ್ಮೆ ಬೇಸರವಾಗುವುದು; ಆದರೆ ಮಾರ ಮಾತ್ರ ತಾಳ್ಮೆಯೇ ಮೂರ್ತಿವೆತ್ತಂತೆ ಎದುರು ಮಾತಾಡದೆ ಸೇವೆ ಮಾಡುತ್ತಿದ್ದ.

ಆ ದಿನ ಮುದುಕ ತುಂಬಾ ಸಿಟ್ಟಾಗಿ, ರೊಟ್ಟಿ ಬೆಂದಿಲ್ಲವೆಂದು ಮಾರನ ಮುಖದ ಮೇಲಕ್ಕೇ ರೊಟ್ಟಿಯನ್ನು ಎಸೆದುಬಿಟ್ಟ.

ರಾಮು ಅನಂತರ ಕೇಳಿದ:

"ಮಾರಣ್ಣ, ಆ ಮುದುಕಪ್ಪ ನಿನ್ನ ಎಷ್ಟು ಗೋಳಾಡಿಸ್ತಾನೆ! ನೀ ಹೇಗೆ ಸೈರಿಸಿಕೊಂಡಿದೀಯೋ ನಾ ಕಾಣೆನಪ್ಪಾ. ಕೈಲಿ ಕಾಸಿನ ಕೆಲಸ ಆಗದಿದ್ದರೂ ಎಷ್ಟು ಹೆಡಸು ಅವನಿಗೆ!"

ಮಾರ ಶಾಂತನಾಗಿ ಹೇಳಿದ—

"ಹಾಗಲ್ಲ, ರಾಮಪ್ಪಾ! ಈಗೇನೋ ಅವನು ಸಿಟ್ಟಾಗಿದಾನೆ—ಅಂತ ನಾ ಕೋಪಿಸಿಕೋಬಹುದು, ಆದರೆ ಈಗಿನದನ್ನಲ್ಲ ನಾವು ನೆನೆಯಬೇಕಾದ್ದು. ನಾನು ಮಗುವಾದಾಗ ಎಷ್ಟು ತಪ್ಪು ಮಾಡಿ ನಮ್ಮಪ್ಪನ್ನೇ ಎಷ್ಟು ಹೊಡೆದು ಕಾಡಿದೆನೋ—ಅದೆಲ್ಲಾ ಸಹಿಸಿಕೊಂಡು ಪ್ರೀತೀಲಿ ನನ್ನ ಬೆಳೆಸಿದ್ದು ಏತಕ್ಕೆ? ಏನೋ ಮುಪ್ಪಿನಲ್ಲಿ ನಾನು ಕಾಪಾಡ್ತೀನಿ ಅಂತ. ನಮ್ಮ ತಪ್ಪನ್ನ ಅವರು ಆಗ ಹೊಟ್ಟೇಲಿ ಹಾಕಿಕೊಂಡು ಮಕ್ಕಳು ಅಂತ ಪಾಲಿಸಿದರು. ಈಗ ನಾವು ಅದನ್ನು ನೆನೆದು ಅವರ ತಪ್ಪನ್ನೆಲ್ಲಾ ಗಣಿಸದೆ ಅವರನ್ನ ಮಕ್ಕಳು ಅಂದುಕೊಂಡು ಸಾಕಬೇಕು. ಆಗ ಅವರ ಋಣ ಹರಿಯುತ್ತೆ. ಅವನು ಅಷ್ಟು ರೇಗಾಡ್ತಾನೆ—ಆದರೆ ನಾನು ಮನೇಗೆ ಬರೋದು ಚಣ ತಡ ಆದರೆ, ಹೇಗೆ ಒದ್ದಾಡ್ಕೋತಾನೆ ಗೊತ್ತಾ?"

ರಾಮು ಮಾರನ ಹೊಳೆವ ಕಣ್ಣುಗಳನ್ನು ನೋಡುತ್ತ ಆಲಿಸಿದ—ಅವನ ಎದೆಯೊಳಕ್ಕಿಳಿದವು ಮಾತುಗಳು. ಅವನ ಮನಸ್ಸು ಆ ಮಾತುಗಳನ್ನು ಮೆಲುಕು ಹಾಕತೊಡಗಿತು.

ಮಾರನ ಮಗುವಿಗೆ ಶೀತಜ್ವರ ಹತ್ತಿತು; ರಾತ್ರಿಯೆಲ್ಲಾ ಮಾರ ಎದ್ದು ಕೂತಿದ್ದ. ಹಗಲು ಷಾಪಿನಲ್ಲಿ ಕೆಲಸ ಮಾಡುತ್ತಿದ್ದರೂ ಮನೆಯತ್ತಲೇ ಅವನ ಗಮನವೆಲ್ಲಾ. ಅವನ ಆತಂಕ, ವಿಶ್ವಾಸ ಕಂಡು ರಾಮುವಿಗೆ ಅಚ್ಚರಿಯಾಯಿತು.

"ಮಾರಣ್ಣ, ಇನ್ನೊಂದು ಜನುಮದಾಗೆ ನಿನ್ನ ಮಗನಾಗಿ ಹುಟ್ಟೇಕು ಅನ್ನಿಸುತ್ತಿದೆ. ಎಷ್ಟು ಪ್ರೀತಿ ನಿನಗೆ!" ಎಂದ.

ಮಾರ ಚಕಿತನಾಗಿ ಅವನತ್ತ ನೋಡಿದ. ರಾಮು ಶೂನ್ಯ ದೃಷ್ಟಿಯಲ್ಲಿ ಆಕಾಶ ನೋಡುತ್ತಿದ್ದ. "ರಾಮಪ್ಪ ಇದೇನು ಮಹಾ! ನೀನು ಬೇರೆ ಯಾರನ್ನೂ ನೋಡಿಲ್ಲ. ಅದಕ್ಕೆ ಹಾಂಗಂತೀಯಾ. ನಾ ನೋಡಿದಂತೇನೇ ಇಲ್ಲಿ ಒಂದು ಸಂಸಾರ ಇತ್ತು. ತುಂಬಾ ವರ್ಷ ಮಕ್ಕಳಿರಲಿಲ್ಲ. ಮಕ್ಕಳು ಬೇಕು ಅಂತ ಎಷ್ಟು ಪೂಜೆ, ಪುನಸ್ಕಾರ, ದೇವರ ಸೇವೆ ಮಾಡಿದರೋ! ಕಡೆಗೊಂದು ಮಗು ಆಯ್ತು. ನಡೆದರೆ ಬಾಡುತ್ತೆ, ನುಡಿದರೆ ನೋಯುತ್ತೆ—ಅಂತ ಸಾಕಿದರು. ಈಗ ನೀನು ಅಂದುಕೊಂಡಂತೆ ನಾನೂ ಅಂದುಕೊಳ್ತಿದ್ದೆ. ಈಗಲೂ ಇನಾರೆ ಆ ತಂದೆ-ತಾಯಿಯರು"

"ಯಾರವರು?"—ಕುತೂಹಲದಿಂದ ಕೇಳಿದ ರಾಮು.

ಮಾರ ನೇರವಾಗಿ ಅವನನ್ನು ನೋಡುತ್ತ ಹೇಳಿದ...

"ನಿನ್ನ ಅಪ್ಪ-ಅಮ್ಮಂದಿರೇ ರಾಮುಪ್ಪ! ನಾ ಹೀಗೆ ಹೇಳ್ತೀನಿ ಅಂತ ಸಿಟ್ಟಾಗಬೇಡ. ಸಿದ್ದಣ್ಣ ನಿನ್ನ ಮನಸ್ಸನ್ನ ತಿಳೀದೆ ಹೊಡೆದು ಬಡಿದು ತಪ್ಪು ಮಾಡಿರಬಹುದು; ಆದರೆ ಅವನ ಪ್ರೀತಿ ಎಲ್ಲೂ ಹೋಗಿಲ್ಲ. ಮಕ್ಕಳು ಸಾವಿರ ತಪ್ಪು ಮಾಡಿದ್ರೂ ತಂದೆ ತಾಯೀರು ಕ್ಷಮಿಸಿ ಮೊದಲಿನಂತೇನೆ ಪ್ರೀತಿಸುತ್ತಾರೆ. ಬೇರೆಯವರು ಹಾಗೆ ಮಾಡ್ತಾರೆಯೇ? ತಮ್ಮ ಕೆಲಸ ಆಗುತ ವರೆಗೂ ಪ್ರೀತಿ ತೋರಿಸ್ತಾರೆ! ನೀನು ಇಲ್ಲಿರೋದು ಸಿದ್ದಣ್ಣನಿಗೆ ಗೊತ್ತಾಗಿದೆ—ಮೊನ್ನೆ ಸಿಕ್ಕಿ ಹೇಳಿದ—'ನಾನೂ ತಿಳೀದೆ ಅವನ್ನ ಅಂದು ಆಡಿ ಬಯ್ದು ಹೊಡೆದು ಮಾಡ್ತಿದ್ದೆ; ಎಲ್ಲಾರೂ ಸುಖವಾಗಿ ತಣ್ಣಗೆ ಬದುಕಿಕೊಳ್ಲಿ. ಅವನ್ನ ಬಾಳಿಸುವ ಪುಣ್ಯಪಡೆದು ಬರ್ಲಿಲ್ಲ ನಾವು'—ಎಂದು ಕಣ್ಣೀರಿಟ್ಟುಕೊಂಡ."

ರಾಮುನ ಮನಸ್ಸಿಗೆ ಹೇಗೆ ಹೇಗೋ ಆಯಿತು. ತಲೆತಗ್ಗಿಸಿ ಸುಮ್ಮನಾದ

"ಸಿದ್ದಣ್ಣ ತುಂಬಾ ಇಳಿದು ಹೋಗಿದಾನೆ ರಾಮುಪ್ಪ. ನೀ ಬಂದು ಮೂರುತಿಂಗಳಾಗಿದೆ—ಆಗಲೇ ಅವನ ಗುರುತು ಸಿಗುವಂತಿಲ್ಲ; ಒಳಗೇ ಕೊರಗ್ತಾನೆ, ಪಾಪ!"

ರಾಮು ನಿಡುಸುಯ್ದು. "ನಾ ಏನ ಮಾಡ್ಲಿ? ಅಪ್ಪ-ಅಮ್ಮನಿಗೆ ಮೆಚ್ಚಿಗೆಯಾಗುವಂತೆ ಇರ್ಬೇಕು—ಅಂತ ನಾನೂ ಎಷ್ಟೋ ಪ್ರಯತ್ನ ಮಾಡಿದೆ. ಉಹುಂ, ಅವರನ್ನ ತೃಪ್ತಿಪಡಿಸೋಕೆ ಸಾಧ್ಯವೇ ಇಲ್ಲ ನನ್ನ ತಪ್ಪುಗಳೇ ಕಾಣೋದು ಅವರಿಗೆ ಒಂದು ದಿನ ನನಗೊಂದು ಒಳ್ಳೆಯ ಮಾತೂ ಆಡಲಿಲ್ಲ!"

"ಅದೊಂದು ತಪ್ಪಭಿಪ್ರಾಯ ನೋಡು ಹಿಂದಿನ ಕಾಲದವರ ರೀತೀನೇ ಹಾಗೆ. ನಮ್ಮಪ್ಪನೂ ಅಷ್ಟೇ—ಒಳ್ಳೇ ಮಾತಾಡಿ ಸಲಿಗೆ ಕೊಟ್ಟರೆ, ಮಕ್ಕಳು ತಲೆ ಮೇಲೇರಿಕೊಂಡು ಹಾಳಾಗ್ತಾರೆ—ಅಂತ ಹಾಗೆ ಬಿಗಿಯಾಗಿ, ಸದಾ ಸಿಡಿಸಿಡಿ ಅನ್ನೋರು. ಆಗ ನಾನೂ ನಿನ್ನ ಹಾಗೇ ಯೋಚಿಸುತ್ತಿದ್ದೆ. ಈಗ ನನಗನ್ನಿಸುತ್ತೆ—ಅವರು ತಪ್ಪು ಮಾಡಿದರು ಅಂತ ದೂರಿ ಏನು ಫಲ—ನಾಳೆ ನಾವು ಆ ತಪ್ಪು ಮಾಡದಂತೆ ಎಚ್ಚರಾಗಿರೋಣ—ನಮ್ಮ ಮಕ್ಕಳನ್ನು ಸರಿಯಾಗಿ ಬೆಳೆಸೋಣ—ಅಂತ. ನಿನಗೆ ನಿಮ್ಮಪ್ಪ ಅಮ್ಮನ್ನ ನೋಡಬೇಕು ಅನ್ನಿಸೋದಿಲ್ಲವೇ?"

ಮಾರ ಹಟಾತ್ತನೆ ಪ್ರಶ್ನಿಸಿದ. ರಾಮು ಕ್ಷಣ ಉತ್ತರ ಕೊಡಲಿಲ್ಲ.

"ನೋಡಬೇಕು ಅನ್ನಿಸುತ್ತೆ ಮಾರಣ್ಣ! ನಾನು ಹೋದೆ ಅಂತ ಅವರು ಸುಖವಾಗಿದಾರೇನೋ ನೋಡಬೇಕು ಅನ್ನಿಸುತ್ತೆ. ಆದರೆ ಅವರ ಮನೇಗೆ ಕಾಲಿಡುವುದು ಹೇಗೆ?" ಎಂದ ಗಂಭೀರವಾಗಿ.

"ಹೀಗೆ ಮಾಡೋಣ—ರಾತ್ರಿ ಹೋಗೋಣ....ಆಗ ನಿನಗೇ ಎಲ್ಲಾ ತಿಳಿಯುತ್ತೆ."

ರಾಮು ಉತ್ಸಾಹದಿಂದ ಒಪ್ಪಿಕೊಂಡ

ಸಿದ್ದಣ್ಣನಿಗೆ ರಾಮು ಮಾರನ ಮನೆಯಲ್ಲಿರುವುದು ತಿಳಿದಿತ್ತು. ರಾಮುನನ್ನು ಕರೆತಂದು ಚೆನ್ನಾಗಿ ಬಯ್ದು ತನ್ನೆದೆಯ ಉಮ್ಮಳ ಕಳೆದುಕೊಳ್ಳಬೇಕೆಂಬ ಆಸೆ ಅವನಿಗೆ. ಆದರೆ ಡಾಕ್ಟರ್ ಅವನನ್ನು ತಡೆದಿದ್ದರು. ಸಮಯ ದೊರೆತಾಗಲೆಲ್ಲಾ ಸಿದ್ದಣ್ಣನಿಗೆ ಸಮಾಧಾನ ಬೋಧಿಸುತ್ತಿದ್ದರು.

ಸಿದ್ದಣ್ಣನ ರೋಷವಿಳಿದು, ಡಾಕ್ಟರರ ಹಿತವಾದಕ್ಕೆ ಅವನು ಕಿವಿಗೊಡಲು ತಿಂಗಳು-ಎರಡು ತಿಂಗಳು ಬೇಕಾಯಿತು

"ನೀನು ಮಾಡಿದ್ದೆಲ್ಲಾ ಸರಿ ಅಂದುಕೊಂಡಿದ್ದೀಯಾ ಸಿದ್ದಣ್ಣ; ಆದರೆ ನೀನು ಮಾಡಿದ್ದರಲ್ಲೂ ದೋಷವಿದೆ. ನಿನ್ನ ಮಗನಿಗೆ ದೇಹಾನ ನೀನು ಕೊಟ್ಟಿದೀಯ. ದೇಹಾನ ನೀನು ಪೋಷಿಸುತ್ತೀಯಾ! ದೇಹದ ಬೆಳವಣಿಗೆ ನಿನಗೆ ತಿಳಿಯುತ್ತೆ; ಆದರೆ ಅವನ ಮನಸ್ಸು? ಎಂದಾದರೂ ಅವನ ಮನಸ್ಸು ತಿಳಿದು ಅವನಿಗೆ ಹಿತವಾಗುವಂತೆ ನಡೆದೀಯಾ?"

ಸಿದ್ದಣ್ಣ ಬೆಪ್ಪಾಗಿ ಅವರ ಮುಖ ನೋಡಿದ –

"ಇಲ್ಲ; ಬೆಳೆಯುವ ಹುಡುಗರ ಮನಸ್ಸು ಹೇಗಿರುತ್ತೆ, ಅವರಿಗೆ ಹೇಗೆ ಹೇಳಿದರೆ ಹಿತವಾಗಿರುತ್ತೆ—ಎಂದು ನೀನು ಯೋಚಿಸಿಲ್ಲ. ನೀನು ಅವನ್ನ ತುಂಬಾ ಬಿಗಿಯಾಗಿ ನಡೆಸಿಕೊಂಡಿದೀಯಾ. ತೀರ ಎಳೆದರೆ ದಾರ ತುಂಡಾಗುವಂತೆ, ತೀರ ಬಿಗಿಯಾಗಿದ್ದರೆ ಹುಡುಗರ ಮನಸ್ಸೂ ತುಂಡಾಗುತ್ತೆ. ನಿನ್ನ ಕಣ್ಣಿಗೇನೋ ಅವನಿನ್ನೂ ಹುಡುಗ—ನಿನ್ನ ಕಣ್ಮುಂದೆ ಬೆಳೆಯುತ್ತಿರುವ ಹುಡುಗ—ಅವನ ತಪ್ಪನ್ನೆಲ್ಲಾ ಕಂಡು ತಿದ್ದೋದು ನಿನ್ನ ಕರ್ತವ್ಯ—ಅಂದುಕೊಂಡಿದೀಯಾ. ಹೌದು ತಾನೇ?"

"ಹೌದು ಸ್ವಾಮಿ! ಅಪ್ಪ ಅಮ್ಮ ಅಂತಾ ಇರೋದು ಯಾಕೆ? ಮಕ್ಕಳ ತಪ್ಪ ತಿದ್ದೋಕೇನೆ!"

"ಹಾಂ. ಅಲ್ಲೇ ನೀನು ಎಡವಿರೋದು ಬರೀ ತಪ್ಪು ತಿದ್ದೋದಕ್ಕಲ್ಲ ಅದಕ್ಕೂ ಹೆಚ್ಚಾಗಿ ಅವರನ್ನ ನೀವು ಪ್ರೀತಿಸುತ್ತೀರಿ ಎಂಬೋದು—ಅವನ ಮನಸ್ಸಿಗೆ ನಾಟುವಂತೆ ಮಾಡ್ಬೇಕು ಅವನಿನ್ನೂ ಪುಟ್ಟ ಹುಡುಗ ಅಲ್ಲ. ನೀವು ಹೊಡೆದು ಬಡಿದು ಕಲಿಸುವ ವಯಸ್ಸು ಮೀರಿದೆ ಅವನ ಮನಸ್ಸು ಈಗ ಬೆಳೀತಾ ಇದೆ ಅವನೂ ಈಗ ಹೊಣೆಗಾರಿಕೆಗೆ, ಗೌರವಕ್ಕೆ ಆಶೆ ಪಡ್ತಾನೆ. ಒಳ್ಳೆಯ ಮಾತಾಡಿ ಅವನಲ್ಲಿರುವ ಒಳ್ಳೇ ಗುಣಗಳನ್ನು ಮೆಚ್ಚಿಕೊಂಡು ಸ್ವಲ್ಪ ಹೊಗಳಿ ನೋಡು—ಅವನು ಹೇಗೆ ಬರ್ತಾನೆ ಅಂತ! ನಮ್ಮ ಹಿರಿಯರು ಒಂದು ನೀತಿ ಹೇಳ್ತಿದ್ದರು—ನಿನಗೆ ಗೊತ್ತೇ?—ಮಕ್ಕಳನ್ನ ಐದು ವರ್ಷದವರೆಗೆ ಮುದ್ದಿಸು. ಹತ್ತರ ವರೆಗೆ ದಂಡಿಸು ಹದಿನಾರರ ಮೇಲೆ ಗೆಳೆಯನಂತೆ ಸ್ನೇಹ ಬೆಳೆಸು—ಅಂತ. ಅದನ್ನ ನೆನಪಿನಲ್ಲಿ ಇಟ್ಟುಕೋ! ಅದರಂತೆ ನಡೆದಿದ್ದರೆ ರಾಮು ನಿನ್ನ ಕೈಮೀರಿ ಹೋಗ್ತಾ ಇರಲಿಲ್ಲ."

ಸಿದ್ದಣ್ಣನ ಮನಸ್ಸಿಗೆ ನಾಟಿದುವು ಆ ಮಾತುಗಳು—ನಿಡುಸುಯ್ದು ಹೇಳಿದ—

"ನಮ್ಮಪ್ಪ ಅಮ್ಮ ನಮ್ಮನ್ನ ಹಾಗೆಲ್ಲಾ ಸಾಕಲಿಲ್ಲ ಸ್ವಾಮಿ. ಈ ಕಾಲವೇ ಕೆಟ್ಟು ಹೋಗಿದೆ—ಕಲಿಕಾಲದ ಮಹಿಮೆ ಈಗ ನಾನೇನು ಮಾಡಲಿ, ಹೇಳಿ!"

“ನೀನು ಹೇಗೆ ರಾಮು ಅವಿಧೇಯ, ಕೃತಘ್ನ ಅಂದುಕೊಂಡಿ-ದೀಯೋ, ಹಾಗೆಯೇ ಅವನೂ ನಿನಗೆ ತನ್ನ ಕಂಡರೆ ದ್ವೇಷ, ಸ್ವಲ್ಪವೂ ಪ್ರೀತಿಯಿಲ್ಲ ಅಂದುಕೊಂಡು ಮನಸಿನಲ್ಲಿ ಕೊರಗ್ತಿದ್ದಾನೆ. ಮಗ ಅಂದರೆ ನಿನಗೂ ಪ್ರೀತಿ ಇದೆ; ಆದರೆ ನಿಮ್ಮಿಬ್ಬರ ಮಧ್ಯೆ ಅಡ್ಡ ಗೋಡೆಯಾಗಿದೆ ತಪ್ಪುತಿಳುವಳಿಕೆ. ಕಂಚಣ್ಣ ನಿನ್ನ ದೋಸ್ತಿ ಅಲ್ವೇ?”

ಡಾಕ್ಟರ್ ಏಕೆ ಆ ಪ್ರಶ್ನೆ ಕೇಳಿದರೆಂದು ತಿಳಿಯದೆ “ಹೂಂ” ಎಂದ.

“ಅವನು ಕುಡುಕ. ಆದರೂ ಏಕೆ ಅವನ ಸ್ನೇಹ ಬೆಳಸಿದೆ?” ಅವನ ಉತ್ತರಕ್ಕೆ ಕಾಯದೆ ಮಾತು ಮುಂದುವರಿಸಿದರು:—

“ಅವನ ದೋಷ ನಿನ್ನ ಸ್ನೇಹಕ್ಕೆ ಅಡ್ಡಿಯಾಗಲಿಲ್ಲ. ಹೌದು ತಾನೇ? ಹಾಗೇನೇ ನಿನ್ನ ಮಗನಲ್ಲಿರೋ ದೋಷಾನೂ ಕಡೆಗಣಿಸು. ಅವನ ಬಗ್ಗೆ ಪ್ರೀತಿ ವಿಶ್ವಾಸ ತೋರಿಸು. ಅವನನ್ನೂ ಸ್ನೇಹಿತನಂತೆ ಕಾಣು. ಅವನಿಗೆ ನಯವಾಗಿ ಸಲಹೆ ಸೂಚನೆ ಕೊಡು—ಹಿಂದಿನಂತೆ ಅಧಿಕಾರ ಚಲಾಯಿಸಿ ಅಪ್ಪಣೆ ಮಾಡೋಕೆ ಹೋಗ್ಬೇಡ.......ಆಗ ನೋಡು—ನಿನ್ನಗೆ ದಾವಿಗೆ ಬರ್‍ತಾನೆ. ತನ್ನ ಹೊಣೆ ಅರಿತುಕೊಂಡು ಸರಿಯಾಗಿ ನಡೆದುಕೊಳ್ತಾನೆ....”

ಸಿದ್ದಣ್ಣ ತುಂಬಾ ಹೊತ್ತು ಹಾಗೆಯೇ ಯೋಚಿಸುತ್ತ ಕುಳಿ-ತಿದ್ದ. ಡಾಕ್ಟರರ ಕೈಬಿಡುವಾದಾಗ ಮತ್ತೆ ಅವನ ಬಳಿಗೆ ಬಂದರು.

ಸಿದ್ದಣ್ಣ ನಿಡುಸುಯ್ದು, ಭಾರವಾದ ಧ್ವನೀಲಿ ಹೇಳಿದ:—

“ನೀವು ಹೇಳೋದೂ ನಿಜ ಅನ್ನಿಸುತ್ತೆ ಸ್ವಾಮಿ. ಆದರೆ.... ಮಿಂಚಿ ಹೋದ ಕಾರ್ಯಕ್ಕೆ ಚಿಂತಿಸಿ ಫಲವೇನು ಸ್ವಾಮಿ? ಅವನಂತೂ ನಮ್ಮನ್ನ ತೊರೆದು ಹೋಗಿದಾನೆ. ಮತ್ತೆ ಎಲ್ಲಿ ಬಂದು ಒಂದಾಗ್ತಾನೆ? ಒಡೆದ ಹಾಲು ಒಂದಾಗುತ್ತೆಯೇ?”

“ಅಷ್ಟು ನಿರಾಶೆ ಬೇಡ, ಸಿದ್ದಣ್ಣ! ಅವನ ಮನಸೂ ಹಣ್ಣಾಗ್ತಾ ಇದೆ. ಒಂದಲ್ಲ ಒಂದು ದಿನ ನಿಮ್ಮ ಹತ್ತಿರ ಬಂದು ತಪ್ಪಾಯ್ತು ಅಂತಾನೆ. ಆಗ ನೀವೂ ಎಲ್ಲಾ ಮರೆತು, ಹೊಸ ರೀತೀಲಿ ನಡಸಿ-ಕೊಂಡರೆ ಎಲ್ಲಾ ಸುಖವಾಗುತ್ತೆ.”

“ಅವನು ಮತ್ತೆ ಬಂದರೆ ಸಾಕು, ಸ್ವಾಮಿ! ನಾನೇನೋ ಮೇಲೆ ಹಾಗೆ ಅಂತೇನಿ—ರೇಗಾಡ್ತೀನಿ—ಆದರೆ ಎದೆ ಹೇಗೆ ಕುದ್ದುಕೊಳ್ಳುತ್ತೆ ಅಂತೀರಾ—ಊಟ ತಿಂಡೀಲಿ ಆಸ್ಥೇನೆ ಹೋಗ್ಬಿಟ್ಟಿದೆ. ಅವಳಂತೂ ದಿನಾ ಗೋಳಾಡ್ತಾಳೆ.” ಎಂದು ಕಣ್ಣೀರು ತುಂಬಿಕೊಂಡ.

ಮನೆಗೆ ಬಂದು ಸಿದ್ದಮ್ಮನಿಗೂ ಡಾಕ್ಟರ್ ಹೇಳಿದ್ದನ್ನೆಲ್ಲಾ ವಿವರಿಸಿದ—“ಮಕ್ಕಳನ್ನ ಸರಿಯಾಗಿ ಸಾಕೋದು ಅವರನ್ನ ಪಡೆ-ಯೋದಕ್ಕಿಂತ ಕಷ್ಟ—ಎಂದರು ಡಾಕ್ಟರು. ನಮ್ಮಲ್ಲಿ ತಪ್ಪಿದ್ದರಿಂದಲೇ ರಾಮು ಮನೆಬಿಟ್ಟ—ಅಂದ್ರು. ಅವರ ಮಾತೆಲ್ಲ ನಿಜ ಇದೆ ಅನ್ನಿ-ಸಿತು ನನಗೆ.”

“ಹೌದು. ನೀವು ಹಾಗೆ ಹೊಡೀತಿದ್ರಿ—ನಾ ಎಷ್ಟು ಹೇಳಿ-ದರೂ ಕೇಳ್ತಾ ಇರಲಿಲ್ಲ. ಆ ರಾಜಪ್ಪನ್ನ ಹಾಗೆ ಅವನೆದುರಿಗೆ ಹೊಗಳ್ತಾ ಇದ್ದುದೂ ತಪ್ಪು. ರಾಜಪ್ಪ ಎಷ್ಟು ಗುಣಸ್ಥನಾದರೂ, ಮನೆಯ ಮಗ ಆಗ್ತಾನೆಯೇ? ಹೊರಗಿನೋರು ಎಷ್ಟಾದರೂ ಹೊರಗಿನೋರೇ! ಸಾವಿರ ತಪ್ಪಿದ್ದರೂ ನಮ್ಮಗ ನಮ್ಮೋನೇ! ನಮಗೆ ಅವ ಬೇಕು—ಅವನಿಗೆ ನಾವು ಬೇಕು. ಈ ಸಲ ಮನೆಗೆ ಬರಲಿ—ಅವನಿಗೆ ರವೆಯಷ್ಟೂ ನೋವಾಗದಂತೆ ನೋಡ್ಕೋತೀನಿ. ಅವನನ್ನು ಒಂದು ಮಾತೂ ಅನ್ನೋದಿಲ್ಲ.”

ರಾತ್ರಿ ಮಾರ ರಾಮುನೊಡನೆ ಸಿದ್ದಣ್ಣನ ಮನೆಯತ್ತ ನಡೆದ. ರಾಮುನನ್ನು ಹೊರಗಡೆ ಬಿಟ್ಟು ಒಳಕ್ಕೆ ಹೋದ. ಸಿದ್ದಣ್ಣ ಸಿದ್ದಮ್ಮ ಒಳಕೋಣೆಯಲ್ಲಿದ್ದರು ಮಾರನನ್ನು ಅಲ್ಲಿಗೇ ಕರೆದರು. ರಾಮು ಕಳ್ಳಹೆಜ್ಜೆಯಿಡುತ್ತಾ ಕುತೂಹಲದಿಂದ ನಡುಮನೆಗೆ ಬಂದ. ಸಣ್ಣ ಕಿಟಕಿಯಿಂದ ಲಾಟೀನಿನ ಮಂದಪ್ರಕಾಶದಲ್ಲಿ ತಂದೆ ತಾಯಿಯರ ನಲುಗಿದ ಮುಖ ನೋಡಿದ.

“ನಿನ್ಮಗನೇಲಾದರೂ ಸುಖವಾಗಿದಾನಲ್ಲ—ಅದೇ ಸಂತೋಷ; ನಮಗಂತೂ ಆ ಭಾಗ್ಯವಿಲ್ಲ.......” ಎಂದು ಕಣ್ಣೊರಸಿಕೊಂಡಳು ಸಿದ್ದಮ್ಮ.

“ನನ್ನದೇ ತಪ್ಪೆಲ್ಲಾ, ಮಾರಪ್ಪಾ. ಅವನ ಮನಸು ತಿಳೀದೆ ದಂಡನೆ ಮಾಡ್ತಾ ಇದ್ದೆ. ಈಗ ನಂಗೂ ಬುದ್ಧಿ ಬಂದಿದೆ.” ಎಂದು ನಿಡುಸುಯ್ದ ಸಿದ್ದಪ್ಪ.

“ಉಗಾದಿಗೆ ವಾರ ಉಳೀತು. ಹೋಳಿಗೆ, ಹೊಸಬಟ್ಟೆ—ಯಾವುದೂ ಬೇಡ ಅನ್ನಿಸಿದೆ ಮಾರಪ್ಪ. ಯಾವ ಸುಖ-ಸಂತೋಷಕ್ಕೆ ಪಾಯಸ ಮಾಡಲಿ? ಇರೋ ಒಬ್ಬ ಮಗನ್ನ ಬಿಟ್ಟು ಉಣ್ಣೋಕೆ ಬಾಯೇ ಬರೋದಿಲ್ಲ. ಬದುಕೇ ಸಾಕು ಅನ್ನಿಸಿಬಿಟ್ಟಿದೆ.”

“ಬಿಡವ್ವಾ, ನೀನೇಕೆ ಅಷ್ಟು ನೊಂದುಕೋತೀಯ. ನಿನ್ಮಗ ಖಂಡಿತಾ ಬರ್‍ತಾನೆ. ತಂದೆ-ತಾಯಿ ಅಂತ ಅವನಿಗೂ ಆಸೆ ಇಲ್ವಾ?”

ಸಿದ್ದಮ್ಮನ ಕಣ್ಣುಗಳು ಆಸೆಯಿಂದ ಅರಳಿದುವು.

“ಅಂ? ಅವನು ಮತ್ತೆ ಬರ್‍ತಾನಾ? ......ಅವನು ಬಂದರೆ ಸಾಕಪ್ಪಾ! ಏನೂ ಅನ್ನೋದಿಲ್ಲ. ಬೇಕಾದರೆ ಅವನ ಕಾಲುಹಿಡಿದು ಬೇಡ್ತೇನೆ.”

“ಹೌದು, ಮಾರಪ್ಪ. ಈಗ ನನಗೂ ತಿಳಿವು ಬಂದಿದೆ. ಅವನ್ನ ತುಂಬಾ ಅಂದು ಆಡಿ ಮಾಡ್ತಿದ್ದೆ. ಅವನಿಚ್ಛೆ ಬಂದಂತೆ ನಿರಾಳವಾಗಿ ಇದ್ದುಕೊಳ್ಳಿ. ನಮ್ಮ ಕಣ್ಣೆದುರಿಗೆ ಹಾಯಾಗಿ ಇದ್ದುಕೊಳ್ಳಿ. ಇವಳನ್ನು ನೋಡು—ಎಷ್ಟು ತೆಗೆದು ಹೋಗಿದಾಳೆ ಅಂತ-ಅಂದನ್ನ ಮೈಗೆ ಹಿಡೀದಂತೆ ಕೊರಗ್ತಾಳೆ.”

“ದೇವರು ಎಲ್ಲಾ ಒಳ್ಳೆಯದು ಮಾಡ್ತಾನೆ. ನೀವು ನೋಯ-ಬೇಡಿ. ರಾಜಪ್ಪ ಎಲ್ಲಿ?”

“ಓ, ಅವನನ್ನ ಈಚೆಗೆ ನಾನು ಮನೆಗೆ ಸೇರಿಸೋದಿಲ್ಲ. ಅವನ್ನ ಕಂಡರೆ ನನಗೆ ರಾಮುನ ನೆನಪಾಗಿ ಸಂಕಟವಾಗುತ್ತೆ. ಈ ಹಬ್ಬೀನೇ

ಬಿಟ್ಟು ಹೋಗ್ಬೇಕು ಅಂತಿದಾರೆ - ಬಾಡಿಗೆ ಜಾಸ್ತಿ ಅಂತ" ಎಂದಳು ಸಿದ್ದಮ್ಮ.

ಮಾರ ಏಳುವ ಸುಳಿವು ಕಂಡು ರಾಮು ಹೊರಗಡೆಗೆ ಹೋದ.

ಮಾರ ಹೊರಟ. ರಾಮು ಮೌನವಾಗಿ ಹಿಂಬಾಲಿಸಿದ.

"ನೋಡಿದಿಯಾ ರಾಮಪ್ಪ? ಬದಲಾಯಿಸಿದಾರೋ, ಹಾಗೇ ಇದಾರೋ?"

ರಾಮನ ಕಣ್ಣುಗಳಲ್ಲಿ ನೀರು ತುಂಬಿತು. ಮಾರನಿಗೆ ಅಚ್ಚರಿ ಆಯಿತು.

"ಏಕೆ ರಾಮಪ್ಪ?"

ರಾಮು ಮಾರನ ಭುಜದ ಮೇಲೆ ತಲೆಯಿಟ್ಟು ಬಿಕ್ಕಿಬಿಕ್ಕಿ ಅತ್ತ

"ಅವರು ನನ್ನ ಇಷ್ಟು ಪ್ರೀತಿ ಮಾಡ್ತಾರ. ಇಷ್ಟು ಹಚ್ಚಿಕೊಂಡಿದಾರೆ ಎಂದುಕೊಂಡಿರಲಿಲ್ಲ. ಅವ್ವ ಎಷ್ಟು ತಿಗೆದು ಹೋಗಿದಾಳೆ! ಅಪ್ಪನೂ ತುಂಬಾ ಬಡವಾಗಿದಾನೆ. ನಾ ಹೇಗೆ ಹೋಗಿ ಅವರಿಗೆ ಮತ್ತೆ ಮುಖ ತೋರಿಸಲಿ?"

ಮಾರ ಸಂತಯಿಸಿದ:—

"ನಿನ್ನ ನೂರು ತಿಂಗಳ ಸಂಬಳ ಡಾಕ್ಟರ್ ಹತ್ತಿರಾನೇ ಇದೆ. ಹೊಸ ಬಟ್ಟೆಬರೆ ತೆಗೆದುಕೋ—ಉಗಾದಿ ದಿನ ಕರೆದುಕೊಂಡು ಹೋಗ್ತೇನೆ.—'ನನ್ನ ತಪ್ಪೇನಿದ್ದರೂ ನಿಮ್ಮ ಉಡಿಗೆ ಹಾಕಿಕೊಳ್ಳಿ'—ಅನ್ನು. ಎಲ್ಲಾ ಮರೆತು ಸಂತೋಷ ಪಡ್ತಾರೆ. ಮಕ್ಕಳನ್ನ ತಂದೆ-ತಾಯೀರು ಕ್ಷಮಿಸದೆ ಇನ್ನಾರು ಕ್ಷಮಿಸತಾರೆ? ಅವರೂ ನೊಂದಿದಾರೆ ಮುಂದೆ ಚೆನ್ನಾಗಿ ನೋಡ್ಕೋತಾರೆ"

ರಾಮನ ಕಣ್ಣುಗಳಲ್ಲಿ ಸಮಾಧಾನ, ಕೃತಜ್ಞತೆಗಳು ತುಂಬಿದ್ದುವು. "ಆಗಲಿ ಮಾರಪ್ಪ. ಇನ್ನು ಮುಂದೆ ನೀ ಹೇಳಿದಂತೆ ಮಾಡ್ತೀನಿ. ಉಗಾದಿಗೆ ನಿನಗೊಂದು ಉಡುಗೊರೆ ಕೊಡ್ಬೇಕು ಅಂತಿದೇನೆ ಏನು ಕೊಡ್ಲಿ?"

"ನನಗೆ ನಿಜವಾಗಿಯೂ ನೀನು ಕೊಡಬೇಕೂಂತ ಇದ್ದರೆ ಹೇಳ್ತೀನಿ—ನೀವು—ತಂದೆ, ಮಗ—ಒಂದಾಗಿ, ಕೂಡಿ ಬಾಳೋದೇ ನನಗೆ ದೊಡ್ಡ ಉಡುಗೊರೆ—ನೀನು, ನಿಮ್ಮಪ್ಪ ಸಿಟ್ಟಿನ ಭರದಲ್ಲಿ ಆಡಬಹುದಾದ ಮಾತಿಗೆ ಗಮನಕೊಡದೆ—ಅವರು ಹೇಳುವುದೆಲ್ಲಾ ಒಳ್ಳೆಯದಾಗಲಿ ಎಂಬ ಉದ್ದೇಶದಿಂದ, ಎಂದುಕೊಂಡು ತಗ್ಗಿ ನಡೆಯಬೇಕು. ಅಷ್ಟೇ ಅಪ್ಪಾ, ನಾ ಕೇಳಿಕೊಳ್ಳೋದು"

"ಆಗಲಿ, ಮಾರಪ್ಪ. ನಿನ್ನ ನಡತೇನೇ ನನ್ನ ಕಣ್ಮುಂದೆ ಮಾದರಿಯಾಗಿದೆ. ನನಗೊಂದೇ ಸಂಕಟ—ಇಷ್ಟು ದಿನ ಅವರಿಗೆ ಎಷ್ಟು ಸಂಕಟ ಕೊಟ್ಟೇ ಅಂತಾ"

"ಹಿಂದಿನದನ್ನ ಮರೆತುಬಿಡಪ್ಪಾ. ಹೊಸವರ್ಷ ಹುಟ್ಟುತ್ತೆ. ಹೊಸ ತಿಳಿವು ಬಂದಿದೆ ಹೊಸ ಜೀವನ ಪ್ರಾರಂಭಿಸಿಬಿಡಿ."

ರಾಮು ಸಮ್ಮತಿ ಸೂಚಿಸುತ್ತಾ ತಲೆಯಾಡಿಸಿದ.

ಪ್ರತಿಧ್ವನಿ!

(ನವ್ಯಕವನ)

"ಶ್ರೀಹರಿ" ಬೆಳಗಾಂವಿ

ಸಂಜೆಯಾಗಸದಿಂದೆ
ಮೆಲ್ಲ-ಮೆಲ್ಲನಿಳಿಯುತ್ತಿತ್ತು ಮೌನ;
ನಿಂತಿದ್ದೆ: ನಾ ನದಿಯ ತೀರದ ಮೇಲೆ
ನೋಡುತ್ತ ಜಲದೇವಿಯ ಲೀಲೆ!
ಅತ್ತಿತ್ತಲೂ ದಿನ್ನೆ:
ನಟ್ಟನಡುವೆಯೋಡುತ್ತಿತ್ತು ನದಿ ಜಲ!
ಬಿಂದು-ಬಿಂದುಗಳ ಸಂಕಲನವಾಗಿತ್ತು ಮಹಾಬಲ!

× × ×

ಏನೊ ಹೊಳೆಯಿತೊ ಏನೊ
ನಿಂತವನೆ ಇಂತೆಂದೆ; -
"ಓ... ...."
"............ .... ಓ"
ಉತ್ತರಿಸಿತು ಪ್ರತಿಧ್ವನಿ!
'ಸತ್ಯಕ್ಕೆ ಸತ್ಯ
ಸುಳ್ಳಿಂಗೆ ಸುಳ್ಳು
ಕೆಡುಕಿನುತ್ತರ ಕೆಡುಕು
ಒಡಕಿಂಗೆ ಒಡಕು
ಶಾಂತಿಗೋ ಶಾಂತಿ
ಭ್ರಾಂತಿಗೋ ಭ್ರಾಂತಿ!'
ಇಂತಾಯಿತು ಮನದೊಳುತ್ಕ್ರಾಂತಿ!
ಕವಿದ ಕತ್ತಲೆಯಲ್ಲಿ
'ಧಡಧಡ'ನೆ ನಡೆದು ಬಂದೆ;
'ಬುದ್ಧ' ಗಯೆಯಲ್ಲಿ
ಸಿದ್ಧಿ ಸಾಧಿಸಿದಂತೆ
ಬೆಳಗಿತ್ತು ಪೂರ್ಣ ಹೃದಯ!
ಅಂದಾಯಿತು ದೇವ
ಜ್ಞಾನೋದಯ!

× ×

ನನ್ನ ಜೀವನಕೊಂದು
ದಾರಿ ತೋರಿದೆ, ಗುರು.
ಓ....... ಪ್ರತಿಧ್ವನಿ.. !
ನಿನಗಿದೊ ಸಾಷ್ಟಾಂಗ ನಮಸ್ಕಾರ!
ನೀಂ ತೋರಿದೆ
ಸ್ವಾಭಾವಿಕ ಚಮತ್ಕಾರ!
ಧನ್ಯ! ಧನ್ಯ! ಸಾಕ್ಷಾತ್ಕಾರ!

ಹಿಂದೂ ಸಂಸ್ಕೃತಿ ಮತ್ತು ಸಮಾಜದ ಆಚಾರಗಳು

(ಪರಿಚಯಾತ್ಮಕ ಪ್ರಬಂಧ)

ಶ್ರೀ. ಲಕ್ಷ್ಮಣ ಜೋಶಿ, ಕೂಡ್ಲಿಗಿ

卐

ಹಿಂದೂ ಸಂಸ್ಕೃತಿ ಮತ್ತು ಸಾಮಾಜಿಕ ಆಚಾರಗಳು, ಲೌಕಿಕ ಮತ್ತು ಪಾರಲೌಕಿಕ— ಎರಡೂ ದೃಷ್ಟಿಗಳಿಂದಲೂ ವಿಚಾರಮಾಡಿ ನಿರ್ಣಯಿಸಿದುವುಗಳಾಗಿವೆ. ‘ಇಲ್ಲಿ ಸಲ್ಲುವವ ಅಲ್ಲಿಯೂ ಸಲ್ಲುವನಯ್ಯಾ!’ ಎಂಬ ಬಸವಣ್ಣನವರ ನನ್ನಿನುಡಿ, ಹಿಂದೂ ಸಂಸ್ಕೃತಿಯ ತಿರುಳನ್ನು ಒಳಗೊಂಡುದಾಗಿದೆ.

卐

ಆಹಾರ

ಆಹಾರಶುದ್ಧಿಯ ಬಗ್ಗೆ ಹಿಂದೂಸಮಾಜವು ಅತ್ಯಧಿಕ ಧ್ಯಾನವನ್ನು ಕೊಡಿಟ್ಟಿದೆ. ಆಹಾರದಲ್ಲಿ ಸ್ವರೂಪದೋಷ, ಸಂಸರ್ಗದೋಷ ಮತ್ತು ಭಾವದೋಷಗಳೆಂಬ ತ್ರಿವಿಧ ದೋಷಗಳನ್ನು ಗಣನೆಗೆ ತಂದಿರುವರು. ಈ ತ್ರಿವಿಧ ದೋಷರಹಿತ ಆಹಾರವೇ ಗ್ರಾಹ್ಯವು. ಆಹಾರ ಶುದ್ಧಿಯಿಂದಲೇ ಸತ್ತ್ವಶುದ್ಧಿಯಾಗುವುದು; ಸತ್ತ್ವಶುದ್ಧಿಯಿಂದ ಅಂತರ್ಮುಖತೆ ಲಭ್ಯವಾಗುತ್ತದೆ. ಆದುದರಿಂದ ಅಂತರ್ಮುಖತೆಯನ್ನೇ ಲಕ್ಷ್ಯವಾಗಿಟ್ಟುಕೊಂಡಿರುವ ಸಮಾಜದ ದೃಷ್ಟಿಯು, ಅದರ ಸಂಪೂರ್ಣ ಧ್ಯಾನವು ಆಹಾರ ಶುದ್ಧಿಯ ಮೇಲಿರುವುದು ಸ್ವಾಭಾವಿಕ.

ಆಹಾರವು ಸಾತ್ತ್ವಿಕವಾಗಿರಬೇಕು. ಕಂದಮೂಲ-ಫಲ-ಗೋರಸ ಮತ್ತು ಮಧುಗಳು ಸಂಪೂರ್ಣ ಸಾತ್ತ್ವಿಕ ಆಹಾರಗಳು. ಅನ್ನವು ರಾಜಸ ಆಹಾರವು ಮತ್ತು ಮಾಂಸಾದಿಗಳು ತಾಮಸಾಹಾರಗಳು. ಸಮಷ್ಟಿರೂಪದಿಂದ ಈ ಭೇದಗಳಿವೆ. ಆದರೆ ಪ್ರತಿಯೊಂದರಲ್ಲೂ ಸಾತ್ತ್ವಿಕ, ರಾಜಸ ಮತ್ತು ತಾಮಸಗಳೆಂಬ ಪ್ರಭೇದಗಳಿವೆ. ಆದಿಯುಗದಲ್ಲಿ ಮನುಷ್ಯನ ಆಹಾರವು ಪೂರ್ಣವಾಗಿ ಸಾತ್ತ್ವಿಕವಾಗಿದ್ದಿತು ದ್ವಾಪರಾಂತ್ಯದ ವರೆಗೂ ರಾಜಸ-ತಾಮಸಾಹಾರಗಳಲ್ಲಿಯೂ ಸಾತ್ತ್ವಿಕ ಭಾಗವನ್ನು ಮಾತ್ರ ಗ್ರಹಿಸುತ್ತಿದ್ದರು. ಅನ್ನದಲ್ಲಿ ಗೋಧಿ ಮೊದಲಾದುವು ಸಾತ್ತ್ವಿಕಾಹಾರಗಳಾಗಿದ್ದರೂ ವಾಸನೆಯು, ಕಟುತ್ವದ ಅತ್ಯುಷ್ಣದ ಅಥವಾ ಬೇರೆ ಯಾವ ಪರಿಸ್ಥಿತಿಗಳಲ್ಲಿ ಅವು ತಾಮಸವಾಗಲಿ ರಾಜಸವಾಗಲಿ ಆಗುತ್ತವೆ. ಸಾತ್ತ್ವಿಕಾಹಾರದ ಮೇಲೆಯೇ ಇರುವುದು ಆದರ್ಶವಾದುದು; ಆದರೆ ಅದು ಆಗದಿದ್ದರೆ ರಾಜಸಗಳನ್ನೂ ಸಾತ್ತ್ವಿಕರೂಪದಲ್ಲಿ ಉಪಯೋಗಿಸಿಕೊಳ್ಳಬೇಕು.

ಅನ್ನ, ಫಲಾದಿಗಳೂ ದುರ್ಗಂಧವಾದ ಸ್ಥಳಗಳಲ್ಲಿ ಅಥವಾ ಮಲಿನ ಜಲದಿಂದ ಉತ್ಪನ್ನವಾಗಿದ್ದುದೇ ಆದರೆ, ಅವುಗಳು ತ್ಯಾಜ್ಯವೆಂದು ಶಾಸ್ತ್ರಗಳು ಸ್ಪಷ್ಟೀಕರಿಸಿವೆ. ಹೊಲಸು ನಲ್ಲಿಗಳಿಂದ ಸಿಗುವ ನೀರನ್ನೆರೆಯುವುದರಿಂದ ಬೆಳೆದ ವೃಕ್ಷಗಳ ಫಲಗಳು, ಮತ್ತು ಶಾಕಾಹಾರಗಳು ಮತ್ತು ಹೊಲಸಿನಿಂದ (ಹೇಸಿಗೆ) ಉಂಟಾದ ಅನ್ನವು ಅನೇಕ ರೋಗಗಳಿಗೆ ಕಾರಣೀಭೂತಗಳಾಗಿವೆಯೆಂದು ಇಂದು ಪದವೀಧರ ವೈದ್ಯರು ಒಪ್ಪಿಕೊಳ್ಳುವರು ಆದರೂ ಇಂದು ವೈಜ್ಞಾನಿಕ ಗೊಬ್ಬರಗಳ ಪ್ರಶಂಸೆ ನಡೆಯುತ್ತಿದೆ. ಹೊಲಸನ್ನು ಗೊಬ್ಬರದ ರೂಪವಾಗಿ ಉಪಯೋಗಿಸುವ ಯೋಜನೆಗಳಿವೆ. ಆ ಹೊಲಸಿನಿಂದ ಉತ್ಪನ್ನವಾದ ಅನ್ನವನ್ನುಂಡು ಮನುಷ್ಯನು ನಿರೋಗಿಯಾಗಿರಲು ಬಯಸುವನು; ತನ್ನ ಮನವನ್ನು ಪವಿತ್ರವಾಗಿಡಲು ಇಚ್ಛಿಸುವನು. ಕಣ್ಣಿದ್ದೂ ಇವನು ಕಾಣನು. ಆ ಭೂಮಿಯಲ್ಲಿದ್ದ ಗುಣಗಳು ಅದರಲ್ಲಿ ಉತ್ಪನ್ನವಾದ ಅನ್ನ-ಫಲ-ಶಾಕಾದಿಗಳಲ್ಲಿ ಬಾರದೆ ಇರಲಾರವೆಂಬುದನ್ನೂ ಅರಿಯಲಾರನು ಆಯುರ್ವೇದ ವಿದ್ವಾಂಸರು ತಿಳಿದಂತೆ, ಅಯುಕ್ತ ಸ್ಥಳದಲ್ಲಿ ಉತ್ಪನ್ನವಾದ ಓಷಧಿಯು ಗುಣಹೀನವಾಗಿರುತ್ತದೆ ಮತ್ತು ಒಮ್ಮೊಮ್ಮೆ ವಿಪರೀತವಾಗಿ ಪರಿಣಾಮವನ್ನು ಪ್ರಕಟಗೊಳಿಸುತ್ತದೆ

ದೇವದಾರುವಿನ ಪುಷ್ಪಗಳನ್ನು ದಂಟಿನೊಡನೆ ಕಿತ್ತು ಅದರ ದಂಟನ್ನು ಕೆಂಪು ಅಥವಾ ನೀಲಿ ಬಣ್ಣದ ನೀರಿರುವ ಪಾತ್ರೆಯಲ್ಲಿ ಮುಳುಗಿಸಿರಿ ಕೆಲವು ತಾಸುಗಳ ನಂತರ ಪುಷ್ಪಗಳ ಮೇಲೆ ಆ ಬಣ್ಣವು ಸ್ಪಷ್ಟವಾಗಿ ಕಂಡುಬರುತ್ತದೆ. ಈ ಮಾತಿನಿಂದ ನಮಗೇನು ತಿಳಿದುಬರುತ್ತದೆ? ಭೂಮಿಯ ಸಮಸ್ತ ಸತ್ತ್ವವು ಅನ್ನದಲ್ಲಿ ಬದಲಾವಣೆ ಹೊಂದುವುದಿಲ್ಲ; ಹಾಗೆಯೇ ಆಹಾರದಲ್ಲಿ ಸೇರಿಕೊಳ್ಳುತ್ತದೆ.

ಬಿಟ್ಟು ಹೋಗ್ಬೇಕು ಅಂತಿದಾರೆ - ಬಾಡಿಗೆ ಜಾಸ್ತಿ ಅಂತ " ಎಂದಳು ಸಿದ್ದಮ್ಮ.

ಮಾರ ಏಳುವ ಸುಳಿವು ಕಂಡು ರಾಮು ಹೊರಗಡೆಗೆ ಹೋದ.

ಮಾರ ಹೊರಟ. ರಾಮು ಮೌನವಾಗಿ ಹಿಂಬಾಲಿಸಿದ.

" ನೋಡಿದಿಯಾ ರಾಮಪ್ಪ ? ಬದಲಾಯಿಸಿದಾರೋ, ಹಾಗೇ ಇದಾರೋ ? "

ರಾಮನ ಕಣ್ಣುಗಳಲ್ಲಿ ನೀರು ತುಂಬಿತು. ಮಾರನಿಗೆ ಆಶ್ಚರ್ಯ ಆಯಿತು.

" ಏಕೆ ರಾಮಪ್ಪ ? "

ರಾಮು ಮಾರನ ಭುಜದ ಮೇಲೆ ತಲೆಯಿಟ್ಟು ಬಿಕ್ಕಿಬಿಕ್ಕಿ ಅತ್ತ

" ಅವರು ನನ್ನ ಇಷ್ಟು ಪ್ರೀತಿ ಮಾಡ್ತಾರೆ. ಇಷ್ಟು ಹಚ್ಚಿಕೊಂಡಿದಾರೆ ಎಂದುಕೊಂಡಿರಲಿಲ್ಲ. ಅವ್ವ ಎಷ್ಟು ತಿಗೆದು ಹೋಗಿದಾಳೆ ! ಅಪ್ಪನೂ ತುಂಬಾ ಬಡವಾಗಿದಾನೆ. ನಾ ಹೇಗೆ ಹೋಗಿ ಅವರಿಗೆ ಮತ್ತೆ ಮುಖ ತೋರಿಸಲಿ ? "

ಮಾರ ಸಂತಯಿಸಿದ:—

" ನಿನ್ನ ಮೂರು ತಿಂಗಳ ಸಂಬಳ ಡಾಕ್ಟರ್ ಹತ್ತಿರಾನೇ ಇದೆ. ಹೊಸ ಬಟ್ಟೆಬರೆ ತೆಗೆದುಕೋ—ಉಗಾದಿ ದಿನ ಕರೆದುಕೊಂಡು ಹೋಗ್ತೇನೆ.—' ನನ್ನ ತಪ್ಪೇನಿದ್ದರೂ ನಿಮ್ಮ ಉಡಿಗೆ ಹಾಕಿಕೊಳ್ಳಿ '— ಅನ್ನು. ಎಲ್ಲಾ ಮರೆತು ಸಂತೋಷ ಪಡ್ತಾರೆ. ಮಕ್ಕಳನ್ನ ತಂದೆ-ತಾಯೀರು ಕ್ಷಮಿಸದೆ ಇನ್ನಾರು ಕ್ಷಮಿಸತಾರೆ ? ಅವರೂ ನೊಂದಿದಾರೆ. ಮುಂದೆ ಚೆನ್ನಾಗಿ ನೋಡ್ಕೋತಾರೆ "

ರಾಮನ ಕಣ್ಣುಗಳಲ್ಲಿ ಸಮಾಧಾನ, ಕೃತಜ್ಞತೆಗಳು ತುಂಬಿದ್ದುವು. " ಆಗಲಿ ಮಾರಪ್ಪ. ಇನ್ನು ಮುಂದೆ ನೀ ಹೇಳಿದಂತೆ ಮಾಡ್ತೀನಿ. ಉಗಾದಿಗೆ ನಿನಗೊಂದು ಉಡುಗೊರೆ ಕೊಡ್ಬೇಕು ಅಂತಿದೇನೆ ಏನು ಕೊಡ್ಲಿ ? "

" ನನಗೆ ನಿಜವಾಗಿಯೂ ನೀನು ಕೊಡಬೇಕೂಂತ ಇದ್ದರೆ ಹೇಳ್ತೀನಿ—ನೀವು—ತಂದೆ, ಮಗ—ಒಂದಾಗಿ, ಕೂಡಿ ಬಾಳೋದೇ ನನಗೆ ದೊಡ್ಡ ಉಡುಗೊರೆ–ನೀನು, ನಿಮ್ಮಪ್ಪ ಸಿಟ್ಟಿನ ಭರದಲ್ಲಿ ಆಡ. ಬಹುದಾದ ಮಾತಿಗೆ ಗಮನಕೊಡದೆ—ಅವರು ಹೇಳುವುದೆಲ್ಲಾ ಒಳ್ಳೆಯದಾಗಲಿ ಎಂಬ ಉದ್ದೇಶದಿಂದ, ಎಂದುಕೊಂಡು ತಗ್ಗಿನಡೆಯಬೇಕು. ಅಷ್ಟೇ ಅಪ್ಪಾ, ನಾ ಕೇಳಿಕೊಳ್ಳೋದು "

" ಆಗಲಿ, ಮಾರಪ್ಪ. ನಿನ್ನ ನಡತೇನೇ ನನ್ನ ಕಣ್ಮುಂದೆ ಮಾದರಿಯಾಗಿದೆ. ನನಗೊಂದೇ ಸಂಕಟ–ಇಷ್ಟು ದಿನ ಅವರಿಗೆ ಎಷ್ಟು ಸಂಕಟ ಕೊಟ್ಟೇ ಅಂತಾ "

" ಹಿಂದಿನದನ್ನ ಮರೆತುಬಿಡಪ್ಪಾ. ಹೊಸವರ್ಷ ಹುಟ್ಟುತ್ತೆ. ಹೊಸ ಚಿಗುರು ಬಂದಿದೆ ಹೊಸ ಜೀವನ ಪ್ರಾರಂಭಿಸಿಬಿಡು "

ರಾಮು ಸಮ್ಮತಿ ಸೂಚಿಸುತ್ತಾ ತಲೆದೂಗಿಸಿದ.

ಪ್ರತಿಧ್ವನಿ !

(ನವ್ಯಕವನ)

" ಶ್ರೀಹರಿ " ಬೆಳಗಾಂವಿ

ಸಂಜೆಯಾಗಸದಿಂದೆ
ಮೆಲ್ಲ-ಮೆಲ್ಲನಿಳಿಯುತ್ತಿತ್ತು ಮೌನ;
ನಿಂತಿದ್ದೆ: ನಾ ನದಿಯ ತೀರದ ಮೇಲೆ
ನೋಡುತ್ತ ಜಲದೇವಿಯ ಲೀಲೆ !
ಅತ್ತಿತ್ತಲೂ ದಿನ್ನೆ:
ನಟ್ಟನಡುವೆಯೋಡುತ್ತಿತ್ತು ನದಿ ಜಲ !
ಬಿಂದು-ಬಿಂದುಗಳ ಸಂಕಲನವಾಗಿತ್ತು ಮಹಾಬಲ !

× × ×

ಏನೊ ಹೊಳೆಯಿತೊ ಏನೊ
ನಿಂತವನೆ ಇಂತೆಂದೆ; -
" ಓ .. .. "
" .... ಓ "
ಉತ್ತರಿಸಿತು ಪ್ರತಿಧ್ವನಿ !
' ಸತ್ಯಕ್ಕೆ ಸತ್ಯ
ಸುಳ್ಳಿಂಗೆ ಸುಳ್ಳು
ಕೆಡುಕಿನುತ್ತರ ಕೆಡುಕು
ಒಡಕಿಂಗೆ ಒಡಕು
ಶಾಂತಿಗೋ ಶಾಂತಿ
ಭ್ರಾಂತಿಗೋ ಭ್ರಾಂತಿ ! '
ಇಂತಾಯಿತು ಮನದೊಳುತ್ಕ್ರಾಂತಿ !
ಕವಿದ ಕತ್ತಲೆಯಲ್ಲಿ
' ಧಡಧಡ 'ನೆ ನಡೆದು ಬಂದೆ;
' ಬುದ್ಧ ' ಗಯೆಯಲ್ಲಿ
ಸಿದ್ಧಿ ಸಾಧಿಸಿದಂತೆ
ಬೆಳಗಿತ್ತು ಪೂರ್ಣ ಹೃದಯ !
ಅಂದಾಯಿತು ದೇವ
ಜ್ಞಾನೋದಯ !

× × ×

ನನ್ನ ಜೀವನಕೊಂದು
ದಾರಿ ತೋರಿದೆ, ಗುರು .
ಓ .. ... ಪ್ರತಿಧ್ವನಿ . !
ನಿನಗಿದೊ ಸಾಷ್ಟಾಂಗ ನಮಸ್ಕಾರ !
ನೀಂ ತೋರಿದೆ
ಸ್ವಾಭಾವಿಕ ಚಮತ್ಕಾರ !
ಧನ್ಯ ! ಧನ್ಯ ! ಸಾಕ್ಷಾತ್ಕಾರ !

ಹಿಂದೂ ಸಂಸ್ಕೃತಿ ಮತ್ತು ಸಮಾಜದ ಆಚಾರಗಳು

(ಪರಿಚಯಾತ್ಮಕ ಪ್ರಬಂಧ)

ಶ್ರೀ. ಲಕ್ಷ್ಮಣ ಜೋಶಿ, ಕೂಡ್ಲಿಗಿ

卐

ಹಿಂದೂ ಸಂಸ್ಕೃತಿ ಮತ್ತು ಸಾಮಾಜಿಕ ಆಚಾರಗಳು, ಲೌಕಿಕ ಮತ್ತು ಪಾರಲೌಕಿಕ— ಎರಡೂ ದೃಷ್ಟಿಗಳಿಂದಲೂ ವಿಚಾರಮಾಡಿ ನಿರ್ಣಯಿಸಿದುವುಗಳಾಗಿವೆ. ' ಇಲ್ಲಿ ಸಲ್ಲುವವ ಅಲ್ಲಿಯೂ ಸಲ್ಲುವನಯ್ಯಾ ! ' ಎಂಬ ಬಸವಣ್ಣನವರ ಸನ್ನಿನುಡಿ, ಹಿಂದೂ ಸಂಸ್ಕೃತಿಯ ತಿರುಳನ್ನೇ ಒಳಗೊಂಡುದಾಗಿದೆ.

卐

ಆಹಾರ

ಆಹಾರಶುದ್ಧಿಯ ಬಗ್ಗೆ ಹಿಂದೂಸಮಾಜವು ಅತ್ಯಧಿಕ ಧ್ಯಾನವನ್ನು ಕೊಟ್ಟಿದೆ. ಆಹಾರದಲ್ಲಿ ಸ್ವರೂಪದೋಷ, ಸಂಸರ್ಗದೋಷ ಮತ್ತು ಭಾವದೋಷಗಳೆಂಬ ತ್ರಿವಿಧ ದೋಷಗಳನ್ನು ಗಣನೆಗೆ ತಂದಿರುವರು. ಈ ತ್ರಿವಿಧ ದೋಷರಹಿತ ಆಹಾರವೇ ಗ್ರಾಹ್ಯವು. ಆಹಾರ ಶುದ್ಧಿಯಿಂದಲೇ ಸತ್ತ್ವಶುದ್ಧಿಯಾಗುವುದು; ಸತ್ತ್ವಶುದ್ಧಿಯಿಂದ ಅಂತರ್ಮುಖತೆ ಲಭ್ಯವಾಗುತ್ತದೆ. ಆದುದರಿಂದ ಅಂತರ್ಮುಖತೆಯನ್ನೇ ಲಕ್ಷ್ಯವಾಗಿಟ್ಟುಕೊಂಡಿರುವ ಸಮಾಜದ ದೃಷ್ಟಿಯು, ಅದರ ಸಂಪೂರ್ಣ ಧ್ಯಾನವು ಆಹಾರ ಶುದ್ಧಿಯ ಮೇಲಿರುವುದು ಸ್ವಾಭಾವಿಕ.

ಆಹಾರವು ಸಾತ್ತ್ವಿಕವಾಗಿರಬೇಕು. ಕಂದಮೂಲ-ಫಲ-ಗೋರಸ ಮತ್ತು ಮಧುಗಳು ಸಂಪೂರ್ಣ ಸಾತ್ತ್ವಿಕ ಆಹಾರಗಳು. ಅನ್ನವು ರಾಜಸ ಆಹಾರವು ಮತ್ತು ಮಾಂಸಾದಿಗಳು ತಾಮಸಾಹಾರಗಳು. ಸಮಷ್ಟಿರೂಪದಿಂದ ಈ ಭೇದಗಳಿವೆ. ಆದರೆ ಪ್ರತಿಯೊಂದರಲ್ಲೂ ಸಾತ್ತ್ವಿಕ, ರಾಜಸ ಮತ್ತು ತಾಮಸಗಳೆಂಬ ಪ್ರಭೇದಗಳಿವೆ. ಆದಿಯುಗದಲ್ಲಿ ಮನುಷ್ಯನ ಆಹಾರವು ಪೂರ್ಣವಾಗಿ ಸಾತ್ತ್ವಿಕವಾಗಿದ್ದಿತು ದ್ವಾಪರಾಂತ್ಯದ ವರೆಗೂ ರಾಜಸ-ತಾಮಸಾಹಾರಗಳಲ್ಲಿಯೂ ಸಾತ್ತ್ವಿಕ ಭಾಗವನ್ನು ಮಾತ್ರ ಗ್ರಹಿಸುತ್ತಿದ್ದರು. ಅನ್ನದಲ್ಲಿ ಗೋಧಿ ಮೊದಲಾದುವು ಸಾತ್ತ್ವಿಕಾಹಾರಗಳಾಗಿದ್ದರೂ ವಾಸನೆಯು, ಕಟುತ್ವದ, ಅತ್ಯುಷ್ಣದ ಅಥವಾ ಬೇರೆ ಯಾವ ಪರಿಸ್ಥಿತಿಗಳಲ್ಲಿ ಅವು ತಾಮಸವಾಗಲಿ ರಾಜಸವಾಗಲಿ ಆಗುತ್ತವೆ. ಸಾತ್ತ್ವಿಕಾಹಾರದ ಮೇಲೆಯೇ ಇರುವುದು ಆದರ್ಶವಾದುದು; ಆದರೆ ಅದು ಆಗದಿದ್ದರೆ ರಾಜಸಗಳನ್ನೂ ಸಾತ್ತ್ವಿಕರೂಪದಲ್ಲಿ ಉಪಯೋಗಿಸಿಕೊಳ್ಳಬೇಕು.

ಅನ್ನ, ಫಲಾದಿಗಳೂ ದುರ್ಗಂಧವಾದ ಸ್ಥಳಗಳಲ್ಲಿ ಅಥವಾ ಮಲಿನ ಜಲದಿಂದ ಉತ್ಪನ್ನವಾಗಿದ್ದುದೇ ಆದರೆ, ಅವುಗಳು ತ್ಯಾಜ್ಯವೆಂದು ಶಾಸ್ತ್ರಗಳು ಸ್ಪಷ್ಟೀಕರಿಸಿವೆ. ಹೊಲಸು ನಲ್ಲಿಗಳಿಂದ ಸಿಗುವ ನೀರನ್ನೆರೆಯುವುದರಿಂದ ಬೆಳೆದ ವೃಕ್ಷಗಳ ಫಲಗಳು, ಮತ್ತು ಶಾಕಾಹಾರಗಳು ಮತ್ತು ಹೊಲಸಿನಿಂದ (ಹೇಸಿಗೆ) ಉಂಟಾದ ಅನ್ನವು ಅನೇಕ ರೋಗಗಳಿಗೆ ಕಾರಣೀಭೂತಗಳಾಗಿವೆಯೆಂದು ಇಂದು ಪದವೀಧರ ವೈದ್ಯರು ಒಪ್ಪಿಕೊಳ್ಳುವರು ಆದರೂ ಇಂದು ವೈಜ್ಞಾನಿಕ ಗೊಬ್ಬರಗಳ ಪ್ರಶಂಸೆ ನಡೆಯುತ್ತಿದೆ. ಹೊಲಸನ್ನು ಗೊಬ್ಬರದ ರೂಪವಾಗಿ ಉಪಯೋಗಿಸುವ ಯೋಜನೆಗಳಿವೆ. ಆ ಹೊಲಸಿನಿಂದ ಉತ್ಪನ್ನವಾದ ಅನ್ನವನ್ನುಂಡು ಮನುಷ್ಯನು ನಿರೋಗಿಯಾಗಿರಲು ಬಯಸುವನು; ತನ್ನ ಮನವನ್ನು ಪವಿತ್ರವಾಗಿಡಲು ಇಚ್ಛಿಸುವನು. ಕಣ್ಣಿದ್ದೂ ಇವನು ಕಾಣನು. ಆ ಭೂಮಿಯಲ್ಲಿದ್ದ ಗುಣಗಳು ಅದರಲ್ಲಿ ಉತ್ಪನ್ನವಾದ ಅನ್ನ-ಫಲ-ಶಾಕಾದಿಗಳಲ್ಲಿ ಬಾರದೆ ಇರಲಾರವೆಂಬುದನ್ನೂ ಅರಿಯಲಾರನು ಆಯುರ್ವೇದ ವಿದ್ವಾಂಸರು ತಿಳಿದಂತೆ, ಅಯುಕ್ತ ಸ್ಥಳದಲ್ಲಿ ಉತ್ಪನ್ನವಾದ ಔಷಧಿಯು ಗುಣಹೀನವಾಗಿರುತ್ತದೆ ಮತ್ತು ಒಮ್ಮೊಮ್ಮೆ ವಿಪರೀತವಾಗಿ ಪರಿಣಾಮವನ್ನು ಪ್ರಕಟಗೊಳಿಸುತ್ತದೆ

ದೇವದಾರುವಿನ ಪುಷ್ಪಗಳನ್ನು ದಂಟಿನೊಡನೆ ಕಿತ್ತು ಅದರ ದಂಟನ್ನು ಕೆಂಪು ಅಥವಾ ನೀಲಿ ಬಣ್ಣದ ನೀರಿರುವ ಪಾತ್ರೆಯಲ್ಲಿ ಮುಳುಗಿಸಿಡಿರಿ ಕೆಲವು ತಾಸುಗಳ ನಂತರ ಪುಷ್ಪಗಳ ಮೇಲೆ ಆ ಬಣ್ಣವು ಸ್ಪಷ್ಟವಾಗಿ ಕಂಡುಬರುತ್ತದೆ. ಈ ಮಾತಿನಿಂದ ನಮಗೇನು ತಿಳಿದುಬರುತ್ತದೆ ? ಭೂಮಿಯ ಪುಷ್ಟ ಸತ್ತ್ವವು ಅನ್ನದಲ್ಲಿ ಬದಲಾವಣೆ ಹೊಂದುವುದಿಲ್ಲ; ಹಾಗೆಯೇ ಆಹಾರದಲ್ಲಿ ಸೇರಿಕೊಳ್ಳುತ್ತದೆ.

ಇಂದು ಜನರು ಜೇನುನೊಣಗಳನ್ನು ಸಾಕುವರು. ಸಮೀಪದಲ್ಲಿಯೇ ಸಿಹಿ ಪಾನೀಯಗಳ ಪೀಪಾಯಿಗಳನ್ನಿಟ್ಟಿರುತ್ತಾರೆ. ಜೇನುನೊಣಗಳು ಆ ಪಾನೀಯದಲ್ಲಿಯ ಸಿಹಿಯನ್ನು ಹೀರಿಕೊಂಡು, ತೊಟ್ಟಿಯಲ್ಲಿ ಸಂಗ್ರಹಿಸುತ್ತವೆ. ಹೇಗೆ ಈ ತರದ ಜೇನು ಶುದ್ಧವಲ್ಲವೋ ಮತ್ತು ವೈದ್ಯಕೀಯ ಗ್ರಂಥಗಳಲ್ಲಿ ನಗರಗಳಲ್ಲಿ ಉತ್ಪನ್ನವಾದ ಅಥವಾ ಸಮಿಪದಲ್ಲಿಯೇ ಸಿಹಿ ಪದಾರ್ಥಗಳ ಅಂಗಡಿಗಳಿರುವಲ್ಲಿ ಸಂಗ್ರಹಿತವಾದ ಮಧು ಗುಣಕಾರಿಯಲ್ಲವೆಂದು ಹೇಳಿದೆಯೋ, ಹಾಗೆಯೇ ಕೃತ್ರಿಮ ಅಥವಾ ಹೊಲಸಿನ ಗೊಬ್ಬರದಿಂದ ಉತ್ಪನ್ನವಾದ ಹಣ್ಣುಗಳು ಮತ್ತು ಅನ್ನಧಾನ್ಯಗಳು ಶುದ್ಧವಲ್ಲ. ಅವು ಶಾರೀರಿಕ ರೋಗಗಳನ್ನೂ ಮಾನಸಿಕ ವಿಕೃತಿಯನ್ನೂ ಉತ್ಪನ್ನ ಮಾಡುತ್ತವೆ.

ಆಹಾರದಲ್ಲಿ ಸಂಸರ್ಗಜ ದೋಷವೆಂಬುದು ಎರಡನೆಯದಾಗಿದೆ. ಈ ದೋಷವು ತ್ರಿವಿಧವಾಗಿದೆ :— ಸಜಾತೀಯ, ವಿಜಾತೀಯ ಮತ್ತು ಸ್ವಗತವೆಂದು. ಒಂದು ಪದಾರ್ಥವು ನಿರ್ದಿಷ್ಟ ಸಮಯದ ನಂತರ ದೂಷಿತವಾಗುತ್ತದೆ; ಅಥವಾ ನಿರ್ದಿಷ್ಟ ಸಮಯ-ದಲ್ಲಿ ತೆಗೆದುಕೊಳ್ಳುವುದರಿಂದ ಹಾನಿಕಾರಕವಾಗಿರುತ್ತದೆ ಈ ದೋಷವನ್ನು ಸ್ವಗತ ವಿಕಾರವೆನ್ನುವರು. ಒಂದು ಬಗೆಯ ಪಾತ್ರೆ-ಯಲ್ಲಿ ತಯಾರಿಸುವುದರಿಂದಾಗಲಿ, ಇಟ್ಟಿರುವುದರಿಂದಾಗಲಿ, ಅಥವಾ ಒಂದು ಪದಾರ್ಥದೊಡನೆ ಮತ್ತೊಂದು ಪದಾರ್ಥವನ್ನು ಬೆರೆಸು-ವುದರಿಂದಾಗಲಿ, ಅಥವಾ ಒಂದು ಪದಾರ್ಥದ ಸಮೀಪದಲ್ಲಿ ಮತ್ತೊಂದು ಪದಾರ್ಥವನ್ನು ಇಡುವುದರಿಂದಾಗಲಿ ಹಾನಿಕಾರಕ-ವಾಗುವುದು. ಇದು ಸಜಾತೀಯ ಭೇದವು. ಒರ್ವ ವ್ಯಕ್ತಿ ಅಥವಾ ಒಂದು ಭೋಜ್ಯವಸ್ತುವಿಗೆ ಮತ್ತೊಂದು ವಸ್ತುವಿನ ಸ್ಪರ್ಶದಿಂದಾ-ಗುವ ವಿಕಾರಗಳು ವಿಜಾತೀಯ ವಿಕಾರವು ಇಂದು ವೈದ್ಯರು ಕೀಟಾಣು ವಿಜ್ಞಾನದ ದೃಷ್ಟಿಯಿಂದ ಸ್ವಚ್ಛತೆಯ ಬಗ್ಗೆ ಅತ್ಯಂತ ಆಸ್ಥೆ ವಹಿಸುವರು—ಮಾತುಮಾತಿಗೂ ಬಿಸಿನೀರಿನಲ್ಲಿಯೂ, ಸಾಬೂನಿನಿಂದಲೂ ಕೈತೊಳೆದುಕೊಳ್ಳುವುದು ಅವರಿಗೆ ಆವಶ್ಯಕವೆನಿಸುತ್ತದೆ. ಆದರೆ ಭಾರತೀಯರು ಮಾತುಮಾತಿಗೂ ಕೈ ತೊಳೆದುಕೊಳ್ಳುವು-ದನ್ನು ಕಂಡು ಪರಿಹಾಸ್ಯ ಮಾಡುವರು. ಕೀಟಾಣುಗಳು ಅರ್ಥ-ವಾಗುತ್ತವೆ ಮತ್ತು ಸ್ವಚ್ಛತೆಯ ಆವಶ್ಯಕತೆಯು ತಿಳಿಯುತ್ತದೆ; ಆದರೆ ಪ್ರತ್ಯೇಕ ಪದಾರ್ಥದಿಂದ, ಪ್ರತ್ಯೇಕ ಮಾನವನಿಂದ ನಿರಂತರವೂ ಪರಮಾಣುಗಳು ಹೊರಬೀಳುತ್ತವೆಂಬುದೂ, ಸಮೀಪಸ್ಥ ತಥಾ ಸಂಸರ್ಗದಲ್ಲಿ ಬರುವ ವಸ್ತುಗಳಲ್ಲಿ ಪ್ರವೇಶಿಸುತ್ತವೆಂಬುದೂ ನೆನಪಿಗೆ ಬಾರದು. ಈ ಪರಮಾಣುಗಳಲ್ಲಿ ಆ ವ್ಯಕ್ತಿಯ ಅಥವಾ ಪದಾರ್ಥದ ವಿಚಾರಗತ ಅಥವಾ ಶರೀರಗತ ಸಕಲಗುಣ ದೋಷಗಳು ಪ್ರವೇಶಿ-ಸುತ್ತವೆಂಬುದು ತಿಳುವಳಿಕೆಗೆ ಬಂದುದೇ ಆದರೆ, ಹಿಂದುಗಳ ಪವಿತ್ರತಾ ಭಾವನೆಯನ್ನೂ ಸ್ಪೃಶ್ಯತಾ-ಅಸ್ಪೃಶ್ಯತಾ ಭಾವನೆಯ ರಹಸ್ಯವನ್ನೂ ತಿಳಿದುಕೊಳ್ಳುವುದು ಕಷ್ಟವಾಗಲಾರದು.

ಭೋಜ್ಯ ಪದಾರ್ಥದಲ್ಲಿ ಭಾವನೆಯಿಂದೊದಗುವ ದೋಷವೂ ಒಂದಿದೆ ಭೋಜನ ಸಮಯದಲ್ಲಿ — ಭೋಜನಪದಾರ್ಥದಲ್ಲಿ ರುಚಿಯ ಭಾವನೆಯಿಲ್ಲವಾದರೆ, ಅಥವಾ ಘೃಣಾಭಾವನೆಯಿದ್ದರೆ ತಿಂದ ಪದಾರ್ಥವು ಪಚನವಾಗದೆಂಬುದು ಸರ್ವವಿದಿತವಾಗಿದೆ ಈ ಮಾತು ಭೋಜನ ಮಾಡುವವನ ಮಟ್ಟಿಗೆ ಸೀಮಿತವಾದುದಲ್ಲ. ನಮ್ಮ ಭೋಜನವನ್ನು ನೋಡಿದವರ ಮನದಲ್ಲಿ ದುರ್ಭಾವನೆ-ಯುಂಟಾದರೂ ಭೋಜನವು ನಮಗೆ ಅನುಕೂಲಫಲವನ್ನು ಕೊಡುವುದಿಲ್ಲ ಅದರಿಂದ ಹಾನಿಯಾಗಬಲ್ಲುದು. ಆದುದರಿಂದಲೇ ಭೋಜನವನ್ನು ಏಕಾಂತದಲ್ಲಿ ಮಾಡಬೇಕೆಂಬ ವಿಧಾನವಿದೆ ಮತ್ತು ತನ್ನ ಆಕೃತಿ ಮೊದಲಾದುವುಗಳಿಂದ ಏನಾದರೂ ಅಯುಕ್ತಭಾವನೆ ಉತ್ಪನ್ನವಾಗುವುದಾದರೆ, ಅಂತಹ ಪದಾರ್ಥವು ತ್ಯಾಜ್ಯವೆಂದು ಬಗೆಯಲಾಗಿದೆ.

ಆಹಾರದಲ್ಲಿ ಒಂದು ಮಾತು ಅತ್ಯಂತಾವಶ್ಯಕವೆಂದು ಗಣಿಸ-ಲ್ಪಟ್ಟಿದೆ; ಅದು ದ್ರವ್ಯಶುದ್ಧಿಯ ಮಾತು. ಅನ್ಯಾಯೋಪಾರ್ಜಿತ ದ್ರವ್ಯದಿಂದ ಪ್ರಾಪ್ತವಾದ ಆಹಾರವು, ಮನಸ್ಸು ಮತ್ತು ಬುದ್ಧಿಯನ್ನು ಕೆಡಿಸುತ್ತದೆ ಅಲ್ಲದೆ ವೃತ್ತಿಯನ್ನು ಸರ್ವಥಾ ಬಹಿರ್ಮುಖವಾಗಿ ಮಾಡಿಬಿಡುತ್ತದೆ.

ಭೋಜನಗಳ ವೈವಿಧ್ಯತೆಯ ಪ್ರಶ್ನೆಯನ್ನು ತೆಗೆದುಕೊಂಡಲ್ಲಿ, ಷಡ್ರಸಗಳಲ್ಲಿ ಮತ್ತು ಚತುರ್ವಿಧ ಭೋಜನಗಳಲ್ಲಿ (ಚರ್ವ್ಯ, ಚೋಷ್ಯ, ಲೇಹ್ಯ ಮತ್ತು ಪೇಯ) ಪ್ರತಿಯೊಂದರಲ್ಲಿಯೂ ಅನೇಕ ಪ್ರಕಾರಗಳು ಪ್ರಚಲಿತವಾಗಿದ್ದುವು ಐವತ್ತಾರು ವಿಧಗಳ ವ್ಯಂಜನ-ಗಳು ಈ ದೇಶದಲ್ಲಿ ಪ್ರಸಿದ್ಧವಿದ್ದೇ ಇವೆ; ಆದರೆ ಹಿಂದೂ ಸಮಾಜದಲ್ಲಿ ಇನಿತೆಲ್ಲ ವಿಸ್ತಾರವು ಜಿಹ್ವೆಯ ತೃಪ್ತಿಗಾಗಿ ವಿಹಿತವಲ್ಲ ವಾನಪ್ರಸ್ಥ-ರಾದರೂ ವನ್ಯಕಂದ, ಮೂಲ ಮತ್ತು ಮುನಿಗಳು ನೀಡಿದ ಅನ್ನವನ್ನು ಉಪಯೋಗಿಸಬೇಕೆಂಬ ಆಜ್ಞೆ ಇದೆ. ಸಂನ್ಯಾಸಿಯು ಸಾಧ್ಯವಾದ ಮಟ್ಟಿಗೆ ವಾನಪ್ರಸ್ಥರಲ್ಲಿ ಭಿಕ್ಷೆ ಬೇಡಬೇಕು; ಮತ್ತು ಗೃಹಸ್ಥರಲ್ಲಿ ಭಿಕ್ಷೆ ಬೇಡಬೇಕಾದುದೇ ಆದರೆ, ಸರ್ವರ ಭೋಜನಾ-ನಂತರ ಮೂರನೆಯ ಪ್ರಹರದ ಪ್ರಾರಂಭದಲ್ಲಿ ಭಿಕ್ಷೆಬೇಡಲು ಹೋಗ-ತಕ್ಕದ್ದು. ಬ್ರಹ್ಮಚಾರಿಯಾದವನು ಅಪಕ್ವ ಅನ್ನಧಾನ್ಯಗಳನ್ನು ಬೇಡಿ ತಂದು, ಗುರುದೇವನ ಸಮ್ಮುಖದಲ್ಲಿಡತಕ್ಕದು ಗುರುದೇವನು ಅವನಿಗಾಗಿ ಉಪಯುಕ್ತವೆನಿಸಿದಷ್ಟು ಅವನಿಗೆ ಕೊಟ್ಟರೆ, ಅದರಿಂದ ಕ್ಷುಧೆಯನ್ನು ಶಾಂತಗೊಳಿಸಿಕೊಳ್ಳಬೇಕು ಮೂರು ಆಶ್ರಮಗಳೂ ತಪಸ್ಸಿನ ಆಶ್ರಮಗಳೇ ಆಗಿದ್ದುವು; ಮತ್ತು ಬ್ರಾಹ್ಮಣ ಗೃಹಸ್ಥರೂ ವನವಾಸಿಗಳೇ ಆಗಿದ್ದರು. ಗೃಹಸ್ಥನು ಕೇವಲ ತನಗಾಗಿಯೇ ಭೋಜನವನ್ನು ಸಿದ್ಧಗೊಳಿಸಿಕೊಂಡುದೇ ಆದರೆ, ಆತನು ಪಾಪವನ್ನು ಭುಜಿಸಿದಂತೆ ಎಂದು ಹೇಳಲಾಗಿದೆ ಅತಿಥಿಗಾಗಿ, ಆರಾಧ್ಯನಿಗಾಗಿ ನಿವೇದಿಸಲೋಸುಗ ಗೃಹಸ್ಥನು ವಿವಿಧ ವ್ಯಂಜನಗಳನ್ನು ಪ್ರಸ್ತುತ-ಗೊಳಿಸುವನು. ಬಲಿ, ವೈಶ್ವದೇವದನಂತರ ಅತಿಥಿ ಬ್ರಾಹ್ಮಣ, ಸೇವಕಾದಿಗಳಿಗೆ ಕೊಟ್ಟ ನಂತರ ಉಳಿದುದೇ ಯಜ್ಞಶೇಷವು. ಅದೇ ಅವನ ಭಾಗವು ಮತ್ತು ಭಾಗ್ಯವು ಜಿಹ್ವೆಯ ತೃಪ್ತಿಗೆ ಅದರಲ್ಲಿ ಅವಕಾಶವಿಲ್ಲ.

ಸ್ವಾಗತ—ಸತ್ಕಾರ

ಶಿಷ್ಟಾಚಾರದ ಮಾತು ಪ್ರತ್ಯೇಕ ವರ್ಣನೆಗೆ ಯೋಗ್ಯವಾದುದು. ಆದರೆ ಸ್ವಾಗತ-ಸತ್ಕಾರಗಳಲ್ಲಿ ಇನ್ನೂ ಅನೇಕ ವಿಷಯಗಳಿವೆ. ಹಿಂದೂ ಸಮಾಜದಲ್ಲಿ ಅತಿಥಿಯು ಆರಾಧ್ಯರೂಪನು. ಆತನ ಜಾತಿ, ಕುಲ, ಉದ್ದೇಶಗಳನ್ನು ಕೇಳುವ ಆಜ್ಞೆ ಇಲ್ಲ; ಅತಿಥಿಯು ಮನೆಗೆ ಬಂದರೆ ಅದು ಗೃಹಸ್ಥನ ಸೌಭಾಗ್ಯ; ಸ್ವತಃ ತನ್ನ ಆರಾಧ್ಯನೇ ಬಂದು ಕೃಪೆ ಮಾಡಿರುವನೆಂದು ಭಾವಿಸಬೇಕು. ಈ ದೃಷ್ಟಿಯಿಂದಲೇ ಆತನ ಸಕಲ ಸೇವಾಸತ್ಕಾರಗಳನ್ನು ಮಾಡುವುದಿವನ ಕರ್ತವ್ಯ. ಹಿಂದೂ ಸಮಾಜದಲ್ಲಿ ಸುಗಂಧಿತ ಅರ್ಘ್ಯವನ್ನು ಕೊಡುವ ಮತ್ತು ಪಾದಗಳನ್ನು ತೊಳೆಸುವುದು ಅಥವಾ ತೊಳೆಯುವ ಅತ್ಯಂತ ಸುರುಚಿಪೂರ್ಣ, ಸ್ವಾಸ್ಥ್ಯಪ್ರದ ಪ್ರಥೆಯಿದ್ದಿತು. ದುರ್ಭಾಗ್ಯದಿಂದಾಗಿ ಅರ್ಘ್ಯದ ಲೋಪವಾಗಿ ಬಿಟ್ಟಿದೆ

ಅತಿಥಿಯಂತೆಯೇ ಬ್ರಾಹ್ಮಣರೂ ಪೂಜ್ಯರು. ದ್ವಾಪರದ ವರೆಗೂ ಎಲ್ಲಿಯಾದರೂ, ಯಾರಮನೆಯೊಳಕ್ಕೆ ಹೋಗಬೇಕಾದರೂ, ಬ್ರಾಹ್ಮಣರಿಗೆ ಅನುಮತಿಯ ಅವಶ್ಯಕತೆ ಇರಲಿಲ್ಲ ಅರಸರ ಅಂತಃಪುರದಿಂದ ಬಡವರ ಗುಡಿಸಲಿನವರೆಗೂ ಬ್ರಾಹ್ಮಣನು ತನಗೆ ಇಚ್ಛೆ ಬಂದಾಗ ಅಬಾಧ್ಯನಾಗಿ ಹೋಗಬಲ್ಲವನಾಗಿದ್ದನು.

ಯಾರಾದರೂ ಅತ್ಯಂತ ಸನ್ಮಾನಿತ ವ್ಯಕ್ತಿಯಾಗಲಿ, ರಾಜನಾಗಲಿ ಹೊರಟಾಗ, ಉತ್ಸವಗಳ ಸಮಯದಲ್ಲಿ, ಮನೆ-ಮಾಳಿಗೆಗಳಿಂದ ಲಾಜಾ—ಪುಷ್ಪಗಳನ್ನು ಬಾಲಿಕೆಯರೂ, ಸ್ತ್ರೀಯರೂ ಹಾಕುತ್ತಿದ್ದರು ದೂರ್ವಾ, ಅಕ್ಷತೆ, ಕೇಸರ ಮತ್ತು ದಧಿಗಳಿಂದ ಪರಸ್ಪರ ಅಭಿಷೇಕ ಮಾಡುತ್ತಿದ್ದರು. ಮಾರ್ಗದಲ್ಲಿ ವಸ್ತ್ರಗಳನು, ಹಾಸುತ್ತಿದ್ದರು ಆ ಸನ್ಮಾನ್ಯ ಜನರ ಆಗಮನಕ್ಕೆಂದು

ಗಜ-ತುರಗಗಳನ್ನು ಭಾರತೀಯ ಸ್ವಾಗತ-ಸತ್ಕಾರ ಕ್ರಮಗಳಲ್ಲಿ ಉಪಯೋಗಿಸುತ್ತಿದ್ದರು: ವೃಷಭ ಮತ್ತು ಗೋಮಾತೆ ಸದಾ ಹಿಂದುಗಳಿಗೆ ಪೂಜ್ಯವಾದುವುಗಳು ಮತ್ತು ನಾನಾಪ್ರಕಾರದ ಭೇರಿ, ನಫೂರಿ, ವಂಶೀ ಆದಿ ವಾದ್ಯಗಳು ಸ್ವಾಗತಸಮಾರೋಹದಲ್ಲಿ ಪ್ರಯುಕ್ತವಾಗಿದ್ದರೂ, ನಮ್ಮ ಮಂಗಳವಾದ್ಯವು ಶಂಖವೇ. ಶಂಖವು ಹಿಂದೂಸಮಾಜ ಮತ್ತು ಹಿಂದೂಸ್ಥಾನದ ರಾಷ್ಟ್ರೀಯ ವಾದ್ಯವು. ಅದು ಮಂಗಳವಾದ್ಯವಲ್ಲದೆ ಯುದ್ಧವಾದ್ಯವೂ ಆಹುದು

ಮನೋರಂಜನೆ :

ಯಾವುದೇ ಜಾತಿಯ ಆಂತರಿಕ ಪ್ರವೃತ್ತಿಯು ಅದರ ಮನೋರಂಜನೆಯ ಸಾಧನಗಳಲ್ಲಿ ಸ್ಪಷ್ಟವಾಗುತ್ತದೆ. ಹಿಂದೂ ಸಮಾಜದ ಮನೋರಂಜನೆಯ ಸಾಧನಗಳಲ್ಲಿ ಒಂದು ಕಡೆ ಲಲಿತಕಲೆಗಳಿವೆ. ಆ ಅರುವತ್ತುನಾಲ್ಕು ಕಲೆಗಳಲ್ಲಿ ಇಂದು ಅನೇಕವುಗಳ ಲೋಪವಾಗಿದೆ. ಕೆಲವುಗಳ ಅಪೂರ್ಣಾಂಶಗಳನ್ನು ತೆಗೆದುಕೊಂಡೇ ಇಂದಿನ ಮಹಾನ್ ಕಲಾಕಾರರೆನಿಸಿಕೊಂಡವರು ಧನ್ಯರಾಗುತ್ತಾರೆ. ಇವುಗಳಲ್ಲಿ ಕಾವ್ಯ, ಚಿತ್ರ, ನೃತ್ಯ, ಗಾನವಾದ್ಯ ಮೊದಲಾದುವುಗಳೆಲ್ಲವೂ ಕಲೆಗಳೇ. ಪ್ರಾಚೀನಕಾಲದಲ್ಲಿ ಈ ಕಲೆಗಳೆಲ್ಲವೂ ಆದರಣೀಯವಾಗಿದ್ದುವು. ಇವುಗಳೆಲ್ಲೆಲ್ಲ ಮನುಷ್ಯನನ್ನು ಅಂತರ್ಮುಖಿಯನ್ನಾಗಿ ಮಾಡುವ ಪ್ರೇರಣೆಯೇ ಕಲೆಯ ಸಾರ್ಥಕತೆಯೆಂದು ಪರಿಗಣಿಸಲ್ಪಡುತ್ತಿದ್ದಿತು. ಇವುಗಳಲ್ಲದೆ ಅನೇಕ ಸಾಧನೆಗಳು ವರ್ಣ-ಧರ್ಮ ಶಿಕ್ಷೆಗೆ ಸಹಾಯಮಾಡುವ ಮನೋರಂಜಕಗಳಾಗಿದ್ದುವು ಇಂದಿನ ಪ್ರಸಿದ್ಧ ಬೌದ್ಧಿಕ ಕ್ರೀಡೆಯಾದ ಚದುರಂಗವು (chess) ಪುರಾತನದ "ಶತ್ರುಂಜಯ"ದ ಸರಳ ಸ್ವರೂಪವೇ ಆಗಿದೆ. ಪ್ರಾಚೀನ ಗ್ರಂಥಗಳಲ್ಲಿಯ ಈ ಕ್ರೀಡೆಯ ವರ್ಣನೆಯನ್ನು ಅರ್ಥ ಮಾಡಿಕೊಳ್ಳುವುದು ಸಹ ಕಠಿಣವಾಗಿದೆ.

ಕಂದುಕ ಕ್ರೀಡೆಯು (ಚೆಂಡಾಡುವುದು) ಮೊದಲು ಮಕ್ಕಳಿಗೆ ಮತ್ತು ಅಬಲೆಯರಿಗೆ ಯೋಗ್ಯವಾದುದೆಂದು ಎಣಿಸಲ್ಪಡುತ್ತಿದ್ದಿತು. ಈ ಆಟದಲ್ಲಿ ಆಗುವ ಸಾಮಾನ್ಯವಾದ ಶಾರೀರಿಕ ಮತ್ತು ಬೌದ್ಧಿಕ ಶ್ರಮವು. ಶಿಶುಗಳಿಗೆ ಮತ್ತು ನಾರಿಯರಿಗೆ ಮಾತ್ರ ಸರಿಹೋಗುವುದಾಗಲಿ, ಶಕ್ತಿಶಾಲಿಗಳಾದ ಪುರುಷರಿಗೆ ಇದರಿಂದ ವ್ಯಾಯಾಮವಾಗಲಾರದು. ನಾನು ಇಂದಿನ ಕೋಮಲಕಾಯರೂ, ಹೀನಶಕ್ತರೂ ಆದ ಪುರುಷರ ಬಗ್ಗೆ ಹೇಳುವುದಿಲ್ಲ ಹಿಂದೂ ಸಮಾಜದ ಪುರುಷರಿಗೆ—ಬಟ್ಟಬಯಲಿನಲ್ಲಿ ಸಿಂಹವನ್ನು ಆಯುಧರಹಿತ ಕರಗಳಿಂದ ಮಲ್ಲಯುದ್ಧಕ್ಕೆ ಕರೆಯಬಲ್ಲ ಪುರುಷರಿಗೆ—ಮಲ್ಲಯುದ್ಧವೊ, ಈಜಾಡುವುದೋ ಅಥವಾ ಆಖೇಟವೋ ಮಾತ್ರ ಕ್ರೀಡೆಯಾಗಬಲ್ಲುದು ರಾಜಕುಮಾರರು ಅಶ್ವಾರೂಢರಾಗಿ ಒಂದು ಬಗೆಯ ಕಂದುಕಕ್ರೀಡೆಯನ್ನಾಡುತ್ತಿದ್ದರು. ಅದರ ವರ್ಣನೆಯನ್ನು ನೋಡಿದರೆ, ಅದು ವರ್ತಮಾನ ಪೋಲೋವನ್ನು ಹೋಲುವ ಒಂದು ವಿಧವಾದ ಆಟವೆಂದು ತಿಳಿದುಬರುತ್ತದೆ

ಸಮಾಜದ ಸಾಮೂಹಿಕ ಸಮಾರೋಹವು ಮನೋರಂಜನೆಯ ಮತ್ತೊಂದು ವಿಧಾನ. ಈ ವಿಷಯದಲ್ಲಿ ಸಮಸ್ತ ವಿಶ್ವದಲ್ಲಿ ಇಂದಿಗೂ ಹಿಂದೂ ಸಮಾಜವು ಎಲ್ಲ ಸಮಾಜಗಳಿಗಿಂತಲೂ ಮುಂದುವರೆದಿದೆ. ಇಲ್ಲಿ "ಸಾತವಾರ ನೌ ತ್ಯೋಹಾರ" "ದಿನಗಳು ಏಳು, ಹಬ್ಬಗಳು ಹದಿನೇಳು" ಎಂಬ ನಾಣ್ನುಡಿ ಇದೆ ಈ ಎಲ್ಲಾ ಪರ್ವ ಮತ್ತು ಉತ್ಸವಗಳಲ್ಲಿ ಪೂಜೆ ಪಾಠ, ಜಪ, ದೇವಯಾತ್ರಾವಿಧಾನಗಳಿರುತ್ತವೆ ಜೀವನದ ಪ್ರತಿಯೊಂದು ಅಂಶವು ಅಂತರ್ಮುಖಿಯಾಗುವ ಪ್ರಯತ್ನದಿಂದಲ್ಲದಿದ್ದರೆ ಸಂಸ್ಕೃತಿಯ ಉದ್ದೇಶವು ಹೇಗೆ ಪೂರ್ಣವಾದೀತು

ಹಿಂದೂಸಂಸ್ಕೃತಿಯು ಎಂದಿಗೂ ದೇಹಕ್ಕೆ ಮಹತ್ತ್ವವನ್ನು ಕೊಡಲಿಲ್ಲ ಮತ್ತು ಮೃತ್ಯುವನ್ನು ಜೀವನಕ್ಕಿಂತ ಅಧಿಕ ಮಹತ್ತ್ವಶಾಲಿಯೆಂದು ಭಾವಿಸಲಿಲ್ಲ ನಮ್ಮಲ್ಲಿ ಶರೀರದ ಮೋಹವು ತ್ಯಾಜ್ಯವೂ, ಹೇಯವೂ ಆಗಿದೆ. ಆದುದರಿಂದ ನಮ್ಮ ಉತ್ಸವಗಳಲ್ಲಿ, ಮಾರ್ಗಗಳಲ್ಲಿ ಶರೀರಕ್ಕೆ ಆಗಲಿ, ಮೃತ್ಯುವಿಗೆ ಆಗಲಿ ಮಹತ್ತ್ವವನ್ನು ಕೊಡುವ ಯಾವ ಭಾವವೂ ಇಲ್ಲ. ಶರೀರಕ್ಕೆ ಮಹತ್ತ್ವವನ್ನು ಕೊಡುತ್ತಿದ್ದ ಅಸುರರು ನಮ್ಮ ಶಾಸ್ತ್ರಗಳಲ್ಲಿ

ತಿರಸ್ಕೃತರಾದರು. ಈ ಕಾರಣದಿಂದಲೇ ನಮ್ಮಲ್ಲಿ ಆತ್ಮಕಥೆ, ಅನುಪಯೋಗಿಗಳಾದ ಜೀವನ ಕಥೆಗಳು, ಅಭಿನಂದನ ಗ್ರಂಥಗಳು—ಇವುಗಳನ್ನು ಬರೆಯುವ ಮತ್ತು ಬರೆಯಿಸುವ ಪರಿಪಾಠಿಯು ಎಂದಿಗೂ ಇರಲಿಲ್ಲ. ಮೃತಪುರುಷರ ಸಮಾಧಿಗಳನ್ನಾಗಲಿ, ಸ್ಮಾರಕಗಳನ್ನಾಗಲಿ ಕಟ್ಟಿಸುತ್ತಿರಲಿಲ್ಲ; ಮರಣ ತಿಥಿಯನ್ನಾಚರಿಸುವುದಂತೂ ಮೃತ್ಯುವಿಗೆ ಜೀವನದ ಮೇಲ್ಮೆಗಿಂತ ಮಹತ್ತ್ವವನ್ನು ಕೊಟ್ಟಂತೆಯಾಗುವುದು. ಹಿಂದೂ ಸಮಾಜವು ಜಯಂತಿಗಳು, ಜನ್ಮತಿಥಿಗಳು ಮತ್ತು ವಿಜಯದಿವಸಗಳನ್ನು ಆಚರಿಸುವುದನ್ನು ಶ್ರೇಯಸ್ಕರವೆಂದು ಭಾವಿಸಲಾಗಿದೆ.

ಪಾಶ್ಚಿಮಾತ್ಯ ಸಂಸ್ಕೃತಿಯು ಶರೀರಕ್ಕೆ ಮಹತ್ತ್ವವನ್ನು ಕೊಡುತ್ತದೆ. ಆದುದರಿಂದ ಅಲ್ಲಿ ಮೃತ್ಯು ಬಹಳ ಹೆಚ್ಚಿನ ಘಟನೆಯಾಗಿದೆ. ಶರೀರವನ್ನು ಸುರಕ್ಷಿತವಾಗಿಡುವ ಮನೋಭಾವನೆಯೇ ಗೋರಿ, ಸಮಾಧಿ ಮೊದಲಾದುವುಗಳನ್ನು ನಿರ್ಮಿಸುತ್ತದೆ ಮತ್ತು ಮುಂದುವರಿದು ಅದೇ ವೃತ್ತಿಯಿಂದ ಪ್ರೇರಿತವಾಗಿ ಸ್ಮಾರಕಗಳ ನಿರ್ಮಾಣವಾಗುತ್ತದೆ ಆತ್ಮಕಥೆ ಮತ್ತು ಜೀವನಕಥೆ ಇದೇ ಮನೋವೃತ್ತಿಯ ಬೇರೊಂದು ರೂಪ. ಇದೇ ರೀತಿಯಾಗಿ ಅಭಿನಂದನ ಗ್ರಂಥ ಮತ್ತಿತರ ಅನೇಕ ಪಾಶ್ಚಿಮಾತ್ಯ ಪ್ರಣಾಳಿಕೆಗಳನ್ನು ಇಂದು ಭಾರತೀಯ ಸಮಾಜವು ಸ್ವೀಕರಿಸುತ್ತ ಹೊರಟಿದೆ. ಭಗವಾನ್ ಬುದ್ಧರ ಕಾಲದಲ್ಲಿಯೇ ಸಮಾಧಿಗಳು ನಿರ್ಮಿತವಾಗಲು ಮೊದಲಿಟ್ಟುವು. ಮಹಾಪುರುಷರಿಗೆ ಉಪಯುಕ್ತ ಆದರವನ್ನು ಸಲ್ಲಿಸುವುದನ್ನು ತಿಳಿದಿಲ್ಲವೆಂಬ ಮತ್ತು ಇತಿಹಾಸವನ್ನು ಬರೆದಿಡುವುದಿಲ್ಲವೆಂಬ ಆಕ್ಷೇಪಣೆಯೂ ಹಿಂದೂಸಮಾಜದ ಮೇಲೆ ಇದೆ. ವ್ಯಕ್ತಿಯು ಎಂತಹ ಮಹಾಪುರುಷನೇ ಆಗಲಿ ಆಗಿರಲಿ, ಅವನಿಗೆ ತೋರಿಸುವ ನಿಜವಾದ ಆದರವೆಂಬುದು ಎಂತಹುದೆಂಬುದೇ ಪ್ರಶ್ನೆ. ಅವನ ಜೀವನಗಾಥೆಯನ್ನು ಗಾಯನ ಮಾಡುವುದೆ? ಅವನ ಮೂರ್ತಿಗಳನ್ನು ಸ್ಥಾಪಿಸುವುದೇ? ಅಥವಾ ಅವನು ಯಾವ ಸತ್ಯವಾದ ಮಂಗಳಕರವಾದ ತತ್ತ್ವವನ್ನು ಸಾಕ್ಷಾತ್ಕರಿಸಿರುವನೋ ಆ ತತ್ತ್ವವನ್ನು ಅಳವಡಿಸಿಕೊಳ್ಳುವುದೋ? ಲೆನಿನ್‌ನ ಶರೀರವು ರಷ್ಯಾದಲ್ಲಿ ಸುರಕ್ಷಿತವಾಗಿದೆಯಾದರೂ ಅವನ ಸಿದ್ಧಾಂತವೋ? ಭಾರತದಲ್ಲಿ ಮಹಾತ್ಮಾಗಾಂಧಿಯವರ ಬಗ್ಗೆ ಅತ್ಯಂತ ಆದರವಿದೆ; ಆದರೆ ಅವರ ಅನುಯಾಯಿಗಳೆಷ್ಟರಮಟ್ಟಿಗೆ ಅವರ ಆದರ್ಶಗಳ ಪಾಲನೆ ಮಾಡುತ್ತಿರುವರು?

ಹಿಂದೂ ಸಮಾಜವು ಶರೀರವನ್ನು ನಶ್ವರವೆಂದು ಭಾವಿಸಿದೆ ಅದರ ಸ್ಮರಣೆಯಲ್ಲಿ ಅರ್ಥವೇನೂ ಇಲ್ಲ. ಧ್ಯಾನ ಮತ್ತು ಚಿಂತನ ಯೋಗ್ಯವೆಂದರೆ ಭಗವಂತನ ನಿತ್ಯ ದಿವ್ಯಶರೀರ ಮತ್ತು ಅವನ ಅವತಾರ ಚರಿತ್ರೆಗಳು ಮಾತ್ರ. ಭಗವದ್ಭಕ್ತರ ಧ್ಯಾನವೂ, ಅವರ ಚರಿತ್ರೆಯೂ ಹೃದಯವನ್ನು ಪಾವನಗೊಳಿಸುತ್ತವೆ, ಇದನ್ನು ಹೊರತು ವ್ಯಕ್ತಿಯು ತನ್ನ ಅಥವಾ ಇತರರ ಶರೀರಕ್ಕೆ ಮಹತ್ತ್ವವನ್ನು ಕೊಟ್ಟುದೇ ಆದರೆ, ಆ ಮನೋವೃತ್ತಿಯು ಬಹಿರ್ಮುಖತೆಯನ್ನು ಉತ್ತೇಜನಗೊಳಿಸುವುದು. ಮಹಾಪುರುಷರು ಹೇಗೆ ಇರುತ್ತಿದ್ದರು, ಏನನ್ನು ತಿನ್ನುತ್ತಿದ್ದರು, ಎಲ್ಲಿ ಜನಿಸಿದರು—ಇವೆಲ್ಲವನ್ನೂ ಗಮನಿಸುವುದು ಅವರ ನಶ್ವರಶರೀರಕ್ಕೆ ಮಹತ್ತ್ವವನ್ನು ಕೊಟ್ಟಂತಾಗುವುದು. ಆದರೆ ಅವರ ಜೀವನದಲ್ಲಿ ಯಾವ ಘಟನೆಯು ನಮಗೆ ಕಲ್ಯಾಣಪ್ರದವೋ, ನಮಗೆ ಶೈಕ್ಷಣಿಕವಾಗಿರುತ್ತದೆಯೋ ಅಂತಹುದನ್ನು ಸುರಕ್ಷಿತವಾಗಿಡತಕ್ಕುದು. ಆ ಮಹಾಪುರುಷರು ಯಾವ ತಥ್ಯವನ್ನು ಸಮಾಜಕ್ಕೆಂದು ಅರ್ಪಿಸಿರುವರೋ, ಅದೇ ಅವರ ಶಾಶ್ವತ ಶರೀರವು; ಅದೇ ಆದರಣೀಯವಾದುದು. ಹಿಂದೂ ಸಮಾಜಕ್ಕೆ ಬಾಣಭಟ್ಟ, ವರರುಚಿ, ವರಾಹಮಿಹಿರ, ಕಾಳಿದಾಸ, ಪತಂಜಲಿ, ಕಣಾದ, ಗೌತಮಾದಿಗಳ ಶಾರೀರಿಕ ಜೀವನವು ಗೊತ್ತಿರದೆ ಇರಬಹುದು, ಆದರೆ ನಮ್ಮ ಹೃದಯಗಳಲ್ಲಿ ಅವರು ಚಿರಂಜೀವಿಗಳಾಗಿರುವರು; ಅವರ ಮಂಗಳಕರ ಪ್ರಯತ್ನಗಳನ್ನು ಯಾವ ಯಾವ ಆಪತ್ತಿಗಳಲ್ಲಿ ಎಷ್ಟೆಷ್ಟು ಕಷ್ಟಪಟ್ಟು ರಕ್ಷಿಸಲಾಗಿದೆಯೋ ಎಂಬುದು ಶ್ರದ್ಧೆಯನ್ನು ಪ್ರಕಟಿಸಲೋಸುಗ ನಮಗೆ ಪರ್ಯಾಪ್ತವಾಗಬೇಕು. ಕಾಲನ ಸಹಸ್ರಾರು ಯುಗಗಳ ವಿಸ್ತಾರದಲ್ಲಿ ಬೇರೆಯ ಸ್ಮರಣೆಯನ್ನು ಸ್ಥಿರಗೊಳಿಸಲು ಸಾಧ್ಯವೆ? ಶರೀರವು ನಾಶಕ್ಕೆ ಒಳಗಾದುದಾದರೆ, ಅದರ ಸ್ಮಾರಕವೂ ನಾಶಕ್ಕೆ ಒಳಗಾದುದಲ್ಲವೆ? ಎಂದಮೇಲೆ ಶರೀರಕ್ಕೆ ಮಹತ್ತ್ವವನ್ನು ಕೊಡುವುದೇಕೆ? ಇಂದು ಷೇಕ್ಸ್‌ಪಿಯರನ ನಾಟಕಗಳು ಮಾಯವಾಗಿ ಹೋಗುವುದೇ ಆದರೆ, ಅವನದೊಂದು ಚಿತ್ರವಾಗಲಿ, ಚಪ್ಪಲಿಯಾಗಲಿ ಇದ್ದರೇನು? ಇಲ್ಲದಿದ್ದರೇನು? ಎಷ್ಟು ಉಪಾಯಗಳನ್ನು ಮಾಡಿದರೇನು? ಅದು ಒಂದಲ್ಲ ಒಂದು ದಿನ ನಷ್ಟವಾಗಿಯೇ ಬಿಡುವುದು. ಅಮೃತಪುತ್ರನಾದ ಮಾನವನು ನಶ್ವರಪದಾರ್ಥಗಳಿಗೆ ಮಹತ್ತ್ವವನ್ನು ಈವುದು ಜ್ಞಾನದ ಲಕ್ಷಣವಲ್ಲ. "ಶರೀರ" ಮತ್ತು "ನಾಮ"ಗಳ ಸೀಮೆಗಳನ್ನುಲ್ಲಂಘಿಸಿ ಅಮೃತರಾಜ್ಯವನ್ನು ಪ್ರವೇಶಿಸಿರುವ ಮಹಾಪುರುಷನ "ಶರೀರ", "ನಾಮ"ಗಳ ಪೂಜೆಯನ್ನು ಗೈವುದು ಅವನ ಜ್ಞಾನಸ್ವರೂಪದ ಒಂದು ಬಗೆಯ ತಿರಸ್ಕಾರವೇ ಸರಿ.

ದೇಶದ ಭಾವೀಸಂತತಿಯು ರಾಷ್ಟ್ರದ ಸಮ್ಮತ ಉದ್ದೇಶಗಳ ಕಡೆಗೆ ಒಲಿದಿರುವಂತೆ ಮಾಡುವ ಪ್ರಕಾರ, ಪ್ರತಿಯೊಂದು ದೇಶವು ತನ್ನ ಇತಿಹಾಸವನ್ನು ಇಂದು ನಿರ್ಮಿಸಲಿಚ್ಛಿಸುತ್ತಿದೆ. ಘಟನೆಗಳಿಗಿಂತಲೂ, ವ್ಯಕ್ತಿಗಳಿಗಿಂತಲೂ ಉದ್ದೇಶವು ಅಧಿಕ ಮಹತ್ತ್ವಪೂರ್ಣವೆಂದು ಐತಿಹಾಸಿಕ ವಿದ್ವಾಂಸರು ಒಪ್ಪುತ್ತಿರುವರು. ಹಿಂದೂ ಸಮಾಜದ ಉದ್ದೇಶವು ವರ್ತಮಾನ ಪಾಶ್ಚಾತ್ಯ ವಿಚಾರಧಾರೆಯಿಂದ ಸರ್ವಥಾ ಭಿನ್ನವಾಗಿದೆ – ಇದು ಬೇರೆ ಮಾತು. ಆದರೆ ಅನಾದಿ ಕಾಲದಿಂದ ನಮ್ಮ ಉದ್ದೇಶಕ್ಕೆ ಅನುರೂಪವಾಗಿ ನಾವು ನಮ್ಮ ಇತಿಹಾಸದ ಸಂಕಲನೆಯನ್ನು ಗೈದಿರುವೆವು. ನಾವು ಯಾವುದನ್ನು ವ್ಯರ್ಥವೆನ್ನುವೆವೋ, ಅದೇ ಇತರರಿಗೆ ಗ್ರಾಹ್ಯವಾದರೆ, ಸಂದರ್ಭವು ಬೇರೆಯಾಗುತ್ತದೆ. ಇಂದಿನ ಶಿಕ್ಷೆಯೇ ಪ್ರಾಚೀನಶಿಕ್ಷೆಯಿಂದ ಭಿನ್ನವಾಗಿದೆ.

ಅಮರತೆಯ ಶಿಲ್ಪಿ

ಸೌ. ಪಾರ್ವತೀದೇವಿ ಹೆಗಡೆ, ಕಾರವಾರ

卐

೧

ನಿನ್ನ ಬಾಳ್ ಚಿನ್ನದಿಂದೊಗೆದ ಶ್ರದ್ಧಾಪುರುಷ
ಮಾರ್ಗದರ್ಶಕನಾಗಿ ಯಂತ್ರಯುಗಕೆ—
ಸಂದೇಶ ತಂದಿರುವ; ಉಸಿರಾಡಿಸುತಿದೆ ಜಗ.
ಹೆಗಲಿತ್ತು ದಾಸ್ಯ ದಾರಿದ್ರ್ಯನೊಗಕೆ.

೨

ಧವಲಗಿರಿಯನು ಜಿಗಿವ ಅಶ್ವರತ್ನಗಳೆರಡು,
ಸತ್ಯ-ನಿರ್ಭಯತೆಗಳು ಅವನ ರಥಕೆ—
ಮರ್ತ್ಯ ಪಾತಾಳಗಳ-ಪೂರ್ವ ಪಶ್ಚಿಮಗಳನು,
ಜೋಡಿಸುವಶಕ್ತಿ ಏನವನ ಪಥಕೆ ?

೩

ಅವನ ಮನೆಯಲ್ಲಿಹುದು ಸತತ ಕರೆಯುವ ಆವು
ಸುರಧೇನು ಮತ್ತೇಕೆ? ತೊರೆವ ಕರುಣೆ—
ಅದರ ಹಾಲುಂಡವರೆ ಇಂದು ನಡೆಸುತಲಿಹರು
ದೇವಕಾರ್ಯವ ಪೃಥ್ವಿ ಅದಕೆ ಶರಣೆ!

೪

ಮುಪ್ಪಾದ ನೀತಿಪುರುಷನಿಗೊ ಪ್ರಾಣವ ತುಂಬಿ,
ಕುಂದದಿಹ ಯೌವನವ ಮತ್ತೆ ನೀಡಿ—
ಅಮೃತಸೌಧವ ರಚಿಸುವಮರತೆಯ ಶಿಲ್ಪಿಯವ
ನೀಗಲಾರದ ಕಾರ್ಯ ಉಂಟೆ ? ನೋಡಿ !

೫

ದೈನ್ಯ ತುಂಬಿದ ಚಷಕವನ್ನು ಒಡೆದೊಗೆಯುವನು
ಆನಂದ ಪಾತ್ರೆಯನು ಕೊಂಡು ಬರುವ—
ಏಕತೆಯ ಗಾಯತ್ರಿ ಮಂತ್ರಕವ ದ್ರಷ್ಟಾರ
ಸಮತೂಕವನ್ನವನು ತಂದೆ ತರುವ.

೬

ಅವನ ಬಾಳ್ಗಬ್ಬದಲಿ ಪುಟಪುಟವು ಅಮೃತ ಕಣ.
ಅವನ ಲೀಲಾಕಮಲಕಿಲ್ಲ ಕೆಸರು—
ಜಗವ ಸೆರೆಯಲ್ಲಿಟ್ಟ ಬಲಿಯ ಮೆಟ್ಟಿದರೇನು ?
ಅವಗಿಲ್ಲ ವಾಮನನ ಕೆಡುಕು ಹೆಸರು

೭

ಓ ತಂದೆ ಬಾಪೂಜಿ ಸೋತು ಹೋಗಿದೆ ವಾಣಿ,
ಹಾಡಲಾರದೆ ನಿನ್ನ ಅಮರ ಕೀರ್ತಿ,
ನೀನು ಜಗಕಿತ್ತಿರುವ ಕಾಣಿಕೆಯ ಹಾಡಿದೆನು,
ನರತೆಯನು ಮೀಯಿಸಲಿ, ಧವಲಪ್ರೀತಿ !

ಭಕ್ತಿ ಚಂದ್ರೋದಯ

(ಮೂರು ದೃಶ್ಯಗಳ ವ್ಯಂಗ್ಯರೂಪಕ)

ಪ್ರೊ. ಉಡುಪಿ ವೆಂಕಟಕೃಷ್ಣರಾವ್ ಎಮ್. ಎ. ಕ್ರಿಶ್ಚಿಯನ್ ಕಾಲೇಜ್, ತಾಂಬರಂ— ಮದರಾಸು

卐

ಚಿಂತಾಮಣಿಃ ಇಯಂ ಪ್ರಜ್ಞಾ ಹೃತ್ಕೋಶಸ್ಥಾ ವಿವೇಕಿನಃ |
ಫಲಂ ಕಲ್ಪಲತೇವೈಷಾ ಚಿಂತಿತಂ ಸಂಪ್ರಯಚ್ಛತಿ ‖
ನಮಸ್ತಸ್ಮೈ ವಿವೇಕಾಯ ಯೇನೇದಂ ಧಾರ್ಯತೇ ಜಗತ್ |
ವಿವೇಕೋ ಭಕ್ತಿಸಂಯುಕ್ತಃ ಲೋಕೇಽಸ್ಮಿನ್ ಕಾರ್ಯಸಾಧಕಃ ‖

(ನಾಂದ್ಯಂತದಲ್ಲಿ ಸೂತ್ರಧಾರನ ಪ್ರವೇಶ)

ಸೂತ್ರಧಾರ:— ಏನಿದು ! ಪುರುಷೋತ್ತಮನೇ ಸ್ವತಃ ಕೈಲಾಸ-ವೈಕುಂಠ-ಸತ್ಯಲೋಕಗಳಲ್ಲಿರುವ ಅರಮನೆಗಳನ್ನು ಬಿಟ್ಟು, 'ನಾಲಂದಾ' ಗ್ರಾಮದಲ್ಲಿ ಒಂದು ಹಾಳುಗುಡಿಸಿಲಿನಲ್ಲಿ ಚಿಂತಾಕ್ರಾಂತನಾಗಿ ಕುಳಿತಿರುವನಲ್ಲಾ ! ಏನೋ ಪ್ರಮಾದವಾದಂತಿದೆ ! ಯಾರೋ ಎಲ್ಲಿಯೋ ವಿವೇಕಶೂನ್ಯವಾಗಿ ಏನನ್ನೋ ಮಾಡಿದ್ದು, ಇವನಿಗೇನೋ ಚಿಂತೆಯನ್ನುಂಟು ಮಾಡಿದಂತಿದೆ. ಇರಲಿ, ಇವನ ಬಾಯಿಂದಲೇ ವಿಷಯ ತಿಳಿಯೋಣ— (ತೆರಳುವನು).

೧ನೆಯ ದೃಶ್ಯ

(ಹಾಳು ಗುಡಿಸಿಲಿನಲ್ಲಿ ಪುರುಷೋತ್ತಮ)

ಪುರುಷೋತ್ತಮ:— ಏನಿದು ! ಯಾರೋ ವಿವೇಕಶೂನ್ಯ- ಎಂದೀಗಲೇ ಹೇಳುವಂತಿದೆಯಲ್ಲಾ ! ಹೌದು ! ಹೌದು ! ವಿವೇಕವೆಂಬ ಚಿಂತಾಮಣಿಯನ್ನೂ ಸೃಜಿಸಿ, ನನ್ನ ಪ್ರಿಯರಾದ ಮನುಷ್ಯರ ಕೈಯಲ್ಲಿಯೇ ಕೊಟ್ಟೆ ಆದರೇನು ! ಮಂಗನ ಕೈಯಲ್ಲಿ ಮಾಣಿಕ್ಯವಾಯಿತಲ್ಲಾ ! ಆ ಮನುಷ್ಯರೇ ನನಗಿಂತ ಹೆಚ್ಚಿನ ವಸ್ತುಗಳನ್ನು ಸೃಜಿಸಲಾರಂಭಿಸಿದರಲ್ಲಾ ! ಅಲ್ಲಿ ನೇಟೋ (NATO), ಇಲ್ಲಿ WHO ಅಂತೆ, ಇನ್ನೊಂದೆಡೆ Atom Bomb=ಅಣುಗುಂಡು ಅಂತೆ ! ಅಲ್ಲಿ UNESCO ಅಂತೆ, ಇಲ್ಲಿ Suez, ಇಲ್ಲಿ Q,- ಏನೇನೋ— ಹೆಸರುಗಳನ್ನು ಸರಿಯಾಗಿ ಉಚ್ಚರಿಸಲಿಕ್ಕೂ ನನಗೆ ಬರುವುದಿಲ್ಲ,— ಇವರೇ ನಿಜವಾದ ಪ್ರತಿಭಾಶಾಲಿಗಳಲ್ಲವೇ ? ಆದರೆ ಆದರೆ........ (ಚಿಂತಾಕ್ರಾಂತನಾಗಿ) ಈ ಹಾದಿಯಲ್ಲಿಯೇ ಅವರು ಮುಂದುವರಿದರೆ ಸರ್ವನಾಶವಾದೀತಲ್ಲಾ ! ನನ್ನ ಲೀಲಾವಿಲಾಸವೆಂದು ಮರೆಯುವ ಈ ಲೋಕವೆಲ್ಲಾ ಅಳಿದು ಹೋಗುವುದನ್ನು ನಾನೇ ನನ್ನ ಕಣ್ಣಿನಿಂದ ಕಾಣಬೇಕಾಗಿ ಬರುವುದಲ್ಲಾ ! ಹಾ ವಿಧಿಯೇ ! ಶಿವಶಿವಾ !! ಇಷ್ಟಾದರೂ ಇನ್ನಾದರೂ ಲೋಕವನ್ನುಳಿಸಲು ಸಾಧ್ಯವೇ ?........ (ಅತ್ತಿತ್ತ ಅಲೆದಾಡುವನು.)

ಯಾರೋ ಬರುವಂತಿದೆಯಲ್ಲಾ —

(ನಾರದರು ' ಹರಿನಾಮ ಜಿಹ್ವೆಯೊಳಿರಬೇಕು, ನರನಾದ ಮ್ಯಾಲೆ ' ಎಂದು ಹಾಡುತ್ತಾ ಪ್ರವೇಶಿಸುವರು).

ಓಹೋ ! ನನ್ನ ಪ್ರಿಯ Roring Ambassador. ಅವಿಶ್ರಾಂತ ದೂತರಾದ ನಾರದರೋ ? ನನ್ನ ಚಿಂತೆಯನ್ನು ನೀಗಿಸಲು ಮಣಿಯನ್ನು ತಂದಿರುವಿರೇನು ? ನಿಮಗೆ ಅನಂತಾನಂತ ಸ್ವಾಗತಗಳು ! ಚಿರಂಜೀವಿಗಳಾಗಿ ಬಾಳಿ ಲೋಕಸೇವೆಯನ್ನು ಸಲ್ಲಿಸಿರಿ ! ಏನು ಸಮಾಚಾರ ? ಸೌಖ್ಯವಷ್ಟೆ ?

ನಾರದ:— ಅಖಿಲಾತ್ಮಕನಾದ ನೀನೇ ಚಿಂತಾಕ್ರಾಂತನಾಗಿ ಪ್ರತಿಭೆಯ ದ್ವಾರವನ್ನೇ ಮುಚ್ಚಿಬಿಟ್ಟರೆ, ಚಿಂತೆಯು ಹೆಚ್ಚುವುದೆಂದರೆ ಅತಿ ಸಹಜ ತಾನೇ !

ಪುರು:— ಏನು ಪ್ರತಿಭೆ ! ನನ್ನ ಚಿಂತೆಯ ಪ್ರತಿಬಿಂಬವೇ ಲೋಕದಲ್ಲಿ ವ್ಯಾಪಿಸಿರುವುದೇನು ?

ನಾರದ:— ಇದರಲ್ಲಿ ಎಳ್ಳಷ್ಟೂ ಸಂದೇಹವೇ ಇಲ್ಲ, ಜಗತ್ಪ್ರಭೋ !

ಪುರು:— ಹಾಗಾದರೆ ಇದಕ್ಕೆ ತಡೆಹಾಕಬಹುದೇ ? ನಾನೇ ಇಷ್ಟು ಹೊತ್ತೆಲ್ಲಾ ತಲೆ ಕರಕ ಮಾಡಿಕೊಂಡು ತಲೆಯನ್ನು ಕೈಯ ಮೇಲಾಡಿಸಿಕೊಂಡು, ದಿಕ್ಕು ತೋಚದೆ ಅಪ್ರತಿಭನಾಗಿ ಕೂತಿರುವುದನ್ನು ಕಾಣುವುದಿಲ್ಲವೇ ?

ನಾರದ:— ನಿನ್ನ ಗತಿಯೇ ಹೀಗಾದರೆ, ನಿನ್ನ ಲೋಕದ ಗತಿಯೇನು, ಪ್ರಭೋ ?

ಪುರು:— ಉಪಾಯವನ್ನಾದರೂ ಸೂಚಿಸಬಾರದೇ ?

ನಾರದ:— ಸೂರ್ಯನಿಂದ ಪಾತಾಳದ ವರೆಗೆ ಈಗತಾನೇ ಸಂಚರಿಸಿ ಬಂದೆ ಎಲ್ಲಿಹೋದರೂ Atom, bomb iron curtain ಎಂಬ ನೂತನ ಮೋಹಿನೀಮಂತ್ರವೇ ಎಲ್ಲವರ ಬಾಯಿಯಲ್ಲಿ. ಪ್ರತಿಯೊಂದು ರಾಷ್ಟ್ರವೂ Disarmament—ನಿಶ್ಶಸ್ತ್ರೀಕರಣ ಎಂದು ಎದುರಿಗೆ ಮಾತ್ರ ಬೊಬ್ಬಿಟ್ಟರೂ, ಎಲ್ಲೆಲ್ಲಿಯೋ ಯಾರಿಗೂ ತಿಳಿಯದಂತೆ Hydrogen Bomb ಗಳನ್ನೋ, ಇನ್ನಾವುದನ್ನೋ ತಯಾರಿಸುತ್ತಾ ಇರುವುದಲ್ಲಾ ! ಲೋಕಕ್ಕೆ ನೀನು ವಿಶ್ವಾತ್ಮನಾದವನು ಭೋಧಿಸಿದರೆ, ತಾವೇ ವಿಶ್ವವೆಂದೂ, ತಮಗಾಗಿಯೇ ವಿಶ್ವವಿರುವುದೆಂದೂ ಅಪಾರ್ಥ ಮಾಡಿರುವರಲ್ಲಾ !

ಪುರು:—ಆದದ್ದಂತೂ ಆಗಿಯೇ ಹೋಯಿತು ! ಮಿಂಚಿಹೋದ ಕಾರ್ಯಕ್ಕೆ ಚಿಂತಿಸಿ ಫಲವಿಲ್ಲವಷ್ಟೆ ! ಈಗೇನುಪಾಯವನು ಸೂಚಿಸುವೆ, ಮಹಾರಾಯಾ ! ಏನಾದರೂ ಮಾಡಿಯೇ ತೀರಬೇಕಲ್ಲವೆ?

ನಾರದ:— ನೀನೇ ಹೀಗೆ ನನ್ನ ಮೇಲೆಯೇ ಭಾರವನ್ನರ್ಪಿಸಿದರೆ, ನನ್ನ ಗತಿಯೇನು ? ಆದರೂ "ಶ್ರೀನಿಧಿಯೆ ನೀನಿರುವುತನಕ" ನನಗೇನು ಕಡಿಮೆ ! ನೋಡೋಣ, ನಿನ್ನ ವೇಣುಗಾನವನ್ನಿನ್ನೊಂದು ಸಲ ಕೇಳಿದರೇನಾದರೂ ತೋಚುತ್ತದೋ— (ಪುರುಷೋತ್ತಮನು ವೇಣುವನ್ನೂದಿ 'ಓಂಕಾರಾರ್ಥ ಮುದೀರಯನ್ ವಿಜಯತೇ ವಂಶೀನಿನಾದಃ ಶಿಶೋಃ' ಎಂಬ ಕೃಷ್ಣಕರ್ಣಾಮೃತದ ಶ್ಲೋಕವನ್ನು ಹಾಡುವನು. ಇದಾದ ಕೂಡಲೆ ನಾರದರೂ ವೀಣೆಯ ಸಪ್ತಸ್ವರಗಳನ್ನು ಸೂಚಿಸುತ್ತ)

ನಾರದ:— ಏಕಃ ತ್ವಮಾತ್ಮಾ ಪುರುಷಃ ಪುರಾಣಃ ಸತ್ಯಃ ಸ್ವಯಂಜ್ಯೋತಿರನಂತ ಆದ್ಯಃ ॥ ನಿತ್ಯೋಽಕ್ಷರೋಽಜಸ್ರ ಸುಖೋ ನಿರಂಜನಃ । ಪೂರ್ಣೋಽದ್ವಯೋ ಮುಕ್ತ ಉಪಾಧಿತೋಽಮೃತಃ ॥

(ಹಾಡು ಮುಗಿದಕೂಡಲೇ—)

ಆಹಾ ! ಇದೀಗ ಉಪಾಯವು ಹೊಳೆಯುವುದು ! ಯುಯೇಝು, ಪಾನಾಮಾ, ಯುನೇಸ್ಕೋ ಇತ್ಯಾದಿ ನೂತನಗಳಾಗಿ ಸೃಜಿಸಲ್ಪಟ್ಟ ಸಮಸ್ಯೆಗಳಲ್ಲಿ ಶಾಂತಿಯೆಂದಿಗೂ ದೊರಕಲಾರದು. ತ್ರಿವೇಣೀಸಂಗಮ ಕ್ಷೇತ್ರದಲ್ಲಿ ಶ್ರೀವೇದವ್ಯಾಸ ಮಹರ್ಷಿಯು ತಪೋನಿಷ್ಠನಾಗಿ ಸಮಾಧಿಸ್ಥನಾಗಿರುವನು. ಅವನ ಬಳಿಗೀಗ ಹೋಗುವೆನು. ನಾವಿಬ್ಬರೂ ಸೇರಿ ಲೋಕಕಲ್ಯಾಣ ಕಾರ್ಯದಲ್ಲಿ ಪ್ರವೃತ್ತಿಸುವೆವು. ಲೋಕಾಃ ಸಮಸ್ತಾಃ ಸುಖಿನೋ ಭವಂತು–ಸಮಸ್ತ ಸನ್ಮಂಗಲಾನಿ ಭವಂತು !!

ಪುರು:— ಶಿವಾಸ್ತೇ ಪಂಥಾನಃ ಸಂತು ! ಜಯವಿಜಯೀಭವ !

(ನಾರದರು ಹರಿಗುಣಗಾನ ಮಾಡುತ್ತ ತೆರಳುವರು.

(ಪುರುಷೋತ್ತಮನ ಅಂತರ್ಧಾನ. ತೆರೆಯು ಬೀಳುವುದು)

೨ನೆಯ ದೃಶ್ಯ

(ವೇದವ್ಯಾಸ ಮಹರ್ಷಿಗಳು ತ್ರಿವೇಣೀ ಸಂಗಮಕ್ಷೇತ್ರದಲ್ಲಿ ಸುಖಿಭೂತರಾಗಿ, ಸಮಾಧಿನಿಷ್ಠವಾಗಿರುವರು. ಆಗ ಹರಿಗುಣ ಗಾನಮಾಡುತ್ತ ನಾರದರ ಪ್ರವೇಶ),

ವೇದವ್ಯಾಸ:— ಏನಿದು ವಿಚಿತ್ರ ! ನನ್ನ ಸಮಾಧಿಧ್ಯಾನದಲ್ಲಿ ಪುರುಷೋತ್ತಮನ ಪರಂಜ್ಯೋತಿಯು ಮರೆಯುವಾಗಲೇ ಅಂತರಿಕ್ಷದಲ್ಲಿ ದಿವ್ಯವಾದ ಹರಿಗುಣಗಾನವು ಕೇಳಬರುತ್ತಿರುವುದಲ್ಲಾ ! ಏನು? ಪರಮಾತ್ಮನೇ ನನ್ನನ್ನನುಗ್ರಹಿಸಲು ಬರುವನೋ ? ಛೆ, ಅಲ್ಲ, ಎಲ್ಲಿಯೋ ಮುಂಚೆ ಕೇಳಿದಂತಿರುವುದಲ್ಲಾ ಈ ಮಧುರ ಕಂಠ ! .... ಹೋ ! ಹೋ ! ಗೊತ್ತಾಯಿತು ! ಪರಮಮಿತ್ರರಾದ ನಾರದರೇ! ಸುಸ್ವಾಗತವು, ಅನಂತಾನಂತ ವಂದನೆಗಳು ! ಏನಯ್ಯಾ ! ಅಪೂರ್ವಭೇಟಿ ?

ನಾರದ:— ವ್ಯಾಸರೇ, ನಿಮ್ಮ ಸ್ವರದಲ್ಲಿ ಏನೋ ದುಃಖವು ಉಕ್ಕಿಬರುವಂತಿದೆಯಲ್ಲಾ ! ನಿಮ್ಮ ಮನದ ದುಗುಡವೇನು ? ಸ್ವಲ್ಪ ವಿವರಿಸಬಾರದೇ ?

ವ್ಯಾಸ:— ಪುರುಷೋತ್ತಮನ ಆಜ್ಞೆಯನ್ನು ಶಿರಸಾವಹಿಸಿ ಲೋಕಕ್ಷೇಮಾರ್ಥವಾಗಿಯೇ— ಲೋಕಕ್ಕೆ ವೇದಗಳನ್ನನುಗ್ರಹಿಸಿ, ಉಪನಿಷತ್ತು, ಬ್ರಹ್ಮಸೂತ್ರ, ಭಗವದ್ಗೀತೆಗಳೆಂಬ ಪ್ರಸ್ಥಾನತ್ರಯವನ್ನು (A B C of philosapby) ಕರುಣಿಸಿಯೂ ಆಯಿತು. ಅವುಗಳ ಅರ್ಥಗಳನ್ನು ವಿವರಿಸುವರೆ ನನ್ನ ಪ್ರಿಯ ಶಿಷ್ಯರಾದ ಶಂಕರ, ರಾಮಾನುಜ, ಮಧ್ವರನ್ನು ಧರ್ಮದ ಗ್ಲಾನಿ ಅಥವಾ ಹ್ರಾಸವಾಗುವ ಸಂದರ್ಭ ತೋರಿದಾಗ, ಸಮಸ್ತ ಜನರ ಸ್ಥೇಮ-ಕ್ಷೇಮಗಳನ್ನುದ್ದೇಶಿಸಿ, ಧರ್ಮಪ್ರಚಾರವನ್ನು ಮಾಡುವರೆ ಕಳುಹಿಸಿದೆನು. ಆದರೇನು ಮಾಡಲಿ ? ಜನರೆಲ್ಲರೂ ನನ್ನ ಮಾತಿಗೆ ಅಪಾರ್ಥವನ್ನು ಕಲ್ಪಿಸಿ, ತಾವೇ ದೇವರೆಂದು, ಇಡೀ ಲೋಕದ ಸೊತ್ತೂ ತಮಗೇ ಬಂದು, ತಾವೇ ಉಳಿದವರೆಲ್ಲರ ಮೇಲೆ ಅಧಿಕಾರದ ದಬ್ಬಾಳಿಕೆಯನ್ನು ಚಲಾಯಿಸಬೇಕೆಂಬ ಇರಾದೆಯುಳ್ಳವರಾಗಿದ್ದಾರೆ. ಲೋಕದ ಜನರೆಲ್ಲರೂ ರೆಕ್ಕೆಗಳನ್ನು ಕಟ್ಟಿಕೊಂಡು ಆಕಾಶದಲ್ಲಿ ಹಾರಿ, ನೀರಿನೊಳಗೂ ಒಬ್ಬರಿಗೂ ತಿಳಿಯದಂತೆ ಸಂಚರಿಸಬಲ್ಲ ಶಕ್ತಿಯನ್ನು ಸಾಧಿಸಿಕೊಂಡಿದ್ದಾರೆ. ಇಷ್ಟು ಮಾಡಿಯೂ ತೃಪ್ತರಾಗದೆ, ಯಮನ ಪಟ್ಟಣಕ್ಕೆ ಪ್ರತಿ ನಿಮಿಷದಲ್ಲಿಯೂ— ಈ ಹೊತ್ತು ಅರಿಯಲೂರ್ ಟ್ರಾಜೆಡಿಯಂತೆ, ನಿನ್ನೆ ಸರವನ್ disaster ಅಂತೆ, ಮೊನ್ನೆ Pearl Harbourನಲ್ಲಿ ಹಡಗುಗಳು ಮುಳುಗಿದವಂತೆ, (—ರತ್ನಾಕರನ ರತ್ನಗಳನ್ನು ಹೆಚ್ಚಿಸುವುದರಲ್ಲಿ ಪ್ರವೃತ್ತರಾಗಿಯೋ ತಿಳಿಯದು –) ಎಲ್ಲಾ ಪ್ರಾಯದವರನ್ನೂ ನಿಷ್ಪಕ್ಷಪಾತವಾಗಿ ಅಟ್ಟುತ್ತಾರಂತೆ. ಹೀಗಾಗಿ ಯಮನು ಕಾಲ, ಅಂತಕ, ಯಮ— ಈ ಮೂರು ರೂಪಗಳನ್ನೂ ಏಕಕಾಲದಲ್ಲಿಯೇ ತಾಳಿ, ಈಗ ಕಾಲಾಂತಕ ಯಮನಾಗಿ, ಶ್ವಾಸಬಿಡಲೂ ಅವಕಾಶ ದೊರಕದೆ ಬಾಗಿಲಲ್ಲಿಯೇ ಕುಳಿತಿರುವನು. ಪ್ರಾಯಶಃ ಈ ಜನರನ್ನು ಕೊಲ್ಲುವ ನೂತನ ಯಂತ್ರಗಳೂ ಹೆಚ್ಚಾದಂತೆ ಯಮಧರ್ಮರಾಜನೂ ತನ್ನ ಕೆಲಸಕ್ಕೇ ರಾಜೀನಾಮೆ ಕೊಡುವ ಆಲೋಚನೆಯನ್ನು ಮಾಡಿದ್ದಾನೆಂದು, ನಿನ್ನೆ ತಾನೇ ಯೂರೋಪಾಮಾದಲ್ಲಿ ಸಮಾಚಾರವಿತ್ತರು. ಅವನ ನರಕಗಳಲ್ಲಿ ಜಾಗವು ಕೂಡ ಕಮ್ಮಿಯಾಗಿದೆಯಂತೆ ! ಈಗ Supreme Accomodation Controllerರಿಗೂ ಹೊಸ ಮನೆಗಳಿಗೆ ಅರ್ಜಿ ಹಾಕಿದ್ದಾನಂತೆ !

ನಾರದ:— ಇದೀಗ ನಾನು ನಾಲ್ಕುಂದಾದಿಂದ ಬಂದದ್ದು. ಅಲ್ಲಿಯೂ ಪುರುಷೋತ್ತಮನೂ ಇದೇ ವಾರ್ತೆಯನ್ನೇ ರೂಪಾಂತರದಿಂದ ನನಗೆ ತಿಳಿಸಿದನಲ್ಲಾ ! ಎಲ್ಲಿ ಹೋದರೂ ಒಂದೇ ಕತೆ. ಪುರುಷೋತ್ತಮನೊಡನೆ ಇದಕ್ಕೊಂದುಪಾಯವನ್ನೂ ಹೂಡುವೆನೆಂದೂ ಕೊಚ್ಚಿಕೊಂಡು ಬಂದೆನಲ್ಲಾ ! ಏನಾದರೂ ಹಾದಿ ತೋರಿಸಬಾರದಾ, ವ್ಯಾಸರೇ !

ವ್ಯಾಸ:— ಏನು ? ಪುರುಷೋತ್ತಮನು ವೈಕುಂಠವನ್ನೆಂದು ಬಿಟ್ಟೇನು ?

ನಾರದ:— ಅವನಿಗೆ ವೈಕುಂಠದಲ್ಲಿ ಸುಖವೇ ದೊರಕಲಿಲ್ಲ-ವಂತೆ! ಕೈಲಾಸದಲ್ಲಿ ವಿಪರೀತ ಚಳಿಯಾಯಿತಂತೆ! ಸತ್ಯಲೋಕ ದಲ್ಲಿ ಬ್ರಹ್ಮನ ವೇದಪಾರಾಯಣದ ಗಲಾಟೆಯೇ ಅಸಹ್ಯವಾಯಿತಂತೆ. ಈಗ ಇಡೀ ಭೂಮಂಡಲದಲ್ಲಿಯೂ ಸುತ್ತಿ ಸುತ್ತಿ ಬೇಸತ್ತು, ತಾನೆಷ್ಟು ಲೋಕಕ್ಕೆ ಕರುಣಿಸಿದರೂ ಸಾಲದೆಂದು ತನ್ನ ಮನಸ್ಸಿನಲ್ಲಿಯೇ ಹೊಳೆದು, ಕೇವಲ ಲೋಕಾನುಗ್ರಹಬುದ್ಧಿಯಿಂದ, ಹಾಳುಬಿದ್ದ ಒಂದು ಗುಡಿಸಿಲಿನಲ್ಲಿ—ನಾಲಂದಾ ಎಂಬ ಪುರಾತನ ವಿಶ್ವವಿದ್ಯಾನಿಲಯದ ಅವಶೇಷಗಳ ನಡುವಿನಲ್ಲಿ—ತಪಸ್ಸು ಮಾಡುತ್ತಿದ್ದಾನೆ. ಈಗ ತಾನೇ ಕಂಡುಬಂದೆ.

ವ್ಯಾಸ:— ಏನು, ಪುರುಷೋತ್ತಮನ ತಪಸ್ಸು ? ಆತನ ತಪಸ್ಸಿಗೆ ಫಲವನ್ನು ಅದಾವ ಲಕ್ಷ್ಮಿ ಕೊಡುವುದಂತೆ !

ನಾರದ:— ಅದೇನು ಪ್ರಮಾದ! ಅನಂತಾನಂತಮೂರ್ತಿ-ಗಳುಳ್ಳ ಪುರುಷೋತ್ತಮನು, ತಾನು ತನ್ನ ದಿವ್ಯ ಮಂಗಳಮೂರ್ತಿ-ಗಳಲ್ಲಿ ಒಬ್ಬನೆಂದಾಗಿ ಭಾವಿಸಿಕೊಂಡು, ಇನ್ನೊಂದು ಅದಾವುದೋ ಮೂರ್ತಿಯನ್ನದೇಕೆ ಧ್ಯಾನಿಸಕೂಡದು ?

ವ್ಯಾಸ:— ಸರಿ ಸರಿ! ಈಗ ನಮ್ಮ ಪ್ರಸ್ತುತದ ಕೆಲಸವೇನು?

ನಾರದ:— ಅದನ್ನೇ ನಾನು ನಿಮ್ಮಲ್ಲಿ ಕೇಳುತ್ತಿದ್ದೇನಲ್ಲವೇ ? ನೀವೇ ಹೇಳಿ!

ವ್ಯಾಸ:— ಏನು ನಾನೇ ಹೇಳಬೇಕೆ? ಏನನ್ನು ಹೇಳಲಿ ? (ಚಿಂತಾಮಗ್ನನಾಗುವನು).

(ಆಕಾಶವಾಣಿಯಾಗುವುದು). ಪ್ರಿಯ ದೂತರೇ! ನಿಮ್ಮಿರ್ವರ ತಪಸ್ಸಿಗೆ ಮೆಚ್ಚಿವೆ. ಈಗಲೇ ನಿಮ್ಮ ಪ್ರಿಯಶಿಷ್ಯರಾದ ಶಂಕರ, ರಾಮಾನುಜ, ಮಧ್ವರನ್ನು ಪುನಃ ಲೋಕೋದ್ಧಾರಕ್ಕೆ ಅವತರಿಸು-ವಂತೆ ಉತ್ತೇಜಿಸಿರಿ! ಸಂಗಚ್ಛಧ್ವಂ ಸಂವದಧ್ವಂ ಸಂವೋಮನಾಂಸಿ ಜಾನತಾಂ! ಭದ್ರಂ ಶುಭಂ ಮಂಗಳಂ! ಪರದೆ (ಬೀಳುವುದು).

ಮೂರನೆಯ ದೃಶ್ಯ

(ಮೈಸೂರಿನ ವೃಂದಾವನ-ಮೊದಲೊಂದು ಬದಿಯಿಂದ ಬಂದು ಶಂಕರರು ಪರಿತಪಿಸುತ್ತಿರುವಾಗ, ರಾಮಾನುಜ-ಮಧ್ವರಿಬ್ಬರೂ, ಇನ್ನೊಂದು ಕಡೆಯಿಂದ ಅಲ್ಲಿಗೇ ಬರುವರು ಸ್ವಲ್ಪ ಹೊತ್ತು ಮೊದಲು ಶಂಕಿಸಿದರೂ, ಕಡೆಗೆ ಪ್ರೇಮದಿಂದ ಆಲಿಂಗಿಸಿಕೊಳ್ಳುವರು. ಅವರೆಲ್ಲರ ಕೈಯಲ್ಲಿಯೂ ಇರುವ ಚಿಂತಾಮಣಿಯ ಪ್ರಭಾವದಿಂದ ಎದುರಾಳಿಯ ಹೃದಯವನ್ನೇ ಸಂಪೂರ್ಣವಾಗಿ ಅರಿಯುವ ಸಾಮರ್ಥ್ಯವುಳ್ಳವರಾಗಿದ್ದಾರೆ)—

ಶಂಕರ ಭಗವತ್ಪಾದ:— ವೇದವ್ಯಾಸರು ನನ್ನನ್ನೀಸಲ ಅವ-ತಾರ ಕಾರ್ಯಕ್ಕೆ ನಿಯಮಿಸಿದಾಗ, ಈ ಚಿಂತಾಮಣಿಯನ್ನೂ

ದಿ ನ್ಯಾಶನಲ್ ಮ್ಯುಜಿಕಲ್ ಹಾಲ್
ಧಾರವಾಡ

ಗಡಿಯಾರ, ಚಾಳೀಸು, ರೇಡಿಯೊ, ಗ್ರಾಮೊಫೋನ್
ಮಾರಾಟಮಾಡುವವರು, ರಿಪೇರಿ ಮಾಡುವವರು.

ನಂಬುಗೆಯ ಮಾಲು! ಪ್ರಾಮಾಣಿಕ ವ್ಯವಹಾರ

ಧಾರವಾಡದಲ್ಲಿ ಹಲವು ವರ್ಷಗಳಿಂದ ನಮ್ಮ ವ್ಯವಹಾರ
ನಡೆದಿದ್ದು, ಗ್ರಾಹಕರ ವಿಶ್ವಾಸಾದರಗಳನ್ನು ಗಳಿಸಿದೆ.

ಮಾಲಕರು: ಬಿ. ಜಿ. ಮುತ್ತಗಿ

ಅನುಗ್ರಹಿಸಿರುವರು. ಈಗ ಅಲ್ಲಲ್ಲಿ ಸಂಚರಿಸಿ, ಈಗಿನ ನೂತನ ಅವತಾರದ ಪ್ರಯೋಜನವನ್ನು ಜನರು ಪಡೆಯುವಂತೆ ಮಾಡುವೆನು. (ಅಲ್ಲಲ್ಲಿ ಸಂಚರಿಸಿ,) ಅಯ್ಯೋ! ಇದೇನಿದು! ಜನರಲ್ಲಿ ಹೆಚ್ಚಿನವರು ನನ್ನ ಅನುಯಾಯಿಗಳೇನೋ ಹೌದು; ಆದರೆ ದೇವರೇ ಸರ್ವವೆಂದು ನಾನು ಹೇಳಿ, ಪರಮಾತ್ಮನ ವಿಶ್ವಾತ್ಮತ್ವವನ್ನು ಮಾತ್ರ ನಾನು ಬೋಧಿ-ಸಿದ್ದರೆ, ಜನರು ಅದನ್ನು ಸಂಪೂರ್ಣ ಬದಲಿಸಿ, ಸರ್ವವೇ ಅಂದರೆ ತಾವೇ ದೇವರೆಂದು ಹೆಮ್ಮೆಯಿಂದ ಕುಣಿಯುತ್ತಿರುವರಲ್ಲವೇ ? ಎಲ್ಲಿ ಆದರೂ ಅವರು ಯುದ್ಧದಲ್ಲಿಯೋ ಇನ್ನೆಲ್ಲಿಯೋ ಗೆದ್ದರೆ, Cross ward pazzle ಅಥವಾ Races—ಇವುಗಳ ಹೆಸರನ್ನೂ ಕೂಡ ನನಗೆ ಸರಿಯಾಗಿ ಉಚ್ಚರಿಸಲೂ ಬಾರದಲ್ಲಾ-ಇವುಗಳಲ್ಲಿ ಸಾವಿರಾರು ರೂಪಾಯಿ ಬಂದಾಗ ಮಾತ್ರ, ತಾವೇ ಗೆದ್ದೆವೆಂದು ಎದೆತಟ್ಟಿಕೊಂಡು ನಾಕಷ್ಟು ಕಡೆಗಳಲ್ಲಿ ಪ್ರತಿಷ್ಠೆಯನ್ನು ಕೊಚ್ಚಿಕೊಳ್ಳುವರು. ಎಲ್ಲವರಿಗೂ ಇದು ಪ್ರಕಟವಾಗುವಂತೆ ದೈನಿಕ ಪತ್ರಿಕೆಗಳಲ್ಲಿಯೋ, ಇನ್ನಿತರರ ಮೂಲಕವೋ. ಇದನ್ನು ಪ್ರಚುರಪಡಿಸಿಯೇ ಬಿಡುವರು ಆದರೆ,.... ಆದರೆ, ತಾವು ಆರಂಭಿಸಿದ ಕಾರ್ಯವು ಮಾತ್ರ, ವಿಫಲವಾಯಿತೆಂದರೆ, ಆದರ ಸುಳಿವೇ ದೊರಕುವುದೂ ಕಷ್ಟವಾಗಿ, ತಮ್ಮ ಜಾತಕದಲ್ಲಿ ಯಾವುದೋ ಗ್ರಹಕ್ಕೆ ವಕ್ರದೃಷ್ಟಿಯೆನುವುದು ಮಾತ್ರವಲ್ಲವೆ ಪುರು-ಷೋತ್ತಮನೇ ಅವರನ್ನು ಕೊಂಡಕ್ಕೆ ದೂಡಿದನೆಂದು. ಸರ್ವಸಾಕ್ಷೀಭೂತನಾಗಿ ಸರ್ವಸುಹೃತ್ತಾಗಿರುವ ದೇವರನ್ನೇ ದೂರಲು ಹಿಂದೆ ಮುಂದೆ ನೋಡುವುದಿಲ್ಲವಲ್ಲ! 'ಸಂಕಟ ಬಂದಾಗ ವೆಂಕಟರಮಣ' ಎಂದ— ತನ್ನ ನೆನಪರಿಕೆಯನ್ನು ಮಾಡಿದ-ಭಕ್ತ ಜನರಿಗೆ, ಅವರ ಸಂಕಟಗಳನ್ನು ನೀಗಿಸಲು, ಕಾದಿರುವ ಕರುಣಾಮೂರ್ತಿಯ ಮೇಲೆ ಅಲ್ಲದಸಲ್ಲದ ಅಪವಾದಗಳನ್ನು ಹೊರಿಸಲು ತಯಾರಾಗಿದ್ದಾರೆ ಈ ಜನರು! ಪರಮಾತ್ಮನು ಮನುಷ್ಯರಿಗಾಗಿ ಎಷ್ಟು ಕಷ್ಟವನ್ನೂ ಭಾರವನ್ನೂ ಹೊರಲು ತಯಾರಾಗಿದ್ದಾಗ, ಆತನ ಉಪಕಾರಗಳನ್ನು ಎಳ್ಳಷ್ಟೂ ಎಣಿಸದ ಮನುಷ್ಯರು ಬಾಯಿಗೆ ಬಂದಂತೆ ಸಿಕ್ಕಸಿಕ್ಕವರನ್ನು, ಎದುರಿನಲ್ಲಿದ್ದವ-ರನ್ನು ದೇವರನ್ನೂ ಸಹ ಬೈಯಲಾರಂಭಿಸುವರಲ್ಲವೇ? ಇನ್ನೇನು ಗತಿ!

ಶಾಂತಿಸೇವಾಸದನದ ಹೊಸ ಪ್ರಕಟಣೆಗಳು

		ರೂ. ನ. ಪೈ.
ಜೈನಧರ್ಮ		೧೫—೦
ಶ್ರೀ. ಮಿರ್ಜಿ ಅಣ್ಣಾರಾಯರು		
ಭಾರತದ ಬೆಳಕು	,,	೧—೦
ಭಾರತೀಯ ಸಂಸ್ಕೃತಿಯ ಹೃದಯ	,,	೧—೬೨
ಸಮಯಸಾರ	—	೧—೫೦
ಶ್ರೇಯಾಂಸ (೨ ಭಾಗ)	,,	೩—೦
ಮೂಲಶಿಕ್ಷಣದ ಮೌಲ್ಯಮಾಪಣ	,,	೦—೭೫
ಭರತೇಶನ ನಾಲ್ಕು ಚಿತ್ರಗಳು	,,	೧—೨೫
ಕೆನೆಮೊಸರು (ಮಕ್ಕಳ ಕತೆ)	,,	೦—೨೫

ಪ್ರತಿಗಳಿಗಾಗಿ ಬರೆಯಿರಿ:

ಶಾಂತಿ ಸೇವಾಸದನ, ಸೇಡಬಾಳ
ಪೋ. ಸೇಡಬಾಳ (ಜಿಲ್ಲಾ ಬೆಳಗಾಂವಿ)

(ಅಷ್ಟಾಗುವಾಗ ದೂರದಲ್ಲಿ ರಾಮಾನುಜ ಭಗವತ್ಪಾದ, ಮಧ್ವಭಗವತ್ಪಾದರಿಬ್ಬರು ಬರುವುದನ್ನು ಕಾಣುವನು—ಕೈಯನ್ನು ಹಣೆಯ ಮೇಲೆ ಅಡ್ಡವಾಗಿಟ್ಟುಕೊಂಡು ಕುತೂಹಲದಿಂದ ನೋಡುವನು) ಓಹೋ! ಮಿತ್ರವರ್ಯರಾದ ರಾಮಾನುಜ-ಮಧ್ವರೇ, ಬಹಳೇ ದಿನಗಳಾದುವಲ್ಲಾ ನಿಮ್ಮನ್ನು ಕಂಡು! ಮೊದಲು ಕಂಡಾಗ ಜಗಳದಲ್ಲಿಯೇ ದೃಷ್ಟಿ—ಚಿಕ್ಕಂದಿನಲ್ಲಿ ಮಕ್ಕಳಬುದ್ಧಿ ಹೀಗೇ ಅಲ್ಲವೆ? ಈಗ ನಾವು ವಯಸ್ಸಾದನಂತರವಾದರೂ ಹಳೆಯ ವೈಷಮ್ಯಗಳನ್ನು ಮರೆತು, ಸಂತೋಷದಿಂದ ಒಬ್ಬರನ್ನೊಬ್ಬರು ತಬ್ಬಿಕೊಂಡು ಭಜಗೋವಿಂದ ಗೀತವನ್ನು ಹಾಡೋಣವೆ?

ರಾಮಾನುಜ:— (ಸಂದೇಹದಿಂದ ಕಣ್ಣೊತ್ತಿಕೊಂಡು)— ಅತ್ಯುದಾತ್ತವಾದ ಅಭಿಪ್ರಾಯ; ಹಾಗೇಯೆ ಮಾಡೋಣ. ಈವಾಗಲೇ ನೂತನ ಕರ್ನಾಟಕ ಪ್ರಾಂತದ ರಚನೆಯಾಯಿತೆಂದು ಕೇಳಿದೆ. ಕನ್ನಡಿಗರಲ್ಲಿ ಕೆಲವರು ಮೈಸೂರು ಕನ್ನಡ, ಬಳ್ಳಾರಿ ಕನ್ನಡ, ಧಾರವಾಡ ಕನ್ನಡ, ಮಂಗಳೂರು ಕನ್ನಡವೆಂದು ಹೇಳುತ್ತಾ ಇರುವರಂತೆ! ಇದನ್ನು ಹೇಗಾದರೂ ತಡೆಹಾಕೋಣವೇ?

ಮಧ್ವ:— ಉತ್ತಮವಾದ ಪಕ್ಷ. ಸೌಭ್ರಾತ್ರ ಅಥವಾ ಅಣ್ಣ-ತಮ್ಮಂದಿರ ಅನ್ಯೋನ್ಯವೇ ಜಗತ್ತಿನಲ್ಲಿ ಎಲ್ಲಾ ಕಡೆಗಳಲ್ಲಿರುವಂತೆ, ಪುರುಷೋತ್ತಮನೇ ಸದ್ಬುದ್ಧಿಯನ್ನು ಕರುಣಿಸಲಿ!

ಶಂಕರ:— ಭಜಗೋವಿಂದಂ ಭಜಗೋವಿಂದಂ ಭಜಗೋವಿಂದಂ ಮೂಢಮತೇ। ಸಂಪ್ರಾಪ್ತೇ ಸಂನಿಹಿತೇ ಕಾಲೇ ನಹಿನಹಿ ರಕ್ಷತಿ ಡುಕೃಞ್ಕರಣೇ॥ ಎಂದು ಸ್ವರಗೂಡಿಸಿ ಹಾಡೋಣ (ಎಲ್ಲರೂ ಒಂದಾಗಿ ಹಾಡುವರು)

ರಾಮಾನುಜ:— ಹೇ, ಪರಮಾತ್ಮ!

ಸ್ವಸ್ಯ ತ್ವತ್ಪಾದಪದ್ಮೇ ನಿಜಭರಮತುಲಂ ನಿರ್ಭರೋ ನಿರ್ಭಯೋಸ್ಮಿ! ನಿನ್ನಲ್ಲಿಯೇ ಸರ್ವಭಾರವನ್ನೂ ಅರ್ಪಿಸಿ, ಸಂಸಾರದ ಭಯವನ್ನೇ ಮರೆಯುವೆನು— (ಎಲ್ಲರೂ ಸೇರಿ ಹಾಡುವರು)

ಮಧ್ವ:— ಕುರು, ಭುಂಕ್ಷ್ವ ಚ ಕರ್ಮ ನಿಜಂ ನಿಯತಂ
ಹರಿಪಾದ ವಿನಮ್ರಧಿಯಾ ಸತತಮ್
ಹರಿರೇವಪರೋ ಹರಿರೇವಗುರುಃ
ಹರಿರೇವ ಜಗತ್ಪಿತೃ-ಮಾತೃಗತಿಃ॥

ಹೇ ಲೋಕದ ಸಮಸ್ತ ಜನರೇ, ನಿಮ್ಮ ನಿಮ್ಮ ಸ್ವಧರ್ಮಗಳನ್ನು ಯಥಾವತ್ತಾಗಿಮಾಡಿರಿ. ಲೋಕದಲ್ಲಿ ಸುಖಸಂಪತ್ತುಗಳನ್ನೂ ಪಡೆದು ಅನುಭವಿಸಿರಿ; ಆದರೆ ಎಲ್ಲವನ್ನೂ ಹರಿಪಾದದಲ್ಲಿಯೇ ಭಕ್ತಿಯನ್ನಿಟ್ಟು, ಆತನ ಅನುಗ್ರಹವನ್ನೇ ಕೋರುತ್ತ, ಪ್ರತಿಯೊಂದು ಕಾರ್ಯಗಳನ್ನೂ ಮಾಡಿರಿ! ಹರಿಯೇ ಸರ್ವೋತ್ತಮನು, ಈ ಜಗತ್ತಿಗೆ ತಂದೆ, ತಾಯಿ ಮತ್ತು ನಮ್ಮ ಸಂಸಾರಾಂತ್ಯದಲ್ಲಿ ಪ್ರಾಪ್ಯನಾದ, ಸರ್ವ ಶ್ರೇಯಸ್ಸುಗಳನ್ನೂ ಕರುಣಿಸಲು ಕಾದಿರುವವನೂ ಅವನೇ! ತಿಳಿಯಿತೇ?

(ಎಲ್ಲರೂ ಸೇರಿ ಬೇಲೂರು ದೇವಾಲಯಕ್ಕೆ ನಡೆದು, ಆದರೆದುರು ಬರೆದುದನ್ನೋದುವರು) ....ಸೋಽಯಂ ವೋ ವಿದಧಾತು ವಾಂಛಿತಫಲಂ ತ್ರೈಲೋಕ್ಯನಾಥೋ ಹರಿಃ—ಶೈವರು ಇವನನ್ನು ಶಿವನೆಂದು, ವೇದಾಂತಿಗಳು ಬ್ರಹ್ಮನೆಂದು, ಬೌದ್ಧರು ಬುದ್ಧನೆಂದು, ಪ್ರಮಾಣವನ್ನೇ ಆದರಿಸುವವರಾದ ನೈಯಾಯಿಕರು ಕರ್ತನೆಂದು, ಜೈನರು ಅರ್ಹಂತನೆಂದು, ಮೀಮಾಂಸಕರು ಕರ್ಮವೆಂದು, ಕ್ರೈಸ್ತರು ಕ್ರಿಸ್ತನೆಂದು, ಯೆಹೂದ್ಯರು ಜೆಹೋವನೆಂದು, ಮಹಮ್ಮದೀಯರು ಅಲ್ಲಾ ಎಂದು, ಇವನನ್ನೇ ಕರೆಯುವರು. ಈ ತ್ರೈಲೋಕ್ಯನಾಥನಾದ ಪುರುಷೋತ್ತಮನೇ ಜನರೆಲ್ಲರಿಗೂ ಅವರವರ ಇಷ್ಟಫಲಗಳನ್ನು ಕರುಣಿಸಲಿ! ಭಕ್ತಿಚಂದ್ರನು ಕರುಣಿಸಲಿ! ಪೂರ್ಣಚಂದ್ರನಾಗಿಯೇ ಉದಯಿಸಲಿ! ಲೋಕದಲ್ಲಿ ಶಾಂತಿ, ಸೌಭ್ರಾತ್ರ, ದಾಂಪತ್ಯ ಪ್ರೇಮಗಳೆಲ್ಲವೂ ಉಕ್ಕಿ ಉಕ್ಕಿ ಬರಲಿ! ಶಾಂತಿಃ, ಶಾಂತಿಃ ಶಾಂತಿಃ! ನಾವೆಲ್ಲರೂ ಈ ಲೋಕದಲ್ಲಿ ಕುರುಡರಂತಿದ್ದು, ಆನೆಯನ್ನು ಮುಟ್ಟಿದ ಬೇರೆ ಬೇರೆ ಕುರುಡರು ಬೇರೆ ಬೇರೆ ಅವಯವಗಳನ್ನು ಮುಟ್ಟಿ, ವಿವಿಧವಾಗಿ ಇಷ್ಟರವರೆಗೆ ವರ್ಣಿಸಿದ್ದಾಯಿತಲ್ಲವೆ! ಇನ್ನು ಎಲ್ಲರನ್ನು ಪೋಷಿಸುವ ಗಾಯತ್ರೀ ಮಂತ್ರವನ್ನು ಜಪಿಸುವಾ! ವಿಶ್ವಾಮಿತ್ರರಾಗಿ ಹುಟ್ಟಿರುವ ನಾವು, ಮನೋವಾಕ್ಕಾಯ ಶುದ್ಧಿಯಿಂದ ಪೂರ್ಣನಾದ ಪುರುಷೋತ್ತಮನನ್ನೇ ಅನನ್ಯವಾದ ಭಕ್ತಿಯಿಂದ ಧ್ಯಾನಿಸುತ್ತ, ಆತನ ಪ್ರಸಾದಕ್ಕೆ ಪಾತ್ರರಾಗೋಣ—ಎಲ್ಲರೂ ಸ್ವರಗೂಡಿಸಿ ಭಾರತವಾಕ್ಯವನ್ನು ಈಗ ಹಾಡೋಣ—

ಪೂರ್ಣಮದಃ ಪೂರ್ಣಮಿದಂ ಪೂರ್ಣಾತ್ಪೂರ್ಣಮುದಚ್ಯತೇ।
ಪೂರ್ಣಸ್ಯ ಪೂರ್ಣಮಾದಾಯ ಪೂರ್ಣಮೇವಾವಶಿಷ್ಯತೇ॥

ಭದ್ರಂ! ಶುಭಂ!! ಮಂಗಳಂ!!!

ನಾ ಕಂಡ ಬೆಂಗಳೂರು

(ಒಂದು ಪರಿಚಯಾತ್ಮಕ ದಿನಚರಿ)

ಶ್ರೀ. ನಗರ ಕೃಷ್ಣಾಚಾರ್ಯ ಬಿ. ಎ. ಬಿ. ಇಡಿ. ರಂಗಂಪೇಟೆ

卐

ಬೆಂಗಳೂರು ಬಹಳ ಜನರಿಗೆ ಪರಿಚಯದ ಪಟ್ಟಣವಾದರೂ ನೋಡುವವರ ದೃಷ್ಟಿ, ಅನುಭವಗಳು ಹೊಸ ಹೊಸ ಬಗೆಯವು ಆಗಿರುವುವು. ಒಬ್ಬರ ವ್ಯಂಗ್ಯ ಟೀಕೆಗೆ ಗುರಿಯಾಗಬಹುದಾದ ಸ್ಥಳಗಳೇ ಇನ್ನೊಬ್ಬರ ಬಣ್ಣನೆಗೆ ಪಾತ್ರವಾಗಬಹುದು !

卐

ಮೊದಲ ಮಾತು:— ಶ್ರೀ ಹುಯಿಲಗೋಳ ನಾರಾಯಣರಾಯರ, 'ಉದಯವಾಗಲಿ ನಮ್ಮ ಚೆಲುವ ಕನ್ನಡನಾಡು' ಎಂಬ ಪದ್ಯವನ್ನು ಹಾಡಿ ಹಾಡಿ, ಕೊನೆಗೆ ಕನ್ನಡ ನಾಡನ್ನು ?—ಮೈಸೂರು ರಾಜ್ಯವನ್ನು–ಪಡೆದದ್ದಾಯಿತು. ಬಯಸಿ ಬಾಳೆಯಹಣ್ಣು ತಿನ್ನ, ಹೋದರೆ ಕಿಸಿಗಾಲು ಮಗ ಹುಟ್ಟಿದನೆಂದು ಅನೇಕರು ಗೊಣಗುಟ್ಟಿದರೂ, ಹುಟ್ಟಿದ ಮಗುವೇ ಸುಸ್ವರೂಪಿ,–ಎಂದು ಹೇಳದೆ ಗತ್ಯಂತರವಿಲ್ಲ. ಇಂದಿನ ಮೈಸೂರು ಮುಂದಿನ ಕರ್ನಾಟಕ—ಕರ್ಣಾಟಕ ಏನಾದರೂ ಆಗಬಹುದು !—ಆಗೇ ಆಗುವುದು !

ಆಡಯ್ಯ (ಆಂಡಯ್ಯ) ಕವಿ ನಮ್ಮ ನಾಡನ್ನು ಬಾಯಿತುಂಬ ಹೊಗಳಿ ಬಹುವಾಗಿ ಪ್ರಶಂಸಿಸಿದ್ದಾನೆ. ಆತನ ಕನ್ನಡನಾಡಿನ ವರ್ಣನೆ ಹೃದಯಂಗಮವಾಗಿದೆಯಷ್ಟೇ ಅಲ್ಲ; ಹೆಮ್ಮೆಪಟ್ಟುಕೊಳ್ಳುವಂತಹದೂ ಆಗಿದೆ ಇಂಥ ನಾಡನ್ನು, 'ಪಲವುಂ ನಾಲಗೆಯುಳ್ಳವಂ ಬಗೆವೊಡೆಂದುಂ ಬಣ್ಣಿಸಲ್ಕೆ ಆರನು !' ಎಂದಮೇಲೆ ನನ್ನಂಥ ಸಾಮಾನ್ಯನು ಏನನ್ನು ವರ್ಣಿಸಬಹುದು ? ಆದರೂ, 'ನಾ ಕಂಡ ಬೆಂಗಳೂರಿನ ಪರಿಚಯ'ವನ್ನಿಲ್ಲಿ ನನಗೆ ತಿಳಿದ ಮಟ್ಟಿಗೆ ಮಾಡಿಕೊಡುತ್ತಲಿದ್ದೇನೆ.

ಸುಮಾರು ೩೦ ವರ್ಷಗಳಿಂದ ಬೆಂಗಳೂರಿಗೂ ನನಗೂ ಪತ್ರವ್ಯವಹಾರದ ಸಂಬಂಧವಿತ್ತು. ಸಾಹಿತ್ಯಸೇವೆಗಾಗಿ ನನ್ನನ್ನು ಮೀಸಲಾಗಿರಿಸಿದ ದಿನದಿಂದಂತೂ, ಒಂದಿಲ್ಲೊಂದು ರೀತಿಯಿಂದ ಸಾಹಿತ್ಯ ಪರಿಷತ್ತಿನಿಂದಲೂ, ಪ್ರಮುಖ ಪತ್ರಿಕೆಗಳಿಂದಲೂ ಸಂಬಂಧವನ್ನು ಬೆಳಸಿಕೊಂಡು ಬಂದಿದ್ದೆ. ಆದರೆ ಆ ತಾಯಗುಡಿಯನ್ನು ಸಂದರ್ಶಿಸಿ ಧನ್ಯತೆಯನ್ನು ಪಡೆಯುವ ಸೌಭಾಗ್ಯವನ್ನು ಮಾತ್ರ ಹೊಂದಿರಲಿಲ್ಲ. ನೂತನ ಕರ್ಣಾಟಕ (ಮೈಸೂರು)ರಾಜ್ಯ ನಿರ್ಮಾಣವಾದನಂತರ, ಹೈದರಾಬಾದಿನಲ್ಲಿದ್ದ ಕನ್ನಡಿಗರಲ್ಲಿ ಬಹುಸಂಖ್ಯಾತರು ಬೆಂಗಳೂರು ಸೇರಿದರು. ಬಹುಜನ ವಕೀಲರು ತಮ್ಮ ವಕೀಲಿ ವೃತ್ತಿಯನ್ನು ಅಲ್ಲಿ ಆರಂಭಿಸಿದರು. ಅನೇಕ ವರ್ತಕರು ವ್ಯಾಪಾರೋದ್ಯೋಗಗಳಿಗಾಗಿ ಅಲ್ಲಿ ನೆಲಸಿದರು. ಸುಖವಸತಿಯ ಸಿರಿವಂತರು (ಹಿಂದಿನ) ಜಾಗೀರ್‌ದಾರರು, ಜಮೀನ್‌ದಾರರು ತಮ್ಮ ಅಲ್ಲಿಯ ಆಸ್ತಿ-ಪಾಸ್ತಿಯನ್ನೆಲ್ಲ ತೆಗೆದು ಹಾಕಿ, ಬೆಂಗಳೂರಿನ ಕಡೆಗೆ ಮುಖ ಮಾಡಿದರು. ಈ ಗಲಾಟೆ (ಬೆಂಗಳೂರಿನ ಭಾಷೆ)ಯಲ್ಲಿ, ಹೈದರಾಬಾದಿನಲ್ಲಿದ್ದ (ಕನ್ನಡ ಬಲ್ಲ) ನೌಕರರಿಗೂ ಅರ್ಧಚಂದ್ರ ಪ್ರಯೋಗವಾಯಿತು. ಅವರು, ಮನಸ್ಸಿರಲಿ ಇಲ್ಲದಿರಲಿ, ಬೆಂಗಳೂರಿನ ಗಾಳಿ ತಿನ್ನಲೇಬೇಕಾಯಿತು. ಬಯಸಿದವರಿಗೆ ಭಾಗ್ಯವೊದಗಿದಂತಾಯಿತು. ಬೇಡವಾದವರಿಗೆ ಮಾತ್ರ ಇದೊಂದು 'ವಿಧಿ'ಯಾಯಿತು ಇಂಥವರಲ್ಲಿ ನನ್ನ ಶಾಲಕ (ಈಗ ಅಳಿಯ)ನೂ ಒಬ್ಬ. ನಂಟರಿಷ್ಟರೆಲ್ಲರನ್ನೂ ಬಿಟ್ಟು ದೂರದಲ್ಲಿದ್ದ ಬೆಂಗಳೂರು ಸೇರಿದ. ಋಣಾನುಬಂಧದವರು ಎಲ್ಲಿದ್ದರೂ ಹೋಗಲೇಬೇಕಲ್ಲವೆ ? ಈ ಸಲದ ಬೇಸಗೆಯ ಸೂಟಿಯಲ್ಲಿ, ಬೆಂಗಳೂರನ್ನೂ ಬೆಂಗಳೂರಿನ ಜನರನ್ನೂ ನೋಡಿಕೊಂಡು ಬರೋಣವೆಂದು ಬಗೆದು, ಚೈತ್ರ ವದ್ಯ ೧೩ ಶುಕ್ರವಾರ ದಿವಸ ರಂಗಂಪೇಟೆ (ಸುರಪುರ)ಯಿಂದ ಹೊರಟು, ಯಾದಗಿರಿಯಲ್ಲಿ ರೈಲು ಹತ್ತಿದೆ. ಮಧ್ಯಾಹ್ನ ಸಮಯ. ವಸಂತಮಾರ್ತಾಂಡನ ಪ್ರಖರಜ್ವಾಲೆ ತಾಂಡವವಾಡುತ್ತಿದ್ದಿತು. ಅಗ್ನಿಕುಂಡದೊಳಗಿಂದ ಹಾಯ್ದು ಹೊರಟಿದ್ದೇನೆಯೋ ಎನ್ನಿಸುತ್ತಿತ್ತು. ಗುಂತಕಲ್ಲು (ಜಂಕ್‌ಷನ್) ಮುಟ್ಟುವುದರೊಳಗಾಗಿ ಅದೆಷ್ಟು ಸ್ನಾನಗಳಾಗಿದ್ದುವೊ, ಲೆಕ್ಕ ಹತ್ತಲಿಲ್ಲ. ಈ ಸ್ನಾನಗಳಿಂದ ಯಾವ ಪುರುಷಾರ್ಥವೂ ಸಾಧಿಸಲಿಲ್ಲವಲ್ಲವೆಂಬ ಮನೋವ್ಯಥೆ ಮಾತ್ರ ಉಂಟಾಯಿತು. ಯಾಕೆಂದರೆ, ಮಾರ್ಗಮಧ್ಯದಲ್ಲಿ ದಾಟಿದ ಭೀಮೆ, ಕೃಷ್ಣೆ ಮತ್ತು ತುಂಗಭದ್ರೆ ಈ ಮೂರೂ ಪಾವನತೀರ್ಥಗಳಲ್ಲಿ ಮಿಂದಿದ್ದರೆ, ಮುಕ್ತಿಯಾದರೂ ದೊರಕುತ್ತಿತ್ತೋ ಏನೋ ! ಗುಂತಕಲ್ಲಿಗೆ ಬರುವುದರೊಳಗಾಗಿ ಮೈಹುಳಿ ಇಟ್ಟುಹೋಗಿತ್ತು. ಪ್ರವಾಸದ ಒಂದು ಘಟ್ಟ ಮುಗಿಸಿ ಇನ್ನೊಂದು ಘಟ್ಟವನ್ನು ಮೆಟ್ಟಬೇಕಾಗಿದ್ದಿತು. ಮದ್ರಾಸಿನ ರೈಲು ಇಳಿದು ಬೆಂಗಳೂರಿಗೆ ಹೋಗುವ ರೈಲನ್ನು ಸೇರಲು ಧಾವಿಸಿದೆವು ಗುದ್ದುಮುರಿಗೆ ಹಾಕಿ ಕಂಪಾರ್ಟ್‌ಮೆಂಟ್‌ನಲ್ಲಿ ಸೇರಿದ್ದಾಯಿತು. ರಾಮಾಯಣ ಕಾಲದಲ್ಲಿಯ ಕಿಷ್ಕಿಂಧೆಯು ನೆನಪಾಯಿತು ಆಗ ಬೆಳ

ಗಾಗುವ ವರೆಗೂ ಆ ಪಾಡು ಅನುಭವಿಸದೇ ವಿಧಿಯಿರಲಿಲ್ಲ. ಬ್ರಾಡ್‌ಗೇಜಿನ ರೈಲುಗಳ ದುರವಸ್ಥೆ ಒಂದು ರೀತಿಯಾದರೆ, ಮೀಟರ್‌ಗೇಜಿನ ರೈಲುಗಳ ಬವಣೆ ಇನ್ನೊಂದು ತೆರನಾದದ್ದು. ಅದರಲ್ಲೂ ಮೂರನೆಯ ತರಗತಿಯ ಪ್ರಯಾಣಿಕರೆಂದರೆ, ಸಾಮಾನ್ಯವಾಗಿ ಪಶುಗಳೆಂದೋ, ಕುರಿಗಳೆಂದೋ, ರೈಲ್ವೆ ಅಧಿಕಾರಿಗಳು ಭಾವಿಸಿದ್ದಂತೆ ತೋರುತ್ತದೆ. ಬೆಂಗಳೂರು ಇಡಿಯ ಕರ್ನಾಟಕದ ರಾಜಧಾನಿಯಾದ ಮೇಲೆ, ಕನಿಷ್ಠ ಹಗಲು ಎರಡು, ರಾತ್ರಿ ಎರಡು ರೈಲುಗಳಾದರೂ ಓಡಾಡಬೇಡವೆ? ಅದೆಂದು ಅವರು ಕಣ್ಣು ತೆರೆಯುವರೊ! ಅಂತೂ ವಿಚಿತ್ರ ಹಿಂಸೆಗೊಳಗಾಗಿ, ಫಲವೂ ಪುರುಷಾರ್ಥವೂ ಇಲ್ಲದ ಜಾಗರಣೆಯಿಂದ ರಾತ್ರಿಯನ್ನೆಲ್ಲ ಕಳೆದು, ಮುಂಜಾವಿನ ಶುಭಮುಹೂರ್ತದಲ್ಲಿ (ತೊಂದರೆಗೊಳಗಾಗಿಯೂ ಜೀವ ಹಿಡಿದುಕೊಂಡಿದ್ದು—ಸುಖವಾಗಿ ಬೆಂಗಳೂರು ತಲುಪಿದ್ದಕ್ಕೆ ಶುಭ ಮುಹೂರ್ತ ಎಂದಿದ್ದೇನೆ) ಬೆಂದ + ಕಾಳು (ಲು) + ಊರು = ಬೆಂಗಳೂರು, ಬೆಂಗಳೂರನ್ನು ಸುಖವಾಗಿ ಸೇರಿದೆ. ನನ್ನ ಜೊತೆಯಲ್ಲಿ ನಮ್ಮ ಶ್ವಶುರರೂ ಇದ್ದರು. ಅವರಂತೂ ಬೆಂಗಳೂರು ತಲುಪುವುದರೊಳಗಾಗಿ ಬೆಂದೇ ಹೋಗಿದ್ದರು.

ತ್ರಯೋದಶಿ-ಶನಿವಾರ :- ಮುಂಜಾವಿನ ೭ ಗಂಟೆಯೊಳಗಾಗಿ ಮನೆ ತಲುಪಿದ್ದಾಯಿತು. ದೂರದ ಪ್ರಯಾಣದ ಬಳಲಿಕೆ ಮತ್ತು ಜಾಗರಣೆಯ ಶ್ರಮವನ್ನು ಪರಿಹರಿಸಿಕೊಳ್ಳಲು ಅಂದಿನ ದಿನವೆಲ್ಲ ವಿಶ್ರಾಂತಿ ಹೊಂದಿದೆ. ಬಂದ ಭಾಗದ ಭಾಗ್ಯವೊ, ನಿಂದನೆಲದ ಪುಣ್ಯವೊ, ನಮ್ಮ ಮನೆ ಇದ್ದುದು ಚಾಮರಾಜಪೇಟೆಯ ಸೀತಾಪತಿ ಅಗ್ರಹಾರದಲ್ಲಿ. ಸೀತಾಪತಿ ಅಗ್ರಹಾರ ಧಾರ್ಮಿಕ ಸಂಸ್ಕೃತಿಯ ದಿವ್ಯ ನೆಲೆವೀಡು. ನಾವಿದ್ದ ಮನೆಯ ಪಕ್ಕದಲ್ಲಿಯೆ ಶ್ರೀಗುರುರಾಜರ ದೇವಸ್ಥಾನ. ಸಂಜೆಯ ೭ ಗಂಟೆಗೆ ದೇವಸ್ಥಾನದ ಗಂಟೆಗಳು ನನ್ನನ್ನು ಎಚ್ಚರಗೊಳಿಸಿದುವು. ನಿದ್ದೆ ತಿಳಿದೆದ್ದು ದೇವಸ್ಥಾನವನ್ನು ಪ್ರವೇಶಿಸಿದೆ. ಆ ದೇವಸ್ಥಾನ ಪ್ರತಿ ಮಂತ್ರಾಲಯದಂತೆ ಕಂಡಿತು. ಹನುಮಂತ ದೇವರಿಗೂ, ರಾಯರಿಗೂ ಮಾಡಿದ ಅಲಂಕಾರ ಮನೋಹರವಾಗಿತ್ತು. ಪಲ್ಲಕ್ಕಿಸೇವೆ, ಇನ್ನಿತರ ಪೂಜಾವಿಧಾನಗಳಿಂದ ಮನಸ್ಸು ಪ್ರಫುಲ್ಲಿತವಾಯಿತು. ಆ ಸನ್ನಿವೇಶದ ನಂತರ ಅಂದಿನ ನಿದ್ದೆಯ ಮಬ್ಬೂ ಹರಿಯಿತು, ಉಬ್ಬೂ ಉಂಟಾಯಿತು. ಧಾರ್ಮಿಕ ಸಂಸ್ಕೃತಿಯ ಪ್ರಭಾವವೇ ಅಂತಹದು ಇದ್ದಿರಬೇಕು.

ಚತುರ್ದಶಿ-ಆದಿತ್ಯವಾರ : ಶ್ರೀಹರಿವಾಯುಗಳ ದರ್ಶನಾನಂತರ, ತಾಯಿ ಶಾರದೆಯ ಸಂದರ್ಶನವನ್ನೇ ಮೊದಲು ಹೊಂದಬೇಕೆಂಬ ಅಭಿಲಾಷೆ ಬೆಳೆದು ಬರಲು, ಸರಸ್ವತೀ ನಿಲಯವೂ ಕನ್ನಡ ತಾಯಿ ಗುಡಿಯೂ ಆದ 'ಕನ್ನಡ ಸಾಹಿತ್ಯಪರಿಷತ್ತ'ನ್ನು ನೋಡಲು ಮೊದಲು ಹೊರಟೆ. ನಮ್ಮ ಮನೆಗೆ ಪರಿಷತ್ತಿನ ಕಚೇರಿ ತೀರ ಸಮೀಪದಲ್ಲಿದ್ದುದರಿಂದ, ಅದನ್ನು ಮೊತ್ತಮೊದಲು ಸಂದರ್ಶಿಸಲು ಅನುಕೂಲವೂ ಉಂಟಾಯಿತು. ಮುಂಜಾವಿನ ೯ ಗಂಟೆಗೆ ಶ್ರೀಕೃಷ್ಣರಾಜ ಪರಿಷನ್ಮಂದಿರವನ್ನು ಪ್ರವೇಶಿಸಿದಾಗ, ಸಿಬ್ಬಂದಿಯ ಜನರು ತಮ್ಮ ತಮ್ಮ ಕೆಲಸದಲ್ಲಿ ತೊಡಗಿದ್ದರು. ಪರಿಷತ್ತಿನ ಕಾರ್ಯದರ್ಶಿಗಳಾದ ಶ್ರೀ. ಕೆ. ಗೋಪಾಲಕೃಷ್ಣರಾಯರು, ಭಾನುವಾರದ ನಿಮಿತ್ತ ಆಫೀಸಿನಲ್ಲಿ ವಿರಾಜಮಾನರಾಗಿದ್ದರು. ನಾನು ಅವರ ಕೋಣೆಯಲ್ಲಿ ಆಗಂತುಕನ ಹಾಗೆ ಪ್ರವೇಶಿಸಿ, ನನ್ನ ಪರಿಚಯವನ್ನು ನಾನೇ ಮಾಡಿಕೊಟ್ಟೆ. ಪಾಪ, ಅವರು ನನ್ನನ್ನು ಸಹೃದಯತೆಯಿಂದ ಕಂಡು ಮಾತನಾಡಿಸಿದರು. ಯೋಗಕ್ಷೇಮವನ್ನೂ ಕೇಳಿಕೊಂಡರು. ಆ ಮಾತು ಈ ಮಾತು ಆಡುತ್ತಿರುವಾಗಲೆ, ಸುಪ್ರಸಿದ್ಧ ಸಾಹಿತಿಗಳೂ, ಉತ್ತಮ ವಿಮರ್ಶಕರೂ, ವಿಧಾಯಕ ಕಾರ್ಯಕರ್ತರೂ ಆದ ಶ್ರೀ. ತಿರುಮಲೆ ತಾತಾಚಾರ್ಯ ಶರ್ಮರವರು ಅಲ್ಲಿಗೆ ಆಗಮಿಸಿದರು. ಅವರ ಪರಿಚಯ ಹೊಂದಿದ್ದೂ ಆಯಿತು. ನಾವು ಮೂರೂ ಜನ ಸಾಹಿತ್ಯಗೋಷ್ಠಿಯಲ್ಲಿ ಮೈಮರೆತಿರುವಾಗಲೆ, ಪರಿಷತ್ತಿನ ಮಾನ್ಯ ಅಧ್ಯಕ್ಷರಾದ ಶ್ರೀ. ಬಿ. ಶಿವಮೂರ್ತಿಶಾಸ್ತ್ರಿಗಳು ಬಿಜಯ ಮಾಡಿಸಿದರು. ಅನಾಯಾಸ ಅವರ ಸಂದರ್ಶನದ ಲಾಭ ದೊರೆತುದಕ್ಕೆ ಹಿಗ್ಗಿದೆ. ಅವರಿಗೆ ಸದಾ ಪರಿಷತ್ತಿನ ಆರ್ಥಿಕಸ್ಥಿತಿಯನ್ನು ಸುಧಾರಿಸುವುದರ ಕಡೆಗೇ ಹೆಚ್ಚು ಗಮನವಿದ್ದಂತೆ ತೋರಿತು. ಕಂಡವರನ್ನೆಲ್ಲ ಪರಿಷತ್ತಿನ ಸದಸ್ಯರಾಗಲು ಬಿನ್ನವಿಸಿ, ಸದಸ್ಯ ಸಂಪತ್ತನ್ನು ದಿನವೂ ಬೆಳೆಸುತ್ತಿದ್ದುದನ್ನು ಕಂಡಾಗ, ಅವರ ಬಗ್ಗೆ ಆದರವೂ ಅಭಿಮಾನವೂ ಉಂಟಾಯಿತು. ಅಷ್ಟರಲ್ಲಿ ನನ್ನ ಜೊತೆಯಲ್ಲಿ ಬಂದಿದ್ದ ನನ್ನ ಅಳಿಯನನ್ನು ನೋಡಿ, 'ಇವರು ನಿಮಗೇನಾಗಬೇಕು?' ಎಂದು ಕೇಳಿದರು. ಪರಸ್ಪರ ಸಂಬಂಧವನ್ನು ತಿಳಿಸಿದಾಗ ಆನಂದಪಟ್ಟು, ನನ್ನ ಮೈತಟ್ಟುತ್ತ, "ಕೊಡಬೇಕುತ್ತಮನಾದವಂಗೆ ಮಗಳಂ......" ಎಂದು ಆರಂಭಿಸಿದರು. ಮೊದಲೇ ಕೀರ್ತನ ಕೇಸರಿಗಳು. ಮೈಮರೆತು ಕೀರ್ತನೆಯನ್ನೇನಾದರೂ ಆರಂಭಿಸಿದರೊ! ಎಂದು ಗಾಬರಿಯಿಂದ ಅವರ ಕಡೆಗೇ ನೋಡುತ್ತ ಕುಳಿತೆ. ಆ ಹಾವಭಾವ, ಮುಖಭಂಗಿ, ಗಾರುಡಿಗನ ಮಾಟದಂತಿತ್ತು. ಮುಂಡಾಸ ನನ್ನ ತಲೆಯ ಮೇಲೆ ಬರುವುದರಲ್ಲಿತ್ತು. ಆದರೆ ಹೈದರಾಬಾದಿನವನೂ, ಹಳೆಯ ಸಂಪ್ರದಾಯದವನೂ ಆದ ನಾನು, ಮೊದಲೇ ಟೊಪ್ಪಿಗೆಯನ್ನು ಹಾಕಿಕೊಂಡು ಹೋಗಿದ್ದುದರಿಂದ, ಮುಂಡಾಸ ತಲೆಗೆ ಬೀಳಲಿಲ್ಲ. ಅಂತೂ ಸದಸ್ಯನಾಗಲು ನನ್ನ ಅಳಿಯನನ್ನು ಕೇಳಿಕೊಂಡರು. ಇದ್ದಷ್ಟು ಹೊತ್ತೂ ಬಾಯಿತುಂಬ ಮಾತನಾಡಿದರು.

ಆ ತರುವಾಯ ನಾನು ಪರಿಷತ್ತಿನ ಆಶ್ರಯದಲ್ಲಿ ನಡೆಯುತ್ತಿರುವ ವಾಚನಾಲಯವನ್ನು ಹೊಕ್ಕೆ. ಅಲ್ಲಿ ಅಷ್ಟು ಪ್ರಮುಖವಲ್ಲದ ಅನೇಕ ಪತ್ರಿಕೆಗಳಿದ್ದುವು. ಒಂದೆರಡು ಪ್ರಮುಖ ಪತ್ರಿಕೆಗಳೂ ಕಾಣಿಸಿದುವು. ಆದರೆ ಪರಿಷತ್ತಿನಿಂದಲೇ ಹೊರಡುವ 'ಕನ್ನಡ ನುಡಿ' ಮತ್ತು 'ಸಾಹಿತ್ಯಪರಿಷತ್ಪತ್ರಿಕೆ' (ಈಗ ಹೊರಡುತ್ತಿದ್ದರೆ) ಅಲ್ಲಿ ಇಲ್ಲದಿದ್ದುದು ನನಗೆ ತುಂಬ ಆಶ್ಚರ್ಯವನ್ನುಂಟುಮಾಡಿತು. ಹೊರಡುತ್ತಲೆ ಸಭಾಭವನವನ್ನೂ ಇಣಿಕಿ ನೋಡಿ ಮನೆಯ ಹಾದಿ ಹಿಡಿದೆ.

ಸಂಜೆಯ ಸಮಯದಲ್ಲಿ ಲಾಲ್‌ಬಾಗ್ ನೋಡಿಕೊಂಡು ಬರೋಣವೆಂದು ಹೊರಟೆವು. ಮಹಾದ್ವಾರವನ್ನು ಪ್ರವೇಶಿಸುತ್ತಿರುವಾಗಲೆ, ನನ್ನ ಕಣ್ಣು ಲಾಲ್ (ಕೆಂಪು) ಆದುವು. 'ಅಯ್ಯೋ! ಈ ತೋಟಕ್ಕೇತಕಿಷ್ಟು ಪ್ರಸಿದ್ಧಿ!' ಎಂದುಕೊಂಡೆ. ಹೈದರಾಬಾದಿಗೆ

ಆಗಮಿಸಿದ ತರುಣದಲ್ಲಿಯೇ, ಅಲ್ಲಿಯ 'ಬಾಗೆ ಆಮ್'(ಸಾರ್ವಜನಿಕ ತೋಟ)ದ ಎತ್ತರವಾದ ಗೋಡೆಗಳನ್ನು ಕೆಡಿಸಿ, ಕಬ್ಬಿಣದ ಸಲಾಕೆಗಳನ್ನು ನಡಿಸಿ ತೋಟದ ಒಳಭಾಗ ಹೊರಗಿನವರಿಗೆ ಕಾಣುವಂತೆ ಮಾಡಿದ ದಿವಾನ್ ಮಿರ್ಜಾ ಇಸ್ಮಾಯಿಲರು, ಲಾಲ್‌ಬಾಗಿನ ಎತ್ತರವೂ, ಹಳೆಯವೂ ಆದ ಕಂಪೌಂಡ್ ಗೋಡೆಗಳನ್ನೇಕೆ ಕೆಡವಿಸಿರಲಿಕ್ಕಿಲ್ಲ? ಎಂದು ಅನ್ನಿಸಿತು. ಮಾವರಿಯ ರಾಜ್ಯದ ಶೃಂಗಾರಮಯ ಪಟ್ಟಣವನ್ನಾಗಿ ಮಾಡುವ ಸಂದರ್ಭದಲ್ಲಿ ಇದನ್ನು ಹೇಗೆ ಮರೆತರವರು? ಎಂದು ಆಲೋಚಿಸುತ್ತಲೇ ಒಳಭಾಗದಲ್ಲಿ ಪ್ರವೇಶಿಸಿದೆ. ನಾಲ್ಕೂ ನಿಟ್ಟಿನಲ್ಲಿ ತಿರುಗಾಡಿದೆ. ತೋಟದ ಹರವು, ಹೊಸತರದ ಕೆಲ ಗಿಡಗಳು, ಪಾರಿವಾಳ, ನೊಲ, ಸಾರಂಗ ಮುಂತಾದ ಕೆಲ ಪ್ರಾಣಿಗಳನ್ನು ಬಿಟ್ಟರೆ ನೋಡತಕ್ಕಂಥ ವಸ್ತುಗಳಾವುವೂ ಇರಲಿಲ್ಲ. ಕುದುರೆಯ ಮೇಲೆ ಕುಳಿತಿದ್ದ ಮನುಷ್ಯನ ಪ್ರತಿಮೆಯೊಂದು ಮಾತ್ರ ಕಲಾನೈಪುಣ್ಯವನ್ನೂ, ಕ್ಷಾತ್ರತೇಜದ ಕುರುಹನ್ನೂ ತೋರ್ಪಡಿಸುತ್ತಿದ್ದಿತು. ಆದರೆ ಕೆಳಬದಿಯಲ್ಲಿ ಆ ಪ್ರತಿಮೆ ಯಾರದು?—ಎಂಬುದನ್ನು ಬರೆಯದಿದ್ದುದು ನೋಟಕರನ್ನು ತೊಂದರೆಗೀಡುಮಾಡುತ್ತದೆ.

ತೋಟದ ಹೊರಗೆ ಬಂದು ಬಸ್ಸಿನ ದಾರಿ ಕಾಯ್ದು ಕಾಯ್ದು ಬೇಸತ್ತೆವು. ಒಂದು ತಾಸು ಗತಿಸಿದರೂ ಒಂದಾದರೂ ಬಸ್ಸು ಬರಲಿಲ್ಲ. ಮಿಂಟೊ ಕಣ್ಣಾಸ್ಪತ್ರೆಯ ಕಡೆಗೆ ಹೋಗುವ ಬಸ್ಸಂತೂ ಸಿಕ್ಕಲೇ ಇಲ್ಲ. ಕೊನೆಗೆ ಶ್ರೀಕೃಷ್ಣರಾಜೇಂದ್ರ (ಸಿಟಿ) ಮಾರ್ಕೆಟ್ಟಿಗೆ ಹೋಗಿ, ಅಲ್ಲಿಂದ ರಾತ್ರಿಯ ೧೦ ಗಂಟೆಗೆ ಮನೆ ಸೇರಿದೆವು. ವಿಪುಲ ಜನಸಂದಣಿಯಿರುವ ಇಂತಹ ಸಿಟಿಯಲ್ಲಿ ಬಸ್ಸುಗಳ ಓಡಾಟದ ವ್ಯವಸ್ಥೆ ಈ ರೀತಿಯದಾದರೆ ತುಂಬ ಕಷ್ಟ.

ಶ್ರೀಕೃಷ್ಣರಾಜೇಂದ್ರ (ಸಿಟಿ) ಮಾರ್ಕೆಟ್ ಮಾತ್ರ ನೋಡತಕ್ಕದ್ದಾಗಿದೆ. ಜೀವನೋಪಯೋಗಿ ಪದಾರ್ಥಗಳೆಲ್ಲ ಒಂದೆಡೆ ದೊರಕುವ ಸ್ಥಳವೆಂದರೆ ಇದೊಂದೆ. ಇಡಿಯ ಬೆಂಗಳೂರಿಗೆ ಇದೂ ಒಂದು ಭೂಷಣಪ್ರಾಯವಾಗಿದೆ. ಸಿಟಿ ಮಾರ್ಕೆಟ್ಟಿನ ಒಳಭಾಗ ಅಷ್ಟು ಸುಂದರವಾಗಿಲ್ಲದಿದ್ದರೂ ಬಂಧುರವಾಗಿದೆ. ಒಂದೊಂದು ಸಾಲನ್ನು ಒಂದೊಂದು ರೀತಿಯ ಪದಾರ್ಥಗಳಿಗಾಗಿ ಮೀಸಲಾಗಿರಿಸಲಾಗಿದೆ. ಒಂದೆಡೆ ಬಳೆಗಾರರ ಸಾಲು ಕಂಡರೆ ಇನ್ನೊಂದೆಡೆ ಕಂಚುಗಾರರ ಸಾಲು, ಒಂದೆಡೆ ಜವಳಿ ವ್ಯಾಪಾರ ನಡೆಯುತ್ತಿದ್ದರೆ, ಇನ್ನೊಂದೆಡೆ ಕಿರಾಣಿ ಜಿನಸುಗಳ ವ್ಯಾಪಾರ ಸಾಗಿರುತ್ತದೆ. ಹಣ್ಣು-ಹಂಪಲ, ಪಲ್ಯ-ಕಾಯಿ (ತರಕಾರಿ) ದವನ-ಮರುಗ, ಹೂವು-ಕೇದಗೆ, ರಾಶಿ-ರಾಶಿಯಾಗಿ ಸಿಕ್ಕುತ್ತದೆ. ಮಹಾದ್ವಾರವನ್ನು ಪ್ರವೇಶಿಸುತ್ತಲೇ ತರತರದ ಹೂವುಗಳ ಕಂಪು ಮನಸ್ಸಿಗೆ ಆಹ್ಲಾದವನ್ನುಂಟುಮಾಡುತ್ತಿದೆಯಷ್ಟೇ ಅಲ್ಲದೆ, ಬೆಂಗಳೂರಿನ ವೈಶಿಷ್ಟ್ಯವನ್ನೂ ವ್ಯಕ್ತಗೊಳಿಸುತ್ತದೆ. ಆದರೇನು? ವ್ಯಾಪಾರ ಸಾಚಾ ಅಲ್ಲ; ಅನನುಭವಿಕರು ತುಂಬ ಮೋಸಹೋಗಬೇಕು.

ಅಮಾವಾಸ್ಯೆ-ಸೋಮವಾರ:— ಇಂದು ಬೆಂಗಳೂರಿಗೇ ಕಲಶಪ್ರಾಯವಾದ ವಿಧಾನಸೌಧವನ್ನು ನೋಡಲು ಹೋದೆ. ನಾಲ್ಕಂತಸ್ತಿನ ಭವ್ಯ ಕಟ್ಟಡ ಅದು. ಮುಖ್ಯ ಗೋಪುರದ ಕೆಲಸ ಇನ್ನೂ ನಡೆದಿದೆ. ಶ್ರೀ. ಹನುಮಂತಯ್ಯನವರಿಗೆ ಈಗ ಯಾರು ಏನೇ ಅನ್ನಲಿ, ಆ ಕಟ್ಟಡವನ್ನು ಕಂಡಾಗ ಮಾತ್ರ ಅವರ ಸಾಹಸವನ್ನು ಮೆಚ್ಚದೇ ಇರಲಿಕ್ಕಾಗದು. ಸುಖ-ಸಂಪತ್ತುಗಳಿಂದ ದೇಶ ತುಂಬಿ ತುಳುಕುತ್ತಿದ್ದಾಗ, ಎಲ್ಲೆಲ್ಲೂ ಶಾಂತಿ-ಸಾಮರಸ್ಯಗಳ ಸಾಮ್ರಾಜ್ಯ ನೆಲಸಿದಾಗ, ಅರಸರು ಕುಶಲ ಶಿಲ್ಪಿಗಳಿಂದ ಭವ್ಯ ಕಟ್ಟಡಗಳನ್ನೂ, ಮಂದಿರಗಳನ್ನೂ ನಿಲ್ಲಿಸಿದುದು ಅಂತಹ ಮಹತ್ಕಾರ್ಯವೇನಲ್ಲ. ಅದು ಅವರ ಕಲಾಪ್ರೇಮವನ್ನಷ್ಟೇ ವ್ಯಕ್ತಗೊಳಿಸುತ್ತಿದೆಯಲ್ಲದೆ, ಸಾಹಸದ ಸನ್ನಿವೇಶವನ್ನೇನೂ ತೋರ್ಪಡಿಸುವುದಿಲ್ಲ. ಆದರೆ ಇಂಥ ಕಷ್ಟಕಾಲದಲ್ಲಿಯೂ, ಇಡಿಯ ಕರ್ನಾಟಕಕ್ಕಷ್ಟೇ ಏಕೆ; ಇಡಿಯ ಭಾರತಕ್ಕೇ ಭೂಷಣಪ್ರಾಯವಾದ ಭವ್ಯವೂ, ಸುಂದರವೂ ಆದ ಒಂದು 'ಸೌಧ'ವನ್ನು ನಿಲ್ಲಿಸಿದುದು ಸಾಹಸದ ಕಾರ್ಯವೆ! ಅದರ ಗರ್ಭದಾಳದಲ್ಲಿ ನ್ಯೂನತೆಗಳೂ, ದೋಷಗಳೂ ಇಣಿಕಿ ನೋಡುತ್ತಿರಬಹುದು; ಆದರೆ ಸಾಹಸಕ್ಕೆ ಸಿಕ್ಕುವಷ್ಟು ಬೆಲೆ ದೋಷಕ್ಕೆ ಸಿಕ್ಕಲಾರದೆಂದು ನನ್ನ ಅಭಿಪ್ರಾಯ. ಬೆಂಗಳೂರಿನುದ್ದಕ್ಕೂ ತಿರುಗಿದಾಗ, ಅಠಾರಾಕಚೇರಿಯೊಂದನ್ನು ಬಿಟ್ಟರೆ ಮತ್ತಾವ ಕಚೇರಿಯೂ ಅಷ್ಟು ಹೇಳಿಕೊಳ್ಳುವಂತಹುದು ಇಲ್ಲದಾಗ, ನೂತನ ಕರ್ನಾಟಕದ ಸಚಿವಾಲಯಗಳು ಲಾಲ್‌ಬಾಗಿನ ಗಿಡಗಳ ಕೆಳಗೆ ನಡೆಯಬೇಕಾದ ಸಂದರ್ಭವೊದಗುತ್ತಿತ್ತು. ಬೆಲೆ ಬಾಳದ ಚಿಕ್ಕ-ಪುಟ್ಟ ಕಟ್ಟಡಗಳನ್ನು ಹತ್ತು ಕಟ್ಟುವುದಕ್ಕಿಂತ ಒಂದು ಬೆಲೆಬಾಳುವ ಕಟ್ಟಡವನ್ನು ಕಟ್ಟಿಸಿ, ಅತ್ತ ಕಡೆಗೇ ಪ್ರತಿಯೊಬ್ಬನ ಮನಸ್ಸೂ ಆಕರ್ಷಿಸುವಂತೆ ಮಾಡಿದುದು ಶ್ರೀ. ಹನುಮಯ್ಯನವರದೇ ಆದ ಒಂದು ವೈಶಿಷ್ಟ್ಯವೆಂದು ಹೇಳದೆ ಗತ್ಯಂತರವಿಲ್ಲ. ಹಿಂದಿನ ಕಾಲದ ಸೌಧಗಳೂ, ಹರ್ಮ್ಯಗಳೂ ಹಿಂದಿನ ಕಾಲದ ಶಿಲ್ಪವಿಜ್ಞಾನದ ದೃಷ್ಟಿಯಿಂದ ಕಟ್ಟಿದುವುಗಳಾದರೆ, ಈ ಸೌಧ ಇಂದಿನ ಕಾಲದ ವೈಜ್ಞಾನಿಕ ಸಂಪತ್ತಿನಿಂದ ಕೂಡಿದುದಾಗಿದೆ. ಬೆಂಗಳೂರಿನ ಸೌಂದರ್ಯವೃದ್ಧಿಯಲ್ಲಿ ಇದರದು ಮುಖ್ಯಸ್ಥಾನ. ಕಟ್ಟಡದ ಮಹಾದ್ವಾರದ ಮೇಲೆ "ಸರ್ಕಾರದ ಕೆಲಸ ದೇವರ ಕೆಲಸ" ಎಂದು ಸುವರ್ಣಾಕ್ಷರಗಳಲ್ಲಿ ಬರೆಯಿಸಲಾಗಿದೆ. ಹಾಗೆ ತಿಳಿದು ಕೆಲಸ ಮಾಡಿದ್ದರೆ, ಮುಂದೆ ಮಾಡಿದರೆ, ಕರ್ನಾಟಕದ ಭಾಗ್ಯಕ್ಕೆ ಎಣೆಯಿಲ್ಲ. ಹಾಗೆ ನಡೆಯದಾಗ ಶ್ರೀ. ಹನುಮಂತಯ್ಯನವರಷ್ಟೇ ಏಕೆ, ಎಲ್ಲರೂ ದೇವರೆದುರು ತಪ್ಪಿತಸ್ಥರಾಗಿ ನಿಲ್ಲಲೇಬೇಕಾಗುತ್ತದೆ. ಅದಕ್ಕಾಗಿ ಸಲ್ಲತಕ್ಕ ಪ್ರಾಯಶ್ಚಿತ್ತವನ್ನು ಹೊಂದಲೇಬೇಕಾಗುತ್ತದೆ.

ಪ್ರತಿಪದೆ-ಮಂಗಳವಾರ:— ಇಂದು ಶೇಷಾದ್ರಿಪುರದಲ್ಲಿ ವಾಸಿಸುತ್ತಿರುವ ನಮ್ಮೊರ್ವ ಆಪ್ತ-ಮಿತ್ರರ ಮನೆಯಲ್ಲಿ ನಾನು ತಂಗಿದ್ದರಿಂದ, 'ನೆಹರೂ ನಗರ'ವನ್ನು ಸಂದರ್ಶಿಸುವ ಸುಯೋಗ ದೊರೆಯಿತು. 'ಮಕ್ಕಳ ಮಂಟಪ'ವನ್ನು ಸ್ಥಾಪಿಸಿ, ಅದನ್ನು ಅಚ್ಚುಕಟ್ಟಾಗಿ ನಡಸಿಕೊಂಡುಬರುತ್ತಿರುವ ಶ್ರೀ. ಪಿ. ಶ್ರೀ. ಪಾಂಡುರಂಗರಾಯರನ್ನೂ ಅವರ ಸಹಧರ್ಮಿಣಿ ಗಮಕ ವಿಶಾರದೆ ಶ್ರೀಮತಿ ಶಕುಂತಲಾಬಾಯಿಯವರನ್ನೂ ಕಾಣುವ ಭಾಗ್ಯವು ನನ್ನದಾಯಿತು. ಹೋದ ಸಲ ರಂಗಂಪೇಟೆಯ ನಾಡಹಬ್ಬಕ್ಕೆ ಅವರು ದಯಮಾಡಿಸಿದಾಗ ತೋರಿದ ಆತ್ಮೀಯತೆಯೇ ನನ್ನನ್ನು ಅವರೆಡೆಗೆ ಸೆಳೆಯಿತು. 'ಮಕ್ಕಳ ಮಂಟಪ'ದ ಉತ್ಕರ್ಷಕ್ಕಾಗಿ ಅವರು ಪಡುತ್ತಿರುವ ಶ್ರಮ

ವನ್ನು ನಿರೀಕ್ಷಿಸಿ ಕೌತುಕವಾಯಿತು. ಆದರೆ ಬೆಂಗಳೂರಿನಂತಹ ದೊಡ್ಡ ಪಟ್ಟಣದಲ್ಲಿ ನೂರಿನ್ನೂರು ವಿದ್ಯಾರ್ಥಿ-ವಿದ್ಯಾರ್ಥಿನಿಯರಾದರೂ ಬೇಡವೆ? ಒಳ್ಳೆಯ ಕಾರ್ಯಕರ್ತರಿಗೆ ನಮ್ಮ ಜನ ನೀಡುತ್ತಿರುವ ಗೌರವ ಇದು! ಅದೇ ಓಣಿಯಲ್ಲಿಯೇ ವಾಸಿಸುತ್ತಿದ್ದ ಇನ್ನೊರ್ವ ಮಿತ್ರರನ್ನು ಸಂದರ್ಶಿಸಿದ ನಂತರ, ಅವಸರದ ಮೂಲಕ, ಅಲ್ಲಿಯೇ ವಾಸಿಸುತ್ತಿದ್ದ ಕನ್ನಡ ನಾಡಿನ ಸುಪ್ರಸಿದ್ಧ ಸಾಹಿತಿಗಳೂ, ಹಿರಿಯ ನಾಟಕಕಾರರೂ ಆದ 'ಶ್ರೀರಂಗ'ರನ್ನು ಕಾಣದೇ ಇದ್ದುದು ತುಂಬಬಾರದ ನಷ್ಟವೆಂದು ಆಮೇಲೆ ಪೇಚಾಡಿದೆ. ಸಂಜೆಯಲ್ಲಿ 'ಬಸವನಗುಡಿ'ಯ ಕಡೆಗೆ ಹೋಗಿದ್ದೆವು. ದೊಡ್ಡ ಬಸವಣ್ಣನ ಹೊರತು ಅಲ್ಲಿ ಮತ್ತೇನನ್ನೂ ನೋಡುವಂತಿಲ್ಲ. ತಿರುಗಿ ಬರುತ್ತಿರುವಾಗ 'ಉತ್ತರಾದಿಮಠ'ದಲ್ಲಿ ಸುಶ್ರಾವ್ಯ ಪ್ರವಚನ ನಡೆದಿತ್ತು. ಅದೂ 'ಶ್ರೀನಿವಾಸ ಕಲ್ಯಾಣ'ದ ಭಾಗ. ಕೊರತೆ ತುಂಬಿಕೊಂಡಂತಾಯಿತು.

ದ್ವಿತಿಯಾ—ಬುಧವಾರ :- ಇಂದು ಕರ್ನಾಟಕದ ಸುಪ್ರಸಿದ್ಧ ಪತ್ರಿಕಾಕರ್ತರೂ, ಉದ್ದಾಮ ಸಾಹಿತಿಗಳೂ ಆದ ಶ್ರೀ. ಪಿ. ಬಿ. ನಾಯಕರು ನಮ್ಮ ಮನೆಯವರೆಗೂ ಆಗಮಿಸಿ, ನನ್ನನ್ನು ಕೃತಾರ್ಥನನ್ನಾಗಿ ಮಾಡಿದರು. ಅವರ ಸರಳಸ್ವಭಾವ, ಆತ್ಮೀಯತೆ, ಮೆಚ್ಚತಕ್ಕದ್ದು. ತಮ್ಮ ಆಪ್ತವರ್ಗದಲ್ಲಿ ನನ್ನಂತಹ ಅಲ್ಪನಿಗೂ ಸ್ಥಾನವಿತ್ತ ಸಹೃದಯತೆಯನ್ನು ವ್ಯಕ್ತಪಡಿಸಿದ್ದುದಕ್ಕೆ ಅವರ ಬಗ್ಗೆ 'ನುಡಿಸೋತ ಮೂಕಪ್ರೇಮ'ದ ವಿನಾ ನಾನು ಮತ್ತೇನನ್ನು ವ್ಯಕ್ತಗೊಳಿಸಬಲ್ಲೆ!

ಮಧ್ಯಾಹ್ನದಲ್ಲಿ 'ನ್ಯೂ ಪಬ್ಲಿಕ್ ಆಫೀಸು'ಗಳನ್ನು ಕಂಡು ಅಲ್ಲಿಯ ಆಫೀಸಿನ ಕೆಲಸಗಳ ಬಗೆಗೆ ಪರಿಚಯ ಮಾಡಿಕೊಂಡೆ. ಹೊಸದಾಗಿ ಸೇರಿದ ಕನ್ನಡ ಭಾಗದವರು ಅಲ್ಲಿಯ ಜನರಿಂದ ಹೆಚ್ಚಿನದೇನನ್ನೂ ಕಲಿಯುವಂತಹದು ಕಾಣಲಿಲ್ಲ.

ತೃತಿಯಾ—ಗುರುವಾರ :- ಅಕ್ಷಯ್ಯಾ ತೃತಿಯೆಯಂತಹ ದಿವ್ಯ (ಮೂರೂವರೆ ಮುಹೂರ್ತಗಳಲ್ಲೊಂದು) ಮುಹೂರ್ತದಲ್ಲಿ, ಗರ್ಭವತಿಯಾದ ನನ್ನ ಮಗಳನ್ನು ಕರೆದುಕೊಂಡು ಹೊರಡುವುದು ಮೊದಲೇ ನಿಶ್ಚಯವಾಗಿತ್ತು. ಕಾರಣ ಮುಂಜಾವಿನಿಂದ ಹೊರಡುವ ಸಿದ್ಧತೆ ನಡೆಯಿತು. ಊಟ-ಉಪಚಾರಾದಿಗಳನ್ನು ತೀರಿಸಿ, ದೇವರ ಮತ್ತು ಪೂಜ್ಯರ ದರ್ಶನವನ್ನು ಪಡೆದುಕೊಂಡು, ೮ ಗಂಟೆಯ ಸಮಯಕ್ಕೆ ನನ್ನ ಬೆಂಗಳೂರಿನ ಬಾಂಧವ್ಯ ಅಕ್ಷಯವಾಗಿರಲೆಂದು ನೆನೆದು ಶುಭಪ್ರಯಾಣ ಬೆಳೆಸಿದೆ.

ಕೊನೆಯಮಾತು:- ಕೆಲವೇ ದಿನಗಳ ವಾಸ್ತವ್ಯದ ಮೇಲಿಂದ ಬೆಂಗಳೂರಿನಂತಹ ದೊಡ್ಡ ಪಟ್ಟಣದ ಮತ್ತು ಪಟ್ಟಣಿಗರ ಬಗೆಗೆ ಏನನ್ನಾದರೂ ನಿರ್ದಿಷ್ಟವಾಗಿ ಹೇಳುವುದು ಹುಚ್ಚುತನದ್ದಾದೀತಾದರೂ, ಕಂಡ ಕೆಲವಂಶಗಳನ್ನು ತಿಳಿಸುವುದು ಅಪ್ರಾಸಂಗಿಕವಾಗಲಾರದು. ಬೆಂಗಳೂರಿನಲ್ಲಿ ಆಗರ್ಭ ಸಿರಿವಂತರೂ, ಕಡು ಬಡವರೂ ನಿಶ್ಚಿಂತರಾಗಿದ್ದಾರೆ; ಆದರೆ ಮಧ್ಯಮವರ್ಗದ ಜನರು ಮಾತ್ರ ತುಂಬ ತೊಂದರೆಗೊಳಗಾಗಿದ್ದಾರೆ. ಅವರ ಜೀವನ ಸ್ಥಿತಿಯನ್ನು ಕಂಡು ನನಗಂತೂ ಮರುಕವುಂಟಾಯಿತು. ರಾಜಾಜಿನಗರದಿಂದ ವಿಧಾನಸೌಧದ ವರೆಗೂ ನಡೆಯುತ್ತಲೇ ಬರುವ ಅನೇಕ ಕರಣಿಕರನ್ನು ನಾನು ಕಂಡೆ. ನೂತನ ಮೈಸೂರುರಾಜ್ಯದ ನೂತನವೇತನ ಪ್ರಮಾಣವಿನ್ನೂ ಕಾಗದದಲ್ಲಿಯೇ ಉಳಿದದ್ದರಿಂದ, ನೌಕರರಿಗೆ ಲಾಭವೂ ಕಂಡುಬಂದಿಲ್ಲ; ಹಾನಿಯೂ ಗೊತ್ತಾಗಿಲ್ಲ. ಸಂಜೆಯ ಸಮಯದಲ್ಲಿ ಎಲ್ಲಿ ನೋಡಿದರೂ ದುಡಿದು ದುಡಿದು, ದಣಿದುಕೊಂಡು ಬರುತ್ತಿರುವ ಜನರನ್ನೇ ಹೆಚ್ಚುಹೆಚ್ಚಾಗಿ ಕಾಣುತ್ತೇವೆ. ಉತ್ತರ ಕರ್ನಾಟಕದ—ಅದರಲ್ಲೂ ನಗರನಾಡಿನ ಆತಿಥ್ಯ—ಇಲ್ಲಿ ಸಿಕ್ಕುವುದಿಲ್ಲ. 'ನಾವು ನೀವು ನಂಟರು, ಆದರೆ ನಮ್ಮ ಕಂಟಲಿಗೆ ಮಾತ್ರ ಕೈಹಚ್ಚಬೇಡಿ' ಎಂಬ ಜನವೇ ಹೆಚ್ಚು. ಅದಕ್ಕೆ ಕಾರಣವೂ ಇಲ್ಲದಿಲ್ಲ. ಒಟ್ಟಿನಲ್ಲಿ ಜನರು ಸುಶಿಕ್ಷಿತರು; ತಮ್ಮಷ್ಟಕ್ಕೆ ತಾವಿದ್ದುಕೊಂಡು ಇದ್ದುದರಲ್ಲಿಯೇ ಸುಖಪಟ್ಟುಕೊಂಡು ಮಧ್ಯಾದ ಜೀವನವನ್ನು ಸಾಗಿಸಿಕೊಂಡು ಹೋಗುವ ಸಂಸಾರಿಗಳು.

ಹವಾಮಾನ ದೃಷ್ಟಿಯಿಂದ ಬೆಂಗಳೂರು ಉತ್ತಮವಾಗಿದೆಯೆಂದು ಯಾರು ಬೇಕಾದರೂ ಹೇಳಬಹುದು. ಇಂತಹ ಬೇಸಗೆಯಲ್ಲಿಯೂ ಅಲ್ಲಿಯ ಜನರು ವ್ಯಜನವನ್ನೂ, 'ಹೂಜಿ'ಯ ನೀರನ್ನೂ ಉಪಯೋಗಿಸದಿದ್ದುದನ್ನು ಕಂಡು, ಮೊದ-ಮೊದಲು ಅಚ್ಚರಿಯೆನಿಸಿದರೂ, ನನಗೂ ಅದೇ ಸ್ಥಿತಿಯೊದಗಿದಾಗ ತುಂಬ ಅಚ್ಚರಿಯಾಯಿತು. ಇಲ್ಲಿ ಕಾರ್ಖಾನೆಗಳು ಹೆಚ್ಚು; ಮತ್ತು ಉದ್ಯೋಗ-ವ್ಯವಹಾರವೂ ಚೆನ್ನಾಗಿ ನಡೆಯುತ್ತದೆ. ಬೀದಿಗಳೂ ಸ್ವಚ್ಛ. ಮನೆಮನೆಗೂ ಚಿಕ್ಕ ಕೈತೋಟ. ಹಲಸು, ಕಿತ್ತಳೆ, ದಾಳಿಂಬ ಮತ್ತು ತೆಂಗಿನಮರಗಳು ಊರ ತುಂಬ ನೋಡಲು ಸಿಗುತ್ತವೆ. ಮಾತಿನಲ್ಲಿ ವಿನಯ, ಎದ್ದು ಕಾಣುತ್ತದೆ. ಇನ್ನೊಂದು ಅಚ್ಚರಿಯ ಸಂಗತಿಯೆಂದರೆ: ಬಿ. ಟಿ. ಎಸ್. ಬಸ್ಸುಗಳಲ್ಲಿ ಮಕ್ಕಳಿಗಾಗಿ ಹೆಚ್ಚಿನ ಅನುಕೂಲ ಒದಗಿಸಿಕೊಡಲಾಗಿದೆ ಸಣ್ಣ ಮಕ್ಕಳಿಗಾಗಿ ತೆಗೆದುಕೊಳ್ಳುತ್ತಿರುವ ಬಸ್ ಫೇರು ಎಷ್ಟು ಮಾತ್ರಕ್ಕೂ ಹೆಚ್ಚಿನದಲ್ಲ ಎಷ್ಟು ದೂರದ ಶಾಲೆಗೆ ಅವರು ಹೋಗಬೇಕಾದರೂ ತುಂಬ ಅನುಕೂಲ. ಅಖಿಲಕರ್ನಾಟಕದ ರಾಜಧಾನಿಯಾಗುವ ಸೌಭಾಗ್ಯವನ್ನು ಪಡೆದ ಬೆಂಗಳೂರು ಇನ್ನೂ ಬೃಹದಾಕಾರದಲ್ಲಿ ವೃದ್ಧಿಹೊಂದಬೇಕಾಗಿದೆ. ಶಾಂತ ಸ್ವಭಾವದವರೂ, ಶ್ರೇಷ್ಠ ಮುತ್ಸದ್ದಿಗಳೂ ಆದ ಮಾನ್ಯ ಶ್ರೀ. ನಿಜಲಿಂಗಪ್ಪನವರ ಸೂಕ್ತ ಆಡಳಿತದಲ್ಲಿ, ಬೆಂಗಳೂರಷ್ಟೇ ಏಕೆ, ಇಡಿಯ ಕರ್ನಾಟಕ ಸಂಪತ್ಸಮೃದ್ಧರಾಷ್ಟ್ರವೂ, ಮಾದರಿಯ ರಾಜ್ಯವೂ ಆಗಿ ಭಾರತದ ಯಶೋದುಂದುಭಿಯನ್ನು ಮೊಳಗಿಸಲಿ, ಎಂದು ಹಾರೈಸುತ್ತೇನೆ. ಸಿರಿಗನ್ನಡಕ್ಕೆ ಗೆಲುವಾಗಲಿ!

ಭದ್ರಂ—ಶುಭಂ—ಮಂಗಳಂ!

ಕನ್ನಡದಲ್ಲಿ ಸಣ್ಣಕತೆಗಳು

ಪ್ರೊ. ಸಿ. ಎಸ್. ಕುಲಕರ್ಣಿ ಎಮ್. ಎ, ಬಿ. ಟಿ. ಜನತಾಕಾಲೇಜ, ಧಾರವಾಡ

卐

ಇದುವರೆಗೂ ಕನ್ನಡದ ಸಣ್ಣಕತೆಗಳನ್ನು ಕುರಿತು ಅನೇಕ ಜನರು ಚರಿತ್ರಾತ್ಮಕ ಲೇಖನಗಳನ್ನು ಬರೆದಿರುವರು; ಆದರೆ ಅವರಲ್ಲಿಯ ಕೆಲವರು ಅಪೂರ್ಣಾಭ್ಯಾಸಿಗಳು; ಇನ್ನು ಕೆಲವರು ಪ್ರಾದೇಶಿಕ ಅಭಿನಿವೇಶಕ್ಕೆ ಒಳಗಾಗಾದವರು. ಆದುದರಿಂದಲೇ ಸಣ್ಣ ಕತೆಯ ಪ್ರಾರಂಭದ ಇತಿಹಾಸ ವಾದಕ್ಕೆ ಕಾರಣವಾಗಿರುವುದು.

卐

ಲೇಖಾಂಕ ೨

ಬೆಳೆವಣಿಗೆ

ಕನ್ನಡ ಸಾಹಿತ್ಯದಲ್ಲಿ ಸಣ್ಣಕತೆ-ಬೆಳೆದುಬಂದುದು ಕಳೆದ ಅರ್ಧ ಶತಮಾನದಿಂದ ಮಾತ್ರ. ಅದಕ್ಕೂ ಮೊದಲು ಸಣ್ಣಕತೆಗಳು ಕನ್ನಡದಲ್ಲಿ ಇರಲಿಲ್ಲವೆಂದಲ್ಲ; ಆದರೆ ಅವು ನಾವು, ಈಗ ಯಾವುದನ್ನು 'ಸಣ್ಣಕತೆ' ಯೆಂದು ಕರೆಯುತ್ತೇವೆಯೋ ಅಂತಹ ಸಣ್ಣಕತೆ ಆಗಿರಲಿಲ್ಲ. ಅಷ್ಟೇ ಏಕೆ? ೧೯ನೆಯ ಶತಮಾನಕ್ಕೆ ಮೊದಲು ಜಗತ್ತಿನ ಯಾವ ಭಾಷೆಯಲ್ಲಿಯೂ ಸಣ್ಣಕತೆ ಇರಲಿಲ್ಲ.

ಕತೆಯು ಮನುಷ್ಯನಷ್ಟೇ ಹಳೆಯುದಾದರೂ 'ಸಣ್ಣಕತೆ' ಯು ಇತ್ತೀಚಿನದು. ಜಗತ್ತಿನ ಹಲವು ಭಾಷೆಗಳ ಸಾಹಿತ್ಯದಲ್ಲಿ ಪ್ರಾಚೀನ ಕಾಲದಿಂದಲೂ ಚಿಕ್ಕ ಕತೆಗಳು ಸಾಕಷ್ಟು ನಮಗೆ ಕಾಣ ಬರುತ್ತವೆ. ವೇದ, ಉಪನಿಷತ್ತು, ಬಾಯಬಲ್, ಕುರಾನ್ ಮೊದಲಾದ ಧಾರ್ಮಿಕ ಗ್ರಂಥಗಳಲ್ಲಿ ಹಲವು ಸುಂದರವಾದ ಚಿಕ್ಕ ಕತೆಗಳಿವೆ ರಾಮಾಯಣ-ಮಹಾಭಾರತಗಳಂತಹ ಮಹಾಕಾವ್ಯಗಳಲ್ಲಿಯೂ ಉಪಾಖ್ಯಾನಗಳೆಂಬ ಚಿಕ್ಕಕತೆಗಳಿವೆ. ಬುದ್ಧಜಾತಕಗಳು ಪಂಚತಂತ್ರ, ಹಿತೋಪದೇಶಗಳಂತೂ ಚಿಕ್ಕ ಕತೆಗಳಿಂದಲೇ ತುಂಬಿವೆ. ಬೃಹತ್ಕಥಾ-ಮಂಜರಿ, ಕಥಾಸರಿತ್ ಸಾಗರ ಶುಕಸಪ್ತತಿ, ವೇತಾಳ ಪಂಚವಿಂಶತಿ, ಅರೇಬಿಯನ್ ನೈಟ್ಸ್ ಇವೆಲ್ಲವುಗಳು ಚಿಕ್ಕಕತೆಗಳ ಭಾಂಡಾರಗಳು ಆಗಿವೆ.

ಇದೆಲ್ಲ ಜಗತ್ತಿನ ಸಾಹಿತ್ಯದ ಮಾತು. ಕನ್ನಡ ಸಾಹಿತ್ಯದಲ್ಲಿಯೂ ಚಿಕ್ಕಕತೆಗಳಿಗೆ ಕೊರತೆಯಿಲ್ಲ 'ವೊಡ್ಡಾರಾಧನೆ' ಯಿಂದ 'ರಾಮಾಶ್ವಮೇಧ' ದ ವರೆಗೂ ಹರಿದುಬಂದ ಕನ್ನಡ ಸಾಹಿತ್ಯ-ವಾಹಿನಿಯಲ್ಲಿ, ಅಸಂಖ್ಯಾತವಾದ ಸುಮನೋಹಾರಿಯಾದ ಚಿಕ್ಕ ಕತೆಗಳು ತೇಲಿಬಂದಿವೆ. ಹೀಗೆ ವಿಶ್ವಸಾಹಿತ್ಯದಲ್ಲಿ ಚಿಕ್ಕ ಕತೆಗಳು ಪೂರ್ವಕಾಲದಿಂದಲೂ ಇದ್ದರೂ, ಅವು ಆಧುನಿಕ ಕಾಲದ 'ಸಣ್ಣಕತೆ' ಗಳಾಗಿ ಇರಲಿಲ್ಲ.

'ಸಣ್ಣಕತೆ' ಆಧುನಿಕಕಾಲದ ಒಂದು ವಿಶಿಷ್ಟ ಸಾಹಿತ್ಯ-ಪ್ರಕಾರ. 'ಸಣ್ಣಕತೆ' ಯನ್ನು ಮೊಟ್ಟಮೊದಲು ಪ್ರಾರಂಭಿಸಿದವನು ಅಮೇರಿಕೆಯ ಎಡ್ಗರ್ ಅಲೆನ್ ಪೋ ಎಂಬವನು. ಅವನು ೧೮೩೩ರಲ್ಲಿ ತನ್ನ ಮೊದಲನೆಯ ಸಣ್ಣಕತೆಯನ್ನು ಪ್ರಕಟಿಸಿ, ಆಧುನಿಕ ಜಗತ್ತಿನಲ್ಲಿ ಸಣ್ಣಕತೆಯ ಯುಗವನ್ನು ಆರಂಭಿಸಿದನು ಮುಂದೆ ಒಂದೇ ಒಂದು ನೂರು ವರುಷಗಳಲ್ಲಿ ಸಣ್ಣಕತೆ ಸಾಹಿತ್ಯದಲ್ಲಿ ಒಂದು ಅತ್ಯುತ್ತಮವಾದ ಪ್ರಕಾರವೆನಿಸಿಕೊಂಡಿತು.

ಆಧುನಿಕ ಕಾಲದ ಈ 'ಸಣ್ಣಕತೆ' ಗೂ ನಮ್ಮ ಪ್ರಾಚೀನ ಸಾಹಿತ್ಯದಲ್ಲಿ ಕಂಡುಬರುವ ಚಿಕ್ಕಕತೆಗಳಿಗೂ ಬಹಳ ವ್ಯತ್ಯಾಸವಿದೆ 'ಸಣ್ಣಕತೆ' ಅದರ ಜನಕನಾದ ಪೋ ಹೇಳಿದಂತೆ. ಅರ್ಧಗಂಟೆಯಿಂದ ಹಿಡಿದು ಒಂದು ಅಥವಾ, ಎರಡು ಗಂಟೆಗಳೊಳಗೆ ಓದಿ ಮುಗಿಸಬಹುದಾದ ಗದ್ಯಕಥನ.[೧] ಆದರೂ ವೇಳೆಯ ಪರಿಮಿತಿಯೊಂದೇ ಅದರ ಲಕ್ಷಣವೆಂದು ತಿಳಿಯಬಾರದು ಎಚ್. ಜಿ. ವೆಲ್ಸ್ ಅವರು ಹೇಳಿದಂತೆ ಅದು "ಭಯಂಕರವೋ, ಕರುಣಾಜನಕವೋ ಹಾಸ್ಯಪೂರ್ಣವೋ ಸುಂದರವೋ, ಪೂರ್ಣಬೋಧಪ್ರದವೋ ಆಗಿರಬಹುದು"[೨] ಏನೇ ಇದ್ದರೂ ಸಣ್ಣಕತೆ ಕಲಾಪೂರ್ಣವಾಗಿರಬೇಕೆಂಬುದೇ ಮುಖ್ಯವಾದ ಮಾತು. ಯಾವ ವಸ್ತುವೂ ಸಣ್ಣಕತೆಯ ವಿಷಯವಾಗಬಹುದು. ಅದು ಓದುಗರ ಮನಸ್ಸಿನ ಮೇಲೆ ವಿಶಿಷ್ಟ ಪರಿಣಾಮ ಮಾಡುವಂತೆ ನಿರೂಪಿಸುವುದೇ ಸಣ್ಣಕತೆಯಲ್ಲಿ ಅಡಗಿದ ಕೌಶಲ್ಯ

೧, ೨, ವಿಜಯ-ಸಾಹಿತ್ಯ ಸಮ್ಮೇಳನ ಸಂಚಿಕೆ. ಶ್ರೀ. ತ. ಶ್ರೀಕಂಠಯ್ಯನವರ ಭಾಷಣ

“ ಸಣ್ಣಕತೆಯುದು ಹಸ್ತಿದಂತದಲ್ಲಿಯ ಕುಸುರಿಗೆಲಸ. ಸಂಗ್ರಹಃ ಕಲೆ ಅದರ ಜೀವಾಳ. ವೇಗ ಹಾಗೂ ಉತ್ಕಟವಾದ ನಿರೂಪಣೆಗೆ, ಸೂಕ್ಷ್ಮವಾದ ಪೃಥಕ್ಕರಣೆ, ಔಚಿತ್ಯ ಪರಿಜ್ಞಾನ ಇವುಗಳಿಂದ ಅದು ಹಿರಿಮೆಯನ್ನು ಪಡೆಯುತ್ತದೆ.... ಇಡಿಯಾದ ಹೂವಿನಲ್ಲಿ ನೋಟವಿಟ್ಟು ಬಿಡಿಯಾದ ಎಸಳುಗಳನ್ನು ಬಿಡಿಸಿ ತೋರುವುದರಲ್ಲಿ ಅದರ ಕೌಶಲ್ಯ-ವಿದೆ. ಘನತೆಯಿದೆ ಅನಂತ ಆಕಾಶದ ವಿಸ್ತಾರಕ್ಕೆ ಕಾದಂಬರಿ ಕೈ ಚಾಚುತ್ತದೆ ಒಂದೊಂದೇ ಗ್ರಹ-ತಾರೆಗಳ ರೂಪಗುಣಕ್ಕೆ ಸಣ್ಣಕತೆ ಸೋಲುತ್ತದೆ ” ೩ ಹೀಗೆ ಸಣ್ಣಕತೆ ಕಾವ್ಯ-ನಾಟಕ ಕಾದಂಬರಿಗಳಂತೆ ಒಂದು ಕಲಾಪೂರ್ಣವಾದ ಸಾಹಿತ್ಯ ಪ್ರಕಾರವೆನಿಸಿದೆ

ನಮ್ಮ ಪ್ರಾಚೀನ ಸಾಹಿತ್ಯದಲ್ಲಿ, ಜನಪದ ಸಾಹಿತ್ಯದಲ್ಲಿ ದೊರೆವ ಚಿಕ್ಕ ಕತೆಗಳು ಗಾತ್ರದಿಂದ ಚಿಕ್ಕವಾದರೂ, ಕಲೆಯನ್ನೇ ಉದ್ದೇಶವನ್ನಾಗಿಟ್ಟುಕೊಂಡು ಬರೆಯಲ್ಪಟ್ಟವುಗಳಲ್ಲ. ಸಾಹಿತ್ಯ ಲಕ್ಷಣ ವಿಶೇಷಗಳನ್ನು ಅವು ಒಳಗೊಂಡಿರಲಿಲ್ಲ “ ಅಂತಹ ಎಲ್ಲ ಕತೆಗಳ ಗುರಿ ನೀತಿತತ್ತ್ವಬೋಧನ, ಇಲ್ಲವೆ ಕೇವಲ ಮನೋರಂಜನೆ ಆಗಿರುತ್ತಿದ್ದಿತು. ಸ್ವಾಭಾವಿಕವಿರಲಿ ಅಸ್ವಾಭಾವಿಕವಿರಲಿ, ವಿಸ್ಮಯಕಾರಕವಾದ, ಚಮತ್ಕೃತಿಯಿಂದ ಕೂಡಿದ ಘಟನೆಯನ್ನೋ, ಘಟನಾವಳಿಯನ್ನೋ ಕಥಿಸುತ್ತಿದ್ದರಾಯಿತು ಅದೊಂದು ಕಥೆಯೆಂದು ನಮ್ಮವರ ತಿಳಿವಳಿಕೆ. ಅಂತಹ ಕತೆಗಳನ್ನೂ ಪ್ರೀತಿಯಿಂದ ಕೇಳುವವರು ಅಂದಿನ ಕಾಲದಲ್ಲಿ ಸಾಕಷ್ಟು ಜನರು ಇದ್ದರು. ಯಾವ ವಿಶಿಷ್ಟ ಲಕ್ಷಣಗಳ ಒರೆಗಲ್ಲಿಗೂ ಅಂದಿನ ಕಥೆಗಳನ್ನು ತಿಕ್ಕಿನೋಡುವ ಕಾರಣವಿರಲಿಲ್ಲ ಜನರಲ್ಲಿ ಹಾಗೆ ಒರೆಗೆ ಹಚ್ಚಿ ನೋಡಬೇಕೆಂಬ ಅರಿವೂ ಇರಲಿಲ್ಲ.... ಇನ್ನೊಂದು ವಿಶೇಷವೆಂದರೆ, ನಮ್ಮ ಲಕ್ಷಣಶಾಸ್ತ್ರದ ಗ್ರಂಥಗಳಲ್ಲಿ ಅದರ ಸ್ವರೂಪ-ಗುಣವಿಶೇಷಗಳನ್ನು ವಿವರಿಸಿ ಹೇಳುವಂತಹ ಮಾತುಗಳಾವುವೂ ಕಾಣಿಸುವುದಿಲ್ಲ. ” ೪.

ಹೀಗೆ ನಮ್ಮ ಸಾಹಿತ್ಯದಲ್ಲಿ ಪ್ರಾಚೀನಕಾಲದಿಂದಲೂ ಚಿಕ್ಕ ಕತೆಗಳು ಹೇರಳವಾಗಿದ್ದರೂ, ಅವು ಆಧುನಿಕಕಾಲದ ‘ ಸಣ್ಣಕತೆ ’ ಯಂತೆ ಒಂದು ವಿಶಿಷ್ಟ ಸಾಹಿತ್ಯಪ್ರಕಾರವೆನಿಸಿರಲಿಲ್ಲ. ಅವುಗಳ ಲಕ್ಷಣ ವಿಶೇಷಗಳನ್ನೂ ಅಲಂಕಾರ ಶಾಸ್ತ್ರಜ್ಞರು ಚರ್ಚಿಸಿರಲಿಲ್ಲ. ಅವುಗಳನು ಬರೆಯುವವರೂ ಓದುವವರೂ ಅವುಗಳನ್ನು ಒಂದು ಕಲೆಯೆಂದು ಪರಿಗಣಿಸಿರಲಿಲ್ಲ.

‘ ಸಣ್ಣಕತೆ ’ ಯು ಒಂದು ಕಲಾಮಯವಾದ ಸಾಹಿತ್ಯವಾಗ-ಬಹುದೆಂದು ಪ್ರಜ್ಞೆಮೂಡಿದ್ದು ಆಧುನಿಕ ಕಾಲದಲ್ಲಿಯೇ, ಅದೂ ಆಂಗ್ಲಸಾಹಿತ್ಯದ ಪ್ರಭಾವದಿಂದಲೇ—ಎಂದು ಹೇಳಬಹುದು. ಆಂಗ್ಲ ಸಾಹಿತ್ಯದ ಪ್ರಭಾವವು ಕನ್ನಡದಲ್ಲಿ ಭಾವಗೀತಗಳನ್ನು ಪ್ರಚೋದಿಸಿದಂತೆ ಸಣ್ಣಕತೆ ’ ಗಳನ್ನೂ ಪ್ರಚೋದಿಸಿತು ಎಂದು ಹೇಳಿದರೆ ತಪ್ಪಾಗ-ಲಾರದು.



ಆದರೆ ಶ್ರೀ ಎಸ್. ವ್ಹಿ. ರಂಗಣ್ಣನವರು ಹೇಳಿದಂತೆ “ ಸಣ್ಣಕತೆಯಂತೂ ನಿಸ್ಸಂಶಯವಾಗಿ ಲಂಗನ್ನುಟ್ಟ ದೊರೆಸಾನಿ ” ೫ ಎಂಬ ಮಾತು ಮಾತ್ರ ಒಪ್ಪಿಕೊಳ್ಳತಕ್ಕದ್ದಲ್ಲ ಈ ಅಭಿಪ್ರಾಯವನ್ನು ವಿರೋಧಿಸಿ ಶ್ರೀ ಕೃಷ್ಣಕುಮಾರ ಕಲ್ಲೂರರು ಅವರು “ ಸಣ್ಣಕತೆಯ ಗೂಡು ಕನ್ನಡನಾಡಿನಲ್ಲೇ ಬೆಳೆದುದು; ಅದರಲ್ಲಿ ತುಂಬಿದ ಜೀವಾಳ ಕನ್ನಡದ್ದೇ! ಹೆಸರು ಮಾತ್ರ ಇಂಗ್ಲೀಷಿನಿಂದ ಎತ್ತಿಕೊಂಡದ್ದೇನೋ ನಿಜ. ” ೬ ಎಂದು ಹೇಳಿದ ಮಾತುಗಳು ಯೋಗ್ಯವಾಗಿವೆ. ಈ ವಿಷಯದಲ್ಲಿ ಶ್ರೀ ವರದರಾಜ ಹುಯಿಲಗೋಳ ಅವರು ಹೇಳುವ ಮಾತುಗಳು ಎಲ್ಲರೂ ಒಪ್ಪತಕ್ಕವಾಗಿವೆ “ ಹೊಸ ಸಾಹಿತ್ಯದಲ್ಲಿ ಕಾದಂಬರಿಗಳು, ಭಾವಗೀತೆಗಳು ಭಾಷಾಂತರದಿಂದ ಆರಂಭವಾದು-ದನ್ನು ನಾವು ನೋಡುತ್ತೇವೆ. ಆದರೆ ಸಣ್ಣಕತೆಗಳು ಮಾತ್ರ ಭಾಷಾಂತರದಿಂದ ಆರಂಭವಾಗಿಲ್ಲ. ಪಾಶ್ಚಾತ್ಯ ಲೇಖಕರ ಸಣ್ಣಕತೆಗಳ ಭಾಷಾಂತರಗಳು ಮೊದಲು ಹೊರಟಿಲ್ಲ. ಅವರ ಅನುಕರಣೆ ಮಾಡಿ ಸಣ್ಣಕತೆಗಾರರು ಕತೆಗಳನ್ನು ಮೊದಲು ಬರೆಯಲಿಲ್ಲ ಇದನ್ನು ವಿಮರ್ಶಕರು ಗಮನಿಸತಕ್ಕ ಮಾತಾಗಿದೆ. ಸಣ್ಣಕತೆಯ ಸತ್ವ ಕನ್ನಡ ಜನತೆಯಲ್ಲಿ ಇದ್ದಿತು. ಜನಕರಾಜನಿಗೆ ನೆಲದ ಒಡಲಲ್ಲಿ ಸೀತೆ ದೊರೆತಂತೆ ಮಾಸ್ತಿಯವರಿಗೆ ಕನ್ನಡದ ನೆಲದಲ್ಲಿ ಸಣ್ಣಕತೆ ಕಂಡಿತು ” ೭

ಹೀಗೆ ಕನ್ನಡದಲ್ಲಿ ಸಣ್ಣಕತೆ ತೀರ ಆಧುನಿಕವಾಗಿ ಬಂದರೂ ಅದು ಮೊದಲಿನಿಂದಲೂ ತನ್ನತನವನ್ನು ಕಾಯ್ದುಕೊಂಡಿರುವುದು ಒಂದು ಹೆಮ್ಮೆಯ ವಿಷಯವಾಗಿದೆ

ಆಧುನಿಕ ಕಾಲದಲ್ಲಿಯೆಂದರೆ, ಯಾವಾಗ ಸಣ್ಣಕತೆ ಕನ್ನಡ ಸಾಹಿತ್ಯದಲ್ಲಿ ಕಾಣಿಸಿಕೊಂಡಿತು? ಎಂಬ ಪ್ರಶ್ನೆ ಈಗ ಸ್ವಾಭಾವಿಕವಾಗಿಯೇ ನಮ್ಮ ಮುಂದೆ ಬಂದು ನಿಲ್ಲುತ್ತದೆ

೩. ಸಾಹಿತ್ಯೋಪಾಸನೆ— ಶ್ರೀ ರಂ. ಶ್ರೀ. ಮುಗಳಿ
೪. ೨-೨-೧೯೫೦ರಲ್ಲಿ ನಡೆದ ಸಣ್ಣಕತೆಗಾರರ ಸಮ್ಮೇಳನದ ಅಧ್ಯಕ್ಷರ ಭಾಷಣ— ಶ್ರೀ ಬೆಟಗೇರಿ ಕೃಷ್ಣಶರ್ಮರು.
೫, ೬, ‘ ಕನ್ನಡ ಸಾಹಿತ್ಯದಲ್ಲಿ ಸಣ್ಣ ಕತೆಯ ಸ್ಥಾನ—’ ವರದರಾಜ ಹುಯಿಲಗೋಳ; ಕನ್ನಡ ಸಾಹಿತ್ಯ ಪರಿಷತ್ಪತ್ರಿಕೆ —ಜೂನ್ ೧೯೪೧
೭, ‘ ಕನ್ನಡ ಸಣ್ಣ ಕತೆಗಳ ಬೆಳವಣಿಗೆ —’ ವರದರಾಜ ಹುಯಿಲಗೋಳ ‘ ಜಯಕರ್ನಾಟಕ ’ ನವರಾತ್ರಿಯ ಸಂಚಿಕೆ

ಕನ್ನಡ ಸಾಹಿತ್ಯದಲ್ಲಿ ಸಣ್ಣಕತೆಯನ್ನು ಮೊತ್ತಮೊದಲು ಪ್ರಾರಂಭಿಸಿದ ಮಾನ ಯಾರಿಗೆ ಸಲ್ಲಬೇಕು ?—ಎಂಬ ಬಗ್ಗೆ ಸ್ವಲ್ಪ ವಾದವಿವಾದವಿದೆ; ಆದರೆ ತುಸು ವಿಚಾರಿಸಿನೋಡಿದರೆ, ಈ ವಾದವಿವಾದವು ಅರ್ಥವಿಲ್ಲದ್ದು ಎಂಬ ಮಾತು ಮನದಟ್ಟಾಗುತ್ತದೆ. ಕನ್ನಡದಲ್ಲಿ ಸಣ್ಣಕತೆಗಳನ್ನು ಮೊತ್ತಮೊದಲು ಪ್ರಾರಂಭಿಸಿದ ಮಹನೀಯರಲ್ಲಿ ನಾವು ಮುಖ್ಯವಾಗಿ ನಾಲ್ವರ ಹೆಸರುಗಳನ್ನು ಕೇಳುತ್ತೇವೆ. ಅವರೆಂದರೆ ದಿ. ಪಂಜೇ ಮಂಗೇಶರಾಯರು; ಎಮ್ ಎನ್ ಕಾಮತರು; ಕೆರೂರ ವಾಸುದೇವಾಚಾರ್ಯರು ಹಾಗೂ ಶ್ರೀಮಾನ್ ಮಾಸ್ತಿ ವೆಂಕಟೇಶ ಅಯ್ಯಂಗಾರರು.

ಶ್ರೀಮಾನ್ ಮಂಜೇಶ್ವರ ಗೋವಿಂದ ಪೈಗಳವರು ದಿಗವಂತ ಪಂಜೆ ಮಂಗೇಶರಾಯರ ನೆನಪಿಗಾಗಿ ಲೇಖನವನ್ನು ಬರೆಯುತ್ತ “೧೯೦೦ರವರೆಗೆ ಕನ್ನಡಸಾಹಿತ್ಯದ ಅಂಗವೆನಿಸತಕ್ಕ ಚಿಕ್ಕಕತೆಗಳು ಇಲ್ಲದಿದುದರಿಂದ, ಆದೊಂದು ನೂತನೆಯನ್ನು ಸೃಜಿಸಿ, ಅದನ್ನು ನಮ್ಮ ಸಾಹಿತ್ಯಕ್ಕೆ ಮೊತ್ತಮೊದಲು ದೊರೆಕಿಸಿಕೊಟ್ಟ ಪಂಜೆಯವರೇ ಕನ್ನಡ ಕಥೆಗಳ ವಿಧಾತೃರೆಂಬ ಸ್ವಯಂವ್ಯಕ್ತವಾದ ಸತ್ಯಕ್ಕೆ ಬೇರೊಂದು ಸತ್ಯಾಪನವು ಬೇಕೆಂದಿಲ್ಲ” ಎಂದು ಹೇಳಿದ್ದಾರೆ. ಶ್ರೀ. ಸಿ. ಕೆ. ವೆಂಕಟರಾಮಯ್ಯನವರು ‘ಶ್ರೀನಿವಾಸರ ಸಣ್ಣಕತೆಗಳು’ ಎಂಬ ವಿಷಯವಾಗಿ ಮಾಸ್ತಿಯವರಿಗೆ ಕಾಣಿಕೆಯಾಗಿ ಅರ್ಪಿಸಿದ ‘ಜೀವನ’ ದಲ್ಲಿ ಬರೆಯುತ್ತ “ಯಾರು ಆ ಸಾಹಿತ್ಯಭಾಗವನ್ನು—ತಾವು ಅದರ ಮೂಲ ಪುರುಷರಿಲ್ಲದಿದ್ದರೂ ಜನರಿಗೆ ಮಾನ್ಯವಾಗುವಂತೆ, ಭಾಷಾದೇವಿಗೆ ಭೂಷಣವಾಗುವಂತೆ, ಜಗತ್ತಿನ ಇತರ ಸಾಹಿತ್ಯಗಳ ಶ್ರೇಷ್ಠ ಕೃತಿಗಳೊಂದಿಗೆ ಸರಿದೂಗುವಂತೆ ಸೃಷ್ಟಿಸುತ್ತಾರೋ, ಅವರೇ ಆ ಸಾಹಿತ್ಯಭಾಗಕ್ಕೆ ಮೂಲಪುರುಷರು” ಎಂದು ಅಭಿಪ್ರಾಯಪಟ್ಟಿದ್ದಾರೆ.

ಸರಿಯಾದ ರೀತಿಯಲ್ಲಿ ತಿಳಿದುಕೊಂಡರೆ, ಈ ಎರಡೂ ಅಭಿಪ್ರಾಯಗಳಲ್ಲಿ ವಿರೋಧವೇನೂ ಇಲ್ಲ. ಕಾಲಾನುಕ್ರಮದಿಂದ ನೋಡಿದಾಗ ದಿ. ಪಂಜೆ ಮಂಗೇಶರಾಯರೇ ಕನ್ನಡದ ಮೊದಲಕತೆಗಾರರೆಂಬ ಮಾತನ್ನು ನಾವು ಒಪ್ಪಲೇಬೇಕು. ಅವರ ಮೊದಲ ಸಣ್ಣಕತೆ ಕ್ರಿ. ಶ. ೧೯೦೦ರ ಜುಲೈತಿಂಗಳ ‘ಸುವಾಸಿನಿ’ಯ ಸಂಚಿಕೆಯಲ್ಲಿ ಪ್ರಕಟವಾಯಿತೆಂದು, ಶ್ರೀಮಾನ್ ಗೋವಿಂದ ಪೈಗಳ ಹೇಳಿದ್ದಾರೆ. ಆದುದರಿಂದ ಪಂಜೆಯವರೇ ಕಾಲಾನುಕ್ರಮದಲ್ಲಿ ಕನ್ನಡದ ಮೊದಲ ಸಣ್ಣಕತೆಗಾರರು.

ಶ್ರೀ. ತ. ಸು. ಶ್ಯಾಮರಾಯರು ಕೂಡ ಈ ಮಾತನ್ನು ಒಪ್ಪುತ್ತಾರೆ. “ಕನ್ನಡದಲ್ಲಿ ಸಣ್ಣಕತೆಗಳನ್ನು ಮೊತ್ತಮೊದಲು ನಾಟಿದವರಾರೆಂಬ ವಿಚಾರದಲ್ಲಿ ಬೇಕಾದಷ್ಟು, ಚರ್ಚೆ ನಡೆದಿದೆ ದಿವಂಗತ ಪಂಜೆ ಮಂಗೇಶರಾಯರಿಗೆ ಆ ಕೀರ್ತಿ ಸಲ್ಲಬೇಕೆಂಬುದು ನಿರ್ವಿವಾದವೆಂದು ತೋರುತ್ತದೆ.” [೪] ಆದುದರಿಂದ ದಿ. ಪಂಜೆ ಮಂಗೇಶರಾಯರನ್ನು ನಾವು ಕನ್ನಡ ಸಣ್ಣಕತೆಗಳ ಪಿತಾಮಹ ಎಂದು ಕರೆಯಬಹುದು.

‘ಸಣ್ಣಕತೆ’ ಸಾಹಿತ್ಯದ ಒಂದು ಸುಂದರವಾದ ಕಲಾಪರಿಪೂರ್ಣವಾದ ಅಂಗ. ಸಾಹಿತ್ಯದ ಇತರ ಪ್ರಕಾರಗಳಂತೆ ಅದೂ ಆನಂದವನ್ನು ನೀಡಬಲ್ಲದು. ‘ಸಣ್ಣಕತೆಗೂ ತನ್ನವೇ ಆದ ಲಕ್ಷಣ ವಿಶೇಷಗಳಿವೆ’ ಎಂಬ ಪ್ರಜ್ಞೆಯಿಂದ ಕನ್ನಡದಲ್ಲಿ ಸಣ್ಣಕತೆಗಳನ್ನು ಮೊತ್ತಮೊದಲು ಬರೆದವರು ‘ಶ್ರೀನಿವಾಸ’ರಾದ ಶ್ರೀಮಾನ್ ಮಾಸ್ತಿ ವೆಂಕಟೇಶ ಅಯ್ಯಂಗಾರರು, ಆದುದರಿಂದ ಸೀತೆಗೆ ಜನಕ ರಾಜನು ಜನಕನಾದನಂತೆ, ಕನ್ನಡದ ಸಣ್ಣಕತೆಗಳಿಗೆ ಕನ್ನಡದ ‘ಆಸ್ತಿ’ಯಾದ ಮಾಸ್ತಿಯವರೇ ಜನಕರು.

ದಿ. ಎಮ್. ಎನ್ ಕಾಮತರು ಮತ್ತು ಕೆರೂರ ವಾಸುದೇವಾಚಾರ್ಯರು, ಕಾಲಾನುಕ್ರಮದಲ್ಲಿ ಮೊದಲು ಸಣ್ಣಕತೆ ಬರೆದವರೂ ಅಲ್ಲ; ‘ಸಣ್ಣಕತೆ’ ಸಾಹಿತ್ಯದ ಒಂದು ವಿಶಿಷ್ಟ ಅಂಗ; ಅದಕ್ಕೆ ವಿಶೇಷ ಲಕ್ಷಣಗಳಿವೆ—ಎಂಬ ಪ್ರಜ್ಞೆಯುಳ್ಳವರಾಗಿ ಅದನ್ನು ಬಳಸಿದವರೂ ಅಲ್ಲ. ಆದುದರಿಂದ ‘ಆರು ಮೊದಲಿಗರು ?’ ಎಂಬ ವಾದ ಅವರಿಗೆ ಅನ್ವಯಿಸುವುದೇ ಇಲ್ಲ.

ಸಣ್ಣಕತೆಯ ಆದ್ಯ ಪ್ರವರ್ತಕರ ಬಗ್ಗೆ ವಿಚಾರಿಸಿದನಂತರ ಕನ್ನಡದ ಸಣ್ಣಕತೆಗಳ ಬೆಳವಣಿಗೆಯನ್ನು ಕುರಿತು ವಿಚಾರಿಸುವುದು ಕ್ರಮಪ್ರಾಪ್ತವಾಗಿದೆ.

ತಾನು ಹುಟ್ಟಿದ ೫೭ ವರುಷಗಳಲ್ಲಿಯೆ ಕನ್ನಡ ಸಣ್ಣಕತೆಯು ಬೆಳೆ, ಹುಲುಸಾಗಿ ಅಸಂಖ್ಯಾತವಾಗಿ ಬೆಳೆದಿದೆ. ಈ ಬೆಳವಣಿಗೆಯಲ್ಲಿ ಮುಖ್ಯವಾಗಿ ನಾವು ನಾಲ್ಕು ಹಂತಗಳನ್ನು ಗುರುತಿಸಬಹುದು. (೧) ಆರಂಭದ ಕಾಲ (೨) ಲಲಿತ ಕತೆಗಳ ಕಾಲ (೩) ‘ಪ್ರಗತಿಶೀಲ’ ಕತೆಗಾರರಕಾಲ (೪) ನವ್ಯಕತೆಗಳ ಕಾಲ.

ಆರಂಭದ ಕಾಲ:– ಕನ್ನಡ ಸಣ್ಣಕತೆಗಳ ಆರಂಭದ ಕಾಲವು ಸಾಮಾನ್ಯವಾಗಿ ದಿ ಪಂಜೆ ಮಂಗೇಶರಾಯರ ಮೊದಲ ಕತೆ ಪ್ರಕಟವಾದಾಗಿನಿಂದ ‘ಶ್ರೀನಿವಾಸ’ರ ಮೊದಲ ಕಥಾಸಂಕಲನವಾದ ‘ಕೆಲವು ಸಣ್ಣಕತೆಗಳು’ ಪ್ರಸಿದ್ಧವಾದ ಅವಧಿಯವರೆಗಿನದು, ಎಂದರೆ ಕ್ರಿ. ಶ. ೧೯೨೦ ಎಂದು ಹೇಳಬಹುದು.

ಈ ಅವಧಿಯಲ್ಲಿ ಮಂಗಳೂರಿನ ‘ಸುವಾಸಿನಿ’ ಉಡುಪಿಯ ‘ಶ್ರೀಕೃಷ್ಣಸೂಕ್ತಿ’ ಧಾರವಾಡದ ‘ವಾಗ್ಭೂಷಣ’ ಹುಬ್ಬಳ್ಳಿಯ ‘ಸಚಿತ್ರಭಾರತ’ ಬೆಂಗಳೂರಿನ ‘ಮಧುರವಾಣಿ’ ಮೊದಲಾದ ಪತ್ರಿಕೆಗಳು, ಹಲವು ಸುಂದರವಾದ ಸಣ್ಣಕತೆಗಳನ್ನು ಪ್ರಕಟಿಸಿದುವು.

ಈ ಕಾಲದ ಕಥಾಲೇಖಕರಲ್ಲಿ ಹೆಚ್ಚು ಕತೆಗಳನ್ನು ಬರೆದವರೆಂದರೆ ದಿ. ಪಂಜೆ ಮಂಗೇಶರಾಯರು; ದಿ. ಎಮ್. ಎನ್. ಕಾಮತರು. ಹಾಗೂ ದಿ. ಕೆರೂರ ವಾಸುದೇವಾಚಾರ್ಯರು.

ದಿ. ಪಂಜೆ ಮಂಗೇಶರಾಯರು ಹೆಚ್ಚಾಗಿ ಹಾಸ್ಯಪ್ರಧಾನವಾದ ಹಾಗೂ ಐತಿಹಾಸಿಕ ಕತೆಗಳನ್ನು ಬರೆದಂತೆ ತಿಳಿಯುತ್ತದೆ. ಶ್ರೀಮಾನ್

[೪] ‘ಬೇವು–ಬೆಲ್ಲ’—ಪೀಠಿಕೆ. ಪುಟ ೨೧

ಗೋವಿಂದ ಪೈಗಳು ಅವರ ಕತೆಗಳ ಬಗ್ಗೆ ಅವರ ನೆನಪಿಗಾಗಿ ಬರೆದ ಲೇಖನದಲ್ಲಿ ಹೀಗೆ ಹೇಳಿದ್ದಾರೆ: "೧೯೦೦ ರಿಂದ ಪ್ರಕಟವಾದ 'ಸುವಾಸಿನಿ' ಯಲ್ಲಿ ಪಂಜೆಯವರ ಚಿಕ್ಕಕತೆಗಳು ಇವೆ. 'ನನ್ನ ಚಿಕ್ಕ ತಂದೆ' 'ನನ್ನ ಚಿಕ್ಕ ತಾಯಿ' 'ಭಾರತಶ್ರವಣ' 'ಹೋಟ್ಲಿನಲ್ಲಿ' ಮೊದಲಾದುವುಗಳಲ್ಲಿ ಅವರ ನೈಸರ್ಗಿಕವಾದ ಹಾಸ್ಯರಸವು, ಹುಟ್ಟಿನಿಂದ ಜೇನಿನಂತೆ ಸೂಸುತ್ತವೆ. ಮಿಕ್ಕ, 'ದುರ್ಗಾವತಿ' 'ವೀರಮತಿ' 'ಪೃಥುದಾ' 'ಶೈಲಿನಿ' ಎಂಬವು ಐತಿಹಾಸಿಕ ಕಥೆಗಳು. ಇವಲ್ಲಿಯ ಕೊನೆಯ ಎರಡೂ, ಅವರ ಎಷ್ಟೋ ಬಳಿಕ ಬರೆದ 'ಕೋಟಿ ಚೆನ್ನಯ್ಯ' ಎಂಬ ಉತ್ಕೃಷ್ಟ ಕತೆಯೂ, ಕನ್ನಡ ಕಥೆಗಳ ಮೊದಲ ಪಂಕ್ತಿಯಲ್ಲಿ ಎಂದಿಗೂ ಬಾಳತಕ್ಕವು."

ಪಂಜೆಯವರ ಈ ಕತೆಗಳ ಸ್ಫೂರ್ತಿಯ ಸೆಲೆ ಇಂಗ್ಲೀಷ್-ಸಾಹಿತ್ಯಾಭ್ಯಾಸವೇ—ಎಂದು ಶ್ರೀ. ಬೆಟಗೇರಿ ಕೃಷ್ಣಶರ್ಮರು ಅಭಿಪ್ರಾಯಪಟ್ಟಿದ್ದಾರೆ. "ಅವರ ಸಾಹಿತ್ಯನಿರ್ಮಿತಿಗೆ ಅವರ ಇಂಗ್ಲೀಷ್ ಸಾಹಿತ್ಯದ ಅಭ್ಯಾಸವೇ ಪ್ರಚೋದಕವಾಗಿದೆ. ಅವರು ರಚಿಸಿದ ಕವಿತೆಗಳೂ ಕತೆಗಳೂ—ಕೋಟಿ ಚೆನ್ನಯ್ಯ ಒಂದನ್ನುಳಿದು—ಇಂಗ್ಲಿಷ್ ಸಾಹಿತ್ಯದ ಪ್ರಭಾವದಿಂದಲೇ ಹೊರಟುವುಗಳಾಗಿವೆ" ೯ ಎಂದು ಅವರು ಹೇಳಿದ್ದಾರೆ.

"ದಿವಂಗತ ಎಂ. ಎನ್. ಕಾಮತರಿಗೆ ಕಥಾಲೇಖನಕ್ಕೆ ಸ್ಫೂರ್ತಿಯನ್ನು ಕೊಟ್ಟುದು ಅಂದಿನ ಬಂಗಾಲೀ ಕಥಾಸಾಹಿತ್ಯ; ಎಂತಲೆ ದಿವಂಗತ ಕಾಮತರ ಕತೆಗಳು ಹೆಚ್ಚಾಗಿ ಬಂಗಾಲಿ ಕತೆಗಳ ಭಾಷಾಂತರವಾಗಿರುವುವು. ಅವರು ಸ್ವತಂತ್ರವಾಗಿ ಬರೆದ ಕತೆಗಳೇ ಕಡಿಮೆ. ಬರೆದಿದ್ದರೆ ಅವು ಕೂಡ ಬಂಗಾಲೀ ಕತೆಗಳ ರೀತಿಯ ಅನುಕರಣೆಗಳಾಗಿರುವುವು." ೧೦ ದಿ. ಎಮ್. ಎನ್. ಕಾಮತರ ಐದು ಕತೆಗಳ ಸಂಕಲನವೊಂದು 'ತ ಊರು' ಎಂಬ ಹೆಸರಿನಿಂದ ಇತ್ತೀಚೆಗೆ ಪ್ರಕಟವಾಗಿದೆ "ಕಾಮತರ ಕಥೆಗಳು ಸಣ್ಣ ಕಥೆಗಳೆಂಬುದು ನಿಸ್ಸಂದೇಹ. ಅವರ ಕಥೆಗಳಲ್ಲಿ ಶ್ರೀಮಾನ್ ಗೋವಿಂದ ಪೈಗಳು ಹೇಳುವಂತೆ 'ಸುಖದ ಸಿಹಿಯೂ ಇದೆ; ಸಾಮಾನ್ಯವನ್ನು ಅಸಾಮಾನ್ಯವೆನಿಸುವ, ಅಸಾಮಾನ್ಯವನ್ನು ನೈಜವೆನಿಸುವ ಅದೊಂದು ಕೌಶಲವೂ ಇದೆ' ಕಥೆಗಳ ಉದ್ದಕ್ಕೂ ಮೃದುಮಧುರವಾದ ಹಾಸ್ಯ ಮಿನುಗಿ ಮಿಂಚುತ್ತದೆ." ೧೧

ದಿ. ಕೆರೂರ ವಾಸುದೇವಾಚಾರ್ಯರು ಸುಮಾರು ೧೫-೧೬ ಕತೆಗಳನ್ನು ಬರೆದಿದ್ದಾರೆ. ಅವುಗಳಲ್ಲಿ ಆರು ಸ್ವತಂತ್ರ ಸಾಮಾಜಿಕ ಕತೆಗಳಾಗಿವೆ ಅವರು ಬರೆದ ಕತೆಗಳಲ್ಲಿ 'ತೊಳೆದ ಮುತ್ತು' 'ಮಲ್ಲೇಶಿಯ ನಲ್ಲೆಯರು' ಬಹಳ ಸೊಗಸಾದ ಕಥೆಗಳಾಗಿವೆ ಕೆರೂರ ವಾಸುದೇವಾಚಾರ್ಯರ ಸಣ್ಣಕತೆಗಳನ್ನು ಓದಿದವರೆಲ್ಲ ಅವರಿಗೆ 'ಸಣ್ಣಕತೆಯ ಏಕಪರಿಣಾಮದ ಗುಟ್ಟು' ಗೊತ್ತಿತ್ತೆಂದು ಒಪ್ಪಲೇಬೇಕು. "ಆದರೆ ಸಣ್ಣ ಕತೆಯ ಶಾಸ್ತ್ರೀಯ ಪರಿಚಯವಾಗಲಿ ಅದರ ವಿವುಲಪ್ರಯೋಗವಾಗಲಿ ಆವರಲ್ಲಿರಲಿಲ್ಲ. ಹೊಸ ಕಲಾಸ್ಥಿತಿಗಳು ಅಷ್ಟಿಲ್ಲ; ಸರಳವಾದ ಕಥನಾತ್ಮಕ ಶೈಲಿಯೇ ಹೆಚ್ಚು" ಎಂಬ ಡಾ. ರಂ. ಶ್ರೀ. ಮುಗಳಿಯವರ ಅಭಿಪ್ರಾಯವು ಯಥಾರ್ಥವಾಗಿದೆ ಇದಲ್ಲದೆ ಕೆರೂರ ವಾಸುದೇವಾಚಾರ್ಯರಿಗೆ ಮರಾಠಿಯಿಂದ ಸ್ಫೂರ್ತಿ ದೊರೆತಂತೆ ತಿಳಿಯುತ್ತದೆ. ಮತ್ತು ಅವರು ಬರೆದ ಕತೆ 'ಸಣ್ಣಕತೆ' ಯಲ್ಲ, 'ಸಂಪೂರ್ಣಗೋಷ್ಟ' ಎಂದೂ ಗೊತ್ತಾಗುತ್ತದೆ. "ಹುಬ್ಬಳ್ಳಿಯ 'ಸಚಿತ್ರ ಭಾರತ' ಪತ್ರಿಕೆಯಲ್ಲಿ ಹಲವಾರು ಕತೆಗಳನ್ನು ಪ್ರಕಟಿಸಿದ ದಿವಂಗತ ವಾಸುದೇವಾಚಾರ್ಯ ಕೆರೂರ ಅವರೂ ಒಳ್ಳೆಯ ಕತೆಗಳನ್ನು ಬರೆದಿದ್ದಾರೇನೋ ಸರಿಯೇ! ಆದರೆ ಅವರು ಮಾದರಿಯನ್ನಾಗಿಟ್ಟುಕೊಂಡುದು, ಅಂದಿನ ಮಹಾರಾಷ್ಟ್ರದ ಪತ್ರಿಕೆಗಳಲ್ಲಿ ಪ್ರಕಟವಾಗುತ್ತಲಿದ್ದ 'ಸಂಪೂರ್ಣಗೋಷ್ಟ' ಎಂದರೆ ಸಂಪೂರ್ಣಕತೆಗಳನ್ನು." ಎಂದು ಬೆಟಗೇರಿ ಕೃಷ್ಣಶರ್ಮರು ೧೯೫೨ರ ಸಣ್ಣಕತೆಗಾರರ ಸಮ್ಮೇಲನದ ಅಧ್ಯಕ್ಷೀಯ ಭಾಷಣದಲ್ಲಿ ಹೇಳಿದ್ದಾರೆ. "ಆದರೆ ಸ್ವತಂತ್ರ ಪ್ರತಿಭೆಯ ಸತ್ತ್ವವಿದ್ದ ಅವರು" ಕನ್ನಡಕ್ಕೆ ಒಳ್ಳೆಯ ಕತೆಗಳನ್ನು ನೀಡಿದ್ದಾರೆ.

ಹೀಗೆ ಕನ್ನಡ ಸಣ್ಣಕತೆಗಳ ಆರಂಭದ ಕಾಲದಲ್ಲಿ ಹಲವು ಮಹನೀಯರು ಕನ್ನಡಕ್ಕೆ ಹೊಸ ಹೊಸ ಮಾದರಿಯ ಸಣ್ಣಕತೆಗಳನ್ನು ಒದಗಿಸಿಕೊಟ್ಟು, ಕನ್ನಡದಲ್ಲಿ ಸಣ್ಣ ಕತೆಗಳ ಯುಗವನ್ನು ಪ್ರಾರಂಭಿಸಿದರು. ಪ್ರಾರಂಭದ ಈ ಮಹಾಪುರುಷರಿಗೆ ದೊರೆತ ಸ್ಫೂರ್ತಿ ಇಂಗ್ಲೀಷಿನದಿರಲಿ, ಬಂಗಾಲಿಯದಿರಲಿ, ಮರಾಠಿಯದಿರಲಿ, ಯಾವುದಿದ್ದರೂ ಅವರು ಅದನ್ನು ಕನ್ನಡ ಸತ್ತ್ವವನ್ನಾಗಿ ಮಾರ್ಪಡಿಸಿದ್ದರೆಂಬುದು ಮಾತ್ರ ಮರೆಯತಕ್ಕ ಮಾತಲ್ಲ ತಮಗೆ ದೊರೆತ ಸ್ಫೂರ್ತಿಯ ಸೆಲೆ ಮನ್ನು ಅವರು ಕನ್ನಡದ ನೆಲದಲ್ಲಿ ಹರಿಯಿಸಿ, ಆ ಪ್ರವಾಹವೆಲ್ಲ ಮುಂದೆ ಕನ್ನಡಸಾಹಿತ್ಯವಾಹಿನಿ ಸಾಗುವಂತೆ ಮಾಡಿದ್ದು ಅವರು ಮಾಡಿದ ಮಹಾಕಾರ್ಯವೆಂಬುದನ್ನು ನಾವು ಇಂದು ನೆನೆಯಲೇಬೇಕು

ಇನ್ನೊಂದು ಹೆಜ್ಜೆ

(ಕವನ ಸಂಕಲನ)

ಬರೆಹಗಾರರು: ಎನ್. ಎಸ್. ಗದಗಕರ

ಇದರಲ್ಲಿ ವಿಷಯಗಳನ್ನು ವಸ್ತುವನ್ನಾಗಿ ಇರಿಸಿಕೊಂಡು ಬರೆದ ೩೩ ಕವನಗಳಿರುವವು.

ಕ್ರಾ. ಅ. ೫೨ ಪುಟ. ಬೆಲೆ ಹದಿನಾಲ್ಕು ಆಣೆ

ಮುಖ್ಯಮಾರಾಟಗಾರರು:—

ಮನೋಹರ ಗ್ರಂಥಭಾಂಡಾರ, ಧಾರವಾಡ

ಪ್ರತಿಭಾ ಗ್ರಂಥಮಾಲೆ, ಧಾರವಾಡ

೯, ೧೦, ೨-೩ ೧೯೫೨ರಲ್ಲಿ ನಡೆದ ಸಣ್ಣಕತೆಗಾರರ ಸಮ್ಮೇಳನದ ಅಧ್ಯಕ್ಷಭಾಷಣ.

೧೧, 'ಜೀವ-ಜಲ್ಲ'—ಟೀಕೆ—ತ. ಸು. ಶಾಮರಾಯರು.

ತಾಜಮಹಾಲ್

ಶ್ರೀ. ಎಂ. ರಾಧಾಕೃಷ್ಣರಾವ್ ಬಿ. ಎ., ಬಿ. ಟಿ. ಕಾಸರಗೋಡು.

೧

ಸುರಸೌಂದರ್ಯದ ಸಾರವು ರೂಪನು
ತಳೆಯುತ ತಾ ಜಗಕಿಳಿದಿತ್ತು.
ಇಳೆಯಲಿ ವಿಹರಿಸಿ ಮರಳುವ ಮೊದಲಿಗೆ
ಜಮುನೆಗೆ ಜಳಕಕೆ ಬಂದಿತ್ತು.

೨

ಪ್ರೇಮತಪಸ್ವಿಯು ಶಹಾಜಹಾನನು
ವಿರಹಸಮಾಧಿಯೊಳ್ಕುಂದಿದ್ದ.
ಮರಳುವ ಸೌಂದರ್ಯವ ತಪಿಸುತ " ತಡೆ,
ಕಲ್ಲಾಗುತ ನಿಲ್ಲೆಂ " ದಿದ್ದ.

೩

ಒಲವಿನ ಆಗರ ಮೊಳೆಯುತ ಸುಮಧುರ
ಶಿಲ್ಪದ ರೂಪದಿ ಕೊನರಿತ್ತು—
ಶಿಲೆಯದು ಕಠಿಣತೆ ತೊರೆಯುತ ಚಿಗುರುತ
ಕಲ್ಪನೆ ಮೀರುತಲರಳಿತ್ತು.

೪

ಒಲವಿನ ಹರಕೆಯೊ, ಶಿಲೆಹೊಯ್ದಿರಕವೊ
ಚಿರವಿರಹಾತ್ಮನ ಕಾಣಿಕೆಯೊ ?
ಕವಿಗಳ ಕನಸಿನ ಕಾವ್ಯಕಾಮಿನಿಯ
ಮೀರುವ ಶಿಲ್ಪಿಯ ಹವಣಿಕೆಯೊ ?

೫

ಕಾಣದ ತವ ನಾಟ್ಯದ ಬಳಿ ಬಾಗುತ
ನವಿಲದು ನೃತ್ಯವನುಳಿದಿಹುದು,
ಅಶ್ರುತ ತವಗಾನದ ಬಳಿ ನಾಚುತ
ಕೋಗಿಲೆ ಗೀತವ ಮರೆತಿಹುದು.

೬

ಕವಿನಾಲಗೆಯದು ವರ್ಣಿಸಲರಿಯದೆ
ಪದಗುಚ್ಛಕೆ ತಡವರಿಸಿಹುದು.
ಕಾವ್ಯವು ನಿನ್ನನು ಬಿಂಬಿಸಲಾರದೆ
ಮೌನದ ಮುಸುಕನು ಧರಿಸುವುದು.

೭

ಶೈಲವು ನಿನ್ನುನ್ನತಿಯನು ಮೀರದೆ
ಚಿರವೈರಾಗ್ಯವನಪ್ಪಿಹುದು,
ಶೀಲವು ಪಾವನ ಧವಳತೆಯೆದುರಲಿ
ನಾಚುತ ಸೋಲನ್ನೊಪ್ಪಿಹುದು.

೮

ಜಮುನೆಯ ದರ್ಪಣದಲಿ ತವಬಿಂಬವ
ಚುಂಬಿಸೆ ಚಂದ್ರಮ ನೋಡಿಹನು.
ಕಲುಷಿತ ನಿಜವದನಕೆ ತಾ ಹೋಲಿಸಿ
ನಾಚುತ ಮುಗಿಲ್ಮರೆಗೋಡಿಹನು.

೯

ಕಮಲಾಸನ ನಿನಗೆಣೆಯಹ ಸೃಷ್ಟಿಯ.
ನರಿಯದೆ ಭಯದಿಂ ಬೆಚ್ಚಿಹನು;
ಕಾಲನು ನಿನ್ನನು ಕೆಡಹುವ ಯತ್ನದಿ
ಸೋಲುತ ತುಟಿಯನು ಕಚ್ಚಿಹನು.

೧೦

ನೀರವ ನಿಶ್ಚಲ ನಿದ್ದೆಯೊಳೊರಗಿಹ
ಮುಮ್ತಾಜಳೆ ಗದ್ದುಗೆಯೊಡತಿ–
ಸುರಸೌಂದರ್ಯವನಿಳೆಗಿಳಿತಂದಿಹ
ನೀನೇ ಶಾಶ್ವತ ಕಲೆಯೊಡತಿ !

ಸಾಹಿತ್ಯವಿಮರ್ಶೆಯ ಶಿಕ್ಷಣರಂಗ

ಕಳೆದ ಸಂಚಿಕೆಯಲ್ಲಿ ಬಿನ್ನವಿಸಿಕೊಂಡಂತೆ 'ಕಳ್ಳರಗುರು ?' ಎಂಬ ಸಣ್ಣಕಥೆಯನ್ನು ವಿಮರ್ಶಿಸಿ ನಾಲ್ಕು ಜನರಿಂದರಿಂದಲೂ, 'ದೇವರಿದ್ದಾನೆಯೇ' ಎಂಬ ಕಥೆಯನ್ನು ವಿಮರ್ಶಿಸಿ ಇಬ್ಬರಿಂದಲೂ ಲೇಖನಗಳು ಬಂದಿವೆ. ಲೇಖಕರ ಪರಿವಿಡಿಯಿದು:

'ಕಳ್ಳರಗುರು' ವಿಮರ್ಶಕರು:

೧. ಶ್ರೀ. ಎಚ್. ಸೀತಾರಾಮರಾವ್, ಹೊಸಬಾಳೆ ಸೊರಬ. ೨. ಶ್ರೀ. ಕೆ. ಎಸ್. ಶರ್ಮಾ 'ವಿದ್ವಾನ್' ಕಾಸರಗೋಡು. ೩. ಶ್ರೀ. ಮಂ. ಗೋವಿಂದರಾವ್ ಕರ್ನೂಲ್. ೪. ಶ್ರೀ. 'ಮಹೇಶ' ಗೋಗೆ.

'ದೇವರಿದ್ದಾನೆಯೇ?' ವಿಮರ್ಶಕರು:

೧. ಶ್ರೀ. ಶಿರೋಮಣಿ ಜಿ. ಮಲ್ಲಾರಿಭಟ್ಟ, ಹೊಸಪೇಟೆ. ೨. ಶ್ರೀ. ವಾಸುದೇವ ರಾಣೆ, ಹಳಗಾ (ಉ. ಕ.)

ಬಂದ ವಿಮರ್ಶೆಗಳನ್ನೆಲ್ಲ ನಮ್ಮ ಸಂಪಾದಕ ಮಂಡಲಿಯವರೇ ಓದಿ ನೋಡಿ ತೂಗಿ ನಿರ್ಣಯಿಸಿದ್ದಾರೆ. 'ಕಳ್ಳರ ಗುರು' ಎಂಬ ಕತೆಯನ್ನು ಕುರಿತು ಬಂದ ನಾಲ್ಕೂ ವಿಮರ್ಶೆಗಳೂ ಉತ್ತಮವಾಗಿವೆ. ಅವುಗಳಲ್ಲಿಯೂ ಶ್ರೀ. ಕೆ. ಎಸ್ ಶರ್ಮಾ ಅವರ ವಿಮರ್ಶೆ ಅತ್ಯುತ್ತಮವಾಗಿದೆ.

'ದೇವರಿದ್ದಾನೆಯೆ?' ಎಂಬ ಕತೆಯನ್ನು ಕುರಿತ ವಿಮರ್ಶೆಗಳೆರಡೂ ತೀರ ಸಾಮಾನ್ಯವಾಗಿವೆ. ಲೇಖನದುದ್ದಕ್ಕೂ ಕತೆಯ ಸಾರಾಂಶವನ್ನು ಹೇಳಿ, ಕೊನೆಯಲ್ಲಿ ಒಂದೆರಡು ಸ್ವಂತದ ಅಭಿಪ್ರಾಯಗಳನ್ನು ಸೂಚಿಸುವುದು ವಿಮರ್ಶೆಯೆನಿಸದು. ವಸ್ತು, ಪಾತ್ರ, ಬೆಳವಣಿಗೆ, ಕಥನಶೈಲಿ ಇವುಗಳಲ್ಲಿ ಲೇಖಕನ ನಿರ್ಮಿತಿ–ನೈಪುಣ್ಯಗಳೇತಕವು? ಎಡಹಿದ್ದರೆ ಎಲ್ಲಿ ಎಡಹಿದ್ದಾನೆ–ಎಂಬುದನ್ನು, ಬಹುಜನ ಸಮ್ಮತವಾಗುವಂತೆ, ತರ್ಕ ಪ್ರಮಾಣಗಳನ್ನು ತೋರಿಸಿ ಸಿದ್ಧಗೊಳಿಸುವ ಶಾಸ್ತ್ರ ವಿಮರ್ಶೆಯೆನಿಸುವುದು. ಕೃತಿಯ ವಿಷಯದಲ್ಲಿ ಅನುಕೂಲವೇ ಆಗಲಿ, ಪ್ರತಿಕೂಲವೇ ಆಗಲಿ, ಅಭಿಪ್ರಾಯ ಕೊಡಬೇಕಾದಾಗ, ಸಹೃದಯ ಸಮ್ಮತವೆನಿಸುವಂತಹ ಸಪ್ರಮಾಣ ವಿವರಣೆಯಿಲ್ಲದೆ ಹೋದರೆ, ಅಂತಹ ಅಭಿಪ್ರಾಯ ವೈಯಕ್ತಿಕ ಸಂಸ್ಕಾರ–ಅಭಿರುಚಿಗಳ ನಿದರ್ಶಕವಾದೀತಷ್ಟೆ!

ಈಗೆರಡು ತಿಂಗಳ ಈ ಮೇಲಾಟದಲ್ಲಿ ಹೆಚ್ಚು ಜನರು ಭಾಗವಹಿಸದಿರುವುದು, ಆರೋಗ್ಯದ ಲಕ್ಷಣವೇನೂ ಅಲ್ಲ ಒಂದು ಸಲ ಭಾಗವಹಿಸಿ, ತಮ್ಮ ವಿಮರ್ಶೆ ಮೊದಲ ಸ್ಥಾನವನ್ನು ಪಡೆಯಲಿಲ್ಲವೆಂದು ಯಾರೂ ನಿರಾಶರಾಗಕೂಡದು. ಇದು ವಿಮರ್ಶೆಯ ಶಿಕ್ಷಣರಂಗ' ಎಂಬುದನ್ನು ಎಲ್ಲರೂ ಚೆನ್ನಾಗಿ ಮನವರಿಕೆ ಮಾಡಿಕೊಳ್ಳಬೇಕು. ಗರಡಿಮನೆಯಲ್ಲಿ ಅನೇಕ ಕಾಲ ಸಾಧನೆ ಮಾಡಿದಾಗಲೇ ಹುಡುಗ ಜಟ್ಟಿಯಾಗಿ ರೂಪುಗೊಳ್ಳಬಲ್ಲ.

ಮುಂದಿನ ಸಲದ ಮೇಲಾಟಕ್ಕಾಗಿ, ಈ ಸಂಚಿಕೆಯಲ್ಲಿ ಪ್ರಕಟವಾದ 'ಪರಿವರ್ತನೆ' ಎಂಬ ಕಥೆಯನ್ನು ಕುರಿತ ವಿಮರ್ಶಾಲೇಖನಗಳನ್ನು ಕಳುಹಬೇಕು.

—ಸಂಪಾದಕ

ಕಳ್ಳರ ಗುರು

(ಚಿಕ್ಕ ಕತೆ)

(ವಿಮರ್ಶೆ)

ಡಾ. ಕೆ. ಎಸ್. ಶರ್ಮಾ, ವಾಣೀಮಂದಿರಂ, ಕಾಸರಗೋಡು

" ಸ್ಮಶಾನದಲ್ಲಿ–ಇಲ್ಲವೆ ಸಮಾಧಿ.ಗೋರಿಗಳ ಸ್ಥಾನದಲ್ಲಿಯೂ ಕಣ್ಣು ಒದ್ದೆಯಾಗದ ಮಂದಿ, ಕಥೆಯ ಮರ್ಮಸ್ಪರ್ಶದ ಸ್ಥಳಗಳನ್ನು ತಲುಪಿದಾಗ ಕಂಬನಿಗರೆಯತೊಡಗುತ್ತದೆ " ಎಂಬ ಮಾತಿದು ಸತ್ಯದ ಪರಮಾವಧಿಯ ಹಿಡಿತವು.

ಕತೆಯೆಂದರೆ ಜೀವನದ ಯಥಾರ್ಥಚಿತ್ರವಲ್ಲ; ಯಾಕೆಂದರೆ ಕತೆಯು ಜೀವನದ ಸತ್ಯಚಿತ್ರವೆಂದಾದರೆ, ತದಂತರ್ಗತ ಪಾತ್ರ-ಗಳೊಡನೆ ಓದುಗನು ಸಮರಸನಾಗುವುದಸಂಭವವು. ಕತೆಯಲ್ಲಿ ಕಾಣಿಸುವ ಕಲ್ಪಿತ ಪಾತ್ರಗಳು—ಪಾತ್ರಗತ ಸುಖದುಃಖಾನುಭೂತಿ-ಗಳು—ಓದುಗನೊಡನೆ ಆತ್ಮೀಯತೆಯನ್ನು ಬೆಳೆಸಿಕೊಳ್ಳುವುದರಲ್ಲೇ ಕಥಾಲೇಖಕನ ಪ್ರಭಾವವು ಸಾರ್ಥಕವಾಗುವುದು. ಕಲ್ಪಿತಪಾತ್ರ-ಗಳಿಂದ ಸಿಗುವಷ್ಟು ಮಾನಸಿಕ ಪರಿವರ್ತನೆ ಸತ್ಯಚಿತ್ರದಿಂದ ಒದಗ-ಲಾರದು. ಒಟ್ಟು ಉತ್ತಮ ಕಥಾಲೇಖಕನಲ್ಲಿ ಕಲ್ಪನಾಬಲವು ತುಂಬಿರಕದ ನಿಲುವಿನಲ್ಲಿರಬೇಕೆಂದರಿತರೆ ಸಾಕು.

ಈ ಬಗೆಯ ಕಥಾಪ್ರಪಂಚದಲ್ಲಿ " ಮನೋವೈಜ್ಞಾನಿಕ ಸತ್ಯ-ಬಿಂಬಕ ಕಥೆ "ಗಿರುವಷ್ಟು ಸ್ಥಾನವು ಇಂದು ಇನ್ನಾವ ವಿಧದ ಕತೆಗೂ ಇರಲಾರದು. ಮಾನಸಿಕ ವಿಶ್ಲೇಷಣೆಯೊಡನೆ, ಮಾನವ ಹೃದಯ-ಗತವಾದ ಸತ್ಯವನ್ನು ಹೊರತಂದು ತೋರುವುದೇ ಯಶಸ್ವೀಕಥಾ-ಕಾರನ ಧರ್ಮಮರ್ಮ. ಒಂದೇ ಘಟನೆಯು ಅಥವಾ ದುರ್ಘಟನೆಯು ಬೇರೆ ಬೇರೆ ಪ್ರಕಾರದ ಪ್ರಕೃತಿ-ಸ್ವಭಾವವನ್ನುಂಟುಮಾಡುತ್ತಿದೆ. ಇದನ್ನು ಕಥೆಯಲ್ಲಿ ವಿಶ್ಲೇಷಿಸಿ—ಅಂತರ್ನಿಗೂಢವಾದ ದೇವತೆಯನ್ನು ಹೊರತಂದು ತೋರುವುದೇ ನಾವಿಲ್ಲಿ ಕಾಣುವ ಮನೋವೈಜ್ಞಾನಿಕ ಸತ್ಯ! ಈ ಸತ್ಯವನ್ನು ಒರೆದೋರಲು ಕಲ್ಪನೆಯ ಬಲುಹು; ಜೀವ-ನಾನುಭವ, ಸಾಹಜಿಕವೃತ್ತಿ,—ಇವುಗಳು ಲೇಖಕನಲ್ಲಿರಬೇಕು. ಇಂತಹ ಲೇಖಕನೇ ಮನೋರಂಜನೆಯೊಡನೆ ಮಾನಸಿಕ ಸಂಪ-ತ್ತನ್ನೂ ತುಂಬಿ ಉಪಯುಕ್ತ ಮಾರ್ಗಗತಿಯನ್ನು ಸಾರುವನು.

ಪ್ರಸ್ತುತ 'ಕಳ್ಳರ ಗುರು' ಕತೆಯು ಒಂದು ಮನೋ-ವೈಜ್ಞಾನಿಕ ಸತ್ಯವನ್ನು ಬಿಂಬಿಸಿದ ಮಧುರ ಮನೋವಿಶ್ಲೇಷಣಾತ್ಮಕ ಕಥೆ! ಅಲ್ಪಾವಧಿಯ ಘಟನೆಯಲ್ಲಿ–ಘಟನೈಕಪ್ರಧಾನವಾದ ಜೀವಿತ ಸಂಧಿಯಲ್ಲಿ—ಮಾಧುರ್ಯದ ರಸವನ್ನು ತುಂಬಿ ಬೆಳಕನ್ನು ಕಂಡ ಮಾರ್ಮಿಕ ಕಥೆ! 'ಆಕಾಶವಾಣಿ ಸಾಹಿತ್ಯಸಮಾರೋಹ' ಉತ್ಸವ-ದಲ್ಲಿ ಪ್ರಸಾರವನ್ನೈದಿ, ಜಯಂತಿಯಲ್ಲಿ ಕಾಣಿಸುವ ಮೊದಲೇ, ಇತರ ಕನ್ನಡ ಪತ್ರಿಕೆಗಳಲ್ಲಿ ಬೆಳಕು ಕಂಡು, ಓದುಗನನ್ನು ಮತ್ಸ್ಥಳ ಸ್ಪರ್ಶದಿಂದ ಬಿಗಿದಿಟ್ಟ ಮಧುರೇತಿವೃತ್ತಾನುರಂಜಿತ ರಸಾವಹವಾದ ಕಥೆ!

ಕಥಾವಸ್ತು— —?

" ವೈದ್ಯರೊಬ್ಬರ ಮನೆಯಿಂದ ಕೃಷ್ಣಪಕ್ಷದ ಒಂದು ದಿನ, ಕಳ್ಳರು ಇದ್ದುದನ್ನೆಲ್ಲ ದೋಚಿ ಸಾಗಿದ್ದರು. ಪೋಲಿಸರು ತನಿಖೆ ಮಾಡುತ್ತಿದ್ದಾರೆ. ಕಳವಾದ ಒಂದು ವಾರದ ಮುಂದೆ, ಚತುರ್ದಶಿಯ ದಿನ, ವೈದ್ಯರು ತನ್ನ ಹೆಂಡತಿ ರತ್ನಾ ಎಂಬಾಕೆಯೊಡನೆ ಕಳವಿನ ಪ್ರಸ್ತಾಪವನ್ನೂ, ಜೀವನಕ್ಕೊದಗಿದ ಧಕ್ಕೆಯನ್ನೂ, ಚಿಂತಿಸುತ್ತಿ-ದ್ದಾರೆ. ಈ ಕಾಲದಲ್ಲೇ, ದಟ್ಟವಾದ ಕತ್ತಲೆಯ ನಿಲುವಿನಲ್ಲೇ,—ವೈದ್ಯರ ಮನೆಯಿಂದ ಕದ್ದುಕೊಂಡು ಹೋದ ಕಳ್ಳರ ಪೈಕಿ ಇಬ್ಬರು ತಮ್ಮ ಯಜಮಾನನ ಆದೇಶದಂತೆ, ಮೃತ್ಯುವಿನ ಮುಖದಲ್ಲಿರುವ ಆತನ ಏಕಮಾತ್ರ ಪುತ್ರನುಳಿವಿಗಾಗಿ—ವೈದ್ಯಕಕ್ಕಾಗಿ—ವೈದ್ಯರನ್ನು ಕರೆದೊಯ್ಯಲು ಬಂದರು. ವೈದ್ಯರು ಆ ರಾತ್ರಿ ಕಾಲದಲ್ಲಿ—ಯಾವು-ದೊಂದು ಪರಿವೆಯೂ ಇಲ್ಲದೆ, ಬಾಗಿಲಿಕ್ಕಿ—ಹೆಂಡತಿಯನ್ನು ಮನೆ-ಯಲ್ಲಿ ಬಿಟ್ಟು ತೆರಳಿದರು. ಕಳ್ಳರ ಯಜಮಾನನ ಮನೆಯನ್ನು ತಲುಪಿದೊಡನೆ, ವೈದ್ಯರ ಕಾಲು ಮುಟ್ಟಿ—ಪುತ್ರರಕ್ಷಣೆಗಾಗಿ ಬೇಡಿ-ಕೊಂಡ, ಆ ತಸ್ಕರನಾಯಕ—'ಭೀಮನಾಯಕ' ಮನೆಯೊಳ ಸಂದ ವೈದ್ಯರು, ತಮ್ಮ ಮನೆಯಿಂದ ಕಳವಾದ ಹಾಸಿಗೆಯಲ್ಲಿ ಪವಡಿಸಿದ್ದ ಭೀಮನಾಯಕನ ಮಗನನ್ನು ಕಂಡರು ಚಿಕಿತ್ಸೆ ಮಾಡಿದರು. ವಿಶೇಷ ಚಿಕಿತ್ಸೆಗಾಗಿ ಆ ರಾತ್ರಿ ಕಲ್ಲು-ಮುಳ್ಳೆನ್ನದೆ ಗುಡ್ಡೆಯಲ್ಲಿ ಸಾಗಿ—ಸೊಪ್ಪೊಂದನ್ನು ತಂದು ಚಿಕಿತ್ಸೆಯೆಸಗಿ, ಆ ತಂದೆ ತಾಯಿ-ಗಳ, ತಾಯಿ-ತಂದೆತನದ ಕರುಣಾಹೃದಯಗಳ–ಮುಂದೆ ಆನಂದಾ-ಶ್ರುಗಳು ಉಕ್ಕಿ ಹರಿವಂತೆಸಗಿ ಹಿಂದಿರುಗಿದರು. ವೈದ್ಯರು ಆ ಚತು-ರ್ದಶಿಯ ರಾತ್ರಿಯಲ್ಲಿ–ಕರಾಳಕೃತ್ಯವೆಸಗುವ ಆ ದುರ್ವೃತ್ತಹೃದಯ-ದಲ್ಲಿ ಮಾನವತೆಯಲ್ಲಿ ಹುದುಗಿ ನಿಂತಿದ್ದ ದೇವತ್ವವನ್ನು ಹೊರಗೆಳೆದು ಬಂದಿದ್ದರು. ಮರುದಿನದ ರಾತ್ರಿಯಲ್ಲಿ—ವೈದ್ಯರೊಡನೆ ರತ್ನಾ—ಅವರೆಸಗಿದ ಕೃತ್ಯಕ್ಕಾಗಿ ನೊಂದ ನುಡಿಗಳೊಡನೆ ಚುಚ್ಚುಮಾತು-ಗಳನ್ನು ಆಡುತ್ತಿದ್ದಾಗಲೇ, ಭೀಮನಾಯಕನು ತನ್ನಿಬ್ಬರುಸಂಗಾತಿ-ಗಳ ತಲೆಯಲ್ಲಿ ಹೊರೆಯನ್ನು ಹೇರಿ, ನೇರವಾಗಿ ಒಳಬಂದು ವೈದ್ಯರಿ-ಗೊಪ್ಪಿಸಿ ಕ್ಷಮೆಯನ್ನು ಬೇಡುವನು. ಆ ಹೊರೆಗಳಲ್ಲಿ ವೈದ್ಯರ ಮನೆಯಿಂದ ಕಳವಾದ—ಹಾಸಿಗೆಯ ಹೊರತು ಮಿಕ್ಕುವೆಲ್ಲವೂ ಇದ್ದುವು. ಹಾಸಿಗೆಯು ವೈದ್ಯರ ಹರಕೆಯ ರೂಪದಲ್ಲಿ ಭೀಮನಾಯ-ಕನ ಮಗನ ಪಾಲಿಗೆ ಮೀಸಲಾಗಿತ್ತು. ಆ ರಾತ್ರೆಯಲ್ಲಿ ವೈದ್ಯರೂ ಅವರ ಪತ್ನಿಯೂ ಅನುಭವಿಸಿದ ಆ ಗಳಿಗೆಯು ದೃಶ್ಯ ಅಭೂತಪೂರ್ವ-ವಾಗಿತ್ತು. " ಈ ಇತಿವೃತ್ತವೇ ಸುಂದರವಾಗಿ ಹೆಣೆಯಲ್ಪಟ್ಟು, ಉದಾತ್ತವಚನ ನಿಚಯಗಳಿಂದ ಕಳೆಯೇರಿ ನಿಂತಿದೆ!

ಸನ್ನಿವೇಶರಚನಾಮಾಧುರ್ಯ— —?

ಕತೆಯ ಮೊದಲಲ್ಲಿ ವೈದ್ಯರ ಮತ್ತು ಅವರ ಪತ್ನಿ ರತ್ನಮ್ಮ-ನವರ ಸಂಭಾಷಣೆಯು ನಿವೇಶಗೊಳಿಸಲ್ಪಟ್ಟಿದೆ. ರತ್ನಮ್ಮ ಕಳೆದು ಹೋದ ವಸ್ತುಗಳಿಗಾಗಿ ಚಡಪಡಿಸುತ್ತ—" ಈ ಊರ ಹೊರಗಿನ ಮನೆ ಬೇಡವೆಂದು ನಾನು ಸಾರಿ ಸಾರಿ ಹೇಳಿದೆ—ನೀವೇನೂ ಕೇಳ-ಲಿಲ್ಲ! " ಎಂದೆನ್ನುವಾಗ ವೈದ್ಯರಾಡಿದ ಮಾತು " ಹೋಗಲಿ ಬಿಡು

ರತ್ನಾ, ನಮ್ಮಲ್ಲಿ ಅವು ಇಲ್ಲದೆ ಇದ್ದರೆ ಅವರು ಒಯ್ಯುತ್ತಿದ್ದರು ಹೇಗೆ?.........ನಮ್ಮ ಈ ವೈದ್ಯಕವೃತ್ತಿ ದುಡ್ಡು ಗಳಿಸಬೇಕಾದುದಲ್ಲ; ಕೇವಲ ಸಮಾಜದ ಕ್ಷೇಮಸಾಧನೆಗಾಗಿ ಇರುವುದು." ಎಂಬೀ ಮಾತು, ಮುಂದೆ ಬರಲಿರುವ ಕಥಾಂಶಕ್ಕೆ–ಕಳ್ಳರೆಂದು ತಿಳಿದಾಗಲೂ ಅವರ ಮನೆಗೆ ಆ ನಡುರಾತ್ರಿಯಲ್ಲಿ ಕಾಲಿರಿಸ ಬಗೆದ ವೈದ್ಯರ ನಿರ್ಮಲ ಹೃದಯಕ್ಕೆ—ಮೊದಲಲ್ಲಿರಿಸಿದ ಕಲಶವೆಂದರೆ ತಪ್ಪಾಗಲಾರದು. ಈ ಮಾತಾಡುತ್ತಿರುವಾಗಲೇ ದೂರದ ಗಡಿಯಾರದಲ್ಲಿ ಹತ್ತುಗಂಟೆ ಬಾರಿಸುವುದು; ಆದರೂ ಆ ಗಂಡ-ಹೆಂಡಿರು ಜೀವನದಲ್ಲಿ ಸಂಭವಿಸಿದ್ದ ದುರಂತಾಧ್ಯಾಯದ ಹುಡಿಗಳನ್ನು ಮಗುಚುತ್ತಿದ್ದರು. ಮೊಗಸಾಲೆಯಲ್ಲಿ ಚಿದಂಬರಮಾವ ಗೊರಕೆಹೊಡೆಯುತ್ತಿದ್ದರು. ಚಿದಂಬರಮಾವನ ವಿಚಾರವಿಲ್ಲಿ ಬಂದುದು ಅರ್ಥವತ್ತಾಗಿದೆ. ಚಿದಂಬರ ಮಾವನಿಂದ ಈ ಚಿಕ್ಕಕತೆಗೆ ಯಾವ ಪ್ರಯೋಜನವೂ ಸಿಗದಿದ್ದರೂ, ವೈದ್ಯರು ನಡುರಾತ್ರಿಯಲ್ಲಿ ರತ್ನಮ್ಮನನ್ನು–ಒಬ್ಬರನ್ನೇ ಬಿಡಬೇಕಾಗಿ ಬಂದಾಗ ಅರ್ಥವನ್ನೀಯುತ್ತದೆಯಲ್ಲವೇ! ಈ ಬಗೆಯ ಹಿನ್ನೆಲೆಯನ್ನುಳಿಸಿಕೊಂಡ ಲೇಖಕರ ದೂರದೃಷ್ಟಿ ಗಮನೀಯವಿದೆ!— ಆ ರಾತ್ರಿಯ ವರ್ಣನೆಯನ್ನು ಲೇಖಕರು ಗಂಭೀರವಾಗಿ ಅರಳಿಸಿದ್ದಾರೆ. ಕೇವಲ ಐದಾರೇ ಮಾತುಗಳಲ್ಲಿ ರಾತ್ರಿಯ ರುದ್ರಗಭೀರಿಮ. ದೃಶ್ಯ ಕಣ್ಣೆದುರಿಗೆ ನಿಲ್ಲುತ್ತದೆ. ಸುಪ್ರಸಿದ್ಧ ನಾಟಕಕಾರರಾದ ಶ್ರೀ. ಬೆಟಗೇರಿಯವರು—ಈ ಬಗೆಯ ಗಭೀರಮ ದೃಶ್ಯಯೋಜನೆಯನ್ನೆಸಗುವ ರೀತಿಯನ್ನವರ ಗೀತರೂಪಕಗಳಲ್ಲಿ ಕಂಡರಿತ ವಾಚಕರಿಗೆ, ಈ ಕುರಿತು ವಿವರಣೆಯೆಸಗುವ ಅಗತ್ಯವಿಲ್ಲ. ಇರಲಿ, ಆ ನಡುರಾತ್ರಿಯಲ್ಲಿ ಬಂದ—ಗೊರವೆ ಕಟ್ಟಿಗೆಯ ಪಂಜನ್ನು ಕೈಯಲ್ಲಿ ಹಿಡಿದು ಬಂದ—ಕಳ್ಳರಿಬ್ಬರನ್ನು ಕಂಡು, ಆಡಿದ "ಇಂದು ನಿಮಗೆ ಏನೂ ಸಿಗುವಂತಿಲ್ಲ. ಒಂದು ವಾರದ ಹಿಂದೆಯೆ ಕಳವಾಗಿ, ಎಲ್ಲವೂ ಬರಿಮನಿಯಾಗಿದೆ. ಒಂದು ಹಿಡಿ ಕಾಳು ಕೂಡ ಮನೆಯಲ್ಲಿ ಇಲ್ಲ" ಈ ಮಾತು ಕಳ್ಳರೆದೆಯನ್ನೂ ಕರಗಿಸುವ ಮಾನಸಿಕ ಸತ್ಯವಲ್ಲದೆ ಮತ್ತೇನು? ಈ ಮಾತನ್ನು ವೈದ್ಯರ ಬಾಯಿಂದಿಳಿಸಿದ ಬಗೆಯಿದು ಪ್ರಸ್ತುತ ಕಥಾಹೃದಯವನ್ನು ಎತ್ತಿತೋರುವುದರೊಡನೆ—ವೈದ್ಯರ ಹೃದಯವೈಶಾಲವನೂ–ಸಹನೆಯನ್ನೂ–ಜೀವನಪ್ರೇಮವನ್ನು ಸ್ಫುಟವಾಗಿ ತೋರುತ್ತದೆ. ಬಂದ ಕಳ್ಳರ ಮಾತಿನಿಂದ ತಾನು ವೈದ್ಯಕಕ್ಕಾಗಿ ಹೋಗಬೇಕಾದೆಡೆ—ತನ್ನ ಮನೆಯನ್ನೇ ಸೂರೆಗೈದ ಕಳ್ಳರ ಮನೆಯೆಂದರಿತಾಗಲೂ— "ಸಮಾಜಹಿತವೇ ತನ್ನ ಹಿತ"ವೆಂದು ಮನಗಂಡ ವೈದ್ಯರು—ಆ ನಟ್ಟಿರುಳಲ್ಲಿ ತನ್ನ ಪರಿವೆಯಿಲ್ಲದೆ ಸಾಗುವರು. ಏನೊಂದು ಮಾರ್ಮಿಕವಾದ ಸನ್ನಿವೇಶವಿದು! ವೈದ್ಯರ ಈ ಯಾತ್ರೆಯನ್ನು ರತ್ನಮ್ಮನೆಂತು ಒಪ್ಪಬೇಕು! ರತ್ನಮ್ಮನ ಹಿತಕ್ಕಾಗಿ—ವೈದ್ಯರೆಂತು ಹೋಗದಿರಬೇಕು! ಸಾಗದ ಮಾತಿದು! ವೈದ್ಯರು



ತೆರಳಿದರು! ದಾರಿಯಲ್ಲಿ ವೈದ್ಯರು ತನ್ನ ಜೀವನಪರಾಮರ್ಶೆಯೆಸಗಿ— ತನ್ನ ವಿಪತ್ತನ್ನೂ—ರತ್ನನ ಗತಿಯನ್ನೂ—ಉಲ್ಲೇಖಿಸುವುದದು ಆ ಗಭೀರಿಮ ಸಥದಲ್ಲಿ ಸ್ವಾಗತಾರ್ಹವಾದ ಮಾತು!

ಈ ಸಂದರ್ಭದಲ್ಲಿ—ದಾರಿಯಲ್ಲಿ ಸಾಗುತ್ತಿದ್ದ ಅವರೆದುರಿಗೆ "ನಾಗರಹಾವೊಂದು" ಕಾಣಿಸುವುದು. ನಾಗರಹಾವು ಯಾರನ್ನೂ ಉಪದ್ರವಿಸದೆ—ತನ್ನ ದಾರಿ ಹಿಡಿಯಿತು. ನಾಗರಹಾವು ತಲೆಗಾಣಿಸಿದ ಈ ಸಂದರ್ಭ, ಲೇಖಕರ ಜಾಣ್ಮೆಯ ಪರಾಕಾಷ್ಠೆಯನ್ನು ಬಿಂಬಿಸುವ ಈ ಸಂದರ್ಭ, ಸ್ಪೃಹ್ಯವಾಗಿದೆ. ನಾಗರಹಾವನ್ನು ನೆನೆದು ವೈದ್ಯರೆತ್ತಿದ "ಹಾವಿನಂತಹ ದುಷ್ಟಜಂತುವೂ ಕೆಣಕದೆ ಯಾರನ್ನೂ ಹಿಂಸಿಸದು ಮನುಷ್ಯ? ಮನುಷ್ಯ ಸುಮ್ಮಗೆ ಬಿಡುವನೇ! ಅವನ ಆಶೆಯ ಹಾವು—ಯಾರೂ ಕೆಣಕದಿದ್ದರೂ ಎಲ್ಲರನ್ನೂ ಕಡಿಯುವುದು……ನಮ್ಮ ರತ್ನಳಿಗೆ ಏಕೆ ಇರಬಾರದು ತನ್ನ ಒಡವೆ ವಸ್ತುಗಳ ಲೋಭ! ಅವಳೂ ಲೋಕದ ಮನುಷ್ಯರಲ್ಲಿ ಒಬ್ಬಳಲ್ಲವೇ?"…. ಈ ಮಾತು, ಆ ನಟ್ಟಿರುಳಲ್ಲಿ—ವೈದ್ಯರಂತಹ ಅನುಭಾವಿಗಳ ಹೃದಯದಲ್ಲಿ ಮೂಡಿ ನಿಲ್ಲುವ ನ್ಯಾಯ್ಯವಾದ ಮಾತು! ನಾಗರಹಾವಿನ ವೃತ್ತವನ್ನೆತ್ತಿ ಹಿಡಿದ ಈ ಸಂದರ್ಭದಿಂದಲೆ 'ಕಳ್ಳರ ಗುರು' ಕತೆಯ ಹೃದಯವು ತುಂಬಿ ನಿಂತಿತೆನ್ನಬೇಕು. ಕತೆಯ ಗಾಂಭೀರ್ಯವು ಮೊರೆದೆದ್ದು ನಿಂತ ರುಚಿರಸಂಧಿಯೇ ಈ ಭಾಗವಾಗಿದೆಯೆನ್ನಬೇಕಾಗಿದೆ. ಕಳ್ಳನ ಮನೆಗೆ ತಲುಪಿದಾಗ ವೈದ್ಯರೊಮ್ಮೆ ಆಶ್ಚರ್ಯದಲ್ಲಿ ಮುಳುಗಿರಬೇಕು. ವೈದ್ಯರು ಬಂದೊಡನೆ, ಭೀಮಾಕಾರದ ಭೀಮನಾಯಕ ಕಾಲು ಹಿಡಿದು ಪುತ್ರರಕ್ಷಣೆಗಾಗಿ ಬೇಡಿದಾಗ—ವೈದ್ಯರಾತನ ವೈದಡಹಿ "ಆ ವಿಕಾರಮೂರ್ತಿಯ ಮುಖದ ಮೇಲೆ ನೆಲೆನಿಂತ ಕರುಣೆಯ ರೂಪವನ್ನು ಗುರುತಿಸುವುದು"—ಹೃದಯಂಗಮವಾಗಿದೆ. ಅಂತೆಯೆ ಒಳಬಂದ ವೈದ್ಯರು ತನ್ನ ಮನೆಯ ಹಾಸಿಗೆಯಲ್ಲಿ ಪವಡಿಸಿದ್ದ ಮಗುವನ್ನು ಕಂಡು—ಒಮ್ಮೆಗೆ ಚಕಿತರಾದರೂ "ತಾವು ಕಳ್ಳರ ಮನೆಯಲ್ಲಿ ಕುಳಿತಿರದೆ, ತಾಯಿ-ತಂದೆತನದ ಎರಡು ಕರುಣಾಹೃದಯಗಳೆದುರು ಕುಳಿತಿದ್ದೇವೆ" ಎಂದು, ಕಂಬನಿಗರೆಯುತ್ತಿದ್ದ ಆ ಭೀಮನಾಯಕನ ಮುಂದೆ ನೆನೆದು—ಗತಕಾಲದ ದುರಂತವನ್ನು ಮರೆಯುವುದು—ಬಹು ರುಚಿರವಾಗಿದೆ. ಮುಂದೆ ವೈದ್ಯರು ಬೇಕಾದ ಚಿಕಿತ್ಸೆಯೆಸಗಿ—ಪಟ್ಟಣದ ಡಾಕ್ಟರರ ಬಳಿ ಆತ ಹೋಗದಿರುವ ಕಾರಣವನ್ನು ಕೇಳಿ—ತನ್ನ ಮನೆಯಲ್ಲಿ ತಾನದೆಂತು ವೈದ್ಯನೆಂಬುದನ್ನು ಭೀಮನಾಯಕನರಿತ ನಿಲುವನ್ನು ಪ್ರಶ್ನಿಸುತ್ತಾರೆ ಆ ಬಳಿಕ ಭೀಮನಾಯಕನ ಮುಂದೆ "ನೋಡು, ಭೀಮಣ್ಣಾ—ಕಾಯುವುದು ದೇವರ ಕೆಲಸ. ಕೊಲ್ಲುವುದು ರಾಕ್ಷಸರ ಕೆಲಸ ಕಾಯುವ ಕೆಲಸಕ್ಕಾಗಿ ಮನಮುಟ್ಟಿ ದುಡಿಯುವವರಿಗೆ ದೇವರ ಸಹಾಯ ಇದ್ದೇ ಇರುತ್ತದೆ."—ಎಂದು ವೈದ್ಯರು ಭೀಮನಾಯಕನನ್ನು ಕುರಿತು ಆಡುವುದು—ಈ ಬಗೆಯ ಮನೋವೈಜ್ಞಾನಿಕ ಕಥೆ, ಗಿರಿಸಿದ ಭದ್ರವಾದ ಅಡಿಗಲ್ಲು! ವೈದ್ಯರಾ ಮಾತನ್ನು ಕೇಳಿ ಭೀಮನಾಯಕ ತನ್ನ ಹೃದಯಪರೀಕ್ಷೆಯೆಸಗುತ್ತಾನೆ. ಆಗಲೆ ಮಗು

ಬಡತನದ ಬಾಳು

(ಕಥಾಸಂಕಲನ)

ಬರೆದವರು : 'ಆನಂದಕಂದ'

ಇದರಲ್ಲಿಯ ಒಂದೊಂದು ಕಥೆಯೂ ನಮ್ಮ ಜನಜೀವನದ ವಾಸ್ತವಚಿತ್ರ. ವಾಸ್ತವದಲ್ಲಿಯೆ ಸಾಹಿತ್ಯಿಕಸೌಂದರ್ಯವನ್ನು ಸಹಜವಾಗಿ ಹೇಗೆ ತುಂಬಬಹುದೆಂಬುದಕ್ಕೆ ಇದರಲ್ಲಿಯ ಕಥೆಗಳು ಒಳ್ಳೆಯ ಮಾದರಿಗಳಾಗಿವೆ

ಕ್ರಾ. ೮. ೧೫೦ ಪುಟಗಳು. ಬೆಲೆ ೧-೪-೦

'ಜಯಂತಿ' ಕಾರ್ಯಾಲಯ, ಧಾರವಾಡ

'ಅಪ್ಪಾ' ಎಂದು ದನಿಗೂಡುವುದು. ಮಗುವಿಗೆ ಎಚ್ಚರವಾಯಿತು. ವೈದ್ಯರು ಗದ್ಗದಿಸಿ—"ದೇವರು ದಯಾಶಾಲಿ! ಆತ ಕೆಡುಕನ್ನೆಂದೂ ಮಾಡನು." ಎಂದೆಂದು ತೆರಳಲನುವಾಗ "ತಾಯಿ, ಇನ್ನು ಮೇಲೆ ಇವನು ನಿಮ್ಮ ಮಗ.!" ಎಂದಾಗ, ಆ ಕಠೋರ ಹೃದಯದಲ್ಲೂ ದೇವತ್ವದ ಪ್ರತೀಕವಾದ ಕೃತಜ್ಞತೆಯ ಸೆಲೆ ಸಿಡಿದೋಡಿ ಬಂತು. ವೈದ್ಯರು ತೆರಳಿದರು.

ಮರುದಿನ ರಾತ್ರಿ—ಪುನಃ ರತ್ನ, ವೈದ್ಯರಿಗೆ ಬಾಧಿಸಿದ ತೊಂದರೆಯನ್ನೆತ್ತಿದಾಗ—ವೈದ್ಯರು "ಇದೇನು, ನಿನ್ನ ಮಾತು ರತ್ನಾ, ನನ್ನ ವೈದ್ಯಕದ ಪ್ರಾವೀಣ್ಯ ಒಬ್ಬ ತಾಯಿಯ ಕರುಳನ್ನು ಸಂತಯಿಸಿತು; ಒಬ್ಬ ತಂದೆಯ ಕುಲವನ್ನು ಮುಂದುವರಿಸಿತು"—ಎಂದಾಡುವುದು ಅವರ ಹೃದಯದಲ್ಲಿ ಸೂರೆಗೊಂಡ ಜೀವನದರ್ಶನವನ್ನು ಬಿಂಬಿಸುತ್ತದೆ. ಅದೇ ಗಳಿಗೆಯಲ್ಲೇ ಭೀಮನಾಯಕನು ತನ್ನ ಸಂಗಾತಿಗಳೊಡನೆ ಬಂದು, ವೈದ್ಯರಲ್ಲಿಂದ ಕಳವಾದ ವಸ್ತುಗಳನ್ನು ಸಮರ್ಪಿಸುತ್ತಾನೆ. ಆ ಸಮರ್ಪಣೆಯು ಭೀಮನಾಯಕನ ಮಾನಸಿಕ ಪರಿವರ್ತನೆಯ ಕುರುಹಾಗಿದ್ದರೆ, ವೈದ್ಯರ ನಿರ್ಲಿಪ್ತಭಾವಕ್ಕೆ ಬಿಂಬಕವಾಗಿದ್ದರೆ—ರತ್ನಳ ಹೃದಯದಲ್ಲಿ ಧನ್ಯತೆಯ ಮುಗುಳುನಗೆಯನ್ನು ತೇಲಿಸಿತು. ಕತೆಯು ಸುಂದರವಾದ—ಮಾರ್ಮಿಕವಾದ—ಒಂದು ಸೆಳೆತದಲ್ಲಿ ಸಮಾರೋಪವನ್ನೈದಿತು!

ಇತಿವೃತ್ತಕ್ಕೊಪ್ಪಿದ ಮಾರ್ಮಿಕ ಘಟನಾನಿವೇಶ, ರಚನಾಶ್ಲಿಷ್ಟ ಸಾಂದರ್ಭಿಕ ವಚನವಿಲಾಸ ಮನೋವೈಜ್ಞಾನಿಕ ಸತ್ಯವನ್ನು ಬಿಂಬಿಸಿ ತೋರುವ ಮಾರ್ಮಿಕವಾದ, ಕಥೆಯ ಆದಿ-ಮಧ್ಯಾಂತಗಳ ಮಧುರೈಕ್ಯ—ಎಲ್ಲವಕ್ಕೂ ಮಿಗಿಲಾಗಿ ನಿಂತ ಭಾಷಾಪ್ರೌಢಿಮೆ—ಇವುಗಳಿಂದೀ ಕತೆಯು ಸುಂದರವಾಗಿದೆ—ಒಲವೇರಿದ ಸ್ವಾಗತವು

ಸಾಹಿತ್ಯ ವಿಮರ್ಶೆಯ ಶಿಕ್ಷಣರಂಗ

(ಒಂದು ಸಲಹೆ)

ಶ್ರೀ. ಕೆ. ಎಸ್. ಶರ್ಮಾ ಕಾಸರಗೋಡು.

೨೦ನೆಯ ಸಂಪುಟವನ್ನು ಪ್ರಾರಂಭಿಸಲಿರುವ ತನ್ನ ಸಾಹಿತ್ಯಿಕ ಸೇವೋತ್ಸವದ ಸುದಿನದಲ್ಲಿ 'ಜಯಂತಿ'ಯು ಶಿಕ್ಷಣರಂಗದಲ್ಲಿ ಹೊಸೆಯಬೇಕಾದ ನೂತನವಾದ ಸಲಹೆಯನ್ನು ಅಪೇಕ್ಷಿಸಿದೆ. ಕನ್ನಡ ಯುವಕರಲ್ಲಿ ಸಾಹಿತ್ಯಿಕ ವಿಮರ್ಶಾಕೌಶಲ್ಯವನ್ನುಂಟು ಮಾಡಲು ತನ್ನದೇ ಆದ ಒಂದು ಶಿಕ್ಷಣರಂಗವನ್ನು ಅನುಗೊಳಿಸಿದ ಜಯಂತಿ, ಪತ್ರಿಕಾಪ್ರಪಂಚದಲ್ಲೇ ಒಂದು ನೂತನ ಕ್ರಾಂತಿಯನ್ನನುಗೊಳಿಸಿದೆ ಯೆಂಬುದಿದು, ಈ ರಂಗನಿವೇಶಕ್ಕಾಗಿ ಆತುರಗೊಂಡು ಬರುವ ಪತ್ರಗಳೂ, ವಾಚಕರಲ್ಲಿ ಸಹಜವಾಗಿ ಆಕರ್ಷಣೆಯನ್ನುಂಟು ಮಾಡುವ ಈ ವಿಭಾಗವೂ ಸಾಕ್ಷಿಗಳಾಗಿವೆಯೆಂಬುದನ್ನು ಪುನರ್ನಿಗದಿಸಬೇಕೆಂದಿಲ್ಲ! ಕೇವಲ ಯುವಕರಲ್ಲಿ ಮಾತ್ರವಲ್ಲ; ಶಿಕ್ಷಣತಜ್ಞರಲ್ಲೂ ಈ ವಿಭಾಗವು ಕೆಲವೊಂದು ಬಗೆಯ ಆಕರ್ಷಣೆಯನ್ನೂ ಗೌರವವನ್ನೂ ಅರಳಿಸಿದೆಯೆಂಬುದನ್ನು ನನಗೆ ಬಂದ ಹಲವು ಮಹನೀಯರ, ವಿಮರ್ಶಾ ಸಹಭಾಗಿಗಳ, ವಿಮರ್ಶಿತ ಲೇಖಕವೃಂದದ ಓಲೆಗಳಿಂದ ಹೇಳಬಲ್ಲೆ! ಒಟ್ಟು ಜಯಂತಿಯಿತ್ತ ಈ ಹಿರಿಮೆಯ ವಿಭಾಗವು ಸ್ಪೃಹ್ಯವಾಗಿದೆಯೆಂಬುದನ್ನು ಧಾರಾಳವಾಗಿ ಹೇಳಬಹುದು.

ವಿಮರ್ಶೆಯ ನೋಟ ಹೇಗಿರಬೇಕು ?

ಜಯಂತಿಯಲ್ಲಿ ಪ್ರಕಟಗೊಳ್ಳುವ ಕಥಾ-ನಾಟಕಗಳು ವಿಮರ್ಶೆಗಾಗಿ ಬರುವಂತೆ ಉಳಿದ ಕವನಗಳೂ, ಲೇಖನಗಳೂ, ಧಾರಾಳವಾಗಿ ಇಲ್ಲವೆ ಪರ್ಯಾಯಕ್ರಮದಿಂದ ವಿಮರ್ಶಾಮುಖವನ್ನು ಹೊಗಬೇಕು ಹೀಗಾದರೆ ವಿವಧಸಾಹಿತ್ಯಿಕಮಾರ್ಗದಲ್ಲಿ ಕಾಲಿಡಲು, ಒಳಿತು—ಕೆಡುಕುಗಳನ್ನು ಬಯಲಿಗೆಳೆಯಲು-ಅಭ್ಯಾಸಗಳಿಗೆ ಅವಕಾಶ ಸಿಕ್ಕಂತೆ ಆಗುವುದು. ಇಂತಹ ಅವಕಾಶವನ್ನು ಕಲ್ಪಿಸುವಾಗ, ಪ್ರಬುದ್ಧವಾದ ಜಯಂತಿಯ ಸಂಪಾದಕ ಲೇಖನಿಯು ಕೆಲವು ಬಾರಿ—ವಿಮರ್ಶೆಗಾಗಿ ನೀಡಿದ ವಸ್ತುವಿನ-ಇಲ್ಲವೆ ಕೃತಿಯ-ಯಾವುದಾದರೊಂದು ವಿಮರ್ಶಾಯುಕ್ತ ವಿಶಿಷ್ಟಭಾಗವನ್ನುಲ್ಲೇಖಿಸಿ ವಿಮರ್ಶಿಸಲು ಹೇಳಬೇಕು. ಅರ್ಥಾತ್ ವಿವಿಧ ಮುಖವಾಗಿ ಅಲ್ಪಾಲ್ಪವಾಗಿ ಸವಿಯುವ ಪೂರ್ಣ ಕೃತಿಯ ವಿಮರ್ಶೆಯಂತೆಯೆ, ಅವುದಾದರೊಂದು ಭಾಗದ ಏಕಮುಖೀನ ವಿಮರ್ಶೆಯು ಆಸ್ಪದವಿರಬೇಕೆಂಬುದೇ ನನ್ನ ಆಶಯ. ನಾಟಕ—ಹಾಗೂ—ಕವಿತೆಯ ವಿಮರ್ಶೆಯಲ್ಲಿ ಈ ಭಾಗಕ್ಕೆ ವಿಶೇಷ ಆಸ್ಪದವಿದೆಯೆಂದು ನನ್ನ ಭಾವನೆ.

ಇನ್ನೊಂದು ಮಾತು. ಪ್ರಕಟವಾದ ಲೇಖನಗಳನ್ನು ವಿಮರ್ಶೆಗೀಯುವಂತೆಯೆ, ಇಂದಿನ ವಿವಿಧಮುಖವಾಗಿ ಹರಿಯುವ ಸಾಹಿತ್ಯದ ವಿವಿಧ ಭಾಗಗಳಲ್ಲಿ ಕಾಣಿಸಿಕೊಳ್ಳುವ ಸಾಹಿತ್ಯರೂಪಾಂತರಗಳ ನಿಲುವು ಅವುಗಳ ರೂಪರಚನೆ, ಅವುಗಳು ಸಾಧಿಸಬೇಕಾದ ಧ್ಯೇಯ, ಇವುಗಳ ಕುರಿತು ಅಭಿಪ್ರಾಯಗಳನ್ನು ಬರಮಾಡುವ ರೀತಿಯಲ್ಲಿ ಶಿಕ್ಷಣರಂಗವನ್ನು ಕಳೆಯೇರಿಸಬಹುದಲ್ಲವೆ! ಎಂದರೆ ಇಂದಿನ ಕಾದಂಬರಿಗಳು, ಕತೆಗಳು, ನಾಟಕಗಳು, ಇವೇ ಮೊದಲಾದುವುಗಳ ಕುರಿತಾದ ನಿಲುವನ್ನು ಒರೆದೋರುವುದೆಂದರ್ಥ. ಇದರಂತೆಯೆ ದೃಶ್ಯಮಾರ್ಗವಾಗಿ ರೂಪುದೋರುವ, ಕೆಲವೆಡೆ ಸಭ್ಯವಾಗಿಯೂ-ಅಸಭ್ಯವಾಗಿಯೂ ತಲೆಗಾಣಿಸುವ ನಾಟಕ, ಬಯಲಾಟಗಳ ಕುರಿತೂ ಅಭಿಪ್ರಾಯವನ್ನು ಸಂಗ್ರಹಿಸುತ್ತ, ಭಿನ್ನಭಿಪ್ರಾಯಗಳು ತಲೆದೋರಿದಲ್ಲಿ ವಾದರಂಗವನ್ನು ಇರಿಸಿ-ಕೊನೆಯಲ್ಲಿ ಸಾಧುವಾದೊಂದು ಅಧ್ಯಕ್ಷಸಿದ್ಧಾಂತವನ್ನು ಈ ಪೂರ್ವಪಕ್ಷಗಳ ಮುಂದಿರಿಸಿದರೂ ಉತ್ತಮವಾಗದೇ ?—ನಾಡು-ಮತ್ತು-ನುಡಿಯ ಭವ್ಯತೆಯನ್ನು ಹೊಸೆಯಬೇಕಾದಲ್ಲಿ—ತಪ್ಪುಮಾರ್ಗದಲ್ಲಿ ಬರಬಹುದಾದ ಕೀಳನ್ನು ಇಲ್ಲದಾಗಿಸುವುದು, ಇಲ್ಲವೆ ಎಚ್ಚರಿಕೆಯೀಯುವುದು ಜಯಂತಿಯಂತಹ ಉತ್ಕೃಷ್ಟ ಮಾಸಿಕದ ಧ್ಯೇಯವೆಂದೇ ನನ್ನೆಣಿಕೆ.

ಹಿಂದೆ ಒಂದು ಬಾರಿ ಜಯಂತಿ-ಇಸವಿಯೊಂದರ ನಿರ್ದೇಶಮಾಡಿ, ಆ ಇಸವಿಯಲ್ಲಿ ಬೆಳಕು ಕಂಡ ಉತ್ತಮ ಕಾದಂಬರಿ ಯಾವುದು ' ಎಂದು ಕೇಳಿತ್ತು! ನಾಡಿನ ವಿವಿಧೆಡೆಗಳಿಂದ ಈ ಕುರಿತು ಅಭಿಪ್ರಾಯ ಬಂದಿತ್ತು! ಆದರೆ ಮುಂದೆ ಅದೇಕೋ ಅಂತಹ ಪ್ರಶ್ನೆಯೇ ಬರಲಿಲ್ಲ. ಇಂತಹ ಕೃತಿವಿಮರ್ಶೆಯನ್ನು ಜಯಂತಿ ಅನುಗೊಳಿಸಬೇಕೆಂದು ನನ್ನ ಹಾರಯಿಕೆ. ಇಸವಿಯನ್ನು ನಿರ್ದೇಶಮಾಡಿದಂತೆ. ಕೃತಿಯನ್ನು ನಿರ್ದೇಶಮಾಡಬಾರದು ಯಾಕೆಂದರೆ ನಿರ್ದಿಷ್ಟಕೃತಿಯು ಅಭ್ಯಾಸಿಗಳೆಲ್ಲರ ಕೈಗೆಟಕದಂತಿದ್ದರೆ—ಕಷ್ಟವಾಗಬಹುದು! ಇಂತಹ ಸಂದರ್ಭವನ್ನು ಜಯಂತಿಯು ತಾನು ಪ್ರವೇಶಿಸಲು ಇರುವ ನೂತನ ಸಂಪುಟದಾರಂಭದಲ್ಲಿ ಇಲ್ಲವೆ ವಿಶೇಷ ಸಂಚಿಕೆಯನ್ನು ಹೊರಡಿಸುವ ಕಾಲದಲ್ಲಿ-ಅನುಗೊಳಿಸುವುದುಚಿತವಾಗಿದ್ದಂತೆ, ವಿಕಾಸಲಾಗಿರುವ ಅವಧಿಯೂ ತುಸು ಹೆಚ್ಚಾಗಿರಬೇಕೆಂಬುದನ್ನರಿಯಲು ಮರೆಯಬಾರದು.—

ಕೊನೆಯಮಾತು:— ಈ ಬಗೆಯ ಉತ್ತಮ ಶಿಕ್ಷಣರಂಗವನ್ನು ನಿರ್ಮಿಸಿದ ಜಯಂತಿ, ಒಂದು ಕಾಲದಲ್ಲಿ ಈ ಕುರಿತು ವಿಜಯಿಗಳಿಗೆ ಬಹುಮಾನವನ್ನು ಏರ್ಪಡಿಸಿತ್ತು ನಾಲ್ಕುನಿಟ್ಟಿನಿಂದಲೂ ಕವಿದು ನಿಂತ ಆರ್ಥಿಕದುಃಸ್ಥಿತಿ ಜಯಂತಿಯ ಧ್ಯೇಯವನ್ನು ಸಾಗಗೊಡಲಿಲ್ಲ ಎಂದು ತೋರುತ್ತದೆ. ಆದುದರಿಂದ ವಿಜಯಿಗಳು ನಿರಾಶಿತರಾಗಬೇಕಾಗಿ ಬಂತು. ಏನಿದ್ದರೂ ಜಯಂತಿ ಇಂತಹ ಬಹುಮಾನ ಸಂದರ್ಭವನ್ನು ಅನುಗೊಳಿಸಬೇಕು. ಸ್ಪರ್ಧಾಭಾಗಿಗಳಿಗೆ ಸಡಿಲಾದ ಒಂದು ಪ್ರವೇಶಶುಲ್ಕವನಿರಿಸುವುದು,—ತನ್ಮೂಲಕ ನೂತನ ಸಂಪುಟಾರಂಭಕಾಲದ ಈ ಸ್ಪರ್ಧೆಯನ್ನು ನಡೆಸುವುದು—ರುಚಿರವಾಗಬಹುದೆಂದು ನನ್ನೆಣಿಕೆ ಇನ್ನು ಜಯಂತಿಯ ಇಚ್ಛೆ! ಇನ್ನೊಂದ ರೀತಿಯಿಂದ ಸಂದರ್ಭವನ್ನು ಒದಗಿ ಕೊಡುವೇ ಕನ್ನಡ ಯುವಕರ ಭಾಗ್ಯ!—

ಮರೆತಮಾತು— ವಿಮರ್ಶಾ ವಿಭಾಗದಲ್ಲಿ ಸಂಪಾದಕ ಮಂತಲಿ ನೊದಲ ಕೊಡುತ್ತಿದ್ದ ಬಗೆಯಲ್ಲೇ ವಿಮರ್ಶೆಗಳಲ್ಲಿ ಕಂಡ ಗುಣ—ದೋಷಗಳ ವಿಚಾರವನ್ನು ತುಸು ವಿಶಾಲವಾಗಿ ಕೊಟ್ಟರೆ ಚೆನ್ನಾಗುವುದೆಂದು ಹೇಳಿ— ಈ ನೂತನ ಸಂವತ್ಸರಾರಂಭವನ್ನು ಸಂಭ್ರಮದಿಂದ ಸ್ವಾಗತಿಸಿ ಹೊರಟ ಜಯಂತಿ ಭಾಗ್ಯವತಿಯಾಗಿ ಬಾಳಲೆಂದು ಆಶಿಸುವೆನು.

ಸಾಹಿತ್ಯವನವಿಹಾರ

ಮರಾಠೀ ವಾಙ್ಮಯದರ್ಶನ

(ಪುಸ್ತಕ-ಪರಿಚಯ)

ಶ್ರೀ. ಬಿ. ಪಿ ಎಸ್ ರಾವ್

ಕಳೆದ ತಿಂಗಳ ಮೊದಲವಾರದಲ್ಲಿ ನಡೆದ ಕನ್ನಡ ಸಾಹಿತ್ಯ ಸಮ್ಮೇಳನದ ಕಾಲದಲ್ಲಿಯೇ–ಚಿಕ್ಕದಾದರೂ ಪರಿಚಯಪೂರ್ಣವಾದ– ಈ ಪುಸ್ತಕವು ಬೆಳಕಿಗೆ ಬಂದಿದೆ. ಇದನ್ನು ಪ್ರಕಟಿಸಿದವರು. ಧಾರವಾಡದಲ್ಲಿ ಹೊಸತಾಗಿಯೇ ಮುಖವೆತ್ತಿದ ಪರಾಗ ಪ್ರಕಾಶನದವರು; ಬರೆದವರು ಶ್ರೀಮಾನ್ ಪಂಡಿತ ಅವಳೀಕರ್ ಎಂ. ಎ ಅವರು.

ಲೇಖಕರು ಕೊಲ್ಹಾಪುರದಲ್ಲಿ ಹುಟ್ಟಿ ಬೆಳೆದವರು. ಅಲ್ಲಿಯ ಶಾಲೆ-ಕಾಲೇಜುಗಳಲ್ಲಿಯೇ ಕಲಿತು, ಮರಾಠೀ ಸಾಹಿತ್ಯಾಭ್ಯಾಸದಲ್ಲಿ ಎಂ. ಎ ಪದವಿಯನ್ನು ಪಡೆದ ನವತರುಣರು. ಸ್ವತಃ ಕವಿಗಳೂ ಹೌದು; ವಿಮರ್ಶಾತ್ಮಕ ಸಾಹಿತ್ಯನಿರ್ಮಿತಿಯಲ್ಲಿ ಇವರಿಗೆ ತುಂಬ ಅಭಿರುಚಿ. ಸದ್ಯ ಇವರು ಧಾರವಾಡದ ಕರ್ನಾಟಕ ಕಾಲೇಜಿನಲ್ಲಿ ಮರಾಠೀ ಭಾಷೆಯ ಪ್ರಾಧ್ಯಾಪಕರಾಗಿ ಇದ್ದಾರೆ. ನಿಜವಾದ ಸಹೃದಯರು. ಕನ್ನಡಭಾಷೆ-ಸಾಹಿತ್ಯಗಳನ್ನೂ ಇವರು ಕುತೂಹಲ-ಸಹಾನುಭೂತಿಯಿಂದ ಕಂಡು, ಕನ್ನಡ ಸಾಹಿತ್ಯದ ಸೊಬಗನ್ನು ಮಹಾರಾಷ್ಟ್ರೀಯರಿಗೆ ಪರಿಚಯ ಮಾಡಿಕೊಡುವ ಮಹತ್ತ್ವದ ಕಾರ್ಯವನ್ನು ಕೈಕೊಂಡಿದ್ದಾರೆ. ಈಗಾಗಲೇ ಇವರು ಪ್ರ. ಗೋಕಾಕ, ಶ್ರೀ. ಬೆಟಗೇರಿ ಕೃಷ್ಣಶರ್ಮ, ಡಾ ಕೆ. ವಿ. ಪುಟ್ಟಪ್ಪ ಅವರ ವ್ಯಕ್ತಿತ್ತ್ವ ಮತ್ತು ಕೃತಿಗುಣಗಳ ವಿಷಯದಲ್ಲಿ ಲೇಖನ ಬರೆದು, ಮರಾಠೀ ಪತ್ರಿಕೆಗಳಲ್ಲಿ ಪ್ರಕಟಿಸಿದ್ದಾರೆ; ಅಲ್ಲದೆ ಸದ್ಯ ಸರ್ವಜ್ಞವಚನಗಳನ್ನು ಮರಾಠಿಯಲ್ಲಿ ಭಾಷಾಂತರಿಸುವ ಕಾರ್ಯವನ್ನು ನಡೆಸಿದ್ದಾರೆ.

ಈ ಚಿಕ್ಕ ಪುಸ್ತಕಕ್ಕೆ ನಮ್ಮ ಹಿರಿಯ ಕವಿಗಳಾದ ಶ್ರೀಮಾನ್ ಬೇಂದ್ರೆಯವರು ಎಂಟುಪುಟಗಳಷ್ಟು ಮುನ್ನುಡಿ ಬರೆದಿದ್ದು, ಅದರಲ್ಲಿ ಈ ಪುಸ್ತಕದ ಗುಣವಿಶೇಷವನ್ನು ಹೇಳಿರುವರಲ್ಲದೆ, ಆನುಷಂಗಿಕವಾಗಿ ಕನ್ನಡ ಹಾಗೂ ಮರಾಠಿ—ಎರಡೂ ಭಾಷೆಗಳ ಸಾಹಿತ್ಯಿಕ ಸಂಬಂಧದ ಚರಿತ್ರಾಂಶಗಳನ್ನೂ ವಿವರಿಸಿರುವರು. ಮುನ್ನುಡಿಯ ಕೊನೆಯಲ್ಲಿ ಅವರು ಲೇಖಕರ ಬಗೆಗೆ ಹೀಗೆ ಬರೆದಿರುವರು:

"ಶ್ರೀ ಪಂಡಿತ ಅವಳೀಕರ ಇವರು ದ್ವಿಭಾಷಿಕ ಸಂಬಂಧವನ್ನು ನೆನಿಸಿ, ಈ ಸಂಕ್ರಮಣಕಾಲದಲ್ಲಿ ಮಾಡುತ್ತಿರುವ ಸೇವೆ ಅಭಿನಂದನೀಯವಾಗಿದೆ. ಇಂಥ ಕಾರ್ಯ ಅವರಿಂದ ಹೆಚ್ಚಿಗೆ ಆಗಲಿ, ಅದಕ್ಕೆ ಅನುಕೂಲತೆ ದೊರೆಯಲಿ ಈ ದ್ವಿಭಾಷಿಕ ಸಂಬಂಧಗಳನ್ನು ಬೆಳೆಸುವವರ ಗುಂಪು ದೊಡ್ಡದಾಗಲಿ ಇದರಿಂದ ಎರಡೂ ಭಾಷೆಗಳ ಸ್ವಾರಸ್ಯವು ವೈವಿಧ್ಯದಿಂದ ಬೆಳಗಲಿ"

ಮುನ್ನುಡಿಕಾರರ ಈ ಹಾರೈಕೆಯನ್ನು ಯಾರೂ ಒಪ್ಪಬಹುದಾದುದು. ಏಕೆಂದರೆ, ಇದುವರೆಗಿನ ಪರಸ್ಪರರ ರಾಜಕೀಯ ಸಂಬಂಧದ ಪ್ರಚಾರವು, ಒಂದು ಬಗೆಯ ದಾಯಾದಭಾವದ ದ್ವೇಷವನ್ನು ಹಬ್ಬಿಸಿ, ಪರಸ್ಪರರನ್ನು ಸಂದೇಹ ಭೀತಿಗಳಿಂದ ನೋಡಲು ಹಚ್ಚಿದೆ ಪರಸ್ಪರರ ಮನದಲ್ಲಿಯ ಈ ಭಾವನಾವಿಷವು ತೊಲಗಬೇಕಾದರೆ, ಎರಡೂ ದೇಶಗಳಲ್ಲಿ ಸಾಂಸ್ಕೃತಿಕ ಸಹಾನುಭೂತಿ ಬೆಳೆಯುವ ಅಗತ್ಯವಿದೆ ಇದು ಸಂಸ್ಕೃತಿಯ ಪೂಜಾರಿಗಳಿಂದಲೇ ಸಾಧ್ಯ. ದಿವಂಗತ ಸಾನೇ ಗುರುಜಿಯವರು, ದೀರ್ಘದೃಷ್ಟಿಯಿಂದ ವಿಚಾರಮಾಡಿ, ಈ ಕೆಲಸದ ಆವಶ್ಯಕತೆಯನ್ನು ಅರಿತುಕೊಂಡು, ಇದಕ್ಕಾಗಿ ಕಾರ್ಯವನ್ನು ಆರಂಭಿಸಿದರು ಅವರು ತಮ್ಮ 'ಸಾಧನಾ' ಎಂಬ ಪತ್ರಿಕೆಯ ಮುಖಾಂತರ ಪರಸ್ಪರ ಸಹಾನುಭೂತಿಯ ಪ್ರಚಾರ ನಡೆಸಿದರು. ಶ್ರೀ. ಪಂಡಿತ ಅವಳೀಕರರೂ ಈ 'ಸಾಧನಾ'ಮನೋವೃತ್ತಿಯವರಾಗಿದ್ದಾರೆ.

ಕನ್ನಡ ಸಾಹಿತ್ಯ-ಸಾಹಿತ್ಯಿಕರ ಪರಿಚಯವನ್ನು ಮರಾಠಿಗರಿಗೆ ಮಾಡಿಕೊಡುತ್ತಿರುವಂತೆ, ಈಗ ಕನ್ನಡಿಗರಿಗೆ ಮರಾಠೀ ಸಾಹಿತ್ಯದ ಪರಿಚಯ ಮಾಡಿಕೊಡಲು ಈ ಪುಸ್ತಕವನ್ನು ಬರೆದಿದ್ದಾರೆ. ಇದರಲ್ಲಿ ಮರಾಠೀ ಸಾಹಿತ್ಯದ ಕವಿತೆ, ಕಾದಂಬರಿ, ನಾಟಕ, ಸಣ್ಣಕತೆ ಮತ್ತು ಲಲಿತಪ್ರಬಂಧ ಈ ನಾಲ್ಕು ವಿಭಾಗಗಳ ಚಾರಿತ್ರಿಕ ಪರಿಚಯವಿದೆ. ಈ ವಿಭಾಗಗಳಲ್ಲಿ, ಪ್ರಾರಂಭದಿಂದ ಇದುವರೆಗೂ ಹೆಸರಾಪುರುಷರೆನಿಸಿದ ಸಾಹಿತ್ಯಿಕ ವ್ಯಕ್ತಿ ಮತ್ತು ಅವರ ಕೃತಿಗಳ ಗುರುತನ್ನು ನಾವು ಚೆನ್ನಾಗಿ ಮಾಡಿಕೊಳ್ಳಬಹುದು. ಈ ವಿಭಾಗಗಳು ಕಾಲಕ್ರಮದಿಂದ ಬೆಳೆದ ಬಗೆಯನ್ನೂ ಆ ಬೆಳವಣಿಗೆಯ ಗುಣ ದೋಷಗಳನ್ನೂ ವಿಶ್ಲೇಷಿಸಿ ವಿವರಿಸುವ ಕ್ರಮವನ್ನು ನೋಡಿದರೆ, ಲೇಖಕರ ಆಳವಾದ ಅಭ್ಯಾಸ, ಸಹಾನುಭೂತಿ ಮತ್ತು ಸಂಯಮದಿಂದ ಕೂಡಿದ ವಿಮರ್ಶಾಶಕ್ತಿ ಇವು ನಮಗೆ ಚೆನ್ನಾಗಿ ಮನವರಿಕೆಯಾಗುವುವು.

ಮರಾಠಿಗರು ಕನ್ನಡಿಗರಿಗಿಂತ ಮೊದಲೇ ಎಚ್ಚತ್ತು ವಿವಿಧಮುಖವಾಗಿ ಕಾರ್ಯವನ್ನು ಪ್ರಾರಂಭಿಸಿದವರು; ಅಲ್ಲದೆ, ಹೊಸದೆಂಬುದು ಯಾವ ದಿಕ್ಕಿನಿಂದಲೇ ಬರಲಿ, ಅದನ್ನು ಮೈಗೂಡಿಸಿಕೊಳ್ಳಲು ಬಯಸುವ ಪುರೋಗಾಮಿವೃತ್ತಿಯವರು. ಅವರು ತಮ್ಮ ಸಾಹಿತ್ಯನಿರ್ಮಿತಿಗೆ ಕಾಲೋಚಿತವಾದ ತಂತ್ರ-ಮಂತ್ರಗಳನ್ನು ಪುರಸ್ಕರಿಸಿ, ಮರಾರಣ್ಯದಂತೆ ಅದನ್ನು ಬೆಳೆಸಿರುವರು. ಈ ಪುಟ್ಟ ಪುಸ್ತಕವನ್ನು ಓದುವುದರಿಂದ, ಮರಾಠೀ ಸಾಹಿತ್ಯಿಕರು ಬೆಳೆಸಿಕೊಂಡ ವಿವಿಧ ಸಾಹಿತ್ಯರೂಪದ ದರ್ಶನ ಕನ್ನಡಿಗರಿಗೆ ಆಗಬಲ್ಲುದು. ಅದರಲ್ಲಿಯ ನೂತನ ಗುಣಾಂಶಗಳನ್ನು ಕುರಿತು ನಮ್ಮ ಸಾಹಿತ್ಯಿಕರೂ ವಿಚಾರಮಾಡಬಹುದು. ಸಕಾಲದಲ್ಲಿ ಈ 'ವಾಙ್ಮಯ ದರ್ಶನ'ವನ್ನು ಒದಗಿಸಿಕೊಟ್ಟು ಲೇಖಕರೂ ಪ್ರಕಾಶಕರೂ ಅಭಿನಂದನೆಗೆ ಯೋಗ್ಯರಾಗಿದ್ದಾರೆ.

ಸಾದರ ಸ್ವೀಕಾರ

೧ **ಶ್ರೀಭುವನೇಶ್ವರೀ ಪಂಚಾಂಗ** (ಹೇಮಲಂಬಿ ಸಂವತ್ಸರದ ವರ್ಷಭವಿಷ್ಯ ಸಹಿತ). ಪಂಚಾಂಗಕಾರರು. ಶ್ರೀಮಾನ್ 'ಜ್ಯೋತಿರ್ವಿದ್ವಾನ್' ಶೇಷಶಾಸ್ತ್ರಿ ಹೆಬ್ಬಾಳ, ಸುರಪುರ ಪ್ರಕಾಶಕರು ಆರ್ಯ ವೈಶ್ಯಸಂಘ, ರಂಗಪೇಟೆ (ಸುರಪುರ). ದೊಡ್ಡ ಪುಟಗಳು ೯೪; ಬೆಲೆ ೦-೧೨-೦.

ಜ್ಯೋತಿಷ್ಯಕ್ಕೆ ಸಂಬಂಧಿಸಿದ ಅನೇಕ ಉಪಯುಕ್ತ ಸಂಗತಿಗಳಿಂದ ಕೂಡಿರುವುದಲ್ಲದೆ, ಈ ಪಂಚಾಂಗವು ಕಾಲೋಚಿತವಾದ ರಾಜಕೀಯ, ಸಾಮಾಜಿಕ, ವ್ಯಾವಹಾರಿಕ ಭವಿಷ್ಯವನ್ನು ಸೂಚಿಸುವಂತಹದೂ ಆಗಿದೆ. ಸುರಪುರದ ಪಂಚಾಂಗವು ಹಲವಾರು ವರ್ಷಗಳಿಂದಲೂ ಒಳ್ಳೆಯದೆಂಬ ಖ್ಯಾತಿಯನ್ನು ಗಳಿಸಿದುದಾಗಿದೆ

೨ **ನಾಲ್ವಡಿಸೆಯ ನೋಟ** (ಲೇಖನ ಸಂಕಲನ). ಲೇಖಕರು ಡಾ. ಡಿ. ಎಸ್. ಕರ್ಕಿ ಎಂ. ಎ, ಪಿಎಚ್. ಡಿ ಅವರು ಪ್ರಕಾಶಕರು: ಕರ್ನಾಟಕ ಸಹಕಾರೀ ಸಾಹಿತ್ಯಸಂಘ, ಧಾರವಾಡ ಕ್ರಾ ಅ. ೧೫೪ ಪುಟಗಳು. ಬೆಲೆ ೧-೪-೦.

೩ **ಆಕಾಶವಾಣಿ ಪ್ರಸಾರಿಕಾ** (ನಿಯತ ಕಾಲಿಕವಿರಬಹುದೆ ?) ಸಂಪಾದಕರು ಶ್ರೀಮಾನ್ ದ ರಾ ಬೇಂದ್ರೆಯವರು ಪ್ರಕಾಶಕರು ಪಬ್ಲಿಕೇಶನ್ ಡಿವಿಜನ್, ದಿಲ್ಲಿ ೮ ರಾಯಲ್ ೧೬ದ ೬೪ ಪುಟಗಳು. ಬಿಡಿಸಂಚಿಕೆಯ ಬೆಲೆ ೧-೮-೦.

೪ **ದೀಪ್ತಿ** (ಶ್ರೀ ಅರವಿಂದರ ತತ್ತ್ವಜ್ಞಾನ ಪ್ರಸಾರಕ. ತ್ರೈಮಾಸ ಪತ್ರಿಕೆ). ಸಂಪಾದಕರು ಶ್ರೀ. ಎಂ. ಸಿ ಪಂಡಿತ, ಶ್ರೀ. ಅರವಿಂದಾಶ್ರಮ, ಪಾಂಡಿಚೇರಿ. ಪ್ರಕಾಶಕರು ಶ್ರೀ. ಅರವಿಂದ ಮಂಡಲ, ೩೪೦ ಸೀತಾನಿವಾಸ, ಠಳಕವಾಡಿ, ಬೆಳಗಾಂವಿ ರಾಯಲ್ ೧೬ದ ೩೬ ಪುಟಗಳು. ವಾರ್ಷಿಕ ಚಂದಾ ೩-೮-೦ ಬಿಡಿಸಂಚಿಕೆಗೆ ೧-೦-೦.

೫ Contemporary Indian Literature (ಭಾರತದ ೧೪ ಪ್ರಮುಖ ಭಾಷಾಸಾಹಿತ್ಯದ ಬಗೆಗೆ ಬರೆದ ವಿಚಾರ ಸಂಕಿರಣಗಳ ಸಂಕಲನ). ಸಂಕಿರಣಕಾರರು ಬೇರೆ ಬೇರೆ ಭಾಷೆಯ ಹೆಸರಾಂತ ಲೇಖಕರು, ಪ್ರಕಾಶಕರು ಸಾಹಿತ್ಯ ಅಕ್ಯಾಡಮಿ, ನ್ಯೂದಿಲ್ಲಿ, ಡೆ. ಅ. ೩೦೦ ಪುಟಗಳು. ಬೆಲೆ ೭-೮-೦

೬ **ಇನ್ನೊಂದು ಹೆಜ್ಜೆ** (ಕವನ ಸಂಕಲನ) ಲೇಖಕರು ಶ್ರೀಮಾನ್ ಎಸ್. ಎಸ್. ಗದಗಕರರು, ಶುಕ್ರವಾರಪೇಟೆ, ಲಕಮನಹಳ್ಳೀ ಓಣಿ, ಧಾರವಾಡ. ಕ್ರಾ ಅ. ೪೪ ಪುಟಗಳು

೭ **ಕನಕದಾಸರ ಕೀರ್ತನೆಗಳು** (ಹಾಡುಗಳ ಸಂಕಲನ) ಪ್ರಕಾಶಕರು ಉಪಾಧ್ಯಾಯ ಪ್ರಕಟನಾಲಯ, ಗೋಪಾಲಕೃಷ್ಣ ಸ್ವಾಮಿಯ ಗುಡಿ ಬೀದಿ, ಬೆಂಗಳೂರ ಸಿಟಿ ಕ್ರಾ. ಅ. ೧೧೨ ಪುಟಗಳು ಬೆಲೆ ೧-೦-೦

ಗರ್ಭಾಶಯದ ದೋಷಗಳನ್ನು ನಿವಾರಿಸಲು ಅತ್ಯುತ್ತಮವಾದ ಸಿದ್ಧೌಷಧ
ಜೀವನಿ
ದಿ ಸದ್ವೈದ್ಯ ಶಾಲಾ ನಂಜನಗೂಡು
ಬ್ರಾಂಚುಗಳು: ಬೆಂಗಳೂರು, ಮೈಸೂರು, ಮಂಗಳೂರು, ಹುಬ್ಬಳ್ಳಿ
ಯಾವಾಗಲೂ ... ಉಪಯೋಗಿಸಿ

೮ **ಅಭ್ಯುದಯ** (ಕನ್ನಡ ಮಾಸಪತ್ರಿಕೆ) ಸಂಪಾದಕರು ಶ್ರೀಮಾನ್ ಟಿ. ಕೃಷ್ಣಭಟ್ಟ 'ವಿದ್ವಾನ್' ಅವರು. ಪ್ರಕಾಶಕರು ಅಭ್ಯುದಯ ಕಾರ್ಯಾಲಯ, ಮಡಿಕೇರಿ. ಡೆ. ಅ. ೪ ಪುಟಗಳು ವಾ. ಚಂದಾ ೪-೮-೦ ಬಿಡಿಸಂಚಿಕೆ ೦-೬-೦

೯ **ದಿವ್ಯಜ್ಯೋತಿ** (ಜೀವನ ಚರಿತ್ರೆ). ಬರೆದವರು ಶ್ರೀ. ಎನ್. ಸೂರಪ್ಪನವರು. ಪ್ರಕಾಶಕರು ಸಾಹಿತ್ಯಸೇವಾಸದನ, ೨೫ ಕಾಜೀ ಬೀದಿ, ಬಸವನಗುಡಿ, ಬೆಂಗಳೂರ ೪. ಕ್ರಾ. ಅ. ೧೨೨ ಪುಟಗಳು ಬೆಲೆ ೧-೮-೦

೧೦ **ಸುದರ್ಶನ** (ಸಾಮಾಜಿಕ ಕಾದಂಬರಿಯ ೪ನೆಯ ಮುದ್ರಣ) ಬರೆದವರು 'ಆನಂದಕಂದ' ಪ್ರಕಾಶಕರು ಕನ್ನಡ ಸಾಹಿತ್ಯಪ್ರಕಾಶನ, ಧಾರವಾಡ. ಕ್ರಾ. ಅ. ೧೫೦ ಪುಟಗಳು ಬೆಲೆ ೧-೮-೦

೧೧ **ಅಮೃತಕುಂಭ** (ಆಧ್ಯಾತ್ಮಿಕ ರೂಪಕಕಥಾಸಂಕಲನ) ಶ್ರೀಮತಿ ಪ್ರಭುದಾಸೀ ನಿವೇದಿತಾ ಅವರು ಮೂಲ ಮರಾಠಿಯಲ್ಲಿ ಬರೆದುದನ್ನು ಶ್ರೀಮಾನ್ ವಿನೀತ ರಾಮಚಂದ್ರರಾಯರು ಅನುವಾದಿಸಿ ಪ್ರಕಟಿಸಿದ್ದಾರೆ. ಪ್ರಕಾಶಕರು ಪ್ರದೀಪ ಕಾರ್ಯಾಲಯ, ಧಾರವಾಡ. ಫೂ ಕ್ಯಾ. ಅ. ೧೫೦ ಪುಟಗಳು. ಬೆಲೆ ೧-೦-೦

೧೨ **ಮಹಾರಹಸ್ಯ** (ಅನುವಾದಿತ ಕಿರುಹೊತ್ತಗೆ). ಮೂಲ ಲೇಖಿಕೆಯರು ಶ್ರೀಮಾತಾಜಿ ಪ್ರಕಾಶಕರು ಶ್ರೀ. ಅರವಿಂದಾಶ್ರಮ, ಪಾಂಡೀಚೇರಿ. ಕ್ರಾ. ಅ. ೩೬ ಪುಟಗಳು. ಬೆಲೆ ೦-೮-೦

೧೩ **ಪರಮಶೋಧ** (ಅನುವಾದಿತ ಕಿರುಹೊತ್ತಗೆ) ಶ್ರೀಮಾತಾಜಿಯವರ ಮೂಲ ಇಂಗ್ಲೀಷಿನಲ್ಲಿ ಬರೆದುದರ ಕನ್ನಡಾನುವಾದ ಪ್ರಕಾಶಕರು ಶ್ರೀ ಅರವಿಂದಾಶ್ರಮ, ಪಾಂಡೇಚೇರಿ. ಫೂ. ಕಾ ಅ. ೧೬ ಪುಟಗಳು. ಬೆಲೆ ೦-೪-೦

೧೪ **ತತ್ತ್ವಮಥನ** (ಭಾಗ ೧) ಲೇಖಕರು ಶ್ರೀ. ಕೃ. ಪ. ಜೋಶಿ, ಮಿಶ್ರಿಕೋಟಿ, ಪ್ರಕಾಶಕರು ಶ್ರೀ ಕೆ. ಜಿ. ಕುರ್ತಕೋಟಿ ನಿವೃತ್ತ ಪ್ರಿನ್ಸಿಪಾಲರು, ಕಾಮನಕಟ್ಟಿ ಧಾರವಾಡ. ಕ್ರಾ. ಅ ೪೪ ಪುಟಗಳು ಬೆಲೆ ೦-೧೨-೦

ಕರ್ನಾಟಕದಲ್ಲಿ ಭಾವಗೀತಗಾಯನ ಬೆಳೆಯಬೇಕಾಗಿದೆ!

ಹಾಡಲಿಕ್ಕೆ ಬರುವಂತಹ ಕವಿತೆಗಳೇ ನಮ್ಮಲ್ಲಿ ಇಲ್ಲವೆಂದು

ಸಂಗೀತಗಾರರ ಆಕ್ಷೇಪಣೆ!

ಇದು ನಿಜವಾದ ಆಕ್ಷೇಪಣೆಯೆಂದು ನಂಬುವಿರಾ?

ನಿಜವಲ್ಲವೆಂಬುದರ ಪ್ರತ್ಯಕ್ಷ ಸಾಕ್ಷಿಗಳಾಗಿ

'ಆನಂದಕಂದ' ಅವರ ಈ ಗೀತಸಂಕಲನಗಳಿವೆ:

ಮುದ್ದನ ಮಾತು (ಶಿಶುಭಾವದ ಗೀತಗಳು)	...	....	....	೦—೧೨—೦
ಒಡನಾಡಿ (ನಲ್ವಾಡುಗಳು)	....	....	....	೧—೦—೦
ವಿರಹಿಣಿ (ತತ್ತ್ವರೂಪಕ ಗೀತಗಳು)	....	....	....	೧—೪—೦
ಕಾರಹುಣ್ಣಿವೆ (ವಿವಿಧ ಭಾವಗೀತಗಳು)	....	....	....	೨—೦—೦

ಕಾವ್ಯಪ್ರೇಮಿಗಳೂ ಸಂಗೀತಗಾರರೂ ಇವುಗಳನ್ನು ಒಮ್ಮೆ ಓದಿ ನೋಡಬೇಕು.

ಬೇಕಾದವರು ಕೆಳಗಿನ ವಿಳಾಸಕ್ಕೆ ಬರೆಯಿರಿ!

'ಜಯಂತಿ' ಕಾರ್ಯಾಲಯ, ಧಾರವಾಡ

Printed by N. A. Hoskeri at the Vijaya Press, Dharwar and published for the Proprietors Jayanti Publications, by K S. Betgeri; at the Jayanti Office, Dharwar

ಜಯಂತಿ

ಸಂಪುಟ ೧೦

ಸಂಚಿಕೆ ೨

೯೫೭

ಜುಲೈ

ಸಾಹಿತ್ಯಿಕನಿಗೇನು ಬೇಕು?

卐

ಸಾಹಿತ್ಯಿಕಂಗೆ ಬೇಕು ಕರಗುವ ಹೃದಯ,
ಸಾಹಿತ್ಯಿಕಂಗೆ ಬೇಕು ಅರಿಯುವ ಒಳಗಣ್ಣು!

ಅಯ್ಯಾ, ಬೇಕಾ ವ್ಯವಹಾರವಿದನಿಗೆ ಹರಿತವಾದ ಬುದ್ಧಿ,
ಬೇಕಾ ನೆಲೆಗಾರಂಗೆ ಹಿಂಜಿಹಿಳಿದು ನೋಡುವ ಮನದ ಸಿದ್ಧಿ!
ಆದರ್ಶಗಳನೆ ಕಾಣುವ ಕನಸುಗಳು ಬೇಕಾ ದ್ರಷ್ಟಾರಂಗೆ,
ಚೆಲುವನು ಕಂಡರಿವ ಚಾತುರಿ ಬೇಕಾ ಜೀವನರಚನಾಶಿಲ್ಪಿಗೆ!

ಭಾವ-ರಸಂಗಳನು ಕನ್ನಡಿಸಬಲ್ಲ
ಪದಗಳ ಭಾಂಡಾರಬೇಕಾ ನುಡಿಜಾಣಂಗೆ,
ರಸಿಕವೃಂದವನು ರಂಜಿಸಿ ಸೆಳೆದುಕೊಳಬಲ್ಲ
ಕಲೆಯ ವಿಲಾಸಬೇಕಾ ಕಲ್ಪನಾಚಿತ್ರಕಂಗೆ!

ಇಂತಿವುಗಳಲಿ ಒಂದರೊಳೆ ಕುಂದು ಇದ್ದೊಡೆಯೂ
ಚೆಲ್ವಮಾತೆನಿಸುವ ಸಾಹಿತ್ಯ
ಹುಲ್ಲುಮಾತಾಗಿ ನಿಲ್ವುದು ಕಾಣಾ,
ಕನ್ನಡ ಜಾಣಾ!

— ಸಾಮಾಜಿಕ

JAYANTI

ಈ ಸಂಚಿಕೆಯಲ್ಲಿ

卐

ಇಂದಿನ ಕಷ್ಟಜೀವನ ಅನಿವಾರ್ಯವೆ? (ಸಂಪಾದಕೀಯ)
ಸಂಪಾದಕರು ೪೧

ಭ್ರಮರಗೀತ (ಪೌರಾಣಿಕ ಕವನ)
'ಅ. ರಾ. ಸೇ.' ದಾವಣಗೆರೆ ೪೩

ಸ್ವಂತದ ಶ್ರಾದ್ಧ (ಸಣ್ಣಕತೆ)
ಶ್ರೀ. ವೆಂ. ಮು. ಜೋಶಿ, ಧಾರವಾಡ ೪೫

ನಗುವೆಯೇಕೆ? (ಕವನ)
ಶ್ರೀ. ಕೆ. ಜಿ ಕೃಷ್ಣಭಟ್ಟ, ಪೆರಡಾಲ ೪೮

ಲೋಮೋನೊಸೊವ್ (ವಿಜ್ಞಾನಿಯ ಪರಿಚಯ)
ಶ್ರೀ. ಟಿ. ಆರ್. ನಾಡಗೀರ, ಬಿ. ಎಸ್ಸಿ. (ಆನರ್ಸ್), ಬಿ. ಎಸ್ಸಿ.(ಟೆಕ್) ೪೯

ಪ್ರೇಮದ ಇಕ್ಕಟ್ಟು (ಏಕದೃಶ್ಯ ರೂಪಕ)
ಶ್ರೀ. ಬೇಂದ್ರೆ ಲಕ್ಷ್ಮಣರಾಯರು, ಧಾರವಾಡ ೫೫

ಬೇಸಗೆಯಲ್ಲಿಯ ಕೊನೆಯ ಗುಲಾಬಿ (ಕವನ)
ಶ್ರೀ. ಬಿ. ಬಿ. ಹಿಂಗಮಿರೇ, ರಾಜಾಪುರ ೬೦

ಕಾವ್ಯದಲ್ಲಿ ಪ್ರತಿಮಾಸಂವಿಧಾನ (ಲೇಖಾಂಕ ೧)
ಶ್ರೀ. ಜಿ. ವಿ. ಕುಲಕರ್ಣಿ ಮತ್ತು ಶ್ರೀ. ಎ. ವಿ. ಗೋಕಾಕ ೬೧

ವಸಂತಿಯ ಮಡಿಲಲ್ಲಿ (ಅನುವಾದಿತ ಕಥೆ)
ಶ್ರೀ. ಜಯಾಚಾರ್ಯ ಬಿ. ಎಸ್ಸಿ. ಬೆಂಗಳೂರು ೬೬

ಅಜ್ಞಾನಕ್ಕೆ (ಕವನ)
ಶ್ರೀ ಜಿ. ಶಂಕರಭಟ್, ಉಜಿರೆ ಬಿ ಎ, ಬಿ ಟಿ. ೭೩

ಕನ್ನಡದಲ್ಲಿ ಸಣ್ಣಕತೆಗಳು (ಮುಂದುವರಿದ ಲೇಖಾಂಕ ೨)
ಶ್ರೀ. ಸಿ ಎಸ್. ಕುಲಕರ್ಣಿ ಎಂ. ಎ., ಬಿ ಟಿ, ಧಾರವಾಡ ೭೪

ಸಾಹಿತ್ಯವಿಮರ್ಶೆಯ ಶಿಕ್ಷಣರಂಗ
ಶ್ರೀ ಕೆ. ಎಸ್. ಶರ್ಮಾ, ಕಾಸರಗೋಡು ೭೭

ಸಾದರಸ್ವೀಕಾರ .... ಹೊದಿಕೆಯ ೩ನೆಯ ಪುಟ

ಜಯಂತಿ

ಸಂಪುಟ ೨೦ ಸಂಚಿಕೆ ೨

ಕುಟುಂಬದಲ್ಲಿಯ ಎಲ್ಲರೂ
ಜ್ಞಾನವನ್ನೂ ರಸಾನಂದವನ್ನೂ
ಪಡೆಯಬಹುದಾದ
ಮಾಸಪತ್ರಿಕೆ

●

ಸಂಪಾದಕರು:
ಶ್ರೀ. ಬೆಟಗೇರಿ ಕೃಷ್ಣ ಶರ್ಮ

●

ಸಂಚಿಕೆ ಪ್ರತಿತಿಂಗಳ
ಮೊದಲನೆಯ ತಾರೀಖಿಗೆ
ಪ್ರಕಟವಾಗುವುದು.

卐

ವಾರ್ಷಿಕ ವರ್ಗಣಿ ೫ ರೂ.
ಬಿಡಿ ಸಂಚಿಕೆಗೆ ೮ ಆಣೆ.

ಜಾಹೀರಾತು ಕೊಡಬಯಸುವವರು
ದರಗಳಿಗಾಗಿ ಬರೆದು ಕೇಳಬೇಕು.

●

ಅನೇಕ ಊರುಗಳಲ್ಲಿ
ಜಯಂತಿ ಮಾರುವ
ಏಜಂಟರು
ಬೇಕಾಗಿದ್ದಾರೆ

ಸಂಪಾದಕೀಯ

卐

ಇಂದಿನ ಈ ಕಷ್ಟಜೀವನ ಅನಿವಾರ್ಯವೆ?

ಪರದಾಸ್ಯದಲ್ಲಿರುವ ಭಾರತವು ಬಿಡುಗಡೆ ಹೊಂದಿದೊಡನೆಯೆ ನಾವೆಲ್ಲ ಸುಖಿಗಳಾಗುವೆವೆಂದು ಭಾರತೀಯ ಜನತೆ ಭಾವಿಸಿದ್ದಿತು. ಆ ಭವಿಷ್ಯದ ಸುಖದ ಕನಸುಗಳನ್ನು ಕಾಣುತ್ತಲೇ, ಪ್ರಬಲನಾದ ಶತ್ರುವಿನೊಂದಿಗೆ ಪ್ರಾಣವನ್ನು ಪಣಕ್ಕೆ ಹಚ್ಚಿ ಹೋರಾಡಿತು. ಭಾರತೀಯ ಜನತೆಯ ಹೋರಾಟದಿಂದ ಭಾರತವು ಬಿಡುಗಡೆಯನ್ನೇನೋ ಪಡೆಯಿತು; ಆದರೆ ಜನತೆ ಸುಖಜೀವನವನ್ನು ಕಂಡಿದೆಯೆ? ಸಮೀಪದಲ್ಲಿ ಕಾಣುವೆನೆಂಬ ನಂಬುಗೆಯಾದರೂ ಇದೆಯೆ?

ಭಾರತ ಸ್ವಾತಂತ್ರ್ಯದ ಸೌಖ್ಯ, ದಿನದಿನಕ್ಕೂ ಎಂತೆಂತಹ ಕಷ್ಟಸಂತಾನಗಳನ್ನು ಹಡೆದು ಜನತೆಯ ಎದುರು ನಿಲ್ಲಿಸುತ್ತಲಿದೆ? ಅಂತಹ ಸಂತಾನಗಳಲ್ಲಿ ಮೊದಲನೆಯದೆಂದರೆ, ಭಾರತ ಸ್ವಾತಂತ್ರ್ಯದೊಂದಿಗೇ ಹುಟ್ಟನಿಂತ ಪಾಕಿಸ್ತಾನದ ಪ್ರಬಲವಾದ ಶತ್ರುತ್ವ. ಅದರ ಸಮಾಧಾನಕ್ಕಾಗಿ ಭಾರತವು ಎಷ್ಟೊಂದು ಸಂಯಮ–ತ್ಯಾಗಗಳಿಂದ ನಡೆದರೂ, ಕ್ಷಣಕ್ಷಣಕ್ಕೂ ಅದರ ಉಗ್ರತೆ ಹೆಚ್ಚುತ್ತ ನಡೆದಿದೆ. ಬಲಿದು ನಿಂತಿರುವ ಈ ಉಗ್ರತೆ, ಭಾರತದ ಜನತೆಯ ಜೀವನವನ್ನು ಅವಿಚ್ಛಿನ್ನವಾಗಿ ಸುಡತ್ತಲಿದೆ. ಈ ಅನಿಮಿತ್ತ ವೈರದ ಅಸ್ತಿತ್ವವಿರುವವರೆಗೂ ನಮ್ಮ ಜನತೆಗೆ ಸುಖದ ಭವಿಷ್ಯ ಕನಸಿನ ಮಾತೇ ಆಗಿದೆ.

ಕಾಲರಾಯನ ಕೈಚಳಕದ ಮೂಲಕ ಇಂದು ಭಾರತದ ಜನತೆ, ಆಧ್ಯಾತ್ಮಿಕ ಭಾವನೆಯನ್ನು ಬಿಟ್ಟುಕೊಟ್ಟು ಆಧಿಭೌತಿಕ ಬುದ್ಧಿಯಿಂದ ತನ್ನ ರಾಷ್ಟ್ರವನ್ನು ಹೊಸತಾಗಿ ಕಟ್ಟಬೇಕಾಗಿದೆ. ಆಧಿಭೌತಿಕ ಶಕ್ತಿಯಿಂದ ಕಟ್ಟಿದ—ಜಗತ್ತಿನಲ್ಲಿರುವ—ಅನೇಕ ಪ್ರಬಲ ರಾಷ್ಟ್ರಗಳು, ಇದುವರೆಗೆ ಪರದಾಸ್ಯದಲ್ಲಿದ್ದು ದುರ್ಬಲವಾದ ಭಾರತರಾಷ್ಟ್ರವನ್ನು ನಾನಾರೀತಿಯಿಂದ ಕೆಣಕುತ್ತಿವೆ; ಕೆರಳಿಸುತ್ತಿವೆ; ಹೆದರಿಸುತ್ತಿವೆ. ವಿಷಸರ್ಪದ ಸ್ನೇಹ–ಸಹವಾಸಗಳು ನಮಗೆ ಬೇಡವೆಂದರೂ, ಕಚ್ಚಲು ಬರುವ ಆ ಸರ್ಪಗಳ ವಿಷವನ್ನು ನಿವಾರಿಸುವ ಶಕ್ತಿಯನ್ನು ನಾವು ಸಂಪಾದಿಸಿ ಸಂಗ್ರಹಿಸಬೇಕು. ಇಂದಿನ ರಾಜಕಾರ್ಯದಲ್ಲಿ ಜಗತ್ತನ್ನು ಆಳಲು ಬಯಸುತ್ತಿರುವುದೆಂದರೆ ಆಸುರೀ ಶಕ್ತಿ. ಆಸುರೀ ಶಕ್ತಿಯ ನಿವಾರಣೆಗೆ ಆಸುರೀಶಕ್ತಿಯ ಅಗತ್ಯವಿದ್ದೇ ಇದೆ. ಈ ಶಕ್ತಿಯ ಸಂಪಾದನೆಗಾಗಿ ಭಾರತಜನತೆ—ಬಿಡುಗಡೆ ಹೊಂದಿದ್ದರೂ—ಧ್ಯೇಯ ಸಾಧನೆಯಾಗುವ ವರೆಗೆ—ತ್ಯಾಗ-ತಪಸ್ಸುಗಳನ್ನು ಅನಿವಾರ್ಯವಾಗಿ ಮಾಡಬೇಕಾಗಿದೆ. ತ್ಯಾಗಿಗಳಿಗೆ—ತಪಸ್ವಿಗಳಿಗೆ—ಲೌಕಿಕ ಸುಖಜೀವನ ದೊರೆಯಬಲ್ಲದೆ?

ಆಧಿಭೌತಿಕ ಶಕ್ತಿಸಂಪಾದನೆಯು ಯಾವಾಗಲೂ ಅರ್ಥವನ್ನು ಅವಲಂಬಿಸಿಕೊಂಡಿರುವುದು. ಪರದಾಸ್ಯದ ಮೂಲಕ ಭಾರತ ಎಂದಿನಿಂದಲೂ ಅರ್ಥ ಎಂದರೆ ಸಂಪತ್ತಿನಿಂದ ವಂಚಿತವಾಗಿ ಬಿಟ್ಟಿದೆ. ದುಡಿತ ನಮ್ಮದು, ಪಡೆತ ಇನ್ನಾರದೋ! ಭಾರತದ ಸಂಪತ್ತಿಯಿಂದ ಯಾರು ಯಾರೋ ಡೊಳ್ಳು ಬೆಳೆಸಿಕೊಂಡರು; ಭಾರತದ ಜನತೆ ಅರೆಹೊಟ್ಟೆ ಬರಿಮೈಯಿಂದಲೇ— ಹೇಗಾದರೂ— ಬದುಕಿಕೊಂಡು ಬಂತು. ಈಗ ಬಿಡುಗಡೆ ಪಡೆದಾಗಲಾದರೂ ಹೊಟ್ಟೆತುಂಬ ಉಂಡು ಉಟ್ಟು ತೊಟ್ಟು ಸುಖದಿಂದಿರೋಣ—ಎಂದರೆ, ಜಾಗತಿಕ ರಾಜಕಾರಣ ಅದಕ್ಕೆ ಸ್ವಲ್ಪವೂ ಅವಕಾಶವಿಲ್ಲದಂತೆ ಮಾಡಿದೆ. ಈ ರಾಜಕಾರಣದೊಂದಿಗೆ ಎದೆಗೊಟ್ಟು ನಿಲ್ಲಬೇಕಾದರೆ, ಭಾರತರಾಷ್ಟ್ರ ತನ್ನ ಜನತೆಯ ವರ್ತಮಾನ ಸುಖಜೀವನಕ್ಕಿಂತ, ಭವಿಷ್ಯದ ಕಲ್ಯಾಣದ ಕಡೆಗೆ ದೃಷ್ಟಿಯಿಟ್ಟು ಮುಂದುವರಿಯಬೇಕಾಗಿದೆ; ಹೀಗೆ ಮುಂದುವರಿಯಲು ಬೇಕಾದ ಶಕ್ತಿ–ಸತ್ತ್ವಗಳನ್ನು ಅದು ಬೆಳೆಸಿಕೊಳ್ಳಬೇಕಾಗಿದೆ ಶಕ್ತಿಸಾಧನೆಗಾಗಿ ಗರಡಿಸಾಧಕ

ಈ ಸಂಚಿಕೆಯಲ್ಲಿ

卐

ಇಂದಿನ ಕಷ್ಟಜೀವನ ಅನಿವಾರ್ಯವೆ? (ಸಂಪಾದಕೀಯ)

ಸಂಪಾದಕರು ೪೧

ಭ್ರಮರಗೀತ (ಪೌರಾಣಿಕ ಕವನ)

'ಅ. ರಾ. ಸೇ.' ದಾವಣಗೆರೆ ೪೩

ಸ್ವಂತದ ಶ್ರಾದ್ಧ (ಸಣ್ಣಕತೆ)

ಶ್ರೀ. ವೆಂ. ಮು. ಜೋಶಿ, ಧಾರವಾಡ ೪೫

ಸೆಗಣಿಯೋಳೆ? (ಕವನ)

ಶ್ರೀ. ಕೆ. ಜಿ. ಕೃಷ್ಣಭಟ್ಟ, ಪೆರಡಾಲ ೪೮

ಲೋಮೋನೊಸೊವ್ (ವಿಜ್ಞಾನಿಯ ಪರಿಚಯ)

ಶ್ರೀ. ಟಿ. ಆರ್. ನಾಡಗೀರ, ಬಿ. ಎಸ್‌ಸಿ. (ಆನರ್ಸ್), ಬಿ. ಎಸ್‌ಸಿ. (ಟೆಕ್) ೪೯

ಪ್ರೇಮದ ಇಕ್ಕಟ್ಟು (ಏಕದೃಶ್ಯ ರೂಪಕ)

ಶ್ರೀ ಬೇಂದ್ರೆ ಲಕ್ಷ್ಮಣಾಚಾರ್ಯರು, ಧಾರವಾಡ ೫೫

ಜೇಗಗೆಯಲ್ಲಿಯ ಕೊನೆಯ ಗುಲಾಬಿ (ಕವನ)

ಶ್ರೀ ಬಿ. ಬಿ. ಹಿಂಗಮಿರೇ, ಬಿಜಾಪುರ ೬೦

ಕಾವ್ಯದಲ್ಲಿ ಪ್ರತಿಮಾಸಂವಿಧಾನ (ಲೇಖಾಂಕ ೧)

ಶ್ರೀ. ಜಿ. ವಿ. ಕುಲಕರ್ಣಿ ಮತ್ತು ಶ್ರೀ. ಎ. ವಿ. ಗೋರಬಾಳ ೬೧

ವಸಂತಿಯ ಮಡಿಲಲ್ಲಿ (ಅನುವಾದಿತ ಕಥೆ)

ಶ್ರೀ. ಬಂಡಾಚಾರ್ಯ ಬಿ. ಎಸ್‌ಸಿ. ಬೆಂಗಳೂರು ೬೬

ಅಜ್ಞಾನಕ್ಕೆ (ಕವನ)

ಶ್ರೀ ಜಿ. ಶಂಕರಭಟ್, ಉಜಿರೆ ಬಿ. ಎ., ಬಿ. ಟಿ. ೬೯

ಕನ್ನಡದಲ್ಲಿ ಸಣ್ಣ ಕತೆಗಳು (ಮುಂದುವರಿದ ಲೇಖಾಂಕ ೨)

ಶ್ರೀ. ಪಿ. ಎಸ್. ಕುಲಕರ್ಣಿ ಎಂ. ಎ., ಬಿ. ಟಿ. ಧಾರವಾಡ ೭೪

ಸಾಹಿತ್ಯವಿಮರ್ಶೆಯ ಶಿಕ್ಷಣರಂಗ

ಶ್ರೀ ಕೆ. ಎಸ್. ಶರ್ಮಾ, ಶಾರದಗೋಡು ೭೭

ಸಾದರಸ್ವೀಕಾರ .... ಹೊದಿಕೆಯ ೩ನೆಯ ಪುಟ

ಜಯಂತಿ

ಸಂಪುಟ ೨೧ ಸಂಚಿಕೆ ೨

ಕುಟುಂಬದಲ್ಲಿಯ ಎಲ್ಲರೂ
ಜ್ಞಾನವನ್ನು ರಸಾನಂದವನ್ನು
ಪಡೆಯಬಹುದಾದ
ಮಾಸಪತ್ರಿಕೆ

ಸಂಪಾದಕರು :
ಪ್ರೊ. ಬೆಟಗೇರಿ ಕೃಷ್ಣಶರ್ಮ

ಸಂಚಿಕೆ ಪ್ರತಿತಿಂಗಳ
ಮೊದಲನೆಯ ತಾರೀಖಿಗೆ
ಪ್ರಕಟವಾಗುವುದು.

ವಾರ್ಷಿಕ ವರ್ಗಣಿ ೫ ರೂ.
ಬಿಡಿ ಸಂಚಿಕೆಗೆ ೮ ಆಣೆ.

ಜಾಹೀರಾತು ಕೊಡಬಯಸುವವರು
ದರಗಳಿಗಾಗಿ ಬರೆದು ಕೇಳಬೇಕು.

ಅನೇಕ ಊರುಗಳಲ್ಲಿ
ಜಯಂತಿ ಮಾರುವ
ಏಜಂಟರು
ಬೇಕಾಗಿದ್ದಾರೆ

ಸಂಪಾದಕೀಯ

ಇಂದಿನ ಈ ಕಷ್ಟಜೀವನ ಅನಿವಾರ್ಯವೇ?

ಪರರಾಷ್ಟ್ರದಲ್ಲಿರುವ ಭಾರತವು ಬಿಡುಗಡೆ ಹೊಂದಿದೊಡನೆಯೇ ನಾವೆಲ್ಲ ಸುಖಿಗಳಾಗುವೆವೆಂದು ಭಾರತೀಯ ಜನತೆ ಭಾವಿಸಿದ್ದಿತು. ಆ ಭವಿಷ್ಯದ ಸುಖದ ಕನಸುಗಳನ್ನು ಕಾಣುತ್ತಲೇ, ಪ್ರಬಲನಾದ ಶತ್ರುವಿನೊಂದಿಗೆ ಪ್ರಾಣವನ್ನು ಪಣಕ್ಕೆ ಹಚ್ಚಿ ಹೋರಾಡಿತು. ಭಾರತೀಯ ಜನತೆಯ ಹೋರಾಟದಿಂದ ಭಾರತವು ಬಿಡುಗಡೆಯನ್ನೇನೋ ಪಡೆಯಿತು; ಆದರೆ ಜನತೆ ಸುಖಜೀವನವನ್ನು ಕಂಡಿದೆಯೆ? ಸಮೀಪದಲ್ಲಿ ಕಾಣುವೆನೆಂಬ ನಂಬುಗೆಯಾದರೂ ಇದೆಯೆ?

ಭಾರತ ಸ್ವಾತಂತ್ರ್ಯದ ಸೌಖ್ಯ, ದಿನದಿನಕ್ಕೂ ಎಂತೆಂತಹ ಕಷ್ಟಸಂಕಟಗಳನ್ನು ಹಡೆದು ಜನತೆಯ ಎದುರು ನಿಲ್ಲಿಸುತ್ತಲಿದೆ? ಅಂತಹ ಸಂಕಟಗಳಲ್ಲಿ ಮೊದಲನೆಯದೆಂದರೆ, ಭಾರತ ಸ್ವಾತಂತ್ರ್ಯದೊಂದಿಗೇ ಹುಟ್ಟಿನಿಂತ ಪಾಕಿಸ್ತಾನದ ಪ್ರಬಲವಾದ ಶತ್ರುತ್ವ. ಆದರೆ ಸಮಾಧಾನಕ್ಕಾಗಿ ಭಾರತವು ಎಷ್ಟೊಂದು ಸಂಯಮ—ತ್ಯಾಗಗಳಿಂದ ನಡೆದರೂ, ಕ್ಷಣಕ್ಷಣಕ್ಕೂ ಅದರ ಉಗ್ರತೆ ಹೆಚ್ಚುತ್ತ ನಡೆದಿದೆ. ಬಲಿದು ನಿಂತಿರುವ ಈ ಉಗ್ರತೆ, ಭಾರತದ ಜನತೆಯ ಜೀವನವನ್ನು ಅವಿಚ್ಛಿನ್ನವಾಗಿ ಸುಡುತ್ತಲಿದೆ. ಈ ಅನಿಮಿತ್ತ ವೈರದ ಅಸ್ತಿತ್ವವಿರುವವರೆಗೂ ನಮ್ಮ ಜನತೆಗೆ ಸುಖದ ಭವಿಷ್ಯ ಕನಸಿನ ಮಾತೇ ಆಗಿದೆ.

ಕಾಲಬಲಾಯನ ಕೈಚಳಕದ ಮೂಲಕ ಇಂದು ಭಾರತದ ಜನತೆ, ಆಧ್ಯಾತ್ಮಿಕ ಭಾವನೆಯನ್ನು ಬಿಟ್ಟುಕೊಟ್ಟು ಅಧಿಭೌತಿಕ ಬುದ್ಧಿಯಿಂದ ತನ್ನ ರಾಷ್ಟ್ರವನ್ನು ಹೊಸತಾಗಿ ಕಟ್ಟಬೇಕಾಗಿದೆ. ಅಧಿಭೌತಿಕ ಶಕ್ತಿಯಿಂದ ಕಟ್ಟಿದ—ಜಗತ್ತಿನಲ್ಲಿರುವ—ಅನೇಕ ಪ್ರಬಲ ರಾಷ್ಟ್ರಗಳು, ಇದುವರೆಗೆ ಪರರಾಷ್ಟ್ರದಲ್ಲಿದ್ದು ದುರ್ಬಲವಾದ ಭಾರತರಾಷ್ಟ್ರವನ್ನು ನಾನಾರೀತಿಯಿಂದ ಕಾಡುತ್ತಿವೆ; ಕೆರಳಿಸುತ್ತಿವೆ; ಹೆದರಿಸುತ್ತಿವೆ. ವಿಷಸರ್ಪದ ಸ್ನೇಹ—ಸಹವಾಸಗಳು ನಮಗೆ ಬೇಡವೆಂದರೂ ಕಚ್ಚಲು ಬರುವ ಆ ಸರ್ಪಗಳ ವಿಷವನ್ನು ನಿವಾರಿಸುವ ಶಕ್ತಿಯನ್ನು ನಾವು ಸಂಪಾದಿಸಿ ಸಂಗ್ರಹಿಸಬೇಕು. ಇಂದಿನ ರಾಜಕಾರಣದಲ್ಲಿ ಜಗತ್ತನ್ನು ಆಳಲು ಬಯಸುತ್ತಿರುವುದೆಂದರೆ ಆಸುರೀ ಶಕ್ತಿ. ಆಸುರೀ ಶಕ್ತಿಯ ನಿವಾರಣೆಗೆ ಆಸುರೀಶಕ್ತಿಯೇ ಅಗತ್ಯವಿದ್ದೇ ಇದೆ. ಈ ಶಕ್ತಿಯ ಸಂಪಾದನೆಗಾಗಿ ಭಾರತಜನತೆ—ಬಿಡುಗಡೆ ಹೊಂದಿದ್ದರೂ—ಧ್ಯೇಯ ಸಾಧನೆಯಾಗುವ ವರೆಗೆ ತ್ಯಾಗ-ತಪಸ್ಸುಗಳನ್ನು ಅನಿವಾರ್ಯವಾಗಿ ಮಾಡಬೇಕಾಗಿದೆ. ತ್ಯಾಗಗಳಿಗೆ—ತಪಸ್ಸುಗಳಿಗೆ—ಲೌಕಿಕ ಸುಖಜೀವನ ದೊರೆಯಬಲ್ಲದೆ?

ಅಧಿಭೌತಿಕ ಶಕ್ತಿಸಂಪಾದನೆಯು ಯಾವಾಗಲೂ ಅರ್ಥವನ್ನು ಅವಲಂಬಿಸಿಕೊಂಡಿರುವುದು. ಪರರಾಜ್ಯದ ಮೂಲಕ ಭಾರತ ಎಂದಿನಿಂದಲೂ ಅರ್ಥ ಎಂದರೆ ಸಂಪತ್ತಿನಿಂದ ವಂಚಿತವಾಗಿ ಬಿಟ್ಟಿದೆ. ದುರಿತ ನಮ್ಮದು, ಪಡೆದ ಸಂಸ್ಕಾರದೋ! ಭಾರತದ ಸಂಪತ್ತಿಯಿಂದ ಯಾರು ಯಾರೋ ಹೊಟ್ಟೆ ಬೆಳೆಸಿಕೊಂಡರು; ಭಾರತದ ಜನತೆ ಅರೆಹೊಟ್ಟೆ ಬರಿಹೊಟ್ಟೆಯಿಂದಲೇ— ಹೇಗಾದರೂ— ಬದುಕಿಕೊಂಡು ಬಂತು. ಈಗ ಬಿಡುಗಡೆ ಪಡೆದಾಗಲಾದರೂ ಹೊಟ್ಟೆತುಂಬ ಉಂಡು ಉಟ್ಟು ತೊಟ್ಟು ಸುಖದಿಂದಿರೋಣ—ಎಂದರೆ, ಜಾಗತಿಕ ರಾಜಕಾರಣ ಅದಕ್ಕೆ ಸ್ವಲ್ಪವೂ ಅವಕಾಶವಿಲ್ಲದಂತೆ ಮಾಡಿದೆ. ಈ ರಾಜಕಾರಣದೊಂದಿಗೆ ಎದೆಗೊಟ್ಟು ನಿಲ್ಲಬೇಕಾದರೆ, ಭಾರತರಾಷ್ಟ್ರ ತನ್ನ ಜನತೆಯ ವರ್ತಮಾನ ಸುಖಜೀವನಕ್ಕಿಂತ, ಭವಿಷ್ಯದ ಕಲ್ಯಾಣದ ಕಡೆಗೆ ದೃಷ್ಟಿಯಿಟ್ಟು ಮುಂದುವರಿಯಬೇಕಾಗಿದೆ; ಹೀಗೆ ಮುಂದುವರಿಯಲು ಬೇಕಾದ ಶಕ್ತಿ—ಸತ್ವಗಳನ್ನು ಅದು ಬೆಳೆಸಿಕೊಳ್ಳಬೇಕಾಗಿದೆ. ಶಕ್ತಿಸಾಧನೆಗಾಗಿ ಗರಬಸಾಧಕ

ಮಾಡುವ ಜಟ್ಟಿ ಸುಖಜೀವನವನ್ನು ಬಯಸಿದರೆ, ಆತನ ಉದ್ದೇಶ ಸಿದ್ಧಿಯಾದೀತೆ?

ಅಧಿಭೌತಿಕ ಶಕ್ತಿಯಿಂದ ಬಾಳಬೇಕೆನ್ನುವ ಭಾರತರಾಷ್ಟ್ರದಲ್ಲಿ ಇಂದು ಯಾವ ಅನುಕೂಲತೆಯಿದೆ? ಮೊದಲನೆಯ ಮಹತ್ತ್ವದ ಮಾತೆಂದರೆ, ದಿನದಿನಕ್ಕೂ ಹೆಚ್ಚುತ್ತಿರುವ ಸಂಖ್ಯೆಯ ಜನತೆಗೆ ಸಾಲುವಷ್ಟು ಆಹಾರಸಾಮಗ್ರಿಯಿಲ್ಲ. ಭಾರತಭೂಮಿಯನ್ನು ನಾವು 'ಸುಫಲಾ' 'ಸುಜಲಾ' ಎಂದು ಭಾವನಾವಶರಾಗಿ ಬಣ್ಣಿಸಿ ಹಾಡುವೆವಾದರೂ, ಆಕೆಯ ಆ ವಿಶೇಷಣಗಳು ಇದುವರೆಗೂ ನಮಗೆ ಸಾರ್ಥಕವಾಗಿ ಪರಿಣಮಿಸಿಲ್ಲ. ಭಾರತದಲ್ಲಿ ಫಲವಾಯಿಯಾದ ನೆಲವಿದೆ; ಜಲಪೂರಿತವಾದ ನದಿಗಳಿವೆ. ಆದರೆ ಆ ಜಲದ ಉಪಯೋಗ ನೆಲಕ್ಕೆ ಮಾಡಿಕೊಳ್ಳಬೇಕಾಗಿದೆ. ಹಾಗೆ ಮಾಡಿದಾಗಲೇ ಭಾರತದಲ್ಲಿ ಅನ್ನದ ಸಮೃದ್ಧಿಯಾಗಬಲ್ಲದು. ಇದಕ್ಕೆ ಬಂಡವಾಳ ಬೇಕು; ದೇಹಶ್ರಮ ಬೇಕು! ಭವಿಷ್ಯವನ್ನು ಕಲ್ಯಾಣಕಾರಿಯಾದುದನ್ನಾಗಿ ಮಾಡಿಕೊಳ್ಳಬೇಕಾದರೆ, ಭಾರತದ ಜನತೆ ಈಗಲೂ ಅರೆಹೊಟ್ಟೆ ಉಂಡು ವ್ಯಾಯಮರಿಯೆ ದುಡಿಯಲು ಸಿದ್ಧರಾಗಬೇಕು — ವರ್ತಮಾನಕಾಲದಲ್ಲಿ ಹೀಗೆ ದುಡಿಯಬೇಕಾಗಿರುವಾಗ, ಸುಖಜೀವನವನ್ನು ಅಪೇಕ್ಷಿಸಿದರೆ ಅದು ದೊರೆತೀತೆ?

ನಮ್ಮ ಜನತೆಗೆ ವಿಜ್ಞಾನಯುಗದ ಜೀವನಸೌಕರ್ಯಗಳೆಲ್ಲ ಬೇಕಾಗಿವೆ; ಆದರೆ ಅವಕ್ಕೆ ಬೇಕಾಗುವ ಯಂತ್ರ-ತಂತ್ರಗಳಿಗಾಗಿ ನಾವು ಪರದೇಶಗಳ ಕಡೆಗೆ ನೋಡಬೇಕಾಗಿದೆ. ಅಂತಹ ಯಂತ್ರ-ತಂತ್ರಗಳನ್ನು ಪರದೇಶದಿಂದ ತರಿಸಿಕೊಂಡರೆ, ತರಿಸಿಕೊಳ್ಳುತ್ತಲೇ ಇದ್ದರೆ, ನಾವು ಶುಭಭವಿಷ್ಯವನ್ನು ಕಾಣಲೇ ಅರೆವು. ಇನ್ನು ಅವುಗಳನ್ನು ನಮ್ಮಲ್ಲಿಯೇ ನಿರ್ಮಿಸಿಕೊಳ್ಳಬೇಕೆಂದರೆ, ಅದಕ್ಕಾಗಿ ಬಂಡವಾಳ ಬೇಕು; ಅವು ಲಾಭಕಾರಿಯಾಗಿ ಪರಿಣಮಿಸುವ ವರೆಗೆ ದಾರಿಯನ್ನು ಕಾಯಬೇಕು. ಅನೇಕ ದಿನಗಳಿಂದಲೂ ಸ್ವತಂತ್ರವಾಗಿದ್ದು, ವಿಜ್ಞಾನಲೋಕದಲ್ಲಿ ಮುಂದುವರಿದು ಜೀವನಸೌಕರ್ಯಗಳನ್ನು ಕ್ರಮಕ್ರಮವಾಗಿ ಒದಗಿಸಿಕೊಂಡು ಬಾಳುತ್ತಿರುವ ರಾಷ್ಟ್ರಗಳೊಂದಿಗೆ, ಭಾರತರಾಷ್ಟ್ರವನ್ನು ಸರಿಹೋಲಿಸಿ ತೂಗಿ, ನಾವು ತೀರ ಹಿಂದುಳಿದವರಾಗಿ ಇದ್ದೇವೆಂದು ಬಿಸಿಯುಸಿರು ಬಿಡುತ್ತ ಕುಳಿತರೆ ಏನು ಆಗುವುದು? ಆ ರಾಷ್ಟ್ರದ ಜನರಂತೆ ನಾವೂ ಆಗಬೇಕಾದರೆ, ಈಗ ಕೈಯಲ್ಲಿರುವ ಹಣವನ್ನು ರಾಷ್ಟ್ರದ ಬಂಡವಾಳಕ್ಕೆ ಒದಗಿಸಬೇಕು; ರಾಷ್ಟ್ರನೇತೃಗಳು ಹೇಳಿದ ಕೆಲಸ ಮಾಡಲು ಸಿದ್ಧರಾಗಬೇಕು.

ಇಂದು ನಮ್ಮ ದೇಶದಲ್ಲಿ ಸರಕಾರ ಹಾಕಿದ ಕರಭಾರಕ್ಕಾಗಿ ಶಪಿಸುವ ಜನರೇ ಹೆಚ್ಚಾಗಿದ್ದಾರೆ. ಇದನ್ನು ನೋಡಿದರೆ, ನಮ್ಮ ಜನರಿಗೆ ಭವಿಷ್ಯದ ವಿಚಾರವೇ ಇಲ್ಲವೇನೋ ಎನಿಸುವಂತಿದೆ. ಅಜ್ಜ ಕಷ್ಟಪಟ್ಟು ಮಾವಿನ ಸಸಿ ಬೆಳೆಸುವುದು ತನ್ನ ಸುಖಕ್ಕಾಗಿ ಅಲ್ಲ; ಅವನು ತನ್ನ ವರ್ತಮಾನ ಸುಖದ ಕಡೆಗೆ ನೋಡಿ ಆ ಕಷ್ಟದ ಕೆಲಸವನ್ನು ಮಾಡದೆ ಇದ್ದರೆ, ಅವನ ಮಕ್ಕಳೂ ಮೊಮ್ಮಕ್ಕಳೂ ಅವನ ಕಷ್ಟದ ಫಲವಾದ ಮಾವಿನ ಹಣ್ಣಿನ ಸವಿಯನ್ನು ಸವಿಯಲೇ ಅರರು. ಮನೆಯನ್ನು ಕಟ್ಟಿಕೊಳ್ಳಬೇಕೆನ್ನುವವನು ಭಾರವಾದ ಕಲ್ಲು-ಮಣ್ಣುಗಳನ್ನೂ ತೊಲೆ-ಕಂಬಗಳನ್ನೂ ಹೊತ್ತು ತರಲೇಬೇಕಾಗುವುದು. ಇಂದಿನ ನಾವು ಅಜ್ಜಂದಿರಾಗಿ, ಮುಂದಿನವರಿಗೆಂದು ಮಾವಿನ ಸಸಿಗಳನ್ನು ನೆಟ್ಟು ಬೆಳೆಸಬೇಕಾಗಿದೆ; ರಾಷ್ಟ್ರದ ಭದ್ರವಾದ ಮಂದಿರವನ್ನು ಕಟ್ಟಲು, ಶಕ್ತಿಗೆ ಮೀರಿದ ಭಾರವನ್ನು ಹೊರಬೇಕಾಗಿದೆ. ದುಡಿಯಬೇಕಾಗಿರುವ ಕಾಲದಲ್ಲಿ ಭೋಗಜೀವನವನ್ನು ಬಯಸಿದರೆ, ಅದು ಸಿಗುವ ಬಗೆ ಹೇಗೆ?

ಇಂದಿನ ನಮ್ಮ ಆಡಳಿತಕ್ಕೆ—ಜನರ ಮೇಲೆ ಕರಭಾರವನ್ನು ಹೇರದೆ ಆಳಲೂ ಬರಬಹುದು. ಇದರಿಂದ ಜನತೆಗೆ ಕ್ಷಣಿಕವಾದ ಆನಂದದ ಆಭಾಸ ದೊರೆಯಬಹುದಾದರೂ, ಭವಿಷ್ಯಕಾಲ ಅವರೆದುರು ಕಷ್ಟ-ಕೋಟಲೆಗಳ ಮೊಟ್ಟೆಯನ್ನೇ ಹೊತ್ತುಕೊಂಡು ಬರಬಹುದು. ರಾಷ್ಟ್ರದ ಶಕ್ತಿ-ಪ್ರಗತಿಗಳು ಅದರಿಂದ ಕುಂಠಿತವಾಗುವುದು ಕಟ್ಟಿಟ್ಟ ಮಾತು. ಈ ಸಂಗತಿಯ ಸತ್ಯವನ್ನು ನಮ್ಮ ಜನತೆ ಅರಿತುಕೊಳ್ಳುವ ಅಗತ್ಯ ತುಂಬ ಇದೆ. ಸ್ವಾತಂತ್ರ್ಯ ಸಂಪಾದನೆಗಾಗಿ ನಮ್ಮ ಜನತೆ ಹೇಗೆ ಸಂಯಮದಿಂದ ಕಷ್ಟ-ನಷ್ಟಗಳನ್ನು ಸಹಿಸಿತೋ, ಹಾಗೆಯೇ ಈಗ ಅದು ಸ್ವಾತಂತ್ರ್ಯ ಸಂರಕ್ಷಣೆಗಾಗಿ, ರಾಷ್ಟ್ರದ ಸಮೃದ್ಧ ಜೀವನಕ್ಕಾಗಿ ಕಷ್ಟ-ನಷ್ಟಗಳನ್ನು ಸಹಿಸಬೇಕಾಗಿದೆ. ಕುಟಿಲತನದಿಂದ ನಮ್ಮನ್ನು ಆಳುತ್ತಿದ್ದ ಪರಕೀಯರು, ನಮ್ಮಲ್ಲಿಯ ಕೆಲವರನ್ನು ಪಂಜರದ ಹಕ್ಕಿಗಳನ್ನಾಗಿ ಮಾಡಿ, ಅವರಿಗಷ್ಟು ಸುಖಜೀವನದ ಆಮಿಷವನ್ನು ತೋರಿಸಿ, ತಮ್ಮ ಸ್ವಾರ್ಥವನ್ನು ಸಾಧಿಸಿಕೊಳ್ಳುತ್ತಿದ್ದರು. ರಾಷ್ಟ್ರೀಯತ್ವವೆಂದರೆ ಏನೆಂಬುದು ಗೊತ್ತಿಲ್ಲದ ಅಂದಿನ ಪಂಜರದ ಹಕ್ಕಿಗಳು, ಇಂದು 'ಸುಖಜೀವನ! ಸುಖಜೀವನ!!' ಎಂದು ಕೂಗಾಡಿ, ಜನಸಾಮಾನ್ಯರಲ್ಲಿ ಬುದ್ಧಿಭೇದವನ್ನು ಮಾಡುತ್ತಿರುವುವು. ಎಂತಹ ಸ್ವತಂತ್ರ ರಾಷ್ಟ್ರದ ಜನತೆಯೂ, ತನ್ನ ರಾಷ್ಟ್ರದ ಗೌರವವನ್ನು ಹೆಚ್ಚಿಸಲಿಕ್ಕೆ—ಕಾಯ್ದುಕೊಳ್ಳಲಿಕ್ಕೆ— ಯಾವಾಗಲೂ ಕಷ್ಟ-ನಷ್ಟಗಳ ಬಾಳನ್ನು ಬಾಳಬೇಕಾಗುವುದೆಂಬುದನ್ನು ನಮ್ಮ ಜನತೆ ಮರೆತು ನಡೆಯಲಾಗದು

ಭಾರತ ಜನತೆಯಲ್ಲಿರುವ ದೊಡ್ಡದೊಂದು ಕೊರತೆಯೆಂದರೆ' ವ್ಯಕ್ತಿನಿಷ್ಠ ಸ್ವಭಾವ; ಸಾಮಾಜಿಕತೆಯ ಅಭಾವ! 'ಎಲ್ಲರ ಸುಖದೊಂದಿಗೆ ತನ್ನ ಸುಖ' ಎಂಬ ಪ್ರಜ್ಞೆಯಿರುವವರು ನಮ್ಮಲ್ಲಿ ತೀರ ಕಡಿಮೆ ಜನ. ಅಂತಹ ಪ್ರಜ್ಞೆ ನಮ್ಮಲ್ಲಿ ಬೆಳೆದು ನಿಂತರೆ, ನಮ್ಮ ಜನತೆಯ ಸುಖಜೀವನದ ಕಲ್ಪನೆಯೇ ಬೇರೆಯಾಗುವುದು. ಆಗ ಸರಕಾರ ಜನತೆಯ ಮೇಲೆ ಕರಭಾರವನ್ನು ಒತ್ತಾಯದಿಂದ ಹಾಕಬೇಕಾಗುವುದಿಲ್ಲ; ಜನತೆಯೇ ತನ್ನಲ್ಲಿ ಇದ್ದುಬಿದ್ದುದನ್ನೆಲ್ಲ ಸರಕಾರದ ಕಡೆಗೆ ಕೊಟ್ಟು, ಪ್ರಗತಿಪರ ಕೆಲಸ ಮಾಡುವಂತೆ ಸರಕಾರದ ಮೇಲೆಯೇ ಒತ್ತಾಯ ಮಾಡಬಹುದು. ಭಾರತದ ಜನತೆಯ ಕಷ್ಟಜೀವನ ಆಗ ನಿವಾರ್ಯವೆನಿಸಬಹುದು.

ಭ್ರಮರಗೀತೆ

ಶ್ರೀ. ಅರಾಸೇ, ದಾವಣಗೆರೆ

卐

ಪೂರ್ವ ಪ್ರಸಂಗ

ಬೆಳಗಾಯಿತಾಗ ಗೋಕುಲದ ಬಾಗಿಲಲಿ
ಹೊಳೆಯುತಿರೆ ರಥವೊಂದು ಗೋಪಿಯರು ಸೇರಿ—

" ಏನಿದು ನವಾಶ್ಚರ್ಯ ? ಯಾರು ಬಂದವರು ?
ಅಕ್ರೂರವಿಶ್ವರೇ ರಥವ ತಂದವರು ?
ಇಲ್ಲಿಲ್ಲ, ರಾಮಕೃಷ್ಣರು ಪುರಕೆಬರಲು ! "
ಎನುತ ಬರೆ ಉದ್ಧವನ ಕಂಡು ಬೆರಗಾಗಿ,
' ಘನವಂತ ನೀನಾರು ? ' ಎಂದವನ ಕೇಳಿ,
ಅರಿತರವನುದ್ಧವನು, ಅಚ್ಯುತನ ಮಂತ್ರಿ—

ಉರುತರದ ವಂಚಕನ ದೂತನವನೆಂದು.
ಉಪಚರಿಸಿ ಕೇಳಿದರು ಒಮ್ಮತ್ತವಾಗಿ:
' ಹೇಳು ಅಚ್ಯುತದೂತ, ಕೃಷ್ಣನಿಗೆ ಸುಖವೆ ?
ಪೇಳವನ ಕಸ್ತೂರಿತಿಲಕ ಹೊಳೆಯುವುದೆ ?
ವನಮಾಲೆ ಕಳೆಯಿಂದ ರಾಜಿಸುತಲಿಹುದೆ ?
ಘನ ಚೂಡಬರ್ಹ ಶೋಭಿಸುತ ನಗುತಿಹುದೆ ?
ಅವನ ವೇಣುಸುನಾದ ವರ್ಧಿಸುತಲಿಹುದೆ ?
ಅವನ ಕೋಮಲ ಕಾಯಕಧಿಕ ಮಂಗಳವೆ ?
ಇಂದೀವರಶ್ಯಾಮನೆಂತಿಹನು ? ಪೇಳು—
ನಂದಗೋಪಾಲ ಬಾಲಕನ ಪರಿಯೇನು ? '

ಗೋಪಿಯರ ಕಾತರವ ಕಂಡು ಬೆರಗಾಗಿ,
ಆ ಪರಿಯ ಭಕ್ತಿಯನು ನೋಡಿ ತಲೆದೂಗಿ,
ಉದ್ಧವನು ಪೇಳಿದನ. ಗೋಪಿಕಾಜನಕೆ:

' ಗೋಪಿಯರೆ ನೀವೆ ಲೋಕದಿ ಧನ್ಯರಿಹಿರಿ—
ಯಾವ ಸುಕೃತವೊ ಪ್ರೇಮರಸದಿ ಮೀಯುವಿರಿ !
ದಾನ ಧರ್ಮಗಳಿಂದ ಜಪ-ತಪಗಳಿಂದ
ಧ್ಯಾನ—ಮೌನದಿಗಳಿಂದ ಶಮ—ದಮಗಳಿಂದ
ಈ ತೆರದ ಭಕ್ತಿ ದೊರೆಕೊಳದು ಲೋಕದಲಿ !

ಸಕಲ ಕಾರಣನ ಸರ್ವವ ವ್ಯಾಪಿಸಿಹನ
ವಾಙ್ಮನಕಗೋಚರನ ನಿಗಮವಂದಿತನ
ಸರ್ವಶಕ್ತನ ಸಚ್ಚಿದಾನಂದಮಯನ
ನೀವು ಪ್ರೀತಿಸುತಿಹಿರಿ ಸುಖವನೀವವನ '
ಗೋಪಿಯರು ಬೆರಗಾಗಿ ಕೇಳಿದರು ಅವನ:

' ಅಣ್ಣ ಅರಿಯೆವು ಸಚ್ಚಿದಾನಂದಮಯನ—
ವಾಙ್ಮನಕಗೋಚರನ ನಿಗಮವಂದಿತನ !
ಅರಿಯೆಯಾ ಗೋವಳನ ಕೊಳಲನೂದುವನ ?
ಶರಣಜನರನು ತೊರೆವ ಪರಮ ಸುಂದರನ ? '

ಅನಿತರಲಿ ಭ್ರಮರವೊಂದಲ್ಲಿ ಹಾಡುತ ಬರಲು
ಗೋಪಿಯೊಬ್ಬಳು ಕಂಡು, ಗೋವಿಂದನದನು
ಕಳುಹಿ ತಮ್ಮನು ಸಂತವಿಡಲು ಬಗೆದಿಹನೆಂದು,
ಹುಸಿಮುನಿಸಿನಿಂದದನು ನುಡಿಸಿದಳು ಇಂತು:

ಗೋಪೀವಾಕ್ಯ

" ಎಲೆ ಮಧುಪ, ವಂಚಕನ ಬಂಧು, ನಮಿಸುವೆಯೇಕೆ ?
ಒಲಿಯುವವರಾವಲ್ಲ ಮಧುಕರಾಧಿಪಗೆ !
ಸವತಿಯರ ವಕ್ಷೋಜಲಿಪ್ತ ಕುಂಕುಮದಿಂದ
ಕೆಂಪಾದ ಶ್ಮಶ್ರುಗಳ ಸೋಂಕಿಸದಿರೆಮಗೆ,
ನಿನ್ನ ದೊರೆ ಸವತಿಯರ ಮೆಚ್ಚಿಸಲಿ ಮಧುರೆಯಲಿ,
ಸಜ್ಜನರು ಕೃಷ್ಣನನು ನೋಡಿ ನಗುತಿರಲಿ.
ಆ ನಿನ್ನ ಭ್ರಮರಪತಿ ಅಧರಾಮೃತದ ಸವಿಯ
ನೀಡಿ ಕೆಲಕಾಲ ಅಗಲಿದನೆಮ್ಮ ತೊರೆದು—
ಹೂಗಳನು ತೊರೆದಂತೆ; ಅವನ ಸೇವಿಪೆಯೆಂತೊ !
ಇಂದಿರೆಯನಂತೆಯೇ ಮೋಸಗೊಳಿಸಿಹನು.
ಅವಳಂತೆ ಬರಿಮಾತಿಗಾವು ಸೋಲುವರಲ್ಲ;
ಓ ಭ್ರಮರ ! ಕೀರ್ತಿಸುವೆಯೇಕೆ ಯದುಪತಿಯ ?

ವಿಜಯಸಖಸಖಿಯರೆದುರಲಿ ಪಾಡು; ಕುಟಿಲನನು
ಅಪ್ಪಿಕೊಳುವವರು ನಿನ್ನನು ಹೊಗಳಲಿ !
ಅವನ ಭ್ರೂಭಂಗದಿಂ ರಮಣೀಯ ಹಾಸದಿಂ
ಮೂರು ಲೋಕದ ನಾರಿಯರು ಸೋಲುತಿರಲು—

ಚಂಚಲೆಯು ಆ ಲಕ್ಷ್ಮಿಯವನ ಸೇವಿಸುತಿರಲು
ನಮ್ಮಲವನಿಗೆ ಪ್ರೀತಿಯುಳಿವುದೆಂತು ?
ಆದರೂ ಅವನುತ್ತಮಶ್ಲೋಕನೆನ್ನುವರು—
ಆರ್ತರಕ್ಷಕನೆಂದು ಕೀರ್ತಿಸುತಲಿಹರು !

ಹೇ ಚಂಚರೀಕ ಬಿಡು, ವಂದನೆಯ ಮಾಡದಿರು—
ಆ ಮುಕುಂದನ ಕಪಟವಿದನು ತೋರದಿರು;
ದೌತ್ಯದನುನಯವ ತೊರೆ, ನಿನ್ನ ಮೋಸವ ಬಲ್ಲೆ,
ನಿನ್ನ ಸ್ವಾಮಿಯ ಜೊತೆಗೆ ಸಂಧಿಯೆಲ್ಲಿಯದು ?
ಪತಿಸುತರ ಮರೆದು ಅವನನೆ ನಂಬಿ ಭಜಿಸಿದೆವು;
ಚಂಚಲತೆಯಿಂದ ದೂರಕೆ ನಡೆದನವನು.

ಅವನ ಪೂರ್ವದ ಚರ್ಯೆಯನು ನೆನೆಯೆ ಭಯವಹುದು;
ವ್ಯಾಜವಿಲ್ಲದೆ ಕಪಿಯ ಮರೆಯಿಂದ ಕೊಂದು,
ತನಗೊಲಿದ ಕಾಮಿನಿಯ ಕಿವಿ-ಮೂಗುಗಳ ಕೊಯಿದು,
ಬಲಿಯ ದಾನವ ಗ್ರಹಿಸಿ ಬಂಧಿಸಿದನವನು.
ಇಂತವನ ದೋಷಗಳನೆನಿತ ನೆನೆದರು ಮನವು
ಅವನನೇ ಹಾರಯಿಸಿ ನೆನೆವುದೇಂ ಗೈವೆ ?

ಎಂತವನ ಲೀಲಾಮೃತವ ಮರೆವೆನೆಲೆ ಭ್ರಮರ ?
ಸಂತತವು ಕೀರ್ತಿಸುತಲದನು ಯೋಗಿಗಳು,
ತಂತಮ್ಮ ಗೃಹಗಳನು ಮರೆದು ವಿಹಗಗಳಂತೆ
ಸಂತತವು ಚರಿಸುವರು ಭಿಕ್ಷುಚರ್ಯೆಯಲಿ !

ತೆಗೆಯೇಕೆ ವಂಚಕನ ಮಾತು ! ಶಬರನ ಗಾನ-
ವನು ಕೇಳಿ ಮರುಳಾದ ಹರಿಣಕುಲದಂತೆ—
ಅಗಧರಗೆ ಮರುಳಾಗಿ ಪ್ರೇಮಪೀಡಿತರಾಗಿ
ನೊಂದಿಹೆವು ಬೇರೇನನಾದರೂ ಪೇಳು !

ಪ್ರಿಯಸಖನೆ, ಮರಳಿ ಬರುತಿಹೆಯೇಕೆ ಪೇಳ್ನನ್ನ-
ನವನೆ ಕಳುಹಿದನೆ, ನಮ್ಮನು ಕರೆವನೇ ?
ಭಯವಾಗುತಿದೆ ಅವನ ಬಿಡದೆ ಬಳಸಿಹಹೆಂಗ
ಳರಲವನ ಸಾರುವುದದೆಂತು ಪೇಳು !
ಅವನ ವಕ್ಷದಲಿಹಳು ಲಕ್ಷ್ಮಿ, ನಾವಿಂದು ಬರಿ
ನಮಗೆಲ್ಲಿ ತಾಣವಿದೆ ಪೇಳುವೆಯ ಭ್ರಮರ !

ಓ ಭ್ರಮರ ! ಮಧುರೆಯಲಿ ಕೃಷ್ಣ ಸದುಳದೊಳಿಹನೆ ?
ಆದರವ ಗೋಕುಲವ ಮರೆಯದಿಹನೆ ?
ತಾಯಿ-ತಂದೆಯರ, ಕೆಳೆಯರನವನು ನೆನೆಯುವನೆ ?
ನಮ್ಮನೀ ಗೋಪಿಯರನೊಮ್ಮೆ ಸ್ಮರಿಸಿದನೆ ?
ಬರುವನೇ ಸುಮಗಂಧ ಪೂರಿತಸುಹಸ್ತದಿಂ—
ಮುಂಗುರುಳ ನೇವರಿಸಿ ಚುಂಬಿಸುವನೆ ? ”

ಉತ್ತರ ಪ್ರಸಂಗ

ಇಂತವಳು ಭ್ರಮರನನು ನುಡಿಸಲಾ ಉದ್ಧವನು
ಸಂತಸವ ತಳೆದಿಂತು ಯೋಚಿಸಿದನು:

‘ ಇವರ ಪ್ರೇಮಕೆ ಸರಿಯು ಜಗದೊಳಗೆ ಕಾಣೆ,
ಇವರ ಸುಕೃತವೆ ಸುಕೃತ ಗೋವಿಂದನಾಣೆ !
ಲೋಕದಲಿ ಯೋಗಿಗಳು ಪರಮ ಋಷಿವರರು
ನಾಕದಲಿ ದಿವಿಜತತಿ ದೇವರ್ಷಿವರರು
ಆವುದನು ಅನುಗಾಲ ಬಯಸಿ ತಪಿಸುವರೋ—
ಭಾವವದು ಗೋಪಿಕಾಜನಕೆ ದೊರೆತಿಹುದು !
ಎಲ್ಲಿ ಈ ಹಳ್ಳಿಗಾಡಿನ ಮುಗ್ಧಭಾಮಿನಿಯ-
ರೆಲ್ಲಿ ಈ ಮಧುರಭಾವದ ಪರಾಭಕ್ತಿ !
ಗೋಪೀಜನವೆ ಧನ್ಯ, ಗೋಕುಲವೆ ಧನ್ಯ !
ತಾಪಹರ ವೃಂದಾವನಾಂತವೇ ಧನ್ಯ !
ಪರಮಪಾವನ ಪುಣ್ಯಭೂಮಿಯೀ ವ್ರಜವು,
ಗೋವರ್ಧನಾದ್ರಿಯಿದು ಪರಮಪುಣ್ಯದವು !
ನಾನೊಲ್ಲೆ ಸ್ವರ್ಗವನು ಮುಕ್ತಿಯನು ಒಲ್ಲೆ !
ಈ ಲೋಕದಲಿ ಮರಳಿ ಮರಳಿ ಜನಿಸುತ್ತೆ
ಬೃಂದಾವನದಿ ಗೊಲ್ಲನಾಗ ಬಯಸುವೆನು —
ಇಂದೀವರಾಕ್ಷ ಸಂಗವನೆ ಬಯಸುವೆನು.

ಆ ಪುಣ್ಯವೆನಗಿಲ್ಲದಿರಲು ಗೋಕುಲದಿ
ಈ ಪುಷ್ಪಲತೆಗಳೊಳಗೊಂದಾಗಿ ಬಳೆವೆ;
ವೇಣ್ ಹಕ್ಕಿಯಾಗಿ ಮರಿದುಂಬಿ ನಾನಾಗಿ
ಜನಿಸಲಿಚ್ಛಿಸುವೆನಿದ ದೇವ ಕರುಣಿಸಲಿ ! ’

ಸ್ವಂತದ ಶ್ರಾದ್ಧ

(ಸಣ್ಣಕಥೆ)

ಶ್ರೀ. ವೆಂ. ಮು. ಜೋಶಿ, ಧಾರವಾಡ

卐

ಮಾನವಜೀವನದಲ್ಲಿಯ ಕೆಲವೊಂದು ಘಟನೆಗಳು ಕಲ್ಪಿತಕಥೆಗಳಿಗಿಂತ ಅದ್ಭುತವಾಗಿರುತ್ತವೆ. ಮನದ ಉತ್ಕಟ ಅಪೇಕ್ಷೆಗಳು, ವಿರೋಧ ಆಘಾತಗಳಿಗೆ ಒಳಗಾಗಬೇಕಾಗಿ ಬಂದಾಗ ಉಂಟಾಗುವ ಪರಿಣಾಮಗಳು, ಅನೇಕ ರೋಮಹರ್ಷಕ ಕಥಾವಸ್ತುಗಳನ್ನು ನಿರ್ಮಿಸಬಲ್ಲವು!

卐

ಬೈರಾಗಿವೇಷದಲ್ಲಿರುವ ರಂಗಣ್ಣ ಇಂದು ಶ್ರಾದ್ಧದ ಊಟವನ್ನು ನಡೆಸಿದ್ದಾನೆ. ತನ್ನ ತಂದೆಯ ಶ್ರಾದ್ಧದ ಊಟವಲ್ಲ; ಅಥವಾ ಅಜ್ಜನ ಶ್ರಾದ್ಧದ ಊಟವೂ ಅಲ್ಲ. ತನ್ನ ಸ್ವಂತದ ಶ್ರಾದ್ಧದ ಊಟ! ಭಟ್ಟರ ಊಟ ನಡೆದಿದೆ. ಶ್ರಾದ್ಧಕ್ಕಾಗಿ ಬಂದ ಭಟ್ಟರು ರಂಗಣ್ಣನ ಶ್ರಾದ್ಧದ ಊಟ ನಡೆಸಿದ್ದಾರೆ. ಯಥೇಚ್ಛವಾಗಿ ಬಡಿಸಿದೆಲೆಯ ಪಕ್ವಾನ್ನದ ಮೇಲೆ ಕೈಯಾಡಿಸುತ್ತಿದ್ದಾರೆ. ಒಳಗಡೆ ಅಡುಗೆಮನೆಯಲ್ಲಿ—ರಂಗಣ್ಣನ ಹೆಂಡತಿ—ವಿಧವೆ ಕಮಲಾಬಾಯಿ—ಕೆಲಸದಲ್ಲಿ ಮಗ್ನಳಾಗಿದ್ದಾಳೆ. ರಂಗಣ್ಣನ ಮಗ ಅನಂತ, ಅಂಗಳದಲ್ಲಿ ಆಟವಾಡುತ್ತಲಿದ್ದಾನೆ. ಆಟವಾಡುತ್ತಿದ್ದ ಮಗುವನ್ನೊಂದು ಸಲ ರಂಗಣ್ಣ ದಿಟ್ಟಿಸಿ ನೋಡುತ್ತಿದ್ದಾನೆ. ನೋಡುತ್ತಿದ್ದಂತೆ—ಅವನ ಕಣ್ಣುಗಳೊಳಗಿಂದ ನೀರಹನಿ ಪಳಪಳನೆ ಉದುರುತ್ತಿವೆ. ಮತ್ತೊಂದು ಸಲ, ಬಡಿಸಲು ಬಂದ ತನ್ನ ಹೆಂಡತಿ ಕಮಲಾಬಾಯಿಯತ್ತ ನೋಡಿದ. ನೋಡುತ್ತಿರುವಂತೆ ಮನಸ್ಸಿನಲ್ಲಿ ಆಲೋಚನಾತರಂಗಿಣಿ ಹರಿಯತೊಡಗಿತು: ದೈವ ದುರ್ವಿಲಾಸ! ತನಗೆ ತನ್ನ ಹೆಂಡತಿಯ ಗುರುತು ಹತ್ತಿದೆ; ಆದರೆ ಅವಳಿಗೆ ತನ್ನ ಗುರುತು ಹತ್ತಲಾರದು. ಗುರುತು ಹತ್ತದಷ್ಟು ಬದಲಾವಣೆ ತನ್ನಲ್ಲಾಗಿದೆ. ರಂಗಣ್ಣ ಯೋಚನೆ ಮಾಡುತ್ತಿದ್ದಾನೆ 'ಇದು ಸರಿಯೇ?' ಎಂದು. 'ಸರಿಯಲ್ಲದಿದ್ದರೂ ತಪ್ಪಲ್ಲ' ಎಂದು ಇನ್ನೊಂದು ಮನಸ್ಸು ಹೇಳುತ್ತಿದೆ. ಸ್ವಂತದ ಶ್ರಾದ್ಧದ ಊಟವನ್ನು ನಡೆಸಿದ ರಂಗಣ್ಣನನ್ನು ನಗು, ನೋವು, ಕಳವಳ, ಸಂತಸ, ಸುಖ, ದುಃಖಗಳು ಆವರಿಸತೊಡಗಿವೆ. ಎಲ್ಲವೂ ಯಂತ್ರದಂತೆ ಸಾಗಿದೆ. ತನ್ನ ಸುಖ ಜನರಿಗೆ ಗೊತ್ತಿಲ್ಲ; ತನ್ನ ನೋವು ತನಗಷ್ಟೇ ಗೊತ್ತಿದೆ. ತಾನು ಸತ್ತಿದ್ದಾನೆ.—ಸತ್ತಿದ್ದರೂ ಬದುಕಿದ್ದಾನೆ; ಬದುಕಿದ್ದರೂ ಸತ್ತಿದ್ದಾನೆ. ಸಾವು, ಬದುಕು—ಎರಡೂ ಆತನನ್ನು ಮುಟ್ಟಿಲ್ಲ. ರಂಗಣ್ಣ ವಿಚಾರಿಸುತ್ತಲೇ ಗಡ್ಡದ ಮೇಲೆ ಕೈಯನ್ನೊಯ್ದ. ಅಲ್ಲಿ ಗಡ್ಡ, ಒಂದು-ಒಂದುವರೆ ಗೇಣು ರಭಸದಿಂದ ಬೆಳೆದಿತ್ತು. ಹೀಗೆ ಬೆಳೆದ ಗಡ್ಡ, ಅವನ ಅರ್ಧ ಮುಖವನ್ನೇ ಮುಚ್ಚಿದೆ; ಅರ್ಧ ಎದೆಯನ್ನೂ ಮುಚ್ಚಿದೆ. ಭಟ್ಟರಿಗೆ ಬಡಿಸಲು ಬಂದ ಕಮಲಾಬಾಯಿ ಭಟ್ಟರಿಗೆ ಹೇಳಿದರು: "ಮುಂಜಾನೆ ಈ ಬೈರಾಗಿ ಬಂದು ಬಾಗಿಲದಾಗ ನಿಂತು, ಭಿಕ್ಷಾಕ್ಕ ಬಂದಾಗ.... ಹ್ಯಾಂಗಾದರೂ ಇವತ್ತು ಶ್ರಾದ್ಧ ಇತ್ತು; ಇಲ್ಲೇ ಉಂಡು ಹೋಗು—ಅಂತ ಹೇಳಿದೆ" ಅದಕ್ಕೆ ಭಟ್ಟರು ನಸುನಗುತ್ತ ನುಡಿದರು: "ಸರಿ ಆಯ್ತು ಬಿಡಿರಿ. ಅನ್ನದಾನ, ಒಳ್ಳೇಕೆಲಸ—ಎರಡು-ಮೂರು ದಿವಸ ಆತು. ಈ ಬೈರಾಗಿ ಊರಹೊರಗಿನ ಗುಡಿಯೊಳಗ ಇಳಕೊಂಡಾನ. ಯಾರ ಕೂಡಾನೂ ಹೆಚ್ಚು ಮಾತಾಡೋದಿಲ್ಲ. ಜನರಿಗೆ ಔಷಧಾ—ಅದು ಕೊಡತಿರತಾನ. ಕೈಗುಣಾನೂ ಚೆಲೋ ಅದ ಅಂತ ಕೇಳೇನಿ"

ಅವರ ಮಾತು ಕೇಳುತ್ತಿದ್ದ ರಂಗಣ್ಣ ಮತ್ತೆ ಯೋಚನೆ ಮಾಡತೊಡಗಿದ. ಅವನ ಮನಸ್ಸು ಸದ್ಯದ ಸ್ಥಿತಿಗೆ ಅವನನ್ನು ತಂದು ನಿಲ್ಲಿಸಿದ ಘಟನೆಯತ್ತ ಹೊರಳಿತು:

ಮಲೆನಾಡಿನ ಒಂದು ಹಳ್ಳಿಯಲ್ಲಿ ರಂಗಣ್ಣನ ಮನೆ. ರಂಗಣ್ಣ ಚಿಕ್ಕವನಿರುವಾಗಲೇ ತಂದೆ ತೀರಿಹೋಗಿದ್ದರು. ಇದ್ದ ತಾಯಿಗೆ ತಾನೊಬ್ಬನೇ ಮಗ. ಚಿಕ್ಕತನದಲ್ಲಿಯೇ ತಂದೆಯ ಸಾವು ಘಟಿಸಿದ್ದರಿಂದ, ರಂಗಣ್ಣನಿಗೆ ಶಾಲೆಯ ಕಡೆಗೆ ಮನಸ್ಸು ಹತ್ತಲಿಲ್ಲ. ಹಾಗೂ ಹೀಗೂ ಮಾಡಿ ಐದಾರು ವರುಷ ಶಾಲೆಯಲ್ಲಿ ಕಳೆದದ್ದಾಯಿತು. ಶಾಲೆಯ ಬದಲು ಗರಡಿಮನೆ ಅವನನ್ನಾಕರ್ಷಿಸಿತ್ತು. ದಿನವೂ ಬೆಳಗಾದರೆ ರಂಗಣ್ಣನಿಗೆ ಗರಡಿಮನೆಯೇ ಆಸರೆ. ಅಲ್ಲಿ ಇಲ್ಲಿ—ಎರಡು ಮೂರು ಕುಸ್ತಿಗಳನ್ನು ಒಗೆದಿದ್ದ. ಗರಡಿಸಾಧಕರ ಗುಂಪಿನಲ್ಲಿ ಸೇರಿಕೊಂಡು, ಬ್ರಹ್ಮಚಾರಿಯಾಗಿಯೇ ಬಾಳಬೇಕೆಂಬುದು ಆತನ ಇಚ್ಛೆ. ಆದರೆ ತಾಯಿಗೆ ತನ್ನ ವಂಶ ಮುಂದೆ ನಡೆಯಬೇಕೆನ್ನುವ ದೂರದ ಆಶೆ. ತಾಯಿ ಸಾಯುವ ಮುಂದೆ ರಂಗಣ್ಣನಿಂದ ಸಂಸಾರಿಯಾಗುವೆನೆಂದು ವಚನ ತೆಗೆದುಕೊಂಡಳು. ಹೀಗಾಗಿ

ರಂಗಣ್ಣ ಮನಸ್ಸಿಲ್ಲದ ಮನಸ್ಸಿನಿಂದ ಮದುವೆಯಾಗಿದ್ದ; 'ಮದುವೆ ಆದರೇನಾಯಿತು; ಲಲಿತೆಗೂ ಬ್ರಹ್ಮಚಾರಿಣಿಯ ವ್ರತ ಕಲಿಸೋಣ' ಎಂದು ವಿಚಾರ ಮಾಡಿಕೊಂಡಿದ್ದ. ಈ ವಿಚಾರಗಳ ಹೊಯ್ದಾಟದಲ್ಲಿಯೇ—ರಂಗಣ್ಣ ತಂದೆಯಾದ. "ಬ್ರಹ್ಮಚರ್ಯವ್ರತ ಎಲ್ಲಿ ಹೋಯಿತು?" ಎಂದು ಜನ ಗೇಲಿ ಮಾಡಿದಾಗ ರಂಗಣ್ಣ ಹೇಳಿದ್ದ : "ವಿಶ್ವಾಮಿತ್ರನಂತಹ ಮಹಾಯೋಗಿಯೇ ಮುಗ್ಗರಿಸಿದ್ದ ಮೇಲೆ, ನನ್ನಂತಹನ ಪಾಡೇನು!" ಹೀಗೆ ಮಾರುತ್ತರ ಕೊಟ್ಟು, [illegible] ಸಮಾಧಾನವನ್ನು ಪಡೆದುಕೊಂಡರೂ, ರಂಗಣ್ಣನಿಗೆ ಮತ್ತೆ ಆಸೇ [illegible] ಮಹಾಯೋಗಿಗಳ [illegible] ಗಳನ್ನೆಲ್ಲ ತಂದು ಓದತೊಡಗಿದ.

ಮುಂದೆ ಹಳ್ಳಿಯಲ್ಲಿ ಜೀವನ ನಿರ್ವಹಣೆ ಕಠಿಣವಾಗಿ ನಡೆಯುತ್ತಿರಲು, ರಂಗಣ್ಣ ಸಾಲ್ವಳ್ಳಿಗೆ ಬಂದು ಮಿಲ್ಟರಿಗೆ ಸೇರಿಕೊಂಡ. [illegible]

[illegible]

ಗಿಬ್ಸನ್ನನಿಗೆ ಇವೆಲ್ಲ ಗೊತ್ತಿತ್ತು. ಆದರೂ [illegible]

"[illegible]"

'[illegible]'

[illegible]

[illegible]

ಹಿಡಿದುಕೊಂಡು ತೂಕಡಿಸುತ್ತಿದ್ದಾರೆ; ಕೆಲವರು ಅರ್ಧ ಮಲಗಿದ್ದಾರೆ. ಪ್ಲಾಟೂನ್ ಕಮಾಂಡಂಟ್ ಗಿಬ್ಸನ್ ರಂಗಣ್ಣನ ಬಳಿ ನಿಂತಿದ್ದಾನೆ. ಒಬ್ಬರ ಮುಖ ಒಬ್ಬರಿಗೆ ಕಾಣುತ್ತಿಲ್ಲ. ಗಿಬ್ಸನ್ನನ್ನು ಚಳಿ ಕಾಡಿಸತೊಡಗಿತ್ತು. ಚಳಿಗಿಂತಲೂ ಚಟವೊಂದು ಕಾಡಿಸುತ್ತಿತ್ತು. ಸಿಗರೇಟಿನ ಚಟ! ಯುದ್ಧಭೂಮಿಯ ಮೇಲೆ, ರಾತ್ರಿಯಲ್ಲಿ—ಅಂದರೆ ಕತ್ತಲೆಯಲ್ಲಿ—ಯಾರೂ ಸಿಗರೇಟು ಸೇದಬಾರದೆಂಬ ಸುಗ್ರೀವಾಜ್ಞೆ ಯಾವಾಗಲೂ ಇರುತ್ತದೆ. ಏಕೆಂದರೆ ಶತ್ರುಗಳ ಕಡೆಯವರು ಯಾವಾಗಲೂ ಕಣ್ಣಲ್ಲಿ ಎಣ್ಣೆ ಹಾಕಿಕೊಂಡು ತಮ್ಮ ಶತ್ರುಗಳ ಸ್ಥಾನ ಸಂಚಯಕ್ಕಾಗಿ ಕಾಯಿರುತ್ತಾರೆ. ಸಿಗರೇಟಿನ ಬೆಂಕಿಯಾದರೂ ಸಾಕು; ಅವರಿಗೆ ಪತ್ತೆಯಾಗಿ ಬಿಡುತ್ತದೆ.

[illegible]

* Sepoy Ranganna Kulkarni missing Believed to be killed'

ಮುಂದೆ ಮತ್ತೆ ೩-೪ ತಿಂಗಳು ಗತಿಸಿದುವು. ಕಮಾಂಡ್ ಹೆಡ್‌ಕ್ವಾರ್ಟರಿಗೆ ರಂಗಪ್ಪನ ಪತ್ತೆ ಇಲ್ಲ. ಎಲ್ಲಿಯೋ ಅಡವಿಯಲ್ಲಿ ಆತನ Identity disc (ಪರಿಚಯಚಕ್ರ) ದೊರಕಿತಂತೆ—ಅಂತೂ ರಂಗಪ್ಪ ಸತ್ತ—ಎಂದು ಸೈನ್ಯಖಾತೆಯು ಬಹಿರಪಡಿಸಿ. ಕೊಂಡು, ಆತ ಅಂದು ಹಿನ್ನಡೆಯುವಾಗ ತೋರಿದ ಶೌರ್ಯಕ್ಕೆ ಮೆಚ್ಚಿ—ಆತನ ಹೆಂಡತಿಗೆ—ಪ್ರತಿ ತಿಂಗಳು ೫೦ ರೂಪಾಯಿ ಪೆನ್ಶನ್ ಮಂಜೂರು ಮಾಡಿತು. ಈ ಪೆನ್ಶನ್ನು ಒಂದು ಕರಾರಿನ ಮೇಲಿರುತ್ತದೆ. ಮಡಿದ ಸೈನಿಕನ ಹೆಂಡತಿ ಪುನಃ ಲಗ್ನವಾಗುವವರೆಗೆ—ಅಥವಾ ಸಾಯುವವರೆಗೆ—ಮಾತ್ರ ಪೆನ್ಶನ್ನು.

ತನ್ನ ಗಂಡ ಸತ್ತ ಸುದ್ದಿಯಿಂದ ಕಮಲಾಬಾಯಿ ಗೋಳೋ ಎಂದು ಅತ್ತಳು. ಸನಾತನ ಮನೆತನಕ್ಕೆ ಸೇರಿದವಳಲ್ಲವೆ! ತಲೆಯನ್ನು 'ಗಿಲೀಟು' ಮಾಡಿಕೊಂಡು, ಕೆಂಪುವಸ್ತ್ರ ಪರಿಧಾನ ಮಾಡಿಕೊಂಡು, ಗಂಗಾಭಾಗೀರಥಿಯಾದಳು. ತನ್ನ ಒಬ್ಬ ಮಗ ಅನಂತನನ್ನು ಕಂಡು ದಿನ ನೂಕುತ್ತಿದ್ದಳು. ಪ್ರತಿ ತಿಂಗಳು ೫೦ ರೂಪಾಯಿ ಪೆನ್ಶನ್ ಬರುತ್ತಿತ್ತು. ಜೀವನಕ್ಕೆ ತೊಂದರೆ ಇರಲಿಲ್ಲ. 'ಗಂಡನಿರುವತ್ತಲೆ ಹೀಂಗೆ ಸಾಯಬೇಕು!' ಎಂದು ಊರ ಹೆಣ್ಣುಮಕ್ಕಳು ಆಡುವಂತಾಗಿತ್ತು ಕಮಲಾಬಾಯಿಯ ಬಾಳು.

ಹೀಗೇ ವೈಶಾಖ....ಶ್ರಾವಣ, ವೈಶಾಖ—ಶ್ರಾವಣ ಎಂದು ವರುಷಗಳು ಒಂದರಹಿಂದೊಂದು ಉರುಳುರುಳಿ ಸಾಗಿದ್ದುವು. ಕಮಲಾಬಾಯಿಯ ಆ ದೂರದ ಅಜ್ಜನೊಬ್ಬ—ಹಣ್ಣುಹಣ್ಣು ಮುದುಕ—ಮಕ್ಕಳು ಮೊಮ್ಮಕ್ಕಳನ್ನು ಕಳೆದುಕೊಂಡು ಏಕಾಕಿಯಾದ ಮುದುಕ—ಇವಳ ಬಳಿ ಬಂದು, ಇಬ್ಬರನ್ನೂ ಕೊಡಗಿನ ಹತ್ತಿರ ಒಂದು ಹಳ್ಳಿಗೆ ಕರೆದುಕೊಂಡು ನಡೆದ. ಆ ಮುದುಕನದೊಂದು ಧರ್ಮದ ಗದ್ದೆ ಇತ್ತು. ವರುಷಕ್ಕೆ ೮-೧೦ ಚೀಲ ಭತ್ತ ಬರುತ್ತಿತ್ತು. ಆ ಗದ್ದೆಯನ್ನು ಮುದುಕ, ಅನಂತನ ಹೆಸರಿಗೆ ಮಾಡಿ ಕಣ್ಣು ಮುಚ್ಚಿದ. ಕಮಲಾಬಾಯಿ ತಾನೇ ಹೊಲ-ಮನೆ ನೋಡಿಕೊಂಡು—ಅನಂತನನ್ನು ಶಾಲೆಗೆ ಕಳುಹಿದಳು. ವರುಷ-ವರುಷವೂ ತಪ್ಪದೇ ಗಂಡನ ಶ್ರಾದ್ಧ ಮಾಡುತ್ತಿದ್ದಳು. ತನ್ನ ಗಂಡನಿಗೆ ಯೋಗಿನಿಯರಿಗೆ ಮೇಲೆ ಮಹಾ ಭಕ್ತಿ ಇದ್ದುದರ ಮೂಲಕ—ಶ್ರಾದ್ಧದ ದಿನ ಒಬ್ಬೊಬ್ಬರು ವೈರಾಗಿಗಳಿಗೆ ಊಟಕ್ಕೆ ಹಾಕುತ್ತಿದ್ದಳು. ಹೀಗೆ ಐದು ವರುಷಗಳು—ಕಳೆದುಹೋದುವು.

ಇತ್ತ ರಂಗಪ್ಪ—ಬರ್ಮಾದಲ್ಲಿ ಆಮ್ಯುನಿಶನ್ ಡೆಪ್ಯೂಟಿ ಸುಟ್ಟು ಓಡಿ ಹೋಗುವಾಗ—ಎಲ್ಲಿಯೋ ಗ್ರೆನೇಡು ತಗುಲಿ, ತನ್ನ ಕೈಯ ಒಂದೆರಡು ಬೆರಳುಗಳನ್ನು ಕಳೆದುಕೊಂಡು—ಅಡವಿ, ಹಳ್ಳ ಕೊಳ್ಳ ಸುತ್ತಾಡಿ, ತಲೆ ಮರೆಸಿಕೊಂಡ. ರೂಪ ಬದಲಿಸಿಕೊಂಡು ಗಡ್ಡ ಬೆಳೆಯಿಸಿಕೊಂಡ. ಹಳ-ಮಳೆ ತಿಂದು, ಗುಡ್ಡ, ಬೆಟ್ಟ—ಹೀಗೆ ಎಲ್ಲವನ್ನೂ ಎದುರಿಸಿ, ಒಂದು ದಿನ ಭಾರತದ ಗಡಿಯನ್ನು ಸೇರಿದ. ಈ ಅವಧಿಯಲ್ಲಿ ರಂಗಪ್ಪನಲ್ಲಿ ಮೊದಲಿನಿಂದಲೂ ಇದ್ದ ಸಂನ್ಯಾಸಿಯಾಗಬೇಕೆಂಬ ಭಾವನೆ ಬಲವಾಗಿ ಬೆಳೆಯತೊಡಗಿತು.

ಮಹೀಪುರದಲ್ಲಿ ಒಬ್ಬ ಸಾಧು ಭೆಟ್ಟಿಯಾದ; ಆ ಸಾಧುವಿನ ಶಿಷ್ಯನಾಗಿ—ಸಮಾಜದ ಯೋಗ-ಕ್ಷೇಮದ ಸಲುವಾಗಿ ಕಾಡು-ಗಡ್ಡೆ-ಬೇರುಗಳ ಔಷಧೀ ವಿದ್ಯೆಯನ್ನು ಕಲಿತು, ಅತ್ತತ್ತ ಓಡಾಡತೊಡಗಿದ.

ಹೀಗೆ ಓಡಾಡುತ್ತಿರುವಾಗಲೇ—ಒಂದೊಂದು ಸಲ—ತನ್ನೂರಿನ ಮನೆಯ ವಿಚಾರ ಸುಳಿಸುಳಿದು ಕಾಡುತ್ತಿತ್ತು. ತನ್ನ ಮಗ ಅನಂತ—ಒಮ್ಮೆಯಾದರೂ ಭೆಟ್ಟಿಯಾಗಿ ಬರಬೇಕೆಂದು ನಿರ್ಧರಿಸಿ, ಹುಬ್ಬಳ್ಳಿಯತ್ತ ಪ್ರಯಾಣ ಕೈಕೊಂಡ. ಈಗ ರಂಗಪ್ಪ ಸಂಪೂರ್ಣ ಬೈರಾಗಿಯಾಗಿದ್ದ. ಹುಬ್ಬಳ್ಳಿಗೆ ಬಂದು, ಅಲ್ಲಿ ತಾನಿದ್ದ ಮನೆಯಲ್ಲಿ, ಮತ್ತೆ ಬೇರೆಯವರು ಬಂದು ವಾಸವಾಗಿದ್ದನ್ನು ಕಂಡು ಬೆರಗುಬಡೆದ. ಆ ಮನೆಯವರಾಗಲಿ ನೆರೆಹೊರೆಯವರಾಗಲಿ, ರಂಗಪ್ಪನನ್ನು ಗುರುತಿಸಲಿಲ್ಲ. ರಂಗಪ್ಪ ತನ್ನ ಗುರುತನ್ನು ಅವರಿಗೆ ತಿಳಿಸಲು ಇಚ್ಛಿಸಲಿಲ್ಲ. ಅವರವರ ಬಾಯಿಂದ—ಕಮಲಾಬಾಯಿ...ಹಳ್ಳಿಯಲ್ಲಿರುವುದು ತಿಳಿದುಕೊಂಡ. ಆ ಹಳ್ಳಿಗೂ ಬಂದ.

ಆ ಊರಿಗೆ ಬಂದಾಕ್ಷಣವೇ ಮನೆಗೆ ಹೋಗಲು ಮನಸ್ಸಾಗಲಿಲ್ಲ. ಊರಹೊರಗಿನ ಗುಡಿಯಲ್ಲಿದ್ದುಕೊಂಡು, ದೂರದಿಂದಲೇ ಕಮಲಾಬಾಯಿಯನ್ನು ಕಂಡುಕೊಂಡು, ಅವಳು ಶುದ್ಧ ಸಾಗಿದ್ದುದನ್ನು ಕಂಡು ಮನದಲ್ಲಿ ಮುಮ್ಮಲ ಮರುಗಿದ. 'ಮತ್ತೆ ನಾನು ಸಂಸಾರಿಯಾಗಬೇಕೇ?' ಎಂದು ಮನದಲ್ಲಿಯೇ ವಿಚಾರಿಸಿದ. ಆದರೆ ರಂಗಪ್ಪನಲ್ಲಿ ಮೊದಲಿನಿಂದಲೂ ಬೆಳೆದು ಬಂದ ಭಾವನೆ ಆತನನ್ನು ಹಾಗೆ ಮಾಡಗೊಡಲಿಲ್ಲ. ಒಂದು ಸಲ ಭೆಟ್ಟಿಯಾಗಿ ಬಂದು ಬಿಟ್ಟರೆ ಸಾಕು—ಎಂದುಕೊಂಡು, ರಂಗಪ್ಪ ಕಮಲಾಬಾಯಿಯ ಮನೆ ಎದುರು ಬಂದು ನಿಂತುಕೊಂಡ.

ಅಂದು ಆತನ ಆರನೆಯ ಶ್ರಾದ್ಧದ ದಿನವಿತ್ತು. ಅಂದು ಶ್ರಾದ್ಧದ ದಿನವಿದ್ದುದರ ಮೂಲಕ, ಕಮಲಾಬಾಯಿ ಈ ವೈರಾಗಿಗೆ ಊಟ ಮಾಡಿಕೊಂಡು ಹೋಗಲು ತಿಳಿಸಿದಳು.

ಅದೇ ರಂಗಪ್ಪ ತನ್ನ ಸ್ವಂತದ ಶ್ರಾದ್ಧದ ಊಟ ಹೊಡೆಸಿದ್ದಾನೆ.

ಊಟ ಮುಗಿದಾಕ್ಷಣ ಭಟ್ಟರೆಲ್ಲರೂ ದಕ್ಷಿಣೆಯನ್ನು ಪಡೆದುಕೊಂಡು ಹೊರಬಿದ್ದರು. ಎಲ್ಲರೂ ಹೋದರೂ ವೈರಾಗಿ ನಿಂತುಕೊಂಡ. ಕಮಲಾಬಾಯಿ ದಕ್ಷಿಣೆಯನ್ನು ಆತನ ಕೈಗಿತ್ತು ಇನ್ನು, ಹೋಗಬಹುದೆಂದು ತಿಳಿಸಿದಳು.

ರಂಗಪ್ಪನ ಕಣ್ಣುಗಳಲ್ಲಿ ನೀರು ಧಾರಾಕಾರವಾಗಿ ಹರಿಯತೊಡಗಿತು. ಕಮಲಾಬಾಯಿ ಬೆರಗುಬಡೆದು ನಿಂತಳು. ರಂಗಪ್ಪ ಕಣ್ಣು ನೀರೊರೆಸುತ್ತ ತನ್ನ ಗುರುತು ಸಹಜವು ಹೇಳಿದ. ಎಲ್ಲಿಂದಲೋ ಗಂಡ ಕಮಲಾಬಾಯಿಗೆ ಸಿಕ್ಕಿದ್ದನು. ಆದರೂ ರಂಗಪ್ಪ ಬೆರಳಿನ ಒಂದೆರಡು ಕಥೆಯನ್ನು ಹೇಳಿ ನಂಬಿಸಿದನು. ಆಗ ಹೇಗೆ ಮೊದಲಿನಿಂದಲೂ ಕಾಡಿದ್ದ ಮತ್ತೆ ಇದ್ದಿತು. ಕಾರಣ ಗಂಡ ಕಮಲಾಬಾಯಿಗೆ ಮಾತೇ ಬರಲಿಲ್ಲ. ದೇವರಕೋಣೆಗೆ ಓಡಿ ಹೋಗಿ ಕುಂಕುಮದ ಡಬ್ಬಿಯನ್ನು ಹೊರತಂದಳು.

ಮುಂದೆ ಕ್ಷೇಮೋಪಚಾರದ ಮಾತುಗಳಾದುವು. ರಂಗಣ್ಣ ಗದ್ಗದ ಕಂಠದಿಂದ ಹೆಂಡತಿಗೆ ಹೇಳಿದ: "ನನ್ನ ಮೊದಲಿನ ಆಶೆ ಸೈನಿಕನಾದ ಮೇಲೆ ಫಲಿಸಿತು. ಯುದ್ಧದಲ್ಲಿ ಈ ಕೈ ಬೆರಳುಗಳು ಹೋದುವು. ಬೆರಳುಗಳು ಹೋದರೂ ನನ್ನ ಆಶೆ ಈಡೇರಿತು. ಬಾಲ್ಯದಿಂದಲೂ ಸಂನ್ಯಾಸಿಯಾಗಬೇಕೆಂದು ಹಾತೊರೆಯುತ್ತಿದ್ದೆ. ನನ್ನ ತಾಯಿ ನನ್ನಿಂದ ವಚನ ತೆಗೆದುಕೊಂಡಿದ್ದಳು; ಅದಕ್ಕಾಗಿ ಸಂಸಾರಿಯಾದೆ. ತಾಯಿಯ ವಚನವನ್ನು ಪೂರ್ತಿಗೊಳಿಸಿದಂತಾಯಿತು. ಈಗ ನೀನು ನನ್ನ ಆಶೆ ಪೂರ್ತಿ ಮಾಡಲು ನನಗೆ ಅಪ್ಪಣೆ ನೀಡು. ನಾನು ಸಂನ್ಯಾಸಿಯಾಗಿಯೇ ಹೋಗುವೆ."

ಕಮಲಾಬಾಯಿ ಗೋಳೋ ಎಂದು ಅತ್ತಳು. ಮರಳಿ ಬಂದ ಗಂಡ, ಸತ್ತಷ್ಟು ದುಃಖವಾಗಿತ್ತು ಕಮಲಾಬಾಯಿಗೆ. ಮತ್ತೆ ಅವಳನ್ನು ಸಂತಯಿಸುತ್ತ ರಂಗಣ್ಣ ಹೇಳಿದ:

"ವಿಧಿಲಿಖಿತ ತಪ್ಪಿಸುವುದು ಯಾರಿಂದಲೂ ಸಾಧ್ಯವಿಲ್ಲ. ನನಗೆ ಈ ಅವಸ್ಥೆಯಲ್ಲಿಯೇ ಆನಂದವಿದೆ. ನೀನು ಅನಂತನನ್ನು ಸರಿಯಾಗಿ ಬೆಳೆಯಿಸು. ನನ್ನ ತಾಯಿ ನನ್ನನ್ನು ಬೆಳೆಸಿದಂತೆ ನೀನು ಅನಂತನನ್ನು ಬೆಳೆಸು. ಸರಿಯಾದ ಶಿಕ್ಷಣ ಕೊಡಿಸು. ನಾನು ಪ್ರತಿವರುಷ ಶ್ರಾದ್ಧದ ದಿನ ಇಲ್ಲಿ ಬಂದು ಊಟ ಮಾಡಿಕೊಂಡು ಹೋಗುವೆ. ಅನಂತ ಬೆಳೆದು ದೊಡ್ಡವನಾದ ಮೇಲೆ—ನೀನೂ ನನ್ನ ಜತೆಯಲ್ಲಿ ಸಂನ್ಯಾಸ ಸ್ವೀಕರಿಸಿ ನಡೆ!"

ಕಮಲಾಬಾಯಿಯ ಮನೆಯಲ್ಲಿ ಪ್ರತಿವರುಷ ಶ್ರಾದ್ಧದ ದಿನ ಒಬ್ಬ ಬೈರಾಗಿ ಬಂದು ಊಟಮಾಡಿ ಹೋಗುತ್ತಿರುವ ಮಾತು ಊರ ಜನರಿಗೆಲ್ಲ ಗೊತ್ತಿದೆ.

ಹೀಗೆ ಸ್ವಂತದ ಶ್ರಾದ್ಧ ಮಾಡಿಸಿಕೊಳ್ಳುವ ರಂಗಣ್ಣ ಸಂನ್ಯಾಸಿಯಾಗಿಯೇ ಇದ್ದಾನೆ. ತನ್ನ ಹೆಂಡತಿಗೆ ಸಂನ್ಯಾಸ ದೀಕ್ಷೆಯನ್ನು ಕೊಡುವ ದಿನದ ಪ್ರತೀಕ್ಷೆಯಲ್ಲಿ ರಂಗಣ್ಣ ಸ್ವಂತದ ಶ್ರಾದ್ಧದ ದಿನ—ಊಟಕ್ಕಾಗಿ ಅಲ್ಲಿ ಹೋಗುತ್ತಿರುತ್ತಾರೆ.*

* ಧಾರವಾಡದ ಬಾನುಲಿಕಟ್ಟೆಯಿಂದ ಬಿತ್ತರಗೊಂಡ ಸಣ್ಣಕತೆಯಿದು. —ಸಂ.

ನಗುವೆಯೇಕೆ??

(ಅನ್ಯೋಕ್ತಿಗೀತ)

ಶ್ರೀ. ಕೆ. ಜಿ. ಕೃಷ್ಣಭಟ್ಟ, ಪೆರಡಾಲ, ದ. ಕ.

ನಸು ಬಿರಿದು, ಸೌರಭವ ಸೂಸುತ್ತೆ, ಕಣ್ಮನವ
ಸೆಳೆಯುತಿಹ ಚೆಲುಗುಲಾಬಿಯೆ! ನಗುವೆಯೇಕೆ?
ಬಾಳ್ವೆಯಲಿ ಬೇಸರವ ಹೊಂದಿಲ್ಲವೇ ನೀನು?
ಸುಖವನೇ ಉಂಡಿಹೆಯ? ನೋವ ತಿಳಿದಿಲ್ಲ? ೧

ಮಂದಹಾಸವನಿಂತು ಸೂಸಲೇಂ ಕಾರಣವೊ?
ಚಂದದ ಗುಲಾಬಿ! ನಾಂ ತಿಳಿಯದಿಹೆನು
ಮುಂದೆ ಬರಲಿಹ ಕಷ್ಟಗಳನು ಯೋಚಿಸದಿರ್ಪ
ಮಂದಮತಿಗಳದಾರು ನಿನ್ನವೊಲು ಜಗದಿ? ೨

ಸೌಂದರ್ಯದಲ್ಲಿ ಮೇಣ್ ಕೆಂಪಿನಲಿ ಕಂಪಿನಲಿ
ಇಂದೆನಗೆ ಸರಿ-ಸಾಟಿ ಇಲ್ಲವೆಂದು
ಬಂದುದೇ ಮದ ನಿನಗೆ? ಶತಕಂಟಕಗಳೆಡೆಯೊ-
ಳಿಂದು ನೀನಿಹೆಯೆಂದು ತಿಳಿದಿಲ್ಲವೇ? ೩

ಮೂರು ದಿನಗಳ ಬಾಳ್ವೆಯಲಿ ಸುಖವ ಹುಡುಕುತ್ತೆ
ಸ್ವಾರ್ಥಾಂಧರಾಗಿರ್ಪ ಜನರ ಮೂರ್ಖತೆಯ
ಅರಯ್ದು ನಗುವೊಳಗೆ ಹಿಡಿಸಲಾರದೆಯಿಂತು
ಉಕ್ಕಿ ಬಹುದೇನೊ! ನಾ ತಿಳಿಯದಿಹೆನು ೪

ಮೃತ್ಯುದೇವತೆ ತನ್ನ ಬೆನ್ನಿನಲಿ ನಲಿಯುತಿರೆ
ಮುಕ್ತನಾಗುತೆ ಚಿರಂಜೀವಿ ತಾನೆಂದು
ಅತ್ಯಂತ ಸಡಗರದಿ ನಲಿಯುತಿಹ ಮಾನವರ
ಎತ್ತಲುಂ ನೋಡುತ್ತೆ ನಗುವೆಯೇನೊ? ೫

ಮುಂಗಾರು ಮಳೆಬೀಳೆ, ಭೂಗರ್ಭದಿಂದಿನ್ನು
ಸಿಡಿದೆದ್ದು ಹಾರುತಿಹ ಹುಳುಗಳಂತೆ
ಬಂದಿರೆ ಚುನಾವಣೆಯು ಎಲ್ಲೆಲ್ಲು ಕಾಣಿಸುವ
ದೇಶದುದ್ಧಾರಕರ ನೋಡಿ, ನಗುತಿಹೆಯ? ೬

ಕೈತಟ್ಟಿ, ಎದೆ ತಟ್ಟಿ, ಭಾಷೆಯೀಯುತೆ ಜನರ
ನಂಬಿಸುತ್ತೆ ಚುನಾವಣೆಯೊಳು ಜಯಪಡೆದು,
ಕೊನೆಗೆ ಮನಬಂದಂತೆ ವಿಹರಿಸುತ್ತಿರುವ ದು-
ಸ್ವಾರ್ಥಿಗಳ ಕಂಡಿಂತು ನಗುವೆಯೇನು? ೭

ಮಂದಮತಿಯೆನಗಿಂದು ತೋರದಿಹುದೈ ನಿನ್ನ
ಮಂದಹಾಸವ ಗೆಯ್ವ ಹೇತುವೇನು?
ಕಾರಣವದಿಲ್ಲದೆಯೆ ಕಾರ್ಯವಾಗುವುದೆಂತು?
ಹೇಳಯ್ಯ ಚೆಲುಗುಲಾಬಿಯೆ! ನಗುವೆಯೇಕೆ? ೮

ಲೋಮೊನೊಸೋವ್

(ವಿಜ್ಞಾನಿಯ ಪರಿಚಯ)

ಶ್ರೀ. ಟಿ. ಆರ್. ನಾದಗೀರ ಬಿ. ಎಸ್‌ಸಿ. (ಆನರ್ಸ್) ಬಿ. ಎಸ್‌ಸಿ (ಟೆಕ್), ಮುಂಬಯಿ.

卐

ಜ್ಞಾನವಿಷಯಕವಾದ ಉತ್ಕಟಲಾಲಸೆ ಎಲ್ಲಿ, ಹೇಗೆ, ಯಾವಾಗ ಮೂಡೀತೆಂಬುದರ ನಿಯಮವಿಲ್ಲ. ಇಲ್ಲವಾದರೆ, ಮೀನುಗಾರನ ಮಗನಾಗಿ ಹುಟ್ಟಿದ ಲೋಮೋನೋಸೋವ್, ಲೋಕವಿಖ್ಯಾತನಾದ ವಿಜ್ಞಾನಿಯಾಗುತ್ತಿದ್ದನೆ ?

卐

Science shows the way to the industries; industries hasten the development of Science; Both work hand in gloves for the public welfare.

೧ನೆಯ ಭಾಗ

೧೭೧೧ನೆಯ ಇಸ್ವಿಯ ಸಪ್ಟಂಬರು ತಿಂಗಳ ಮೊದಲ ವಾರದಲ್ಲೊಂದು ದಿನ, ಶ್ರೀಮಂತ ಮೀನುಗಾರನಾದ ಡೊರೋಫೇವಿಚ್ ಲೋಮೊನೊಸೋವನ ಮನೆಯಲ್ಲಿ ಪುತ್ರೋತ್ಸವವಾಯಿತು. ಈ ಮಗುವಿಗೆ ಮೈಖೇಲನೆಂದು ನಾಮಕರಣ ಮಾಡಲಾಯಿತು. ಈ ಮಗುವೆ ಇಂದೂ ರಶಿಯನ್ನರ ಹೆಮ್ಮೆಯ ವ್ಯಕ್ತಿ. ಈತ ಹುಟ್ಟಿದ್ದು ಡೆನಿಸೋವಾ ಎಂಬ ಹಳ್ಳಿಯಲ್ಲಿ. ಆ ಹಳ್ಳಿ ಇದ್ದುದು ಕುರೊಸ್ಟ್ರೋವ್ ಎಂಬ ನಡುಗಡ್ಡೆಯಲ್ಲಿ. ಇಲ್ಲಿಯ ಜನರು ಹೆಚ್ಚಾಗಿ ಮೊಗವೀರರು (ಕೋಳಿ). ಈ ಜನ ತಮ್ಮ ವ್ಯಾಪಾರವನ್ನು ಕೇವಲ ತಮ್ಮ ನಡುಗಡ್ಡೆಗೆ ನಿರ್ದಿಷ್ಟಪಡಿಸದೆ, ನೆರೆಯ ನಾರ್ವೆ-ಸ್ವೀಡನ್‌ಗಳ ಪರ್ಯಂತ ವಿಸ್ತರಿಸಿದ್ದರು.

ಮೈಖೇಲನಿಗೆ ಶ್ರಮದ ಕೆಲಸವೆಂದರೆ ತುಂಬ ಪ್ರೀತಿ. ಹತ್ತು ವರುಷದವನಿದ್ದಾಗಲೆ ತಂದೆಯೊಂದಿಗೆ ವಿವಿಧ ದೇಶಗಳಿಗೆ ವ್ಯಾಪಾರಕ್ಕೆಂದು ಹೋಗಿದ್ದನು. ನೀರಿನ ಮೇಲೆ ತುಂಬ ಮಮತೆ ಈತನಿಗೆ; ಅದರಲ್ಲಿ, ನಾವೆಯಲ್ಲಿ ಕುಳಿತು ಹುಟ್ಟು ಹಾಕಲು ತುಂಬ ಉತ್ಸಾಹ. ಪರ್ಯಟನ ಕಾಲದಲ್ಲಿಯೇ ಪುಟ್ಟ ಬಾಲಕ ಹೊಸ ದೇಶಗಳನು ಕುತೂಹಲದಿಂದ ಅವಲೋಕಿಸಿದನು. ಅಲ್ಲಿಯ ಜನರ ನಡೆ-ನುಡಿಗಳನ್ನು ನಿರೀಕ್ಷಿಸಿದನು. ಇಂಥ ಪ್ರವಾಸದಿಂದಾಗಿಯೇ ಆತನಿಗೆ ಉದ್ದಿಮೆಗಳ ಪರಿಚಯವಾದುದು. ಯುದ್ಧದ ಮತ್ತು ವ್ಯಾಪಾರದ ನೌಕೆಗಳ ನಿರ್ಮಾಣವನ್ನು ಕಣ್ಣಾರೆ ಕಂಡು ಆಶ್ಚರ್ಯವಾಯಿತವನಿಗೆ. ಹಾಗೆಯೆ ಸಮುದ್ರದ ನೀರಿನಿಂದ ಉಪ್ಪು ತಯಾರಿಸುವ ವಿಧಾನವನ್ನು ನೋಡಿದನು. ನೋಡಿದಂತೆಲ್ಲ ಈ ಉದ್ದಿಮೆಗಳ ಕುರಿತು ವಿವರಿಸಲು ತಂದೆಗೆ ಒತ್ತಾಯಪಡಿಸಲಾರಂಭಿಸಿದನು. ಮಗನ ಈ ವಯಸ್ಸಿನಲ್ಲಿಯ ಜ್ಞಾನತೃಷ್ಣೆಯನ್ನು ಕಂಡ ಆತನ ತಂದೆ ಹಿರಿಹಿರಿ ಹಿಗ್ಗಿದ. ಆಶ್ಚರ್ಯದೊಂದಿಗೆ ಅಭಿಮಾನ ತಾಳಿದ. ಗಿಡದ ಗುಣವನು ಮೊಳಕೆಯಲ್ಲಿಯೇ ಗುರುತಿಸಬಹುದಲ್ಲವೆ ?

ಓದು-ಬರೆಹವನ್ನು ಲೋಮೊನೋಸೋವ ತೀರ ಚಿಕ್ಕ ವಯಸ್ಸಿನಲ್ಲಿ ಕಲಿತುಕೊಂಡನು. ಕೆಲವು ಪುಸ್ತಕಗಳನ್ನು ಕಂಠಪಾಠ ಕೂಡ ಮಾಡಿದ್ದ. ಬಹು ಪ್ರಯಾಸದಿಂದ ಸ್ಮಾಟ್ರಿಟ್‌ಸ್ಕಿ ವಿರಚಿತ ವ್ಯಾಕರಣವನ್ನು ಮತ್ತು ಮ್ಯಾಗ್ನಿಟ್‌ಸ್ಕಿ ಬರೆದ ಗಣಿತ ಪುಸ್ತಕಗಳನ್ನು ದೊರಕಿಸಿದನು. ಈ ಗಣಿತ ಪುಸ್ತಕವು ಆತನ ಮೇಲೆ ಅಚ್ಚಳಿಯದ ಪರಿಣಾಮವನ್ನು ಮಾಡಿತು. ಈ ಪುಸ್ತಕದಲ್ಲಿ ಕೇವಲ ಗಣಿತದ ಮೂಲ ತತ್ತ್ವಗಳ ವಿವೇಚನೆ ಮಾತ್ರವಿರದೆ, ಸ್ಥೂಲವಾಗಿ ಭೂತಶಾಸ್ತ್ರ, ಭೂಮಿತಿ, ನೌಕಾಯಾನ, ಖಗೋಲಶಾಸ್ತ್ರ ಮೊದಲಾದುವುಗಳ ಪರಿಚಯ ಕೊಡಲಾಗಿತ್ತು. ಹಾಗೆ ನೋಡಿದರೆ ಈ ಪುಸ್ತಕವು ಜ್ಞಾನಕೋಶವೇ ಸರಿ. ಈ ಪುಸ್ತಕವನ್ನು ಓದಲು ತುಂಬ ಹಿಗ್ಗು ಆತನಿಗೆ. ಆದರೆ ಈ ಪುಸ್ತಕವನ್ನು ಪಡೆಯಲು ಮತ್ತು ತನ್ನ ಹಿಗ್ಗನ್ನು ಹಿಂಗಿಸಲು ಆತನು ತೆತ್ತ ಬೆಲೆ ಎಂತಹದು ?

ಮನೆಯಲ್ಲಿ ಸುಖವಿದ್ದಿಲ್ಲ ಆತನಿಗೆ. ತಾಯಿ ಎಲೆನಾ ಈತ ಮಗುವಿದ್ದಾಗಲೇ ಮರೆಯಾದಳು. ತಂದೆ ಕೆಲವು ದಿನಗಳಲ್ಲಿಯೇ ಮರುಮದುವೆ ಮಾಡಿಕೊಂಡ. ಈಕೆಯೂ ಬಹುದಿನ ಬಾಳಲಿಲ್ಲ. ಈತನ ತಂದೆಯ ಕೈಯಲ್ಲಿ ಮೂವರು ಹೆಂಡಿರ ಗೆರೆ ಇತ್ತೇನೋ! ೧೭೨೪ರಲ್ಲಿ ಆತ ಮೂರನೆಯ ಹೆಂಡತಿಯನ್ನು ಮನೆ ತುಂಬಿಸಿಕೊಂಡನು. ಮಾತೃವಾತ್ಸಲ್ಯದಿಂದ ವಂಚಿತನಾದ ಮಗುವಿಗೆ ಸೌಖ್ಯ ಸಿಗಲು ಆತ ಪಡೆದುಬಂದಿರಬೇಕು. ಮೈಖೇಲ ಹುಟ್ಟು ದುರ್ದೈವಿ. ಮಲತಾಯಿಗೆ ಈತನನ್ನು ಕಂಡರಾಗುತ್ತಿದ್ದಿಲ್ಲ. ಹೇಗಾದರು ಮಾಡಿ

ತಂದೆ-ಮಗನ ನಡುವೆ ಬೆಕ್ಕು-ಇಲಿಯ ಮಧುರಮೈತ್ರಿಯನ್ನು ಕಲ್ಪಿಸುತ್ತಿದ್ದಳು. ಓದಿನಲ್ಲಿ ಈತನಿಗಿರುವ ಆಸ್ಥೆಯನ್ನು ಕಂಡು ಅಸಹ್ಯಪಟ್ಟ ಆ ತಾಯಿ, ಆತನ ಓದಿಗೆ ಸರ್ವ ವಿಧದ ಆತಂಕಗಳನ್ನೊಡ್ಡಲು ಹಿಂದೆಗೆಯಲಿಲ್ಲ. ಆತನ ವ್ಯಾಸಂಗದಲ್ಲಿ ಆಸ್ಥೆ ವಹಿಸಲು, ಆತನು ಆಕೆಯ ಮಗನೇ? ಮೈಖೇಲನಿಗೆ ಮೈಗಳ್ಳತನ ಮರೆಸಲು ಪುಸ್ತಕವೊಂದು ಸಾಧನವೆಂದು ಗಂಡನ ಕಿವಿಯೂದಿದಳು ಆ ಮಹಾಮಾಯೆ. ಸರಿ, ಹೆಂಡತಿಯ ಆ ಕೈಗೊಂಬೆ, ಮಗನೆಂಬುದನ್ನೂ ಮರೆತು ಆತನ ಮೈಮೇಲೆ ಬಾಸುಂಡೆಗಳನ್ನು ಮೂಡಿರುತ್ತಿದ್ದ. ಮೈಖೇಲ ಪ್ರಬುದ್ಧನಾದ ಮೇಲೆ, ತನ್ನ ತಂದೆ-ತಾಯಿಯ ಕುರಿತು ಹೀಗೆ ಬರೆದಿದ್ದಾನೆ: 'ನನ್ನ ತಂದೆ ತುಂಬ ಅಂತಃಕರಣಿ; ಆದರೆ ಆತನನ್ನು ಸುತ್ತುವರಿದ ವಾತಾವರಣ ವಿಷಮಯವಾದುದು. ನಾನೆಂದರೆ ವಿಷ ಕಾರುವ ಅಸಹಿಷ್ಣುವಾದ ಆ ನನ್ನ ತಂದೆಯ ಹೆಂಡತಿ, ನನ್ನ ತಂದೆಯ ಕ್ರೋಧ ಎಂತು ಭುಗಿಲ್ಗೊಂಡೀತೆಂದೇ ಯೋಚಿಸುವುದರಲ್ಲಿ ನಿಮಗ್ನಳಾಗಿರುತ್ತಿದ್ದಳು. ನಾನು ಓದುವುದು ನೆಪಮಾತ್ರವೆಂದು ಜರಿಯುತ್ತಿದ್ದಳಲ್ಲದೆ, 'ಓದು ಈತನಿಗೆ ಕೇಡು' ಎಂದು ಮೂದಲಿಸುತ್ತಿದ್ದಳು. ನನಗೋ, ಓದೆಂದರೆ ಊಟ ಕೂಡ ಬಿಟ್ಟುಕೊಡುವ ಬಯಕೆ. ಓದಬೇಕೆನಿಸಿದಾಗ ಆ ಮಹಾತಾಯಿಯ ಗೃಧ್ರದೃಷ್ಟಿಯನ್ನು ತಪ್ಪಿಸಬೇಕಾಗುತ್ತಿತ್ತು. ಈ ಓದಿಗೆ ಪ್ರತಿಯಾಗಿ ದಂಡವೆಂದು ಹಸಿವೆಯನ್ನು ಹತ್ತಿಕ್ಕಬೇಕಾಗುತ್ತಿತ್ತು. ಅದೆಷ್ಟೋ ಬಾರಿ ಹೊದ್ದಿಕೆಯಿಲ್ಲದೆ ಕಟುವಾದ ಚಳಿಯಲ್ಲಿಯೇ ನನ್ನ ಬಯಕೆಯನ್ನು—ಅದಮ್ಯವಾದ ಬಯಕೆಯನ್ನು, ಆ ಚಳಿಯನ್ನು ಕಡೆಗಣಿಸಿ, ತೀರಿಸಿಕೊಂಡಿದ್ದೇನೆ.' ಎಂಥ ಮಗ! ಎಂಥ ತಂದೆ-ತಾಯಿ!! ಸಹನೆಗೂ ಮಿತಿ ಇದೆಯಷ್ಟೆ? ಎಷ್ಟು ದಿನ ತಾನೇ ಕಾಡಿಯನ್ನು ಸಹಿಸಬಹುದು? ಎಷ್ಟು ದಿನ ಕಟುಮಾತುಗಳನ್ನು ಕೇಳಬಹುದು? ಎಷ್ಟು ದಿನ ನಿರಪರಾಧಿಯಾದ ನಿಷ್ಪಾಪಿಬಾಲಕ ಪೆಟ್ಟುಗಳನ್ನು ತಿನ್ನಬಹುದು? ಮಲತಾಯಿಯ ಆಳಾಗಿ ಆಕೆ ಹಾಕಿದ್ದನ್ನು ಹಾಕಿದಷ್ಟನ್ನು ತಿಂದುಕೊಂಡು ಪಶುತುಲ್ಯ ಜೀವನವನ್ನು ಕಳೆಯಬೇಕು; ಇಲ್ಲವೆ ಜ್ಞಾನದಾಹವನ್ನು ತಣಿಸಲು, ಹಡೆದ ತಾಯಿ ಇಲ್ಲದ—ತಂದೆಯ ವಾತ್ಸಲ್ಯದಿಂದ ಈ ಮನೆಗೆ ವಿದಾಯವನ್ನಾದರೂ ಹೇಳಬೇಕು. ಇತ್ತ ದರಿ—ಅತ್ತ ಹುಲಿ! ಇತ್ತ ಜ್ವಾಲೆ—ಅತ್ತ ಮಹಾಸಾಗರ! ಯಾವುದನ್ನಪ್ಪಬೇಕು? ಮೈಖೇಲ ಜ್ಞಾನಪಿಪಾಸೆಗೆ ಪ್ರಾಧಾನ್ಯ ಕೊಟ್ಟು, ಹುಟ್ಟಿದ ಮನೆಯಿಂದ ಕಣ್ಮರೆಯಾದನು. ೧೭೩೦ರ ಚಳಿಗಾಲದಲ್ಲಿ, ಆ ಮನೆಯನ್ನು ಕೊನೆಯ ಬಾರಿ ಕಣ್ತುಂಬ ಕಂಡು, ಕಣ್ಮರೆಯಾದ ತಾಯಿಯನ್ನು ಕಂಗಳ ಸ್ಫಟಿಕಸದೃಶ ಜಲದಲ್ಲಿ ಕಂಡು, ಭಾರವಾದ ಹೆಜ್ಜೆಗಳನ್ನಿಕ್ಕುತ್ತ, ಅದಕ್ಕೂ ಭಾರವಾದ ಹೃದಯದಿಂದ, ಮಾಸ್ಕೋದತ್ತ ಪ್ರಯಾಣ ಬೆಳಸಿದ. ಮಾಸ್ಕೋ ಮುಟ್ಟಿದ್ದು ೧೭೩೧ ಜನವರಿಯಲ್ಲಿ. ಆಗ ಮಾಸ್ಕೋದಲ್ಲಿದ್ದುದು Slavonic-Greek-Latin Academy ಎಂಬ ಒಂದೇ ವಿದ್ಯಾಲಯ. ಆ ವಿದ್ಯಾಲಯದಲ್ಲಿದ್ದ ವರ್ಗಗಳು ೮—ಪ್ರಾಥಮಿಕ ವರ್ಗಗಳು ೪, ಮಾಧ್ಯಮಿಕ ವರ್ಗಗಳು ೨—ಮತ್ತು ಉಳಿದೆರಡು ವರ್ಗಗಳು ಉಚ್ಚ ಶಿಕ್ಷಣಕ್ಕಾಗಿ ಕಾದಿರಿಸಿದುವುಗಳು. ಪ್ರಾಥಮಿಕ ವರ್ಗಗಳಲ್ಲಿ ಲ್ಯಾಟಿನ್, ಸ್ಲವಾನ್ ಭಾಷೆ ಮತ್ತು ಇತಿಹಾಸಗಳನ್ನು ಕಲಿಸಲಾಗುತ್ತಿತ್ತು. ಮಾಧ್ಯಮಿಕ ಶಾಲೆಯಲ್ಲಿ ಕಾವ್ಯ ಮತ್ತು ಅಲಂಕಾರಶಾಸ್ತ್ರಗಳನ್ನು ಬೋಧಿಸಲಾಗುತ್ತಿತ್ತು. ಉಚ್ಚ ಶಿಕ್ಷಣದ ಅಂಗವಾಗಿ ತತ್ತ್ವಜ್ಞಾನ ಹಾಗು ವಿಜ್ಞಾನಗಳನ್ನು ಕಲಿಸಲಾಗುತ್ತಿತ್ತು.

ಲೋಮೊನೊಸೋವ ಮನೆಬಿಟ್ಟು ಬಂದಿದ್ದರೂ, ತಂದೆಯನ್ನು ಮರೆಯಲಾಗಲಿಲ್ಲ. ಒಬ್ಬನೇ ಮಗನು ಏಕಾಕಿಯಾಗಿ ಅಲೆಯುತ್ತ ಕಷ್ಟಗಳನ್ನು ಅನುಭವಿಸುತ್ತಿರುವೆನೆಂದು ಭಾವಿಸಿ ಕಣ್ಣೀರು ಕರೆಯುತ್ತಿರುವ ತಂದೆಯ ಚಿತ್ರ ಆತನ ಕಣ್ಣೆದುರು ನಿಲ್ಲುತ್ತಿತ್ತು. ಹಾಗೆಯೆ ಬೆವರಿನಿಂದ ಸಂಪಾದಿಸಿದ ಈ ಸಂಪತ್ತು ಹೆರವರ ಪಾಲಾಗುವುದಲ್ಲಾ ಎಂಬ ತಂದೆಯ ಪ್ರಲಾಪ, ಲೋಮೊನೊಸೋವನ ಹೃದಯವನ್ನು ಕೊರೆಯುತ್ತಿತ್ತು. ಮನೆಬಿಟ್ಟು ಬಂದುದು ಪ್ರಮಾದವಾಯಿತೆಂದು ಮಾಸ್ಕೋಕ್ಕೆ ಬಂದ ಕೆಲ ದಿನಗಳಲ್ಲಿಯೇ ಆತನಿಗೆನಿಸಿತು. ದಟ್ಟ ದಾರಿದ್ರ್ಯದಲ್ಲಿ ದಿನಗಳೆಯಬೇಕಾಯಿತು. ದಿನವೊಂದಕ್ಕೆ ಆತ ವಿನಿಯೋಗಿಸುತ್ತಿದ್ದುದು ಕೇವಲ ೩ ಕೋಪೆಕ್ ಮಾತ್ರ. ಅಷ್ಟು ಹಣಕ್ಕೆ ದೊರೆಯುತ್ತಿದ್ದುದು ಕೇವಲ ಒಂದು ತುಂಡು ರೊಟ್ಟಿ. ಹಾಳೆ, ಬೂಟುಗಳಿಗಾಗಿ ಹಣದ ಅಗತ್ಯವಿತ್ತು. ಈ ದಾರಿದ್ರ್ಯದೊಂದಿಗೆ ಅವಹೇಳನೆಯೊಂದು ತಾಳ ಹಾಕಿತು. ಆತನ ವರ್ಗದ ಹುಡುಗರು ಆತನತ್ತ ಬೊಟ್ಟುಮಾಡಿ 'ಅದೋ, ಆ ಮೂರ್ಖ ಟೊಣಪನನ್ನು ನೋಡಿರಿ. ೨೦ ವರ್ಷಗಳಾಗಿವೆ ಆತನಿಗೆ. ಈಗ ಲ್ಯಾಟಿನ್ ಕಲಿಯಲು ಬಂದಿದ್ದಾನೆ' ಎಂದು ಹೇಳಿ ಕೇಕೆ ಹಾಕುತ್ತಿದ್ದರು. ಲೋಮೊನೊಸೊವನ ತಾಳ್ಮೆ ಅಸದೃಶವಾದುದು. ಬಡತನ, ಅವಮಾನ ಸಹಿಸಿ ಅಭ್ಯಾಸ ಮುಂದುವರಿಸಿದನು. ಒಂದು ವರ್ಷದಲ್ಲಿಯೇ ಮೊದಲಿನ ೨ ವರ್ಗಗಳನ್ನು ದಾಟಿ, ೩ನೆಯ ವರ್ಗದಲ್ಲಿ ಕಾಲಿಟ್ಟ. ಬರು-ಬರುತ್ತ ಪ್ರಾಧ್ಯಾಪಕರ ಮೆಚ್ಚಿಗೆಗೆ ಪಾತ್ರನಾದ. ವಿರಾಮಕಾಲವನ್ನು ವಾಚನಾಲಯದಲ್ಲಿ ಕಳೆಯುತ್ತಿದ್ದ. ಆ ವಾಚನಾಲಯದಲ್ಲಿ ದೊರೆಯುತ್ತಿದ್ದ ಧರ್ಮ-ಗ್ರಂಥಗಳನ್ನೂ, ಅಧ್ಯಾತ್ಮ ಗ್ರಂಥಗಳನ್ನೂ, ವಿಜ್ಞಾನ-ಗಣಿತ ಗ್ರಂಥಗಳನ್ನೂ ಮನನ ಮಾಡಲಾರಂಭಿಸಿದನು. ಲೋಮೊನೊಸೋವ್ ಶಾಲೆಯಲ್ಲಿ ಕಲಿಸದ ಗ್ರೀಕ ಭಾಷೆಯನ್ನು ಸ್ವತಃ ಕಲಿತು, ಆ ಭಾಷೆಯಲ್ಲಿಯ ಕಾವ್ಯದ ರಸಾಸ್ವಾದವನ್ನು ಪಡೆದುಕೊಂಡ.

ಗರ್ಭಾಶಯದ ದೋಷಗಳನ್ನು ನಿವಾರಿಸಲು ಅತ್ಯುತ್ತಮವಾದ ಸಿದ್ಧೌಷಧ
ದಿ ಸದ್ವೈದ್ಯಶಾಲಾ ಲಿ., ನಂಜನಗೂಡು
ಬ್ರಾಂಚುಗಳು: ಬೆಂಗಳೂರು, ಮೈಸೂರು, ಮಂಗಳೂರು, ಹುಬ್ಬಳ್ಳಿ
ಯಾವಾಗಲೂ ನಂಜನಗೂಡು ಟೂತ್ ಪೌಡರ್ ಉಪಯೋಗಿಸಿರಿ

ಆತ ಮಾಸ್ಕೋದಲ್ಲಿಯ ಎಲ್ಲ ವಾಚನಾಲಯಗಳಿಗೂ ಸಂದರ್ಶನವನ್ನಿತ್ತು, ತನಗೆ ಬೇಕಾದ ವಿಷಯಗಳನ್ನು ಸಂಗ್ರಹಿಸಿದ. ಆತನು ಮೆಚ್ಚಿದ ವಾಚನಾಲಯವೆಂದರೆ ಪ್ರಿಂಟ್‌ಶಾಪ್ ವಾಚನಾಲಯ (Print–Shop Library). ಈ ವಾಚನಾಲಯದಲ್ಲಿ ಗ್ರೀಕ್, ಲ್ಯಾಟಿನ್, ಪೋಲಿಷ್, ಸ್ಲಾವೋನಿಕ್, ಜರ್ಮನ್ ಮತ್ತಿತರ ಭಾಷೆಗಳಲ್ಲಿ ಬರೆದ ಹೊತ್ತಗೆಗಳಿದ್ದುವು. ಆಗ ಲ್ಯಾಟಿನ್ನಿನ ಅಭ್ಯಾಸ ಅತ್ಯಾವಶ್ಯಕವಾಗಿತ್ತು. ಏಕೆಂದರೆ ವೈಜ್ಞಾನಿಕ ಪುಸ್ತಕಗಳನ್ನು ಹೆಚ್ಚಾಗಿ ಲ್ಯಾಟಿನ್ನಿನಲ್ಲಿ ಬರೆಯುತ್ತಿದ್ದರು. ಲ್ಯಾಟಿನ್ನಿನ ಮೇಲೆ ಲೋಮೊನೊಸೋವ್ ಸಾಕಷ್ಟು ಪ್ರಭುತ್ವವನ್ನು ಸಂಪಾದಿಸಿದ. ಪ್ರಾಕೃತಶಾಸ್ತ್ರದಲ್ಲಿ ತುಂಬ ಆಸಕ್ತಿ ಲೋಮೊನೊಸೋವನಿಗೆ; ಆದರೆ ಮಾಸ್ಕೋದಲ್ಲಿಯ ವಿದ್ಯಾಲಯದಲ್ಲಿ ಈ ಶಾಸ್ತ್ರಕ್ಕೆ ಆಸ್ಪದವಿದ್ದಿಲ್ಲ, ಹೀಗಾಗಿ ಕೀವದಲ್ಲಿಯ Theological Academyಗೆ ಪ್ರವೇಶ ಪಡೆಯಬಯಸಿದನು. ಪ್ರವೇಶವೇನೋ ದೊರೆಯಿತು; ಆದರೆ ಮನಸ್ಸಮಾಧಾನ ಮಾತ್ರ ದೊರೆಯಲಿಲ್ಲ, ಆ ಅಕಾಡಮಿಯಲ್ಲಿ ಭೌತ ಮತ್ತು ರಸಾಯನ ಶಾಸ್ತ್ರಗಳನ್ನು ಕಲಿಸುತ್ತಿದ್ದಿಲ್ಲ. ಧರ್ಮಗ್ರಂಥಗಳನ್ನು ಆತ ಇಲ್ಲಿ ಓದಬೇಕಾಯಿತು. ಕೀವದಲ್ಲಿ ಒಂದು ವರ್ಷ ಕಳೆಯುವುದೇ ಕಷ್ಟಸಾಧ್ಯವಾಯಿತು. ತಾನು ಮೋಸಹೋದದ್ದು ವ್ಯಗಪಲಕ್ಕೆಂದರಿತನು. ಮತ್ತೆ ೧೭೩೪ರಲ್ಲಿ ಮಾಸ್ಕೋ ಸೇರಿದನು. ಮಾಸ್ಕೋ ವಿದ್ಯಾಲಯದಿಂದ ಪದವಿ ಪಡೆದ ಮೇಲೆ ಪಾದ್ರಿಯಾಗುವುದು ಸುಲಭಸಾಧ್ಯವಿತ್ತು. ಆದರೆ ಈ ಬಗೆಯ ಜೀವನ ಆತ ಬಯಸಿದ್ದೇ? ಆತನ ಬದುಕಿನ ಆದರ್ಶವೇನು? ಯಾವ ಹುಚ್ಚು ಹಂಬಲದಿಂದ ಮನೆಬಿಟ್ಟದ್ದು? ಕಿಂಕರ್ತವ್ಯನಾದ ಲೋಮೊನೊಸೋವ. ನಿರಾಶೆಯ ಅಂತ್ಯಕ್ಕೆ ಆಶಾಂಕುರವೇನೋ! ೧೭೩೫ರ ಬೇಸಗೆಯಲ್ಲೊಂದು ದಿನ, ಅಕಾಡಮಿಯ ರೆಕ್ಟರರಿಂದ ಕರೆಯೋಲೆ ಬಂದಿತು. ಈ ಕರೆಯ ಉದ್ದೇಶವೇನಿರಬಹುದು? ಅದೂ ಇಷ್ಟು ತ್ವರಿತವೆಂದ ಮೇಲೆ? ತನ್ನಿಂದ ಎಂಥ ತಪ್ಪುಗಳಾಗಿವೆ?—ಎಂಬ ಪ್ರಶ್ನಮಾಲೆ ಆತನನ್ನು ನಿದ್ದೆಯಿಂದ ಬಡಿದೆಬ್ಬಿಸಿತು. ಮಾರನೆಯ ದಿನ ಭಾರವಾದ ಹೃದಯದಿಂದ, ಭೀತನಾದ ಲೋಮೊನೊಸೋವ್ ಬಲವಂತದ ಹೆಜ್ಜೆಗಳನ್ನಿಡುತ್ತ, ರೆಕ್ಟರರ ಕೋಣೆಯಲ್ಲಿ ಪ್ರವೇಶಿಸಿದ. ಆಶ್ಚರ್ಯ! ಅಲ್ಲಿ ಆತನಿಗೆ ಶುಭಸಂದೇಶ ಕಾದಿತ್ತು. ಉಚ್ಚ ಶಿಕ್ಷಣ ಕೈಕೊಳ್ಳಲು ಆರಿಸಲಾದ ವಿದ್ಯಾರ್ಥಿಗಳಲ್ಲಿ ಈತನ ಹೆಸರು ಸಮಾವೇಶವಾಗಿತ್ತು. 'ಪೀಟರ್ಸ್‌ಬರ್ಗಿನಲ್ಲಿ ಉಚ್ಚ ಶಿಕ್ಷಣ.' ಲೋಮೊನೊಸೋವ್, ರೆಕ್ಟರರು ಅರುಹಿತ ವಾರ್ತೆಯನ್ನು ಪುನಃ ಪುನಃ ಪಠಿಸಿದ ಮನಸ್ಸಿನಲ್ಲಿ. ಆನಂದ ಬಾಷ್ಪಗಳುದರಿದುವು ಕೃತಜ್ಞತಾರ್ಪಣೆಯ ಬಗೆಯನ್ನರಿಯದೆ ಮೂಕ ವಂದನೆಯನ್ನು ರೆಕ್ಟರರಿಗೆ ಸಲ್ಲಿಸಿ ಕೋಣೆಗೆ ಮರಳಿದ. 'ಆಹಾ! ಬಾಲ್ಯದ ಬಯಕೆ ಕೈಗೂಡಲಿದೆ.' ಆನಂದತುಂದಿಲನಾದ ಲೋಮೊನೊಸೋವ್. ಕಾಣದ ಕೈಯ ಕೈವಾಡ ಕಂಡವರಾರು?

ದೊರೆ ಪೀಟರನಿಗೆ, ರಸಿಯಾದ ನೈಸರ್ಗಿಕ ಸಂಪತ್ತಿನ ಪರಿಚಯ ಮಾಡಿಕೊಂಡು ಅದರ ಸದುಪಯೋಗವನ್ನು ಮಾಡಿಕೊಳ್ಳಬೇಕೆಂಬುದೇ ಮಹಾ ಯೋಚನೆ. ತನ್ನ ರಾಜ್ಯದಲ್ಲಿಯ ಪ್ರತಿಭಾವಂತರಿಗೆ ಒಂದೆರಡು ವಿಭಾಗದಲ್ಲಿ ಅಭ್ಯಾಸ ಕೈಕೊಳ್ಳಲು ಬಲವಂತಪಡಿಸಿದನು. ಸುಸಜ್ಜಿತ ಮದ್ದಿನ ಕಾರಖಾನೆಗಳ ಮತ್ತು ನೌಕಾಪಡೆಯ ಅಗತ್ಯ ದೇಶಕ್ಕಿತ್ತು. ಆತನ ಈ ಯೋಚನೆ ಫಲಪ್ರದವಾಗಲು ಯಂತ್ರವಿಶಾರದರ, ಖಗೋಲಶಾಸ್ತ್ರಜ್ಞರ, ಗಣಿತಜ್ಞರ ಸಕ್ರಿಯ ಸಹಕಾರ ಅವಶ್ಯವಿತ್ತು. ಪೀಟರ್ ತಾನೇ ಮುಂದಾಗಿ ವೈಜ್ಞಾನಿಕ ಸಾಹಿತ್ಯಪ್ರಕಟಣೆಯನ್ನು ಕೈಕೊಂಡನು. ರಾಜನ ಈ ಬಗೆಯ ವರ್ತನೆ ಧರ್ಮಗುರುಗಳ ದೃಷ್ಟಿಯಲ್ಲಿ ದುರ್ವರ್ತನೆಯಾಗಿ ಕಂಡುಬಂದಿತು. ಅವರ ದೃಷ್ಟಿಯಲ್ಲಿ ಗಣಿತ ಮತ್ತು ವೈಜ್ಞಾನಿಕ ವಿಷಯಗಳು ನಾಸ್ತಿಕ ವಿಷಯಗಳು. ಪೀಟರ್ ಧರ್ಮಗುರುಗಳ ಪೊಳ್ಳು ಬೆದರಿಕೆಗೆ ಸೊಪ್ಪು ಹಾಕದೆ, ಪೀಟರ್ಸ್‌ಬರ್ಗದಲ್ಲಿ ಅಕಾಡಮಿಯನ್ನು ಸ್ಥಾಪಿಸಿದನು. ಇಲ್ಲಿ ಅಧ್ಯಾಪನಕ್ಕಾಗಿ ಯುರೋಪದ ಪ್ರಾಕೃತ ಶಾಸ್ತ್ರಜ್ಞರನ್ನು ಆಮಂತ್ರಿಸಲಾಗಿತ್ತು. ಈ ಅಕಾಡಮಿಗೆ ಸಂಲಗ್ನವಾಗಿ ಒಂದು ಮಾಧ್ಯಮಿಕ ಶಾಲೆ ಮತ್ತು ಒಂದು ವಿಶ್ವವಿದ್ಯಾಲಯವಿದ್ದುವು. ಮಾಧ್ಯಮಿಕ ಶಾಲೆಯ ಹೊಣೆ ವಿದ್ಯಾರ್ಥಿಗಳನ್ನು ವಿದ್ಯಾಲಯದ ಶಿಕ್ಷಣಕ್ಕೆ ತರಬೇತುಗೊಳಿಸುವುದು. ಸಾಕಷ್ಟು ಸಂಖ್ಯೆಯಲ್ಲಿ ಬುದ್ಧಿವಂತ ವಿದ್ಯಾರ್ಥಿಗಳು ಈ ಶಾಲೆಗೆ ದೊರೆಯದ್ದರಿಂದ, ಅಕಾಡಮಿ ಮುಚ್ಚುವ ಸಂಭವವೂ ಇತ್ತು. ಇದನ್ನರಿತ ಅಕಾಡಮಿಯ ಅಧಿಕಾರಿ, ಕೊನೆಯ ಮಾರ್ಗವೆಂದು ರಶಿಯಾದ ಎಲ್ಲ ಶಾಲೆಗಳಿಗೆ ಜಾಣ ವಿದ್ಯಾರ್ಥಿಗಳನ್ನು ಆಯ್ಕೆಮಾಡಿ ಪೀಟರ್ಸ್‌ಬರ್ಗಿಗೆ ಕಳಿಸಲು ಕೇಳಿಕೊಂಡನು. ಆಯ್ಕೆ ಹೊಂದಿ ಪೀಟರ್ಸ್‌ಬರ್ಗ್ ಸೇರಿದ ಹಲ ವಿದ್ಯಾರ್ಥಿಗಳಲ್ಲಿ, ಲೋಮೊನೊಸೋವನೂ ಒಬ್ಬ. ಇಲ್ಲಿ ಆತ ಜರ್ಮನ್, ಲ್ಯಾಟಿನ್, ಗಣಿತ, ಅಲಂಕಾರ ಶಾಸ್ತ್ರ, ಭೂಗೋಲ, ಇತಿಹಾಸ ಮತ್ತು ನೃತ್ಯಗಳ ಅಭ್ಯಾಸವನ್ನು ಅತ್ಯುತ್ಸಾಹದಿಂದ ಮುಂದುವರಿಸಿದ. ಪೀಟರ್ಸ್‌ಬರ್ಗಿನಲ್ಲಿಯೇ ಆತನ ಕನಸುಗಳು ನನಸಾದುದು. ಬಾಲ್ಯದಲ್ಲಿ ಹಸಿವೆಯನ್ನು ಹತ್ತಿಕ್ಕಿ ಹೊಡೆತಕ್ಕೆ ಹಿಮ್ಮೆಟ್ಟದೆ ಓದುತ್ತಿದ್ದ ವಿಷಯ, ಇಂದು ವಿದ್ವಾಂಸರ ನೇತೃತ್ವದಲ್ಲಿ ಸರಾಗವಾಗಿ ಸಾಗುತ್ತಿದೆ. ಮನಮೆಚ್ಚಿದ ವಿಷಯಗಳ ಅಭ್ಯಾಸ, ಪ್ರೀತಿಯಿಂದ ಕಾಣುವ ಪ್ರಾಧ್ಯಾಪಕರ ಸಾನ್ನಿಧ್ಯದಲ್ಲಿ ಸರಾಗವಾಗಿ ಸಾಗಿ, ಈತನ ಬುದ್ಧಿಯ ತೀಕ್ಷ್ಣತೆ ಬಹುಬೇಗ ಬೆಳಕಿಗೆ ಬಂದಿತು. ಆತನ ಕುಶಾಗ್ರ ಬುದ್ಧಿ ಆತನ ಜೀವನದಲ್ಲಿ ನವೀನ ಅಧ್ಯಾಯವನ್ನೇ ತೆರೆಯಿತು. ಪೀಟರ್ಸ್‌ಬರ್ಗಿಗೆ ಬಂದು ಒಂದು ವರುಷ ಕೂಡ ಕಳೆದಿರಲಿಲ್ಲ, ಈತನನ್ನು ಉಚ್ಚಶಿಕ್ಷಣಕ್ಕಾಗಿ ಜರ್ಮನಿಗೆ ಅಕಾಡಮಿಯವರು ಕಳಿಸಬಯಸಿದರು. ಈತನನ್ನು ಕಳಿಸಿದ್ದು ಫ್ರೇಬರ್ಗಕ್ಕೆ—ಸುಪ್ರಸಿದ್ಧ ಖನಿಜಶಾಸ್ತ್ರಜ್ಞನಾದ ಹೆರಿಕೆಲ್ಲನ ಗುರುತ್ವದಲ್ಲಿ, ಖನಿಜ ಶಾಸ್ತ್ರದ ಅಭ್ಯಾಸ ಕೈಕೊಳ್ಳಲೆಂದು. ಖನಿಜಶಾಸ್ತ್ರದ ಅಭ್ಯಾಸ ಪ್ರಾರಂಭಿಸುವ ಮೊದಲು, ಭೌತಶಾಸ್ತ್ರ, ಯಂತ್ರಶಾಸ್ತ್ರ, ಗಣಿತ ಮತ್ತು ರಸಾಯನಶಾಸ್ತ್ರಗಳ ಬಗ್ಗೆ ಸಾಕಷ್ಟು ಪರಿಚಯವಿರುವುದು ಅಗತ್ಯವೆಂದು ತಿಳಿದ ಆ ಅಕಾಡಮಿಯವರು, ಇವನನ್ನು ಮತ್ತು ಇಬ್ಬರು ವಿದ್ಯಾರ್ಥಿಗಳನ್ನು ಈ ವಿಷಯಗಳನ್ನು ಕಲಿಸುತ್ತಿದ್ದ ಮಾರ್ಬುರ್ಗ್ ವಿದ್ಯಾಲಯಕ್ಕೆ ಕಳಿಸಿದರು. ವಿದೇಶಕ್ಕೆ ಹೊರಡುವ ಮುನ್ನ ವಿದೇಶ

ದಲ್ಲಿಯು ಇವರ ನಡೆ-ನುಡಿ ಎಂತಿರಬೇಕೆಂಬುದನ್ನು ತಿಳಿಹೇಳಿದ್ದಲ್ಲದೆ, ರಶಿಯನ್, ಜರ್ಮನ್, ಲ್ಯಾಟಿನ್ ಮತ್ತು ಫ್ರೆಂಚ್ ಭಾಷೆಗಳ ಮೇಲೆ ಸಾಕಷ್ಟು ಪ್ರಭುತ್ವವನ್ನು ಪಡೆಯುವುದರ ಅಗತ್ಯವನ್ನು ಈ ತರುಣರಿಗೆ ವಿವರಿಸಿದರು. ಅವರೀ ಉಚ್ಚಶಿಕ್ಷಣ, ರಶಿಯಾದ ಸರ್ವಾಂಗೀಣ ಉನ್ನತಿಗಾಗಿ ವಿನಿಯೋಗಿಸಲ್ಪಡಲಿದೆಯೆಂಬುದನ್ನು ಹೇಳಲಾಗಿತ್ತು.

೮ ಸೆಪ್ಟೆಂಬರ್ ೧೭೩೬ರಂದು, ಲೋಮೊನೊಸೋವ್ ಫರ್ಬೋಟಾಜ್ ಹಡಗನ್ನೇರಿದನು. ಆದರೆ ಮುಹೂರ್ತ ಒಳ್ಳೆಯದಿರಲಿಲ್ಲ. ಏನೋ! ಹಡಗು ದಂಡೆಯಿಂದ ದೂರಸರಿಯುತ್ತಿದ್ದಂತೆಯೇ ಹವಾಮಾನ ಪ್ರಬಲ ವಿರೋಧಿಯಾಗಿ ತೋರಿಬಂತು. ಬಲವಾದ ತೆರೆಗಳು ಹಡಗಿಗೆ ಅಪ್ಪಳಿಸತೊಡಗಿದುವು. ಬಿರುಗಾಳಿ ಬೀಸಲಾರಂಭಿಸಿತು. ಹಡಗು ದಡಕ್ಕೆ ಹಿಂತಿರುಗುವುದು ಅನಿವಾರ್ಯವಾಯಿತು. ಸೆಪ್ಟೆಂಬರ್ ೧೯ಕ್ಕೆ ಹಡಗು ಜಲಪರ್ಯಟನೆಗಾರಂಭಿಸಿತು. ೬ ವಾರಗಳ ನಂತರ ಈ ತರುಣರನ್ನು ನವೆಂಬರ್ ೩ರಂದು ಮಾರ್ಬರ್ಗ್‌ಕ್ಕೆ ತಲ್ಪಿಸಿತು. ಮೂವರು ತರುಣರೂ ಪ್ರವಾಸದ ದಣಿವನ್ನಾರಿಸಿಕೊಂಡು, ಪ್ರಾಧ್ಯಾಪಕ ಕ್ರಿಶ್ಚನ್ ಊಲ್ಫನನ್ನು ಕಾಣಹೋದರು. ಊಲ್ಫ ಈ ತರುಣರನ್ನು ಹೃತ್ಪೂರ್ವಕವಾಗಿ ಸ್ವಾಗತಿಸಿದ. ದೊರೆಯ ಆಪ್ತ ಮಿತ್ರನಾದ ಊಲ್ಫನಿಂದ ಎಂಥ ಉಡುಗೊರೆ ಕಾದಿದೆಯೆಂದು ಭೀತರಾದ ತರುಣರನ್ನು, ಆತನ ಮೃದುಸ್ವಭಾವ, ಮತ್ತು ಸೌಹಾರ್ದತೆ ಆಕರ್ಷಿದುವು. ಊಲ್ಫನ ಉದ್ದಾಮ ಪಾಠಗಳನ್ನು ಕಿವಿಯುಗಲಿಸಿ ಕೇಳಿದರು. ಆತನ ಗಣಿತದ ಪಾಠಗಳಂತೂ ಇವರಿಗೆ ತುಂಬ ಮೆಚ್ಚಿಕೆಯಾದುವು. ಹಕ್ಕಿ ಆಕಾಶದಲ್ಲಿ ಸರಾಗವಾಗಿ ಸಾಗುವಷ್ಟು ಸಹಜವಾಗಿ, ಸುಲಭವಾಗಿ ಗಣಿತವನ್ನು ಕಲಿಸುತ್ತಿದ್ದ ಊಲ್ಫ. ಆತನ ರೀತಿಯನ್ನೇ ಆದರ್ಶವಾಗಿಟ್ಟುಕೊಳ್ಳಬಯಸಿದ ಲೋಮೊನೊಸೋವ್.

ಮಾಸ್ಕೋದಲ್ಲಿದ್ದಾಗ ಯಾವಾಗಲು ಪ್ರಾಧ್ಯಾಪಕರ ಅಂಕಿತದಲ್ಲಿರುತ್ತಿದ್ದ ಈ ತರುಣನಿಗೆ ಮಾರ್ಬರ್ಗ್ ವಿದ್ಯಾರ್ಥಿಗಳ ಸ್ವಚ್ಛಂದ ವರ್ತನೆ ದಿಗ್ಭ್ರಮೆಗೊಳಿಸಿತು. ಆರ್ಥಿಕ ಸ್ಥಿತಿಯೂ ತೃಪ್ತಿಕರವಿತ್ತು. ಮಾಸ್ಕೋದಲ್ಲಿ ಸಿಗುತ್ತಿದ್ದ ವಿದ್ಯಾರ್ಥಿವೇತನದ ೭೦ ಪಟ್ಟು ವೇತನ ಇಲ್ಲಿ ದೊರೆಯುತ್ತಿತ್ತು. ಸಮಾಜಜೀವಿಯಾದ ಲೋಮೊನೊಸೋವನಿಗೆ ಇಲ್ಲಿಯ ವಾತಾವರಣಕ್ಕೆ ಹೊಂದಿಕೊಳ್ಳಲು ಹೆಚ್ಚು ವೇಳೆ ಹಿಡಿಯಲಿಲ್ಲ. ಒಂದು ವರ್ಷದೊಳಗಾಗಿಯೇ ಜರ್ಮನ್ ಭಾಷೆಯ ಮೇಲೆ ಪ್ರಭುತ್ವ ಸಂಪಾದಿಸಿದ. ಮಾರ್ಬರ್ಗ್‌ನಲ್ಲಿ ೩ ವರುಷವಿದ್ದು, ಅಲ್ಲಿಯ ಶಿಕ್ಷಣವನ್ನು ತೃಪ್ತಿಕರವಾಗಿ ಪೂರೈಸಿ, ಗುರು ಊಲ್ಫನ ಮೆಚ್ಚಿಕೆಗೆ ಪಾತ್ರನಾದ ಲೋಮೊನೊಸೋವ. ಈತನ ಮೇಲೆ ತುಂಬು ಮಮತೆ ಊಲ್ಫನಿಗೆ. ಲೋಮೊನೊಸೋವನಿಗೆ ಊಲ್ಫನಿತ್ತ ಪ್ರಶಂಸಾ ಪಾತ್ರ ಗಮನಾರ್ಹವಾದುದು:

....A young man of great ability....He is very eager to acquire thorough knowledge and I have no doubt that, in due course, if he continues to apply the same devotin to his studies, he will be able to work for the benefit of his country.

ಎಂದರೆ: ವಿಷಯದ ಸಂಪೂರ್ಣ ಜ್ಞಾನವನ್ನು ಪಡೆದುಕೊಳ್ಳಬೇಕೆಂಬ ಹಂಬಲ ಈತನಿಗಿದೆ. ಇದೇ ಶ್ರದ್ಧೆಯಿಂದ ಅಭ್ಯಾಸ ಮುಂದುವರಿಸಿದರೆ, ರಾಷ್ಟ್ರದ ಕಲ್ಯಾಣ ಈತನಿಂದ ಸಾಧಿಸುವುದರಲ್ಲಿ ಸಂದೇಹವಿಲ್ಲ.

ಮೂವರೂ ಮಿತ್ರರು ಖನಿಜಶಾಸ್ತ್ರದ ಅಭ್ಯಾಸಕ್ಕೆಂದು ಫ್ರೇಬರ್ಗ್‌ಕ್ಕೆ ಜುಲೈ ೨೪, ೧೭೩೯ರಂದು ಬಂದರು. ಇಲ್ಲಿ ಲೋಮೊನೊಸೋವನ ಅಭ್ಯಾಸ ಸರಾಗವಾಗಿ ಸಾಗಲಿಲ್ಲ. ಪ್ರಾಧ್ಯಾಪಕ ಹೆಂಕೆಲ್ ಮತ್ತು ಈತನಿಗೆ ಪ್ರಾರಂಭದಿಂದಲೇ ತಿಕ್ಕಾಟ. ಲೋಮೊನೊಸೋವನ ಮುಂಗೋಪಿತನ ಮತ್ತು ಅನಾಜ್ಞಾಧಾರಕತೆಯಿಂದ ಬೇಸತ್ತ ಹೆಂಕೆಲ್ ಪೀಟರನಿಗೆ ದೂರಿಕೊಂಡ. ದಿನಗಳೆದಂತೆ ಪರಿಸ್ಥಿತಿ ವಿಷಮಿಸಿತು. ಹೆಂಕಲನ ವಿದ್ಯುತ್ತಿ ನೀರಗುಳ್ಳೆಯಂತೆ ಕಂಡಿತು ಲೋಮೊನೊಸೋವನಿಗೆ. ಹೆಂಕೆಲ್‌ನಿಂದ ಪಡೆಯುವ ವಿದ್ಯೆ ಎಂದರೆ ಕಟ್ಟಿದ ಬುತ್ತಿಯಂತೆ. ಈತನ ಶಿಕ್ಷಣಕ್ರಮ ಪ್ರಾಚೀನವಾದುದೆಂದೂ, ವೈಜ್ಞಾನಿಕ ಪ್ರಗತಿಯನ್ನು ಹೆಂಕೆಲ್ ಗಮನಿಸಿಲ್ಲೆಂದೂ ಲೋಮೊನೊಸೋವ್ ತೆಗಳಿದನು. ನಿತ್ಯವೂ ನಡೆಯಲಾರಂಭಿಸಿದ ವಾಗ್ಯುದ್ಧವನ್ನು ತಪ್ಪಿಸಲೆಂದು, ಹೆಂಕೆಲ್‌ನ ವರ್ಗಕ್ಕೆ ಹೋಗಲಿಲ್ಲ ಈತ. ಗುರುವಿನಲ್ಲಿ ಪಾಂಡಿತ್ಯ ಕಾಣದ ಲೋಮೋನೊಸೋವ್ ಫ್ರೇಬರ್ಗ್ ಬಿಡಬಯಸಿದ. ಆಗಿನ್ನೂ ಒಂದು ವರುಷ ಕೂಡವಾಗಿರಲಿಲ್ಲ. ಮೇ ೧೭೪೦ರಂದು ಫ್ರೇಬರ್ಗ್‌ಕ್ಕೆ ಕೊನೆಯ ಪ್ರಣಾಮ ಹೇಳಿದ. ಆಗ ಆತನಲ್ಲಿ ಸಾಕಷ್ಟು ಹಣ ಕೂಡ ಇರಲಿಲ್ಲ. ಹತಾಶನಾದ ಲೋಮೊನೊಸೋವ್ ಮಾತೃಭೂಮಿಗೆ ಮರಳುತ್ತಿದ್ದಂತೆ, ಮಾರ್ಗದಲ್ಲಿಯೇ ಕೆಲ ಹಿತಚಿಂತಕರು ಮರಳಿ ಜರ್ಮನಿಗೆ ತೆರಳಲು ಹೇಳಿದರು. ಮಾರ್ಗದಲ್ಲಿ ಒದಗಿದ ವಿಪತ್ತುಗಳಿಗೆ ಕೊನೆ ಇಲ್ಲ. ಕೈಯಲ್ಲಿ ಕಾಸಿಲ್ಲ. ಹೊಟ್ಟೆಯಲ್ಲಿ ಅನ್ನವಿಲ್ಲ. ಹೀಗಾಗಿ, ಕೆಲ ಹಾದಿಯನ್ನು ನಡೆಯಬೇಕಾಯಿತು. ಮೇಲಾಗಿ ಮನಸ್ಸಿನಲ್ಲಿ ಭವಿಷ್ಯದ ಬಗ್ಗೆ ವಿಚಾರಗಳ ಕೋಲಾಹಲ. 'ಆಗಲಿ, ಬಂದದ್ದೆಲ್ಲ ಬರಲಿ' ಎಂದು ಮಾತೃಭೂಮಿಗೇ ಮುನ್ನಡೆದ ಧೀರ. ಶಿಷ್ಯವೃತ್ತಿ ಕೊಡಮಾಡಿದ ಕಾಲಕ್ಕೆ ಗೊತ್ತುಪಡಿಸಿದ ಅಧಿ. ನಿಯಮಗಳಿಗೆ ಅಧೀನನಾಗಿ ವರ್ತಿಸದೆ ಹೋದ ಲೋಮೊನೊಸೋವನ ಮೇಲೆ, ಸರಕಾರ ಉಗ್ರಕ್ರಮಗಳನ್ನು ಕೈಕೊಳ್ಳದಿದ್ದುದು ಅವನ ಸುದೈವವೇ ಸರಿ. ಮಾರ್ಬರ್ಗದಲ್ಲಿಯೆ ಗಣಿತ, ತತ್ತ್ವಜ್ಞಾನ, ತರ್ಕಶಾಸ್ತ್ರ, ಭೌತಶಾಸ್ತ್ರ, ರಸಾಯನಶಾಸ್ತ್ರ, ಖನಿಜಶಾಸ್ತ್ರ, ಮತ್ತು ಖನಿಜಗಳ ಶುದ್ಧೀಕರಣಗಳ ಕುರಿತು ಅಭ್ಯಸಿಸಿ ಸಾಕಷ್ಟು ಪ್ರಭುತ್ವವನ್ನು ಸಂಪಾದಿಸಿದ್ದ. ಹಾಗೆಯೆ ಯುರೋಪಿನ ಪ್ರಮುಖ ಭಾಷೆಗಳ ಪರಿಚಯವಾಗಿತ್ತವನಿಗೆ. ಈ ಜ್ಞಾನದ ಆಧಾರದ ಮೇಲೆಯೇ ತನಗೆ ನೌಕರಿ ದೊರೆಯಬಹುದಾಗಿ ಭಾವಿಸಿದ. ಜೂನ್ ೮, ೧೭೪೧ಕ್ಕೆ ಪೀಟರ್ಸ್‌ಬರ್ಗಿಗೆ ಬಂದಾಗ, ಹೇಳಿಕೊಳ್ಳುವಂಥ ನೌಕರಿ ಸಿಗಲಿಲ್ಲ. ರಶಿಯದ ಖನಿಜ ಸಂಪತ್ತಿಯ ಪಟ್ಟಿಯನ್ನು ತಯಾರಿಸುವ ಕೆಲಸ ದೊರೆಯಿತು. ಲೋಮೊನೊಸೋವ ಮತ್ತು ಇಬ್ಬರು ತರುಣರಿಗೆ,

ಉಚ್ಚ ಶಿಕ್ಷಣವನ್ನು ಯಶಸ್ವಿಯಾಗಿ ಪೂರಯಿಸಿದೊಡನೆ, ಪ್ರಾಧ್ಯಾಪಕ ಸ್ಥಾನ ಕೊಡುವುದಾಗಿ ಆಶ್ವಾಸನ ಕೊಡಲಾಗಿತ್ತು. ಲೋಮೊನೊಸೋವನಿಗೆ, ಶಿಕ್ಷಣ ಪೂರಯಿಸದ ಆತಂಕವಿದ್ದರೂ, ಜಾನೇವರಿ ೧೭೪೨ರಂದು ಶಿಕ್ಷಣಾಧಿಕಾರಿಗಳಿಗೆ ಒಂದು ಮನವಿಯನ್ನು ಬರೆದನು. ಆ ಮನವಿಯಲ್ಲಿ ತನಗೆ ಭೌತ, ರಸಾಯನ ಮತ್ತು ಖನಿಜ ಶಾಸ್ತ್ರಗಳ ಮೇಲೆ ಪ್ರಭುತ್ವವಿದೆಯೆಂದೂ, ಆ ವಿಷಯಗಳ ಕುರಿತು ಅಧಿಕಾರದಿಂದ ಮಾತನಾಡುವ ಸಾಮರ್ಥ್ಯವಿದೆಯೆಂದೂ ಕಾಣಿಸಿದ್ದನಲ್ಲದೆ, ಪ್ರಾಧ್ಯಾಪಕನನ್ನಾಗಿ ಮಾಡಲು ಯಾವುದೇ ಅಭ್ಯಂತರವಿಲ್ಲೆಂದೂ ಸೂಚಿಸಿದ್ದ. ಆತನ ಸುದೈವದಿಂದ ಪೀಟರ್ಸ್‌ಬರ್ಗ್ ಅಕಾಡಮಿಯಲ್ಲಿ ಪ್ರಾಧ್ಯಾಪಕನನ್ನಾಗಿ ನಿಯಮಿಸಲಾಯಿತು. ಕೊಡಮಾಡಿದ ವೇತನ ವರ್ಷಕ್ಕೆ ೩೬೦ ರೂಬಲ್ಲುಗಳು ಮಾತ್ರ. ಅಂದಿನ ಸರಕಾರದ ಕಾರ್ಯ-ಕ್ಷಮತೆಯನ್ನು ಎಷ್ಟು ಕೊಂಡಾಡಿದರೂ ಸಾಲದು. ಈ ವೇತನ ಒಂದು ಸಂಸಾರಕ್ಕೆ ಸಾಕಾಗುವಷ್ಟಿದ್ದರೂ, ವೇತನವನ್ನು ನಿಯಮಿತ-ವಾಗಿ ಕೊಡುವ ಪರಿಪಾಠ ಆ ಅಕಾಡಮಿಯಲ್ಲಿರಲಿಲ್ಲ. ಎಲಿಝಾಬೇತ್‌ಳೊಂದಿಗೆ ಲಗ್ನವಾದ ಲೋಮೊನೊಸೋವನಿಗೆ, ನಲ್ಲೆಯ ಸಹವಾಸ ಸಿಗುವುದು ಈ ವೇತನದಿಂದಾಗಿ ದುರ್ಲಭವಾಗಿತ್ತು. ಆದೇ ತಾನೇ ಮದುವೆಯಾದ ಲೋಮೊನೊಸೋವನಿಗೆ, ಸಂಗತಿಯೊಂದಿಗೆ ಸರಸ ಸಲ್ಲಾಪಗಳನ್ನು ಸೂರೆಗೊಂಡು ಸಂಸಾರದೋಟದಲ್ಲಿ ಆನಂದದಿಂದ ವಿಹರಿಸುವ ಸೌಭಾಗ್ಯ, ಸರಕಾರದ ಕಾರ್ಯಕ್ಷಮತೆಗಾಗಿ, ಸಿಗುವಂತಿರಲಿಲ್ಲ. ಒಮ್ಮೆಯಂತೂ, ಇಡೀ ವರುಷ ವೇತನ ದೊರೆಯಲಿಲ್ಲ ಆಗ ಆತ ಪಟ್ಟಪಾಡು ಹೇಳಲಾಸಲ್ಲ. ಕೈಯಲ್ಲಿ ಕಾಸಿಲ್ಲದ್ದರಿಂದ ಹೊಟ್ಟೆಗಿಷ್ಟು ಹಿಟ್ಟು ದೊರೆಯುವುದೂ ಅಸಾಧ್ಯವಾಯಿತು. ಬೇನೆ ಬಿದ್ದಾಗ ಔಷಧಿಗೊಂದು ಬಿಡಿಕಾಸು ಸಿಗುವುದು ದುರ್ಲಭವಾಯಿತು. ಮೇಲಾಗಿ ಆ ಅಕಾಡಮಿಯಲ್ಲಿ ಅಸಂತುಷ್ಟಿ ತಾನೇ ಮೈವೆತ್ತಿತ್ತು. ಇದಕ್ಕೆ ಕಾರಣವೆಂದರೆ ಇದರ ನಿಯಂತ್ರಕರು ಜರ್ಮನರು. ಈ ಅಕಾಡಮಿಯ ಸೂತ್ರ ಶೂಮಾಚರನ ಕೈಯಲ್ಲಿತ್ತು. ಶೂಮಾಚರ ದೊರೆಗೆ ಬೇಕಾದವ,—ಹೀಗಾಗಿ, ಈತನ ಕಾರಸ್ಥಾನಗಳ ಮೇಲೆ ಮುಸುಕೆಳೆಯುವುದು ಎಷ್ಟು ಸುಲಭ? ತಮ್ಮ ದೇಶದಲ್ಲಿಯ ಸಂಸ್ಥೆಗಳ ಆಡಳಿತವೆಲ್ಲ ಪರಕೀಯರ ಸ್ವಾಧೀನವಾದಾಗ, ಅವರ ತಾಳಕ್ಕೆ ಕುಣಿಯುವುದನ್ನು ಸ್ವಾಭಿಮಾನಿ ಎಂದೂ ಸಹಿಸನು. ಲೋಮೊನೊ-ಸೋವ್ ವಿದೇಶಿಯರ ವಿರುದ್ಧ ಹೋರಾಡಲು ಹಿಂದೆಗೆಯಲಿಲ್ಲ ಶೂಮಾಚರನ ಕೃಷ್ಣಕೃತ್ಯದ ಒಂದು ದೃಷ್ಟಾಂತವನ್ನು ದೊರೆಯ ಗಮನಕ್ಕೆ ತಂದನು; ಅದು ಹೀಗಿದೆ:—ಲೋಮೊನೊಸೋವ್ ವಿದೇಶದಿಂದ ಮರಳಿ ಪ್ರಾಧ್ಯಾಪಕನಾದಾಗಲೂ ಕೂಡ, ಆ ಅಕಾಡಮಿಯವರು ಆತನಿಗೆ ಕೊಡಮಾಡಿದ ಶಿಷ್ಯವೃತ್ತಿಯನ್ನು ಇನ್ನೂ ಪಡೆಯುತ್ತಿತ್ತು. ಇದಲ್ಲದೆ ವಿದ್ಯಾರ್ಥಿಗಳಿಗೆ ಕೊಡಲಾದ ಭತ್ತೆಯು ಕೂಡ ಶೂಮಾಚರನ ಜೇಬಿಗೆ ಸೇರುತ್ತಿತ್ತು. ಪರಕೀಯರು ಸ್ವದೇಶದ ಸಂಪತ್ತನ್ನು ಸೂರೆ-ಗೊಳ್ಳುವ ಸೌಮ್ಯಸಾಧನೆ ಇದಲ್ಲವೆ? ಲೋಮೊನೊಸೋವ್ ಇದನ್ನು ಸಹಿಸದಾದ. ಜರ್ಮನರೊಂದಿಗೆ ತಿಕ್ಕಾಟಕ್ಕಿಳಿದ. ಅದೆಷ್ಟೋ ಬಾರಿ ಆ ಅಧಿಕಾರಿಗಳು ಅವಾಚ್ಯಶಬ್ದಗಳಲ್ಲಿ ನಿಂದಿಸಿದರಲ್ಲದೆ, ಆತನನ್ನು

ಇನ್ನೊಂದು ಹೆಜ್ಜೆ

(ಕವನ ಸಂಕಲನ)

ಬರೆಹಗಾರರು: ಎನ್. ಎಸ್. ಗದಗಕರ

ಇದರಲ್ಲಿ ವಿಷಯಗಳನ್ನು ವಸ್ತುವನ್ನಾಗಿ ಇರಿಸಿಕೊಂಡು ಬರೆದ ೩೩ ಕವನಗಳಿರುವವು.

ಕ್ರಾ. ಅ. ೫೨ ಪುಟ. ಬೆಲೆ ಹದಿನಾಲ್ಕು ಆಣೆ

ಮುಖ್ಯ ಮಾರಾಟಗಾರರು:—

ಮನೋಹರ ಗ್ರಂಥಭಾಂಡಾರ, ಧಾರವಾಡ

ಪ್ರತಿಭಾ ಗ್ರಂಥಮಾಲೆ, ಧಾರವಾಡ

ಅವಮಾನಿಸಲೂ ಹಿಂದೆಗೆಯಲಿಲ್ಲ-ಆ ಅಕಾಡಮಿಯ ಹಿರಿಯ ಅಧಿ-ಕಾರಿಗಳು. ಹಿರಿಯ ಅಧಿಕಾರಿಗಳೊಂದಿಗಿನ ಈ ಬಗೆಯ ನಡತೆ ಸರಕಾರದ ದೃಷ್ಟಿಗೆ ಬಿದ್ದು, ಲೋಮೊನೊಸೋವ್ ಕೆಲ ದಿನಗಳ ಮಟ್ಟಿಗೆ ನೌಕರಿಗೆ ಅಪಾತ್ರನಾದ.

ಜರ್ಮನಿಯಿಂದ ಬಂದ ಮೇಲೆ ವೈಜ್ಞಾನಿಕಶೋಧನೆಯಲ್ಲಿ ಆಸ್ಥೆ ವಹಿಸಿದನು. ಅಕಾಡಮಿಯಲ್ಲಿ ಆತ ಬೋಧಿಸುತ್ತಿದ್ದುದು ರಸಾಯನ ಶಾಸ್ತ್ರ, ಖನಿಜಶಾಸ್ತ್ರ ಮತ್ತು ಕಾವ್ಯ. ಈಗಾಗಲೇ ರಸಾ-ಯನಶಾಸ್ತ್ರ ಮತ್ತು ಖನಿಜಶಾಸ್ತ್ರಗಳನ್ನು ಕುರಿತು ಪುಸ್ತಕಗಳನ್ನು ಪ್ರಸಿದ್ಧಿಸಿದ್ದ. ಈ ಬರೆಹಗಳ ವೈಶಿಷ್ಟ್ಯವೆಂದರೆ ಪ್ರಗತಿಪರ ದೃಷ್ಟಿ ಮತ್ತು ಸ್ವತಂತ್ರ ವಿಚಾರ.

೧೭೪೩ರಲ್ಲಿ ಒಂದು ಘಟನೆ ಜರುಗಿ, ಈತನ ಹೆಂಡತಿ ಇವನನ್ನು ಕೂಡಿಕೊಳ್ಳುವಂತಾಯಿತು. ಬಹುದಿನಗಳ ವರೆಗೆ ಗಂಡನಿಂದ ಓಲೆಗಳು ಬಾರದ್ದರಿಂದ ವ್ಯಾಕುಲಳಾಗಿ, ರಶಿಯದ ರಾಜಧಾನಿಯ ಮುಖಾಂತರ ಈತನ ಇರುವನ್ನರಿತುಕೊಂಡು, ಮುನ್ಸೂಚನೆ ಕೊಡದೆ ಈತನಿದ್ದಲ್ಲಿಗೆ ಬಂದಳು. ಹೆಂಡತಿ ಬಂದ ಮೇಲೆ ಲೋಮೊನೊಸೋವನ ಸಂಸಾರದ ಖರ್ಚು ಹೆಚ್ಚುವುದು ಸರಿಯೆ. ಏರುತ್ತಿರುವ ಖರ್ಚನ್ನು ಎದುರಿಸುವ ಉಪಾಯವೆಂದು ಸರಕಾರಕ್ಕೆ, ಯೋಗ್ಯತೆಗೆ ತಕ್ಕ ಸ್ಥಾನ ಕೊಟ್ಟು ಉಪಕರಿಸಲು ಪ್ರಾರ್ಥಿಸಿದನು. ಆ ಪ್ರಾರ್ಥನಾಪತ್ರದ ವಿಷಯ ಇಲ್ಲಿದೆ:—“ನಾನು ಈಗಾಗಲೆ ಭೌತಶಾಸ್ತ್ರ, ರಸಾಯನ ಶಾಸ್ತ್ರಗಳ ಕುರಿತು ರಶಿಯನ್ ಭಾಷೆಯಲ್ಲಿ ಬರೆದಿದ್ದೇನೆ. ಹಾಗೆಯೇ ಕೆಲ ಕಾವ್ಯಗಳನ್ನೂ ರಚಿಸಿದ್ದೇನೆ. ಲ್ಯಾಟಿನ್, ಫ್ರೇಂಚ್ ಮತ್ತು ಜರ್ಮನ್ ಭಾಷೆಯಿಂದ ಕೆಲ ಉತ್ತಮ ಕಾವ್ಯಗಳನ್ನು ರಶಿಯನ್ ಭಾಷೆಗೆ ಪರಿವರ್ತಿಸಿರುವುದು, ನನ್ನ ಆ ಭಾಷೆಗಳ ಮೇಲಿರುವ ಪ್ರಭುತ್ವಕ್ಕೆ ಸಾಕ್ಷಿ. ನಾನು ಅಧ್ಯಾಪನ-ದೊಂದಿಗೆ ಸ್ವತಂತ್ರವಾಗಿ ಸಂಶೋಧನೆಗಳನ್ನು ಕೈಕೊಂಡಿದ್ದೇನೆ. ಈ ವಿವರಣೆಯಿಂದ ನನ್ನ ಯೋಗ್ಯತೆಯ ಅರಿವು ತಮಗಾಗದಿರದೆಂದು

ನಂಬಿದ್ದೇನೆ. ರಶಿಯಾದ ಸರ್ವಾಂಗೀಣ ಉನ್ನತಿಗಾಗಿ ಕಾಯಾ, ವಾಚಾ, ಮನಸಾ ಪರಿಶ್ರಮಿಸುತ್ತಿರುವ ನನಗೆ, ತಾವುಗಳು ಯೋಗ್ಯ ಸ್ಥಾನ ಹಾಗು ವೇತನವನ್ನಿತ್ತು ಉಪಕೃತನನ್ನಾಗಿ ಮಾಡುವಿರಾಗಿ ದೃಢವಾಗಿ ನಂಬಿದ್ದೇನೆ?" ಅಕಾಡಮಿಯ ಸರ್ವಾಧಿಕಾರಿ ಶುಮಾಚರನಿಗೆ ಇದೊಂದು ಸಮಸ್ಯೆಯಾಯಿತು. 'ನಿಮ್ಮ ಮನವಿಯನ್ನು ಆಮೂಲಾಗ್ರವಾಗಿ ಪರಿಶೀಲಿಸಲಾಗಿದೆ. ನಿಮ್ಮ ಬುದ್ಧಿ ಮತ್ತೆ ಮತ್ತು ಕರ್ತೃತ್ವಶಕ್ತಿಯ ಅರಿವು ನಮಗಿದೆ. ಆದರೂ ಶೀಘ್ರ ನಿರ್ಣಯ ಕೈಕೊಳ್ಳಲು ನಿಮ್ಮ ಪ್ರಬಂಧವೊಂದನ್ನು ಒಪ್ಪಿಸಬೇಕಾಗಿ ಬಿನ್ನವಿಸುತ್ತೇವೆ.' ಎಂಬ ಓಲೆಯನ್ನು ಶೂಮಾಚರ ಬರೆಯುವುದು ಅನಿವಾರ್ಯವಾಯಿತು. ಬರಿಗಣ್ಣಿಂದ ಕಾಣುವದಕ್ಕೆ ಭೂತಗನ್ನಡಿ ಬೇಕೆ? ಜುಲೈ ೨೫,೧೭೪೫ರಲ್ಲಿ ಲೋಮೊನೊಸೋವನನ್ನು ರಸಾಯನಶಾಸ್ತ್ರ ವಿಭಾಗಕ್ಕೆ ಪ್ರಧಾನಾಧ್ಯಾಪಕನನ್ನಾಗಿ ನಿಯಮಿಸಲಾಯಿತು. ಈ ವಿಷಯದ ಯಥಾರ್ಥ ವಿಜ್ಞಾನವಿದ್ದ ಪ್ರಾಧ್ಯಾಪಕರಲ್ಲಿ ಇವನೇ ಮೊದಲಿಗನು. ಈ ಮೊದಲು ರಸಾಯನ ಶಾಸ್ತ್ರದ ಅಧ್ಯಾಪನ, ಸಸ್ಯಶಾಸ್ತ್ರಜ್ಞ ಅಥವಾ ಡಾಕ್ಟರರಿಂದ ಆಗುತ್ತಿತ್ತು. ಈ ವ್ಯವಸ್ಥೆ ಅಕಾಡಮಿ ರಸಾಯನಶಾಸ್ತ್ರಕ್ಕಿತ್ತ ಮುನ್ನಡೆಯ ದ್ಯೋತಕ.

ಲೋಮೊನೊಸೋವ್ ಪ್ರಧಾನಾಧ್ಯಾಪಕನಾದ ಮೇಲೆ, ಮೊಟ್ಟ ಮೊದಲು ಮಾಡಿದ ಕಾರ್ಯವೆಂದರೆ, ಆತನ ಗುರು ಕ್ರಿಶ್ಚನ್ ಊಲ್ಫನ 'ಪ್ರಾಯೋಗಿಕ ಭೌತಶಾಸ್ತ್ರ'ವನ್ನು ರಶಿಯನ್ ಭಾಷೆಗೆ ಪರಿವರ್ತಿಸಿದ್ದು. ಈ ಹೊತ್ತಿಗೆಗೆ ಬರೆದ ಮುನ್ನುಡಿಯಲ್ಲಿ ಲೋಮೊನೊಸೋವ್ ೧೭-೧೮ನೆಯ ಶತಮಾನಗಳಲ್ಲಿಯ ವೈಜ್ಞಾನಿಕ ಪ್ರಗತಿಯನ್ನು ವಿವೇಚಿಸಿದ್ದ. ಈ ಮಹಾಗ್ರಂಥದ ಪರಿವರ್ತನೆಯ ಕಾಲಕ್ಕೇನೇ ರಶಿಯನ್ ಭಾಷೆಗೆ ಉಳಿದ ಭಾಷೆಗಳ ಸಾಹಿತ್ಯವನ್ನು—ಅದರಲ್ಲೂ ವಿಜ್ಞಾನವನ್ನು—ವಿವೇಚಿಸುವುದು ಎಂಥ ಪ್ರಯಾಸದ ಕೆಲಸವೆಂಬುದನ್ನು ಲೋಮೊನೊಸೋವ್ ಮನಗಾಡನು. ಸೂಕ್ತ ಶಬ್ದಗಳ ಆಯ್ಕೆ ಮತ್ತು ನವೀನ ಶಬ್ದಗಳ ರಚನೆಯಲ್ಲಿ ಜಾಗರೂಕತೆ ವಹಿಸುವುದು ಅತ್ಯಗತ್ಯವೆಂಬುದನ್ನು ತಿಳಿದಿದ್ದನು. ಲೋಮೊನೊಸೋವ್ ರಶಿಯನ್ ಭಾಷೆಯಲ್ಲಿ ವೈಜ್ಞಾನಿಕ ಗ್ರಂಥಗಳನ್ನು ರಚಿಸಿದ ಮೊದಲಿಗನು ಇವನೇ ಎಂದಮೇಲೆ, ವೈಜ್ಞಾನಿಕ ಶಬ್ದಗಳ ಕೋಶವನ್ನು ರಚಿಸಿದವನೂ ಇವನೆ ಎಂದು ಪ್ರತ್ಯೇಕವಾಗಿ ಹೇಳಬೇಕಾಗಿಲ್ಲ. ಆತನ ಆ ಶಬ್ದಕೋಶ ಇಂದೂ ಮಾರ್ಗದರ್ಶಕವಾಗಿದೆ. ಈ 'ಪ್ರಾಯೋಗಿಕ ಭೌತಶಾಸ್ತ್ರ'ದ ೬೦೦ ಪ್ರತಿಗಳು ವರ್ಷದೊಳಗಾಗಿಯೇ ಮಾರಾಟ ಆದ್ದರಿಂದ, ೧೭೪೬ನೆಯ ಜನೆವರಿಯಲ್ಲಿ ಪುನಃ ಮುದ್ರಿತವಾಯಿತು. ೧೭೬೦ರಲ್ಲಿ ಈ ಪುಸ್ತಕದ ೨ನೆಯ ಆವೃತ್ತಿಯನ್ನು ಪ್ರಕಟಿಸಲಾಯಿತು. ಈ ಎರಡನೆಯ ಆವೃತ್ತಿಗೆ ಪೂರಕಪತ್ರವನ್ನು ಜೋಡಿಸಲಾಗಿತ್ತು.

ರಶಿಯನ್ ಭಾಷೆಯಲ್ಲಿ ಭೌತಶಾಸ್ತ್ರದ ಮೇಲೆ ಮಾತನಾಡುವ ಅವಕಾಶವನ್ನು ಅಕಾಡಮಿಯವರು ಜೂನ್ ೨೦, ೧೭೪೬ರಂದು ಕಲ್ಪಿಸಿದರು. ಅಂದಿನ ಸಭೆಗೆ ವಿದ್ವಾಂಸರು ಮತ್ತು ಅಕಾಡಮಿಯ ಸದಸ್ಯರು ಆಹ್ವಾನಿತರಾಗಿದ್ದರು. ಲೋಮೊನೊಸೋವ್ ಬಹು ಶ್ರಮದಿಂದ ಸಿದ್ಧಪಡಿಸಿದ ಭಾಷಣವನ್ನು ಸಭೆ ಮೆಚ್ಚಿತು. ದೇಶಭಾಷೆಯಲ್ಲಿ ವೈಜ್ಞಾನಿಕ ವಿಷಯದ ಬಗ್ಗೆ ವಿವೇಚನೆಯಾದುದು ಇದೇ ಮೊದಲು ಮತ್ತು ಆ ಗೌರವಪಾತ್ರನಾಗುವ ಭಾಗ್ಯ ಇವನಿಗೆ ದೊರೆಯಿತು.

ಲೋಮೊನೊಸೋವನ ಪ್ರಯೋಗಗಳ ಪರಿಚಯ ಬಹು ಜನರಿಗಿರದಿದ್ದರೂ, ಆತನ ಕಾವ್ಯಗಳು ಜನಪ್ರಿಯವಾಗಿದ್ದುವು. ಈತನ ಕಾವ್ಯಕ್ಕೆ ಮರುಳಾದವರಲ್ಲಿ ರಾಣಿಯೂ ಒಬ್ಬಳು. ರಾಜಮನೆತನದಲ್ಲಿ ಈ ಕಾವ್ಯಕ್ಕಿದ್ದ ಮನ್ನಣೆಯಿಂದಾಗಿ, ರಾಸಾಯನಿಕ ಪ್ರಯೋಗಶಾಲೆಯ ನಿರ್ಮಾಣ ಸುಗಮವಾಯಿತು. ಈ ಪ್ರಯೋಗಶಾಲೆ ಸ್ಥಾಪಿತವಾದುದು ಆಗಸ್ಟ್ ೩, ೧೭೪೮ರಂದು. ಈ ಮೊದಲು ಇಂಥ ಶಾಲೆಯ ಆಗತ್ಯದ ಕುರಿತು ಅಕಾಡಮಿಗೆ ಮನವಿ ಸಲ್ಲಿಸಿದ್ದರೂ, ಅಕಾಡಮಿಯಿಂದ ಉತ್ತರ ಕೂಡ ಬರಲಿಲ್ಲ. ಇದರ ಕಾರಣ ಶೂಮಾಚರ ಮತ್ತು ಆತನ ಸಂಗಡಿಗರ ಅಸಹಕಾರ. ಎರಡನೆಯ ಸಲ ಅಕಾಡಮಿಯ ೮ ಸದಸ್ಯರ ರುಜು ಪಡೆದು ತನ್ನ ಯೋಜನೆಯನ್ನು ಸಿನೆಟ್ಟಿಗೆ ಕಳಿಸಲು ಅದು ಸ್ವೀಕೃತವಾಯಿತು. ಆ ಪ್ರಯೋಗಶಾಲೆಯ ಶಂಕುಸ್ಥಾಪನೆಯ ದಿನದ ಲೊಮೊಸೋವನ ಉತ್ಸಾಹ ವರ್ಣಿಸಲಾಸಲ್ಲ. ಅಂದು ಬಹು ಬೇಗನೆ ಎದ್ದು ಶುಭ್ರ ವಸ್ತ್ರಗಳನ್ನು ಧರಿಸಿ, ಕುಲು ಕುಲು ನಗುತ್ತಾ ಆ ಸ್ಥಳಕ್ಕೆ ಬಂದನು. ಈ ಕಟ್ಟಡ ಈತನ ಅವಿರತ ಪರಿಶ್ರಮ ಮತ್ತು ಮೇಲ್ವಿಚಾರಣೆಯಿಂದ ೩ ತಿಂಗಳಲ್ಲಿಯೇ ಮೈದುಂಬಿಕೊಂಡಿತು.

ಶಾಂತಿಸೇವಾಸದನದ ಹೊಸ ಪ್ರಕಟಣೆಗಳು

		ರೂ. ನ. ಪೈ.
ಜೈನಧರ್ಮ		೧೫—೦
ಶ್ರೀ. ಮಿರ್ಜಿ ಅಣ್ಣಾರಾಯರು		
ಭಾರತದ ಬೆಳಕು	,,	೧—೦
ಭಾರತೀಯ ಸಂಸ್ಕೃತಿಯ ಹೃದಯ	,,	೧—೫೦
ಸಮಯಸಾರ	,,	೧—೫೦
ಶ್ರೇಯಾಂಸ (೨ ಭಾಗ)	,,	೨—೦
ಮೂಲಶಿಕ್ಷಣದ ಮೌಲ್ಯಮಾಪಣ	,,	೦—೭೫
ಭರತೇಶನ ನಾಲ್ಕು ಚಿತ್ರಗಳು	,,	೧—೨೫
ಕೆನೆಮೊಸರು (ಮಕ್ಕಳ ಕತೆ)	,,	೦—೨೫

ಪ್ರತಿಗಳಿಗಾಗಿ ಬರೆಯಿರಿ:

ಶಾಂತಿ ಸೇವಾಸದನ, ಸೇಡಬಾಳ

ಪೊ. ಸೇಡಬಾಳ (ಜಿಲ್ಲಾ ಬೆಳಗಾಂವಿ)

ಪ್ರೇಮದ ಇಕ್ಕಟ್ಟು

(ಏಕದೃಶ್ಯ ರೂಪಕ)

ಶ್ರೀ. ಬೇಂದ್ರೆ ಲಕ್ಷ್ಮಣರಾಯರು, ಧಾರವಾಡ

卐

ಪಾತ್ರವಿವರ

ಸದಾನಂದ :— ಕಾಲೇಜ್ ಪ್ರಾಧ್ಯಾಪಕ

ಕಲ್ಯಾಣಮೂರ್ತಿ : 'ಸುರುಚಿ' ಮಾಸಪತ್ರಿಕೆಯ ಸಂಪಾದಕ.

ರಘುವೀರ :— ಚಿತ್ರಕಾರ

ಅನುರಾಧಾ :—ರಘುವೀರನ ಹೆಂಡತಿ, ಅಸಿಸ್ಟಂಟ್ ಲೆಕ್ಚರರ್

ರಾಮು :— ಸದಾನಂದನ ಮನೆಯ ಆಳು.

[**ಪ್ರೊ.** ಸದಾನಂದರ ಮನೆಯ ಬೈಠಕ್‌ಖಾನೆ. ಎಡಬದಿಗೆ (ಪ್ರೇಕ್ಷಕರು ಕುಳಿತಿರುವ ಕಡೆಯಿಂದ) ಮಲಗುವ ಕೋಣೆ: ಬಲಬದಿಗೆ ಮನೆಯ ಉಳಿದ ಭಾಗ-ಎರಡು ಬಾಗಿಲುಗಳಿಗೂ ತೆರೆ. ಮನೆಯ **ತಲೆಬಾಗಿಲು**—ರಂಗಸ್ಥಳದ ಹಿಂಬದಿಗೆ—ಮಧ್ಯದಲ್ಲಿ—ಕಾಣುವುದು. **ಬೈಠಕ್‌ಖಾನೆ** ಬಹು ಕಲಾಮಯವಾಗಿ ಶೃಂಗರಿಸಲ್ಪಟ್ಟಿದೆ. ಗೋಡೆಗೆ ಪ್ರಸಿದ್ಧ ಚಿತ್ರಕಾರರ ಚಿತ್ರಗಳು ಅಲ್ಲಲ್ಲಿ ತೂಗುಹಾಕಲ್ಪಟ್ಟಿವೆ. ಒಂದು—ಕಡೆಗೆ ಬಟ್ಟೆಗಳನ್ನು ತೂಗುಹಾಕುವ ಸ್ಟ್ಯಾಂಡು; ಅದರ ಮೇಲೆ—ಕೆಲವು ಅರಿವೆಗಳು. ಎಡಬದಿಯ ಗೋಡೆಗೆ ಸಣ್ಣದೊಂದು ಟೇಬಲ್ಲು; ಅದರ ಮೇಲೆ ಬರೆಯುವ ಸಾಹಿತ್ಯ, ಕೆಲವು—ಪುಸ್ತಕಗಳು, ನಿಲುದೀಪ ಇತ್ಯಾದಿ. ಒಂದು ಮೂಲೆಯಲ್ಲಿ ಸ್ಟ್ಯಾಂಡಿನ ಮೇಲೆ ರೇಡಿಯೊ—ಮಧ್ಯದಲ್ಲಿ ಒಂದು ಕೋಚು; ಅದರ ಎಡಬಲಕ್ಕೆ ಎರಡು ಗಾದಿಯ ಕುರ್ಚಿಗಳು. ಮುಂದೆ ಒಂದು—ಟೀಪಾಯ್; ಅದರ ಮೇಲೆ—ಕೆಲವು ಇಂಗ್ಲೀಷ್ ಕನ್ನಡ ಪತ್ರಿಕೆಗಳು. ಇನ್ನೊಂದು—ಸಣ್ಣ ಟೀಪಾಯಿಯ ಮೇಲೆ ಸಿಗರೇಟ್ ಡಬ್ಬಿ, ಬೂದಿ ಚೆಲ್ಲುವ ಟ್ರೆ, ಎಲೆ-ಅಡಿಕೆಯ ಡಬ್ಬಿ. ಇನ್ನೊಂದು ಮೂಲೆಯಲ್ಲಿ ಒಂದು ಸ್ಟ್ಯಾಂಡು, ಅದರ ಮೇಲೆ—ಹಿತ್ತಾಳೆಯ ಪಾತ್ರೆಯಲ್ಲಿ ಕೃತ್ರಿಮ ಹೂಗಳ ಗುಚ್ಛ. ಹೊತ್ತು ಸುಮಾರು ಮುಂಜಾನೆ ೮ ಗಂಟೆಯಾಗಿದೆ ತೆರೆ ಮೇಲೆ ಎದ್ದಾಗ, ಆಳು ರಾಮು, ಟೈಮ್‌ಪೀಸಿಗೆ ಕೀಲಿಕೊಡುತ್ತಿದ್ದಾನೆ.]

ರಾಮು:— (ಸ್ವಗತ) ಏನ್ ಗಡಿಯಾರಪಾ ಇದು! ಹೊತ್ತಿಗೆ ಯಾಳ್ಯಾ ತೋರಿಸಿದರ ಇಟ್ಟಾಂಣಿ. ಇದನ್ನ ಎಟುಸಾರೆ ತಿರುವಬೇಕ-ನ್ನೋದs ಗೊತ್ತಾಗೋದಿಲ್ಲ ಎಟುಸಾರೆ ತಿರುವಿದರೂ ಆಟs ಐತಿ. ಇದಕೂ ನಮ್ನೀ ಯಜಮಾನನ ಗಾಳಿ ಬಡದೈತೋ ಏನೊ! ಬೇಕಾ-ದಾಗ ಮುಂದ ಹೋಕ್ಕೈತೆ. ಬೇಕಾದಾಗ ಹಿಂದ ಹೋಕ್ಕೈತಿ! ಬೇಕಾದಾಗ ನಿಂತೂ ಬಿಡತೈತಿ! ಸ್ಪಿರಿಂಗ್ ಕೆಟ್ಟಿರ ಹಿಂಗಾಕ್ಕೈತಂತ. ನಮ್ಮ ಯಜಮಾನಂದೂ—ಹೀಂಗs! ಆತನ ತಲೀ ಸ್ಪಿರಿಂಗs ಬಿಗಿ ಇಲ್ಲ—ಇದರಂಪಾಗs! (ಗಡಿಯರವನ್ನಿಟ್ಟು ಫರ್ನಿಚರ್ ಮೇಲಿನ ಧೂಳಿ ಝಾಡಿಸಲು ತೊಡಗುತ್ತಾನೆ. ನಡುವೇ ಒಮ್ಮೆ ಒಳಗೆ ಹಣಿಕಿಕ್ಕಿ ಬಂದು, ಮತ್ತೆ ತನ್ನ ಕೆಲಸದಲ್ಲಿ ತೊಡಗುತ್ತಾನೆ.)

ಸದಾ:— (ಬ್ರಶ್ಶಿನಿಂದ ಹಲ್ಲುಜ್ಜಿಕೊಳ್ಳುತ್ತ, ಹೊರಗೆ ಬಂದು) ಕ್ರೈಯೊಳಗಿನ ಕೆಲಸ ಮುಗಿದ ಮ್ಯಾಲ ಬ್ಯಾರೇ ಕೆಲಸದ. ನೀ ಭಡಕ್ಕನೆ ಮನೀಗೆ ಜಗೀಬ್ಯಾಡ!

ರಾಮು:— ಮತ್ತೇನ್ರಿ?

ಸದಾ:— ಅದ. ಒಬ್ಬರು—ಬರೋವರಿದ್ದಾರ.

ರಾಮು:— ಓ, ತಿಳೀತು—ಬಿಡ್ರಿ. (ಮುಗುಳುನಗೆಯಿಂದ ವ್ಯಂಗ್ಯ ಸೂಚಿಸುತ್ತಾನೆ.)

ಸದಾ:— ಏನು—ತಿಳೀತು?

ರಾಮು:— ಅದs.......ಅವರs ಹೌದಲ್ರಿ? (ಮತ್ತೆ ನಗು-ತ್ತಾನೆ.)

ಸದಾ:— ಮೂರ್ಖಾ. ಅದೇನs ಇರ್ಲಿ! ಅಂಗಡ್ಯಾಗಿಂದ ತುಸು ಫರಾಳದ್ದು ತರಬೇಕಾಗೇದ. ಇಲ್ಲೀ ಕೆಲಸ ಮುಗಿದ ಮ್ಯಾಲ ನನಗ ಹೇಳು!

ರಾಮು :— ಹೂನ್ರಿ. ಅದೇನು ಬೇಕೋ ಹೇಳ್ರಿ, ತರ್ತೇನಿ.

ಸದಾ:— ನಾ ಈಗ ಬಂದೆ ಮಾರೀ ತೊಳಕೊಂಡು! (ಒಳಗೆ ಹೋಗುತ್ತಾರೆ.)

ರಾಮು :— ಬರ್ರಿ (ಮತ್ತೊಮ್ಮೆ ಒಳಗೆ ಹಣಿಕಿಕ್ಕಿ ನೋಡಿ ಬಂದು) ಹುಂssss....ಈ ಹರಪಂಚದಾಗ ಏನೇನು ಮೋಜು ನಡೀ-ತಾವೊ ಯಪ್ಪಾss! ಹೇಳಾಕ್ಕ ಸಾದ್ಯಿಲ್ಲ (ಕೋಚದ ಮೇಲಿನ ದಿಂಬುಗಳನ್ನು ಸರಿಮಾಡಿ ಇಡುತ್ತ) ಅದರಾಗ ಹೆಣ್-ಗಂಡಿನ ಮೋಜು, ಬಲು ಮೋಜು! ಮದಿವ್ಯಾಗೋ ಮುಂಚೆ ಒಂದು ತರ ಮಸಲತ್ತು; ಮದಿವ್ಯಾದ ಮ್ಯಾಲೆ ಒಂದು ತರ ಮಸಲತ್ತು!

ಹೆಣ್ಣಿಗೆ ಪುಸಲತ್ತು ಕೊಟ್ಟರ, ಹೀಂಗs ಮಸಲತ್ತು ಆಗ್ತಿರ್ತಾವ. ಹೆಣ್ಣೇನು, ಗಂಡೇನು? ಒಂದರ ದಾರಿ ತಪ್ಪೈತಿ ಅಂದರ, ಇನ್ನೊಂದರ ದಾರಿ ತಪ್ಪಿದ್ದು ಹೇಳಾಕs ಬ್ಯಾಡ! (ಟೇಬಲ್ಲಿನ ಹತ್ತಿರ ಹೋಗಿ ಅದರ ಮೇಲಿನ ವಸ್ತುಗಳನ್ನು ಸರಿ ಮಾಡುವಾಗ ಒಂದು ಹೆಣ್ಣಿನ ಫೋಟೊ ನೋಡಿ, ಎತ್ತಿ ಕೈಯಲ್ಲಿ ಹಿಡಿದು, ಅದನ್ನು ದಿಟ್ಟಿಸುತ್ತ) ಉಂಹೂ....ಬಂದೈತಲ್ಲಾ ಫೋಟೊ ಟೇಬಲ್‌ಮ್ಯಾಗ! ಎದ್ಯಾಗ ನಾಟಿತು ಅಂದರ—ಹೊರಗ ಮೂಡಾಕs ಬೇಕಲ್ಲ! ಎಲ್ಲಿ ಕುಂತಿದ್ದೊ ಏನೋ ಇದಿಮಾಯಿ ಆಗಿ! ನಮ್ಮ ಯಜಮಾನರಕಿಂತಾ ಏನು ಪಾಡದಾಳು ಅಂತ ಇದಕ ಮನಸೋತಿದ್ದಾನು ಈ ಮಾರಾಯ? ಎಂಜಲ ಬಾನಕ್ಕ ಬಾಯಿ ತೆರದಾನು! ಥೆ, ಹೋಗ್ಗೊ ನಿನ! (ಟೇಬಲ್ ಮೇಲೊಗೆದ ಹ್ಯಾಟನ್ನೆತ್ತಿ) ಶೀಲಬಿಟ್ಟಮ್ಯಾಗ ಕುಲ ಅನ್ನೋದು—ಹ್ಯಾಂಗಪಾ ಅಂದರ,—ಈ ಟೊಪಿಗಿದ್ದಾಂಗ. (ತನ್ನ ತಲೆಗೆ ಹಾಕಿಕೊಂಡು) ಹಾಕಿದವನ ತಲೀಗೆ ಹೊಂದಿತೀ, ಹೇಳಮಾಡಿಸಿದಾಂಗ. (ಅದನ್ನು ತೆಗೆದು ಗೂಟಕ್ಕೆ ತಗುಲಿಸಿ, ಒಳಬಾಗಿಲವರೆಗೆ ಹೋಗಿ ಹಣಿಕಿಕ್ಕಿ ಮತ್ತೆ ಬಂದು) ಈಗ ಬರ್ತಾಳು ನಟಿ ಬಂದಾಂಗ. ಅಲ್ಲಿಂದ ತೂಗೊಳೋ ನನ ಗೆಣೆಯಾ! ನಡೀತೈತಿ ಚೆಕ್ಕಂದ ಇಬ್ಬರದೂ! ಪಾರಿವಾಳದ ಜೋಡೀನs! ಗುಟುಗುಂ, ಗುಟುಗುಂ; ಗುಟುಗುಂ-ಗುಟುಗುಂ! ನಡದಿರತಾವ ಹಾಂಗsಮಾತು! (ಹೆಜ್ಜೆಯ ಸಪ್ಪಳ ಕೇಳಿದಂತೆ ಮಾಡಿ) ಹೆಜ್ಜೀ ಸಪ್ಪಳಾತು, ಬಂದsಬಿಟ್ಟ. (ಬೂಟ್ಸ ಒರೆಸುವುದರಲ್ಲಿ ತೊಡಗಿದವನಂತೆ ತೋರಿಸುತ್ತಾನೆ)

ಸದಾ:— (ತೂಗುಹಾಕಿದ ಕೋಟಿನಲ್ಲಿಯ ಪರ್ಸ್ ತೆಗೆದು ಅದರಲ್ಲಿಯ ೫ ರೂಪಾಯಿಯ ನೋಟನ್ನು ಹೊರದೆಗೆದು) ಇದು—ತೊಗೊ, ಮತ್ತ ಆ ಜೀವನ ರೆಸ್ಟೋರಂಟನೊಳಗಿಂದ—ನಾ ಬರದು ಕೊಡ್ತೀನಿ?— ಆ ಪ್ರಕಾರ ಫರಾಳದ ಜಿನಸು ತೊಗೊಂಡು ಬಾ! ಝಟ್ನs ಬರಬೇಕು. ಬಂದಮ್ಯಾಲ ಇಲ್ಲೇ ಚಹಾಮಾಡು. (ರಾಮು ನೋಟನ್ನು ಇಸಿದುಕೊಳ್ಳುತ್ತಾನೆ. ಸದಾನಂದರು ಒಂದು ಕಾಗದದ ಮೇಲೆ ತಿಂಡಿಯ ಪದಾರ್ಥಗಳನ್ನು ಬರೆದುಕೊಡುತ್ತಾರೆ.)

ರಾಮು:— ಪಾನಪಟ್ಟಿ, ಸಿಗರೇಟು—ಬ್ಯಾಡೇನ್ರಿ?

ಸದಾ:— ಹೌದೋ, ನಾಲ್ಕು ಪಾನಪಟ್ಟೀನೂ ತೊಗೊಂಡು ಬಾ, ಸಿಗರೇಟು ಬ್ಯಾಡ. ಗೊತ್ತಿಲ್ಲೇನು—ಹೆಣ್‌ಮಗಳು-ಬರ್ತಾಳs ಅಂತ?

ರಾಮು:— ಹೌದಲ್ರಿ? ಅದೇನ್ರಿ, ಈಗಿನ ಹೆಂಗಸರೂ ಸಿಗರೇಟು ಸೇದಾಕ ಹತ್ತ್ಯಾರ್ರಿ! ಆದರ, ಈ ಬಾಯೇರದು—ಹ್ಯಾಂಗಿನ ಮಾತು ಹ್ಯಾಂಗೋ ಏನೋ!

ಸದಾ:— ಇರ್ಲಿ ಹೋಗೋ ಫಾಜೀಲ! (ರಾಮು ಒಳಗೆ ಹೋಗಿ, ಒಂದು ಕೈಚೀಲ ತೆಗೆದುಕೊಂಡು ಹೋಗುತ್ತಾನೆ. ಸದಾನಂದರು ಕನ್ನಡಿಯಲ್ಲಿ ನೋಡಿ ಕೂದಲು ಹಿಕ್ಕಿಕೊಳ್ಳುತ್ತಾರೆ. ಒಳಗೆ ಹೋಗಿ ನೈಟ್‌ಸೂಟ್ ಬದಲುಮಾಡಿ ಶರ್ಟ್-ಪ್ಯಾಂಟುಹಾಕಿಕೊಂಡು ಬಂದು, ಮತ್ತೊಮ್ಮೆ ಕೂದಲನ್ನು ಸರಿಮಾಡಿಕೊಂಡು ಕೋಚದ ಮೇಲೆ ಕುಳಿತು, ಪುಸ್ತಕ ತೆರೆದು ಓದಲು ಪ್ರಾರಂಭಿಸುವ ಮೊದಲು ಗಡಿಯಾರದ ಕಡೆಗೆ ನೋಡುವರು. ಎದ್ದು ಹೋಗಿ ಹೊರಬಾಗಿಲಲ್ಲಿ ಹಣಿಕಿಕ್ಕಿ ತಿರುಗಿ ಬಂದು, ಬಾಗಿಲನ್ನಿಕ್ಕಿ ಕೋಚದಮೇಲೆ ಕುಳಿತು ಓದತೊಡಗುವರು. ಓದಿನಲ್ಲಿ ಲಕ್ಷ್ಯ ಹತ್ತುವುದಿಲ್ಲ. ಪುಸ್ತಕವನ್ನು ಕೋಚದ ಮೇಲೊಗೆದು, ಮತ್ತೊಮ್ಮೆ ಗಡಿಯಾರದ ಕಡೆಗೆ ನೋಡುವರು, ಎದ್ದು ತಲೆಬಾಗಿಲವರೆಗೆ ಬಂದು, ಅದನ್ನು ತೆರೆದು ಹಣಿಕಿಡುವರು. ಮತ್ತೆ ಬಾಗಿಲನ್ನು ಮುಚ್ಚಿ, ಮೇಜಿನ ಮೇಲಿನ ನಿಲುಗನ್ನಡಿಯಲ್ಲಿ ತಮ್ಮ ಮುಖ ನೋಡಿಕೊಳ್ಳುವರು, ಕ್ರಾಪಿನ ಮುಂಗುರಳನ್ನು ತೀಡಿಕೊಳ್ಳುವರು. ಮೇಜಿನ ಮೇಲಿನ ಪುಸ್ತಕಗಳನ್ನು ಅತ್ತಿತ್ತ ಸರಿಸಾಡಿ, ಬಂದು ಮತ್ತೆ ಕೋಚಿನ ಮೇಲೆ ಬಿದ್ದುಕೊಳ್ಳುವರು. ಬಾಯಿಂದ ಸಿಳ್ಳು ಹಾಕುವರು, ಪುಸ್ತಕವನ್ನೆತ್ತಿ ಪುಟ ತೆರೆದು ಎರಡು ಸಾಲು ಓದಿದ ಹಾಗೆ ಮಾಡಿ, ಅದನ್ನು ಚೆಲ್ಲಿಕೊಡುವರು.

ಸದಾ:— (ಸ್ವಗತ) ಅನುರಾಧಾ ಬರಲಿಕ್ಕೆ ಯಾಕಿಷ್ಟು ತಡಮಾಡಿದ್ದಾಳು? (ಗಡಿಯಾರ ನೋಡಿ) ಹಾಂಗ ಬಹಳೇನೂ ತಡ ಆಗಿಲ್ಲ, ಐದು ನಿಮಿಷ ತಡ. ಆದರೂ, ನನ್ನ ಜೀವಕ್ಕ ಐದು ತಾಸು ತಡ ಆದ್ಹಾಂಗ ಅನಿಸ್ತsದ! ಮನಿ ದೂರ! ಒಂದು ವ್ಯಾಳ್ಯಾ ಟಾಂಗಾ ಅಂತ ನಿಂತಿದ್ದರ ಸುಮ್ಮನೇ ತಡ ಆಗೋದು! ಇಷ್ಟು ದಿವಸ ಆಕಿ ನನ್ನ ಕಡೆಗೆ ಬರೋದಕ್ಕಿಂತ, ಇಂದು ಆಕಿ ಬರೋದರೊಳಗ ಒಂದು ವಿಶೇಷ ಅದ! ಅವಳಿಗೆ ನನ್ನ ಬಗ್ಗೆ ಯಾಕಿಷ್ಟೊಂದು ಆಕರ್ಷಣೆ ಉಂಟಾಗಿದ್ದೀತು? ನನ್ನ ಕವಿತೆಗಳು ತನಗ ಹಾಡಿಕೊಳ್ಳಿಕ್ಕೆ ಸರಸವಾಗಿವೆ—ಇದೊಂದೇ ಕಾರಣ ಇರಲಾರದು. ನನ್ನ ಲೇಖನಪ್ರತಿಭೆಗೆ ಮರುಳಾಗಿದ್ದಾಳೇನು? ಏನೋ....ಅಂತೂ ನನ್ನ ಸಹವಾಸ ಅವಳಿಗೆ ಬೇಕು, ಅವಳ ಸಹವಾಸ ನನಗ ಬೇಕು. ಹೆಂಡತಿ ತವರಿಗೆ ಹೋದ ದಿನದಿಂದಲೂ ಬೆಳೆದ ನಮ್ಮೀ ಸಹವಾಸ, ಎಲ್ಲಿಗೆ ಮುಟ್ಟುವುದೋ ಏನೋ! ಅಂಜಿಕಿ ಬಂದರೂ ಆಕರ್ಷಣೆ ಬಿಡವೊಲ್ಲದು! (ಅವಳ ವಿಷಯವಾಗಿಯೇ ಧೇನಿಸುತ್ತ ಕೂಡುತ್ತಾರೆ. ಒಂದೆರಡು ನಿಮಿಷ ಹೀಗೆ ಕಳೆಯುವಷ್ಟರಲ್ಲಿ, ಬಾಗಿಲ ತಟ್ಟಿದ ಸಪ್ಪಳವಾಗುವುದು. ಸದಾನಂದರ ಮುಖದ ಮೇಲೆ ಸಂತೋಷದ ನಗೆ ಅರಳುವುದು. (ಚಟ್ಟನೆ ಎದ್ದು)

ಸದಾ:— (ಮೆಲ್ಲಗೆ) ಓ ಬಂದ್ಲು! (ಗಟ್ಟಿಯಾಗಿ) ಹಾಂ! ಹಾಂ! ಬಂದೆ, ಬಂದೆ! ಬಂದೆ ಅನು!

[ಸಿಳ್ಳು ಹಾಕುತ್ತ ಬಾಗಿಲನ್ನು ತೆರೆಯುವರು; ಎದುರಿಗೆ ಅನುರಾಧೆ ಕಾಣಿಸದೆ, 'ಸುರುಚಿ' ಮಾಸಪತ್ರಿಕೆಯ ಸಂಪಾದಕರಾದ ಕಲ್ಯಾಣಮೂರ್ತಿ ಕಾಣುವರು. ಸದಾನಂದರು ನಿರಾಶೆ ಹಾಗು ಬೇಸರದ ಭಾವ ತೋರಿಸುವರು.]

ಸದಾ:— ಓ, ನೀವು!

ಕಲ್ಯಾಣ:— (ಒಳಗೆ ಪ್ರವೇಶಿಸಿ) ನಮಸ್ಕಾರ! ನಿಮ್ಮ ಕಡೆಗೇ ಬಂದೆ.

ಸದಾ:— (ಕೈಮುಗಿದು) ನಮಸ್ಕಾರ. ಆದರ... ಆದರ.... ನಾನೀಗ ಬಹಳ ಅವಸರದಲ್ಲಿದ್ದೇನಲ್ಲ! ಕೂಡಲೆ ಒಂದು ಕಡೆಗೆ ಹೋಗಬೇಕು. ನಿಮ್ಮದೇನಾದರೂ........ಕೆಲಸ.......

ಕಲ್ಯಾಣ :— (ತಾನೇ ಮುಂದಾಗಿ — ಬಂದು ಕೋಚಿನ ಮೇಲೆ ಕೂಡುವರು.) ನನ್ನದೇನು ವಿಶೇಷ ಕೆಲಸವಿಲ್ಲ. ಒಂದೇ ನಿಮಿಷ. ಅದೇನು ಅಂದರೆ.......ನಿಮ್ಮನ್ನು ಕಾಣೋದೇ ಕಷ್ಟ. ನಾನೀಗ ಎರಡು ಮೂರು ತಿಂಗಳಿಂದ ಪ್ರಯತ್ನಮಾಡ್ತಾ ಇದ್ದೇನೆ; ನೀವು—ಮನೆಯಲ್ಲಿ ಸಿಕ್ಕೋದೇ ಅಪರೂಪ ! ಯಾವಾಗಲೂ ನಿಮ್ಮ ಹೆಸರಿನ ಹಲಗೆಯ ಮೇಲೆ ಔಟ್, ಅಕ್ಷರಗಳನ್ನೇ ನೋಡ್ತೇನೆ. ಈಗ ಕೂಡ ಹೊರಗೆ 'ಔಟ್' ಅಂತ ಇದ್ದೇ ಇದೆ. ಎರಡು ಮೂರು ಸಲ ಬಂದರೂ, ಅದನ್ನು ನೋಡೇ ನಾನು—ವಾಪಸು ಹೋಗ್ತಿದ್ದೆ. ಬಾಗಿಲನ್ನು ತಟ್ಟಿ ಒಳಗೆ ವಿಚಾರಿಸಬೇಕೆಂದದ್ದು ಇಂದೇ. ಹಾಗೆ ಮಾಡಿದ್ದೂ ಒಳ್ಳೇದೇ ಆಯ್ತು ಅನ್ನಿ. ಅದರಿಂದ ನಿಮ್ಮ ಭೇಟಿಯಾದರೂ ಆಯ್ತು.

ಸದಾ :— ನಿಷ್ಕಾರಣ ಈ ಬಡಾಡಿಜನರು—ಬಂದು-ಬಂದು ಬೇಜಾರುಪಡಿಸತಾರೆ; ಅದಕ್ಕೇ ನಾನು—ಹಾಂಗ ಮಾಡೋದು. ಅದಿರಲಿ, ನಿವು—ಈಗ ಬಂದದ್ದರ ಕಾರಣ ......ತಿಳೀಲಿಲ್ಲ ನನಗೀಗ ....ಅವಸರ. ಕ್ಷಮಿಸಿರಿ.

ಕಲ್ಯಾಣ : - ಅದೇನು—ಅಂದರೆ....ಒಂದು ನಿಮಿಷ ಕೂಡ್ರಿ, ಹೇಳ್ತೇನೆ. (ಸುತ್ತಲೂ ನೋಡಿ) ಮನೆಯವರಿಲ್ಲವೇನು ?

ಸದಾ :— ಇಲ್ಲ; ತವರೂರಿಗೆ ಹೋಗಿದವರು ಇನ್ನೂ ಬಂದಿಲ್ಲ. ಕೂಡುತ್ತಾರೆ.)

ಕಲ್ಯಾಣ:— ಹಾಗಾದರೆ ನಿಮಗೆ ಲೇಖನ-ವಾಚನಕ್ಕೆ ಸಾಕಷ್ಟು ಬಿಡುವಿದೆ. ನನ್ನ ಕೆಲಸ ಖಂಡಿತವಾಗಿ —ಆಗುತ್ತದೆ.

ಸದಾ :— ಅದೇನೂ ಅಂತ ತಿಳಿದರ........

ಕಲ್ಯಾಣ :—, ಅದೇನು—ಅಂದರೆ.........ಹಿಂದಕ್ಕೆ....ಅಂದರೆ ಈ ಸರಕಾರೀ ಕಾಲೇಜಿನಲ್ಲಿ ಸೇರುವ ಮೊದಲು, ಏಕೀಕರಣದ ಬಗ್ಗೆ—ಕಾಶ್ಮೀರದ ಬಗ್ಗೆ-ನೀವು ಸಾಕಷ್ಟು ತೀಕ್ಷ್ಣವಾಗಿ- ಬರೀತಾ ಇದ್ದಿರಿ. ನೆನಪಿದೆಯೇನು ?

ಸದಾ :— ಆ ವಿಷಯವನ್ನು ನಾನೀಗ ತಲೆಯೊಳಗಿಂದಲೇ ತೆಗೆದುಹಾಕಿದೀನಿ. ಈಗ ನೀವು ಬಂದ ಕೆಲಸದ ಬಗ್ಗೆ ಮಾತು—ಮುಗಿಸಿಬಿಡೋಣ. ಮತ್ತೇನೂ ಇಲ್ಲ. ನಾನು ಒಬ್ಬರಿಗೆ ಬರ್ತೀನೀ ಅಂತ ಹೇಳಿದ್ದೆ. ಅವರೂ—ಕೆಲಸದವರು. ನಾ ಅದನ್ನ ತಪ್ಪಿಸೋ-ಹಾಂಗಿಲ್ಲ.

ಕಲ್ಯಾಣ :— ಆಗಲಿ. ಅದೇನು ಅಂದರೆ.........ಈ ಏಕೀಕರಣದ ವಿಷಯದಲ್ಲೇ ಹಿಂದಿನ ನಿಮ್ಮ ಲೇಖನಗಳನ್ನು ನಾನು ಓದಿದ್ದೇನೆ. ಆದರೆ—ಆಗಿನ ಸಮಸ್ಯೆಗಳು ಬೇರೆ ....ಮತ್ತೆ (ಸದಾನಂದರು ಚಟ್ಟನೆ ಎದ್ದು ತಲೆಬಾಗಿಲ ಕಡೆಗೆ ಹೋಗುತ್ತಾರೆ.) ಯಾಕೆ ? ಎದ್ದಿರಿ ?

ಸದಾ :— ಸಾಗಲಿ. ನಾನು ಕೇಳ್ತಿರ್ತೀನಿ. ಬಂದೆ, ಒಂದು ನಿಮಿಷ.

ಕಲ್ಯಾಣ:— ಅದೇನೂ ಅಂದರೆ... ಈಗ ಮತ್ತೆ ಕೆಲವು-ಹೊಸ ಸಮಸ್ಯೆಗಳೇ ಉಂಟಾಗಿವೆ. (ಸದಾನಂದರು ತಿರುಗಿ ಬಂದು ಮತ್ತೆ ತಮ್ಮ ಆಸನದ ಮೇಲೆ ಕೂಡುತ್ತಾರೆ) ಅವನ್ನು ನಾವು ದುರ್ಲಕ್ಷ್ಯಿಸುವ ಹಾಗಿಲ್ಲ. ನಿಮ್ಮ ಅಭಿಪ್ರಾಯವೇನು ?

ಸದಾ :— ಆ ಅಭಿಪ್ರಾಯ ? ನಾನು ಬರೆದೇ ಕೊಡ್ತೀನಿ· ಈಗ ಮಾತ್ರ ಅಲ್ಲ; ತುಸು ಬಿಡುವು ಮಾಡಿಕೊಂಡು, ನಾನು ಅದನ್ನ ....ಪೋಸ್ಟಿನಿಂದನೇ ಕಳಸ್ತೀನಿ; ಅಥವಾ ನಮ್ಮ ಸಿಪಾಯಿಯ ಕೈಲೇ ಕಳಸ್ತೀನಿ. ಒಳ್ಳೇದು ಹಂಗಾರ, ನಮಸ್ಕಾರ

ಕಲ್ಯಾಣ :— ಉಂ, ಹುಂ. ಹಾಗೆ ಮಾಡುವ ಅಗತ್ಯವಿಲ್ಲ ಅನ್ರಿ. ನನಗೆ ಬೇಕಾದದ್ದು ಅದರ ಬಗ್ಗೆ ಒಂದು ಲೇಖನ. ಈಗ ಎರಡು ವಿಷಯ ನಮ್ಮ ತಲೆ ತಿನ್ನತಾ ಇವೆ. (ಸದಾನಂದರು - ಬೇಸರಗೊಂಡು ಹೊರಡುವ ನೆವದಿಂದ ಎದ್ದು ನಿಲ್ಲುತ್ತಾರೆ) ಒಂದು —ಕಾಶ್ಮೀರ; ಎರಡನೇದು—ಪಂಚವಾರ್ಷಿಕ ಯೋಜನ !

ಸದಾ :— ಈ ವಿಷಯ ಪುನಃ ಮಾತಾಡೋಣ. ಇದಕ್ಕಾಗಿ —ಬೇಕಾದರ ಒಂದು ದಿವಸ, ನಾ ರಜಾನೇ ತೊಗೋತೀನಿ, ಒಳ್ಳೇದು. ನಮಸ್ಕಾರ !

ಕಲ್ಯಾಣ :— ಛೆ, ಛೆ, ಹಾಗೆ ಮಾಡುವ ಕಾರಣವಿಲ್ಲ ! ಬೇಕಾದರೆ ನಾಳೆ ನಾನು ಇದೇ ಹೊತ್ತಿಗೆ—ಬರ್ತೇನೆ, ಆಗಬಹುದೊ ?

ಸದಾ :— ....ನಾನು—ತಿಳಿಸ್ತೀನಿ..........ಬರ್ತೀರಾ ?

ಕಲ್ಯಾಣ — ಹಾಗಾದರೆ ನಾನು—ಹೊರಡ್ತೇನೆ. ನೀವು—ಈಗ ಹೋಗುವುದು ಹೇಗೆ ? ವಾಹನ ? (ಏಳುತ್ತಾರೆ.)

ಸದಾ — ಸೈಕಲ್‌ಮೇಲೆ.

ಕಲ್ಯಾಣ :— (ಸುತ್ತಲೂ ನೋಡಿ) ಎಲ್ಲಿ ಕಾಣುವುದಿಲ್ಲವಲ್ಲ ?

ಸದಾ :— (ಗೊಂದಲಗೆಟ್ಟು) ಇಲ್ಲ........ಅದ........ನಮ್ಮ ಆಳು ರಾಮು, ಪಂಕ್ಚರ್ ಸರಿಮಾಡಿಸಿಕೊಂಡು ತರಲಿಕ್ಕೆ ಒಯ್ದಾನ

ಕಲ್ಯಾಣ : ಹಾಗಾದರೆ ಅವನು ಬರುವುದರೊಳಗಾಗಿ ನಾನು ನನ್ನ ಮಾತನ್ನು ಮುಗಿಸಿಬಿಡ್ತೇನೆ.

ಸದಾ :— ಇಲ್ಲ. ಅವ ಬರಲಿಕ್ಕೂ ಇಲ್ಲ-ನಾನೇ ಹೋಗ್ತೀನಿ, ನಮಸ್ಕಾರ.

ಕಲ್ಯಾಣ :— ಹಾಗಾದರೆ ಕೂಡಿಯೇ ಅಲ್ಲಿಯವರೆಗೆ, ಮಾತಾಡ್ತಾ ಹೋಗೋಣ. ಅನುಕೂಲವೇ ಆಯ್ತು. ಹೌದು.

ಸದಾ :— ನಾನಿನ್ನೂ ಡ್ರೆಸ್ ಮಾಡಿಕೊಳ್ಳಬೇಕು. ಒಳ್ಳೇದು, ಬರ್ತೀರಾ ? ಅಪ್ಪಣೆ ತೊಗೊಳ್ಳಲಾ ?

ಕಲ್ಯಾಣ :— (ಒಮ್ಮೆಲೆ ಏನನೊ ಸ್ಮರಣೆಗೆ ತಂದುಕೊಂಡು) ಅರೇ ! ನಾನು ಮುಖ್ಯವಾಗಿ ಯಾತಕ್ಕಾಗಿ ಬಂದಿದ್ದೆ, ಅದನ್ನೇ ಮರೆತೆ ಹೀಗೇ ಇತ್ತೀಚಿಗೆ ತುಂಬ ಮರೆವು. ಅದೇನು ಅಂದರೆ....

[ಅಷ್ಟರಲ್ಲಿ ರಾಮು ಚೀಲದಲ್ಲಿ ತಿಂಡಿ-ತಿನಿಸುಗಳನ್ನು ತೆಗೆದುಕೊಂಡು ಬರುತ್ತಾನೆ.]

ಸದಾ :— ಬಂದೇನು ? ಒಳ್ಳೇದಾತ್ಯು ಅವನ್ನ ಒಳಗಿಟ್ಟು ನೀ ಹೋಗಿಬಿಡು.

ರಾಮು :— ಎಲ್ಲಿಗೆ ಹೋಗಲ್ರಿ ?

ಸದಾ :— ಮನೀಗೆ ಹೋಗೊ ! ಕೆಲಸಾತಿಲ್ಲ !

ರಾಮು :— ಕೆಲಸೆಲ್ಲಾತ್ರೀ ? ಅಲ್ರಿ, ಮತ್ತ......ನೀವು.... ಅವರು ಚಾಕ್ಕ ಬರತಾವರೆದಾರು, ಇರು—ಅಂತ ಅಂದಿರಿ. ಮತ್ತ.... ಈಗ........

ಸದಾ :— ಅವರು ಬರೋದಿಲ್ಲ. ನೀ ಹೋಗೀಗ !

ರಾಮು :— ಬಿಡಿರಿ. ನಂದೇನು, ಹೊಂಟೇ ಬಿಟ್ಟೆ !

ಸದಾ :— ಉಂ, ತುಸು ತಡಿ ! ಮೊದಲು ಅವನ್ನ ಒಳಗಂತೂ ಇಟ್ಟು ಬಾ ! (ರಾಮು ಒಳಗೆ ಹೋಗುತ್ತಾನೆ.)

ಕಲ್ಯಾಣ :— ಮತ್ತೆ ನಿಮ್ಮ ಸಿಪಾಯಿ ಸೈಕಲ್ ತರಲಿಲ್ಲ ?

ಸದಾ :— ಅವ ತರೋದಿಲ್ಲ ಅಂತ ಗೊತ್ತಿತ್ತು ನನಗ ! ಅವಗ ಒಂದು ಸಲಕ್ಕ ಒಂದೇ ಕೆಲಸಾ ಹೇಳಬೇಕು. ಎರಡು ಅಂದರ ಒಂದು ಮರತನs ! Stuqid, Fool. ಆಗಲಿ ನಮಸ್ಕಾರ.

ಕಲ್ಯಾಣ :— ಆಗಲೇ ಮುಖ್ಯ ಮಾತೇ ಮರೆತೆ ಅಂತ ಹೇಳಿದೆನಲ್ಲಾ........ ಅದೇನು ಅಂದರೆ, ನಮ್ಮ ಪತ್ರಿಕೆಗೆ ಸಹಾಯ ನಿಧಿ ಅಂತ ಒಂದು ಪ್ರಾರಂಭಿಸಿದ್ದೇವೆ, ಏನ್ರಿಪಾ ! ಅದರ ಯೋಜನೆ.... ಹೀಗಿದೆ........

ಸದಾ :— ಅದರ ಬಗ್ಗೆ ಏನಾದರೂ ಪ್ರಕಟನೆ ಇದ್ದರೆ ಕೊಟ್ಟು ಬಿಡ್ರಿ. ನಾನು ಓದಿಕೋತೀನಿ

ಕಲ್ಯಾಣ :— ಆದರೂ ಸಮಕ್ಷ ಹೇಳುವ ಮಾತು ಕೆಲವು ಅಂತ.... ...ಅದೇನು ಅಂದರೆ........

ರಾಮು :— (ಹೊರಗೆ ಬಂದು) ನಾ ಕೇಳ್ಕೀನ್ರಿ ಹಂಗಾರ ಅಲ್ಲ, ತಂದ ಪರಾಳ ಬ್ಯಾಡಾದರ ಹೇಳ್ರಿ. ಮತ್ತ ಅವನ್ನ ಹೊಳಿ ಕೊಟ್ಟು ಬಿಡೋಣ !

ಸದಾ :— ಬ್ಯಾಡ, ಇರಲಿ, ಹೋಗೋ. (ಕಣ್ಣು ಸನ್ನೆಯಿಂದ ಸುಮ್ಮನಿರು ಎಂದು ಸೂಚಿಸುತ್ತಾರೆ)

ರಾಮು :— (ಬಾಗಿಲ ಹೊರಗೆ ಹೆಜ್ಜೆಯಿಟ್ಟು, ಅಲ್ಲಿಂದಲೇ ಒಳಗೆ ತಿರುಗಿ ನೋಡಿ) ಅದು ನೋಡ್ರಿ, ಬಾಯೇರು ಬಂದುಬಿಟ್ರ್ರಿ ! (ಒಳಗೆ ಬಂದು) ಹಂಗಾರ ಚಾದ್ದು ತಯಾರೀಮಾಡ್ತೀನ ?

(ಒಳಗೆ ಹೋಗುತ್ತಾನೆ)

ಸದಾ :— (ಅತಿ ಗೊಂದಲಗೆಟ್ಟವನಾಗಿ ಏನು ಮಾಡಬೇಕೆಂಬುದು ತೋಚದೆ, ಅತ್ತಿತ್ತ ನೋಡ ತ್ತ) ಯಾರು ? ಅನುರಾಧಾ ? ಬಂದೇಬಿಟ್ಲೇ ?

ಕಲ್ಯಾಣ :— ಯಾರು ? ನಿಮ್ಮ ಮನೆಯವರೇನು ?

ಸದಾ :— (ಉತ್ತರ ಕೊಡದೆ ಬಾಗಿಲವರೆಗೆ ಹೋಗಿ) ಬರ್ರಿ.

[ಅನುರಾಧಾ ಒಳಗೆ ಬರುತ್ತಾಳೆ, ಕಲ್ಯಾಣಮೂರ್ತಿ ನಿಂತಿರುವುದನ್ನು ಕಂಡು ಗಾಬರಿಗೊಳ್ಳುವಳು. ಪರಕೀಯ ಹೆಣ್ಣು ಮಗಳು ಇಷ್ಟೊಂದು ಸಲುಗೆಯಿಂದ ಒಳಗೆ ಬಂದದ್ದನ್ನು ನೋಡಿ ಕಲ್ಯಾಣಮೂರ್ತಿ ದಿಙ್ಮೂಢರಾಗುವರು.]

ಕಲ್ಯಾಣ :— (ಸದಾನಂದರಿಗೆ) ಹಾಗಾದರೆ.... ...ನೀವೇನು ಇನ್ನು ಹೊರಬೀಳಲಿಕ್ಕಿಲ್ಲ. ಇವರು ನಮ್ಮ.. .....ಅ... ಅ....ಪ್ರಸಿದ್ಧ ಚಿತ್ರಕಲಾವಿದರಾದ ರಘುವೀರರ ಹೆಂಡತಿ ಅಲ್ಲವೆ ? (ಅನುರಾಧೆಗೆ) ನಮಸ್ತೆ !

ಅನು :— (ಮನಸ್ಸಿಲ್ಲದೆ) ನಮಸ್ತೆ !

ಕಲ್ಯಾಣ :— ಇಲ್ಲಿ ಬಂದಿದ್ದಿರಿ ? ಒರ್‍ತಾ ಇರ್‍ತೀರೇನು ಯಾವಾಗಲಾದರೂ ?

ಅನು :— ಇಲ್ಲ. (ಏನು ಹೇಳಬೇಕೆಂಬುದು ತೋಚದೆ ಕೊನೆಗೆ) ಇವರು ಶ್ರೀಮತಿಯವರು ನನ್ನಗೆಳತಿ ! ಅವರ್ನ ಕಾಣಲಿಕ್ಕೆ ಅಂತ ಬಂದೆ, (ಸದಾನಂದರನ್ನುದ್ದೇಶಿಸಿ) ಸುಮಿತ್ರಾಬಾಯಿ ಇಲ್ಲೇನು ಮನೆಯಲ್ಲಿ ?

ಸದಾ :— ಇಲ್ಲ, ಊರಿಗೆ ಹೋಗ್ಯಾಳಲ್ಲ ! (ಕಲ್ಯಾಣ ಮೂರ್ತಿಗೆ) ತಾವು ಹೊರಡ್ತೀರಾ ? ಸಹಾಯನಿಧಿಯ ವಿಷಯ ಹೀಂಗ ಮಾಡೋಣ: ನಾನೇ ಬರ್‍ತೀನಿ ನಿಮ್ಮ ಕಾರ್ಯಾಲಯಕ್ಕೆ. ನಮಸ್ಕಾರ, ನಮಸ್ಕಾರ, ಖಂಡಿತವಾಗಿ ಬರ್‍ತೀನಿ, ನಮಸ್ಕಾರ, ಒಂದೆರಡು ದಿವಸದಲ್ಲೇ ಬರ್‍ತೀನಿ ! ನಮಸ್ಕಾರ.

ಕಲ್ಯಾಣ :— (ಒಂದೊಂದೇ ಹೆಜ್ಜೆ ಮುಂದಿಕ್ಕುತ್ತ)ನೀವು ಕೈಗೆ ಸಿಕ್ಕೋದೇ ದುರ್ಲಭ; ಅದಕ್ಕೇನೆ ಸಿಕ್ಕಾಗಲೆ........

ಸದಾ :— ಇವತ್ತು ಯಾವ ತಾರೀಖು ? ಹದಿನೆಂಟು ! ೨೦ರ ನಂತರ ನನಗ ಬಿಡುವೇ ಬಿಡುವು. ೨೧ನೇ ತಾರೀಖಿ ನದಿನ ಮುಂಜಾನೆ, ೯|| ಒಳಗಾಗಿ ನಾನು ನಿಮ್ಮ ಕಾರ್ಯಾಲಯಕ್ಕೆ ತಪ್ಪದೇ ಬರ್‍ತೀನಿ. ನಮಸ್ಕಾರ, ನಮಸ್ಕಾರ !

ಕಲ್ಯಾಣ — ನಮಸ್ಕಾರ.

[ಕಲ್ಯಾಣ ಮೂರ್ತಿಯವರು ಅನುರಾಧೆಯ ಕಡೆಗೆ ದಿಟ್ಟಿಸಿ ನೋಡುತ್ತಲೇ ಹೊರಬೀಳುವರು. ಸದಾನಂದರು ಜೋರಾಗಿ ಬಾಗಿಲನ್ನು ಮುಚ್ಚಿಕೊಳ್ಳುವರು.]

ಸದಾ :— ಇವಗೇನು ವ್ಯವಹಾರಜ್ಞಾನ ಅದನೋ, ಏನು ಕಳ್ಳ ಸಂತೀಯೊಳಗ ಕಾಗದಾ ಮಾರಿಕೊಂಡ್ಹಾಂಗ ಅದನ್ನೂ ಮಾರಿಕೊಂಡು ಬಿಟ್ಟಾನೋ ? ರಟ್ಟ್ಯಾಗ ಕೈಹಾಕಿ ರಸ್ತೇದ ಮ್ಯಾಲ ಒಗಿಯೋದೊಂದು ಉಳಿದಿತ್ತು ! ಕೂಡು ಬಾ ಅನು. ಛೆ, ಛೆ, ಛೆ ಛೆ ! ಇಂಥ ಜಗಟು ಜಾಲೀ ತಂಟೆನ್ನ ಎಲ್ಲೂ ನೋಡಲಿಲ್ಲ ! ಏಕೀಕರಣಾಂತ, ಪಂಚವಾರ್ಷಿಕ ಯೋಜನಾ ಅಂತ ! ಯಾವಾಗ ನಿನ್ನ ಗಂಟ ಬಿದ್ದಿತೋ ಅಂತ ಇಲ್ಲೆ ನಾ ತಳಮಳಿಸುವಾಗ, ದೇಶದ ಗಂಟುಕಟ್ಟೋಯೋಜನಾದ ನೆವಮಾಡಿಕೊಂಡು, ನಿಧಿ ಕೇಳಲಿಕ್ಕೆ ಬಂದಾನ Stupid, Fool !

ಅನು :— ಬಾಗಿಲಾ ಮುಚ್ಚಿದಿರಲ್ಲ ! ಅದನ್ನ ತೆರೆದಿಡ್ರಿ.

ಸದಾ:— ಯಾಕ?

ಅನು :— ಬ್ಯಾಡ. ಆ ಸಂಪಾದಕರಿಗೆ ಸಂಶಯ ಬಂದೀತು!

ಸದಾ: – ಬಾಗಿಲಾ ತೆರದರ, ಏನಾದರೂ ನೆನಪು ಮಾಡಿಕೊಂಡು ಮತ್ತೆ ಒಳಗ ಬಂದಾಗಿಂದರಾನು; ಬ್ಯಾಡ! ಬೇಕಾದರ, ಅವ ಪೂರಾ ಹೋದನೋ ಇಲ್ಲೋ ಒಮ್ಮೆ ನೋಡಿ ಬರ್ತೀನಿ ನೀನು ಕೂಡಲ್ಲ? [ಸದಾನಂದರು ಬಾಗಿಲವರೆಗೆ ಹೋಗಿ, ಅದನ್ನು ತೆರೆದು, ಹೊರಗೆ ನೋಡಿ ಮತ್ತೆ ಮುಚ್ಚುವರು. ಅನುರಾಧಾ ಕೋಚಿನ ಮೇಲೆ ಬಂದು ಕೂಡುವಳು. ಆಕೆಯ ವಯಸ್ಸು ಸುಮಾರು ೨೫. ಅವಳು ಮಾಡಿಕೊಂಡ ಶೃಂಗಾರ ಅವಳ ರೂಪಕ್ಕೆ ಒಪ್ಪುವಂತಿದೆ ಅದರಲ್ಲಿ ಎಳ್ಳಷ್ಟೂ ಕೃತ್ರಿಮತೆ ಕಂಡುಬರುವುದಿಲ್ಲ. ಅವಳು ನಕ್ಕರೆ ಹೆಚ್ಚು ಮೋಹಕವಾಗಿ ತೋರುವಳು.]

ಅನು :— ನಾನು ಕೂತ್ರಿನಿ ನೀವು ಬಾಗಲಾ ಮಾತ್ರ ತೆರಿದಿಡಲೇ ಬೇಕು.

ಸದಾ :— ಅಲ್ಲ, ನಾವು ಏಕಾಂತವಾಗಿ ಮಾತನಾಡುವುದಾದರ, ಬಾಗಿಲಾ ಮುಂದೆ ಮಾಡಿದ್ದರ ಒಳ್ಳೇದು. ನಮ್ಮ ಮನೆಗೆ ಯಾವ ಹೊತ್ತಿನಲ್ಲಿ ಯಾರು ಭೆಟ್ಟಿಗೆ ಬಂದಾರು, ಗೊತ್ತಿಸದಲ್ಲ!

ಅನು :— ಹಾಂಗ ಈಗೂ ಬಂದರ ಬರವೊಲ್ಲರ‍್ಯಾಕ! ನಾವು ಇಬ್ಬರೇ ಒಳಗಿರೋದು ನನಗ ಸರಿ ಅನಿಸೋದಿಲ್ಲ.

ಸದಾ :— ಅಲ್ಲ, ರಾಮು ಇದ್ದಾನ ಒಳಗ; ಚಹಾ ಮಾಡ್ತಾ ಇದ್ದಾನ.

ಅನು :— ಅವನ್ನ ಬೇಕಾದರ ಹೊರಗ ಕಳಿಸ್ರಿ.

ಸದಾ :— ಓಹೊ, ಈಗ ಕಳಿಸಿ ಬಿಡ್ತೀನಿ. ರಾಮಾ! ಏ ರಾಮಾ .. ....

ರಾಮು : ಏನ್ ರಾಯರ?

ಸದಾ :— ಚಹಾ ಆಗಿದ್ದರ, ಹೊರಗ ತಂದಿಡು. ಅದರ ಜೋಡಿಗೆ ಫರಾಳದ್ದೂ.... ...

ರಾಮು :— ಹೂನ್ರಿ....

ಸದಾ :— ಮತ್ತ....ಅವನ್ನ ತಂದಿಟ್ಟು, ನೀ ಹೋಗು—

ರಾಮು : - ಹಾಂಗ ಮಾಡ್ತೀನ್ರಿ. (ಹೋಗುತ್ತಾನೆ).

ಅನು: — ಇಹೊತ್ತು ಈ ತಿಂಡಿ ತಿನಿಸು ಯಾಕ?

ಸದಾ :— ನೀ ಬರ್ತೀ ಅಂತ

ಅನು :— ನಾ ಬರೋದು ಇದೇ ಮೊದಲನೇ ಸಲ ಅಲ್ಲ.

ಸದಾ :— ಇವತ್ತ ನೀ ಬರೋದರೊಳಗ ಒಂದು ವಿಶೇಷ ಅದ!

ಅನು: — ಅದೇನದು ?

ಸದಾ :— ಒಂದೆರಡು ದಿವಸದೊಳಗ ಹೆಂಡತಿ ಬರ್ತಾಳ,

ಅನು :— ಸರಿ.

ಸದಾ:— ಆಮೇಲೆ ಈ ಮೋಜು ಸಿಗಲಿಕ್ಕಿಲ್ಲ.

ಅನು :— ಇದರಲ್ಲಿ ಮೋಜೇನು? ಅವರು ಬಂದಮ್ಯಾಲ ನಾನು ಇಷ್ಟು ಬೀಸಾಗಿ ನಡೀಲಿಕ್ಕಿಲ್ಲ ... ಅಷ್ಟೇ........

ಸದಾ :— ಅದೇ—ನಾನು ಹೇಳೋದು.

ರಾಮು :— ರಾಯರ, ಎಲ್ಲಾ ಟೀಪಾಯ ದ ಮ್ಯಾಲ ತಂದು ಇಟ್ಟೇನ್ರಿ

ಸದಾ :— ಸರಿ, ನೀ ಊಟಾ ಮಾಡಿಕೊಂಡು ಲಗು ಬಾ.

ರಾಮು :– ಬರ್ತೀನಿಬಿಡ್ರಿ. ನಿಮ್ಮದೆಲ್ಲಾ ಮುಗೀಲಿ (ಹೋಗುತ್ತಾನೆ.)

ಸದಾ :— ಇನ್ನ ಬಾಗಿಲ ಮುಚ್ಚಲಿಕ್ಕೆ ಅಡ್ಡಿಯಿಲ್ಲ —....

ಅನು :— ಇವತ್ತ ಬಾಗಿಲಾ ಮುಚ್ಚೋದರ ಕಡೆಗೆ ನಿಮ್ಮ ಲಕ್ಷ್ಯ ಯಾಕ? ತೆರೆದಿದ್ದರೇನು ತಪ್ಪು ?

ಸದಾ : – ಅಲ್ಲ, ತಪ್ಪು ಅಂದರ ...ಹೀಂಗ; ... ಯಾರಾದರೂ ಬಂದರ–ಗಿಂದರ.......

ಅನು :— ಬಂದರ ಬರಲಿ. ನಾವು ಚಹಾ ಕುಡೀತಾ ಕೂತದ್ದು ಅವರು ನೋಡಿದರ ತಪ್ಪೇನು? ಮೊದಲು ಅದನ್ನ ತೆರದಿಡ್ರಿ!

ಸದಾ : – (ಬಾಗಿಲನ್ನು ತೆರೆದು) ಆಯ್ತೀ, ಬಾ, ಚಹ ಅಂತೂ ಕುಡಿಯೋಣ ಅದು ತಣ್ಣಗಾಗ್ತಾ ಅದ. ನಿನ್ನ ಕೈಯಲ್ಲಿ ಕೈ ಹಾಕಿ ಕರೆದೊಯ್ಯಬೇಕು ಅಂತ ಇಂದು ಮನಸ್ಸಿನಲ್ಲಿತ್ತು..... ...

ಅನು :— ಇಷ್ಟೊತ್ತು ನಿಮ್ಮ ಮನಸ್ಸಿನಲ್ಲಿ ಏನೇನೋ ಬರ್ತಾ ಅದ ... ...ನಡೀರಿ. ಚಹಕ್ಕಂತೂ ಕೂಡೋಣ.

ಸದಾ :— ಅನುರಾಧಾ, ನನ್ನ ಸಹವಾಸ ಬೇಸರ ಬಂತೇನು?

ಅನು :— ಸಹವಾಸದ್ದು ಬೇಸರ ಬರಲಿಲ್ಲ. ಸಲುಗೆಯದು ಬಂತು. ನಿಮ್ಮ ಸಹವಾಸ ನಾನು ಬಯಸಿ ಬಂದದ್ದು ಜ್ಞಾನದ ವಿನೋದಕ್ಕಾಗಿ; ಪ್ರೇಮದ ಸಲುಗೆಗಾಗಿ ಅಲ್ಲ.

ಸದಾ :— ಇದುವರೆಗೆ ನೀನು ಬಹಳ ಮುಕ್ತ ಮನಸ್ಸಿನಿಂದ ನನ್ನ ಜೊತೆಗೆ ನಡೀತಾ ಇದ್ದೆ. ಇಂದೇ.......

ಅನು :— ನೀವೂ ಹಾಂಗೇ ನಡೀತಾ ಇದ್ದಿರಿ; ಇಂದು ಮಾತ್ರ ನಿಮ್ಮಲ್ಲಿ ಬಹಳ ಬದಲಾವಣೆ ಕಂಡು ಬಂತು. ನನ್ನ ಆ ಫೋಟೊ ಟೇಬಲ್ ಮೇಲೇಕೆ ಇರಿಸಿಕೊಂಡಿರಿ?

ಸದಾ :— ಯಾವಾಗಲೂ ನನ್ನ ಕಣ್ಣೆದುರಿಗೆ ನೀನು ಇರಬೇಕು ಅಂತ,

ಅನು :— ನಿಜವಾಗಿ ಅದು ನಾನಾಗಿ ನಿಮಗೆ ಕೊಟ್ಟದ್ದಲ್ಲ. ನೀವೇ ನನ್ನ ಬ್ಯಾಗಿನಲ್ಲಿ ಕೈಹಾಕಿ, ಜುಲುಮೆಯಿಂದ ತೆಗೆದುಕೊಂಡದ್ದು.

ಸದಾ :— ನೀನಾಗಿಯೇ ಕೊಟ್ಟಿರಲಿ, ಅಥವಾ ನಾನೇ, ತೆಗೆದುಕೊಂಡಿರಲಿ, ಅದರ ಮೇಲಿನ ಮಮತೆ ಸುಳ್ಳೇನು? ಬಹಳವಾದರೆ ಇನ್ನೆರಡು ದಿವಸ ಅದು ಟೇಬಲ್ ಮೇಲಿರಬಹುದು.

ಅನು :— ಅಷ್ಟೂ ಇರೋದು ಬೇಕಾಗಿಲ್ಲ,

ಸದಾ :— ಬೇಸನ್‌ಲಾಡು!

ಅನು :— ನನಗದು ರುಚಿಸೋದಿಲ್ಲ.

ಸದಾ :— ನಿನ್ನ ಬಾಯಲ್ಲಿ ಹಾಕಿದರೆ ರುಚಿಸುತ್ತದೇನು ?

ಅನು —: ಬೇಕು ಅಂದರ ನನಗ ಕೈ ಇಲ್ಲೇನು ?

ಸದಾ : - ಎಲ್ಲವ?

ಅನು :— ಇದೇನು ?

(ಸದಾನಂದರು ಅವಳ ಕೈಹಿಡಿಯುತ್ತಾರೆ.)

ಅನು :— ಬಿಡ್ರಿ ನನ್ನ ಕೈ.

ಸದಾ :— ಬಿಡುವುದಿಲ್ಲ ...ಏನು ಮಾಡ್ತೀ ?

ರಾಮು :— (ಪ್ರವೇಶಿಸಿ) ರಾಯರ !

ಸದಾ :— ಯಾರು ? ರಾಮು ! ಯಾಕೋ ? ನೀ ಬಂದಿ ?

ರಾಮು :— ಹಾದ್ಯಾಗ ರಘುವೀರಪ್ಪನವರು ಬಾ ಅಂದರ್ರಿ, ಬಂದೆ,

ಸದಾ:— (ಗಾಬರಿಗೊಂಡು) ಮತ್ತ ಅವರು ?

ರಾಮು:— ಹೊರಗ ನಿಂತಾರ್ರಿ; ತಾವು ಒಳಗ ಬರಬೇಕೇನು ಕೇಳು ಅಂದರ್ರಿ.

ಸದಾ:— (ಎದ್ದು ಬಾಗಿಲಿಗೆ ಬಂದು) ಬರ್ರಿ, ಮಿಸ್ಟರ್ ರಘುವೀರ. ನಿಮ್ಮ ಮಿಸೆಸ್ ಇಲ್ಲೀ ಇದ್ದಾರ, ಕಾಲೇಜ್ ಕ್ಲಾಸ್ ಲೆಕ್ಚರಿನ ಬಗ್ಗೆ ಮಾತಾಡೋದಿತ್ತು. ಕರೆಸಿಕೊಂಡಿದ್ದೆ.

ರಘುವೀರ:— (ಅವರ ಮಾತನ್ನು ಲಕ್ಷಿಸದೆ ಹೆಂಡತಿಗೆ, ಗಡುಸುದನಿಯಲ್ಲಿ) ಅನು, ನಿನಗ ಇವರ ಲೆಕ್ಚರ್ ಕೇಳೋದದನೋ ನನ್ನ ಜತೀಗೆ ಬರೋದನೋ ? ಎರಡರಲ್ಲಿ ಒಂದು.......

ಅನು : — ಬರ್‍ತೀನಿ ?........

ರಘು :— ಪ್ರೊಫೇಸರ್‌ಸಾಹೇಬ, ನಾಳೆ ಈಕೆಯ ರಾಜೀನಾಮೆ ಬರ್‍ತದ, ಪ್ರಿನ್ಸಿಪಾಲರಿಗೆ ಹೇಳಿ ಮಂಜೂರ್ ಮಾಡಿಸಿರಿ. ಚಹಾ ಫರಾಳ ಮುಗಿದಿತ್ತೋ ?

ಸದಾ :— ಇಲ್ಲ, ಇದೇ....ಬರ್ರಿ, ತುಸು ಚಹ ತೊಗೊಂಡು....

ರಘು :— ಇದೆಲ್ಲ ನೋಡಿ ಹೊಟ್ಟಿ ತುಂಬಿತು. ಬರ್‍ತೀನಿ— ಆ ಟೇಬಲ್ ಮೇಲಿನ ನನ್ನ ಹೆಣ್ತಿಯ ಫೋಟೋ ಅಷ್ಟು ಕೊಟ್ಟು ಬಿಡ್ತೀರೇನು ?.... (ಸದಾನಂದ ಕೈ ನಡುಗಿಸುತ್ತ ಅದನ್ನು ರಘುವೀರನ ಕೈಯಲ್ಲಿ ಕೊಡುತ್ತಾನೆ).

ರಘು :— (ಆ ಫೋಟೊ ಅಷ್ಟನ್ನು ಹೊರತೆಗೆದು ಅದರ Frame ಸದಾನಂದನ ಕೈಗೆ ಕೊಡುತ್ತ) ನಿಮ್ಮ ಈ Frame ಇಟಗೊಳ್ರಿ, ಇನ್ನೊಬ್ಬರ ಪ್ರೇಮ ಮಾತ್ರ ಇಟಗೋಬ್ಯಾಡ್ರಿ. (ಹೆಂಡತಿಗೆ) ಹಂ.........ನಡಿ ....

(ಹೆಂಡತಿಯೊಂದಿಗೆ ಸಾವಕಾಶವಾಗಿ ಹೋಗುತ್ತಿರುವಾಗ ತೆರೆ).

ಬೇಸಗೆಯಲ್ಲಿಯ ಕೊನೆಯ ಗುಲಾಬಿ.......*

ಶ್ರೀ. ಬಿ. ಬಿ. ಹಿಂಗಮಿರೆ, ರಾಜಾಪೂರ (ಕೃಷ್ಣಾತೀರ)

ಬೇಸಗೆಯಲ್ಲಿಯ ಕೊನೆಯ ಗುಲಾಬಿಯು
    ತೋಟದೊಳೊಂದೇ ಅರಳಿಹುದು;
ಅಕ್ಕ-ತಂಗಿಯರ ಮತ್ತೆ ಕೆಳದಿಯರ
    ಸಂಗತಿಯಿಲ್ಲದೆ ಬಾಡಿಹುದು !
ನೆರವನೀಯಲಿಕೆ ಕೆಳೆಯ ತೀವಲಿಕೆ
    ಒಂದೂ ಪುಷ್ಪವು ಅರಳಿಲ್ಲ;
ಉಸಿರಿಗೆ-ಉಸಿರನು ಬೆರೆಯಿಸೆ ತಂಬನಿ-
    ಯೊರೆಸಲು ದೈವದಿ ಬರೆದಿಲ್ಲ ! ೧

ಒಂಟಿ ಜೀವನವ ನೋಡಲಾರೆ ನಾ-
    ಕೇಳೆನು ನಿನ್ನಯ ಕರುಣಸ್ವರ;
ನಿನ್ನ ನೇಹಿಗರು ಮಲಗಿದತ್ತ ನೀ-
    ಬಾ ಮಲಗಿಲ್ಲಿ ಸುರಭಿಪೂರ !
ನಿದ್ರಿಸುತಿರುವರ ಮಧ್ಯದೊಳಲ್ಲಿಯೆ
    ನಿನ್ನಯ ಎಲೆಗಳ ಹಾಸುವೆನು;
ನಿದ್ರಿಸು, ನಿದ್ರಿಸು ! ಸಾವುಪೀಠದಲಿ
    ಚರಮಗೀತೆಯನು ಹಾಡುವೆನು ! ೨

ಚೆಲುವ ಗುಲಾಬಿಯೆ, ನಾನೂ ಬರುವೆನು
    ಬಂಧು-ಮಿತ್ರರಾ ಮಡಲಿನಲಿ;
ಇನ್ನು ಕೆಲವು ದಿನ ಉಳಿಯುವೆನಿಲ್ಲಿಯೆ
    ಪ್ರೇಮದ ಜೇನಿನ ಕಡಲಿನಲಿ !
ಹಾಳು ಸುರಿಯುತಿಹ, ಗೆಳೆಯರಿಲ್ಲದಿಹ
    ಶೂನ್ಯ ಪ್ರಪಂಚದಿ ನಾನಿರೆನು;
ನಿದ್ರಿಸು, ನಿದ್ರಿಸು ! ಸಾವಪೀಠದಲಿ
    ಚರಮಗೀತೆಯನು ಹಾಡುವೆನು !

* 'Thomas Moore' ಅವರ It is the last rose of Summer ಎಂಬುದರ ಅನುವಾದ

*ಕಾವ್ಯದಲ್ಲಿ ಪ್ರತಿಮಾಸಂವಿಧಾನ

ಶ್ರೀ. ಜಿ. ವ್ಹಿ. ಕುಲಕರ್ಣಿ, ಸೀನಿಯರ್ ಎಂ. ಎ.
ಶ್ರೀ. ಎ. ವ್ಹಿ. ಗೋಕಾಕ, ಧಾರವಾಡ

ಲೇಖಾಂಕ ೧

ಪ್ರತಿಮೆಯೆಂದರೇನು?

'ಪ್ರತಿಮೆ' ಎಂಬ ಶಬ್ದ, ಇತ್ತೀಚಿಗೆ ಬಳಕೆಯಲ್ಲಿ ಬಂದುದು. ಇದು 'Image' ಎಂಬ ಆಂಗ್ಲ ಪದದ ಸಮಾನ ಶಬ್ದವಾಗಿರುತ್ತದೆ. ಮುಕ್ತಛಂದ, ಪ್ರಬಂಧ, ಸಣ್ಣಕತೆ, ಗೀತನಾಟಕ ಮುಂತಾದುವುಗಳು ಕನ್ನಡಕ್ಕೆ ಆಂಗ್ಲ ಸಾಹಿತ್ಯದ ಪ್ರಭಾವದಿಂದ ಬಂದಂತೆ, ಪ್ರತಿಮಾ-ವಿಧಾನವೂ ಬಂದಿತು. ಇಝ್ರಾ ಪೌಂಡರು ಈ ಪ್ರತಿಮಾವಿಧಾನವನ್ನು ಕಾವ್ಯಪ್ರಪಂಚದಲ್ಲಿ ಮೊದಲು ತಂದರು. ಪ್ರತಿಮಾವಿಧಾನವಾದಿ ಕವಿಗಳ—ಗುಂಪೊಂದು ೧೯೧೨ರಲ್ಲಿ ಇಂಗ್ಲಂಡಿನಲ್ಲಿ ಬೆಳಕಿಗೆ ಬಂದಿತು.

ಹಿಂದಿನ ನಮ್ಮ ಕಾವ್ಯದಲ್ಲಿ ಅಲಂಕಾರಗಳು ಕೇವಲ ಬೆಡಗನ್ನು ತೋರಿಸುತ್ತಿದ್ದುವು. ಈ ಅಲಂಕಾರಗಳಿಂದ ಪ್ರತಿಮಾವಿಧಾನವು ಬೇರೆಯಾಗಿ ನಿಲ್ಲುತ್ತದೆ. ಪ್ರತಿಮೆಗಳೇ ಇಂದು ಕಾವ್ಯದ ಜೀವಾಳ-ವಾಗಿರುತ್ತವೆ.

ಪ್ರತಿಮೆಯು ಮಾನಸಶಾಸ್ತ್ರ ಹಾಗೂ ಸಾಹಿತ್ಯಕ್ಕೆ ಸಂಬಂಧಿಸಿದ ವಿಷಯವಾಗಿದೆ. ಮಾನಸಶಾಸ್ತ್ರದಲ್ಲಿ ಪ್ರತಿಮೆಗಳೆಂದರೆ ಸ್ಮೃತಿಗಳು; ಭೂತಕಾಲದ ವಿಸ್ಮಯಜನಕ ಅಥವಾ ಶಾಶ್ವತ ಅನುಭವಗಳು. ಈ ಅನುಭವಗಳು ದೃಷ್ಟಿಗೋಚರವಾಗಿರಲೇಬೇಕೆಂದಿಲ್ಲ; ಇಲ್ಲಿ ಪ್ರತಿಮೆ-ಯೆಂಬ ವಿಷಯವನ್ನು ಸಾಹಿತ್ಯದ ದೃಷ್ಟಿಯಿಂದ ಅಭ್ಯಸಿಸುತ್ತೇವೆ.

"ಒಬ್ಬ ಕವಿಯ ಯೋಗ್ಯತೆಯನ್ನು ಅಳೆಯಬೇಕಾದರೆ, ನಾವು ಅವನ ರೂಪಕಗಳ ಶಕ್ತಿ, ಮತ್ತು ಅಂತಃಸತ್ತ್ವ ಇವುಗಳನ್ನು ಪರಿಶೀಲಿಸಬೇಕು" ಎಂದು ಹರ್ಬರ್ಟ್ ರೀಡ್ ಎಂಬ ಆಂಗ್ಲಕವಿಯ ಅಭಿಪ್ರಾಯವಿದೆ. "ರೂಪಕಗಳ ಮೇಲಿರುವ ಕವಿಯ ಪ್ರಭುತ್ವವೇ ಅವನ ಪ್ರತಿಭೆಯ ಸಂಕೇತನಾಗಿದೆ" ಎಂದು ಅರಿಸ್ಟಾಟಲ್ ನುಡಿದಿ-ದ್ದಾನೆ. ಮೇಲಿನ ಎರಡೂ ಉಕ್ತಿಗಳು ಪ್ರತಿಮೆಯ ಮಹತ್ತ್ವವನ್ನು ತೋರಿಸುತ್ತವೆ. ಇತ್ತೀಚಿನ ಕಾವ್ಯಮಾರ್ಗವು ಪ್ರತಿಮಾನಿಷ್ಠ-ವಾಗಿರುವುದರಿಂದ, ಈ ಪ್ರತಿಮೆಯೆಂದರೇನು? ಇದು ಕಾವ್ಯದಲ್ಲಿ ಹೇಗೆ ರೂಪಗೊಳ್ಳುತ್ತದೆ?—ಎಂಬ ಪ್ರಶ್ನೆ ಉದ್ಭವಿಸುತ್ತವೆ.

ಪ್ರತಿಮೆಯು ಶಬ್ದಗಳ ಸಹಾಯದಿಂದ ಮೂಡಿಸಿದ ಒಂದು ಚಿತ್ರ. ರೂಪಕ, ಉಪಮೆ ಮತ್ತು ಗುಣನಾಮ (epithet) ಇವು ಪ್ರತಿಮೆಗಳನ್ನು ಸೃಷ್ಟಿಸಬಲ್ಲವು. ಆದರೆ ಇವೇ ಪ್ರತಿಮೆಗಳಲ್ಲ. ನಮ್ಮ ಕಲ್ಪಕತೆಗೆ ಚಾಲನೆ ಕೊಡುವಂಥ ಧ್ವನಿಪೂರ್ಣವಾಗಿರುವ ಯಾವುದೇ ಪದಗುಂಫನ ಅಥವಾ ವಾಕ್ಯಸರಣಿಯು ಪ್ರತಿಮೆಯನ್ನು ನಿರ್ಮಿಸಬಲ್ಲದು. ಆದುದರಿಂದ ಪ್ರತಿಯೊಂದು ಕಾವ್ಯಪ್ರತಿಮೆಯು ಒಂದು ರೀತಿಯಲ್ಲಿ ರೂಪಕಾತ್ಮಕವಾಗಿರುತ್ತದೆ. ಪ್ರತಿಮೆಗಳು ಸರ್ವ ಸಾಮಾನ್ಯವಾಗಿ ದೃಷ್ಟಿಗೋಚರವಾಗಿರುತ್ತವೆ. ನಿರೀಂದ್ರಿಯ ಜನ್ಯ-ವಾದ ಪ್ರತಿಮೆಗಳಲ್ಲಿ ಕೂಡ ಅಸ್ಪಷ್ಟವಾದ ದೃಷ್ಟಿಗೋಚರತೆ ಕಂಡು-ಬರುತ್ತದೆ. ಪ್ರತಿಮೆಯು ರೂಪದಂತೆ ಉಳಿದ ಇಂದ್ರಿಯಗಳಿಗೆ ರುಚಿ, ಸ್ಪರ್ಶ, ಗಂಧ, ಶ್ರವಣ ಮುಂತಾದ ಅನುಭವಗಳನ್ನು ನೀಡಬಲ್ಲದು.

ರೂಪಕ್ಕೆ :—

ಆನಂದಕಂದರು ಮನ್ಸೂನ್ ಗಾಳಿಯನ್ನು ಕರೆಯುವಾಗ.

....

ಜಡಿಯ ಮುಗಿಲ ಕೆಳೆಯ ಸೇರಿ
ನಿಡುಮಲೆಗಳ ತಲೆಯನೇರಿ
ಕಣಿವೆಯಿಳಿದು ಬಾರಾ!
ಬಾ ಶ್ರಾವಣ ಶುಭಸಮಾರ ಬಾರಾ!—

ಎಂದಾಗ, 'ಜಡಿಯ ಮುಗಿಲ ಸ್ನೇಹ ಮಾಡಿದ ಚಿತ್ರ'—ದಟ್ಟವಾದ ಪರ್ವತ ಶ್ರೇಣಿಯ ತಲೆಯೇರಿ ಮುಂದೆ ಕಣಿವೆಯಿಳಿದು ಬರುವ ಚಿತ್ರ—ನಮ್ಮ ಕಣ್ಣಿನ ಮುಂದೆ ಕಟ್ಟುತ್ತದೆ.

ರುಚಿಗೆ :—

ಹೂತಽದ ಹುಣಸಿಯಾ ಚಿಗುರು
ಮದರಂಗಿ ಬಣ್ಣದುಗುರು
ರುಚಿಗೆ ಹುಳಿಯೊಗರು
ನೋಡೀ ಜೀವಕ್ಕನಿಸಿತಽ ಹಗುರು ||

(ಬೇಂದ್ರೆ)

ಇಲ್ಲಿ ಹುಣಿಸೆಯ ಮರದ ಚಿತ್ರಕ್ಕಿಂತ ಹೆಚ್ಚು ಅದರ ಹುಳಿಯೊಗರಾದ ರುಚಿ ನೆನಪಿಗೆ ಬಂದು, ರಸಿಕರ ಬಾಯಲ್ಲಿ ನೀರೂರುತ್ತದೆ.

ಸ್ಪರ್ಶಕ್ಕೆ:—

'ತೋರಲಾರದ ಗಾಳಿ ತಟ್ಟಿ ತಿಳಿಸುವೆಯೇನು?
ಯಾವ ನಾಡಿನ ಸೀಮೆ ತುಳಿದು ಬಂದೆ?'

ಎಂಬ ಮಧುರಚೆನ್ನರ ಉಕ್ತಿಯಲ್ಲಿ, ಅಗೋಚರವಾಗಿಯು ಕೂಡ ಗಾಳಿಯು ಯಾವುದೋ ನಾಡಿನ ಸೀಮೆ ತುಳಿದು ಬಂದು ತಮ್ಮನ್ನು ತಟ್ಟಿದಾಗ, ಸ್ಪರ್ಶಜ್ಞಾನವಾಗುತ್ತದೆ.

---

* ಸಿ. ಡೆ. ಲ್ಯೂಯಿಸರ ತತ್ತ್ವಸರಣಿಯನ್ನು ಅನುಸರಿಸಿ ಮುಖ್ಯ ವಿಚಾರಗಳನ್ನು ಉಪಯೋಗಿಸಿ ಬರೆದುದು. —ಲೇಖಕರು

ಗಂಧಕ್ಕೆ :—

ಹೊಳೆವ ಸುಗಂಧೀ ಜಾಜಿ
ಗಮಗಮಾ ಜಾಜಿ
ಘಮಘಮ ಗಂಧ
ಘಮಘಮ ಗಂಧ ||
ಶಾವಂತಿ ಹೂವಿನ ಕಂಪು
ಇಡಿಗಿಡದ ಕಂಪು
ಇಡಿಗಿಡದ ಕಂಪು
ಇದು ಬಾಳು ಜೇನ ಬನ ಬ್ಯಾಡ —
[illegible] ” (ಬೇಂದ್ರೆ)

ಸ್ಪರ್ಶಕ್ಕೆ :—

‘ಏನು ! ಏನು ? ಜೇನು ಜೇನು ? ಏನೆ ಗುಂಗುಂ ಗಾನಾ
[illegible]
[illegible]....
[illegible] ’

ಎಂಬ ಬೇಂದ್ರೆಯವರ ಸಾಲುಗಳನ್ನು ಓದುವಾಗ, ಗುಂಗುಂ ಗಾನ [illegible]

[illegible] ಪ್ರತಿಮೆಗಳಲ್ಲಿ [illegible]

‘[illegible]
[illegible]’

‘[illegible]’ ಎಂಬ ಸಾಲುಗಳನ್ನು ನೋಡಬಹುದು.

[illegible]

ಈ ರೀತಿಯಿಂದ ವಿಚಾರಿಸಿದರೆ, [illegible] ಪರಿಪೂರ್ಣವಾದೀತೇ ? [illegible]

ಕೆಲವು [illegible]

[illegible]

ಸ್ತ್ರೀ [illegible]
[illegible] ।
[illegible] ।
[illegible],
[illegible] —

ಎಂಬ [illegible]

[illegible] ತಿಳಿಯಬಹುದು —

‘[illegible]
[illegible] !
[illegible]
[illegible]
[illegible]
[illegible]
[illegible]
[illegible] !

[illegible]

[illegible] ? [illegible]

“[illegible]” ಎಂದು [illegible]

[illegible]

“.... ....
[illegible] ಬಣ್ಣ [illegible]
ಹೂಗಳು [illegible] ಹಣ್ಣುಗಳು
[illegible] ಪಕ್ಷಿಗಳು
[illegible] ಒಂದಾಗಿದ್ದು [illegible] !
ಇದು [illegible] ? [illegible]
ಇದು [illegible] ? [illegible] !—

([illegible])

ಇಂದು ದೇಶದಲ್ಲಿ [illegible]

“ [illegible]
[illegible]
[illegible]
[illegible] ! ”

[illegible]

[illegible]

— [illegible]

ಈ [illegible]

[illegible] :

[illegible] :—

(೧) [illegible] ಒಂದು [illegible]

(೨) [illegible]

(೩) [illegible]

(೪) [illegible]

(೫) ಈ [illegible]

ಈ [illegible] ?

[illegible]

ಆದರೆ ಒಬ್ಬ ಕವಿಯ ಮುಂದೆ ಇವೇ ವಸ್ತುಗಳನ್ನಿಡಲು, ಅವನು ಸಮಾನತೆಯನ್ನು ಅರಸುತ್ತ ನಡೆಯುತ್ತಾನೆ. ಕಲ್ಪಕತೆಗೆ ವಿಭಿನ್ನತೆಯಲ್ಲಿ ಕೂಡ ಸಮಾನತೆ ಕಾಣುತ್ತದೆ. ವಿಭಿನ್ನತೆಯಲ್ಲಿ ಸಮಾನತೆಯನ್ನು ಗ್ರಹಿಸುವುದೇ ಕವಿಯ ಮಾರ್ಗ. ಪ್ರಾಥಮಿಕವಾಗಿ ಎರಡು ವಸ್ತುಗಳಲ್ಲಿಯ ಸಮಾನತೆಯು ಸರಿಯಾಗಿರಬೇಕು. ನಮಗೆ ಗೊತ್ತಿಲ್ಲದ ಸಮಾನತೆಯನ್ನು ಕವಿಯು ತೋರಿಸಿದಾಗ, ಒಂದು ಹೊಸ ರಹಸ್ಯವನ್ನು ಅರಿತಂತೆ ಓದುಗನು ಆನಂದಿತನಾಗುತ್ತಾನೆ.

"ಮುಳುಗಿದನು ಚಂದ್ರ ಕ್ಷಣದಲ್ಲಿ ಹಬ್ಬಿತು ತಮವು
ಕಣ್ಣ ಕಾಡಿಗೆಯನ್ನು ಮುಖದ ತುಂಬೆಲ್ಲೊರಸಿಕೊಂಡ
ಕೂಸಿನ ಹಾಗೆ"
—(ಕೀರ್ತಿನಾಥ)

ಚಂದ್ರನು ಅಸ್ತನಾದುದನ್ನು ಯಾರು ನೋಡಿಲ್ಲ? ಮಗು ಹಚ್ಚಿದ ಕಾಡಿಗೆಯನ್ನು ಮುಖದ ತುಂಬೆಲ್ಲ ಒರಸಿಕೊಂಡದ್ದನ್ನು ಯಾರು ನೋಡಿಲ್ಲ? ಆದರೆ ಇವೆರಡರಲ್ಲಿಯೂ ಸಾಮ್ಯವಿದೆಯೆಂಬುದನ್ನು ಕವಿಯು ಹೇಳಿದಾಗ ಓದುಗನಿಗೆ ಆನಂದವಾಗುತ್ತದೆ. ಮೊದಲು ಗೊತ್ತಿಲ್ಲದ ಒಂದು ಮಾತು ಅರಿತಂತಾಗುತ್ತದೆ. ಇದೇ ರೀತಿಯಾಗಿ ಹೊಸ ಹೊಸ ರೂಪಕ ಗುಣನಾಮ ಉಪಮೆಗಳನ್ನು ಸೃಷ್ಟಿಸಿ ಸಮಾನವಾದ ಗುಣವನ್ನು ಆರೋಪಿಸುವುದರಿಂದಾದ ಪ್ರತಿಮೆಯಿಂದ ಒಂದು ಹೊಸ ರೀತಿಯ ಅನುಭವವಾದಂತಾಗಿ ಆನಂದವಾಗುತ್ತದೆ.

ಕವಿಯು ಒಂದು ವಸ್ತುವಿನ ಪುನರ್‌ನಿರ್ಮಿತಿಯನ್ನು ಮಾಡುವಾಗ, ಅವನು ಕೇವಲ ಆ ವಸ್ತುವಿನ ಪುನರ್‌ನಿರ್ಮಾಣವನ್ನು ಸಾಧಿಸುವುದಿಲ್ಲ, ಅದರ ಜೊತೆಗೆ ಅವನು ಆ ವಸ್ತುವಿನ ಬಗ್ಗೆ ಇದ್ದ ತನ್ನ ಮನೋಭಾವನೆಗಳನ್ನು ಪುನರ್‌ನಿರ್ಮಿಸುತ್ತಾನೆ. ಕವಿಯ ಈ ಪುನರ್ ನಿರ್ಮಿತಿಯಲ್ಲಿ ವಸ್ತುಸ್ಥಿತಿಯೊಡನೆ ಅನುಭವದ ಧ್ವನಿಯೂ ಇರುತ್ತದೆ. ವಸ್ತು ಮತ್ತು ಮನೋಭಾವನೆಗಳ ಸಂಯೋಗವನ್ನು ನಿರ್ಮಿಸಿ ಯಾವಾಗ ಕವಿಯು ಇವುಗಳ ಸಾಮ್ಯವನ್ನು ಒಳಗೊಂಡ ಪ್ರತಿಮೆಯನ್ನು ನಿರ್ಮಿಸುತ್ತಾನೋ, ಆವಾಗ ನಮಗೆ ಯಾವುದೋ ಒಂದು ರಹಸ್ಯದ ಅರಿವಾದಂತೆ ಭಾಸವಾಗುತ್ತದೆ.

ಒಬ್ಬ ಸಾಮಾನ್ಯ ಮನುಷ್ಯನು ಯಾವುದೇ ವಸ್ತುವಿನ ನಿಜವಾದ ಸೌಂದರ್ಯವನ್ನು ಹಾಗೂ ವೈಶಿಷ್ಟ್ಯವನ್ನು ಗುರುತಿಸಲಾರ. ದೈನಂದಿನ ವಿಚಾರಗಳಿಂದ ಅವನ ಕಲ್ಪಕತೆಯು ಮಂಕಾಗಿರುತ್ತದೆ. ಕವಿಯು ವಸ್ತುಗಳನ್ನು ಇದ್ದಂತೆಯೇ ನೋಡಿ ಅವುಗಳ ವೈಶಿಷ್ಟ್ಯ ಮತ್ತು ಸೌಂದರ್ಯವನ್ನು ತನ್ನ ಕಲಾಪೂರ್ಣವಾದ ದೃಷ್ಟಿಯಿಂದ ಪರಿಶೀಲಿಸಿ, ಪ್ರತಿಮೆಯನ್ನು ಸೃಷ್ಟಿಸುತ್ತಾನೆ. ಇದನ್ನು ಮಾಡಲು ಕವಿಯಲ್ಲಿ ಎರಡು ಗುಣಗಳ ಆವಶ್ಯಕತೆಯಿದೆ.

(೧) ಚಿತ್ತದ ಏಕಾಗ್ರತೆ.
(೨) ಸ್ವಂತದ ಮೇಲಿನ ಹಿಡಿತ.

ಇವುಗಳನ್ನು ಪಡೆಯಲು ಅವನು ಶ್ರಮಿಸಬೇಕಾಗುವುದು. ಕಾವ್ಯವು ಹೊಸ ವಿಶೇಷಣ, ರೂಪಕಗಳನ್ನು—ಅವು ನವೀನವಾಗಿವೆ ಎಂಬ ಅರ್ಥದಿಂದ ಸ್ವೀಕರಿಸುವುದಿಲ್ಲ. ಆದರೆ ಹಳೆಯವು ಒಂದು ವಸ್ತುವನ್ನು ಸೂಚಿಸದೆ ಅಸ್ಪಷ್ಟವಾದ ಗುರುತುಗಳಾಗುತ್ತವೆಯೆಂದು ಸ್ವೀಕರಿಸುತ್ತದೆ. ಮುಖಚಂದ್ರ, 'ಕಮಲಾನನ' ಮೊದಲಾದುವು ಮೇಲಿಂದ ಮೇಲೆ ಪ್ರಯೋಗಿತವಾಗಿ, ಮೊದಲಿದ್ದ ಸೌಂದರ್ಯವನ್ನು ಕಳೆದುಕೊಂಡಿವೆ. ಇವುಗಳಿಂದ ಕವಿಯ ಪ್ರತಿಮೆಯಲ್ಲಿ ಹುದುಗಿದ್ದ ಅನುಭವದ ಧ್ವನಿ, ಅಪಾನುಭವದ ನೆಗೆತಗಳನ್ನು ಗುರುತಿಸಲಾಗುವುದಿಲ್ಲ. ಮೇಲೆ ವಿವರಿಸಿದ ವಿಚಾರವನ್ನು ಟಿ. ಇ. ಹ್ಯೂಮ್ ಎಂಬವನು ಬರೆದಿದ್ದಾನೆ. ಈ ವಿಚಾರವನ್ನು ನಾವು ಅಂಗೀಕರಿಸುತ್ತೇವೆ. 'ಸರಿಯಾದ ಮತ್ತು ನಿಶ್ಚಿತವಾದ ವರ್ಣನೆಯೇ ಕಾವ್ಯದ ಗುರಿಯಾಗಿದೆ' ಎಂಬ ಹ್ಯೂಮನ ವಿಚಾರವು ಸಂಪೂರ್ಣವಾಗಿ ಸರಿಯಾಗಿಲ್ಲ. ಕೇವಲ ತಾದ್ರೂಪ್ಯವೇ ಕಾವ್ಯದ ಗುರಿಯಾಗಲಾರದು. ಒಂದು ವಸ್ತುವಿನ ವರ್ಣನೆಯನ್ನು ಕೂಲಂಕಷವಾಗಿ ಅತಿಸೂಕ್ಷ್ಮವಾಗಿ ಕವಿಯು ಮಾಡಿದರೆ, ಆ ವಸ್ತುವೇ ನಮ್ಮ ದೃಷ್ಟಿಯಿಂದ ಮಾಯವಾಗುತ್ತದೆ. ಅದರೊಡನೆ ಕಾವ್ಯವು ಯಾಂತ್ರಿಕವಾಗುತ್ತದೆ.

ಕವಿಯಲ್ಲಿ ತಾದ್ರೂಪ್ಯದ ಜ್ಞಾನವು ಕೆಲಮಟ್ಟಿಗೆ ಇರಬೇಕು. ಜಗತ್ತಿನಲ್ಲಿ ಯಾವ ವಸ್ತುವೂ—ನಿಜವಾಗಿ ಹೇಳುವುದಾದರೆ—ಪ್ರತ್ಯೇಕವಾಗಿಲ್ಲ, ಪರಿಪೂರ್ಣವಾಗಿಲ್ಲ ಮತ್ತು ಸ್ವಾವಲಂಬಿಯಾಗಿಲ್ಲ ವಾಸ್ತವಿಕತೆಯು ಸಂಬಂಧವನ್ನು ಒಳಗೊಂಡಿರುತ್ತದೆ. ಎಲ್ಲಿಯವರೆಗೆ ಕವಿಯಲ್ಲಿ ವಸ್ತುಗಳ ಬಗ್ಗೆ ಹುಟ್ಟಿದ ಭಾವನೆಗಳ ಬಗ್ಗೆ ನಿಶ್ಚಿತ ಜ್ಞಾನವಿರುವುದಿಲ್ಲವೋ, ಅಲ್ಲಿಯವರೆಗೆ ಅವನು ವಸ್ತುಗಳನ್ನು ಇದ್ದಂತೆಯೇ ನೋಡಲಾರ ಮತ್ತು ಅವುಗಳ ಬಗ್ಗೆ ಖಚಿತವಾಗಿ ಹೇಳಲಾರ. ಬೇರೆ ಬೇರೆ ವಸ್ತುಗಳಲ್ಲಿರುವ ಸಂಬಂಧ ಮತ್ತು ವಸ್ತುಗಳ ಹಾಗೂ ಭಾವನೆಗಳ ಸಂಬಂಧ ಇವುಗಳನ್ನು ತೋರಿಸುವ ಆವಶ್ಯಕತೆಯೇ ಕವಿಯನ್ನು ರೂಪಕನಿರ್ಮಾಣಕ್ಕೆ ತೊಡಗಿಸುತ್ತದೆ ಇದೇ ಆವಶ್ಯಕತೆಯು ಒಂದು ಕವನದಲ್ಲಿರುವ ಪ್ರತಿಮೆಗಳಲ್ಲಿ ಪರಸ್ಪರ ಸಂಬಂಧವಿರಬೇಕು ಎಂಬ ಮಾತನ್ನು ಎತ್ತಿ ತೋರಿಸುತ್ತದೆ.

ಕಲ್ಪಕತೆಯೇ ಪ್ರತಿಮೆಯ ಮೂಲ ಎಡಮನಿಗೆ ಒಂದು ಕನಸು ಬಿತ್ತು. ಅದರಲ್ಲಿದ್ದಂತೆಯೇ ಎದ್ದ ಮೇಲೆಯೂ ಘಟಿಸಿತು. ಈ ಕನಸಿಗೆ ಕಲ್ಪಕತೆಯನ್ನು ಕೀಟ್ಸನು ಹೋಲಿಸುತ್ತಾನೆ ಕೇವಲ ಈ ಎಡಮನ ಪ್ರತಿಮೆಯಿಂದ ಕೀಟ್ಸನು ಕಾವ್ಯನಿರ್ಮಿತಿಯ ರೀತಿಯನ್ನು ಸ್ಪಷ್ಟಪಡಿಸಿದ್ದಾನೆ ಕಲ್ಪಕತೆಯಲ್ಲಿ ಗ್ರಹಿಸುವ ಶಕ್ತಿಯಿರುತ್ತದೆ; ಅದು ಸುಪ್ತಪ್ರಜ್ಞೆಯಲ್ಲಿಯೇ ತನ್ನ ಕಾರ್ಯವನ್ನು ಮಾಡುತ್ತದೆ. ಕನಸಿನಂತೆ ಅದಕ್ಕೆ ತಾನು ಸತ್ಯವನ್ನು ನಿರ್ಮಿಸುತ್ತಿರುವೆನೆಂಬ ಅರಿವು ಇರುವುದಿಲ್ಲ. "ಜಗತ್ತಿನಲ್ಲಿ ನಂಬಬಹುದಾದ ಪ್ರತಿಯೊಂದು ವಸ್ತುವೂ ಸತ್ಯದ ಪ್ರತಿಮೆ" ಎಂದು ಬ್ಲೇಕ್ ನುಡಿದಿದ್ದಾನೆ. ಕೀಟ್ಸನು ಹೇಳಿದ ಮಾತನ್ನು ಮುಂದೆ ಚರ್ಚಿಸಲಾಗಿದೆ. ವಾಚಕರ ಮೇಲೆ ಪ್ರತಿಮೆಯು ಯಾವ ಪರಿಣಾಮವನ್ನು ಉಂಟುಮಾಡುತ್ತಿದೆಯೆಂಬುದನ್ನು ನೋಡಬೇಕಾಗಿದೆ. ಅದಕ್ಕೆ ಬ್ಲೇಕನ ಸೂತ್ರವನ್ನು ನಾವು ಧ್ಯಾನಿಸಿದರೆ, ಅದು ಕಾವ್ಯದಲ್ಲಿರುವ ನಂಬಿಗೆಯ

(belief) ಸಮಸ್ಯೆಯನ್ನು ಬಿಡಿಸುತ್ತದೆ ಎಂಬ ಮಾತು ಗೊತ್ತಾಗುತ್ತದೆ. ಕಾವ್ಯವು ಉತ್ಕಟವಾದ ಭಾವನೆಯ ಶಕ್ತಿಯಿಂದ ನಮ್ಮಲ್ಲಿ ಸತ್ಯದ ಪ್ರತಿಮೆಯ ಬಗ್ಗೆ ನಂಬುಗೆಯನ್ನು ಉಂಟುಮಾಡು. ತ್ತದೆ ಯಾಕೆಂದರೆ ಉತ್ಕಟವಾದ ಭಾವನೆಯಲ್ಲಿ ಸತ್ಯವಿರುತ್ತದೆ. ಈ ಸಂದರ್ಭದಲ್ಲಿ ಬುದ್ಧಿಯು ಸುಪ್ತಾವಸ್ಥೆಯಲ್ಲಿರಬೇಕು; ಕಾರಣ ಕಾವ್ಯವು ಹೃದಯಂಗಮ್ಯ ಪ್ರತಿಮೆಯನ್ನು ಮನಗಾಣುವಂತೆ ಚಿತ್ರಿ-ಸುವುದೇ ಕಾವ್ಯದ ಕರ್ತವ್ಯ. ಆದರೆ ಜಾಗೃತಬುದ್ಧಿ ಅದಕ್ಕೆ ಆತಂಕವಾಗುತ್ತದೆ; ಅದ್ದರಿಂದ ವಾಚಕನಿಗೆ ಪ್ರತಿಮೆಯ ಸೌಂದರ್ಯವನ್ನು ಅನುಭವಿಸಲು ಸಾಧ್ಯವಾಗುವುದಿಲ್ಲ. ಪ್ರತಿಮೆಯು ತನ್ನನ್ನೇ ಚಿತ್ರಿಸುವುದಿಲ್ಲ, ಅದು ಸತ್ಯವನ್ನು ಚಿತ್ರಿಸುತ್ತದೆ. ಇದು ಕಾವ್ಯ ಪ್ರತಿಮೆಯ ಪ್ರಥಮ ವೈಶಿಷ್ಟ್ಯ.

ಕಾವ್ಯಪ್ರಪಂಚವೇನೋ ಸಾಂಸ್ಕೃತಿಕವಾಗಿರುತ್ತದೆ. ಒಂದು ಕವನವು ತನ್ನ ಪ್ರತಿಮಾಮಾದರಿಯ ಸಹಾಯದಿಂದ ದೈನಂದಿನ ಜಗತ್ತಿನೊಡನೆ ತನ್ನ ಸಂಬಂಧವನ್ನು ಸ್ಥಾಪಿಸುತ್ತದೆ. ಈ ಸಂಬಂಧ-ಗಳನ್ನು ವಾಚಕನಿಗೆ ತಿಳಿಸುವ ಸಾಧನವೆಂದರೆ ಕಾವ್ಯಪ್ರತಿಮೆ. ಆದರೆ ಪ್ರತಿಮೆಯು ಇದಕ್ಕೂ ಹೆಚ್ಚು ಮಹತ್ತ್ವಪೂರ್ಣವಾದ ಕಾರ್ಯವನ್ನು ಮಾಡುವುದೇನೆಂದರೆ: ವಾಸ್ತವಿಕ ಜಗತ್ತಿನಲ್ಲಿಯೂ ಕೂಡ ಒಂದು ಮಾದರಿ ಕಂಡು ಬರುತ್ತದೆ-ಎಂಬುದನ್ನು ತೋರಿಸುವುದು. ಇದು ಕಾವ್ಯಪ್ರತಿಮೆಯ ದ್ವಿತೀಯ ವೈಶಿಷ್ಟ್ಯ.

ರೋಮ್ಯಾಂಟಿಕ್ ಕವಿಗಳ ಪ್ರಕಾರ ಸೌಂದರ್ಯದ ಅತಿ ಸೂಕ್ಷ್ಮ ಅಂಗವೂ ಇಡೀ ಜಗತ್ತಿನ ಸಹಜ ಜ್ಞಾನ (intuition) ವನ್ನು ಮಾಡಿಕೊಡಬಲ್ಲದು. ಸಿ. ಡೆ. ಲ್ಯೂಯಿಸ್‌ರ ಪ್ರಕಾರ ಸೌಂದರ್ಯದ ಅತಿ ಸೂಕ್ಷ್ಮ ಅಂಶವು ಕೂಡ ನಮಗೆ ಇಡಿ ಜಗತ್ತಿನ ಸಹಜಜ್ಞಾನವನ್ನು ಸಣ್ಣ ಪ್ರಮಾಣದಲ್ಲಿ—ಕೊಡುತ್ತದೆ ಇವರ ಮಾತು ಹೆಚ್ಚು ಸಮಂಜಸವಾಗಿ ಕಾಣುತ್ತದೆ.

ಸಂಬಂಧವೇ ರೂಪಕದ ಮೂಲಸ್ವಭಾವ. ಇಡಿ ವಿಶ್ವವೇ ಒಂದು ಕುಟುಂಬ. ಮನುಜರು ಮತ್ತು ಎಲ್ಲ ವಸ್ತುಗಳು ಈ ಕುಟುಂ-ಬದ ಸದಸ್ಯರಿದ್ದು, ಅವರಲ್ಲಿ ಪರಸ್ಪರ ಸಂಬಂಧವಿದೆ—ಎಂದು ನಾವು ತಿಳಿದರೆ, ರೂಪಕವು ಇಡಿ ಜಗತ್ತಿನ ಸಹಜ ಜ್ಞಾನವನ್ನು ಸಣ್ಣ ಪ್ರಮಾಣದಲ್ಲಿ ಕೊಡುತ್ತದೆ ಎಂದೆನ್ನಬೇಕಾಗುವುದು. ಪ್ರತಿಯೊಂದು ಕಾವ್ಯಪ್ರತಿಮೆಯೂ ರೂಪಕದ ಸಹಾಯದಿಂದ, ಈ ವಿಶ್ವದ ಒಂದು ಸಣ್ಣ ಭಾಗವನ್ನು ಸ್ಪಷ್ಟ ರೀತಿಯಲ್ಲಿ ಪ್ರಕಟಮಾಡಿ, ಅದರ ಅನಂತ ವ್ಯಾಪ್ತಿಯನ್ನು ತೋರಿಸುತ್ತದೆ.

ಕಾವ್ಯ ಪ್ರತಿಮೆಯು ಕೇವಲ ಒಂದು ವಸ್ತುವಿನ ಪುನರ್-ನಿರ್ಮಿತಿಯನ್ನು ಸಾಧಿಸುವುದಿಲ್ಲ; ಅದು ಒಂದು ಅನುಭವದ ಯಾವುದೋ ಸಂದರ್ಭದಲ್ಲಿದ್ದ ವಸ್ತುವನ್ನೂ ಪುನರ್‌ನಿರ್ಮಿಸುತ್ತದೆ.

ಕಾವ್ಯ ಪ್ರತಿಮೆಗೆ " The myth of the individual " ಎಂದು ಲ್ಯೂಯಿಸರು ಕರೆದಿದ್ದಾರೆ. ಹಿಂದಿನ ಕಾಲದಲ್ಲಿ ಬರೆದ ಮಹಾಭಾರತ, ರಾಮಾಯಣ, ಇಲಿಯಡ್, ಮುಂತಾದ ಮಹಾ-ಕಾವ್ಯಗಳನ್ನು ಒಬ್ಬನೇ ಕವಿ ರಚಿಸಿದನೆಂದು ಹೇಳಲು ಬರುವಂತಿಲ್ಲ. ಆ ಕಾಲದ ಸಮಾಜದ ಜನರೇ ಅದನ್ನು ಬರೆದಂತಿದೆ. ಮುಂದೆ ಬಂದ ಪೀಳಿಗೆ ಅದರಲ್ಲಿ ತಮ್ಮ ವಿಚಾರ ಸೇರಿಸಿ, ಗಾತ್ರವನ್ನು ಹೆಚ್ಚಿಸಿದರು. ಸಮಾಜವನ್ನು ಸುಧಾರಿಸಲೆಂದು ಈ ಮಹಾಕಾವ್ಯಗಳು ಹುಟ್ಟಿದುವು; ಆದರೆ ಇಂದಿನ ಕಾಲದಲ್ಲಿ ಬಹಳ ಬದಲಾವಣೆ ಕಂಡುಬರುತ್ತಲಿದೆ. ಕಾವ್ಯಪ್ರತಿಮೆಯಲ್ಲಿ ಕವಿಯ ವ್ಯಕ್ತಿತ್ವದ ಮುದ್ರೆಯು ಕಂಡು ಬರುತ್ತದೆ. ರಾತ್ರಿಯ ಆಗಸಕ್ಕೆ ' ರೇಡಿಯಂ ರಿಸ್ಟ್‌ವಾಚ್ ' ಎಂದು ಕರೆದಾಗ, ಮತ್ತು T. S. ಹ್ಯೂಮನು ಆಗಸಕ್ಕೆ

" Oh ! God, make small
The old star eaten blanket of the sky,
Tha I may fold it round me and—
in comfort lie "

ಎಂದಿದ್ದಾನೆ. ಕವಿ ಆನಂದಕಂದರು, ಸೂರ್ಯನು ಕೆಂಪಡರಿದಾಗ ಮಗುವಿನ ಬಾಯಿಂದ ಈ ರೀತಿ ನುಡಿಸಿದ್ದಾರೆ:

ಕೆಂಪು ಕೆಂಪಾಗಿರುವುದೇಕೆ ಸೂರ್ಯನ ಮೈಯು
ಕೆಂಪು ಕೆಂಪಿರುವುದೇಕೆ ?
ನಿನ್ನೆ ಕೆಮ್ಮಣ್ಣಾಟವಾಡಿ ಹೋಗಲು ಇವನ
ಮಣ್ಣು ಮುಸುಕಿರುವ ಮೈಯನು ತಾಯಿ ನೋಡುತಲಿ
ತನ್ನ ಸೀರೆಯ ಸೆರಗಿನಿಂಬೊರೆಸಬಾರದೇ ?
ಮಣ್ಣು ಮುತ್ತಿಹುದು ಇನ್ನೂ ಇವನ ಮೈಗೆಲ್ಲ !
ಚೆನ್ನಾಗಿ ಇದನೆಲ್ಲವನು ತಿಳಿದೆನಮ್ಮ—
ನಿನ್ನಂತೆ ಇಲ್ಲ ನೋಡೆ, ಈತನಮ್ಮ ! (ಮುದ್ದನ ಮಾತು)

ಇಲ್ಲಿ ಕವಿಯ ವ್ಯಕ್ತಿತ್ವದ ಮುದ್ರೆ ಮೂಡಿದೆ. ಕಾವ್ಯಪ್ರತಿಮೆಯೆಂದರೆ ಕವಿಯ ವ್ಯಕ್ತಿತ್ವದ ಮುದ್ರೆ.

ಜಗತ್ತಿನಲ್ಲಿಯ ವಸ್ತುಗಳಲ್ಲಿ ಅಡಗಿರುವ ಸತ್ಯವನ್ನು ಶೋಧಿ-ಸುವುದೇ ಕಾವ್ಯದ ಗುರಿ. ಈ ಸತ್ಯದ ಶೋಧವನ್ನು ಕಾವ್ಯವು ಯಾವಾಗಲೂ ನಡೆಸಿರುತ್ತದೆ; ಹಳೆಯ ಸತ್ಯಗಳ ಪರಿಶೋಧನೆ-ಯನ್ನೂ, ಹೊಸ ಸತ್ಯಗಳನ್ನು ಗುರುತಿಸುವ ಕಾರ್ಯವನ್ನೂ ತನ್ನ ಪ್ರತಿಮೆಯ ಮೂಲಕ ಕೈಕೊಂಡಿರುತ್ತದೆ ಜಗತ್ತಿನಲ್ಲಿಯ ವಸ್ತುಗಳು ಯಾವಾಗಲೂ ಬದಲಾವಣೆಯನ್ನು ಹೊಂದುತ್ತಿರುತ್ತವೆ; ಆದ್ದರಿಂದ ಯಾವ ಕಾವ್ಯ ಪ್ರತಿಮೆಯೂ ಸಂಪೂರ್ಣವಾದ ಸತ್ಯವನ್ನು ಪಡೆಯ-ಲಾರದು.

ಕಾವ್ಯಪ್ರತಿಮೆಯು ಯಾವಾಗಲೂ ಶೋಧನೆಯಲ್ಲಿ ತೊಡಗಿ, ಸತ್ಯವನ್ನು ಪಡೆಯಲು ಹಾರೈಸಿ, ತಾನು ಹರವಾಗಿದ್ದರೂ ಹೆಚ್ಚು ಹರವಾಗಲು ಬಯಸಿ, ತಾನು ಉಚ್ಚವಾಗಿ ಹಾರುತ್ತಿದ್ದರೂ ಹೆಚ್ಚು ಎತ್ತರ ಬಯಸಿ, ತನಗೆ ಗೊತ್ತಿರುವುದಕ್ಕಿಂತ ಹೆಚ್ಚು ಉಚ್ಚವಾದು-ದನ್ನೂ ಕಲ್ಪಿಸುತ್ತ, ಅನುರಕ್ತವಾದ ಅನುಭವದಿಂದ ಸತ್ಯವನ್ನೂ ಪ್ರಕಟಮಾಡುತ್ತದೆ; ಮತ್ತು ಆ ಸತ್ಯವನ್ನು ನಾವು ಒಪ್ಪಿಕೊಳ್ಳುವಂತೆ ಮಾಡುತ್ತದೆ.

"It is better to present one Image in a life time, than to produce voluminous work "

—Ezra Pound.

ವಸಂತಿಯ ಮಡಿಲಲ್ಲಿ

(ಸಣ್ಣಕತೆ)*

ಶ್ರೀ. ಬಿ. ಜಯಾಚಾರ್ಯ, ಬಿ. ಎಸ್‌ಸಿ. ಬೆಂಗಳೂರು

ರೈಲ್ವೇ ಅಪಘಾತದಲ್ಲಿ, ಹೊಳೆಯಲ್ಲಿ ಮುಳುಗಿ ಸತ್ತ ಮೃತಾತ್ಮವೊಂದು ತನ್ನ ಅನುಭವಕಥನವನ್ನು ತೋಡಿಕೊಂಡಿದೆ. ಹೊಸಮಾದರಿಯ ಕಥನತಂತ್ರ! ಇಂದಿನ ವಿಷಮಜೀವನದ ವಿಡಂಬನೆಯೇ ಈ ಕಥೆಯ ಹಾಸು-ಹೊಕ್ಕು!

ಇದೇ ಈಗ ಇಲ್ಲಿಂದ ಮುಖ್ಯಮಂತ್ರಿಯವರು ಹೋದರು. ನಾನು ಅವರನ್ನು—ದೂರದಿಂದ ಬರುವಾಗಲೇ—ಗುರುತಿಸಿದೆ. ನಮ್ಮ ಪಟ್ಟಣದ ಮಂತ್ರಿವರ್ಯರನ್ನು ಯಾರು ಗುರುತಿಸರು? ಇವರ ಹಿಂದೆ ಖಾದೀ ಟೊಪ್ಪಿಗೆಗಳನ್ನು ಧರಿಸಿದ ಎಷ್ಟೋ ದೊಡ್ಡ ಜನರಿದ್ದರು. ಅವರೆಲ್ಲರೂ ಇಲ್ಲಿಂದ ಹಾದು ಹೋಗುವಾಗ, "ಯುವರ್ ಆನರ್—ಯುವರ್ ಆನರ್—" ಎಂದು ನಾನು ಕೂಗಿದೆ; ಆದರೆ ಅವರು ನನ್ನನ್ನೇನೂ ಕೇಳಲಿಲ್ಲ. ಕೇಳುವುದಂತಿರಲಿ, ನನ್ನ ಮೇಲೆ ತಮ್ಮ ಅಸ್ಥಿರವಾದ ದೃಷ್ಟಿಯನ್ನು ಕೂಡ ಬೀರಲಿಲ್ಲ. ಎಷ್ಟೋ ಹೊತ್ತಿನಿಂದ ನಾನು, ಈ ಜಾಲಿಯ ಗಿಡದಡಿಯಲ್ಲಿ ಅವರಿಗಾಗಿ ಕಾದಿದ್ದೇನೆ.

ಅವರು ಹೋದ ಮೇಲೆ ನನಗೆ ಕೋಪ ಬಂದಿತು. ಆದರೆ ಏನು ಮಾಡುವುದೇನು! ಹಿಂದೆ ಮಾರವಾಡಿಯೊಬ್ಬನು ನನ್ನ ಸ್ಥಳವನ್ನಾಕ್ರಮಿಸಿ ಸುಖವಾಗಿ ಸರ್ವಾಂಗಗಳನ್ನು ಹರಡಿಕೊಂಡು ಮಲಗಿದಾಗಲೂ ನನಗೆ ತುಂಬ ಕೋಪ ಬಂದಿದ್ದಿತು. ಅವನ ಭುಜವನ್ನು ಅಲುಗಾಡಿಸುತ್ತ ನಾನು ಹೇಳಿದ್ದೆ:

"ಸೆಟ್ಟರೇಜಿ—ನಿಮಗೆ ಇಷ್ಟೇಜಿ ಸುಖಾಭಿಲಾಷೆಯಿದ್ದರೆ ಫಸ್ಟ್‌ಕ್ಲಾಸಿನಲ್ಲಿ ಪ್ರವಾಸಮಾಡಿರಿ—ವಿಮಾನದಲ್ಲಿ ಹಾರಾಡಿರಿ—ಬಡವರಾದ ನಮ್ಮ ಸ್ಥಾನವನ್ನೇಕೆ ಆಕ್ರಮಿಸುವಿರಿ?—ಇದು ನನ್ನ ಸ್ಥಳ—ನನ್ನದು—ತಿಳಿಯಿತೇಜಿ—"

ಆದರೆ ಅವನು ಕೇಳಿಯೂ ಕೇಳಿಸದಂತಿದ್ದ. ಪೂರ್ಣ ನಿದ್ರಾವಸ್ಥೆಯಲ್ಲಿದ್ದಂತೆ ನಟಿಸುತ್ತಿದ್ದ!! ಈ ಸೆಟ್ಟಿಯು ಎಷ್ಟು ಚಾಣಾಕ್ಷನೆಂದು ಯೋಚಿಸಿದೆ. ಇಂತಹರು ಮೊದಲಿಗೆ ಸ್ಥಳವನ್ನಾಕ್ರಮಿಸುತ್ತಾರೆ; ಏನೂ ಅರಿಯದವರಂತೆ ಆಮೇಲೆ ಸುಮ್ಮಗಿದ್ದುಬಿಡುತ್ತಾರೆ. ಇದೇ ಈಗ—ನಾನು ಚಹಾ ಕುಡಿಯಲು ಹೋದಾಗ, ಈ ಸೆಟ್ಟಿಮಗ ಬಾಗಿಲಲ್ಲಿಯೇ ನಿಂತುಕೊಂಡಿದ್ದ; ಈಗ ನನ್ನ ಸ್ಥಳದಲ್ಲಿಯೇ ಠೌಲಿನಿಂದ ಮಲಗಿದ್ದಾನೆ ಈ ಸ್ಥಳ ಯಾರದಿದೆಯೆಂಬುದನ್ನು ತೋರಿಸಿಯೇ ಬಿಡುತ್ತೇನೆ. ಎರಡೇ ನಿಮಿಷಗಳಲ್ಲಿ ನಿದ್ದೆಯಾದರೂ, ಹೇಗೆ ಬಂದಿದ್ದೀತು! ಕೋಟಿನ ಕಾಲರನ್ನು ಎಳೆಯುತ್ತ, ಕೈಯನ್ನು ಮುಷ್ಟಿಮಾಡಿ ಅವನ ಮೇಲೆ ಬಾಗಿದೆ—ಆದರೆ ಹಿಂದಿನ ಸೀಟಿನಿಂದ ಯಾರೋ ಮಹನೀಯರೆದ್ದು ನನ್ನನ್ನು ತಡೆದರು. ಅವನ ಮೇಲೆ ಒಂದೇ ಒಂದು ಪ್ರಹಾರವನ್ನೂ ಮಾಡಲಾಗಲಿಲ್ಲ. ಮನಸ್ಸುಮಾತ್ರ, ಓಡುವ ಗಾಡಿಯ ಕಿಟಕಿಯಿಂದಾಚೆ ಅವನನ್ನು ತಳ್ಳಬೇಕೆನ್ನುತ್ತಿತ್ತು. ಭಲೆ! ಈ ಸೀಟನ್ನು ಅವನಪ್ಪ "Reserve" (ರಿಝರ್ವ್) ಮಾಡಿಸಿದಂತೆ, ಸೊಗಸಾಗಿ ಕಣ್ಣುಮುಚ್ಚಿಕೊಂಡು ಮಲಗಿದ್ದಾನೆ....

ಆ ಮಹನೀಯನು ತನ್ನ ಸ್ಥಳವನ್ನು ತೋರಿಸುತ್ತ 'ನೀವು ಇಲ್ಲಿ ಕುಳಿತುಕೊಳ್ಳಿ!' ಎಂದ. ಆ ಸೀಟಿನಲ್ಲಿ ಮೊದಲೇ ಸ್ಥಳ ಕಡಿಮೆ ಇದ್ದುದ್ದನ್ನು ನಾನು ಕಂಡೆ. ಪಾಪ! ಆತನ ಹೆಂಡತಿ ಬಹಳ ಕಷ್ಟದಿಂದ ತನ್ನ ಮಗುವನ್ನು ಮಡಿಲಲ್ಲಿಟ್ಟುಕೊಂಡು ಕುಳಿತಿದ್ದಾಳೆ. ಆದರಲ್ಲಿ ಗಂಡ-ಹೆಂಡಿರ ನಡುವೆ, ಅರಿಯದ ಪರಕೀಯನು ಚೆನ್ನಾಗಿ ಕಾಣುವುದಿಲ್ಲ!

"ಬೇಡ ಬೇಡ—ನಿಮಗೇಕೆ ತೊಂದರೆ! ನಾನು ಬೇರೆ ಎಲ್ಲಿಯಾದರೂ ಕೂಡುತ್ತೇನೆ" ಎಂದೆ ನಾನು.

ಸ್ಥಳದ ಶೋಧನೆಯಲ್ಲಿ ಸುತ್ತಲೂ ದೃಷ್ಟಿ ಬೀರಿದೆ. ಆದರೆ ಪೂರ್ಣ ಡಬ್ಬಿಯು ಜನರಿಂದ ಕಿಕ್ಕಿರಿದು ಹೋಗಿದ್ದಿತು. ಇನ್ನೂ ಕೆಲವು ಪ್ರಯಾಣಿಕರು ಬಂದಿದ್ದರು. ಅವರಲ್ಲಿಯೊಬ್ಬನು ಉಬ್ಬಸಗೊಳ್ಳುತ್ತ ಸಾಮಾನನ್ನು ಸರಿಮಾಡುತ್ತಿದ್ದನು. ಮತ್ತೊಬ್ಬನು ಹೆಂಡತಿಯನ್ನು ಎಲ್ಲಾದರೊಂದು ಸೀಟಿನಲ್ಲಿ ಕೂಡಿಸಲು ಹೋರಾಡುತ್ತಿದ್ದನು. ಇನ್ನೊಬ್ಬನು, ತಂದಿದ್ದ ಸುಂದರವಾದ ಪೆಟ್ಟಿಗೆಯ ಮೇಲೇ ಕುಳಿತಿದ್ದನು. ಮತ್ತೆ ಬೇರೊಬ್ಬನು, ನನ್ನಂತೆ ನಿಂತಲ್ಲಿಂದಲೇ ಎಲ್ಲಿ ಕೂಡಬೇಕೆಂದು ಕಳ್ವಳಿಕೆಯಾಗಿ ನೋಡುತ್ತಿದ್ದನು!

* ಶ್ರೀ. ಅತಿಖಷ್ ಎಂಬವರ ಉರ್ದು ಕತೆಯೊಂದರ ಅನುವಾದವಿದು. —ಲೇ.

ಗಾಡಿಯು ಶಿಳ್ಳಿನೊಡನೆ, ' ಝುಕ್—ಝುಕ್ '— ಎಂದು ನಡೆಯಲಾರಂಭಿಸಿತು. ಅಲ್ಲಿ ಯಾವನೋ ಮೇಲಿತ್ತರ ಸ್ವರದಲ್ಲಿ ಕೂಗಿ ಹೇಳುತ್ತಿದ್ದ :—

" ಯಾರ ಕಣ್ಣಲ್ಲಿ ಪರೆ ಬಂದಿದೆಯೋ—ಉಬ್ಬಿದೆಯೋ—ಹೊದ್ದಿದೆಯೋ— ಹೇಳಿರಿ— ನಾನು ಅವರ ಸೇವೆಗಾಗಿ ಹಿಮಾಲಯದ ಅಡಿಯಿಂದ ತಂದ ಬೆಲೆಯುಳ್ಳ ಕಾಡಿಗೆಯನ್ನು ಕೊಡುವೆನು—ಒಂದೇ ಉಪಚಾರದಲ್ಲಿ——"

ಮತ್ತೊಬ್ಬ ಮಹಾಶಯನು ಅಮೃತಾಂಜನದ ಡಬ್ಬಿಗಳನ್ನು ಕೈಯಲ್ಲಿ ಹಿಡಿದು, ಅವನ ಭಾಷಣ ಮುಗಿಯುವುದನ್ನೇ ನಿರೀಕ್ಷಿಸುತ್ತಿದ್ದನು. ಆದರೆ ಯಾರೂ ಅವನ ಮಾತಿಗೆ ಗಮನಕೊಡುತ್ತಿರಲಿಲ್ಲ. ಎಲ್ಲರೂ ತಮ್ಮ ತಮ್ಮೊಳಗೆ ಮಾತನಾಡುತ್ತಿದ್ದರು; ಪರಸ್ಪರ ಪರಿಚಯ ಮಾಡಿಕೊಳ್ಳುತ್ತಿದ್ದರು :—

' ನಾನು ಬೆಜವಾಡಾಕ್ಕೆ ನಡೆದಿದ್ದೇನೆ ! '

' ನಾನು ಖಾಜಿಪೇಟಕ್ಕೆ ನಡೆದಿದ್ದೇನೆ ! '

' ನಾನು ಒರಂಗಲ್ಲಿಗೆ ನಡೆದಿದ್ದೇನೆ ! '

ಆದರೆ ನಾನು ?—

ನಾನು ದೇಶದ ದೊಡ್ಡ ಮಹನೀಯನಾದ ಪಂಡಿತ ನೇಹರೂ ಇರುವ ಪಟ್ಟಣಕ್ಕೆ ನಡೆದಿದ್ದೆ. ಅಲ್ಲಿ ದೇಶ-ವಿದೇಶಗಳ ಮೂಲೆ-ಮೂಲೆಗಳಿಂದ ದೊಡ್ಡ ದೊಡ್ಡ ಜನರು ಬರುತ್ತಾರೆ. ಮತ್ತೆ ಅಲ್ಲಿ ಲೋಕಸಭೆ ಸೇರಿ, ಎಷ್ಟೋ ಕೋಟಿ ಜನರ ಭವಿಷ್ಯದ ಬಗ್ಗೆ ತೀರ್ಮಾನವನ್ನು ಕೈಕೊಳ್ಳುತ್ತದೆ. ಅಲ್ಲಿ ಅಪರಾಧಿಗಳ ಕೂಗನ್ನು ಕೇಳಲು ದೇಶದ ದೊಡ್ಡ ನ್ಯಾಯಾಲಯವಿದೆ. ಹಿಮಾಚಲದ ಅನಂತರ ಎತ್ತರದಲ್ಲಿ ಗಣಿಸಲಾದ " ಖುತಬ್ " ಸ್ತಂಭವಿದೆ—

ನಾನು ನಡೆದದ್ದು ಇವೆಲ್ಲವನ್ನೂ ನೋಡುವುದಕ್ಕಲ್ಲ; ಆದರೆ ಒಂದು ಖಾಸಗೀ ಕಂಪನಿಯು ನನ್ನ ಹೊಲಸಾದ ಬಿ. ಎ. ಡಿಗ್ರಿಯ ಮೇಲೆ ಕನಿಕರಪಟ್ಟು, ನೂರು ರೂಪಾಯಿಗಳ ನೌಕರಿಯೊಂದನ್ನು ನನ್ನೆಡೆಗೆ ಎಸೆದಿದ್ದಿತು. ನಾನು ಅದನ್ನು ಸಾವಿರ ಮೈಲುಗಳ ದೂರದಿಂದಲೇ ಹಿಡಿದುಕೊಂಡೆ. " ಆಫೀಸ್ ಆರ್ಡರ್ " ನನ್ನ ಕೈಸೇರಿದಾಗ ಅದನ್ನು ಮುದ್ದಿಸಿದೆ; ನನ್ನ ತಾಯಿಯು ಜರ್ಜರಿತವಾದ ಚರ್ಮದಿಂದೊಪ್ಪುವ ಕೈಗಳಲ್ಲಿ ಅದನ್ನು ಕೊಟ್ಟಾಗ, ಅವಳು ಲಗು-ಬಗೆಯಿಂದ ನೆಟಿಗೆ ಮುರಿದಳು. ಎರಡು ಕಾಸುಗಳನ್ನು ನನ್ನ ಮುಖದ ಮೇಲಿಂದ ತಿರುವಿ, ಬಲಗೈಯ ತೋಳಿಗೆ ತಾಯಿತದಂತೆ ಕಟ್ಟಿ, " ನಿನ್ನನ್ನು ದೇವರು ರಕ್ಷಿಸಲಿ, ನನ್ನ ಕಂದಾ ! " ಎಂದಳು. ಆಮೇಲೆ ಸೆರಗಿನಿಂದ ತನ್ನ ಕಣ್ಣುಗಳನ್ನೊರಸಿಕೊಳುತ್ತ, " ನಿನ್ನ ತಂದೆ ಇಂದು ಬದುಕಿದ್ದರೆ ಎಷ್ಟೋ ಸಂತೋಷಿಸುತ್ತಿದ್ದರು !—" ಎಂದಳು.

ನನ್ನ— ಇಬ್ಬರು ವಯಸ್ಸಿಗೆ ಬಂದ— ಸಹೋದರಿಯರು ಎದುರಿಗೆ ನಿಂತಿದ್ದರು. ಅವರು ಎಷ್ಟೋ ಕಾಲದಿಂದ ತಮ್ಮ ಪತಿಗಳಿಗಾಗಿ ದಾರಿ ಕಾಯುತ್ತಿದ್ದರು. ಆದರೆ ಯಾರೂ ಕಣ್ಣೆತ್ತಿ ಕೂಡ ನೋಡಿರಲಿಲ್ಲ— ಆದರೆ ಈಗ !

ಬಾಡಿದ ನನ್ನ ಸಹೋದರಿಯರ ಮುಖಮಂಡಲಗಳಲ್ಲಿ ಮತ್ತೆ ನಗೆ ಮೂಡಿದ್ದರೂ, ಕಂಗಳು ಹನಿಗೂಡಿದ್ದುವು. ನಾನು ಆ ಕಣ್ಣೀರಲ್ಲಿ ಎರಡು ಮುಖಗಳನ್ನು ಕಂಡೆ—ಎರಡು ಬಾಸಿಂಗದಿಂದೊಪ್ಪುವ, ನಸುನಗುವ ವರಗಳ ಮುಖಗಳು ! ಕೂಡಲೆ ನನ್ನ ಕಿವಿಯಲ್ಲಿ ಮಂಗಳ ವಾದ್ಯಗಳು ಮೊಳಗಿದುವು. ನಾನು ಮುನ್ನುಗ್ಗಿ ನನ್ನ ಸಹೋದರಿಯ-ರನ್ನು ಎದೆಗಪ್ಪಿಕೊಂಡೆ—ಮತ್ತೆ ನಿರ್ವಚನೀಯವಾದ ನುಡಿಗಳಲ್ಲಿ ಹೇಳಿದೆ: —

" ಇನ್ನು ಆ ದಿನಗಳು ಬರುತ್ತವೆ—ಅವಶ್ಯ ಬರುತ್ತವೆ—"

ಹೊರಗಡೆ ' ರಿಕ್ಷಾ 'ಗಳಿಗೆ ಸಾಮಾನನ್ನು ಸಾಗಿಸುತ್ತ ಸಂತೋಷದಿಂದ ನನ್ನ ತಮ್ಮಂದಿರಿಬ್ಬರೂ ಸಿಳ್ಳು ಹಾಕುತ್ತಿದ್ದರು.—ಅದರಲ್ಲಡ-ಗಿದ ಅರ್ಥವೆಂದರೆ—ಇನ್ನು ನಾವು ರುಚಿರುಚಿಯಾಗಿ ಊಟಮಾಡ-ಬಹುದು,—ಒಳ್ಳೆಯ ಬಟ್ಟೆ ಧರಿಸಿಕೊಂಡು ಸುಖವಾಗಿ ಕೈಯಲ್ಲಿ ಕೈಹಾಕಿಕೊಂಡು "ಸ್ಕೂಲಿ"ಗೆ ಹೋಗಬಹುದು—ಏಕೆಂದರೆ ಅಣ್ಣನಿಗೆ ನೌಕರಿ ಸಿಕ್ಕಿದೆ—

ಮತ್ತೆ ನನ್ನ ಕುಲಸುಮ್‌ಳು ನನ್ನನ್ನು ಕಂಡೊಡನೆ ಅಪ್ಪಿ-ಕೊಂಡಳು !—ಅವಳು ಪ್ರತಿದಿನ ನನ್ನ ಸ್ವಪ್ನ ಮಂದಿರಕ್ಕೆ ಬರುತ್ತಿದ್ದಳು. ಅವಳು ನನ್ನ ನೌಕರಿಗಾಗಿ ದೇವರಲ್ಲಿ ಪ್ರಾರ್ಥಿಸಿದ್ದಳು. ಗಾಡಿ ಬರು-ವುದಕ್ಕಿಂತಲೂ ಮುಂಚಿತವಾಗಿಯೆ ನನಗಾಗಿ ನಿರೀಕ್ಷಕರ ಕೋಣೆಯಲ್ಲಿ ಕಾಯ್ದಿದ್ದಳು. ಅವಳು ಒಂದೂ ಮಾತನಾಡಲಿಲ್ಲ. ಅವಳ ಶರೀರದ ರೋಮರೋಮವೂ ಅಂಗಲಾಚಿ " ಬೇಗನೆ ಬಾ—ಬೇಗನೆ ಬಾ—" ಎಂದು ಬೇಡಿಕೊಳ್ಳುತ್ತಿತ್ತು.

ನಿರೀಕ್ಷಕರ ಕೋಣೆಯಲ್ಲಿ ಯಾರೂ ಇರಲಿಲ್ಲ. ಎಲ್ಲರೂ ಪ್ಲಾಟ್‌ಫಾರ್ಮಿನಲ್ಲಿ ಅತ್ತಿತ್ತ ಅಲೆದಾಡುತ್ತಿದ್ದರು. ಗಾಡಿ ಬಂದಿ-ದ್ದಿತು:—

ನಾನು ಅವಳ ಕಂಪಿಸುವ ತುಟಿಗಳನ್ನು ಚುಂಬಿಸುತ್ತ, " ಬರುವೆ—ಬೇಗ ಬರುವೆ—ನನ್ನ ಚಿನ್ನಾ ! " ಎಂದೆ.

ಆಮೇಲೆ ಎಷ್ಟೋ ಹೊತ್ತಿನ ವರೆಗೆ, ಕುಲಸುಮ್‌ಳ ಎತ್ತಿದ ಕೈ ನನ್ನನ್ನು ಕರೆಯುವಂತೆ ಕಾಣಿಸಿತು. ಹರಡುತ್ತಿದ್ದ ಇರುಳಿನಲ್ಲಿ ಕುಲಸುಮ್‌ಳು ಮಾಯವಾದಳು.

ನಾನು ದಿಲ್ಲಿಗೆ ಹೊರಟಿದ್ದೆ. ಆದರೆ ದಿಲ್ಲಿ ದೂರವೇ ಇತ್ತು. ಹೀಗೇ ನಿಂತುಕೊಂಡಿದ್ದರೆ ನಾನು ಸತ್ತುಹೋಗುವೆ.—ಹಿಂದಿನ ಸೀಟಿನಲ್ಲಿ ಕುಳಿತಿದ್ದ ಮಹನೀಯನ ಹೆಂಡತಿಯು " ಕುಳಿತು-ಕೊಳ್ಳಣ್ಣಾ ! " ಎನ್ನುತ್ತಿದ್ದಳು.

" ಅಣ್ಣಾ " ಎನ್ನುವುದು ಬರೀ ಶಬ್ದಮಾತ್ರವಲ್ಲದೆ, ಒಂದು ಜೋಗುಳವಾಗಿದ್ದಿತು —ಅದು ನನ್ನನ್ನು ಚಿಕ್ಕಂದಿನ ತೊಟ್ಟಿಲಲ್ಲಿಯೂ ಮಲಗಿಸಿತು.—ಕುಟುಂಬದ ಎಲ್ಲಾ ಹೆಂಗಸರು " ಢೋಲಕ್ "(ಢಕ್ಕೆ) ಬಾರಿಸುತ್ತ ಹಾಡುತ್ತಿರುವಂತೆ ಭಾಸವಾಯಿತು —ಅದರಲ್ಲಿ ಅಣ್ಣ-ತಂಗಿಯ ಹಾಡೊಂದಿತ್ತು—ಆ ಹಾಡಿನಲ್ಲಿ ತಂಗಿ ಅಣ್ಣನನ್ನು ಕುರಿತು ಕೇಳುತ್ತಾಳೆ: " ಅಣ್ಣಾ ! ಅತ್ತಿಗೆ ಬಂದ ಮೇಲೂ ನನ್ನನ್ನು ಹೀಗೆಯೇ ಪ್ರೀತಿಸುವೆಯಾ ? " ಅದಕ್ಕುತ್ತರವಾಗಿ ಅಣ್ಣನು " ಹೌದೇ ಹುಚ್ಚೀ " ಎಂದು ಹೇಳಿ, ಅದೇ ಪ್ರಶ್ನೆಯನ್ನು ತಂಗಿಗೆ ಕೇಳುತ್ತಾನೆ:

" ನೀನು ನನ್ನ ಪತಿಯ ಮನೆಗೆ ಹೋದ ಮೇಲೆ ನನ್ನನ್ನು ಮರೆಯುವೆಯಲ್ಲವೇ ? "

ಆಗ ತಂಗಿಯ ಕಣ್ಣುಗಳಲ್ಲಿ ಅಶ್ರು ತಾಣಿಸಿಕೊಳ್ಳುತ್ತವೆ. ಆ ಮೇಲೆ ಅವಳು ತನ್ನ ಎರಡೂ ತೋಳುಗಳನ್ನು ಅಣ್ಣನ ಕೊರಳಿಗೆ ಮಾಲಾಕಾರವಾಗಿ ಹಾಕಿ, " ಆಗ ನೀನು ಇನ್ನೂ [illegible] ಬರುವೆ— ನನ್ನ ನೆನಪಾದಾಗಲೆಲ್ಲ ' ಅವರನ್ನು '— ನನ್ನ ಅಣ್ಣನನ್ನು ಎಲ್ಲಾದರೂ ಕಂಡಿದ್ದಿರಾ ?—ಎಂದು ಕೇಳುವೆ—" ಎನ್ನುತ್ತಾಳೆ—

ಮರುಕ್ಷಣದಲ್ಲಿ ನನ್ನ ತುಟಿಗಳು ನನ್ನ ತಾಯಿಯ ಸುಗಂಧವಾದ ಮೊಲೆಹಾಲಿನ ರುಚಿಯನ್ನನುಭವಿಸಿದಂತೆ—ಮತ್ತೆ ಆಕೆಯ ಮಮತೆಯಿಂದ ತುಂಬಿದ ಕೈಗಳೆರಡೂ ನನ್ನನ್ನು ತನ್ನೆಡೆಗೆ ಎಳೆಯಲಾರಂಭಿಸಿದಂತೆ—

" ತಂಬಾಕು ಉಪಯೋಗವಾಯಿತೇನು " ಎನ್ನುತ್ತ ನಾನು [illegible] ಮೇಲೆ [illegible]. [illegible] ನಸುನಗುತ್ತ ತನ್ನ ಮಗುವನ್ನು [illegible] ತಟ್ಟಲಾರಂಭಿಸಿದಳು. ಆಕೆಯ [illegible] ಸಿಗರೇಟನ್ನು ನನಗೆ ಕೊಡುತ್ತ, ಸಾಮಾನ್ಯವಾಗಿ [illegible] ಪ್ರಶ್ನೆಗಳನ್ನು ಕೇಳಿದ—[illegible] ಮಾಡುತ್ತೀನೆ ?— [illegible] ಹೋಗುತ್ತಿದ್ದೀನೆ ?— ಮುಂತಾಗಿ—

ತನ್ನ ವಿಷಯದಲ್ಲಿ ಆತನು ನನಗೆ ಹೇಳಿದುದೆಂದರೆ—ಆತನ ಹೆಸರು ಸತ್ಯನಾರಾಯಣ— [illegible] " [illegible] " " [illegible] ([illegible]) " ಗಳ ಒಂದು [illegible] -ಹೆಂಡತಿಯನ್ನು ತನ್ನ ಅತ್ತೆಯ ಮನೆಗೆ ಕಳುಹಿಸಲು ನಡೆದಿದ್ದೇನೆ [illegible] ಎರಡು ಮೂರು ವಾರಗಳಲ್ಲಿ ಆತನು ಮತ್ತೆ [illegible] ತಂದೆಯಾಗುವವನಿದ್ದನು. ಸಾಮಾನ್ಯ [illegible] ಒಬ್ಬರು [illegible] ಹೋದರೆ. ಆತನು ಸ್ನೇಹದಿಂದ [illegible] ಮತ್ತು [illegible] ತನ್ನ ಬಳಿಯಲ್ಲಿರುವ [illegible] ಕೊಡಲಾರಂಭಿಸಿದನು.

ಮಾತನಾಡುತ್ತಿದ್ದಂತೆ ಆತನು [illegible] ಆತನ ಮುಖದಲ್ಲಿ [illegible] ನೆರಳು [illegible]. ಆ ಮೇಲೆ ಕಿಟಕಿಯಿಂದಾಚೆ ನೋಡಲಾರಂಭಿಸಿದನು.

[illegible] ತನ್ನ [illegible] ಬಲವನ್ನು [illegible], ಮತ್ತೆ [illegible] ಗಾಡಿ [illegible] [illegible] ಗಾಳಿಯು [illegible] ನಿದ್ರೆ [illegible] [illegible] ಮತ್ತೆ [illegible] ಗಾಢನಿದ್ರೆ [illegible] ಧಡ್ ಧಡ್ ಧಡ್—

ಮತ್ತೆ [illegible]—

ನಾನು ಆತನನ್ನು ಏನು ಯೋಚಿಸುತ್ತಿದ್ದೀರೆಂದು ಕೇಳಲಿಲ್ಲ— ಆದರೆ ನನ್ನ ಭಾವನೆಯಂತೆ, ಬಹು ಕಾಲದಿಂದ ತನ್ನ ವೃದ್ಧ ತಂದೆ-ತಾಯಿಗಳ ಮತ್ತು ತನ್ನ ಯೌವನದಿಂದೊಪ್ಪುವ ಪತ್ನಿಯ ಸ್ವಪ್ನದಲ್ಲಿ [illegible] ದೂರದ ದೇಶದಿಂದ ಬರುವ ಆ ಹೊಸ ಅತಿಥಿಯ ಆಗಮನದ ವಿಷಯವಾಗಿ ಆತನು ಯೋಚಿಸುತ್ತಿರಬಹುದು.

ಎರಡನೆಯ ಸಿಗರೇಟನ್ನು ಹಚ್ಚಿ, ದೀರ್ಘವಾಗಿ ಸೇದುತ್ತ ನಾನು ಕಾಲುಗಳನ್ನು ಮುಂದೆ ಚಾಚಿದೆ.

[illegible] ಇನ್ನೂ [illegible] ಇದ್ದಿತು. [illegible] ಅವರಿಗೆ [illegible]—[illegible] ಸಮಾಧಾನದಿಂದ [illegible]—[illegible] ಮಾತು— [illegible] ಎಲ್ಲಾ [illegible] ಎಂದು [illegible] ' ಎತ್ತಿನ ' [illegible] ಹೋಗುತ್ತಿತ್ತು !

[illegible] ಅವನ [illegible] ಅವನ [illegible] ಅವನು [illegible] ಅವನು [illegible] ಎಂದು [illegible] ' ನಾನೆ ' [illegible]—ಎಂದು [illegible]

[illegible] ' [illegible] ' [illegible]—ನಸುನಗುತ್ತ [illegible] ಸಿಗರೇಟನ್ನು [illegible] ನುಡಿಸುತ್ತಿದ್ದ :—

“ ಮೇರಾ ಶೇರೀ ಗಲೀ ಮೇ, ತೇರಾ ಶೇರೀ ಗಲೀಮೇ—” ಪಾಪ ! ಅವನಿಗೂ ಒಬ್ಬ ಜೊತೆಗಾತಿಯಿರಬಹುದು; ಯಾರಿಗೆ ಗೊತ್ತು !!

ಯೋಚಿಸುತ್ತಿದ್ದಂತೆ ಮೇಲಿಂದೊಂದು ಪದಾರ್ಥ ಕೆಳಗೆ ಬಿದ್ದಿತು ಅದೊಂದು ಪುಸ್ತಕ. ಅದರ ಜೊತೆಯಲ್ಲಿ, ಸಿನಿಮಾಯದಂತೇ ಮೇಲೆ ಮಲಗಿದ ಯುವತಿಯೊಬ್ಬಳು ಕೆಳಗೆ ಇಳಿದಳು. ಓರೆಯಾಗಿ ಉಟ್ಟಿದ್ದ ಅವಳ ಸೀರೆ ಮತ್ತು ಆ ದೊಡ್ಡ ಕಣ್ಣುಗಳನ್ನು ನೋಡಿ ದಿಗ್ಭ್ರಮೆಯಾಯಿತು. ಕೂಡಲೆ ನಾನು ಕೇಳಿಯೇ ಬಿಟ್ಟೆ—“ನಿಮ್ಮನ್ನು ನಾನೆಲ್ಲಿಯೋ ” ನನ್ನ ವಾಕ್ಯ ಮುಗಿಯುವ ಮೊದಲೇ ಬಿದ್ದ ಪುಸ್ತಕವನ್ನೆತ್ತಿಕೊಳ್ಳುತ್ತ ನಡುವೆ ಬಾಯಿ ಹಾಕಿ, “ಹೌದು—ಎಲ್ಲಿಯೂ ನೋಡಿಲ್ಲ—” ಎನ್ನುತ್ತ ಕೂಡಲೆ ನಕ್ಕಳು ಅವಳ ಆ ನಗು—‘ಇದೇನು ಹೊಸದಲ್ಲ, ಸಾಮಾನ್ಯವಾಗಿ ಎಲ್ಲಾ ಯುವಕರಿಗೆ ಸುಂದರ ಯುವತಿಯರನ್ನು ಕಂಡಾಗಲೆಲ್ಲ ಹೀಗೆ ಭಾಸವಾಗುತ್ತದೆ !’ ಎಂದು ಸೂಚಿಸುತ್ತಿತ್ತು.

“ ಕುಳಿತುಕೊಳ್ಳಿ ” ಎಂದೆ ನಾನು.

ಅವಳು ಕುಳಿತುಕೊಂಡಳು. ಆಕೆಯ ಹೆಸರು ‘ಕಮಲಾ’ ಎಂದಿತ್ತು. ಮಿಸ್ ಕಮಲಾ ವಿಶ್ವವಿದ್ಯಾಲಯದ ಫಸ್ಟ್-ಕ್ಲಾಸ್ ವಿದ್ಯಾರ್ಥಿನಿ ಎಂ. ಎಸ್‌ಸಿ. ಮುಗಿಸಿದ ನಂತರ, ಉತ್ತರ ಭಾರತದ ಒಂದು ಸಂಶೋಧನಾ ಕೇಂದ್ರದಲ್ಲಿ ಸಂಶೋಧನೆಯನ್ನು ಮಾಡಲು ಹೊರಟಿದ್ದಳು ಆಕೆ ತನ್ನ ತಲೆಯಲ್ಲಿ ವಿಜ್ಞಾನದ ಹೊಸ ಹೊಸ theoryಗಳನ್ನು, ಹೊಸ ಅಮೇರಿಕೆಯ—ಹೊಸ ಭಾರತದ—ಹೊಸ ಮಾನವನ—ಶೋಧನೆಗಾಗಿ ತುಂಬಿಕೊಂಡಿದ್ದಳು

ಸ್ವಲ್ಪ ಚಳಿ ಬಂದೊಡನೆ ಕಮಲಾ ನಡುಗುತ್ತ, “ ಚಹಾ ಕುಡಿಯುವಿರೇನು ? ” ಎಂದು ಕೇಳಿದಳು

“ ಅವಶ್ಯವಾಗಿ ” ಎಂದೆ ನಾನು.

ಜನರು ತಮ್ಮ ತಮ್ಮ ಉಪಾಹಾರವನ್ನು ಸವಿಯುತ್ತಿದ್ದರು. ತಾಯಂದಿರು ಮಕ್ಕಳಿಗಾಗಿ ಏನನ್ನಾದರೂ ಕೊಳ್ಳುತ್ತಿದ್ದರು ಚಹಾ—ಸಿಗರೇಟ್ ಮಾರುವ ಜನರ ಕರ್ಕಶ ಕೂಗು ಕಿವಿಯಲ್ಲಿ ಸಿಡಿದಾಡುತ್ತಿತ್ತು. ಚಿಟಿ ಪಿಟಿ ಮಳೆ, ಮೇಲೆ ತಂಪಾದ ಗಾಳಿ ಸ್ವಲ್ಪ ಆಹ್ಲಾದಕರವಾಗಿಯೇ ಇದ್ದಿತು.

ಅಣ್ಣ (ಬದಿಯಲ್ಲಿದ್ದ). ಸತ್ಯನಾರಾಯಣ, ಕಮಲಾ ಮತ್ತು ನಾನು ಚಹಾ ಕುಡಿದು ಮುಗಿಸಿದೆವು ನಾನು ಹಣ ಕೊಡಲು ಹೋದಾಗ, ಕಮಲಾ “ ನಾನು ಕೊಡುತ್ತೇನೆ ” ಎಂದಳು.

“ ಬೇಡ ನಾನು ಕೊಡುತ್ತೇನೆ ” ಎಂದು ಅವಳನ್ನು ತಡೆದೆ.

“ ಏಕೆ ?—”

“ ಏಕೆಂದರೆ— ನಾನು ಪುರುಷ—ಏಕೆಂದರೆ—”

“ ಹೌದೋ ? ”— ಎಂದವಳು ಕೇಳಲಿಲ್ಲವಾದರೂ, ಅವಳ ತುಟಿಗಳಲ್ಲಿ ಮೂಡಿದ ನಗುವಿನಲ್ಲಿ ಇದೇ ಪ್ರಶ್ನೆ ಅಡಕವಾಗಿದ್ದಿತು

ನಾನು ಮರುಮಾತೆತ್ತುವುದರೊಳಗಾಗಿ ‘ಮತ್ತೆ ನಾನು ಕೊಡುತ್ತೇನೆ’ ಎಂದು ಕೊಟ್ಟೇಬಿಟ್ಟಳು. ಆ ಮೇಲೆ ಆಕೆಯ ತುಟಿಗಳಿಂದ ನಗುವಿನ ಕಾರಂಜಿಯೊಂದು ಚಿಮ್ಮಿ, ಮೆಲ್ಲಮೆಲ್ಲನೆ ಕರಗಿಹೋಯಿತು. ಜೊತೆಗೆ ಆಕೆ ಮಲಗಿದಳು. ಸತ್ಯನಾರಾಯಣನು ಗೊರಕೆ ಹೊಡೆಯಲಾರಂಭಿಸಿದ. ಹೊಟ್ಟೆಯ ಡೊಳ್ಳು ಕೂಡ ಕಮ್ಮಾರನ ತಿದಿಯಂತೆ ಎದ್ದು ಬೀಳುತ್ತಿತ್ತು.

ರಾತ್ರಿಯ ಹನ್ನೊಂದು ಗಂಟೆಯಾಗಿದ್ದಿತು. ಮಳೆಯ ಸೆಳೆತ ಜೋರಾಗಿತ್ತು. ಗಾಡಿ ಮಾತ್ರ ತನ್ನ ಗುರಿಯೆಡೆಗೆ ‘ಝುಕ್—ಝುಕ್—ಝುಕ್’ ಎನ್ನುತ್ತ ಧಾವಿಸುತ್ತಿತ್ತು. ಎಲ್ಲರೂ ಮಲಗಿದ್ದರು. ಡಬ್ಬಿಯಲ್ಲಿ ಸಂಪೂರ್ಣ ಶಾಂತಿ ನೆಲಸಿತ್ತು. ಪ್ರತಿಯೊಬ್ಬ ಚಿಕ್ಕ-ದೊಡ್ಡವನೂ ಯಾವುದೋ ಒಂದು ಹೊಸ ಪ್ರಪಂಚದಲ್ಲಿ ಕಣ್ಣು ಮುಚ್ಚಿಕೊಂಡು ಸಂಚರಿಸುತ್ತಿದ್ದನು ಅವರ ನಡುವೆ ಇಬ್ಬರು ಮಾತ್ರ ಎಚ್ಚರವಿದ್ದರು—ಅವರಲ್ಲಿ ಒಬ್ಬಳು—ಆ ನವವಧು ಆಕೆ ತನ್ನ ಪತಿಯ ತಲೆಯ ಹತ್ತಿರ ಕುಳಿತಿದ್ದಳು. ಒಮ್ಮೆ ಅವನ ಉಡುಪನ್ನು ಸರಿಪಡಿಸುವಳು; ಮತ್ತೊಮ್ಮೆ ಅವನ ಕೂದಲುಗಳಲ್ಲಿ ಕೈಯಾಡಿಸುವಳು; ಮಗದೊಮ್ಮೆ,—[illegible] ತನ್ನ ಗುರುವನ್ನು ನೋಡುವಂತೆ—ನೋಡುವಳು;—ಅಥವಾ ಬಾಲಕನು

ಹೊಸತಾಗಿ ಕೊಂಡ ಪದಾರ್ಥವನ್ನು ಉಪಯೋಗಿಸುವ ಮೊದಲು ಮತ್ತೆ ಮತ್ತೆ ಕೈಯಲ್ಲಿ ಹಿಡಿದು ನೋಡಿ ಸಂತೋಷಪಟ್ಟು ಕೆಳಗಿಡುವಂತೆ—

ಆದರೆ ಆಕೆಯ ಪತಿ 'ಹಿಮಾಲಯಪರ್ವತವನ್ನು ಏರಿ ಗೆದ್ದವನು ತೆನಸಿಂಗ್‌ನಲ್ಲ-ತಾನೇ'—ಎಂಬಂತೆ ನಿಶ್ಚಿಂತನಾಗಿ ಕಾಲುಚಾಚಿಕೊಂಡು ಮಲಗಿ, ಬೆಳಗಾಗುವುದನ್ನೆ ನಿರೀಕ್ಷಿಸುತ್ತಿದ್ದನು. ಎರಡನೆಯವನು ನಾನು!—ನಾನು ಎಚ್ಚರವಾಗಿದ್ದುದೇಕೆಂದರೆ, ಆ ವಧು ಎದ್ದಿದ್ದಳು. ಆಕೆಯನ್ನು ನೋಡಿದ ಮೇಲೆ ನನ್ನ ವಿಚಾರವು ನನ್ನ ವಶದಲ್ಲಿರದೇ ಓಡಿತು—ಮುಂದುಮುಂದಕ್ಕೆ—ದೂರ—ಬಹು ದೂರ—ನನ್ನ ಮನೆ ಇದ್ದೆಡೆಗೆ—ಮನೆಯಲ್ಲಿ ನನ್ನ ಮುದ್ದು ಮುದ್ದಾದ ಮಕ್ಕಳು ಮತ್ತು ನನ್ನ ಮಕ್ಕಳ ತಾಯಿ, ಎಂದರೆ ನನ್ನ ಹೆಂಡತಿ ಇದ್ದರು.

ಇದಕ್ಕೆ ಮುಖ್ಯವಾದ ಕಾರಣ, ನನ್ನೆದುರಿಗೆ ಕೈಗಳಿಗೆ ಮದರಂಗಿಯನ್ನು ಹಚ್ಚಿಕೊಂಡು ಬಾಗಿ ಕುಳಿತಿದ್ದ ಆ ವಧುವನ್ನು ನೋಡಿದುದಲ್ಲ; ನನಗೆ ಕುಲಸುಮ್‌ಳ ನೆನಪಾದುದು ಮಿಸ್ ಕಮಲಾ ನಗುತ್ತಿದ್ದುದರಿಂದ. ಕಮಲೆಯ ನಸುನಗುವಿಗೂ ಕುಲಸುಮ್‌ಳ ನಗುವಿಗೂ ಸಾಮ್ಯವಿತ್ತು. ಆದರೆ ಕಮಲಾ ಕುಲಸುಮ್‌ಳಲ್ಲ. ಇಬ್ಬರ ಮುಖಚರ್ಯೆ ಭಿನ್ನವಾಗಿದ್ದಿತು. ನಸುನಗೆ ಮಾತ್ರ ಇಬ್ಬರದೂ ಒಂದೆ! ನನಗೆ ಆ ನಸುನಗೆ ಮನಸ್ಸಿಗೆ ಬಂದಿದ್ದಿತು—ಬಿಸಿಲಿನಲ್ಲಿ ಮಿಂಚುವ ಚಿಲುಮೆಯಂತೆ—ಪ್ರಸನ್ನವಾದ ನಸುನಗೆ!— ದಿಕ್ಕುದಿಕ್ಕಿಗೂ ಹರಡುವ ಬೆಳುದಿಂಗಳಂತೆ, — ಮನಸ್ಸಿನಲ್ಲಿ ಹೊಕ್ಕು ಹೋಗುವ ಹಾಡಿನಂತೆ!—ಚಿಕ್ಕಂದಿನಿಂದಲೂ ಮಿತ್ರನಂತೆ ನನ್ನನ್ನು ಹಿಂಬಾಲಿಸಿದ ನಸುನಗೆ—ಆಗಾಗ ಅದು ತನ್ನ ಎರಡೂ ಕೈಗಳನ್ನು ನನ್ನ ಕೊರಳಲ್ಲಿ ಹಾಕಿ ಸಮೀಪಿಸುತ್ತಿತ್ತು. ಮತ್ತೆ ಕೈಗಳನ್ನು ಕೊಚ್ಚಿಕೊಂಡು ಹೋಗುತ್ತಿತ್ತು. ಎಲ್ಲಿಯೋ ಅಡಗಿಕೊಂಡು ಓರೆನೋಟದಿಂದ ನನ್ನನ್ನು ನೋಡುತ್ತಿತ್ತು.—ನಾನು ಆ ನಸುನಗೆಗಾಗಿ ಪ್ರಾಣ ಕೊಡುತ್ತಿದ್ದೆ. ದೇವರಾಣೆ—ನಾನು ಅದರ ವಿನಾ ಜೀವಿಸುವಂತಿರಲಿಲ್ಲ. ಸತ್ಯವೆಂದರೆ ನಾನು ನೌಕರಿ-ಚಾಕರಿಗಾಗಿ ಹೋಗುತ್ತಿರಲಿಲ್ಲ.—ಆದರೆ ಆ ನಸುನಗುವಿಗಾಗಿ ಹೋಗುತ್ತಿದ್ದೆ—ಕುಲಸುಮ್‌ಳ ಜೀವನಕ್ಕಾಗಿ,—ಅವಳ ನಸುನಗೆ ಉಳಿಯುವುದಕ್ಕಾಗಿ! ಹಾಡುವ ಕಂಠ ಬಿಗಿಯುದಂತೆ—ನನ್ನ ತಾಯಿ, ಮಂಗಳವಾದ್ಯಗಳು ಮೊಳಗುವಾಗ ತನ್ನ ಪೂಜ್ಯ ಕರಗಳಿಂದ ನನ್ನ ಕೊರಳಿಗೆ ಹೂವಿನ ಹಾರ ಹಾಕಬೇಕೆಂದು—ನಾನು ಹೋಗುತ್ತಿದ್ದೆ....

ಆದರೆ ನಡೆಯುವಾಗ ನನಗೆ ಪೆಟ್ಟು ತಗುಲಿತು—ತಲೆ ಕೆಳಗಾಗಿ ಬಿದ್ದು ಬಿಟ್ಟೆ— ಬಿದ್ದ ಮೇಲೆ ಏಳಲಾಗಲಿಲ್ಲ— ವಾಸ್ತವವಾಗಿ, ಇದಕ್ಕೂ ಮೊದಲೆಷ್ಟೋ ಸಾರೆ ನಾನು ಪೆಟ್ಟು ತಿಂದಿದ್ದೆ—ಅಡಿಗಡಿಗೆ ಪೆಟ್ಟು ತಿನ್ನುತ್ತ ಇಲ್ಲಿಯ ವರೆಗೂ ಬಂದಿದ್ದೆ— ಪ್ರತಿಯೊಂದು ಪೆಟ್ಟೂ ಮುಂದೆ ಅಡಿಯಿಡಲು ಪಾಠಕೊಡುತ್ತಿತ್ತು. ಏಕೆಂದರೆ— ಮುಂದುವರಿಯುವುದೇ ಮಾನವನ ಗುರಿ! ಆದರೆ ಈ ಪೆಟ್ಟು ನನ್ನ

ಬಡತನದ ಬಾಳು

(ಕಥಾಸಂಕಲನ)

ಬರೆದವರು : 'ಆನಂದಕಂದ'

ಇದರಲ್ಲಿಯ ಒಂದೊಂದು ಕಥೆಯೂ ನಮ್ಮ ಜನಜೀವನದ ವಾಸ್ತವಚಿತ್ರ. ವಾಸ್ತವದಲ್ಲಿಯೆ ಸಾಹಿತ್ಯಿಕಸೌದರ್ಯವನ್ನು ಸಹಜವಾಗಿ ಹೇಗೆ ತುಂಬಬಹುದೆಂಬುದಕ್ಕೆ ಇದರಲ್ಲಿಯ ಕಥೆಗಳು ಒಳ್ಳೆಯ ಮಾದರಿಗಳಾಗಿವೆ.

ಕ್ರಾ. ಅ. ೧೨೦ ಪುಟಗಳು. ಬೆಲೆ ೧-೪-೦

'ಜಯಂತಿ' ಕಾರ್ಯಾಲಯ, ಧಾರವಾಡ

ತಲೆಯ ವಿಚಾರ ಶಕ್ತಿಯನ್ನೆಲ್ಲಾ ನೀಗಿಸಿದ್ದಿತು. ನಾನು ಏಳಬೇಕೆಂದು ಪ್ರಯತ್ನಿಸಿದಾಗ, ಯಾವನೋ ತಲೆಗೆ ಬಲವಾದ ಸುತ್ತಿಗೆಯಿಂದ ಬಡಿದಂತಾಯಿತು. ಎರಡನೆಯ ಧಕ್ಕೆಯು ನನ್ನನ್ನು ಮೇಲಕ್ಕೆ ಹಾರಿಸಿತು. ಆಗ ನಾನೊಂದು ಚೆಂಡಿನಂತೆ ಪುಟಿದು, ಬೂಟ್ ಪಾಲಿಶ್ ಮಾಡುವ ಹುಡುಗನ ಮೇಲೆ ಹೋಗಿ ಬಿದ್ದೆ. ಡಬ್ಬಿಯಲ್ಲಿದ್ದ ಎಲ್ಲಾ ಪ್ರಯಾಣಿಕರು ಎಚ್ಚರಾಗಿದ್ದರು. ಯಾರೂ ತಮ್ಮ ಸ್ಥಳವಬಿಟ್ಟಿರಲಿಲ್ಲ. ಎಲ್ಲರೂ ಅತ್ತಿತ್ತ ಉರುಳಾಡುತ್ತ ಚಕಿತವಾದ ದೃಷ್ಟಿಯಿಂದ 'ಇದೇನು ನಡೆಯುತ್ತಿದೆ' ಎಂದು ಕೇಳುತ್ತಿದ್ದರು.

ಮೂರನೆಯ ಧಕ್ಕೆಯಲ್ಲಿ!— ಒಂದು ಭಯಂಕರ ಶಬ್ದ—ಬಾಂಬು ಬಿದ್ದಂತೆ— ತೋಫುಗಳು ಹಾರಿದಂತೆ— ಮೇಘ ಗರ್ಜನೆಯಂತೆ— ಬಿರುಗಾಳಿಯಂತೆ— ಆ ಮೇಲೆ ಡಬ್ಬಿಯ ದೀಪಗಳು ಆರಿದುವು. ಭಯಂಕರ ಕತ್ತಲೆ ಬಿದ್ದಿತು. ಅದರೊಂದಿಗೆ ಚೀರಾಟಗಳೆದ್ದುವು—ಚೀರಾಟ— ಹೆಂಗುಸರ, ಗಂಡಸರ, ಮಕ್ಕಳ ಚೀರಾಟ—ಎಲ್ಲೆಲ್ಲಿಯೂ ಚೀರಾಟವೇ ಕೇಳಿಸುತ್ತಿತ್ತು—ಪ್ರತಿಯೊಂದು ಚೀರುವ ಧ್ವನಿ, ಅಗೋಚರನಾದ ಮಾನವನಿಗೆ ಉಳಿಸಿಕೊಳ್ಳೆಂದು ಮೊರೆಯಿಡುತ್ತಿತ್ತು.

ಅನಂತರ ನನಗೇನೂ ಕೇಳಿಸಲಿಲ್ಲ— ಏನೂ ಕಾಣಿಸಲಿಲ್ಲ— ನನ್ನ ಕೆಳಗೆ, ಮೇಲೆ ನೀರಿದ್ದಂತೆ, ನಾನು ಮುಳುಗುತ್ತಿದ್ದಂತೆ ಭಾಸವಾಗುತ್ತಿತ್ತು. ನನ್ನ ತಾಯಿಯ ಪವಿತ್ರಮುಖಮಂಡಲವು, ಮುಳುಗುವಾಗ ನನ್ನ ಕಣ್ಣಮುಂದೆ ಹಾಯ್ದುಹೋಯಿತು. ನನ್ನ ಜೊತೆಯಲ್ಲಿ ನನ್ನ ತಾಯಿ ಮುಳುಗುತ್ತಿದ್ದಂತೆ, ನನ್ನ ಸಹೋದರಿಯರು, ಕುಲ್‌ಸುಮ್‌ಳು ಕೂಡಾ ಮುಳುಗುತ್ತಿದ್ದಂತೆ ನನಗೆ ಕಂಡಿತು. ನನ್ನ ಆ ಮನೆ— ಪ್ರತಿದಿನವೂ ಕನಸಿನಲ್ಲಿ ಕಾಣುವ ಮನೆ—ನಾನು ಮುಳುಗುವುದೇನು, ಸಕಲ ಪ್ರಪಂಚವೇ ಮುಳುಗುತ್ತಿತ್ತು. ನನ್ನ ಪ್ರಪಂಚ

ದಿ ನ್ಯಾಶನಲ್ ಮ್ಯುಜಿಕಲ್ ಹಾಲ್
ಧಾರವಾಡ

ಗಡಿಯಾರ, ಚಾಳೀಸು, ರೇಡಿಯೊ, ಗ್ರಾಮೊಫೋನ್
ಮಾರಾಟಮಾಡುವವರು, ರಿಪೇರಿ ಮಾಡುವವರು.

ನಂಬುಗೆಯ ಮಾಲು! ಪ್ರಾಮಾಣಿಕ ವ್ಯವಹಾರ

ಧಾರವಾಡದಲ್ಲಿ ಹಲವು ವರ್ಷಗಳಿಂದ ನಮ್ಮ ವ್ಯವಹಾರ
ನಡೆದಿದ್ದು, ಗ್ರಾಹಕರ ವಿಶ್ವಾಸಾದರಗಳನ್ನು ಗಳಿಸಿದೆ.

ಮಾಲಕರು: ಬಿ. ಜಿ. ಮುತ್ತಗಿ

ವನ್ನುಳಿಸಿಕೊಳ್ಳಲು ಕೈಕಾಲುಗಳನ್ನು ಬಡಿದೆ; ಆದರೆ ನನಗೆ ಮೇಲಕ್ಕೆ ಬರಲಾಗಲಿಲ್ಲ. ಮುಳುಗುತ್ತಲೇ ನಡೆದೆ— ವೇಗವಾಗಿ— ಇನ್ನಷ್ಟು ಕೆಳಕ್ಕೆ—

ಎಚ್ಚರಗೊಂಡಾಗ ನಾನು 'ವಸಂತಿ'ಯ ಮಡಿಲಲ್ಲಿದ್ದೆ!

ವಸಂತಿಯೆಂಬುದು ಯಾವ ಹುಡುಗಿಯ ಹೆಸರಲ್ಲ. ಅದೊಂದು ನದಿಯ ಹೆಸರಷ್ಟೆ! ಅದು ಎಷ್ಟೋ ಯುಗಗಳಿಂದ ಯಶವಂತಪುರದ ಹೊಲಗಳಿಗೆ ನೀರೆರೆಯುತ್ತ ಬಂದಿತ್ತು. ಇಲ್ಲಿಯ ರೈತರು, ಸುತ್ತುಮುತ್ತಲಲ್ಲಿರುವ ಹಳ್ಳಿಯ ವಯಸ್ಸಾದ ಮುದುಕಿಯರು ಇದನ್ನು ಚೆನ್ನಾಗಿ ಬಲ್ಲರು. ಎಲ್ಲರೂ ಚಿಕ್ಕಂದಿನಿಂದ ಇದರ ಒಂದೇ ನಡತೆಯನ್ನು ಕಂಡಿದ್ದಾರೆ:— ಬೇಸಗೆಯಲ್ಲಿ ಬತ್ತಿಹೋಗುವುದು.— ಮಳೆಗಾಲದಲ್ಲಿ ವಯಸ್ಸಿಗೆ ಬಂದ ಹೆಣ್ಣಿನಂತೆ ಗಾನ ಮಾಡುವುದು— ವಸಂತಿಗಾಗಿ ರೈತರಲ್ಲಿ ಬಹಳ ಗೌರವವಿದೆ. ಈ ಗೌರವವು ಪರಂಪರೆಯಿಂದಲೂ ಹಳ್ಳಿಯ ಜೀವನದಲ್ಲಿ ಬೇರೆ ಹಾಡುಗಳಿಂದ ವ್ಯಕ್ತವಾಗುತ್ತದೆ.

ಅದು ಹೇಗೆಂದರೆ:— ಆಕಾಶದಲ್ಲಿ ಮೇಘಗಳು ಕಾಣದಿದ್ದಾಗ ಪೃಥ್ವಿಯು ಕಠಿಣವಾದಾಗ, ಮನೆಯ ಹೆಂಗುಸರು ತಲೆಯಮೇಲೆ ಕೈಹೊತ್ತು ಕುಳಿತಾಗ, ಯಜಮಾನನು "ಹುಚ್ಚೀ, ನೀನೆಷ್ಟು ಚಿಂತಿಸುವೆ ಏಕೆ?— ಸಾಹುಕಾರನಿಂದ ನಿನ್ನ ಕಂಕಣವನ್ನು ಬಿಡಿಸಿಕೊಂಡು ಬರುವೆ! ಮತ್ತೆ ನಿನಗೆ ಚೆಂಬಣ್ಣದ ಹೊಸ ಸೀರೆಯೊಂದನ್ನು ತರುವೆ—ಇಷ್ಟೇ ಅಲ್ಲ—ನಿನ್ನ ಮಗುವಿಗಾಗಿ ತೊಟ್ಟಿಲನ್ನು ಕೂಡಾ ತರುವೆ—ಆದರೆ ಆ ವಸಂತಿ ತುಂಬಿ ಹರಿಯಲಿ!" ಎನ್ನುವನು.

ವಸಂತಿ ತಾಯಿಯಂತೆ ಇದ್ದಳು— ಈಗ? ಅಲ್ಲ— ಅವಳು ತಾಯಿಯಲ್ಲ—ವಸಂತಿ ಒಬ್ಬ ಡಾಕಿಣಿಯಂತೆ ಪೃಥ್ವಿಯ ಮಕ್ಕಳನ್ನು ತಿಂದು ಉಗುಳುತ್ತಿದ್ದಳು— ಮತ್ತೆ ಕ್ರೂರ ನಗೆ ಬೀರುತ್ತಿದ್ದಳು. ಅವಳ ಅಲೆಗಳು ನಾಗರಹಾವಿನಂತೆ ಬುಸುಗುಟ್ಟುತ್ತಿದ್ದುವು; ಎದುರಿಗೆ ಬಂದವರನ್ನು ಹೊಡೆದು ಒಳಕ್ಕೊಯ್ಯುತ್ತಿದ್ದುವು— ಜನರು ಮತ್ತಿದ್ದರು; ಅವರ ಚೀರಾಟದ ಮಂದಸ್ವರವೂ ಕೇಳಿಸುತ್ತಿದ್ದಿತು.

'ಬ್ಯಾಟ್ರಿ'ಯ ಬೆಳಕಿನಲ್ಲಿ ನೀರಿನ ಮೇಲಿದ್ದ ಎರಡು ಕೈ ಚೆನ್ನಾಗಿ ಕಾಣಿಸುತ್ತಿದ್ದುವು. ಆ ಮೇಲೆ ಆ ಕೈಗಳು ಪೂರ್ಣ ಮೇಲಕ್ಕೆದ್ದುವು. ಯಾವನೋ ತನ್ನ ತಲೆಯನ್ನು ಮೇಲಕ್ಕೆತ್ತಿ ಕೂಗಿದ:—"ನನ್ನನ್ನುಳಿಸಿರಿ"—ನಾನು ನಿಮಗೆ ಒಂದು ಲಕ್ಷ ರೂಪಾಯಿಗಳನ್ನು ಕೊಡುತ್ತೇನೆ—" ಆ ಸೆಟ್ಟಿಯು, ಮುಳುಗುವವರನ್ನು ಉಳಿಸುತ್ತಿರುವ ಸೈನಿಕರಲ್ಲಿ ದುರಾಸೆ ಹುಟ್ಟಿಸಲು ಯತ್ನಿಸುತ್ತಿದ್ದ.

ಆದರೆ ಜೀವನದ ಬೆಲೆ ಒಂದೇ ಲಕ್ಷವೆ?

ನಾನು ವಿಚಾರಮಗ್ನನಾದೆ—ಜೀವನಕ್ಕೆ ಬೆಲೆಯಿಲ್ಲ—ಪ್ರಪಂಚದಲ್ಲಿದ್ದ ಎಲ್ಲಾ ಧನವನ್ನೊಂದೆಡೆಗಿಟ್ಟು ಮನುಷ್ಯನನ್ನು ಮತ್ತೊಂದೆಡೆಗಿಟ್ಟರೆ—ಮಾನವನ ಬೆಲೆಯೇ ಹೆಚ್ಚಾಗುತ್ತದೆ.—ಏಕೆಂದರೆ ಸಂಪತ್ತನ್ನು ಪುನಃ ಹುಟ್ಟಿಸಬಹುದು—ಆದರೆ ಮನುಷ್ಯನು ಒಮ್ಮೆ ಕಣ್ಣು ಮುಚ್ಚಿದರೆ ತೀರಿತು; ಮತ್ತೆ ತೆರೆಯಲಾರನು. ವಿಜ್ಞಾನದ ಯಾವ ಶಕ್ತಿಯೂ, ತಣ್ಣಗಾಗಿ ಶರೀರದಲ್ಲಿ ಹೆಪ್ಪುಗಟ್ಟಿಹೋಗಿದ್ದ ರಕ್ತವನ್ನು ಉಕ್ಕಿಸಲಾರದು. ಆದರೆ, ಆ ಸೆಟ್ಟಿಯು ಮಾನವನನ್ನು ಸಂಪತ್ತಿನ ತಕ್ಕಡಿಯಲ್ಲಿಟ್ಟು ಬೆಲೆ ಕಟ್ಟುತ್ತಿದ್ದ—ಒಂದು ಲಕ್ಷ ರೂಪಾಯಿ, ಎರಡು ಲಕ್ಷ ರೂಪಾಯಿ— ಮತ್ತೆ ಅವನ ಕೈಗಳು ಮಾಯವಾದುವು.

ಈ ಕೈಗಳಲ್ಲಿ ಕಮಲೆಯದಾವುದೋ, ಸತ್ಯನಾರಾಯಣನದಾವುದೋ, ಸಹೋದರಿಯ ಕೈ ಯಾವುದೋ ಕಾಣೆ— ಆದರೆ ಬೆಳಗಾದ ಕೂಡಲೆ ನನ್ನ ದೃಷ್ಟಿ ಒಂದು ಕೈಯ ಮೇಲೆ ಬಿದ್ದಿತು. ಅದು ಶರೀರದಿಂದ ಬೇರೆಯಾಗಿ ಕೆಸರಿನಲ್ಲಿ ಹೂತು ಹೋಗಿದ್ದಿತು. ಅದು ಬೆಳೆಯುವ ಗಿಡದಂತೆ, ಅರಳುವ ಮೊಗ್ಗೆಗಳಂತೆ, ಬೆರಳುಗಳನ್ನು ಮೇಲಕ್ಕೆ ತೆಗೆದು ಪ್ರತಿಯೊಬ್ಬನಿಗೂ "ನೋಡು— ಇಲ್ಲಿ ಒಬ್ಬ ಮಾನವನು ಬಿದ್ದಿದ್ದಾನೆ—" ಎಂದು ಕರೆದು ಹೇಳುವಂತೆ ಕಾಣುತ್ತಿತ್ತು!

ಈ ಕೈಯು ಅವುಗಳಲ್ಲಿ ಯಾವುದೂ ಅಲ್ಲ—ಆದರೆ ಅದೊಂದು ಮುದುಕನದು. ಅವನು ಶೆಟ್ಟಿಯ ಕಾಲಕೆಳಗೆ ಕುಳಿತಿದ್ದ. ಸಮೀಪದಲ್ಲಿಯೇ ಮುದುಕನು ಕಾಲೆರಡನ್ನೂ ಮಡಿಕೆ ಮಾಡಿಕೊಂಡು ಬಿದ್ದಿದ್ದ. ಅವನ ಕಣ್ಣುಗಳು ಅರ್ಧ ತೆರೆದಿದ್ದು, ಬೆಳಗಾಗುವುದನ್ನೇ ನಿರೀಕ್ಷಿಸುತ್ತ ತೂಕಡಿಸುವಂತೆ ಕಾಣುತ್ತಿದ್ದುವು—ಮಿಸ್ ಕಮಲಾನ ಮುಖದ ಮೇಲೆ ಅಲ್ಲಲ್ಲಿ ಉಗುರಿನಿಂದಾದ ಗಾಯದಂತೆ ತುರುಚಿಕೊಂಡಿತ್ತು. ಕೂಡಲೆ ಅವಳು ಕೂಗಿಕೊಂಡು ಮೇಲಕ್ಕೇಳುವಳೋ ಏನೋ—ಎನ್ನುವಂತಿತ್ತು. ಸಮೀಪದಲ್ಲಿಯೇ ಕೆಸರಿನಲ್ಲಿ ಆ 'ವಧು' ಬಿದ್ದಿದ್ದಳು— ಆಕೆ ತನ್ನ ಪತಿಯೊಡನೆ ಎಲ್ಲಿಗೆ ನಡೆದಿದ್ದಳೊ?— ಪೆಟ್ಟಿಗೆ ಮತ್ತು ಚೀಲಗಳ ಕೆಳಗೆ ಸತ್ಯನಾರಾಯಣನು ಬಿದ್ದಿದ್ದ. ಅವನ ಮುಖವಷ್ಟೆ ಕಾಣಿಸುತ್ತಿತ್ತು.—ಅವನ ಬಾಯಿಂದ ರಕ್ತ ಹರಿಯುತ್ತಿತ್ತು,; ಆದರೆ ಸಹೋದರಿ?—

ಹೊಸತಾಗಿ ಕೊಂಡ ಪದಾರ್ಥವನ್ನು ಉಪಯೋಗಿಸುವ ಮೊದಲು ಮತ್ತೆ ಮತ್ತೆ ಕೈಯಲ್ಲಿ ಹಿಡಿದು ನೋಡಿ ಸಂತೋಷಪಟ್ಟು ಕೆಳಗಿಡುವಂತೆ—

ಆದರೆ ಆಕೆಯ ಪತಿ 'ಹಿಮಾಲಯಪರ್ವತವನ್ನು ಏರಿ ಗೆದ್ದವನು ತೆನಸಿಂಗ್‌ನಲ್ಲ-ತಾನೇ'—ಎಂಬಂತೆ ನಿಶ್ಚಿಂತನಾಗಿ ಕಾಲುಚಾಚಿಕೊಂಡು ಮಲಗಿ, ಬೆಳಗಾಗುವುದನ್ನೆ ನಿರೀಕ್ಷಿಸುತ್ತಿದ್ದನು. ಎರಡನೆಯವನು ನಾನು !—ನಾನು ಎಚ್ಚರವಾಗಿದ್ದುದೇಕೆಂದರೆ, ಆ ವಧು ಎದ್ದಿದ್ದಳು. ಆಕೆಯನ್ನು ನೋಡಿದ ಮೇಲೆ ನನ್ನ ವಿಚಾರವು ನನ್ನ ವಶದಲ್ಲಿರದೇ ಓಡಿತು—ಮುಂದುಮುಂದಕ್ಕೆ—ದೂರ—ಬಹು ದೂರ—ನನ್ನ ಮನೆ ಇದ್ದೆಡೆಗೆ—ಮನೆಯಲ್ಲಿ ನನ್ನ ಮುದ್ದು ಮುದ್ದಾದ ಮಕ್ಕಳು ಮತ್ತು ನನ್ನ ಮಕ್ಕಳ ತಾಯಿ, ಎಂದರೆ ನನ್ನ ಹೆಂಡತಿ ಇದ್ದರು.

ಇದಕ್ಕೆ ಮುಖ್ಯವಾದ ಕಾರಣ, ನನ್ನೆದುರಿಗೆ ಕೈಗಳಿಗೆ ಮದರಂಗಿಯನ್ನು ಹಚ್ಚಿಕೊಂಡು ಬಾಗಿ ಕುಳಿತಿದ್ದ ಆ ವಧುವನ್ನು ನೋಡಿದುದಲ್ಲ; ನನಗೆ ಕುಲಸುಮ್‌ಳ ನೆನಪಾದುದು ಮಿಸ್ ಕಮಲಾ ನಗುತ್ತಿದ್ದುದರಿಂದ. ಕಮಲೆಯ ನಸುನಗುವಿಗೂ ಕುಲಸುಮ್‌ಳ ನಗುವಿಗೂ ಸಾಮ್ಯವಿತ್ತು. ಆದರೆ ಕಮಲಾ ಕುಲಸುಮ್‌ಳಲ್ಲ. ಇಬ್ಬರ ಮುಖಚರ್ಯೆ ಭಿನ್ನವಾಗಿದ್ದಿತು. ನಸುನಗೆ ಮಾತ್ರ ಇಬ್ಬರದೂ ಒಂದೆ! ನನಗೆ ಆ ನಸುನಗೆ ಮನಸ್ಸಿಗೆ ಬಂದಿದ್ದಿತು—ಬಿಸಿಲಿನಲ್ಲಿ ಮಿಂಚುವ ಚೆಲುವೆಯಂತೆ—ಪ್ರಸನ್ನವಾದ ನಸುನಗೆ!— ದಿಕ್ಕುದಿಕ್ಕಿಗೂ ಹರಡುವ ಬೆಳುದಿಂಗಳಂತೆ, — ಮನಸ್ಸಿನಲ್ಲಿ ಹೊಕ್ಕು ಹೋಗುವ ಹಾಡಿನಂತೆ !—ಚಿಕ್ಕಂದಿನಿಂದಲೂ ಮಿತ್ರನಂತೆ ನನ್ನನ್ನು ಹಿಂಬಾಲಿಸಿದ ನಸುನಗೆ—ಆಗಾಗ ಅದು ತನ್ನ ಎರಡೂ ಕೈಗಳನ್ನು ನನ್ನ ಕೊರಳಲ್ಲಿ ಹಾಕಿ ಸಮೀಪಿಸುತ್ತಿತ್ತು. ಮತ್ತೆ ಕೈಗಳನ್ನು ಕೊಚ್ಚಿಕೊಂಡು ಹೋಗುತ್ತಿತ್ತು. ಎಲ್ಲಿಯೋ ಅಡಗಿಕೊಂಡು ಓರೆನೋಟದಿಂದ ನನ್ನನ್ನು ನೋಡುತ್ತಿತ್ತು.—ನಾನು ಆ ನಸುನಗೆಗಾಗಿ ಪ್ರಾಣ ಕೊಡುತ್ತಿದ್ದೆ. ದೇವರಾಣೆ—ನಾನು ಅದರ ವಿನಾ ಜೀವಿಸುವಂತಿರಲಿಲ್ಲ. ಸತ್ಯವೆಂದರೆ ನಾನು ನೌಕರಿ-ಚಾಕರಿಗಾಗಿ ಹೋಗುತ್ತಿರಲಿಲ್ಲ.—ಆದರೆ ಆ ನಸುನಗುವಿಗಾಗಿ ಹೋಗುತ್ತಿದ್ದೆ—ಕುಲಸುಮ್‌ಳ ಜೀವನಕ್ಕಾಗಿ,—ಅವಳ ನಸುನಗೆ ಉಳಿಯುವುದಕ್ಕಾಗಿ! ಹಾಡುವ ಕಂಠ ಬಿಗಿಯುದಂತೆ—ನನ್ನ ತಾಯಿ, ಮಂಗಳವಾದ್ಯಗಳು ಮೊಳಗುವಾಗ ತನ್ನ ಪೂಜ್ಯ ಕರಗಳಿಂದ ನನ್ನ ಕೊರಳಿಗೆ ಹೂವಿನ ಹಾರ ಹಾಕಬೇಕೆಂದು—ನಾನು ಹೋಗುತ್ತಿದ್ದೆ....

ಆದರೆ ನಡೆಯುವಾಗ ನನಗೆ ಪೆಟ್ಟು ತಗುಲಿತು—ತಲೆ ಕೆಳಗಾಗಿ ಬಿದ್ದುಬಿಟ್ಟೆ— ಬಿದ್ದ ಮೇಲೆ ಏಳಲಾಗಲಿಲ್ಲ— ವಾಸ್ತವವಾಗಿ, ಇದಕ್ಕೂ ಮೊದಲೆಷ್ಟೋ ಸಾರೆ ನಾನು ಪೆಟ್ಟು ತಿಂದಿದ್ದೆ—ಅಡಿಗಡಿಗೆ ಪೆಟ್ಟು ತಿನ್ನುತ್ತ ಇಲ್ಲಿಯ ವರೆಗೂ ಬಂದಿದ್ದೆ— ಪ್ರತಿಯೊಂದು ಪೆಟ್ಟೂ ಮುಂದೆ ಅಡಿಯಿಡಲು ಪಾಠಕೊಡುತ್ತಿತ್ತು. ಏಕೆಂದರೆ—ಮುಂದುವರಿಯುವುದೇ ಮಾನವನ ಗುರಿ! ಆದರೆ ಈ ಪೆಟ್ಟು ನನ್ನ

ಬಡತನದ ಬಾಳು

(ಕಥಾಸಂಕಲನ)

ಬರೆದವರು : 'ಆನಂದಕಂದ'

ಇದರಲ್ಲಿಯ ಒಂದೊಂದು ಕಥೆಯೂ ನಮ್ಮ ಜನಜೀವನದ ವಾಸ್ತವಚಿತ್ರ. ವಾಸ್ತವದಲ್ಲಿಯೆ ಸಾಹಿತ್ಯಿಕಸೌಂದರ್ಯವನ್ನು ಸಹಜವಾಗಿ ಹೇಗೆ ತುಂಬಬಹುದೆಂಬುದಕ್ಕೆ ಇದರಲ್ಲಿಯ ಕಥೆಗಳು ಒಳ್ಳೆಯ ಮಾದರಿಗಳಾಗಿವೆ.

ಕ್ರಾ. ಅ. ೧೨೦ ಪುಟಗಳು. ಬೆಲೆ ೧-೪-೦

'ಜಯಂತಿ' ಕಾರ್ಯಾಲಯ, ಧಾರವಾಡ

ತಲೆಯ ವಿಚಾರ ಶಕ್ತಿಯನ್ನೆಲ್ಲಾ ನೀಗಿಸಿದ್ದಿತು. ನಾನು ಏಳಬೇಕೆಂದು ಪ್ರಯತ್ನಿಸಿದಾಗ, ಯಾವನೋ ತಲೆಗೆ ಬಲವಾದ ಸುತ್ತಿಗೆಯಿಂದ ಬಡಿದಂತಾಯಿತು. ಎರಡನೆಯ ಧಕ್ಕೆಯು ನನ್ನನ್ನು ಮೇಲಕ್ಕೆ ಹಾರಿಸಿತು. ಆಗ ನಾನೊಂದು ಚಂಡಿನಂತೆ ಪುಟಿದು, ಬೂಟ್ ಪಾಲಿಶ್ ಮಾಡುವ ಹುಡುಗನ ಮೇಲೆ ಜೋಗಿ ಬಿದ್ದೆ. ಡಬ್ಬಿಯಲ್ಲಿದ್ದ ಎಲ್ಲಾ ಪ್ರಯಾಣಿಕರು ಎಚ್ಚರಾಗಿದ್ದರು. ಯಾರೂ ತಮ್ಮ ಸ್ಥಳವಬಿಟ್ಟಿರಲಿಲ್ಲ. ಎಲ್ಲರೂ ಅತ್ತಿತ್ತ ಉರುಳಾಡುತ್ತ ಚಕಿತವಾದ ದೃಷ್ಟಿಯಿಂದ 'ಇದೇನು ನಡೆಯುತ್ತಿದೆ' ಎಂದು ಕೇಳುತ್ತಿದ್ದರು.

ಮೂರನೆಯ ಧಕ್ಕೆಯಲ್ಲಿ!— ಒಂದು ಭಯಂಕರ ಶಬ್ದ—ಬಾಂಬು ಬಿದ್ದಂತೆ— ತೋಪುಗಳು ಹಾರಿದಂತೆ— ಮೇಘ ಗರ್ಜನೆಯಂತೆ— ಬಿರುಗಾಳಿಯಂತೆ— ಆ ಮೇಲೆ ಡಬ್ಬಿಯ ದೀಪಗಳು ಆರಿದುವು. ಭಯಂಕರ ಕತ್ತಲೆ ಬಿದ್ದಿತು. ಅದರೊಂದಿಗೆ ಚೀರಾಟಗಳೆದ್ದುವು—ಚೀರಾಟ— ಹೆಂಗುಸರ, ಗಂಡಸರ, ಮಕ್ಕಳ ಚೀರಾಟ—ಎಲ್ಲೆಲ್ಲಿಯೂ ಚೀರಾಟವೇ ಕೇಳಿಸುತ್ತಿತ್ತು—ಪ್ರತಿಯೊಂದು ಚೀರುವ ಧ್ವನಿ, ಅಗೋಚರನಾದ ಮಾನವನಿಗೆ ಉಳಿಸಿಕೊಳ್ಳೆಂದು ಮೊರೆಯಿಡುತ್ತಿತ್ತು.

ಅನಂತರ ನನಗೇನೂ ಕೇಳಿಸಲಿಲ್ಲ— ಏನೂ ಕಾಣಿಸಲಿಲ್ಲ—ನನ್ನ ಕೆಳಗೆ, ಮೇಲೆ ನೀರಿದ್ದಂತೆ, ನಾನು ಮುಳುಗುತ್ತಿದ್ದಂತೆ ಭಾಸವಾಗುತ್ತಿತ್ತು. ನನ್ನ ತಾಯಿಯ ಪವಿತ್ರಮುಖಮಂಡಲವು, ಮುಳುಗುವಾಗ ನನ್ನ ಕಣ್ಣುಮುಂದೆ ಹಾಯ್ದುಹೋಯಿತು. ನನ್ನ ಜೊತೆಯಲ್ಲಿ ನನ್ನ ತಾಯಿ ಮುಳುಗುತ್ತಿದ್ದಂತೆ, ನನ್ನ ಸಹೋದರಿಯರು, ಕುಲ್‌ಸುಮ್‌ಳು ಕೂಡಾ ಮುಳುಗುತ್ತಿದ್ದಂತೆ ನನಗೆ ಕಂಡಿತು. ನನ್ನ ಆ ಮನೆ— ಪ್ರತಿದಿನವೂ ಕನಸಿನಲ್ಲಿ ಕಾಣುವ ಮನೆ—ನಾನು ಮುಳುಗುವುದೇನು, ಸಕಲ ಪ್ರಪಂಚವೇ ಮುಳುಗುತ್ತಿತ್ತು. ನನ್ನ ಪ್ರಪಂಚ

ದಿ ನ್ಯಾಶನಲ್ ಮ್ಯುಜಿಕಲ್ ಹಾಲ್
ಧಾರವಾಡ

ಗಡಿಯಾರ, ಚಾಳೀಸು, ರೇಡಿಯೊ, ಗ್ರಾಮೊಫೋನ್ ಮಾರಾಟಮಾಡುವವರು, ರಿಪೇರಿ ಮಾಡುವವರು.

ನಂಬುಗೆಯ ಮಾಲು! ಪ್ರಾಮಾಣಿಕ ವ್ಯವಹಾರ

ಧಾರವಾಡದಲ್ಲಿ ಹಲವು ವರ್ಷಗಳಿಂದ ನಮ್ಮ ವ್ಯವಹಾರ ನಡೆದಿದ್ದು, ಗ್ರಾಹಕರ ವಿಶ್ವಾಸಾದರಗಳನ್ನು ಗಳಿಸಿದೆ.

ಮಾಲಕರು: ಬಿ. ಜಿ. ಮುತ್ತಗಿ

ವನ್ನುಳಿಸಿಕೊಳ್ಳಲು ಕೈಕಾಲುಗಳನ್ನು ಬಡಿದೆ; ಆದರೆ ನನಗೆ ಮೇಲಕ್ಕೆ ಬರಲಾಗಲಿಲ್ಲ. ಮುಳುಗುತ್ತಲೇ ನಡೆದೆ— ವೇಗವಾಗಿ— ಇನ್ನಷ್ಟು ಕೆಳಕ್ಕೆ—

ಎಚ್ಚರಗೊಂಡಾಗ ನಾನು 'ವಸಂತಿ' ಯ ಮಡಿಲಲ್ಲಿದ್ದೆ!

ವಸಂತಿಯೆಂಬುದು ಯಾವ ಹುಡುಗಿಯ ಹೆಸರಲ್ಲ. ಅದೊಂದು ನದಿಯ ಹೆಸರಷ್ಟೆ! ಅದು ಎಷ್ಟೋ ಯುಗಗಳಿಂದ ಯಶವಂತ ಪುರದ ಹೊಲಗಳಿಗೆ ನೀರೆರೆಯುತ್ತ ಬಂದಿತ್ತು. ಇಲ್ಲಿಯ ರೈತರು, ಸುತ್ತಮುತ್ತಲಲ್ಲಿರುವ ಹಳ್ಳಿಯ ವಯಸ್ಸಾದ ಮುದುಕಿಯರು ಇದನ್ನು ಚೆನ್ನಾಗಿ ಬಲ್ಲರು. ಎಲ್ಲರೂ ಚಿಕ್ಕಂದಿನಿಂದ ಇದರ ಒಂದೇ ನಡತೆಯನ್ನು ಕಂಡಿದ್ದಾರೆ:— ಬೇಸಗೆಯಲ್ಲಿ ಬತ್ತಿಹೋಗುವುದು.— ಮಳೆಗಾಲದಲ್ಲಿ ವಯಸ್ಸಿಗೆ ಬಂದ ಹೆಣ್ಣಿನಂತೆ ಗಾನ ಮಾಡುವುದು— ವಸಂತಿಗಾಗಿ ರೈತರಲ್ಲಿ ಬಹಳ ಗೌರವವಿದೆ. ಈ ಗೌರವವು ಪರಂಪರೆಯಿಂದಲೂ ಹಳ್ಳಿಯ ಜೀವನದಲ್ಲಿ ಬೆರೆತ ಹಾಡುಗಳಿಂದ ವ್ಯಕ್ತವಾಗುತ್ತದೆ.

ಅದು ಹೇಗೆಂದರೆ:— ಆಕಾಶದಲ್ಲಿ ಮೇಘಗಳು ಕಾಣದಿದ್ದಾಗ ಪೃಥ್ವಿಯು ಕಠಿಣವಾದಾಗ, ಮನೆಯ ಹೆಂಗುಸರು ತಲೆಯಮೇಲೆ ಕೈಹೊತ್ತು ಕುಳಿತಾಗ, ಯಜಮಾನನು "ಹುಚ್ಚೀ, ನೀನಿಷ್ಟು ಚಿಂತಿಸುವೆ ಏಕೆ?— ಸಾಹುಕಾರನಿಂದ ನಿನ್ನ ಕಂಕಣವನ್ನು ಬಿಡಿಸಿಕೊಂಡು ಬರುವೆ! ಮತ್ತೆ ನಿನಗೆ ಚೆಂಬಣ್ಣದ ಹೊಸ ಸೀರೆಯೊಂದನ್ನು ತರುವೆ—ಇಷ್ಟೇ ಅಲ್ಲ – ನಿನ್ನ ಮಗುವಿಗಾಗಿ ತೊಟ್ಟಿಲನ್ನು ಕೂಡಾ ತರುವೆ—ಆದರೆ ಆ ವಸಂತಿ ತುಂಬಿ ಹರಿಯಲಿ!" ಎನ್ನುವನು.

ವಸಂತಿ ತಾಯಿಯಂತೆ ಇದ್ದಳು— ಈಗ? ಅಲ್ಲ— ಅವಳು ತಾಯಿಯಲ್ಲ—ವಸಂತಿ ಒಬ್ಬ ಡಾಕಿಣಿಯಂತೆ ಪೃಥ್ವಿಯ ಮಕ್ಕಳನ್ನು ತಿಂದು ಉಗುಳುತ್ತಿದ್ದಳು— ಮತ್ತೆ ಕ್ರೂರ ನಗೆ ಬೀರುತ್ತಿದ್ದಳು. ಅವಳ ಅಲೆಗಳು ನಾಗರಹಾವಿನಂತೆ ಬುಸುಗುಟ್ಟುತ್ತಿದ್ದುವು; ಎದುರಿಗೆ ಬಂದವರನ್ನು ಹೊಡೆದು ಒಳಕ್ಕೊಯ್ಯುತ್ತಿದ್ದುವು— ಜನರು ಮುಳುಗುತ್ತಿದ್ದರು; ಅವರ ಚೀರಾಟದ ಮಂದಸ್ವರವೂ ಕೇಳಿಸುತ್ತಿದ್ದಿತು.

'ಬ್ಯಾಟ್ರಿ'ಯ ಬೆಳಕಿನಲ್ಲಿ ನೀರಿನ ಮೇಲಿದ್ದ ಎರಡು ಕೈಗಳು ಚೆನ್ನಾಗಿ ಕಾಣಿಸುತ್ತಿದ್ದುವು. ಆ ಮೇಲೆ ಆ ಕೈಗಳು ಪ್ರಾರ್ಥಿ ಮೇಲಕ್ಕೆದ್ದುವು. ಯಾವನೋ ತನ್ನ ತಲೆಯನ್ನು ಮೇಲಕ್ಕೆತ್ತಿ ಕೂಗಿದ:—"ನನ್ನನ್ನುಳಿಸಿರಿ"—ನಾನು ನಿಮಗೆ ಒಂದು ಲಕ್ಷ ರೂಪಾಯಿಗಳನ್ನು ಕೊಡುತ್ತೇನೆ—" ಆ ಸೆಟ್ಟಿಯು, ಮುಳುಗುವವರನ್ನು ಉಳಿಸುತ್ತಿರುವ ಸೈನಿಕರಲ್ಲಿ ದುರಾಶೆ ಹುಟ್ಟಿಸಲು ಯತ್ನಿಸುತ್ತಿದ್ದ.

ಆದರೆ ಜೀವನದ ಬೆಲೆ ಒಂದೇ ಲಕ್ಷವೆ?

ನಾನು ವಿಚಾರಮಗ್ನನಾದೆ—ಜೀವನಕ್ಕೆ ಬೆಲೆಯಿಲ್ಲ—ಪ್ರಪಂಚದಲ್ಲಿದ್ದ ಎಲ್ಲಾ ಧನವನ್ನೊಂದೆಡೆಗಿಟ್ಟು ಮನುಷ್ಯನನ್ನು ಮತ್ತೊಂದೆಡೆಗಿಟ್ಟರೆ—ಮಾನವನ ಬೆಲೆಯೇ ಹೆಚ್ಚಾಗುತ್ತದೆ.—ಏಕೆಂದರೆ ಸಂಪತ್ತನ್ನು ಪುನಃ ಹುಟ್ಟಿಸಬಹುದು—ಆದರೆ ಮನುಷ್ಯನು ಒಮ್ಮೆ ಕಣ್ಣು ಮುಚ್ಚಿದರೆ ತೀರಿತು; ಮತ್ತೆ ತೆರೆಯಲಾರನು. ವಿಜ್ಞಾನದ ಯಾವ ಶಕ್ತಿಯೂ, ತಣ್ಣಗಾಗಿ ಶರೀರದಲ್ಲಿ ಹೆಪ್ಪುಗಟ್ಟಿಹೋಗಿದ್ದ ರಕ್ತವನ್ನು ಉಕ್ಕಿಸಲಾರದು. ಆದರೆ, ಆ ಸೆಟ್ಟಿಯು ಮಾನವನನ್ನು ಸಂಪತ್ತಿನ ತಕ್ಕಡಿಯಲ್ಲಿಟ್ಟು ಬೆಲೆ ಕಟ್ಟುತ್ತಿದ್ದ—ಒಂದು ಲಕ್ಷ ರೂಪಾಯಿ, ಎರಡು ಲಕ್ಷ ರೂಪಾಯಿ—ಮತ್ತೆ ಅವನ ಕೈಗಳು ಮಾಯವಾದುವು.

ಈ ಕೈಗಳಲ್ಲಿ ಕಮಲೆಯದಾವುದೋ, ಸತ್ಯನಾರಾಯಣನದಾವುದೋ, ಸಹೋದರಿಯ ಕೈ ಯಾವುದೋ ಕಾಣೆ— ಆದರೆ ಬೆಳಗಾದ ಕೂಡಲೆ ನನ್ನ ದೃಷ್ಟಿ ಒಂದು ಕೈಯ ಮೇಲೆ ಬಿದ್ದಿತು. ಅದು ಶರೀರದಿಂದ ಬೇರೆಯಾಗಿ ಕೆಸರಿನಲ್ಲಿ ಹೂತು ಹೋಗಿದ್ದಿತು. ಅದು ಬೆಳೆಯುವ ಗಿಡದಂತೆ, ಅರಳುವ ಮೊಗ್ಗೆಗಳಂತೆ, ಬೆರಳುಗಳನ್ನು ಮೇಲಕ್ಕೆ ತೆಗೆದು ಪ್ರತಿಯೊಬ್ಬನಿಗೂ "ನೋಡು— ಇಲ್ಲಿ ಒಬ್ಬ ಮಾನವನು ಬಿದ್ದಿದ್ದಾನೆ—" ಎಂದು ಕರೆದು ಹೇಳುವಂತೆ ಕಾಣುತ್ತಿತ್ತು!

ಈ ಕೈಯು ಅವುಗಳಲ್ಲಿ ಯಾವುದೂ ಅಲ್ಲ—ಆದರೆ ಅದೊಂದು ಮುದುಕನದು. ಅವನು ಸೆಟ್ಟಿಯ ಕಾಲಕೆಳಗೆ ಕುಳಿತಿದ್ದ ಸಮೀಪದಲ್ಲಿಯೇ ಮುದುಕನು ಕಾಲೆರಡನ್ನೂ ಮಡಿಕೆ ಮಾಡಿಕೊಂಡು ಬಿದ್ದಿದ್ದ. ಅವನ ಕಣ್ಣುಗಳು ಅರ್ಧ ತೆರೆದಿದ್ದು, ಬೆಳಗಾಗುವುದನ್ನೇ ನಿರೀಕ್ಷಿಸುತ್ತ ತೂಕಡಿಸುವಂತೆ ಕಾಣುತ್ತಿದ್ದುವು— ಮಿಸ್ ಕಮಲಾಳ ಮುಖದ ಮೇಲೆ ಅಲ್ಲಲ್ಲಿ ಉಗುರಿನಿಂದಾದ ಗಾಯದಂತೆ ತುರುಚಿಕೊಂಡಿತ್ತು. ಕೂಡಲೆ ಅವಳು ಕೂಗಿಕೊಂಡು ಮೇಲಕ್ಕೇರುವಳೋ ಏನೋ—ಎನ್ನುವಂತಿತ್ತು. ಸಮೀಪದಲ್ಲಿಯೇ ಕೆಸರಿನಲ್ಲಿ ಆ 'ವಧು' ಬಿದ್ದಿದ್ದಳು— ಆಕೆ ತನ್ನ ಪತಿಯೊಡನೆ ಎಲ್ಲಿಗೆ ನಡೆದಿದ್ದಳೋ?— ಪೆಟ್ಟಿಗೆ ಮತ್ತು ಚೀಲಗಳ ಕೆಳಗೆ ಸತ್ಯನಾರಾಯಣನು ಬಿದ್ದಿದ್ದ. ಅವನ ಮುಖವಷ್ಟೆ ಕಾಣಿಸುತ್ತಿತ್ತು—ಅವನ ಬಾಯಿಂದ ರಕ್ತ ಹರಿಯುತ್ತಿತ್ತು; ಆದರೆ ಸಹೋದರಿ?—

ಆಕೆಯೊಂದು ಬಂಡೆಗೆ ಅಂಟಿಕೊಂಡು ನಿಂತಿದ್ದಳು. ಆಕೆಯ ಸೊಂಟದ ವರೆಗೂ ನೀರಿದ್ದಿತು. ಮತ್ತೆ ಆಕೆ ತನ್ನ ಎರಡೂ ಕೈಗಳಿಂದ ಮಗುವನ್ನು ಎದೆಗವುಚಿಕೊಂಡಿದ್ದಳು— ಯಾರಾದರೂ ಮಗುವನ್ನು ಕಸಿದುಕೊಳ್ಳಲು ಬಂದಾಗ ' ನಾನು ಕೊಡುವುದಿಲ್ಲ— ಬಿಡುವುದಿಲ್ಲ— "—ಎಂದು ಹೇಳುವಂತೆ !

ಸಹೋದರಿ ಸತ್ತುಹೋಗಿದ್ದಳು ! ಆಕೆಯ ಮಗು ಕೂಡ ಸತ್ತಿದ್ದಿತು !— ' ನವವಧು ' ವಿನ ಸ್ವಪ್ನದಲ್ಲಿದ್ದ ಆ ಮಗು ಕೂಡ,— ಸತ್ಯನಾರಾಯಣನ ವಿಚಾರದಲ್ಲಿದ್ದ— ಮಿಸ್ ಕಮಲೆಯ ನಗುವಿನಲ್ಲಿದ್ದ—ಕುಲ್‌ಸುಮ್‌ಳ ಮಂದ ನಸುನಗೆಯಲ್ಲಿದ್ದ— ನನ್ನ ಪೂಜ್ಯ ತಾಯಿಯ ಪ್ರಾರ್ಥನೆಗಳಲ್ಲಿದ್ದ—ಆ ಮಗು ಕೂಡ—

ಮಗುವಿನ ಮರಣವಷ್ಟೇ ಅಲ್ಲ; ಜೀವನದ ಮರಣವಾಗಿದ್ದಿತು ಮೃತ್ಯುವಿನಿಂದ. ನಾಲ್ಕು ದಿಕ್ಕುಗಳಲ್ಲೂ ನೆಲಸಿದ ನಿಶ್ಶಬ್ದತೆಯಲ್ಲಿ, ಸಾವಿರಾರು ಹೆಂಗುಸರ, ಮಕ್ಕಳ, ಮುದುಕರ ಮೃತಶರೀರಗಳು — ಒಂದೆ ಮಾತನ್ನೆ ಕೇಳುತ್ತಿದ್ದುವು—ನಮ್ಮ ಕೊಲೆ ಮಾಡಿದವರಾರು ?.

ನಾನು ಮೆಲ್ಲನೆ " ವಸಂತಿ ! " ಎಂದೆ—

ವೈಯಾರದಿಂದ ನಡೆದು ಹೋಗುವ ಸೂಳೆಯಂತೆ ಹರಿದು ಹೋಗುತ್ತಿದ್ದ ವಸಂತಿಯು ನನ್ನ ಮಾತನ್ನು ಕೇಳಿ ನಿಂತು— " ಏನೆಂದೆ ? "— ಎಂದಳು.

ಅವಳ ನುಡಿಗೆ ನಾನು ನಡುಗಿದೆ. ಅವಳ ಉಕ್ಕಿಬರುತ್ತಿದ್ದ ಅಲೆಗಳು ಒಬ್ಬ ಮುದುಕಿಯನ್ನು ಯಾರೂ ಅರಿಯದ ಸ್ಥಾನಕ್ಕೆ ಒಯ್ಯುತ್ತಿದ್ದುವು.

ಧೈರ್ಯಗೊಂಡು ನಾನೆಂದೆ: " ಹೌದು— ನಾನು ಸತ್ಯವನ್ನೇ ಆಡಿದೆ—ನೀನೇ ಕೊಲೆಗಾತಿ !— ಜಾರಿಣಿ !!—"

ಕೂಡಲೆ ವಸಂತಿಯು ಕ್ರೂರಧ್ವನಿಯಲ್ಲಿ ಕೇಕೆ ಹಾಕಿದಳು— ಒಂದು ಕ್ಷಣ ಮಾತ್ರ ನೀರಿನಿಂದ ಗದ್ದಲವೆದ್ದು ಮಾಯವಾಯಿತು :

ವಸಂತಿ ನುಡಿದಳು:—" ಎಲ್ಲರೂ ಹೀಗೇ ಅನ್ನುತ್ತಾರೆ. ಇದೇ ಮೊನ್ನಿನ ಮಾತು. ಲಕ್ಷ್ಮಿಯ ತಂದೆ ಹೇಳುತ್ತಿದ್ದ—

" ಯಾವ ಲಕ್ಷ್ಮಿ ? "— ಎಂದು ನಡುವೆ ನುಡಿದ ನನ್ನ ಮಾತನ್ನು ಕೇಳದೆ ಅವಳು ಮುಂದುವರಿದಳು: " ಅಲ್ಲಿ ಎದುರಿಗೆ ಕಾಣುವ ಜನಗಾಂವ್ ಜಮೀನುದಾರರಿಗೆ ಒಬ್ಬಳೇ ಮಗಳಿದ್ದಳು. ಅವಳೊಬ್ಬ ಯುವಕನನ್ನು ಪ್ರೀತಿಸುತ್ತಿದ್ದಳು— ಮದುವೆಯಾಗುವುದಶಕ್ಯವೆಂದು ತಿಳಿದಾಗ, ಅಧೈರ್ಯಳಾಗಿ ಓಡಿ ಬಂದಳು— ಮತ್ತೆ ನಾನು ಅವಳನ್ನು ಉಳಿಸಲು ಯತ್ನಿಸಿದೆ— ನಾನು ಪ್ರತಿ ಮನುಷ್ಯನನ್ನೂ ಉಳಿಸಲು ಯತ್ನಿಸುತ್ತೇನೆ— ನಾನು ಅವಳನ್ನು ಮೂರು ಸಾರೆ ಮೇಲಕ್ಕೆ ತಂದೆ— ಆದರೆ—"

ನಾನು ವಸಂತಿಯ ಬಾಯ ಮೇಲೆ ಕೈಯಿಟ್ಟು, " ಬಿಡು ಆ ಮಾತನ್ನು— ಆಕೆಯದು ಇದಕ್ಕೇನೂ ಸಂಬಂಧವಿಲ್ಲ— ಏನೆಂದರೂ ನೀನು ಕೊಲೆಗಾತಿ " ಎಂದೆ.

ಸೂರ್ಯನ ಹೊಂಬಿಸಿಲಿನಲ್ಲಿ ಮಿಂಚುತ್ತಿದ್ದ ಅವಳೆಂದಳು:— " ನೀನು ನನ್ನನ್ನು ಅನ್ಯಥಾ ಭಾವಿಸಿರುವೆ. ಜನ್ಮ-ಜನ್ಮಾಂತರದಿಂದ ನಾನು ಮನುಷ್ಯನ ಹೊಲಗಳಿಗೆ ನೀರೆರೆಯುತ್ತ ಬಂದಿದ್ದೇನೆ. ಯಾವಾಗ ಅವನ ಶ್ರಮವು ಹೂವಾಗಿ ನಗುವುದೋ, ಹಣ್ಣಾಗಿ ಪರಿಮಳವನ್ನು ಬೀರುವುದೋ,— ಆಗ ನಾನು ಸಂತಸದಿಂದ ಕುಣಿದಾಡುತ್ತೇನೆ. ನಾನು ಮಾನವನ ಕೊಲೆಗಾತಿಯಲ್ಲ—ಸ್ನೇಹಿತಳು ! "

" ಆದರೆ ಕೊಲೆ ಮಾಡಿದವರಾರು ? " ಎಂದು ನಾನು ಕೂಗಿದೆ.

" ಕೊಲೆ ಮಾಡಿದವನೆಂದರೆ, ಸೇತುವೆ ಕಟ್ಟುವಾಗ ಕಲ್ಲಿನ ಬದಲಾಗಿ ಇಟ್ಟಿಗಲ್ಲನ್ನು, ಮತ್ತು ಇಟ್ಟಿಗಲ್ಲಿನ ಬದಲಾಗಿ ಮಣ್ಣನ್ನು ತುಂಬಿ, ಎಲ್ಲಾ ರೂಪಾಯಿಗಳನ್ನು ನುಂಗಿದವ,— ಸೇತುವೆಯನ್ನು ಪರೀಕ್ಷಿಸದೆ ಮನೆಯಲ್ಲಿಯೇ ಕುಳಿತುಕೊಂಡು ಸಂಬಳವನ್ನು ತೆಗೆದುಕೊಳ್ಳುವವ,—ಇನ್ನೂ ಬೇರೆ ಹೇಳಬೇಕೆಂದರೆ, — ನಿನಗಾವ ಕೊಲೆಪಾತಕನ ಹೆಸರು ಬೇಕು ? —" ಎಂದು ವಸಂತಿ ನನ್ನನ್ನು ಬಡಿದೆಬ್ಬಿಸುತ್ತಿದ್ದಳು— ಆದರೆ ನಾನು ಅರೆಮೂಕನಾಗಿದ್ದೆ.—

ಬಿಸಿಲೇರಿದ್ದಿತು— ಮುರಿದು ಬಿದ್ದ ಸೇತುವೆ ಜಿ. ಟಿ. ಎಕ್ಸ್‌ಪ್ರೆಸ್ಸಿನ ಅಪಘಾತದ ಕತೆಯನ್ನು ಹೇಳುತ್ತಿದ್ದಿತು. ಸದ್ದಿಲ್ಲದೆ ಸ್ವಯಂಸೇವಕರು ಮುಳುಗಿ ಹೋಗುತ್ತಿದ್ದ ಮೃತದೇಹಗಳನ್ನೆಳೆದು ತೆಗೆಯುತ್ತಿದ್ದರು. ವಸಂತಿಯು ನಿಧಾನವಾಗಿ ಹರಿದುಹೋಗುತ್ತಿದ್ದಳು. ಎಲ್ಲೆಡೆಯೂ ನೀರವತೆ; ಆದರೆ ಆಗಾಗ ನದಿಯ ತೀರದಿಂದ, ಅತ್ತುತ್ತು ಬೇಸತ್ತವರ ಕೂಗು ಮತ್ತು ನಿಟ್ಟುಸಿರು ಕೇಳಿಸುತ್ತಿತ್ತು.

ನದಿಯ ತೀರದಲ್ಲಿ ಸಾವಿರಾರು ಜನರು ನಿಂತಿದ್ದರು. ಅವರೆಲ್ಲರೂ ಸುತ್ತುಮುತ್ತಲಿನ ಹಳ್ಳಿಗಳಿಂದ, ದೂರದಲ್ಲಿದ್ದ ಊರುಗಳಿಂದ, ಪಟ್ಟಣದಿಂದ ಬಂದಿದ್ದರು ಅವರನ್ನು ಹಿಂದೆ ತಳ್ಳುತ್ತ " ಹಾದಿ ಬಿಡಿ— ಮುಖ್ಯಮಂತ್ರಿಯವರು ಬರುತ್ತಿದ್ದಾರೆ. " ಎಂದು ಪೋಲಿಸ್ ಸಿಪಾಯಿಗಳು ಹೇಳುತ್ತಿದ್ದರು.

ಮುಖ್ಯ ಮಂತ್ರಿಗಳು !

ನಾನು ವಿಚಾರ ಪರವಶನಾದೆ— ಮತ್ತೆ ಅವರು ಸಮೀಪದಿಂದ ಹೋಗುತ್ತಿದ್ದಾಗ— ನಾನು ಅವರನ್ನು ವಸಂತಿಯ ಮಾತಿನಲ್ಲಿದ್ದ ಸತ್ಯಾಂಶವನ್ನು ಕಂಡುಹಿಡಿಯಲು ಕೂಗಿದೆ. ಆದರೆ ಅವರು ನನಗೆ ಉತ್ತರ ಕೊಡಲಿಲ್ಲ. ನನ್ನನ್ನು ತಿರುಗಿ ಕೂಡ ನೋಡಲಿಲ್ಲ. ಏಕೆಂದರೆ ನಾನು ಮೃತನಾಗಿದ್ದೇನೆ !

ನಾನು ಮೃತನಾಗಿದ್ದೇನೆ, ಆದರೆ ನಾನು ಮೃತನಾದುದು ಈಗಲ್ಲ— ಈ ದೇಶದಲ್ಲಿ ಜನ್ಮವೆತ್ತಿದಾಗಲೇ— ನಾನೊಬ್ಬ ಕಾರಕೂ. ನನ ಕೋಣೆಯಲ್ಲಿದ್ದಾಗ,—ನನ್ನ ಹಣೆಯಲ್ಲಿ ಒಂದು ಜಾತಿ, ಒಂದು ಮತ, ಒಂದು ಧರ್ಮದ ಪ್ರತಿನಿಧಿ ಎಂದು ಹೆಸರು ಬಂದಾಗಲೇ— ನನ್ನ ಯವ್ವನ ತುಂಬಿದ ಶರೀರದಲ್ಲಿ ಚಾಕರಿಯ ಕ್ರಿಮಿಗಳು ಪ್ರವೇಶಿಸಿ ನನ್ನ ರಕ್ತವನ್ನೇ ನೀರು ಮಾಡುತ್ತಿದ್ದಾಗಲೇ—

ಬಿ. ಎ. ಡಿಗ್ರಿಯ ಔಷಧಿಯು ಕೂಡ ಕೆಲಸಕ್ಕೆ ಬರಲಿಲ್ಲ— ನಿಜವಾದುದೆಂದರೆ, ನನ್ನ ದಾರಿದ್ರ್ಯವೇ ನನ್ನ ಮೃತ್ಯು—ನಾನೆ ಅದರ ವಿರುದ್ಧ ಇಪ್ಪತ್ತು ವರ್ಷಗಳಿಂದ ಸೋಲನ್ನೊಪ್ಪದೆ ಹೋರಾಡುತ್ತಿದ್ದೇನೆ !

ಜಯಂತಿ

ನಾನು ಪ್ರತಿದಿನವೂ ಜೀವಿಸಿ ಮರಣಿಸುತ್ತಿದ್ದೆ. ಏಕೆಂದರೆ ನನಗೆ ನನ್ನ ತಾಯಿ ಬೇಕಾಗಿದ್ದಳು; ಅಕ್ಕ-ತಂಗಿಯರು ತಮ್ಮಂದಿರು ಮತ್ತೆ ಕುಲಕುಮಾರಿಯ ಆ ನಗು ನನಗೆ ಬೇಕಿತ್ತು. ಅದನ್ನು ನಾನು ಮಿಸ್ ಕಮಲೆಯ ತುಟಿಗಳಲ್ಲಿ ಕಂಡಿದ್ದೆ. ನಾನು ಆ ನಸುನಗುವಿಗಾಗಿ ಪ್ರಾಣವನ್ನಾದರೂ ಕೊಡುತ್ತಿದ್ದೆ. ಅದನ್ನು ಉಳಿಸಿಕೊಳ್ಳಬೇಕೆಂದು ನಾನು ಈ ನಿಷ್ಕರುಣೆಯಾದ ಚಾಕರಿಯ ಜೊತೆಗೆ ಸಂಬಂಧವನ್ನು ಬೆಳೆಸಿದೆ—ಎಷ್ಟೋ ಸಾರಿ ಕಣ್ಣು ತಪ್ಪಿಸಿಕೊಂಡು, ಈಗ ದಿಲ್ಲಿಯ ಒಂದು ಕಾರಖಾನೆಯಲ್ಲಿ ಅದು ನನಗಾಗಿ ನಿರೀಕ್ಷಿಸುತ್ತಿತ್ತು. ನಾನು ದಿಲ್ಲಿಗೆ ಹೋಗುತ್ತಿದ್ದೆ; ಆದರೆ ನಡುದಾರಿಯಲ್ಲಿಯೇ ವಸಂತಿಯು ನನ್ನನ್ನು ಬಲವಾಗಿ ಅಪ್ಪಿದಳು. ನನ್ನ ಉಸಿರಾಡುವುದೇ ನಿಂತು ಹೋಯಿತು. ನಾನು ಸತ್ತುಹೋಗಿದ್ದೇನೆ ಪೂರ್ಣವಾಗಿ—

ಸತ್ಯವೆಂದರೆ ನಾನಿನ್ನೂ ಸತ್ತಿಲ್ಲ. ಏಕೆಂದರೆ ನಾನು ಪ್ರತಿ ದಿನ ರಾತ್ರಿ ಹನ್ನೊಂದು ಗಂಟೆಗೆ ಏಳುತ್ತೇನೆ— ಓಡಿ ಹೋಗಿ ಅಲ್ಲಿಂದ ಹಾಯ್ದು ಹೋಗುವ ಜಿ. ಟಿ. ಎಕ್ಸ್‌ಪ್ರೆಸ್‌ನಲ್ಲಿ ಕುಳಿತುಕೊಳ್ಳುತ್ತೇನೆ. ಕೂಡಲೇ ದೀಪಗಳು ಆರಿಹೋಗುತ್ತವೆ. ಭಯಂಕರ ಶಬ್ದದಿಂದ ಸೇತುವೆ ಮುರಿಯುತ್ತದೆ ಮತ್ತೆ ನಾನು ವಸಂತಿಯ ಉನ್ಮತ್ತ ಅಲೆಗಳಲ್ಲಿ ಹರಿಯುತ್ತ ಇಲ್ಲಿಗೆ ಬರುತ್ತೇನೆ– ಆ ಮೇಲೆ ಪೂರ್ಣ ದಿನ ಈ ಜಾಲಿಯ ಗಿಡದಡಿಯಲ್ಲಿ ಬಿದ್ದುಕೊಂಡು, ಹೋಗುವ ಬರುವ ಪ್ರತಿ ವ್ಯಕ್ತಿಯನ್ನು "ನಾನು ದಿಲ್ಲಿಗೆ ಎಂದು ಹೋಗುವೆ?" ಎಂದು ಪ್ರಶ್ನಿಸುತ್ತೇನೆ...

ಆದರೆ ನೀವೇಕೆ ನನ್ನನ್ನು ಹೀಗೆ ದಿಟ್ಟಿಸಿ ನೋಡುತ್ತಿದ್ದೀರಿ? – ಹೇಳಿರಿ— ನಾ ದಿಲ್ಲಿಗೆ ಯಾವಾಗ ಹೋಗುತ್ತೇನೆ?"

ಅಜ್ಞಾನಕ್ಕೆ

ಶ್ರೀ. ಜಿ. ಶಂಕರಭಟ್, ಉಜಿರೆ ಬಿ. ಎ., ಬಿ. ಟಿ.,

ಎನ್ನ ಮನೆ ಸುತ್ತಲೂ ಕೆಸರುಕೊಳೆ ತುಂಬಿರಲು,
ದುರ್ನಾತ ಹಬ್ಬಿರಲು,
ನಾತವನೆ ಮುತ್ತಿರುವ ಕೊಳೆಜೀವಿಗಳ ಸಂತೆ
ಅನವರತ ನೆರೆದಿರಲು,
ಈ ಮನೆಯ ತುಂಬೆಲ್ಲ ಹಬ್ಬಿರಲು ಕತ್ತಲು,
ಇದುವೆ ರೋಗದ ಬೀಡು!
ದಿಟವೆ ಸಾವಿನ ಗೂಡು!
ಎಳೆತನದಿ ಕಟ್ಟಿದ್ದ ಆದರ್ಶ ಭವನವಿದು
ಹುಡಿಧೂಳನಪ್ಪಿಹುದು.
ತಿದ್ದಿದಾ ಸೂಕ್ಷ್ಮಮತಿ ಬಾಳನಲಿ ಸೊಗವನ್ನೆ
ಹಾರಯಿಸಿ ಬೆಳೆದಿಹುದು

ಜೀವನದ ಕಠಿಣತರ ಮಾರ್ಗಮಧ್ಯದೊಳಿಂತು
ನೋವೆ ನಲಿಯುವುದಲ್ಲ!
ಸೊಗದ ಸೂಚನೆಯಿಲ್ಲ!
'ಸಮರಸವೆ ಜೀವನ'ವೆನುವ ತತ್ತ್ವ ಮುರಿದಿಹುದು
ಬೀಸದಾ ಗಾಳಿಯಿಂದಿ,
ಉಷೆಯಿಂದ ನಿಶೆಯವರೆ ಬೈಗಳಿನ ಸುರಿಮಳೆಯ
ಜೋಗುಳದ ಹಾಡಿಹಾಡಿ
ಕೀಟವದೊ ಕೊರೆಯುತಿದೆ ಜೀವನದ ಮೃದುಕುಸುಮ
ದಳದಳವೆ ಜೀರ್ಣಿಸಿದೆ!
ಕನಸೆಲ್ಲ ಚೂರ್ಣಿಸಿದೆ!
ಜಗವೆಲ್ಲ ಒಂದೆನಲು, ನಾವೆಲ್ಲ ಸ್ವಜನರೊಲು,
ಬದುಕಿಬಾಳಲು ಬೇಕು.
ಹೊರಗಿಲ್ಲಿ ತಿರೆಯಲ್ಲಿ— ಸತ್ಯಕ್ಕೆ ಬೆಲೆಯಿಲ್ಲ,
ನ್ಯಾಯಕ್ಕೆ ನೆಲೆಯಿಲ್ಲ.
ಹೋರಾಟ-ಹಗರಣವು ಅನ್ಯಾಯದ ಬಾಂದಳದಿ,
ಮಾತ್ಸರ್ಯ ಬಲಿಯುತಿದೆ!
ದ್ವೇಷಾಗ್ನಿ ಸಿಡಿಯುತಿದೆ!

* * * *

ರೋಗಕ್ಕೆ ಕಾರಣವನರಿವ ಜ್ಞಾನವು ಬೇಡ-
ಭಯವೆ ಬೆನಟ್ಟುತಿಹುದು!
ಆದರ್ಶ ಬೇಕೆನುವ ತಿಳಿವು ನನಗಿರಬೇಡ –
ಸೋಲೆ ಬೆಂಬತ್ತಿ ಬಹುದು!
ಸರಸದೊಳು ದಾಂಪತ್ಯವೆನುವ ತತ್ತ್ವವು ಬೇಡ—
ವಿರಸವೇ ಕಾಡುತಿಹುದು!
ಜಗವೆಲ್ಲ ಒಂದೆನುವ ಅರಿವು ಬರುವುದು ಬೇಡ—
ರಣಕಹಳೆ ಕೇಳುತಿಹುದು!
ಅಜ್ಞಾನವೇ ಆನಂದವೆನುವ ಮಾತು ನಿಜವಾಯ್ತು!
ಎನ್ನ ತಿಳಿವೇ ಮನಸಿಗದೊ ಮುಳ್ಳಾಯ್ತು!

ಕನ್ನಡದಲ್ಲಿ ಸಣ್ಣಕತೆಗಳು

ಪ್ರೊ. ಸಿ. ಎಸ್. ಕುಲಕರ್ಣಿ ಎಮ್. ಎ, ಬಿ. ಟಿ. ಜನತಾಕಾಲೇಜ್, ಧಾರವಾಡ

卐

ಲೇಖಾಂಕ ೨

ಬೆಳವಣಿಗೆ

(ಕಳೆದ ಸಂಚಿಕೆಯಿಂದ ಮುಂದುವರಿದದ್ದು)

ಲಲಿತಕತೆಗಳ ಕಾಲ:— ಕನ್ನಡ ಸಣ್ಣಕತೆಗಳ ಬೆಳವಣಿಗೆಯಲ್ಲಿ ನಾಲ್ಕು ಹಂತಗಳನ್ನು ಮಾಡಲು ಕಾರಣವಿದೆ. ಕ್ರಿ. ಶ. ೧೯೦೦ರಿಂದ ೧೯೨೦ರ ವರೆಗೆ ಕನ್ನಡದಲ್ಲಿ ಸಣ್ಣಕತೆ ಒಂದು ಮಟ್ಟಕ್ಕೆ ಬರದೆ ಹೊಯ್ದಾಡುತ್ತಲಿತ್ತು. ತನ್ನದೇ ಆದ ಒಂದು ನೆಲೆಯನ್ನೂ, ಸ್ವರೂಪವನ್ನೂ ಅದು ಚೆನ್ನಾಗಿ ಪಡೆದಿರಲಿಲ್ಲ. ಆದುದರಿಂದ ಅದನ್ನು ಆರಂಭದ ಕಾಲವೆಂದು ಗಣಿಸಲಾಯಿತು. ತನ್ನತನವನ್ನು ದೊರಕಿಸಲು ಹೆಣಗುತ್ತಿದ್ದುದೇ ಆರಂಭ ಕಾಲದ ವೈಶಿಷ್ಟ್ಯವಾಗಿತ್ತು. ಇದರಂತೆಯೆ ಉಳಿದ ಮೂರು ಹಂತಗಳೂ ತಮ್ಮವೇ ಆದ ವೈಶಿಷ್ಟ್ಯಗಳಿಂದ ಕೂಡಿವೆ. ಈ ವೈಶಿಷ್ಟ್ಯಗಳು ಯಾವುದೇ ಸಾಹಿತ್ಯಾಭ್ಯಾಸಿಗೆ-ಸಾಹಿತ್ಯ ಚರಿತ್ರಾಭ್ಯಾಸಿಗೆ-ಒಡೆದು ಕಾಣುವಷ್ಟು ಸ್ಪಷ್ಟವಾಗಿವೆ. ಈ ವೈಶಿಷ್ಟ್ಯಗಳನ್ನು ಆಧರಿಸಿಯೇ ನಾನು ಈ ಹಂತಗಳನ್ನು ಗುರುತಿಸಿದ್ದೇನೆ. ನಾನು ಗುರುತಿಸಿದ ರೀತಿ ಉಳಿದ ಕೆಲವರಿಂದ ಭಿನ್ನವಾಗಿದೆ. ಶ್ರೀ. ತ. ಶ್ರೀಕಂಠಯ್ಯನವರು ಹಂತಗಳ ಬಗ್ಗೆ ಹೇಳಿದ್ದಾರೆ; ಆದರೆ ಹಂತಗಳ ಲಕ್ಷಣಗಳನ್ನು ಹೇಳದೆ, ಕನ್ನಡದ ಸಣ್ಣಕತೆಗಾರರಲ್ಲಿ ಬರೀ ಮೂರು ಹಂತಗಳ್ನು ಮಾಡಿದ್ದಾರೆ.[೧] ಡಾ. ರಂ. ಶ್ರೀ. ಮುಗಳಿಯವರು “ ಸಣ್ಣಕತೆಯ ಈವರೆಗಿನ ಮೂವತ್ತು ವರುಷದ ಚರಿತ್ರೆಯಲ್ಲಿ ಸಣ್ಣಕತೆಗಾರರ ಮೂರು ಪೀಳಿಗೆಗಳು ಎದ್ದು ಕಾಣುತ್ತವೆ.......ಮೂರು ಪೀಳಿಗೆಗಳ ದೃಷ್ಟಿ, ಆವೇಶ, ರೀತಿ ಬೇರೆ ಬೇರೆಯಾಗಿವೆ. ಇವರಲ್ಲಿ ಹಲವರು ವಿಷಯದಲ್ಲಿ ಹೊಸತನವನ್ನೂ ಸ್ವತಂತ್ರ ದೃಷ್ಟಿಯನ್ನೂ ತೋರಿಸಿದ್ದಾರೆ; ತಂತ್ರ ನೈಪುಣ್ಯಕ್ಕೆ ವೀಳ್ಯವೆತ್ತಿದ್ದಾರೆ................. ”[೨] ಎಂದು ಮೂರು ಪೀಳಿಗೆಗಳ ಬಗ್ಗೆ ಮಾತನಾಡಿದ್ದಾರೆ. ಆದರೆ ಮೂರೂ ಪೀಳಿಗೆಯವರಲ್ಲಿ ಕಂಡುಬರುವ ವೈಶಿಷ್ಟ್ಯಗಳನ್ನು ಚರ್ಚಿಸಿಲ್ಲ. ಶ್ರೀ. ವರದರಾಜ ಹುಯಿಲಗೋಳರು ‘ ಕನ್ನಡ ಸಣ್ಣಕತೆಗಳ ಬೆಳವಣಿಗೆ ’[೩] ಎಂಬ ತಮ್ಮ ಲೇಖನದಲ್ಲಿ, ಕೆಲವು ಹಂತಗಳನ್ನು ಗುರುತಿಸಿದ್ದಾರೆ; ಮತ್ತು ಅವುಗಳ ಲಕ್ಷಣವನ್ನು ಸ್ವಲ್ಪ ಮಟ್ಟಿಗೆ ಹೇಳಿದ್ದಾರೆ. “ ೧೯೨೦ರಿಂದ ೧೯೨೨ರ ವರೆಗೆ ಈ ಸಣ್ಣಕತೆಗಾರರಿಂದ ವಿಶಿಷ್ಟರೀತಿಯ ಬೆಳವಣಿಗೆಯು ಸಣ್ಣಕತೆಗಳಲ್ಲಿ ಕಂಡು ಬಂದಿದೆ. ಇಲ್ಲಿಯ ಕತೆಗಳಲ್ಲಿ ಸಾಂಪ್ರದಾಯಿಕತೆ ಇದೆ. ವಿಶೇಷ ಹೊಸ ವಿಷಯಗಳು ಇಲ್ಲ. ಆದರೆ ಜೀವನವನ್ನು ಇದ್ದಂತೆಯೇ ನೋಡಿ, ಅದರಲ್ಲಿಯ ರಸನೀರಸಗಳನ್ನು ರಸವತ್ತಾಗಿ ಚಿತ್ರಿಸುವ ಮನೋರೀತಿ ಸಣ್ಣಕತೆಗಳಲ್ಲಿ ಒಡಮೂಡಿದೆ. ಅಲ್ಲದೆ, ಕತೆಗೆ ಕಲಾತ್ಮಕವಾದ ರೂಪವನ್ನು ತಂದಿದ್ದಾರೆ. ” ಎಂದು ಮೊದಲಿನ ಹಂತವನ್ನು ಸಾಂಪ್ರದಾಯಿಕವೆಂದು ಅಭಿಪ್ರಾಯಪಟ್ಟಿದ್ದಾರೆ. ಮುಂದೆ ೧೯೨೨ರ ದ ೧೯೪೪ರವರೆಗಿನ ಕಾಲವನ್ನು ಪ್ರಗತಿಶೀಲ ಕತೆಗಾರರ ಕಾಲವೆಂದು ನಿರ್ದೇಶಿಸಿದ್ದಾರೆ. ‘ ಈ ಪ್ರಗತಿಶೀಲರ ಚಳವಳಿ ಸಣ್ಣಕತೆಗಳ ಮೇಲೆ ಅತ್ಯಂತ ಪ್ರಭಾವವನ್ನು ಬೀರಿತು ’ ಎಂದು ಹೇಳಿ, ಮರುಕ್ಷಣದಲ್ಲಿಯೇ “ ಇವರೆಲ್ಲರೂ ಬರೆದ ಕತೆಗಳಿಗೆ ‘ ಪ್ರಗತಿಶೀಲ ಕತೆಗಳು ’ ಎಂದು ನಿರ್ದಿಷ್ಟವಾಗಿ ಹೇಳಲು ಬಾರದಿದ್ದರೂ, ಇವರ ಕತೆಗಳಲ್ಲಿ ಹೊಸತನ, ಹೊಸ ಉತ್ಸಾಹ ಕಂಡು ಬಂದಿದೆ. ಹಿಂದಿನ ಕತೆಗಾರರಲ್ಲಿ ಕಂಡುಬರುವ ಸಾಂಪ್ರದಾಯಿಕತೆ ಕಡಿಮೆಯಾಗಿದೆ. ಬಡವರಲ್ಲಿ ಕೂಲಿಗಳಲ್ಲಿ ಅತ್ಯಂತ ಮರುಕ ತೋರಿಸುವುದು, ರಾಜಕಾರಣದ ಉಕ್ಕಿನ ಕೈಗಳಲ್ಲಿ ತೊಳಲುತ್ತಿರುವ ಜನರ ದುಃಖವನ್ನು ಹೃದಯದ್ರಾವಕವಾಗಿ ವರ್ಣಿಸುವುದು, ಈ ಕಾಲದ ಸಣ್ಣಕತೆಗಳ ಹೆಗ್ಗುರುತಾಗಿದೆ. ” ಎಂದು ಹೇಳುತ್ತಾರೆ. ಈ ಹೇಳಿಕೆ ಅವರ ಪ್ರತಿಪಾದನೆಯಲ್ಲಿ ವಿರೋಧಾಭಾಸವನ್ನು ಹುಟ್ಟಿಸಿದೆ. ಆಮೇಲೆ “ ಸಣ್ಣಕತೆಗಳ ಕೊನೆಯ ಹಂತದಲ್ಲಿ—ಎಂದರೆ ಅತ್ಯಂತ ಆಧುನಿಕ ಕಾಲದಲ್ಲಿ-ವಿವಿಧತೆ ಮತ್ತು ಹೊಸದೃಷ್ಟಿ ಬೇಕಾದಷ್ಟಿದೆ. ” ಎಂದು ಸಣ್ಣಕತೆಗಳ ಹಂತವನ್ನು ಮುಗಿಸಿದ್ದಾರೆ. ನನಗೆ ತಿಳಿದ ಮಟ್ಟಿಗೆ ಇನ್ನು ಉಳಿದವರಾರೂ ಸಣ್ಣಕತೆಗಳ ಬೆಳವಣಿಗೆಯಲ್ಲಿಯ ವಿಶಿಷ್ಟ ಹಂತಗಳ ಹಾಗೂ ಅವುಗಳ

---

೧ ವಿಜಯ— ಸಾಹಿತ್ಯ ಸಮ್ಮೇಳನ ಸಂಚಿಕೆ ೧೯೫೬   ೨ ಸಾಹಿತ್ಯೋಪಾಸನೆ – ರಂ. ಶ್ರೀ. ಮುಗಳಿ.

೩ “ ಜಯಕರ್ನಾಟಕ ” ನವರಾಜ್ಯೋದಯ ಸಂಚಿಕೆ.

ಲಕ್ಷಣಗಳ ಬಗೆಗೆ ವಿಶೇಷವಾಗಿ ಬರೆದಿಲ್ಲ. ಶ್ರೀ. ಅ. ನ. ಕೃ. ಅವರು ತಮ್ಮ ಕೆಲವು ಲೇಖನಗಳಲ್ಲಿ, ಪ್ರಗತಿಶೀಲರ ಸಣ್ಣಕತೆಗಳ ಪರವಾಗಿ ಮಾತ್ರ ಸಾಕಷ್ಟು ಬರೆದಿದ್ದಾರೆ

ಇಂದು ಸಾಹಿತ್ಯಾಭ್ಯಾಸಿಗಳು ಸ್ವಲ್ಪ ಲಕ್ಷ್ಯಪೂರ್ವಕವಾಗಿ ಕನ್ನಡ ಸಣ್ಣಕತೆಗಳ ಬೆಳೆವಣಿಗೆಯನ್ನು ಅವಲೋಕಿಸಿದರೆ, ನಾನು ಹೇಳಿದಂತೆ ವಿಭಾಗಗಳು ಸ್ಪಷ್ಟವಾಗಿ ಕಾಣುತ್ತವೆಂದು ನಾನು ಭಾವಿಸಿದ್ದೇನೆ. ಈ ವಿಭಾಗಗಳ ವೈಶಿಷ್ಟ್ಯಗಳನ್ನು ಪರಿಣಾಮಗಳನ್ನು ಚರ್ಚಿಸುವುದೇ ಲೇಖನದ ಉದ್ದೇಶವಾಗಿದೆ.

ನಾನು ಪೀಳಿಗೆಗಳ ಮಾತನ್ನಾಡದೆ ಹಂತಗಳ ಮಾತನ್ನಾಡಲು ಒಂದು ಕಾರಣವಿದೆ. ಅದೆಂದರೆ: ಒಂದು ಪೀಳಿಗೆಯಲ್ಲಿದ್ದ ಜನರು ಎರಡು ಅಥವಾ ಮೂರು ಹಂತಗಳಲ್ಲಿ ಬರುವ ಕತೆಗಳನ್ನು ಬರೆದಿರಬಹುದು. ಆಗ ಪೀಳಿಗೆಯ ಬಗ್ಗೆಯಷ್ಟೇ ಮಾತನಾಡಿದರೆ ಬೆಳೆವಣಿಗೆಯ ಸರಿಯಾದ ಕಲ್ಪನೆ ಬರಲಾರದು. ಇಲ್ಲಿ ನಾವು ಅ. ನ. ಕೃ. ಅವರ ಉದಾಹರಣೆಯನ್ನು ನೋಡಬಹುದು: ಅವರು ಲಲಿತ ಕತೆಗಾರರ ಹಾಗೂ ಪ್ರಗತಿಶೀಲ ಕತೆಗಾರರ ಹಂತಗಳೆರಡರಲ್ಲಿ ಬರುವಂತೆ ಕತೆಗಳನ್ನು ಬರೆದಿದ್ದಾರೆ. ಆದುದರಿಂದ ಪೀಳಿಗೆಯ ಬದಲಾಗಿ ಹಂತಗಳ ಪ್ರಕಾರ ಬೆಳೆವಣಿಗೆಯಲ್ಲಿ ವಿಂಗಡನೆ ಮಾಡುವುದೇ ಹೆಚ್ಚು ಸರಿಯೆನಿಸುತ್ತದೆ.

ಈ ದೃಷ್ಟಿಯಿಂದ ವಿಚಾರಿಸಿ ನಾನು ೧೯೨೦ರಿಂದ ೧೯೪೦ರ ವರೆಗಿನ ಸಣ್ಣ ಕತೆಗಳ ಕಾಲವನ್ನು ಲಲಿತ ಕತೆಗಾರರ ಕಾಲವೆಂದು ಕರೆದಿದ್ದೇನೆ. ಈ ಕಾಲವನ್ನು ೧೯೪೦ರ ವರೆಗೆ ಬೆಳೆಸಿದ ಕಾರಣವೆಂದರೆ, ನಮ್ಮಲ್ಲಿ ಪ್ರಗತಿಶೀಲರ ಚಳವಳಿ ಪ್ರಾರಂಭವಾದದ್ದು ಆ ಸುಮಾರಿಗೇ!

೧೯೨೦ರಲ್ಲಿ ಪ್ರಕಟವಾದ 'ಶ್ರೀನಿವಾಸ'ರ 'ಕೆಲವು ಸಣ್ಣಕತೆ' ಗಳು ಎಂಬ ಸಂಕಲನದಿಂದ ಕನ್ನಡದಲ್ಲಿ ಲಲಿತಕತೆಗಳ ಕಾಲ ಪ್ರಾರಂಭವಾಯಿತೆಂದು ಹೇಳಬಹುದು. ಶ್ರೀನಿವಾಸರ ಪ್ರಭಾವವು ಲಲಿತಕತೆಗಳ ಕಾಲದ ತುಂಬೆಲ್ಲ ಹರಡಿಕೊಂಡಿದೆ. ಅಷ್ಟೇ ಏಕೆ, ಮುಂದೆಯೂ ಇಂದೆಯೂ ಕೂಡ ಲಲಿತವಾದ ಸಣ್ಣಕತೆಗಳಿಗೆಲ್ಲ ಶ್ರೀನಿವಾಸರ ಕತೆಗಳೇ ಮಾದರಿಯಾಗಿವೆಯೆಂದು ಹೇಳಬಹುದು.

ಶ್ರೀನಿವಾಸರ ಕತೆಗಳನ್ನೂ ಅನಂತರ ಅವರನ್ನು ಅನುಸರಿಸಿದ ಕತೆಗಾರರ ಕತೆಗಳನ್ನೂ ಲಲಿತಕತೆಗಳೆಂದು ಕರೆಯಲು ಕಾರಣವೆಂದರೆ, ಈ ಕತೆಗಳೆಲ್ಲ ಸುಖಸಂಕಥಾ ವಿನೋದಕ್ಕಾಗಿ ಬರೆಯಲ್ಪಟ್ಟಂಥವುಗಳಾಗಿವೆ. ಮತ್ತು ಇಲ್ಲಿ ಕಾಂತಾಸಮ್ಮಿತಿಯು ಕಂಡುಬರುತ್ತಿದೆ. ಶ್ರೀನಿವಾಸರು 'ಕೆಲವು ಸಣ್ಣಕತೆಗಳು' ಎಂಬ ಸಂಕಲನದ ಮೊದಲ ಮುದ್ರಣದ ಮುನ್ನುಡಿಯಲ್ಲಿ "ಇಲ್ಲಿ ಬರೆದಿರುವುದು ನಮ್ಮ ಅಭಿಪ್ರಾಯಗಳನ್ನು ಸೂಚಿಸುವ ಉಪನ್ಯಾಸಗಳನ್ನಲ್ಲ; ತಾವು ಓದಿ ಸಂತೋಷಪಡಬೇಕೆಂದು ಕತೆಗಳನ್ನು;.......... ಈ ಕತೆಗಳಲ್ಲಿ ನನಗೆ ಮಾತ್ರವೇ ಸುಖವಲ್ಲ, ಇತರರಿಗೂ ಸ್ವಲ್ಪ ಸುಖವಿರುವಂತಿದೆ, ಎಂದುಕೊಂಡು, ಉದ್ದೇಶವನ್ನು ಬಿಡದೆ ಶಾಮಣ್ಣನವರ ಕತೆಗಳನ್ನು ಆ ಹೂವಿನೊಂದಿಗೆ ನಾರಾಗಿ ನನ್ನ ಕತೆಗಳನ್ನು ಅಚ್ಚುಹಾಕಿಸಿದ್ದೇನೆ. ತಾವು ಇದನ್ನು ಓದಿ ಸುಖಪಡಬೇಕೆಂದು ನನಗೆ ಬಹಳ ಆಸೆಯಿದೆ. ಸುಖಪಟ್ಟೀರೆಂದು ನಂಬಿಯೇ ಇದ್ದೇನೆ......." ಎಂದು ಈ ಕತೆಗಳ ಉದ್ದೇಶವನ್ನು ಹೇಳಿದ್ದಾರೆ. ಅವರು ಕಾಂತಾಸಮ್ಮಿತಿಯ ಬಗ್ಗೆ ಮಾತನಾಡಿಲ್ಲ. ಆದರೆ ಅದು ಅವರ ಕತೆಗಳಲ್ಲೆಲ್ಲ ಹಬ್ಬಿದೆ ಎಂಬ ಮಾತನ್ನು ಜಾಣಾಕ್ಷ ಓದುಗರು ಕೂಡಲೇ ತಿಳಿಯಬಲ್ಲರು. ಈ ವಿಷಯದಲ್ಲಿ ಶ್ರೀ. ಎ. ಆರ್. ಕೃಷ್ಣಶಾಸ್ತ್ರಿಗಳು ಹೇಳಿದ ಮಾತುಗಳು ಬಹಳ ಗಮನಾರ್ಹವಾಗಿವೆ: 'ಶ್ರೀನಿವಾಸ'ರ 'ಕೆಲವು ಸಣ್ಣ ಕತೆಗಳು' ಎಂಬುದನ್ನು ವಿಮರ್ಶಿಸುತ್ತ "ಏನೇ ಆಗಲಿ, ಇವು ಎಂದಿಗೂ ಉಪನ್ಯಾಸಗಳಂತಿಲ್ಲ. ಸ್ವಲ್ಪ ಮೊಂಡುಬುದ್ಧಿಯವರಾದರೆ ಇವುಗಳಲ್ಲಿ ಬೋಧನೆಯಿದೆ ಎಂದೇ ತಿಳಿಯುವುದಿಲ್ಲ. ಇವುಗಳನ್ನು ಓದಿದರೆ ಮನೆಯಲ್ಲಿ ಅಣ್ಣ-ತಮ್ಮಂದಿರೂ ಅಕ್ಕ-ತಂಗಿಯರೂ ಇಷ್ಟ-ಮಿತ್ರರೂ ಸೇರಿ ಮಾತನಾಡಿದರೆ ಹೇಗೋ ಹಾಗೆ ಭಾವನೆಯಾಗುತ್ತದೆ. ವಿಷಯವು ಎಷ್ಟು ಕೋಮಲವಾದದ್ದೋ ಪ್ರತಿಪಾದನಕ್ರಮವೂ ಅಷ್ಟೇ ಮೃದುವಾದದ್ದು. ಈ ತಮ್ಮ ಮೃದುವಾದ ಪದ್ಧತಿಯಲ್ಲಿಯೇ ಈಗಿನ ಕಾಲದ ನಮ್ಮ ಸಮಾಜದಲ್ಲಿರುವ ಎಷ್ಟೋ ಹುಳುಕುಗಳನ್ನು ಶ್ರೀನಿವಾಸರು ತೆಗೆದು ಈಡಾಡಿದ್ದಾರೆ ...ಶ್ರೀನಿವಾಸರ ಸಣ್ಣಕಥೆಗಳನ್ನು ಓದುತ್ತಿದ್ದರೆ, ಇಂಥ ಬೆಣ್ಣೆಯ ಸಿಂಹಗಳನ್ನು ನೋಡಿದಂತೆ ಭಾವನೆಯಾಗುತ್ತದೆ. ಸಿಂಹವು ಜ್ಞಾಪಕಕ್ಕೆ ಬಂದು ಸ್ವಲ್ಪ ಎಚ್ಚರತ್ತವರಂತಾಗುತ್ತೇವೆ ಉತ್ತರಕ್ಷಣದಲ್ಲಿ ಎಂಥ ಮೃದುವಾದ ವಸ್ತುವಿನಲ್ಲಿ ಎಷ್ಟು ಸುಲಭವಾಗಿ ಎಷ್ಟು ಕುಶಲತೆಯಿಂದ ಎಂಥ ಪದಾರ್ಥವನ್ನು ಮಾಡಿಟ್ಟಿದ್ದಾರೆಂದು ಮೆಚ್ಚುತ್ತ ಅದರಲ್ಲಿ ಮುಗ್ಧರಾಗುತ್ತೇವೆ....

ಈ ವಿಧವಾದ ಕೋಮಲವಾದ ಸರಸವಾದ ಹಾಸ್ಯ ಮತ್ತು ವಿಡಂಬನ ಮಾಡುವ ಪದ್ಧತಿಯು ಕನ್ನಡ ಸಾಹಿತ್ಯಕ್ಕೆ ನೂತನವಾದದ್ದು. ಇದರಿಂದ ಯಾರಿಗೂ ಮನಸ್ಸಿಗೆ ಅಸಮಾಧಾನವಾಗುವುದಿಲ್ಲ; ಓದುವವರೆಲ್ಲರೂ ಅದು ತಮ್ಮ ವಿಷಯವಲ್ಲೆಂದೂ ತಾವು ಎಷ್ಟೋ ಬುದ್ಧಿವಂತರೆಂದೂ ಎಂದುಕೊಳ್ಳುವರು. ಆದರೆ ಇದರಿಂದ ಉಪಯೋಗವಾಗದವರಿಲ್ಲ; ಅದನ್ನು ಓದಿ ಆನಂದಪಡಲಾರದವರಿಲ್ಲ." [೪] ಎಂದು ಅವರು ಹೇಳುತ್ತಾರೆ ಇದು ಬಹಳ ಸರಿಯಾದ ಅಭಿಪ್ರಾಯವಾಗಿದೆ. ಒಟ್ಟಿನಲ್ಲಿ ಲಲಿತ ಕತೆಗಳ ಮುಖ್ಯ ಲಕ್ಷಣವೆಂದರೆ ಕಾವ್ಯಾನಂದ ಹಾಗೂ ಕಾಂತಾಸಮ್ಮಿತಿ ಎಂದು ಹೇಳಬಹುದು. ಜೀವನದಲ್ಲಿರುವ ಸುಖವನ್ನೇ ಇಲ್ಲಿ ವಿಶೇಷವಾಗಿ ನಾವು ಕಾಣುತ್ತೇವೆ. ಮನೋರಂಜನೆಯ ಕೂಡ ಮನಃಸಂಸ್ಕಾರವೂ ಉಂಟಾಗುತ್ತದೆ.

ಹೀಗೆ ಶ್ರೀನಿವಾಸರಿಂದ ಪ್ರಾರಂಭವಾದ ಈ ಲಲಿತಕತೆಗಳು ಹಲವು ಓದುಗರ ಹಾಗೂ ಬರೆಹಗಾರರ ಮನವನ್ನು ಸೂರೆಗೊಂಡುವು. ಇವುಗಳಿಂದ ಸ್ಫೂರ್ತಿಯನ್ನು ಪಡೆದು ಹಲವು ಬರೆಹಗಾರರು ಸಣ್ಣ ಕತೆಗಳನ್ನು ಬರೆಯಲು ತೊಡಗಿದರು. ಮೈಸೂರು ಪ್ರಾಂತದಲ್ಲಿ 'ಆನಂದ', ಕೆ. ಗೋಪಾಲಕೃಷ್ಣರಾಯ, ಅ.ನ. ಕೃಷ್ಣರಾಯ, ಸಿ. ಕೆ.

[೪] ಭಾಷಣಗಳು ಮತ್ತು ಲೇಖನಗಳು ಸಂಪುಟ—೨

ವೆಂಕಟರಾಮಯ್ಯ, 'ಶ್ರೀಪತಿ', ಎಸ್. ಜಿ. ಶಾಸ್ತ್ರಿ, ದೇವುಡು. ಕು. ವೆಂ. ಪು, ರಾಜರತ್ನಂ, ಶ್ರೀಸ್ವಾಮಿ, ಎಮ್. ವಿ. ಸೀತಾರಾಮಯ್ಯ, ಎ.ಜಿ.ಭಾಸ್ಕರರಾವ್, ಆರ್.ಕಲ್ಯಾಣಮ್ಮ, ಭಾರತೀಪ್ರಿಯ, ಸರಸ್ವತೀಬಾಯಿ ರಾಜವಾಡೆ, ಪು. ತಿ ನ, ನವರತ್ನ ರಾಮರಾಯ ', ಮುಂತಾದವರೂ ಉತ್ತರಕರ್ನಾಟಕದಲ್ಲಿ ಆನಂದಕಂದ, ಕೃಷ್ಣಕುಮಾರ ಕಲ್ಲೂರ, ಬೇಂಗ್ರೆ ಗೋವಿಂದರಾಯ, ರಂ. ಶ್ರೀ. ಮುಗಳಿ, ದ. ರಾ. ಬೇಂದ್ರೆ, ಹ. ಪಿ. ಜೋಶಿ, ಕಾಪಸೆ ರೇವಪ್ಪ, ಶಾಮಲಾದೇವಿ ಮೊದಲಾದವರೂ ಭರದಿಂದ ಸಣ್ಣಕತೆಗಳನ್ನು ಬರೆಯತೊಡಗಿದರು. ದಕ್ಷಿಣಕನ್ನಡ ಜಿಲ್ಲೆಯಲ್ಲಿ ಕಾರಂತ, ಕಡೆಂಗೋಡ್ಲು ಶಂಕರಭಟ್ಟರು, ಕೊಡಗಿನಲ್ಲಿ ಮಿಸೆಸ್. ಬಿ.ಟಿ.ಜಿ. ಕೃಷ್ಣ, ಹೈದರಾಬಾದಿನಲ್ಲಿ ಶಿ. ಭಾ. ಶಾಸ್ತ್ರಿ, ಪಂ. ತಾರಾನಾಥ ಮೊದಲಾದವರು ಒಳ್ಳೆಯ ಸಣ್ಣಕತೆಗಳನ್ನು ಬರೆಯತೊಡಗಿದರು.

ಸಣ್ಣಕತೆಯ ಸಾಹಿತ್ಯವು ಭರದಿಂದ ಬೆಳೆಯಲು 'ಜಯ-ಕರ್ನಾಟಕ' 'ಪ್ರಬುದ್ಧ ಕರ್ನಾಟಕ' 'ಸುವಾಸಿನಿ' 'ಕಂಠೀರವ' 'ಕಥಾಕುಂಜ' 'ರಾಷ್ಟ್ರಬಂಧು' ಮೊದಲಾದ ಪತ್ರಿಕೆಗಳೂ; ಜಯ-ಕರ್ನಾಟಕ ಗ್ರಂಥಮಾಲೆ, ಮನೋಹರ ಗ್ರಂಥಮಾಲೆ ಕರ್ನಾಟಕ ಸಾಹಿತ್ಯಮಂದಿರ ಮೊದಲಾದ ಪ್ರಕಾಶನಗಳೂ ಬಹಳಷ್ಟು ಸಹಾಯ ಮಾಡಿದುವು. ಕ್ರಿ. ಶ. ೧೯೩೩ರ ಸುಮಾರಿಗೆ ಪ್ರಕಟವಾದ 'ಕಾಮನ ಬಿಲ್ಲು' ಮತ್ತು 'ನವಿಲುಗರಿ' ಎಂಬ ವಿವಿಧ ಲೇಖಕರ ಕಥಾ ಸಂಕಲನಗಳು, ಕನ್ನಡ ಸಣ್ಣಕತೆಗಳ ಬೆಳವಣಿಗೆಯಲ್ಲಿ ಮಹತ್ತ್ವದ ಮೈಲುಗಲ್ಲುಗಳಾಗಿವೆ. ಈ ಹೊತ್ತಿಗೆ ಕನ್ನಡದಲ್ಲಿ ಸಣ್ಣಕತೆ ತನ್ನ ಉನ್ನತಿಯ ಕಾಲವನ್ನು ಹೊಂದಿತ್ತು. ಹಲವು ಶ್ರೇಷ್ಠಕತೆಗಳು ಬೆಳಕಿಗೆ ಬಂದಿದ್ದುವು ಸಣ್ಣಕತೆ ಈಗ ಕನ್ನಡದ ಏಕಮೇವ ಜನಪ್ರಿಯವಾದ ಸಾಹಿತ್ಯವಿಭಾಗವೆನಿಸಿತ್ತು. ಆದರೆ ೧೯೩೫ರಿಂದ ಕ್ರಮವಾಗಿ ಸಣ್ಣಕತೆ ಸ್ವಲ್ಪ ಇಳಿಮುಖವಾಗತೊಡಗಿತು. ಇದಕ್ಕೆ ಕಾರಣವೆಂದರೆ ಕನ್ನಡದಲ್ಲಿ ಈಗ ಕಾದಂಬರಿಯ ಯುಗ ಪ್ರಾರಂಭವಾಯಿತು. ಕಾದಂಬರಿಗಳು ಈಗ ಜನರ ಮನಸ್ಸನ್ನು ಆಕರ್ಷಿಸಲಾರಂಭಿಸಿದುವು. ಆದರೂ ಸಣ್ಣಕತೆ ತನ್ನ ಜನಪ್ರಿಯತೆಯನ್ನು ಸಂಪೂರ್ಣ ಕಳೆದುಕೊಳ್ಳಲಿಲ್ಲ. ಕಾದಂಬರಿಗಳು—ವಿಶೇಷವಾಗಿ ಸಾಮಾಜಿಕ ಕಾದಂಬರಿಗಳು—ಜನಪ್ರಿಯತೆಯನ್ನು ಪಡೆಯತೊಡಗಿದ್ದರೂ, ಅವು ಸಣ್ಣಕತೆಗಳಷ್ಟು ದೊಡ್ಡ ಪ್ರಮಾಣದಲ್ಲಿ ಬರುತ್ತಲಿರಲಿಲ್ಲ. ಸಣ್ಣಕತೆಗಳಂತೆ ಕಾದಂಬರಿಗಳನ್ನು ನಿಯತಕಾಲಿಕಗಳಲ್ಲಿ ಸುಲಭವಾಗಿ ಪ್ರಕಟಿಸಲು ಸಾಧ್ಯವಿರಲಿಲ್ಲ. ಆದುದರಿಂದ ಕಾದಂಬರಿಗಳು ಜನಪ್ರಿಯವಾಗುತ್ತ ನಡೆದಿದ್ದರೂ, ಕೈಹೊತ್ತಿಗೆಗಳ ಕಾಲದ ವರೆಗೆ ಸಣ್ಣಕತೆ ತನ್ನ ಜನಪ್ರಿಯತೆಯನ್ನು ಕಳೆದುಕೊಳ್ಳಲಿಲ್ಲ

ಕೂದಲನ್ನು
ಸೊಂಪಾಗಿ ಮೃದುವಾಗಿ
ಗುಂಗುರು ಗುಂಗುರಾಗಿ
ನೀಳವಾಗಿ
ಬೆಳೆಸುತ್ತದೆ
ದಿ ಸದ್ವೈದ್ಯಶಾಲಾ ಲಿ., ನಂಜನಗೂಡು
ಬ್ರಾಂಚುಗಳು: ಬೆಂಗಳೂರು, ಮೈಸೂರು, ಮಂಗಳೂರು, ಹುಬ್ಬಳ್ಳಿ

ಇದೇಹೊತ್ತಿಗೆ ಸಣ್ಣಕತೆಯ ಸಾಹಿತ್ಯದಲ್ಲಿ ಕೆಲವು ಹೊಸ ಅಭಿರುಚಿಗಳು ಒಲವುಗಳು, ತಂತ್ರಗಳು ತಲೆದೋರಲಾರಂಭಿಸಿದ್ದುವು. ಆದರೆ ಅವು ಒಂದು ಸ್ವತಂತ್ರವಾದ ರೂಪವನ್ನು ತಾಳುವಷ್ಟು ಸ್ಪಷ್ಟವಾಗಿರಲಿಲ್ಲ. ಆದುದರಿಂದ ಅವುಗಳು ಲಲಿತ ಕತೆಗಳಲ್ಲಿ ಒಂದುತರದ ವೈವಿಧ್ಯವನ್ನು ತಂದುವಲ್ಲದೆ, ಹೊಸ ವಿಶಿಷ್ಟ ಪ್ರಕಾರವನ್ನು ಪ್ರಾರಂಭಿಸಲಿಲ್ಲ. ಪ್ರಗತಿಶೀಲರ ಚಳವಳಿ ಪ್ರಾರಂಭವಾಗುವವರೆಗೂ ಲಲಿತಕತೆಗಳು ಸುಲಲಿತವಾಗಿ ಸಮೃದ್ಧವಾಗಿ ಬೆಳೆದುಬಂದುವು. ಲಲಿತಕತೆಗಳ ಈ ಕಾಲದಲ್ಲಿ ನಡೆದ ಇನ್ನೊಂದು ಮಹತ್ತ್ವದ ಘಟನೆಯೆಂದರೆ ಕ್ರಿ. ಶ. ೧೯೩೮ರಲ್ಲಿ ಮನೋಹರ ಗ್ರಂಥಮಾಲೆಯವರು 'ರಂಗವಲ್ಲಿ' ಎಂಬ ಕಥಾಸಂಕಲನವನ್ನು ಪ್ರಕಟಿಸಿದುದು. ಈ ಕಥಾಸಂಕಲನವು ಕನ್ನಡ ಕತೆಗಾರ್ತಿಯರ ಕತೆಗಳಿಂದಲೇ ತುಂಬಿದೆ. ಕನ್ನಡದಲ್ಲಿ ಹೆಣ್ಣುಮಕ್ಕಳು ಬರೆಯುತ್ತಿದ್ದುದು ಒಂದು ಸ್ವಾಗತಾರ್ಹವಾದ ಸಂಗತಿಯಾಗಿತ್ತು. ನಮ್ಮ ಪ್ರಾಚೀನಸಾಹಿತ್ಯದಲ್ಲಿ ಕೂಡ ಮಹಿಳೆಯರು ಬರೆಯುತ್ತಿದ್ದುದು ಅಪೂರ್ವವೆ. ಸಂಚಿಯ ಹೊನ್ನಮ್ಮ, ಕಂತಿ ಇವರಿಬ್ಬರನ್ನು ಬಿಟ್ಟರೆ ಹೇಳಿಕೊಳ್ಳುವಂಥ ಮಹಿಳೆಯರಾರೂ ಕನ್ನಡಸಾಹಿತ್ಯದಲ್ಲಿ ಕಂಡುಬರುವುದಿಲ್ಲ. ಆಧುನಿಕ ಕಾಲದಲ್ಲಿ ಮಹಿಳೆಯರು ಸಾಹಿತ್ಯಕ್ಷೇತ್ರವನ್ನು ಪ್ರವೇಶಿಸಿದ್ದುದು ಕನ್ನಡ ಸಾಹಿತ್ಯಕ್ಕೆ ಒಂದು ಶುಭಲಕ್ಷಣವಾಗಿತ್ತು. ಅದಕ್ಕಾಗಿ ರಂಗವಲ್ಲಿ ಪ್ರಕಟವಾದುದು ಕನ್ನಡ ಸಾಹಿತ್ಯದ ಒಂದು ವಿಶೇಷ ಸಂಗತಿಯೆಂದು ಹೇಳಬಹುದು. ಇದರಲ್ಲಿ ಕಾಣಿಸಿಕೊಂಡ ಹಲವು ಮಹಿಳೆಯರು ಕನ್ನಡಕ್ಕೆ ಒಳ್ಳೆಯ ಕಥಾಸಾಹಿತ್ಯವನ್ನು ಒದಗಿಸಿದ್ದಾರೆ.

ಸಾಹಿತ್ಯವಿಮರ್ಶೆಯ ಶಿಕ್ಷಣರಂಗ

ಕಳೆದ ಸಂಚಿಕೆಯಲ್ಲಿ ಅಪೇಕ್ಷಿಸಿದಂತೆ, 'ಪರಿವರ್ತನೆ' ಎಂಬ ಕತೆಯನ್ನು ವಿಮರ್ಶಿಸಿ, ೫ ಜನರಿಂದ ಲೇಖನಗಳು ಬಂದಿವೆ. ವಿಮರ್ಶಕರ ಅನುಕ್ರಮ ಹೀಗಿದೆ:

೧. ಶ್ರೀ. ಅನಂತ ಪಿ. ಜಹಾಗಿರದಾರ್, ಕಲ್‌ಬುರ್ಗೆ. ೨. ಶ್ರೀ. ಕೆ. ವಿ ತಿರುಮಲೇಶ, ಪನ್ನೆಪ್ಪಲು, ಕಾಸರಗೋಡು. ೩. ಶ್ರೀ. ಜೆ. ವಿರೂಪಾಕ್ಷಶಾಸ್ತ್ರಿ, ಮುಂಬಯಿ. ೪. ಶ್ರೀ. ಕೆ. ಎಸ್. ಶರ್ಮಾ, ವಾಣೀಮಂದಿರಂ, ಕಾಸರಗೋಡು. ೫. ಶ್ರೀ. ಕೆ. ಎಸ್. ನಾಣ್ಣ, ಪೆರಡಾಲ.

ಬಂದಿರುವ ವಿಮರ್ಶೆಗಳ ಸಂಖ್ಯೆಯನ್ನು ನೋಡಿದರೆ, ಈ ವಿಭಾಗವನ್ನು ಅದೇಕೋ, ತರುಣ ವಿಮರ್ಶಕರು ದುರ್ಲಕ್ಷಿಸುತ್ತಿರುವರೆಂದು ಕಾಣುತ್ತದೆ. ಇದು ಒಳ್ಳೆಯ ಭವಿಷ್ಯದ ಲಕ್ಷಣವೇನೂ ಅಲ್ಲ. ಇಂದು ಕಂಡಕಂಡವರೆಲ್ಲ ಕೈಗೆ ಬಂದಂತೆ ಬರೆದು ಸಾಹಿತ್ಯವೆಂದು ಪೇಟೆಗೆ ಕಳುಹುತ್ತಿರುವುದರಿಂದ, ಸಾಹಿತ್ಯಾಭ್ಯಾಸಿಗಳೇ ಆಗಲಿ, ಸಾಹಿತ್ಯೋಪಾಸಕರೇ ಆಗಲಿ, 'ಒಳ್ಳೆಯ ಸಾಹಿತ್ಯ ಯಾವುದು? ಏಕೆ' 'ಕೀಳು ಸಾಹಿತ್ಯ ಯಾವುದು? ಏಕೆ?' ಎಂಬುದರ ಪ್ರಜ್ಞೆಯನ್ನು ಸಂಪಾದಿಸುವುದು ಅತ್ಯವಶ್ಯದ ಮಾತಾಗಿದೆ. ಸಾಹಿತ್ಯನಿರ್ಮಾಣ ಮಾತ್ರ ಮಹತ್ತ್ವದುದೆಂದು ನಮ್ಮಲ್ಲಿ ಬಹಳ ಜನರು ಭಾವಿಸಿದಂತಿದೆ. ಆದರೆ ವಿಮರ್ಶಾಸಾಹಿತ್ಯವೂ ತುಂಬ ಮಹತ್ತ್ವದ ಭಾಗವಾಗಿದೆ. ಯಾವ ಭಾಷಾಪ್ರದೇಶದಲ್ಲಿ ಒಳ್ಳೆಯ ವಿಮರ್ಶಾವಾಙ್ಮಯವಿರುವುದಿಲ್ಲವೊ ಆ ದೇಶದ ಜನರ ಸಹೃದಯತೆ-ಸಂಸ್ಕೃತಿಗಳ ಬಗೆಗೆ ಸಂದೇಹವನ್ನು ತಳೆಯಬೇಕಾಗುವುದು. ಒಳ್ಳೆಯ ಸಾಹಿತ್ಯಿಕನಂತೆ ಒಳ್ಳೆಯ ವಿಮರ್ಶಕನೂ ಶಾಶ್ವತಕೀರ್ತಿಯನ್ನು ಸಂಪಾದಿಸಬಲ್ಲ. ವಿಮರ್ಶಾಶಕ್ತಿಯೆಂಬುದು ಜೀವನ ಮತ್ತು ಸೌಂದರ್ಯಗಳಲ್ಲಿಯ ಔಚಿತ್ಯಾನೌಚಿತ್ಯಗಳ ವಿವೇಕನಿದರ್ಶಕವಾದುದು. ಆದುದರಿಂದ ನಮ್ಮ ತರುಣ ಸಾಹಿತ್ಯೋಪಾಸಕರು, ಈ ವಿಭಾಗದ ಬಗೆಗೆ ಉದಾಸೀನರಾಗಬಾರದೆಂದು ಬಿನ್ನಹ.

ಈ ಸಲ ಬಂದ ವಿಮರ್ಶೆಗಳೆಲ್ಲ ಚೆನ್ನಾಗಿವೆ; ಆದರೆ ಎಂದಿನಂತೆ ಶ್ರೀ. ಕೆ. ಎಸ್. ಶರ್ಮಾ ಅವರ ವಿಮರ್ಶೆಯೇ ಅತ್ಯುತ್ತಮವಾಗಿದೆ. ೨ನೆಯ ಮತ್ತು ೫ನೆಯ ವಿಮರ್ಶಕರ ಲೇಖನಗಳು ತುಂಬ ದೀರ್ಘವಾಗಿವೆ. ಕಥೆಯು ಪ್ರಕಟವಾಗಿ ಜಯಂತಿಯ ವಾಚಕರಿಗೆ ಪರಿಚಿತವಾದುದೇ ಇರುವುದರಿಂದ, ಕಥೆಯನ್ನು ಹೇಳುವುದರಲ್ಲಿಯೆ ವಿಮರ್ಶೆಯನ್ನು ಬೆಳೆಸುವ ಕಾರಣವಿಲ್ಲ. ವಸ್ತುವಿನ ಔಚಿತ್ಯ, ಪಾತ್ರಪರಿಪುಷ್ಟಿ, ಕಥನಶೈಲಿ, ಪರಿಣಾಮರಮಣೀಯತೆ – ಇವುಗಳ ವಿಚಾರಚರ್ಚೆಯೇ ಹೆಚ್ಚಾಗಿರಬೇಕು.

ಮುಂದಿನ ಸಲದ ಮೇಲಾಟಕ್ಕಾಗಿ ಈ ಸಂಚಿಕೆಯಲ್ಲಿ ಪ್ರಕಟವಾದ 'ವಸಂತಿಯ ಗುಡಿಲಲ್ಲಿ' ಎಂಬ ಅನುವಾದಿತ ಕಥೆಯನ್ನಾಗಲಿ, 'ಪ್ರೇಮದ ಇಕ್ಕಟ್ಟು' ಎಂಬ ರೂಪಕವನ್ನಾಗಲಿ, ವಿಮರ್ಶಿಸಿ ಬರೆಹಗಳನ್ನು ಕಳುಹಬೇಕು.

—ಸಂಪಾದಕರು

ಪರಿವರ್ತನೆ

(ಸಣ್ಣ ಕತೆಯ ವಿಮರ್ಶೆ)

ಶ್ರೀ. ಕೆ. ಎಸ್. ಕರ್ವಾ, ವಾಣೀಮಂದಿರಂ ಕಾಸರಗೋಡು

'ಪರಿವರ್ತನೆ'— ಕಥೆಯು ಹುಡುಗನೊಬ್ಬನ ಮಾನಸಿಕ ಪರಿವರ್ತನೆಯ ಚಿತ್ರವನ್ನು ತೋರುವ ಮಾರ್ಗದಲ್ಲರಳಿದೆ. "ಮನ ಏವ ಮನುಷ್ಯಾಣಾಂ ಕಾರಣಂ ಬಂಧಮೋಕ್ಷಯೋಃ" ಎಂಬ ಮಾತಿದು ಜೀವನದ ಪ್ರತಿಯೊಂದು ಭಾಗದಲ್ಲಿಯೂ ಸತ್ಯದ ಪರಮಾವಧಿಯಲ್ಲಿದ್ದಂತೆ, ಮನಸ್ಸಿನ ಸೂಕ್ಷ್ಮಾಟವನ್ನು ಅಶಕ್ಯವಾದರೂ ಸ್ವಭಾವಜನ್ಯವಾದ ಆಶಾತಂತುಪ್ರೋಣಿತ ಜೀವಿತೇಚ್ಛೆಗೆ ಭಂಗ ಬಂದಾಗಾಗುವ ಮಾನಸಿಕಾಂದೋಲನವನ್ನು— ಚಿಕ್ಕ ಮಕ್ಕಳಲ್ಲಿ ವಿಶೇಷವಾಗಿ ಕಾಣಬಹುದು. ಮಕ್ಕಳ ಮನಸ್ಸು ಎಳೆಯದಾದರೂ ಕವಿಬೇಳುವ ಭಾವನೆಗಳಿಗೆ— ಅನುಕರಣೆಗಳಿಗೆ ನಾವಲ್ಲಿ ಎಳತನವನ್ನು ಕೆಲವೊಮ್ಮೆ ಕಾಣಲಾರೆವು. ಬುದ್ಧಿಯು ಮಾತ್ರ ಆ ಪ್ರಾಯದಲ್ಲಿ ಬಲಿತಿರುವುದಲ್ಲದೆ, ಉಳಿದಾವ ವಿಧದ ಭಾವನೆಗಳೂ, ಮಹತ್ವಾಕಾಂಕ್ಷೆಗಳೂ ಅಲ್ಲಿ ಕಡಿಮೆಯಾಗಿರುವುದಿಲ್ಲ. ಆದುದರಿಂದಲೆ ಶಿಶುಲೋಕವೆಂಬುದೊಂದು ವಿಶಿಷ್ಟಕ್ಷೇತ್ರ. ಈ ಕ್ಷೇತ್ರವನ್ನು ಸಸ್ಯಶಾಲಿಯಾಗಿ ಮಾಡಿ, ಸಮೃದ್ಧಿಸಂಪನ್ನವಾಗಿಸಬೇಕಾದರೆ, ತಂದೆ-ತಾಯಿಗಳು ಇಲ್ಲವೆ ಪಾಲಕರು ಇಲ್ಲವೆ ಮಾರ್ಗದರ್ಶಕರು ತಮ್ಮ ನಿಲುವನ್ನು ತಾವರಿತಂತೆ, ಶಿಶುಜೀವನದ ಅಂತರಂಗಿಕ ಭಾವಗಳನ್ನು ಅರಿಯಬೇಕು. ಭವ್ಯಜೀವನದ ಧ್ವನಿಯನ್ನು ಆ ಮಕ್ಕಳಿಂದ ಪಡೆಯಬೇಕಾದರೆ, ಕೆಲವೊಂದು ಆದರ್ಶಗಳನ್ನು ಹಿರಿಯರು ಅನುಸರಿಸಬೇಕು. ಒಟ್ಟು— ತಂದೆ-ತಾಯಿಗಳಿಗೆ ತುಸುವಾದರೂ ಮನಶ್ಶಾಸ್ತ್ರದ ಅರಿವಿರಬೇಕು. ಮುಖ್ಯವಾಗಿ ಮಕ್ಕಳು ತಪ್ಪಿ ನಡೆವಾಗ, ಜಡರಿದ್ದಾಗ— ಅವರನ್ನು ದಾರಿಗೆ ತರುವಲ್ಲಿ ಗದರಿಕೆ— ಬೆದರಿಕೆ— ದಂಡಪ್ರಯೋಗ ಇವೇ ಸಾಧನಗಳೆಂಬುದನ್ನರಿವ ಮೊದಲು, ತಮ್ಮನ್ನು ತಾವರಿತು ಮಕ್ಕಳನ್ನು ಸರಿದಾರಿಗೆ ತರಲು ಸುಗಮವಾದ ಆದರ್ಶವಾದ ಉಪಾಯವಿದೆಯೇ- ಎಂಬುದನ್ನು ತಿಳಿದಿರುವುದಗತ್ಯವಿದೆ. ಅಗ ಮಾತ್ರ ಹಿರಿಯರ ಪಾಲನಧರ್ಮವದು ಸಾರ್ಥಕವಾದೀತು ! ಮಕ್ಕಳೂ ತಮ್ಮ ತಪ್ಪನ್ನು ತಾವೇ ಅರಿತು, ಜೀವನದಲ್ಲಿ ಸಿಹಿಯನ್ನು ಕಾಣಲು ಯತ್ನಿಸುವರು. ಆ ಯತ್ನವೇ ಅವರನ್ನು ಆದರ್ಶದೆಡೆ ನಡೆಸುವುದು ! ಅಂತೂ ಶಿಶುಜೀವನಮಾರ್ಗದರ್ಶನಕ್ಕೆ ಮನಶ್ಶಾಸ್ತ್ರದ ತಿಳಿವು ಅಗತ್ಯವಿದೆ.

ಈ ಸತ್ಯವನ್ನೇ ಪ್ರಸ್ತುತ ಲೇಖಿಕೆಯರು ಪ್ರತಿಪಾದಿಸುತ್ತ, ಪರಿವರ್ತನೆಯದನ್ನು ಕಥಾಸಾಹಿತ್ಯದಲ್ಲಿ ಹಿರಿಯ ಮಾರ್ಗವಾದ ಮನೋವೈಜ್ಞಾನಿಕರೂಪಣೆಯಿಂದರಳಿಸಿದ್ದಾರೆ.

'ಪರಿವರ್ತನೆ'— ಕಥೆಯಿದು, ರಾಮನೆಂಬ ಹುಡುಗನೊಬ್ಬನ ಬಾಲ್ಯಜೀವನಚಿತ್ರ. ಕೇವಲ ಬಾಲ್ಯಜೀವನದಲ್ಲಿ— ಹೃದಯದಲ್ಲಿ ಬಂದು ಸೇರಿದ್ದ ಕತ್ತಲನು ಹೋಗಲಾಡಿಸಿ, ಯುಗಾದಿಯ ಭಕ್ತಿಯೊಡನೆ ಹೃದಯದಲ್ಲಿ ಬೆಳಕನ್ನು ನೀಡಿದ ಒಂದು ವಿಸ್ತೃತಕಥೆಯಿದು. ಸಣ್ಣಕತೆಯಾಗಿ (ಪುಟಗಳ ಪರಿಮಿತಿಯಲ್ಲಿ) ಬರಬಹುದಾಗಿದ್ದರೂ, ಕತೆಯಿದನ್ನು ಲೇಖಿಕೆಯರು ಅಪ್ರಸ್ತುತವಾಗಿರದಿದ್ದರೂ ಅತ್ಯವಶ್ಯವಿಲ್ಲದ ಘಟನಾವೃಂದದಿಂದ ದೀರ್ಘವಾಗಿ ಹೊಸೆದಿದ್ದಾರೆ. ಇಂತಹ ಕತೆಗಳು ದೀರ್ಘವಾಗಿ ಬೆಳೆದು ಬಾರದಂತೆ ಕಥೋಪಸಂಹಾರವೂ ಓದುಗನ ಮುಂದೆ ಸ್ವಯಂಯೋಚನಾನುಕೂಲವಾಗಿ ಹರಿದುಬರಬೇಕಾದ ಅಂತರಿಕವಾದೊಂದು ಬಗೆಯ ಸಮಸ್ಯೆಯ ನಿಲುವಿನಲ್ಲೂ ಮುಗಿತಾಯವನ್ನು ಹೊಂದಬೇಕಾಗಿದೆ. ಈ ವಿಚಾರವನ್ನು ಮುಂದಿರಿಸಿದರೆ ಕತೆಯಿದು ತುಸು ದೀರ್ಘವಾಯಿತೆನ್ನಬೇಕಾಗಿದೆ. ಆದರೆ ಕತೆಗಾತಿಯರು ಪ್ರಬುದ್ಧ ಲೇಖಿಕೆಯರಾದುದರಿಂದ, ಓದುಗನು ಕುಸಿಯದಂತೆ ಕತೆಯನ್ನೊಯ್ದಿದ್ದಾರೆ. ಇರಲಿ—

"ಮಕ್ಕಳು ಸುಸಂಸ್ಕೃತರಾಗಿ ಮುಂದಿನ ಬಾಳಲ್ಲಿ ಸುಖಶಾಂತಿಗಳನ್ನು ಹೊಂದಬೇಕು; ಅವರ ಬಾಳು ಹಸನಾಗಬೇಕು; ತಮ್ಮ ಕಣ್ಣ ಮುಂದೆ ಸದಾ ಭಾಗ್ಯವಂತರಾಗಿ ತಮ್ಮ ಊರುಗೋಲಾಗಿ ಬಾಳಬೇಕು;— ಎಂದು ತಂದೆ-ತಾಯಿಗಳು ಬಯಸುವುದು ಸ್ವಾಭಾವಿಕವಾಗಿದೆ. ಆದರೆ ಹಾಗೆ ಮಕ್ಕಳನ್ನು ಪಳಗಿಸುವುದಕ್ಕಾಗಿ, ಏನೂ ಅರಿಯದ ನಿಷ್ಕಲ್ಮಷ ಮನೋಭಾವಸಂಪನ್ನ ಶಿಶುಗಳನ್ನು ತಿದ್ದುವುದಕ್ಕಾಗಿ ತಂದೆ-ತಾಯಿಗಳೆಂತಹ ಕಾರ್ಯವನ್ನು ಕೈಕೊಳ್ಳಬೇಕು." ಎಂಬ ತತ್ತ್ವವನ್ನೇ ಕತೆಯು ಡಾ॥ ಜಯರಾಜರೆತ್ತಿಹಿಡಿದ ಆದರ್ಶದಿಂದ ಸ್ಪಷ್ಟೀಕರಿಸುತ್ತಿದೆ. ದೈಹಿಕ ಚಿಕಿತ್ಸೆಯೊಡನೆ ಮಾನಸಿಕ ಚಿಕಿತ್ಸೆಯನ್ನು ಬಲ್ಲವರಾದುದರಿಂದಲೆ ಜಯರಾಜರು— ಸಿದ್ಧಣ್ಣನ ಪಾಲಿನ ಕರ್ತವ್ಯವನ್ನು ತೋರಿ, ಮನೆಯನ್ನೇ ಮಾರಿಯ ತವರ್ಮನೆಯೆಂದರಿತು, ಹೇಸಿ ಸಾಗಿದ ರಾಮನನ್ನು ಪುನಃ ಯೋಗ್ಯನನ್ನಾಗಿ ಮಾಡಿದರು.

ಹಾಗಾದರೆ ಪರಿವರ್ತನೆ ?

ರಾಮ,- ಸಿದ್ಧಣ್ಣ- ಸಿದ್ದಮ್ಮರ ಏಕಮಾತ್ರಪುತ್ರ; ಆದರೆ ರಾಮ ಬಾಲಸಹಜವಾದ ಕಿಡಿಗೇಡಿತನಕ್ಕೆ ಬಲಿಯಾಗಿ ತುಸು ಒರಟಾಗಿದ್ದ ನಿಜ. ತಾಯಿ ಮಗನನ್ನು ಸಲುಗೆಯಿತ್ತು, ಸರಿದಾರಿಗೆ ತರಲು ಯತ್ನಿಸುತ್ತ, ಸದಾ ರಾಮನಿಗಾಗಿ ಚಡಪಡಿಸಿ ವ್ಯಗ್ರಳಾಗುತ್ತಿದ್ದ ಸಿದ್ಧಣ್ಣನಿಗೆ ಸಂತೋಷವುಂಟಾಗುವಂತೆ ಮಾಡಲು ಚಡಪಡಿಸುತ್ತಿದ್ದಳು. ಸಿದ್ಧಣ್ಣನು— ವಿವಾಹಿತ ಜೀವನದ ಬಹುದಿನಗಳ ಮುಂದೆ ಹುಟ್ಟಿದ್ದ— ಮಗುವಿನಲ್ಲಿ, ನೂರಾರು ಕನಸು ಸಿಹಿಗಂಟಾಗಿದ್ದ ಮಗುವಿನಲ್ಲಿ— ಈ ಬಗೆಯ ಕಿಡಿಗೇಡಿತನವನ್ನು ಕಂಡು, ಅತನನ್ನು ಸರಿದಾರಿಗೆ ತರಲು, ಕೇವಲ ದಂಡಪ್ರಯೋಗವೊಂದೇ ಮೇಲುಗೈಯ ಉಪಾಯವೆಂದು ಮನಗಂಡಿದ್ದನು. ತನ್ನ ಸಂಗಡಿಗನಾದ ಕೆಂಚಪ್ಪನ ಮಗ ರಾಜುವನ್ನು ಸದಾ ಹೊಗಳುತ್ತ, ರಾಮನನ್ನು ಆಗಾಗ ಶಿಕ್ಷಿಸುತ್ತ— ತತ್ಪರಿಣಾಮದಲ್ಲೇನೂ ಸುಖವನ್ನು ಕಾಣದೆ ಕೊರಗುತ್ತಿದ್ದನು. ರಾಮ ತಂದೆಯ ಮುಂದೆ ಮೊದಮೊದಲು ಶಿಕ್ಷೆಗಂಜಿ ಬಾರದೇ ಹೋದರೆ, ಕೊನೆಕೊನೆಗೆ ತಂದೆಯನ್ನೇ ಹೇಸಿ ದ್ವೇಷಿಸುವಂತಾದನು.

ಒಂದು ದಿನ–ರಾಮುನಿಗೆ ರಂಗಪ್ಪ ಹಾಗೂ ರಾಜಪ್ಪನ ಮನೆಯಿಂದ ಸಾಲ ತೆಗೆದ ಬಗ್ಗೆ ಬಲವಾದ ಪೆಟ್ಟು ಬೀಳುವುದು. ಈ ಪೆಟ್ಟನ್ನು ತಡೆಯಲು ಬಂದ ಸಿದ್ದಮ್ಮನಿಗೂ ಪೆಟ್ಟಿನ ರುಚಿ ಸಿಕ್ಕರೆ, ಮಧ್ಯೇ ರಾಜು ಬಂದು ಹೇಗಾದರೂ ತಡೆಯುವನು. ಪೆಟ್ಟನ್ನು ನಿಲಿಸಿ, ಸಿದ್ದಣ್ಣ ಸಾಗಿದರೆ—ರಾಜು ರಾಮನನ್ನು ಶಾಂತಗೊಳಿಸಲು ಯತ್ನಿಸಿ, ಅವನಿಂದ ಚೆನ್ನಾಗಿ ಥಳಿಸಲ್ಪಡುವನು. ಅಂದಿನಿಂದ ರಾಜು ರಾಮನ ಬಳಿ ಬರಲಂಜಿದನು. ಆ ದಿನ ರಾತ್ರಿ ಸಿದ್ದಣ್ಣ ಚಿಂತಾಸಕ್ತನಾದರೆ, ಒಳಗೆ ಮಲಗದೆ ಹೊರಮಲಗಿದ ರಾಮು, ತನ್ನ ಜೀವನವನ್ನು, ತನ್ನ ಹಂಬಲನ್ನು,–ತಂದೆಯ ಪ್ರೀತಿಯನ್ನು, ಜೀವನದ ಸವಿಯನ್ನು ಕಾಣಲಾಗದ ದುಃಸ್ಥಿತಿಯನ್ನು ಮೆಲುಕು ಹಾಕುತ್ತ ಮರುಗುತ್ತ—ಅಡಿಗಡಿಗೆ ದ್ವೇಷಾಸೂಯೆಗಳಿಂದ ಕುದಿಯುತ್ತಿದ್ದನು. ಈ ಕುದಿಯ ಮುಂದೆ ತಂದೆಯೇ ಬೆಳೆಸಿದ್ದ ಸಂಪಿಗೆ ಗಿಡವನ್ನು ಪಟಪಟನೆ ಮುರಿದು,–ಅದರಿಂದಾಗಬಹುದಾದ ತಂದೆಯ ಕ್ರೋಧವನ್ನು ನೆನೆದು ಆನಂದಿಸಿದನು. ಮರುದಿನ ನಲ್ಲಿಯ ನೀರಲ್ಲಿ ಮುಖ ತೊಳೆಯುತ್ತ ಇರುವಾಗ, ರಾಜನ ತಾಯಿ ಕೆಂಪಿಯ ಕೆಣಕುನುಡಿಯನ್ನು ಕೇಳಿ ಕಾಲ್ಕಿತ್ತರೆ, ಆಗಲೇ ರಾಜುವಿನ ತಮ್ಮ ರಂಗನ ಕೆಣಕುನುಡಿಯನ್ನು ಕೇಳಿ ಅವನ ಕೆನ್ನೆಗೇಟು ಬಿಗಿದು, ಕೆಂಪಿಯಿಂದ ಚೆನ್ನಾಗಿ ಥಳಿಸಲ್ಪಟ್ಟು—ತಂದೆಯ ಕೈಯಲ್ಲಿ ಸಿಕ್ಕಿ ಬೀಳುವನು. ಆಗಲೇ ಸಂಪಿಗೆಯ ಗಿಡದ ಚಿತ್ರವೂ ಬರುವುದು. ಸಿದ್ದಣ್ಣ ಹೊಡೆಯಲು ಬಗೆದಾಗ, ರಾಮು ಅದು ತನ್ನ ತಪ್ಪಲ್ಲವೆಂದಾದ. ರಾಜನ ಮೇಲೆ ಹೊರಿಸುವನು. ಸಿದ್ದಣ್ಣ ಸಂಶಯಚಿತ್ತನಾಗಿ ಅಂದವನನ್ನು ಬಿಟ್ಟರೆ, ಬಂದು ಸೇರಿದ್ದ ಜನರೆಲ್ಲ ರಾಮುವನ್ನು ಕೆಣಕಿ ಹೋಗುವರು. ಮುಂದೆ ರಾಮುನನ್ನು ಆತನ ಸೋದರಮಾವ, ಮಂತ್ರವಾದಿ—ಊರಿಗೆ ಕೊಂಡೊಯ್ದು—ಅವನಲ್ಲಿ ಅವುದರವೋ ಸಂಚಾರವಿದೆಯೆಂದು ಭಾವಿಸಿ—ಗುಡಿಯ ಮುಂದೆ ನಿಲಿಸಿ—ಆವೇಶ ಹೊಂದಿ ಬಡಿಯುವನು. ರಾಮುನು ಈ ನೋವನ್ನು ತಾಳಲಾರದೆ ಊರಿಗೆ ಬಂದು, ವಿದ್ಯೆಯನ್ನು ಬಿಟ್ಟು ಕೆಲಸಕ್ಕೆ ಸೇರುವನು. ಅಲ್ಲಿಯೂ ಆತ ಕದ್ದು ಊರವರ ನಗೆಗೀಡಾದರೆ, ಸಿದ್ದಣ್ಣ ಪುನಃ ಥಳಿಯ ಬಯಸುವನು. ಈಗ ರಾಮು ತಂದೆಯನ್ನೂ ಪ್ರತಿಭಟಿಸಿ–ಮನೆಯಿಂದ ಸಾಗುವನು. ಸಿದ್ದಮ್ಮ ತಡೆಯಲಾರದ ದುಃಖದಿಂದ ಡಾ. ಜಯರಾಜರ ಬಳಿ ಬಂದು ದುಃಖವನ್ನು ತೋಡಿದರೆ, ಆಗಲೇ ಸಿದ್ದಣ್ಣನೂ ಬಂದರೆ, ಡಾಕ್ಟರರು ತನ್ನ ಸೇವಕ ಮಾರನನ್ನು ಅಟ್ಟಿ ರಾಮುನನ್ನು ಕರೆತರಿಸುವನು. ತಂದೆ-ತಾಯಿಗಳನ್ನು ಕಂಡಾಗ ಒಮ್ಮೆಗೆ ರಾಮು ಮಾರನಿಂದ ಬಿಡಿಸಿ ಓಡಿದರೆ, ಪುನಃ ಡಾಕ್ಟರರು, ರಾಮುನನ್ನು ಏಕಾಂತದಲ್ಲಿ ಕರೆತರಿಸಿ, "ಅವನ ತಂದೆಯೇ ತಪ್ಪುಗಾರನೆಂದಂದು" ಹೇಳಿ, ಅವನನ್ನು ಸ್ವಾಧೀನ ಪಡಿಸಿ, ತನ್ನಲ್ಲೇ ಇರಗೊಡಿಸುವನು. ಅಂದಿನಿಂದ ರಾಮು ಮಾರನ ಮನೆಯಲ್ಲಿ ನಿಂತನು. ರಾಮು ಮಾರನು ಎಸಗುವ ಪಿತೃ-ಸೇವೆಯನ್ನು, ತಂದೆ ಕ್ರೋಧೋನ್ಮತ್ತನಾಗಿ ಆಡಿದ ಮಾತನ್ನು ರಾಮು ಸಹನೆಯಿಂದ ಕೇಳುವ ಬಗೆಯನ್ನೂ—ಕಂಡು ಬೆರಗಾಗಿ, ಮಾರನಿಂದಲೇ ತಿದ್ದಲ್ಪಟ್ಟು ಮನೆಯನ್ನು ಪ್ರೀತಿಸಲು ಮುಂದಾಗುವನು. ಈ ಕಾಲದಲ್ಲಿ ಜಯರಾಜರೂ ಸಿದ್ದಣ್ಣನನ್ನು ಬರಮಾಡಿ, ಮಕ್ಕಳನ್ನು ಸರಿದಾರಿಗೆ ತರಬೇಕಾದ ಕ್ರಮವನ್ನು ಬೋಧಿಸಿ—ಅವನಲ್ಲಿ ಜಾಗೃತಿಯನ್ನುಂಟು ಮಾಡುವರು. ಅಂತೂ ಮಾರನೆಸಗಿದ ಉಪಾಯದಿಂದ ರಾಮುನು ಚೇತರಿಸಿಕೊಂಡು ತನ್ನ ಮನೆಯಲ್ಲಿ—ತಂದೆ ತಾಯಿಗಳ ಹೃದಯದಲ್ಲಿ ಹುದುಗಿದ್ದ ಅಪಾರವಾದ ಪ್ರೀತಿಯನ್ನು ಕಾಣುವಂತಾದನು

ಈ ಕತೆಯಲ್ಲಿ ಒಟ್ಟು ಎಂಟು ಘಟನೆಗಳಿವೆ. ಎಲ್ಲವೂ ರಾಮುನ ಜೀವಿತಕ್ಕೆರವಾಗಿ ನಿಂತ ಮಾರ್ಮಿಕ ಸನ್ನಿವೇಶಗಳು. ಮೊದಲ ಘಟನೆಯಾದ—ತಾಯಿ ಮಗನ ಮುಂದಾಡುವ ಪ್ರೀತಿಯ ಮಾತುಗಳಲ್ಲಿ ನಾವು ತಾಯಿಯ ಅಸಮರ್ಥ–ನಿರ್ಬಲ ಹೃದಯದ ಒಲವನ್ನು ನಿಟ್ಟಿಸಿದರೆ, ಅಲ್ಲಿಯೇ ತಂದೆಗಾಗಿ ಉರಿಯುತ್ತಿದ್ದ ಹದಿನಾಲ್ಕು ವರ್ಷ ಪ್ರಾಯದ ನಿಲುವಿನಲ್ಲಿ ಪ್ರೀತಿಯನ್ನೇ ಕಂಡರಿಯದೆ ಕುದಿಯುತ್ತಿದ್ದ ರಾಮುನ ಹೃದಯವನ್ನೂ ಕಾಣಬಹುದು ಸಿದ್ದಮ್ಮ ಮಗನನ್ನು ಸರಿದಾರಿಗೆ ಹಚ್ಚಲು ಆತನಿಗೆ ತಿಂಡಿಯನ್ನೂ ಆತ ಬಯಸಿದ್ದ ಬಟ್ಟೆಯನ್ನೂ ಒದಗಿಸಿ ಪ್ರೀತಿಯಿಂದ ನಿಟ್ಟಿಸಿದರೆ, ರಾಮು ತಂದೆಯನ್ನು ನೆನೆಯುತ್ತಾ "ನಾನು ಏನಾದರೆ ಯಾರಿಗೇನಂತೆ?" ಎಂದು ಮೌನವಾಗಿ ಆಡುವುದು–ಕಥಾಪ್ರಸ್ತಾಪಕ್ಕೊಂದು ಉತ್ತಮ ಮಾರ್ಗವನ್ನು ನೀಡಿ ನಿಂತಿದೆ. ಬಳಿಕ—ಹೊರಗೆ ಹೋಗಿ ಬಂದು ಒಂದೆಡೆ ಒರಗಿದ್ದ ರಾಮುನ ಬಳಿ ಬಂದು, ಅವನು ತೆಗೆದ ಸಾಲಕ್ಕಾಗಿ ದಂಡಿಸುವ ಸಿದ್ದಣ್ಣನ "ತಿದ್ದುವಿಕೆ" ಯ ಮಾರ್ಗದರ್ಶನವು ಮಾರ್ಮಿಕವಾಗಿದೆ. ಈ ಘಟನೆಯು ರಾಮುವನ್ನು ಕುದಿಯೇಳಿಸಲು, ಅವನ ಹೃದಯದಲ್ಲಿ ಸೆರೆಗೊಂಡಿದ್ದ ಇಚ್ಛೆ–ಆಕಾಂಕ್ಷೆಗಳನ್ನು ಹೊರತೋರಿಸಲು ಅತ್ಯುಪಯುಕ್ತವಾಗಿವೆ. ರಾಮು ರಾಜುವನ್ನು ಥಳಿಸುವದು ಇದೇ ಸಂದರ್ಭ. ರಾಮು ರಾಜುವನ್ನು ಥಳಿಸುವಂತಾದ ಈ ಭಾಗವನ್ನಿಲ್ಲಿ ಲೇಖಿಕೆಯರು ಅನುಗೊಳಿಸಿರುವುದು ಸ್ತುತ್ಯವಿದೆ. ಪ್ರೀತಿ-ಆನಂದಗಳನ್ನು ಬಯಸುವ ರಾಮುನು, ತನ್ನದೇ ಸಮಪ್ರಾಯದ, ಸದಾ ತನ್ನ ತಂದೆ ಕೊಂಡಾಡಿರುವ ರಾಜುವನ್ನು ಥಳಿಸುವುದು ಸ್ವಾಭಾವಿಕತೆಯ ಪರಮಾವಧಿಯಲ್ಲಿದೆ. ಮಗನಾಗಿ ತಾನಿರುವಾಗ, ತನ್ನ ಹೊಡೆತವನ್ನು ತಡೆಯಬಂದು ತಾಯಿಯೂ ನಿಷ್ಫಲಳಾದಾಗ –ಕೇವಲ ರಾಜುವಿನ ಮಾತಿಗೆ ಮಣಿದು ಪೆಟ್ಟನ್ನು ನಿಲಿಸಿದ ವಿಚಾರವರಿತು.—ರಾಜುವನ್ನು ತನ್ನ ಸ್ಥಾನವನ್ನು ಕಸಿದ ರಾಜುವನ್ನು—ತನ್ನ ಜೀವನಕ್ಕೇ ಕುಠಾರಪ್ರಾಯನಾದ ರಾಜುವನ್ನು ಥಳಿಸುವುದು ರಾಮುನ ತಪ್ಪಲ್ಲ ಅವನ ಹೃದಯದಲ್ಲಡಕವಾದ ಕುದಿಯನ್ನದು ತೋರುತ್ತಿದೆ ಮುಂದೆ ರಾತ್ರಿ ರಾಮುನು ತನ್ನ ಕುರಿತು ತಾನೇ ಯೋಚಿಸಿ ಮರುಗುವುದು, ಒಲುಮೆಗಾಗಿ ಚಡಪಡಿಸುವುದು ಬಹು ಸುಂದರವಿದೆ. ಅವನೊಮ್ಮೆಗೆ ಕೂಗಿದರೂ, ಮರುಗಿದರೂ, ತನ್ನನ್ನು ತಾನು ತಿದ್ದಲರಿಯದೆ, ಅರಿತರೂ ಪರಿಸ್ಥಿತಿಯ ಮುಂದೆ ಅಶಕ್ತನಾಗಿ ಪುನಃ ದ್ವೇಷಿಯಾಗಿ ಮಾರ್ಪಟ್ಟು ತಂದೆ ಬೆಳೆಸಿದ್ದ ಸಂಪಿಗೆಯ ಗಿಡವನ್ನು ಮುರಿದು ಒಮ್ಮೆಗೆ ಸಮಾಧಾನ ತಂದುಕೊಳ್ಳುವುದು ಅತಿ ಸುಂದರವಾಗಿದೆ. ಈ ಘಟನೆಯು ಈ ಬಗೆಯ ಕತೆಗೆ ತುಂಬು

ಸಹಕಾರಿಯಾಗಿದೆ. ರಾಮನಂತಹ ಬಾಲಕನಲ್ಲಿ—ಪ್ರೀತಿಗಾಗಿ ಚಡಪಡಿಸುವ ಬಾಲಕನಲ್ಲಿ ಕಾಣಬಹುದಾದ ರುದ್ರ-ಚಿಂತೆಗಳಿಗೊಂದು ಸ್ಪಷ್ಟದರ್ಪಣವಾಗಿದ್ದೆ, ಭಾಗವಿದು. ಅವಶ್ಯೋಪಯುಕ್ತವೀ ನಿಲುವು. ತಂದೆಯ ಕ್ರೋಧಕ್ಕೆ ಪುಟವೀವ-ಸಂಪಿಗೆಯ ಅಧ್ಯಾಯವನ್ನು ರಾಮನು ತೆರೆದಾಗ, ಸಿದ್ದಣ್ಣ ರಾಮನಾಡಿದ ಮಾತಿನಿಂದ ಸಂಶಯಗ್ರಸ್ತನಾಗಿ ಸಾಗಿ-ಪೆಟ್ಟನ್ನೀಯದಿರುವುದು—ಇಲ್ಲಿ ಗಮನೀಯವಿದೆ. ಆಳವಾದ ಒಂದು ಮಾನಸಿಕ—ವೈಜ್ಞಾನಿಕ ತತ್ತ್ವವನ್ನಿಲ್ಲಿ ಸಾಧಿಸಲು ಯತ್ನಿಸಿದ್ದಾರೆ. ಲೇಖಕಿಯರು; ಸಫಲರಾಗಿದ್ದಾರೆ ಮುಂದೆ ಬರುವುದು ಮಂತ್ರವಾದಿ ವೀರಯ್ಯನ ನಿಲುವು. ಅಪ್ರಬುದ್ಧ-ತಂದೆ ತಾಯಿಗಳು ಶಿಕ್ಷೆಯಿಂದ ಗುಣವಾಗದ ಮಕ್ಕಳ ಸ್ವಭಾವವನ್ನು ಕಂಡು—ಈ ಬಗೆಯ ನಿಲುವಿಗೂ ಮನವೊಪ್ಪಿಸುವುದು ಅಸ್ವಾಭಾವಿಕ ಅಲ್ಲ. ವೀರಯ್ಯನೂ ಅಪ್ರಬುದ್ಧನೇ ಸರಿ! ಆದುದರಿಂದಲೆ ಆತನೂ ಹುಚ್ಚನಾದ. ಮನಬಂದಂತೆ ಬಡಿದು ಕೃತಾರ್ಥನಾದ. ತನ್ನೀ ಉದ್ಯಮದಿಂದ ರಾಮನಲ್ಲಿ ನೆಲೆಗೂಡಿದ್ದ ಪ್ರೇತ ಹೋಯಿತೆಂದಾತ ಬಗೆದರೆ, ರಾಮು ಪೆಟ್ಟಿಗಾಗಿ ಬೆದರಿ ಊರಕಡೆ ಬಂದ. ಈ ಘಟನಾ ಸಮಾವೇಶವೂ ಸುಂದರವಾಗಿದ್ದರೂ, ಬೇಡವೆಂದೆನಿಸುತ್ತದೆ. ಕತೆಯನ್ನು ನೇರವಾಗಿ ಕೊಂಡೊಯ್ಯದೆ—ಇದು ತುಸು ಕುಸಿಯಿಸಿಕೊಂಡು ಒಯ್ಯುತ್ತದೆ. ಆದರೇನು, ಮುಂದಿನ ಘಟನೆಗಳು ಈ ದೋಷವನ್ನು ಇಲ್ಲದಾಗಿಸಲು ಯತ್ನಿಸಿವೆಯೆನ್ನಬಹುದು. ಆ ಬಳಿಕ—ವೀರಯ್ಯ ಅಲ್ಲಿಂದ ಮರಳಿ ಬಂದ ರಾಮು, ಶಾಲೆಗೂ ಹೋಗದೆ, ಕೆಲಸಕ್ಕೆ ಸೇರಿ, ಕದ್ದು—ಪುನಃ ತಂದೆಯ ಮುಂದೆ ಅಪರಾಧಿಯಾದಾಗ, ತಂದೆಗೆದುರಾಗಿ ಉತ್ತರಿಸುವುದು—ಕೊನೆಗೆ " ನಾ ಕೆಟ್ಟೋನು, ಹಾಳಾಗಿ ಹೋಗ್ತೀನೆ, ನೀವಿಬ್ಬರೇ ಒಳ್ಳೆಯೋರು—ಸುಖವಾಗಿರಿ " ಎಂದು ತೀಕ್ಷ್ಣವಾಗಿ ಹೇಳಿ ಸಾಗುವುದು—ರಾಮನ ಪ್ರಕ್ಷುಬ್ಧ ಹೃದಯದ ಮುಂದೆ ಕಾಣಿಸುವ ಯಥಾರ್ಥ ದೃಶ್ಯಗಳು. ಮುಂದೆ ನಡೆಯುವ ಘಟನೆಗಳೆಲ್ಲವೂ 'ಪರಿವರ್ತನೆ'ಗೆ ಸ್ಥಾನವೀಯುವ ನಿಲುಗಲ್ಲುಗಳು. ಆ ತಂದೆ ತಾಯಿಗಳು ಡಾಕ್ಟರರಲ್ಲಿ ಮೊರೆಯಿಟ್ಟು ಬೇಡುವುದು; ರಾಮನನ್ನು ಡಾಕ್ಟರರು ತರಿಸುವುದು; ರಾಮು ತಂದೆ-ತಾಯಿಗಳನ್ನು ಹೇಸಿ ಓಡುವುದು—ಸಾಮಾನ್ಯ ಘಟಕಗಳಾದರೆ—ಆ ಮುಂದೆ ರಾಮು—ಮಾರನ ಮನೆಯಲ್ಲಿ ಪಡೆಯುವ ಅನುಭವಗಳು ಸುಂದರ ಸಮಾವೇಶದಲ್ಲಿವೆ ರಾಮನಂತಹ ತರುಣ ಅನುಭವವನ್ನು ಪಡೆಯಬೇಕಾದರೆ—ವೃದ್ಧ ಪಿತನ ಕೋಪಕ್ಕೆರವಾದರೂ ಶಾಂತಿಯ ನಡೆ-ನುಡಿಯಲ್ಲಿರುವ ಮಾರನ ಜೀವಿತದ ದರ್ಶನದಿಂದಲೇ ಆಗಬೇಕಾಗಿದೆ ಮಾರನ ತಂದೆಯ ಕೆಡುನುಡಿಯನ್ನು ಕೇಳಿ ರಾಮನು ವ್ಯಗ್ರನಾಗುತ್ತನಾದರೂ, ಮಾರನು ಆಗಲಾರ ಮಾರ ತಂದೆ-ತಾಯಿಗಳ ಮುಂದೆ ಮಕ್ಕಳು ಮಾಡಬೇಕಾದ ಕರ್ತವ್ಯವನ್ನೂ, ತಿಳಿವಿರದ ತಂದೆ-ತಾಯಿಗಳ ಒಳಿತಿಗಾಗಿ ಶಿಕ್ಷಿಸುವ ಮನೋಧರ್ಮವನ್ನೂ—ತಿಳಿಸುತ್ತ ಸಂದರ್ಭ. ವಶಾತ್ ರಾಮನ ಮನಸ್ಸಿನಲ್ಲಿ ಪಿತೃ-ಮಾತೃಪ್ರೇಮ ಮೊಳೆದೋರುವಂತೆ ಮಾಡಲು—ಸಿದ್ದಣ್ಣ ಸಿದ್ದಮ್ಮರ ಸಂತಾನ ಪ್ರೀತಿಯನ್ನು ಒರೆದೋರುವುದು ಪ್ರಶಂಸನೀಯ: ಗತಿಯಲ್ಲರಳಿ ನಿಂತಿದೆ ಎನ್ನಬೇಕಾಗಿದೆ. ರಾಮನ ಮನಸ್ಸನ್ನು—ಪ್ರತ್ಯಕ್ಷವಾಗಿ ಜೀವನದರ್ಶನದಿಂದ ತಿದ್ದಬೇಕೆಂಬ ಬಯಕೆಯಿದ್ದುದರಿಂದಲೇ ಜಯರಾಜರು ಮಾರನಂತಹ ಪಿತೃಪ್ರೇಮಭರಿತನ ಮನೆಯಲ್ಲಿರಬಿಟ್ಟರು. ಮಾರನು ತನ್ನ ನಡತೆಯಿಂದಲೇ ರಾಮನ ಹೃದಯವನ್ನು ಬೆಳಗಿದನು. ರಾಮನು ತಂದೆ-ತಾಯಿಗಳು ತನಗಾಗಿ ಯಾಕೆ ನೋಯುವರು, ಅದೇಕೆ ತಂದೆ ಶಿಕ್ಷಿಸುವನು, ರಾಜುವನ್ನೇಕೆ ಹೊಗಳುವರು—ಎಂಬುದನ್ನೀಗ ಅರಿತನು. ಈ ಅರಿವು ಚೆನ್ನಾಗಿ ಮೂಡುವಂತೆ, ಮಾರ ಆತನನ್ನು ಗುಟ್ಟನಲ್ಲಿ ಮನೆಯ ವರೆಗೆ ಸಾಗಿಸಿ, ಆತನ ಕೊರಗಿಹೋದ ತಂದೆ-ತಾಯಿಗಳನ್ನು ಕಾಣಿಸಿ—ಮಗನಿಗಾಗಿ ಹಂಬಲಿಸುವ ತಂದೆ-ತಾಯಿಗಳನ್ನು ತೋರಿಗೊಡುವನು. ರಾಮನು ನಾಚುವಂತಾಯಿತು. ತನ್ನಲ್ಲಿ ಅಪಾರ ವಿಶ್ವಾಸ-ಪ್ರೀತಿಗಳನ್ನಿರಿಸಿದ್ದ ತಂದೆ-ತಾಯಿಗಳ ಹೃದಯವನ್ನು ರಾಮು ಮಾರನ ದೀಪದರ್ಶನದಿಂದ ಕಾಣುವಂತಾದನು!—ಬಲು ಮಾರ್ಮಿಕವಾದ ಘಟನೆಯಿದು. ಈ ಘಟನೆಯ ಪೂರ್ಣತೆಯು ದೊರಕುವಂತೆ, ಏತನ್ಮಧ್ಯೇ ಇನ್ನೊಂದು ಘಟನೆಯಿದೆ. ಅದುವೆ ಡಾ. ಜಯರಾಜರು ಸಿದ್ದಣ್ಣನಿಗೀಯುವ ಮಾರ್ಗದರ್ಶನ. ಈ ಸಂದರ್ಭವು ಮನಃಶಾಸ್ತ್ರದ ತಳಹದಿಯ ಭದ್ರತೆಯಲ್ಲಿದೆ! ಇಲ್ಲಿ ಬರುವ ಪ್ರತಿಯೊಂದು ಮಾತೂ ಗಮನೀಯವಿದೆ. ಮಕ್ಕಳನ್ನು ತಿದ್ದುವಾಗ—ಪ್ರೀತಿಯ ಸ್ಥಾನವು ಹೇಗಿರಬೇಕೆಂಬುದನ್ನು ಇಲ್ಲಿಯ ಪ್ರತಿಯೊಂದು ಮಾತೂ ಎತ್ತಿ ತೋರುತ್ತಿದೆ. ಅಲ್ಲೂ ಸಿದ್ದಣ್ಣನ ಮನಸ್ಸು ತೆರೆದು ಬರುವಂತೆ ಡಾಕ್ಟರರು — '' ಸಿದ್ದಣ್ಣ—ಕೆಂಚಪ್ಪನವರ ಸ್ನೇಹಸಂಬಂಧವನ್ನು ತೋರಿ—'' ಕೆಂಚಪ್ಪ ಕುಡುಕ, ಆದರೂ ಏಕೆ ಅವನ ಸ್ನೇಹ ಬೆಳೆಸಿದೆ ? ಅವನ ದೋಷ ನಿನ್ನ ಸ್ನೇಹಕ್ಕಡ್ಡಿಯಾಗಲಿಲ್ಲ; ಹೌದು ತಾನೆ? ಹಾಗೇನೇ ನಿನ್ನ ಮಗನಲ್ಲಿರೋ ದೋಷಾನೂ ಕಡೆಗಣಿಸು! ಅವನ ಬಗ್ಗೆ ಪ್ರೀತಿ-ವಿಶ್ವಾಸ ತೋರಿಸು. ಅವನನ್ನು ಸ್ನೇಹಿತನಂತೆ ಕಾಣು. ಹಿಂದಿನಂತೆ ಅಧಿಕಾರ ಚಲಾಯಿಸಿ ಅಪ್ಪಣೆ ಮಾಡೋಕೆ ಹೋಗ್ಬೇಡ " ಎಂದೆನ್ನುತ್ತಾ ಹಿರಿಯವರು ಮಕ್ಕಳನ್ನು ಯಾವ ಯಾವ ಪ್ರಾಯದಲ್ಲಿ ಹೇಗೆ ಹೇಗೆ ಕಾಣಬೇಕೆಂದಾಡಿದ ನೀತಿಯನ್ನೆತ್ತಿ ಬೋಧಿಸುವುದು ಅತಿ ಸ್ಪೃಹ್ಯವಾಗಿದೆ. ಈ ಘಟನೆಯು ಸಿದ್ದಣ್ಣನ ಹೃದಯವನ್ನು ನಯವಾಗಿಸಿದರೆ, ಮಾರನೆತ್ತಿ ಹಿಡಿದ ಘಟನೆಯು ರಾಮನನ್ನು ಬೆಳಗಿಸಿದರೆ—ಘಟನೆಗಳಿವು ಸಮರಸದ ಸಮಭಾವದಲ್ಲಿ ಒಡಸೇರಿ,—ಮುಂಬರಲಿರುವ, ತಂದೆತಾಯಿಗಳ ಹೃದಯದಲ್ಲಿ ಪುತ್ರನ ನೂತನಪ್ರಾಪ್ತಿಯ ಶುಭಯೋಗವನ್ನು ತಂದೀಯಲಿರುವ—ಯುಗಾದಿಗೆ—ಬೆಳಕನ್ನೀಯುವುವು. ಅಲ್ಲಿಯ ರಾಮನ ಹೃದಯಪರಿವರ್ತನೆಯ ಸುಂದರದೃಶ್ಯವೂ ಮುಕ್ತಾಯಗೊಳ್ಳುವುದು

ಸರಿ. ಕತೆಯು ತುಸು ಲಂಬಿಸಿತು. ಆದರೂ ಕುಶಲ ಕತೆಗಾರಿಕೆಯ ನಿಲುವಿನಿಂದ ಇಂತಹ ಮನೋವೈಜ್ಞಾನಿಕ ಕಥೆ ರುಚಿಕೆಡಲಿಲ್ಲ ಮನೋವೈಜ್ಞಾನಿಕ ಕಥಾರೂಪಣೆಯು ಅಷ್ಟು ಸುಲಭವಲ್ಲ. ಕಥಾಕಾರನು ಅತ್ಯಂತವಾದ ಅನುಭವದಿಂದ ಸಂಪನ್ನನಿರಬೇಕು.

ಪ್ರಸ್ತುತ ಕಥೆಯು ಸುಂದರವಾಗಿದೆ. ಶ್ರೀಮತಿಯವರಿಂದ ಈ ಬಗೆಯ ಕಥೆಯನ್ನಿನ್ನಷ್ಟು ಹಾರೈಸುವ.

ಸಾದರ ಸ್ವೀಕಾರ

೧೫ **ದುರೂಢ ನಂಬಿಕೆಗಳು** (ಪರಿಚಯಾತ್ಮಕ ಪ್ರಬಂಧ) ಬರೆದವರು: ಶ್ರೀ. ಎಲ್. ಆರ್. ಹೆಗಡೆ, ಎಂ. ಎ.; ಪ್ರಕಾಶಕರು: ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ. ಫೂ. ಕ್ಯಾ. ಆ. ೫೬ ಪುಟಗಳು. ಬೆಲೆ ೦—೪—೦.

೧೬ BOOK NEWS (ಇಂಗ್ಲಿಷ ಮಾಸಪತ್ರಿಕೆ) ಸಂಪಾದಕರು: ಶ್ರೀ. ಟಿ. ಸ್ಹಿ ಕುನ್ಹಿಕೃಷ್ಣನ್. ಪ್ರಕಾಶಕರು: ದಿ ಬುಕ್ ಇಂಡಸ್ಟ್ರಿ ಕೌನ್ಸಿಲ್ ಆಫ್ ಸೌಥ್ ಇಂಡಿಯಾ, ೮ ವ್ಹಿಕ್ಟೋರಿಯಾ ಕ್ರೆಸೆಂಟ್, ಎಗ್ಮೋರ್, ಮದ್ರಾಸ್—೮. ಕ್ರಾ. ೪ ೧೬ ಪುಟಗಳು. ಬಿಡಿ ಸಂಚಿಕೆಯ ಬೆಲೆ ೫೦ ನ. ಪೈ.

೧೭ **ಧರ್ಮಜೀವನ** (ಅನುವಾದಿತ ಕಾದಂಬರಿ). ಮೂಲ ಇಂಗ್ಲಿಷ್ ಲೇಖಕರು: ಸರ್ ವಾಲ್ಟರ್ ಸ್ಕಾಟ್. ಅನುವಾದಕರು: ಶ್ರೀಮಾನ್ ಕೆ. ಲ. ಸುಬ್ಬರಾವ್. ಪ್ರಕಾಶಕರು: ವಿಶ್ವಸಂಸ್ಕೃತಿ ಗ್ರಂಥಮಾಲಾ, ಈಶ್ವರ ಪ್ರಸಾದ, ಸಾಧನಾ ಗಾರ್ಡನ್, ಎಡೆಯೂರು ಬೆಂಗಳೂರು—೪. ಕ್ರಾ. ಅ. ೧೮೮ ಪುಟಗಳು. ಬೆಲೆ ೨—೮—೦.

೧೮ **ದ್ಯಾವಾ ಪೃಥಿವಿ** (ಎರಡು ದೀರ್ಘ ಕವನಗಳು) ಬರೆದವರು: 'ವಿನಾಯಕ' (ಪ್ರಿನ್ಸಿಪಾಲ್ ವಿ. ಕೃ. ಗೋಕಾಕ) ಅವರು. ಪ್ರಕಾಶಕರು: ಪರಾಗ ಪ್ರಕಾಶನ, ಧಾರವಾಡ. ಕ್ರಾ. ಅ. ೮೮ ಪುಟಗಳು. ಬೆಲೆ ೨—೮—೦.

೧೯ **ಪಡೆದು ಬಂದಿರಬೇಕು.** (ಏಕಾಂಕ ರೂಪಕ ಸಂಕಲನ) ಲೇಖಕರು: ಶ್ರೀ. ಲ. ಜೀ. ಬೇಂದ್ರೆಯವರು ಪ್ರಕಾಶಕರ: ಪರಾಗ ಪ್ರಕಾಶನ, ಧಾರವಾಡ. ಕ್ರಾ. ಅ. ೧೪೦ ಪುಟಗಳು; ಬೆಲೆ [illegible]—೧೨—೦.

೨೦ **ಮರಾಠೀ ವಾಙ್ಮಯ ದರ್ಶನ** (ಪರಿಚಯಾತ್ಮಕ ಕಿರು ಹೊತ್ತಿಗೆ) ಲೇಖಕರು: ಪ್ರಾ. ಪಂಡಿತ ಆವಳೀಕರ್, ಎಂ. ಎ. ಅವರು. ಪ್ರಕಾಶಕರು: ಪರಾಗ ಪ್ರಕಾಶನ, ಧಾರವಾಡ. ಫೂ. ಕ್ಯಾ. ಆ. ೬[illegible] ಪುಟಗಳು. ಬೆಲೆ ೧—೦—೦.

೨೧ **ಕನ್ನಡ ಸಾಹಿತ್ಯ ದರ್ಶನ—೧೯೫೬** (೧೯೫೬ನೆಯ ಇಸ್ವಿಯಲ್ಲಿ ಪ್ರಕಟವಾದ ಕನ್ನಡ ಗ್ರಂಥಗಳ ಪರಿಚಯಾತ್ಮಕ ಪುಸ್ತಕ) ಲೇಖಕರು: ಶ್ರೀ ಶ್ರೀನಿವಾಸ ಹಾವನೂರ. ಪ್ರಕಾಶಕರು: ಪರಾಗ ಪ್ರಕಾಶನ, ಧಾರವಾಡ. ಡೆ. ಅ. ೮೩ ಪುಟಗಳು. ಬೆಲೆ ೧-೪-೦.

೨೨ **ಶವನಿಧಿ** (ಜಾನಪದ ಕಥೆ) ಬರೆದವರು: ಶ್ರೀ. ಮಿರ್ಜಿ ಅಣ್ಣಾರಾಯರು, ಸೇಡಬಾಳ. ಪ್ರಕಾಶಕರು: ಶಾಂತಿಸೇವಾ ಸದನ. ಸೇಡಬಾಳ, ಜಿಲ್ಹಾ ಬೆಳಗಾಂವಿ. ಕ್ರಾ. ಅ. ೨೦ ಪುಟಗಳು. ಬೆಲೆ ೦—೪—೦.

೨೩ **ಬೆಳಕು** (ಬಾಗಿಲುಕೋಟೆಯ ಶಂಕರೆಪ್ಪ ಸಕ್ರಿ ಹೈಸ್ಕೂಲಿನ ವಾರ್ಷಿಕ ಸಂಪುಟ) ಪ್ರಕಾಶಕರು: ಶ್ರೀ. ಎನ್. ಟಿ. ಪುರಾಣಿಕ ಬಿ. ಎ., ಬಿ. ಟಿ., ಮುಖ್ಯಾಧ್ಯಾಪಕರು. ಕ್ರಾ. ೪ ದ ೧೦೦ ಪುಟಗಳು ಚಿತ್ರದ ಪುಟಗಳು ಬೇರೆ.

೨೪ KARNATAKA'S TRANS-OCEANIC CONTACTS (ಸಂಶೋಧನಾತ್ಮಕ ಗ್ರಂಥ). ಬರೆದವರು: ಡಾ. ಬಿ. ಎ. ಸಾಲೆತೊರೆ, ಎಂ. ಎ., ಎಲ್. ಟಿ., ಪಿ. ಎಚ್. ಡಿ. (ಲಂಡನ್) ಡಿ. ಫಿಲ್ (ಗಯೆಸೆನ್) ಅವರು. ಪ್ರಕಾಶಕರು: ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ. ರೊಯಲ್ ಅ. ೧೦೦ ಪುಟಗಳು. ಬೆಲೆ ೩—೦—೦.

೨೫ **ಪದ್ಮಾನದಿಯ ನಾವಿಕ** (ಅನುವಾದಿತ ಕಾದಂಬರಿ). ಮೂಲ ಬಂಗಾಲಿ ಲೇಖಕರು ದಿವಂಗತ ಮಣಿಕ ಬಾನರ್ಜಿಯವರು. ಕನ್ನಡ ಅನುವಾದಕರು: ಶ್ರೀ. ಶಿವಾನಂದ ಜೋಶಿ, ಬಾಗಲುಕೋಟೆ. ಧಾರವಾಡದ ಪ್ರತಿಭಾ ಗ್ರಂಥಮಾಲೆಯ ೧೪ನೆಯ ವರ್ಷದ ೭ನೆಯ ಕಿರಣ. ಕ್ರಾ. ಅ. ೨೧೬ ಪುಟಗಳು. ಬೆಲೆ ೧—೮—೦.

೨೬ **ಸಮರ ಸೌದಾಮಿನಿ** (ಸ್ವತಂತ್ರ ಕಾದಂಬರಿ) ಬರೆದವರು: ಶ್ರೀ. ವೆಂ. ಮು. ಜೋಶಿ, ಧಾರವಾಡ. ಮೇಲಿನ ಪ್ರತಿಭಾ ಗ್ರಂಥಮಾಲೆಯ ೧೪ನೆಯ ವರ್ಷದ ೮ನೆಯ ಕಿರಣ. ಕ್ರಾ. ಅ. ೧೪೪ ಪುಟಗಳು. ಬೆಲೆ ೧—೪—೦.

೨೭ **ಯೋಜನಾಗೋಷ್ಠಿ** (ದ್ವಿತೀಯ ಪಂಚವಾರ್ಷಿಕ ಯೋಜನೆಯನ್ನು ಕುರಿತ ಭಾಷಣಗಳ ಸಂಕಲನ) ಬೇರೆ ಬೇರೆ ವಿದ್ವಾಂಸರಿಂದ ಮಾಡಿಸಿದ ಭಾಷಣಗಳನ್ನು, ಧಾರವಾಡದ ಜನತಾ ಕಾಲೇಜಿನ ಸಂಚಾಲಕರು ಸಂಗ್ರಹಿಸಿ ಪ್ರಕಟಿಸಿದ್ದಾರೆ. ಕ್ರಾ. ೪ ದ ೮೬ ಪುಟಗಳು. ಬೆಲೆ ೦—೧೨—೦.

೨೮ **ಅರುಣೋದಯ** (ಗದಗಿನ ವಿದ್ಯಾದಾನ ಸಮಿತಿ ಹೈಸ್ಕೂಲಿನ ವಾರ್ಷಿಕ ಸಂಪುಟ). ಪ್ರಕಾಶಕರು: ಶ್ರೀ. ಕೆ. ಎಸ್. ಎನ್. ಐಯಂಗಾರ್, ಮುಖ್ಯಾಧ್ಯಾಪಕರು. ಕ್ರಾ. ೪ ದ ೧೧೩ ಪುಟಗಳು.

ಕ್ಷಮಾಯಾಚನೆ

ಈ ಸಂಚಿಕೆಯನ್ನು ನಿಯಮಿತ ಕಾಲದಲ್ಲಿ ಹೊರಡಿಸಬೇಕೆಂದು ನಾವು ಎಷ್ಟೆಷ್ಟೋ ಪ್ರಯತ್ನಿಸಿದೆವು; ಆದರೆ ನಿಸರ್ಗವೇ ನಮ್ಮ ಪ್ರಯತ್ನಕ್ಕೆ ಅನಿವಾರ್ಯವಾದ ತಡೆಯನ್ನು ಒಡ್ಡಿತು. ಜಯಂತಿಯ ಮುದ್ರಣದ ಅವಧಿಯಲ್ಲಿಯೆ ಮುದ್ರಣಾಲಯದ ಕೆಲಸಗಾರರು, ಸದ್ಯದ 'ಫ್ಲ್ಯೂ' ವ್ಯಾಧಿಗೆ ಒಳಗಾದುದರಿಂದ, ಕೆಲಸವೇ ನಿಂತು ಹೋಗಿತ್ತು. ಕೈಮೀರಿದ ಈ ವಿಲಂಬವನ್ನು ನಮ್ಮ ವಾಚಕ ವರ್ಗ ಸಹಾನುಭೂತಿಯಿಂದ ಕಂಡು ಕ್ಷಮಿಸುವುದೆಂದು ನಮ್ಮ ನಂಬುಗೆ.

— ಸಂಪಾದಕ

R. No. 4161

ಕರ್ನಾಟಕದಲ್ಲಿ ಭಾವಗೀತಗಾಯನ ಬೆಳೆಯಬೇಕಾಗಿದೆ!

ಹಾಡಲಿಕ್ಕೆ ಬರುವಂತಹ ಕವಿತೆಗಳೇ ನಮ್ಮಲ್ಲಿ ಇಲ್ಲವೆಂದು

ಸಂಗೀತಗಾರರ ಆಕ್ಷೇಪಣೆ!

ಇದು ನಿಜವಾದ ಆಕ್ಷೇಪಣೆಯೆಂದು ನಂಬುವಿರಾ?

ನಿಜವಲ್ಲವೆಂಬುದರ ಪ್ರತ್ಯಕ್ಷ ಸಾಕ್ಷಿಗಳಾಗಿ

'ಆನಂದಕಂದ' ಅವರ ಈ ಗೀತಸಂಕಲನಗಳಿವೆ :

ಮುದ್ದಿನ ಮಾತು (ಶಿಶುಭಾವದ ಗೀತಗಳು)	೦—೧೨—೦
ಒಡನಾಡಿ (ನಲ್ವಾಡುಗಳು)	೧—೮—೦
ವಿರಹಿಣಿ (ತತ್ತ್ವರೂಪಕ ಗೀತಗಳು)	೧—೪—೦
ಕಾರಹುಣ್ಣಿವೆ (ವಿವಿಧ ಭಾವಗೀತಗಳು)	೨—೦—೦

ಕಾವ್ಯಪ್ರೇಮಿಗಳೂ ಸಂಗೀತಗಾರರೂ ಇವುಗಳನ್ನು ಒಮ್ಮೆ ಓದಿ ನೋಡಬೇಕು.

ಬೇಕಾದವರು ಕೆಳಗಿನವಿಳಾಸಕ್ಕೆ ಬರೆಯಿರಿ!

'ಜಯಂತಿ' ಕಾರ್ಯಾಲಯ, ಧಾರವಾಡ

Printed by N. A. Hoskeri at the Vijaya Press, Dharwar and published for the Proprietors Jayanti Publications, by K S. Betgeri at the Jayanti Office, Dharwar

ಜಯಂತಿ

ಂಪುಟ ೧೦

ಸಂಚಿಕೆ ೩

೫೭

ಅಗಸ್ಟ್

ಎಂತಹ ಸಾಹಿತ್ಯವಯ್ಯಾ!

ಮತ-ಪಂಥಗಳ ಮೇರೆಯಲ್ಲಿ ನಿಂತು ಹಲುಬಿ ಹಂಬಲಿಸುವ
ಕುರುಡುನುಡಿ ಎಂತಹ ಸಾಹಿತ್ಯವಯ್ಯಾ,
ಬಲ-ದಾಕ್ಷಿಣ್ಯಗಳಿಗೊಳಗಾಗಿ ಗಳಗಳನೆ ಗಳಹುವ
ಗಾಳಿಮಾತುಗಳು ಎಂತಹ ಸಾಹಿತ್ಯವಯ್ಯಾ!
ನಿರ್ಬಲನಾಗಿ ನಿಷ್ಕ್ರಿಯನಾಗಿ ಕೂಗಿಕೊಂಡ ಭಕ್ತಿ-ವೈರಾಗ್ಯದ
ಬಣ್ಣನೆಯ ಬರುಮಾತು ಸಾಹಿತ್ಯವೆನಿಸೀತೇನಯ್ಯಾ!
ಸತ್ಯದ ಜೀವ ಜೀವಾಳವಾಗಿರಬೇಕು ಸಾಹಿತ್ಯವೆಂಬುದು;
ಮೈತ್ರಿ-ಕರುಣೆಗಳನ್ನು ತುಂಬಿಕೊಂಡಿರಬೇಕು ಸಾಹಿತ್ಯವದು!

ಅಯ್ಯಾ, ಸರ್ವರ ಶಾಂತಿ-ಪುಷ್ಟಿ-ತುಷ್ಟಿಗಳ
ಇಷ್ಟವೇ ಪಲ್ಲವಿಯಾಗಿರಬೇಕಾ ಸಾಹಿತ್ಯಕ್ಕೆ!
'ಇಂತಿಲ್ಲದ ಸಾಹಿತ್ಯದ ರಾಶಿಯನೊಯ್ದು ಹೊಳೆಯಲಿಕ್ಕು'
ಎಂದು ಹೇಳುವಳಯ್ಯಾ, ನಮ್ಮ ಕಲ್ಯಾಣವಾಣಿ ವಾಗೀಶ್ವರಿ!

— ಸಾಮಾಜಿಕ

JAYANTI

ಈ ಸಂಚಿಕೆಯಲ್ಲಿ :

●

ಪಾಕಿಸ್ತಾನಿಗಳ ಪ್ರಲಯಾಖ್ಯಾನ (ಸಂಪಾದಕೀಯ)

ಸಂಪಾದಕರು ೮೧

ಅನಿರ್ದೇಶ್ಯ (ಕವನ)

ಸೌ. ಪಾರ್ವತೀದೇವಿ ಹೆಗಡೆ, ಬೆಳಗಾಂವಿ ೮೪

ಸ್ಪೃಹು (ಒಂದು ಜೀವನಚಿತ್ರ)

ಶ್ರೀ. ಡಿ. ಎಸ್. ಹಾಸ್ಯಗಾರ ಎಂ. ಎ ಮುಂಬಯಿ ೮೫

ನಿರುದ್ಯೋಗಪರ್ವ (ಅಣಕಕವನ)

ಶ್ರೀ. ಡಿ. ಮಹಾಲಿಂಗಭಟ್ಟ 'ವಿದ್ವಾನ್' ಎಡನಾಡು ೯೩

ಲೋಮೊನೊಸೋವ್ (ವಿಜ್ಞಾನಿಯ ಪರಿಚಯ)

ಶ್ರೀ. ಟಿ. ಆರ್. ನಾಡಿಗೇರ ಬಿ. ಎಸ್‌ಸಿ. (ಆನರ್ಸ್), ಬಿ. ಎಸ್‌ಸಿ. (ಟೆಕ್) ೯೪

ಅವಧೂತಗೀತಾ-ಪೀಠಿಕೆ (ನವ್ಯಕವನ)

'ಅ. ರಾ. ಸೇ.' ದಾವಣಗೆರೆ ೯೯

ಟ್ರೊಕಾಪಿ (ವ್ಯಂಗ್ಯರೂಪಕ)

ಶ್ರೀ. ಎಸ್. ವಿ. ಶ್ರೀನಿವಾಸರಾವ್ ಬಿ. ಎಸ್‌ಸಿ., 'ರಾ. ಭಾ. ವಿಶಾರದ' ೧೦೧

ಗಂಗಾಲಹರಿ (ಅನುವಾದಿತ ಭಾಗ)

ಶ್ರೀ. ಪಂಢರೀನಾಥಾಚಾರ್ಯ ಗಲಗಲಿ, ಗದಗು ೧೦೮

ಕಾವ್ಯದಲ್ಲಿ ಪ್ರತಿಮಾ ಸಂವಿಧಾನ (ಲಕ್ಷಣವಿಚಾರ)

ಶ್ರೀ. ಜಿ. ವಿ. ಕುಲಕರ್ಣಿ ಬಿ. ಎ. (ಆನರ್ಸ್) ಮತ್ತು
ಶ್ರೀ. ಟಿ. ಅನಿಲಕುಮಾರ ಗೋಕಾಕ ೧೦೯

ಭಾರತೀಯ ಸೈನ್ಯಶಾಖೆಯ ಜನ್ಮೇತಿಹಾಸ (ಪರಿಚಯಾತ್ಮಕ)

ಶ್ರೀ. ವೆಂ. ಮು. ಜೋಶಿ, ಧಾರವಾಡ ೧೧೬

ಸಾಹಿತ್ಯವಿಮರ್ಶೆಯ ಶಿಕ್ಷಣರಂಗ (ಕಥಾವಿಮರ್ಶೆ)

ಶ್ರೀ. ಕೆ. ವಿ. ತಿರುಮಲೇಶ, ಪನ್ನೆಪ್ಪಲು (ದ. ಕ.) ೧೧೯

ಸಾದರಸ್ವೀಕಾರ .... ಹೊದಿಕೆಯ ಒನೆಯ ಪುಟ

ಜಯಂತಿ

ಸಂಪುಟ ೨೦ ಸಂಚಿಕೆ ೪

ಕುಟುಂಬದಲ್ಲಿಯ ಎಲ್ಲರೂ
ಜ್ಞಾನವನ್ನೂ ರಸಾನಂದವನ್ನೂ
ಪಡೆಯಬಹುದಾದ
ಮಾಸಪತ್ರಿಕೆ

●

ಸಂಪಾದಕರು:
ಶ್ರೀ. ಬೆಟಗೇರಿ ಕೃಷ್ಣಶರ್ಮ

●

ಸಂಚಿಕೆ ಪ್ರತಿತಿಂಗಳ
ಮೊದಲನೆಯ ತಾರೀಖಿಗೆ
ಪ್ರಕಟವಾಗುವುದು.

卐

ವಾರ್ಷಿಕ ವರ್ಗಣಿ ೫ ರೂ.
ಬಿಡಿ ಸಂಚಿಕೆಗೆ ೮ ಆಣೆ.

ಜಾಹೀರಾತು ಕೊಡಬಯಸುವವರು
ದರಗಳಿಗಾಗಿ ಬರೆದು ಕೇಳಬೇಕು.

●

ಅನೇಕ ಊರುಗಳಲ್ಲಿ
ಜಯಂತಿ ಮಾರುವ
ಏಜಂಟರು
ಬೇಕಾಗಿದ್ದಾರೆ

ಸಂಪಾದಕೀಯ

卐

ಪಾಕಿಸ್ತಾನಿಗಳ ಪ್ರಲಯಾಖ್ಯಾನ

ಜಗತ್ತಿನಲ್ಲಿಯ ಪ್ರತಿಯೊಂದು ರಾಷ್ಟ್ರವೂ ಇಂದು ಶಾಂತಿಯನ್ನು ಅಪೇಕ್ಷಿಸುತ್ತಿದೆ; ಆದರೆ ಪಾಕಿಸ್ತಾನದ ಯಾವ ಧುರೀಣನೇ ಬಾಯಿಬಿಡಲಿ; ಅವನ ಮಾತಿನಲ್ಲಿ ಯುದ್ಧದ-ಅಶಾಂತಿಯ ಅಪೇಕ್ಷೆಯ ಉರಿಯೇ ಹೊರಬೀಳುತ್ತಿರುತ್ತದೆ. ಯುದ್ಧ ಪಾಕಿಸ್ತಾನದ ಜನತೆಗೆ ಬೇಕಾಗಿದೆಯೊ, ರಾಜಕೀಯಸೂತ್ರಗಳನ್ನು ದಿನದಿನವೂ ಒಬ್ಬರ ಕೈಯಿಂದ ಇನ್ನೊಬ್ಬರು ಕಿತ್ತುಕೊಳ್ಳುತ್ತಿರುವ ಆ ರಾಷ್ಟ್ರದ ನಾಯಕರಿಗೇ ಬೇಕಾಗಿದೆಯೊ ?

ಯಾವುದೇ ರಾಷ್ಟ್ರದ ನಾಯಕರು ಮೊದಲು ನೋಡಿಕೊಳಬೇಕಾದುದು ಆ ರಾಷ್ಟ್ರದ ಜನತೆಯ ಸುಖ ಶಾಂತಿಗಳನ್ನು. ಆದರೆ ಪಾಕಿಸ್ತಾನದ ಧುರೀಣರೆನಿಸಿಕೊಳ್ಳು ಪುಂಡ-ಪಾಳೆಯಗಾರರಿಗೆ ಜನತೆಯ ಸುಖ-ಶಾಂತಿಗಳೆಂಬುವು ಗಣನೆಯಲ್ಲಿಯೇ ಇಲ್ಲ. ಧರ್ಮಾಭಿಮಾನದ ಕ್ಲೊರೊಫಾರ್ಮ ಮೂಸಿತೋರಿಸಿ, ಜನತೆಯನ್ನೆಲ್ಲ ಮೂಢ-ಬಧಿರರನ್ನಾಗಿಸುವರು; ಆ ಮೇಲೆ ತಮ್ಮ ಮನಸ್ಸಿಗೆ ಬಂದಂತೆ ಸ್ವಾರ್ಥ ಸಾಧನೆಯ ಆಟವನ್ನು ನಡೆಸುವರು.

ರಾಷ್ಟ್ರ ಮತ್ತು ಜನತೆಯ ನಿಜವಾದ ಹಿತವನ್ನು ಬಯಸುವ ವ್ಯಕ್ತಿ, ಅಲ್ಲಿ ರಾಷ್ಟ್ರದ್ರೋಹಿಗಳ ಮಾಲಿಕೆಗೆ ಸೇರುವನು. ಜನತೆಗೆ ಅನ್ನವಿಲ್ಲದೆ ಅದು ಬಾಯಿಬಾಯಿ ಬಿಡುತ್ತಿದ್ದರೂ ಪಾಕಿಸ್ತಾನ್ ಸರಕಾರ, ತನ್ನ ದುಶ್ಶಾಸನಕ್ಕೆ ಸಂಪೂರ್ಣ ಸಹಾಯವನ್ನು ಕೊಡಬೇಕೆಂಬ ಇಚ್ಛೆಯಿಂದ, ದುರ್ಯೋಧನರ ಬಳಗವನ್ನು ಕೋಣದಂತೆ ಕೊಬ್ಬಿಸುತ್ತಲಿದೆ. ಈ ದುರ್ಯೋಧನರ ಬಳಗ ಕೊನೆಗೆ ಯಾವ ಭೀಮನ ಗದೆಯಿಂದ ತೊಡೆಯೊಡೆದು ಬಿದ್ದೀತೆಂಬುದನ್ನು ಹೇಳಲು ಬರುವಂತಿಲ್ಲ.

ಭಾರತದ ದ್ವೇಷದ ಬಗೆಗೆ ಪಾಕಿಸ್ತಾನದ ರಾಜಕೀಯನಾಯಕರಲ್ಲಿ ಮೇಲಾಟವೇ ನಡೆದಿದೆ. ಇಂದು ಲೋಕವೆಲ್ಲವೂ ಸ್ವಾಗತಿಸುತ್ತಿರುವ ಭಾರತದ ದಿವ್ಯ ಭವ್ಯ ಸಂಸ್ಕೃತಿಗೆ ಒಂದು ಕಾಸಿನ ಬೆಲೆಯನ್ನೂ ಅವರುಕೊಡಲಾರರು. ಭಾರತದ ದ್ವೇಷ ಮಾಡುವ ಮೇಲಾಟದಲ್ಲಿ ಮೊದಲನೆಯ ಸ್ಥಾನವನ್ನು ಪಡೆದವನೇ ಪಾಕಿಸ್ತಾನದಲ್ಲಿ ಪ್ರಮುಖನಾಗಿ ನಿಲ್ಲಬಲ್ಲನೆಂದು ಅವರೆಲ್ಲರೂ ಗಟ್ಟಿಮುಟ್ಟಾಗಿ ತಿಳಿದುಕೊಂಡಿದ್ದಾರೆ. ಆದುದರಿಂದಲೇ ತಾನು ಮೇಲುಗೈಯಾಗಬೇಕು—ನಾನು ಮೇಲುಗೈಯಾಗಬೇಕು—ಎಂದು ಹವಣಿಸುತ್ತಿದ್ದು, ಭಾರತರಾಷ್ಟ್ರವನ್ನು ಸಹಸ್ರಮುಖದಿಂದ ಶಪಿಸುತ್ತಲಿದ್ದಾನೆ —ಪ್ರತಿಯೊಬ್ಬ ನಾಯಕ.

ಯುದ್ಧವನ್ನೇ ಅಪೇಕ್ಷಿಸುತ್ತಿರುವ ಪಾಕಿಸ್ತಾನದ ನಾಯಕರ ಕಣ್ಣೆದುರು ಜಗತ್ತಿನ ಮಿಕ್ಕ ಯಾವ ರಾಷ್ಟ್ರವೂ ವಿರೋಧಿಯಾಗಿ ಕಾಣುತ್ತಿಲ್ಲ; ಭಾರತವೊಂದೇ ಮಹಾವಿರೋಧಿ! ಭಾರತದ ವಿಷಯದಲ್ಲಿ ಸ್ವರಾಷ್ಟ್ರ-ಪರರಾಷ್ಟ್ರಗಳಲ್ಲಿ ಅಪಪ್ರಚಾರದ ಚಳವಳಿ ಮಾಡುವುದನ್ನೇ ತಮ್ಮ ಮುಖ್ಯ ಕರ್ತವ್ಯವೆಂದು ಅವರು ಭಾವಿಸಿಬಿಟ್ಟಿದ್ದಾರೆ. ಸಂದರ್ಭ—ಅಸಂದರ್ಭ, ಔಚಿತ್ಯ-ಅನೌಚಿತ್ಯಗಳ ವಿಚಾರವಿಲ್ಲದೆ, ಭಾರತವನ್ನು ಸಂಪೂರ್ಣವಾಗಿ ಅರಿತುಕೊಂಡ ರಾಷ್ಟ್ರಗಳಲ್ಲಿಯೂ ಅಪಪ್ರಚಾರ ನಡೆಸಿದ್ದಾರೆ. ಭಾರತವಿಂದು ಜಗತ್ತಿಗೆ ಅಜ್ಞಾತವಾಗಿ ಉಳಿದಿಲ್ಲ. ಜಗತ್ತಿನಲ್ಲಿಯ ಪ್ರತಿಯೊಂದು ದೇಶದ ಗಣ್ಯಪುರುಷರು ಭಾರತಕ್ಕೆ ಬಂದು ಬಂದುಹೋಗಿದ್ದಾರೆ; ಬರುತ್ತಲಿದ್ದಾರೆ. ಅವರು ಭಾರತರಾಷ್ಟ್ರದ ಆದರ್ಶಧೋರಣವನ್ನೂ, ಪ್ರಗತಿಪರ ರಾಜ್ಯವನ್ನೂ ಪ್ರತ್ಯಕ್ಷವಾಗಿ ಕಂಡು, ಮೆಚ್ಚಿ, ಹೃತ್ಪೂರ್ವಕವಾಗಿ ಹೊಗಳಿ ಹಾಡುತ್ತಿರುವುದು ಯಾರೂ ಅರಿಯದ ಮಾತಲ್ಲ. ಆದರೂ ಪಾಕಿಸ್ತಾನ್ ನಾಯಕರು, ಹೋದ ಹೋದ ಕಡೆಗಳಲ್ಲೆಲ್ಲ ಭಾರತವನ್ನು ಕೀಳ್ಗಣಿಸಿ ಬೈಯುತ್ತಿರುವುದನ್ನು ಕೇಳಿ, ಆ ಆ ರಾಷ್ಟ್ರದ ಜನರು

ಏನೆನ್ನುತ್ತಿರಬಹುದೆಂಬುದರ ಪರವೆಯೂ ಆ ನಾಯಕರಿಗಿಲ್ಲದಿರುವುದು ಆಶ್ಚರ್ಯದ ಮಾತಾಗಿದೆ.

ಜಗತ್ತಿಂದು ಭಾರತವನ್ನು ನೋಡುವ ದೃಷ್ಟಿಗೂ ಪಾಕಿಸ್ತಾನವನ್ನು ನೋಡುವ ದೃಷ್ಟಿಗೂ ಎಂತಹ ಅಂತರವಿದೆಯೆಂಬುದರ ತಾರತಮ್ಯಜ್ಞಾನವೂ ಪಾಕಿಸ್ತಾನದ ನಾಯಕರಲ್ಲಿ ಉಳಿದಿಲ್ಲ. ಭಾರತದ ನಾಯಕರು ಪರದೇಶಗಳಿಗೆ ಹೋದರೆ, ಅಲ್ಲಿಯ ಜನತೆ-ಸರಕಾರಗಳಿಂದ ಸಾರ್ವಭೌಮಸದೃಶ ಮನ್ನಣೆಯನ್ನು ಪಡೆಯುತ್ತಾರೆ; ಅದೇ ಪಾಕಿಸ್ತಾನ್ ನಾಯಕರು ಪರದೇಶಗಳಿಗೆ ಹೋದರೆ, ಸಂಬಂಧಿಸಿದ ಅಧಿಕಾರಿಗಳಿಗಲ್ಲದೆ, ಮಿಕ್ಕವರಿಗೆ ಅವರ ಬರುವಿಕೆಯ ಸುದ್ದಿಯೇ ಇರುವುದಿಲ್ಲ. ಪರರಾಷ್ಟ್ರಗಳಲ್ಲಿ ತಮಗೆ ದೊರೆಯುವ—ಉಪೇಕ್ಷೆ-ಔದಾಸೀನ್ಯಗಳು ತುಂಬಿದ—ಸ್ವಾಗತಕ್ಕಾಗಿ, ತಮಗಾದ ಅವಮಾನದ ಹೊಣೆಯನ್ನೂ ಭಾರತದ ಮೇಲೆ ಹೊರಿಸಿ, ಬೈದು ತಮ್ಮ ಬಾಯಿತುಂಡಿಯನ್ನು ತೀರಿಸಿಕೊಳ್ಳುವ ಪರಿಪಾಠವನ್ನು ಇಟ್ಟಿದ್ದಾರೆ ಈ ಶಾಪಪ್ರವೀಣರು.

ಪರರಾಷ್ಟ್ರಗಳವರು ಯಾವುದೇ ರಾಷ್ಟ್ರವನ್ನು ಆದರಬುದ್ಧಿಯಿಂದ ನೋಡಬೇಕಾದರೆ, ಮೊದಲು ಆ ರಾಷ್ಟ್ರದ ಆಂತರಿಕ ವ್ಯವಸ್ಥೆ ಏಕಮುಖವಾಗಿ, ಸೌಹಾರ್ದಪೂರ್ಣವಾಗಿ ನಡೆದಿದೆಯೆಂಬುದು ಅವರಿಗೆ ಮನವರಿಕೆಯಾಗಬೇಕು. ಪಾಕಿಸ್ತಾನ ಹುಟ್ಟಿದಂದಿನಿಂದಲೂ ಇದುವರೆಗೆ ಒಂದು ದಿನವಾದರೂ ಅಲ್ಲಿಯ ಆಂತರಿಕ ವ್ಯವಸ್ಥೆಯಲ್ಲಿ ಐಕ್ಯ, ಸ್ನೇಹ, ಶಾಂತಿಗಳು ನೆಲೆಗೊಂಡಿವೆಯೆ? ಅಲ್ಲಿಯ ಬಹುಜನ ರಾಜಕೀಯ ಧುರೀಣರು ಭಾರತೀಯರನ್ನು ದ್ವೇಷಿಸುವಂತೆಯೇ, ತಮ್ಮ ಜೊತೆಯ ಧುರೀಣರನ್ನೂ ದ್ವೇಷ-ಸಂಶಯಗಳಿಂದ ಕಾಣುತ್ತಿದ್ದಾರೆ. ಪೂರ್ವಪಾಕಿಸ್ತಾನ-ಪಶ್ಚಿಮಪಾಕಿಸ್ತಾನಗಳಲ್ಲಿ ಸಹಾನುಭೂತಿ-ಸಹಕಾರಗಳಿಲ್ಲ. ಪಂಜಾಬ-ಸಿಂಧಗಳಲ್ಲಿ ವಂಶಪರಂಪರೆಯ ಜಗಳಾಟ. ಫಕ್ತೂನಿ-ಪಖ್ತೂನಿಗಳು ಮಿಕ್ಕವರನ್ನು ಕೆಂಗಣ್ಣುಗಳಿಂದ ಕಾಣುವರು. ಎಲ್ಲಿ ನೋಡಿದರೂ ಸಹಕಾರ-ಸಹಾನುಭೂತಿಗಳಿಗೆ ನಿಲ್ಲಲು ನೆಲೆಯಿಲ್ಲ.

ಪಾಕಿಸ್ತಾನ ಸರಕಾರದ ಹತ್ತುವರ್ಷಗಳ ಚರಿತ್ರೆ ಏನು ಹೇಳುವುದು? ಅಧಿಕಾರದ ದುರಾಶೆಯಿಂದ ಧುರೀಣರ ಪರಸ್ಪರರಲ್ಲಿಯ ಕಾದಾಟ! ಇಂದು ಮಂತ್ರಿಯಾಗಿ ಇರುವವನು ನಾಳೆಗೆ ಇದ್ದಾನೆಂಬ ನಿಯಮವಿಲ್ಲ. ರಾಷ್ಟ್ರದ ಎಲ್ಲ ಸೂತ್ರಚಾಲನೆಗೂ ಹೊಣೆಗಾರನಾದ ಮುಖ್ಯಮಂತ್ರಿಗೆ ಗೊತ್ತಿಲ್ಲದೆ, ಮಂತ್ರಿಮಂಡಳಗಳು ಬದಲಾಗುತ್ತಲಿವೆ. ಪರಿಸ್ಥಿತಿ ಹೀಗಿದ್ದರೂ, ಅಲ್ಲಿಯ ಬಹುಜನ ಧುರೀಣರು ಭಾರತದ ಕಡೆಗೆ ಮುಖಮಾಡಿ, ಮೀಸೆಗೆ ತುರಿಹಾಕುತ್ತಿರುವುದನ್ನು ನೋಡಿದರೆ, ಅವರಿಗಾಗಿ ಮುನಿಯಬೇಕೋ ಮರುಕಪಡಬೇಕೋ ಎಂಬುದೇ ತಿಳಿಯದಂತಾಗುವುದು.

ಭಾರತದ ದ್ವೇಷಸಾಧನೆಗಾಗಿ ಪಾಕಿಸ್ತಾನಿಗಳು ಎಂತಹ ಅನೃತಗಳನ್ನೂ ಹುಟ್ಟಿಸಲು ಸಿದ್ಧರು. ಪ್ರತ್ಯಕ್ಷ ಕೂಡಿ ಮಾತನಾಡಿದಾಗ ಸಮ್ಮತಿಸಿದ ಕರಾರುಗಳನ್ನು, ಕ್ಷಣದಲ್ಲಿಯೆ ಮುರಿದು ಬಿಡುವುದಕ್ಕೆ ಅವರ ವಿವೇಕ ಅಡ್ಡಬರುವುದೇ ಇಲ್ಲ. ಎಂತಲೇ ವಿವೇಕಬುದ್ಧಿಯ ಎಷ್ಟೋ ಮುಸ್ಲಿಮ್ ರಾಷ್ಟ್ರಗಳೇ, ಇವರ ಮಾತನ್ನು ನಂಬಿ ಪಾಕಿಸ್ತಾನದ ಪಕ್ಷಕಟ್ಟಲು ಸಿದ್ಧವಾಗಲಿಲ್ಲ. ಧರ್ಮದ ಅಭಿಮಾನವನ್ನೇ ಬಂಡವಾಳವನ್ನಾಗಿ ಮಾಡಿಕೊಂಡ ಪಾಕಿಸ್ತಾನಿಗಳು, ಸ್ವಧರ್ಮೀಯರೇ ಆದ ಇಜಿಪ್ತದವರಿಗೆ ಸಂಕಟಕಾಲದಲ್ಲಿ ಸಹಾಯ ಮಾಡಲು ಮುಂದುವರಿಯಲಿಲ್ಲ. ಇಷ್ಟೇ ಅಲ್ಲ; ಮಧ್ಯಪೂರ್ವದ ಮುಸ್ಲಿಮ್ ರಾಷ್ಟ್ರಗಳಿಗೆ ಕಂಟಕಪ್ರಾಯವಾಗಿರುವ— ಪಾಶ್ಚಿಮಾತ್ಯ ರಾಷ್ಟ್ರಗಳ 'ಸೀಟೊ' 'ನ್ಯಾಟೊ' ಒಪ್ಪಂದಗಳನ್ನು ಮಹಾಪ್ರಸಾದವೆಂದು ಪುರಸ್ಕರಿಸಿ ಹೊರಟಿದೆ. ಪಶ್ಚಿಮದ ಪ್ರಬಲರಾಷ್ಟ್ರಗಳು 'ಭೂ' ಎಂದಾಗಲೆಲ್ಲ ಬೊಗಳಬೇಕೆನ್ನುವ ಪ್ರಾಣಿಯಂತಾಗಿದೆ ಪಾಕಿಸ್ತಾನದ ಇಂದಿನ ಪರಿಸ್ಥಿತಿ.

ಪಾಕಿಸ್ತಾನದ ಇಂದಿನ ಮುಖ್ಯಮಂತ್ರಿಗಳಾದ ಜನಾಬ್ ಸುಹ್ರವರ್ದಿಖಾನರು, ಕಳೆದ ತಿಂಗಳಲ್ಲಿಯೇ ಕೆಲವೊಂದು ಪಶ್ಚಿಮ ಪ್ರದೇಶಗಳಲ್ಲಿ ತಿರುಗಾಡಿ, ಆ ಆ ಪ್ರದೇಶಗಳಿಗೆ ಬೇಡವಾದ ಜನರನ್ನೆಲ್ಲ ಅಲ್ಲಲ್ಲಿ - ಬಾಯಿ ಸೋಲುವಂತೆ ಬೈದು ಬಂದಿದ್ದಾರೆ. ಈ ಹೊಣೆಗೇಡಿತನಕ್ಕಾಗಿ ಅವರು ಸ್ವದೇಶದಲ್ಲಿಯೂ ಪರದೇಶದಲ್ಲಿಯೂ ಎಂತಹ ಫಲವನ್ನು ಪಡೆಯಬಹುದೆಂಬುದರ ಲಕ್ಷಣಗಳು ಈಗಾಗಲೇ ತೋರತೊಡಗಿವೆ. ಪಶ್ಚಿಮ ಪಾಕಿಸ್ತಾನದ ಕೆಲವು ಧುರೀಣರು, ಸುಹ್ರವರ್ದಿಯವರ ಅಯೋಗ್ಯತೆಯನ್ನು ಬಣ್ಣಿಸಿ ಬಣ್ಣಿಸಿ, ಮುಖ್ಯಮಂತ್ರಿ ಪದಕ್ಕೆ ರಾಜೀನಾಮೆ ಕೊಡಬೇಕೆಂದು ಘೋಷಿಸುತ್ತಿದ್ದಾರೆ. ಇತ್ತ ಪೂರ್ವಪಾಕಿಸ್ತಾನದಲ್ಲಿ ಸುಹ್ರವರ್ದಿಯವರನ್ನು ಹುಡಿಗೂಡಿಸುವ ನಿಶ್ಚಯದಿಂದ, ಒಂದು ಪ್ರಬಲವಾದ ಹೊಸ ರಾಜಕೀಯ ಪಕ್ಷವೇ ಎದ್ದುನಿಂತುಕೊಂಡಿದೆ. ಪಶ್ಚಿಮ ಪಾಕಿಸ್ತಾನದಲ್ಲಿ ಸುಹ್ರವರ್ದಿಯವರಿಗೆ ಬೇಡವಾಗಿದ್ದ ರಿಪಬ್ಲಿಕನ್ ಪಕ್ಷ ಮತ್ತೆ ತಲೆಯೆತ್ತಿನಿಂತು, ಮಂತ್ರಿಮಂಡಲವನ್ನು ಸ್ಥಾಪಿಸಿಬಿಟ್ಟಿದೆ. ಕೆಳಗೆ ಬಿದ್ದು ಒದ್ದಾಡುತ್ತಿದ್ದರೂ ತನ್ನ ಮೀಸೆಗೆ ಮಣ್ಣು ಹತ್ತಿಲ್ಲವೆಂದು ಕೂಗುವ ಜಟ್ಟಿಯಂತೆ, ಸುಹ್ರವರ್ದಿಯವರ ಭಾರತವಿದ್ವೇಷದ ಕೂಗು - ಇಷ್ಟಾದರೂ— ನಿತ್ಯ ನಿತ್ಯ ಕಿವಿಗೆ ಬೀಳುತ್ತಲೇ ಇದೆ.

ಇನ್ನು ಅಧಿಕಾರರಹಿತರಾದ ಕೆಲವು ಪಾಕಿಸ್ತಾನೀ ಮುಂದಾಳುಗಳ ಭಾರತದ ದ್ವೇಷ, ಸುಹ್ರವರ್ದಿಯವರೊಂದಿಗೆ ಸ್ಪರ್ಧೆಗೆ ನಿಂತಿದೆ. ಅವರಂತೂ ಭಾರತದೊಂದಿಗೆ ಯುದ್ಧಕ್ಕೇ ಕಾಲು ಕೆದರಬೇಕೆಂದು ಗರ್ಜಿಸುತ್ತಿದ್ದಾರೆ. ಅವರ ಮಾತುಗಳನ್ನು ಎತ್ತಿಹಿಡಿದು ಬರೆಯುವ ಕಿಡಿಗೇಡಿ ಪತ್ರಿಕೆಗಳಿಗೂ ಪಾಕಿಸ್ತಾನದಲ್ಲಿ ಕೊರತೆಯಿಲ್ಲ. ಇದೆಲ್ಲವನ್ನೂ ನೋಡಿದರೆ, ಪಾಕಿಸ್ತಾನದ ವಾತಾವರಣವೇ ವಿಷಮಯವಾಗಿದೆಯೆಂದು ಎಲ್ಲರಿಗೂ ಕಂಡುಬರುವಂತಿದೆ. ನೆರೆಯ ರಾಷ್ಟ್ರವಾದ ಭಾರತಕ್ಕೆ ಈ ವಿಷ ಯಾವಾಗ ಎಂತಹ ಪರಿಣಾಮವನ್ನು ಮಾಡಿತೆಂಬುದರ ನಿಯಮವೇ ಇಲ್ಲದಂತಾಗಿದೆ. ಪಾಕಿಸ್ತಾನದ ಈ ಭಾರತದ್ವೇಷ-ಆಂತರಿಕ ದ್ವೇಷಗಳು, ಇಂದು ಒಂದು ಬಗೆಯಿಂದ ಪ್ರಲಯವನ್ನೇ ಆಹ್ವಾನಿಸುತ್ತಲಿವೆಯೆಂದು ಹೇಳಬಹುದು. ಆದುದರಿಂದ, ಪಾಕಿಸ್ತಾನವು ತನ್ನ ಬೆನ್ನಿಗಿದೆಯೆಂದು ಹೇಳುವ ಪಶ್ಚಿಮದ ಮಹಾರಾಷ್ಟ್ರಗಳು, ಲೋಕದ ಕಲ್ಯಾಣದ ದೃಷ್ಟಿಯಿಂದ ಈಗ ಹಿಂದೆ ಮುಂದೆ ವಿಚಾರಮಾಡಿ, ತಮ್ಮ ನಿಲುವನ್ನು ಇರಿಸಿಕೊಳ್ಳುವುದು ತುಂಬ ಅಗತ್ಯದ ವಿಷಯವಾಗಿದೆ. ತಂತಮ್ಮ ದ್ವೇಷವನ್ನು ಸಾಧಿಸುವ ಧೂರ್ತ ದೃಷ್ಟಿಯಿಂದ, ಹುಚ್ಚುನಾಯಿಗೆ ಕಚ್ಚಲು ಕಲಿಸುವಂತಹ ಅವಿವೇಕದ ಹಾದಿಯಿಂದ ಹೊರಟರೆ, ಅದರಿಂದ ತಮಗೂ ಸುಖ ಇರದು; ಬೇರೆಯವರಿಗೂ ಸುಖ ದೊರೆಯದು.

(೧೩೦ನೆಯ ಪುಟದಿಂದ ಬಂದುದು)

ವಸಂತಿಯ ಮಡಿಲಲ್ಲಿ

ಗಟ್ಟಿಕೊಂಡಿದ್ದಳು. ಹೃದಯಸ್ಪರ್ಶಿ ಸನ್ನಿವೇಶವಿದು. ಒಂದುಕ್ಷಣದಲ್ಲಿ ಎಂತಹ ವಿಪರೀತ! ..ಮಿಸ್ ಕಮಲೆ — ಎಂ. ಎಸ್‌ಸಿ. ಮುಗಿಸಿ ಉತ್ತರದ ಒಂದು ಸಂಶೋಧನಾ ಕೇಂದ್ರದಲ್ಲಿ ಸಂಶೋಧನೆಯನ್ನು ನಡೆಸಲು ಹೊರಟ ಮಿಸ್. ಕಮಲಾ—ಕೂಡ ಈ ದುರಂತಕ್ಕೆ ಈಡಾಗದಿರಲಿಲ್ಲ. ಆಕೆಯ ತಲೆಯಲ್ಲಿ ಹೊಸ ಹೊಸ Theoryಗಳು ತುಂಬಿಕೊಂಡಿದ್ದುವು. ಅದರೇನು? ಅವಳೊಂದಿಗೆ ವಸಂತಿಯ ಮಡಿಲಲ್ಲಿ ಅವುಗಳೂ ಕೂಡ ಕರಗಿದ್ದುವು....ಕುಳಿತು ತೂಕಡಿಸುತ್ತಿದ್ದ ಆ ಮುದುಕನ ಮೊಗದಲ್ಲಿ—ಅವನು ಅನುಭವಿಸಿದ—ಅನುಭವಿಸುತ್ತಿದ್ದ—ಕಷ್ಟಗಳ ಸಂಖ್ಯೆಗಳಂತೆ— ಅಸಂಖ್ಯಾತ ಗೆರೆಗಳು ಮೂಡಿದ್ದುವು. ಒಂದು ರೊಟ್ಟಿಯ ಚೂರಿಗಾಗಿ ಅವನು ಕಷ್ಟ ಪಡಬೇಕಾಗಿತ್ತು. ಆದರೆ ಮರುಕ್ಷಣದಲ್ಲಿ ಅವ ವಸಂತಿಯ ಮಡಿಲಿನಲ್ಲಿ ಹೂತುಹೋಗಿದ್ದನು. ಅವನ ಕೈ ಕೆಸರಿನಿಂದ ಎದ್ದು ಕಾಣುತ್ತಿತ್ತು... ಆ ಸೆಟ್ಟಿಮಗ— ಕಥಾನಾಯಕನ ಜಾಗವನ್ನು ಕಸಿದುಕೊಂಡ ಸೆಟ್ಟಿಮಗ—ಹಾಯಾಗಿ ಈ ಲೋಕದ ಪರಿವೆಯಿಲ್ಲದೆ—ನಿದ್ರಿಸುತ್ತಿದ್ದ. ಬಹುಶಃ ಅಂದವನು ಯಾರ ತಲೆಗೋ ಟೊಪ್ಪಿ ಹಾಕಿರಬೇಕು. ಅವನ ಹೊಟ್ಟೆ 'ಕಮ್ಮಾರನ ತಿದಿಯಂತೆ' ಮೇಲೆ ಕೆಳಗೆ ಹೋಗುತ್ತಿತ್ತು. ಎಷ್ಟುಲಕ್ಷ ಹಣವನ್ನು ಕೂಡಿ ಹಾಕಿದ್ದನೋ ದೇವರೇ ಬಲ್ಲ! ಆದರೆ ಅವನಷ್ಟು ಹಣ ಕೊನೆಯಕಾಲಕ್ಕೂ ಅವನಿಗೆ ಸಹಾಯಕವಾಗಲಿಲ್ಲ 'ನನ್ನನ್ನುಳಿಸಿದರೆ ಒಂದು ಲಕ್ಷ ಹಣ ಕೊಡುತ್ತೇನೆ' ಎಂದು ಮುಳುಗುತ್ತಿದ್ದಲ್ಲಿಂದಲೇ ಹೇಳಿದ ಸೆಟ್ಟಿ. ಇದೊಂದು ಮನಸೆಳೆಯುವ ಸನ್ನಿವೇಶ. ಸೆಟ್ಟಿ ಹೇಳುತ್ತಿದ್ದ—ಜೀವವನ್ನು ಏಲಂ ಕರೆಯುವಂತೆ—ಒಂದುಲಕ್ಷ, ಎರಡುಲಕ್ಷ, ಮೂರು.......ಆದರೆ ಕೊನೆಗೂ ಅವನು ಮುಳುಗಿ ಸತ್ತುಹೋದ!

ಕತೆಯ ಉತ್ತರರಂಗದಲ್ಲಿ ಹೃದಯಸ್ಪರ್ಶೀ ಕರುಣರಸವುಂಟಾಗಲಿಕ್ಕಾಗಿ ಕತೆಗಾರರು ಪೂರ್ವರಂಗದ ಹಿನ್ನೆಲೆಯನ್ನು ಹೊಸೆದಿದ್ದಾರೆ. ಇದರಲ್ಲಿ ಬರುವ ಕಾಡಿಗೆಬಾಬಾ, ನವದಂಪತಿಗಳು, ಮಾರ್ವಾಡಿ, ಆ ಹಣ್ಣುಮುದುಕ, ಸಿಪಾಯಿ, ಮಿಸ್ ಕಮಲಾ, ಸತ್ಯನಾರಾಯಣ, ಅವನ ಹೆಂಡತಿ ಇತ್ಯಾದಿ ಎಲ್ಲಾ ಪಾತ್ರಗಳೂ ಕೂಡ ಬರುವ ಆವಶ್ಯಕತೆ. ಉತ್ತರರಂಗದ ಹೃದಯಂಗಮ ರಸಾವಿರ್ಭಾವ. ಪೂರ್ವರಂಗದಲ್ಲಿ ಜೀವನದ ವಿವಿಧ ಮುಖಗಳು—ಸುಖಿಗಳು, ದುಃಖಿಗಳು! ಆದರೆ ಆಕ್ಷಣದಲ್ಲಿ ಎಲ್ಲರ ಜೀವನವೂ ನಾಶವಾಗಿತ್ತು. ಒಂದು ಸುಂದರ ಸನ್ನಿವೇಶ ಪೂರ್ವರಂಗದಲ್ಲಿದ್ದರೆ—ಒಂದು ಕರಾಳ ಭೀಕರತೆಯ ರುದ್ರತಾಂಡವನೃತ್ಯ ಉತ್ತರರಂಗದಲ್ಲಿ. ಕತೆ ಹೇಳುವ ಆ ವ್ಯಕ್ತಿಯ ಮನೆಯಲ್ಲಿ, ಅವನಿಗೆ ಆರ್ಡರ್ ಬರುವಾಗ ಎಷ್ಟು ಸಂತೋಷ ತುಂಬಿತ್ತು! ಅವನಿಂದಾಗಿ ಅವನ ತಮ್ಮ, ತಂಗಿಯಂದಿರ, ಹೆಂಡತಿಯ, ತಾಯಿಯ, ಅವನ ಎಲ್ಲರ ಜೀವನವೂ ಉತ್ತಮವಾಗಿ ಆಗುವುದರಲ್ಲಿತ್ತು. ಆದಕ್ಕಾಗಿ ಅವನು ಡಿಲ್ಲಿಗೆ ಹೊರಟಿದ್ದನು. ಎಷ್ಟು ಭಯಂಕರ ರೀತಿಯಲ್ಲಿ ಅವನ—ಅವನಂತೆಯೇ ಸಹಸ್ರ ಜನರ—ಜೀವನವು ಮರಳುಗಾಡಾಗಿರಬಹುದು!

ಸರಿ! ಜಿ. ಟಿ. ಎಕ್ಸ್‌ಪ್ರೆಸ್ ವಸಂತೀನದಿಗೆ ಬಿತ್ತು. ವಸಂತಿಯ ಅಪ್ರತಿಹತ ತೆರೆಗಳ ಹೊಡೆತಕ್ಕೆ ಸಹಸ್ರ ಜನರ ಪ್ರಾಣಾಹುತಿಯಾಯಿತು. ಯಾರು ಈ ಕೊಲೆ ನಡೆಸಿದವರು? ಯಾರು? ವಸಂತಿ! ವಸಂತಿಯ ರುದ್ರತಾಂಡವದ ಹಾರಾಟಕ್ಕೆ ಸೇತುವೆ ಮುರಿದು ಬಿತ್ತು. ಎಲ್ಲರೂ ಹೇಳುವುದು ಇದನ್ನೇ—ವಸಂತಿಯೇ ಕೊಲೆಗಾತಿ! ಲಕ್ಷ್ಮಿಯ ತಂದೆ ಕೂಡಾ ಹೇಳಿದ್ದು ಇದನ್ನೇ! ಆದರೆ ವಸಂತಿಯ ಮಹತ್ತ್ವ, ಅದರ ಉದಾರತೆ ಹಿಂದೆ ಸೂಚಿತವಾಗಿದೆ. ಏನೇ ಆಗಲಿ; ಏನನ್ನೂ ಮಾಡಬಹುದು. ಆದರೆ ವಸಂತೀನದಿ ತುಂಬಿ ಹರಿಯಬೇಕು. ಅವಳು ಮನುಷ್ಯನ ಮೃತ್ಯುವಲ್ಲ—ಸ್ನೇಹಿತಳು

"ಆದರೆ ಕೊಲೆ ಮಾಡಿದವರಾರು?"

ವಸಂತಿ ಉತ್ತರಕೊಡುತ್ತಾಳೆ: "ಕೊಲೆ ಮಾಡಿದವನೆಂದರೆ, ಸೇತುವೆ ಕಟ್ಟುವಾಗ ಕಲ್ಲಿನ ಬದಲಾಗಿ ಇಟ್ಟಿಗೆಗಳನ್ನು, ಮತ್ತು ಇಟ್ಟಿಗೆಗಳ ಬದಲಾಗಿ ಮಣ್ಣನ್ನು ತುಂಬಿ, ಎಲ್ಲಾ ರೂಪಾಯಿಗಳನ್ನು ನುಂಗಿದವ -ಸೇತುವೆಯನ್ನು ಪರೀಕ್ಷಿಸದೆಯೇ ಮನೆಯಲ್ಲಿ ಕುಳಿತು ಸಂಬಳವನ್ನು ತೆಗೆದುಕೊಂಡವ" ಮನುಷ್ಯ! ಕೊಲೆ ಮಾಡಿದ ಮನುಷ್ಯ! ನೀರಿನಲ್ಲಿ ಮುಳುಗಿ ಹೋಗುತ್ತಿದ್ದ ಸೆಟ್ಟಿ ಎಷ್ಟು ಹಣ ಕೊಡುತ್ತೇನೆಂದರೂ ಯಾರೂ ತಮ್ಮ ಜೀವನವನ್ನು ಬಲಿಗೊಡಲು ಮುಂದೆ ಬರಲಿಲ್ಲ. ಆದರೆ ಸರಕಾರ ತನ್ನದೇ ಭಾಗವಾದ ಪ್ರಜೆಗಳನ್ನು, ಬರಿಯ ತನ್ನ ದುರ್ಲಕ್ಷ್ಯದಿಂದ ಬಲಿಗೊಟ್ಟಿತು. ಸೇತುವೆ ಕಟ್ಟಿದ ಇಂಜನೀಯರ್ ಆಫೀಸರರಿಗೆ ಸಹಸ್ರ ಜನರ ಜೀವನಕ್ಕಿಂತ ಹಣ ಹೆಚ್ಚಾಯಿತು. ಯಾವಾಗ ಹಣವು ಜೀವನಕ್ಕಿಂತ ಹೆಚ್ಚೆಂಬ ಭಾವನೆಯುಂಟಾಯಿತೋ, ಆಗ ಅಲ್ಲಿ ಒಂದು ಭಯಂಕರ ಅಘಟಿತ ಘಟನೆ ನಡೆಯುತ್ತದೆ—ನಿಶ್ಚಯ. ಲಂಚ, ಮೋಸ, ದರೋಡೆ, ಕಳ್ಳತನ—ಹಣಕ್ಕಾಗಿ ಅನಾಹುತಗಳು ನಡೆಯುತ್ತಿವೆ ಲೋಕದಲ್ಲಿ! ಇದೆಲ್ಲವೂ—ಹಣವು ಜೀವನಕ್ಕಿಂತ ಮೇಲೆಂಬ ದುರ್ಭಾವನೆಯ ದುಷ್ಕಾರ್ಯ. ಅಂತಹ ಭಾವನೆಯು ಸರಕಾರದ ನೌಕರರಿಗೆ ಬಂದರಂತೂ ಎಷ್ಟು ಜೀವನಗಳು ನಶಿಸಿ ಹೋಗಬಹುದು!

ಹೌದು. ಅವನು ಕೂಡಾ ನೌಕರಿಗಾಗಿ ಹೊರಟಿದ್ದ. ನೌಕರಿಗಾಗಿ—ಹಣಕ್ಕಾಗಿ! ಹಣಕ್ಕಾಗಿಯೇ? ಅಲ್ಲಲ್ಲ. ಅವನು ಹಣಕ್ಕಾಗಿ ಹೊರಡಲಿಲ್ಲ. ಅವನಿಗೆ ಜೀವನ ಬೇಕಾಗಿತ್ತು. ಕುಲಸ ಮೇಳ ಸುಂದರ ಜೀವನ ಬೇಕಾಗಿತ್ತು. ತನ್ನ ತಮ್ಮ, ತಂಗಿಯರ ಜೀವನ ಉತ್ತಮವಾಗಬೇಕಾಗಿತ್ತು. ಆದಕ್ಕಾಗಿ ಅವನು ಡಿಲ್ಲಿಗೆ ಪ್ರಯಾಣ ಬೆಳೆಸಿದ್ದ. ಮಿಸ್. ಕಮಲಾಳ ಮುಖದಲ್ಲಿ ಹೊಮ್ಮಿದ ನಗುವಿನಂತಹ ತನ್ನ ಕುಲಸುಮೇಳ ನಗು ಬೇಕಾಗಿತ್ತು. ಕತೆಗಾರರ ಈ ಭಾವನೆ ಉತ್ತಮವಾಗಿದೆ. ಇಂತಹ ಭಾವನೆ ಎಲ್ಲರಲ್ಲಿಯೂ ಬೇರೂರಲಾರದು. ಕತೆಗಾರರ ಈ ತೆರದ ಭಾವನೆ ಎಲ್ಲರಲ್ಲಿಯೂ ಇದ್ದರೆ, ದೇಶ ಖಂಡಿತ ಉತ್ತಮವಾಗುತ್ತದೆ. ಮೃತಾತ್ಮನ ಮೂಲಕ ಹೊರಡಿಸುವ ಆ

ಭಾವನಾತರಂಗ ಸುಂದರವಾಗಿದೆ. "ನಾನು ಆ ನಸುನಗೆಗಾಗಿ ಪ್ರಾಣಕೊಡುತ್ತಿದ್ದೆ. ದೇವರಾಣೆ—ನಾನು ಅದರ ವಿನಾ ಜೀವಿಸುತ್ತಿರಲಿಲ್ಲ. ಸತ್ಯವೆಂದರೆ ನಾನು ನೌಕರಿಗಾಗಿ ಹೋಗುತ್ತಿರಲಿಲ್ಲ—ಆದರೆ ಆ ನಸುನಗೆಗಾಗಿ ಹೋಗುತ್ತಿದ್ದೆ—ಕುಲಕುಮಾರ್ಳ ಜೀವನಕ್ಕಾಗಿ—ಅವಳ ನಸುನಗೆ ಉಳಿಯುವುದಕ್ಕಾಗಿ. ಹಾಡುವ ಕಂಠ ಬಿಗಿಯುದಂತೆ—ನನ್ನ ತಾಯಿ ಮಂಗಳವಾದ್ಯಗಳು ಮೊಳಗುವಾಗ ತನ್ನ ಪೂಜ್ಯ ಕರಗಳಿಂದ ನನ್ನ ಕೊರಳಿಗೆ ಹೂವಿನಹಾರ ಹಾಕಬೇಕೆಂದು ಹೋಗುತ್ತಿದ್ದೆ—" ಅವನೊಬ್ಬನಿಂದ ಅನೇಕರ ಜೀವನ ಸಾಗಬೇಕಿತ್ತು. ಅವನಂತಹ ಸಹಸ್ರ ಸಂಸಾರಿಗರು ಆ ರೈಲಿನಲ್ಲಿದ್ದರು. ಆದರೇನು? ಎಲ್ಲರೂ ವಸಂತಿಯ ಮಡಿಲಲ್ಲಿ ಮಲಗಿಹೋದರು.

ಕಥಾನಾಯಕನು ಕೂಡ! ತಾಯಿಯ ತಾಯಿತ ಅವನನ್ನು ರಕ್ಷಿಸಲಿಲ್ಲ. ಕುಲಕುಮಾರ್ಳ ಪ್ರೇಮ ಅವನನ್ನು ರಕ್ಷಿಸಲಿಲ್ಲ. ಅವೆಲ್ಲಕ್ಕಿಂತಲೂ ಮಾನವನ ಕಪಟತಂತ್ರ ಮೇಲಾಯಿತು. ಅವನು ವಸಂತಿಯ ಮಡಿಲಲ್ಲಿ ಜಾಲಿಯ ಗಿಡದಡಿಯಲ್ಲಿ ಮೃತಾತ್ಮನಾಗಿ ಬಿದ್ದಿದ್ದಾನೆ. ಮುಖ್ಯಮಂತ್ರಿಗಳವರು ದುರಂತವನ್ನೀಕ್ಷಿಸಲು ಬಂದಿದ್ದಾರೆ. ಅವರು ಬಂದು ಮಾಡುವುದಾದರೂ ಏನನ್ನು? ಮೃತಾತ್ಮನ ಕೂಗು ಅವರಿಗೆ ಕೇಳಿಸಲಿಲ್ಲ. ದುರಂತಾನಂತರ ಬಂದು ನೋಡುತ್ತಿದ್ದಾರೆ. ಅದಕ್ಕೆ ನೋಡಲು ನೇತ್ರವೆಯನ್ನು ಪರೀಕ್ಷಿಸುವುದಿಲ್ಲ. ಮೃತಾತ್ಮನ ಕೂಗು ಅವರಿಗೆ ಕೇಳಲೇ ಇಲ್ಲ. ಅವರು ಹೊರಟೇ ಹೋದರು. ಹೋದಮೇಲೆ ಅವನಿಗೆ ಕೋಪ ಬಂತು. ಬಂದು ಮಾಡುವುದೇನು? ಅವನಾಗ ಮೃತಾತ್ಮನು. ಹಿಂದೆ ಮಾರ್ವಾಡಿಯೊಬ್ಬನು ಅವನ ಸ್ಥಳವನ್ನಾಕ್ರಮಿಸಿ ಅದೇ ರೈಲಿನಲ್ಲಿ ಮಲಗಿದಾಗಲೂ ಅವನಿಗೆ ಕೋಪಬಂದಿತ್ತು; ಆದರೆ ಅವನ ಮಾತು ಆಗಲೂ ಕೂಡ ಮೃತನ ಮಾತಿನಂತೆಯೇ ಆಗಿತ್ತು. ಅವನು ಬಡಜೀವವಾಗಿದ್ದನು! "ಮನುಷ್ಯನಂತಿದ್ದ ಶರೀರದಲ್ಲಿ ಜಾಗವಿಯ ... ದೇಶಿಸಿದಾಗಲೇ!" ಅವನ ದಾರಿದ್ರ್ಯವೇ ಅವನ ಮೃತ್ಯು. ಬದುಕಿದ್ದಾಗಲೂ ಅವನ ಮಾತು ಯಾರಿಗೂ ಕೇಳಿಸುತ್ತಿರಲಿಲ್ಲ. ಸತ್ತಮೇಲಂತೂ ಹಾಗೆಯೇ! ಅವನ ತಮ್ಮ, ತಂಗಿ ಮುದಿ ತಾಯಿ, ಹೆಂಡತಿ ಮಕ್ಕಳ ಜೀವನಕ್ಕಾಗಿ ಅವನು ನಿತ್ಯವೂ ಸಾಯುತ್ತಿದ್ದನು. ಕತೆಯ ಕೊನೆಯ ಭಾಗವಂತೂ ಹೃದಯಂಗಮವಾಗಿದೆ. ಜಿ. ಟಿ. ಎಕ್ಸ್‌ಪ್ರೆಸ್ ನಿತ್ಯದಂತೆ ಹನ್ನೊಂದಕ್ಕೆ ಬರುತ್ತದೆ; ಅವನು ಅದನ್ನೇರಿದ ಕೂಡಲೇ ನಿದ್ದೆ ಬರುತ್ತದೆ. ರೈಲು ವಸಂತಿಗೆ ಹೋಗುತ್ತದೆ.

ಶ್ರೀ. ಅಹಮದ್ ಅವರ ಕತೆ ಬಹಳ ಸುಂದರವಾಗಿದೆ. ಒಂದು ಶ್ರೇಷ್ಠವಾದ ಕತೆಯಿದು. ಭಾಷಾಂತರಿಸಿದ ಶ್ರೀ. ಬಿ. ಜಯಾಚಾರ್ಯ ಬಿ. ಎಸ್ಸಿ. ಅವರಿಗೆ ಧನ್ಯವಾದಗಳು ಸಲ್ಲಬೇಕು.

ಅನಿರ್ದೇಶ್ಯ

ಸೌ. ಪಾರ್ವತೀದೇವಿ ಹೆಗಡೆ, ಬೆಳಗಾಂವಿ

೧

ತನ್ನ ಮಾಯೆಗೆ ಒಮ್ಮೆ ಲೀಲೆಯಲಿ ಭಗವಂತ
ಹೇಳಿದನು ಆಡೋಣ ಬಾರೆ—ಎಂದು.
ಮಾಯೆ "ಹೂಂ" ಎಂದೊಪ್ಪಿ ಅಣಿಯಾದಳಾಟಕ್ಕೆ,
ಪೌರುಷದ ಸ್ಥೈರ್ಯವನು ಅಳೆಯಲೆಂದು.

೨

ಅವನ ಮಸ್ತಕ ಮುಟ್ಟಲೆಂದು ಗಗನದವರೆಗೆ
ಬೆಳೆದಳಾಕೆಯು ಗೆಲುವ ಹೆಮ್ಮೆಯಿಂದ,—
ಆತನೋ ವಿಶ್ವಾತ್ಮ, ಗಗನವನು ಮೀರಿದನು
ಹತ್ತು-ಹತ್ತೇ ಹತ್ತು ಬೆರಳಿನಿಂದ.

೩

ಅವನ ಆದಿಯನರಿಯಲೆಂದು-ಎಂತಹ ಹುಚ್ಚು,
ಆ ಅನಾದಿಗೆ ಉಂಟೆ ಕಾಲ ಗಣನೆ?—
ಗುಣಾಗುಣಿಸಿ ದಣಿದಳಹ! ಕಾಲ ಸೋತಿತು ಮತ್ತೆ
ಅವನಿಂದ ಬೆಳಗುತಿದೆ ಕಾಲಪ್ರಣತಿ.

೪

"ನೇತಿ" ಎಂದಳು ಮಾಯೆ, "ಇತಿ" ಎಂದು ಎದೆ ತಟ್ಟಿ
ಮತ್ತೊಮ್ಮೆ ಹೇಳಿದಳು ಗೆದ್ದೆನೆಂದು—
ನೇತಿ ಎಂದಾಗಲೆಯು-ಇತಿಯು ಎಂದಿರೆ ನೇತಿ
ಮಾಯೆ ಕಣ್ಣಂಚಿನಲಿ ನೀರ ಬಿಂದು.

೫

ಸೋಲನೊಪ್ಪಳು ಅವಳು-ಅವನ ಬಗೆಬಗೆ ಕೊನೆಯ
ಹುಡುಕುವುದು ಎಂತೆನೋ ಎಂಬ ಚಿಂತೆ,
ಅವಳ ಹೆಮ್ಮೆ ನವನಸ್ಯೆ ಮುಕ್ಕಿಹುದು. ಆದರೇ-
ನಾ ಅನಿರ್ದೇಶ್ಯನಿಗೆ ಕಡುಗೆ ಬಂತೆ?

೬

ಪ್ರಕೃತಿ ಆತನ ಕೂಸು-ಬಲವನ್ನೀಯಲು ಪುರುಷ
ಕತ್ತಲೆಯ ಕಳೆದಿರಲು ಆ ಅಚಿಂತ್ಯ—
ನಿರ್ದೇಶ್ಯ ತಾನಾಗಿ ಪ್ರಕೃತಿಯನು ಗೆಲಿಸುವನು
ಪ್ರಕೃತಿ ನಿಶ್ಶಕ್ತಿಗಹ ಬಂದು ಅಂತ್ಯ

"ಸ್ಟ್ರೈಕು"

(ಒಂದು ಜೀವನಚಿತ್ರ)

ಶ್ರೀ. ಡಿ. ಎಸ್. ಹಾಸ್ಯಗಾರ, ಎಂ. ಎ., ಮುಂಬಯಿ

ವ್ಯಕ್ತಿ ವ್ಯಕ್ತಿಗಳ ಸ್ವಭಾವಾವಿಷ್ಕರಣವೂ ಸಾಹಿತ್ಯನಿರ್ಮಿತಿಗೆ ರಸವತ್ತಾದ ವಸ್ತುವಾಗಬಲ್ಲದು. ಒಂದು ಕುಟುಂಬದಲ್ಲಿಯೊ, ಸಂಸ್ಥೆಯಲ್ಲಿಯೊ ಇರುವ ಸಾಮಾನ್ಯವ್ಯಕ್ತಿಗಳ ಸ್ವಭಾವವೈವಿಧ್ಯ, ನಗೆಗೆ ಕಾರಣವಾಗುವುದು ಹೇಗೆಂಬುದನ್ನು ನೋಡಿ!

ಆಫೀಸು ಬಾಗಿಲಿನ ಕೀಲಿ ತೆಗೆದು, ಬಾಗಿಲನ್ನು ದೂಡಿ, ಎದುರಿನ ಗೋಡೆಯ ಮೇಲಿನ ವಿದ್ಯುತ್‌ಗಡಿಯಾರದತ್ತ ದೃಷ್ಟಿಹಾಯಿಸಿದಾಗಲೇ ಗಂಗಾರಾಮನಿಗೆ ತನ್ನ ಹುಚ್ಚುತನದ ಅರಿವಾಯಿತು. ಮುನ್ನಾದಿನ ರಾತ್ರಿ ಮಲಗುವಾಗ ಸಹ 'ನಾಳೆ ೯॥ ಗಂತೂ ಆಫೀಸಿಗೆ ಹೋಗುವ ತರಾತುರಿಯಿಲ್ಲವಲ್ಲ. ಒಂದು ದಿನವಾದರೂ ಇವಳಿಂದ ಬೈಸಿಕೊಳ್ಳದೆ, ಬಡಿಸಿದನ್ನು ಹೊತ್ತಿಗೆ ಊಟಮಾಡಿ ಹೋದರಾಯಿತು' ಎಂದು ವಿಚಾರಿಸುತ್ತಲೇ ಮಲಗಿದ್ದವನಿಗೆ, ಬೆಳಗಾಗುವಷ್ಟರಲ್ಲಿ ಅದೆಲ್ಲ ಹೇಗೆ ಮರೆತುಹೋಯಿತೋ!— ಆ ಹೆಂಡತಿಯೂ ಇಷ್ಟೆಲ್ಲ ದಿನಗಳಲ್ಲಿ ಈಹೊತ್ತು ಮಾತ್ರ ಪಿಟ್ ಎನ್ನದೆ ೮॥ ಗೆ ಸರಿಯಾಗಿ ತಾಟಿಕ್ಕಿ ಬಡಿಸಿ, ಮಧ್ಯಾಹ್ನದ 'ಲಂಚ್'ಗಾಗಿ ಮೂರು ಚಪಾತಿಗಳ ಡಬ್ಬವನ್ನು ಸಿದ್ಧಮಾಡಿ ತಂದಿಡಬೇಕೆ? ಅಂತೂ ಗಂಗಾರಾಮ ನಿತ್ಯದಷ್ಟೇ ವೇಳೆಗೆ ಮನೆಬಿಟ್ಟು, ನಿತ್ಯದ್ದೇ ಗಾಡಿಹತ್ತಿ, ನಿತ್ಯದಷ್ಟೇ ವೇಳೆಗೆ (ಈ ಯೋಗಾಯೋಗ ನೋಡಿ. ಇಂದು ಮಾತ್ರ ಸೆಂಟ್ರಲ್ ರೇಲ್ವೆಯ ಆ ಗಾಡಿಯೂ ವೇಳೆಗೆ ಸರಿಯಾಗಿ ವ್ಹಿ. ಟಿ. ಸ್ಟೇಶನ್ನಿಗೆ ಬಂದು ಮುಟ್ಟಿತ್ತು!) ಆಫೀಸಿಗೆ ಬಂದಿದ್ದನು.

ಗಂಗಾರಾಮ ನಿತ್ಯದಂತೆ ಈ ಹೊತ್ತೂ ಭಗತ್‌ಜೀವನಲಾಲ ಇಂಡಸ್ಟ್ರಿಯಲ್ ಡಿಸ್ಟ್ರಿಬ್ಯೂಟಿಂಗ್ ಏಜನ್ಸಿ ಆಫೀಸಿನ ಬಾಗಿಲನ್ನು ವೇಳೆಗೆ ಸರಿಯಾಗಿ—ಹಾಗೆ ಮಾಡುವ ಅವಶ್ಯಕತೆಯು ಇಲ್ಲದಿರುವಾಗ—ತೆರೆದನು....ಎನ್ನುವುದಕ್ಕೆ ಇಷ್ಟೆಲ್ಲ ಬರೆಯಬೇಕಾಯಿತು. ಗಂಗಾರಾಮ ಬಾಗಿಲು ತೆರೆದ, ಗಾಳಿಗೆ ಕದಗಳು ಮುಚ್ಚಿಕೊಳ್ಳದಂತೆ ಸಂದಿನಲ್ಲಿ ಕೂಡಿಸಲು ಮಾಡಿದ ಮರದ ಬಿರಡೆಗಳನ್ನು ಜೋಡಿಸಿ, ನೇರವಾಗಿ ಮೂಲೆಯಲ್ಲಿ—ಅಲ್ಲಿರುವ ಸಂದಿನಲ್ಲಿಟ್ಟಿರುತ್ತಿದ್ದ—ಕಸಬರಿಗೆಯತ್ತ ನಡೆದನು. ಅದನ್ನೆತ್ತಿಕೊಳ್ಳಲು ಕೈ ಮುಂದೆ ಮಾಡುತ್ತಿದ್ದಂತೆ ಅವನಿಗೆ ನಗೆ ಬಂದುಬಿಟ್ಟಿತು. ತನ್ನ ಅಶಕ್ತ ಎದೆಯಿಂದಾಗಿ ಡಿಸೋಜಾ (D'Souza) ಡಾಕ್ಟರರ ಸಲಹೆಯಂತೆ, ಇಂತಿಂತಹ ಕಾರಣಗಳಿಗೆಲ್ಲ ಗಂಗಾರಾಮ ನಗುವವನಲ್ಲ ಎನ್ನುವುದನ್ನು ತಿಳಿಸಿದಾಗ, ವಾಚಕರಿಗೆ ಗಂಗಾರಾಮನ ಈ ನಗೆಯ ಮಹತ್ತ್ವದ ಕಲ್ಪನೆ ಬರಬಹುದು.

'ಹ್ಞ, ನಾನೂ ಮಳ್ಳ. ಮತ್ತೆ ಮತ್ತೆ ಅದೇ ತಪ್ಪು ಮಾಡ್ತಿದೀನಲ್ಲ! ಇವತ್ತು ಕೆಲ್ಸ ಮಾಡ್ಬಾರ್ದಂತ ಗೊತ್ತಾಗಿದ್ರೂ? ಅಂದ್ರೆ ನನ್ನೆಲ್ಲಾನೂ ಅದೊಳ್ಳೆ ಕಾಯಿಲೇನು?' ಗಂಗಾರಾಮ ತನ್ನಷ್ಟಕ್ಕೆ ಆದರೂ ಆ ಕಸಬರಿಗೆ ಸ್ಪಷ್ಟವಾಗಿ ಕೇಳುವಂತೆ ಗುಣುಗುಟ್ಟಿಕೊಂಡ. ಮಾಡಬಾರದಂಥ ಕೆಲಸವೊಂದನ್ನು ಮಾಡಲಿದ್ದಾಗ ತಡೆಹಿಡಿದ ಸಮಾಧಾನದಿಂದ ಉಸ್ಸೆಂದುಕೊಂಡು ಇತ್ತ ತಿರುಗಿದವನು, ತಟ್ಟನೆ ಏನೋ ನೆನಪುಮಾಡಿಕೊಂಡವನಂತೆ ಬಾಗಿಲಿಗೆ ಬಂದನು. ಮಾಡದಿರುವುದು ಎಂದರೆ ಏನನ್ನೂ ಮಾಡದಿರುವುದು. ಗಂಗಾರಾಮ ಬಾಗಿಲಿಗೆ ಆಗಲೇ ಜೋಡಿಸಿದ್ದ ಬಿರಡೆಗಳನ್ನು ಹಿಂದೆ ಸರಿಸಿಟ್ಟು, ಮೂರುನಾಲ್ಕು ಸಲ ತಲೆದೂಗಿ ಒಳಕ್ಕೆ ಸರಿದನು.

ಆ ಲೆಕ್ಕದಂತೆ ಮುಚ್ಚಿದ ಕಿಟಕಿಗಳನ್ನಾದರೂ ಏಕೆ ತೆರೆಯಬೇಕು? ಆದರೆ ಗಂಗಾರಾಮ ತುಂಬ ವ್ಯವಸ್ಥಿತ—ಅರ್ಥಾತ್ ಅದೇನೋ ವ್ಯವಹಾರಜ್ಞಾನ ಅನ್ನುತ್ತಾರಲ್ಲ....ಅದರ ಸಾಕಷ್ಟು ಪ್ರಮಾಣವನ್ನು ತುಂಬಿಕೊಂಡವ. ಒಳಗೆಲ್ಲ ಕತ್ತಲೆಯಿತ್ತು. ಹೊರಗಿನ ಹೊಸ ಹವೆಯ ಸ್ಪರ್ಶವಿಲ್ಲದೆ ಒಳಗಿನ ವಾತಾವರಣ ಜಡವಾಗಿತ್ತು. ನಿನ್ನೆ ಸಂಜೆ ಮಿಸ್ [illegible] ಟೇಬಲ್ ಮೇಲಿಂದ ತನ್ನ ಪರ್ಸ ಎತ್ತಿಕೊಳ್ಳುವಾಗ ಎರಚಿದ [illegible] ಹವೆಯು ತುಂಬೆಲ್ಲ [illegible] ವಾಸನೆ ತುಂಬಿತ್ತು. ಮೇಲಾಗಿ [illegible] ಜನರೆಲ್ಲ ಬಂದಮೇಲೆ ಕುಳಿತು [illegible] ಸಾಕಷ್ಟು. ಬೇಕು ಬೇಡವೇ?—ಇದನ್ನೆಲ್ಲ ಯೋಚಿಸಿ ಗಂಗಾರಾಮ ಹಾಲಿನ ಮೂರೂ ಕಿಟಕಿಗಳನ್ನು ತೆರೆದನು. ತನ್ನ ಹೆಡ್‌ಕ್ಲಾರ್ಕ [illegible] ಸಂಬಳಕ್ಕೆ ನೇರವಾಗಿ ಮಾಡುವ ಕೆಲಸ [illegible]. ಅದಕ್ಕೆ [illegible] ಹೇಳಿದರಲ್ಲಿ [illegible] [illegible] ಬೇಕಾದಷ್ಟು [illegible]. ಎರಡು. [illegible] ರೀತಿಯ

ಕೊಡುತ್ತಾನೆ. ತಡವಾಡಿ ಬಂದುದಕ್ಕೆ ಕೆಂಪು × ಬಿದ್ದಾಗ, ಸಹಿ ಮಾಡಿ ಅದನ್ನು ಒಂದೆರಡುಸಾರೆಯಾದರೂ ರದ್ದು ಮಾಡಿದ್ದನ್ನು ಅಲ್ಲಗಳೆಯುವಂತಿಲ್ಲ. ಗಂಗಾರಾಮು ತಾಮ್ಹಣಕರರ ಕ್ಯಾಬಿನ್‌ಗೆ ಹೋಗಿ, ಅಲ್ಲಿಯ ಕಿಟಕಿಯನ್ನೂ ತೆರೆದು, ಅವರ ಕುರ್ಚಿಯ ಮೇಲಿನ ಗಾದಿಯನ್ನು ದಿಕ್ಕು ಬದಲಾಯಿಸಿಟ್ಟು, ಕೈಯಿಂದೊಮ್ಮೆ ಅದನ್ನು ತಟ್ಟಿ ಹೊರಗೆ ಬಂದನು. ಇನ್ನು ' ಬೊಸ್ 'ಗಳ ಕ್ಯಾಬಿನ್‌ಗೆ ಮಾತ್ರ ಕೈಹಾಕುವಂತಿಲ್ಲ; ಅವರ ವಿರುದ್ಧವೇ ಇಂದು ಯುದ್ಧ ಹೂಡುವುದಿರಲಿಲ್ಲವೇ ?

ಗಂಗಾರಾಮುನಿಗೆ ಮುಂದೇನು ಮಾಡಬೇಕೆಂದು ತೋಚದಾಯಿತು. ನಿತ್ಯವೂ ೯॥ ಗೆ ಆಫೀಸಿಗೆ ಬಂದಾಗಿನಿಂದ ೧೦॥ ಗೆ ಉಳಿದವರು ಬರುವ ವರೆಗೆ, ಹೊತ್ತು ಹೇಗೆ ಹಾರಿಹೋಗುವುದೋ ಎಂದು ಅರಿವಿರದಿದ್ದ ಆತನಿಗೆ, ಈ ಹೊತ್ತು ಒಂದು ತರವಾಗಿ ತೋರತೊಡಗಿತು. ನಿಧಾನವಾಗಿ ಹೋಗಿ ತನ್ನ ಸ್ಟೂಲಿನ ಮೇಲೆ ಕುಳಿತನು.

ತನ್ನ ತಲೆ ಕೆರೆದುಕೊಳ್ಳುತ್ತಿದ್ದಂತೆ ಗಂಗಾರಾಮುನಿಗೆ ಯಾವಾಗ ಕಣ್ಣು ಮುಚ್ಚಿಕೊಂಡಿತೋ, ದೇವದಾಸ ಶಾನಬಾಗ—ಗಾಳಿಯಿಂದ ಮುಂದಾಗಿದ್ದ—ಬಾಗಿಲನ್ನು ಧಡಾರನೆ ದೂಡಿ ಒಳಗೆ ಕಾಲಿಟ್ಟಾಗಲೇ ಎಚ್ಚರಾಯಿತು. ಗಡಿಯಾರದಲ್ಲಿ ೧೦॥ ಗೆ ಐದು ನಿಮಿಷಗಳಿದ್ದುವು.

'ವ್ಹಾ, ಅಂದ್ಹಾಂಗೆ, ಈವತ್ತಿನ ಪ್ರೋಗ್ರಾಂ ಎಲ್ಲ ಅಕ್ಷರಶಃ ನಡಸ್ತಿರೋ ಹಾಗಿದೆಯಲ್ಲೋ, ಗಂಗಾರಾಮು !' ತನ್ನ ಮೇಜಿನಡಿ ನಿನ್ನೆ ಚೆಲ್ಲಿದ್ದ ಕಾಗದದ ಚೂರುಗಳನ್ನು ನೋಡುತ್ತ ದೇವದಾಸ ನುಡಿದನು. ಅವುಗಳಲ್ಲಿ ಕೆಲವು ತಾನೂ ವರ್ಮನೂ ಪ್ರಭಾ ಮಹಸ್ಕರಳ ವಿಷಯವಾಗಿ ಅದಲು ಬದಲು ಮಾಡಿಕೊಂಡ ಕೆಲವೊಂದು ಮಹತ್ತ್ವದ ಅಭಿಪ್ರಾಯಗಳನ್ನೊಳಗೊಂಡುವು ಎನ್ನುವುದು ಆತನಿಗೆ ನೆನಪಾಗತೊಡಗಿತ್ತು.

' ಮತ್ತೇನ ಮಾಡೂದ್ರಿ ? ನನ್ನೊಬ್ನಿಂದ ಎಲ್ಲಾ ಹಾಳಾಯ್ತು ಅಂತ ಅನಬಾರ್ದಲ್ಲ ಕಡೀಕ. ಅಂತೂ ಸ್ಟಾರ್ಟ್ ಮಾಡೋದ್ನ ನಕ್ಕಿ ಮಾಡಿದ್ಹಾಂಗೇ ಅಲ್ಲೇನ್ರೀ, ಶಾನಭಾಗ ಸಾಬ್ ?'

ಆದರೆ ಶಾನಭಾಗ ಸಾಹೇಬರ ಲಕ್ಷ್ಯ ಗಂಗಾರಾಮುನತ್ತ ಇರಲಿಲ್ಲ ದಾದರಿನಿಂದ ನಿತ್ಯವೂ ಆತ ಹತ್ತುತ್ತಿದ್ದ ಗಾಡಿ ತಪ್ಪಿಹೋಗಿ, ಚರ್ಚ್‌ಗೇಟ್ ನಿಲ್ದಾಣದಿಂದ ಆಫೀಸಿನವರೆಗೆ ಪ್ರಭಾ ಮಹಸ್ಕರಳೊಡನೆ ಮಾತಾಡುತ್ತ ಬರುವ ಸುಸಂಧಿ ದೇವದಾಸನಿಗೆ ಇಂದು ತಪ್ಪಿಹೋಗಿತ್ತು. ಆಕೆ ಆಗಲೇ ನಡೆದುಬಿಟ್ಟಳಲ್ಲಾ—ಎಂದು ಕೈಹಿಸುಕಿಕೊಂಡು, ಆಫೀಸಿಗೆ ಉಳಿದವರು ಬರುವ ಮೊದಲೇ ಆಕೆಯೊಡನೆ ಒಂದೆರಡು ಮಾತಾಡುವ ಮಹಾತ್ತ್ವಾಕಾಂಕ್ಷೆಯಿಟ್ಟುಕೊಂಡು, ಆತ ನಿಲ್ದಾಣದಿಂದ ಅರ್ಧ ಓಡುತ್ತಲೇ ಬಂದು ನಿರಾಶನಾಗಿದ್ದನು. ಆದರೆ ಈಗ ಆಕೆಯನ್ನು ಬಾಗಿಲಿನಲ್ಲಿ ನೋಡುತ್ತಲೇ ದೇವದಾಸನ ಹೃದಯ ಒಂದು ಸಾರಿ ಜೋರಿನಿಂದ ಹೊಡೆದುಕೊಂಡು ನಿಂತಂತಾಯಿತು. (ಅಷ್ಟೆರ್ ಅವನಿಗಂತೂ ಹಾಗೆನಿಸತೊಡಗಿತು.) ಆಕೆಯೂ ತಾನು ಬಂದಗಾಡಿಗೇ ಬಂದಿದ್ದಳು. ಅರ್ಥಾತ್ ನನಗೆ ತಪ್ಪಿಹೋದ ಗಾಡಿಯನ್ನು ತಾನೂ ತಪ್ಪಿಸಿಕೊಂಡಿದ್ದಳು !! ಅರ್ಥಾತ್ ನನಗಾಗಿ ಹಾದಿ ಕಾಯ್ದಿದ್ದಳು !!! ಅರ್ಥಾತ್..... !!!!—ದೇವದಾಸ ಇನ್ನೂ ಅರ್ಥಕ್ಕೆ ಅರ್ಥ ಹಚ್ಚುತ್ತ ವೇಳೆಕಳೆಯುವುದರಲ್ಲಿ ಮಗ್ನನಾಗಲಿಲ್ಲ. ' ಉಫ್, ಎಂಥ ಅನರ್ಥವಾಯಿತು ! ನಾನು ಗಾಡಿಯಿಂದಿಳಿದು ಬರುವಾಗ ಸ್ವಲ್ಪ ಅತ್ತಿತ್ತ ನೋಡಿದ್ದರೂ ಕಾಣದೆ ಇರುತ್ತಿರಲಿಲ್ಲ. ಹಾಳು, ಆ ಕ್ರಿಶ್ಚನ್ ಹುಡುಗಿ ಎದುರಿಗೆ ನಡೆದಿರದಿದ್ದರೆ, ನಾನಾದರೂ ಹಾಗೆ ಮಂಕನ ಹಾಗೆ ಏಕೆ ಓಡಿ ಬರುತ್ತಿದ್ದೆ ?' ತನ್ನ ಕೈವಸ್ತ್ರದಿಂದ ತನ್ನ ಕುರ್ಚಿಯನ್ನು ಒರೆಸತೊಡಗಿದ್ದ ದೇವದಾಸ, ತನ್ನ ಮೂರ್ಖತನಕ್ಕಾಗಿ ಕೈಕೊಡವಿಕೊಂಡು, ಅದರಿಂದಾಗಿ ಕೆಳಗೆ ಬಿದ್ದ ಟುವಾಲನ್ನು ಎತ್ತಿಕೊಳ್ಳುವ ಗೋಜಿಗೆ ಹೋಗದೆ ಬಾಗಿಲಿನತ್ತ ಧಾವಿಸಿದನು

' ಮಾರ್ನಿಂಗ್, ಮಹಸ್ಕರ ! ಈವತ್ತಿನ ನಮ್ಮ ಅಂಡರ್‌ಟೇಕಿಂಗಿನಲ್ಲಿ ಲೆಟ್ ಅಸ್ ವಿಶ್ ಈಚ್ ಅದರ್ ಗುಡ್ ಲಕ್ ! ನೀವು ೮-೯೦ರ ಗಾಡಿಗೆ ಬಂದಿರೇನು ?'

ಮಹಸ್ಕರ ತನ್ನ ಎಂದಿನ ಕಿಳಿನಗೆಯೊಂದಿಗೆ, ಮಹದುಪಕಾರ ಮಾಡುವಂತೆ ಸಣ್ಣ ತಲೆದೂಗುವಿಕೆಯಿಂದ ಉತ್ತರವಿತ್ತು ತನ್ನ ಮೇಜಿನತ್ತ ಬಂದು ಕುರ್ಚಿಯ ಹಿಂದಿದ್ದ ಫ್ಯಾನಿನ ಬಟನನ್ನು ಕಟ್ ಎನ್ನಿಸಿ, ಕುರ್ಚಿಯ ಮೇಲೆ ಕುಳಿತುಕೊಂಡು, ಕುತ್ತಿಗೆಯ ಕೆಳಗೆ ಬ್ಲೌಸಿನ ಸಂದಿನಲ್ಲಿಟ್ಟುಕೊಂಡಿದ್ದ ಸಿಲ್ಕ್‌ಕೈವಸ್ತ್ರವನ್ನು ತೆಗೆದುಕೊಂಡು ಹಚ್ಚಿದ್ದ ಪೌಡರು ಹಾಳಾಗದಂತೆ, ಮೋರೆ ಕುತ್ತಿಗೆಯ ತುಂಬೆಲ್ಲ ಒತ್ತಿಕೊಂಡು, ಗ್ರೇಸ್‌ಕೆಲಿ ತನ್ನ ಏಕಾಂತದ ಬಾಥ್‌ಟಬ್ಬಿನಲ್ಲಿ ಕಂಠ ಮಟ ನೀರು ತುಂಬಿಕೊಂಡು ಅದರಲ್ಲಿ ಕುಳಿತ ಭಂಗಿಯಲ್ಲಿ, ಸಮಾಧಾನದ ಉಫ್ ಗರೆದಳು ಆದರೆ ಆಚೆ ತನ್ನ (ದೇವದಾಸನ) ಮೇಜಿಗೆ ಆತುಕೊಂಡು ನಿಂತು ತನ್ನನ್ನೇ ನಿಟ್ಟಿಸುತ್ತಿದ್ದ ದೇವದಾಸನ ಅರಿವು ಆಕೆಗಿರಲಿಲ್ಲವೆಂತಲ್ಲ. ನಿಜವಾಗಿಯೆಂದರೆ ಭಗತ್-ಜೀವನಲಾಲರಲ್ಲಿ ಆಕೆಗೆ ಕೆಲಸ ಹತ್ತಿದಂದಿನಿಂದಲೂ ಕಳೆ ತುಂಬಿದ ಕಪೋಲದ ಸೊಂಡಿ ಮೂಗಿನ, ಮಾತು ಮಾತಿಗೆ ಹಿ, ಹಿ, ಹಿ ಎಂದು ನಕ್ಕು ತನ್ನ ಕಂದಿದ ಹಲ್ಲುಗಳನ್ನು ತೋರಿಸುವುದರಲ್ಲಿಯೇ ತನ್ನ ಜೀವನ ಸಾರ್ಥಕತೆಯಿದೆ ಎಂದು ಭಾವಿಸಿದ ಈ ಹೆಣ್ಣುಗಂಡಸಿನ ದೃಷ್ಟಿಯಿಂದ ತಪ್ಪಿಸಿಕೊಳ್ಳುವುದು ಶಕ್ಯವಿಲ್ಲವೆಂದು ಬಹಳ ಪ್ರಯತ್ನಗಳ ನಂತರ ಮನಗಂಡು ಪ್ರಭಾಮಹಸ್ಕರ ಕೈಬಿಟ್ಟಿದ್ದಳು. ಗ್ರೇಸ್‌ಕೆಲಿಗಾದರೂ ಅಂಥ ಪ್ರಸಂಗಗಳೆಷ್ಟೋ ಬಂದಿರಲಿಲ್ಲವೆ ? ಆದರೆ ತನ್ನ ಕೃಪಾಕಟಾಕ್ಷ ವಾಸು ಪರಾಂಜಪೆಯ ಭವಿಷ್ಯತ್ತಿನೊಡನೆ ಪಗಡೆಯಾಡುತ್ತಿದ್ದ ವಿಷಯವನ್ನು ಮಾತ್ರ—ಆಕೆ ದೇವದಾಸನ ಗಮನಕ್ಕೆ ಸಾಕಷ್ಟು ಸ್ಪಷ್ಟವಾಗಿಯೇ ತಂದುಕೊಡಲು ಸಾವಧಾನ ಮಾಡಿರಲಿಲ್ಲ. ಆದರೂ ಬಗೆಹರಿಯದ ಪ್ರಶ್ನೆಯೆಂದರೆ: ವಾಸು ಪರಾಂಜಪೆ ಮಾತ್ರ ತನ್ನ ಮುಂದೆಯೇ ನಡೆಯುತ್ತಿದ್ದ ಈ ತುಮುಲವನ್ನರಿಯದಿದ್ದುದು ಅಥವಾ ಅರಿತೂ ಅರಿಯದವನಂತೆ ವರ್ತಿಸುತ್ತಿದ್ದುದು ಇವೆರಡರಲ್ಲಿ ಯಾವುದು ನಿಜ ಎನ್ನುವುದು ತಿಳಿದರೆ, ಮುಂದಿನ ಯೋಜನೆಯೆಲ್ಲ ಸುಲಭವಾಗುತ್ತಿತ್ತು—ಎಂದು ಪ್ರಭಾ, ಎಷ್ಟೋ ಸಾರೆ ಕನ್ನಡಿಯ ಮುಂದೆ ನಿಂತುಕೊಂಡು ಹುಬ್ಬೇರಿಸಿದ್ದಳು. ಅದಕ್ಕೂ ಕಾರಣವಿಲ್ಲದಿರಲಿಲ್ಲ. ಯಾರೋ ಹೇಳಿದ್ದರು—ನಿನ್ನ ಹುಬ್ಬು ನರ್ಗೀಸಳ ಹುಬ್ಬಿನ ಹಾಗೆಯೇ ಇದೆ ಅಂತ.

ಹಾಲಿವುಡ್ಡಿನ ಯಾರಾದರೂ ತಾರೆಯ ಹೆಸರು ಹೇಳದುದರಿಂದ ಪ್ರಭಾ ಮಹಸ್ಕರಳಿಗೆ ಈ ವಿಷಯ ಅಷ್ಟೇನೂ ಮಹತ್ತ್ವದ್ದಾಗಿ ತೋರದಿದ್ದರೂ, ಅನಂತರ ಆಕೆ ನರ್ಗೀಸಳ ಒಂದೂ ಚಿತ್ರವನ್ನು ಬಿಡದಿರುವ ಮಾತು ಮಾತ್ರ ಸತ್ಯ. ಇಷ್ಟೇ ಅಲ್ಲ, ಅಂದಿನಿಂದ ವಾಸು ಪರಾಂಜಪೆ ಎದುರಿಗೆ ಬಂದಾಗಲೆಲ್ಲ ಆಕೆಯ ತುಟಿಗಳ ಮೇಲಿನ ತಿಳಿನಗೆ, ಗಲ್ಲಗಳ ಮೇಲಿನ ಕೆಂಪಿನ ಸಂಗಡ ಕಾಡಿಗೆಕಣ್ಣುಗಳ ಮೇಲಿನ (ವಾಚಕರು ಪ್ರಭಾಳ ಕಣ್ಣುಗಳ ಬಣ್ಣದ ವಿಷಯವಾಗಿ ಅಪಾರ್ಥಮಾಡಿಕೊಳ್ಳಬಾರದು. ಆಗ ಕಾಡಿಗೆ ಹಚ್ಚುತ್ತಿದ್ದಳು ಎಂದರ್ಥ.) ಆ ಹುಬ್ಬುಗಳೂ ಹೆಚ್ಚು ಕೋರೆಯಾಗ ತೊಡಗುತ್ತಿದ್ದುವು.

ಈಗಲೂ ತಾಮ್ಹಣಕರರೊಡನೆ ಆತನನ್ನು ಬಾಗಿಲಿನಲ್ಲಿ ನೋಡಿ ಆ ನಗೆ, ಆ ಕೆಂಪು, ಆ ಕೋರೆ ತಮ್ಮ ಕೆಲಸ ಮಾಡಿದ್ದುವು

ಗೋಡೆಯ ಮೇಲಿನ ವಿದ್ಯುತ್ ಗಡಿಯಾರದ ನಿಮಿಷದ ಕಡ್ಡಿ ೧೦–೨೯||ಯ ಗೆರೆಯಿಂದ ಮೂವತ್ತಕ್ಕೆ ಹಾರಿತು. ತಾಮ್ಹಣಕರರು ಈ ಆಫೀಸಿಗೆ ಬರತೊಡಗಿದಾಗಿನಿಂದಲೂ ಆ ನಿಮಿಷದ ಕಡ್ಡಿ ಹಾಗೆ ತನ್ನ ಗತಿಯನ್ನು ಬದಲಿಸುವ ಪರಿಪಾಠವಿಟ್ಟುಕೊಂಡಿತ್ತು. ದೇವದಾಸ ದೂಡಿದನಂತರ ಮತ್ತೆ ಗಾಳಿಗೆ ಮುಂದಾಗಿದ್ದ ಎಡದ ಬಾಗಿಲನ್ನು ಹಿಂದೆ ಸರಿಸಿ, ತಾಮ್ಹಣಕರ್ ಅದರ ಬಿರಡೆಯನ್ನು ಸಂದಿನಲ್ಲಿ ಸೇರಿಸುವಾಗ, ಆ ದಿನ ಗಂಗಾರಾಮ ಬೇಕೆಂತಲೇ ಅದನ್ನು ಹಾಗಿಟ್ಟಿರಬಹುದೆಂದು ಅವರು ಯೋಚಿಸಲಿಲ್ಲ. ನಿಜಹಾಗಿಯೆಂದರೆ ಆಫೀಸಿನಲ್ಲಿ ಭಗತ್ ಮತ್ತು ಜೀವನಲಾಲರು ಹೇಳಿದ ವಿಷಯಗಳನ್ನು (ಎಂದರೆ ಒಂದು ರತ್ತಲು ಕೋಬೀಜ, ಒಂದು ತೆಂಗಿನಕಾಯಿ, ಆಚೆ ಮನೆಯ ದೇವೇಂದ್ರನ್ನರ ಮಗನ ಹುಟ್ಟುಹಬ್ಬವಾಗುತ್ತದಲ್ಲ ನಾಳೆ–ಆಗ ಕೊಡಲಿಕ್ಕೆಂದು ಒಂದು ಸ್ಟೇನಲೆಸ್ ಸ್ಟೀಲ್ ತಟ್ಟೆ ಎರಡು ರೂಪಾಯದ್ದು, ಮುಂ.) ಬಿಟ್ಟರೆ, ತಾಮ್ಹಣಕರರು ಜೀವನದಲ್ಲಿ ಏನನ್ನಾದರೂ ಕುರಿತು ವಿಚಾರ ಮಾಡಿದ್ದರೆಂದಾಗಲಿ, ಮಾಡುವುದವಶ್ಯವೆಂದು ತಿಳಿದಿದ್ದರೆಂದಾಗಲಿ ಹೇಳುವುದು ತಪ್ಪಾಗುವುದು. ನಿನ್ನೆಯೂ ಆಫೀಸಿನ ತರುಣ ಕೆಲಸಗಾರರೆಲ್ಲ 'ತಾಮ್ಹಣಕರ್, ನಾಳೆ ಆಫೀಸಿಗೆ ಬಂಡಲ್. ಬಡ್ಡೀಮಕ್ಕಳಿಗೆ ನಮಗೂ ಒಂದು ದಿನ ರಜೆ ಕೊಡಲಿಕ್ಕೆ ಏನಾಗುತ್ತದೆ?' ಎಂದು ಹೇಳಿದಾಗ, ತಾಮ್ಹಣಕರರು ಯಾವ ಕುತೂಹಲ–ಉತ್ಸಾಹವನ್ನೂ ತೋರಿಸದೆ 'ಹುಂ, ನೀವೆಲ್ಲ ಕೆಲಸಮಾಡದಿದ್ದರೆ ನಮಗೂ ರಜಾ ಆಯಿತಲ್ಲ. ನಾನೇನು ಬಿಳೇ ಕಾಗದದ ಮೇಲೆ ಸಹಿ ಹಾಕಬೇಕೆ?' ಎಂದುಬಿಟ್ಟಿದ್ದರು. ಅದರಿಂದಾಗಿ ಸಂಪಿನ ಬಗ್ಗೆ ಅವರ ಅಭಿಪ್ರಾಯ ಏನಿದೆಯೆಂದು ಯಾರಿಗೂ ಅರ್ಥವಾಗದಿದ್ದರೂ, ತಾಮ್ಹಣಕರ ತಮ್ಮ ಯೋಜನೆಗೆ ವಿರುದ್ಧವಿಲ್ಲ—ಎಂದು ಸರ್ವಾನುಮತದಿಂದ ಅಂಗೀಕೃತವಾಗಿತ್ತು.

ಮರದ ನಾಲಗೆಯಾಗಿದ್ದರೆ ಒಡೆದುಹೋಗುತ್ತಿತ್ತು ಅನ್ನುತ್ತಾರಲ್ಲ—ಅದು ವಾಸು ಪರಾಂಜಪೆಯ ವಿಷಯವಾಗಿ ನೂರಕ್ಕೆ ನೂರು ಅಂಶ ಅನ್ವಯಿಸುತ್ತದೆ. ತಾಮ್ಹಣಕರರು ಬಾಗಿಲುತೆರೆದು ಅದರ ಬಿರಡೆಯನ್ನು ಸೇರಿಸುತ್ತಿದ್ದಂತೆ, ಪರಾಂಜಪೆ ಕಳೆದ ಎರಡು ನಿಮಿಷಗಳಿಂದ ಹೇಳುತ್ತಿದ್ದ ಬ್ಯಾಂಕ್ ಎವಾರ್ಡಿನ ವಿಷಯವನ್ನು ಮುಗಿಸಿ, ತಾಮ್ಹಣಕರರು ಗ್ಯಾಬಿಲನೆಯ ಇಪ್ಪತ್ತಯಂಥ ವರ್ಷದಲ್ಲಿಯೂ ರತ್ನಾಗಿರಿಯಿಂದ ಮುಂಬಯಿಗೆ ಬಂದು ಕೆಲಸ ಹಿಡಿದ ಅದ್ಭುತ ಚಮತ್ಕೃತಿಯ ಬಗ್ಗೆ ವಿಚಾರಿಸತೊಡಗಿದ್ದನು ಆದರೆ ತಾಮ್ಹಣಕರರು ಗಂಗಾರಾಮನನ್ನು ಒದರುತ್ತ ತಮ್ಮ ಕೋಣೆಯತ್ತ ನಡೆದುಬಿಟ್ಟದ್ದರಿಂದ, ಪರಾಂಜಪೆ ಹಿಂದೆ ಬರಹತ್ತಿದ ಮಹೇಂದ್ರವರ್ಮನತ್ತ ತನ್ನ ವಾಗ್ಝರಿಯನ್ನು ಹರಿಸಬೇಕಾಯಿತು :

'ಈವತ್ತಿನ ಫ್ರೀ ಪ್ರೆಸ್ ಓದಿದೆಯೇನು ಮಿ. ವರ್ಮಾ? ನೆಹ್ರೂನ ಪಂಚಶೀಲವೆಲ್ಲ ಏನಾಯಿತು? ಇನ್ನೆಂಟು ದಿನಗಳಲ್ಲಿ ಇಂಡೋ–ಪಾಕಿಸ್ತಾನ್ ಯುದ್ಧವಾಗದಿದ್ದರೆ ಹೇಳು. ಏನು ಬೆಟ್ಟು ಕಟ್ಟುತ್ತಿ?'

ಆದರೆ ವರ್ಮಾ, ಬೆಳಗ್ಗೆ ಎದ್ದು ಪೇಪರುಗಳಲ್ಲಿನ ಸಣ್ಣಕ್ಷರಗಳನ್ನು ಓದಿ ಕಣ್ಣು ಹಾಳುಮಾಡಿಕೊಳ್ಳುವುದಕ್ಕಿಂತ, ಹಾಸಿಗೆಯ ಮೇಲೆ ಅಡ್ಡಾಗಿ ಸಿಗರೇಟು ಹಚ್ಚಿಕೊಂಡು, ಮಾಡಿನ ಮೇಲಿನ ಜೇಡ ಹುಳುಗಳ ಕಾರ್ಯಕ್ರಮಗಳನ್ನು ಪರಿಶೀಲಿಸುವುದು ಹೆಚ್ಚು ಮನರಂಜಕ–ಎನ್ನುವವರಲ್ಲಿ ಒಬ್ಬನಾಗಿದ್ದನು. ಮೇಲಾಗಿ, ಆದೆಷ್ಟೋ ಸಾರೆ ಪರಾಂಜಪೆಯೊಡನೆ ಜಿದ್ದು ಕಟ್ಟಿದಾಗಲೆಲ್ಲ, ತಾನೇ ಗೆದ್ದ ಕೆಲ ಪ್ರಸಂಗಗಳಲ್ಲಿಯೂ ಅದು ಹೇಗೋ ಪರಾಂಜಪೆ ತನ್ನಿಂದಲೇ ಚಹಾ, ಕೇಕುಗಳನ್ನು ಗಿಟ್ಟಿಸುವ ಸಂಗತಿ, ತಿಂಗಳ ಕೊನೆಗೆ ಲೆಕ್ಕ ಕೂಡಿಸುವಾಗ ವರ್ಮನಿಗೆ ಅರಿವಾಗುತ್ತಿತ್ತು. ಅಂತೆಯೇ ಸ್ವಭಾವತಃ ಮಿತಭಾಷಿಯಾದ್ದರಿಂದಲೋ, ಅಥವಾ ಪರಾಂಜಪೆಯೊಡನೆ ಮಾತಾಡುವಾಗ ಬಹಳ ಎಚ್ಚರಿಕೆಯಿಂದಿರಬೇಕೆಂದು ನಿರ್ಧರಿಸಿದ್ದರಿಂದಲೋ, ವರ್ಮಾ ಮಿತ್ರನ ಮಾತಿಗೆ ಉತ್ತರವಾಗಿ ಹೂಂ? ಹಾಂ! ಎಂದು ಹಲ್ಲುಕಿರಿದು "ಹಾಗಾದರೆ ಈಹೊತ್ತು ಸ್ಟ್ರೈಕ್ ಮಾಡುವುದಂತೂ ನಿಶ್ಚಯಿಸಿದಂತಾಯಿತಲ್ಲವೇ?' ಎಂದು, ಪರಾಂಜಪೆಯ ಇನ್ನೊಂದು ಬದಿಯ ಕಿವಿಗೆ ತನ್ನ ಮಾತು ಕೇಳಿದರೂ ಎಲ್ಲಿ ಘಾತವಾಗಿ ಬಿಡುವುದೋ ಎನ್ನುವ ದನಿಯಲ್ಲಿ ಕೇಳಿದನು

'ಒಫ್‌ಕೋರ್ಸ್. ಆದರಲ್ಲಿಯೂ ನಿನಗೆ ಸಂಶಯವೆ? ಮೊನ್ನೆ ಮೆಥಾ–ಪೆಟರ್ಸನ್ ಮಿಲ್ಲಿನ ಸ್ಟ್ರೈಕ್ ಕೇಸಿನಲ್ಲಿ, ಕಡೆಗೂ ವರ್ಕರ್ಸಿಗೇ ಜಯ ಆಯಿತಲ್ಲ, ಓದಲಿಲ್ಲವೆ?— ಈ ಸರಕಾರ ಅಷ್ಟಿಷ್ಟಾಗೇ ದಾರಿಗೆ ಬರುತ್ತಿದೆ ಎಂದು ನಾನು ಹೇಳಿರಲಿಲ್ಲವೆ? ನಾನೊಂದು ಮಾತು ಹೇಳಲೆ, ಮಿ. ವರ್ಮಾ?'— ಪರಾಂಜಪೆ ವರ್ಮನ ಹೆಗಲ ಮೇಲೆ ಕೈಯಿಟ್ಟು ತನ್ನ ಕುರ್ಚಿಯತ್ತ ಹೋಗಲಿದ್ದ ಅವನನ್ನು ನಿಲ್ಲಿಸಿಕೊಂಡು, ಯಾವನೊಬ್ಬ ರಾಜಕಾರಣಿಯು ಮಹತ್ತ್ವದ ಪೊಲಿಸಿ ಸ್ಟೇಟಮೆಂಟ್ ಒಂದನ್ನು ತನ್ನ ಮಿತ್ರ ಪತ್ರಿಕಾಕರ್ತನಿಗೆ ತಿಳಿಸುವ ರೀತಿಯಲ್ಲಿ ನುಡಿದನು:— "ನೋಡು, ನಾನೇನೂ ಕೆಪಿಟಾಲಿಜಂ ಬೇಡ ಎನ್ನುವುದಿಲ್ಲ. ಅಥವಾ ರಷ್ಯಾದಂಥ ಕ್ರಾಂತಿಯಿಂದ ಎಲ್ಲರಿಗೂ ಲಾಭವಾಗುತ್ತದೆ ಎನ್ನುವುದಕ್ಕೂ ಮತಕೊಡುವವನಲ್ಲ. ಆದರೂ ಯಾವುದಕ್ಕಾದರೂ ಒಂದು ಮಿತಿ ಬೇಡವೆ? ಈಗ ನಮ್ಮ ಫರ್ಮನ್ನೇ.... ..."

‘ಕೆಪಿಟಾಲಿಸಂ ಬಗ್ಗಾಗಿಯಾಗಲಿ, ರಷ್ಯಾದಲ್ಲಿ ಕ್ರಾಂತಿಯಾಗಿದೆ ಎನ್ನುವ ವಿಷಯವಾಗಲಿ ಬಹಳಷ್ಟು ತಿಳಿಯದಿದ್ದ ವರ್ಮಾನಿಗೆ ಯಾವುದಕ್ಕೆ ಮಿತಿಬೇಕು—ಎನ್ನುವುದು ಅರ್ಥವಾಗದ್ದರಿಂದ, ಆತ ‘ಯು ಆರ್ ಕರೆಕ್ಟ್’ ಎಂದು ಒಂದೇ ಮಾತಿನಲ್ಲಿ ಪರಾಂಜಪೆ ಹೇಳಿದ—ಹೇಳಲಿರುವ—ಅಭಿಪ್ರಾಯಗಳನ್ನೊಪ್ಪಿಕೊಂಡು, ತನ್ನ ಮೇಜಿನ ಡ್ರಾದಿಂದ ನೀರಿನ ಗ್ಲಾಸನ್ನೆತ್ತಿಕೊಂಡು ಅತ್ತ ನಡೆದನು.

ಅಷ್ಟರಲ್ಲಿ ಮಿಸೆಸ್ ರೊಡ್ರಿಗ್ಸ್ ಬಾಗಿಲಲ್ಲಿ ವಝಿರಾಣಿಯ ಹೆಗಲ ಮೇಲೆ ಕೈಯಿಟ್ಟುಕೊಂಡು ಬರುತ್ತ ‘ಹಲ್ಲೋ ಎವ್ವರಿಬಡಿ’ ಎಂದು ಕೂಗುಟ್ಟಿದಳು. ಇವರಿಬ್ಬರೂ ಬಸ್ಸಿನಿಂದ ಬರುವವರಾದ್ದರಿಂದ ಯಾವಾಗಲೂ ಕೂಡಿ, ಯಾವಾಗಲೂ ತಡಮಾಡಿ, ಆದರೂ ತಡವಾದ ಬಗ್ಗೆ ತಾವ್ಯಾರುಕರರು ಆತಂಕಮಾಡದಷ್ಟು, ಬೇಗನೆ ಬರುವ ಪದ್ಧತಿ ಇಟ್ಟುಕೊಂಡಿದ್ದರು. ಮೇಲಾಗಿ ರೊಡ್ರಿಗ್ಸ್ ಆಫೀಸಿನ ಎಲ್ಲರಿಗೂ ‘ಪೆಟ್’ ಆಗಿದ್ದಳು. ಪರಾಂಜಪೆಯಂತೂ ಆಕೆಯನ್ನು ‘ವೈನಿ’ ಎಂತಲೇ ಕರೆದು, ಆಕೆಗೂ ಅದು ಅಹಿತವಲ್ಲ ಎಂದು ಕಂಡುಕೊಂಡಿದ್ದನು. ಯಾರಿಗೆ ಏನಾದರೂ, ಅವರ ಸುಖ-ದುಃಖ, ಆತಂಕ, ತೊಡಕುಗಳ ವಿಷಯವನ್ನು ಗಂಭೀರವಾಗಿ ಕೇಳಿಕೊಂಡು, ನಾಲ್ಕು ಅನುಕಂಪದ ಶಬ್ದಗಳಿಂದ ಅವರನ್ನು ಸಮಾಧಾನಗೊಳಿಸುವ ಆಕೆಯ ಸಹಜ ಪ್ರೇಮಲ ವ್ಯಕ್ತಿತ್ವವೇ ಆಕೆಯ ಲೋಕಪ್ರಿಯತೆಗೆ ಕಾರಣವಾಗಿತ್ತು. ಪ್ರಭಾ ಮಹಸ್ಕರ್ ತನಗೆ ಸಿನೆಮಾ ಅಪಾಯಿಂಟ್‌ಮೆಂಟ್ ಕೊಟ್ಟು ತಪ್ಪಿಸಿಕೊಂಡ ವಿಷಯವಾಗಿ ದೇವದಾಸ ಗೋಗರೆಯ ತೊಡಗಿದರೆ, ‘ಡೋಂಟ್ವರಿ, ಆಕೆ ಸ್ವಲ್ಪ ಚಂಚಲ ಅಷ್ಟೆ. ನೀನು ಕಾಯಬೇಕು’ ಎನ್ನುತ್ತಿದ್ದಳು. ಪ್ರಭಾ ತಾನು ಯಾರಿಗೂ ತಿಳಿಯದಂತೆ ವಾಸುವನ್ನು ಪ್ರೀತಿಸುತ್ತಿದ್ದ ಸಂಗತಿಯನ್ನು ಹೇಳಬಂದಾಗಲೂ ‘ಲಕಿ ಗರ್ಲ್. ನಾನು ಹೇಳಲೆ ಮಿಸ್ಟರ್ ಪರಾಂಜಪೆಗೆ?’ ಎಂದು ಕೇಳಿ ‘ಓ ನೋ! ನೆವ್ವರ್! ವಚನಕೊಡು. ನನ್ನಾಣೆ’ ಎಂದು ಪ್ರಭಾ ಸುಳ್ಳು ಅಂಜಿಕೆ ವ್ಯಕ್ತಪಡಿಸತೊಡಗಿದಾಗ ‘ಆಲ್ ರ್ಯಾಟ್’ ಎಂದು ನಕ್ಕು ಆಕೆಯ ಗಲ್ಲ ಹಿಂಡುವಳು.

ಮಿಸ್ ವಝಿರಾಣಿಯ ವಿಷಯ ಮಾತ್ರ ಬೇರೆ. ಆಕೆ ತನ್ನಷ್ಟು ‘ಸೆಕ್ಸ್ ಎಪೀಲ್’ ಯಾರಿಗೂ ಇಲ್ಲವೆಂದು ತನ್ನಷ್ಟಕ್ಕೇ ತಿಳಿದುಕೊಂಡು ಯಾವಾಗಲೂ ಪಾರದರ್ಶಕ ರೆಯಾನ್ ಸೀರೆಯಲ್ಲಿಯೇ ನಿಮಿಷಕ್ಕೆ ಹದಿನೆಂಟುಸಾರೆ ಹೆಗಲ ಮೇಲಿಂದ ಜಾರುವ ಸೆರಗನ್ನು ಸರಿಪಡಿಸಲು ಯತ್ನಿಸುತ್ತ, ತಿಂಗಳಿಗೆ ಐದೈದು ಪೌಂಡಿನಂತೆ ಭೂಭಾರವನ್ನು ಹೆಚ್ಚಿಸುತ್ತ ಓಡಾಡುತ್ತಿದ್ದಳು. ಈ ‘ಹದಿನೆಂಟು’ ಅಂಕೆಯನ್ನು ಹೀಗೆಯೇ ಬರೆದುದಲ್ಲ. ವಾಸು ಪರಾಂಜಪೆ ಒಂದು ದಿನ ವರ್ಮಾನ ವಾಚನ್ನು ಕೈಯಲ್ಲಿಟ್ಟುಕೊಂಡು, ಹತ್ತು ನಿಮಿಷ ಆಕೆಯನ್ನು ಎಡೆಬಿಡದೆ ‘ಅಭ್ಯಾಸ’ ಮಾಡಿ ಈ ಶೋಧವನ್ನು ಮಾಡಿದ್ದನು. ಸಂಗಡಲೇ ಮತ್ತೂ ಒಂದೆರಡು ಸಂಗತಿಗಳೂ ವಾಸುವಿನ ಗಮನಕ್ಕೆ ಬಂದಿದ್ದುವು. ‘ಮಿಸ್ಟರ್ ವರ್ಮಾ, ನೀನು ಆಕೆಯ ಬ್ರೆಸ್ಟನ್ನು ನೋಡಿದಿಯೇನು? ದಿನದಿನಕ್ಕೆ ಅದರ ಆಕಾರ, ಅಳತೆ ಬದಲಾಗುತ್ತಿರುತ್ತದೆ. ಅದೆಲ್ಲ ಕಟ್ಟಿಕೊಂಡ ಕರ್ಚೀಫ್‌ಗಳ ಮೇಲೆ ಅವಲಂಬಿಸಿರುತ್ತದೆ’ ಎಂದು ತನ್ನ ಸ್ಪಷ್ಟೀಕರಣ ಕೊಟ್ಟು ‘ಹಾಂ? ಹೂಂ! ಓ ಯಸ್. ಆಕೆಗೆ ಕೇಳಿಸಿತೇನೋ ಮಿಸ್ಟರ್ ವ್ಹಾಟ್ ನೊನ್ಸೆನ್ಸ್’ ಎಂದು, ಆಕೆಗೆ ವಾಸುವಿನ ಮಾತು ಕೇಳಿದ್ದರೆ ವ್ಯಕ್ತಪಡಿಸಬಹುದಾದುದಕ್ಕಿಂತಲೂ ಹೆಚ್ಚಿನ ನಾಚಿಕೆಯನ್ನು ವರ್ಮಾನ ಮೋರೆಯ ಮೇಲೆ ನೋಡಿ, ಪರಾಂಜಪೆ ಹೊಟ್ಟೆತುಂಬ ನಕ್ಕಿದ್ದನು. ತಾನು ಕುಳಿತಲ್ಲಿಂದ ಐದು ನಿಮಿಷಕ್ಕೊಮ್ಮೆ ಸುತ್ತಲೂ ನೋಡಿ, ಯಾರದಾದರೂ ದೃಷ್ಟಿ ತನ್ನೆಡೆ ಇದ್ದರೆ ಮಂದಹಾಸ ಬೀರುವುದಷ್ಟಕ್ಕೇ ತನ್ನ ಆಫೀಸುಕೆಲಸದ ಪರಿಮಿತಿ ಇದೆ—ಎಂದು ಆಕೆ ತಿಳಿದುಕೊಂಡ ವಿಷಯ ಎಲ್ಲರಿಗೂ ತಿಳಿದಿತ್ತು. ಆಕೆ ಜೀವನಲಾಲನ ‘ವಶೀಲಿ’ಯ ಮೇಲೆ ಬಂದವಳು ಎಂದೂ, ಜೂನಿಯರ್ ಪಾರ್ಟ್ನರ್ ಭಗತ್‌ನೊಡನೆ ಒಂದೆರಡು ಸಾರೆ ಮೆಟ್ರೋದ ಹತ್ತಿರವೋ, ಮರಿನ್ ಡ್ರ್ಯೈವ್‌ದ ಮೇಲೋ ನೋಡಿದಂತಾದುದರ ಬಗ್ಗೆ ಅವರಿವರು ಮಾತಾಡುತ್ತಿದ್ದುದರಲ್ಲಿಯೂ ಸತ್ಯವಿಲ್ಲದಿರಬಹುದು. ದೇವದಾಸ ಮಾಡಲು ಕೆಲಸವಿಲ್ಲದ ದಿನ ಆಕೆಯ ತುಂಬುಗಲ್ಲಗಳನ್ನು ನೋಡುತ್ತ ಏನೇನೋ ಯೋಚಿಸಿಕೊಂಡು, ಆಕೆಯನ್ನು ಯಾವ ಮ್ಯಾಟನಿಗೆ ಕರೆಯಬಹುದು—ಎಂದು ನಿಶ್ಚಯಿಸುವಷ್ಟರಲ್ಲಿ, ಪ್ರಭಾ ಮಹಸ್ಕರಳ ನೆನಪಾಗಿ ‘ನಿನ್ನ ಏಕಪತ್ನೀ ವ್ರತಕ್ಕೆ ಧಿಕ್ಕಾರವಿರಲಿ!’ ಎಂದು ತನ್ನಷ್ಟಕ್ಕೇ ಅಂದುಕೊಂಡಿದ್ದನು.

ವಾಚಕರಿಗೆ ಇಲ್ಲಿ ವೇಳೆಯ ವಿಷಯವಾಗಿ ಒಂದು ಎಚ್ಚರಿಕೆ ಕೊಡುತ್ತೇನೆ. ಇದನ್ನೆಲ್ಲ ಓದುವಾಗ ನಿಮಗೆ ಕೆಲ ನಿಮಿಷಗಳಾದರೂ ಹತ್ತಿರಬಹುದು; ಆದರೆ ಭಗತ್-ಜೀವನಲಾಲ ಡಿಸ್ಟ್ರಿಬ್ಯೂಟಿಂಗ್ ಏಜನ್ಸಿ ಆಫೀಸಿನಲ್ಲಿ ಕೆಲಸದ ಕಾಲ ಆರಂಭವಾಗಿ, ಅಂದರೆ ೧೦|| ಆಗಿ ನಾಲ್ವತ್ತೆರಡು ಸೆಕಂದುಗಳಷ್ಟೇ ಆಗಿದ್ದುವು. ಎಲ್ಲರೂ ತಮ್ಮ ತಮ್ಮ ಸ್ಥಳಗಳಲ್ಲಿ ಕುಳಿತರು; ಆದರೆ ಗಂಗಾರಾಮನ ಮುಂದಾಲೋಚನೆಯಿಂದಾಗಿ ಯಾರ ಮೇಜುಗಳ ಮೇಲೆಯೂ ಫೈಲುಗಳಿರಲಿಲ್ಲ. ರೊಡ್ರಿಗ್ಸಳ ಟೈಪ್‌ರ್ಯಾಟರಿನ ಪೆಟ್ಟಿಗೆಯೂ ತೆರೆದಿರಲಿಲ್ಲ. ಕುಳಿತವರಿಗೆಲ್ಲ ಒಂದು ಸಾರೆ—ಒಂದೆರಡು ಕ್ಷಣಗಳ ವರೆಗೆ ಮಾತ್ರ ಒಂದು ರೀತಿಯ ಶೂನ್ಯದ ಅನುಭವವಾಗತೊಡಗಿತು. ಯಾರಿಗೂ ಬೇಡವಾದ ನೀರವತೆ ಹಬ್ಬಿಕೊಂಡಿತು. ಕಟ್ಟಕಡೆಗೆ ವಾಸು ಪರಾಂಜಪೆ ಗಂಟಲು ಖೇಕರಿಸಿಕೊಂಡು, ಸಭೆಯಲ್ಲಿ ಮಾತಾಡುವಂತೆ ಮಾತಾಡುವ ಯತ್ನ ಮಾಡಹೋಗಿ, ದನಿಯನ್ನು ಗೊಗ್ಗರು ಮಾಡಿಕೊಂಡು ನುಡಿದನು:

‘ವೆಲ್, ಹೀಗೆಯೇ ಕುಳಿತುಬಿಟ್ಟರೆ ಕೆಲಸವಾಗುವುದಿಲ್ಲ ‘ಬಾಸಸ್’ ಬರುವುದರೊಳಗೆ ಅವರಿಗೆ ಏನು ಹೇಳಬೇಕೆಂದು ಎಲ್ಲರೂ ಕೂಡಿ ನಿಶ್ಚಯಮಾಡಬೇಕು. ಒಬ್ಬರಿಗೊಬ್ಬರು ವಿರುದ್ಧ ಹೇಳಬಾರದಲ್ಲ! ಎಲ್ಲರೂ ಒಂದೆಡೆ ಬಂದರೆ ಮಾತಾಡಲು ಅನುಕೂಲವಾಗುವುದು.’

ಕುಳಿತವರೆಲ್ಲರೂ ಯಾರಿಂದಲೋ ಅಪ್ಪಣೆಪಡೆದವರಂತೆ ಗಡಬಡಿಸಿಕೊಂಡೆದ್ದರು. ಪರಾಂಜಪೆ ಕುಳಿತಲ್ಲಿಯೇ ವರ್ಮಾ ಮತ್ತು ರೊಡ್ರಿಗ್ಸಳ ಮೇಜುಗಳೂ ಸೇರಿಕೊಂಡು ಅನುಕೂಲವಾಗಿದ್ದುದರಿಂದ, ಎಲ್ಲರೂ ಮೊದಲೇ ಮಾತಾಡಿಕೊಂಡವರಂತೆ ಅತ್ತ ಸರಿದರು. ಗಂಗಾರಾಮ ವಝಿರಾಣಿಯ ಕುರ್ಚಿಯನ್ನು ತರಲು ನಡೆದನು. ಪ್ರಭಾ

ಮಹಸ್ಕರ ಮೇಜಿನಮೇಲಿಂದ ತನ್ನ ಕರಚೀಫನ್ನು ಎತ್ತಿಕೊಂಡು ಏಳುವಷ್ಟರಲ್ಲಿ, ಆಕೆಯೇ ತನ್ನ ಕುರ್ಚಿಯನ್ನೆತ್ತಲು ಯತ್ನಿಸಹೋಗಿ ಎಲ್ಲಿ ಕೈಕಾಲು ಮುರಿದುಕೊಳ್ಳುವಳೋ ಎಂದು ಗಾಬರಿಯಾದವನಂತೆ, ಎತ್ತಿದ್ದ ತನ್ನ ಕುರ್ಚಿಯನ್ನು ಹಾಗೆಯೇ ಚೆಲ್ಲಿ "ಎಲೋ ಮಿ. (ನನಗೆ ಬಿಡಿರಿ.) ನಾನದನ್ನು ಒಯ್ಯುತ್ತೇನೆ" ಎನ್ನುತ್ತ ದೇವದಾಸ ಅತ್ತ ಧಾವಿಸಿದನು. ಮಹಸ್ಕರ ಎದ್ದವಳು, ಆತ ತನ್ನ ಕುರ್ಚಿಯನ್ನು ತರುವ ಮೊದಲೇ—ಗಂಗಾರಾಮ ವಾಸುವಿನ ಮೇಜಿನೆದುರು ಇಟ್ಟಿದ್ದ ಕುರ್ಚಿಯೊಂದರ ಮೇಲೆ ಬಂದು ಕುಳಿತುಬಿಟ್ಟಳು. ದೇವದಾಸ ಆಕೆಯ ಕುರ್ಚಿಯನ್ನೆತ್ತಿಕೊಂಡು ಬಂದವನು, ಪೆಚ್ಚುಮೋರೆ ಮಾಡಿಕೊಂಡು ಅವನ್ನಿಡಲು ಜಾಗ ಹುಡುಕುವವನಂತೆ ಅತ್ತಿತ್ತ ನೋಡಿ, ತನ್ನತ್ತ ನೋಡಿ ಯಾರೂ ನಗುತ್ತಲಿಲ್ಲ ಎನ್ನುವುದನ್ನು ಖಾತ್ರಿ ಮಾಡಿಕೊಂಡು, ಪ್ರಭಾಳ ಪಕ್ಕದಲ್ಲಿಯೇ ಪೆಡಸ್ಟಲ್ ಫ್ಯಾನ್ ಇದ್ದುದರಿಂದ ನಿರುಪಾಯನಾಗಿ ಅದರ ಹಿಂದೆ ಕುರ್ಚಿಯನ್ನಿಟ್ಟು ಕುಳಿತು-ಕೊಂಡನು. ಮಣಿರಾಣಿ, ವರ್ಮಾನ ಮೇಜಿಗೆ ತಾಗಿ ಗಂಗಾರಾಮ ಇಟ್ಟಿದ್ದ ದೇವದಾಸನ ಕುರ್ಚಿಯ ಮೇಲೆ ಕುಳಿತುಕೊಂಡು, ಆತನ ಕೆಂಪಾಗುತ್ತಿದ್ದ ಮೋರೆಯನ್ನು ನೋಡಿ ಸಮಾಧಾನದಿಂದ ಎಂಬಂತೆ ಉಸಿರುಗರೆದು ಪಿಸುಗುಟ್ಟಿದಳು:

'ಈ ಹೊತ್ತು ಸ್ವಲ್ಪ ತಡಮಾಡಿ ಬಂದಿದ್ದರೂ ನಡೆಯುತ್ತಿತ್ತು ಅಲ್ಲವೆ?'

ತಾನು ನೋಡಿದಾಗಲೆಲ್ಲ ನವವಧುವಿನಂತೆ ಮೋರೆ ಕೆಳಗೆ ಹಾಕುತ್ತಿದ್ದ ಈ 'ಪ್ರಾಣಿ'ಗಾಗಿ ಮಣಿರಾಣಿಯ ಹೃದಯ ಇತ್ತಿತ್ತ ಬಹಳ ಮಿಡಿಯತೊಡಗಿತ್ತು. ಇಂಥವನೊಡನೆ ಆಗೀಗ ಸ್ವಲ್ಪ 'ಪ್ರೇಮ ವ್ಯವಹಾರ' ಮಾಡುವುದು ಅಷ್ಟೇನೂ ಅಪಾಯಕರವಲ್ಲ! ಆದರೆ ಆತ ಮಾತ್ರ ತನ್ನ ಜೀವಮಾನದಲ್ಲೆಲ್ಲ ತನ್ನ ಅಳಿದುಹೋದ ಬ್ರಹ್ಮಚರ್ಯಕ್ಕಾಗಿ ಅಳುತ್ತ ಕೂಡ್ರಬಹುದು—ಎಂದು ಮಣಿರಾಣಿ ತನ್ನಷ್ಟಕ್ಕೆ ನಕ್ಕಿದ್ದಳು. ಆದರೂ ಒಮ್ಮೆ ಏನಾದರೂ ನೆವದಿಂದ ಆತನನ್ನು 'ಬೀಚ್ ಕೆಂಡಿ'ಗೆ ಕರೆದೊಯ್ದು, ಇನ್ನೂ ಬೆಳಕಿದ್ದಾಗಲೇ 'ಮಿಸ್ಟರ್ ವರ್ಮಾ, ನಿಮಗೆ ಹಾಗೆನಿಸಿದರೆ ಒಮ್ಮೆ ಬೇಕಾದರೆ ಮುತ್ತು ಕೊಡಬಹುದು!' ಎಂದು ಹೇಳಿ, ಆತನ ಮೋರೆಯನ್ನು ನೋಡಬೇಕು—ಎಂದು ಆಕೆ ಬಹಳ ದಿನಗಳಿಂದಲೂ ಲೆಕ್ಕಹಾಕಿಕೊಂಡಿದ್ದಳು.

ವರ್ಮಾ ಆಕೆಯ ತಲೆ, ಮೋರೆಯ ಮೇಲಿಂದ ಬರುತ್ತಿದ್ದ ಅತ್ತರು—ಪೌಡರಿನ ಸುವಾಸನೆಯಲ್ಲಿ ಬಾಹ್ಯಪ್ರಪಂಚವನ್ನು ಮರೆತವನು, ಆಕೆಯ ಮಾತಿನಿಂದ ಗಡಬಡಿಸಿಕೊಂಡೆದ್ದು 'ಹಾಂ? ಓಯೆಸ್! ಮಾತ್ರ ೧೦|| ಆಯಿತು' ಎಂದು ಗಡಿಯಾರದತ್ತ ಆಕೆಯ ಲಕ್ಷ್ಯವನ್ನು ಸೆಳೆದನು, ಇನ್ನಾದರೂ ಹಿಂತಿರುಗಿ ಹೋಗಿ ಆಗಿಹೋದ ತಪ್ಪನ್ನು ಸುಧಾರಿಸಿಕೊಳ್ಳಬಹುದು—ಎಂದು ಸೂಚಿಸುವವನಂತೆ

ರೊಡ್ರಿಗ್ಸ್‌ಳಿಗೆ ಮುಂದಿನ ತಿಂಗಳು ನಾಲ್ಕು ವಾರಗಳ ರಜೆ ಬೇಕಾಗಿತ್ತು. ಆಕೆಯ ಗಂಡನೂ ಆಕೆಯೂ ಒಂದು ಸಾರೆ ಕಾಶ್ಮೀರಕ್ಕೆ ಹೋಗಿ ಬರಬೇಕೆಂದು ಬಹಳ ವರ್ಷಗಳಿಂದ ಯೋಜನೆ ಮಾಡುತ್ತ ಬಂದಿದ್ದರು. ಒಬ್ಬರಿಗೆ ರಜೆ ಸಿಕ್ಕ ವರ್ಷ ಇನ್ನೊಬ್ಬರಿಗೆ ಸಿಗುತ್ತಿರಲಿಲ್ಲ. ಇಬ್ಬರಿಗೂ ಸಿಕ್ಕ ವರ್ಷ ಮತ್ತೇನಾದರೂ ಆಪತ್ತು ಬಂದಿರುತ್ತಿತ್ತು. ಈ ಸಾರೆ ಮಾತ್ರ ಎಲ್ಲವೂ ಕೂಡಿಬಂದಿತ್ತು. ಈಗೆಂಟು ದಿವಸಗಳ ಹಿಂದೆಯೇ, ಜೀವನಲಾಲ 'ಸಾಬ'ರು ಒಳ್ಳೇ 'ಮೂಡ್'ನಲ್ಲಿರುವಾಗ, ರಜೆಯ ಪ್ರಸ್ತಾಪಮಾಡಿ 'ಹುಂ, ನೋಡುವ' ಎನ್ನುವಷ್ಟರ ಆಶ್ವಾಸನೆಯನ್ನಾಕೆ ಪಡೆದಿದ್ದಳು ಇದೀಗ ಇಂದಿನ ಪ್ರಸಂಗ ಅವಕ್ಕೆಲ್ಲ ಚಕ್ರ ತರಲಿಕ್ಕಿಲ್ಲವಲ್ಲ—ಎಂದು ಆಕೆಯ ಚಿಂತೆಯಾಗಿತ್ತು.

ಪ್ರಭಾ ಮಹಸ್ಕರ ಆಗಾಗ್ಗ ವಾಸುವಿನತ್ತ ಹುಬ್ಬೇರಿಸುತ್ತ 'ಈ ಗುಂಪಿನಲ್ಲಿ ತಲೆಗಟ್ಟಿಯಾಗಿಟ್ಟುಕೊಂಡು, ಇಂಥ ಕಠಿನ ಪ್ರಸಂಗಗಳಲ್ಲಿ ದಾಟಿಹೋಗುವ ಉಪಾಯ ಹುಡುಕಿ ಯಶಸ್ವಿಯಾಗಲು ಶಕ್ಯರಾದವರು ಯಾರಾದರೂ ಇದ್ದರೆ ನಾವಿಬ್ಬರೇ ಅಲ್ಲವೆ?' ಎನ್ನುವ ಸಂದೇಶವನ್ನರುಹುವ ದೃಷ್ಟಿಯಿಂದ ನೋಡುವುದಕ್ಕಾಗಿ, ಆತ ತನ್ನೆಡೆಗೆ ನೋಡುವುದನ್ನೇ ದಾರಿಕಾಯುತ್ತ ಕುಳಿತಿದ್ದಳು. ತನಗಾಗಿ ಪ್ರಭಾ 'ವಿಶೇಷ ಮನ್ನಣೆ'ಯೀಯುವುದು ಸಹಜವೆಂಬಂತೆ ಗ್ರಹಿತವಾಗಿಟ್ಟು-ಕೊಂಡು ವಾಸು; ಬಹಳ ದಿವಸಗಳ ಹಿಂದೆ ಯಾವುದೋ ಕ್ಷುಲ್ಲಕ ತಪ್ಪಿಗಾಗಿ, ಬಾಸ್ ಭಗತ್‌ನಿಂದ ತನಗಾದ 'ಫ್ಯಾರಿಂಗ್'ದ ಸೇಡನ್ನು ಯಾವ ರೀತಿಯಿಂದ ತೀರಿಸಿಕೊಳ್ಳಬೇಕು?—ಎಂದು ಯೋಚಿಸುತ್ತ, ತಾನಾಡಲಿದ್ದ ಶಬ್ದಗಳನ್ನು ಮನಸ್ಸಿನಲ್ಲಿಯೇ ಜೋಡಿಸುವುದರಲ್ಲಿ ನಿರತನಾಗಿದ್ದನು ಭಗತ್, ಜೀವನಲಾಲ ಇವರುಗಳ ವ್ಯಕ್ತಿತ್ವದ ಬಗ್ಗೆ ತನ್ನ ಅಭಿಪ್ರಾಯವೇನಿದೆ ಎಂದು ಸ್ಪಷ್ಟಪಡಿಸಲು, ಇದಕ್ಕೂ ಚೆನ್ನಾದ ಸುಸಂಧಿ ದೊರಕಲಾರದು.

ಇನ್ನು—ಏನನ್ನಾದರೂ ಯೋಚಿಸದೆ ಸುಮ್ಮನೆ ಕುಳಿತಿದ್ದ ವ್ಯಕ್ತಿಯೆಂದರೆ ಬಹುಶಃ ಗಂಗಾರಾಮ. ಇಳಿವಯಸ್ಸಿನಲ್ಲಿ ತನ್ನೀ ಉದ್ಧಟತನಕ್ಕಾಗಿ ಕಂಪನಿಯವರು 'ಮನೆಗೆ' ಕಳಿಸಿದರೆ ಮಂದೇನು? – ಎನ್ನುವ ಚಿಂತೆಯಾಗಲಿ, ಸಾಹೇಬರುಗಳು ತಮ್ಮ ಕೋಣೆಗಳಿಗೆ ಹೋಗಿ ಮುಚ್ಚಿದ್ದ ಕಿಟಕಿಗಳನ್ನು ಎದುರಿಸಿದಾಗ, ಅವರ ಮೋರೆ ನೋಡುವ ಕುತೂಹಲವಾಗಲಿ—ಈ ದಿನ ತಮ್ಮ ಸಾಧನೆಗೆ ಯಶಸ್ಸು ಸಿಕ್ಕು ರಜೆಯನ್ನೇ ಕೊಡಬೇಕೆಂದಾದರೆ, ತಾನು ಸಂಜೆಯವರೆಗೆ ಏನು ಮಾಡಬೇಕೆಂಬ ಪ್ರಮೇಯವಾಗಲಿ, ಆತನ ಮನಃಶಾಂತಿಯನ್ನು ಭಂಗಮಾಡಿದ್ದರೆ—ಅದು ಕೆಲವೇ ಚಣಗಳು ಮಾತ್ರ. ಇದೇ ಈಗ ಆತ ತನ್ನ ಸ್ಟೂಲಿನ ಮೇಲೆ ಕುಳಿತು, ಯಾವುದೋ ಹಳ್ಳಿಯ ಪದವನ್ನು ಮನಸ್ಸಿನಲ್ಲಿಯೇ ಗೊಣಗಿಕೊಳ್ಳತೊಡಗಿದ್ದನು.

× × × ×

ವಾಸು ಆರಂಭಿಸಿದನು: 'ಮೊದಲನೆಯದಾಗಿ ಬಾಸ್‌ಗಳು ಬಂದಮೇಲೆ, ಎಲ್ಲರೂ ತಮತಮಗಾಗಿ ಮಾತಾಡುವುದೇ?–ಯಾರಾದರೊಬ್ಬನು ಎಲ್ಲರಿಗಾಗಿ ಮಾತಾಡುವುದೇ?—ಎಂದು ನಿಶ್ಚಯವಾಗಬೇಕು.'

'ಎಂದರೆ ಸ್ಟ್ರೈಕ್ ಮಾಡುವುದಂತೂ ನಿಕ್ಕಿ ಇದಂತಾಯಿತೇನು?' ಮಾತಾಡುತ್ತಿದ್ದಂತೆಯೇ ವರ್ಮನಿಗೆ, ತಾನು ಆಡಬಾರದ್ದನ್ನಾಡಿದೆನೆಂದು ಅರಿವಾಯಿತು ಆದರೆ ಮುತ್ತು ಒಡೆದುಹೋಗಿತ್ತು

ಆಗಲೇ ಈ ಪ್ರಶ್ನೆಯನ್ನಾತ ವಾಸುವನ್ನು ಕೇಳಿ ನಿಶ್ಚಯಮಾಡಿ-ಕೊಂಡಿದ್ದರೂ, ಅದು ಹೇಗೋ ಇನ್ನೂ 'ಸಂಪು ಮಾಡಬೇಕೋ ಬಾರದೋ ?' ಎನ್ನುವ ಪ್ರಶ್ನೆಯೇ ನಿಶ್ಚಯವಾಗಬೇಕಾಗಿದೆ—ಎನ್ನುವ ವಿಷಯು ಆತನ ಹೆದರಿದ ತಲೆಯಲ್ಲಿ ತುಂಬಿಕೊಂಡಿತ್ತು. ಇವನೆಂಥ black sheep—ಎನ್ನುವಂತೆ ಎಲ್ಲರೂ ಅವನತ್ತ ನೋಡಿದರು.

'What a silly question !' (ಎಂಥ ಮೂರ್ಖತನದ ಪ್ರಶ್ನೆ!) ಎಂದು ಅರ್ಧ ತನ್ನಷ್ಟಕ್ಕೆ - ಅರ್ಧ ಕೇಳಿಸುವಂತೆ ನುಡಿದು, ವರ್ಮನ ಪ್ರಯತ್ನವನ್ನು ಗೇಗೆಡಿಸಿ ಪ್ರಭಾ ಮುಂದುವರಿಸಿದಳು: 'ನೀವು ಎತ್ತಿದ ವಿಷಯ ಬಹಳ ಮುಖ್ಯವಾದದ್ದು, ಪರಾಂಜಪೆ! ಯಾಕೆಂದರೆ, ಯಾರಾದರೊಬ್ಬರು ಮುಂದಾಗಿ ಬಾಸ್‌ಗಳ ಬ್ಲ್ಯಾಕ್ ಲಿಸ್ಟಿನಲ್ಲಿ ಬೀಳಬಾರದಲ್ಲ!'

'That is it (ನಿಜವಾಗಿದೆ)' ಕುಳಿತಲ್ಲಿಂದಲೇ ದೇವದಾಸ ಒದರಿದನು. 'ನಿನ್ನ ಮುತ್ಸದ್ದಿತನವನ್ನು ನಾನೊಬ್ಬನೇ ಚೆನ್ನಾಗಿ ಅರಿಯಬಲ್ಲೆ' ಎನ್ನುವ ದೃಷ್ಟಿಯಿಂದ ಪ್ರಭಾ ವಾಸುವಿನತ್ತ ನೋಡ-ತೊಡಗಿದ್ದುದು ದೇವದಾಸನಿಗೆ ರುಚಿಸಲಿಲ್ಲ; ಮತ್ತು ಒಂದು ಸಣ್ಣ ಪ್ರಸಂಗ ಆತನ ಕೋಪಕ್ಕೆ ಕಾರಣವಾಗಿತ್ತು. ಆತ ಕುಳಿತಲ್ಲಿಂದ ಅವನಿಗೆ ವಯ್ಯಾರಾಣಿಯ ಬಣ್ಣಬಳಿದ ಮೋರೆ ಸ್ಪಷ್ಟವಾಗಿ ಕಾಣು-ತ್ತಿತ್ತು; ಆದರೆ ದೇವದಾಸ ಅತ್ತ ನೋಡಿದಾಗಲೆಲ್ಲ ಆಕೆ, ಆ ಬೆಳಗಿನಿಂದಲೂ ನಿನ್ನ ಮೋರೆಯನ್ನೇ ನಾನು ನೋಡುತ್ತಿದ್ದೇನೆಂದೂ, ಜೀವನದಲ್ಲಿ ನಿನ್ನನ್ನು ನೋಡಿ ಮೆಚ್ಚುವುದರಲ್ಲಿಯೇ ನನ್ನ ಸಾರ್ಥಕತೆ ಯಿದೆಯೆಂದು ತಿಳಿದಿದ್ದೇನೆಂದೂ ಸಾರುವ ತರಳನೇತ್ರಗಳಿಂದ ಆತನನ್ನೇ ನಿಟ್ಟಿಸುತ್ತಿರುವುದು ಕಂಡುಬರುತ್ತಿದ್ದುದರಿಂದ, ದೇವದಾಸನ ಸ್ಥೈರಣೆ ಕಡಿಮೆಯಾಗತೊಡಗಿತ್ತು. 'ಯು ಸಿಲಿ ಸೆಕ್ಸಿ (You silly sexy)! ನಿಂದೆಲ್ಲಾ ನನಗೆ ಗೊತ್ತು' ಎಂದು ಮನಸಿ-ನಲ್ಲಿಯೇ ಆಕೆಯನ್ನು ಬೈದು ಆತ, ತಿರುಗುತ್ತಿದ್ದ ಫ್ಯಾನಿನ ಮುಖಾಂತರ ಪ್ರಭಾಳನ್ನು ನೋಡುವ ಪ್ರಯತ್ನ ಮಾಡಿ ಹತಾಶನಾಗತೊಡಗಿದ್ದನು.

ರೊಡ್ರಿಗ್ಸ್ ನುಡಿದಳು: 'ಹಾಗಲ್ಲ, ಅವರು ಬರುವವರೆಗೆ ನಾವೆಲ್ಲ ಹೀಗೆಯೇ ಕುಳಿತಿರುವುದು. ಎಂದರೆ ಎಲ್ಲರೂ ಕೆಲಸಮಾಡದಿರುವುದು ಅವರ ದೃಷ್ಟಿಗೆ ಬೀಳುತ್ತದೆ. ಆಗ ಹೀಗೇಕೆ ಎಂದು ಕೇಳಿದಾಗ, ಸ್ಪಷ್ಟವಾಗಿ ಆದರೂ ಮರ್ಯಾದೆಯಾಗಿ 'ಹೀಗ್ಹೀಗೆ' ಎಂದು ಹೇಳಿದರೆ ಆಯಿತು. ರಿಸ್ಪಾನ್ಸಿಬಿಲಿಟಿ (ಜವಾಬುದಾರಿ) ಎಲ್ಲರ ಮೇಲೆ ಬರು-ವಂತೆಯೇ ಮಾತಾಡಬೇಕು; ಮುಳುಗಿದರೆ ಎಲ್ಲರೂ ಕೂಡಿಯೇ ಮುಳುಗೋಣ'

'ನೈಸ್ ಐಡಿಯಾ!' ನಾಲ್ಕು ಸಾರೆ ತಾನು ಹೇಳುತ್ತಿರುವ ಮಾತು ಯೋಗ್ಯವಾದುದೇ ಅಲ್ಲವೇ ಎಂದು ಮನಸ್ಸಿನಲ್ಲಿಯೇ ರಿಹರ್ಸಲ್ ಮಾಡಿಕೊಂಡು. ವರ್ಮಾ ನುಡಿದ. ತಲೆದೂಗಿದನು. ರೊಡ್ರಿಗ್ಸಳ ಸೂಚನೆಗೆ ಎಲ್ಲರ ಸಾಮಾನ್ಯ ಒಪ್ಪಿಗೆ ದೊರೆತರೂ. ಬೊಸ್‌ಗಳು ಕೇಳಿದಾಗ ಯಾರಾದರೂ ಮಾತಾಡಬಹುದು ಎನ್ನುವ ಆಕೆಯ ಅಭಿಪ್ರಾಯದ ಬಗ್ಗೆ ವಾಸುವಿನ ಮನಸ್ಸಿನಲ್ಲಿ ಬೇರೆಯೇ ವಿಚಾರ ವಿದ್ದಿತು. ಅದನ್ನರಿತವಳಂತೆ ಪ್ರಭಾ ನುಡಿದಳು:

'ಸರಿ! ಆದರೆ ಅಷ್ಟು ಫರ್ಮ್ ಮ್ಯಾಂಡ್ (ಸ್ಥಿರಮನಸ್ಸು) ಇದ್ದವರೇ ಮಾತಾಡಲು ಮುಂದಾಗುವುದು ಒಳ್ಳೆಯದಾಗಿ ಕಾಣುತ್ತದೆ. ಒಂದಕ್ಕೊಂದು ಹೇಳಿ ಏನಾದರೂ ಆಗಬಾರದಲ್ಲ!' ಪ್ರಭಾ ಯಾರನ್ನು ಲಕ್ಷ್ಯದಲ್ಲಿಟ್ಟುಕೊಂಡು ಮಾತಾಡಿದ್ದಳು ಎಂದು ಉಳಿದವರಿಗೆ ತಿಳಿದರೂ, ವರ್ಮಾ ಆ ಸಮಯಕ್ಕೆ ತನ್ನ ಶರ್ಟಿನ ರೋಲ್ಡಗೋಲ್ಡ್ ಗುಂಡಿಯನ್ನು ಕರವಸ್ತ್ರದಿಂದ ತಿಕ್ಕಿ ಹೊಳಪಿಸುತ್ತಿರುವುದರಲ್ಲಿ ಮಗ್ನ-ನಾಗಿದ್ದುದರಿಂದ, ಆತ ಮೋರೆ ಕೆಂಪು ಮಾಡಲಿಲ್ಲ

"ಮಾತಾಡುವ ಕೆಲಸವನ್ನು ನನಗೆ ಬಿಟ್ಟುಬಿಡಿ" ಪರಾಂಜಪೆ ಸೂಚಿಸಿದನು. ಆ ಬಗ್ಗೆ ಯಾರೂ ವಿರೋಧ ಮಾತಲಿಲ್ಲ ಅದನ್ನು ಸಮರ್ಥಿಸುತ್ತ ಪ್ರಭಾ ಏನಾದರೂ ಹೇಳಬೇಕಾಗಿತ್ತು; ಆದರೆ ಈ ಮಧ್ಯೆ, ಆಕೆಯ ಲಕ್ಷ್ಯ ಬೇರೆಡೆಗೆ ತಿರುಗಿತ್ತು. ಎದೆಯ ಮೇಲಿಂದ ಓರೆಯಾದ ಸೆರಗನ್ನಾಕೆಗೆ ಸರಿಪಡಿಸಿಕೊಳ್ಳಬೇಕಾಗಿತ್ತು. ಈ ಕೆಲ ಸಮಯದಿಂದಲೂ, ಪಕ್ಕದಲ್ಲಿ ಫ್ಯಾನಿನ ಹಿಂದಿನಿಂದ ದೇವದಾಸನ ಲಕ್ಷ್ಯ ತನ್ನೆದೆಯತ್ತ ತಿರುಗಿದ್ದಿತೆಂಬುದು ಆಕೆಗೆ ಅರಿವಾಗಿತ್ತು. ತನಗೆ ಅರಿವಾಗಿತ್ತೆಂಬ ಸಂಗತಿ ದೇವದಾಸನಿಗೂ ತಿಳಿದಿದ್ದಿತೆಂಬುದರಲ್ಲಿ ಸಂಶಯವಿರಲಿಲ್ಲ. ಇಂಥ ಪ್ರಸಂಗದಲ್ಲಿ ಸೆರಗು ಸರಿಮಾಡಿಕೊಂಡರೆ, ಅಂಥ ಸಣ್ಣ ವಿಷಯಕ್ಕೆಲ್ಲ ತಾನು ಮಹತ್ವ ಕೊಡುವವಳಂತ ಅರ್ಥವಾಗಬಹುದು; ಮೇಲಾಗಿ ತನಗಾಗಿಯೇ ಈಕೆ ಸುಶೀಲತನವನ್ನು ನಟಿಸುತ್ತಿದ್ದಾಳೆ ಎಂದು 'ಆ ಮಳ್ಳ'ನ ತಲೆಯಲ್ಲಿ ಹೊಗಬಹುದು ಪ್ರಭಾ ಮಹಸ್ಕರ ಹತ್ತೆಂಟು ಕ್ಷಣಗಳವರೆಗೆ ಮನಸ್ಸಿನಲ್ಲಿಯೇ ತೊಳಲಾಡಿ, ಕಡೆಗೆ ಮೇಜಿನ ಮೇಲಿಂದ ಲೆಕ್ಕಣಿಕೆಯೊಂದನ್ನು ಕೆಳಗೆ ಬೀಳುವಂತೆ ಮಾಡಿ, ಅದನ್ನು ಎತ್ತುವ ನೆವದಿಂದ ಕೆಳಗೆ ಬಗ್ಗಿ ಸೆರಗು ಸರಿಮಾಡಿಕೊಂಡಳು ಬಿದ್ದ ಲೆಕ್ಕಣಿಕೆಯನ್ನು ಆಕೆಗಾಗಿ ಎತ್ತಲು ಅರ್ಧ ಎದ್ದಿದ್ದ ದೇವದಾಸ—ಅಷ್ಟರಲ್ಲಿಯೇ ತನ್ನ ಸಹಾಯ ಬೇಡವಾಗಿದ್ದನ್ನು ಕಂಡುಕೊಂಡು—ತಿರುಗಿ ಕುಳಿತು ಉಸಿರುಗರೆದನು

ಪರಾಂಜಪೆ ಮತ್ತೆ ಮಾತಾಡತೊಡಗಿದನು: "ಆಯಿತು. ನಮ್ಮಂತೆ ಅವರು ಮಾತು ಕೇಳಿದರಂತೂ ಆಯಿತು; ಆದರೆ ಅದಕ್ಕೆ ಒಪ್ಪದೆ ಡಿಸಿಪ್ಲಿನರಿ ಎಕ್ಷನ್ ತೆಗೆದುಕೊಳ್ಳುತ್ತೇವೆ—ಎಂದರೆ, ಅದನ್ನು ಎದುರಿಸಲು ಎಲ್ಲರೂ ಸಿದ್ಧರಾಗಿದ್ದಾರೇನು? ಇದು ಬಹಳ ಮಹತ್ತ್ವದ ವಿಷಯ. ಈಗ ಹೌದು ಎಂದು, ಕಡೆಗೆ ಯಾರಿಗೂ ತಿಳಿಯದಂತೆ ಎಪೋಲಜಿ ನೋಟ್ ಬರೆದು ಕಳಿಸಿ. ನಮ್ಮ ಕೇಸ್ ನಾಚಿಕೆಗೇಡಾ-ಗುವಂತೆ ಆಗುವುದು ಬೇಡ!"

ಒಂದು ನಿಮಿಷ ಎಲ್ಲರೂ ಸುಮ್ಮನಿದ್ದರು: ವಾಸು ಎತ್ತಿದ ವಿಷಯ ಆತ ಹೇಳಿದಂತೆ ಬಹಳ ಮಹತ್ತ್ವದ್ದಿದ್ದು, ಅದಕ್ಕೆ ಉತ್ತರ ಕೊಡುವ ಮೊದಲು ತಮ್ಮ ತಮ್ಮ ಮನಸ್ಸಿನಲ್ಲಿಯೇ ಅದನ್ನು ಜೀರ್ಣಿಸಿಕೊಳ್ಳುತ್ತಿರುವಾಗಲೇ—ಪ್ರಭಾ, ವಾಸುವಿನ ಮೋರೆಯನ್ನು ನೋಡುತ್ತ 'ತಾತ ಕಾಲೇಜಿನ ಡಿಬೇಟಿಂಗ್ ಯೂನಿಯನ್‌ನಲ್ಲಿ ಬಹಳ

ಪಾಪ್ಯುಲರ್ ಆಗಿದ್ದಿರಬೇಕು. ಯಾಕೆ ಈ ಹಾಳು ಕಂಪನಿಗೆ ಸೇರಿದನೋ! ಈತ ಒಟ್ಟನೇ ಭೆಟ್ಟಿಯಾದಾಗ, ನೀನು ಪ್ರೊಫೆಸರ್‌ಷಿಪ್‌ಗೆ ಏಕೆ ಟ್ರ್ಯೈ ಮಾಡಲಿಲ್ಲ—ಕೇಳಬೇಕು' ಎಂದು ಏನೇನೋ ಲೆಕ್ಕ ಹಾಕಿಕೊಂಡು 'ನನ್ನ ವಿಷಯಕ್ಕಂತೂ ನೀನು ಎರಡು ಸಾರೆ ವಿಚಾರ ಮಾಡಬೇಕಾಗಿಲ್ಲ; ಬೆಂಕಿಯಲ್ಲಿ ಹಾರೆಂದರೂ ಸಿದ್ಧಳಾಗಿದ್ದೇನೆ' ಎನ್ನುವ ಸಂದೇಶವನ್ನು ಆತನಿಗೆ ದೃಷ್ಟಿಯಿಂದಲೇ ಮುಟ್ಟಿಸಲು, ಆತ ತನ್ನೆಡೆಗೆ ನೋಡುವುದನ್ನೇ ದಾರಿ ಕಾಯುತ್ತಿದ್ದಳು.

ವರ್ಮನಿಗೆ ಪಂಚಾಯಿತಿಗಿಟ್ಟುಕೊಂಡಿತು. ತನ್ನ ಸೋದರ ಮಾವನ ಪರಿಚಿತರೊಬ್ಬರ 'ಟೆಲಿಫೋನ್' ಪ್ರಮಾಣಪತ್ರದ ಆಧಾರದ ಮೇಲಿಂದ, ಪಂಜಾಬ ಬಿ ಎ. ದ ಈ ಅರಣ್ಯಪಂಡಿತ, ಭಗತ್-ಜೀವನಲಾಲ ಕಂಪನಿಗೆ ಸೇರುವಂತಾಗಿತ್ತು. ಮುನ್ನಾದಿನದ ಸಂಪಿನ ನಿರ್ಣಯಕ್ಕೆ ಆತ ಒಪ್ಪಿಕೊಂಡುದು ಎಲ್ಲರ ಅಭಿಪ್ರಾಯಕ್ಕೆ ವಿರುದ್ಧ ಹೋಗಲಾರದ ಹೇಡಿತನದಿಂದಾಗಿತ್ತೇ ವಿನಾ ವಾಸುವಿನ 'ಪ್ರಿನ್ಸಿಪಲ್' ವಿಷಯವಾಗಲಿ. ದೇವದಾಸನ 'ರಜ ಸಿಕ್ಕರೆ ರೀಗಲ್‌ನಲ್ಲಿ 'ಬುಕ್' ಮಾಡುವುದು' ಎನ್ನುವ ಸೂಚನೆಯಾಗಲಿ ಆತನಿಗೆ ರುಚಿಸಿರಲಿಲ್ಲ ಈಗಾದರೂ ಏನು ಹೇಳುವುದೆಂದು ತನ್ನಷ್ಟಕ್ಕೆ ಕೈ ಹಿಸುಕಿಕೊಳ್ಳುತ್ತ ಕುಳಿತಿದ್ದನಾತ.

ಈ ಹೊತ್ತಿನ ಪಲ್ಲೆಕಾಯಿ ಒಯ್ಯುವ ಪಾಳಿ ತನ್ನದಿದ್ದು (ಆಕೆಯ ಗಂಡನೂ ಆಕೆಯೂ ಇಂಥ ವಿಷಯಗಳಲ್ಲೆಲ್ಲ ಫಿಫ್ಟಿ ಫಿಫ್ಟಿ ಎಂದು ಒಪ್ಪಂದ ಮಾಡಿಕೊಂಡಿದ್ದರು.) ತಾನು ಪರ್ಸಿನಲ್ಲಿ ಹಣವಿಟ್ಟುಕೊಳ್ಳದೆ ಬಂದ ಸಂಗತಿ ಈಗ ನೆನಪಾಗಿ, ಮಿಸೆಸ್ ರೊಡ್ರಿಗ್ಸ್ ಯಾರ ಹತ್ತಿರ ಕೇಳುವುದು ಎಂದು ಚಟಪಟಿಸತೊಡಗಿದ್ದಳು. ಉಳಿದ ದಿನಗಳಲ್ಲಾದರೆ ಯಾರಲ್ಲಾದರೂ ಸಹಜವಾಗಿಯೇ ಕೇಳಿ ಸಹಜವಾಗಿಯೇ ಇಸಿದುಕೊಳ್ಳಬಹುದಾಗಿತ್ತು. ಆದರೆ ಈ ಸಂಪಿನ ಗಡಬಡಿಯಲ್ಲಿ, ಒಮ್ಮೆಲೇ ಯಾರನ್ನಾದರೂ 'ಎರಡು ರೂಪಾಯಿ ಕೊಡುತ್ತೀರಾ?' ಎಂದು ಕೇಳಿ, ಉಪ್ಪರಿಗೆಯಿಂದ ತಿಪ್ಪರಿಗೆಗೆ ಇಳಿಯುವುದೆ?

ವಝಿರಾಣಿಗೆ ಯಾರೊಡನಾದರೂ ಪಿಸುಗುಟ್ಟಿ ಏನಾದರೂ ಮೋಜಿನ ಮಾತು ಹೇಳಿ ನಗುವುದು ಬೇಕಾಗಿತ್ತು. ಆದರೆ ಹಾಗೆ ಮಾಡಿದರೆ, ಈಕೆಗೆ ಎರಡು ಮನಸ್ಸಿದ್ದು ಸಂಪಿನ ಬಗ್ಗೆ ಹಿಂದುಮುಂದೆ ನೋಡುತ್ತಿದ್ದಾಳೆ—ಎನ್ನುವ ಆಪಾದನೆಗೆ ಎಲ್ಲಿ ಗುರಿಯಾಗಬೇಕಾಗಬಹುದೋ ಎಂದುಕೊಂಡು, ಕೊರಳು ತಿರುಗಿಸಿ ಎಲ್ಲರತ್ತಲೂ ನೋಡುತ್ತ, ಯಾರ ದೃಷ್ಟಿ ಸಂಧಿಸಿದರೂ ಮಂದಹಾಸದೊಡನೆ ಅದನ್ನು ಎದುರಿಸಲು ಸಿದ್ಧಳಾಗಿ ಕುಳಿತಿದ್ದಳು. ಪ್ರಭಾ ತನ್ನ ಪಕ್ಕದಿಂದ ತನ್ನ ಎಡತೋಳನ್ನು ಮೇಲೆತ್ತುವುದನ್ನೇ ಕಾಯುತ್ತ ದೇವದಾಸ ಶಾನಭಾಗ 'ತಂಬಸ್ಸು' ಮಾಡತೊಡಗಿದ್ದನು. ಆಕೆ ಆಗಲೇ ಸರಿಮಾಡಿಕೊಂಡ ಸೆರಗು ಮತ್ತೆ ಸರಿದಿದ್ದರೂ, ಆ ಹಾಳು ಕೈ ಅಡ್ಡವಾಗಿತು.

ಗಂಗಾರಾಮ ಆತನಿಗೆ ತಿಳಿಯದಂತೆಯೇ ಮತ್ತೆ ತೂಕಡಿಸತೊಡಗಿದ್ದನು.

ಕೋಣೆಯಲ್ಲಿ ಈ ಕೆಲವು ಕ್ಷಣಗಳೂ ಗಂಭೀರ ನೀರವತೆ—ಅಲ್ಲಿ ಕುಳಿತವರಿಗೆ ಅದರ ಅರಿವಿಲ್ಲದಿದ್ದರೂ—ಅನಿಸಿತ್ತು. ಅದಕ್ಕೆ ಕಾರಣವಿಲ್ಲದಿರಲಿಲ್ಲ ಮೊದಲನೆಯದಾಗಿ ಎಲ್ಲರಿಗೂ ಹೇಳಿಕೇಳುವುದೆಲ್ಲ ಮುಗಿಯಿತು ಎಂದೆನಿಸತೊಡಗಿತ್ತು; ಎರಡನೆಯದಾಗಿ ಗಡಿಯಾರದಲ್ಲಿ ಹನ್ನೊಂದಾಗಿ ಐದು ನಿಮಿಷಗಳಾಗಿದ್ದುವು. ಅರ್ಥಾತ್ ಭಗತ್-ಜೀವನಲಾಲರಲ್ಲಿ ಒಬ್ಬರು ಆಗಲೇ ಎಂದರೆ ಹನ್ನೊಂದಾಗಿ ಒಂದು ನಿಮಿಷವಾಗುವುದರೊಳಗೆ ಬಂದಿರಬೇಕಾಗಿತ್ತು. ಒಬ್ಬರು ಎನ್ನುವುದಕ್ಕೆ ವಿಶೇಷ ಅರ್ಥವಿದೆ. ಭಗತ್-ಜೀವನಲಾಲ ಡಿಸ್ಟ್ರಿಬ್ಯೂಟಿಂಗ್ ಎಜೆನ್ಸಿಯ ಪ್ರಥಮ ಕರಡನ್ನು ತಯಾರಿಸುವಾಗ, ತಾವಿಬ್ಬರೂ ಒಂದು ದಿನವಾದರೂ ಕೂಡಿ ಆಫೀಸಿಗೆ ಬರಬಾರದೆಂದು ಅವರಿಬ್ಬರೂ ಒಪ್ಪಂದ ಮಾಡಿಕೊಂಡಿರಬೇಕು. ಮೇಲಾಗಿ, ಮೊದಲು ಬಂದ ಮನುಷ್ಯ ಒಳಗೆ ಬಂದು ಇನ್ನೊಬ್ಬನು ಬಾರದಿದ್ದುದನ್ನು ನೋಡಿ, ಈ ಕಂಪನಿಯ ಹಣೆಯಬರೆಹವೆಲ್ಲ ತನಗೊಬ್ಬನಿಗೇ ಗಂಟುಬಿದ್ದಿದೆಯೆಂದೂ, ಮತ್ತೆಲ್ಲರೂ ಅತ್ತಿಯಹಣ್ಣಿನೊಳಗಿನ ಹುಳುಗಳಂತೆ ಕಂಪನಿಯ ಲಾಭದಲ್ಲಿ ಪಾಲುಬೇಡಲು ಮಾತ್ರ ಇದ್ದವರೆಂದೂ, ಯಾರನ್ನೂ ಉದ್ದೇಶಿಸದೆ ಆದರೂ ಎಲ್ಲರಿಗೂ ಕೇಳಿಸುವಂತೆ ಒದರುವುದು ವಾಡಿಕೆಯಾಗಿತ್ತು. ವರ್ಷಾಂತ್ಯದಲ್ಲಿ ಸರಾಸರಿ ತೆಗೆದರೆ, ಇಬ್ಬರೂ ಅಷ್ಟಷ್ಟೇ ಸಾರೆ ಒಬ್ಬರನ್ನೊಬ್ಬರು ಬೈಯುತ್ತಿದ್ದದರಿಂದ, ಬೆಲೆನ್ಸ ಆಫ್ ಪಾವರ್ ಉಳಿದು ಭಗತ್-ಜೀವನಲಾಲ ಕಂಪನಿ ನಡೆಯುತ್ತಿದೆ -ಎಂದು ಪರಾಂಜಪೆ ವರ್ಮನಿಗೆ ತಿಳಿಹೇಳುತ್ತಿದ್ದನು.

ಗಡಿಯಾರದಲ್ಲಿ ಒಂದರ ಮೇಲಿದ್ದ ನಿಮಿಷದ ಕಡ್ಡಿ ಸರಿದು ಎರಡು ಸಣ್ಣಗೆರೆಗಳನ್ನು ದಾಟಿದರೂ ಇಬ್ಬರಲ್ಲಿ ಒಬ್ಬರೂ ಬಂದಿರಲಿಲ್ಲ! ಯಾರೂ ಆಡಿ ತೋರಿಸದಿದ್ದರೂ ಎಲ್ಲರ ಹೃದಯದಲ್ಲಿಯೂ ನಿರೀಕ್ಷಣೆಯ ನಡುಕ ಉಂಟಾಗಿತ್ತು. ಪರಾಂಜಪೆ ತಾನು ಏನೇನೆಲ್ಲ ಹೇಳುವುದು ಎಂದು, ನಾಲ್ಕನೆಯ ಸಾರೆ ಮನಸ್ಸಿನಲ್ಲಿಯೇ ಉಜಳಣಿ ನಡೆಸಿದ್ದನು. ತಾಮ್ಹಣಕರೊಬ್ಬರೂ ಸೇರಿದ್ದರೆ ಎಲ್ಲ ಪರ್ಫೆಕ್ಟ್ (Perfect) ಆಗುತ್ತಿತ್ತು—ಎನ್ನುವುದೊಂದು ಆತನ ಗುದುಗುದಿಯಾಗಿತ್ತು.

ಕಾಕತಾಲೀಯ ನ್ಯಾಯ ಎಂದು ಹೇಳುವುದಕ್ಕೋ ಎನ್ನುತ್ತಾರಂತೆ. ತಾಮ್ಹಣಕರರು ತಮ್ಮ ಕೋಣೆಯಿಂದ ಕಾಗದವೊಂದನ್ನು ಕೈಯಲ್ಲಿ ಹಿಡಿದುಕೊಂಡು ಮೂಗಿನಮೇಲಿದ್ದ ಕನ್ನಡಕವನ್ನು ಇನ್ನೂ ಮೇಲೆ ಸರಿಸುತ್ತ ಹೊರಗೆ ಬರುವುದಕ್ಕೂ, ಭಗತ್-ಜೀವನಲಾಲರಿಬ್ಬರೂ (ಹೌದು ಇಬ್ಬರೂ!) ಆಫೀಸಿನ ಹೊರಬಾಗಿಲಿಂದ ಒಮ್ಮೆಲೇ ತಮ್ಮ ತಮ್ಮ ಬಲಗಾಲನ್ನು ಒಳಗಿಡುವುದಕ್ಕೂ, ಸ್ಟೂಲಿನ ಮೇಲೆ ಕುಳಿತು ಹಿಂದಿನ ಗೋಡೆಗೊರಗಿದ್ದ ಗಂಗಾರಾಮನು ಮೂರನೆಯ ಗೇರ್‌ನಲ್ಲಿದ್ದ ಟ್ರಕ್‌ನಂತೆ ಗೊರಕೆಹೊಡೆಯತೊಡಗಿದ್ದಕ್ಕೂ ಏಕಕಾಲ ಸಂಭವಿಸಿದ್ದು, ಈ ಮೇಲೆ ಹೇಳಿದ 'ನ್ಯಾಯ'ದಲ್ಲಿ ಬರುತ್ತದೇನೋ—ನೀವೇ ಊಹಿಸಿಕೊಳ್ಳಿ. ಪರಾಂಜಪೆಗೆ ಮಾತ್ರ ಅದು ತೀರ ಅನ್ಯಾಯವಾಗಿ ತೋರಿ, ತಮ್ಮ 'ಕೇಸ್' ಇನ್ನು ಯಾವರೀತಿಯಿಂದಲೂ ಯಶಸ್ವಿಯಾಗುವುದು ಶಕ್ಯವಿಲ್ಲವೆಂಬ ಕಟುಸತ್ಯದ ಅನುಭವವಾಗತೊಡಗಿತು. (ಅಷ್ಟೇ ಹಾಗೆಂದು ಅನಂತರ ಆತ ವರ್ಮನ ಹತ್ತಿರ

ಹೇಳಿದ್ದು ನಿಜ ಅಲ್ಲ. ವಿಶ್ವದ ಉದಯವಾದಂದಿನಿಂದ ಇಲ್ಲಿಯ ವರೆಗಿನ, ಅದೂ ಬೇಡ-ಕ್ರಿಸ್ತಶಕ ಶುರುವಾದಂದಿನಿಂದ ೧೫೭೮ ವರ್ಷ, ಐದು ತಿಂಗಳು ೨೩ ದಿವಸಗಳಲ್ಲಿ ಯಾವ ದಿನವನ್ನಾದರೂ ಬಿಟ್ಟು, ಈ ಹೊತ್ತೇ ಅವರಿಬ್ಬರೂ ಕೂಡಿಬರಬೇಕೆಂದರೆ? ಅಧೀಕ ಆಫೀಸಿನ ಏನೋ ಕೆಲಸವನ್ನು ಕುರಿತು ಯಾರನ್ನೋ ವಿಚಾರಿಸಲು (ಈ ಹೊತ್ತಿನ ಸಂಪಿನ ವಿಷಯ ಅವರಿಗೆ ಪೂರಾ ಮರೆತು ಹೋಗಿರಬೇಕು) ಹೊರಗೆ ಬಂದವರು, ತಮ್ಮಷ್ಟಕ್ಕೆ ಸುಮ್ಮನಿರದೆ ತಾಮ್ಹಣಕರರು ಎರಡೂ ವಿರೋಧಿ ಪಕ್ಷಗಳ ಮಧ್ಯಸ್ಥಿಕೆಯನ್ನು ತಮ್ಮಷ್ಟಕ್ಕೆ ವಹಿಸಿಕೊಂಡುದನ್ನು + ಗಂಗಾರಾಮ ಗೊರಕೆ ಹೊಡೆಯಹತ್ತಿದುದನ್ನೂ ಕೂಡಿಸಿರಿ.

ಏನಾಗುತ್ತದೆ?

ವಾಸು ಪರಾಂಜಪೆಯ ಈ ಪ್ರಶ್ನೆಗೆ ನೀವು ಉತ್ತರ ಕೊಡಿ. ವಷ್ಟರಲ್ಲಿ ಭಗತ್—ಜೀವನಲಾಲ ಕಂಪನಿಯಲ್ಲಿ ಮುಂದಿನ ಐದು ನಿಮಿಷಗಳಲ್ಲಿ ಏನಾಯಿತು ಹೇಳಿಬಿಡುತ್ತೇನೆ. ಮೊದಲನೆಯದಾಗಿ ಭಗತ್—ಜೀವನಲಾಲ ಇಬ್ಬರೂ (ತಮ್ಮ ಸಮಾನ ಶಾಲುಗಾರಿಕೆಯ ಆಧಾರದ ಮೇಲಿಂದ) ಒಮ್ಮೆಲೇ ಆರಂಭಿಸಿದರು:

" What is this ? " (ಇದೇನು ?)

ಆದರೆ ಅದು ಯಾರಿಗೂ ಕೇಳಿಸಲಿಲ್ಲ. ಯಾಕೆಂದರೆ ಇನ್ನೂ ಕಾಗದದ ಮೇಲೆಯೇ ದೃಷ್ಟಿಯಿಟ್ಟುಕೊಂಡು ಬಂದಿದ್ದ ತಾಮ್ಹಣಕರರು, ಅದೇ ಸಮಯಕ್ಕೆ 'ಏ ಶಾನಭಾಗ' ಎಂದು ಕರೆದರು; ಮತ್ತು ತಾಮ್ಹಣಕರರ ನಾದಬ್ರಹ್ಮಕ್ಕೆ ಅವರು ಸಿಟ್ಟುಗೊಂಡಾಗ, ಲೌಡ್‌ಸ್ಪೀಕರಿನ ಆವಶ್ಯಕತೆಯಿರುವುದಿಲ್ಲ ಎಂದು ಎಲ್ಲರೂ ಒಪ್ಪಿಕೊಂಡ ಮಾತಾಗಿತ್ತು.

ಎರಡನೆಯದಾಗಿ ಎಡಾಂ ಮತ್ತು ಇವ್ಹ್ ತಿನ್ನಬಾರದ ಹಣ್ಣನ್ನು ತಿಂದು ಪರಸ್ಪರ ನಿಟ್ಟಿಸಿದನಂತರ, ಮಾನವ ಇತಿಹಾಸದಲ್ಲಿ ಮೊದಲ ಬಾರಿ ಪ್ರಭಾ ಮಸ್ಕರ ಮತ್ತು ದೇವದಾಸ ಇವರಿಬ್ಬರ ದೃಷ್ಟಿ ಒಂದಾಯಿತು. ಅರ್ಥಾತ್ ಪ್ರಭಾ ಮಸ್ಕರ ಆಕಸ್ಮಾತ್ ನೇರೆ ತಿರುವಿ ದೇವದಾಸನತ್ತ ನೋಡಿದಾಗ, ಎಂದಿನಿಂದಲೂ ಆಕೆಯನ್ನೇ ನೋಡುತ್ತಲಿದ್ದ ದೇವದಾಸನ ದೃಷ್ಟಿಯನ್ನಾಕೆ ಎದುರಿಸಬೇಕಾಯಿತು. ಪರಿಣಾಮವಾಗಿ ದೇವದಾಸನ ತುಟಿಯ ಮೇಲೆ ಸಿದ್ಧವಾದ ತಿಳಿನಗೆಯನ್ನು ಸ್ವೀಕರಿಸಲು ನಿರಾಕರಿಸಿ, ಆಕೆ ನೋರೆಯನ್ನು ಇನ್ನೂ ತಿರುಗಿಸಿ, ಭಗತ್‌ನ ಪಡಿಬಾಗಿ ಕಟ್ಟಿದ ಟ್ರ್ಯಾದ ಗಂಟನ್ನೇ ನೋಡತೊಡಗಿದಳು.

ಮೂರನೆಯದಾಗಿ ಬಾಸ್‌ಗಳ 'ಇದೇನು ?' ಪ್ರಶ್ನೆಗೆ ಮೊದಲೇ ನಿಶ್ಚಯಿಸಿದಂತೆ ಉತ್ತರವೀಯಬೇಕಾಗಿದ್ದ ಪರಾಂಜಪೆ, ತುಟಿ ಎರಡು ಮಾಡಲಿಲ್ಲ. ಅದೇನು ಅಂತ್ಯಸಮಯಕ್ಕೆ ಆತ ಅಂಜಿದ ಎನ್ನಬೇಕೆ? ಇಲ್ಲವೆ ಇಬ್ಬರು ಕೇಳಿದ ಪ್ರಶ್ನೆಗೆ ಒಬ್ಬನೇ ಹೇಗೆ ಉತ್ತರವೀಯಬೇಕು? — ಎನ್ನುವ ತೊಡಕಿನಲ್ಲಿ ಸಿಲುಕಿಕೊಂಡ ಎನ್ನಬೇಕೆ? ಗಂಗಾರಾಮನಿಗೆ ಪೂರ್ಣ ಎಚ್ಚರಾಯಿತೋ ಇಲ್ಲವೋ ನೋಡುವುದರಲ್ಲಿ ನಿರತನಾಗಿದ್ದ ಎನ್ನಬೇಕೆ? ಅಂತೂ ಪರಾಂಜಪೆ ಮಾತಾಡದ್ದರಿಂದ, ಮೊದಲೇ ಹೇಳಿದಂತೆ ತಾಮ್ಹಣಕರ್ ತಮ್ಮ ಕೈಯಲ್ಲಿ ಪರಿಸ್ಥಿತಿಯ ಕಡಿವಾಣವನ್ನು ಹಿಡಿಯಬೇಕಾಯಿತು.

ಕೂದಲನ್ನು
ಸೊಂಪಾಗಿ ಮೃದುವಾಗಿ
ಗುಂಗುರು ಗುಂಗುರಾಗಿ
ನೀಳವಾಗಿ
ಬೆಳೆಸುತ್ತದೆ

ನೀಲಿ

ದಿ ಸದ್ವೈದ್ಯಶಾಲಾ ಲಿ., ನಂಜನಗೂಡು
ಬ್ರಾಂಚುಗಳು: ಬೆಂಗಳೂರು, ಮೈಸೂರು, ಮಂಗಳೂರು, ಹುಬ್ಬಳ್ಳಿ
ಯಾವಾಗಲೂ ನಂಜನಗೂಡು ಟೂತ್ ಪೌಡರ್ ಉಪಯೋಗಿಸಿ

" ಈಹೊತ್ತು ಬುದ್ಧ ಜಯಂತಿ ಎಂದು ... ..." ತಾಮ್ಹಣಕರ ವಾಕ್ಯ ಮುಗಿಸಲಿಲ್ಲ. ಯಾಕೆಂದರೆ ತನ್ನ 'ಇದೇನು' ಪ್ರಶ್ನೆಗೆ ಉತ್ತರ ಕಾದು ಕೋಪಗೊಂಡಿದ್ದ ಜೀವನಲಾಲ ಮತ್ತೆ ಕೇಳಿದನು : " ಆಫೀಸಿನಲ್ಲಿ ಇಲಿ ಗಿಲಿ ಬಿದ್ದಿದೆಯೇನು? ಏನು ಹೀಗೆ ಸುಮ್ಮನೆ ಕುಳಿತು.... "

ಆದರೆ ಭಗತ್‌ನಿಗೆ ತಾನೂ ಸಮಾನಶಾಲುಗಾರ ಎನ್ನುವುದನ್ನು ಸಿದ್ಧಪಡಿಸಬೇಕಾಗಿತ್ತು. ತಾಮ್ಹಣಕರರ ಮಾತನ್ನು ಕೇಳಿಕೊಂಡಿದ್ದ ಆತ ಮಧ್ಯದಲ್ಲಿಯೇ ಕೇಳಿದನು:

" But who is a Buddhist ? (ಆದರೆ ಇಲ್ಲಿ ಬೌದ್ಧರು ಯಾರಿದ್ದಾರೆ ?) "

'ಈಹೊತ್ತು ರಜೆ ಬೇಕಂತೆ, ಸಾರ್' ತಾಮ್ಹಣಕರರಿಗೆ ಸುತ್ತಿ ಸುತ್ತಿ ಹೋಗುವ ಪದ್ಧತಿ ಸೇರುತ್ತಿರಲಿಲ್ಲ. ಸರಳ ಭಾಷೆಯಲ್ಲಿ ನುಡಿದುಬಿಟ್ಟರು. ಗಂಭೀರವಾಗಿ ಎದ್ದು ನಿಂತು ಇನ್ನೂ ಗಂಭೀರವಾಗಿ 'ನಾವೆಲ್ಲ ಸಂಪು ಮಾಡಿದ್ದೇವೆ' ಎಂದು ಮುಂತಾಗಿ ಆರಂಭಿಸಲೆಂದು ಗಂಟಲ ಸರಿಮಾಡಿಕೊಂಡ ಪರಾಂಜಪೆ, ಕೈಹಿಸುಕಿಕೊಂಡು ತಾನು ಕೈಬಿಟ್ಟ—ಎನ್ನುವಂತೆ ಹಗಲು ಕೊಡವಿದನು.

ಭಗತ್ : 'ಯಾರಿಗೆ ಬೇಕಂತೆ? ಗಜೆಚೀಟಿ ಕಳಿಸಬಾರದೆ?'

ಜೀವನಲಾಲ : ಆ ಇನ್ಸ್ಟ್ರಕ್ಟರ್ ಎಲ್ಲ ಇವರಪ್ಪ ಮಾಡುತ್ತಾನಂತೇನು ?.......

ಇಬ್ಬರೂ ಕೂಡಿಯೇ ಮಾತಾಡಿ, ಒಬ್ಬರ ಮುಖವನ್ನೊಬ್ಬರು ನೋಡಿಕೊಂಡರು. ಅವಾಚ್ಯ ಶಬ್ದಗಳನ್ನು ಪಯೋಗಿಸುವುದರಲ್ಲಿ ಜೀವನಲಾಲನಿಗೆ ಎಷ್ಟು ಆನಂದವಾಗುತ್ತಿತ್ತೋ, ಅಷ್ಟೇ 'ನಿನ್ನ, ಆ ಸಂಸ್ಕೃತಿಯಿಂದಲೇ ಕಂಪನಿ ಹಾಳಾಗುತ್ತದೆ' ಎಂದು ಅವನಿಗೆ ತಿಳಿಸಿಕೊಡುವುದರಲ್ಲಿ ಭಗತ್‌ನಿಗೆ ಅಭಿಮಾನವುಂಟಾಗುತ್ತಿತ್ತು.

ತಾಮ್ಹಣಕರ್ : ಹಾಗಲ್ಲ ಆಫೀಸಿಗೇ ರಜೆ ಬೇಡುತ್ತಿದ್ದಾರೆ.

ಭಗತ್ : ಆಂ? ಅದು ಹೇಗೆ ಶಕ್ಯ ?

ಜೀವನಲಾಲ : ಏನಾದರೂ ಕಾರಣ ಬೇಡವೆ ?

ಆದರೆ ಇಷ್ಟು ಹೊತ್ತಿಗೆ ಅವರಿಬ್ಬರಿಗೂ ಪರಿಸ್ಥಿತಿಯ ಅರಿವು ಆಗಿತ್ತು. ತಾನು ಮಾತಾಡುವಾಗ ನೀನು ಮಧ್ಯೆ ಬಾಯಿಹಾಕ ಬೇಡ– ಎಂದು ಸೂಚಿಸುವುದಕ್ಕೆ ಜೀವನಲಾಲನ ತೋಳನ್ನು ಸಾಕಷ್ಟು ಗಟ್ಟಿಯಾಗಿಯೇ ಚಿವುಟಿ, ಭಗತ್ ಕಂಪನಿಯ ಒಡೆಯನಿಗಿರುವ ಪೂರ್ಣ ಗಂಭೀರತೆಯಿಂದ ನುಡಿದನು:

'ನಿಮಗೆಲ್ಲ ಏನಾದರೂ ದೂರು ಹೇಳುವುದಿದ್ದರೆ ಸರಿಯಾದ ರೀತಿಯಿಂದ ಒಳಗೆ ಬಂದು ಹೇಳಿ. ಈ ಕಂಪನಿ ಯಾವಾಗಲೂ ತಮ್ಮ ಕೆಲಸಗಾರರ ಒಳಿತಿಗಾಗಿ ಸಾಕಷ್ಟು ಎಚ್ಚರಿಕೆ ವಹಿಸುತ್ತದೆ ಹೀಗೆ ಕುಳಿತರೆ ಏನಾಗುತ್ತದೆ? ಮಿಸ್ಟರ ವರ್ಮಾ, ಯು ಕಮ್ ಇನ್ ಫಸ್ಟ್, (ನೀನು ಮೊದಲು ಬಾ') ಮಾತು ಮುಗಿಸಿ 'ಭಗತ್' 'ನೀನೇನಾದರೂ ಹೇಳಿದರೆ ಖಬರದಾರ್' ಎನ್ನುವಂತೆ, ತನ್ನ ಪಾಲುದಾರರನ್ನು ನೋಡಿ, ತೋಳು ತಿಕ್ಕಿಕೊಳ್ಳಹತ್ತಿದ್ದ ಆತನನ್ನು ಮುಂದೆ ಮಾಡಿಕೊಂಡು ಒಳಗೆ ನಡೆದನು. ಆಗಲೇ ಎಚ್ಚರುಗೊಂಡ ಗಂಗಾರಾಮ ಕಿಟಕಿಯ ಬಾಗಿಲುಗಳನ್ನು ತೆರೆಯಲು ಮತ್ತೂ ಮುಂದಾಗಿ ಓಡಿದನು.

'ಆಯಿತು. ನಾನು ಮೊದಲೇ ಹೇಳಿರಲಿಲ್ಲವೇ?' ಎನ್ನುವ ಮೋರೆಮಾಡಿಕೊಂಡು ಪರಾಂಜಪೆ ತಲೆಯಮೇಲೆ ಕೈ ಹೊತ್ತು ಕುಳಿತನು. ಯಾಕೆಂದರೆ ಒಳಗೆ ಹೋದವರಿಗೆಲ್ಲ ಭಗತ್–ಜೀವನಲಾಲ ಪ್ರಭೃತಿಗಳು ಹಿಂದೂಧರ್ಮ-ಬೌದ್ಧಧರ್ಮಗಳನ್ನು ಮೊದಲುಗೊಂಡು, ಕೆಲಸಕ್ಕಾಗಿಯೇ ಕೆಲಸಮಾಡುವುದರಲ್ಲಿ ಎಷ್ಟು ಆನಂದವಿದೆ, ಬುದ್ಧನ ಅಂತ್ಯ ಉಪದೇಶ ಹೇಗೆ ಅದೇ ವಿಷಯವನ್ನೊಳಗೊಂಡಿತ್ತು ಎಂದು ಮುಂತಾಗಿ ಮಾತಾಡುತ್ತ, ಒಮ್ಮೆ ಆಫೀಸಿಗೆ ಬಂದನಂತರ ಅರ್ಧ ದಿವಸವಾದಮೇಲೆ ತಿರುಗಿ ಮನೆಗೆ ಹೋಗುವುದರಲ್ಲಿ ಯಾವ ಸಾರ್ಥಕತೆಯಿದೆ –ಎಂದು ಒಬ್ಬೊಬ್ಬರಂತೆ ತಮ್ಮೆಲ್ಲ ಕೆಲಸಗಾರರಿಗೂ ಮನಗಾಣಿಸಿ ಕೊಡಲು ಶಕ್ತರಾದರು. ಬುದ್ಧನ ಮುಂದಿನ ಜಯಂತಿ ಬಂದರೆ, ತಮಗೆ ಮೊದಲೇ ತಿಳಿಸಿದಲ್ಲಿ ನಿಜವಾಗಿಯೂ ರಜೆ ಕೊಡುವುದಾಗಿಯೂ ಆಶ್ವಾಸನೆ ದೊರೆಯಿತು. ಒಳಗೆ ಹೋದವರಲ್ಲಿ ವರ್ಮಾ ಮೊದಲನೆಯವನಾದುದು, ಒಂಟೆಯ ಹೆಗಲಮೇಲಿನ ಕಟ್ಟಕಡೆಯ ಹುಲ್ಲುಕಡ್ಡಿ ಎಂದು ಪರಾಂಜಪೆಗೆ ಎನಿಸಿದರೂ, ಆತ ಹಾಗೆಂದು ಹೇಳಹೋಗಲಿಲ್ಲ ಯಾರನ್ನು ದೂಷಿಸಿದರೇನು? ಆ ದಿನ ೫|| ಯವರೆಗೆ ಎಲ್ಲರೂ ಕೆಲಸ ಮಾಡಿದ್ದೇನೂ ಸುಳ್ಳಾಗುವುದಿಲ್ಲವಲ್ಲ!

ದೇವದಾಸ ಶಾನಭಾಗನಿಗೆ ಮಾತ್ರ ಇಂದಿನ ದಿನ, ಬಹಳ ರೀತಿಯಿಂದ ಲಾಭಕಾರಿಯಾದಂತೆ ತೋರಿತು.

"ನಿರುದ್ಯೋಗಪರ್ವ"

(ಅಣಕ)

ಶ್ರೀ. ಡಿ. ಮಹಾಲಿಂಗಭಟ್ಟ, ವಿದ್ವಾನ್, ಎಡನಾಡು.

ಸೋತಲುವಾಚ:

ಶ್ರೀವನಿತೆಯರಸನೆ ವಿಮಲ ರಾ
ಜೀವ ಪೀಠನ ಪಿತನೆ ಗತಿಯೆಂ–
ದೋವಿ, ಪತ್ರಿಕೆಗೆಲ್ಲ ಚಂದಾದಾರನಾಗುತಲಿ,
ಯಾವುದೇ "ವಾಂಟೆಡ್ ಕಲಂ"ನ ಸು-
ಧಾವಿನೂತನದೊಕ್ಕಣೆಗಳನು
ಭಾವಿಸುತ ಎಲ್ಲೆಡೆಗೆ ಅರ್ಜಿಯ ಬರೆದು ಕಳುಹುವುದು! ೧

ಇದು "ಕಲಿಯುಗೇ, ಪ್ರಥಮಪಾದೇ,
ವಿದಿತ ಜಂಬೂದ್ವೀಪ"ದೊಳಗಣ
ಬುಧಸಮಾಜದ ಮಾನವರ ಪ್ರಪ್ರಥಮ ಕರ್ತವ್ಯ!
ಪದುಮನಾಭನ ಕರುಣೆಯಲಿ "ಕರೆ"
ಒದಗಿದರೆ, ಆಯಾ ಕಚೇರಿಗೆ
ಮುದದಿ ಬಿಜಯಂಗೈದು ಮರಳುವ ಯೋಗ ಲಭಿಸುವುದು. ೨

ಹತ್ತರದ ಟಪ್ಪಾಲು ಕಟ್ಟೆಯ
ಹೊತ್ತು ಹೊತ್ತಿಗೆ ನೋಡಿ ಬರುವರೆ
ಮತ್ತೆ ಬೇಸರಪಟ್ಟುಕೊಂಬುದು ಸರ್ವಥಾ ತಪ್ಪು!
ಮೊತ್ತದಲಿ ಮುಮ್ಮೂರು ಮಾಸಕೆ
ಎತ್ತರದ ಒಂದೊಂದು ಚಪ್ಪಲಿ
ಎತ್ತಿಕೊಳುವುದು ಇವರ ಪಾರಂಪರ್ಯ ಹಕ್ಕಿಹುದು. ೩

ವೇದಪಾರಾಯಣದ ಫಲ, ಗಂ–
ಗಾದಿ ತೀರ್ಥಸ್ನಾನ ಫಲ, ಕೃ-
ಚ್ಛ್ರಾದಿ ತಪಸಿನ ಫಲವು, ಜ್ಯೋತಿಷ್ಟೋಮ ಯಾಗಫಲ;
ಮೇದಿನಿಯನೊಲಿದಿತ್ತ ಫಲ, ವ–
ಸ್ತ್ರಾದಿ ಕನ್ಯಾದಾನ ಫಲಗಳು
ಮೇದಿನಿಯೊಳೀ ಪಾಪ ತೊಳೆಯಲು ಸಾಲದಾಗುವುವು! ೪

ಈ ನಿರುದ್ಯೋಗವನು ಅಳಿಸಲು
ಏನು ಗೈಯುವುದೆಂದು ಶಂಕಿಸೆ
ಸ್ನಾನ, ದಾನ, ತಪಸ್ಸು, ಪಾರಾಯಣವು ಹಿತವಲ್ಲ;
ತಾನು ಕೆಲಸವ ಹುಡುಕುವಾ ಹೊ–
ತ್ತೇನೆ ಸಂತೋಷದಲಿ ಮಡಿದರೆ
ಸಾನುನಯ ಕೈವಲ್ಯದೊರೆವುದು ಭೂಪ, ಕೇಳೆಂದ. ೫

ಲೋಮೊನೊಸೋವ್

(ವಿಜ್ಞಾನಿಯ ಪರಿಚಯ)

ಶ್ರೀ. ಟಿ. ಆರ್. ನಾಡಿಗೇರ ಬಿ. ಎಸ್ಸಿ. (ಆನರ್ಸ್), ಬಿ. ಎಸ್ಸಿ. (ಟೆಕ್). ಮುಂಬಯಿ

●

ವಿಜ್ಞಾನದಂತಹ ಭೌತಿಕಸತ್ಯಪ್ರಪಂಚದಲ್ಲೂ ದ್ವೇಷ-ಮತ್ಸರಗಳೆ? ಲೋಮೊನೊಸೋವ್‌ನ ಸಂಶೋಧನಗಳು ಸರ್ವಸಾಮಾನ್ಯವೆನಿಸಿದರೂ, ಅವುಗಳನ್ನೂ ಬಾಯಿಗೆ ಬಂದಂತೆ ಆಡಿಕೊಳ್ಳುವ ಮತ್ಸರಿಗಳು ಇದ್ದರು. ಆದರೇನು, ಬೈದರೆ ಬೆಳಕು ಕತ್ತಲೆಯಾಗುವುದೆ?

●

ಲೋಮೊನೊಸೋವ್ ಕಾವ್ಯರಚಿಸುತ್ತಿದ್ದನಾದರೂ, ವಿಜ್ಞಾನದಲ್ಲಿ ಆತನಿಗೆ ಶ್ರದ್ಧೆ. ಕಾವ್ಯರಚನೆ ಕೇವಲ ಮನೋರಂಜನೆಗಾಗಿ: Poetry is my pleasure, physics my exercise ಎಂದು ಹೇಳಿದ್ದಾನೆ.

'In infinitely small physical particles'

ಎಂಬ ಪ್ರಬಂಧದಲ್ಲಿ ಎಲ್ಲ ವಸ್ತುಗಳು ಸೂಕ್ಷ್ಮಕಣಗಳಿಂದ ರಚಿತವಾದವುಗಳೆಂದು ವಿವೇಚಿಸಿದ್ದನಲ್ಲದೆ, ಆ ಕಣಗಳನ್ನು Elements (ಮೂಲವಸ್ತು) ಮತ್ತು Corpuscles ಎಂದು ವಿಭಾಗಿಸಿದನು. ಇಂದು ಅವನ corpuscleಗೆ Molecule (ಅಣು)ಎಂದೂ Elemenಗೆ Atom (ಪರಮಾಣು) ಎಂದೂ. ನಾಮಕರಣಮಾಡಲಾಗಿದೆ. ಯಾವುದೇ ವಸ್ತುವಿನ ವರ್ಣ, ವಾಸನೆ, ಇವೇ ಮೊದಲಾದ ವಸ್ತುವಿನ ಗುಣಧರ್ಮಗಳು, ಆ ವಸ್ತುವಿನ ಪರಮಾಣುಗಳ ಮೇಲೆ ಅವಲಂಬಿಸುತ್ತವೆಂದು ವಿಶದೀಕರಿಸಿದನು. ಈ ಪ್ರಬಂಧದ ಆಧಾರದ ಮೇಲೆಯೇ ಆತ ಕೆಲವು ವರ್ಷಗಳನಂತರ Corpuscular Philosophy ಎಂಬ ತತ್ತ್ವವನ್ನು ರೂಪಿಸಿದನು. ಆತನ ಆ ತತ್ತ್ವ ಇಂದು ಪ್ರಚಲಿತವಾಗಿರುವುದು. Atomic theory (ಪರಮಾಣು ಸಿದ್ಧಾಂತ ಎಂದು.) 'Corpuscular philosophy'ಯನ್ನು ಸಂಪೂರ್ಣವಾಗಿ ಪ್ರಸಿದ್ಧಿಸಲಿಲ್ಲ. ಏಕೆಂದರೆ ಈ ಪ್ರಬಂಧ, ಆತನ ಗುರು ಕ್ರಿಶ್ಚನ್ ವೂಲ್ಫನ ಸಿದ್ಧಾಂತಕ್ಕೆ ತೀರ ವಿರುದ್ಧವಿತ್ತಲ್ಲದೆ, ವೂಲ್ಫನ ಸಿದ್ಧಾಂತ ತ್ಯಾಜ್ಯವೆಂದು ಸಾಧಾರವಾಗಿ ವಿವೇಚಿಸಿದ್ದನು. ಎಂತಲೇ ಗುರುವಿನ ಪ್ರತಿಷ್ಠೆಗೆ ಬಾಧೆ ತರದಂತೆ ಕೆಲ ಪ್ರಕರಣಗಳನ್ನು ಮಾತ್ರ ಪ್ರಸಿದ್ಧಿಸಿದನು. ಗುರುವಿಗಾಗಿ ಎಂಥ ಔದಾರ್ಯ! ಈ ಔದಾರ್ಯದ ಉರುಳಿಗೆ ಸಿಕ್ಕುದೇನು?

೧೭೪೫ ಜಾನೇವರಿಯಲ್ಲಿ ಅಕಾಡಮಿಯ ಸದಸ್ಯರೆದುರು 'ಉಷ್ಣತೆ ಮತ್ತು ತಂಪಿನ ಹುಟ್ಟು' ಎಂಬ ಪ್ರಬಂಧವನ್ನು ಓದಿದನು. ಆ ಪ್ರಬಂಧದಲ್ಲಿ ನಿತ್ಯಜೀವನದ ದೃಷ್ಟಾಂತಗಳನ್ನೆತ್ತಿಕೊಂಡು, ಉಷ್ಣತೆಯ ಹುಟ್ಟನ್ನು ವಿವರಿಸಿ, ಉಷ್ಣತೆಯ ಹುಟ್ಟುಗೆ ಕಣಗಳಿಂದ ಸಾಗುವುದೆಂದು ನಿವೇದಿಸಿದನು. ಆದರೆ ಕಣಗಳ ಈ ಚಲನೆ ಉಷ್ಣತೆಯ ಪ್ರಸರಣ ನಾವು ಬರಿಗಣ್ಣಿನಿಂದ ಕಾಣೆವು. ಕಣ್ಣಿಗೆ ಕಾಣದ ಚಲನೆಯ ಬಗ್ಗೆ ಶಂಕೆ ಹುಟ್ಟುವುದು ಸಹಜವಲ್ಲವೆ? ಲೋಮೊನೊಸೋವ್ ಈ ಶಂಕೆಗೆ ಸಮಾಧಾನ ಹೇಳಿದ: 'ಗಾಳಿ ಬೀಸಿದಾಗ ಗಿಡಗಳ ಎಲೆ ಟೊಂಗೆ ಅಲ್ಲಾಡುವುದನ್ನು ನೀವು ನೋಡಿಲ್ಲವೆ? ಹಾಗೆಯೇ ಇದು! ಲೋಮೊನೊಸೋವನ ಈ ಪ್ರಬಂಧ ಅಪೂರ್ವವಾದುದೆಂದು ಫ್ರೇಡ್ರಿಕ್ ಎಂಜೆಲ್ಸ್ ಎಂಬ ವಿಜ್ಞಾನಿ, ಲೋಮೊನೊಸೋವನ ಮರಣದ ೧೫೦ ವರ್ಷಗಳ ನಂತರ ಹೇಳಿದ್ದಾನೆ ಲೋಮೊನೊಸೋವ್ ತನ್ನ ಪ್ರಬಂಧಗಳನ್ನು ಲ್ಯಾಟಿನ್ ಭಾಷೆಯಲ್ಲಿ ಬರೆದನು. ಈ ಪ್ರಬಂಧದಿಂದ, ಯುರೋಪಿನಲ್ಲೂ ವಿದ್ವಜ್ಜನರಿಂದ ಮನ್ನಣೆ ಪಡೆದನು ಲೋಮೊನಸೋವ್. ಈ ಪ್ರಬಂಧವನ್ನು ಕಟುವಾಗಿ ಖಂಡಿಸಿದವರೂ ಇಲ್ಲದಿರಲಿಲ್ಲ. ಕೆಲವರಂತೂ ಟೀಕೆಯೊಂದಿಗೆ ತಮ್ಮ ಸಾಂಸ್ಕೃತಿಕ ಮಟ್ಟ ಮತ್ತು ಪಾಂಡಿತ್ಯವನ್ನು ತೋರಿಸಿದರು. ಅದರಲ್ಲೂ ಕೆಲವರು, ಪತ್ರಿಕೆಗಳಲ್ಲಿ ಸೌಲಭ್ಯವಿದ್ದ ಅವಾಚ್ಯಶಬ್ದಸಂಪತ್ತಿಯನು ಓದಿಸಿದರು. ಅವಾಚ್ಯವಾಗಿ ಬರೆದವರಲ್ಲಿ ಜರ್ಮನಿಯ (J Arnold) ಜೆ. ಅರ್ನಾಲ್ಡ್ ಅಗ್ರಗಣ್ಯ. ವಿರೋಧಕ್ರಮವಾದರೂ ಎಂಥದು? ಆಧಾರ ಬೇಡವೆ? ಭಾಷೆಯಾದರೂ ಎಂಥದು? ಲೇಖನವ ತುಂಬ ಅವಾಚ್ಯ ಶಬ್ದಗಳ ಸುರಿಮಳೆ! ಪತ್ರಿಕೆಯ ಸಂಪಾದಕರಾದರೂ ಮುಂಜಾಗ್ರತೆ ವಹಿಸಬೇಕಿತ್ತಷ್ಟೆ? ಈ ಪ್ರತ್ಯುತ್ತರ, ಆ ಮಹಾನುಭಾವ ಪದವಿಗಾಗಿ ಬರೆದ ಪ್ರಬಂಧವಂತೆ. ಇಂಥ ಪ್ರಬಂಧ ಪ್ರಕಟಿಸಿ ಧಾರ್ಷ್ಟ್ಯ ತೋರಿಸಿದ ಪತ್ರಿಕೆಯ ಹೆಸರು the impartial Hamburg Correspondent ಪತ್ರಿಕೆಯ ಈ ಹೆಸರೂ ಪ್ರಕಟನೆಯ ಈ ಕ್ರಮವೂ—ಎಂತಹ ವಿರೋಧಾಭಾಸ!

ಸಹನೆಗೂ ಒಂದು ಮಿತಿ ಇವೆಯಷ್ಟೆ? ಲೋಮೊನೊಸೋವ್ ಈ ಅವಹೇಳನೆಯನ್ನು ತಾಳಲಾರದೆ, ಪೀಟರ್ಸ್‌ಬರ್ಗ್ ವಿದ್ಯಾಲಯದ ಪ್ರಾಧ್ಯಾಪಕ ಯೂಲರರೆದುರು ತೋಡಿಕೊಂಡ: 'ಈ ಪ್ರಕಟಣೆ-

ಯಿಂದಾಗಿ ಆ ಪತ್ರಿಕೆಯ ಪ್ರಕಾಶಕರು ವಿಜ್ಞಾನಕ್ಕೆ ಮಹೋಪಕಾರ ಮಾಡುತ್ತಿಲ್ಲ. ನನ್ನ ಮೇಲಿನ ದ್ವೇಷಸಾಧನೆಗಾಗಿ ಹೀಗೆ ಮಾಡುತ್ತಿರುವರೋ ಏನೋ! ನನ್ನ ಸಿದ್ಧಾಂತದ ಅರ್ಥಕೂಡ ಇವರಿಗಾಗಿಲ್ಲವೆಂದು ವಿಷಾದದಿಂದ ಹೇಳಬೇಕಾಗಿದೆ.' ಯೂಲರ್ ಸಾಂತ್ವನ ಹೇಳಿದ:—'ಅಯ್ಯಾ, ಜರ್ಮನಿಯ ಪತ್ರಿಕಾಕರ್ತರು ನಿಮಗೆ ಅನ್ಯಾಯ ಮಾಡಿದುದು ನಿಜ. ಅವರ ಹುಚ್ಚುಸಾಹಸ ನನಗೆ ವಿಕಾರವಾಗಿ ಕಂಡಿದೆ. ಅವರ ಬರಹಗಳನ್ನು ತಾವು ತೃಣಸಮಾನವಾಗಿ ತಿಳಿಯಬೇಕು. ನಿಮ್ಮ ಪ್ರಬಂಧ ಅಪೂರ್ವವಾದುದಿದೆ. ಅದರ ಪ್ರತಿಯೊಂದನ್ನು ಪ್ರಾಧ್ಯಾಪಕ ಫೋರ್ಮೇಯುವರಿಗೆ ಕೊಟ್ಟಿದ್ದೇನೆ. ಅವರು ಫ್ರೆಂಚ್ ಪತ್ರಿಕೆಯಲ್ಲಿ ನಿಮ್ಮ ಪ್ರತಿಭಟನೆ ಪ್ರಕಟಿಸುವುದಾಗಿ ಹೇಳಿದ್ದಾರೆ. ಧೃತಿಗೆಡದಿರಿ!' ಫೋರ್ಮೆ ಕೆಲ ದಿನಗಳಲ್ಲಿಯೇ ಫ್ರೆಂಚ್ ಪತ್ರಿಕೆಗಳಲ್ಲಿ ಲೋಮೊನೊಸೋವನ ಪ್ರತಿಭಟನೆಯನ್ನು ಪ್ರಕಟಿಸಿದನು. ಯೂಲರನಿಗೆ ಈತನ ಪ್ರಬಂಧ ತುಂಬ ಮೆಚ್ಚಿಗೆಯಾಯಿತು. ಆತ ಅಕಾಡೆಮಿಗೆ ಬರೆದ ಮೆಚ್ಚೋಲೆ ಗಮನಿಸಿರಿ: 'ಇವರ ಪ್ರಬಂಧಗಳು ಸರ್ವೋತ್ಕೃಷ್ಟವಾದುವುಗಳು. ಇದುವರೆಗೆ ಕಂಡುಹಿಡಿಯಲಾರದ ಭೌತ-ರಸಾಯನಿಕ ವಿಭಾಗಗಳ ಮೇಲೆ ಬೆಳಕು ಚೆಲ್ಲಿದ್ದಾರೆ. ಇಂತಹ ಸಂಶೋಧನೆಗಳನ್ನು ಯುರೋಪಿನ ಇತರ ಅಕಾಡೆಮಿಗಳು ಕೈಕೊಳ್ಳಲೆಂದು ಹಾರೈಸುತ್ತೇನೆ.'

ಲೋಮೊನಸೋವ್ ತನ್ನ ಪ್ರಯೋಗಗಳಲ್ಲಿಯೇ ಸದಾ ನಿಮಗ್ನನಾಗಿರುತ್ತಿದ್ದ. ಅಕಾಡೆಮಿಯ ಸಭೆಗಳಿಗೆ ಆಗಮಿಸುತ್ತಿದ್ದುದು ತೀರ ವಿರಳ. ಅಪೂರ್ವ ಗಾಜನ್ನು ತಯಾರಿಸಲೆಂದು ೪೦೦೦ ಪ್ರಯೋಗಗಳನ್ನು ಮಾಡಿದ. ಬಣ್ಣದ ಗಾಜುಗಳನ್ನು ತಯಾರಿಸುವ ವಿಧಾನವನ್ನು ಕಂಡುಹಿಡಿದಿದ್ದನಲ್ಲದೆ, ಗಾಜಿನಲ್ಲಿ ಚಿತ್ರ ತೆಗೆಯುವ ಕ್ರಮವನ್ನು ಶೋಧಿಸಿದ. ೧೭೫೨ರಲ್ಲಿ ಮೊತ್ತಮೊದಲನೆಯ ಗಾಜನು ತಯಾರಿಸಿದ. ೧೭೫೩ರಲ್ಲಿ ಗಾಜಿನ ಕಾರ್ಖಾನೆಯನ್ನೂ ತೆರೆದನು. ಈ ಕಾರ್ಖಾನೆಯ ಸಂಸ್ಥಾಪನೆಯ ಸವಿನೆನಪೆಂದು, ತಾನೇ ತೆಗೆದ ಪೀಟರನ ಚಿತ್ರವನ್ನು ಸಿನೆಟ್ಟಿಗೆ ಕಾಣಿಕೆಯಾಗಿ ಕೊಟ್ಟನು. ಪ್ರಾರಂಭಕ್ಕೇನೆ ಈ ಕಾರ್ಖಾನೆಗೆ ಮುಗ್ಗಟ್ಟಿನ ಪರಿಸ್ಥಿತಿ ತಲೆದೋರಿತು; ಆದರೆ ೧೭೬೧ರಲ್ಲಿ ಅರಸನಿಂದಲೇ ಬೇಡಿಕೆ ಬಂದಿತ್ತು. ಶೀಘ್ರದಲ್ಲಿಯೇ ತೆರೆಯುತ್ತಿರುವ ಮ್ಯೂಝಿಯಮ್ಮಿಗಾಗಿ ಬಣ್ಣದ ಗಾಜು ಬೇಕಾಗಿತ್ತು. ಅರಸನ ಬೇಡಿಕೆಯಿಂದಾಗಿ ಕಾರಖಾನೆಯು ಜೀವ ಹಿಡಿಯುವಂತಾಯಿತು. ಗಾಜಿನಲ್ಲಿ ಈ—ತಾನೇ ತೆಗೆದ—ವರ್ಣಚಿತ್ರ the Battle of Poltava (ಪೊಲ್ಟಾವದ ಕದನ) ಲೆನಿನ್‌ಗ್ರಾಡ್ ಅಕಾಡೆಮಿಯನ್ನು ಅಲಂಕರಿಸಿದೆ. ಆ ಚಿತ್ರ ಇಂದು ನವೀನವಾಗಿಯೇ ತೋರುತ್ತದೆ. ಸಜೀವತೆಯೆ ಆ ಚಿತ್ರದ ವೈಶಿಷ್ಟ್ಯ. ಆ ಚಿತ್ರದ ಗಾತ್ರ—೨೩ ಫೂಟು ಉದ್ದ ಮತ್ತು ೨೦ ಫೂಟು ಅಗಲ. ಈ ಮಹಾಚಿತ್ರ ನಿರ್ಮಾಣಕ್ಕೆ ಎಷ್ಟು ಕಾಲ ಹಿಡಿದಿರಬಹುದು! ಈ ಚಿತ್ರದ ಒಟ್ಟು ತೂಕ ೪ ಟನ್ನಿಗೂ ಮಿಕ್ಕಿದೆ. ಈ ಚಿತ್ರ ತೆಗೆದುದು ೧೭೬೪ರ ಕೊನೆಗೆ. ಆ ಕಾರ್ಖಾನೆಯಲ್ಲಿ ನಿರ್ಮಿತವಾದ ಚಿತ್ರಗಳ ಸಂಖ್ಯೆ ೬೪ ಇದ್ದು, ೨೩ ಕಾಣೆಯಾಗಿವೆ. ಆತನ ಮರಣದೊಂದಿಗೇ ಆ ಕಾರಖಾನೆ ಮುಚ್ಚಿಕೊಂಡಿತು.

ದಿ ನ್ಯಾಶನಲ್ ಮ್ಯುಜಿಕಲ್ ಹಾಲ್
ಧಾರವಾಡ

ಗಡಿಯಾರ, ಚಾಳೀಸು, ರೇಡಿಯೊ, ಗ್ರಾಮೊಫೋನ್
ಮಾರಾಟಮಾಡುವವರು, ರಿಪೇರಿ ಮಾಡುವವರು.

ನಂಬುಗೆಯ ಮಾಲು! ಪ್ರಾಮಾಣಿಕ ವ್ಯವಹಾರ

ಧಾರವಾಡದಲ್ಲಿ ಹಲವು ವರ್ಷಗಳಿಂದ ನಮ್ಮ ವ್ಯವಹಾರ ನಡೆದಿದ್ದು, ಗ್ರಾಹಕರ ವಿಶ್ವಾಸಾದರಗಳನ್ನು ಗಳಿಸಿದೆ.

ಮಾಲಕರು: ಬಿ. ಜಿ. ಮುತ್ತಗಿ

೬, ಸೆಪ್ಟೆಂಬರ್ ೧೭೫೧ರಂದು 'ರಸಾಯನ ಶಾಸ್ತ್ರದ ಪ್ರಯೋಜಕತೆ' ಎಂಬ ಪ್ರಬಂಧವನ್ನು ಪ್ರಕಟಿಸಿದನು. ಅದರಲ್ಲಿ ಹೀಗೆ ಬರೆದಿದ್ದಾನೆ— Eyes are useless to a person who wants to see the inside of a thing, but has no hands to open it Hands are useless to a person who has no eyes to see the inside of a thing even when it is open, Chemistry may justifiably be called the hands of physics & mathematics its eyes. ಯಾವುದೇ ವಸ್ತುವನ್ನು ಸಂಪೂರ್ಣ ಅವಲೋಕಿಸಬೇಕಾದರೆ ಕಣ್ಣು, ಕೈ,—ಎರಡೂ ಅವಶ್ಯ; ಒಂದಿದ್ದು, ಇನ್ನೊಂದಿಲ್ಲದಿದ್ದಲ್ಲಿ, ಇದ್ದುದೂ ನಿಷ್ಪ್ರಯೋಜಕ ಭೌತಶಾಸ್ತ್ರಕ್ಕೆ ರಸಾಯನಶಾಸ್ತ್ರಕ್ಕೆ ಇದ್ದಂತಾದರೆ, ಗಣಿತ ಅದರ ಕಣ್ಣು. ೧೭೫೨ರ ಸುಮಾರಿಗೆ ಭೌತಶಾಸ್ತ್ರ ಮತ್ತು ರಸಾಯನ ಶಾಸ್ತ್ರಗಳ ನಡುವೆ—(chemical philosophy—ಇಂದು ಇದಕ್ಕೆ Physical chemistry (ಭೌತಿಕ ರಸಾಯನ ಶಾಸ್ತ್ರ) ಎಂಬ ಸೇತುವೆಯನ್ನು ನಿರ್ಮಿಸಿದ.

ರಸಾಯನ ಶಾಸ್ತ್ರದಲ್ಲೂ ಕೆಲ ಸಂಶೋಧನೆಗಳನ್ನು ಮಾಡಿದ ಲೋಮೊನೊಸೋವ ಸೀಸ, ಕಾಸಿದಾಗ ಅದರ ತೂಕ ಹೆಚ್ಚುವುದೆಂದು ಬಾಯ್ಲ್ ಕಂಡು ಹಿಡಿದಿದ್ದ ಲೋಮೊನೊಸೋವ್ ಈ ಪ್ರಯೋಗದ ಕುರಿತು ತನ್ನ ಅಭಿಪ್ರಾಯವನ್ನು ಅಕಾಡೆಮಿಗೆ ಅರುಹಿದನು. ನಿಸರ್ಗದಲ್ಲಿ ಸ್ಥಿತ್ಯಂತರಗಳುಂಟಾಗುವುದು ಸಮತೋಲವನ್ನು ಕಾಯ್ದುಕೊಳ್ಳಲೆಂದು. ಒಂದು ವಸ್ತುವಿನಲ್ಲಾದ ಹಾನಿ, ಇನ್ನೊಂದು ವಸ್ತುವಿನಲ್ಲಿ ಆದ ಲಾಭಕ್ಕೆ ಸರಿ ಹೋಗುತ್ತದೆ. ಆತನ ಈ ಸಮರ್ಥನೆಯೇ Conservation of Energy ಗೆ ಪೀಠಿಕೆ ಆಯಿತು ಲೋಹ-

ಗಳನ್ನು ಕಾಸಿದಾಗ ಅವುಗಳ ತೂಕ ಹೆಚ್ಚುವುದೆಂದೂ, ಅದೇ ನಿರ್ವಾತದಲ್ಲಿ ಕಾಸಿದಾಗ ಯಾವ ಹೆಚ್ಚಳವೂ ಆಗದೆಂದೂ, ಹಾಗೂ ಲೋಹದ ತೂಕದಲ್ಲಿಯ ಹೆಚ್ಚಳಕ್ಕೆ ಕಾರಣ ಲೋಹ ಮತ್ತು ಹವೆಯ ನಡುವೆ ನಡೆಯುವ ರಸಾಯನಕ್ರಿಯೆ ಎಂದೂ ವಿವರಿಸಿದನು. ಈ ಪ್ರಯೋಗಗಳ ಆಧಾರದ ಮೇಲೆಯೇ Low of Preservation of matter ಎಂಬ ತತ್ತ್ವವನ್ನು ಪ್ರತಿಪಾದಿಸಿದನು.

ಲೋಮೊನೊಸೋವ್ ವಿದ್ಯುತ್ತನ್ನು ಅಭ್ಯಸಿಸಿದನಲ್ಲದೆ, ಅದರಲ್ಲೂ ಕೆಲವು ಪ್ರಯೋಗಗಳನ್ನು ಮಾಡಿ ನೋಡಿದ. ವಾತಾವರಣದ ವಿದ್ಯುತ್ತನ್ನು ಅಭ್ಯಸಿಸ ಹೊರಟಾಗ, ರಾಯ್ಮನ್ನನ ಬಲಿ ಕೊಡಬೇಕಾಯಿತು. ಆ ಕಥೆ ಹೃದಯದ್ರಾವಕವಿದೆ:—

ಲೋಮೊನೊಸೋವ್ ತನ್ನ ಮನೆಯ ಮಾಳಿಗೆಯ ಮೇಲೆ ಒಂದು ಕೋಲು ನಿಲ್ಲಿಸಿ, ಅದರ ತುದಿಗೆ ತ್ರಿಶೂಲವನ್ನು ಸೇರಿಸಿದನು. ಆಮೇಲೆ ಈ ತ್ರಿಶೂಲಕ್ಕೆ ಒಂದು ತೆಳ್ಳನೆಯ ತಂತಿಯನ್ನು ಕಟ್ಟಿ, ಆ ತಂತಿಯನ್ನು ಮನೆಯ ಯಾವುದೇ ಭಾಗಕ್ಕೆ ತಗಲದಂತೆ ಮುಂಜಾಗ್ರತೆ ವಹಿಸಿ, ಒಂದು ಕಬ್ಬಿಣದ ದೊಣ್ಣೆ ಹಾಗೂ ರೇಶಿಮೆಯ ದಾರಕ್ಕೆ ಜೋಡಿಸಿದನು. ಇದಕ್ಕೆ ಆತನಿಟ್ಟ ಹೆಸರು Thundre Machine (ಗುಡುಗಿನ ಯಂತ್ರ) ಎಂದು. ಇದೇ ಪ್ರಕಾರ ರಾಯ್ಮನ್ನನ ಮನೆಯಲ್ಲೂ ಮಾಡಲಾಯಿತು. ೨೬ ಜುಲೈ ೧೭೫೩ರಂದು ಲೋಮೊನೊಸೋವ್ ಮತ್ತು ರಾಯ್ಮನ್ನರು ಅಕಾಡೆಮಿಯ ಸಭೆಗೆ ಉಪಸ್ಥಿತರಿದ್ದರು. ಮಧ್ಯಾಹ್ನ ೧ ಗಂಟೆಯಾಗಿರಬಹುದು, ಆಕಾಶವೆಲ್ಲಾ ಮೇಘಮಯವಾಗಿ, ಗುಡುಗು ಖಡ್ಖಡಲ್ಲೆಂದಿತು. ಆದರೆ ಮಳೆ ಒಂದು ಹನಿ ಕೂಡ ಬೀಳಲಿಲ್ಲ. ಇಬ್ಬರೂ ಸಭೆಯಿಂದೋಡಿ ಮನೆ ಸೇರಿ, ತಮ್ಮ ಯಂತ್ರದ ಬಳಿ ಸಾರಿದರು. ಆ ಯಂತ್ರವನ್ನು ನಿರೀಕ್ಷಿಸಿದಾಗ, ವಿದ್ಯುತ್ತು ಇನ್ನೂ ಉತ್ಪನ್ನವಾಗಿದ್ದಿಲ್ಲ. ಲೋಮೊನೊಸೋವ್ ಇನ್ನೇನು ಊಟಕ್ಕೆ ಕೂಡ್ರಲಿದ್ದ—ತಂತಿಯಿಂದ ಕಿಡಿಗಳು ಬರಲಾರಂಭಿಸಿದುವು. ಹೆಂಡತಿಗೆ ಈ ವಿನೋದವನ್ನು ತೋರಿಸಿದನು. ಈ ದೃಶ್ಯ ನೋಡಲು ನೆರೆಹೊರೆಯವರು ಆತನ ಮನೆಯಲ್ಲಿ ನೆರೆದರು. ಕಬ್ಬಿಣದ ದೊಣ್ಣೆಯನ್ನು ಮುಟ್ಟಿದಾಗ ಪ್ರತಿಯೊಬ್ಬರಿಗೂ ಕೈಹಿಂತೆಗೆಯುವಂತಾಯಿತು. ಇನ್ನೊಂದು ಕ್ಷಣದಲ್ಲಿಯೇ ಕರ್ಣಕಠೋರವಾದ ಸಿಡಿಲು ಕೇಳಬಂದಿತು. ನೆರೆಯವರು ಗಾಬರಿಯಾದರು. ವಿದ್ಯುತ್ತಿನೊಂದಿಗೆ ಚೆನ್ನಾಟ ಸಾಕೆಂದ, ಗಂಡನಿಗೆ ಹೆಂಡತಿ ಅಪ್ಪರಿಸಳು. ಅಡಿಗೆ ಆರಿಹೋಗುವುದೆಂದೂ, ಅದು ಕಾರಣ ಊಟಕ್ಕೆ ಕೂಡಬೇಕೆಂದೂ ದೈನ್ಯದಿಂದ ಹೇಳಿದಳು ಆ ತಾಯಿ. ಈ ಒಳಗಾಗಿ ಕಿಡಿಗಳು ಕಾಣಬರಲಿಲ್ಲ ಲೋಮೊನೊಸೋವ್ ಊಟದ ತಟ್ಟೆಗೆ ಕೈ ಹಾಕಲಿದ್ದ. ಹೊರಗೆ ಬಾಗಿಲು ಬಡಿಯುವ ಸಪ್ಪಳ ಕೇಳಬಂದಿತು. ಬಾಗಿಲನ್ನು ತೆರೆದಾಗ,ರಾಯ್ಮನ್ನನ ಸೇವಕ ಕಾಣಬಂದ. ಕಂಗಳಲ್ಲಿ ನೀರು; ಬಾದೇಶವನ ಮೇಲುಸಿರು ಬಿಡುತ್ತಿದ್ದ. ಯಾರಾದರೂ ಹಾದಿಯಲ್ಲಿ ಆತನನ್ನು ಹೊಡೆದಿರಬಹುದೆಂದು ಲೋಮೊನೊಸೋವ್‌ನ ಭಾವಿಸಿದ ಆದರೆ ? ಆ ಸೇವಕ ಕೊನೆಗೆ ಮುಕ್ಕರಿಸುತ್ತಉಸುರಿದ: ರಾಯ್ಮನ್ ಸಿಡಿಲಿನಿಂದ ಸತ್ತಿರುವನೆಂದು. ಲೋಮೊನೊಸೋವ್‌ನ ಜಂಘಾಬಲವೇ ಉಡುಗಿಹೋಯಿತು. ಧಾವಿಸಿದ ಮಿತ್ರನ ಮನೆಗೆ. ರಾಯ್ಮನ್ನನ ಮನೆಯಲ್ಲಿ ಆತ ಕಂಡುದೇನು ? ರಾಯ್ಮನ್ನನ ಶವವನ್ನು ಸುತ್ತುವರಿದು ಆತನ ಹೆಂಡತಿ ಮತ್ತು ಮಕ್ಕಳು, ಕಣ್ಣೀರಿನ ಕಾಲುವೆಯನ್ನು ಹರಿಸುತ್ತಿದ್ದರು. ಈಗೊಂದು ಗಂಟೆಯ ಹಿಂದೆಯೆ ಸುಂದರಸ್ವಪ್ನಗಳನ್ನು ಕಂಡಿದ್ದರು ಅವರಿಬ್ಬರು ! ವಿಧಿಯ ಆಣತ ಕಾಣಬಲ್ಲವರಾರು ? ಪ್ರಯೋಗ ನೋಡಹೊರಟ ರಾಯ್ಮನ್ನನು ಪ್ರಯೋಗಕ್ಕೆ ಪ್ರಾಣಾರ್ಪಣ ಮಾಡಿದ್ದ. ಅಯ್ಯೊ, ನನ್ನ ಹುಚ್ಚಿಗಾಗಿ ಅನ್ಯಾಯವಾಗಿ ನನ್ನೀ ಮಿತ್ರನನ್ನು ಸಾವಿನ ದವಡೆಗೆ ಸಿಲುಕಿಸಿದೆನಲ್ಲ—ಎಂದು ಮಮ್ಮಲ ಮರುಗಿದನು ಲೋಮೊನೊಸೋವ್. ಲೋಮೊನಸೋವ್ ಕೂಡ ಆತನ ಮಿತ್ರನಂತೆ ಸಾವನ್ನಪ್ಪುವವನಿದ್ದ—ಇನ್ನೊಂದು ಕ್ಷಣದಲ್ಲಿಯೇ. ಆದರೆ ವಿಧಿ ಆತನ ಮೇಲೆ ಕರುಣೆದೋರಿತು.

ಅಕಾಡಮಿಯ ಪರವಾಗಿ ಆಗಾಗ ಭಾಷಣಮಾಲೆಯನ್ನು ಏರ್ಪಡಿಸಲಾಗುತ್ತಿತ್ತು. ಇಂಥ ಮಾಲೆಯಲ್ಲಿ ಭಾಷಣಮಾಡುವ ಸದವಕಾಶ ಲೋಮೊನಸೋವನಿಗೆ ದೊರೆತುದು ೧೭೫೩, ನವ್ಹಂಬರ್ ೨೬ರಂದು. ಈತನ ಪ್ರಥಮ ಭಾಷಣ ಜನಪ್ರಿಯವಾದುದರಿಂದ, ಅಕಾಡಮಿಯವರು ಆಗಾಗ ಭಾಷಣ ಮಾಡಲು ಪ್ರಾರ್ಥಿಸುವುದು ಅನಿವಾರ್ಯವಾಯಿತು. ಈತ ವಿಜ್ಞಾನಿ, ವಾಗ್ಮಿ ಮಾತ್ರವಾಗಿರದೆ, ಶ್ರೇಷ್ಠ ಕವಿಯೂ ಆಗಿದ್ದನು. ಈತನ ಕಾವ್ಯಗಳು ಪಂಡಿತ ಪಾಮರರಿಂದ ಮನ್ನಣೆಪಡೆದಿದ್ದುವು. ನಾಟಕಕಾರನೆನಿಸಿಕೊಳ್ಳುವ ಸೌಭಾಗ್ಯ ಸುಲಭವಾಗಿ ದೊರೆಯಿತು. ಅಂದು ರಶಿಯನ್ ಭಾಷೆಯಲ್ಲಿ ಬರೆಯಲಾದ ನಾಟಕಗಳೇ ಇದ್ದಿಲ್ಲವಾದ್ದರಿಂದ, ಅಕಾಡಮಿಯವರು ಈತನಿಗೆ ಮತ್ತು ಟ್ರೆಡಿಕಾವಸ್ಕಿಗೆ ಬರೆಯಲು ಕೇಳಿದರು :—ಅದೂ ಅವಿದ್ಧ ನಾಟಕಗಳನ್ನು. ಲೋಮೊನೊಸೋವ್ ತಿಂಗಳೊಂದರಲ್ಲಿಯೇ Tamira & Selima ಎಂಬ ಅವಿದ್ಧ ನಾಟಕವನ್ನು ರಚಿಸಿದನು. ಇದು ಜನಪ್ರಿಯವಾದುದಲ್ಲದೆ, ಆ ತಿಂಗಳಲ್ಲಿ ಪುನರಾವೃತ್ತಿಯನ್ನು ಕಂಡಿತು. ಈತನ ಎರಡನೆಯ ಹಾಗೂ ಕೊನೆಯ ಅವಿದ್ಧನಾಟಕ ೧೭೫೧ರಲ್ಲಿ ಪ್ರಕಟವಾಯಿತು. ನಾಟಕತಂತ್ರದೃಷ್ಟಿಯಿಂದ ಇಂದು ಆ ನಾಟಕಗಳನ್ನು ನೋಡಿದಾಗ, ಕಳಪೆಯೆಂದು ತೋರಬಹುದಾದರೂ, ನಾಟಕರಚನೆಗೆ ಕೈಯಿಕ್ಕಿದನೆಂಬುದನ್ನು ಮರೆಯುವಂತಿಲ್ಲ.

ಲೋಮೊನೊಸೋವನ ಕಾವ್ಯಕ್ಕೆ ಮನಸೋತ ಕೆಲವರು, ವೈಜ್ಞಾನಿಕ ಕ್ಷೇತ್ರವನ್ನು ಬಿಟ್ಟುಕೊಟ್ಟು ಕಾವ್ಯನಿರ್ಮಾಣವನ್ನೇ ಕೈಕೊಳ್ಳಬೇಕೆಂದು ಮನವೊಲಿಸಬಯಸಿದರು. ಅವರೀ ಸಾಹಸ ಹುಚ್ಚು ಹವ್ಯಾಸವಲ್ಲದೆ ಇನ್ನೇನು ? ವಿಜ್ಞಾನಕ್ಕಾಗಿ ಆತನ ಜೀವ ಮುಡಿಪಾಗಿತ್ತು, ಕಾವ್ಯರಚನೆ ವಿರಾಮಸಾಧನ ಮಾತ್ರ. ಈ ಮನಃಪ್ರವೃತ್ತಿ ಅಂದಿನ ಜನತೆಯ ಮಟ್ಟವನ್ನು ತೋರುತ್ತದೆ. ಲೋಮೊನೊಸೋವ್ ತನ್ನ ಗೆಳೆಯನಿಗೆ ಬರೆದ ಓಲೆಯೊಂದರಲ್ಲಿ ಹೀಗೆ ಹೇಳಿದ್ದಾನೆ:-ವಿಜ್ಞಾನ ಬಿಟ್ಟುಕೊಡಲು ನನಗೆ ಮಿತ್ರರನೇಕರು ದುಂಬಾಲು ಬಿದ್ದಿದ್ದಾರೆ ಆದರೆ ವಿಜ್ಞಾನ ನನ್ನ ಪ್ರಾಣವಿದ್ದಂತೆ. ಹಾಗೆ ನೋಡಿದರೆ ವಿಜ್ಞಾನವನ್ನು ಬಿಟ್ಟುಕೊಡುವ ಆವಶ್ಯಕತೆ ಆದರೂ

ಎಲ್ಲಿದೆ? ಪ್ರತಿಯೊಬ್ಬನಿಗೂ ವಿರಾಮ ಅಗತ್ಯವಷ್ಟೇ! ಆ ವಿರಾಮ ಕಾಲವನ್ನು ಕೆಲವರು ಮಿತ್ರರೊಂದಿಗಾಗಲಿ, ಆಪ್ತರೊಂದಿಗಾಗಲಿ, ಗೋಷ್ಠಿಯಲ್ಲಿ ಕಳೆಯಬಯಸುತ್ತಾರೆ; ಇನ್ನು ಕೆಲವರು, ಆಟ-ಪಾಟಗಳಲ್ಲಿ ಕಳೆಯುತ್ತಾರೆ. ಈ ಬಗೆಯ ವಿರಾಮಕಾಲವನ್ನು ನಾನು ಬಿಟ್ಟುಕೊಟ್ಟು ಅನೇಕ ದಿನಗಳಾಗಿವೆ. ಇತ್ತೀಚೆಗೆ ಇಂತಹ ಕಾಲವನ್ನು ರಶಿಯಾದ ಇತಿಹಾಸವನ್ನು ಬರೆಯುವುದರಲ್ಲಿ ಮತ್ತು ರಶಿಯನ್ ಭಾಷೆಯ ಶುದ್ಧೀಕರಣ ಮಾಡುವುದರಲ್ಲಿ ವಿನಿಯೋಗಿಸ ಬಯಸುತ್ತೇನೆ. ವಿರಾಮಕಾಲವನ್ನು ವ್ಯರ್ಥವಾಗಿ ಆಟ-ಪಾಟಗಳಲ್ಲಿ ಕಳೆಯುವುದು ನನಗೇಕೋ ಇಂದು ಸರಿಕಾಣದು,' ಎಂತಹ ಪಿಸವು ವಾತಾವರಣ! ಮೇಧಾವಿಯ ವೈಜ್ಞಾನಿಕ ಪ್ರಯೋಗಗಳನ್ನು ಬಿಲಿಯರ್ಡ್ ಆಟದೊಂದಿಗೆ ಹೋಲಿಸುವುದೆಂದರೆ! ಲೋಮೊನೊಸೋವ್ ತನ್ನ ವಿರಾಮಕಾಲದಲ್ಲಿಯೇ ಬರೆಯಲಾದ 'Rhetoric'ನ್ನು ೧೭೪೮ರಲ್ಲಿ ಮತ್ತು ರಶಿಯನ್ ವ್ಯಾಕರಣವನ್ನು ೧೭೫೫ರಲ್ಲಿ ರಚಿಸಿದನು.

ಮಾತೃಭಾಷೆಯಲ್ಲಿ ಎಣೆಯಿಲ್ಲದ ಅಭಿಮಾನ ಈತನಿಗೆ. ಆ ಅಭಿಮಾನವನ್ನು ವ್ಯಕ್ತಪಡಿಸುವ ವಿಧಾನವಾದರೂ ಎಂತಹುದೆಂದಿರಿ? 'ರೋಮದ ಚಕ್ರವರ್ತಿಯಾದ ಐದನೆಯ ಚಾರ್ಲಸನು ಹೇಳುತ್ತಿದ್ದನಂತೆ: ದೇವರೊಂದಿಗೆ ಸ್ಪ್ಯಾನಿಶ್ ಭಾಷೆಯಲ್ಲಿ, ಮಿತ್ರರೊಂದಿಗೆ ಫ್ರೆಂಚ್ ಭಾಷೆಯಲ್ಲಿ, ಶತ್ರುಗಳೊಂದಿಗೆ, ಜರ್ಮನ್ ಭಾಷೆಯಲ್ಲಿ, ಹೆಣ್ಣುಮಕ್ಕಳೊಂದಿಗೆ ಇಟಾಲಿಯನ್ ಭಾಷೆಯಲ್ಲಿ ಮಾತನಾಡಬೇಕು. ಆತನಿಗೆ ರಶಿಯನ್ ಭಾಷೆಯ ಪರಿಚಯವಿದ್ದಿದ್ದರೆ, ಈ ಭಾಷೆಯನ್ನೇ ಸರ್ವಕಾಲದಲ್ಲಿ ಆಡಬೇಕೆಂದು ಹೇಳುತ್ತಿದ್ದನೆಂಬುದರಲ್ಲಿ ನನಗೆ ಎಳ್ಳನಿತೂ ಸಂಶಯವಿಲ್ಲ. ಈ ದೃಢ ವಿಶ್ವಾಸಕ್ಕೆ ನನ್ನಲ್ಲಿ ಸಬಲ ಕಾರಣಗಳಿವೆ. ನಮ್ಮ ರಶಿಯನ್ ಭಾಷೆಗೆ ಯಾವುದರ ಕೊರತೆ ಇದೆ? ಸ್ಪ್ಯಾನಿಷ್ ಭಾಷೆಯ ಭವ್ಯತೆ, ಫ್ರೆಂಚ್ ಭಾಷೆಯ ಸಜೀವತೆ, ಜರ್ಮನ್ ಭಾಷೆಯ ಕೆಚ್ಚು, ಇಟಾಲಿಯನ್ ಭಾಷೆಯ ಮಾರ್ದವತೆ, ಏಕೀಭವಿಸಿವೆ. ಮೇಲಾಗಿ ಗ್ರೀಕ್ ಮತ್ತು ಲ್ಯಾಟಿನ್ ಭಾಷೆಗಳಲ್ಲಿ ಕಂಡುಬರುವ ಸ್ಪಷ್ಟತೆಯ ಸೌಂದರ್ಯ ಹಾಗೂ ಶ್ರೀಮಂತಿಕೆ ನಮ್ಮೀ ಭಾಷೆಯಲ್ಲಿದೆ'

ಲೋಮೊನೊಸೋವ್ ವಿರಚಿತ ವ್ಯಾಕರಣವು, ೧೪ ಸಂಸ್ಕರಣಗಳನ್ನು ಕಂಡಿದೆಯಲ್ಲದೆ, ಜರ್ಮನ್ ಫ್ರೆಂಚ್ ಮತ್ತು ನವೀನ ಗ್ರೀಕ ಭಾಷೆಗಳಲ್ಲಿ ಅನುವಾದಿತವಾಗಿದೆ ಅದೆಷ್ಟೋ ಭಾಷೆಗಳಲ್ಲಿ ತಯಾರಾದ ವ್ಯಾಕರಣಗಳಿಗೆ ಇದೇ ಆಧಾರ. 'ಯಾವುದೇ ವಿಷಯವನ್ನು ನಮ್ಮ ಭಾಷೆಯಲ್ಲಿ ವಿವೇಚಿಸುವುದು ಅಸಾಧ್ಯವಾದರೆ, ಆ ತಪ್ಪು ಭಾಷೆಯದಲ್ಲ-ನಮ್ಮದು ಎಂಬುದು ಆತನ ಖಚಿತ ಅಭಿಪ್ರಾಯ. ವೈಜ್ಞಾನಿಕ ವಿಚಾರಗಳನ್ನು ಕಾವ್ಯರೂಪದಲ್ಲಿ ವಿವರಿಸುವುದರಲ್ಲಿ ಆತನನ್ನು ಸರಿಗಟ್ಟಿದವರಿಲ್ಲ

ಈತ ೧೭೪೫ರಲ್ಲಿ ಅಕಾಡಮಿಗೆ ಸಭಾಸದನಾಗಿ ಆಯ್ಕೆಗೊಂಡನು. ಅಕಾಡಮಿಯ ಆಡಳಿತದಲ್ಲಿ ಕೈಹಾಕುವ ಅಧಿಕಾರ ಕ್ರಮಪ್ರಾಪ್ತವಾಗಿ ದೊರೆಯಿತು. ಲೋಮೊನೊಸೋವ್ ತನ್ನ ಸರಿಸಮಾನನಾದುದನ್ನು ಕಂಡ ಶ್ಯೂಮಾಚರ್, ಬಂಧಿತ ಶ್ವಾನದಂತೆ ಒದ್ದಾಡಿದ. ಅದೇ ವರುಷವೇ ಲೋಮೊನೊಸೋವ್ ತನ್ನ ವಸತಿ ಮತ್ತು ಪ್ರಯೋಗ ಶಾಲೆಯನ್ನು ಹೊಸ ಸ್ಥಳಕ್ಕೆ ವರ್ಗಾಯಿಸಿದ. ಈತನ ಅವಿರತ ಪರಿಶ್ರಮದ ಫಲವಾಗಿ, ಇಂದು ಸುಪ್ರಸಿದ್ಧವಾದ ಮಾಸ್ಕೋ ವಿಶ್ವವಿದ್ಯಾಲಯ ರೂಪು ತಳೆಯಿತು. ಇದು ರಶಿಯದ ಪ್ರಪ್ರಥಮ ವಿಶ್ವವಿದ್ಯಾಲಯ. ಇದನ್ನು ನಿಯೋಜಿಸಿದವನು ಲೋಮೊನೊಸೋವನೇ. ಈ ವಿಶ್ವವಿದ್ಯಾಲಯ ಜನ್ಮವೆತ್ತಿದುದು ಜಾನೇವರಿ ೧೨–೧೭೫೫ರಂದು. ವಿಶ್ವವಿದ್ಯಾಲಯದ ಮುದ್ರಣಾಲಯದಲ್ಲಿ ಮೊದಲು ಪ್ರಕಟವಾದುದು ಲೋಮೊನೊಸೋವನ ಕೃತಿಗಳೇ! ಈತನ ಸೇವೆಯನ್ನು ಮನದಂದೇ ಈ ವಿಶ್ವವಿದ್ಯಾಲಯಕ್ಕೆ ಈತನ ಹೆಸರನ್ನಿಡಲಾಯಿತು.

× × × ×

ವೃದ್ಧಾಪ್ಯ ತ್ವರಿತವಾಗಿ ಧಾವಿಸುತ್ತ ನಡೆದಿದ್ದರೂ, ಉತ್ಸಾಹ ಮಾತ್ರ ಎಂದಿನಂತೆಯೆ ಇತ್ತು! ಹಾಗೆ ನೋಡಿದರೆ. ವಯಸ್ಸಿನೊಂದಿಗೆ ಹುಮ್ಮಸ್ಸು ಹೆಚ್ಚುತ್ತ ಹೋಯಿತೇನೋ! ಲೋಮೊನೊಸೋವ್ ಸದಾ ಉದ್ಯೋಗಿ. ವಿಜ್ಞಾನ, ಕಾವ್ಯ, ಇತಿಹಾಸ — ಈ ಕ್ಷೇತ್ರಗಳಲ್ಲಿ ಮಾತ್ರವೆ ತನ್ನ ಕಾರ್ಯಾಚರಣೆಯನ್ನು ನಿರ್ದಿಷ್ಟಗೊಳಿಸದೆ, ಆಡಳಿತೆ ಮತ್ತು ಆರ್ಥಿಕ ಸಮಸ್ಯೆಗಳಲ್ಲೂ ಆಸಕ್ತಿಯಿಂದ ಭಾಗವಹಿಸಿದನು. ಅಕಾಡಮಿಯ ಪರವಾಗಿ 'ಬೆಳಕು' ಕುರಿತು ಕೂಲಂಕಷ ಅಭ್ಯಾಸ ಕೈಕೊಳ್ಳಲು ಅವಕಾಶ ಒದಗಿಸಿಕೊಟ್ಟನಲ್ಲದೆ, ತಾನೇ ಕೆಲ ಯಂತ್ರಗಳನ್ನು ಕೂಡ ರಚಿಸಿದನು ಜೀವನದ ಸಂಧ್ಯೆಯಲ್ಲಿದ್ದ ಈತನಿಗೆ ಬೆಳಕಿನಲ್ಲಿ ತುಂಬಾ ಆಸ್ಥೆ. ಆತನ ಕೃತುಶಕ್ತಿಯನ್ನು ಸಮಕಾಲೀನರು ಗುರುತಿಸದೆ ಹೋದುದು ದೈವದುರ್ವಿಪಾಕ. ಆತ ರಚಿಸಿದ ಸಾಧನೆಗಳು ಇಂದು ಕಾಣೆಯಾಗಿವೆ; ಮೇಲಾಗಿ ಆ ಸಾಧನೆಗಳ ರೂಪರೇಷೆಗಳೂ ಕೂಡ ಅಲಭ್ಯವಾಗಿವೆ. ಆತನ ಟಿಪ್ಪಣಿಗಳಿಂದ ಮಾತ್ರ ಆತನ ಸಾಧನೆಗಳ ಸ್ಥೂಲಪರಿಚಯವಷ್ಟೇ ದೊರೆಯಬಹುದು. ೧೭೬೨ರಲ್ಲಿ ಈತ ಗೂಢಗನ್ನಡಿಯೊಂದನ್ನು ನಿರ್ಮಿಸಿದನು. ಈ ಕನ್ನಡಿಯಿಂದ ರಾತ್ರಿಯಲ್ಲಿ ಬಂಡೆಗಲ್ಲುಗಳನ್ನು ಹಾಗು ಹಡಗುಗಳನ್ನು ಗುರುತಿಸುವುದು ತೀರ ಸುಲಭ. ಜಲಪ್ರವಾಸಕ್ಕೆ ಆವಶ್ಯಕ ಸಾಧನ ಇದು. ಒಟ್ಟಾಗಿ ಈ ಕನ್ನಡಿ ಕತ್ತಲೆಯನ್ನೇ ಭೇದಿಸಬಲ್ಲದು ಇಂಥ ಕನ್ನಡಿಯ ಪ್ರಯೋಜಕತೆಯನ್ನರಿಯಲ ಸಮರ್ಥವಾದ ಅಂದಿನ ಜನತೆ, ಅವನೀ ಶೋಧವನ್ನು ತಿರಸ್ಕರಿಸಿತು. ಇವನೇ ಮೊತ್ತಮೊದಲು ದೂರದರ್ಶಕ ಯಂತ್ರವನ್ನು ಕಂಡುಹಿಡಿದವನು. ಆದರೆ ೧೭೮೯ರಲ್ಲಿ ಇಂಥವೇ ಯಂತ್ರವನ್ನು ಸುಪ್ರಸಿದ್ಧ ಖಗೋಲಶಾಸ್ತ್ರಜ್ಞನಾದ ಹರ್ಶಲ್‌ನು ರಚಿಸಿದನು. ದುರ್ದೈವದ ಸಂಗತಿಯೆಂದರೆ, ಈ ಯಂತ್ರ ಹರ್ಶಲ್ ಯಂತ್ರವೆಂದು ಖ್ಯಾತಿಪಡೆದಿದೆ. ವಾಸ್ತವವಾಗಿ ಲೋಮೊನೊಸೋವ್ ಯಂತ್ರವೆಂದು ಕರೆಯಲ್ಪಡಬೇಕು. ೧೭೬೩ರಲ್ಲಿ ಲೋಮೊನೊಸೋವ್ The Elements of Metallurgy & Mining ಎಂಬ ಪ್ರಬುದ್ಧಗ್ರಂಥವನ್ನು ಬರೆದನು. ಖನಿಜಶಾಸ್ತ್ರದ ಅಭ್ಯಾಸಕ್ಕೆಂದೇ ವಿದೇಶಕ್ಕೆ ಹೋಗಿ,

ಕೆಲ ಅನಿವಾರ್ಯ ಕಾರಣಗಳ ಮೂಲಕ, ಆ ಅಭ್ಯಾಸವನ್ನು ಬಿಟ್ಟು ಕೊಟ್ಟ ಲೋಮೊನೊಸೋವನೇ, ಅದೇ ಶಾಸ್ತ್ರದ ಮೇಲೆ ಪ್ರಬುದ್ಧ ಪ್ರಬಂಧವನ್ನು ಬರೆದುದು, ಆತನ ಪ್ರತಿಭಾಶಕ್ತಿಯ ದ್ಯೋತಕ.

೧೭೫೮ರಲ್ಲಿ ಈತನನ್ನ ಅಕಾಡಮಿಯಲ್ಲಿ ಭೂಗೋಲ ವಿಭಾಗಕ್ಕೆ ಪ್ರಧಾನಾಧ್ಯಾಪಕನನ್ನಾಗಿ ನಿಯಮಿಸಲಾಯಿತು. ಈತನ ದಿಗ್ದರ್ಶನದಲ್ಲಿ ೧೭೬೩ರೊಳಗಾಗಿ ಈ ವಿಭಾಗವು ರಶಿಯಾದ ಕುರಿತು ೮ ನಕಾಶಗಳನ್ನು ತಯಾರಿಸಿತು. ಈ ನಕಾಶೆಯನ್ನು ತಯಾರಿಸುವಲ್ಲಿ ಹೆಚ್ಚಿನ ದಕ್ಷತೆಯನ್ನು ವಹಿಸಲಾಗಿತ್ತು. ಪ್ರತಿಯೊಂದು ಸ್ಥಳದ ಕ್ಷೇತ್ರಫಲ, ಜನಸಂಖ್ಯೆ, ಗೃಹಸಂಖ್ಯೆ, ಗೃಹ-ಪ್ರಕಾರ, ಹರಿಯುವ ಹಳ್ಳ-ನದಿಗಳು, ನಡೆಯುವ ಉತ್ಸವಗಳು, ವ್ಯಾಪಾರ-ಉದ್ದಿಮೆ, ಅರಣ್ಯ ಸಂಪತ್ತು, ಸಾಗುವಳಿ ಮಾಡಿದ-ಮಾಡದ ಭೂಮಿ, ನದಿ-ಹಳ್ಳಗಳಿಗೆ ಪೂರ ಬರುವ ಹಾಗೂ ಬತ್ತುವ ಕಾಲ, ಬೆಳೆ, ಪ್ರವಾಸ ಸೌಕರ್ಯ-ಇವೆಲ್ಲವುಗಳ ಕುರಿತು ವಾಸ್ತವಾಂಶಗಳನ್ನು ಕಲೆಹಾಕಲಾಗಿತ್ತು. ಈ ಸಂಗ್ರಹಿತ ವಿಷಯಗಳ ಕುರಿತು ವಿಮರ್ಶಕ ಗ್ರಂಥವನ್ನು ಬರೆದಿಡುವಾಗಲೇ, ಮೃತ್ಯುವು ಇವನನ್ನು ಸೆಳೆಯಿತು. ವಿವಿಧ ದೇಶಗಳೊಂದಿಗೆ ಜಲಪರ್ಯಟನಕ್ಕೆಂದು ನವೀನ ಮಾರ್ಗಗಳನ್ನು ಸೂಚಿಸಿದನು. ರಶಿಯಾದಿಂದ ಜಪಾನಕ್ಕೆ ಹೋಗಲು ಹಿಮರಹಿತ ಜಲಮಾರ್ಗವನ್ನು ಕಂಡುಹಿಡಿದನು. ಆದರೆ ಸರಕಾರ ಮಾತ್ರ ಈತನ ಸಲಹೆಗೆ ಬೆಲೆ ಕೊಡಲಿಲ್ಲ. ಅನೇಕ ವಿಷಯಗಳ ಕುರಿತು ವಿಚಾರಪ್ರಚೋದಕ ಪ್ರಬಂಧಗಳನ್ನು ಬರೆದನು. ಈ ಎಲ್ಲ ಬರೆಹಗಳನ್ನು ಗಮನಿಸಿದಾಗ, ಈತನ ಪಾಂಡಿತ್ಯದ ಪರಿಚಯ ಆಗದಿರದು. ಅದಾವ ಜನ್ಮದ ಪುಣ್ಯಬಲದಿಂದಲೊ, ಈ ಜನ್ಮದಲ್ಲಿ ಇಷ್ಟೊಂದು ಕಲೆಗಳನ್ನರಿಯುವ ಸೌಭಾಗ್ಯ ಲೋಮೊನೊಸೊವನಿಗೆ ದೊರೆಯಿತು. ಈ ಎಲ್ಲ ಬರೆಹಗಳಲ್ಲಿ ನಾವು ಕಾಣುವುದು ಆತನಲ್ಲಿರುವ ಸ್ವದೇಶದ ಬಗ್ಗೆ ಅಭಿಮಾನ ಹಾಗು ಕಳಕಳಿ

ಈ ಬಗೆಯ ಚಟುವಟಿಕೆಯ ಜೀವನಕ್ರಮದಿಂದ ಶರೀರ ತುಂಬ ದಣಿಯಿತು. ೧೭೬೦ರ ಸುಮಾರಿಗೆ ದೇಹಾಲಸ್ಯ-ಆಗಾಗ ತಲೆದೋರಲಾರಂಭಿಸಿತು. ಇಂಥದರಲ್ಲಿಯೇ ಅಕಾಡಮಿಯ ಅಹಿತದ ಕುರಿತು ಗ್ರಂಥವನ್ನು ಬರೆದನು. ಈ ಗ್ರಂಥದಲ್ಲಿ ವಿದೇಶೀಯರ ದೂಷಣೆ ಮಾತ್ರವಿರದೆ, ಅಕಾಡಮಿಯ ಧ್ಯೇಯ ಧೋರಣೆಗಳನ್ನು ವಿವೇಚಿಸಿದ್ದ. ಈ ಗ್ರಂಥದ ಪ್ರಕಟಣೆಯಿಂದ ಸರಕಾರದ ಕಣ್ಣು ತೆರೆಯಬಹುದೆಂದು ಲೋಮೊನೊಸೋವ್ ತಪ್ಪಾಗಿ ಭಾವಿಸಿದನು. ಇಷ್ಟು ಸುಧಾರಣೆಗಳು ಈತನ ಜೀವಿತಕಾಲದಲ್ಲಾಗಲಿಲ್ಲ. ಜೀವನದ ಕೊನೆಕೊನೆಗೆ ಇವನ ಕೀರ್ತಿಲತೆ ಹಬ್ಬತೊಡಗಿತು. ಸ್ವೀಡಿಷ್ ಅಕಾಡಮಿಯವರು ಈತನನ್ನು ೧೭೬೦ರಲ್ಲಿ ಗೌರವಸದಸ್ಯನನ್ನಾಗಿ ಸ್ವೀಕರಿಸಿದರು. ತನಗಿತ್ತ ಸನ್ಮಾನಕ್ಕೆ ಪ್ರತಿಯಾಗಿ ಲೋಮೊನೊಸೋವ್ ಆ ಅಕಾಡಮಿಗೆ ಪ್ರಬಂಧವೊಂದನ್ನು ಒಪ್ಪಿಸಿದ. ಇಟಲಿಯ ಪತ್ರಿಕೆಯೊಂದು ಈತನ ಕೃತಿಗಳನ್ನು ಕೊಂಡಾಡಿದ್ದನ್ನು ಕಂಡುಕೊಂಡು, ಬೊಲೋನಾ ಅಕಾಡಮಿಯವರೂ ಇವನಿಗೆ ಗೌರವ ಸದಸ್ಯತ್ವವನ್ನು ದಯಪಾಲಿಸಿದರು. ಹೀಗೆ ಯುರೋಪದ ಮಹಾರಾಷ್ಟ್ರಗಳು ಈತನನ್ನು ಗೌರವಿಸಿದರೂ, ಸ್ವದೇಶವಾದ ರಶಿಯಾ ಅನಾಸ್ಥೆ ತಳೆದುದು ದುರ್ದೈವದ ಸಂಗತಿಯಷ್ಟೆ. ಹಿತ್ತಲ ಗಿಡವು ಎಂದಾದರೂ ಮದ್ದಾಗಬಹುದೆ? ಮಂಗನಿಗೆ ಮಾಣಿಕ್ಯದ ಮೌಲ್ಯ ತಿಳಿಯಬಹುದೆ? ಸ್ವದೇಶದಲ್ಲಿಯ ಅನಾದರಕ್ಕೆ ಮೂಲ ಕಾರಣ: ಈತನ ಮೇಲೆ ವಿಷ ಕಾರುತ್ತಿರುವ ಅಕಾಡಮಿಯ ವಿದೇಶೀಯ ಆಡಳಿತಗಾರರು. ಅಸಂತುಷ್ಟನಾದ ಲೋಮೊನೊಸೋವ್ ಅಕಾಡಮಿಗೆ ೧೭೬೩ರಲ್ಲಿ ತ್ಯಾಗಪತ್ರವನ್ನು ಕೊಡಬಯಸಿದ. ಆದರೆ ಇದು ಅಸ್ವೀಕೃತವಾಯಿತು. ಈತನ ಯೋಗ್ಯತೆಯನ್ನರಿತವನೆಂದರೆ ಯೂಲರ್ ಮಾತ್ರ. ಅಕಾಡಮಿಯ ಅಧ್ಯಕ್ಷರಿಗೆ ಆತ ಬರೆದ ಒಕ್ಕಣಿಕೆ ಹೀಗಿದೆ:-'ಲೋಮೊನೊಸೋವ್ ಅಕಾಡಮಿಗೆ ಮಾತ್ರ ರತ್ನಪ್ರಾಯನಲ್ಲ; ದೇಶಕ್ಕೂ ರತ್ನಪ್ರಾಯ!'

೧೭೬೫ರಲ್ಲಿ ಸಾವು ಸನ್ನಿಹಿತವಾಗುತ್ತಿರುವುದರ ಸೂಚನೆಯನ್ನಿತ್ತು ತೆರಳಿತು. ೧೭೬೫ರ ವಸಂತಋತುವಿನ ಆದಿಯಲ್ಲಿ ಚಳಿಯಿಂದ ಈತ ಹಾಸಿಗೆ ಹಿಡಿದ. ದಿನದಿನಕ್ಕೂ ದೇಹಸ್ಥಿತಿ ಚಿಂತಾಜನಕವಾಗುತ್ತ ನಡೆಯಿತು. ಸಾಯುವ ಮುನ್ನ ತನ್ನ ಮನದಳಲನ್ನು ಪ್ರಾಣಸ್ನೇಹಿತನೆದುರು ತೋಡಿಕೊಂಡನು-'ಗೆಳೆಯಾ, ನಾನು ಸಾಯಲಿದ್ದೇನೆಂಬುದನ್ನು ಬಲ್ಲೆ. ಈ ಸಾವನ್ನು ಸಂತೋಷದಿಂದ ಅಪ್ಪುತ್ತೇನೆ. ಆದರೊಂದು ಚಿಂತೆ ಮಾತ್ರ ನನ್ನ ಬೆಂಬತ್ತಿದೆ. ರಾಷ್ಟ್ರದ ಕಲ್ಯಾಣಕ್ಕಾಗಿ, ವಿಜ್ಞಾನದ ಪ್ರಗತಿಗಾಗಿ, ಅಕಾಡಮಿಯ ಖ್ಯಾತಿಪಡೆಯಬಂತಾಗಲೆಂದು ನಾನು ಕೈಕೊಂಡ ಯೋಜನೆಗಳು ಅಪೂರ್ಣವಾಗಿವೆಯೆಂಬುದೇ ಮಹಾಚಿಂತೆ. ನನ್ನೊಂದಿಗೆ ನನ್ನ ಯೋಜನೆಗಳೂ ಮಣ್ಣುಪಾಲಾಗುವುದನ್ನು ತಪ್ಪಿಸಬೇಕೆಂಬುದೇ ನನ್ನ ಚಿಂತೆ!' ಇಂಥ ಮಹಾಮಹಿಮನನ್ನು ಪಡೆದ ದೇಶ ಧನ್ಯ. ಮೃತ್ಯುಮುಖದಲ್ಲಿ ಇದ್ದಾಗಲೂ, ದೇಶದ ಚಿಂತನೆ ಮಾಡುವ ಆ ಮಹಾಪುರುಷನ ಜೀವನದ ದಿವ್ಯತೆಗೆ ಇನ್ನೆಂತಹ ದೃಷ್ಟಾಂತ ಬೇಕು! ಹೆತ್ತತಾಯಿಯೇ ಹೆರವರ ಮಾತು ಕೇಳಿ, ಹೆತ್ತ ಮಗುವಿಗೆ ವಿಷಪಾನ ಮಾಡಬಯಸಿದಂತಿದೆ ಆ ದೇಶದ ಹಣೆಯಬರೆಹ. ಲೋಮೊನೊಸೋವ್ ೫೪ ವರುಷಗಳಲ್ಲಿ, ದಿವ್ಯಕನಸುಗಳನ್ನು ಕಟ್ಟಿ ಭವ್ಯಜೀವನ ಬಾಳಿ, ಬದುಕಿನ ಸಾರ್ಥಕ್ಯವನ್ನು ಸಾಧಿಸಿ, ೪, ಎಪ್ರಿಲ್ ೧೭೬೫ರಂದು ಇಹಲೋಕವನ್ನು ತ್ಯಜಿಸಿದನು. ಪೀಟರ್ಸ್‌ಬರ್ಗ್—ಇಂದಿನ ಲೆನಿನ್‌ಗ್ರಾಡ್—ಆತನ ಪಾರ್ಥಿವ ಶರೀರಕ್ಕೆ ಕೊನೆಯ ಸೇವೆಯನ್ನು ಸಲ್ಲಿಸಿತು.

ಆತನು ಹುಟ್ಟಿದ ಹಳ್ಳಿಗೆ ಇಂದು ಆತನ ಹೆಸರಿಡಲಾಗಿದೆ. ಆತನ ಯೋಜನೆಗಳಿಂದು ಕಾರ್ಯಗತವಾಗಿವೆ. ಅದೆಷ್ಟೋ ಸಂಘ ಸಂಸ್ಥೆಗಳು ಆತನ ಹೆಸರು ಹೊತ್ತು ಮುಂದೆ ಬರುತ್ತಲಿವೆ. ಆತನ ಜಯಂತಿಯನ್ನು ಇಂದು ದೇಶಾದ್ಯಂತ್ಯವೂ ವಿಜೃಂಭಣೆಯಿಂದ ಆಚರಿಸಲಾಗುತ್ತಿದೆ. ಎಂದಮೇಲೆ ಲೋಮೊನೊಸೋವ್ ಮೃತನಾದದ್ದು ಹೇಗೆನ್ನಬಹುದು? ಅಮರನಲ್ಲವೇ ಆತ?

(ಜುಲೈ ಸಂಚಿಕೆಯಲ್ಲಿ ಪ್ರಕಟವಾದುದರ ಮುಂದಿನ ಭಾಗವಿದು.)

ಅವಧೂತಗೀತಾ-ಪೀಠಿಕೆ

(ನವ್ಯಕವನ)

'ಅ. ರಾ. ಸೇ.' ದಾವಣಗೆರೆ

೧

ಏನೊ ಭಯ, ಕಳವಳ.
ಏಕೊ ಭಯ. ಶಿವಶಿವಾ ಗಂಟೆ ಎಂಟಾಗಿದೆ.
ಹಗಲಳಿದು ಕಾರ್ಗತ್ತಲಿಳಿದು ಈ ಮನವೆಲ್ಲ ಗಂಟುಗಂಟಾಗಿದೆ.
ಯಾವುದೋ ರೈಲ್‌ಗಾಡಿ ಧಢಭಢನೆ ನುಗ್ಗಿ
ದೇಶಿರದ ನಿಲ್ದಾಣದೊಳಗೆ ಹಾಕಿತು ಸೀಟಿ.
ಹೋಗಿ ಮಾಡುವುದೇನು ? ಮನೆಯ ಕದ ಮುಚ್ಚಿ
ಬಿದ್ದು ಬೀಗ;
ಆರಿಹುದು ದೀಪ, ಬರಿ ಕಾರ್ಗತ್ತಲೆ !
'ನಾವೆಲ್ಲ ಮೊದಲಾಟ ನೋಡಿ ಬರುವೆವು ತಮ್ಮ'
ಇರುವೆನೆಂದಿದ್ದನವ—ಇರುವನೋ ಇಲ್ಲವೋ !
ಕೊಡುವನೋ ಅಥವಾ ಕೈಕೊಡುವನೋ ?
ಹೋಯಿತಲ್ಲಿ, ಹೌದು ! ಹೋಯಿತಲ್ಲಿ ?
ನಿನ್ನೆಯೇ ಕೊಂಡಿದ್ದ Blandings castle
ಬಿಟ್ಟನೆಲ್ಲಿ, ಮರೆತು ಇಟ್ಟನೆಲ್ಲಿ ?
ಹೀಗೆಯೇ ಎಡಗಡೆಗೆ ತಿರುಗಿ ಮುಂದಾದರೆ
'ಅವಳ ಕಣ್ಣು ಕುಡಿಲಲ್ಲೆಯೊಲ್ಲೆಯಾ, ವ್ಯರ್ಥ ಇದ್ದು ಕಣ್ಣು !'
ಮತ್ತೇನು ? ಅಯ್ಯಯ್ಯೊ ಹುಯ್ಯಲಾರಂಭಿಸಿತು.
ಕೋಲ್ಮಿಂಚು ! ಹಿಂದೆಯೇ ಸಿಡಿಲು ಅಪ್ಪಳಿಸಿ
ಎಗರಿ ಹೋಯ್ತು ಮನೆ.
ತೊಯ್ದುಹೋದಂತೆ ಉಲ್ಲನ್ ಸೂಟು ? ಭಗವಂತ,
ಉಳಿದೆ ಬಿಟ್ಟಿತು ನನ್ನ ಈ ಮಹಾಪ್ರಾಣ !
ಎಲವೊ ಅಲ್ಪಪ್ರಾಣಿ, ನೆನೆದು ಹೋಗಿದೆ ಬೂಟು
ತೊಪ್ಪೆ; ಮಣ್ಣಿನ ಮುದ್ದೆ ನಿನ್ನುಲನ್ ಸೂಟು !
ಚಳಿಗಾಳಿ ಮೈ ತೊಯ್ದು ನಾಳೆ ಏನೋ
ಟೈಫಾಯ್ಡ್, ನಿಮೋನಿಯಾ, ಇನ್ಫ್ಲುಯೆಂಜಾ....
ಸದ್ಯ ಮಿನುಗುತ್ತಲಿದೆ ಮೇಣಬತ್ತಿ.
"ಏನಯ್ಯ ಮುಗಿಯಿತೇ ಸಿನಿಮಸ್ಕೋಪಿನ ಚಿತ್ರ ?
ಏರಿ ಕುದುರೆಯ ಬೆನ್ನು ಕೈಲಿ ಪಿಸ್ತೂಲು
ಮಾಡಿ ಡಾಂಡಾಂ ಬಿದ್ದುವೆಷ್ಟು ಹೆಣ ?
His passions aflame he rides
They never come any tougher !
ಶತಮಾನದೀ ಉಲನ್ ಸೂಟು ಹೀಗೇಕಾಯ್ತು,
ಎದೆಯೇಕೆ ಧಬಧಬ, ಕಣ್ಣೇಕೆ ಕೆಂಪು ?
ಮುಖವೇಕೊ ರಾಹುಕಳೆ ? ತಿಪರೆ ಏನಾಯ್ತು ?"

" ಯೂಲಿಸಿಸ್ ಬೆಂಬತ್ತಿ ನಡೆದ ಆ ಧ್ರುವತಾರೆ
ಸಿಕ್ಕಿಲ್ಲವೊ ಇನ್ನೂ ದಕ್ಕಿಲ್ಲವೋ—
ಆದರೂ ಸಾಗರದ ತೆರೆಗಳಲಿ ಸವೆದವನ
ದೇಹವತಿ ಜೀರ್ಣ ಅತಿಶೀರ್ಣವಾಯ್ತೋ !
ವಜ್ರಖನಿ ಸಾಲದೆಂದೆನುತ ಮುಂದಕೆ ನಡೆದ ಆ ನಿಧಿವ್ಯಾಧ—
ನಡುನೆತ್ತಿಯನು ಚಕ್ರದಲಗು ಕೊರೆಯಲು ನೋವಿನಿಂದ ಹುಚ್ಚಾದ.
ಎಂದು ಬಿಡುಗಡೆ ? ಕಾಯಬೇಕಲ್ಲ ಇನ್ನು ಕಲ್ಪಾಂತ ಪರ್ಯಂತ—
ಎಲ್ಲರೂ ಬುದ್ಧಿವಂತರು, ಬೃಹಸ್ಪತಿಯ ತುಂಡುಗಳು
'ಮಹರ್ಷೀಣಾಂ ಭೃಗುರಹಂ'
ಇವರ ದಿವ್ಯ ಜ್ಞಾನಚಕ್ಷುವಿನ ಗುಡ್ಡೆಗೇನೋ ಬಂತು ಕೇಡು !
ದಿನದಿನವು ಕಲಹ, ಇರುಳಾಯ್ತು ಮರೆಗುದ್ದು,
ಈ ಪರಸ್ಪರ ದ್ವೇಷ ಸಂಧ್ಯೆಯಲಿ ಹೊಮ್ಮಿ
ಬಾನು ಕೆಂಪಾಯ್ತು -ಕೊಲೆ ! ರಕ್ತಪಾತ !
ಮುಳ್ಳು ಮುತ್ತುಗದ ಮರ ಹಳ್ಳ ಸಾಲಿನಲಲ್ಲಿ ಬೆಳೆದು ನಿಂತಿತ್ತು;
ಅದರ ಕೊಂಬೆಯಲೊಂದು ಹೆಣ—ಅದನು ಮುಟ್ಟಿದರೆ
'ಕೀ ಹಿಹೀ ಹೀಹಿಹೀ ಕೀಹಿಹೀ ಹೀಹಿಹೀ'
ವಿಕಟಾಟ್ಟಹಾಸ ಮಾಡುತ್ತಲಿದೆ ಬೇತಾಳ,
ಮರದ ಕೊಂಬೆಯಲೆಲ್ಲ ರಕ್ತಪುಷ್ಪ...
ನೀರಿಲ್ಲ ಹಳ್ಳದಲಿ ಕಳ್ಳ ಉಸುಕು, ಜೌಗು, ದುರ್ನಾತ !
ಸರಸರನೆ ಮೇಲೇರುತಿಹ ಅನಿಲ ಹೊತ್ತಿ
ಒಂದಲ್ಲ ನೂರಾರು ಕೊಳ್ಳಿದೆವ್ವ.
ದೂರದಲಿ ಎಲ್ಲೋ ಬರಿ ಬಿರುಗಾಳಿ ಭೋರೆಂದು ಮೊರೆ- ಮೊರೆದಿದೆ;
'ಕೀಹಿಹೀ ಹೀಹಿಹೀ ಕೀಹಿಹೀ ಹೀಹಿಹೀ'
ನೋಡಲ್ಲಿ ಗೌತಮಾ, ನೋಡಲ್ಲಿ ಬರುತಿರುವುದೊಂದು ಪ್ರಾಣಿ !
ನರನಾಡಿಯೊಳಗೆಲ್ಲ ಬೆಂಕಿ ಕೀಲಿಕೀಲಿನಲು ನೋವು ನಿಶ್ಪ್ರಾಣಿ—
ಉಸಿರೆಳೆವುದೇ ಕಷ್ಟ !
ಎಳೆದುಸಿರು ಎದೆಯ ಸೇರುವುದಂತು ಇನ್ನು ಕಷ್ಟ !
ಮೈಯೆಲ್ಲ ವ್ರಣ, ವ್ರಣದಲೆಲ್ಲ ಕೀವು,
ಕ್ಷಣಕ್ಷಣವು ತರುತಿರುವುದೊಂದು ಹೊಸ ನೋವು !
ಎಲ್ಲಿ ಎಲ್ಲಿಹುದಯ್ಯ ಇದಕೆ ಮದ್ದು ?
ಬೀಳದೇನಯ್ಯ ನಿನಗೂ ಇಂಥ ಗುದ್ದು ? "
" ಅಲ್ಲವೋ, ಮಳೆ ಬರುವುದೆಂದು ತಿಳಿದಿದ್ದರೂ
ಮನೆ ಬಿಟ್ಟು ಈ ಸೂಟ ತೊಟ್ಟು,
ಬೀದಿಯಲೆಲ್ಲಿ ಅಲೆಯೆಂದು ಹೇಳಿದವರಾರೋ ನಿನಗೆ ?
ಬಿಕಿನಿಯಲ್ಲಿ ಅಣುಬಾಂಬು ಬಿದ್ದೆ ಬೀಳುವುದೆಂದು ತಿಳಿದಿದ್ದರೂ—

ಮೀನು ಹಿಡಿಯುವ ಬಲೆಯು ಹರಡಲೇಕೋ ?
ನನಗಾವ ಭಯ, ಬಿದ್ದೆ ಆರಾಮ ಕುರ್ಚಿಯಲಿ
ತಿಂದು ಮರಕಳು !
ನೂರು ಬೆಕ್ಕಿನ ಕುನ್ನಿ ನೂರು ನಾಯ್ಕುನ್ನಿ,
ಬೀಳಲಾಗಸದಿಂದ....ಆಗಲೋ ಪ್ರಳಯ ! ”

೨

ಗಂಟೆ ಒಂದಾಯ್ತು.
‘ ಏನಿದ್ದೆ ಏನಿದ್ದೆ ಏನಾದೆ ನೀನು ಹಾ ! ’
ಮಳೆ ಕುಟ್ಟಿ ಚಚ್ಚುತಿದೆ, ಎದೆ ಹೆದರಿ ಬಿಚ್ಚುತಿದೆ !
ಗಾಳಿ ಬೀಸಿದೆ ಮಿಂಚು ಸಿಡಿಲೆರಗಿವೆ—
ಸ್ವಪ್ರಕಾಶದ ಕೋಶ ಹೃದಯ ಕುಸ್ತಿಯ ಕಣ !
ಮೆದುಳು ಸುಟ್ಟುರಿಗಾಳಿ ಮೈ ರಕ್ತಸಿಕ್ತ !
ನನಗಿಲ್ಲವಯ್ಯ ಫ್ರಾಯ್ಡನ ಹುಚ್ಚು, ನನ್ನದೇ ನನಗೆ ಹುಚ್ಚು !
ಮಂಚದಲಿ ಮನೆಮಾಡಿ ಸಂಸಾರ ನಡೆಸುತಿಹ
ತಿಗುಣಿಗಳ ನೆಚ್ಚು.
ಸುತ್ತೆಲ್ಲ ಸಾಗರದ ಭೋರ್ಗರೆತ ದ್ವೀಪದಲಿ
ಊರೊಂದು ಬೆಳೆದಿಹುದು ಗಗನಚುಂಬಿ—
ಊರ ಹೊರದೆಸೆಯಲ್ಲಿ ಬೆಳೆದ ಬೇವಿನ ಮರದ
ತಣ್ಣೆಳಲ ಮಧ್ಯದಲಿ ಕಲ್ಲುಕಟ್ಟೆ;
ಆರೊ ಕುಳಿತಿಹರಲ್ಲಿ, ಗೌರವರ್ಣದ ಯುವಕ !
ಕಣ್ಣನರೆ ಮುಚ್ಚಿ ನಗುತಿಹನು ಹುಚ್ಚ!
ತಲೆಗೂದಲೆಲ್ಲ ಜಟೆಜಟೆಯಾಗಿ ಜೋತಿಹವು,
ಮುಖವೊಂದು ದೊಡ್ಡಪೊದೆ ಕರಿಗೂದಲು.
ಬಿಳಿಕುದುರೆಯೇರಿ ಬಂದನು ಪುರದರಾಜ.
ನಿಂತು ತಟ್ಟನೆ, ಇಳಿದು ಬರಲು ಬಳಿಗೆ
ಕಣ್ತೆರೆದು ನಸುನಕ್ಕು ಯುವಕ ದಿಟ್ಟಿಸಿದ,
ನಸುನಕ್ಕ—ಇಲ್ಲದುದನಾವುದನೊ ಕಂಡು.
“ ಏನಪ್ಪ ಹುಡುಗ, ನಗುತಿರುವೆಯೇಕೆ ?
ಯಾರಪ್ಪ ಹುಡುಗ, ಎಲ್ಲಿಂದ ಬಂದೆ ?
ಮನೆಯಿಲ್ಲವೇನು ನಿನಗೆ ?
ಚಳಿಬೆಟ್ಟದಲಿ ಕುಣಿವ ಬೂದಿಮೈಯವನ ಕೆಣಕಿ—
ಸುಟ್ಟರೂ ದೇಹ—
ಬಿಟ್ಟನೇ ಲೋಕವನು ಹೂವಿನಲಿ ಸುಟ್ಟ !
ನಿನ್ನ ಸುಟ್ಟಿಲ್ಲವೇ ಆ ಅನಂಗ ?
ಬೇಡವೇ ಮನೆಮಾರು ? ಅಪ್ಪ ಅಮ್ಮ—
ಬೇಡವೇ ಸ್ನೇಹಿತರು ? ಹೆದರಿಸದೆ ಗುಮ್ಮ ?
ನನಗಂತು ಶಿವಶಿವಾ ಭಯ, ಏನೊ ಕಳವಳ !
ದಾರಿತಪ್ಪಿದ ಸಿಂಹ ಬೇರೊಂದು ಕಾಡಿನಲಿ ಮನೆಯ ಮಾಡಿ
ಮೃಗರಾಜನಾದುದನು ಕಂಡೆ.
ಯಾವ ನರಿಯೊಳಗೇನು ತಂತ್ರವೋ ಎನುತ
ನಡುಗಿತದು ಅವನೂ ಕಣ್ಣಾರೆ ಕಂಡೆ.
ಕೋಗಿಲೆಗೆ ಕಾಗೆ, ಕಾಗೆಗೆ ಹಾವು, ಉರಗನಿಗೆ ಮುಂಗಸಿಯ ಪೀಡೆ,
ಹೂಬಿಟ್ಟು ಹಣ್ಣಿಟ್ಟು ನದಿಯ ದಡದಲಿ ನಿಂತ
ಮರವೊಂದ ಕಂಡೆ.
ಎಲ್ಲಿಯೋ ಅತಿವೃಷ್ಟಿ, ಬಂದಿತು ಮಹಾಪೂರ—
ಆನೆ ತೇಲುತಲಿರಲು ಮರಗಿಡಗಳೇಡೆ ?
ಕಟ್ಟಡವಿಯೊಳಗೊಬ್ಬಳಿಹಳೋ ಕರಾಳಿ—
ಸಾಕಿರುವಳೊಂದು ಹೆಬ್ಬಾವು,
ಅದಕಂಡು ಬೆದರಿ ಓಡಿದನೊಬ್ಬ ನರಕುರಿ –
ಸದ್ಯ ಬದುಕಿದೆನೆಂದು ತಲೆಯ ತಡವಿ
ಓಡಿದನೊ ನಿಟ್ಟೋಟ, ತಿರುತಿರುಗಿ ನೋಡುತ್ತ.
ಮುಂದೊಂದು ಹಾಳು ಗುಂಡಿ !
ಬಿದ್ದ, ಅಯ್ಯೋ ಬಿದ್ದ ಕಾಲುಮೇಲಾಗಿ,
ಸದ್ಯ ಗುಂಡಿಯ ಮಧ್ಯೆ ಯಾರೊ ಪುಣ್ಯಾತ್ಮ
ಹೆಣೆದಿರುವನೊಂದು ಬಲೆ.
ತಳದಲ್ಲಿ ಹಸಿದೊಂದು ಹುಲಿ ಬಾಯ ತೆರೆದು
ಕಾದು ನಿಂತಿದೆ—ರಕ್ತ ಸಿಕ್ಕೀತೆಯೆಂದು;
ಬಲೆ ಹೆಣೆದ ಪುಣ್ಯಾತ್ಮ ಕರಿಯ ಜೇಡ—
ಯಾರಿಗೀ ಪುರ ? ಅಯ್ಯೊ ಯಾರಿಗೀ ರಾಜ್ಯ ?
ಏಕೆ ? ಎಲ್ಲಿಯ ವರೆಗೆ ? ಯಾವ ಪುರುಷಾರ್ಥಕ್ಕೆ ?
ಸುಡುಗಾಡ ಪೂಜೆಗೇ ?
ಯಾರು ಹಾಗೆನುವವರು ? ನಾನು ಯದು, ರಾಜ.
ಹೌದು ಹೌದು.
ಮೊನ್ನೆ ಊರಿನ ಹೊರಗೆ ಮೈದಾನದಲ್ಲಿ
ಟಗರೊಂದು ಹುಲ್ಮೇದು ಹೇಳಿತೀ ಮಾತು.
ಬಯಸಿದುದನೆಲ್ಲವನು ಪಡೆದೆ ನಾನು
ಹೇಳಿದುದನೆಲ್ಲವನು ಕಲಿತೆ ನಾನು
ಎರಡೆ ಪ್ರಶ್ನೆ :— ಏಕೆ ? ಹೇಗೆ ?
ಕೇಳಿದವನನು ಕಂಡು ಯಾವುದೋ ಏನೋ
ವಿಕಟಾಟ್ಟಹಾಸವನು ಮಾಡಿತ್ತು:
‘ ಕೀಹಿಹೀ ಕೀಹಿಹೀ ಕೀಹಿಹೀ ಕೀಹಿಹೀ ! ’
ಕೇಳಿ ನಡುಗಿದೆ ಎದೆಯು ಹೊಡೆಯುತಿದೆ ಧಬಧಬ !
ನೀನೇಕೆ ಕಣ್ತೆರೆದು ನಸುನಕ್ಕೆ ಪುಣ್ಯಾತ್ಮ ?
ನಿನ್ನ ಎದೆ ನಡುಗದೇ ? ನಿನಗೆ ಭಯವಾಗದೇ ?
ನನಗಂತು ಭಯ, ಅಯ್ಯೊ ನನಗೇನೊ ಭಯ,
ಅಯ್ಯೊ ಏನೊ ಕಳವಳ, ಶಿವಾ, ಏನೊ ಎದೆಗುದಿ !
ನಕ್ಕ ನವಧೂತ:
‘ ಹಾ ಊ ಹಾ ಊ ಹಾ....’

ಟ್ರೂ ಕಾಪಿ

(ವ್ಯಂಗ್ಯರೂಪಕ)

ಶ್ರೀ. ಎಸ್. ವಿ. ಶ್ರೀನಿವಾಸರಾವ್, ಬಿ. ಎಸ್‌ಸಿ., ರಾಷ್ಟ್ರಭಾಷಾ ವಿಶಾರದ, ಬೆಂಗಳೂರು

卐

ಕಾಲ :— ಬೆಳಗಿನ ೯|| ಗಂಟೆಯಿಂದ ರಾತ್ರಿ ೯|| ಗಂಟೆಯ ವರೆಗೆ. **ಸ್ಥಳ :**— ಬೆಂಗಳೂರು.

ಪಾತ್ರಗಳು :

ಅನಂತು :— ಗ್ರ್ಯಾಜುಯೇಟು— ನಿರುದ್ಯೋಗಿ
ಶಾಮಣ್ಣ :— ಗುಮಾಸ್ತೆ— ಅನಂತುವಿನ ತಂದೆ.
ಸಾವಿತ್ರಮ್ಮ :— ಶಾಮಣ್ಣನವರ ಧರ್ಮಪತ್ನಿ.

ಅಮಲ್ದಾರ್, ಸಬ್ ರಿಜಿಸ್ಟ್ರಾರ್, ಲಾಯರು, ಸೇಲ್ಸ್‌ಟ್ಯಾಕ್ಸ್ ಆಫೀಸರು, ಜವಾನ ಮುಂತಾದವರುಗಳು.

(ಪಾತ್ರಗಳು, ಘಟನೆಗಳು ಕಾಲ್ಪನಿಕ; ಯಾರಿಗೂ ಅನ್ವಯಿಸುವುದಿಲ್ಲ.)

卐

(ಮನೆಯ ಪಡಸಾಲೆಯಲ್ಲಿ ಅನಂತು, ತಂದೆ ಶಾಮಣ್ಣವರು.)

ಅನಂತು :— ಅಣ್ಣಾ.... ...

ಶಾಮಣ್ಣ :— ಏನೊ ಅದು ? ಆಫೀಸಿಗೆ ಹೊತ್ತಾಯ್ತು ಅಂತ ಹೊರಟ್ರೆ...ರಾಗ ಎಳೀತಾ ಇದ್ದೀಯಾ! ಏನ್ಹೇಳು....?

ಅನಂತು :— ಹೂಂ....ಅದೇ.......ಗೆಜೆಟ್‌ನಲ್ಲಿ ಬೇಕಾದಷ್ಟು wanted ಇದೆ.... ಅದಕ್ಕೆ ನಾನೂ ಅಪ್ಲಿಕೆಷನ್ ಹಾಕೋಣ ಅಂತ..

ಶಾಮಣ್ಣ :— ಹಾಕು, ಅದಕ್ಕೇನಾಗ್ಬೇಕು! .... ಹಾಕ್ತಾ ಇರೋದು — ಪೋಸ್ಟ್ ಕಾಯ್ತಾ ಇರೋದು! ಅಷ್ಟೇ ತಾನೇ ನಿಮ್ಮ ಬದ್ಕು? regret ಅಂತ ಉತ್ತರ ಕೂಡ ಬರೋದಿಲ್ಲ.

ಅನಂತು :— U. P. S C ದು ಒಂದು Wanted ಇದೆ. ಸ್ಕೇಲೂ ಚೆನ್ನಾಗಿದೆ. 150-10-250 E B — 15-350! ಇಪ್ಪತ್ತೈದು ವೇಕೆನ್ಸಿ ಇದೆ. ಇದೂ ಸಿಕ್ಕಿದರೂ ಸಿಕ್ಕಬಹುದು, ಅಲ್ವೇ ಅಣ್ಣಾ?

ಶಾಮಣ್ಣ :—ಹೌದು, ಕಂಡಿತ ಸಿಕ್ಕುತ್ತೆ....ಹಾಕಪ್ಪಾ ಹಾಕು.... ನಿನಗೇ ಕೊಡ್ಬೇಕು.... ಗೆಜೆಟೆಡ್ ಪೋಸ್ಟ್.... ಅಂತಾನೇ ಅವರು ಕಾಯ್ತಾ ಇದ್ದಾರೆ!

ಅನಂತು :— ಹಾಗೇ, ಸಾಯಂಕಾಲ ಬರೋವಾಗ....ಒಂದು.... ಪೋಸ್ಟಲ್ ಆರ್ಡರ್ .... ೭|| ರೂಪಾಯಿಯದು !ಇದೊಂದು ಸಾರಿ ಅದೃಷ್ಟ ನೋಡ್ಬಿಡೋಣ....

ಶಾಮಣ್ಣ :— ಹುಂ.... ಆಮೇಲೆ?

ಅನಂತು :— ಎಲ್ಲಾ ಐದು ಸೆಟ್ ಕಳಿಸ್ಬೇಕಂತೆ. character, sports, medical, social service,— ಇದಲ್ದೆ ಗೆಜಟೆಡ್ ಆಫೀಸರರ ಸರ್ಟಿಫಿಕೇಟ್— ಇಷ್ಟೆಲ್ಲಾ ಬೇಕು....ಟೈಪು ಮಾಡಿಸ್ಬೇಕು....

ಶಾಮಣ್ಣ :— ಸಾಕಪ್ಪ ಸಾಕು....ನೀನು ಕೆಲ್ಸಾ ಹೊಂಚೋ ಹೊತ್ಗೆ, ನಾನು ತಣ್ಣಗಾಗಿ ಹೋಗ್ತೀನೆ ನೀನು ಅಪ್ಲಿಕೇಷನ್ ಹಾಕೋದಕ್ಕೇ ದಿನಾ ನಾನು ದುಡ್ಡು ಹೊಂಚ್ತಾ ಇರ್ಲೊ, ಅಥವಾ ಮನ್ಗೆ ಏನಾದರೂ ಸಾಮಾನು ಸರಂಜಾಮು ತಂದು ಹಾಕ್ಬೇಕೋ ಬೇಡ್ವೊ? ....ನಿನ್ನ ಓದಿಗೆ, ನಿನ್ನ ಕೆಲ್ಸ ಹುಡುಕಾಟಕ್ಕೆ ಖರ್ಚು ಮಾಡಿರೊ ದುಡ್ಡನ್ನ ನೀನು ಸಂಪಾದಿಸಬೇಕಾದ್ರೆ, ಇಪ್ಪತ್ತು ವರ್ಷ ದುಡೀಬೇಕು....ನೀನು ಕೆಲ್ಸಾನೂ ಹೊಂಚ್ಬೇಡ....ದುಡಿದು ತಂದು ಹಾಕೋದೂ ಬೇಡ....ಸುಮ್ನೆ ಉಂಡ್ಕೊಂಡು ಬಿದ್ದಿರು!

(ಒಳಗಿನಿಂದ ಸಾವಿತ್ರಮ್ಮ ಬರುವರು.)

ಸಾವಿತ್ರಮ್ಮ :— ಪ್ರಾರಂಭದಲ್ಲೇ ನೀವು ಅಪಶಕುನ ನುಡೀಬೇಡಿ ಅಂದ್ರೆ ... ಸುಮ್ನಿರಿ! ... ಕೆಲ್ಸ ಹುಡುಕ್ತಾ ಹುಡುಕ್ತಾ, ಸರಿಯಾದ ಕಾಲಕ್ಕೆ ಊಟ-ನಿದ್ದೆ ಇಲ್ದೆ, ಎಷ್ಟೊಂದು ಕೆಗೆದ್ಹೋಗಿದ್ದಾನೆ ನೋಡಿ! ಆ ಕೆಲ್ಸ ಸಿಗ್ದೇ ಇರೋದು ಅವನ ತಪ್ಪೆ?....ಪಾಪ....ಅವನ ಕಷ್ಟ ನೋಡಿದ್ರೆ 'ಅಯ್ಯೊ!' ಅನ್ಸುತ್ತೆ....ಮನೆಯ ಪಾಪತ್ರಯ ತಪ್ಪೋದು ಎಂದು? ದಿನಾನೂ ಇದ್ದೇ ಇರುತ್ತೆ ...ದಿನವೂ ಸಾಯೋರಿಗೆ ಅಳೋರು ಯಾರು?— ಅಂತ ಗಾದೇನೇ ಇದೆ....

ಶಾಮಣ್ಣ :— ಸರಿ....ನೀನು ಬಂದ್ಯೋ ಮಗನ್ನ ಪಕ್ಷವಹಿ-ಸ್ಕೊಂಡು ?....ಏನಾದ್ರೂ ಮಾಡ್ಕೊಳ್ಳಿ....ನನ್ನ ಹತ್ರ ಹೆಚ್ಗೆ ದುಡ್ಡಿಲ್ಲ. ಯಾರಾದ್ರ ಹತ್ರಾನೂ ಸಾಲ ಇಸ್ಕೊಂಡು, ಪೋಸ್ಟಲ್ ಆರ್ಡರ್ ತರ್ತೀನಿ....ನಿಮ್ಮಮ್ಮನ ಹತ್ರ ಏನಾದ್ರೂ ದುಡ್ಡಿದ್ರೆ ಇಸ್ಕೊಂಡು ಹೋಗಿ ಟೈಪ್ ಮಾಡಿಸ್ಕೊ......ಸುಮ್ನೆ ವೃಥಾ ಅಪ್ಲಿಕೇಷನ್ ಹಾಕೋದು !....ನಮ್ಮಂಥೋರಿಗೆಲ್ಲ ಅಲ್ಲಿ ಕೆಲ್ಸ ಸಿಕ್ಕೋದು ಬಾಳ ಕಷ್ಟ....

(ಹೊರಗೆ ಹೊರಟುಹೋಗುವರು.)

ಸಾವಿತ್ರಮ್ಮ :— ಮಗು........ಅನಂತ.........ಬಾಪ್ಪ, ಊಟ ಮಾಡ್ಕೊಂಡು ಹೋಗು!....ಹೊರಗೆ ಹೋದ್ಮೇಲೆ ಇಷ್ಹೊತ್ತಿಗೇ ಬರ್ತೀ ಅಂತ ಹೇಳೋಕೆ ಆಗೋಲ್ಲ. ಬಾಪ್ಪ....ನಿಮ್ಮ ತಂದೆಯ ಗುಣ ನೀನು ಕಂಡೇ ಇದ್ದಿ....ದುಡ್ಡಿಲ್ಲದ ತಾಪತ್ರಯಕ್ಕೆ ಏನೇನೋ ಅಂತಾರೆ, ಅಷ್ಟೆ !....ದೇವ್ರಿಗೆ ತುಪ್ಪದ ದೀಪ ಹಚ್ಚಿಟ್ಟಿದ್ದೇನೆ....ಊರ ಮುಂದಿನ ಆಂಜನೇಯನಿಗೆ ಜೋಡು ತೆಂಗಿನಕಾಯಿ ಒಡಿಸ್ತೇನೆ ಅಂತ ಹರಿ-ಸ್ಕೊಂಡಿದ್ದೇನೆ... ಇವತ್ತು ನೀನು ಹೋಗೋ ಕೆಲ್ಸ ಖಂಡಿತ ಆಗುತ್ತೆ! ಬಾಪ್ಪ....ಎಲೆ ಹಾಕಿದ್ದೇನೆ .. ಸಾಸಿವೆ ಡಬ್ಬೀಲಿ, ಅರಿಸಿನದ ಜಾಡಿ ಯಲ್ಲಿ ಸ್ವಲ್ಪ ಚಿಲ್ಲರೆ— ಒಂದೆರಡು ರೂಪಾಯಿ— ಇರ್ಬೇಕು .... ನೋಡ್ತೇನೆ.......ಇದ್ಯಾಕೆ ಹಾಗೆ ಸಪ್ಪಗೆ ನಿಂತಿದ್ದಿ !....ಇಷ್ಟನ್ನೆಲ್ಲ ಮನಸ್ಗೆ ಹಚ್ಕೊಂಡ್ರೆ ಆಗುತ್ತಾ.... ?

ಅನಂತು :—ನಂಗೂ ಬೇಜಾರಾಗಿದೆ, ಕೆಲ್ಸಾಹುಡ್ಕಿ ಹುಡ್ಕಿ!— ಎಲ್ಲಿ ಹೋದ್ರೂ ಕೆಲಸ ಖಾಲಿಯಿಲ್ಲ;....ಅಂತೋದ್ರಲ್ಲಿ ಅಪ್ಲಿಕೇಷನ್ ಹಾಕ್ದೆ ಸುಮ್ನೆ ಹ್ಯಾಗಮ್ಮ ಕೂತಿರೋದು ?....ಹತ್ತು ಕಲ್ಲು ಎಸೆದ್ರೆ ಒಂದಾದ್ರೂ ಹಣ್ಣು ಉದುರುತ್ತೋ ಏನೋ ನೋಡ್ಬೇಕು ?.... ಹೂಂ ...ಬೇಗ ಬಡಿಸಮ್ಮಾ, ನಾನು ಹೋಗ್ಬೇಕು .... ಗೆಜಟೆಡ್ ಆಫೀಸರ ರುಜು ಪಡೆಯಬೇಕಾದ್ರೆ ನನ್ನ ಹೆಣ ಇಟ್ಬಾಡುತ್ತೆ .... ಸಾವಿರ ಆಫೀಸು ಸುತ್ತಾಡ್ಬೇಕು !....

ಅಮಲ್ದಾರರ ಆಫೀಸು

ಜವಾನ:— ಹಗ್ಲೆಲ್ಲ ಯಾಕೆ ಬಾಗ್ಲತ್ರ ಬರ್ತೀರಿ ?....... ಅಮಲ್ದಾರ್ ಸಾಹೇಬ್ರು ಏನೋ ಕೆಲ್ಸ ಮಾಡ್ತಾ ಅವ್ರೆ... ಒಸಿ ಅತ್ತ ಕುಂತಿರಿ ಸಾಮಿ !....ನಿಮ್ಮ ಟರ್ನು ಬರುತ್ಲೂ ಕೂಗಿಸ್ತಾರೆ !.... ನಿಮ್ಮ ಹೆಸರು ಬರ್ದು ಚೀಟಿ ಕೊಟ್ಟಿದ್ದೀರಿ ತಾನೆ ?.... ಹಂಗಾರ ಕುಂತಿರಿ... ನಾನೇ ಕೂಗ್ತೀನಿ....ಸಾಹೇಬ್ರು ಒಳಗಡೆ ಕೂಗುತ್ಲೂ !

ಅನಂತು :— ನೋಡಪ್ಪಾ....ಸ್ವಲ್ಪ ನಾನು ಬಾಳ urgent ಆಗಿ ಹೋಗ್ಬೇಕು.... ನಂಗಿನ್ನೂ ತುಂಬಾ ಕೆಲ್ಸ ಇದೆ.

ಜವಾನ :— ಹಂಗೆಲ್ಲಾ ಅರ್ಜೆಂಟ್ ಮಾಡಿದ್ರೆ ಆಗೋಕಿಲ್ಲ ಸಾಮಿ.... ಸರ್ಕಾರಿ ಕೆಲ್ಸ........ಕುಂತು, ಕುಂತು ಕೆಲ್ಸಾಮಾಡಿಸ್ಕೋ ಬೇಕು !....ನಾವು ದಿನವೆಲ್ಲ ನಿಂತೇ ಇರ್ತೀವಿ;—ನೀವು ಕುಂತಿರಿ— ಅಂದ್ರೆ, ಅರ್ಜೆಂಟ್ ಅಂತೀರಲ್ಲ !...

(ಒಳಗಡೆ 'ಜವರಪ್ಪಾ'....ಅಮಲ್ದಾರರು ಕೂಗುವರು.)

ಜವಾನ :— (ಜೋರಾಗಿ) ಜವರಪ್ಪಾ....ಜವರಪ್ಪಾ....

(ಒಳಗಡೆ "ಅಂಜನಯ್ಯಾ")

ಜವಾನ:— ಅಂಜನಯ್ಯಾ....ಅಂಜನಯ್ಯಾ....

(ಒಳಗಡೆ " ಅನಂತ ಮೂರ್ತಿ....")

ಜವಾನ :—ಅನಂತ ಮೂರ್ತಿ... ಅನಂತ ಮೂರ್ತಿ ರಾಯರು!

ಅನಂತು :— ಹೂಂ....ಬಂದೆ.

ಜವಾನ:—ನಿಮ್ಮ ಟರ್ನು ಬಂದೇ ಬಿಡ್ತು....ಬನ್ನಿ ಸಾಮಿ!.... ತಮ್ಮ ಚೀಟೀನ ಮೇಗಡೆ ಇಟ್ಟು ಬಂದಿದ್ನಿ. ಇಲ್ದೆ ಇದ್ರೆ, ಇನ್ನೂ ಎರಡು ಗಂಟೆ ಕಾಯ್ಬೇಕಾಗ್ತಾ ಇತ್ತು.... ಹೂಂ.... ಹೋಗ್ಬನ್ನಿ .... ನಾನು ಇಲ್ಲೇ ಇರ್ತೀನಿ.

(ಒಳಗೆ ಹೋದ ಮೇಲೆ)

ಅಮಲ್ದಾರ್:— ಏನ್ರೀ, ನೀವೇನೇನ್ರೀ ಅನಂತಮೂರ್ತಿ ?

ಅನಂತು:— ಹೌದು ಸಾರ್ !

ಅಮಲ್ದಾರ್:— ಯಾವ ಕ್ಲಾಸು ಓದಿದ್ದೀರಿ.... ?

ಅನಂತು: — B. Sc. ಪ್ಯಾಸಾಗಿದೆ ಸಾರ್ ...

ಅಮಲ್ದಾರ್:— ಓದ್ದೋರು, ಬರೆದೋರು, ... ಮೇಲಾಗಿ ಗ್ರ್ಯಾಜ್ಯುಯೇಟ್.... ನಿಮಗೆಲ್ಲಾ ಹೇಳಿಕೊಡಬೇಕೇನ್ರೀ ?....ಎಲ್ಲಿರೀ ನಿಮ್ಮ ಅರ್ಜಿ ?.... ಯಾವ ಜಮೀನಿಗೆ ದರಖಾಸ್ತು ಹಾಕಿದ್ದೀರಿ ? ಯಾವ ತಾಲ್ಲೋಕು?.... ನೀವು ಯಾವಾಗ ಜೈಲಿನಲ್ಲಿದ್ರಿ ?.... ಯಾವ ಜೈಲಿನಲ್ಲಿದ್ರಿ ?.... ಎಂಥಾ ಕೈದಿಯಾಗಿದ್ರಿ ?.... ಎಷ್ಟು ದಿನ ಇದ್ರಿ ? ಇನ್ನು ಯಾವ ಯಾವ ಚಳವಳಿಯಲ್ಲಿ ಭಾಗ ವಹಿಸಿದ್ರಿ ? .. ಎಲ್ಲಾನೂ ಬರ್ದು ಒಂದು ಅಪೀಲು ಕೊಡಿ! ಎಲ್ಲಾ ಸರ್ಟಿಫಿಕೇಟ್ ತಂದಿದ್ದೀರಿ ತಾನೆ ?.... ಜೈಲು ಸರ್ಟಿಫಿಕೇಟು ಬಹಳ ಮುಖ್ಯ....ಅದು ಇದ್ರೇನೇ ಮುಂದಿನ ಮಾತು ! ಎಲ್ಲಿ ಕೊಡಿ, ನಿಮ್ಮ ಸರ್ಟಿಫಿಕೇಟ್ ನೋಡೋಣ ! ಎಲ್ಲಾದರೂ ಕೆಲ್ಸಾ ಹುಡಿಕ್ಕೊಂಡು ಹಾಯಾಗಿ ಇರೋದು ಬಿಟ್ಟು, ಈ ತಾಪತ್ರಯ ಎಲ್ಲಾ ಯಾಕ್ರೀ ಸುಮ್ನೆ .. ನಿಮಗೆ ? ನಿಮ್ಗೆ ಜಮೀನು ಕೊಟ್ರೂ ನೀವು ರೂಢಿಸೊಳ್ಳಲ್ಲ.... ಸುಮ್ನೆ ನಮ್ಗೆ ತಾಪ-ತ್ರಯ ಕೊಡ್ತೀರ !....

ಅನಂತು:— ಇಲ್ಲ ಸಾರ್.... ನಾನು ಇದಕ್ಕೆ ಬಂದಿಲ್ಲ !

ಅಮಲ್ದಾರ್:— ಇದಕ್ಕಲ್ಲ— ! ಇನ್ಯಾತಕ್ಕೆ ಬಂದಿರೋದು, ಹೇಳಿ ಬೇಗ ! .... ಹೊರಗೆ ಸಾವಿರ ಜನ ಕಾದಿದ್ದಾರೆ. ನೀವೇ ಇಷ್ಹೊತ್ತು ತೊಗೊಂಡ್ರೆ ಹ್ಯಾಗೆ?....ಇನ್ಯಾರಿಗಾದ್ರೂ ಜಮೀನು ಕೊಡಿ ಸೋಕ್ಕೆ ಬಂದಿದ್ದೀರಾ ? ಹಾಗಾದ್ರೆ....ಹೂಂ ... ಬೇಗ ಹೇಳಿ. ಯಾವ M. L. A. ತಮ್ಗೆ ಏನಾಗ್ಬೇಕು ? ಯಾವ ಆಫೀಸರು ಏನಾಗ್ಬೇಕು? ಹೂಂ....ಬೇಗ ಹೇಳಿ.... ಹೊತ್ತಾಗುತ್ತೆ !.... ಸುಮ್ನೆ ನಿಂತ್ಕೊಂಡ್ರೆ ಹೇಗೆ ಹೇಳಿ !....ಮಾತ್ನಾಡ್ರೀ ... ಹೂಂ .... ಹೂಂ ! ... Next. ವೆಂಕಟಪ್ಪ .... (ಪುನಃ ಇತ್ತ ತಿರುಗಿ) ಗುಟ್ಟಾಗಿ ಮಾತ್ನಾಡೋದಿದ್ರೆ, ಮನ್ಗೆ ಬನ್ನಿ.... ತಾವು ಇನ್ನು ಹೊರಡ್ಬಹುದು....

ಅನಂತು:— ಇದ್ಯಾವುದಕ್ಕೂ ನಾನು ಬಂದಿಲ್ಲ ಸಾರ್....

ಕೊಟ್ಬಿಡ್ಕೊಬಾರ್ದು ಸಾರ್.... ನಾನು .. ನಾನು.... ಇನ್ನೂ ಅನ್-ಎಂಪ್ಲಾಯಿ....

ಅಮಲ್:— ಇಲ್ಲಿ ಯಾವ ಕೆಲ್ಸಾನೂ ಇಲ್ರಿ !.... ಕೆಲ್ಸ ಕೊಡೋನು ನಾನಲ್ಲ....ಹೂಂ ...ದಯವಿಟ್ಟು ತಾವು ಇನ್ನು ಹೊರಡಿ; ನಂಗೆ ಒಂದು ಹೊರೆ ಕೆಲ್ಸ ಬಿದ್ದಿದೆ.

ಅನಂತು:— ದಯವಿಟ್ಟು ಟ್ರೂಕಾಪಿಗೆ ಸೈನು ಹಾಕಿಕೊಡಿ ಸಾರ್.... ಬಹಳ ಉಪಕಾರ ಮಾಡಿದ ಹಾಗಾಗುತ್ತೆ !

ಅಮಲ್:— ಮಾದಯ್ಯಾ ಚಿಕ್ಕನಹಳ್ಳಿ.... ಕೂಗೋ ಬೇಗ! (ಜವಾನನಿಗೆ ಆಜ್ಞಾಪಿಸುವನು.)

ಅನಂತು:— ಬಹಳ ಅರ್ಜೆಂಟ್ ಸಾರ್....ನಾಳೇನೇ ಅಪ್ಲಿ-ಕೇಷನ್ ಕಳಿಸ್ಬೇಕು....

ಅಮಲ್:—ದಯವಿಟ್ಟು ಹೋಗ್ರಿ....ಸುಮ್ನೆ ನಂಗೆ ಬೇಜಾರು ಹಿಡಿಸ್ಬೇಡಿ....ನಿಮ್ಮ ಪುರಾಣಾನೆಲ್ಲಾ ಕೇಳೋಕೆ ನಂಗೆ ಪುರಸೊತ್ತಿಲ್ಲ. ನನ್ನ ಕೆಲ್ಸಾನೇ ನಂಗೆ ಹೊರೆಯಾಗಿ ಬಿದ್ದಿದೆ... ನಾಳೆ ಬನ್ನಿ ಹೋಗ್ರಿ, ಆದ್ರೆ ಹಾಕಿ ಕೊಡ್ತೀನಿ. ಕೆಲ್ಸದ ಹೊತ್ನಲ್ಲಿ ಹೀಗೆ ಬಂದು ಆಫೀಸರಿಗೆ ಬೇಜಾರು ಹಿಡಿಸೋದು ಶುದ್ಧ ತಪ್ಪು....ದಯವಿಟ್ಟು ಹೋಗಿ....ಹೂಂ! ಏನಯ್ಯಾ ಮಾದಯ್ಯಾ ನಿಂದು ಕೇಸು ?....ನಿಮ್ಮ ಗೌಡರು ಚೆನ್ನಾ-ಗಿದ್ದಾರಾ?....ಯಾಕೆ ಬಾಳ ದಿನದಿಂದ ಮನೆಕಡೆ ಬರ್ತಿಲ್ಲವಲ್ಲಾ...?

ಜವಾನ:— (ಮೆಲ್ಲಗೆ) ಹೊರಗೆ ಬನ್ನಿ ಸಾಮಿ.... ರಾಯರು ಇನ್ನೂ ರೇಗ್ತಾರೆ

(ಅನಂತಮೂರ್ತಿ ನಿಧಾನವಾಗಿ ಹೊರಗೆ ಹೊರಡುವನು.)

ಬೇರೊಂದು ಆಫೀಸಿನೆದುರು :

ಅನಂತು:—ಏನಯ್ಯಾ, ನಿಮ್ಮ ಆಫೀಸರ್ ಗೆಜೆಟೆಡ್ ಆಫೀ-ಸರೇನಯ್ಯಾ....?

ಜವಾನ:— ಏನ್ಸಾಮಿ .... ನೀವು ಹೇಳೋದು ?... ಬಾಳ ಚೆಂದಾಕಿದೆ !!! ನಮ್ಮ ಸಾಮಿಯೋರು ಬಾಳ ದೊಡ್ಡ ಆಫೀಸರು... ಕಾರು ಮಡಗವ್ರೆ !.... ತಿಂಗಳಿಗೆ ೪೦೦ ರೂಪಾಯಿ ಸಂಬಳ ತಗೊಂ-ತಾರೆ.... ಹೊಸ ಮನೆ ಕಟ್ಟಿಸ್ತವ್ರೆ....ಇವ್ರು ಆಫೀಸರಲ್ವೇ ಸ್ವಾಮಿ ? ನಗು ಬರ್ತದೆ ತಮ್ಮ ಕೊಚ್ಚನ್ನಗೆ (Question) ಏನಾಗ್ಬೇಕಾಗಿತ್ತು ಸಾಮಿ, ನಮ್ಮ ಧಣಿಯೋರ ತಾವ....? ನಮ್ಮ ಸಾಮಿಯೋರು ಬಾಳ ಒಳ್ಳೇರು....ಏನ್ಹೇಳಿ, ಒಳಗೆ ಬಿಡಬಹುದೇಂತ ಕೇಳ್ಕೊಂಡು ಬರ್ತೀನಿ: ಏನಾರೂ ಪ್ರೈವೇಟ್ ಮಾತಾಡ್ಬೇಕಿತ್ತಾ....ಬುದ್ಧಿ ?

ಅನಂತು:— ಯಾವ್ದಕ್ಕಯ್ಯಾ ಇವರು ಆಫೀಸರು ?.... ಬೋರ್ಡೇ ಇಲ್ವಲ್ಲ!

ಜವಾನ:—(ನಗುತ್ತ) ಬೋರ್ಡು ಯಾಕೆ, ಸಾಮಿ ...! ನಮ್ಮ ಸಾಮಿಯೋರು ಯಾರಿಗೆ ಗೊತ್ತಿಲ್ಲ?.... ಇವರ ತಾವ ಬರ್ದ್ರೆ, ಇವರ ಸೈನ್ (Sign) ಬೀಳ್ದೇ—ಯಾವ ಕಾಗ್ದಾನೂ ಮುಂದೆ ಹೋಗೋ ಹಾಗೇ ಇಲ್ಲ ...ಎಕ್ಸೈಜ್‌ಗೆ ಇವರು ಸಣ್ಣ ಧಣಿ ಸಾಮಿ !....

ಅನಂತು:— ಇವತ್ತೆ ಸ್ವಲ್ಪ ಸೈನ್ ಹಾಕಿಸ್ಕೊಂಡು ಬರ್ಬೇ-ಕಾಗಿತ್ತು....ಒಳಗೆ ಹೋಗ್ಲೇನಯ್ಯಾ ?....

ಜವಾನ:— ಸಾಮಿಯೋರು ಬುಜಿಯಾಗವ್ರೋ ಏನೋ ! ... ಹೋಗ್ಲಿ ಹೋಗಿ ಸಾಮಿ, ತಾವು ದೊಡ್ಡ ಮನುಸ್ರು ಇದ್ದಾಂಗ ಕಾಣ್ತೀರಾ....ತಮ್ಮನ್ನ ಹೆಂಗೆ ಬಾಳ ಹೊತ್ತು ನಿಲ್ಸೋದು?...ಹೆಂಗೇ ಹೊರಗೆ ಬರ್ತ....ನನ್ನ ಬಡವನ್ನ ಸ್ವಲ್ಪ....ನೋಡ್ಕೊಳ್ಳಿ ಸಾಮಿ....

(ಬಾಗಿಲನ್ನು ತಳ್ಳಿ ಅನಂತು ಒಳಗೆ ಬರುವನು. ಬಾಗಿಲು ‘ ಕರ್ರ ’ ಎಂದು ಶಬ್ದ ಮಾಡುವುದು.)

ಎಕ್ಸೈಜ್ ಆಫೀಸರ್ :— ಏನ್ರೀ ಬಂದ್ರಿ ....? ಓಹೊ.... ನೀವೋ?....ಬನ್ನಿ ಬನ್ನಿ....ನಿಮ್ಮ ಕೇಸ್ನೇ ನೋಡ್ತಾ ಇದ್ದೆ....ಏನ್ರೀ ನಿಮ್ಮ ಮೇಲೆ ಬಾಳ ಕಂಪ್ಲೇಂಟು ಬರ್ತಾ ಇದ್ದಲ್ರಿ !.... ಹೋಗ್ಲಿ ಹೊಸಬ್ರು ಅಂತ ಕಂಟ್ರಾಕ್ಟು ಕೊಡಿಸಿದ್ರೆ .... ಹೆಂಡದ ಬದ್ಲು ನೀರು ಮಾರೋದೇನ್ರೀ ?.... ಸ್ವಲ್ಪನಾದ್ರೂ ಧರ್ಮ–ಕರ್ಮ ಬೇಡವೇನ್ರೀ ! ... ನಿಮ್ಮ ಲೈಸೆನ್ಸ್ ಇವತ್ತಿಂದಲೇ ಕ್ಯಾನ್ಸಲ್ ಮಾಡ್ತೀನಿ !

ಅನಂತು:—(ಆಶ್ಚರ್ಯದಿಂದ) ಸಾರ್ ...ನಾ....ಬಂದಿರೋದು ...

ಆಫೀಸರ್:— ನಂಗೊತ್ತೀ.... ನೀವು ಯಾಕೆ ಬಂದಿರೋದು ಅಂತ !....ಅದೆಲ್ಲ ನನ್ನ ಹತ್ರ ನಡೆಯೋದಿಲ್ಲರಿ!....ಸರ್ಕಾರಕ್ಕೆ ಮೋಸ ಮಾಡ್ತಾ ಇರೊದಲ್ದೆ....ಜನಾನೂ ಸುಲೀತಾ ಇದ್ದೀರಲ್ಲಾ !....ನಿಮ್ಗೆ ದೇವ್ರು ಒಳ್ಳೇದನ್ನು ಮಾಡ್ತಾನೇನ್ರಿ....?

ಅನಂತು:— ಸಾರ್.... ತಾವು ನನ್ನನ್ನು ತಪ್ಪು ತಿಳೀತಾ ಇದ್ದೀರಿ....ನಾನು ಬಂದಿರೋದು....

ಆಫೀಸರು:— ತಪ್ಪೇನಿಲ್ಲ ...ಸರಿಯಾಗೇ ತಿಳ್ಕೊಳ್ತಾ ಇದ್ದೇನೆ; ಸರಿಯಾಗೇ ತಿಳ್ಕೊಂಡಿದ್ದೇನೆ....ಹೋಗ್ರಿ.... ಹೋಗ್ರಿ....ಡೈರೆಕ್ಟರನ ನೋಡ್ಕೋರಿ!.... ನಿಮ್ಮ ಲೈಸೆನ್ಸ್ ಕ್ಯಾನ್ಸಲ್ ಮಾಡೋಕೆ ಬರೀತಾ ಇದ್ದೇನೆ!....ಲೋ, ...ಹನುಮಾ,....ಇವ್ರನ್ನ ದೊಡ್ಡ ಸಾಹೇಬ್ರ ಹತ್ರ ಕರಕೊಂಡು ಹೋಗೋ....

ಅನಂತು:— ಸಾರ್.... ಇದಕ್ಕೆ ತಮ್ಮ ಸೈನ್ ಬೇಕಾಗಿತ್ತು, ಅಷ್ಟೇ ಸಾರ್!...ತಾವು ನನ್ನನ್ನ....ಯಾರೋ ಅಂತ misunder-stand ಮಾಡಿಕೊಳ್ತಾ ಇದ್ದೀರಾ....

ಜವಾನ:— ಹೋಗ್ಲಿ ಬಿಡಿ ಸಾಮಿ.... ಮುಖ ನೋಡಿದರೆ ಅಯ್ಯೋ ಅನ್ನಿಸ್ತದೆ....ದೊಡ್ಡ ಧಣಿಯೋರ ತಾವ ಹೋದ್ರೆ, ಸಾಮಿ-ಯೋರು ಮುಳುಗಿಹೋಗ್ತಾರೆ....ಸಾಯಂಕಾಲ ಮನೀ ತಾವ ಬನ್ನಿ .... ಅಂತ ಹೇಳ್ತೀನಿ ಸಾಮಿ....

ಆಫೀಸರು:—ಹೋಗ್ರಿ....ಹೋಗ್ರಿ....ನನ್ನ ಮುಂದೆ ನಿಂತ್ಕೋಬೇಡಿ, ಹೋಗ್ರಿ....ನಿಮ್ಮಂತೋರಿಂದ ಡಿಪಾರ್ಟ್‌ಮೆಂಟ್ ಹಾಳಾಗಿ-ಹೋಯ್ತು ... ಹೋಗ್ರಿ.... ಹೋಗ್ರಿ....

ಅನಂತು:—ಸಾರ್....True copy ಗೆ ಸೈನು ಬೇಕಾಗಿತ್ತು ಸಾರ್....ಇವತ್ತೇ ಕೊನೇ ದಿನ ...U. P. S. C. ಗೆ ಅಪ್ಲಿಕೇಷನ್ ಹಾಕ್ಬೇಕು ಸಾರ್....

ಆಫೀಸರು:— (ರೇಗಿ ಜವಾನನ ಕಡೆ ತಿರುಗಿ) ಥೂ ಕತ್ತೆ.... ಈಡಿಯಟ್! ಯಾಕೋ ಬಿಟ್ಟೆ ಇವರ್ನ ಒಳಗೆ ?.... ನಿನ್ನ ತಲೇಲಿ ಸ್ವಲ್ಪನಾದ್ರೂ ಮೂಳೇನೇ ಇಲ್ವೆ? Please go Sir---I am not a gezetted officer....ಹೋಗ್ರಿ.... ಡೈರೆಕ್ಟರ್ ಇದ್ದಾರೆ ಹೋಗ್ರಿ ಅವರ ಹತ್ರ....Please get out.... ನನ್ನ ಕೆಲ್ಸಾನೆಲ್ಲಾ ಹಾಳು ಮಾಡಿಬಿಟ್ರಿ.... ಲೋ, ಹನುಮಾ!.... ನಿನ್ನ ಏನ್ಮಾಡ್ಬೇಕು ಅಂತ.... ನೀನೊಂದು ಶುದ್ಧ ಕತ್ತೆ.... Please go.... Mr.....

(ಅನಂತು ಹೊರಗೆ ಬರುವನು. ಬಾಗಿಲು ಕಿರ್‍ರ್ರ ಎಂದು ಮತ್ತೆ ಶಬ್ದ ಮಾಡುವುದು.)

ಸಬ್‌ರಿಜಿಸ್ಟ್ರಾರ್‌ರವರ ಆಫೀಸಿನಲ್ಲಿ:

ಸಬ್‌ರಿಜಿಸ್ಟ್ರಾರ್:— ಏನ್ರೀ ನಿಮ್ಮ ಹೆಸ್ರು....? ಯಾವೂರ್ರೀ ನಿಮ್ದು.... ? ಸರಿ! ಸಾವಿರದ ಒಂಭೈನೂರ ಐವತ್ತೇಳನೇ ಇಸವಿ ಮೇ ತಿಂಗಳು....ಸರಿ....ಸರಿ....ಕರಿಯಣ್ಣ ಬಿನ್ ಕೆಂಪಯ್ಯ ಬರೆದು ಕೊಟ್ಟ....ಇದೇನೇನ್ರೀ ನಿಮ್ಮ ಕಾಗ್ದ.... ?

ಅನಂತು:— ಅಲ್ಲ ಸಾರ್....

ಸ. ರಿ. :— ಬೇಗ ಬೇಗ ಹೇಳ್ರಿ.... ನನ್ನ ಮುಖ ನೋಡ್ತಾ ನೀವು ನಿಂತಿದ್ರೆ .... ನಂಗೆಲ್ಲಾ ಅರ್ಥವಾಗುತ್ತೇನ್ರಿ!....ಟ್ರಿಂ ಆಗಿ ನಿಂತಿದ್ದೀರಾ....! ಕಾಲೇಜು ಓದ್ತಾ ಇದ್ದೀರಿ ಅಂತ ಕಾಣ್ಸುತ್ತೆ!.... ನೋಡಿ, ನಮ್ಮ ಈಗಿನ ಕಾಲೇಜು ಹುಡುಗರಿಗೆ ಸ್ವಲ್ಪನಾದ್ರೂ ವ್ಯವಹಾರಜ್ಞಾನವೇ ಇಲ್ಲ.. ಹೂಂ....ಹೋಗ್ಲಿ... ಓದಿಗೋಸ್ಕರ....ಯಾವ ಜಮೀನು?....ಹೊಲಾನೋ, ಗದ್ದೇನೊ....ಅಥವಾ ಮನೇನೋ ?.... ಏನ್ಮಾಡಿದ್ದೀರಾ.... ? ಭೋಗ್ಯಕ್ಕೆ ಹಾಕ್ತಾ ಇದ್ದೀರೊ .... ಆಧಾರಕ್ಕೆ ಮಾಡಿ ಬರ್ಸ್ತಾ ಕೊಡ್ತಾ ಇದ್ದೀರೊ....ಅಥವಾ ಮಾರೇ ಬಿಟ್ರೊ ?.... ಬರೆಸಿಕೊಂಡಿರೋರು ಯಾರು ?....ಎಷ್ಟು ಸಾವಿರಕ್ಕೆ ?.... ಪೂರ್ತಾ ಹಣ ಪಾವತಿ ಆಗಿದೆ ತಾನೆ?....ಸಾಕ್ಷಿಗಳ್ಯಾರ್ರೀ ...ಇಲ್ಲಿ ಒಂದು ಹೊರೆ ಕಾಗ್ದಾ ಬಿದ್ದಿದೆ; ಹುಡಿಕಿಕೊಡ್ರಿ....ಯಾವ್ದು....ನಿಮ್ದು ?....

ಅನಂತು :— (ಮೆಲ್ಲಗೆ) ಅದಕ್ಕಲ್ಲ ಸಾರ್ ನಾನು ಬಂದಿರೋದು....

ಸ. ರಿ :— ರಾಮಣ್ಣಾ....ಇವರ ಎಡಗೈ ಹೆಬ್ಬಟ್ಟಿನ ರುಜು ಹಾಕಿಸ್ಕೊ....ಇವರ ಸಾಕ್ಷಿ ಯಾರೋ ವಿಚಾರಿಸು .... ಈಗಿನ ಕಾಲದ ಕಾಲೇಜುಹುಡುಗ್ರ ಹತ್ರ ಹಣಗೋದು ಬಾಳ ಕಷ್ಟ .... ಹೂಂ.... ಹೋಗ್ರಿ .... ಹೆಬ್ಬೆಟ್ಟಿನ ರುಜು ಹಾಕಿಬನ್ನಿ ಹೋಗ್ರಿ ... ನಾನೇ ಹುಡುಕ್ತೀನೆ ನಿಮ್ಮ ಕಾಗ್ದಾ....ಏನ್ರೀ.... ನಿಮ್ಮ ಹೆಸರು ?....

ಅನಂತು:— ಅನಂತಮೂರ್ತಿ....

ಸ. ರಿ :— ಫೀಜು ಇಟ್ಟಿದ್ದೀರಿ ತಾನೇ ಕಾಗ್ದದಲ್ಲಿ? ...ಹೆಡ್‌ಕ್ಲಾರ್ಕ್‌ಗೆ ತೋರಿಸಿದ್ದೀರಿ ತಾನೆ ?....

ಅನಂತು —Please excuse sir....ನಾನು ಯಾವ ಕಾಗ್ದಾ, ರಿಜಿಸ್ಟರ್ ಮಾಡಿಸೋಕ್ಕೆ ಬಂದಿಲ್ಲ.

ಸ. ರಿ :— (ಸಿಟ್ಟಿನಿಂದ) ಮತ್ತೇಕ್ರೀ ಬಂದ್ರಿ—ನನ್ನ ಹತ್ರ ? ಕಾಡುಹರಟೆ ಹೊಡೆಯೋಕೆ ಬಂದ್ರಾ?....ಅಥವಾ ಏನಾದ್ರೂ ಕೋತಿ ಕುಣಿತಾ ಇದ್ಯೋ ಇಲ್ಲಿ ?....ಹೋಗ್ರಿ....ಹೋಗ್ರಿ.... ನನ್ನ ಕೆಲ್ಸಾನೆಲ್ಲಾ ಹಾಳು ಮಾಡಿದಿರಲ್ಲ....ಎಲ್ಲಿ....next....ರಂಗಮ್ಮ ಉರುಫ್ ಅಕ್ಕಾಜಮ್ಮ ತಂದೆ ಭೀಮಯ್ಯ!.... ಎಲ್ಲಮ್ಮಾ ನಿಂದು ಫೀಜು ? (೧೦.೮-೦)....ಹತ್ತುರೂಪಾಯಿ ಐವತ್ತುಮೂರು.... ಮೂರು .... ಅಲ್ಲ ...ನಾಲ್ಕು....ಐವತ್ತು ನಾಲ್ಕು ನಯೇ ಪೈಸ....

ಅನಂತು :— ಈ ಟ್ರೂಕಾಪಿಗಳಿಗೆ ಸೈನು ಬೇಕಾಗಿತ್ತು ಸಾರ್.... ಬಹಳ ಅರ್ಜೆಂಟ್....ನಾಳೆ ಕಳಿಸ್ಬೇಕು....

ಸ. ರಿ :— ಏನಮ್ಮಾ....ರಂಗಮ್ಮ ಉರುಫ್ ಅಕ್ಕಾಜಮ್ಮ.... ನಿಂಗೆ ಹಣಪ್ರಾಪ್ತಿಯಾಗಿದೆಯೇನಮ್ಮಾ ?.... (ತಲೆ ಎತ್ತಿ ಅನಂತನನ್ನು ನೋಡಿ) ಹೋಗ್ರಿ....ನಂಗೆ ಬಿಟ್ಟೀ ಕೆಲ್ಸ ಮಾಡೋಕೆ ಪುರಸೊತ್ತಿಲ್ಲ .. ಹೋಗ್ರಿ ಹೊರಗೆ!....ನಂಗೆ ಬೇಜಾರು ಹಿಡಿಸ್ಬೇಡಿ.... ಸರ್ಕಾರಕ್ಕೆ ದುಡ್ಡು ಬರೋ ಕೆಲ್ಸ ಒಂದು ಹೊರೆ ಇರ್ಬೇಕಾದ್ರೆ.... ಬಿಟ್ಟೀ ಚಾಕ್ರಿ....! ಸೈನು ಮಾಡ್ಬೇಕಂತೆ!... ಸ್ವಲ್ಪವೂ ಅರ್ಥವಾಗೊಲ್ಲ ಜನಕ್ಕೆ!....ಕಾಲೇಜು ಓದ್ಯೂ ಅರ್ಥವಾಗೋದಿಲ್ವೇನ್ರೀ!....ಕೆಲ್ಸದ ಹೊತ್ನಲ್ಲಿ Disturb ಮಾಡ್ಬಾರ್ದು ಅಂತ....

ಅನಂತು :—ಎಲ್ಲಾ ಕಡೇನೂ ಹೀಗೇ ಅಂದ್ರೆ ಹೇಗೆ ಸಾರ್!.. ಮೂರು ನಾಲ್ಕು ಕಡೆ ಹೋದೆ....ಎಲ್ಲಾರೂ ಹೀಗೇ ಅಂದ್ರು....

ಸ. ರಿ. :— ನಿಮ್ಮ ತಾಪತ್ರಯ ಕೇಳೋಕಲ್ಲರೀ ನಾನು ಇರೋದು! ಲೋ....ಅವರ್ಗೆ ಹೊರಗೆ ಹೋಗೋ ದಾರೀ ತೋರ್ಸೊ! ಇಂಥಾರೋನ್ನ ಒಳಗೆ ಬಿಡಬೇಡ - ಅಂತ ಒಂದಿನ ಆಲ್ತೇನೋ ಹೇಳೋದು ನಿಂಗೆ ?.... ನೀನೊಂದು.... ಶುದ್ಧ ಶುಂಠಿಕಾಯಿ .... ಮೂರ್ಖ್ಯಾಸಿಗೆ ಪ್ರಯೋಜ್ನ ಇಲ್ಲ ...

ಅನಂತು :— ಸಾಕಪ್ಪಾ ಸಾಕು.... ಈ ಹಾಳು ಕೆಲ್ಸ ಹುಡುಕಾಟವೂ ಸಾಕು; ಈ ಹಾಳು ಗೋಳೂ ಸಾಕು —

ಜವಾನ:— (ಮೆಲ್ಲಗೆ) ಹೊಟ್ಟೆತುಂಬಿದೋರಿಗೆ ಬಡವರ ಗೋಳು ಗೊತ್ತಾಗೋಕಿಲ್ಲ ಬುದ್ಧಿ!—ಹೊಟ್ಟೆ ತುಂಬಿದ ಮೇಲೆ ಜನ, ನಾವೂ ಒಂದ್ಕಾಲದಲ್ಲಿ ಹಸಿದು ಸಾಯ್ತಾ ಇದ್ವು—ಅಂತ ತಿಳ್ಕೋಕಿಲ್ಲ!—ಹೋಗ್ಲಿ ಹೋಗಿ ಸಾಮಿ!—ಕಾರ್ಪೊರೇಷನ್ ಆಫೀಸಿನ ತಾವ ಹೋಗಿ—ಅಲ್ಲಿ ಬೇಗ ರುಜು ಹಾಕಿಕೊಡ್ತಾರಂತೆ!

ಅನಂತು: ಹೂಂ— ಹೋಗ್ತೀನಪ್ಪಾ— ಹೋಗ್ತೀನಿ— ಇನ್ನೂ ಎಲ್ಲೆಲ್ಲಿ ಅಲೀಬೇಕೊ—!—

(ಹೊರಗೆ ಹೊರಟು ಸೈಕಲ್ಲನ್ನು ಹತ್ತುವನು.)

ಇಂಜನಿಯರ್ ಕಛೇರಿಯಲ್ಲಿ:

ಇಂಜನಿಯರ್ :— Come in!

ಅನಂತು :— ಏನ್ರೀ ಅದು ಜವಾನನ ಹತ್ರ ಅಷ್ಟೊಂದು ವಾದಿಸ್ತಾ ಇದ್ರಿ—? ನಾನ್ಹೇಳಿದ ಕೆಲ್ಸ ಮಾಡೋಕ್ರೀ ಅವನು ಇರೋದು!—ನಾನೇ ಯಾರನ್ನೂ ಒಳಗೆ ಬಿಡಬೇಡ ಅಂತ ಹೇಳಿದ್ದೆ. ನೀವು ದೊಡ್ಡ ಮನುಷ್ಯರು ಬಂದ್ರೀ ಅಂತ, ನಮ್ಮ ಕೆಲ್ಸ-ಕಾರ್ಯಾನೆಲ್ಲ ಬಿಟ್ಬಿಟ್ಟು ಎದಿರ್ಗೊಳ್ಳೋಕೆ ಆಗುತ್ತೇನ್ರಿ ?—ಏನ್ರೀ ನಿಮ್ಮ ಹೆಸರು ?—

ಅನಂತು:— Excuse me for the truble sir— ತಾವೂ ನನ್ನ ತಪ್ಪು ತಿಳೀತಾ ಇದ್ದೀರ—ನಾಳೇ ಕೊನೇ ದಿನ! ಸಾಯಂಕಾಲ್ದಲ್ಲಿ ದುಡ್ಡು ಕಟ್ಟಿ ಅಪ್ಲಿಕೇಷನ್ ಕಳಿಸಬೇಕಾಗಿತ್ತು—

ಇಂಜನಿ:— ಓಹೋ ಹೋ—ಅಪ್ಲಿಕೇಷನ್ ಹಾಕೋ ಮುನ್ನ ನನ್ನ ನೋಡೋಣ—ಅಂತ ಬಂದ್ರೊ?—ಇದೆಲ್ಲ ಚೆನ್ನಾಗಿರೋಲ್ರಿ!—ಅಪ್ಲಿಕೇಷನ್ ಹಾಕಿ;...ಮೆರಿಟ್ ಇದ್ರೆ consider ಮಾಡ್ತಾರೆ.... ತಮ್ಮ ಹೆಸರೇನು?

ಅನಂತು:— ಅನಂತಮೂರ್ತಿ—

ಇಂಜನಿ:— ಓಹೊ—! ನೀವೇನೋ ಅನಂತಮೂರ್ತಿಗಳು!! ಚಾಮರಾಜ ಪೇಟೆ—ಐದನೆಯ ರೋಡು—

ಅನಂತು:— ಹೌದು ಸಾರ್! ನಾನೇ ಅವನು— ಹ್ಯಾಗೆ ಗೊತ್ತು ಸಾರ್ ನಾನು?— ನನ್ನ ತಂದೆಯವರ ಪರಿಚಯ ಉಂಟೇ ಸಾರ್—ತಮಗೆ?—

ಇಂಜನಿ:— ನೀವೂ ಗೊತ್ತು, ನಿಮ್ಮ ಅಪ್ಪನೂ ಗೊತ್ತು— ನಿಮ್ಮ ತಾತನೂ ಗೊತ್ತು!— Please get out—ನನ್ನ ಎದುರ್ಗೆ ನಿಲ್ಲಬೇಡಿ.. ಹೊರ್ಗೆ ಹೋಗಿ— ಮಾನ ಮರ್ಯಾದೆ ಏನೂ ಇಲ್ಲದವರು ನೀವು!—ನಾಚ್ಕೆ ಆಗ್ಲಿಲ್ಲವೇನ್ರೀ! ನನ್ನ ಹತ್ರ ಬರ್ಬೇಕಾದ್ರೆ? ನಿಮ್ಮ ಕೆಲ್ಸ ಖಂಡಿತ ಆಗೋಲ್ಲ ಹೋಗಿ!—ಅನಂತಮೂರ್ತಿ ಎಂದ್ರೆ ಯಾರೋ ಮುದ್ಕ—ಖದೀಮ ಅಂತಿದ್ದೆ;—. ಈಗ ತಾನೇ ಕಾಲೇಜು ಬಿಟ್ಟು ಬಂದಿದ್ದೀರ — ವಯಸ್ಸು —ದುಡ್ಡಿನ ಮದ ಕಾಣಿಸ್ತಾ ಇದೆ— ಏನ್ಪರೀಕ್ಷೆ ಪಾಸು ಮಾಡಿದ್ದೀರಿ—B. E. ನೆ?—

ಅನಂತು:—ಇಲ್ಲ ಸಾರ್—ಬರಿ B. Sc., ಸಾರ್!—ಕ್ಷಮಿಸ ಬೇಕು ಸಾರ್—ನೀವೇನು ಮಾತ್ನಾಡ್ತಾ ಇದ್ದೀರಿ ಅನ್ನೋದು ನಂಗೆ ಅರ್ಥವೇ ಆಗ್ತಾ ಇಲ್ಲ!

ಇಂಜನಿ:— ಹ್ಯಾಗ್ರೀ ಅರ್ಥವಾಗುತ್ತೆ—? ಬೆಕ್ಕು ಕಣ್ಣು ಮುಚ್ಚಿಕೊಂಡು ಹಾಲು ಕುಡಿದ್ರೆ, ಬೇರೆಯೋರಿಗೆ ಕಾಣ್ಸೋದಿಲ್ವೇನ್ರಿ? ಟೆಂಡರ್ ಸಿಕ್ಕಿಲ್ಲ ಅಂತ ಮೂಗರ್ಜಿ ಹಾಕೋದೇನ್ರಿ?— ಧೈರ್ಯ ವಾಗಿ. ಬೇಕಾದ್ರೆ ನನ್ನೇ ಕೇಳ್ಬೇಕಾಗಿತ್ತು! ಹೋಗಿ—ಹೋಗಿ! ಅಪ್ಲಿಕೇಷನ್ ಜೊತೇಲಿ ದುಡ್ಡು ಕಳಿಸಿ, ನಾನು ಹೀಗೆಂದೆ ಅಂತ, ಇನ್ನೂ ಉಪ್ಪು ಹುಳಿ ಖಾರ ಸೇರ್ಸಿ ಅರ್ಜಿನೂ ಲಗತ್ತಿರ್ಸಿ ಕಳಿಸಿ!—ಹೂಂ— Please get out— ಏ ಬಾಯ್— ಕಂಟ್ರಾಕ್ಟ್ ಸಾಹೇಬರಿಗೆ ಬಾಗಿಲು ತೆಗೆಯೊ!—

ಅನಂತು:— ಕ್ಷಮಿಸಬೇಕು ಸಾರ್—ತಾವು ನನ್ನ ಯಾರೋ ಅಂತ ತಪ್ಪು ತಿಳೀತಾ ಇದ್ದೀರಾ!—

ಇಂಜನಿ:— ತಪ್ಪಾಗಿ ತಿಳ್ಕೊಂಡಿರೋದನ್ನ ಸರಿಯಾಗಿ ತಿದ್ದಿ ಕೊಳ್ಳೋಕೆ, ಒಂದು ಕವರು ತುಂಬ ದುಡ್ಡು ಕೊಡ್ತೀನಿ — ಅಂತ ತಾನೇ ನೀವು ಹೇಳೋಕೆ ಬಂದಿರೋದು?— ಇನ್ನು ನೀವು ಇಲ್ಲೇ ನಿಂತಿದ್ರೆ ಬಾಯ್ ಕೈಲಿ ಹೊರಗೆ ಕಳಿಸ್ಬೇಕಾಗುತ್ತೆ!

ಅನಂತು:— ನಾನು ಶಾಮಾಶಾಸ್ತ್ರಿಗಳ ಮಗ— ಅನಂತ ಮೂರ್ತಿ—True copy ಗೆ ಸೈನು ಬೇಕಾಗಿತ್ತು.

ಇಂಜನಿ:— ಹಾಂ—! True copy—!! ಸೈನು—!!!

ಅನಂತು:— ಹೌದು ಸಾರ್, U. P. S C ಗೆ ಒಂದು ಅಪ್ಲಿಕೇಷನ್ ಹಾಕ್ಬೇಕಾಗಿತ್ತು.

ಇಂಜನಿ — I am very soory Mr. ಅನಂತ ಮೂರ್ತಿ!....ಕ್ಷಮಿಸಿ, ...ಇವತ್ತು ಯಾವ್ದೋ ವಿಷಯದಿಂದ ನನ್ನ ತಲೆ ಕೆಟ್ಟು ಹೋಗಿದೆ ... Please, ಮಧ್ಯಾಹ್ನ ಬನ್ನಿ....ಹೆಡ್‌ಕ್ಲಾರ್ಕರ ಕೈಲಿ ಒರಿಜನಲ್ ಮತ್ತು True copy ಎರಡೂ ಕೊಟ್ಟು, ವೆರಿಫೈ ಮಾಡಿಸಿರಿ....ನಾನು ಈಗ ಮನೆಗೆ ಹೋಗಿ, ಮಧ್ಯಾಹ್ನ ಬರ್ತೀನಿ... ಬಂದ ತಕ್ಷಣ ಸೈನು ಹಾಕ್ಕೊಡ್ತೇನೆ. ಏನೇನೋ ಮಾತ್ನಾಡಿ ಬಿಟ್ಟೆ, Excuse me, please come in afternoon.

ಅನಂತು:— ಬಹಳ urgent ಆಗಿ ಬೇಕಾಗಿತ್ತು ಸಾರ್.... ಇವತ್ತೇ ಅಪ್ಲಿಕೇಷನ್ ಕಳಿಸ್ಬೇಕು.

ಇಂಜನಿ:—Please... Mr. ಅನಂತಮೂರ್ತಿ,....Plese, ಈಗ ನನ್ನ ಮನಸ್ಸು ಸರಿಯಾಗಿಲ್ಲ

(ಕಾರಿನಲ್ಲಿ ಕುಳಿತು ಹೊರಗೆ ಹೊರಡುವರು. ಅನಂತಮೂರ್ತಿಯೂ ಹೊರಗೆ ಬರುವನು.)

ಮತ್ತೆ ಇಂಜನಿಯರ್ ಕಚೇರಿಯಲ್ಲಿ:

(ದೂರದ ಗಡಿಯಾರ ಮೂರು ಹೊಡೆಯುವುದು.)

ಅನಂತು:— ಬಂದ್ರಾ ಅಪ್ಪ ಇಂಜನೀಯರು?

ಜವಾನ:— ಬರವಲ್ಲವಂತೆ ಸಾರ್....ಇದೇ ತಾನೇ ಫೋನ್ ಬಂತು ಮೈಯಲ್ಲಿ ಹುಶಾರಿಲ್ಲವಂತೆ!

ಅನಂತು:— ಹೂಂ....ಬರ್ತೀನಿ

ಜವಾನ:— ನಮಸ್ಕಾರ.... ನಾಳೆ ಬನ್ನಿ ಸಾರ್!....

ಮತ್ತೊಂದು ಆಫೀಸಿನಲ್ಲಿ:

ಅನಂತು:— ಸಾಹೇಬ್ರು ಒಳಗೆ ಇದ್ದಾರೇನಯ್ಯಾ?...

ಜವಾನ:— ಯಾರು ಬೇಕಾಗಿತ್ತು ಸ್ವಾಮಿ ...ಇನ್‌ಕಮ್‌ಟ್ಯಾಕ್ಸ್ ಆಫೀಸರ್ರೊ....ಸೇಲ್ಸ್‌ಟ್ಯಾಕ್ಸ್ ಆಫೀಸರ್ರೋ? ... ಯಾರು ಸ್ವಾಮಿ?

ಅನಂತು:— ಯಾರಾದ್ರೂ ಸರಿ....ಒಳಗೆ ಯಾರಿದ್ದಾರೆ?....

ಜವಾನ:— ಸೇಲ್ಸ್‌ಟ್ಯಾಕ್ಸ್ ಆಫೀಸರ್ರು, ಸಾಮೀ....

(ಅನಂತಮೂರ್ತಿ ಒಳಗೆ ಪ್ರವೇಶಿಸುವನು.)

ಅನಂತು : ನಮಸ್ಕಾರ್ ಸಾರ್....

ಸೇಲ್ಸ್‌ಟ್ಯಾಕ್ಸ್ ಆಫೀಸರ್ :— ನಮಸ್ಕಾರ .... ಏನ್ರೀ ಬಂದ್ರಿ?....ಲೆಖ್ಖಾ ಎಲ್ಲಾ ಸರ್‍ಯಾಗಿ ತಂದಿದ್ದೀರೇನ್ರೀ?.. ಅಕೌಂಟೆಂಟ್ ಹತ್ರ ಎಲ್ಲಾ ವೆರಿಫೈ ಮಾಡಿಸಿದ್ದೀರಾ? ... ಎಲ್ಲಾ ಸರಿಯಾಗಿದೆ ತಾನೆ?...ಮೋಸಾ-ಗೀಸಾ ಮಾಡೋಕೆ ಪ್ರಯತ್ನಿಸಿದ್ರೆ...ಪುನಃ ನೀವು ತಲೆ ಎತ್ತೋ ಹಾಗಿಲ್ಲ!....ಚೆನ್ನಾಗಿ ಬರೆ ಹಾಕ್ತೀನಿ. ಸರ್ಕಾರಕ್ಕೆ

ಮೋಸಮಾಡಿ ನೀವು ಬದ್ಕೋದಿಲ್ಲರೀ.... ಯಾವಾಗ್ಲೂ ಸತ್ಯವಾಗಿದ್ದು ಹಣ ಸಂಪಾದಿಸ್ಬೇಕು....ಏನಂತೀರಿ... ?

ಅನಂತು :— ನಿಜ, ಸಾರ್ !....ನೀವು ಹೇಳೋದು ಸತ್ಯ.... ಆದ್ರೆ, ಈಗಿನ ಕಾಲದಲ್ಲಿ ಸತ್ಯಕ್ಕೆ ಬಾಳ ಜನ ಬೆಲೆ ಕೊಡೋಲ್ಲ ಸಾರ್! ....ಸತ್ಯವಾಗಿ ನಡೀತೀನಿ ಅನ್ನೋನು ಬಾಳೋದೇ ಕಷ್ಟವಾಗುತ್ತೆ !

ಸೇ. ಅ :— ಹಾಗಾದ್ರೆ ನೀವು ಚೆನ್ನಾಗಿ ಬಾಳಿ ಬದ್ಕಬೇಕು ಅಂತ...ಅಸತ್ಯಾನೇ ನುಡಿಯೋದು ಅಂತ ಹೇಳ್ತಾ ಇರೋಹಾಗಾಯ್ತಲ್ಲ !.... (ನಗುವರು) ಎಲ್ಲಿ ತನ್ನಿ....ನಿಮ್ಮ ಸರಕೆಲ್ಲಾ ಇಲ್ಲಿಡಿ!....

(ಅನಂತು ಟ್ರೂಕಾಪಿ, ಒರಿಜಿನಲ್ ಕಾಪಿ ಎಲ್ಲವನ್ನೂ ಮೇಜಿನ ಮೇಲಿಡುವನು.)

ಸೇ. ಅ :— ಇದೇನ್ರಿ ? ..ಟ್ರೂಕಾಪಿಗಳಿಗೆ ಸೈನು ಹಾಕಿಸಿ, ಕೊಳ್ಳೋದಕ್ಕೆ ಬಂದಿದ್ದೀರಾ ?.... ಅಗ್ಲೇ ಹೇಳ್ಬಾರದಾಗಿತ್ತೇನ್ರೀ....?

ಅನಂತು :— ಬರ್ತಲೇ ಹೇಳಿದ್ರೆ 'ಪುರಸೊತ್ತಿಲ್ಲ, ಹೊರಗೆ ಹೋಗು' ಅಂತ ಎಲ್ಲಿ ಹೇಳ್ತೀರೋ ಅಂತ ಹೆದರಿಕೆಯಾಗಿತ್ತು....

ಸೇ. ಅ :— ನಾನೂ ನಿಮ್ಮ ಹಾಗೇ ಕಷ್ಟಪಟ್ಟು ಕೆಲ್ಸಕ್ಕೆ ಬಂದೋನು....ಅನ್ ಎಂಪ್ಲಾಯಿಗಳನ್ನು ಕಂಡ್ರೆ ನಂಗೆ ಬಾಳ ಕರುಣೆ ಬರುತ್ತೆ....ಪಾಪ, ಬಾಳ ಕಾಪತ್ರಯ ಅಲ್ವೇನ್ರಿ.... ?

ಅನಂತು :— ಅನುಭವಿಸಿದ್ದೋರಿಗೆ, ಗೊತ್ತು ಸಾರ್ .... ಎಲ್ಲರಿಗೂ ಗೊತ್ತಾಗೊಲ್ಲ ಸಾರ್ !....

ಸೇ. ಅ:— ಯಾಕ್ರಿ ? ಮಿ. ಅನಂತು ! ಇಷ್ಟು ಕಡಿಮೆ ಮಾರ್ಕ್ಸ ತೆಗೆದಿದ್ದೀರಲ್ಲ !.... U. P. S. C. ಗೆ ಅಪ್ಲಿಕೇಷನ್ ಅಂತ ಬೇರೆ ಹೇಳ್ತಾ ಇದ್ದೀರಿ ! ಇಷ್ಟು ಕಡ್ಮೆ ಮಾರ್ಕ್ಸ ತೆಗೆದ್ರೆ, ಬಾಳ ಕಷ್ಟಾನ್ರೀ ಕೆಲ್ಸ ಸಿಕ್ಕೋದು !....ಕಷ್ಟಪಟ್ಟು ಓದಿ ಹೆಚ್ಗೆ Marks ತೆಗೀಬಾರ್ದಾಗಿತ್ತೇನ್ರಿ ?....

ಅನಂತು:— ನಾನೂ ಬಾಳ ಕಷ್ಟಪಟ್ಟೆ ಸಾರ್; ... ಆದ್ರೆ ಪೇಪರ್ ತುಂಬಾ ಕಷ್ಟವಾಗಿತ್ತು....

ಸೇ. ಅ:— ಹೋಗ್ಲಿ ...ಎಲ್ಲಿ Original ಕೊಡಿ ಇಲ್ಲಿ .. ಎಲ್ಲಾ True Copy ನೇ ತಂದಿದ್ದೀರಲ್ಲ....ಹ್ಯಾಗೆ ನಾನು ಸೈನು ಹಾಕಿಕೊಡ್ಲಿ ?...

ಅನಂತು:— ನೋಡಿ ಸಾರ್....ಇದೆಲ್ಲ ಹೊಸದು True Copy....ಇವಕ್ಕೆ ಸೈನು ಆಗ್ಬೇಕು....ಇವು ಹಳೇ True copy.. ಒರಿಜಿನಲ್ ತೋರ್ಸಿ ಸೈನು ಹಾಕಿಸಿದ್ದು .... ಸದ್ಯಕ್ಕೆ ಇದನ್ನೇ ಒರಿಜಿನಲ್ ಅಂತ ತಿಳ್ಕೊಳ್ಳಿ ಸಾರ್....

ಸೇ. ಅ —ನೀವ್ಹೇಳ್ತಾ ಇರೋದು ಬಾಳ ಚೆನ್ನಾಗಿದೇರ್ರಿ !.... ಹ್ಯಾಗ್ರೀ....ಇದನ್ನೇ ಒರಿಜಿನಲ್ ಅಂತ ತಿಳ್ಕೋಳ್ಳೋದು?....ಹುಡ್ಗೀನ ತೋರಿಸ್ರಿ ಅಂದ್ರೆ—ಹುಡ್ಗೀ ನೆರಳು ತೋರ್ಸಿ, ಒಪ್ಪಿ ಅಂದ್ರೆ...ಒಪ್ಕೋಕೆ ಆಗುತ್ತೇನ್ರಿ ? ..ನೆರಳೇ ಹುಡ್ಗಿ ಅಂತ ಹ್ಯಾಗ್ರೀ ತಿಳಿಯೋದ. ?.... ಬಣ್ಣ, ಗುಣ, ರೂಪು ಇದೆಲ್ಲ ತಿಳಿಯುತ್ತೇನ್ರಿ? .. S. S. L. C. ಸರ್ಟಿಫಿಕೇಟ್ ಮುಖ್ಯವಾದ್ದು .... ಅದೂ ಕೂಡ True ಕಾಪಿ ತಂದಿದ್ದೀರಾ....

ಅನಂತು:— ನೋಡಿ ಸಾರ್ ....ಒಬ್ರು ದೊಡ್ಡ M. L. A. ಇದಕ್ಕೆ ಸೈನು ಹಾಕಿದ್ದಾರೆ....ಕೆಳಗೆ 'ಮೆಂಬರ್ ಲೆಜಿಸ್ಲೇಟೀವ್ ಅಸೆಂಬ್ಲಿ' ಅಂತ ಬರೆದಿದ್ದಾರೆ....

ಸೇ. ಅ:— I am sorry ಅನಂತ ಮೂರ್ತಿ !....ನಾನು ಇಂಥಾ ವಿಷಯದಲ್ಲಿ ಬಾಳ ಸ್ಟ್ರಿಕ್ಟು .. ಸುಳ್ಳು ಲೆಖ್ಖಾ ನೋಡಿ ನೋಡಿ, ... ಯಾವ್ದರಲ್ಲೂ ನಂಗೆ ನಂಬ್ಕೇನೆ ಹೊರ್ಟು ಹೋಗಿದೆ! ನಿಮ್ಮಲ್ಲಿ ಅನುಮಾನ ಅಂತ ಅಲ್ಲ ನಾನು ಹೇಳ್ತಾ ಇರೋದು;.... ನೀವು ಹೇಳೋದು ಸತ್ಯಾನೇ ಇರಬಹುದು;.... ಆದ್ರೆ....Sorry ನಾನು ಸೈನು ಮಾಡ್ಲಾರೆ....ಒರಿಜಿನಲ್ ತಂದು ತೋರ್ಸಿ, ಆಕ್ಷಣದಲ್ಲಿ ಹಾಕಿ ಕೊಡ್ತೀನಿ.

ಅನಂತು :— ಒರಿಜಿನಲ್ ಎಲ್ಲಾ ಇಂಜಿನಿಯರಿಂಗ್ ಕಾಲೇಜಿಗೆ ಅಪ್ಲಿಕೇಷನ್ ಹಾಕಿದ್ದಾಗ ಕಳುಹಿಸಿದ್ದೆ ಸಾರ್ ! .. ಸೀಟೂ ಸಿಕ್ಲಿಲ್ಲ....ದಿನಾನೂ ಹೋಗಿ ಆಫೀಸಿಗೆ ಕೇಳ್ತಾ ಇದ್ದೀನಿ ಇಂದು.... ನಾಳೆ— ಅಂತ ಹೇಳ್ತಾ ಇದ್ದಾರೆ....ಬಹಳ ಅರ್ಜೆಂಟ್ ಸಾರ್;.... ಇವತ್ತೇ ಕಳಿಸ್ಬೇಕು ...ನಾಳೇನೆ ಕೊನೆದಿನ !....ಬಾಳ ಉಪಕಾರ ಮಾಡ್ದಹಾಗೆ ಆಗುತ್ತೆ ಸಾರ್ !.... ದಯವಿಟ್ಟು ಇಷ್ಟು ಉಪಕಾರ ಮಾಡಿ ಸಾರ್ !....

ಸೇ. ಅ :— ಕ್ಷಮಿಸಿ ಅನಂತಮೂರ್ತಿ .... ನಿಮ್ಮನ್ನು ನೋಡಿದ್ರೆ ನಂಗೆ ಕನಿಕರ ಬರುತ್ತೆ .... ಆದ್ರೆ ಒರಿಜಿನಲ್ ಬಂದ ಹೊರ್ತು ನಾನು ಸೈನು ಹಾಕೊಲ್ಲ....ಹಿಂದೂ ಹೀಗೆ ನಾನು ಹಾಕಿಲ್ಲ ... ಮುಂದೂ ಹಾಕೊಲ್ಲ .. ಈ ವಿಷಯದಲ್ಲಿ ನಾನು ಬಾಳ ಸ್ಟ್ರಿಕ್ಟ್.... Please go out now.... ನಂಗೆ ಬೇಕಾದಷ್ಟು ಕೆಲ್ಸ ಇದೆ.... ಒರಿಜನಲ್ ತಗೊಂಡು ಬೇಕಾದ್ರೆ ಮನೇ ಹತ್ರ ಬನ್ನಿ....5½ ಮೂರನೇ ರೋಡ್. ಬಸವನಗುಡಿ ...Please....

(ಅನಂತು ಹೊರಗೆ ಬರುವನು.)

ಮ್ಯಾಜಿಸ್ಟ್ರೇಟ್ ಕಚೇರಿಯಲ್ಲಿ :

ಅನಂತು :— ಮ್ಯಾಜಿಸ್ಟ್ರೇಟರನ್ನು ನೋಡ್ಬೇಕಾಗಿತು ; ಎಲ್ಲಯ್ಯಾ ಅವರ್ನ ನೋಡೋದು ?....ಇಲ್ಲಿ ಕಛೇರಿಯಲ್ಲೇ' ನೋಡ್ಬಹುದೊ, ಅಥವಾ ಛೇಂಬರ್‌ನಲ್ಲಿ ನೋಡ್ಬೇಕೊ.... ?

ಜವಾನ :— ಹಂಗೆಲ್ಲಾ ಸೀಟ್ ಮ್ಯಾಗೆ ಇದ್ದಾಗ ನೋಡೋಕೆ ಆಗೋಕಿಲ್ಲ' ಛೇಂಬರ್‌ನಲ್ಲಿ ನೀವೇ ಹೋಗಿ ನೋಡೋಕೆ ಬಿಡೋದಿಲ್ಲ....ಯಾರಾದ್ರೂ ಲಾಯರು ಗೊತ್ತಿಲ್ವಾ ಸಾಮಿ !.... ಲಾಯರು ಛೇಂಬರ್‌ಗೆ ಹೋಗಿ ನೋಡ್ಬಹುದು !'

ಅನಂತು :— ನಂಗ್ಯಾರೂ ಗೊತ್ತಿಲ್ಲವಲ್ಲಯ್ಯಾ ....ನೀನೇ ಹೋಗಿ ಸ್ವಲ್ಪ ಇದಕ್ಕೆ ಸೈನು ಹಾಕಿಸ್ಕೊಂಡು ಬಂದುಬಿಡಯ್ಯಾ.... ಬಾಳ ಉಪಕಾರ ಮಾಡ್ದಂಗ ಆಗುತ್ತೆ....

ಜವಾನ:— ಅಯ್ಯೊ....ಅಯ್ಯೊ .. ಇಂಥಾ ದೊಡ್ಡ ಕೆಲ್ಸಕ್ಕೆ ನಾವೆಲ್ಲಾ ಹೋಗ್ತಾರಾ ಬುದ್ಧಿ! ... ಸಾಮಿಯೋರು ರೇಗಿ ಬಿಟ್ರೆ ಬಾಳ ಕಷ್ಟ ..ನಮ್ಮ ಧಣಿಗಳು ಬೆಂಕಿ ಮಂತೋರು.... ಬಡಾ ಬಡಾ

ಲಾಯರ್‍ಗಳೂ ಹೆದ್ರಿ ಗುಳ್ಳೆನರಿಯಾಗಿ, ಅವರ ತಾವ ತಲೆ ತಗ್ಗಿ ಹೋಗ್ತಾರೆ;.... ಅಂತೋರು, ನಾನು ಹೆಂಗೆ ಹೋಗ್ಲಿ.... ಆಗೋಲ್ಲ.... ಯಾರ್‍ನಾದ್ರೂ ಲಾಯರ್‍ನ ಹಿಡೀರಿ ಸಾಮಿ....ಒಂದು ಚಣದಲ್ಲಿ ಕೆಲ್ಸ ಆಗಿ ಹೋಗ್ತದೆ! ಈಗ ನಾಲ್ಕುವರೆ ಗಂಟೆಗೆ ಛೇಂಬರ್‍ಗೆ ಹೋಗ್ತಾರೆ .. ಬೇಗ ಹೋಗಿ ಸಾಮಿ ..

(ಅನಂತಮೂರ್ತಿ ಒಬ್ಬ ಲಾಯರ ಬಳಿಗೆ ಬಂದು)

ಅನಂತು:— Mr..... will you spare a minute.... ತಮ್ಮಿಂದ ಒಂದು ದೊಡ್ಡ ಉಪಕಾರವಾಗ್ಬೇಕಾಗಿತ್ತು....

ಲಾಯರು:— ಓಹೋ.... ಧಾರಾಳವಾಗಿ! ಒಂದು ನಿಮಿಷ ಅಲ್ಲಿ ಇದೆ, ಹತ್ತು ನಿಮಿಷ ಮಾತ್ನಾಡಿ ... ಇನ್ನೊಬ್ಬರಿಗೆ ಉಪಕಾರ ಮಾಡೋಕೇ ನಾವಿರೋದು!.... ಅರ್ಧಗಂಟೆ ಒಳಗೆ ಎಷ್ಟು ಹೊತ್ತು ಮಾತ್ನಾಡಿದ್ರೂ, consultin fee ೧೦ ರೂ ಆಗುತ್ತೆ ...

ಅನಂತು:— ಅಂತಾ ಕೇಸು ಏನೂ ಇಲ್ಲ ಸಾರ್! .. True copy ಗಳಿಗೆ ಮ್ಯಾಜಿಸ್ಟ್ರೇಟರ ಸೈನು ಆಗ್ಬೇಕಾಗಿತ್ತು!

ಲಾಯರು:— I am sorry! ನೀವು ಯಾರೊ - ಯಾವ ಊರೋ!.... ನಿಮ್ಮ ಪರಿಚಯವಿಲ್ಲ ನಂಗೆ.... ಇವೆಲ್ಲ ಸರಿಯಾಗಿವೆ ಅಂತ ನಾನು ಹೇಗೆ ನಂಬ್ಲಿ?— ನಾನು ಈ ಕೆಲ್ಸಕ್ಕೆ ಬರಲಾರೆ.... ನೀವು ಇನ್ನು ಹೊರಡ್ಬಹುದು....urgent ಆದ ಒಂದು ಭಾರಿ ಕೇಸು ಇದೆ!....ನಾನೀಗ ಅದನ್ನು ಅಟೆಂಡ್ ಮಾಡ್ಬೇಕು....

(ಜವಾನ ಹತ್ತಿರ ಬಂದು)

ಜವಾನ :— ಏನೋ ಸಾರ್.... ಮಾಡ್ಸಿಕೊಟ್ಬುಬಿಡಿ ಸಾರ್! ಇವರ ಮುಖ ನೋಡಿದ್ರೆ ಅಯ್ಯೋ ಅನ್ಸುತ್ತೆ....ಪೊತಾರಿಂದ ಬಾಳ ಸುತ್ತಾಡವ್ರಂತೆ! ಏನೋ ಐದು ರೂಪಾಯಿ ಕೊಡ್ತಾರೆ, ಮಾಡ್ಸಿ-ಕೊಟ್ಟು ಪುಣ್ಯ ಕಟ್ಕೊಳ್ಳಿ ಸಾರ್!.... ಹತ್ರ ಬಂದೋರ್‍ನ ಹಂಗೇ ಕಳಿಸ್ಬಾರ್‍ದು!

ಲಾಯರು: ಏನಯ್ಯಾ ... ನಿಂದು ಬೇರೆ ಶಿಫಾರಸ್ಸು.... ನಂಗೆ ಹೋರಿ ಕೆಲ್ಸ ಬಿದ್ದಿದೆ.... ಎಲ್ಲಿ ಕೊಡ್ರಿ ಇಲ್ಲಿ ರೂಪಾಯಿ .. ಹೋಗ್ಲಿ....ಇವನು ಇಷ್ಟೊಂದು ಹೇಳ್ಬೇಕಾಗಿದ್ರೆ....

ಅನಂತು :— ನಾನು ಫೀಜು ತಂದಿಲ್ಲ ಸಾರ್!.... ನಾಳೆ ತಂದು ಕೊಡ್ತೀನಿ!....

ಲಾಯರು :— ಹೋಗ್ರಿ .... ಹೋಗ್ರಿ........ಕೈಯಲ್ಲಿ ಕಾಸಿಲ್ದೆ ಯಾಕ್ರೀ ಬರ್‍ತೀರಾ ಲಾಯರ್ ಹತ್ರ ?....

ಜವಾನ:— ಕೈಯಲ್ಲಿ ಒಂದು ಕಾಸಿಲ್ದೆ ಇವ್ರು. ಎಲ್ಲಾರೂ ಪ್ಯಾಂಟೂ ಬೂಟೂ ಹಾಕ್ಕೊಂಡು ಬರ್ತೋರೇ .... ಕಾಲಕೆಟ್ಹೋಯ್ತು ಸಾಮಿ!.... (ನಗುವನು.)

(ಅನಂತಮೂರ್ತಿ ಸೈಕಲ್ಲನ್ನು ಹತ್ತುವನು.)

ಅನಂತನ ಮನೆಯಲ್ಲಿ :

ಶಾಮಣ್ಣ :—ಏನೋ ಅನಂತು,....ಬೆಳಗ್ಗೆ ಹೊರಟೋನು ... ಇಷ್ಟು ಹೊತ್ತಿಗೆ ಬರ್‍ತಾ ಇದ್ದೀ!....ಆಗ್ಲೆ ೮ ಗಂಟೆ ಆಯ್ತಲ್ಲೊ!.... ಹೋಗ್ಲಿ .... ಇವತ್ತಿನ ' Hindu ' ನೋಡಿದ್ಯಾ ?.... ಯಾವ್ದೋ ಊರ್‍ನಲ್ಲಿ ಮೇಷ್ಟ್ರು ಕೆಲ್ಸ ಖಾಲಿ ಇದ್ಯಂತೆ .... ಸೆಕ್ರೆಟರಿ, ಹೆಡ್ ಮಾಸ್ಟರ್. ಪ್ರೆಸಿಡೆಂಟ್....ಆಮೇಲೆ....ಇನ್ನೊಂದು .... ಯಾರಿಗ್ಹೋ ಹಾಕ್ಬೇಕಂತೆ .. ಪೇಪರು ತಂದಿದ್ದೇನೆ .. ನೋಡು! .... ನಾಳೇನೇ ಅದಕ್ಕೂ ಒಂದು ಹಾಕ್ಬಿಡು .... ಪೋಸ್ಟಲ್ ಆರ್ಡರ್ ಸಿಕ್ಲಿಲ್ಲ .... ಇವತ್ತು!........ನಾಳೆ ತರ್‍ತೀನಿ. ಯಾವ ಪೋಸ್ಟಾಫೀಸಿನಲ್ಲೂ ೭॥ ರೂಪಾಯ್ದು ಇಲ್ವೇ ಇಲ್ಲ....ಹೆಚ್ಚು ದುಡ್ಡು ಕೊಟ್ಟು ಯಾಕೆ ಚಿಲ್ಲರೆ ಚಿಲ್ಲರೆ ತರ್‍ಬೇಕು ಅಂತ ಸುಮ್ನಾದೆ....

ಅನಂತು:—ಹಾಳಾಗಿ ಹೋಗ್ಲಿ....ಬಿಡಿ; ...ನಾನು ಯಾವ್ದಕ್ಕೂ ಅಪ್ಲಿಕೇಷನ್ ಹಾಕೋಲ್ಲ........ಬೆಳಗ್ಗೆಯಿಂದ ಸುತ್ತಿ ಸುತ್ತಿ ಸುಣ್ಣ ವಾದ್ರೂ, ನಮ್ಮಗೋಳು ಕೇಳೋರು ಯಾರೂ ಇಲ್ಲ....ಒಬ್ರೂ ಸೈನು ಹಾಕಿ ಕೊಡ್ಲಿಲ್ಲ...

ತಾಯಿ :— ಮಹಾನುಭಾವಾ,.... ತಿರುಪತಿ ತಿಮ್ಮಪ್ಪಾ!.... ಯಾಕಪ್ಪ ಇನ್ನೂ ನಮ್ಮೇಲೆ ನಿನ್ನ ಕರುಣೆ ಬರಲಿಲ್ಲ! ....ಅನಂತೂಗೆ ಕೆಲ್ಸ ಸಿಕ್ಕಿ, ಮದ್ವೆ ಆಗಿ, ದೊಡ್ಡ ಮಗೂನ ತೊಡ್ಲು ಕೊಡ್ತೀನಿ ಅಂತ ಇವತ್ತ ಬೆಳಗ್ಗೆ ಎಲ್ಲಾ ಹರಕೆ ಹೊತ್ತಿದ್ನಲ್ಲಾ....ಸ್ವಾಮಿ!....ಹೋಗ್ಲಿ ಬಾರೊ ಮಗು .... ಊಟಮಾಡ್ಬಾ!.... ನಾಳೆ ನಂಜುಂಡೇಶ್ವರಂಗೆ ಇನ್ನೊಂದು ಹರ್‍ಕೆ ಕಟ್ಟಿದ್ದೇನೆ.... ಖಂಡಿತ ಕೆಲ್ಸ ಆಗುತ್ತೆ....

ಶಾಮಣ್ಣ :—ಅಲ್ವೇ....ನಿನ್ನ ಮಗಂಗೆ ಮೊದಲ್ನೇದು ಹೆಣ್ಣು ಮಗು ಆದ್ರೆ ಏನ್ಮಾಡ್ತೀಯೇ ... ?

ತಾಯಿ :— ಹೋಗಿ ....ಅಂದ್ರೆ........ನಿಮ್ಮ ಅನಂತೂಗೆ ಮೊದಲ್ನೇದು ಗಂಡೇ ಆಗೋದು....ನಮ್ಮ ವಂಶದಲ್ಲಿ ಎಲ್ಲರಿಗೂ ಹಿಷ್ಟೇ—

ಅನಂತು :—(ಸಿಟ್ಟಿನಿಂದ) ನಿಮ್ಮ ಯೋಚ್ನೇನೇ ನಿಂಮ್ದು....

ಶಾಮಣ್ಣ :— ಮೊಮ್ಮಗಂಗೆ ಏನು ಹೆಸ್ರು ಇಡ್ಬೇಕು ಅಂತ ಆಗ್ಲೇ ಯೋಚ್ನೆಮಾಡಿದ್ದಿ .... ನಿಮ್ಮಜ್ಜನ ಹೆಸ್ರೋ ... ನಮ್ಮಜ್ಜನ ಹೆಸ್ರೋ?...

ತಾಯಿ :— ಹೋಗಿ ಅಂದ್ರೆ,...... ನಿಮ್ಗೆ ಯಾವಾಗ್ಲೂ ತಮಾಷ್ಯಾನೇ....ನಮ್ಮಜ್ಜನ ಹೆಸ್ರೇ ಚೆನ್ನಾಗಿದೆ....

ಶಾಮಣ್ಣ :— ನಮ್ಮಜ್ಜನ ಹೆಸ್ರು ಚೆನ್ನಾಗಿದೆ......ನನ್ನ ಮೊಮ್ಮಗ, (ನಗುವರು) ಗೆಜೆಟೆಡ್ ಆಫೀಸರ್ ಆಗ್ತಾನೆ .. ಎಲ್ಲಾರ True Copy ಗೂ ಒಂದೂ ಪ್ರಶ್ನೆ ಕೇಳ್ದೆ ಸೈನುಹಾಕಿ ಕೊಡ್ತಾನೆ.... ಅಲ್ವೇನೋ . ಅನಂತು ?....

(ಈ ಸಾರಿ ಅನಂತನೂ ನಗುವನು.)

ತಾಯಿ : - ನಿಮ್ಗೆ ನಿಮ್ಮಗಂಗೆ, ಎಲ್ಲಾ ಮಾತ್ನಲ್ಲೂ ಹಾಸ್ಯಾನೇ!....

ಶಾಮಣ್ಣ :— ಹೌದು....ಟ್ರಿಕಾಪಿ....

(ಎಲ್ಲರೂ ನಗುವರು.)

ಗಂಗಾಲಹರಿ

(ಪಂಡಿತರಾಜ ಜಗನ್ನಾಥನು ಸಂಸ್ಕೃತದಲ್ಲಿ ರಚಿಸಿದ ಕಾವ್ಯದಲ್ಲಿಯ ಕೆಲವು ಪದ್ಯಗಳ ಭಾವಾನುವಾದ)

ಶ್ರೀ. ಪಂಢರೀನಾಥಾಚಾರ್ಯ ಗಲಗಲಿ, ಗದಗ

ಜಗದ ಭಾಗ್ಯ ಜನಕೆಲ್ಲ ಭೋಗ್ಯ ಸೌಭಾಗ್ಯಪೂರ್ಣಸಿರಿಯು—
ಲೀಲೆಯಿಂದ ಜಗ ಜನಿಪ ಶಿವನ ಐಸಿರಿಯು ದಿವ್ಯತೊರೆಯು!
ವೇದಸಾರ ಸರ್ವಸ್ವ ದೇವಕುಲ ಪುಣ್ಯಮೂರ್ತಿಮಂತೆ—
ಅಮೃತಕಾಂತಿ ಸವಿಸಲಿಲ ಸವೆಸಲೆಮ್ಮೆಲ್ಲ ಭವದುರಂತ ೧

ಅಮ್ಮ, ಒಮ್ಮೆ ತಮ್ಮಡಿಯ ಕಂಡ ಪಾಖಂಡ ಪಾಪಿ ಬಡವ—
ದುರಿತ ಕಳೆದು ದಾರಿದ್ರ್ಯತೊಳೆದು ದುರದೃಷ್ಟವಳಿದು ಬಿಡುವ
ಒಡನೆ ಬಿಡದೆ ಅಜ್ಞಾನತರುವ ಕಡಿದೊಗೆದು ತಿಳಿವು
ಕೊಡುವ—
ಹರಿವ ನಿಮ್ಮ ಸಲಿಲಪ್ರವಾಹ ಕರುಣಿಸಲಿ ನಮಗೆ ಶುಭವ! ೨

ಹರ್ಷಗೊಂಡ ಪಾರ್ವತಿಯು ಬೆಳಗು ಮಾರ್ತಂಡ ರಾಗ ಚಂಡ
ಕಂಡ ಕುಂಡ ಕೆಂಗಣ್ಣು ತಾಗೆ ಖಳಖಳಿಪ ದಿವ್ಯ ಹೊಂಡ
ಹರನ ಶಿರದಿ ಮೊರೆ ಮೊರೆದು ಮೆರೆದು ನೊರೆ ನೆರೆದು ನೆರೆಯು
ನೊರೆವ-
ತಾರೆಯೂರ ತೊರೆ ತೆರೆ-ತೆರೆಗಳಳಿಸಲೆಮ್ಮೆಲ್ಲ ದುರಿತ ಭರವ ೩

ಅಂಬೆ! ನಿನ್ನ ಆಲಂಬ ನಂಬಿ ನಾನುಬ್ಬಿ ಕೊಬ್ಬಿ ಸೊಕ್ಕಿ—
ಲೆಕ್ಕವಿರದೆ ಸುರಗಣವ ಹಳಿದೆ ಲೆಕ್ಕಿಸದೆ ಗರುವವುಕ್ಕಿ ||
ಇಂದು ತಾಯೆ ನೀನೆನ್ನ ತೊರೆಯೆ, ಸುರತೊರೆಯೆ ಮಗುವ
ಮರೆಯೆ—
ದೀನ ನಾನು ಗತಿಹೀನನಕಟ ಆರಿದುರು ಅಳಲಿ? ಪೊರೆಯೆ! ೪

ಕೆಳಗೆ ಬಿದ್ದ ಭವಬದ್ಧ ಜನರನುದ್ಧರಿಸಲೆಂದು ನೀನು
ಇಳೆಗೆ ಇಳಿಯೆ ಶಿವಜುಟ್ಟು ಹುಟ್ಟನಲಿ ಕಟ್ಟಿದವರ ಜೇನು—
ಆಶೆ ತೊರೆದ ಮುನಿಮನದಿ ನಿನ್ನ ಹಿಡಿದಿಡುವ ಆಶೆಯುಂಟು-
ಮಾಳ್ಪ ನಿನ್ನ ಗುಣ ದೋಷವಾಯ್ತು ಶಿವತಲೆಗೆ ಬ್ರಹ್ಮಗಂಟು! ೫

ಯಾವ ತೀರ ತರು ತಿಳ್ಳಿಯಾಡಿ ತೆರೆ ತೊಟ್ಟಿಲಾಗಿ ತೂಗಿ
ಕಾಗೆ ಇಂದ್ರಪುರಿ ಸೌಖ್ಯಕಾಗಿ ಬೈರಾಗಿ ತೀರ್ಥಯೋಗಿ—
ಇಂಥ ದಡದಿ ನಿಂತಂಥ ಸಂತ ಜನು. ನುಮ ದುಃಖಜಾಲ
ಕಡಿದು ಬಿಡುವ ತಮ್ಮಡಿಯು ತಡಿಯು ಕುಡವರಿಸಲಾರ್ತಿ.
ಮೂಲ ೬

ಜನುಮ ಭೂಮಿ ಕಮಲೇಶನಮಲ ತಮ ಕಮಲ-
ಕೋಮಲಡಿಯು
ವಾಸ ಮದನಮದ ಮುಕ್ಕುಗಣ್ಣ ಮುಕ್ಕಣ್ಣ ಮೃಡನ ಮುಡಿಯು;
ದಲಿತ ಗಲಿತ ವಿಸ್ಖಲಿತ ಪತಿತರುದ್ಧರಿಪ ವ್ಯಸನ ಬೇರೆ—
ಎಂದ ಬಳಿಕ ಉತ್ಕರ್ಷ ನಿನ್ನದೇಕಾಗಬೇಡ ನೀರೆ! ೭

ಮನೆಯು ಮರೆದು ಸಾಮ್ರಾಜ್ಯ ತೊರೆದು ತೃಣವೆಂದು ಹಣವ
ಜರೆದು
ಜೇಕು ಜಾಲ ಜೋತಾಲಿ ಜೇಕು ಜಲತೊಳೆದ ನೀರನೊರೆದು,
ಅಮೃತಕಿಂತ ಸವಿ ಅಂಬು ಅಂಬೆ! ತವ ಬೊಗಸೆ ತುಂಬ
ಕುಡಿಯೆ!
ಜನರಿಗಾಗುವಾನಂದದೆದುರು ನಿಜಮೋಕ್ಷ ಸುಖವು ಕಡೆಯೆ! ೮

ಮಡದಿಯೊಡನೆ ಮೈಗೂಡಿ ಜೋಡಿ ಒಡನಾಡು ಮೃಡನ
ಜಡೆಯ—
ಗಡಿಯು ಮೀರಿ ಮೇಲೇರಿ ಗೌರಿ—ಬೈತಲಕೆ ಲಹರಿ ನಡೆಯೆ
ಸವತಿ ಮುಚ್ಚುಡುಕ್ಕಲಿಸೆ ಕಣ್ಣು ಕೆಕ್ಕರಿಸಿ ಚುಂಡಿ ಹೊಡೆಯೆ—
ಜಟದ ತಟಕೆ ಪುಟ-ಪುಟಿಪ ನೀರನಟ ಕಳೆಯೆ ಪಾಪ
ಪಡೆಯೆ! ೯

ಪಣದಿ ಫಣಿಯು—ಹಣೆಚಂದ್ರ ಗಣವ—ಗಣಪತಿಯು
ಮಣಿಯು ಮಾಲೆ,
ಎತ್ತು ಕೃತ್ತಿ ಯಾವತ್ತು ಭೋಳೆ ಶಿವ ತೆತ್ತು ತಾನೆ ಸೋಲೆ—
ಶೈಲಬಾಲೆ ನಗೆಕೇಲಿಶೀಲೆ ಶಿವಮೌಲಿ ಮೇಲೆ ನೋಡೆ –
ಬೆಚ್ಚಿ ಬೆದರಿ ಹುಚ್ಚೆದ್ದು ಹರಿವ ನದಿ ಕುಣಿತ ಕುದಿತಪಾಡೆ ೧೦

" ಯಾವ ಘೋರ ಪಾತಕಿಯ ನಾನು ಉದ್ಧರಿಸೆ ದಂಗು ಬಡಿದು
ಜಗವೆ ಬೆಚ್ಚಿ ಅಚ್ಚರಿಗೆ ಬೆರಳು ಕಚ್ಚೀತ—ಹುಚ್ಚು ಹಿಡಿದು
ಇಂಥ ಪಾಪಿ ಅದ್ಯಾಪಿ ನನಗೆ ಸಿಗ" ನೆಂಬ ನಿನ್ನ ಚಿಂತೆ
ಕಳೆಯಲೆಂದೆ ನಾ ಬಂದೆ ಪೊರೆದು ತಣಿಸಾಕೆ ಏಕೆ ನಿಂತೆ? ೧೧

ತಾಯೆ ನಿನ್ನ ಹಾಲ್ಕುಡಿದು ನಡೆದು ಒಡನಾಡಿ ಕೂಡಿ ಆಡಿ
ಕುಣಿದು ಮಣಿದು ಮೈದಣಿದು ಬಂದೆ ನಿನ ಕಂದ ನಾನು
ಖೋಡಿ—
ನೀನು ತೆರೆಯ ತೊಡೆಮೇಲೆ ಮಲಗಿಸಕ್ಕರದಿ ಚುಕ್ಕುತಟ್ಟಿ
ಹೇಳಿ ಗಾಳಿಜೋಗುಳವ 'ಲಾಲಿ ಮಲಗನ್ನ ಚಿನ್ನಗಟ್ಟಿ!' ೧೨

ಕಾವ್ಯದಲ್ಲಿ ಪ್ರತಿಮಾ ಸಂವಿಧಾನ

ಶ್ರೀ. ಜಿ. ವ್ಹಿ. ಕುಲಕರ್ಣಿ, ಬಿ. ಎ. (ಆನರ್ಸ), ಧಾರವಾಡ
ಶ್ರೀ. ಅನಿಲಕುಮಾರ ವ್ಹಿ. ಗೋಕಾಕ, ಧಾರವಾಡ

ಲೇಖಾಂಕ ೨

ಪ್ರತಿಮೆಗಳ ಮಾದರಿ

ಇಲ್ಲಿಯವರೆಗೆ ನಾವು, ಪ್ರತಿಮೆಯೆಂದರೆ ಒಂದು ಸ್ವತಂತ್ರವಾದ ಘಟಕವೆಂದು ಚರ್ಚಿಸಿದೆವು; ಆದರೆ ಅದು ಕಾವ್ಯದ ಜೀವಂತ ಬೆಳವಣಿಗೆಗೆ ಪೋಷಕವಾಗುವ ಒಂದು ಅಂಗವಾಗಿದೆ. ಕಾವ್ಯ-ಪ್ರತಿಮೆಗಳು ಸ್ವತಂತ್ರವಾದ ಮತ್ತು ಪರಿಪೂರ್ಣವಾದ ಘಟಕಗಳಲ್ಲ. ಇಡಿ ಕವಿತೆಯೇ ಕೆಲವು ಸಂದರ್ಭಗಳಲ್ಲಿ ಒಂದು ಮಿಶ್ರವಾದ ಪ್ರತಿಮೆ ಆಗಿರಬಹುದು. ಒಂದು ಕವಿತೆಯು ಅರ್ಥರಹಿತ ಸ್ಫುರಣೆಗಳ ಪರಂಪರೆಯಾಗಿರದೆ, ಕಲೆಯು ಒಂದು ಸಂಪೂರ್ಣವಾದ ಕೃತಿಯಾಗ-ಬೇಕಾದರೆ, ಅಲ್ಲಿ ಕಂಡುಬರುವ ಪ್ರತಿಮೆಗಳಲ್ಲಿ ಒಂದು ಮಾದರಿ-ಯಿರಬೇಕು. ಈ ಮಾದರಿಯ ಸ್ವರೂಪವನ್ನೂ ನಾವು ಅರಿಯುವುದು ಅವಶ್ಯವಾಗಿರುತ್ತದೆ. ಕಾವ್ಯಪ್ರತಿಮೆಯ ಮಾದರಿಯನ್ನು ಎರಡು ಪರಸ್ಪರ ವಿರೋಧಿಯಾದ ಸಂಗತಿಗಳಿಂದ ಸಮೀಪಿಸಬೇಕು: ೧) ಕಾವ್ಯ ನಿರ್ಮಾಣಕಾರ್ಯದಿಂದ ೨) ಪೂರ್ಣವಾದ ಕವಿತೆಯಿಂದ.

ಯಾವ ಚಿಚ್ಛಕ್ತಿಯು ಕಾವ್ಯಪ್ರತಿಮೆಗಳನ್ನು ನಿರ್ಮಿಸುತ್ತದೆಯೊ, ಮತ್ತು ನಿಯೋಜಿಸುತ್ತದೆಯೋ, ಅದು ಕಲ್ಪಕತೆಯೆನಿಸಿಕೊಳ್ಳುತ್ತದೆ. ಕಲ್ಪಕತೆಯು ಮಾನಸಿಕ ಕಾರ್ಯಪ್ರವೃತ್ತಿಯಾಗಿದೆ. ಇದರ ಪರಿಪೂರ್ಣವಾದ ವ್ಯಾಖ್ಯೆಯನ್ನು ಕೊಡುವುದು ಸುಲಭ-ಸಾಧ್ಯವಲ್ಲ. ನೂರಾರು ಜನ ತಮಗೆ ತೋರಿದಂತೆ ಇದರ ವ್ಯಾಖ್ಯೆ ಕೊಡಲು ಪ್ರಯತ್ನಿಸಿದ್ದಾರೆ.

ಶೆಲ್ಲಿ ಕವಿಗೆ ಕಲ್ಪಕತೆಯೇ ದೇವತೆಯಾಗಿತ್ತು, ಮತ್ತು ತಾನೇ ಅದರ ದೂತನಾಗಿದ್ದ. "Imagination is the immortal God which should assume flesh for the redemption of moral passion"—ಮಾನಸಿಕ ಕಾರ್ಯಪ್ರವೃತ್ತಿಯಾದ ಕಲ್ಪಕತೆಯಿಂದಲೇ ಮಾನವೀ ಸಹಾನುಭೂತಿಯು ಹರಿಯುತ್ತದೆ; ಆದುದರಿಂದಲೇ ಶೆಲ್ಲಿಯು ಕಲ್ಪಕತೆಗೆ 'ನೈತಿಕ ಕಲ್ಯಾಣದ ಸಾಧನ' ಎಂದು ಕರೆದಿದ್ದಾನೆ.

ವಿವೇಕ (Reason) ವೆಂದರೆ ಮೊದಲೇ ಗೊತ್ತಿದ್ದ ಪರಿಮಾಣಗಳ ಎಣಿಕೆ. ಕಲ್ಪಕತೆಯು ಈ ಪರಿಮಾಣಗಳ ಯೋಗ್ಯತೆಯನ್ನು ಬೇರೆಬೇರೆಯಾಗಿ ಹಾಗೂ ಒಟ್ಟಿನಲ್ಲಿ ಗ್ರಹಿಸುತ್ತದೆ "ಜಗತ್ತಿನಲ್ಲಿ ಹುಟ್ಟಿ ಬರುವುದಕ್ಕಿಂತ ಪೂರ್ವದಲ್ಲಿ, ಮನುಷ್ಯ ಯಾವುದೋ ಒಂದು ಪವಿತ್ರವಾದ ಸ್ಥಾನದಲ್ಲಿದ್ದ. ಜೀವನದಲ್ಲಿಯ ನೋವು, ದುಃಖ, ಸಂಕಟಗಳನ್ನು ಅನುಭವಿಸಿ ಅವನು ವ್ಯಥಿತನಾಗಿದ್ದಾನೆ. ಅವನಿಗೆ ತನ್ನ ತವರಾದ ನಂದನಕ್ಕೆ ಹಿಂತಿರುಗಿ ಹೋಗುವ ಹಂಬಲವಿದೆ. ಅದೇ ಕಲ್ಪಕತೆ"—ಎಂದು ಕೊನಲಿ ಎಂಬ ಆಧುನಿಕ ವಿಮರ್ಶಕನು ನುಡಿದಿದ್ದಾನೆ. ಇವರಿಬ್ಬರೂ ಕಲ್ಪಕತೆಯನ್ನು ಬೇರೆ ಬೇರೆ ದೃಷ್ಟಿಕೋನಗಳಿಂದ ನೋಡಿದ್ದಾರೆ. ಕಲ್ಪಕತೆಯ ಪರಿಪೂರ್ಣ ವ್ಯಾಖ್ಯೆಯನ್ನು ಯಾರೂ ಕೊಟ್ಟಿಲ್ಲ. ಹೀಗೆ ಕಲ್ಪಕತೆಯ ಬಗ್ಗೆ ಅನೇಕ ಮತಭೇದಗಳಿವೆ. ಅದನ್ನಿಲ್ಲಿ ಚರ್ಚಿಸುವುದು ಅನಾ-ವಶ್ಯಕ.

ಕಾವ್ಯದಲ್ಲಿಯ ಕಲ್ಪಕತೆಯ ಬಗ್ಗೆ ವಿಚಾರ ಮಾಡುವಾಗ, ಒಂದು ಸರ್ವಸಾಮಾನ್ಯವಾದ ಸಹಾನುಭೂತಿಯನ್ನು ನಾವು ಅಲ್ಲಿ ಕಾಣುತ್ತೇವೆ. ಪ್ರತಿಯೊಬ್ಬ ಮನುಷ್ಯನಲ್ಲಿಯೂ ಇರುವ ಈ ಸಹಾನುಭೂತಿಯು, ಕವಿಯಲ್ಲಿ ವೈಶಿಷ್ಟ್ಯಪೂರ್ಣವಾಗಿ–ತೀವ್ರವಾಗಿ–ಕೃತಿಯಾದ ರೂಪದಲ್ಲಿದ್ದುದನ್ನು ಕಾಣುತ್ತೇವೆ. ಕಲ್ಪಕತೆಯ ಬಗ್ಗೆ ಮಾತನಾಡುವಾಗ, ಈ ಸಹಾನುಭೂತಿಯೊಳಗಿಂದ ಸಾಮಾನ್ಯವಾಗಿ ನಿಲುಕದ, ಮತ್ತು ನಮ್ಮ ಅನುಭವದ ಕ್ಷೇತ್ರವನ್ನು ಮೀರಿದ ಸಂಗತಿಗಳನ್ನು ಸಂತತವಾಗಿ ಮುಟ್ಟುವುದರ ಬಗ್ಗೆ ವಿಚಾರಿಸುತ್ತೇವೆ. ಇದನ್ನು ಅರಿಯದಿದ್ದರೆ ನಮ್ಮ ಅನುಭವವು ಸ್ಫುಟವಾಗುವುದಿಲ್ಲ; ಪೂರ್ಣವಾಗುವುದಿಲ್ಲ. ಕಾವ್ಯಮಯ ಸಹಾನುಭೂತಿಯ ಜಾತಿ-ಸ್ವಭಾವವನ್ನು ನಾವು ಕಾವ್ಯಮಯ ಪ್ರತಿಮೆಯಲ್ಲಿ ಕಾಣುತ್ತೇವೆ. ಈ ಸಹಾನುಭೂತಿಯು ಪ್ರತಿಮೆಗಳಲ್ಲಿ ಮೂರ್ತಗೊಂಡದ್ದು, ನಾವು ಕೆಲವು ಉದಾಹರಣೆಗಳನ್ನು ನೋಡಿದಾಗ ಸ್ಪಷ್ಟವಾಗುವುದು.

"ನಮ್ಮೂರಿನಕ್ಕರೆಯ ಸಕ್ಕರೆಯ ಬೊಂಬೆಯನು
ನೋಡಬೇಕೇ ಇಂಥ ಕಪ್ಪುಗಂಡು—
ಶ್ಯಾನುಭೋಗರ ಮನೆಯ ತೋರಣವೆ ಹೇಳುವುದು
ಬಂದ ದಾರಿಗೆ ಸುಂಕವಿಲ್ಲವೆಂದು!"

[ಕೆ. ಎಸ್. ನರಸಿಂಹಸ್ವಾಮಿ]

ಇಲ್ಲಿ ಕವಿಗೆ ತಮ್ಮ ಊರಿನ ಶ್ಯಾನುಭೋಗರ ಮಗಳ ಬಗ್ಗೆ ಇದ್ದ ಸಹಾನುಭೂತಿ, ಅಭಿಮಾನದ ಜೊತೆಗೆ ಕಂಡುಬರುತ್ತದೆ.

"ಕಾವಿ ಬೆಕ್ಕಿನ್ಹಾಂಗ ಭಾಂವಿಯ ಹಾದೀ ಕಾಲಾಗ ಸುಳಿತಿತ್ತ
ಎರಗಿ ಹಿಂದಕ್ಕುಳಿತಿತ್ತ" [ಬೇಂದ್ರೆ]

ಬಾವಿಯು ಹಾದಿ ತೂಡ ಕಾಮಿಬೆಕ್ಕಿನಂತೆ 'ಬೊಗಸೆಗಣ್ಣಿನ ಬಯಕೆಯ ಹೆಣ್ಣಿನ' ಕಾಲಲ್ಲಿ ಸುಳಿಯುತ್ತಿತ್ತು ಎಂದಾಗ, ಅಚೇತನ ವಸ್ತುಗಳ ಬಗ್ಗೆಯೂ ಇರುವ ಸಹಾನುಭೂತಿ ಕಂಡುಬರುತ್ತಿದೆ.

"ಅರದಾರತಿ ಹಿಡಿದು ಹಾರುತಿರುವವಳಾರೆ ?
ಹೊನ್ನಿ ಏ ಹೊನ್ನಿ ನೀನಾರೆ ಬಾರೆ!
ಯಾರಿಗಾರತಿ ಒಯ್ವಿ ಹೇಳೆ ನಾನೂ ಬರುವೆ,
ನನ್ನರಸನಿದ್ದಾನು ಅಲ್ಲಿಯಾರೆ!

[ಮಧುರಚೆನ್ನ]

ಇಲ್ಲಿ ಕಂಡುಬರುವ ಪ್ರತಿಮೆಯಲ್ಲಿ, ಅರದಾರತಿಯನ್ನು ಹಿಡಿದು ದೇವನನ್ನು ಬೆಳಗುತ್ತಿರುವ ಹೊನ್ನೆಯ ಹುಳುವಿನ ಬಗ್ಗೆ ಕವಿಗಿದ್ದ ಸಹಾನುಭೂತಿಯಿದೆ.

ಕಲಾಕಾರನಾಗಿರದ ಸರ್ವಸಾಮಾನ್ಯ ಮನುಷ್ಯನಲ್ಲಿ ಕೂಡ ಸಹಾನುಭೂತಿಯಿರುತ್ತದೆ; ಆದರೆ ಅವನು ಬೇರೆ ಬೇರೆ ವಸ್ತುಗಳನ್ನು ಸಂಬಂಧದ ಬೆಳಕಿನಲ್ಲಿ ಕಾಣುವುದಿಲ್ಲ. ತನಗೆ ಪರಿಚಿತನಾದ ವ್ಯಕ್ತಿಯ ಬಗೆಗೇ ಸಹಾನುಭೂತಿ ಉಂಟಾಗುವಂತೆ ಅವನ ಮನಸ್ಸಿನ ಸ್ಥಿತಿಯಿರುತ್ತದೆ. ಆದರೆ ಕವಿಯ ಪ್ರಜ್ಞೆಯು ಅತ್ಯುಚ್ಚವಾಗಿದ್ದು ಅಪರಿಚಿತವಾದ ವಸ್ತುಗಳ ಬಗೆಗೂ ಪರಿಚಯವಿದ್ದಷ್ಟೇ ಪ್ರೇಮ—ಸಹಾನುಭೂತಿಯಿರುತ್ತದೆ. ಭಾವನೆಯು ಮೂಡಿದಂತೆ ಅದನ್ನು ಅಭಿವ್ಯಕ್ತಗೊಳಿಸುವುದು ಕಲ್ಪಕತೆಯ ಒಂದು ಮುಖವಾಗಿರುತ್ತದೆ

ಒಂದು ಸ್ಮೃತಿಚಿತ್ರದಿಂದ (impression) ಕವಿಯು ತನ್ನ ಕಾವ್ಯನಿರ್ಮಿತಿಯನ್ನು ಪ್ರಾರಂಭಿಸುತ್ತಾನೆ. ಇದು ಅವನ ಅನುಭವದ ನದಿಯಲ್ಲಿದ್ದ ಒಂದು ಹನಿಯು; ಹನಿಯಿಂದಾದ ಸ್ಫಟಿಕವೇ ಪ್ರತಿಮೆ. ಈ ರೀತಿಯಾದ ಕಾವ್ಯರಚನೆಯೇ ಆಧುನಿಕ ಕವಿಗಳಲ್ಲಿ ಕಂಡುಬರುತ್ತದೆ. ಕವಿಯು ಹಿಂದಿನ ಕಾಲದಲ್ಲಿ ಗೂಢವಾದ ವಿಚಾರವನ್ನು ಮನದಲ್ಲಿಟ್ಟುಕೊಂಡು, ಅದನ್ನು ಪದ್ಯದಲ್ಲಿಳಿಸಲು ಪ್ರಯತ್ನಿಸುತ್ತಿದ್ದ. ಆದರೆ ಆಧುನಿಕ ಕಾಲದಲ್ಲಿ ಇದು ಬದಲಾಗಿರುತ್ತದೆ. ಗೋಯ್‌ಥೆ ಎಂಬ ಜರ್ಮನ್ ಕವಿಯು ಹಿಂದಿನ ಪದ್ಧತಿಗಿಂತ ಆಧುನಿಕ ಪದ್ಧತಿಯು ಬದಲಾದ ಬಗ್ಗೆ ಹೀಗೆ ಬರೆಯುತ್ತಾನೆ: "ಗೂಢವಾದ ವಿಚಾರವನ್ನು ಕಾವ್ಯದಲ್ಲಿ ಬರೆಯುವುದು ನನ್ನ ಮಾರ್ಗವಾಗಿಲ್ಲ. ನಾನು ನನ್ನೊಳಗೇ ನೂರಾರು ಸ್ಮೃತಿಚಿತ್ರಗಳನ್ನು ಪಡೆಯುತ್ತೇನೆ. ಅವು ಇಂದ್ರಿಯಜನ್ಯವಾಗಿ, ಜೀವಂತವಾಗಿ, ರಮಣೀಯವಾಗಿ ಮತ್ತು ವೈವಿಧ್ಯಪೂರ್ಣವಾಗಿರುತ್ತವೆ ಕಲ್ಪಕತೆಯ ಒಂದು ಜಾಗರೂಕಶಕ್ತಿಯು ಅವುಗಳನ್ನು ತರುತ್ತದೆ.—" ಇದು ಇಂದಿನ ಕಾವ್ಯರಚನೆಯ ಮೊದಲನೆಯ ಮಟ್ಟವಾಗಿರುತ್ತದೆ.

ಕಲ್ಪಕತೆಯ ಶಕ್ತಿಗೆ ಶರಣುಹೋಗಿ ಅದನ್ನು ಪೂಜಿಸುತ ಕವಿಯು ಸಮಾಧಿಸ್ಥನಾಗಿ ಕುಳಿತಾಗ, ಅವನೆದುರಿಗೆ ಪ್ರತಿಮೆಗಳು ಸಾಲುಸಾಲಾಗಿ ಬರತೊಡಗುತ್ತವೆ. ಇದೇ ಎರಡನೆಯ ಮಟ್ಟವೆಂದು ಡಬ್ಲ್ಯು. ಬಿ. ಏಟ್ಸರು ಹೇಳುತ್ತಾರೆ. ಸುಪ್ತಚೇತನದಿಂದ ನಮಗೆ ಮೊದಲೇ ಗೊತ್ತಿದ್ದ ವಿಷಯವನ್ನು ಹಿಡಿದೆತ್ತಲು ನಾವು ಸಂಕಲ್ಪಶಕ್ತಿ ಹಾಗೂ ಬುದ್ಧಿ ಇವುಗಳನ್ನು—ಈ ಅನುಭವವನ್ನು ಪಡೆಯುವಾಗ—ಬದಿಗಿರಿಸಬೇಕು. ಈ ಮಟ್ಟದಲ್ಲಿ ಕವಿಯ ಲಕ್ಷ್ಯವು ಪ್ರತಿಮೆಗಳೆಡೆ ಕೇಂದ್ರೀಕೃತವಾಗಿರುತ್ತದೆ. ಸಂಕಲ್ಪಶಕ್ತಿ ಮತ್ತು ಬುದ್ಧಿ ಬಾಹಿರವಾದ ಈ ಕೇಂದ್ರೀಕೃತ ಲಕ್ಷ್ಯವು ಪ್ರತಿಮೆಗಳ ರೂಪದಲ್ಲಿ ಒಂದು ಕವನದ ಜನ್ಮವನ್ನು ನಿರೀಕ್ಷಿಸುತ್ತದೆ. ಅದು ಸಂಕಲ್ಪಶಕ್ತಿ ಹಾಗೂ ಬುದ್ಧಿ ರಹಿತವಾಗಿದ್ದರೂ ತೀಕ್ಷ್ಣವಾಗಿರುತ್ತದೆ. ತನ್ನ ಅಚಲತೆಯಿಂದಲೇ ಕಾವ್ಯವನ್ನು ಬೆಳಕಿಗೆ ತರುವ ಸ್ವಾಭಾವಿಕವಾದ ಪ್ರವೃತ್ತಿಗೆ ಚಾಲನೆಯನ್ನು ಕೊಡುತ್ತದೆ. ಇದಕ್ಕೆ ನಾವು ಬುದ್ಧಿಯನ್ನು ಬದಿಗಿರಿಸಿದ ಮಟ್ಟವೆನ್ನಬಹುದು. ಮೂರನೆಯ ಮಟ್ಟವು ಎಲ್ಲಕ್ಕೂ ಮಹತ್ತ್ವಪೂರ್ಣವಾದದ್ದು; ಇಲ್ಲಿ ಕವಿಯ ತಲ್ಲೀನತೆ ಹೆಚ್ಚು ಚುರುಕಾಗಿರುತ್ತದೆ. ಮತ್ತು ವಿಮರ್ಶೆಯ ಕಾರ್ಯವು ಆರಂಭವಾಗುತ್ತದೆ. ಬರಲಿರುವ ಕವನದ ವಿವಿಧ ಪ್ರತಿಮೆಗಳ ಮಾದರಿಯನ್ನು ಅನುಸರಿಸಿ ಕವಿಯು ಎರಡನೆಯ ಮಟ್ಟದಲ್ಲಿ ಕಂಡ ನೂರಾರು ಪ್ರತಿಮೆಗಳ ಸಾಲಿನಿಂದ ಕೆಲವನ್ನು ಆರಿಸುತ್ತಾನೆ, ಕೆಲವನ್ನು ಬಿಡುತ್ತಾನೆ. ಇದರ ಮೂಲಕ ಆ ಕವಿತೆಗಳಲ್ಲಿಯ ಪ್ರತಿಮೆಗಳಲ್ಲಿ ಒಂದು ಮಾದರಿಯು ಹುಟ್ಟುತ್ತದೆ, ಮತ್ತು ಅವುಗಳ ಸಂಯೋಜನೆಯಿಂದ ಒಂದು ಸ್ವರೂಪ ಬರುತ್ತದೆ.

ಪ್ರತಿಮೆಯ ಜನ್ಮದ ಬಗ್ಗೆ ಹೆಚ್ಚು ಆಳವಾಗಿ ವಿಚಾರಿಸೋಣ: ನಮ್ಮ ಕಣ್ಣೆದುರಿಗೆ ಒಬ್ಬ ಮೀನಗಾರನನ್ನು ಕಲ್ಪಿಸುವ. ಅವನು ಒಂದು ದ್ವೀಪದ ದಂಡೆಯ ಮೇಲೆ ಕುಳಿತಿದ್ದಾನೆ; ತನ್ನ ಕೈಯ್ಯಲ್ಲಿದ್ದ ಗಾಳವನ್ನು ನೀರಿನಲ್ಲೆಸೆದು ತನ್ನದೇ ಆದ ಸಮಾಧಿಯಲ್ಲಿದ್ದಾನೆ. ಆ ನೀರಿನಲ್ಲಿಯೇ ಸಿಕ್ಕ ಒಂದು ಸಣ್ಣ ಕೀಟವನ್ನು ಗಾಳದ ತುದಿಗೆ ಸಿಲುಕಿಸಿದ್ದಾನೆ. ಆ ಕೀಟವನ್ನು ನೀರಿನಿಂದ ಹೊರತೆಗೆದು ಗಾಳಕ್ಕೆ ಅಂಟಿಸುವುದನ್ನೇ—ಕವಿತೆಯ ಆರಂಭದ ಪ್ರತಿಮೆ, ವಿಚಾರ, ಹಾಗೂ ಆಗಿನ ಕವಿಯ ಮನಃಸ್ಥಿತಿಗಳೊಡನೆ ಹೋಲಿಸಬಹುದು. ಮೀನಗಾರನು ತನ್ನ ಗಾಳವನ್ನು ನೀರಿನಲ್ಲಿ ಎಸೆದು ಕುಳಿತಾಗ, ಮೇಲಿಂದ ಮೇಲೆ ಅವನು ಪುಳಕಿತನಾಗುತ್ತಾನೆ. ಇದರಂತೆಯೇ ಕವಿಯು ತನಗೆ ಮೊದಲು ಹೊಳೆದ ಸಾಲುಗಳ ಬಗ್ಗೆ ಪುಳಕಿತನಾಗುತ್ತಾನೆ. ಗಾಳವನ್ನು ಕೆಲವು ಸಲ ಜಲಚರಗಳು ಹಿಡಿಯುತ್ತವೆ, ಅದನ್ನು ಮೀನುಗಾರನು ಸೂಕ್ಷ್ಮವಾಗಿ, ಲಕ್ಷ್ಯಪೂರ್ವಕವಾಗಿ ನಿರೀಕ್ಷಿಸುತ್ತಾನೆ. ಮುಂದೆ ಅದಕ್ಕೆ ಅಂಟಿದ ಜಲಚರಗಳಲ್ಲಿ ತನಗೆ ಬೇಡವಾದುದು ಬಂದರೆ ತಿರುಗಿ ನೀರಿನಲ್ಲಿಯೇ ಎಸೆದು ಮತ್ತೆ ಜಪಿಸುತ್ತ ಕುಳಿತುಕೊಳ್ಳುತ್ತಾನೆ. ಇದರಂತೆಯೇ ಕವಿಯು ತನಗೆ ಮೊದಲು ಹೊಳೆದ ಪ್ರತಿಮೆ, ಹಾಗೂ ಭಾವನೆಗಳ ಬಗ್ಗೆ ಜಪಿಸುತ್ತಿರುವಾಗ, ತನಗೆ ಬೇಕಾದುವುಗಳನ್ನು ಮಾತ್ರ ತೆಗೆದುಕೊಂಡು, ಬೇಡವಾದುದನ್ನು ಬಿಡುತ್ತಾನೆ. ಮೀನಗಾರ ತಾನು ಗಾಳಹಾಕಿದ ಪ್ರದೇಶದಲ್ಲಿ ಮೀನಗಳಿರದಿದ್ದರೆ ಅವನ್ನು ಪಡೆಯಲು ಸಾಧ್ಯವಿಲ್ಲ. ಅವನು ತನ್ನ ಗಾಳಕ್ಕೆ ಅಂಟಿಸಿದ ಕೀಟವನ್ನು ಹಿಡಿಯಲು ಮೀನಕ್ಕೆ ನಿರ್ಬಂಧಿಸಲು ಸಾಧ್ಯವಿಲ್ಲ. ಗಾಳದ ಕೊಕ್ಕಿಗೆ ತಾನು ಅಂಟಿಸಿದ ಕ್ರಿಮಿಯು

ತನಗೆ ಬೇಕಾದ ವಿಧಾನಗಳನ್ನು ತರಬಲ್ಲದು—ಎಂಬ ವಿಶ್ವಾಸದಿಂದ, ಶಾಂತರೀತಿಯಿಂದ ಕುಳಿತುಕೊಂಡಿರಬೇಕು. ಸುಪ್ತಚೇತನದಾಳದಿಂದ ಹೊರತರುವಂತಹದು ಏನಾದರೂ ಇದೆಯೆಂಬುದನ್ನು ತಾನು ಮಥಿಸುತ್ತಿರುವ ಶಬ್ದಗಳು ಹೇಳುವವರೆಗೆ ಕವಿಯು ಸಮಾಧಿಸ್ಥನಾಗಿರಬೇಕು. ಕವಿಯು ಪುಳಕಿತನಾದಾಗಲೇ ತಾನು ತನ್ನ ಗಾಳಕ್ಕೆ ಕೀಟವನ್ನು ಹಚ್ಚಿ, ಜಾಗರೂಕತೆಯ ದಂಡೆಯ ಮೇಲೆ ನಿಂತು ಸುಪ್ತಚೇತನದ ನೀರಿನಲ್ಲಿ ಏನನ್ನೋ ನಿರೀಕ್ಷಿಸುತ್ತಾನೆ—ಎಂದೆನ್ನಬಹುದು.

ಕವಿಯು ತನಗೆ ಹೊಳೆದ ಸಾಲನ್ನು ಸುಪ್ತಚೇತನದಲ್ಲಿ ಇಳಿಬಿಟ್ಟಾಗ, ಅದು ಹೆಚ್ಚು ಆಳವಾಗಿ ಇಳಿದರೆ, ನೆಗೆದು ಎದ್ದುದೇ ಪ್ರತಿಮೆಯಾಗಿರುತ್ತದೆ. ಯಾಕೆಂದರೆ ಪ್ರತಿಯೊಂದು ಅನುಭವವನ್ನು ಪ್ರತಿಮೆಯಾಗಿ ಮಾರ್ಪಡಿಸುವುದೇ ಈ ಸುಪ್ತಚೇತನಸಾಗರದ ಇಂದ್ರಜಾಲ, ಗುಣಧರ್ಮ. ಕಲ್ಪನೆಯನ್ನು ತನ್ನ ಮಾಧ್ಯಮವನ್ನಾಗಿ ಮಾಡಿ ಪ್ರತಿಯೊಂದು ಅನುಭವಕ್ಕೆ ಭಾವಪೂರ್ಣವಾದ ಮಹತ್ತ್ವವನ್ನು ಅದು ತರುತ್ತದೆ

ಒಂದು ಕವಿತೆಯ ವಿಷಯವು ಕವಿಯ ಎದುರಿಗೆ ಪ್ರತಿಮಾ ರೂಪದಲ್ಲಿ ಬರಬಹುದು ಈ ಪ್ರತಿಮೆಗೆ ಕವಿಯು ಪ್ರಶ್ನಿಸುತ್ತಾನೆ; ಅದರ ನಿಜವಾದ ಅರ್ಥವನ್ನು ಅರಿಯಲು ಯತ್ನಿಸುತ್ತಾನೆ. ಅದು ತನ್ನನ್ನು ಅಲ್ಲಿಯ ವರೆಗೆ ಒಯ್ಯಬಹುದು—ಎಂಬುದರ ಬಗೆಗೂ ಚಿಂತಿಸುತ್ತಾನೆ. ಆ ಪ್ರತಿಮೆ—ಅವನ ಕವಿತೆಯ ಆಕಾರವನ್ನು ರೂಪಿಸಬಹುದು. ಅವನು ಈ ಪ್ರತಿಮೆಯನ್ನು ಪ್ರಶ್ನಿಸುತ್ತಿರುವಾಗ ಬೇರೆ ಪ್ರತಿಮೆಗಳು ಇದರೊಡನೆ ಸೇರಿಕೊಳ್ಳುತ್ತವೆ. ಈ ಸಂದರ್ಭದಲ್ಲಿಯೇ ಕವಿಯು ಯುಕ್ತಿಯನ್ನು ಉಪಯೋಗಿಸುವ ಸಂದಿಗ್ಧಕಾಲ ಬರುವುದು. ಈಗ ಅವನು ಮನದೊಳಗೆ ಹರಿಯುತ್ತಿರುವಂತಹ ಪ್ರತಿಮೆಗಳನ್ನು ಸ್ವಾಗತಿಸಬೇಕು; ಯಾಕೆಂದರೆ ಈ ಪ್ರವಾಹವು ನಿಂತುದಾದರೆ, ಕವಿತೆಯು ವಸ್ತುವಿನ ಕೊರತೆಯನ್ನು ಅನುಭವಿಸುವ ಗಂಡಾಂತರವಿರುತ್ತದೆ. ಕವಿತೆಯು ರೂಪುಗೊಳ್ಳಲಿಕ್ಕೆ ಪ್ರಾರಂಭಿಸಿದೊಡನೆಯೇ ಅವನು ಸಾವಧಾನವಾಗಿ ಸ್ವೀಕರಿಸುವುದರಿಂದ ವಿಮರ್ಶಕದೃಷ್ಟಿಯು ಕಡೆಗೆ ತೆರಳಬೇಕಾಗುವುದು. ಅವನು ಹಾಗೆ ಮಾಡಿದಾಗ, ತನ್ನ ಕವಿತೆಯಲ್ಲಿಯ ಪ್ರತಿಮಾಮಾದರಿಯು ಹೆಚ್ಚು ಹೆಚ್ಚಾಗಿ ತಂತ್ರದ ಹಿಡಿತದಲ್ಲಿ ಬರುತ್ತದೆ.

ಕವಿಯು ಉದ್ರೇಕಗೊಳ್ಳದೆಯೆ ದೀರ್ಘಾಲೋಚನೆಯನ್ನು ಮಾಡಿ ತನ್ನ ಪ್ರಮುಖ ಪ್ರತಿಮೆ ಅಥವಾ ಉಳಿದ ಪ್ರತಿಮೆಗಳನ್ನು ಆರಿಸುತ್ತಾನೆ. ಯಾಕೆಂದರೆ ಅವನ ಪ್ರತಿಮಾ ಮಾದರಿಯಲ್ಲಿ ಅಲಂಕರಿಸಲು ತಾಣ. ಆರಿಸಿದ ಪ್ರತಿಮೆಗಳಿಗೆ ಒಂದಿಲ್ಲೊಂದು ಸ್ಥಾನ ದೊರೆಯುವುದೆಂಬುದೇ ಅವನ ಆಶೆಯಾಗಿರುತ್ತದೆ, ಅಲ್ಲದೆ ಉತ್ಸಾಹದಿಂದ ಮುಂದಿನ ಪ್ರಗತಿ ಪಡೆಯಲು ಸಹಾಯಕಾರಿಯಾಗಿರುತ್ತದೆ. ಕವಿಯು ತಾನು ಬರೆಯುತ್ತಿರುವ ಕವಿತೆಯ ಬಗೆ ಪೂರ್ಣಪ್ರಜ್ಞಾಹೀನವಾಗಿರುವುದಿಲ್ಲ. ಕವಿತೆಯು ಎಲ್ಲಿಗೆ ಕೊನೆಗೊಳ್ಳಬಹುದು, ಹಾಗೂ ಅದರ ಬೆಳವಣಿಗೆ ಇವುಗಳ ಬಗ್ಗೆ ಅವನಿಗೆ ಸ್ಪಷ್ಟವಾದ ಕಲ್ಪನೆಯಿರುವುದಿಲ್ಲ.

ಕವಿತೆಯನ್ನು ರಚಿಸುವಾಗ ಒಮ್ಮೆಲೇ ಒಂದು ಹೊಸ ಪ್ರತಿಮೆಯು ಬರಬಹುದು. ಅದು ಸ್ಫೂರ್ತಿಯಿಂದಲೋ ಪರಿಶ್ರಮದಿಂದಲೋ ರೂಪುಗೊಂಡಿರಬಹುದು; ಕವಿತೆಯ ಅರ್ಥವನ್ನು ಸಮರ್ಥಿಸಲು ಅಥವಾ ಪ್ರತಿಮಾಮಾದರಿಯನ್ನು ವಿಸ್ತೃತಗೊಳಿಸಲೂ ಬಂದಿರಬಹುದು. ಈ ಪ್ರತಿಮೆಯನ್ನು ಕವಿಯು ಧ್ಯಾನಿಸುತ್ತಿರುವಾಗ, ಅದು ಅವನಿಗೆ ಮಾಡಲು ಬಂದಿರುವ ಪ್ರತಿಮೆಗಳಿಗಿಂತಲೂ ಶ್ರೇಷ್ಠವೆಂದೆನಿಸಬಹುದು. ತಾನು ಇಚ್ಛಿಸಿದ ಪ್ರತಿಮೆಗಳಿಗಿಂತಲೂ ಸುಂದರವಾದ ಒಂದು ಪ್ರತಿಮೆ ಸಿಕ್ಕಿತೆಂಬ ಆನಂದವೂ ಅವನಿಗೆ ಆಗುತ್ತದೆ. ಕೊನೆಗೊಮ್ಮೆ ತಾನು ಬರೆಯಲಿರುವ ಕವಿತೆಯ ಅರ್ಥವೂ ಈ ಪ್ರತಿಮೆಯ ಸಹಾಯದಿಂದ ತಿಳಿಯುತ್ತದೆ. ಈ ಶೋಧನೆಯ ಬೆಳಕಿನಲ್ಲಿ ಇಡೀ ಕವಿತೆಯನ್ನೊಮ್ಮೆ ಪುನರೀಕ್ಷಿಸಿ ಪರಿಷ್ಕರಿಸಬೇಕು. ಇದರಿಂದ ಕವಿತೆಗೆ ಒಂದು ಹೊಸ ಕಂಪನವು ಸಿಕ್ಕಂತಾಗಿ, ಅದರ ಗುರಿಯು ಸ್ಪಷ್ಟವಾಗುತ್ತದೆ.

ಪ್ರತಿಮಾಮಾದರಿಯಲ್ಲಿ ಕಂಡುಬರುವ ಕಾರ್ಯಾಚರಣೆಯ ತತ್ತ್ವವಾವುದು? ಪ್ರತಿಮಾಮಾದರಿಯಲ್ಲಿಯ ಪ್ರತಿಮೆಗಳಲ್ಲಿ ಹೊಂದಿಕೆ ಕಂಡುಬರಬೇಕು. ಚಿತ್ರರೂಪಕಗಳನ್ನು ಕಂಡಾಗ ಅಲ್ಲಿ ಹೊಂದಿಕೆಯು ಇಲ್ಲದಂತೆ ಕಾಣುತ್ತದೆ. ಕೆಲವೆಡೆ ಈ ಹೊಂದಿಕೆಯು ಕಂಡುಬಂದು ಕೆಲವೆಡೆ ಏಕೆ ಕಂಡುಬರುವುದಿಲ್ಲ? ಈಗ ನಾವು ಒಂದೆರಡು ಉದಾಹರಣೆಗಳನ್ನು ನೋಡುವಾ. ಶ್ರೀ. ಕಣವಿಯವರು ಯುಗಾದಿಯನ್ನು ಕರೆಯುತ್ತಾರೆ:

" ಕರೆಯದಿದ್ದರು ನಾವು ನೀನು ಬಂದೇ ಬರುವಿ
ಅಲ್ಲವೇ ? ಬಾ ಮತ್ತೆ, ಬಾ ಯುಗಾದಿ
ಎಂಥ ಬಿಸಿಲೊಳು ಬಂದೆ!
ಬೇಕೆ ಬಾಯಾರಿಕೆಗೆ ಬೇವು ಬೆಲ್ಲ ?
ಚಹಕೆ ಸಕ್ಕರೆಯಿಲ್ಲ; ಪಡೆದೀತೆ ಬರಿಯ ಕಣ್ಣೀರ ಪಾನಕ ? "

ಈ ನಾಲ್ಕುಗಳಲ್ಲಿ– ಯುಗಾದಿಯನ್ನು ಒಬ್ಬ ವೃದ್ಧಪುರುಷನಿಗೆ ಹೋಲಿಸಿ ಕರೆಯುತ್ತಾರೆ. ಪಾನಕವೆಂದರೆ ಸಕ್ಕರೆ ಕೂಡಿಸಿದ ನೀರು ಎಂಬ ಗೂಢಾರ್ಥವಿದೆ. ಇಲ್ಲಿ ಕವಿಗಳು ಪೇಯವೆಂಬ ಅರ್ಥದಲ್ಲಿ ಬಳಸಿದ್ದಾರೆ. ರೂಢಾರ್ಥಕ್ಕೂ ಇಲ್ಲಿ ಕವಿಯು ಉಪಯೋಗಿಸಿದ ಅರ್ಥಕ್ಕೂ ಘರ್ಷಣೆಯಾಗಿ ಈ ಪ್ರತಿಮೆಯ ಅರ್ಥ ಸ್ಪಷ್ಟವಾಗುವುದಿಲ್ಲ. ಆದ್ದರಿಂದ ಇಲ್ಲಿದ್ದ ಎರಡು ಪ್ರತಿಮೆಗಳಲ್ಲಿ ಹೊಂದಿಕೆ ಕಂಡು ಬರುವುದಿಲ್ಲ.

ಕವಿ 'ರಸಿಕ ರಂಗ'ರು; 'ಓಂ ಅಶಾಂತಿ'ಯಲ್ಲಿ ಬರೆದ 'ಕಾಯಿ ತಾಯಿ', ಎಂಬ ಕವಿತೆಯನ್ನು ಓದಬೇಕು. ಅಲ್ಲಿ ಕವಿಗಳು ತೆರಳಿ ಮೊರೆವಂತಹ ಕಡಲಿನಲ್ಲಿ ಕಿರಿಯದಾದ ಒಂದು ನಾವೆಯನ್ನೇರಿ ಹೊರಟಿದ್ದಾರೆ. ಅಭಯದಾಯಿನಿಯೆನಿಸಿದ ತಾಯಿಗೆ ಕಾಯಲು ಬೇಡಿಕೊಳ್ಳುತ್ತಿದ್ದಾರೆ. ನುಂಗುವಂತೆ ತೆರೆಗಳು ಏರಿ ಬರುತ್ತಲಿವೆ. ಆ ವೇಳೆಗೆ ಬಂದ ಒಂದು ಚರಣವನ್ನು ನೋಡೋಣ:

' ಒಲಿದು ಹತ್ತಿಕೊಂಡ ಜೀವ
ಒಲಿವ ನಾವೆಯಲ್ಲಿ ಸಾವು
ಬಲೆಗೆ ಸಿಲುಕಿ ಹೇಗೊ ಮರಳಿ
ಬದುಕಿ ಬೆದರಿದೆರಳೆಯಾಗಿವೆ !—

ಈ ನಾವಿನಲ್ಲಿ ಹತ್ತಿಕೊಂಡ ಜೀವಗಳು ಬೆದರಿದ ಚಿಗರೆಗಳಂತೆ ಆಗಿವೆ ' ಎಂದು ಉಪಮೆ ಇರಬೇಕಾಗಿತ್ತು. ಹಿಂದಿನ ಸಾಲುಗಳನ್ನು ನೋಡಿದಾಗ ಉಪಮೆಯನ್ನು ಉಪಯೋಗಿಸುವುದೇ ಕವಿಯ ವಿಚಾರ ಆಗಿದ್ದಿತು ಎನಿಸುತ್ತದೆ, ಅದು ತಪ್ಪಿ ರೂಪಕವಾಗಿರುವುದರಿಂದ ಈ ಪ್ರತಿಮೆಯಲ್ಲಿ ಹೊಂದಿಕೆ ಇಲ್ಲದಂತೆ ಕಂಡು ದೋಷಯುಕ್ತವಾಗಿ ಕಾಣುತ್ತದೆ.

ಇದೇ ಕವಿಯ ಇನ್ನೊಂದು ಉದಾಹರಣೆಯನ್ನು ನೋಡೋಣ:

' ಬಿಸಿಲಿನ ಕುದುರೆಯನೇರಿ ಸಾರಿ
ಬರಲಿರುವ ತಂಪಿನ ವೈಹಾಳಿಯೇ '

(' ತಂಗಾಳಿ ' ರಸಿಕರಂಗ)

ಹಗಲಿನಲ್ಲಿ ರಣರಣ ಬಿಸಿಲು ಬಂದು, ಸಂಜೆ ತೆರೆದ ಮೇಲೆ ಅದರ ಹಿಂದೆಯೇ ತಂಪಾದ ಗಾಳಿಯೂ ಬರುತ್ತದೆ. ಇದನ್ನು ಕವಿಗಳು—ಬಿಸಿಲಿನ ಕುದುರೆ ಏರಿ ತಂಪಾದ ಗಾಳಿಯೆಂಬ ಸವಾರ ಬರುತ್ತಾನೆಂದು ಹೇಳಿದ್ದಾರೆ. ಕುದುರೆಯು ಸೊಕ್ಕಿನಿಂದ ಬರುವಂತೆಯೇ ಬಿಸಿಲೂ ಬರುತ್ತದೆ. ಸವಾರನಲ್ಲಿರುವ ಒಂದು ಪ್ರತಿಷ್ಠೆಯೇ ಜಗವನ್ನು ತಂಪಾಗಿರಿಸಲು ಬಂದ ಗಾಳಿಯಲ್ಲಿಯೂ ಇರುತ್ತದೆ. ಕುದುರೆ-ಬಿಸಿಲು, ಮತ್ತು ಸವಾರ–ಗಾಳಿಗಳ ತಿರುಳಿನಲ್ಲಿ ಸಾಮ್ಯವಿದೆ. ಆದರೆ ವಿವರಗಳಲ್ಲಿ ಹೊಂದಿಕೆ ಕಂಡುಬರುವುದಿಲ್ಲ.

ಕೆಲವು ಪ್ರತಿಮೆಗಳಲ್ಲಿ ಭಾವೌಚಿತ್ಯವು ಕಂಡುಬರುವುದಿಲ್ಲ. ಉದಾಹರಣೆಗಾಗಿ ನಾವು ಕೀರ್ತಿನಾಥರ ' ರಾಮಾವಸಾನ 'ವೆಂಬ ಗೀತರೂಪಕದೊಳಗಿನ ಒಂದು ಪ್ರತಿಮೆಯನ್ನು ನೋಡಬಹುದು. ಇಲ್ಲಿ ಸೀತೆಗೆ ಹಿಂದಿನ ನೆನಪು ಹೇಗಾಯಿತೆಂಬುದರ ವರ್ಣನೆಯಿದೆ!

" ನೆನಪು ಮರಳುತಿವೆ ಸಂಜೆಗೂಡಿನೆಡೆ
ಹಕ್ಕಿ ತೆರಳುವಂತೆ
ಹೂವು ಅರಳುವಂತೆ ! "

ಇಲ್ಲಿ ನೆನಪನ್ನು, ಸಂಜೆಗೂಡಿನೆಡೆ ತೆರಳುವ ಹಕ್ಕಿಗೆ ಹೋಲಿಸಿದ್ದು ಸುಂದರವಾಗಿದೆ; ಆದರೆ ಮುಂದಿನ ಸಾಲನ್ನು ನೋಡಿದಾಗ—' ಹೂವು ಅರಳುವಂತೆ ' ಹೇಗೆ ?—ಎಂಬ ಪ್ರಶ್ನೆಯುದ್ಭವಿಸುತ್ತದೆ. ಹೂವು ಅರಳುವ ಕ್ರಿಯೆಗೂ ನೆನಪು ಮರಳುವ ಕ್ರಿಯೆಗೂ ಯಾವ ರೀತಿಯ ಸಾಮ್ಯವಿಲ್ಲ.

ಪ್ರತಿಮಾಮಾದರಿಯಲ್ಲಿ ಒಂದು ನಿಜವಾದ ಮಾದರಿ ಕಂಡುಬರಬೇಕು. ಶಬ್ದಗಳ ಸಹಾಯದಿಂದ ಮೂಡಿಸಿದ ಚಿತ್ರಗಳನ್ನು ಒಟ್ಟುಗೂಡಿಸಿದರೆ, ಪ್ರತಿಮಾಮಾದರಿಯು ಹುಟ್ಟುವುದಿಲ್ಲ. ಕೆಳಗಿನ ಪ್ರತಿಮೆಯನ್ನು ನೋಡೋಣ:

" ಕಿರಿ ಬೆರಳಲಿ ಬೆಳ್ಳಿಹರಳು
ಕರಿ ಕುರುಳೊಳೊಳು ಚಿಕ್ಕೆ ಅರಳು
ತೆರಳಿದಳೆದೊ ತರಳೆ ಇರುಳು
ತನ್ನರಸನನರಸಲು "

[" ಗರಿ ", ಬೇಂದ್ರೆ].

ಇಲ್ಲಿ ಇರುಳೆಂಬ ತರಳೆಯು ತನ್ನ ಅರಸನನ್ನು ಹುಡುಕಲು ಹೊರಟಂತಹ ಪ್ರತಿಮೆಯಿದೆ. ಇಲ್ಲಿ ರ, ಳ, ಶಬ್ದಗಳ ಪುನರಾವೃತ್ತಿಯಿಂದ ಪದ್ಯದಲ್ಲಿ ನಾದಸೌಂದರ್ಯವು ಕಂಡುಬರುತ್ತದೆ. ಇಲ್ಲಿಯ ಪ್ರತಿಮೆಯು ಇಂದ್ರಿಯಜನ್ಯವಾಗಿದ್ದು ಹೆಚ್ಚು ಆಕರ್ಷಕವಾಗಿದೆ. ಈ ವರ್ಣನೆಯ ಸಂದರ್ಭವು ಕೂಡ ಔಚಿತ್ಯಪೂರ್ಣವಾಗಿದೆ. ಇಲ್ಲಿ ಬಂದ ಪ್ರತಿಯೊಂದು ವಿವರಣೆಯು ಸಂದರ್ಭವನ್ನು ಸಮರ್ಥಿಸುತ್ತದೆ. ಇಲ್ಲಿ ಎಲ್ಲಕ್ಕಿಂತ ಹೆಚ್ಚಾಗಿ ಪುನರುಚ್ಚರಣೆಯಿಂದ-ಪರಿಚಿತವಾದ ವಸ್ತುವೇ ಹೊಸ ರೂಪದಲ್ಲಿ ಕಂಡಂತಾಗುತ್ತದೆ.

ಪ್ರತಿಮೆಗಳಲ್ಲಿರುವ ಹೊಂದಿಕೆಯನ್ನು ವಿಚಾರಿಸುವಾಗ ನಾವು ಮೇಲೆಯೇ ಗೋಚರವಾಗುವ ಸಮಾನತೆಯ ಕಡೆಗೆ ಹೆಚ್ಚಿನ ಲಕ್ಷ್ಯವನ್ನೀಯಬಾರದು. ಕೆಲವು ಸಲ ಈ ಸಮಾನತೆ ಇದ್ದೇ ಇರುತ್ತದೆ; ಆದರೆ ಆಧುನಿಕ ಕಾವ್ಯದಲ್ಲಿ ನಾವು ಕವಿತೆಯ ಆಳದಲ್ಲಿ ಹುದುಗಿಕೊಂಡಿದ್ದ ಪ್ರತಿಮಾನಿರೂಪಣೆಯ ಹೆಣಿಕೆಯನ್ನು ನೋಡಿದ್ದರೆ, ಪ್ರತಿಮೆಯಲ್ಲಿಯ ಹೊಂದಿಕೆಯ ಅರಿವಾಗುತ್ತದೆ. ಸ್ಮೃತಿಚಿತ್ರದ ಏಕರೂಪತೆಯೇ ಕವಿಯ ಅಥವಾ ಯಾವುದೇ ಕಲಾಕಾರನ ಗುರಿಯಾಗಿರುತ್ತದೆ. ಯಾಕೆಂದರೆ ಇದಿಲ್ಲದೇ ಕಾವ್ಯದ ಸತ್ಯವನ್ನು ನಿರೂಪಿಸಲು ಸಾಧ್ಯವಾಗುವುದಿಲ್ಲ.

ಒಂದು ಅನುಭವವೇ ಒಂದು ಕವಿತೆಗೆ ಜನ್ಮವನ್ನು ಕೊಡುತ್ತದೆ. ಆ ಅನುಭವವನ್ನು ಕವಿಯು ತನ್ನ ಕವಿತೆಯಲ್ಲಿ ಯೋಗ್ಯವಾದ ಕ್ರಮಗಳಿಂದ ನಮಗೆ ನಿರೂಪಿಸುತ್ತಾನೆ. ಹೀಗಾದಾಗ ಕವಿತೆಯಲ್ಲಿದ್ದ ಸ್ಮೃತಿಚಿತ್ರಗಳಲ್ಲಿ ಏಕರೂಪತೆ ಬರುತ್ತದೆ. ಒಂದು ವಿಶಿಷ್ಟವಾದ ಅನುಭವದಿಂದ ಕವಿಗೆ ಕಾವ್ಯವಸ್ತು ಸಿಗುತ್ತದೆ; ಆದರೆ ಆ ಕಾವ್ಯವಸ್ತುವನ್ನು ನಿರೂಪಿಸಲು ತೆಗೆದುಕೊಂಡ ಪ್ರತಿಮೆಗಳು ಒಂದು ಹೆಚ್ಚು ವಿಶಾಲವಾದ ಕ್ಷೇತ್ರದಿಂದ ಬರುತ್ತವೆ—ಎಂದರೆ ಕವಿಯ ಜೀವನದ ಅನುಭವಕ್ಷೇತ್ರದಿಂದಲೇ ಬರುತ್ತವೆ. ಆದುದರಿಂದಲೇ ಪ್ರತಿಮೆಗಳು ಕವಿತೆಯನ್ನು ನಿರ್ಮಿಸಲು ಸಹಾಯ ಮಾಡುವುದಲ್ಲದೆ ಎಲ್ಲ ವಸ್ತುಗಳ ಕೆಳಗೆ ಇದ್ದ ಮತ್ತು ಎಲ್ಲ ವಸ್ತುಗಳಿಗೆ ಸಂಬಂಧಿಸಿದ ಕ್ರಮವನ್ನು ತೋರಿಸುತ್ತವೆ. ಸ್ಮೃತಿಚಿತ್ರಗಳ ಏಕರೂಪತೆಯ ಬಗ್ಗೆ ಹೇಳುವುದಾದರೆ, ನಾವು ಇಡೀ ಕವಿತೆಯೆಂದರೇನು ?—ಎಂಬುದನ್ನು ಅರಿಯಬೇಕು. ಇಡೀ ಕವಿತೆಯೆಂದರೆ ಪರಿಪೂರ್ಣವಾದ ಕವಿತೆಯೆಂದು ತಿಳಿಯಬಾರದು. ಸಂಪೂರ್ಣತೆಯು ಕಾಲ್ಪನಿಕ ವಿವರಣೆಯಲ್ಲಿರುತ್ತದೆ. ಈ ಕಾಲ್ಪನಿಕ ವಿವರಣೆಯು ನಮ್ಮಲ್ಲಿ ಕಾಲ್ಪನಿಕಪ್ರತಿಮೆಯನ್ನು ಹುಟ್ಟಿಸುತ್ತದೆ. ಈ ಪ್ರತಿಕ್ರಿಯೆಯು ಒಂದು ಕಾವ್ಯವಿಷಯದ ಸೀಮೆಯನ್ನು ದಾಟಿ, ಬಹುಮುಖಿಯಾದ

ಮಾನವೀಯ ಅನುಭವದ ಕಡೆಗೆ ಒಯ್ಯುತ್ತದೆ; ಆದರೂ ಆ ಸೀಮೆಯಲ್ಲಿಯೇ ಅನಂದಿತವಾಗಿರುತ್ತದೆ.

ಕವಿಯು ತಂತ್ರದ ಸಹಾಯದಿಂದ ಈ ಸ್ವೃತಿ-ಚಿತ್ರದ ಸಂಪೂರ್ಣತೆ ಹಾಗೂ ಏಕರೂಪತೆಯನ್ನು ಹೇಗೆ ಸಾಧಿಸುತ್ತಾನೆ? ಕೀಟ್ಸನು ಓದುಗನ ಬಗ್ಗೆ ಹೇಳುವಾಗ ಪ್ರತಿಮಾಸೃಷ್ಟಿಯು ಉದಯು, ಬೆಳವಣಿಗೆ ಮುಕ್ತಾಯ-ಗಳು ಸೂರ್ಯನ ಉದಯದಂತೆ ಸ್ವಾಭಾವಿಕವಾಗಿ ಬಂದು, ಹೊಳೆಯುತ್ತ ಸಾಗಿ ಮುಂದೆ ಅಸ್ತವಾಗುವಾಗ, ಸಂಧ್ಯಾ-ಸಮಯದ ಸಂಧಿಪ್ರಕಾಶದ ಬೆಡಗಿನಲ್ಲಿ ಓದುಗನನ್ನು ಬಿಡ-ಬೇಕು " ಎಂದು ನುಡಿದಿದ್ದಾನೆ!

ಕಾವ್ಯಪ್ರತಿಮೆಗಳು ಕವಿತೆಯ ವಸ್ತುವನ್ನು ತಿಳಿಸುವ ಸ್ವಾಭಾವಿಕವಾದ ಭಾಷೆಗಳೆಂದು ವಾಚಕನಿಗೆ ಎನಿಸಿರ ಬೇಕು. ಇದು ಸುಲಭವಾಗಿ ಅಥವಾ ಸ್ವಾಭಾವಿಕವಾಗಿ ಕವಿಗೆ ಸಾಧ್ಯವಾಗುವುದಿಲ್ಲ. ಇದಕ್ಕಾಗಿ ಕವಿಯು ತಕ್ಕ-ಮಟ್ಟಿಗೆ ಪರಿಶ್ರಮಿಸಬೇಕಾಗುವುದು. ಈಗ ಕವಿ ವಿನಾ-ಯಕರು ಬರೆದ " ದ್ಯಾವಾ-ಪೃಥಿವೀ " ಎಂಬ ಕಾವ್ಯದ 'ನೀರದ' ಎಂಬ ಭಾಗದ ಕೆಲವು ಪಂಕ್ತಿಗಳನ್ನು ನೋಡುವಾ:

" ಶೂನ್ಯತೆಯೊಡನವ ಬಾಳಿದ ಬಾಳುವೆಗೆ
ಲೋಕವಿಲಕ್ಷಣ ವಿಚಿತ್ರಸಂತಾನ
ಮುಕುಟವಾಯ್ತು: ಅನಪೇಕ್ಷಿತ ಫಲಪ್ರಾಪ್ತಿ—
ಜೀವನಸೂತ್ರಕೆ ವಿಸ್ತೃತ ವ್ಯಾಖ್ಯಾನ—! "

ಕವಿಗಳು ಮೊದಲು ಈ ಕಾವ್ಯವನ್ನು ಬರೆದಾಗ ಕೊನೆಯ ಸಾಲು ಹೀಗಿತ್ತು :—" ಅರಿವಾಯ್ತವನಿಗೆ ತನ್ನಯ ಮರ್ಮಸ್ಥಾನ— "

ಇಲ್ಲಿರುವ ಕಥೆ—ಇಕ್ಷುವಿನದು. ಅವನು ಇಂದ್ರನ ಹೆಂಡತಿ-ಯಾದ ಶಚೀದೇವಿಯನ್ನು ಮೋಹಿಸಿ ಅವಳು ಜಗನ್ಮಾತೆಯೆಂಬು-ದನ್ನು ಮರೆತು ಅವಳನ್ನೇ ಬಯಸಿದ. ಆಗ ಇಂದ್ರ ಶಚೀದೇವಿಯಂತೆ ರೂಪ-ವರ್ಣವಿತ್ತು ಒಂದು ಮೋಡವನ್ನು ಇಕ್ಷುವಿಗೆ ಕೊಟ್ಟ. ಆ ನೀರದನೀರೆಯನ್ನು ಇಕ್ಷು ತಬ್ಬಿದನು,—ಆದರಿಂದ ಅವನಿಗೆ ವಿಚಿತ್ರ-ವಾದ ಸಂತಾನಪ್ರಾಪ್ತವಾಯ್ತು. ಈ ಅನಪೇಕ್ಷಿತವಾದ ಸಂತಾನದಿಂದ ಅವನು ಹೇಸಿಕೊಂಡು ಜೀವನದ ನಿರರ್ಥಕತೆಯನ್ನು ಅರಿತನು. ಈ ಮಾತನ್ನು ಇಲ್ಲಿ ಕವಿಯು ಸ್ಪಷ್ಟಪಡಿಸಿದ್ದಾನೆ.

ಕವಿಯು ಮೊದಲು ಬರೆದ ಸಾಲಿನಲ್ಲಿಯ 'ಮರ್ಮಸ್ಥಾನ' ಎಂಬ ಶಬ್ದ ಉಚಿತವಾಗಿಲ್ಲ. ಮೇಲಿನ 'ಸಂತಾನ' ಈ ಶಬ್ದಕ್ಕೆ ಪ್ರಾಸ ಹೊಂದಿಸಲು ತಂದಂತೆ ಭಾಸವಾಗುತ್ತಿತ್ತು; ಆದುದರಿಂದ ಕವಿತೆ ಎಲ್ಲಿ ಸ್ವಾಭಾವಿಕವಾದ ಪ್ರವಾಹವು ಕಂಡುಬರುತ್ತಿರಲಿಲ್ಲ. ಇನ್ನೊಂದು ಮಾತೆಂದರೆ 'ಅರಿವಾಯ್ತವನಿಗೆ ತನ್ನಯ ಮರ್ಮ-ಸ್ಥಾನ' ಎಂದೆನ್ನುವುದರಿಂದ, ಇಕ್ಷುವಿಗೆ ತನ್ನ ತಪ್ಪು ತಿಳಿಯಿತೆಂಬು-ದಿಷ್ಟೇ ಅರ್ಥವಾಗುತ್ತದೆ. ಇದರರ್ಥ ಮರ್ಯಾದಿತವಾಗಿದೆ. ಆದರೆ

ಈಗಿದ್ದ ಸಾಲನ್ನು ನೋಡಲಾಗಿ ಅವನಿಗೆ 'ತನ್ನ ಜೀವನದ ನಿರರ್ಥ-ಕತೆಯು ಮನನಟ್ಟಾಯಿತು' ಎಂಬ ಅರ್ಥವು ಹೆಚ್ಚು ವೈಶಾಲ್ಯವನ್ನು ತಂದ ಕೊಡುತ್ತದೆ. ನೀರದನೀರೆಯನ್ನು ಮೋಹಿಸಿ ಲಲ್ಲೆವಾತು-ಗಳಿಂದ ಅವನು ಕಾಮಕೇಳಿಗೆ ಕರೆವಾಗಲೇ ಅವನ ತಪ್ಪಿನ ಬೀಜಬಿತ್ತು. ಮುಂದೆ ಆ ಬೀಜದ ವಿಷವೃಕ್ಷ ಬೆಳೆದು ಫಲಪ್ರಾಪ್ತಿಯಾಯಿತು. ಯಾವ ರೀತಿ ಶಾಸ್ತ್ರಾದಿಗಳಲ್ಲಿ ಒಂದು ಸೂತ್ರ ಕಂಡುಬಂದು ಅದನ್ನು ವಿವರಿಸಲೋಸುಗವೇ ವಿಸ್ತೃತವಾದ ವ್ಯಾಖ್ಯಾನವನ್ನು ಟೀಕಾ-ಕಾರರು ಬರೆಯುತ್ತಾರೋ, ಅದೇ ರೀತಿಯಾಗಿ, ಅವನ ತಪ್ಪಿನ ಬೀಜರೂಪೀ ಸೂತ್ರಕ್ಕೆ ಅನಪೇಕ್ಷಿತ ಸಂತಾನಪ್ರಾಪ್ತಿಯು ವ್ಯಾಖ್ಯಾನ ದಂತಾಯಿತು. ಇದಲ್ಲದೆ ಪ್ರತಿಯೊಬ್ಬ ಮಾನವನ ಜೀವನದ ಸೂತ್ರಕ್ಕೂ ಒಂದು ವಿಸ್ತೃತವಾದ ವ್ಯಾಖ್ಯಾನವಿದೆ—ಎಂಬ ಅರ್ಥವು, ಸಾಧಾರಣವಾಗಿ ಎಲ್ಲರಿಗೂ ಅನ್ವಯಿಸುವಂತಿದೆ. ಒಂದು ಕಾವ್ಯ-ವಿಷಯವನ್ನು ವಾಚಕನು ಗ್ರಹಿಸುವಂತೆ ಪ್ರತಿಮಾವಾದರಿಯು ಯಾವ ರೀತಿಯಲ್ಲಿ ಪ್ರಯತ್ನಿಸುತ್ತದೆಯೆಂಬುದನ್ನು ಒಂದು ಕವಿತೆ-ಯಿಂದ ಅರಿಯೋಣ:

ಮೃಗಯಾವಿಹಾರ

೧

ಹೊರಟಿತ್ತು ಹೊನ್ನಿಗ ಹೊಂಗೆ
ಮೃಗಯಾ ವಿಹಾರಕ್ಕೆ;

ಗೂಡಿನೊಳಗಡೆಯಲ್ಲಿ
ಬೀಡು ಬಿಟ್ಟಿಹ ಹಳೆಯ ಹದ್ದು
ರೆಕ್ಕೆ ಬಡಿದೆದ್ದಿತ್ತು,
ಕೊಳೆತ ಮಾಂಸಕ್ಕಾಗಿ ಹಳವಂಡವಡುತಿತ್ತು,
ಡೇಗೆ ಜೋಡಿಯ ಜೆಟ್ ವಿಮಾನವೇರಿ
ಹಳೆಹದ್ದು ಹೊರಟಿತ್ತು
ಹಿಡಿದು ಕಾಡುದಾರಿ—
ಮಕರ ಕೇತನವೆತ್ತಿ
ಮುಂದುವರಿಯಿತು ಅಮಲುದಾರರ ಸವಾರಿ;
ದಾರಿದೋರುತಲಿತ್ತು ಮುನ್ನಡೆದ ಬಳ್ಳಿ ರಾಯಭಾರಿ.

೨

ಒಮ್ಮೆಗೇ ನಿಂತಿತ್ತು ಹರಾಮಿ ಬಳ್ಳಿ
ಹೊಡೆದೊಂದು ಸಿಳ್ಳು—
ಕಣ್ಣೆದುರಿಗಿನ ಕಾಡಕೊಂಪೆಯೊಳು
ನಿಂತಿಹುದೊಂದು ಆಕಳು.
ಶ್ರುತಿಗೊಂಡ ವೀಣೆಯನು ಮೀಟಿತ್ತು
ಸುಳಿಗಾಳಿ ಬೆರಳು.
‘ ಪದ್ಮಪತ್ರ ಜಲಬಿಂದುವಿನಂತೆ
ಚಲಿತಮಾದುದು ಚಿತ್ತ ’
(ನೆತ್ತಿಗೇರಿತ್ತೇನೋ ಪಿತ್ತ)

೩

ಹೊಂಚು ಹಾಕಿತು ‘ ಟ್ರಾಪಾ ’
ತಪ್ಪಿಸಿಕೊಳ್ಳುವುದು ಹೇಗಪ್ಪಾ, ಆ ಕಪಿಲೆ ?
ನಿಸ್ಸಹಾಯಕ ಅಹಲ್ಯೆ !
ಪಾಪ ಆ ಧೇನು
ಹೊನ್ನಿಗಗೆ ಆಗಿತ್ತು ಕಾಮಧೇನು !
ಅಲ್ಲಲ್ಲ ಕಾಮ–ಧೇನು !

—ಎಂ. ಅಕಬರಅಲಿ

ಗರ್ಭಾಶಯದ ದೋಷಗಳನ್ನು ನಿವಾರಿಸಲು ಅತ್ಯುತ್ತಮವಾದ ಔಷಧ
ಜೀವನಿ
ದಿ ಸದ್ವೈದ್ಯ ಶಾಲಾ, ನಂಜನಗೂಡು
ಬ್ರಾಂಚುಗಳು: ಬೆಂಗಳೂರು, ಮೈಸೂರು, ಮಂಗಳೂರು, ಹುಬ್ಬಳ್ಳಿ
ಯಾವಾಗಲೂ ನಂಜನಗೂಡು ಹಲ್ಲು ಪೌಡರ್ ಉಪಯೋಗಿಸಿರಿ

ಮೊದಲನೆಯ ಪದ್ಯದಲ್ಲಿ ನಾವು ಎರಡು ಪ್ರಮುಖ ಪ್ರತಿಮೆಗಳನ್ನು ಕಾಣುತ್ತೇವೆ. ಮೃಗಯಾವಿಹಾರಕ್ಕೆ ಹೊರಟ ಕ್ರೂರ ಹೊನ್ನಿಗ ಮತ್ತು ಕೊಳೆತ ಮಾಂಸಕ್ಕಾಗಿ ರೆಕ್ಕೆ ಬಡೆಯುತ್ತಿದ್ದ ಹದ್ದು; ಇವು ಮುಂದೆ ಬರುವ ರಾಯಭಾರಿ, ಅಮಲುದಾರರ ಕ್ರೌರ್ಯವನ್ನು ಸೂಚಿಸುತ್ತವೆ. ‘ ಅಮಲುದಾರ, ’ ‘ ರಾಯಭಾರಿ ’ ಎಂಬ ಎರಡು ಶಬ್ದಗಳು, ಈ ಕವಿತೆಯಲ್ಲಿನ ರೂಪಕದ ಕಲ್ಪನೆ ಕೊಡುತ್ತವೆ. ‘ ಪದ್ಮಪತ್ರ ಜಲಬಿಂದುವಿನಂತೆ ಚಲಿತಮಾದುದು ಚಿತ್ತ ’ ಈ ಪಂಕ್ತಿಯನ್ನು ನಾಗಚಂದ್ರನ ರಾಮಾಯಣದಿಂದ ಉದ್ಧರಿಸಿದ್ದಾರೆ. ಇದರಿಂದ ನಮಗೆ, ಸೀತೆಯ ಅಸಹಾಯಕತೆ ಹಾಗೂ ರಾವಣನ ಕ್ರೌರ್ಯದ ಕಲ್ಪನೆ ಬರುತ್ತದೆ. ರಾವಣನ ಮನ ಚಂಚಲವಾದಂತೆ ಇಲ್ಲಿ ಅಮಲುದಾರರ ಮನ ಚಂಚಲವಾಗಿದೆ. ‘ ಟ್ರಾಪಾ ’ ಎನ್ನುವುದು ಒಂದು ಬಗೆಯ ಹೂವಿದ್ದು, ಅದು ತನ್ನ ಪಕಳೆ ಮುಚ್ಚುವುದರಿಂದ ದುಂಬಿಯನ್ನು ಕೊಲ್ಲುತ್ತದೆ. ಅವರ ಹೊಂಚಿಗೆ ಈ ಹೂವಿನ ರೂಪಕ ಕೊಟ್ಟಿದ್ದಾರೆ. ‘ ನಿಸ್ಸಹಾಯಕ ಅಹಲ್ಯೆ ’ ಎಂಬ ಮಾತೂ ಇದನ್ನೇ ಸೂಚಿಸುತ್ತದೆ. ಕೊನೆಗೆ ‘ಕಾಮ–ಧೇನು’ ಎಂದು ಪದವನ್ನು ಒಡೆಯುವುದರಿಂದ, ಕೊನೆಗೊಮ್ಮೆ ಇಡೀ ಕವಿತೆಯ ರೂಪಕ ತಿಳಿದು, ಅದರ ಸಾರ್ಥಕ್ಯದ ಅರಿವಾಗುತ್ತದೆ. ಈ ಮಾನವೀಯ ವಸ್ತುವಿಗೆ ನಿಸರ್ಗವು ಕವನದಾದ್ಯಂತ ಮುಖ್ಯವಾದ ಹಿನ್ನೆಲೆಯಾಗಿ ನಿಂತಿದೆ.

ಕವಿತೆಯಲ್ಲಿಯ ಪ್ರತಿಮೆಗಳು ಸಾಲುಸಾಲಾಗಿ ಬೇರೆ ಬೇರೆ ಕೋನಗಳಲ್ಲಿಟ್ಟ ಕನ್ನಡಿಗಳಿದ್ದಂತೆ. ಕಾವ್ಯವಸ್ತು ಮುಂದುವರಿದಂತೆ ಇವು ಅದನ್ನು ಬಹುಮುಖವಾಗಿ ಪ್ರತಿಬಿಂಬಿಸತೊಡಗುತ್ತವೆ. ಆದರೆ ಆ ಕನ್ನಡಿಗಳಲ್ಲಿ ಇಂದ್ರಜಾಲವಿದೆ. ಅವು ಕೇವಲ ಕಾವ್ಯವಸ್ತುವನ್ನು ಪ್ರತಿಬಿಂಬಿಸುವುದಿಲ್ಲ; ಅದಕ್ಕೆ ಜೀವ ಮತ್ತು ರೂಪವನ್ನು ಕೊಡುತ್ತವೆ.

ಹೊಂದಿಕೆಯುಳ್ಳ ಪ್ರತಿಮಾಮಾದರಿಯನ್ನು ನಿರ್ಮಿಸುವ ಜಾಗೃತ ವರದಾನದ ಹಿಂದೆ ಅನುಭವವನ್ನು ಸಂಘಟಿಸುವ ಸಕ್ತಿಯೂ ಇರುತ್ತದೆ ರಿಲ್ಕೆ ಎಂಬ ಒಬ್ಬ ಫ್ರೆಂಚ್ ವಿಮರ್ಶಕನು ‘ Note book of Malte Laurids Brigge ’ ಎಂಬ ಪುಸ್ತಕದಲ್ಲಿ ಅವಿಸ್ಮರಣೀಯವಾದ ಮಾತುಗಳನ್ನು ಹೇಳಿದ್ದಾನೆ: “ಜನರು ಕಲ್ಪಿಸುವಂತೆ ಪದ್ಯಗಳು ಕೇವಲ ಭಾವನೆಗಳಲ್ಲ; ಅವು ಅನುಭವಗಳು. ಒಂದು ಕವನವನ್ನು ಬರೆಯಬೇಕಾದರೆ, ಕವಿಯು ಅನೇಕ ನಗರಗಳನ್ನು ಜನರನ್ನು ವಸ್ತುಗಳನ್ನು ನೋಡಿರಬೇಕು ಪಕ್ಷಿಗಳ ಹಾರಾಟ, ಉಷಃಕಾಲದ ಸಮಯಕ್ಕೆ ಮೃದುವಾದ ಪುಷ್ಪಗಳ ಅಭಿನಯ, ಪ್ರಾಣಿಗಳ ವೈವಿಧ್ಯ, ಮುಂತಾದುವುಗಳನು ಅರಿತಿರಬೇಕು ...... ಪ್ರಣಯಪೂರಿತ ಅನೇಕ ರಾತ್ರಿಗಳ ಸವಿನೆನಪು, ಶ್ರಮಿಕ ಹೆಂಗಳೆಯರ ಆಕ್ರೋಶ— ಸಾಯುವವನ ಕೊನೆಯ ಗಳಿಗೆಯು ತೆರೆದ ಕಿಟಕಿಗಳ ಕೋಣೆಯಲ್ಲಿ ಕುಳಿತು ಸುತ್ತಲೂ ಇರುವ ದುಃಖದ ವಾತಾವರಣ ಮುಂತಾದುವನ್ನು ಅನುಭವಿಸಿರಬೇಕು. ಕೇವಲ ಸ್ಮೃತಿಗಳೇ ಒಂದು ಕವಿತೆಯನ್ನು ನಿರ್ಮಿಸುವುದಿಲ್ಲ. ಇಂತಹ ಸ್ಮೃತಿಗಳು ಹೆಚ್ಚಾದಾಗ, ಅವುಗಳನ್ನು ಮರೆಯುವ ಶಕ್ತಿಯೂ ಕವಿಗಿರಬೇಕು. ಮತ್ತೆ ಅವು

ಪುಟಿದೇಳುವವರೆಗೂ ಅವನಲ್ಲಿ ಅಪಾರ ತಾಳ್ಮೆಯಿರಬೇಕು. ಯಾಕೆಂದರೆ ಈ ಸ್ಮೃತಿಗಳೇ ಮುಖ್ಯವಾದುವುಗಳು. ಯಾವಾಗ ಈ ಸ್ಮೃತಿಗಳು ರಕ್ತಗತವಾಗಿ ಕವಿಯ ಹಾವಭಾವ ಹಾಗೂ ದೃಷ್ಟಿಯಲ್ಲಿ ಬೆರೆತುಹೋಗುತ್ತವೆಯೋ, ಮತ್ತೂ ಯಾವಾಗ ಅವನಿಂದ ಅವುಗಳನ್ನು ಪ್ರತ್ಯೇಕಿಸಲು ಬರುವುದಿಲ್ಲವೋ, ಅಂತಹ ಅಪೂರ್ವ ಕಾಲದಲ್ಲಿ ಕವಿತೆಯ ಪ್ರಥಮಶಬ್ದವು ಈ ಸ್ಮೃತಿಗಳ ಮಧ್ಯದಲ್ಲಿ ಉದ್ಭವಿಸಿ, ಅವುಗಳಿಂದ ಮುನ್ನುಗ್ಗುತ್ತದೆ— ”

ಒಂದು ವಸ್ತುವನ್ನು ಅವಿಸ್ಮರಣೀಯವಾಗಿ ಮಾಡುವ ಸಹಾನುಭೂತಿ, ಸ್ಮೃತಿಗಳಲ್ಲಿ ನಾನಾರೂಪತೆಯನ್ನು ತರುವ ಅನುಭವದ ವಿಸ್ತಾರ, ಸ್ಮೃತಿಗಳನ್ನು ತನ್ನೊಳಗೆ ಪರಿಪಕ್ವಗಳನ್ನಾಗಿ ಮಾಡಿ ನಮ್ಮೊಡನೆ ಅವುಗಳ ಸಂಬಂಧವನ್ನು ಕಲ್ಪಿಸಿ ಪ್ರತಿಮೆಗಳ ಜಾತಿಸ್ವಭಾವವನ್ನು ಊಹಿಸುವಂತೆ ಮಾಡುವ ತಾಳ್ಮೆ, ಇವು ಕವಿಗೆ ಮುಖ್ಯವಾದುವುಗಳು. ಪ್ರತಿಮಾಮಾದರಿಗಳನ್ನು ಶುದ್ಧೀಕರಿಸಲು ಅವನಿಗೆ ಒಳಗಿನ ಒಂದು ಧ್ವನಿಯು ಹೇಳುತ್ತದೆ. ಇದರ ಸಹಾಯದಿಂದ ಮೃದುವಾಗಿ ಹಾಗೂ ಪ್ರಯತ್ನಪೂರ್ವಕವಾಗಿ, ಬರಲಿರುವ ಪ್ರತಿಮಾಮಾದರಿಯನ್ನು ಮುಂದುವರಿಸುತ್ತಾನೆ; ಪ್ರತಿಮಾಮಾದರಿಯ ಸಾರವನ್ನಷ್ಟೇ ಸ್ವೀಕರಿಸಿ ಉಳಿದುದನ್ನು ತ್ಯಜಿಸುತ್ತಾನೆ. ಈ ರೀತಿಯಿಂದ ಯೋಚಿಸಿದಾಗ, ಬರುವ ಪ್ರತಿಮಾಮಾದರಿಯಲ್ಲಿಯ ಕೆಲಭಾಗವಾದರೂ ಅಖಂಡವಾಗಿರುತ್ತದೆ. ಅನಂತರ ಅನುಭವವಲ್ಲದ, ಸ್ಮೃತಿಯಲ್ಲದ, ಶಬ್ದಗಳ ಅಸ್ಪಷ್ಟ ಕುಣಿತವಲ್ಲದ ಮತ್ತು ಇವುಗಳನ್ನೊಳಗೊಂಡ ಒಂದು ನವಜೀವನ ರೂಪುಗೊಳ್ಳುತ್ತದೆ. ಆ ನವಜೀವನವೇ ಕವಿತೆ.

ಈ ಮಾರ್ಗದಿಂದಲೇ ಎಲ್ಲ ಕಾಲ್ಪನಿಕಸಾಹಿತ್ಯವು ಹೊರಬೀಳುತ್ತದೆ. ಇಂದಿನ ಕಾವ್ಯದ ಕ್ಷೇತ್ರವು ಮರ್ಯಾದಿತವಾಗಿದೆ. ಇಪ್ಪತ್ತನೆಯ ಶತಮಾನದ ಕವಿಯು ಕಥನಕವನಗಳನ್ನು ಬರೆಯುವುದು ಕಡಿಮೆ. ಆ ಸ್ವರೂಪದ ಸಾಹಿತ್ಯವನ್ನು ಅವನು ಕಾದಂಬರೀಕಾರನಿಗೆ ಬಿಟ್ಟುಕೊಟ್ಟಿದ್ದಾನೆ. ಅದರ ಮೂಲಕ, ಕಾದಂಬರೀಕಾರನು ಯಾವ ಪ್ರತಿಮೆಗಳನ್ನು ಕವಿಯು ಕಥೆಯನ್ನಲಂಕರಿಸಲು ಉಪಯೋಗಿಸುತ್ತಿದ್ದನೋ ಆ ಪ್ರತಿಮೆಗಳನ್ನು ಕಾದಂಬರಿಗಳಲ್ಲಿ ಉಪಯೋಗಿಸಿ, ಅದಕ್ಕೆ ಒಂದು ವೈಶಿಷ್ಟ್ಯವನ್ನು ತರುತ್ತಾನೆ. ಕೆಲವು ಕಾದಂಬರೀಕಾರರಲ್ಲಿ ಈ ಪ್ರತಿಮೆಗಳು ಹೆಚ್ಚು ದೃಢವಾಗಿ ಕಂಡುಬರುತ್ತವೆ; ಮತ್ತು ಕೆಲವು ದೃಶ್ಯಗಳನ್ನು ಅಲಂಕರಿಸುವುದಲ್ಲದೇ ನಿಯಂತ್ರಿಸುತ್ತವೆ; ಕಾದಂಬರೀಕಾರನು ತನ್ನ ಕಥೆಯನ್ನು ಅಲಂಕರಿಸಲು, ಸಂವಿಧಾನಕ್ಕೆ ಚೈತನ್ಯವನ್ನು ಕೊಡಲು, ಒಂದು ಕಥಾವಸ್ತುವನ್ನು ಸಂಕೇತಗಳಿಂದ ಸೂಚಿಸಲು ಅಥವಾ ಒಂದು ಮನದ ಸ್ಥಿತಿಯನ್ನು ಪ್ರಕಟಮಾಡಲು ಪ್ರತಿಮೆಗಳ ಉಪಯೋಗವನ್ನು ಮಾಡ

ಶಾಂತಿ ಸೇವಾಸದನದ ಹೊಸ ಪ್ರಕಟಣೆಗಳು

		ರೂ ನ. ಪೈ
ಜೈನಧರ್ಮ		೧೫—೦
ಶ್ರೀ. ಮಿರ್ಜಿ ಅಣ್ಣಾರಾಯರು		
ಭಾರತದ ಬೆಳಕು	”	೧—೦
ಭಾರತೀಯ ಸಂಸ್ಕೃತಿಯ ಹೃದಯ	”	೧—೫೨
ಸಮಯಸಾರ	”	೧—೫೦
ಶ್ರೇಯಾಂಸ (೩ ಭಾಗ)	”	೩—೦
ಮೂಲಶಿಕ್ಷಣದ ಮೌಲ್ಯಮಾಪನ	”	೦—೭೫
ಭರತೇಶನ ನಾಲ್ಕು ಚಿತ್ರಗಳು	”	೧—೩೫
ಕೆನೆಮೊಸರು (ಮಕ್ಕಳ ಕತೆ)	”	೦—೩೫

ಪ್ರತಿಗಳಿಗಾಗಿ ಬರೆಯಿರಿ :

ಶಾಂತಿ ಸೇವಾಸದನ, ಸೇಡಬಾಳ

ಪೋ. ಸೇಡಬಾಳ (ಜಿಲ್ಲಾ ಬೆಳಗಾಂವಿ)

ಬಹುದು. ಕಾವ್ಯಮಯ ಕಾದಂಬರಿ ಮತ್ತು ಕಥನಕವನದಲ್ಲಿರುವ ಭೇದ ಕೇವಲ ರೂಪದಲ್ಲಿಯದು. ಕಾದಂಬರೀಕಾರ ಪಾತ್ರಗಳ ಸ್ವಭಾವವನ್ನು ಅವುಗಳ ಕೃತಿಗಳಿಂದ ತೋರಿಸುವಾಗ, ಅಲ್ಲಿಯ ಪ್ರತಿಮೆಗಳು ಮುಖ್ಯವಾಗುತ್ತವೆ ಆದರೆ ರೂಪಕಾತ್ಮಕವಾಗಿರುವ ಕಾದಂಬರಿಗಳಲ್ಲಿ ಕೇವಲ ಗ್ರಹಣಶಕ್ತಿಗೆ ಹೆಚ್ಚಿನ ಎಡೆಯಿರುತ್ತದೆ ಕಾದಂಬರಿಯು ಹೆಚ್ಚು ವ್ಯಕ್ತಿಗತವಾದಾಗ ಕಾವ್ಯದ ಸಮೀಪಕ್ಕೆ ಬಂದಿದೆ.

ಗದ್ಯದಲ್ಲಾಗಲಿ ಪದ್ಯದಲ್ಲಾಗಲಿ—ಪ್ರತಿಮೆಗಳನ್ನು ಸಂಘಟಿಸುವ ತತ್ತ್ವವೆಂದರೆ, ಪ್ರತಿಮೆ ಮತ್ತು ವಸ್ತುಗಳಲ್ಲಿರುವ ಸಾಮರಸ್ಯ. ಪ್ರತಿಮೆಗಳೇ ವಸ್ತುವಿನ ದಾರಿದೀಪಗಳು; ವಸ್ತುವನ್ನು ಪ್ರಕಟಿಸುವ ಸಾಧನಗಳು. ವಸ್ತು ಮುಂದೆ ಸಾಗುತ್ತದೆ ಹಾಗೂ ಸಾಲುಸಾಲಾಗಿ ಬರುವಂಥ ಪ್ರತಿಮೆಗಳ ಪ್ರದರ್ಶನವನ್ನು ನಿಯಂತ್ರಿಸುತ್ತದೆ. ಇಂದಿನ ಕಾವ್ಯವು ಒಂದು ವಿಶಿಷ್ಟರೂಪವನ್ನು ತಾಳಿದೆ ಆ ರೂಪದಲ್ಲಿಯೇ ಅದು ಮುಂದುವರಿಯುತ್ತಿದೆ ಅದರ ಮೂಲಕ ಅದು ತನ್ನ ಪ್ರತಿಮಾಮಾದರಿಯಲ್ಲಿ ಹೆಚ್ಚು ಸ್ಪಷ್ಟವಾದ ಪ್ರತಿಧ್ವನಿಗಳನ್ನು ಬಲು ತೀಕ್ಷ್ಣತೆಯನ್ನು ಹಾಗೂ ಹೆಚ್ಚು ಸಂಕೀರ್ಣ ಸಂಬಂಧಗಳನ್ನು ನಿರ್ಮಿಸಬಲ್ಲದು

ಭಾರತೀಯ ಸೈನ್ಯಖಾತೆಯ ಜನ್ಮೇತಿಹಾಸ

ಶ್ರೀ. ನೆಂ. ಮು. ಜೋಶಿ, ಧಾರವಾಡ

卐

ಭಾರತೀಯ ಸೈನ್ಯಖಾತೆಯ ಪೂರ್ವಚರಿತ್ರೆಯನ್ನು ನೋಡಿದರೆ, ಅದು ಭಾರತದಲ್ಲಿ ವಿದೇಶೀಯರ ಆಡಳಿತ ದೃಢವಾಗಿ ನೆಲೆಗೊಳ್ಳಲು ಕಾರಣೀಭೂತವಾದುದು ಹೇಗೆಂಬುದು ಒಡೆದು ಕಾಣುತ್ತದೆ. ಮೊದಲು ಹೀಗೆ—ಆದರೆ ಮುಂದೆ?

卐

ಭಾರತದ ಪ್ರಥಮ ಸ್ವಾತಂತ್ರ್ಯಯುದ್ಧ ಅಥವಾ ' ಸಿಪಾಯಿಗಳ ಬಂಡಾಯ ' ನಡೆದು, ಇಂದಿಗೆ ನೂರು ವರುಷಗಳು ಸಂದಿದುವು. ಆ ಸಂಗ್ರಾಮದಲ್ಲಿ ಅಂದಿನ ಸೈನ್ಯಖಾತೆಯ ಸಿಪಾಯಿಗಳು ಹೆಚ್ಚಾಗಿ ಭಾಗವಹಿಸಿದ್ದುದರಿಂದಲೂ—ಅದು ಆಯಶಸ್ವಿಯಾಗಿದ್ದುದರ ಮೂಲಕವಾಗಿಯೂ, ಅದನ್ನು ಕೆಲವರು ' ಸಿಪಾಯಿಗಳ ಬಂಡಾಯ (Sepoy 's Mutiny) ಎಂದೇ ಕರೆದರು. ಅದು ಬಂಡಾಯವೇ ಅಥವಾ ಸ್ವಾತಂತ್ರ್ಯ ಸಂಗ್ರಾಮವೇ ?–ಇದರ ಬಗೆಗೆ ಇನ್ನೂ ಸಾಕಷ್ಟು ಭಿನ್ನಾಭಿಪ್ರಾಯಗಳಿವೆ. ' ಸಮಗ್ರ ಭಾರತೀಯ ದೃಷ್ಟಿ ಆ ಹೋರಾಟ-ಗಾರರಲ್ಲಿ ಮೂಡಿರಲಿಲ್ಲವಾದುದರಿಂದಲೂ, ಕೆಲವು ಅಸಂತುಷ್ಟ ರಾಜರುಗಳ ಕೈವಾಡದಿಂದ–ಮತ್ತು ಸೈನ್ಯಖಾತೆಯಲ್ಲಿಯ ಧಾರ್ಮಿಕ ಭಾವನೆಗಳ ನೋವಿಗೀಡಾಗಿ ನೊಂದ ಮನಸ್ಸಿನ ಸೈನಿಕರ ಅವ್ಯವಸ್ಥಿತ ಪ್ರತೀಕಾರಗಳ ಮೂಲಕ ಅದು ನಡೆದುದರಿಂದಲೂ, ಅದನ್ನು ಸ್ವಾತಂತ್ರ್ಯ ಸಂಗ್ರಾಮವೆಂದು ಕರೆಯಲಾಗದು!' ಎಂದು ಕೆಲವರ ಮತವಾದರೆ ಮತ್ತೆ ಕೆಲವರು ' ಆ ಹೋರಾಟ ನಡೆಸಿದವರಲ್ಲಿಯ ಮೂಲಉದ್ದೇಶ ಪರಕೀಯ ಆಡಳಿತಗಾರರನ್ನು ಹೊರಗೆ ಓಡಿಸುವುದೇ ಆಗಿದ್ದುದರಿಂದ, ಅದು ಸ್ವಾತಂತ್ರ ಸಂಗ್ರಾಮವೇ!' ಎಂದು ಅಭಿಪ್ರಾಯ ಪಡುತ್ತಾರೆ, ಅದೇನೇ ಇರಲಿ, ಅಂದಿನ ಸೈನ್ಯಖಾತೆಯ ಸೈನಿಕರು ಈ ಹೋರಾಟದ ಬೆನ್ನೆಲುಬು ಆಗಿದ್ದರೆಂಬುದು ನಿರ್ವಿವಾದ.

೧೮೫೭ರಲ್ಲಿ ಈ ಹೋರಾಟ ನಡೆಯಿತೆಂಬ ಮಾತನ್ನು ಗಮ-ನಿಸಿದಾಗ—ಇದಕ್ಕೂ ಪೂರ್ವದಲ್ಲಿಯೆ ಈ ಸೈನ್ಯಖಾತೆ ಅಸ್ತಿತ್ವದಲ್ಲಿ ಇದ್ದಿತೆಂಬುದು ಖಂಡಿತ. ಸೈನ್ಯಖಾತೆಯ ಹುಟ್ಟಿನ ಕತೆಯೂ ಬಹು ಮೋಜಿನದಾಗಿದೆ.

೧೭೪೮ ಜನವರಿ ತಿಂಗಳಲ್ಲಿ—ಈಸ್ಟ್ ಇಂಡಿಯಾ ಕಂಪನಿಯ **ಮೇಜರ್ ಸ್ಟ್ರಿಂಜರ್ ಲಾರೆನ್ಸ್** (Stringer lawrence) ಎಂಬವನು ಮೊತ್ತಮೊದಲಿಗೆ ಭಾರತೀಯರ ಸೈನ್ಯಪಡೆಯನ್ನು ಮದ್ರಾಸಿನಲ್ಲಿ ನಿರ್ಮಿಸಿದನು. ಅದೇ ಕಾಲದಲ್ಲಿ, ಭಾರತದಲ್ಲಿ ಫ್ರೆಂಚರೂ ವಸಾಹತಿಗಾಗಿ ವಿಶ್ವಪ್ರಯತ್ನ ನಡೆಸಿದ್ದರು. ಇಂಗ್ಲೀ-ಷರೂ ಅವರ ಕಡುವೈರಿಗಳಾಗಿದ್ದರು. ಇಂಗ್ಲಂಡಿನಿಂದ ಇಂಗ್ಲಿಷ್ ಸೈನಿಕರದೊಂದು ಬಟಾಲಿಯನ್, **ಅಡ್ಮಿರಲ್ ಬೊಸ್ಕಾವೆನ್** ಎಂಬವನ ನೇತೃತ್ವದಲ್ಲಿ ಭಾರತಕ್ಕೆ ಬಂದು ಇಲ್ಲಿ ಹೊಸದಾಗಿ ನಿರ್ಮಾಣಗೊಂಡ ಭಾರತೀಯಸೈನ್ಯದ ತುಕಡಿಗೆಯುದ್ಧಶಿಕ್ಷಣ-ವನ್ನು ಕೊಟ್ಟಿತು. ಪಾಂಡಿಚೇರಿಯ ಸಲುವಾಗಿ ಇಬ್ಬಣದವರಲ್ಲಿಯೂ ನಡೆದ ಕಾಳಗದಲ್ಲಿ ಫ್ರೆಂಚರು ವಿಜಯಿಗಳಾದರು; ಇಂಗ್ಲಿಷರು ಸೋತರು. ಹೊಸದಾಗಿ ನಿರ್ಮಾಣಗೊಂಡ ಭಾರತೀಯ ಸೈನ್ಯಪಡೆ-ಯಿಂದ–ತರಬೇತಿಯ ಕೊರತೆಯ ಮೂಲಕ–ಉಪಯೋಗ ಸಾಕಷ್ಟು ಆಗಲಿಲ್ಲವಲ್ಲ!—ಎಂದು ಕಂಪನಿ ಸರಕಾರ ಕೊರಗಿತು. ಈ ಯುದ್ಧದ ಮೂಲಕ ಮದ್ರಾಸು ಅವರ ಕೈಬಿಟ್ಟಿತು. ಫ್ರೆಂಚರು ಬಲಶಾಲಿ-ಗಳಾದರು. ಆದರೆ ಯುರೋಪಿನಲ್ಲಿ ನಡೆದ ಇಂಗ್ಲಂಡ್–ಫ್ರಾನ್ಸ್ ಯುದ್ಧವು ಮುಕ್ತಾಯಗೊಂಡದ್ದರಿಂದ, ಮದ್ರಾಸು ಮರಳಿ ಕಂಪನಿ ಸರಕಾರದ ವಶಕ್ಕೆ ಬಂದಿತು.

೧೭೫೪ರಲ್ಲಿ ಸೈನ್ಯಖಾತೆಯ ಇತಿಹಾಸದಲ್ಲಿ ಒಂದು ಹೊಸ ಘಟನೆ ಘಟಿಸಿತು. ಆಗ ಕೆಲವೊಂದು ಆಕ್ರಮಿತ ಪ್ರದೇಶದಲ್ಲಿ ಮಾತ್ರ ಕಂಪನಿಸರಕಾರ, ತಾನು ತನ್ನ ವೆಚ್ಚದಿಂದ ನಡೆಸಿದ ಸೈನ್ಯ ಪಡೆಯನ್ನು ಇರಿಸಿತ್ತು: ಆದರೆ ೧೭೫೪ರಲ್ಲಿ ಇಂಗ್ಲಂಡಿನಿಂದ ಬ್ರಿಟಿಶ್ ಸರಕಾರದ ಸೈನ್ಯಪಡೆ "ಡೋರ್‌ಸೆಟ್ ರೆಜಿಮೆಂಟ್" ಕಂಪನೀ ಸರಕಾರದ ನೆರವಿಗಾಗಿ ಬಂದಿಳಿಯಿತು. ಮುಂದೆ ಮೂರೇ ವರುಷಗಳ ನಂತರ ನಡೆದ ಪ್ಲಾಸೀಕದನ (೧೭೫೭) ಎಲ್ಲರಿಗೂ ತಿಳಿದ ವಿಷಯ. ಕಂಪನಿ ಸರಕಾರ ನಿರ್ಮಿಸಿದ ಬಿಳಿಯ ಸೈನಿಕರ ಪಡೆ. ಭಾರತೀಯ ಸೈನ್ಯಪಡೆ ಮತ್ತು ಇಂಗ್ಲಂಡ್ ಸರಕಾರದ ಒಂದು ರೆಜಿಮೆಂಟು (೨೫೦ ಸೈನಿಕರು)—ಈ ಮೂರೂ ಪಡೆಗಳ ಮೇಲಧಿಕಾರಿಯಾಗಿ ರಾಬರ್ಟ್ ಕ್ಲೈವನೇ ನಿಂತುಕೊಂಡು, ಪ್ಲಾಸೀಕದನವನ್ನು ನಡೆಸಿದ. ಆಗ ಕಂಪನೀ ಸರಕಾರದ ಬಿಳಿಯರ ಪಡೆಯಲ್ಲಿಯ ೮೦೦ ಸೈನಿಕರು, ಭಾರತೀಯ ಸೈನ್ಯಪಡೆಯಲ್ಲಿಯ ೧೦೦೦ ಸೈನಿಕರು, ಹಾಗೂ ಡೋರ್‌ಸೆಟ್ ರೆಜಿಮೆಂಟಿನ ೨೫೦ ಸೈನಿಕರು, ಹೀಗೆ ೨೦೫೦ ಸೈನಿಕರು ಕಂಪನೀ ಸರಕಾರದ ಪರವಾಗಿ ಹೋರಾಡಿದರು. ಪ್ಲಾಸೀಕದನದಲ್ಲಿ ದೊರೆತ ವಿಜಯದಿಂದ ಕಂಪನಿಸರಕಾರ ಭಾರತದಲ್ಲಿ ಭದ್ರವಾಗಿ

ತಳ ಊರಿತು. ಈ ಯುದ್ಧ ನಡೆವ ಮೊದಲೇ ಕ್ಲೈವನು ಬಂಗಾಲದಲ್ಲಿ ಮತ್ತೊಂದು ಭಾರತೀಯ ಸೈನ್ಯಪಡೆಯನ್ನು ನಿರ್ಮಿಸಿದ. ಆ ಪಡೆಯ ಹೆಸರು—"The first regiment of bengal infantry" (ದಿ ಫರ್ಸ್ಟ್ ರೆಜಿಮೆಂಟ್ ಆಫ್ ಬೆಂಗಾಲ ಇನ್‌ಫಂಟ್ರಿ) ಎಂದು ಅದರ ನಾಮಕರಣ ಮಾಡಿದ್ದರೂ, ಆ ಪಡೆಯಲ್ಲಿ ಕೇವಲ ಕೈಬೆರಳಿನಿಂದೆ ಎಣಿಸುವಷ್ಟು ಬಂಗಾಲಿಗಳಿದ್ದರು. ಬಂಗಾಲದಲ್ಲಿ ಈ ಪಡೆಯು ನಿರ್ಮಾಣವಾದುದರ ಮೂಲಕ ಇದಕ್ಕೆ ಆ ಹೆಸರನ್ನು ಕೊಡಲಾಯಿತು. ಆ ಪಡೆಯಲ್ಲಿ ಪಠಾಣರು, ಜಾಟರು, ರಜಪೂತರು ಮತ್ತು ಒಬ್ಬರೋ ಇಬ್ಬರೋ ಬ್ರಾಹ್ಮಣರು–ಇದ್ದರು. ಮಹಮ್ಮದೀಯ ಸೈನಿಕರು ಮಾತ್ರ ಬಹುಸಂಖ್ಯಾಕರಿದ್ದರು. ಬಂಗಾಲದಲ್ಲಿ ಪಠಾಣರಾಗಲೀ ರಾಜಪೂತರಾಗಲೀ ಜಾಟರಾಗಲಿ ಹೇಗೆ ಸೈನಿಕರಾಗಿ ದೊರೆತರೆಂಬುದು ಸಂದೇಹ ಬರುವಂತಿದೆ; ಆದರೆ ಈ ಪಡೆಯಲ್ಲಿ ಸೇರಿದವರೆಲ್ಲ ಒಂದಾನೊಂದು ಸಮಯ ಮೊಗಲರ ಸೈನ್ಯಖಾತೆಯಲ್ಲಿ ಇದ್ದುಕೊಂಡು ಬಂಗಾಲದತ್ತ ಬಂದವರೇ ಆಗಿದ್ದರು. ಮೊಗಲ ಸೈನಿಕರಾಗಿ ಬಂಗಾಲಕ್ಕೆ ಬಂದು, ಅನೇಕ ಕಾರಣಗಳಿಗಾಗಿ ಮೊಗಲ ಪಡೆಯನ್ನು ತ್ಯಜಿಸಿದವರಿವರು ಈ ಪಡೆಯ ಸೈನಿಕರಿಗಾಗಿ ಸಮವಸ್ತ್ರಗಳನ್ನು ಕೊಡಲಾಯಿತು. ಕವಾಯತನ್ನು ಕಲಿಸಿಯಾಯಿತು. ಈ ಪಡೆಯ ಮೇಲಿದ್ದ ಅಧಿಕಾರದ ಸ್ಥಳಗಳಲ್ಲಿ ಬಿಳಿಯರೇ ಇರುತ್ತಿದ್ದರು. ಪ್ಲಾಸಿ ಕಾಳಗದಲ್ಲಿ ಈ ಪಡೆಯೂ ಸಾಕಷ್ಟು ಕೆಲಸವನ್ನು ಮಾಡಿತು. ಈ ಯುದ್ಧದಲ್ಲಿ ಕಂಪನಿ ಸರಕಾರಕ್ಕೆ ತಟ್ಟಿದ ಹಾನಿ ಕೆಳಗೆ ವಿವರಿಸಿದಂತಿದೆ:

ಕಾಳಗದಲ್ಲಿ ಸತ್ತವರು—೭ ಇಂಗ್ಲಿಷರು
೧೬ ಭಾರತೀಯರು
ಗಾಯಗೊಂಡವರು— ೧೩ ಇಂಗ್ಲಿಷರು
೩೬ ಭಾರತೀಯರು

ಆದರೆ ಪ್ರತಿಪಕ್ಷದಲ್ಲಿ ಸಾಕಷ್ಟು ಹಾನಿಯಾಗಿದೆ.

೧೭೬೪ರಲ್ಲಿ ಈ ಭಾರತೀಯ ಸೈನ್ಯಖಾತೆಯಲ್ಲಿ ಬಂಡು ನಡೆಯಿತು. ಆ ದೃಷ್ಟಿಯಿಂದ ೧೮೫೭ರಲ್ಲಿ ನಡೆದ ಬಂಡು ಮೊದಲನೆಯ ಬಂಡಲ್ಲ:—ಎರಡನೆಯ ಬಂಡೇ ಎಂದು ಕರೆಯ ಬೇಕಾಗುತ್ತದೆ. ೧೭೬೫ರಲ್ಲಿ ಭಾರತೀಯ ಸೈನ್ಯಪಡೆಗಳ ವ್ಯಾಪ್ತಿ ಸಾಕಷ್ಟಾಗದಿದ್ದುದರ ಮೂಲಕವಾಗಿಯೂ ಮತ್ತು ಆಗಿನ ಸೈನಿಕರಿಗೆ ಇಷ್ಟಿತರ ರಾಜರ ಸಹಕಾರವಿರದುದರಿಂದಲೂ—ಆ ಬಂಡಿಗೆ ಭಾರತದ ಇತಿಹಾಸದಲ್ಲಿ, ಸ್ಥಳ ಸಿಕ್ಕದೆ ಹೋಯಿತು. ಆ ಬಂಡು ನಡೆದು ಹೋಗಿ ಪುನಃ ಶಾಂತಿ ಪ್ರಸ್ಥಾಪಿಸಿದ ನಂತರ—ಸೈನ್ಯಖಾತೆಯಲ್ಲಿ ಪ್ರತಿಜ್ಞಾವಿಧಿ ಜಾರಿಯಲ್ಲಿ ಬಂದಿತು. ಆಗಿನ ಪ್ರತಿಜ್ಞಾಪತ್ರ ಹೇಗಿದ್ದಿತೆಂಬುದನ್ನು ಅವಲೋಕಿಸಿರಿ:

I .... do swear to serve the Honourable Company faithfully and truly against all their enemies while I continue to receive their pay and eat their salt. I do swear to obey all the orders I may receive from my commanders and officers, never to forsake, abandon my Colours, or turn my back to my enemies, and that I will in all things behave myself like a good and faithful sepoy in perfect obedience at all times to the rules and customs of war.

(ಕಂಪನಿ ಸರಕಾರದಿಂದ ನನಗೆ ಸಂಬಳವು ಸಲ್ಲುವವರೆಗೆ ಮತ್ತು ಅವರ ಉಪ್ಪನ್ನು ತಿನ್ನುತ್ತಿರುವವರೆಗೆ, ಅವರ ಶತ್ರುಗಳಿಗೆ ಎದುರಾಳಿಯಾಗಿ ಹೋರಾಡಿಯೂ, ನಿಷ್ಠೆಯಿಂದಲೂ ವಿಶ್ವಾಸಪೂರ್ವಕವಾಗಿಯೂ ಸನ್ಮಾನ್ಯ ಕಂಪನಿ ಸರಕಾರದ ಸೇವೆಯನ್ನು ಮಾಡುವೆನೆಂದು ಪ್ರತಿಜ್ಞೆಯನ್ನು ಮಾಡುವೆನು. ವರಿಷ್ಠರ ಅಪ್ಪಣೆಗಳನ್ನು ಶಿರಸಾವಹಿಸಿ–ಕರ್ತವ್ಯಪರಾಙ್ಮುಖನಾಗದೆ—ಶತ್ರುಗಳಿಗೆ ಬೆನ್ನನ್ನು ತೋರಿಸದೆ, ಯುದ್ಧದ ಕಾಯಿದೆ—ಕಾನೂನುಗಳಿಗೆ ಬದ್ಧನಾಗಿ ವರ್ತಿಸುವೆನು.)

ಮುಂದೆ ೧೭೬೬ರಲ್ಲಿ ಸೈನ್ಯಖಾತೆಯ ಆಡಳಿತದ ದೃಷ್ಟಿಯಿಂದ ಲಿಖಿತ ಕಾಯಿದೆ—ಕಾನೂನುಗಳು ಜಾರಿಯಲ್ಲಿ ಬಂದುವು ("Military Regulations"). ಈ ಮಿಲ್ಟ್ರಿ ರೆಗ್ಯೂಲೇಶನ್ ಪುಸ್ತಕದಲ್ಲಿ ಸೈನ್ಯಖಾತೆಗಾಗಿ ಕೇವಲ ಮಹಮ್ಮದೀಯರನ್ನಾಗಲಿ, ರಜಪೂತರನ್ನಾಗಲಿ—ತೆಗೆದುಕೊಳ್ಳಬೇಕೆಂದು ಸೂಚನೆಗಳವೆ.

ಬರುಬರುತ್ತ ಈ ಸೈನ್ಯಪಡೆಗಳು ದ್ವಿಗುಣಿತವಾಗುತ್ತ ನಡೆದುವು. ಕಂಪನಿಸರಕಾರವು ಮದ್ರಾಸಿನಲ್ಲಿ ಮುಖ್ಯ ಕಚೇರಿಯನ್ನು ಮಾಡಿಕೊಂಡುದರ ಮೂಲಕ, ಮದ್ರಾಸಿನಲ್ಲಿ ನಿರ್ಮಾಣಗೊಂಡ ಅನೇಕ ಪಡೆಗಳಿಗೆ "ಕರ್ನಾಟಕ ರೆಜಿಮೆಂಟ್" ಎಂದೇ ನಾಮಕರಣಮಾಡಿದ್ದರು. ೧೭೭೧ರಲ್ಲಿ ಒಂದು ರೆಜಿಮೆಂಟನ್ನು ಆಗಿನ ಬ್ರಿಗೇಡಿಯರ್ ಜನರಲ್ ಸ್ಮಿಥರು ತಪಾಸಿಸಿ, ತಮ್ಮ ರಿಪೋರ್ಟನ್ನು ಬರೆದಿಟ್ಟಿದ್ದಾರೆ. ಆ ರಿಪೋರ್ಟಿನ ತಾರೀಖು ೨೦ ಜಾನ್ಯುವರಿ ೧೭೭೧. ಆ ರೆಜಿಮೆಂಟಿನ ಹೆಸರು "10th Regiment, Madras native infantry" ಎಂದಿದ್ದಿತು. ಅದು ತ್ರಿಚನಾಪಲ್ಲಿಯಲ್ಲಿ ಪಾಳೆಯ ಹಾಕಿತ್ತು. ಪಡೆಯ ಮುಖ್ಯಾಧಿಕಾರಿ ಕ್ಯಾಪ್ಟನ್ ಥಾಮಸ್ ಬ್ರೂಸ್ ಎಂಬುವವನಿದ್ದ. ಬ್ರಿಗೇಡಿಯರ್ ಜನರಲ್ ಸ್ಮಿಥರ ರಿಪೋರ್ಟಿನ ಭಾಷಾಂತರಭಾಗವನ್ನು ಅವಗಾಹನೆಗಾಗಿ ಕೆಳಗೆ ಕೊಟ್ಟಿದೆ:

(ಪಶಸ್ತ್ರ) ಸೈನಿಕರ ಹಾಜರಿ—	೮೪೮
ಡ್ಯೂಟಿಯ ಮೇಲಿದ್ದವರು —	೧೨೨
ಅಜಾರಿ —	೫೯
ಅಜಾರಿಯಿಂದ ಗೈರು ಹಾಜರು—	೭
ರಜೆಯಮೇಲೆ —	೨
	===
ಒಟ್ಟು	೧೦೩೮
ಶರಾ—	

ಭಾರತೀಯ ಸೈನ್ಯಖಾತೆಯ ಇತಿಹಾಸ

ಶ್ರೀ. ನೆಂ. ಮು. ಜೋಶಿ, ಧಾರವಾಡ

ಭಾರತೀಯ ಸೈನ್ಯಖಾತೆಯ ಪೂರ್ವ ಚರಿತ್ರೆಯನ್ನು ನೋಡಿದರೆ, ಅದು ಭಾರತದಲ್ಲಿ ವಿದೇಶೀಯರ ಆಡಳಿತ ವ್ಯವಸ್ಥೆಗಾಗಿ ನೆಲೆಗೊಳ್ಳಲು ಕಾರಣೀಭೂತವಾದುದು ಹೇಗೆಂಬುದು ಎದ್ದು ಕಾಣುತ್ತದೆ. ಮೊದಲು ಹೀಗೆ—ಆದರೆ ಮುಂದೆ?

ಭಾರತದ ಪ್ರಥಮ ಸ್ವಾತಂತ್ರ್ಯ ಯುದ್ಧ ಅಥವಾ 'ಶಿಪಾಯಿಗಳ ಬಂಡಾಯ' ನಡೆದು, ಇಂದಿಗೆ ನೂರು ವರುಷಗಳು ಸಂದಿವೆ. ಆ ಸಂಗ್ರಾಮದಲ್ಲಿ ಅಂದಿನ ಸೈನ್ಯಖಾತೆಯ ಶಿಪಾಯಿಗಳು ಹೆಚ್ಚಾಗಿ ಭಾಗವಹಿಸಿದ್ದುದರಿಂದಲೂ— ಅದು ಅಯಶಸ್ವಿಯಾಗಿದ್ದುದರ ಮೂಲಕವಾಗಿಯೂ, ಅದನ್ನು ಕೆಲವರು 'ಶಿಪಾಯಿಗಳ ಬಂಡಾಯ' (Sepoy's Mutiny) ಎಂದೇ ಕರೆದರು. ಅದು ಬಂಡಾಯವೇ ಅಥವಾ ಸ್ವಾತಂತ್ರ್ಯ ಸಂಗ್ರಾಮವೇ?—ಇದರ ಬಗೆಗೆ ಇನ್ನೂ ಸಾಕಷ್ಟು ಭಿನ್ನಾಭಿಪ್ರಾಯಗಳಿವೆ. 'ಸಮಗ್ರ ಭಾರತೀಯ ವ್ಯಕ್ತಿ ಆ ಹೋರಾಟದಲ್ಲಿ ಭಾಗವಹಿಸಿಲ್ಲವಾದುದರಿಂದಲೂ, ಕೆಲವು ಅಸಂತುಷ್ಟ ರಾಜರುಗಳ ಕೈವಾಡದಿಂದ—ಮತ್ತು ಸೈನ್ಯಖಾತೆಯಲ್ಲಿಯ ಧಾರ್ಮಿಕ ಭಾವನೆಗಳ ಸೋಂಕಿನಿಂದಾಗಿ ಕೊಂಚ ಮನಸ್ಸಿನ ಸೈನಿಕರ ಅವ್ಯವಸ್ಥಿತ ಪ್ರತಿಕಾರಗಳ ಮೂಲಕ ಅದು ನಡೆದುದರಿಂದಲೂ, ಅದನ್ನು ಸ್ವಾತಂತ್ರ್ಯ ಸಂಗ್ರಾಮವೆಂದು ಕರೆಯಲಾಗದು!' ಎಂದು ಕೆಲವರ ಮತವಾದರೆ ಮತ್ತೆ ಕೆಲವರು 'ಆ ಹೋರಾಟ ನಡೆಸಿದವರೆಲ್ಲರ ಮೂಲ ಉದ್ದೇಶ ಪರಕೀಯ ಆಡಳಿತಗಾರರನ್ನು ಹೊರಗೆ ಓಡಿಸುವುದೇ ಆಗಿದ್ದುದರಿಂದ, ಅದು ಸ್ವಾತಂತ್ರ್ಯ ಸಂಗ್ರಾಮವೇ!' ಎಂದು ಅಭಿಪ್ರಾಯ ಪಡುತ್ತಾರೆ, ಅದೇನೇ ಇರಲಿ, ಅಂದಿನ ಸೈನ್ಯಖಾತೆಯ ಸೈನಿಕರು ಆ ಹೋರಾಟದ ಬೆನ್ನೆಲುಬು ಆಗಿದ್ದರೆಂಬುದು ನಿರ್ವಿವಾದ.

೧೮೫೭ರಲ್ಲಿ ಆ ಹೋರಾಟ ನಡೆಯಿತೆಂಬ ಮಾತನ್ನು ಗಮನಿಸಿದಾಗ—ಅದಕ್ಕೂ ಪೂರ್ವದಲ್ಲಿಯೂ ಈ ಸೈನ್ಯಖಾತೆ ಅಸ್ತಿತ್ವದಲ್ಲಿ ಇದ್ದಿತೆಂಬುದು ಖಂಡಿತ. ಸೈನ್ಯಖಾತೆಯ ಹುಟ್ಟಿನ ಕತೆಯೂ ಬಹು ದೊಡ್ಡದಾಗಿದೆ.

೧೭೪೮ ಜನವರಿ ತಿಂಗಳಲ್ಲಿ—ಈಸ್ಟ್ ಇಂಡಿಯಾ ಕಂಪನಿಯು ಮೇಜರ್ ಸ್ಟ್ರಿಂಜರ್ ಲಾರೆನ್ಸ್ (Stringe lawrence) ಎಂಬವನನ್ನು ಮೊತ್ತಮೊದಲಿಗೆ ಭಾರತೀಯರ ಸೈನ್ಯಪಡೆಯನ್ನು ಮದ್ರಾಸಿನಲ್ಲಿ ನಿಯಮಿಸಿದನು. ಅದೇ ಕಾಲದಲ್ಲಿ, ಭಾರತದಲ್ಲಿ ಫ್ರೆಂಚರೂ ವಸಾಹತಿಗಾಗಿ ಪ್ರಯತ್ನ ನಡೆಸಿದ್ದರು. ಇಂಗ್ಲೀಷರು ಅವರ ಶತ್ರುಗಳಾಗಿದ್ದರು. ಇಂಗ್ಲೆಂಡಿನಿಂದ ಇಂಗ್ಲಿಷ್ ಸೈನಿಕರದೊಂದು ಬಟಾಲಿಯನ್, ಅಡ್ಮಿರಲ್ ಬೊಸ್ಕಾವೆನ್ ಎಂಬವನ ನೇತೃತ್ವದಲ್ಲಿ ಭಾರತಕ್ಕೆ ಬಂದು ಇಲ್ಲಿ ಹೊಸದಾಗಿ ನಿರ್ಮಾಣಗೊಂಡ ಭಾರತೀಯಸೈನ್ಯದ ತುಕಡಿಗೆ ಯುದ್ಧಶಿಕ್ಷಣವನ್ನು ಕೊಟ್ಟಿತು. ಪಾಂಡಿಚೇರಿಯ ಸಲುವಾಗಿ ಇಬ್ಬರಲ್ಲಿಯೂ ನಡೆದ ಕಾಳಗದಲ್ಲಿ ಫ್ರೆಂಚರು ವಿಜಯಿಗಳಾದರು; ಇಂಗ್ಲಿಷರು ಸೋತರು. ಹೊಸದಾಗಿ ನಿರ್ಮಾಣಗೊಂಡ ಭಾರತೀಯ ಸೈನ್ಯಪಡೆಯಿಂದ-ತರಬೇತಿಯ ಕೊರತೆಯ ಮೂಲಕ-ಉಪಯೋಗ ಸಾಕಷ್ಟು ಆಗಲಿಲ್ಲವಲ್ಲ!—ಎಂದು ಕಂಪನಿ ಸರಕಾರ ಕೊರಗಿತು. ಈ ಯುದ್ಧದ ಮೂಲಕ ಮದ್ರಾಸು ಅವರ ಕೈಬಿಟ್ಟಿತು. ಫ್ರೆಂಚರು ಬಲಶಾಲಿಗಳಾದರು. ಆದರೆ ಯುರೋಪಿನಲ್ಲಿ ನಡೆದ ಇಂಗ್ಲಂಡ್–ಫ್ರಾನ್ಸ್ ಯುದ್ಧವು ಮುಕ್ತಾಯಗೊಂಡದ್ದರಿಂದ, ಮದ್ರಾಸು ಮರಳಿ ಕಂಪನಿ ಸರಕಾರದ ವಶಕ್ಕೆ ಬಂದಿತು.

೧೭೫೪ರಲ್ಲಿ ಸೈನ್ಯಖಾತೆಯ ಇತಿಹಾಸದಲ್ಲಿ ಒಂದು ಹೊಸ ಘಟನೆ ಘಟಿಸಿತು. ಆಗ ಕೆಲವೊಂದು ಆಕ್ರಮಿತ ಪ್ರದೇಶದಲ್ಲಿ ಮಾತ್ರ ಕಂಪನಿಸರಕಾರ, ತಾನು ತನ್ನ ವೆಚ್ಚದಿಂದ ನಡೆಸಿದ ಸೈನ್ಯಪಡೆಯನ್ನು ಇರಿಸಿತ್ತು; ಆದರೆ ೧೭೫೪ರಲ್ಲಿ ಇಂಗ್ಲಂಡಿನಿಂದ ಬ್ರಿಟಿಶ್ ಸರಕಾರದ ಸೈನ್ಯಪಡೆ "ಡೋರ್‌ಸೆಟ್ ರೆಜಿಮೆಂಟ್" ಕಂಪನೀ ಸರಕಾರದ ನೆರವಿಗಾಗಿ ಬಂದಿಳಿಯಿತು. ಮುಂದೆ ಮೂರೇ ವರುಷಗಳ ನಂತರ ನಡೆದ ಪ್ಲಾಸೀಕದನ (೧೭೫೭) ಎಲ್ಲರಿಗೂ ತಿಳಿದ ವಿಷಯ. ಕಂಪನಿ ಸರಕಾರ ನಿರ್ಮಿಸಿದ ಬಿಳಿಯ ಸೈನಿಕರ ಪಡೆ, ಭಾರತೀಯ ಸೈನ್ಯಪಡೆ ಮತ್ತು ಇಂಗ್ಲಂಡ್ ಸರಕಾರದ ಒಂದು ರೆಜಿಮೆಂಟು (೨೫೦ ಸೈನಿಕರು)—ಈ ಮೂರೂ ಪಡೆಗಳ ಮೇಲಧಿಕಾರಿಯಾಗಿ ರಾಬರ್ಟ್ ಕ್ಲೈವನೇ ನಿಂತುಕೊಂಡು, ಪ್ಲಾಸೀಕದನವನ್ನು ನಡೆಸಿದ. ಆಗ ಕಂಪನೀ ಸರಕಾರದ ಬಿಳಿಯರ ಪಡೆಯಲ್ಲಿಯ ೮೦೦ ಸೈನಿಕರು, ಭಾರತೀಯ ಸೈನ್ಯಪಡೆಯಲ್ಲಿಯ ೧೦೦೦ ಸೈನಿಕರು, ಹಾಗೂ ಡೋರ್‌ಸೆಟ್ ರೆಜಿಮೆಂಟಿನ ೨೫೦ ಸೈನಿಕರು, ಹೀಗೆ ೨೦೫೦ ಸೈನಿಕರು ಕಂಪನೀ ಸರಕಾರದ ಪರವಾಗಿ ಹೋರಾಡಿದರು. ಪ್ಲಾಸೀಕದನದಲ್ಲಿ ದೊರೆತ ವಿಜಯದಿಂದ ಕಂಪನಿಸರಕಾರ ಭಾರತದಲ್ಲಿ ಭದ್ರವಾಗಿ

ಕಳ ಉಟಿಗೆ ಈ ಯುದ್ಧ ನಡೆದ ಕಾಲದಲ್ಲೇ ಕ್ಲೈವನು ಬಂಗಾಳದಲ್ಲಿ ಮತ್ತೊಂದು ಭಾರತೀಯ ಸೈನ್ಯದಳವನ್ನು ನಿರ್ಮಿಸಿದ. ಆ ಪಡೆಯ ಹೆಸರು—"The first regiment of bengal infantry" (ದಿ ಫಸ್ಟ್ ರೆಜಿಮೆಂಟ್ ಆಫ್ ಬೆಂಗಾಲ್ ಇನ್‌ಫಂಟ್ರಿ) ಎಂದು. ಅದರ ಸಾರ್ಜೆಂಟರು ಮಾಡಿದ್ದರು, ಆ ಪಡೆಯಲ್ಲಿ ಕೇವಲ ಸ್ಥಳೀಯರಿಂದ ಎತ್ತಿಕೊಳ್ಳಬೇಕು ಬಂಗಾಳಿಗಳಿದ್ದರು. ಬಂಗಾಳದಲ್ಲಿ ಈ ಪಡೆಯು ಸಿಪಾಯಿಗಳಾದುದರಿಂದ ಇದಕ್ಕೆ ಆ ಹೆಸರನ್ನು ಕೊಡಲಾಯಿತು. ಆ ಪಡೆಯಲ್ಲಿ ಪಠಾಣರು, ಜಾಟರು, ರಜಪೂತರು ಮತ್ತು ಒಬ್ಬರೋ ಇಬ್ಬರೋ ಬ್ರಾಹ್ಮಣರು—ಇದ್ದರು. ಮಹಮ್ಮದೀಯ ಸೈನಿಕರು ಮಾತ್ರ ಬಹುಸಂಖ್ಯಾತರಾಗಿದ್ದರು. ಬಂಗಾಳದಲ್ಲಿ ಪಠಾಣ-ರಾಗಲೀ ರಜಪೂತರಾಗಲೀ ಜಾಟರಾಗಲಿ ಹೇಗೆ ಸೈನಿಕರಾಗಿ ದೊರೆತರೆಂಬುದು ಸಂದೇಹ ಬರುತ್ತದೆ; ಆದರೆ ಈ ಪಡೆಯಲ್ಲಿ ಸೇರಿದವರೆಲ್ಲ ಒಂದಾನೊಂದು ಸಮಯ ಮೊಗಲರ ಸೈನ್ಯದಲ್ಲಿ ಇದ್ದುಕೊಂಡು ಬಂಗಾಳದತ್ತ ಬಂದವರೇ ಆಗಿದ್ದರು. ಮೊಗಲ ಸೈನಿಕರಾಗಿ ಬಂಗಾಳಕ್ಕೆ ಬಂದು, ಅನೇಕ ಕಾರಣಗಳಿಗಾಗಿ ಮೊಗಲ ಪಡೆಯನ್ನು ತ್ಯಜಿಸಿದವರಿವರು. ಈ ಪಡೆಯ ಸೈನಿಕರಿಗಾಗಿ ಸಮವಸ್ತ್ರ-ಗಳನ್ನು ಕೊಡಲಾಯಿತು. ಕವಾಯತನ್ನು ಕಲಿಸಲಾಯಿತು. ಈ ಪಡೆಯ ಮೇಲಿನ ಅಧಿಕಾರದ ಸ್ಥಾನಗಳಲ್ಲಿ ಬಿಳಿಯರೇ ಇರುತ್ತಿದ್ದರು. ಪ್ಲಾಸಿ ಕಾಳಗದಲ್ಲಿ ಈ ಪಡೆಯೂ ತನ್ನ ಕೌಶಲವನ್ನು ತೋರಿತು. ಈ ಯುದ್ಧದಲ್ಲಿ ಕಂಪನಿ ಸರಕಾರಕ್ಕೆ ತಟ್ಟಿದ ಹಾನಿ ಕೆಳಗೆ ವಿವರಿಸಿದಂತಿದೆ:

ಕಾಳಗದಲ್ಲಿ ಸತ್ತವರು—	೭	ಇಂಗ್ಲಿಷರು
	೧೬	ಭಾರತೀಯರು
ಗಾಯಗೊಂಡವರು—	೧೩	ಇಂಗ್ಲಿಷರು
	೩೬	ಭಾರತೀಯರು

ಆದರೆ ಪ್ರತಿಪಕ್ಷದಲ್ಲಿ ನಾಶನಷ್ಟ ಅಪಾರವಾಗಿದೆ.

೧೭೬೪ರಲ್ಲಿ ಈ ಭಾರತೀಯ ಸೈನ್ಯಶಾಖೆಯಲ್ಲಿ ಒಂದು ದಂಗೆ ನಡೆಯಿತು. ಆ ದೃಷ್ಟಿಯಿಂದ ೧೮೫೭ರಲ್ಲಿ ನಡೆದ ದಂಗೆ ಮೊದಲನೆಯ ದಂಗೆಯಲ್ಲ:—ಎರಡನೆಯ ದಂಗೆ ಎಂದು ಕರೆಯಬೇಕಾಗುತ್ತದೆ. ೧೭೬೪ರಲ್ಲಿ ಭಾರತೀಯ ಸೈನ್ಯ ಪಡೆಗಳ ವ್ಯಕ್ತಿ ನಾಶವನ್ನಾಗಿಸಿದ್ದು ಅದರ ಮೂಲಕವಾಗಿಯೂ ಮತ್ತು ಆಗಿನ ಸೈನಿಕರಿಗೆ ಇದ್ದ [illegible] ಸರಕಾರವಿರದ ವಿರೋಧವು—ಆ ದಂಗೆಗೆ ಕಾರಣ. ಭಾರತದ ಇತಿಹಾಸದಲ್ಲಿ, ಸ್ವಲ್ಪ ಹಿಕ್ಕವೆ ತೋರಿತು. ಆ ದಂಗೆ ನಡೆದು ಶಾಂತಿ ಪ್ರತಿ ಸ್ಥಾಪಿಸಿದ ನಂತರ—ಸೈನ್ಯಶಾಖೆಯಲ್ಲಿ ಪ್ರತಿಜ್ಞಾವಿಧಿ ಜಾರಿಯಲ್ಲಿ ಬಂದಿತು. ಆಗಿನ ಪ್ರತಿಜ್ಞಾಪತ್ರ ಹೇಗಿತ್ತೆಂಬುದನ್ನು ಅವಲೋಕಿಸಿ:

I ...... do swear to serve the Honourable Company faithfully and truly against all their enemies while I continue to receive their pay and eat their salt. I do swear to obey all the orders I may receive from my commanders and officers, never to forsake, abandon my Colours, or turn my back to my enemies, and that I will in all things behave myself like a good and faithful sepoy in perfect obedience at all times to the rules and customs of war.

(ಕಂಪನಿ ಸರಕಾರದಿಂದ ಸಂಬಳ ಪಡೆಯುತ್ತಿರುವವರೆಗೆ ಮತ್ತು ಅದರ ಉಪ್ಪನ್ನು ತಿನ್ನುತ್ತಿರುವವರೆಗೆ ನಾನು ಶತ್ರುಗಳ ಎದುರಾಗಿ ಹೋರಾಡುವೆನು, ನಿಷ್ಠೆಯಿಂದಲೂ ಪ್ರಾಮಾಣಿಕನಾಗಿಯೂ ಸತ್ಯವಾಗಿ ಕಂಪನಿ ಸರಕಾರದ ಸೇವೆಯನ್ನು ಮಾಡುವೆನೆಂದು ಪ್ರತಿಜ್ಞೆಯನ್ನು ಮಾಡುವೆನು. ನನ್ನ ಮೇಲಧಿಕಾರಿಗಳ ಆಜ್ಞೆಗಳನ್ನು ಪಾಲಿಸುವೆನು—ನನ್ನ ಧ್ವಜವನ್ನು ತ್ಯಜಿಸೆನು, ಶತ್ರುವಿಗೆ ಬೆನ್ನು ತೋರಿಸೆನು—ಯುದ್ಧದ ನಿಯಮಗಳಿಗೆ ಬದ್ಧನಾಗಿ ನಡೆಯುವೆನು.)

ಮುಂದೆ ೧೭೭೬ರಲ್ಲಿ ಸೈನ್ಯಶಾಖೆಯ ಆಡಳಿತದ ಸೂತ್ರ ಹಿಡಿದ [illegible]—[illegible] ನಿಯಮಗಳನ್ನು ('Military regulations') ಈ ಸರಕಾರ [illegible] ಪುಸ್ತಕದಲ್ಲಿ ಸೈನ್ಯಶಾಖೆಗಾಗಿ ಕೆಲವು ನಿಯಮಗಳನ್ನು ರೂಪಿಸಿದರು—[illegible].

ಬಹುಬೇಗ ಈ ಸೈನ್ಯಪಡೆಗಳು ವ್ಯವಸ್ಥಿತವಾಗತೊಡಗಿದವು. ಕಂಪನಿ ಸರಕಾರವು ಮದ್ರಾಸಿನಲ್ಲಿ ಮುಖ್ಯ ಕಚೇರಿಯನ್ನು ಮಾಡಿಕೊಂಡುದರ ಮೂಲಕ ಮದ್ರಾಸಿನಲ್ಲಿ ನಿರ್ಮಾಣಗೊಂಡ ಅನೇಕ ಪಡೆಗಳಿಗೆ "ಕರ್ನಾಟಕ ಬೆಟಾಲಿಯನ್" ಎಂಬ ನಾಮಕರಣವಾಗಿ-ತ್ತು. ೧೭೭೦ರಲ್ಲಿ ಒಂದು ಬೆಟಾಲಿಯನ್ನು ಆಗ ಬ್ರಿಗೇಡಿಯರ್ ಜನರಲ್ ಸ್ಮಿತನು ಕಟ್ಟಿದನು. ತನ್ನ ಶಿಸ್ತಿನಿಂದ ಖ್ಯಾತಿ ಗಳಿಸಿದ್ದ ಆ ಬೆಟಾಲಿಯನ್ ಸ್ಥಾಪನೆಯಾದ ೧೭೭೦. ಅದಕ್ಕೆ ದೊರೆತ ಹೆಸರು '10th Regiment, Madras native Infantry' ಎಂದಿತ್ತು. ಆಗ ೩ ಇಂಗ್ಲಿಷ್ ಸೈನ್ಯ ನಾಯಕರು ಮಡಿದರು—ಮಾರ್ಕ್ವಿಸ್ ಕಾರ್ನ್‌ವಾಲೀಸ್ ಎಂಬ ನಾಯಕನ ಬ್ರಿಗೇಡಿಯರ್ ಜನರಲ್ ಸ್ಮಿತ್ ಬೆಟಾಲಿಯನ್ ನಷ್ಟದ ಭಾಗವನ್ನು ಅವರ ವರದಿ ಕೆಳಗೆ ಕೊಟ್ಟಿದೆ:

(ಒಟ್ಟು) ಸೈನಿಕರ ಸಂಖ್ಯೆ	—	೧೨೮
ಮೃತರಾದವರು	—	೬೩
ಗಾಯ	—	೩೯
ಬಿಳಿಯರೂ ಸೈನ್ಯ ನಾಯಕರು	—	೧
ಕಾಣೆಯಾದವರು	—	೨
		೧೦೫
ಒಟ್ಟು		
ಸಾವು—		

ಬ್ರಿಟಿಶ್ ಅಧಿಕಾರಿಗಳು:— ಆಧುನಿಕ ಶಸ್ತ್ರಾಸ್ತ್ರಗಳಿಂದ ಸುಸಜ್ಜಿತ ಅಧಿಕಾರಿಗಳಿದ್ದಾರೆ. ಸಲ್ಯೂಟನ್ನು ಚೆನ್ನಾಗಿ ಮಾಡುತ್ತಾರೆ. ಸಮವಸ್ತ್ರಗಳನ್ನು ಧರಿಸಿರುತ್ತಾರೆ. ಯಾವಾಗಲೂ ಕೆಲಸಕ್ಕೆ ಸನ್ನದ್ಧರಾಗಿರುತ್ತಾರೆ. ಕೆಲವು ಅಧಿಕಾರಿಗಳು ತೀರ ಚಿಕ್ಕವರಿರುತ್ತಾರೆ. ಆದರೆ ಒಳ್ಳೆ ಕ್ರಿಯಾವಂತರಿದ್ದಾರೆ.

ಭಾರತೀಯ ಅಧಿಕಾರಿಗಳು— ಆಧುನಿಕ ಶಸ್ತ್ರಾಸ್ತ್ರಗಳನ್ನು ಧರಿಸುವುದಿಲ್ಲ. ಕತ್ತಿಯನ್ನು ತಿರುವುತ್ತಾರೆ. ಸಮವಸ್ತ್ರಗಳನ್ನು ಧರಿಸುತ್ತಾರೆ. ಮುಖ್ಯ ಅಧಿಕಾರಿ ತನ ಕೆಲಸದಲ್ಲಿ ಒಳ್ಳೆ ನುರಿತವನಿದ್ದಾನೆ. ಒಟ್ಟಿನ ಮೇಲೆ ಸ್ಥಿತಿ ಉತ್ತಮವಾಗಿದೆ.

ಸಾರ್ಜಂಟ್ಸ್ :— ನೀಟಾಗಿದ್ದಾರೆ.

ಸಿಪಾಯಿಗಳು :— ಪ್ರಮಾಣಬದ್ಧರಾಗಿದ್ದಾರೆ ಕೆಲವೊಂದು ಸಿಪಾಯಿಗಳು ಮಾತ್ರ ಕುಳ್ಳರಾಗಿದ್ದಾರೆ. ಉತ್ತಮ ರೀತಿಯಲ್ಲಿ ಪರೇಡ ಮಾಡುತ್ತಾರೆ. ಹವಾಲದಾರರ ಕೆಲಸ ಸಮಾಧಾನಕರವಾಗಿದೆ. ಬ್ಯಾಂಡಿನವರು ಅವ್ಯವಸ್ಥಿತವಾಗಿ ಬಾರಿಸುತ್ತಾರೆ.

ಹೊಸದಾಗಿ ಭರತಿಯಾದವರು :— ಮುಂದೆ ಒಳ್ಳೆಯ ಸೈನಿಕರಾಗುವರೆಂಬ ಭರವಸೆ ಇದೆ. ಬಟಾಲಿಯನ್ ಇವರಿಂದ ಸುಧಾರಿಸಲೂ ಬಹುದು. ”

ಸುಮಾರು ೧೮೭ ವರುಷಗಳ ಹಿಂದಿನ ಈ ರಿಪೋರ್ಟಿನ ಮೇಲಿಂದ ಅಂದಿನ ಭಾರತೀಯ ಸೈನ್ಯದಳ ಹೇಗಿದ್ದಿತೆಂಬುದನ್ನು ಊಹಿಸಬಹುದಾಗಿದೆ.

ಪ್ಲಾಸಿ, ಪಾಟ್ನಾ, ಬಕ್ಸಾರ ಕಾಳಗಗಳಲ್ಲಿಯೂ, ಅಲ್ಲಾಬಾದ ರೋಹಿಲಖಂಡ, ಗ್ವಾಲೀಯರ, ಮುಂತಾದ ಕೋಟೆ-ಕೊತ್ತಲಗಳನ್ನು ವಶಪಡಿಸಿಕೊಳ್ಳುವುದರಲ್ಲಿಯೂ ಈ ಪಡೆಗಳ ಸಹಾಯವನ್ನು ಕಂಪನಿ ಸರಕಾರವು ಧಾರಾಳವಾಗಿ ಬಳಸಿಕೊಂಡಿತ್ತು. ಶ್ರೀರಂಗ ಪಟ್ಟಣದ ಯುದ್ಧದಲ್ಲಿಯೂ ಕಂಪನಿ ಸರಕಾರ ಈ ಪಡೆಗಳನ್ನು ಉಪಯೋಗಿಸಿತು. (೧೭೯೯)

೧೭೪೮ರಿಂದ ೧೮೦೦ರವರೆಗೆ ಸೈನ್ಯಖಾತೆಯ ಇತಿಹಾಸದ ಒಂದು ಘಟ್ಟ ಮುಗಿದಂತಾಯಿತು.

ಮುಂದೆ ೧೯ನೆಯ ಶತಮಾನದ ಪ್ರಾರಂಭದಲ್ಲಿ ಯುರೋಪದಲ್ಲಿ ನೆಪೋಲಿಯನ್ ಯುದ್ಧಗಳು ನಡೆದುವು ಆದರೆ ಆ ಯುದ್ಧಗಳ ಪರಿಣಾಮ ಭಾರತದಲ್ಲಿಯ ಈ ಪಡೆಗಳ ಮೇಲಾಗಲಿಲ್ಲವಾದರೂ, ಈ ಭಾರತೀಯ ಪಡೆಗಳನ್ನು ೪ ಸಲ ಹಿಂದುಸ್ತಾನದ ಹೊರಗೆ ಯುದ್ಧಕ್ಕಾಗಿ ಕರೆದೊಯ್ಯಲಾಯಿತು ಭಾರತದಲ್ಲಿ ಇಂಗ್ಲಿಷ್ ಸರಕಾರವು ಪರಿಪೂರ್ಣವಾಗಿ ಪ್ರಸ್ಥಾಪಿತವಾಗುವ ಪೂರ್ವದಲ್ಲಿಯೇ, ಭಾರತೀಯ ಪಡೆಗಳು ಭಾರತದ ಹೊರಗೆ ಬ್ರಿಟಿಶರ ಪರವಾಗಿ ಯುದ್ಧಮಾಡಿ ಜಯಭೇರಿ ಹೊಡೆದ ಸಂಗತಿ ಬಹುಜನರಿಗೆ ಗೊತ್ತಿಲ್ಲ. ಮೊದಲನೆಯ ಸಮುದ್ರದಾಚೆಯ ಭಾರತೀಯ ಪಡೆಗಳ ಕಾಳಗವೆಂದರೆ, ೧೮೦೧ರಲ್ಲಿ ಅಲೆಕ್ಸಾಂಡ್ರಿಯಾಕ್ಕೆ ಹೋದದ್ದು ೪ ವರುಷಗಳ ತರುವಾಯ, ಅಂದರೆ ೧೮೦೯ರಲ್ಲಿ, ಮದ್ರಾಸ ಬಟಾಲಿಯನನ್ನು ಮಾರಿಶಸ್‌ಕ್ಕೆ ಕಳಿಸಲಾಯಿತು ೧೮೧೦ರಲ್ಲಿ ಮಾರಿಶಸ್ ಫ್ರೆಂಚರಿಂದ ಇಂಗ್ಲಿಶರ ವಶಕ್ಕೆ ಬಂದಿತು. ಅಂದು ಇಂಗ್ಲಿಷರ ಕೈವಶವಾದ ಮಾರಿಶಸ್ ಇಂದಿಗೂ ಅವರ ಕೈಯಲ್ಲಿಯೇ ಇದೆ ಮಾರಿಶಸ್ ಕಾಳಗದಲ್ಲಿ ಹೋರಾಡಿದ ಇಂಗ್ಲಿಷ್ ಪಡೆಗಳ ವಿವರ ಇಂತಿದೆ: ೧೧೩ ಬ್ರಿಟಿಶ್ ಅಧಿಕಾರಿಗಳು, ೨೨೫೩ ಬ್ರಿಟಿಶ್ ಸೈನಿಕರು, ಮತ್ತು ೧೨೪೮ ಭಾರತೀಯ ಸೈನಿಕರು. ಮರುವರುಷ ಎಂದರೆ, ೧೮೧೧ರಲ್ಲಿ ಒಂದು ಭಾರತೀಯ ಪಡೆಯನ್ನು ಮದ್ರಾಸ್ ಬಂದರದಿಂದ ಜಾವಾ ದೇಶಕ್ಕೆ ಕಳಿಸಲಾಯಿತು. ಈ ಪಡೆಯು ಅಲ್ಲಿ ಫ್ರೆಂಚ್ ಮತ್ತು ಡಚ್ಚರನ್ನು ಸೋಲಿಸಿತು. ೧೭ನೆಯ ಸಪ್ಟಂಬರ್ ೧೮೧೧ರಲ್ಲಿ ಜಾವಾ ಮಲಾಯಾ ಬ್ರಿಟಿಶರ ಕೈವಶವಾಯಿತು. ೧೮೧೬ರಲ್ಲಿ ಬ್ರಿಟನ್ನು ತಾನಾಗಿಯೇ ಜಾವಾವನ್ನು ಡಚ್ಚರಿಗೆ ಮರಳಿ ಕೊಟ್ಟಿತು.

೧೮೧೮ರಲ್ಲಿ ಮದ್ರಾಸ್ ಬಟಾಲಿಯನ್ ಸಿಲೋನಕ್ಕೆ ಕಳಿಸಿ, ಅಲ್ಲಿಯ ದಂಗೆಗಳನ್ನು ಇಂಗ್ಲಿಶ್ ಸರಕಾರ ಸದೆಬಡಿಯಿತು.

ಹೀಗೆ ಸುಮಾರು ೧೫೦ ವರುಷಗಳ ಹಿಂದೆಯೇ ಭಾರತೀಯ ಸೈನ್ಯಪಡೆಗಳು ಸಮುದ್ರದಾಚೆಗೆ ಹೋಗಿ ಕಾಳಗವನ್ನೆಸಗಿದ ಸಂಗತಿ ಆಶ್ಚರ್ಯಕರವಾದುದಾಗಿದೆ. ಆದರೆ ಇಂದಿನ ಇತಿಹಾಸ ಇದರ ವಿಷಯವನ್ನು ಮರೆತದ್ದು ವಿಷಾದದ ಸಂಗತಿ.

೧೭೪೮ರಲ್ಲಿಯೇ ಭಾರತೀಯ ಸೈನ್ಯಪಡೆಗಳು ನಿರ್ಮಾಣಗೊಂಡರೂ—ಆ ಪಡೆಗಳಲ್ಲಿ ಸಿಖರು ಇರಲಿಲ್ಲ ಆದರೆ ೧೮೪೯—೫೦ರಲ್ಲಿ ರಣಜಿತಸಿಂಗನ ನೆರವಿನಿಂದ ಸಿಖ ಬಟಾಲಿಯನ್ನು ಮೊತ್ತಮೊದಲಿಗೆ ಸ್ಥಾಪಿಸಲ್ಪಟ್ಟಿತು. ಅಂದಿನಿಂದ ಇಂದಿನ ವರೆಗೆ ಸಿಖರು ಸೈನ್ಯಖಾತೆಯ ಬಹು-ಭಾಗವನ್ನು ವ್ಯಾಪಿಸಿದರು

ಭಾರತದಲ್ಲಿ ತಮ್ಮ ಅಧಿಕಾರವ್ಯಾಪ್ತಿಗಾಗಿ ಕಂಪನಿ ಸರಕಾರ ನಡೆಸಿದ ಪ್ರತಿಕಾಳಗದಲ್ಲಿ ಈ ಸೈನ್ಯಪಡೆಗಳನ್ನೆಲ್ಲ ಬಳಸಿದೆ ಕಾಲಕಾಲಕ್ಕೆ ತಕ್ಕಂತೆ ಭಾರತೀಯರಿಗಾಗಿ ಅಧಿಕಾರ-ಪದವಿಗಳನ್ನು ಕೊಟ್ಟು ಆಕರ್ಷಣೆಯನ್ನು ಕಾಯ್ದುಕೊಳ್ಳುವ ಪ್ರಯತ್ನ ಕಂಪನಿ ಸರಕಾರ ಮಾಡತೊಡಗಿತು. ೧೮೧೭ರಲ್ಲಿ ಸುಭೇದಾರ-ಮೇಜರ್ ಎಂಬ ಹೊಸ ಹುದ್ದೆಯನ್ನು ಮೊಟ್ಟಮೊದಲಿಗೆ ಭಾರತೀಯರಿಗೆ ಕೊಡಲಾಯಿತು.

೧೮೪೦-೪೨ರಲ್ಲಿ ಭಾರತೀಯ ಪಡೆಗಳನ್ನು ಚೀನಾದೇಶಕ್ಕೆ ಕಳಿಸಿಕೊಡಲಾಗಿತ್ತು. ಅಲ್ಲಿ ಈ ಪಡೆಗಳ ಬಲದಿಂದ ಬ್ರಿಟನು ಹಾಂಗಕಾಂಗನ್ನು ಚೀನೀಯರಿಂದ ಪಡೆಯಿತು. ಮದ್ರಾಸ್ ರೆಜಿಮೆಂಟನ್ನೇ ಚೀನಕ್ಕೆ ಕಳಿಸಿಕೊಡಲಾಗಿತ್ತು.

೧೮೫೨ರಲ್ಲಿ ಪಂಜಾಬ ರೆಜಿಮೆಂಟು, ಬಂಗಾಲ ರೆಜಿಮೆಂಟು, ಮದ್ರಾಸ ಬಟಾಲಿಯನ್ನುಗಳನ್ನು ಬ್ರಹ್ಮದೇಶಕ್ಕೆ ಕರೆದುಕೊಂಡು ಹೋಗಿ—ರಂಗೂನನ್ನು ಹಿಡಿದುಕೊಂಡರು. ಅಂದಿನಿಂದ ಬ್ರಹ್ಮದೇಶ ಸಂಪೂರ್ಣವಾಗಿ ಇಂಗ್ಲಿಶರ ಕೈ ಸೇರಿತು.

೧೮೫೭ರ ಮೇ ತಿಂಗಳಲ್ಲಿ ಬಂಡಾಯದ ಕಿಡಿ ಹಾರಿತು. ಆದರ ಇತಿಹಾಸ ಎಲ್ಲರಿಗೂ ಗೊತ್ತಿದ್ದ ಸಂಗತಿ ಬಂಡಾಯ ಪೂರ್ವದ ಸೈನ್ಯಖಾತೆಯ ಇತಿಹಾಸ ಅದ್ಭುತವಾಗಿದೆ; ೧೯೫೭ರ ಕಾಲದ ಸೈನಿಕರಿಗೆ ತಮ್ಮ ಸೈನ್ಯಪಡೆಗಳ ಪೂರ್ವೇತಿಹಾಸದ ಅರಿವು ಸಂಪೂರ್ಣವಾಗಿ ಇರಲೇಬೇಕು. ತಾವು ತೋರಿದ ಶೌರ್ಯ-ಧೈರ್ಯ ತ್ಯಾಗ ಇವುಗಳಿಗೆ ಕಂಪನಿ ಸರಕಾರ ಈ ರೀತಿಯಾಗಿ ಪ್ರತಿಫಲವನ್ನು ಕೊಡುವುದನ್ನು ಕಂಡು, ಹೆಚ್ಚು ನೊಂದುಕೊಂಡೇ ಬಂಡಾಯದಲ್ಲಿ ಧುಮುಕಿರಬಹುದು.

ಸಾಹಿತ್ಯವಿಮರ್ಶೆಯ ಶಿಕ್ಷಣರಂಗ

ಕಳೆದ ಸಂಚಿಕೆಯಲ್ಲಿ ಅಪೇಕ್ಷಿಸಿದಂತೆ, ಈ ಸಲ ವಿಮರ್ಶೆಯ ಮೇಲಾಟಕ್ಕೆ 'ವಸಂತಿಯ ಮಡಿಲಲ್ಲಿ' ಕಥೆಯನ್ನು ಕುರಿತು ೫ ಜನರಿಂದಲೂ, 'ಪ್ರೇಮದ ಇಕ್ಕಟ್ಟು' ರೂಪಕವನ್ನು ಕುರಿತು ೩ ಜನರಿಂದಲೂ ವಿಮರ್ಶೆಗಳು ಬಂದಿವೆ.

'ವಸಂತಿಯ ಮಡಿಲಲ್ಲಿ' ವಿಮರ್ಶಕರು:

೧ ಶ್ರೀ. 'ಗಮಕ' ಕಾಸರಗೋಡು; ೨. ಎನ್. ವಿಶ್ವನಾಥಯ್ಯ, ಯಾದಗಿರಿ; ೩. ಶ್ರೀ. ಕೆ ಎಸ್ ನಾರ್ಣ, ಪೆರಡಾಲ; ೪. ಶ್ರೀ. ಕೆ. ವಿ. ತಿರುಮಲೇಶ, ಪನ್ನಿಪ್ಪಲ (ದ. ಕ.); ೫ ಶ್ರೀ. ಪುಣಿಂಚತ್ತಾಯ ವೆಂಕಟರಾಜ, ಜರ್ನಲಿಸ್ಟ್, ಪೆರಡಾಲ.

'ಪ್ರೇಮದ ಇಕ್ಕಟ್ಟು' ವಿಮರ್ಶಕರು:

೧. ಶ್ರೀ ಎಮ್ಕೆ ಶಂಕರನಾರಾಯಣಭಟ್ಟ, ಎಂ. ಎಸ್ ಕಾಲೇಜ್, ಪೆರಡಾಲ. ೨. ಶ್ರೀ ಭೀಮರಾಯ ಬ. ಗೋಡಿ, ಆರ್. ಎಲ್. ಎಸ್. ಹೈಸ್ಕೂಲ್, ಧಾರವಾಡ. ೩. ಶ್ರೀ. ಕೆ. ಎಸ್. ಶರ್ಮಾ, ವಾಣೀಮಂದಿರಂ, ಕಾಸರಗೋಡು.

ಎಲ್ಲ ವಿಮರ್ಶೆಗಳನ್ನೂ ನಮ್ಮ ಸಂಪಾದಕ ಸಮಿತಿಯವರೇ ನೋಡಿ ನಿರ್ಣಯವನ್ನು ಕೊಟ್ಟಿದ್ದಾರೆ:

'ವಸಂತಿಯ ಮಡಿಲಲ್ಲಿ' ಕತೆಯ ವಿಮರ್ಶೆಗಳಲ್ಲಿ ಶ್ರೀ. ಕೆ. ವಿ. ತಿರುಮಲೇಶ ಮತ್ತು ಶ್ರೀ. ಪುಣಿಂಚತ್ತಾಯ ವೆಂಕಟರಾಜ ಅವರ ವಿಮರ್ಶೆಗಳು ಅತ್ಯುತ್ತಮವಾಗಿವೆ. ಶ್ರೀ. ಕೆ. ಎಸ್. ನಾರ್ಣ ಅವರದು ಚೆನ್ನಾಗಿದೆ. ಮಿಕ್ಕುವು ಸಾಮಾನ್ಯ.

'ಪ್ರೇಮದ ಇಕ್ಕಟ್ಟು' ನಾಟಕದ ವಿಮರ್ಶೆಗಳಲ್ಲಿ ಶ್ರೀ. ಕೆ. ಎಸ್. ಶರ್ಮಾ ಅವರದು ಅತ್ಯುತ್ತಮವಾಗಿದೆ ಮಿಕ್ಕವೆರಡೂ ಸಾಮಾನ್ಯವಾಗಿವೆ

ಮುಂದಿನ ಸಂಚಿಕೆಯ ಮೇಲಾಟಕ್ಕಾಗಿ, ಈ ಸಂಚಿಕೆಯಲ್ಲಿ ಪ್ರಕಟವಾದ 'ಸ್ಮೃತಿ' ಎಂಬ ಜೀವನಚಿತ್ರವನ್ನಾಗಲಿ, 'ಟ್ರೊಕಾಪಿ' ಎಂಬ ವ್ಯಂಗ್ಯರೂಪಕವನ್ನಾಗಲಿ ಕುರಿತು ವಿಮರ್ಶೆಬರೆದು ಕಳುಹಬೇಕು.

— ಸಂಪಾದಕರು

ವಸಂತಿಯ ಮಡಿಲಲ್ಲಿ

(ಅನುವಾದಿತ ಸಣ್ಣಕತೆ)

ಶ್ರೀ. ಕೆ. ವಿ. ತಿರುಮಲೇಶ, ಪನ್ನಿಪ್ಪಲ, ಕಾಸರಗೋಡು

'ವಸಂತಿಯ ಮಡಿಲಲ್ಲಿ' ಕತೆಯು ಹೊಸ ಮಾದರಿಯ ಕಥನ ತಂತ್ರದಿಂದ ಹೊಸೆಯಲ್ಪಟ್ಟು ಬಹಳ ಸುಂದರವಾಗಿದೆ. ಕತೆ ಮೊದ ಮೊದಲು ಅರ್ಥವಾಗುವುದಿಲ್ಲ ಸಂಪೂರ್ಣ ಓದಿಯಾದ ಅನಂತರ ಅದರ ಮಧುರರುಚಿ ಸಿಕ್ಕುತ್ತದೆ ಮಾನವಜೀವ ದ ಮೇಲೆ ಮಾನವ ನಡೆಸುವ ರುದ್ರತಾಂಡವನೃತ್ಯ ಇಲ್ಲಿಯ ಕಥಾವಸ್ತು. ಹತ್ತು ಜನರ ಕಪಟದಿಂದಾಗಿ ಸಹಸ್ರ ಜನರ ಮೇಲೆ ಉಂಟಾಗುವ ಪರಿಣಾಮದ ಭೀಕರತೆ, ಆಡಳಿತೆಯ ದುರ್ವ್ಯವಸ್ಥೆಯಿಂದಾಗಿ ಎಂತೆಂತಹ ಸುಂದರಜೀವ, ಜೀವನಗಳು ಕಾಲನ ಕರಾಳ ದವಡೆಯೊಳಗೆ ಸಿಕ್ಕಿ ಜರ್ಜರಿತವಾಗಿ ಲಯಿಸಬಹುದೆಂಬುದನ್ನು ಕತೆ ತೋರಿಸಿಕೊಡುತ್ತದೆ. ಇಂದಿನ ಜನತೆಯನ್ನೂ ಸರಕಾರವನ್ನೂ ಹೊಡೆದೆಬ್ಬಿಸುವ ಒಂದು ಕ್ರಾಂತಿಕಾರೀ ಕತೆ ಇದು

ಕತೆಯಲ್ಲಿ ಪೂರ್ವಾರ್ಧ ಮತ್ತು ಉತ್ತರಾರ್ಧವೆಂದು ಎರಡು ವಿಭಾಗಗಳನ್ನು ಮಾಡಬಹುದು. ಅವಘಡದ ಮೊದಲನೆಯ ರಂಗ—

ಅವಘಡಾನಂತರದ ರಂಗ. ಮೊದಲನೆಯ ರಂಗದಲ್ಲಿ—ಜೀವನದ ಕಹಿಯು ಮತ್ತು ಸಿಹಿಯು ಸಮ್ಮಿಶ್ರಣ ಹೆಣೆಯಲಾಗಿದೆ. ಅದಕ್ಕೆ ಬೇಕಾಗಿ ಬಹಳಷ್ಟು ಪಾತ್ರಗಳಿವೆ. ಜೀವನದ ವಿವಿಧಮುಖಗಳನ್ನು ಪೂರ್ವಾರ್ಧರಂಗದಲ್ಲಿ ಕಾಣಬಹುದು. ಉತ್ತರಾರ್ಧದಲ್ಲಿ ಎಲ್ಲರೂ ಒಂದೇ. ಎಲ್ಲರ ಪರಿಣಾಮವೂ ಒಂದೇ ಪರಿಮಾಣದಲ್ಲಿ ಕೊನೆಗೊಳ್ಳುತ್ತದೆ. 'ವಸಂತಿ' ನದಿಯಲ್ಲಿ ಎಲ್ಲರೂ ಲಯಿಸಿ ಹೋಗುತ್ತಾರೆ. ಪೂರ್ವರಂಗದಿಂದ ಉತ್ತರರಂಗಕ್ಕೆ ಸ್ವರ್ಗ-ನರಕಗಳಷ್ಟು ಅಂತರವಿದೆ! ಆದರೆ ಮಾನವ—ಆ ಪೈಶಾಚೀ ಮಾನವ—ಸ್ವರ್ಗವನು ಕ್ಷಣಾರ್ಧದಲ್ಲಿ ರೌರವ ನರಕವಾಗಿಸಬಲ್ಲನು. ವಸಂತಿಯ ಮಡಿಲಲ್ಲಿ ಸಹಸ್ರ ಜನರ—ಜನರ ಜೀವನದ—ಪ್ರಾಣಾಹುತಿಯಾಗುತ್ತದೆ.

ಇದರಲ್ಲಿ ಪ್ರತ್ಯಕ್ಷವಾಗಿ ಮತ್ತು ಅಪ್ರತ್ಯಕ್ಷವಾಗಿ ಬರುವ ಎಲ್ಲ ಪಾತ್ರಗಳೂ ಜೀವಕಳೆಯಿಂದ ಸ್ಪಂದಿಸುತ್ತವೆ. ಕಥಾರಚಯಿತರ ಚಾತುರ್ಯವು ಸೀಮೆಮುಟ್ಟಿದೆ. ಶೈಲಿಯಲ್ಲಿ ಜೀವನದ—ವಿವಿಧ ಮುಖಗಳ ಜನರು ಕುಳಿತುಕೊಂಡು—ನಿಂತುಕೊಂಡು ಇದ್ದಾರೆ. ಇದರಲ್ಲಿ ಬರುವ ಕಾಡಿಗೆ ಬಾಬಾನ ಪಾತ್ರ ಸಣ್ಣದಾದರೂ ಪರಿಣಾಮಕಾರಿಯಾಗಿದುದು. ಬಂಡಿಯಲ್ಲಿ ಅವನ ಭಾಷಣ ನಡೆದೇ ಇದೆ. ಹೊಟ್ಟೆಯ ಪಾಡಿಗೆ ಅವನು ಬೊಬ್ಬಿಡುತ್ತಿದ್ದಾನೆ: "ಯಾರ ಕಣ್ಣಲ್ಲಿ ಪರೆ ಬಂದಿದೆಯೋ—ಉಬ್ಬಿದೆಯೋ—ಹೂ ಬಿದ್ದಿದೆಯೋ—ಹೇಳಿರಿ—ನಾನು ಅವರ ಸೇವೆಗಾಗಿ ಹಿಮಾಲಯದ ಕಡೆಯಿಂದ ತಂದ ಬೇರಿಯುಕ್ತ ಕಾಡಿಗೆಯನ್ನು ಕೊಡುವೆನು—ಒಂದೇ ಉಪಚಾರದಲ್ಲಿ—" ಎಲ್ಲರ ಸೇವೆ ಮಾಡಲಿಕ್ಕಾಗಿ ಅವನು ಆ ರೀತಿ ಕೂಗುವುದಿಲ್ಲ. ಆದರೆ ಅವನ ಗೇಣುದ್ದದ ಹೊಟ್ಟೆ ಎಷ್ಟು ದಿನಗಳಿಂದ ಅನ್ನ ಕಂಡಿಲ್ಲವೋ ಯಾರು ಬಲ್ಲರು? ಅವನಿಗೊಬ್ಬಳು ಹೆಂಡತಿಯಿರಬಹುದಲ್ಲವೇ? ಮಕ್ಕಳು—ಮರಿಗಳು—? ದಿನನಿತ್ಯದ ಕಾಡಿಗೆ ವ್ಯಾಪಾರದಿಂದ ಅವರ ಹೊಟ್ಟೆಗೆ ಸ್ವಲ್ಪವಾದರೂ ಕೂಳು ಸಿಗಬೇಕಾಗಿರಬಹುದು. ಅಂದು ಕೂಡಾ ನಾಲ್ಕು ಕಾಸು ಸಂಪಾದಿಸಲು—ಸಾಯುವವರೆಗೆ ಜೀವಿಸಲು—ಕಾಡಿಗೆ ಹಿಡಿದು ಹೊರಟಿದ್ದ. ಆದರೆ—ಆದರೆ ಅವನು ಕೂಡ ಪ್ರೇತಾತ್ಮನಾಗಿ ವಸಂತಿಯ ಮಡಿಲಲ್ಲಿ ಬಿದ್ದಿದ್ದಾನೆ. ಅಂತೆಯೇ ಅಮೃತಾಂಜನದ ಡಬ್ಬಿ ಹಿಡಿದು ನಿಂತಿದ್ದವನೂ ಕೂಡ. ಅವರ ಜೀವ ಹೇಗೋ ಹೋಯಿತು: ಆದರೆ—ಆದರೆ ಅವರ ದುರ್ಬಲರಾದ ಹೆಂಡಿರು ಮಕ್ಕಳ ಜೀವನ ಯಾವ ರೀತಿ ಸಾಗಬೇಕು?...... ಮೇಲೆ ಸಾಮಾನಿಡುವ ಸ್ಥಳದಲ್ಲಿ ಒಬ್ಬ ಸಿಪಾಯಿಯು ಕುಳಿತುಕೊಂಡು ಕೊಳಲು ನುಡಿಸುತ್ತಿದ್ದ, 'ಮದನಾ ತೇರೀ ಗಲೀ ಮೇ, ಜಾನಾ ತೇರೀ ಗಲೀ ಮೇ' ಅವನಿಗೂ ಒಬ್ಬಳು ಪ್ರಣಯಿನಿಯಿರಬಹುದು. ಅವಳ ದರ್ಶನಕ್ಕಾಗಿ ಅವನು ಹಾತೊರೆಯುತ್ತಿರಬಹುದು. ಅದಕ್ಕಾಗಿಯೇ—ಅವಳ ದರ್ಶನಕ್ಕಾಗಿಯೇ—ಅವನು ಹೊರಟಿರಬಹುದು. ಗಾನದ ಮೂಲಕ ತನ್ನ ವಿರಹವ್ಯಥೆಯನ್ನು ತೋಡಿಕೊಳ್ಳುತ್ತಿರಬಹುದು ಪಾಪ! 'ಮೇಘದೂತ'ದ ಯಕ್ಷನ ನೆನಪಾಗುತ್ತದೆ. ಸರಕಾರದಿಂದ ನಿಯಮಿಸಲ್ಪಟ್ಟ ಸಿಪಾಯಿಯೊಬ್ಬನಿಗೆ ತನ್ನ ಪ್ರಿಯಳೊಡನೆ ಇರುವುದಕ್ಕೆ ಸಮಯವೆಲ್ಲಿದೆ? ಅವನು ಆಗಾಗ ಅತ್ತಿತ್ತ ಹೋಗಬೇಕಾಗುತ್ತದೆ. ಸದಾ ವಿರಹಿಯಾದ ಸಿಪಾಯಿಯು ಅಂದು ತನ್ನ ಪ್ರಣಯಿನಿಯ ದರ್ಶನಕ್ಕಾಗಿ ಹೊರಟಿರಲೂಬಹುದು. ಮೇಘದೂತನ ಬದಲು ಗಾನದೂತದಿಂದ ಸುದ್ದಿಯನ್ನು ಪ್ರಣಯಿನಿಗೆ ತಿಳಿಸುತ್ತಿರಬಹುದು. ಆದರೆ ಕ್ಷಣಾರ್ಧದಲ್ಲಿ ಅವನ ಆಶಾಗೋಪುರ ಪುಡಿಪುಡಿಯಾಗಿತ್ತು. ಸಿಪಾಯಿ ಜರ್ಜರಿತನಾಗಿ ವಸಂತಿಯ ಮಡಿಲಲ್ಲಿ ಮಲಗಿದ. ಅವನ ಜೀವ ಹೋದಮೇಲೆ ಆಶಾಗೋಪುರ ಉಳಿಯುತ್ತದೆಯೇ? ಮತ್ತೆ ಆ ನಿರ್ಭಾಗ್ಯ ಹೆಣ್ಣು—ಅವಳಂತೂ ಸದಾ ವಿರಹಿಣಿ. ಅವಳು ಇದ್ದೂ ಸತ್ತ ವ್ಯಕ್ತಿಯಂತೆಯೇ ಸರಿ... ಅಲ್ಲೇ ಬದಿಯಲ್ಲಿ ಹೊಸತಾಗಿ ಮದುವೆಯಾದ ಜೋಡಿಯೊಂದು ಕುಳಿತಿತ್ತು. ಇನ್ನೂ ದಾಂಪತ್ಯ ಸುಖವನ್ನು ಅನುಭವಿಸಿರಲಿಲ್ಲ. ಇಬ್ಬರೂ ಸಂತೋಷಸಾಗರದಲ್ಲಿ ತೇಲಾಡುತ್ತಿದ್ದರು.

ಆದರೆ ಆ ದುರಂತ ಹಠಾತ್ತಾಗಿ ಸಂಭವಿಸಿತು. ಎಲ್ಲರೂ ವಸಂತಿಯ ಮಡಿಲಲ್ಲಿ ಮಲಗಿದರು. ಸುಖಜೀವನದ ಹಂಬಲ ವಸಂತಿಯ ಪ್ರವಾಹದೊಂದಿಗೆ ಲೀನ-ವಿಲೀನವಾಯಿತು...... ಕತೆಯಲ್ಲಿ ಬರುವ ತಂಗಿ—ಸತ್ಯನಾರಾಯಣನ ಹೆಂಡತಿಯ ಪಾತ್ರವೂ, ಸತ್ಯನಾರಾಯಣನ ಪಾತ್ರವೂ ಬಹಳ ಪ್ರಾಮುಖ್ಯವಾದುವು. ಕಥಾನಾಯಕನಿಗೆ ಅವಳು ಆ ಒಂದು ಕ್ಷಣದಲ್ಲಿ ತೋರಿಸುವ ಔದಾರ್ಯ ಬಹಳ ಮುಖ್ಯವಾದದ್ದು. ಕಥಾನಾಯಕನು ಕುಳಿತುಕೊಳ್ಳಲು ಸ್ಥಳಸಿಕ್ಕದೆ ನಿಂತುಕೊಂಡಿರುವಾಗ—ಅವಳು—ಗರ್ಭಿಣಿಯಾದ ಅವಳು, ಅದನ್ನು ಒತ್ತಟ್ಟಿಗೆ ಕುಳಿತು ಅವನಿಗೆ ಕೂಡಲು ಜಾಗಕೊಡುತ್ತಾಳೆ. 'ಕುಳಿತುಕೊಳ್ಳಣ್ಣಾ' ಎಂದು ಅವಳು ಹೇಳುವಾಗ—ಹಾ! ಅದೆಷ್ಟು ಮೃದುವಾಗಿತ್ತು ಅವಳ ಬೇಡಿಕೆ? ಕಥಾನಾಯಕನ ಮನಸ್ಸಿನಲ್ಲಿ ವಿವಿಧವಿಚಾರಲಹರಿಗಳೇಳುತ್ತವೆ. 'ಅಣ್ಣಾ'—ಎಷ್ಟೊಂದು [illegible]! [illegible] ನಿಜವಾಗಿಯೂ! ಈ ವಿಚಾರತರಂಗ [illegible] "ಅಣ್ಣಾ! ಅತ್ತಿಗೆ ಬಂದ ಮೇಲೂ ನನ್ನನ್ನು ಹೀಗೆಯೇ ಪ್ರೀತಿಸುವೆಯಾ?" ಜಾನಪದ ಜೋಗುಳವೊಂದರಲ್ಲಿ ತಂಗಿ ಅಣ್ಣನಲ್ಲಿ ನಡೆಯುವ ಎರಡು ಮಾತು ಅವನಿಗಾಗ ನೆನಪಿಗೆ ಬರುತ್ತದೆ.

ಸತ್ಯನಾರಾಯಣ—ಅವಳ ಗಂಡ—ಬಹು [illegible] ಅವಳನ್ನು ಹಳ್ಳಿಯ ತವರು ಮನೆಗೆ ಕಳುಹಲಿಕ್ಕಾಗಿ ಹೊರಟಿದ್ದಾನೆ. ಅವಳಿಗೆ ಎರಡನೆಸಲ ಬಸುರಿ. ಮಗುವೊಂದು ಅವಳ ತೊಡೆಯ ಮೇಲೆ ಕುಳಿತಿದೆ. ಸತ್ಯನಾರಾಯಣನು ಒಂದು [illegible] ಹೇಳುತ್ತಿದ್ದಾನೆ. '[illegible] ಕಾಲದಿಂದ ತನ್ನ [illegible] ತಂದೆ-ತಾಯಿಗಳ ಮತ್ತು ತನ್ನ [illegible] ಮೊಟ್ಟಮೊದಲ [illegible] ಆ ಹೊಸ ಅತಿಥಿಯ [illegible] ಅದರೆ [illegible] ವಸಂತಿಯ ಮಡಿಲಲ್ಲಿ ಆ ಅಕ್ಕ [illegible] ಅತಿಥಿಯೊಂದಿಗೆ ತಣ್ಣಗಾಗಿದ್ದವರು—ತನ್ನ ಮಗನನ್ನು [illegible] 'ತಾನು ಕೊಡುವುದಿಲ್ಲ—ಬಿಡುವುದಿಲ್ಲ—' ಎಂದು ಹೇಳುವಂತೆ [illegible]

([illegible]ನೇಯ ಪುಟಕ್ಕೆ)

ಸಾದರ ಸ್ವೀಕಾರ

ಕನ್ನಡ ಸಾಹಿತ್ಯಸಮ್ಮೇಳನದ ಕಥೆ (ಸಂಗ್ರಹಾತ್ಮಕ ಪುಸ್ತಕ). ಸಂಪಾದಕರು ಶ್ರೀ. ಸಂಗೂರ ಬಾಲಕೃಷ್ಣ ಮತ್ತು ಶ್ರೀ. ಸಿದ್ದೇಶ್ವರ ಶಾಸ್ತ್ರಿ ಅವರು. ಪ್ರಕಾಶಕರು ಸಮಾಜಪುಸ್ತಕಾಲಯ ಧಾರವಾಡ. ಕ್ರೌ. ೮. ೧೩೬ ಪುಟಗಳು. ಬೆಲೆ ೨-೮-೦

೩೦ CHINA TODAY (ಇಂಗ್ಲಿಷ್ ಪತ್ರಿಕೆಯ ೧೦-೧೧ನೆಯ ಸಂಚಿಕೆಗಳು. ಸಂಪಾದಕರು ಶ್ರೀ. ಚೆನ್ ಯು ಶಿ ಅವರು. ಪ್ರಕಾಶಕರು ಹಿಂದೀ ಚೀನಿ ಪಬ್ಲಿಕೇಷನ್— ಭಾರತದಲ್ಲಿಯ ಚೀನಾ ರಾಯಭಾರ ಕಚೇರಿ, ನ್ಯೂಡೆಲ್ಲಿ. ಡೆ. ೧/೮ ೩೮ ಪುಟಗಳು.

೩೧ ಸ್ವಪ್ನದರ್ಶಿ ಮತ್ತು ಇತರ ಏಕಾಂಕ ನಾಟಕಗಳು (ಏಕಾಂಕ ನಾಟಕ ಸಂಗ್ರಹ). ಬರೆದವರು ಶ್ರೀ. ಕೀರ್ತಿನಾಥ ಕುರ್ತಕೋಟಿ ಯವರು. ಧಾರವಾಡದ ಮನೋಹರ ಗ್ರಂಥಮಾಲೆಯ ೧೬೩ನೆಯ ಕುಸುಮ. ಕ್ರೌ. ೮. ೧೬೩ ಪುಟಗಳು; ಬೆಲೆ ೧ರೂ. ೪ ಆ. ಪೈ.೧೫

೩೨ ಗಂಗಿಮ್ಮ ಮತ್ತು ಕೆಂಗಾವಲಾಯ (ಸ್ವತಂತ್ರ ಸಾಮಾಜಿಕ ಕಾದಂಬರಿ) ಲೇಖಕರು ಶ್ರೀ. ರಂ. ಶಾ. ಲೋಕಾಪುರ (ಪ್ರಬೋಧ). ಮನೋಹರ ಗ್ರಂಥಮಾಲೆಯ ೧೬೬-೬೭ನೆಯ ಕುಸುಮ. ಕ್ರೌ. ೮. ೩೨೦ ಪುಟಗಳು. ಬೆಲೆ ೩ರೂ. ೧೨ ಆ. ಪೈ.

೩೩ ಆ ಮನೆ (ಏಕಾಂಕದ ನಾಟಕ) ಬರೆದವರು ಶ್ರೀ. ಕೀರ್ತಿನಾಥ ಕುರ್ತಕೋಟಿಯವರು. ಮನೋಹರ ಮ. ಗ್ರಂ. ಮಾಲೆಯ ೧೬೨ನೆಯ ಕುಸುಮ. ಕ್ರೌ. ೮. ೯೬ ಪುಟಗಳು; ಬೆಲೆ ೧೨ ಆಣೆ.

೩೪ ಶ್ರೀ. ಗುರುರಾಜ ಭಜನಾವಳಿ (ಭಕ್ತಿ ಗೀತೆಗಳ ಸಂಗ್ರಹ). ರಚಿಸಿದವರು ಬೇರೆ ಬೇರೆ ಭಕ್ತ ಕವಿಗಳು. ಪ್ರಕಾಶಕರು ಶ್ರೀಗುರುರಾಜ ಸೇವಾಸಂಘ, ಬೀದರ. ಡೆ. ೧/೧೬ ೬೦ ಪುಟಗಳು. ಬೆಲೆ ೩೩ ನ. ಪೈ.

೩೫ ASIAN ARTISTS IN CRYSTAL (ಚಿತ್ರಗಳ ಮತ್ತು ಚಿತ್ರಕಾರರ ಸಚಿತ್ರ ಪರಿಚಯ) ನ್ಯೂಯಾರ್ಕ್ ನಗರದ ಸ್ಟ್ಯೂಬನ್ ಗ್ಲಾಸ್ ಕಂಪನಿ ಯಲ್ಲಿ ಪ್ರದರ್ಶಿತವಾದ ಏಶಿಯಾಖಂಡದ ವಿವಿಧ ರಾಷ್ಟ್ರಗಳಲ್ಲಿಯ ಚಿತ್ರಕಾರರ ಕೃತಿಗಳನ್ನು ಇದರಲ್ಲಿ ನೋಡಬಹುದು. ಯುನೈಟೆಡ್ ಸ್ಟೇಟ್ಸ್ ಇನ್ಫರ್ಮೇಶನ್ ಸರ್ವಿಸ್ ಇಂಡಿಯಾ ಅವರಿಂದ ಬಂದಿದೆ. ರಾ. ೮ ೫೪ ಪುಟಗಳು.

೩೬ ಸೋವಿಯೆತ್ ದೇಶ (ಸಚಿತ್ರ ಕನ್ನಡ ಪಾಕ್ಷಿಕ ಪತ್ರಿಕೆ). ಸಂಪಾದಕರು ಶ್ರೀಮಾನ್ ಜಿ. ಎಫಿಮೊವ್ ಅವರು. ಭಾರತದೇಶದ ಸೋವಿಯೆಟ್ ದೂತಾವಾಸ, ೨೫ ಬಾರಾಖಂಬಾ ರಸ್ತೆ, ನ್ಯೂಡೆಲ್ಲಿ—ಇವರು ಪ್ರಕಾಶಕರು. ಡೆ ೧/೪ ೪೦ ಪುಟಗಳು. ಪ್ರತಿಸಂಚಿಕೆಗೆ ೨೦ ನ. ಪೈಸೆ. ಪ್ರಕಾಶನದೃಷ್ಟಿಯಿಂದ ಆದರ್ಶವಾದ ಪತ್ರಿಕೆಯೆಂದು ಹೇಳಬಹುದು. ಪುಟಗಳಲ್ಲಿಯೂ ಸೋವಿಯೆಟ್ ರಶಿಯಾದ ವಿವಿಧಮುಖ ಪ್ರಗತಿಯ ಪರಿಚಯವನ್ನು ನಾವು ಕಂಡು ಕೊಳ್ಳಬಹುದು. ಭಾರತದ ಎಲ್ಲ ಪ್ರಾದೇಶಿಕ ಭಾಷೆಗಳಲ್ಲಿಯೂ ಪ್ರಕಟಿಸುತ್ತಿರುವ ಈ ಪತ್ರಿಕೆಯನ್ನು ನೋಡಿದರೆ, ಸೋವಿಯೆಟ್ ರಶಿಯಾದವರ ಪರದೇಶದಲ್ಲಿಯ ಪ್ರಚಾರದಕ್ಷತೆಯು ಎಲ್ಲರಿಗೂ ಆಶ್ಚರ್ಯವೆನ್ನಿಸುವಂತಿದೆ.

೩೭ ಸುಭಾಷಿತಶತಕಮ್ (ಸಂಸ್ಕೃತ ಭಾಷೆಯ ಬಿಡಿಕಾವ್ಯ) ರಚಿಸಿದವರು ಶ್ರೀಮಾನ್ ಸಾಲಿ ರಾಮಚಂದ್ರರಾಯರು. ಪ್ರಕಾಶಕರು ಶ್ರೀ. ಉಡುಪಿ ಪೇ. ಬಿ., ಸಂಸ್ಕೃತ ಪ್ರಕಾಶನ ಧಾರವಾಡ, ಅವರು. ಕ್ರೌ. ೮. ಸುಮಾರು ೫೦ ಪುಟಗಳು. ಬೆಲೆ ೧-೦-೦

೩೮ THE ATOM IN OUR HANDS (ಸಚಿತ್ರ ಪರಿಚಯಾತ್ಮಕ ಪುಸ್ತಕ) ಪ್ರಕಾಶಕರು ಯುನೈಟೆಡ್ ಸ್ಟೇಟ್ಸ್ ಇನ್ಫರ್ಮೇಶನ್ ಸರ್ವಿಸ್, [illegible], ನ್ಯೂ ಡೆಲ್ಲಿ. ಕ್ರೌ. ೮. ೩೬ ಪುಟಗಳು.

ಅಣುಶಕ್ತಿಯ ವಿಧಾಯಕ ಪ್ರಯೋಜನಗಳಿಗೆ ಸಂಬಂಧಿಸಿದ ವಿಷಯ, ವಿವಿಧ ಸಂದರ್ಭ ಚಿತ್ರಗಳೊಂದಿಗೆ ಈ ಪುಸ್ತಕದಲ್ಲಿ ವಿವರಿಸಲ್ಪಟ್ಟಿದೆ.

ಕನ್ನಡ ಕತೆಗಾರರಲ್ಲಿ ಬಿನ್ನಹ

ಕನ್ನಡ ಸಣ್ಣಕತೆಗಾರರ ಪರಿಚಯ ಮಾಡಿ ಕೊಡುವ ಒಂದು ಕೈಹೊತ್ತಿಗೆಯನ್ನು ಪ್ರಕಟಿಸುವ ಕಾರ್ಯ ಕೈಕೊಂಡಿದ್ದೇವೆ. ಅದಕ್ಕಾಗಿ ಕನ್ನಡಕತೆಗಾರರೆಲ್ಲರೂ ದಯವಿಟ್ಟು ಕೆಳಗಿನ ವಿಷಯಗಳನ್ನು ನಮಗೆ ಪೂರೈಸಬೇಕು. ಈ ವಿಷಯದ ಜೊತೆಗೆ ಮೂರು ರೂಪಾಯಿಗಳನ್ನು ಸಹಾಯಧನವೆಂದು ಕಳಿಸಬೇಕಾಗಿ ವಿನಂತಿ. ಧಾರವಾಡದ ಕತೆಗಾರರೆಲ್ಲರೂ ಇದಕ್ಕೆ ಈಗಾಗಲೇ ಸಹಕರಿಸಿದ್ದಾರೆ. ಗ್ರಂಥ ಪ್ರಕಟವಾಗಿದಮೇಲೆ, ತಮಗೆ ಒಂದು ಪ್ರತಿ ಕಳಿಸಲಾಗುವುದು.

ಕಳುಹಿಸಬೇಕಾದ ವಿವರ:— ಪೂರ್ಣ ಹೆಸರು, ಕಾವ್ಯನಾಮ, ಜನನ, ಜನ್ಮಸ್ಥಾನ, ಉದ್ಯೋಗ, ಬಲ್ಲಿರುವ ಭಾಷೆಗಳು, ಪ್ರಕಟಿಸಿದ ಕಥಾಸಂಕಲನಗಳು ಬಿಡಿ ಕತೆಗಳು, ಪ್ರಕಟಣೆಯ ದಿನಾಂಕ ಮತ್ತು ಪ್ರಕಾಶಕರು, ಇನ್ನುಳಿದ ಸಾಹಿತ್ಯಕೃತಿಗಳು ಮುಂತಾದುವುಗಳನ್ನು ಆದಷ್ಟು ಸಂಕ್ಷಿಪ್ತವಾಗಿ, ಕೂಡಲೇ ಕಳುಹಿಸಬೇಕಾಗಿ ಬೇಡಿಕೆ.

ಇತಿ ತಮ್ಮ ವಿಶ್ವಾಸದ

ಧಾರವಾಡ
೨೮—೭—೧೯೫೭.

ಶ್ರೀ. ಜಿ. ಎಸ್. ಕುಲಕರ್ಣಿ A. A. B. T.
ಜನತಾ ಕಾಲೇಜ ಧಾರವಾಡ

ಶ್ರೀ. ವಿಷ್ಣು ನಾಯಕ B. A. (Hons.)
ಮಂಗಳವಾರ ಪೇಟೆ, ಧಾರವಾಡ

ಕರ್ನಾಟಕದಲ್ಲಿ ಭಾವಗೀತಗಾಯನ ಬೆಳೆಯುಬೇಕಾಗಿದೆ!

ಹಾಡಲಿಕ್ಕೆ ಬರುವಂತಹ ಕವಿತೆಗಳೇ ನಮ್ಮಲ್ಲಿ ಇಲ್ಲವೆಂದು

ಸಂಗೀತಗಾರರ ಆಕ್ಷೇಪಣೆ!

ಇದು ನಿಜವಾದ ಆಕ್ಷೇಪಣೆಯೆಂದು ನಂಬುವಿರಾ ?

ನಿಜವಲ್ಲವೆಂಬುದರ ಪ್ರತ್ಯಕ್ಷ ಸಾಕ್ಷಿಗಳಾಗಿ

'ಆನಂದಕಂದ' ಅವರ ಈ ಗೀತಸಂಕಲನಗಳಿವೆ :

ಮುದ್ದನ ಮಾತು (ಶಿಶುಭಾವದ ಗೀತಗಳು)	೦—೧೨—೦
ಒಡನಾಡಿ (ನಲ್ವಾಡುಗಳು)	೧—೦—೦
ವಿರಹಿಣಿ (ತತ್ತ್ವರೂಪಕ ಗೀತಗಳು)	೧—೪—೦
ಕಾರಹುಣ್ಣಿವೆ (ವಿವಿಧ ಭಾವಗೀತಗಳು)	೨—೦—೦

ಕಾವ್ಯಪ್ರೇಮಿಗಳೂ ಸಂಗೀತಗಾರರೂ ಇವುಗಳನ್ನು ಒಮ್ಮೆ ಓದಿ ನೋಡಬೇಕು.

ಬೇಕಾದವರು ಕೆಳಗಿನವಿಳಾಸಕ್ಕೆ ಬರೆಯಿರಿ!

'ಜಯಂತಿ' ಕಾರ್ಯಾಲಯ, ಧಾರವಾಡ

Printed by N. A. Hoskeri at the Vijaya Press, Dharwar and published for the Proprietors Jayanti Publications, by K. S. Betgeri at the Jayanti Office, Dharwar

ಜಯಂತಿ

ಸಂಪುಟ ೨೦

ಸಂಚಿಕೆ ೪

೧೯೫೭

ಸಪ್ಟಂಬರ್

ಸಮರ್ಪಣೆ

ಕ್ರಮದಿಂ ಭಾರತದೇಶದೊಳ್ ರಿಪುಜನರ್ ಸಾಮ್ರಾಜ್ಯಮಂ ಕಟ್ಟಲಿ-
ಕ್ರಮಮಾರ್ಗಂಗಳ ಕೊಂಡು ಹೂಡೆ ರಣಮಂ, ನಿರ್ಭೀತಿಯಿಂದಾರನು.
ಕ್ರಮದಿಂ ಪೂಣ್ದು, ಇದಿರ್ಚಿ ವೈರಿಬಲಮಂ, ಸಾವನ್ನೆಗಂ ಕಾದಿದಾ
ಕ್ರಮದಕ್ಷರ್ಗಮರರ್ಗಪಾರಮಹಿಮರ್ಗೆನ್ನಳ್ತಿಯೀ ವಂದನಂ ! ೧

ಪರಕೀಯರ್ ಪ್ರಭುವಾದರೆಂದು, ಪರಹಸ್ತಕ್ಷೇಪದಿಂ ಧರ್ಮದು-
ಷ್ಕರುಷಂ ಕುಂದಿದುದೆಂದು, ರಾಜಕುಲಗಳ್ ಒಂದೊಂದೆ ಖಗ್ರಸ್ತವೆಂ-
ದರಿತುಂ ವೈರಿಯ ನೀಗಲೆಂದು ರಣದೊಳ್ ಹೋರಾಡಿ, ಪಂಚತ್ವದೊಳ್
ಬೆರೆತುಂ ಕೀರ್ತಿಯೊಳಾವಗಂ ಮೆರೆಯುವಾ ಧೀರರ್ಗೆಯೀವಂದನಂ ! ೨

ಪರದಾಸ್ಯ ಪ್ರಖರಾಗ್ನಿ ಪೊತ್ತೆ, ಘನದೇಶದ್ರೋಹವಾತಂ ಭಯಂ-
ಕರಶಂಖಾರವವೂದಿ ಬೀಸೆ, ನೀತಿಯುಂ ಮೀರಿರ್ದ ಸ್ವಾರ್ಥೋರಗಂ
ಗರಲಂ ಕಾರೆ, ಜನಾಳಿ ಬೆಚ್ಚಿ ದೆಸೆಗೆಟ್ಟಿರ್ಪನ್ನೆಗಂ, ದೇಶಮಂ
ಪೊರೆಯಲ್ ಸಂಗರ ಹೂಡಿ ಕಾದಿ ಮಡಿದಾ ವೀರರ್ಗೆಯೀವಂದನಂ ! ೩

ಮನೆಮಾರಾಸೆಯ ಬಿಟ್ಟು, ಬಿಟ್ಟು ಜನನೀವಾತ್ಸಲ್ಯದಾವಾಸಮಂ,
ಜನಕಪ್ರೀತಿಯ ದೂರ ಸಾರ್ಚಿ, ಸತಿಯಾಸಂದೃಕ ಕೈವಲ್ಯಮಂ
ಮನಸಾ ವರ್ಜಿಸಿ, ದೇಶಲೋಕಹಿತಕೆಂದಾತ್ಮಾರ್ಪಣಂ ಗೈಯ್ದ ಪಾ-
ವನಚಾರಿತ್ರ್ಯ ಸಮಾಹಿತರ್ಗೆ ರಣಧೀರರ್ಗೆಳ್ಚರಿಂ ಬಾಗುವೆಂ. ೪

ಆರೀ ಭಾರತ ದೇಶದೊಳ್ ಪ್ರಥಮದೊಳ್ ಸ್ವಾತಂತ್ರ್ಯ ಸಂಗ್ರಾಮಮಂ
ಸಾರುತ್ತುತ್ಸವದಿಂದೆ ಕಾದಿ ರಣದೊಳ್ ಹೋರಾಡಿ ಸ್ವೈಕೀರ್ತಿಯುಂ
ವೀರಸ್ವರ್ಗವನೇರಿ ನಿಂದು, ಜಸಮೈವೆತ್ತಾ ಸಮಸ್ತರ್ಗೆ ಮೇಣ್
ಧೀರರ್ಗೀ ಕೃತಿ—ಮೀಸಲಾದ ಮುಡಿಪಂ ಸಂಪ್ರೀತಿಯಿಂದರ್ಪಿಪೆಂ. ೫

— ಶ್ರೀ. ವ. ಗಲಗಲಿ

JAYANTI

ಈ ಸಂಚಿಕೆಯಲ್ಲಿ :

卐

ಇನ್ನೂ ಎಷ್ಟು ಕಾಲ ಈ ಒಳಜಗಳ? (ಸಂಪಾದಕೀಯ)

ಸಂಪಾದಕರು ೧೨೧

ನಾಡನಡೆ (ಪ್ರಾಸಂಗಿಕ ಟಿಪ್ಪಣಿ)

' ಕಾಲಭೈರವ ' ೧೨೩

ಮಾನವಕೆಗೆ ಮುಕ್ತಿಲ್ಲ (ಚಿಕ್ಕಕತೆ)

ಶ್ರೀ. ಅನಂತ ಪಿ. ಜಾಗಿರದಾರ್, ಗುಲ್ಬರ್ಗಾ ೧೨೫

ಆಗಸ್ಟ ೧೫ (ಕವನ)

ಶ್ರೀ. ಎಸ್, ಎಸ್. ಬಸುಪಟ್ಟದ ಎಂ ಎ., ಬಿ. ಟಿ. ಗುಳೇದಗುಡ್ಡ ೧೨೯

ಕನ್ನಡದಲ್ಲಿ ಸಣ್ಣ ಕತೆಗಳು (ಬೆಳವಣಿಗೆ)

ಪ್ರೊ. ಸಿ. ಎಸ್. ಕುಲಕರ್ಣಿ ಎಂ ಎ., ಬಿ. ಟಿ. ಧಾರವಾಡ ೧೩೧

ಕಾರುಕಂಬಗಳು (ಲಲಿತಪ್ರಬಂಧ)

ಶ್ರೀ. ಬಿ. ಆರ್. ವಾಡಪ್ಪಿ ಎಂ. ಎ., ಬಿ. ಟಿ. ಧಾರವಾಡ ... ೧೩೫

ಮೊಹೊಂಜೊದಾರೊ (ಶಬ್ದಚಿತ್ರ)

ಶ್ರೀ. ಹಾ. ವೆಂ ರಾಮಸ್ವಾಮಿ ಬಿ. ಎಸ್ಸಿ. ಬೆಂಗಳೂರು ೧೩೮

ಚರಮಗೀತೆ (ನವ್ಯಕವನ)

ಶ್ರೀ ಅರವಿಂದ ನಾಡಕರ್ಣಿ ಬಿ ಎಸ್ಸಿ., ಎಲ್‌ಎಲ್. ಬಿ ಮುಂಬಯಿ ೧೪೩

ಸಾಹಿತ್ಯವನವಿಹಾರ (ಗ್ರಂಥಾವಲೋಕನ)

ಶ್ರೀ. ಎನ್. ಎಸ್. ಗದಗಕರ ಬಿ ಎ. ಧಾರವಾಡ ೧೪೪

ಕಾವ್ಯದಲ್ಲಿ ಪ್ರತಿಮಾಸಂವಿಧಾನ (ಇಂದಿನ ಪ್ರತಿಮೆ)

ಶ್ರೀ. ಜಿ. ವಿ. ಕುಲಕರ್ಣಿ ಬಿ. ಎ. (ಆನರ್ಸ್) } ಧಾರವಾಡ ೧೪೫
ಶ್ರೀ. ಅನಿಲಕುಮಾರ ವಿನಾಯಕ ಗೋಕಾಕ }

ಹೆಣ್ಣಿನ ಬುದ್ಧಿ (ಸಣ್ಣಕತೆ)

ಶ್ರೀ. ಬಿ. ಎಂ. ಕುಲಕರ್ಣಿ ಬಿ. ಇ. (ಸಿವ್ಹಿಲ್) ಸಾಂಗಲಿ ೧೫೩

ನನ್ನ ಹಾಡು (ಭಾವನಾತರಂಗಿಣಿ)

ಶ್ರೀ ವೈ. ವಿ ಚಿತ್ತಾಳ ಬಿ. ಎಸ್ಸಿ (ಆನರ್ಸ್). ಬಿ. ಎಸ್ಸಿ (ಟೆಕ್) ೧೫೪

ಸಾಹಿತ್ಯವಿಮರ್ಶೆಯ ಶಿಕ್ಷಣರಂಗ

ಶ್ರೀ. ಎಚ್ ಡಿ. ಟಿ. ಇನಾಮದಾರ ಮತ್ತು ಶ್ರೀ. ಕೆ. ಎಸ್. ಕವಠೆ ೧೫೫

ಸಾದರ ಸ್ವೀಕಾರ ಹೊದಿಕೆಯ ೩ನೆಯ ಪುಟ

ಜಯಂತಿ

ಸಂಪುಟ ೨೦ ಸಂಚಿಕೆ ೪

ಕುಟುಂಬದಲ್ಲಿಯ ಎಲ್ಲರೂ
ಜ್ಞಾನವನ್ನೂ ರಸಾನಂದವನ್ನೂ
ಪಡೆಯಬಹುದಾದ
ಮಾಸಪತ್ರಿಕೆ

●

ಸಂಪಾದಕರು:
ಶ್ರೀ. ಬೆಟಗೇರಿ ಕೃಷ್ಣಶರ್ಮ

●

ಸಂಚಿಕೆ ಪ್ರತಿತಿಂಗಳ
ಮೊದಲನೆಯ ತಾರೀಖಿಗೆ
ಪ್ರಕಟವಾಗುವುದು.

卐

ವಾರ್ಷಿಕ ವರ್ಗಣಿ ೫ ರೂ.
ಬಿಡಿ ಸಂಚಿಕೆಗೆ ೮ ಆಣೆ.

ಜಾಹೀರಾತು ಕೊಡಬಯಸುವವರು
ದರಗಳಿಗಾಗಿ ಬರೆದು ಕೇಳಬೇಕು

●

ಅನೇಕ ಊರುಗಳಲ್ಲಿ
ಜಯಂತಿ ಮಾರುವ
ಏಜಂಟರು
ಬೇಕಾಗಿದ್ದಾರೆ

ಸಂಪಾದಕೀಯ

卐

ಇನ್ನೂ ಎಷ್ಟುಕಾಲ ಈ ಒಳಜಗಳ ?

ಮೊನ್ನೆ ಮೊನ್ನೆಯೆ ಬೆಂಗಳೂರಲ್ಲಿ ಸೇರಿದ ಕರ್ನಾಟಕಪ್ರದೇಶ ಕಾಂಗ್ರೆಸ್ ಸಮಿತಿಯ—ಅರ್ಥಾತ್ ಮೈಸೂರುಪ್ರದೇಶ ಕಾಂಗ್ರೆಸ್ ಸಮಿತಿಯ—ಸಭೆಯು, ಯಾವ ಮಾತಿನ ತೀರ್ಮಾನವೂ ಇಲ್ಲದೆ, ಅಸಂತುಷ್ಟಿ-ಅತೃಪ್ತಿಗಳಲ್ಲಿಯೇ ಕೊನೆಗೊಂಡುದು ಅತ್ಯಂತ ವಿಷಾದ-ಕರ ವಾರ್ತೆಯಾಗಿದೆ. ಜನಮತವನ್ನು ಲಕ್ಷ್ಯಕ್ಕೆ ತಾರದೆ, ಸಭೆಯನ್ನು ಬಿಟ್ಟು ಹೊರಟು ಹೋದ—ಅಂದಿನ—ಅಧ್ಯಕ್ಷರ ನಡತೆಯಂತೂ ತೀರ ಗರ್ಹಣೀಯವಾದುದಾಗಿದೆ. ತನ್ನ ಅನುಚಿತವಾದ ಹಟವನ್ನೇ ನಡೆಸಬೇಕೆಂದು ಅಪೇಕ್ಷಿಸುವ ಜನತೆಯ ಮುಂದಾಳು, ಬಹುಕಾಲ ಜನಪ್ರಿಯನಾಗಿ ಉಳಿಯಲಾರನೆಂಬುದನ್ನು ನಮ್ಮ ಪ್ರದೇಶ ಕಾಂಗ್ರೆಸ್ ಸಮಿತಿಯ ಅಧ್ಯಕ್ಷರೂ, ಅವರ ಜೇಬಿನಲ್ಲಿದ್ದ ಮುಂದಾಳುಗಳೂ ಮರೆತು ನಡೆಯಲಾಗದು. ಅದೇ ದಿನ, ಅಧ್ಯಕ್ಷರ ಉದ್ಧಟವೃತ್ತಿಯಿಂದ ನೊಂದಿದ್ದ ಜನರು ರೊಚ್ಚಿಗೆದ್ದು, ವಿರೋಧ ಕ್ರಮವನ್ನು ಕೈಕೊಳ್ಳಲೂ ಬಹುದಾಗಿತ್ತು; ಆದರೆ ಹಿರಿಯರ ಮಾತಿಗೆ ಮನ್ನಣೆ ಕೊಟ್ಟು, ಅಂದು ಸದಸ್ಯ-ರೆಲ್ಲರೂ ಸಂಯಮದಿಂದ ವರ್ತಿಸಿದುದು ಅಭಿನಂದನೀಯವಾದ ಸಂಗತಿ. ಸ್ವಂತದ ಹಟದ ಒಂಟಿಯನ್ನೇ ಮುಂದುವರಿಸಬೇಕೆನ್ನುವ ಮುಂದಾಳುಗಳು, ಈಗಲಾದರೂ ವಿವೇಕ ದೃಷ್ಟಿಯಿಂದ ಪರಿಸ್ಥಿತಿಯನ್ನು ನೋಡಬೇಕೆಂದು ನಮ್ಮ ಬಿನ್ನಹ.

ಕರ್ನಾಟಕದ ಏಕೀಕೃತಪ್ರಾಂತ ಹಳೆಯ ಮೈಸೂರು ರಾಜ್ಯದ ಜನತೆಗೆ ಬೇಡವಾಗಿದ್ದಿತೆಂದಲ್ಲ. ಇದಕ್ಕೆ ಪ್ರತ್ಯಕ್ಷ ಉದಾಹರಣೆಯಾಗಿ ಕನ್ನಡ ಸಾಹಿತ್ಯ ಪರಿಷತ್ತು ಅನೇಕಸಲ ತನ್ನ ಸಮ್ಮೇಳನಾಧಿವೇಶನಗಳಲ್ಲಿ ಮಾಡಿದ ಗೊತ್ತುವಳಿಗಳನ್ನು ನೋಡಬಹುದು ಇಷ್ಟೇ ಅಲ್ಲ; ಏಕೀಕೃತ ಪ್ರಾಂತಕ್ಕೆ 'ಕರ್ನಾಟಕ' ಎಂಬ ಹೆಸರೇ ಇರಬೇಕೆಂಬ ತನ್ನ ಅಭಿಪ್ರಾಯವನ್ನು ನಮ್ಮ ಸಾಹಿತ್ಯ ಪರಿಷತ್ತು ಇದುವರೆಗೂ ಕೂಗಿ ಕೂಗಿ ಹೇಳುತ್ತಲಿದೆ. ಸ್ವಾತಂತ್ರ್ಯ ಸಾಧನೆಗಾಗಿ ನಿಜವಾಗಿಯೂ ಹೋರಾಟದಲ್ಲಿ ಭಾಗವಹಿಸಿದ ಮೈಸೂರಿನ ಹೊಸ ರಕ್ತದ ತರುಣರ ಮನಸ್ಸು, ಬರಲಿರುವ ತಮ್ಮ ಏಕೀಕೃತ ರಾಜ್ಯ 'ಕರ್ನಾಟಕ' ಎಂಬ ಹೆಸರಿನದೇ ಇರಬೇಕೆಂದು ಬಯಸುತ್ತಿತ್ತು; ಈಗಲೂ ಆ ಬಯಕೆಯಿಂದ ಅವರು ಚ್ಯುತರಾಗಿಲ್ಲ.

ಇನ್ನು ಮೈಸೂರೇತರ ಭಾಗದ ಕನ್ನಡಿಗರಂತೂ ಕೇವಲ ಕರ್ನಾಟಕ ಪ್ರಾಂತ್ಯದ ಉತ್ಕಟಾಪೇಕ್ಷೆಯಿಂದಲೇ ಅಖಂಡ ನಾಲ್ವತ್ತು ವರುಷಗಳ ವರೆಗೆ ಹೋರಾಡುತ್ತ ಬಂದಿದ್ದಾರೆ ಅವರ ಹೋರಾಟಕ್ಕೆ ಉತ್ಸಾಹವನ್ನಿತ್ತ ಯಂತ್ರದ ಬೀಜಾಕ್ಷರಗಳು 'ಕ-ರ್ನಾ-ಟ-ಕ' ಎಂಬುವಾಗಿದ್ದುವಲ್ಲದೆ ಬೇರೆ ಯಾವುವೂ ಆಗಿರಲಿಲ್ಲ. ಅವರು ಭಾರತಸ್ವಾತಂತ್ರ್ಯದ ಸಂಗ್ರಾಮದಲ್ಲಿ ಭಾಗ ವಹಿಸಿದುದು ಸ್ವತಂತ್ರ ಕರ್ನಾಟಕ ಪ್ರಾಂತದ ಕನಸನ್ನು ಕಾಣುತ್ತಲೆ. ಕರ್ನಾಟಕದ ಪೂರ್ವೇತಿಹಾಸ-ಪುರಾತನ ಸಂಸ್ಕೃತಿಗಳ ಜಾಗೃತಿಯೇ ಅವರ ಸ್ವಾತಂತ್ರ್ಯ ಸಾಧನೆಯ ಸಮರದಲ್ಲಿ ಸತ್ತ್ವ-ಬಲಗಳನ್ನು ಕೊಟ್ಟಿತು. ಸ್ವಾತಂತ್ರ್ಯೋತ್ತರ ಕರ್ನಾಟಕದ ಅಖಂಡ ಸ್ವರೂಪವನ್ನು ಪ್ರತ್ಯಕ್ಷವಾಗಿ ಕಾಣುವೆವೆಂಬ ತವಕದಲ್ಲಿರುವಾಗ, ಅವರ ಪಾಲಿಗೆ ದೊರಕಿದುದು ಮೈಸೂರು ರಾಜ್ಯ; ಕರ್ನಾಟಕ ರಾಜ್ಯವಲ್ಲ! ಇದರಿಂದ ಮೈಸೂರೇತರ ಭಾಗದ ಕನ್ನಡಿಗರೆಲ್ಲರು ಕದಡಿದ ಮನದವರಾಗಿದ್ದಾರೆ; ಕೆರಳಿದ ಹೃದಯದವರಾಗಿದ್ದಾರೆ.

ಮೈಸೂರೇತರ ಭಾಗದ ಕನ್ನಡಿಗರು ತಮ್ಮ ಏಕೀಕೃತ ಪ್ರಾಂತವನ್ನು 'ಕರ್ನಾಟಕ' ಎಂಬ ಹೆಸರಿನಿಂದ ಕಾಣುವುದರಲ್ಲಿಯೆ ಘನತೆಯಿದೆಯೆಂದು ಭಾವಿಸಿದ್ದಾರೆ. 'ಕರ್ನಾಟಕ'

ಎಂಬ ಹೆಸರು, ವೈಭವಸಂಪನ್ನವಾದ ನಮ್ಮ ಭೂತಕಾಲವನ್ನು ಒಳಗಣ್ಣೆದುರು ತಂದು ನಿಲ್ಲಿಸಿ, ಜನತೆಯಲ್ಲಿ ಸಾತ್ತ್ವಿಕ ಅಹಂಕಾರವನ್ನು ಬೆಳೆಸುವುದು. ರಾಮಾಯಣ, ಮಹಾಭಾರತಗಳಲ್ಲಿ ಅವಕಾಶ ಪಡೆದುದು ಕರ್ನಾಟಕ. ಚಂದ್ರಗುಪ್ತ-ಅಶೋಕರನ್ನು ತನ್ನ ಅಂತಃಸತ್ತ್ವದಿಂದ ಆಕರ್ಷಿಸಿದುದು ಕರ್ನಾಟಕ. ಮತಾಚಾರ್ಯರನ್ನು ಹುಟ್ಟಿಸಿ ಬೆಳೆಯಿಸಿದುದು ಕರ್ನಾಟಕ. ಮಯೂರಶರ್ಮ, ನೃಪತುಂಗ ಪುಲಕೇಶಿ, ಚಾಲುಕ್ಯವಿಕ್ರಮ, ಹರಿಹರ, ಬುಕ್ಕ, ಕೃಷ್ಣದೇವರಾಯ ಇವರಂತಹ ಅಪ್ರತಿಮ ಚರಿತ್ರಗಳನ್ನು ನಿರ್ಮಿಸಿದುದು ಕರ್ನಾಟಕ. ಪಂಪ, ರನ್ನ, ಹರಿಹರ, ರಾಘವಾಂಕ, ಕುಮಾರವ್ಯಾಸ, ಲಕ್ಷ್ಮೀಶ, ರತ್ನಾಕರ ಮೊದಲಾದ ಸರಸ್ವತೀಪುತ್ರರಿಂದ ಕೀರ್ತಿಸಿಕೊಂಡುದು ಕರ್ನಾಟಕ. ವಚನಕಾರರೂ ಹರಿದಾಸರೂ ದೇವರನ್ನು ಕುಣಿಯ ಹಚ್ಚಿದ ಕರ್ನಾಟಕ. ಆಧುನಿಕ ಕರ್ನಾಟಕಾಭಿಮಾನಿಗಳ ಭಾವನಾಕಾಶದಲ್ಲಿ ಮೂಡಿ ಮೂಡಿ, ಉತ್ಸಾಹವನ್ನು ಹೆಚ್ಚಿಸಿ, ಪ್ರಾಣಾರ್ಪಣದಿಂದ ಹೋರಾಡಲು ಹಚ್ಚಿದುದು ಕರ್ನಾಟಕ. ಶೈವರಿಗೆ ಶಿವನೂ ವೈಷ್ಣವರಿಗೆ ವಿಷ್ಣುವೂ ಶಾಕ್ತೇಯರಿಗೆ ದುರ್ಗೆಯೂ ಇದ್ದಂತೆ ಕನ್ನಡಿಗರಿಗೆ 'ಕರ್ನಾಟಕ' ಎಂಬ ದೈವತ! ಹೀಗಿರುವಾಗ, ಕನ್ನಡಿಗರು ತಮ್ಮ ಪ್ರದೇಶವನ್ನು ಬೇರೆ ಹೆಸರಿನಿಂದ ಕರೆಯಲು ಒಪ್ಪಬಹುದೆ? ಒಪ್ಪಲು ಒತ್ತಾಯಪಡಿಸುವುದು ವಿವೇಕವೆನಿಸುವುದೆ?

'ಹೆಸರಿನಲ್ಲೇನಿದೆ?' ಎಂದು ಕೇಳುವವರನ್ನು 'ಸುಸಂಸ್ಕೃತ ಕನ್ನಡಿಗರೇ?' ಎಂದು ಸಂದೇಹದಿಂದ ನೋಡಬೇಕಾಗುವುದು. ಅವರಿಗೆ ಹೃದಯವಿರುವುದೇ?—ಎಂದು ನಿಷ್ಠುರವಾಗಿ ಕೇಳಬೇಕಾಗುವುದು. ಹೆಸರಿನಲ್ಲಿ ಏನಿಲ್ಲ, ಎಲ್ಲವೂ ಇದೆ! ಹೆಸರಿನಲ್ಲಿ ಭೂತಕಾಲ ಹುದುಗಿರುವುದು. ಈ ಹೆಸರೇ ನಮ್ಮ ಪೂರ್ವ ಪುರುಷಾರ್ಥ ಸಿದ್ಧಿಯನ್ನು ನೆನಪಿಗೆ ತಂದುಕೊಡುವುದು. ಬೇರೆ ಹೆಸರಿನಿಂದ ಹೇಳಿದಾಗ ನಮ್ಮ ತಂದೆ-ತಾಯಿಗಳ ಮಧುರಸ್ಮರಣೆ ನಮಗೆ ಆದೀತೆ? ನಮ್ಮ ನಮ್ಮ ಇನಿಯರದಲ್ಲದ ಬೇರೆ ಹೆಸರು ನಮ್ಮ ಅಂತಃಕರಣವನ್ನು ಮಿಡಿದೀತೆ? 'ಹೆಸರಿನಲ್ಲಿ ಏನಿದೆ?' ಎನ್ನುವವರನ್ನು ಮಾನವೀಯ ಮನೋಧರ್ಮವನ್ನರಿಯದ ಅನಾಗರಿಕರೆಂದು ಎಣಿಸಬೇಕಾಗುವುದು.

'ಮೈಸೂರು' ಎಂದು ಹೆಸರಿಡಬೇಕೆಂಬ ಹುಚ್ಚುಹಟಕ್ಕೆ ಬಿದ್ದಿರುವ ನಮ್ಮ ಮುಂದಾಳುಗಳು, ಅದರಿಂದ ಯಾವ ಸ್ವಾರ್ಥವನ್ನು ಸಾಧಿಸಬೇಕೆಂದಿರುವರೋ ಏನೋ! ಔಚಿತ್ಯಪ್ರಿಯರು ಯಾರೂ ಈ ಹೆಸರನ್ನು ಒಪ್ಪಲಾರರು. ಮೈಸೂರು ಎಂಬುದು ಯಾವಾಗಲೂ ಕರ್ನಾಟಕದ ಒಂದು ಭಾಗದ ಹೆಸರು ಮಾತ್ರ. ಭಾಗದ ಹೆಸರನ್ನು ಇಡಿಯ ವಸ್ತುವಿಗೆ ಇರಿಸುವುದು ತರ್ಕಶುದ್ಧವೆನಿಸುವುದೆ? ಒಂದು ರತ್ನವನ್ನು ರತ್ನಹಾರವೆಂದು ಕರೆಯುವುದು ಹುಚ್ಚುತನವಲ್ಲವೆ?

'ಮೈಸೂರು' ಎಂದು ಹೆಸರಿಟ್ಟರೆ, ರಾಜ್ಯದ ಆಡಳಿತಸೂತ್ರಗಳನ್ನು ತಮ್ಮ ಕೈಯಲ್ಲಿಯೇ ಉಳುಹಿಕೊಳ್ಳಲು ಅನುಕೂಲವಾದೀತೆಂದು ಭ್ರಮಿಸಿದಂತಿದೆ ನಮ್ಮಲ್ಲಿಯ ಕೆಲವು ಬುದ್ಧಿಗುರುಡ ವ್ಯಕ್ತಿಗಳು. ಅಂತಹ ಸ್ವಾರ್ಥಾಂಧರು, ಇಂದಿನ ಪಾಕಿಸ್ತಾನದ ರಾಜಕೀಯವನ್ನು ನೋಡಿ ಬುದ್ಧಿಗಲಿಯಬೇಕು. ರಾಜ್ಯಸೂತ್ರಗಳು ತಮ್ಮ ಕೈಯಲ್ಲಿಯೆ ಶಾಶ್ವತವಾಗಿ ಉಳಿಯುವುವೆಂದು ನಂಬಿದ್ದ ಅಲ್ಲಿಯ ಮುಸ್ಲಿಂಲೀಗಿನ ಮುಂದಾಳುಗಳು ಮಣ್ಣುಮುಕ್ಕಿಹೋದರು. ಈಗ ಇದ್ದ ಸುಹ್ರಾವರ್ದಿಯವರ ಬೆಂಬಲಿಗರೂ ಲೀಗಿನವರ ದಾರಿಯಲ್ಲಿಯೆ ಇದ್ದಾರೆ. ಇನ್ನೂ ವ್ಯವಸ್ಥಿತವಾದ ಪ್ರಜಾಪ್ರಭುತ್ವವಿಲ್ಲದ ಆ ರಾಷ್ಟ್ರದ ನಾಯಕರ ಹಣೆಬರಹವೇ ಹೀಗಾಗಿದೆಯೆಂದಮೇಲೆ, ಸುವ್ಯವಸ್ಥಿತವಾದ ಪ್ರಜಾಪ್ರಭುತ್ವ ಪ್ರತಿಷ್ಠೆಗೊಂಡು ನಿಂತಿರುವ ಕರ್ನಾಟಕ ರಾಜ್ಯದಲ್ಲಿ, ಸ್ವಾರ್ಥೈಕದೃಷ್ಟಿಯ ಹಟವಾದಿ ಮುಂದಾಳುಗಳ ಕೈಯಲ್ಲಿ ಅಧಿಕಾರಸೂತ್ರಗಳು ಉಳಿಯಬಹುದೆ?

ಇಂದು ನಮ್ಮ ರಾಜ್ಯಕ್ಕೆ 'ಕರ್ನಾಟಕ' ಎಂಬ ಹೆಸರೇ ಇರಬೇಕೆನ್ನುವವರ ಸಂಖ್ಯೆ ಹೆಚ್ಚಿಗಿದೆಯೆಂಬುದನ್ನು ಮೈಸೂರಿನ ಹಟವಾದಿಗಳು ಮರೆಯಬಾರದು. ಅವರು ತಮ್ಮ ಮಾತನ್ನೇ ನಡೆಸುವ ಹಟಕ್ಕೆ ಬಿದ್ದರೆ, ಕರ್ನಾಟಕವಾದಿಗಳ ಅತೃಪ್ತಿಗೆ ಗುರಿಯಾಗಿ, ಜನತೆಯ ಮನದಲ್ಲಿದ್ದ ಮನ್ನಣೆಯ ಪೀಠ ತಲೆಕೆಳಗಾಗಿ ಬೀಳುವುದು ಖಂಡಿತವಾದ ಮಾತು. ಸದ್ಯ ಕೈಯಲ್ಲಿರುವ ಅಧಿಕಾರಸೂತ್ರಗಳ ಬಲದಿಂದ, ಏನೇನೋ ರಾಜಕೀಯ ಆಮಿಷಗಳನ್ನೊಡ್ಡಿ, ಕರ್ನಾಟಕವಾದಿಗಳ ಮನಸ್ಸನ್ನು ತಮ್ಮ ಅಭಿಪ್ರಾಯಕ್ಕೆ ಎಳೆದುಕೊಳ್ಳುವ ಕುಟಿಲತಂತ್ರಗಳನ್ನು ಆ ಮೈಸೂರುವಾದಿ ಮುಂದಾಳುಗಳು ನಡೆಸಬಹುದು; ಈಗಾಗಲೇ ನಡೆಸಿರುವ ಉದಾಹರಣೆಗಳೂ ಇಲ್ಲದೆ ಇಲ್ಲ. ಆದರೆ ಕರ್ನಾಟಕವಾದಿಗಳು ಇಂತಹ ಆಮಿಷಗಳಿಗೆ ಒಳಗಾಗಿ, ತಮ್ಮ ದೃಢನಿಶ್ಚಯದಿಂದ ಚಲಿಸಲಾರರೆಂಬುದನ್ನು ಯಾರೂ ಮರೆತು ನಡೆಯಲಾಗದು. ಅಧಿಕಾರಸ್ಥಾನದ ಹೆಮ್ಮೆಯಿಂದ ಜನತೆಯ ಹೃದಯವನ್ನು ತುಳಿಯಲು ಸಿದ್ಧನಾದವನು, ಈ ಪ್ರಜಾಪ್ರಭುತ್ವ ಯುಗದಲ್ಲಿ, ತನ್ನ ಸ್ಥಾನವನ್ನು ಎಂದೂ ಕಾಪಾಡಿಕೊಳ್ಳಲಾರನೆಂಬುದನ್ನು ನಮ್ಮ ಪ್ರದೇಶದ ಕಾಂಗ್ರೆಸಿನ ಅಧ್ಯಕ್ಷರು ಲಕ್ಷ್ಯದಲ್ಲಿ ಇರಿಸಿಕೊಳ್ಳಬೇಕು.

— ಸಂಪಾದಕರು

ನಾಡನಡೆ

ಸರಕಾರ ಮತ್ತು ಸಂಸ್ಕೃತಿಭಕ್ತರು

ಭಾರತದ ಪುರಾತನ ಆರ್ಥಿಕವ್ಯವಸ್ಥೆಯಲ್ಲಿ, ಸಂಸ್ಕೃತಿಭಕ್ತರನ್ನು ಪರಿಪೋಷಿಸುವ ಸರದಾರ-ಸಾಹುಕಾರರು, ರಾಜ-ಮಹಾರಾಜರು ಅಲ್ಲಲ್ಲಿ ಇರುತ್ತಿದ್ದರು ಇಂದಿನ ಆರ್ಥಿಕವ್ಯವಸ್ಥೆಯಲ್ಲಿ ಅಂತಹ ಜನರು ಇಲ್ಲದಂತಾಗಿದ್ದಾರೆ. ಆದುದರಿಂದ ಸಾಹಿತ್ಯ, ಸಂಗೀತ, ನೃತ್ಯ, ಅಭಿನಯ, ಚಿತ್ರ, ಶಿಲ್ಪ ಮೊದಲಾದ ಸಮಾಜಪ್ರಯೋಜಕ ಲಲಿತ-ಕಲೆಗಳನ್ನು, ನಮ್ಮ ಸರಕಾರವೇ ಸಹಾಯವಿತ್ತು ಪರಿಪೋಷಿಸಬೇಕಾಗಿದೆ.

ಕೇಂದ್ರ ಸರಕಾರವು ಸಂಸ್ಕೃತಿಪೋಷಣೆಯ ಅಗತ್ಯವನ್ನರಿತು, ತನ್ನ ರೀತಿಯಿಂದ—ಸಂಸ್ಕೃತಿ ಭಕ್ತರಿಗೆ—ಅಲ್ಪಸ್ವಲ್ಪ ಸಹಾಯವನ್ನು ಸಲ್ಲಿಸುತ್ತಲಿದೆ. ಆದರೆ ಅದರದು ಸಂಪೂರ್ಣ ರಾಷ್ಟ್ರದ ದೃಷ್ಟಿ; ಆದುದರಿಂದ, ರಾಜ್ಯಸರಕಾರಗಳಲ್ಲಿರುವ ಅನೇಕ ಜನರು ಅದರ ದೃಷ್ಟಿಯಿಂದ ದೂರ ಉಳಿದು ಬಿಡುವರು. ಅಂತಹರ ಯೋಗ-ಕ್ಷೇಮ ವಿಚಾರವನ್ನು ನಮ್ಮ ರಾಜ್ಯಸರಕಾರಗಳು ನೋಡಿಕೊಳ್ಳಬೇಕಾಗುವುದು.

ಕೇಂದ್ರಸರಕಾರದಂತೆಯೆ ಮುಂಬಯಿ ಸರಕಾರವೂ ತನ್ನ ಆಡಳಿತದ ಕ್ಷೇತ್ರದಲ್ಲಿ ಬರುವ ಸಂಸ್ಕೃತಿಭಕ್ತರಿಗೆ ಮನ್ನಣೆಯನ್ನೂ ಸಹಾಯವನ್ನೂ ಸಲ್ಲಿಸುವ ಸ್ತುತ್ಯ ಉಪಕ್ರಮವನ್ನು ಕೈಕೊಂಡಿದೆ. ಕಷ್ಟದಲ್ಲಿರುವ ಸಂಸ್ಕೃತಿಭಕ್ತರಿಗೆ ವರುಷ-ವರುಷವೂ ಧನಸಹಾಯ ಮಾಡುವುದಲ್ಲದೆ, ಗ್ರಂಥಕರ್ತರಿಗೂ ನಟವರ್ಗಕ್ಕೂ ತೃಪ್ತಿಕರವಾದ ಪಾರಿತೋಷಕಗಳನ್ನು, ಪ್ರತಿವರ್ಷವೂ ಕೊಡುವ ಏರ್ಪಾಡನ್ನು ಅದು ಮಾಡಿರುವುದು. ಕಳೆದ ವರ್ಷ ಮುಂಬಯಿ ರಾಜ್ಯದಲ್ಲಿದ್ದ ಕನ್ನಡ ಸಾಹಿತ್ಯಿಕರೂ ಕಲಾವಿದರೂ ಈ ಗೌರವ-ಸಹಾಯಗಳನ್ನು ಪಡೆದಿದ್ದಾರೆ. ಈ ವರ್ಷವೂ ಅದು, ಅಂತಹ ಗೌರವ-ಸಹಾಯಗಳನ್ನು ಸಲ್ಲಿಸಲಿದ್ದಿತು; ಆದರೆ ಅಷ್ಟರಲ್ಲಿಯೇ ಕರ್ನಾಟಕ ರಾಜ್ಯವು ನಿರ್ಮಾಣಗೊಂಡುದರಿಂದ, ಕನ್ನಡಸಾಹಿತ್ಯಿಕರಿಗೂ ಕಲಾವಿದರಿಗೂ ಮುಂಬಯಿ ಸರಕಾರದಿಂದ ಸಲ್ಲಬಹುದಾಗಿದ್ದ ಗೌರವಧನ-ಸಹಾಯಧನಗಳು ಸಲ್ಲಲಿಲ್ಲ. ಆದರೆ ತಾನವರಿಗೆ ಸಲ್ಲಿಸಬೇಕೆಂದು ನಿರ್ಣಯಿಸಿದ ಸಹಾಯಧನ-ಗೌರವಧನಗಳ ವ್ಯವಹಾರವನ್ನು, ಮುಂಬಯಿ ಸರಕಾರ ಮೈಸೂರು ಸರಕಾರದ ಕಡೆಗೆ ಒಪ್ಪಿಸಿದೆಯೆಂದು ವರ್ತಮಾನವಿದೆ. ಮುಂಬಯಿ ಸರಕಾರ ಮರಾಠಿ ಮತ್ತು ಗುಜರಾಥಿ ಸಾಹಿತ್ಯಿಕರಿಗೂ ಕಲಾವಿದರಿಗೂ ಸಕಾಲದಲ್ಲಿ ಸಹಾಯ-ಗೌರವಧನಗಳನ್ನು ಸಲ್ಲಿಸಿ ಕೃತಾರ್ಥವಾಗಿದೆ; ಆದರೆ ನಮ್ಮ ಸರಕಾರವು, ಮುಂಬಯಿ ಸರಕಾರವು ಒಪ್ಪಿಸಿಕೊಟ್ಟ ಕಾರ್ಯವನ್ನು ಇದುವರೆಗೂ ನಿರ್ವಹಿಸಿಲ್ಲ. ಈ ಬಗೆಯ ವಿಲಂಬ-ಅಶ್ರದ್ಧೆಗಳು, ನಮ್ಮ ಸಂಸ್ಕೃತಿಭಕ್ತರನ್ನು ತುಂಬ ನಿರಾಶೆಗೊಳಿಸಿವೆ. ಮುಂಬಯಿ ಸರಕಾರ ಈ ಸಹಾಯ-ಗೌರವಧನಗಳ ವ್ಯವಹಾರವನ್ನು ಒಪ್ಪಿಸಿಕೊಟ್ಟುದು ನಿಜವಿದ್ದರೆ, ಇದರ ನಿರ್ಣಯವನ್ನು ಜಾರಿಯಲ್ಲಿ ತರಲು, ಇಷ್ಟೊಂದು ವಿಲಂಬವೇಕೆ? ಈ ವ್ಯವಹಾರಕ್ಕೆ ಸಂಬಂಧಿಸಿದ ಅಧಿಕಾರಿಗಳು ಇದರ ವಿಚಾರಮಾಡುವುದು ಅವಶ್ಯವಾಗಿದೆ.

ಅಲ್ಲದೆ ಇನ್ನು ಮುಂದೆ

ನಮ್ಮ ಸರಕಾರವು ಸ್ವತಂತ್ರವಾಗಿ ತಾನೂ ಈ ಬಗೆಯ ಸಂಸ್ಕೃತಿಭಕ್ತರ ಸಹಾಯ-ಗೌರವಗಳ ಸಲುವಳಿಯನ್ನು ಕುರಿತು ವಿಚಾರಮಾಡಬೇಕಾಗಿದೆ ಮಹಾರಾಷ್ಟ್ರ ಮತ್ತು ಗುಜರಾತದ ರಾಜಕೀಯ ನಾಯಕರು, ತಮ್ಮ ದೇಶದ ಸಾಹಿತ್ಯಿಕರನ್ನೂ ಬೇರೆ ಕಲಾವಿದರನ್ನೂ ತುಂಬ ಆತ್ಮೀಯ ವಿಶ್ವಾಸದಿಂದ ಕಾಣುವರು, ಅವರ ಕಾರ್ಯ-ಮಹತ್ತ್ವವನ್ನು ಚೆನ್ನಾಗಿ ಮನವರಿಕೆ ಮಾಡಿಕೊಂಡಿರುವರು. ಎಂತಲೇ ಕಷ್ಟದಲ್ಲಿರುವ ಕಲಾವಿದರನ್ನು ಸಹಾನುಭೂತಿಯಿಂದ ಕಂಡು, ಅವರಿಗೆ ಸಹಾಯ ಸಲ್ಲಿಸುವರು. ಶ್ರೇಷ್ಠಕಲಾವಿದರಿಗೆ ಸನ್ಮಾನಧನವನ್ನು ಸಮರ್ಪಿಸುತ್ತಿರುವರು. ಆದರೆ ನಮ್ಮ ಸರಕಾರ, ಇದುವರೆಗೂ ಈ ಬಗೆಯ ವ್ಯವಸ್ಥೆಯ ವಿಚಾರವನ್ನು ಮಾಡಿದಂತೆ ಕಾಣುವುದಿಲ್ಲ ದೇಶದ ಸ್ವಾತಂತ್ರ್ಯದ ಹೋರಾಟದ ಸಮಯದಲ್ಲಿ, ನಮ್ಮಲ್ಲಿಯ ಅನೇಕ ಸಾಹಿತ್ಯಿಕರೂ ಪ್ರತ್ಯಕ್ಷಾಪ್ರತ್ಯಕ್ಷವಾಗಿ ಭಾಗವಹಿಸಿ ಕಷ್ಟ-ನಷ್ಟಗಳನ್ನು ಸಹಿಸಿದ್ದಾರೆ; ಬೇರೆ ಕೆಲವರು ಆಧುನಿಕ ಸಾಹಿತ್ಯದ ಸಂಪನ್ನತೆಗಾಗಿ ಜೀವನವನ್ನೆ ಮುಡಿಪಾಗಿಸಿದ್ದಾರೆ. ಇಂದಿನ ಆರ್ಥಿಕ ವಿಷಮತೆಯ ಮೂಲಕ, ಅವರಲ್ಲಿಯ ಎಷ್ಟೋ ಜನರು ಅನಿವಾರ್ಯವಾದ ಸಂಕಟದಲ್ಲಿ ಸಿಲುಕಿಕೊಂಡಿದ್ದಾರೆ. ನಮ್ಮ ಸರಕಾರ, ಇಂತಹ ಆಪದ್ಗ್ರಸ್ತ ಸಾಹಿತ್ಯಿಕರನ್ನು ಕಂಡುಹಿಡಿದು, ಔಚಿತ್ಯವರಿತು ಸಹಾಯ ಸಲ್ಲಿಸುವುದು ಕರ್ತವ್ಯವಾಗಿಲ್ಲವೆ?

ನಮ್ಮ ನಾಡಿನ ರಾಜಕೀಯ ನಾಯಕರು ಇನ್ನೂ ಪಕ್ಷ-ಪ್ರತಿ-ಪಕ್ಷಗಳ ಹೋರಾಟ-ಕಾದಾಟಗಳಲ್ಲಿಯೆ ಇರುವರಲ್ಲವೆ. ದೇಶದ ವಿಧಾಯಕ ಕಾರ್ಯಗಳ ಕಡೆಗೆ ತಮ್ಮ ದೃಷ್ಟಿಯನ್ನು ಹರಿಸುತ್ತಿಲ್ಲ. ಅದರಲ್ಲಿಯೂ ಸಾಹಿತ್ಯ-ಸಂಸ್ಕೃತಿಗಳ ಮಹತ್ತ್ವವನ್ನು ಮನವರಿಕೆ ಮಾಡಿಕೊಂಡ ನಾಯಕರು ನಮ್ಮಲ್ಲಿ ಒಂದು ಕೈಬೆರಳಿನಿಂದ ಎಣಿಸುವಷ್ಟು ಜನರಾದರೂ ಇರುವರೋ ಇಲ್ಲವೋ ಸಂದೇಹ. ನಮ್ಮ ಕನ್ನಡ ನೆಲೆಗಾರ ಕುಮಾರವ್ಯಾಸ 'ಬುಧಸನ್ಮಾನವಿಲ್ಲದ ರಾಜ್ಯ.... ಮೆರೆಯದು' ಎಂದು ಸಾರಿ ಸಾರಿ ಹೇಳಿದ್ದಾನೆ.

ದೇಶದಲ್ಲಿ ಸಂಸ್ಕೃತಿ ಬೆಳೆದರೆ ಪ್ರಜಾಪ್ರಭುತ್ವ ಯಶಸ್ವಿಯಾಗುವುದೆಂದು ರಾಜಕಾರ್ಯವಿದರ ಅಭಿಪ್ರಾಯ. ದೇಶದ ಜನತೆಯಲ್ಲಿ ಸಂಸ್ಕೃತಿಯನ್ನು ನಿಜವಾಗಿಯೂ ಬೆಳೆಸುವವರು ಸಾಹಿತ್ಯಿಕರು—ಕಲಾವಿದರು. ನಮ್ಮ ಸರಕಾರ ಜನತೆಯಲ್ಲಿ ಸಾಕ್ಷರತೆಯನ್ನು ಹೆಚ್ಚಿಸಲು ಕೋಟಿಗಟ್ಟಲೆ ರೂಪಾಯಿಗಳನ್ನು ತೆಗೆದಿಟ್ಟಿರುವುದು; ಆದರೆ ಕೇವಲ ಸಾಕ್ಷರತೆ ಸಂಸ್ಕೃತಿಯನ್ನು ಹೆಚ್ಚಿಸಲಾರದೆಂಬುದು ನಮ್ಮ ನಿತ್ಯದ ಪ್ರತ್ಯಕ್ಷ ಅನುಭವವಾಗಿದೆ. ಸಾಹಿತ್ಯ ಲಲಿತಕಲೆಗಳೇ ಜನತೆಯಲ್ಲಿ ಸಂಸ್ಕೃತಿಸತ್ತ್ವವನ್ನು ಹೆಚ್ಚಿಸುವುವೆಂಬುದನ್ನು ನಮ್ಮ ರಾಜಕೀಯ ನಾಯಕರು ಮರೆತ್ತು

ಬಿಟ್ಟಂತಿದೆ. ಇದು ನಮ್ಮ ರಾಜ್ಯದ ಶುಭಭವಿಷ್ಯಕ್ಕೆ ಸಾಧಕವಾದುದೇನೂ ಅಲ್ಲ. ಆದುದರಿಂದ, ನಾಡಿನ ಸಾಹಿತ್ಯಕ-ಕಲಾವಿದರ ಯೋಗಕ್ಷೇಮದ ವಿಚಾರವನ್ನೂ ನಮ್ಮ ನಾಯಕರು ಮಾಡಬೇಕೆಂದು ನಮ್ಮ ಸೂಚನೆ.

ಪಕ್ಷ-ವಿಪಕ್ಷದ ಮರ್ಕಟಬುದ್ಧಿ

ಸಾಮ್ಯವಾದಿಗಳು, ಸಮಾಜಸಮತಾವಾದಿಗಳು, ಅಭಿಪ್ರಾಯ ಭೇದದ ಮೂಲಕ ಪ್ರತಿಪಕ್ಷಗಳನ್ನು ಕಟ್ಟಿ ನಿಂತಿದ್ದಾರೆ; ಇದರಲ್ಲಿ ಅಸ್ವಾಭಾವಿಕವೇನೂ ಇಲ್ಲ; ಆದರೆ ಒಂದೇ ರಾಜಕೀಯ ತತ್ತ್ವದ ಅನುಯಾಯಿಗಳಾದ ಕಾಂಗ್ರೆಸಿಗರಲ್ಲಿಯೆ ಪಕ್ಷ-ಪ್ರತಿಪಕ್ಷಗಳು ತಲೆದೋರಿ ಒಂದಕ್ಕೊಂದು ಮುಸೆದಾಡಿ, ಪ್ರಕ್ಷೋಭಕಾರಕವಾದ ಕಿಡಿಗಳನ್ನು ಹೊರಗೆ ಹಾಕುತ್ತಲಿವೆ. ನಾಯಕರಲ್ಲಿಯ ಈ ಪಕ್ಷೋಪಪಕ್ಷಗಳ ಮುಸೆದಾಟ, ಜನಸಾಮಾನ್ಯರನ್ನು ದಿಗ್ಭ್ರಮೆಗೊಳಿಸುತ್ತಿದೆಯೆಂಬುದನ್ನು, ನಾವೀಗ ಎಲ್ಲೆಲ್ಲಿಯೂ ನೋಡುತ್ತಿದ್ದೇವೆ.

ಉದಾಹರಣೆಯೊಂದು: ಮಂಗಳೂರು ಜಿಲ್ಲೆಯೊಳಗಿನ ಕಾಲೇಜುಗಳೆಲ್ಲ ಕರ್ನಾಟಕ ವಿಶ್ವವಿದ್ಯಾಲಯದ ಆಡಳಿತಕ್ಷೇತ್ರಕ್ಕೆ ಒಳಪಡಬೇಕೆಂದು ನಮ್ಮ ಸರಕಾರ ನಿರ್ಣಯಿಸಿದ್ದಿತು. ಜಿಲ್ಲೆಯ ಜನತೆ ಮೌನವಾಗಿಯೇ ಇದನ್ನು ಒಪ್ಪಿಕೊಂಡಿತು. ಆದರೆ ಆ ಜಿಲ್ಲೆಯ ಕಾಂಗ್ರೆಸಿನ ಧುರೀಣರಲ್ಲಿರುವ ಪಕ್ಷ-ಪ್ರತಿಪಕ್ಷಗಳು, ಇದರ ಬಗೆಗೆ ಒಂದು ಬಿರುಗಾಳಿಯನ್ನೇ ಎಬ್ಬಿಸಿದುವು ಕರ್ನಾಟಕ ವಿಶ್ವವಿದ್ಯಾಲಯಕ್ಕೇ ತಮ್ಮ ಜಿಲ್ಲೆಯ ಕಾಲೇಜುಗಳು ಸೇರಬೇಕೆಂದು ಒಂದು ಪಕ್ಷದವರು ಹೆಚ್ಚು ಅಪೇಕ್ಷೆ ತೋರಿಸಿದ್ದನ್ನು ಕಂಡು, ಇನ್ನೊಂದು ಪಕ್ಷದವರು, ಮೈಸೂರು ವಿಶ್ವವಿದ್ಯಾನಿಲಯಕ್ಕೆ ಸೇರಿಸಬೇಕೆಂದು ಹಟ ಹಿಡಿದರು. ರಾಜ್ಯಸಭೆಯಲ್ಲಿ ಕಾದಾಟ ಸಾಕಷ್ಟು ನಡೆಯಿತು. ಈ ಕಾದಾಟದ ಉದ್ದೇಶವೆಂದರೆ, ಒಂದು ಪಕ್ಷದವರ ಅಪೇಕ್ಷೆಯನ್ನು ಇನ್ನೊಂದು ಪಕ್ಷದವರು ವಿರೋಧಿಸಬೇಕು—ಎಂಬುದಿಷ್ಟೆ!

ಇಂತಹದೇ ಒಂದು ಜಗಳದ ಮೋಜು ಮಂಗಳೂರು ಜಿಲ್ಲೆಯಲ್ಲಿಯೆ ಹಿಂದೊಮ್ಮೆ ನಡೆದಿದೆ: ಮಂಗಳೂರ ಜಿಲ್ಲಾ ಬೋರ್ಡಿಗೂ ನಗರಸಭೆಗೂ ಒಬ್ಬರೇ ಮಹನೀಯರು ಅಧ್ಯಕ್ಷರಾಗಿ ಇದ್ದರು ಇವರು ಕಾಂಗ್ರೆಸ್ಸಿಗರು. ಜಿಲ್ಲಾಬೋರ್ಡಿನಲ್ಲಿ ತಮ್ಮ ಪಕ್ಷದವರಿಂದ ಖಾದೀ ಪ್ರಚಾರದ ಗೊತ್ತುವಳಿ ಬಂದಾಗ, ಈ ಅಧ್ಯಕ್ಷರು ಅದನ್ನು ಪುರಸ್ಕರಿಸಿ ಪಾಸು ಮಾಡಿಸಿದರಂತೆ; ಅದೇ ಅಧ್ಯಕ್ಷರ ಅಧ್ಯಕ್ಷತೆಯಲ್ಲಿ ನಡೆದ ನಗರಸಭೆಯ ಸಮಸ್ಯರ ಸೇರುವೆಯಲ್ಲಿ, ವಿರೋಧಿ ಪಕ್ಷದವರು ಖಾದೀಪ್ರಚಾರದ ಗೊತ್ತುವಳಿಯನ್ನು ತಂದಾಗ, ಅಧ್ಯಕ್ಷರು ತಮ್ಮ ಸ್ವಂತದ ಅಧಿಕಾರದಲ್ಲಿಯೇ ಅದನ್ನು ತಿರಸ್ಕರಿಸಿಬಿಟ್ಟರಂತೆ. ಹೇಗಿದೆ ನೋಡಿ, ಪಕ್ಷಗಳ ಮೋಜು! ನಮ್ಮ ಇಂದಿನ ಆಡಳಿತದ ಸೂತ್ರಗಳನ್ನು ಹಿಡಿದುದು ಕಾಂಗ್ರೆಸ್ ಪಕ್ಷವೆ; ಆದರೆ ಅವರಲ್ಲಿರುವ ಒಳಪಂಗಡಗಳು, ಒಬ್ಬರೆಂದುದನ್ನು ಇನ್ನೊಬ್ಬರು ವಿರೋಧಿಸುವ ಅವಿವೇಕಕ್ಕೆ ಇಳಿದಿವೆ. ಕರ್ನಾಟಕ-ಮೈಸೂರುವಾದವು ಈ ಒಳಪಂಗಡಗಳನ್ನು ಇನ್ನಿಷ್ಟು ಬಲಪಡಿಸುವುದರಲ್ಲಿದೆ. ನಮ್ಮ ಕಾಂಗ್ರೆಸ್ ನಾಯಕರು ಈಗ ಔಚಿತ್ಯವನ್ನು ಮರೆತು ನಡೆಯತೊಡಗಿದರೆ, ಈ ಒಳಪಂಗಡಗಳ ಮುಸೆದಾಟ, ನಮ್ಮ ಆಡಳಿತದಲ್ಲಿ ಎಂತಹ ಅನವಸ್ಥೆಯನ್ನು ತಂದೊಡ್ಡೀತೆಂಬುದರ ನಿಯಮವಿಲ್ಲದಂತಾಗಿದೆ.

ಭಾರತದ ತಾಟಸ್ಥ್ಯಕ್ಕೆ ಬಲವಾದ ಆಘಾತಗಳು!

ಭಾರತದ ವಿದೇಶಧೋರಣೆಗೆ ಒಂದರ ಹಿಂದೊಂದು ಪರೀಕ್ಷಾ ಪ್ರಸಂಗಗಳನ್ನು ಎದುರಿಸಬೇಕಾಗಿದೆ. ಬ್ರಿಟನ್-ಅಮೇರಿಕೆಗಳು ಮಧ್ಯಪೂರ್ವದಲ್ಲಿ ನಡೆಯಿಸಿರುವ ಕರಟಕ ತಂತ್ರಗಳನ್ನು ನೋಡಿದರೆ, ಭಾರತದ ತಾಟಸ್ಥ್ಯಧೋರಣವನ್ನು ಕೆಣಕುವುದಕ್ಕಾಗಿಯೇ ಅವು ಈ ಕಾರ್ಯವನ್ನು ನಡೆಸಿರುವುವೇನೋ ಎನಿಸತೊಡಗಿದೆ. ಸಂಯುಕ್ತರಾಷ್ಟ್ರಗಳ ಸಭೆಯು ಪ್ರಸಂಗಾವಧಾನ ತೋರಿಸಿದುದರಿಂದ, ಈಜಿಪ್ತದ ಪ್ರಕರಣದಲ್ಲಿ, ಭಾರತವು ತನ್ನ ವಿದೇಶ ನೀತಿಯನ್ನು ಕಾಯ್ದುಕೊಳ್ಳಲು ಸಾಧ್ಯವಾಯಿತು. ಈಗ ಮತ್ತೆ ಮಧ್ಯಪೂರ್ವದಲ್ಲಿ ಓಮನ್ ಇಮಾಮನ ಪ್ರಕರಣ ಎದ್ದು ಕುಳಿತಿದೆ; ಜೋರ್ಡಾನ್-ಸಿರಿಯಾಗಳಲ್ಲಿ ಕಲಹ ಬಲಿಯುತ್ತಲಿದೆ. ಇಸ್ರಾಯಿಲ್ ರಾಷ್ಟ್ರವಂತೂ ಅರಬ ರಾಷ್ಟ್ರಗಳನ್ನು ನುಂಗಿ ನೀರು ಕುಡಿಯಲು ಹೊಂಚು ಹಾಕುತ್ತಲಿದೆ. ಮೇಲೆ ಅಮೇರಿಕೆ-ರಶಿಯಾ ರಾಷ್ಟ್ರಗರುಡಗಳಂತೂ ಅಲ್ಲಲ್ಲಿ ಹಾರಾಡಿ, ಜಗತ್ತಿನ ಶಾಂತಿಗೇ ಭಂಗತರುತ್ತಲಿವೆ. ಭಾರತಕ್ಕೆ ಅಶಾಂತಿ ಬೇಡವಾಗಿದ್ದರೂ, ಮಿಕ್ಕ ರಾಷ್ಟ್ರಗಳು ಬೇಕಾಗಿಯೇ ಅದನ್ನು ಹಬ್ಬಿಸುವುದರಲ್ಲಿವೆ. ಸುತ್ತುಮುತ್ತಲೂ ಎದ್ದ ಅಶಾಂತಿಯ ಗಾಳಿಗಳು ಭಾರತ ಮೈಗೆ ತಗಲದೆ ಇರುವವೆ? ಅವು ತನಗೆ ತಗಲದಂತೆ ಕೋಟೆಯನ್ನು ಕಟ್ಟಿಕೊಳ್ಳಬೇಕೆಂದರೂ ಅದು ಸಾಧ್ಯವಿಲ್ಲದಾಗುವುದು. ಎರಡು ಕಡೆಗಳಿಂದಲೂ ಏಟುಬಿದ್ದರೂ ಸಹಿಸಿಕೊಂಡು ಸುಮ್ಮನಿರಬೇಕು—ಒಂದೂ ಇಲ್ಲವೆ ಎರಡೂ ಪಕ್ಷದವರನ್ನು ಪ್ರತಿಭಟಿಸಿ ವಿರೋಧ ಕಟ್ಟಿಕೊಳ್ಳಬೇಕು— ಒಂದು. ಪ್ರಪಂಚದಲ್ಲಿ ಶಾಶ್ವತ ಶಾಂತಿಯನ್ನು ಕಾಯುವ ಸಾಮರ್ಥ್ಯವಿರುವ ಮಹಾರಾಷ್ಟ್ರಗಳೇ ಇಂದು ಪ್ರಪಂಚದಲ್ಲಿ ಅಶಾಂತಿಯನ್ನು ಹೆಚ್ಚಿಸಿ ತಮ್ಮ ಪ್ರತಿಷ್ಠೆ ಬೆಳೆಸಿಕೊಳ್ಳಬೇಕೆಂದು ನಿಂತಿರುವಾಗ, ಭಾರತದಂತಹ ಅಪೂರ್ಣ ಬಲವುಳ್ಳ ರಾಷ್ಟ್ರದ ಸದಿಚ್ಛೆ, ಯಾವ ಕಾರ್ಯವನ್ನು ಮಾಡಲು ಸಮರ್ಥವಾದೀತು? ತಮ್ಮ ಕೈಯಾಳುರಾಷ್ಟ್ರಗಳಿಗೆಲ್ಲ ಅಮೇರಿಕೆ ಅತ್ಯಾಧುನಿಕ ಮಾರಕಾಸ್ತ್ರಗಳನ್ನು ಪೂರಯಿಸುವುದಾಗಿ, ಅಲ್ಲಿಯ ಯುದ್ಧಮಂತ್ರಿ ಡಲ್ಲೇಸರು ಘೋಷಿಸಿರುವರು. ಅಮೇರಿಕೆ ಹೀಗೆ ಮಾಡಿದ ಮೇಲೆ ರಶಿಯಾ ಸುಮ್ಮನುಳಿಯುವುದೇ? ಅದೂ ತನ್ನ ಕೈವಾರಿಗಳಿಗೆ ತನ್ನಲ್ಲಿಯ ಮಾರಕಾಸ್ತ್ರಗಳನ್ನು ಪೂರಯಿಸಬಹುದು. ಈ ಕೋಣಗಳ ಕಾದಾಟವನ್ನು ನೋಡುತ್ತ, ಭಾರತ ತನ್ನ ವಿದೇಶ ನೀತಿಯನ್ನು ಕಾಯ್ದುಕೊಂಡು, ಆಂತರಿಕ ಬಲವನ್ನು ಬೆಳೆಸಿಕೊಳ್ಳುವುದಕ್ಕೆ ಸಾಧ್ಯವಾದೀತೆ?

ಮಾನವತೆಗೆ ಮುಪ್ಪಿಲ್ಲ

(ಚಿಕ್ಕಕತೆ)

ಶ್ರೀ. ಅನಂತ ಸಿ. ಜಾಹಗಿರ್ದಾರ್, ಕಲ್ಬುರ್ಗಿ

ಜೀವನದಲ್ಲಿ ಅಡಸಿದ ಆಪತ್ತಿಗಳ ಅತಿರೇಕದ ಕ್ಷಣ, ಮಾನವನನ್ನು ಪಶುವನ್ನಾಗಿ ಮಾಡುತ್ತದೆ; ಆದರೆ ಆ ಕ್ಷಣ ದಾಟಿದ ಮೇಲೆ, ಆ ದುಃಖದ ಕಾವು ಅವನಲ್ಲಿ ಮಾನವತೆಯನ್ನು ಹೆಚ್ಚಿಸಲೂ ಬಹುದು. ಅಪರಾಧಿಗಳಿಗೆ ಶಿಕ್ಷೆಕೊಡಬೇಕೆನ್ನುವ ಕಾನೂನುಗಳಿಗೆ ಈ ವಿವೇಕವೂ ಅಗತ್ಯವಲ್ಲವೆ?

'ಕಿರ್‍ರ್', ಎಂದು ಬಾಗಿಲು ತೆರೆದ ಸದ್ದಾಯಿತು.

"ಯಾವನೋ ಅವನು ಬಾಕಿಲಾ ತೆಗೆದಾಂವ?" ಎಂದು ಬಿದ್ದಲ್ಲಿಂದಲೇ ಗಟ್ಟಿಸಿ ಕೇಳಿದನು ಮಾರಣ್ಣ.

"ಯಾವನೋ ನೋಡೋಕೆ ಬಂದ್ಹಾಂಗ ಕಾಣ್ಸ್ಯತೇಳು!" ಎಂದುತ್ತರ ಬಂದಿತು.

"ನೋಡೋಕೆ ಯಾಕ ಬಂದಿದಾನೋ! ಇಲ್ಲೇನು 'ಪ್ರದರ್ಶನ' ಅದೆ ಅಂತ ತಿಳಿದಾನೇನು? ನೋಡ್ತಾನೇನು? ನೋಡೋದೇ ಇತ್ತಂದ್ರ, ಜೈಲಿನ್ಯಾಗ ಬಿದ್ದು ನೋಡನ್ನು....ನೋಡಾಕ ಬಂದಾನಂತ ನೋಡಾಕ........"

"ಏಯ್ ಸುಮ್ನಿರೋ, ಇನ್‌ಸಪೆಟ್ರು ಬಂಧಾಂಗ ಕಾಣ್ತದೋ" ನುಡಿದ ಧ್ವನಿಯಲ್ಲಿ ಭಯದ ಅಂಶವಿತ್ತು.

"ಇನ್‌ಸ್ಪೆಕ್ಟರ ಬಂದನೇ? ಮತ್ತ ಯಾರನ್ನ ತಂದಾನೋ! ಜಾಗಾ ಇಲ್ಲಾಂತ್ಹೇಳಿ ಕಳ್ಸೋ ಹೋಗ್ಲಿ!"

"ಏಯ್, ಏಳೋ, ಒಳಗೇ ಬರೋಹಂಗ ಕಾಣ್ತದ."

"ಬರ್‍ಲೇಳೋ; ಬಂದ್ರೆ ಬರ್‍ಲಿ ನನಗೇನು? ಸುಮ್ನೆ ಬಿದ್ದುಕೊಳ್ಳಕ್ಕೂ ಬ್ಯಾಡಾಂತಾನೇನು? ಇನ್ನೇನು ಅಂಜಿಕೆ? ಆವರಪ್ಪಗೂ ಅಂಜೋದಿಲ್ಲಾಂತ್ಹೇಳು".

ಈ ಮಾತು-ಕತೆ ನಡೆದಿರುವಾಗಲೇ, ಜೈಲಿನ ಹೊಸ ಅಧಿಕಾರಿ ಹೊಸೂರು ರಾಮರಾಯರು ಕೋಣೆಯಲ್ಲಿ ಕಾಲಿಟ್ಟರು. ತತ್‌ಕ್ಷಣ ಮಾರಣ್ಣನೊಬ್ಬನ ಹೊರತು ಉಳಿದವರೆಲ್ಲ ಎದ್ದುನಿಂತರು. ಕಾವಲುಗಾರ ಮಾರಣ್ಣನನ್ನು ಜಬರಿಸಿ ಎಬ್ಬಿಸುವುದರಲ್ಲಿದ್ದನು; ಆದರೆ ರಾಮರಾಯರು ಅವನಿಗೆ ಸುಮ್ಮನಿರಹೇಳಿದರು. ಅವರು ಇತರರೊಡನೆ ಮಾತನಾಡುತ್ತಿರುವಾಗ ಕೂಡ ಮಾರಣ್ಣ ಜಂತಿಗಳನ್ನೆಣಿಸುತ್ತಲೇ ಇದ್ದನು. ರಾಮರಾಯರಿಗೆ ಇವನ ನಡತೆಯನ್ನು ಕಂಡು ಸೋಜಿಗವಾಯಿತು. ಒಡನೆಯೇ ಸ್ವಲ್ಪ ಕೋಪವೂ ಬಂದಿತ್ತು. ಆದರೂ ತಾವಾಗಿಯೇ "ಏನಪ್ಪಾ, ಹೆಸರೇನು ನಿನ್ನದು?" ಎಂದು ಕೇಳಿದರು. ಮಾತಿನಲ್ಲಿ ಯಾವ ರೀತಿಯ ದರ್ಪವೂ ಇರಲಿಲ್ಲ.

"ಯಾವ ಹೆಸರು? ಹಿಂದಿನದೋ? ಇಂದಿನದೊ?' ಎಂದು ಕೇಳಿದನು ಮಾರಣ್ಣ—ನಿರ್ಭಯದಿಂದ.

ಇದರಿಂದಂತೂ ರಾಮರಾಯರಿಗೆ ಇನ್ನಿಷ್ಟು ವಿಸ್ಮಯವಾಯಿತು; ಕುತೂಹಲವೂ ಉತ್ಪನ್ನವಾಯಿತು. ಸರ್ವಸಾಮಾನ್ಯವಾಗಿ ಜೈಲು-ಅಧಿಕಾರಿಗಳನ್ನು ಕಂಡರೆ, ಕೈದಿಗಳು ತತ್ತರಿಸಿಹೋಗಬೇಕು. ಅಂತಹದ ತಮ್ಮ ಎದುರಿನಲ್ಲೇ ಮಾರಣ್ಣನ ಈ ನಿರ್ಭಯದ ನಡತೆಯನ್ನು ನೋಡಿದ ಅವರಿಗೆ ಅದೊಂದು ಸಮಸ್ಯೆಯಾಗಿಯೇ ಕಂಡುಬಂತು. ಅವರು ಮತ್ತೆ:

"ಸ್ವಲ್ಪ ಏಳ್ತೀ ಏನಪ್ಪಾ?"

"ಯಾಕಪ್ಪಾ ನನ್ನಲ್ಲೇನು ಕೆಲ್ಸ ನಿನಗ? ನನ್ನದಾಗಿ ಇನ್ನು ಏನು ಉಳಿದಿದೆ? ಹೆತ್ತ ತಾಯಿ ಹೋದ್ಲು. ನನ್ನ ಸ್ವಾತಂತ್ರ್ಯ ಹೋಯ್ತು. ಹೋಗಲಿ, ಇಲ್ಲಾಗ್ಯದ್ರೂ ಸುಮ್ನೆ ಬಿದ್ದಿರೋಣ—ಅಂತ ಅಂದರೆ—ನಿಂದೇನು ಕಾಟ? ಯಾಕೆ, ನಾನು ಮನಿಕ್ಕೊಂಡ ರೀತಿಯಲ್ಲೇ ನಾದ್ರೂ ತಪ್ಪೈತಾ?" ಎಂದು ಗೊಣಗುತ್ತ ಎದ್ದು ನಿಂತನು ಮಾರಣ್ಣ.

ರಾಮರಾಯರು ಅವನನ್ನೊಮ್ಮೆ ನುಂಗಿಬಿಡುವಂತೆ ನೋಡಿದರು.

ಮಾರಣ್ಣನ ಮುಖದಲ್ಲಿ ಯಾವ ಬದಲಾವಣೆಯೂ ಆಗಲಿಲ್ಲ. ಆದರೆ ಉಳಿದವರೆಲ್ಲ ಭೀತರಾಗಿದ್ದುದನ್ನು ಅವರ ಮುಖಗಳು ಸಾರಿ ಸಾರಿ ಹೇಳುತ್ತಿದ್ದುವು. ರಾಮರಾಯರಿಗೆ ಇದೊಂದು ಒಗಟಾಗಿಯೇ ಪರಿಣಮಿಸಿತು; ಅವರು ಇದುವರೆಗೆ ಇಂತಹ ವ್ಯಕ್ತಿಯನ್ನು ಕಂಡಿರಲಿಲ್ಲ. ಎಂತೆಂತಹ ಕೊಲೆಗಡುಕರನ್ನು ಕೂಡ ತಮ್ಮ ವಿಶ್ವಾಸದ, ಸಹಾನುಭೂತಿಯ ಹೆದರಿಕೆಯಿಂದ 'ನಾಗರಿಕ'ರನ್ನಾಗಿ ಮಾಡಿದ ಶ್ರೇಯಸ್ಸು ಅವರದಾಗಿತ್ತು. ಅವರು ಯಾವ ಕೈದಿಯನ್ನೂ ಅಲಕ್ಷ್ಯಿಸಿದವರಲ್ಲ 'ಅನಾಗರಿಕ'ರೆಂದು ಹಳಿದವರಲ್ಲ. ವಾತಾವರಣದ ಪ್ರಭಾವದಿಂದ ಹೊರತಾಗಿ ಮನುಷ್ಯ ದುಷ್ಕೃತ್ಯಗಳನ್ನು ಮಾಡಲಾರ—ಎಂಬುದು ಅವರ ಸಿದ್ಧಾಂತ. ಅವರು ಮನೋವೈಜ್ಞಾನಿಕ ರೀತಿಯಿಂದ ಕೈದಿಗಳನ್ನು ಪರೀಕ್ಷಿಸುತ್ತಿದ್ದರು; ಅವರ

ಹೃದಯಸ್ಥ ಕಲ್ಮಷವನ್ನು ತೆಗೆದು ಚೊಕ್ಕಟವಾಗಿ ತೊಳೆದುಬಿಡುತ್ತಿದ್ದರು. ಆದರೆ ಇಂತಹ ವ್ಯಕ್ತಿ ಅವರಿಗೆ ಈ ಮೊದಲು ದೊರೆತಿರಲಿಲ್ಲ; ಇದು ತಮ್ಮ ಭಾಗ್ಯವೆಂದೇ ಅವರು ಬಗೆದರು. ಮಾರಣ್ಣನ ನಿರ್ಭಯತೆ, ಅವನ ನಡತೆ, ಇವುಗಳಿಂದ 'ಮಾರಣ್ಣ ನಿರಪರಾಧಿ' ಎಂದು ಅವರಾತ್ಮ ನುಡಿಯತೊಡಗಿತು. ಮಾರಣ್ಣನ ಹೃತ್ತಂತ್ರಿಯನ್ನು ಮೀಟಿ ನೋಡಿದಾಗ ಅದು ತಿಳಿದೀತೆಂದು ಸುಮ್ಮಗಾದರು. ಹೆಚ್ಚಿಗೆ ಮಾತನಾಡದೆಯೆ ಕಾವಲುಗಾರನಿಗೆ ಮಾತ್ರ ಏನನ್ನೋ ಹೇಳಿ ಹೊರಗೆ ಹೋಗಿಬಿಟ್ಟರು.

ಸ್ವಲ್ಪ ಹೊತ್ತಾದನಂತರ ಕಾವಲುಗಾರನೊಬ್ಬನು ಬಂದು ಮಾರಣ್ಣನನ್ನು ರಾಯರ ಆಫೀಸಿಗೆ ಕರೆದುಕೊಂಡು ಹೋದನು. ಯಾವುದೋ ವಿಚಾರದಲ್ಲಿ ಮಗ್ನರಾಗಿದ್ದ ರಾಮರಾಯರು, ಕಾಲು ಸಪ್ಪಳವಾದೊಡನೆ ತಲೆಯೆತ್ತಿ ಮಾರಣ್ಣನ ಬರವನ್ನು ಕಂಡು, ಮುಗುಳ್ನಗೆಯಿಂದ ಅವನನ್ನು ಸ್ವಾಗತಿಸಿದರು. "ಬಾರಪ್ಪಾ, ಕೂಡು ಆ ಕುರ್ಚಿಯ ಮೇಲೆ"—ಎಂದು ಕುರ್ಚಿಯನ್ನು ತೋರಿಸಿದರು.

ಮಾರಣ್ಣನಿಗೆ ಅವರ ನಡತೆ ತೀರ ವಿಚಿತ್ರವಾಗಿ ಕಂಡಿತು. ಕಾರಣವೇನೆಂದರೆ: ಅವನು ಐದಾರು ವರ್ಷಗಳಿಂದ ಕಾರಾಗೃಹದ ಅತಿಥಿಯಾಗಿದ್ದನು. ಆದರೆ ಯಾವ ಜೈಲು ಅಧಿಕಾರಿಯೂ ಕೈದಿಯೊಡನೆ ಈ ರೀತಿಯಾಗಿ ನಡೆಯುತ್ತಿರಲಿಲ್ಲ. ಮೊದಲಿನವರು, ಯಾರಾದರೂ ತಪ್ಪಿಸಿಕೊಳ್ಳಲು ಯತ್ನಿಸಿದಾಗ ಮಾತ್ರ 'ಬಡಿಗೆಯ ಪ್ರಹಾರಕ್ಕಾಗಿ' ತಮ್ಮ ಬಳಿ ಕರೆಸಿದ್ದರೇ ಹೊರತು, ಸುಮ್ಮನೆ ಕರೆಸಿರಲಿಲ್ಲ. ಮಾರಣ್ಣ ಕುಳಿತುಕೊಳ್ಳದುದನ್ನು ಕಂಡು, ಅವನಂತರಂಗವನ್ನು ತಿಳಿದ ರಾಯರು ಮತ್ತೆ, "ಕುಳಿತುಕೋ" ಎಂದರು.

ಮಾರಣ್ಣ ಮುಳ್ಳಿನ ಹಾಸಿಗೆಯ ಮೇಲೆ ಕುಳಿತಂತೆ ಕುರ್ಚಿಯ ಮೇಲೆ ಕುಳಿತನು. ಅದೇಕೋ ಮಾರಣ್ಣನ ನಾಲಗೆಯೇ ಸೇದಿಕೊಂಡಂತಾಗಿತ್ತು. ಮೊದಲು ಯಾರೊಡನೆಯೂ ಈ ರೀತಿ ಅವನು ನಡೆದುಕೊಂಡಿರಲಿಲ್ಲ.

"ಸರಿಯಾಗಿ ಕುಳಿತುಕೋ." ನಿರ್ವಾಹವಿಲ್ಲವಾಯಿತು.

"ಹೆಸರೇನು?

"ಯಾವುದು? ಅಂದಿನದೋ? ಇಂದಿನದೋ?

ಮತ್ತೆ ಅದೇ ಉತ್ತರ. ಅವರಿಗೆ ವಿಸ್ಮಯವಾಯಿತು.

"ಎರಡೂ" ಎಂದರು ನಸುನಗುತ್ತ.

"ಅಂದಿನ ಹೆಸರು ಮಾರಣ್ಣ .....ಇಂದಿನದು ನಂ. ೧೪೪!"

"ಊರು?"

"ನೆಲದಮೇಲಿನ ಒಂದು ಹಳ್ಳಿ!"

"ಅದೇ ಯಾವುದೊಂತ"

"ಹೊಸೂರು........"

'ಹೊಸೂರು' ಎಂಬ ಹೆಸರು ರಾಮರಾಯರನ್ನು ವಿಚಾರದಲ್ಲಿ ಮುಳುಗಿಸಿತು. ಸ್ವಲ್ಪ ಹೊತ್ತಿನ ನಂತರ ಮತ್ತೆ:

"ಎಷ್ಟು ವರ್ಷವಾಯಿತು ಜೈಲಿಗೆ ಬಂದು?"

"ನಾಲ್ಕೈದು ವರ್ಷವಾಗಿರಬಹುದು!"

"ಕಾರಣ.......?"

"ನಿಮಗೇನು ಮಾಡೋದೈತಿ? ಯಾಕೆ? ಇನ್ನೂ ಹೆಚ್ಚಿನ ಶಿಕ್ಷೆ ಕೊಡಬೇಕಂತ ಆಶೆ ಐತೇನು?" ಮಾರಣ್ಣ ಬಿಗಿದುಹಿಡಿದ ನಾಲಗೆ ಸಡಿಲಿಸಿ ನುಡಿದನು.

ರಾಮರಾಯರಿಗೆ ತಾವು ಆರೀತಿ ನೇರವಾಗಿ ಕೇಳಿದುದು ತಪ್ಪು—ಎನ್ನಿಸಿತು. ಮಾರಣ್ಣನ ಪೂರ್ವವೃತ್ತಾಂತ ಸ್ವಲ್ಪ ಅವರಿಗೂ ತಿಳಿದಿತ್ತು. ಅವನ ತಮ್ಮನೊಬ್ಬ ಮಿಲಿಟರಿಯನ್ನು ಸೇರಿದ್ದನು. ತಮ್ಮನ ಬಗ್ಗೆ ಮಾರಣ್ಣನಲ್ಲಿ ಒಂದು ತರದ ಅಭಿಮಾನವಿತ್ತು. ಅವನ ಹೆಸರನ್ನು ತೆಗೆದು ಹೊಗಳಿದಲ್ಲಿ ಮಾರಣ್ಣನ ಮನಸ್ಸು ಉಬ್ಬುತ್ತಿತ್ತು.

"ಹುಂ, ಸರಿ! ನಿನ್ನ ತಮ್ಮನ ಹೆಸರು 'ಭೀಮ' ಅಲ್ಲ?"

"ಹೌದು."

"ಅವನು ಈಗ ಮಿಲಿಟರಿ ಕಮಾಂಡರ್ ಆಗಿದ್ದಾನಂತೆ."

"ಹೌದು....?" ಎಂದು ಕೇಳಿದನು ಮಾರಣ್ಣ. ಕಣ್ಣಿನಲ್ಲಿ ಆನಂದ—ಕುತೂಹಲಗಳೆರಡೂ ಕೂಡಿಕೊಂಡಿದ್ದುವು. 'ರಾಮರಾಯರಿಗೆ ಇದೆಲ್ಲ ಹೇಗೆ ಗೊತ್ತು?' ಎಂಬ ಪ್ರಶ್ನೆ ಅವನಲ್ಲಿ ಉದ್ಭವಿಸಿತು. ಆದರೆ ಅದೇಕೋ, ರಾಮರಾಯರ ಬಗ್ಗೆ ಅವನಲ್ಲಿ ಆತ್ಮೀಯತೆ ಮೂಡಿತ್ತು. ಸರಳವಾಗಿ ಉತ್ತರವನ್ನೀಯಬೇಕೆಂದು ಮನಸ್ಸಾಯಿತವನಿಗೆ. ಅವನ ಮುಖವನ್ನು ನೋಡಿದ ರಾಮರಾಯರಿಗೆ ತೃಪ್ತಿಯುಂಟಾಯಿತು. ಮತ್ತೆ ಅದೇ ಪ್ರಶ್ನೆಯನ್ನು ಕೇಳಿದರು:

"ಇಲ್ಲಿ ಬರಲು ಕಾರಣವೇನು ಮಾರಣ್ಣಾ? ನಿನ್ನೂರು ಹೊಸೂರು—ಅಲ್ಲವೆ?"

"ಹೌದು."

"ಹುಂ?"

"ಅದೊಂದು 'ಪರಸಂಗ'! ನಾನು ಮಾಡಿದ್ದು ತಪ್ಪೇನೋ ನಿಜ. ಆದರೆ........"

"ಹೇಳು, ಹೇಳು, ಇದ್ದುದನ್ನು ಸತ್ಯವಾಗಿ ಹೇಳು ಆತ್ಮವಂಚನೆ ಬೇಡ."

* * * *

ಮಾರಣ್ಣ ನೆನಪು ಮಾಡಿಕೊಂಡು ಹೇಳತೊಡಗಿದ.... ಅವನು ಹೇಳಿದುದರ ಮಥಿತಾರ್ಥ ಹೀಗಿದೆ:

ಹೊಸೂರು ಮಾರಣ್ಣನ ಊರು. ಆದರೆ ಹೊಟ್ಟೆಯ ಪಾಡಿಗಾಗಿ ಅವನು ಪಟ್ಟಣವನ್ನು ಸೇರಬೇಕಾಯಿತು. ಮನೆಯಲ್ಲಿ ತಾಯಿ ಒಬ್ಬಳೆ. ಅತ್ತಿತ್ತ ಕೆಲಸಕ್ಕೆ ಅಲೆದಾಡಿದನು. ಆದರೇನು? ಎಲ್ಲವೂ ನಿಷ್ಫಲ. ಕೊನೆಗೆ ಕೈಗಾಡಿಯೊಂದನ್ನು ಪಡೆದುಕೊಂಡು 'ಹಮಾಲಿ' ಕೆಲಸವನ್ನು ಮಾಡತೊಡಗಿದನು. ದಿನಾಲು ಮುಂಜಾನೆಯಿಂದ ಸಂಜೆಯವರೆಗೆ ಕೆಲಸ ಮಾಡಿದಾಗ, ರೂಪಾಯಿಯೋ, ರೂಪಾಯಿಎಂಟಾಣೆಯೋ ದೊರೆಯುತ್ತಿತ್ತು. ಮನೆಗೆ ಅದರಿಂದ ಜೋಳವನ್ನೂ ಇನ್ನಿತರ ಅವಶ್ಯಕ ಪದಾರ್ಥಗಳನ್ನೂ ಕೊಂಡು ಒಯ್ಯುತ್ತಿದ್ದನು. ಅನಂತರ ಅದನ್ನು ಬೀಸಿಸಬೇಕು. ಮುದುಕಿ ರೊಟ್ಟಿ ಸುಟ್ಟು,

ಪಲ್ಲೆಕಾಯಿಯನ್ನು ಮಾಡಿದಮೇಲೆ ಇಬ್ಬರೂ ಕೂಡಿಯೇ ಊಟ ಮಾಡಿ, ಮರುದಿನಕ್ಕಾಗಿ ಉಳಿಸಿಕೊಳ್ಳಬೇಕು. ಮರುದಿನ ಮಾರಣ್ಣ ಇದ್ದಷ್ಟು ತಂಗಳನ್ನು ತಿಂದು ಕೆಲಸಕ್ಕೆ ಹೋಗಬೇಕು. ಅಂತೂ ಇಂತೂ ಆ ತಾಯಿ-ಮಗ ಇಬ್ಬರೂ ಬಂದಷ್ಟರಲ್ಲಿ ತೃಪ್ತಿಪಡೆದು ಕಾಲಕಳೆಯುತ್ತಿದ್ದರು. ಆದರೆ ವಿಧಿಗೆ ಇದು ಸರಿಬರಲಿಲ್ಲವೇನೋ! ಬೆಳಕನ್ನು ಹಿಂಬಾಲಿಸಿಯೇ ಬರುವ ಕತ್ತಲೆಯಂತೆ, ಮಾರಣ್ಣನ ಜೀವನದಲ್ಲಿ 'ದುಗುಡ' ಹಣೆಯಿಕ್ಕಲು ಬರತೊಡಗಿತು

ಮಾರಣ್ಣನದು ಈರಣ್ಣನದು ಬಹಳ ದಿನಗಳಿಂದಲೂ ಗೆಳೆತನ. ಇಬ್ಬರೂ ಸಮವಯಸ್ಕರು. ಈರಣ್ಣನಿಗೆ ಸಂಸಾರದ ಯಾವ ಜಂಜಾಟವೂ ಇರಲಿಲ್ಲ. ಅವನೂ ಇಂತಹ ಕಷ್ಟದ ಕೆಲಸವನ್ನು ಮಾಡುತ್ತಿದ್ದರೂ 'ಷೋಕಿ' ಬಹಳ. ಕುಡಿಯುವುದು, ತಿನ್ನುವುದು, ಸೇದುವುದು. ಮುಂತಾದ ಸರ್ವ ದುರ್ಗುಣಗಳೂ ಅವನಲ್ಲಿ ಮನೆ ಮಾಡಿಕೊಂಡಿದ್ದುವು. ಸಾಮಾನ್ಯ, ಹೆಚ್ಚು ಭಾರವಲ್ಲದ ವಸ್ತುಗಳನ್ನು ಹೊತ್ತುಹಾಕುವುದು – ಬಂದಷ್ಟರಲ್ಲಿ ಎಲ್ಲಿಯೋ ತಿಂದು, ಕುಡಿದು, ಎಲ್ಲಿಯೋ ಮಲಗಿಕೊಳ್ಳುವುದು—ನಿತ್ಯದ ಹಾಡು ಅವನದು. ಸಹವಾಸದಿಂದ ಮಾರನೂ ಕೆಲವು ದಿನಗಳಲ್ಲಿಯೇ ಅವನ ಎಲ್ಲ ಸು–ದುರ್ಗುಣಗಳನ್ನು ಕರತಲಾಮಲಕವನ್ನಾಗಿಮಾಡಿಕೊಳ್ಳದೆ ಬಿಡಲಿಲ್ಲ. ಈಗ ಮಾರ ಕೆಲಸ ಮಾಡುವುದು ಕಡಮೆಯಾಯಿತು; ಬರುವ ಹಣವೂ ಕಡಮೆಯಾಯಿತು. ಖರ್ಚು ಜಾಸ್ತಿಯಾಯಿತು ಮುದುಕಿಗೆ ಸ್ವಲ್ಪ ಸಾಮಾನನ್ನೊಯ್ದು ಕೊಟ್ಟು, ಎರಡು ಮೂರು ದಿನಗಳವರೆಗೆ ಮಾಡಲು ಹೇಳುತ್ತಿದ್ದನು ಮಗನಲ್ಲಾದ ಈ ಪರಿವರ್ತನೆ ಮುದುಕಿಗೆ ಭಯವನ್ನುಂಟುಮಾಡಿತು. ತಿಳಿಸಿ ಹೇಳಹೋದಳು; ಮಾರಣ್ಣ ಸಿಡುಕುಕೊಂಡು ಹೊರಟುಬಿಟ್ಟನು.

ಅಂದು ಮೊದಲನೆಯ ದಿನ ಸಂಜೆ ಮನೆಬಿಟ್ಟವನು, ಮರುದಿನ ಸಂಜೆಯಾದರೂ ಮಾರಣ್ಣ ಮನೆಗೆ ಮರಳಲಿಲ್ಲ. ಮುದುಕಿಗೆ ಗಾಬರಿಯಾಯಿತು. ನೆರೆಹೊರೆಯವರಲ್ಲಿ ವಿಚಾರಿಸಿದಳು. ಅಂದು ಅವನು ಕೆಲಸಕ್ಕೆ ಹೋಗದೆ ಈರಣ್ಣನೊಡನೆ 'ಗಡಂಗ'ಕ್ಕೆ ಹೋದುದು ಗೊತ್ತಾಯಿತು. ಮುದುಕಿಗೆ ಹೌಹಾರಿ ಹೋಯಿತು. ನಿರ್ವಿಣ್ಣಳಾಗಿ ಭಾರವಾದ ಹೃದಯದಿಂದ ಸೀರೆಯ ಸೆರಗಿನಿಂದ ಕಣ್ಣೊರಸಿಕೊಳ್ಳುತ್ತ, "ಅವನಂತೂ ಓಡಿಹೋದ. ಇವನೂ ಇಂಗೇ ಆಗ್ಬೇಕಾ?" ಎಂದುಕೊಳ್ಳುತ್ತ ಮನೆಗೆ ಬಂದಳು. ಬರುವುದರಲ್ಲಿ ಮಾರಣ್ಣ ಮನೆಗೆ ಬಂದಿದ್ದನು. ಬಾಯಿಗೆ ಬಂದಂತೆ ಒದರಾಟವನ್ನಾರಂಭಿಸಿದ್ದನು ಸುರಾದೇವಿ ಅವನಿಗೆ ಸ್ಫೂರ್ತಿಯನ್ನೀಯುತ್ತಿದ್ದಳು. ತಾಯಿ ಮಗನಿಗೆ ಬುದ್ಧಿವಾದದ ನಾಲ್ಕು ಮಾತನಾಡಿದಳು. ಆದರೆ ಮಾರ: "ಏಯ್, ನಿನ್ನ ಕಟ್ಕೊಂಡು ನನ್ಗೇನು ಮಾಡೂಂತಿ? ಹೆಹ್ಹೆಹ್ಹೆ, ಮುದುಕೀ! ನಾನು ಹೋಗ್ತೀನಿ, ಅಲ್ಲಿ ಕರೀಲಾಕ್ಹತ್ಯಾಳೆ ನನ್ನ ಗೆಣತಿ! ಹೋಗ್ತೀನಿ, ಹೋಗ್ತೀನಿ" ಎನ್ನುತ್ತ ಓಡಿಬಿಟ್ಟನು.

ಆಕೆಗೆ ಎಲ್ಲವೂ ಅರ್ಥವಾಯಿತು; ಆದರೆ ಅವಳು ಏನೂ ಮಾಡುವ ಹಾಗಿರಲಿಲ್ಲ. ಹೊಟ್ಟೆ ಹಸಿದಿತ್ತು. ಹೃದಯ ದುಃಖದಿಂದ ತುಂಬಿತ್ತು. ಸುಮ್ಮನೆ, ನಿರ್ವಿಣ್ಣಳಾಗಿ ಕಣ್ಣೀರ್ಗರೆಯುತ್ತ ಬಿದ್ದುಬಿಟ್ಟಳು ಹರಕು ಕೌದಿಯಮೇಲೆ.

ದಿ ನ್ಯಾಶನಲ್ ಮ್ಯೂಜಿಕಲ್ ಹಾಲ್
ಧಾರವಾಡ

ಗಡಿಯಾರ, ಚಾಳೀಸು, ರೇಡಿಯೊ, ಗ್ರಾಮೊಫೋನ್
ಮಾರಾಟಮಾಡುವವರು, ರಿಪೇರಿ ಮಾಡುವವರು.

ನಂಬುಗೆಯ ಮಾಲು! ಪ್ರಾಮಾಣಿಕ ವ್ಯವಹಾರ

ಧಾರವಾಡದಲ್ಲಿ ಹಲವು ವರ್ಷಗಳಿಂದ ನಮ್ಮ ವ್ಯವಹಾರ
ನಡೆದಿದ್ದು, ಗ್ರಾಹಕರ ವಿಶ್ವಾಸಾದರಗಳನ್ನು ಗಳಿಸಿದೆ.

ಮಾಲಕರು: **ಬಿ. ಜೆ. ಮುತ್ತಗಿ**

ಭಯಂಕರವಾದ ಕರಾಳರಾತ್ರಿ ಪಟ್ಟಣವನ್ನು ಮುಸುಕಿಕೊಟ್ಟಿತ್ತು. ಊರಹೊರಗಿನ ನಾಲ್ಕಾರು ಗುಡಿಸಲುಗಳಲ್ಲಿಯದೆ ಮಾರಣ್ಣನದೂ ಒಂದು. ಎಲ್ಲ ಬಾಗಿಲುಗಳು ಮುಚ್ಚಿದ್ದುವು. 'ರೊಯ್' ಎಂದು ಬೀಸುವ ಗಾಳಿಯ ಸಪ್ಪಳ ಮಾತ್ರ ಕೇಳಬರುತ್ತಿತ್ತು. ಮಾರಣ್ಣನ ಗುಡಿಸಲಿನಲ್ಲಿ ದೀಪ ಮಂದವಾಗಿ ಉರಿಯುತ್ತಿತ್ತು. ಗಾಳಿಯಿಂದ ಹೊಯ್ದಾಡುತ್ತಿತ್ತು. ಬಾಗಿಲು ತೆರೆದದ್ದು ತೆರೆದ ಹಾಗೆಯೇ ಇತ್ತು.

ಸುಮಾರು ಮಧ್ಯರಾತ್ರಿಯಾಗಿರಬಹುದು. ಮಾರನ ತಾಯಿ ಇನ್ನೂ ಮುದುಡಿಕೊಂಡು ಹಾಗೆಯೇ ಬಿದ್ದಿದ್ದಳು. ಅವಳು ಚಳಿಹಿಡಿದವಳಂತೆ ನಡುಗುತ್ತಿದ್ದಳು. ಒಮ್ಮೆಂದೊಮ್ಮೆಲೆ ಬಲಭಾಗದ ಶರೀರ ಬಿದ್ದುಹೋಯಿತು. ಅದರಲ್ಲೇನೂ ಸತ್ತ್ವ ಉಳಿದಿರಲಿಲ್ಲ. ಕೆಟ್ಟ ಧ್ವನಿಯಿಂದ ಚೀರಿದಳು. ನೆರೆಹೊರೆಯವರೆಲ್ಲ ಓಡಿಬಂದರು. ಮನೆಯಲ್ಲಿ ಮಾರಣ್ಣ ಇಲ್ಲದುದನ್ನು ಕಂಡು, ಒಬ್ಬರು ಅವನನ್ನು ಹುಡುಕಲು ಹೋದರು. ಎಲ್ಲಿಯಾದರೂ ಅಂಗಡಿಯೊಂದರ ಮುಂಭಾಗದ ಕಟ್ಟೆಯ ಮೇಲೆ ಮಲಗಿರಬೇಕೆಂದು ಅವರ ತಿಳುವಳಿಕೆ.

ಆದರೆ........?

× × × ×

ಇಲ್ಲಿ ಮಾರಣ್ಣ ಯಾವಳೋ ಒರ್ವಳೊಡನೆ ಚಕ್ಕಂದವಾಡುತ್ತಿದ್ದನು. ಈ ಉದ್ಯೋಗ ಕೂಡ ಗೆಳೆಯನಿಂದ ಪಡೆದುದೇ. ಆದರೆ ಒಮ್ಮೆಲೆ ಅವನಿಗೆ ಏನಾಯಿತೋ ಏನೋ? ಎದ್ದು ಮನೆಯೆಡೆಗೆ ಓಡತೊಡಗಿದನು. ಅವನ ಎದೆ 'ಡಬ್ ಡಬ್' ಎಂದು ಹೊಡೆದುಕೊಳ್ಳುತ್ತಿತ್ತು. ಅವನ ಮೈಮೇಲೆ ಎಚ್ಚರಿಕೆ ಬಂದಿತ್ತು. ದೂರದಿಂದಲೇ ನೋಡಿದನು. ಬಾಗಿಲು ತೆರೆದಿತ್ತು. ದೀಪ ಉರಿಯುತ್ತಿತ್ತು. ಯಾರೋ ಹೋಗಿ ಬರುವಂತೆ ಕಾಣಿಸಿತು. 'ಏನೋ ನಡೆದಿದೆ' ಎಂದು ಬಗೆದು ಗಾಬರಿಯಿಂದ ಓಡತೊಡಗಿದನು. ಮನೆಯ

ಸಮಾಜದಲ್ಲಿ ಇರುವಷ್ಟರಲ್ಲಿ ಎಲ್ಲ ವಿಷಯ ತಿಳಿಯಿತು. ಮಾರಣ್ಣ ಈಗ ಬಹಳ ಗಾಬರಿಯಾದನು. ಮಗುವಿನಂತೆ, "ಅವ್ವಾ!" ಎನ್ನುತ್ತ ಒಳಹೊಕ್ಕು ಗೋಳಾಡತೊಡಗಿದನು. ಆದರೆ ಅಲ್ಲಿಯ ಹಿರಿಯ-ರೊಬ್ಬರು ಮಾರಣ್ಣನನ್ನು ಸಂತಯಿಸುತ್ತ, "ಮಾರಣ್ಣಾ, ಹೀಂಗ ಅತ್ತರ ಏನಾದೀತು! ಗಡಾನ ಹೋಗಿ ಯಾರನ್ನಾದ್ರೂ ಡಾಕ್ಟರ್ನ ಕರೆದು ತೋರಿಸು, ಇಲಾಜು ಮಾಡಿಸು, ಅಂದ್ರ ಏನಾದ್ರೂ ಕಮ್ಮಿ ಆದೀತು!" ಎಂದರು.

ಮಾರಣ್ಣನಿಗೆ ಆಗ ಆ ವಿಚಾರ ಒಪ್ಪಿಗೆಯಾಯಿತು. ಮೊದ-ಮೊದಲು ಅವನಿಗೆ ಹೊಳೆದಿರಲಿಲ್ಲ. ಕಷ್ಟಕಾಲದಲ್ಲಿ ಯಾವುದೂ ಕೂಡಲೇ ಹೊಳೆಯುವುದಿಲ್ಲ. 'ಡಾಕ್ಟರ್' ಎಂದೊಡನೆ ಮಾರಣ್ಣನಿಗೆ ಫೀಸಿನ ನೆನಪಾಯಿತು. ಆದರೆ ಅಂದು ತಾನು ಕೆಲಸಮಾಡದಿ-ದ್ದುದು ನೆನಪಾಗದಿರಲಿಲ್ಲ. ಜೇಬಿನಲ್ಲಿ ಕೈಹಾಕಿದನು. ಒಂದೇ ಒಂದು ದುಡ್ಡು ಉಳಿದಿತ್ತು. ಮುಖ ಕಪ್ಪಿಟ್ಟುಹೋಯಿತು. ತನ್ನ ತಾಯಿಯ ಡಬ್ಬಿಯಲ್ಲಿ ಏನಾದರೂ ಇರಬಹುದೇ? — ಎಂದು ಹುಡುಕಿದನು. ಆದರೆ ನಿರಾಶೆ ಕಾದಿತ್ತು. ಅಲ್ಲಿಯ ಯಾವ ಪುಣ್ಯಾತ್ಮನೋ ಆ ಸಮಯದಲ್ಲೂ ಸಾಧಿಸಿದ್ದನು. ಮಾರಣ್ಣನು ದಿಙ್ಮೂಢನಾಗಿ ನಿಂತುಬಿಟ್ಟನು. 'ಜಗತ್ತಿನಲ್ಲಿ ಹಣವೊಂದೇ ಇಲ್ಲ; ಮಾನವತೆಗೂ ಸ್ಥಾನವಿದೆ' ಎಂದೆನಿಸಿದಾಗ, ಡಾಕ್ಟರರ ಮನೆಯೆಡೆ ಓಡಿದನು.

ನಡುರಾತ್ರಿಯ ಸಮಯ. ಮೂರುನಾಲ್ಕು ಜನ ಡಾಕ್ಟರರು, ಬಾಗಿಲನ್ನು ಕೂಡ ತೆಗೆಯದೇ ಬೈದು ಕಳುಹಿದರು, ಮಾರಣ್ಣನಿಗೆ ಕೋಪ ಬಂತು. ಆದರೆ......? ಬಡವನ ಸಿಟ್ಟು......ಕೊನೆಗೆ ಕೊನೆಯ ಪ್ರಯತ್ನವೆಂದು ಡಾ. ರಂಗರಾಯರ ಮನೆಗೋಡಿದನು. ಅವರ ಮನೆ ದೂರವಿತ್ತು. ಆದರೆ ಗತಿಯಿರಲಿಲ್ಲ. ಅವರ ಮನೆಗೆ ಹೋಗಿ ಕೂಗಿದೊಡನೆ ಬಾಗಿಲು ತೆರೆದರು; ವಿಷಯವನ್ನು ಕೇಳಿ ತಿಳಿದರು.

"ಡಾಕ್ಟರ್! ನನ್ನ ತಾಯಿವ್ನ ಉಳಿಸಿಕೊಟ್ಟು ಉಪಕಾರ ಮಾಡ್ರಿ—ಡಾಕ್ಟರ್" ಎಂದು ಅಲ್ಪರಿದನು.

"ಅದೇಕಪ್ಪಾ? ನಾವಿರೋದೇ ಈ ಕೆಲಸಕ್ಕಾಗಿ. ಈಗ ಬರ್ತೀನಿ ಇಲ್ಲೇ ಇರು" ಎಂದು ಅವರು ನುಡಿದರು.

"ಡಾಕ್ಟರ್! ನೀವು ನನ್ನ ದೇವರು ಡಾಕ್ಟರ್" ಎಂದು ಅವರ ಕಾಲುಬಿದ್ದು ಕೊಂಡಾಡಿದನು.

ಡಾ. ರಂಗರಾಯರು ತಮ್ಮ ಸಾಮಾನುಗಳನ್ನು ತರಲು ತಮ್ಮ ಕೋಣೆಗೆ ಹೋದವರು ತಿರುಗಿ ಬಂದು, "ಮಾರಣ್ಣಾ, ಅದೆಲ್ಲಾ ಸರಿ—ಫೀಸು ತಂದೀ ಏನು?"

"ಇಲ್ಲ ಡಾಕ್ಟರ್, ಮುಂಜಾನೆ ಕೊಡ್ತೀನಿ."

"ಉಹುಂ, ಅದೆಲ್ಲಾ ಆಗೋದಿಲ್ಲ. ಫೀಸಿಲ್ಲದೇ ಬರಲಿಕ್ಕೆ ಆಗೋದಿಲ್ಲ. ಓಹ್ಹೋ, ಅದಕ್ಕೇ ಏನು ಈ ನಿನ್ನ ನಾಟಕ?"

"ನಾಳೆ ಕೊಡ್ತೀನ್ರಿ....ನಾಳೆ.......

"ಆ ಮಾತೇ ಇಲ್ಲ."

"ನನ್ನ ತಾಯಿ ಸಾಯಾಕ್ಹತ್ಯಾಳ್ರೀ....

"ಆಗೋದಿಲ್ಲಪ್ಪಾ ಆಗೋದಿಲ್ಲ! ನನ್ನಲ್ಲಿ ಪೇಷಂಟ್ನೀ ಬರೋ-ದಿಲ್ಲ. ಬಂದ್ರ ಇಂಥಾವ್ರು! ಛೆ ಛೇ! ಇಲ್ಲಿಲ್ಲ" ಎನ್ನುತ್ತ ಅವರು ನಿಲ್ಲದೇ ಹೋಗಿಬಿಟ್ಟರು.

ಮಾರಣ್ಣನಿಗೆ ಬಹಳ ತಾಪವಾಯಿತು. ತಾನು ಅಂದು ಕೆಲಸ ಮಾಡದಿದ್ದುದಕ್ಕೆ ಪಶ್ಚಾತ್ತಾಪವೂ ಆಯಿತು. ಯಾವ ಮಾರ್ಗವೂ ತೋಚದಾಯಿತು. ಯಾರಲ್ಲಿಯಾದರೂ 'ಕೈಗಡ' ಕೇಳಬೇಕೆಂದನು. ಆದರೆ ಎಲ್ಲವೂ ವ್ಯರ್ಥವಾಗುವಂತಿತ್ತು. ತಾನು ಕೆಲಸ ಮಾಡುತ್ತಿದ್ದ ಅಂಗಡಿಯ ಮಾಲಕನನ್ನು ಕೇಳಬೇಕೆಂದನು. ಆದರೆ ಅವನು ಕೂಲಿಯ ಹಣವನ್ನೇ ಸರಿಯಾಗಿ ಕೊಡುತ್ತಿರಲಿಲ್ಲ ಮಾರಣ್ಣನಿಗೆ ಸಮಾಜದ ಬಗ್ಗೆಯೇ ಜುಗುಪ್ಸೆಯಾಯಿತು. ಕೋಪವೂ ಬಂತು. ಕೊನೆಗೆ ಏನನ್ನೋ ನಿರ್ಧರಿಸಿಕೊಂಡು ಶೇಠಜಿಯ ಮನೆಯೆಡೆಗೆ ಲಗುಬಗೆಯಿಂದ ಹೆಜ್ಜೆ ಹಾಕತೊಡಗಿದನು.

ನೇರವಾಗಿ ಶೇಠಜಿಯ ಮನೆಯನ್ನು ಸಮೀಪಿಸಿದನು. ನಿಶ್ಶಬ್ದತೆ ತಾಂಡವವಾಡುತ್ತಿತ್ತು. ಒಳಕ್ಕೆಹೋಗಲು ದಾರಿ ಹುಡುಕಾಡಿದನು. ಸಿಕ್ಕಲಿಲ್ಲ. ಸರಸರನೆ ಏರಿ ಕಿಟಕಿಯಿಂದ ಒಳಕ್ಕೆಹೋಗಿ ಡ್ರಾಯರಿ-ನಲ್ಲಿಂದ ರೂಪಾಯಿಯನ್ನು ತೆಗೆದುಕೊಂಡು ಹೊರಟಿದ್ದನು. ಶೇಠಜಿ ಅಲ್ಲಿ ಇರಲಿಲ್ಲ; ಆದರೆ ಅಷ್ಟರಲ್ಲಿ ಒಳಕ್ಕೆ ಬಂದನು. ಮಾರಣ್ಣ ಅವನಿಗೆ ಕಾಣಿಸಿದನು. "ಚೋರ್ ಚೋರ್" ಎನ್ನುವಷ್ಟರಲ್ಲಿ ಮಾರಣ್ಣ 'ಟಣ್ಣನೆ' ಜಿಗಿದು ಕಾಲಿಗೆ ಬುದ್ಧಿ ಹೇಳಿದನು. ಆದರೆ ಎಲ್ಲವೂ ವ್ಯರ್ಥವಾಯಿತು. ಹೊರಬಾಗಿಲನ್ನು ದಾಟುವಷ್ಟರಲ್ಲಿ ಹಿಡಿದುಬಿಟ್ಟರು. ಮಾರಣ್ಣ ಅನನ್ಯವಾಗಿ ಹೇಳಿಕೊಂಡನು. ಆದರೂ ಶೇಠರು ಪೋಲೀಸರ ವಶಕ್ಕೆ ಕೊಟ್ಟುಬಿಟ್ಟರು. ನ್ಯಾಯಾಲಯದಲ್ಲಿ ನ್ಯಾಯಾಧೀಶರ ಮುಂದೆಯೂ ಆತ ಸತ್ಯಸಂಗತಿಯನ್ನು ಹೇಳಿದನು. ಆದರೆ ಹಣ, ಅಧಿಕಾರಗಳು ಸತ್ಯ–ಮಾನವತೆಗಳನ್ನು ನಿರ್ಲಕ್ಷ್ಯಿ-ಸಿದುವು. ಮಾರಣ್ಣನ ಮೇಲೆ ಕೊಲೆಯ ಪ್ರಯತ್ನದ ಆರೋಪವೂ ಸಿದ್ಧವಾಗಿ 'ಹತ್ತು ವರ್ಷ ಕಠಿಣ ಶಿಕ್ಷೆ' ಎಂದು ತೀರ್ಮಾನವಾಯಿತು. ಈಗ ಐದಾರು ವರ್ಷಗಳಾದುವು.

ಮಾರಣ್ಣ ಕೊನೆಗೊಳಿಸುತ್ತ ಹೇಳಿದನು: "ಅಂದು ಅನ್ಯಾಯ ನ್ಯಾಯವನ್ನು ಸೋಲಿಸಿತು ಆದರೆ ಜಗತ್ತಿನಲ್ಲಿ ಕೊನೆಯವರೆಗೂ ಇದು ಇರಲಾರದು. ಎಂದೆಂದಿಗೂ ನ್ಯಾಯಕ್ಕೇ ಜಯ. ಎಲ್ಲೆಲ್ಲಿಯೂ ನ್ಯಾಯಕ್ಕೇ ಜಯ!" ಎಂದು ಮುಗಿಸಿದನು.

ಮಾರಣ್ಣನ ಕಣ್ಣುಗಳಿಗೆ 'ಕಾವು' ಏರಿತ್ತು. ಕಂಠದಲ್ಲಿ ನಡುಕವಿತ್ತು:

"ಆದರೆ ಕೊನೆಗೂ ನನ್ನ ತಾಯಿಯನ್ನು ನಾನು ಉಳಿಸಿಕೊಳ್ಳಲಿಲ್ಲ! ಆಕೆ ಹೋಗಿಯೇಬಿಟ್ಟಳು! ನನ್ನಂತಹ ಮಗ ಇದ್ದರೇನು ಬಿಟ್ಟರೇನು? ಆಕೆ........ಆಕೆ.......ಹೋಗಿಯೇಬಿಟ್ಟಳು ದೂರ........ ದೂsssರ," ಎನ್ನುತ್ತಿರುವಾಗ ದುಃಖ ಉಮ್ಮಳಿಸಿ ಬಂತು. ಜೋರಾಗಿ ಮಗುವಿನಂತೆ ಮಾರಣ್ಣ ರೋದಿಸತೊಡಗಿದನು.

× × × ×

(೧೩೦ನೆಯ ಪುಟ ನೋಡಿರಿ)

ಆಗಸ್ಟ ೧೫

ಶ್ರೀ. ಎಸ್. ಎಸ್. ಬಸುಪಟ್ಟದ ಎಂ. ಎ., ಬಿ. ಟಿ. ಗುಳೇದಗುಡ್ಡ

卐

ಆಗಸ್ಟ ೧೫ರೆಡೆ ದೃಷ್ಟಿ ಸಾಗಿತು ಆಗ
ಕ್ಯಾಲೆಂಡರಿನಲ್ಲಿ—
ಆ ಚಣವೆ,
ಸ್ವಾತಂತ್ರ್ಯದಿನೋದಯವ ಸಾರಿ
ಗಂಟೆ ಹೊಡೆಯಿತು ಆರು
ಗಡಿಯಾರದಲ್ಲಿ—
ರಾಷ್ಟ್ರವೀರರ ಪ್ರಾಣ ಬಲಿದಾನವಾಯ್ತಾದಕೆ.
ಅಂತು, ಬಂತೊಮ್ಮೆ ಭಾರತಕೆ
ಸ್ವಾತಂತ್ರ್ಯದಿನವು.
ಸ್ವಾತಂತ್ರ್ಯ ಬಂತು, ಭೂಮಿಯುಲಿ ಹೂಳಿಟ್ಟ
ಹಣವು ತಾ ಮೇಲೆದ್ದಂತೆ.

× × ×

ಸುತ್ತುವುತ್ತಿದ್ದ ಜನವೆಲ್ಲ
ತುದಿಗಾಲ ಮೇಲ್ನಿಂತು
ಅದರ ಬರವಿನ ಬೆಡಗ
ನೋಡಿ ನಲಿಯಿತು ಅಂದು.
ಅದರ ಸೊಬಗನು ಬಿಡದೆ
ಹಾಡಿ ಹರಿಸಿತು ಅಂದು
" ಹಾಲು-ಜೇನಿನ ಹೊಳೆಯು
ಮಧುರ ಸ್ನೇಹದ ತೊಳೆಯು
ನಮ್ಮದಾಯಿತು ಇಂದು ! "
ಇಂತೆಂದು
ಜನವೆಲ್ಲ ಕನಸ ಕಂಡಿತು ಆಗ;
ಮನದಿ ಮಂಡಿಗೆಯನುಂಡಿತು ಹಾಗೆ.

× × ×

' ಅವ ರಾಜ, ಇವ ಪ್ರಜೆಯು ! '
ಎಂಬ ಈ ರುಜೆಯು
ಕಂಬಿಕಿತ್ತಿತು ಮುಂದೆ—
ಸಕಲ ಸಂಸ್ಥಾನಗಳೆಲ್ಲ ವಿಲೀನವಾದಂದೆ;
ರಾಜ, ಮಹಾರಾಜರ ' ಜಬರ್ದಸ್ತು ' ಅಡಗಿತಂದೆ.
" ಭಾರತದಿ ಜನಿಸಿರುವ ಜೀವಕೋಟಿಗಳೆಲ್ಲ
ಒಂದೆ ತಾಯಿಯ ಮಕ್ಕಳೆಲ್ಲ ನಾವು;—
ಎಲ್ಲರೂ ಒಂದೆ ತೆರ, ಮೇಲು-ಕೀಳುಗಳಿಲ್ಲ;
ನಮ್ಮುಸಿರು ಸಮತೆ ಮೇಣ್ ಸ್ವಾತಂತ್ರ್ಯವು.
ಎಂಬ ಹಾಡನು ಹಾಡಿ ನಲಿಯಿತೋ ಜನತೆ,
ಬೆಳಕ ಚೆಲ್ಲಿತು ಇಂತು ಹಂಬಲದ ಹಣತೆ.

× × ×

ನಮ್ಮದೊಂದೇ ದೇಶ.
ಆದರೂ,
ವಿಧವಿಧದ ಭಾಷೆ !
ವಿಧವಿಧದ ಜನವು !
ಈ ವಿಧವಿಧದ ಭಾಷೆ, ಜನಕೆಲ್ಲಕೂ ಒಂದೊಂದು ರಾಜ್ಯ.
ಇಂತಿದ್ದರೂನೂ,
ನಮ್ಮದೊಂದೇ ದೇಶ.
" ವೈವಿಧ್ಯದಲಿ ಏಕತ್ವ, ಏಕತ್ವದಲಿ ವೈವಿಧ್ಯ "
ಇದು ನಮ್ಮ ಸಂಸ್ಕೃತಿಯ ಜೀವ-ಜೀವಾಳ.

× × ×

ಆಗಸ್ಟ ಹದಿನೈದು !
ಸ್ವಾತಂತ್ರ್ಯದಿನ !!
ಮೊಳಗುತಿದೆ ಬ್ಯಾಗಲ್ಲು ಮೇಲಿಂದ ಮೇಲೆ,
ಹಾರುತಿದೆ ರಾಷ್ಟ್ರಧ್ವಜವು ಕಚೇರಿಗಳ ಮೇಲೆ !
ಸಾಗಿತ್ತು ಟಾರ್‌ರೋಡಿನಲಿ ಮೆರೆವಣಿಗೆ;
ಓ, ಇದು ಪ್ರಭಾತ ಫೇರಿ !
ಶಾಲೆ ಮಕ್ಕಳ ತಂಡ
ಹೋಮಗಾರ್ಡ್ಸ-ಪೋಲೀಸರ ಮೇಳ !
ಓ, ಅಲ್ಲಿ ಊರಿನ ಮುಖಂಡ,
ಊರ ಪ್ರಮುಖರ ಜೊತೆಗೆ ಕುಲುಕುಲು ನಗುತ

ನಡು-ನಡುವೆ ಗುಣುಗುಣುತ
ಸಂತಸದಿ ಸಾಗಿಹನು.......
ಇದು ಸ್ವಾತಂತ್ರ್ಯದಿನೋತ್ಸವವು !

× × ×

ದಾರಿದ್ರ್ಯಶೃಂಖಲೆಗೆ ತುತ್ತಾಗಿ
ಹಾಡಿಹಗಲಲಿ ಹೌಹಾರಿ ಸುಸ್ತಾಗಿ,
ಬಡ ಭಾರತೀಯನು ಅಲ್ಲಿ—
ಎಂತೇನೊ ಸಾಗಿಹನು ಬಾಳಬಟ್ಟೆಯಲಿ—
ದುಡಿದುಣ್ಣಬೇಕೆಂದರೂ
ಒಂದಿನಿತು ಮಾಂಸವು ಇಲ್ಲ ಅವನ ರಟ್ಟೆಯಲಿ.
ನಿತ್ಯವೂ ಇದೆ ಅವನ ರಕ್ತಶೋಷಣೆ-
ಎಂತೇನೋ ಅವನ ಪೋಷಣೆ!
ಜೋಲು ಮುಖ, ತೆರೆದ ಬಾಯ್;
ಜೊಲ್ಲು ಸುರಿಯುತಿದೆ ಹಾಯ್ !
ಕೇಸರಿಟ್ಟಿದೆ ಹಿಂದೆ
ಕಪಿಸೈನ್ಯ
ಬರಿಹೊಟ್ಟೆಯಿಂದೆ.
ಇದು ಅವನ ಪ್ರಭಾತ ಭೇರಿ!

× × ×

ದಾಸ್ಯಶೃಂಖಲೆ ಹರಿದು
ಸ್ವಾತಂತ್ರ್ಯವನು ಪಡೆದು,
ಕಳೆದವಿಂದಿಗೆ ನಾವು ಹತ್ತು ವರುಷ;
ಆದರೂ ಬಡವನಿಗೆ ಇಲ್ಲ ಹರುಷ.
ದಾರಿದ್ರ್ಯಶೃಂಖಲೆ ಹರಿದು
ಆರ್ಥಿಕ ವಿಷಮತೆಯ ತರೆದು
ಎಂದು ಬರುವುದೊ ಏನೊ,
ಆರ್ಥಿಕ ಸಮಾನತೆಯು !
ಅಂದೆ ನಿಜ ಸ್ವಾತಂತ್ರ್ಯದಿನ;
ಅದುವೆಮಗೆ ಹಿರಿದಿನವು;
ಅದುವೆಮ್ಮ ಭಾಗ್ಯದಿನವು!

(೧೨೮ನೆಯ ಪುಟದಿಂದ ಬಂದುದು)

ಇಲ್ಲಿಯವರೆಗೂ ರಾಮರಾಯರು 'ಪಿಟ್' ಎನ್ನದೆ ಕುಳಿತಿದ್ದರು. ಮಾರಣ್ಣನ ದುಃಖ ಕಂಡು ಅವರ ಹೃದಯ ಹಿಂಡಿದಂತಾಗಿತ್ತು. ನೀಳವಾದ ಉಸಿರನ್ನು ಬಿಟ್ಟರು. ಎದ್ದು ಮಾರಣ್ಣನ ಬೆನ್ನುತಟ್ಟಿದರು. ಮಾರಣ್ಣ ಮುಖವನ್ನೆತ್ತಿದನು.

"ಮಾರಣ್ಣಾ, ನಿನ್ನಲ್ಲಿ ತಪ್ಪೇನೂ ಇರಲಿಲ್ಲ; ಆದರೆ ಹೃದಯ ರಹಿತರಾದವರ ಮೂಲಕ ನಿನಗೆ ಬಹಳ ಕಷ್ಟಪಡಬೇಕಾಯಿತು. ನಿನ್ನ ಕೃತಿ ಕಾನೂನಿನ ಮೂಲಕ ಅಪರಾಧವೇನೋ ನಿಜವಾದದ್ದೇ! ಕಾಗದದಲ್ಲಿ ಮೂಡಿಸಿದ ಕಾನೂನುಗಳಿಗೆ ಹೃದಯವೆಲ್ಲಿದೆ? ಕಾನೂನಿನೊಡನೆ ಮಾನವತೆಯನ್ನು ಎರಕಹೊಯ್ದು ವಿಚಾರಣೆ ಮಾಡುವ ಅಧಿಕಾರಿಗಳಿರಬೇಕು. ಒಮ್ಮೆ ತಪ್ಪಿದವನು ಕೊನೆಯವರೆಗೂ ತಪ್ಪುತ್ತಿರಲಾರನು. ಅವನಿಂದಾಗಬಹುದಾದ ತಪ್ಪುಗಳನ್ನು ಸಹಾನುಭೂತಿಯಿಂದ ತಪ್ಪಿಸಬೇಕು. ಜೈಲುಗಳು ಕೇವಲ ಶಿಕ್ಷೆಯೊಂದನ್ನೇ ಕೊಡುವ ನರಕಗಳಾಗಬಾರದು; ಅವು...ಮಾನವತೆಯ ಆಗರವಾಗಬೇಕು. ಮಾನವತೆಯನ್ನು ಪೂರೈಸುವ ನಾಕಗಳಾಗಬೇಕು—

ಮಾರಣ್ಣಾ! ನನಗೆ ಖೇದವಾಗುತ್ತದೆ. ನಿನ್ನ ಅಮೂಲ್ಯ ವಸ್ತುವಾದ ತಾಯಿಯನ್ನು ನಾನೀಗ ತಂದುಕೊಡಲಾರೆ; ಆದರೆ ಹಿರಿಯ ಸ್ತ್ರೀಯರೆಲ್ಲ ನಿನಗೆ ತಾಯಿಯರಾಗಿ ಕಾಣಲಿ! ಮಾನವತೆಯೇ ನಿನ್ನ ತಾಯಿಯಾಗಲಿ! ಮಾರಣ್ಣಾ, 'ಮಾನವತೆಗೆ ಮುಪ್ಪಿಲ್ಲ.' ನಾನು ನಿನ್ನ ಬಿಡುಗಡೆಗಾಗಿ ಮನಮುಟ್ಟಿ ಪ್ರಯತ್ನ ಮಾಡುತ್ತೇನೆ. ನಿನ್ನ ಹೃದಯ ಪರಿಶುದ್ಧವಾಗಿದೆ. ನಿನ್ನಿಂದ ಇನ್ನು ಯಾವ ತಪ್ಪೂ ಸಂಭವಿಸದು. ಯಾರನ್ನೂ ದ್ವೇಷಿಸಬೇಡ. ಪ್ರೀತಿಸು. ಅನಾಗರಿಕತೆಯನ್ನು ಹೋಮವಾಗಿಸು. 'ಕೈದಿಗಳನ್ನು ದಂಡಿಸುವುದೊಂದೇ ಜೈಲುಅಧಿಕಾರಿಗಳ ಕೆಲಸವಲ್ಲ. ಅವರನ್ನು ಒಳ್ಳೆಯವರನ್ನಾಗಿ ಮಾಡುವುದು ಅವರ ಕರ್ತವ್ಯ. ಜೀವಿಗಳಿಗೆಲ್ಲ. ಜಗತ್ತೇ ಒಂದು ಜೈಲಿನಂತಿದೆ. ಇದರ ಅಧಿಕಾರಿಯೂ ನಮ್ಮೊಡನೆ ಹಾಗೆಯೇ ವರ್ತಿಸಿದರೆ ಗತಿ? ಈಗ ಹೋಗು ಮಾರಣ್ಣಾ! ನಿನ್ನನ್ನು ಬಿಡುಗಡೆ ಮಾಡಿಸುತ್ತೇನೆ. ನಿನ್ನ ಬಗ್ಗೆ ನನ್ನಲ್ಲಿ ಅಭಿಮಾನವಿದೆ. ಆತ್ಮವಿಶ್ವಾಸವಿದೆ.' ಎಂದು ನುಡಿದರು. ಅವರ ಕಣ್ಣಂಚಿನಲ್ಲಿ ನೀರು ತುಂಬಿತ್ತು.

ಮಾರಣ್ಣ ಅವರನ್ನೊಮ್ಮೆ ನೋಡಿದನು. ಮಾನವತೆಯೇ ಮೂರ್ತಿಯಾಗಿ ಬಂದು ನಿಂತಂತಿತ್ತು. ತಟ್ಟನೆದ್ದು "ಸ್ವಾಮಿ!" ಎಂದು ಅವರ ಕಾಲಿಗೆ ಬಿದ್ದನು. ಅವನನ್ನೆಬ್ಬಿಸುತ್ತ, "ಏಳು, ಮಾರಣ್ಣಾ; ಏಳು. ನೀನು ಬಹಳ ಕಷ್ಟಪಟ್ಟೆ!" ಎನ್ನುತ್ತ ಅವನನ್ನು ಅಪ್ಪಿಕೊಂಡು ಕಣ್ಮುಚ್ಚಿಕೊಂಡರು.

ಗೆಳೆಯರಿಬ್ಬರು ದೀರ್ಘವಾದ ಅಗಲಿಕೆಯ ನಂತರ ಕೂಡಿದಂತಿತ್ತು ಅವರ ಆ ಕೂಟ.

ಕನ್ನಡದಲ್ಲಿ ಸಣ್ಣಕತೆಗಳು

ಪ್ರೊ. ಸಿ. ಎಸ್. ಕುಲಕರ್ಣಿ, ಎಮ್. ಎ., ಬಿ. ಟಿ. ಜನತಾ ಕಾಲೇಜ್ ಧಾರವಾಡ

ಲೇಖಾಂಕ ೨

ಬೆಳೆವಣಿಗೆ

(ಕಳೆದ ಸಂಚಿಕೆಯಿಂದ ಮುಂದುವರಿದದ್ದು)

'ಪ್ರಗತಿಶೀಲರ' ಕಾಲ:— "ಕನ್ನಡ ಸಣ್ಣಕಥೆಗಳ ಸ್ವರ್ಣಯುಗ (೧೯೩೦-೩೩) ಮುಗಿದ ಮೇಲೆ ಅದು ಸಾಮಾನ್ಯ ಸ್ಥಾನದಲ್ಲಿ—ಸ್ಥಿತಿಯಲ್ಲಿ—ನಿಂತುಬಿಟ್ಟಿತು. ಈ ಸಾಮಾನ್ಯ ಸ್ಥಿತಿಯಲ್ಲಿಯೂ ಸುಮಾರು ಐದು ವರುಷಕಾಲ ಕಾಳರಾತ್ರಿಯಲ್ಲಿ ಮಿಂಚುಹುಳು ಸಾಗಿದಂತೆ ಒಂದೊಂದು ಒಳ್ಳೆಯ ಸಂಗ್ರಹ, ಒಂದೊಂದು ಒಳ್ಳೆಯ ಕಥೆ ಬಂದುವು. ಆದರೆ ೧೯೩೫ರಿಂದ ಈ ವರೆಗೆ ಸಣ್ಣ ಕತೆಗಳ ಇತಿಹಾಸ ಶೋಚನೀಯ ಸ್ಥಿತಿಯಲ್ಲಿದೆ. ಈ ಪರಿಸ್ಥಿತಿಯನ್ನು ಬದಲಾಯಿಸಿ ಸಣ್ಣಕತೆ ಕನ್ನಡ ಸಾಹಿತ್ಯದಿಂದ ಅಳಿಸಿ ಹೋಗದಿರುವಂತೆ ಪ್ರಗತಿಶೀಲ ಲೇಖಕರು ೧೯೪೦ರಿಂದ ಪ್ರಯತ್ನಿಸುತ್ತಿದ್ದಾರೆ."[೧] ಎಂದು ಅ. ನ. ಕೃಷ್ಣರಾಯರು ಕನ್ನಡ ಸಣ್ಣಕತೆಗಳ ಇತ್ತೀಚಿನ ಇತಿಹಾಸವನ್ನು ಅವಲೋಕಿಸುತ್ತ ತಮ್ಮ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ.

ಈ ಅಭಿಪ್ರಾಯ ಸಂಪೂರ್ಣವಾಗಿ ಸತ್ಯವಾದದ್ದಲ್ಲ. ೧೯೩೫ರ ನಂತರ ಕಾದಂಬರಿಗಳ ಜನಪ್ರಿಯತೆಯಿಂದಾಗಿ ಸಣ್ಣಕತೆ ಹಿಂದೆ ಬಿದ್ದರೂ ಅದು ಕಾಳರಾತ್ರಿಯಲ್ಲಿರಲಿಲ್ಲ. ೧೯೩೦ರ ಸುಮಾರಿಗೆ ಕನ್ನಡ ಸಣ್ಣಕತೆಗಳಲ್ಲಿ ಹೊಸ ಒಲವುಗಳು ತೋರತೊಡಗಿದ್ದುವು. ಸತ್ಯಾಗ್ರಹ ಚಳವಳಿ, ಹರಿಜನೋದ್ಧಾರ, ನಿರುದ್ಯೋಗ ಸಮಸ್ಯೆ, ಸ್ತ್ರೀಶಿಕ್ಷಣ, ವಿಧವಾವಿವಾಹ ಮೊದಲಾದುವುಗಳು ಸಣ್ಣಕತೆಗೆ ವಸ್ತುಗಳನ್ನು ಒದಗಿಸಲಾರಂಭಿಸಿದ್ದುವು. 'ಆನಂದಕಂದ'ರ 'ಮಮತೆಯ ಮುಡಿವು' ಕಡೆಂಗೊಂಡ್ಲು ಶಂಕರಭಟ್ಟರ 'ಗಾಜಿನ ಬಳೆ' ಬಾಲಚಂದ್ರ ಘಾಣೇಕರರ 'ನಾನೇ ಹೊಲೆಯ' 'ನೋಕರಿ' ಸಿ. ಕೆ. ನಾಗರಾಜರಾಯರ 'ಇನ್ನೆಲ್ಲಿಯ ರಿಪೇರಿ'? 'ಕ್ಷೀರಸಾಗರ'ರ 'ನಮ್ಮೂರಿನ ಹಕ್ಕಿಮಕ್ಕಿ' ಪಂಡಿತ ತಾರಾನಾಥರ 'ದೇವರ ಮಗು' ಇವೇ ಮೊದಲಾದುವು ಹೊಸ ಒಲವುಗಳಿಗೆ ಕೆಲವು ಉದಾಹರಣೆಗಳು ಆಗಿವೆ.

ಆದರೆ ಇವು ತಮ್ಮವೇ ಆದ ಒಂದು ವಿಶಿಷ್ಟ ಸಂಪ್ರದಾಯವನ್ನು ಪ್ರಾರಂಭಿಸುವಷ್ಟು ವಿಪುಲವಾಗಿರಲಿಲ್ಲ; ಬಲಿಷ್ಠವಾಗಿರಲಿಲ್ಲ. ಈ ಸ್ಥಿತಿ ಎರಡನೆಯ ಮಹಾಯುದ್ಧ ಬರುವವರೆಗೂ ಸಾಗಿತು. ಎರಡನೆಯ ಮಹಾಯುದ್ಧವು ಒಂದು ಹೊಸ ಸನ್ನಿವೇಶಗಳನ್ನು ಹೊಸ ಸಮಸ್ಯೆಗಳನ್ನು ಜನತೆಯ ಮುಂದೆ ಸಾಹಿತಿಗಳ ಮುಂದೆ ಒಡ್ಡಿತು. ಈ ಸಂಧಿಕಾಲದಲ್ಲಿ ಪ್ರಗತಿಶೀಲ ಸಾಹಿತ್ಯದ ಉದಯವಾಯಿತು.

ಪ್ರಗತಿಶೀಲ ಸಾಹಿತ್ಯದ ಚಳುವಳಿ ಭಾರತದ ತುಂಬೆಲ್ಲ ನಡೆಯಿತು. ಅಖಿಲಭಾರತ ಪ್ರಗತಿಶೀಲ ಲೇಖಕರ ಸಂಘವು ಸ್ಥಾಪಿಸಲ್ಪಟ್ಟಿತು. ಕರ್ನಾಟಕದಲ್ಲಿಯೂ ಧಾರವಾಡ, ಮಂಗಳೂರು, ಬೆಂಗಳೂರುಗಳಲ್ಲಿ ಸಭೆ-ಸಮ್ಮೇಲನಗಳಾದುವು. ಅ.ನ. ಕೃಷ್ಣರಾಯ, ವಿ. ಬಿ. ಬಳ್ಳಾರಿ, ಕುಳಕುಂದ ಶಿವರಾಯ, ಮಾ. ನಾ. ಚೌಡಪ್ಪ, ನಾಡಿಗೇರ ಕೃಷ್ಣರಾಯ, ಅ. ಸೋಗಾಲ, ದ. ಬಾ. ಕುಲಕರ್ಣಿ, ಆದ್ಯ ರಂಗಾಚಾರ್ಯ, ಟಿ. ಡಿ. ಶಿವಲಿಂಗಯ್ಯ ಮೊದಲಾದ ಮಹನೀಯರು, ಕರ್ನಾಟಕದಲ್ಲಿ ಪ್ರಗತಿಶೀಲ ಸಾಹಿತ್ಯವು ಬೆಳಯಲು ಪ್ರಯತ್ನ ಮಾಡಿದರು.

ಪ್ರಗತಿಶೀಲ ಚಳವಳಿ ಮೂಲದಲ್ಲಿ ಕಮ್ಯುನಿಸ್ಟ್ ಪ್ರಚೋದಿತವಾಗಿದ್ದುದರಿಂದ, ಕಮ್ಯುನಿಸ್ಟ್ ತತ್ತ್ವಪ್ರಣಾಲಿಯು ಆ ಸಾಹಿತ್ಯದ ಮೇಲೆ ಬಹಳಷ್ಟು ಪರಿಣಾಮವನ್ನುಂಟು ಮಾಡಿತು. ಕ್ರಾಂತಿ ಹಾಗೂ ಪ್ರಚಾರಗಳು ಪ್ರಗತಿಶೀಲ ಸಾಹಿತ್ಯದ ಮುಖ್ಯ ಲಕ್ಷಣಗಳಾಗಿದ್ದುವು. ಇದರಿಂದ ಸಾಹಿತ್ಯದಲ್ಲಿಯೂ ರಾಜಕೀಯ ತಲೆ ಹಾಕಿತು. 'ಸಾಹಿತ್ಯಕ್ಕೂ ರಾಜಕಾರಣಕ್ಕೂ ಸಂಬಂಧವಿಲ್ಲ. ಸಾಹಿತ್ಯದೊಳಗೆ ರಾಜಕಾರಣವನ್ನು ನುಗ್ಗಿಸಿ ಅದನ್ನು ಕುಲಗೆಡಿಸಬಾರದು. ಸಾಹಿತ್ಯದ ವ್ಯಾಪ್ತಿ ವಿಶಾಲವಾದುದು, ರಾಜಕಾರಣ ಕ್ಷಣಿಕವಾದುದು' ಎಂದು ಸಂಪ್ರದಾಯಸ್ಥರು ವಾದ ಮಾಡುತ್ತಿದ್ದಾರೆ.... ಪ್ರಗತಿಶೀಲ ಲೇಖಕರು ಸಂಪ್ರದಾಯಸ್ಥರ ಈ ವಾದವನ್ನು ಸುತರಾಂ ಒಪ್ಪುವುದಿಲ್ಲ. ಒಂದು ಕೃತಕಸಾಮ್ರಾಜ್ಯವನ್ನು ಸ್ಥಾಪಿಸಿಕೊಂಡು, ಹತ್ತು ಜನ ವಂದಿಮಾಗಧರನ್ನು ಕೂಡಿಸಿಕೊಂಡು, ಸಾಮಾನ್ಯ ಜನತೆಯ ಅಜ್ಞಾನಾಂಧಕಾರವನ್ನೇ ತಮ್ಮ ಬಂಡವಾಳ ಮಾಡಿಕೊಂಡು, ಮರದ ಹೆಗ್ಗಣಗಳಂತೆ ಬೆಳೆದ ಸಾಹಿತಿಗಳನ್ನು ನಾವು ಮಾನ್ಯ ಮಾಡುವ ಕಾಲ

೧ ತುಂಬಿದ ಕೊಡ ಮತ್ತು ಇತರ ಕಥೆಗಳು—ದೊಡ್ಡೇರಿ ವೆಂಕಟಗಿರಿರಾವ ಇವರ ಮುನ್ನುಡಿ.

ಹೋಯಿತು. ಸಾಹಿತ್ಯ ಪಂಡಿತರ ವಿವಿಧ ಕಲಾಮಂಡಿತರ ಸ್ವಾತಂತ್ರ್ಯ ಭಾವನೆ ದೇಶದ ಸರ್ವತೋಮುಖ ಪ್ರಗತಿಗೆ ಹಾನಿಕರವಾದುದೆಂಬ ಸತ್ಯ ನಿತ್ಯವಾಗುತ್ತಿದೆ. ಸಾಹಿತಿಯ ಧ್ಯೇಯ ಆತ್ಮೋಲ್ಲಾಸ ಪರತೆಯಲ್ಲ, ಸ್ವಪ್ರತಿಷ್ಠಾ ಪ್ರಸಾರವೂ ಅಲ್ಲ. ಅವನು ದೇಶವನ್ನು ಕಟ್ಟುವ ಶಿಲ್ಪಿಗಳಲ್ಲಿ ಒಬ್ಬ....ಇಂದು ಕನ್ನಡಸಾಹಿತ್ಯದಲ್ಲಿ (ಭಾರತೀಯ ಸಾಹಿತ್ಯದಲ್ಲಿಯೇ ಎಂದು ಹೇಳಬಹುದು) ಸಂಪ್ರದಾಯಕ್ಕೂ ಪ್ರಗತಿಗೂ ಹೋರಾಟ ನಡೆದಿದೆ. ಪ್ರಗತಿಗಾಮಿಗಳು ಪ್ರಗತಿಯೆಂದು ಹೆಸರಿಟ್ಟು ಸಾಹಿತ್ಯವನ್ನು ಪ್ರಸಾರದ (Propaganda) ಕೈಗೊಂಬೆಯನ್ನಾಗಿ ಮಾಡಲು ಹವಣಿಸುತ್ತಿದ್ದಾರೆ, — ಎಂಬ ವಾದವೆದ್ದಿದೆ. ರಾಜಕೀಯ, ಸಾಮಾಜಿಕ, ಆರ್ಥಿಕ ಜಗತ್ತಿಗೆ, ಇಣಿಕೆ ಹಾಕದಿರುವ ಸೌಂದರ್ಯೋಪಾಸಕನಾದ ಸಾಹಿತಿಯೂ ಪ್ರಸಾರಕನೇ. ಸೌಂದರ್ಯಪ್ರಸಾರವೇ ಅವನ ಧ್ಯೇಯ........ ಪ್ರಸಾರೋದ್ದೇಶದಿಂದ ಹೊರಟದ್ದೆಂದು ಸಾಹಿತ್ಯ ಕೀಳಾಗುವುದಿಲ್ಲ. ಸಾಹಿತಿ ತನ್ನ ಉದ್ದೇಶವನ್ನು (ಉದ್ದೇಶ ಯಾವುದೇ ಇರಬಹುದು) ಖಚಿತವಾಗಿ ಸಬಲವಾಗಿ, ಸುಂದರವಾಗಿ ನೆರವೇರಿಸಿದ್ದರೆ ಸಾಕು "[2] ಎಂದು ಪ್ರಗತಿಶೀಲ ಸಾಹಿತ್ಯದ ಧ್ಯೇಯ–ಧೋರಣೆಗಳನ್ನು ಸಾರಲಾಯಿತು. "ಧರ್ಮ, ಅರಸರ ಸೆರಗನ್ನು ಹಿಡಿದು ಅಂಬೆಗಾಲಿಕ್ಕುತ್ತಿರುವ ಪ್ರತಿಗಾಮಿಗಳ ಸಾಹಿತ್ಯ ತನ್ನ ಹಂಸಗೀತೆಯನ್ನು ಹಾಡಬೇಕು. ನಮ್ಮ ನೋಟ ಅರಮನೆ, ಗುರುಮನೆಯನ್ನು ಬಿಟ್ಟು ಚಾಲ್–ಗುಡಿಸಲುಗಳ ಕಡೆಗೆ ತಿರುಗಬೇಕು."[3] ಎಂದು ಸಾಹಿತಿಗಳಿಗೆ ಆದೇಶವೀಯಲಾಯಿತು. "ಕನ್ನಡ ನಾಡಿನ ಬಹು ಸಂಖ್ಯಾತರು ಹಳ್ಳಿಗರು ಮತ್ತು ಶ್ರಮಜೀವಿಗಳು. ಆದರೆ ಅವರನ್ನು ಮೂಗುದಾರ ಹಾಕಿ ನಡೆಸುತ್ತಿರುವವರು ಮಧ್ಯಮ ವರ್ಗದ 'ಬೂರ್ಜ್ವಾ' (Bourgeosie) ಗಳು. ನಮ್ಮ ಸಾಹಿತಿಗಳೂ ಈ ಬೂರ್ಜ್ವಾಗಳೇ.... ಆಧುನಿಕ ಕನ್ನಡ ಸಾಹಿತ್ಯ, ತರುಣ-ತರುಣಿಯರ ಅಪಕ್ವ ಪ್ರಣಯದ ಚೆಲ್ಲಾಟಗಳಿಂದ ತುಂಬಿದೆ. ಜಾನಪದ ದೃಷ್ಟಿ ಅವರಲ್ಲಿ ಶೂನ್ಯ."[4] ಎಂದು ಆಧುನಿಕ ಕನ್ನಡ ಸಾಹಿತಿಗಳನ್ನೂ ಸಾಹಿತ್ಯವನ್ನೂ ತೆಗಳಲಾಯಿತು.

ಈ ಪ್ರಗತಿಶೀಲ ಚಳವಳಿಯ ಪರಿಣಾಮವು ಕನ್ನಡದ ಕಾವ್ಯ, ನಾಟಕ, ಕಾದಂಬರಿಗಳಿಗಿಂತಲೂ ಸಣ್ಣಕತೆಯ ಮೇಲೆ ವಿಶೇಷವಾಗಿ ಹಾಗೂ ತೀವ್ರವಾಗಿ ವ್ಯಕ್ತವಾಯಿತು. ಇದಕ್ಕೆ ಕಾರಣವೆಂದರೆ ಸಣ್ಣಕತೆ ಪ್ರಗತಿಶೀಲ ಸಾಹಿತ್ಯದ ತತ್ವಪ್ರಣಾಲಿಯ ಪ್ರಚಾರಕ್ಕೆ ಬಹಳ ಅನುಕೂಲವಾದ ಸಾಧನವಾಗಿತ್ತು. ಅದರ ಪ್ರಕಟನೆಯೂ ಸುಲಭಸಾಧ್ಯವಿತ್ತು. ಅದಕ್ಕಾಗಿ ಹಲವಾರು ಬಿಸಿನೆತ್ತರದ ತರುಣರು ಪ್ರಗತಿಶೀಲಪರವಾದ ಸಣ್ಣಕತೆಗಳನ್ನು ಭರದಿಂದ ಬರೆಯತೊಡಗಿದರು.

ಅ. ನ. ಕೃ, ಕುಳಕುಂದ ಶಿವರಾಯ, ತರಾಸು, ಚದುರಂಗ, ಮಿರ್ಜಿ ಅಣ್ಣಾರಾಯ, ಬಸವರಾಜ ಕಟ್ಟೀಮನಿ, ಹಿರೇಮಲ್ಲೂರ ಈಶ್ವರನ್, ಕೋ. ಚೆನಬಸಪ್ಪ, ಪಾಟೀಲ ಪುಟ್ಟಪ್ಪ, ಕೈಯಾರ ಕಿಞ್ಞಣ್ಣರೈ ಸೇವನಮಿರಾಜಮಲ್ಲ, ಅನುಪಮಾ ಇವರೇ ಮೊದಲಾದವರು ಬರಗಾಲ, ಶ್ರಮಜೀವಿಗಳ ಸಮಸ್ಯೆ, ಹಳ್ಳಿಗಳಲ್ಲಿ ನಡೆದ ಸುಲಿಗೆ, ಸಾಮಾಜಿಕ ಅನ್ಯಾಯ ಅತ್ಯಾಚಾರಗಳು, ನಿಯಂತ್ರಣ, ಕಳ್ಳಪೇಟೆ ಮೊದಲಾದ ಹಲವು ವಿಧಗಳನ್ನೊಳಗೊಂಡ ಸಣ್ಣಕತೆಗಳನ್ನು ಬರೆದಿದ್ದಾರೆ.

ಬಸವರಾಜ ಕಟ್ಟೀಮನಿಯವರ 'ಕಾರವಾನ' 'ಸೆರೆಯಿಂದ ಹೊರಗೆ' ಈಶ್ವರನ್ನರ 'ಹಾಲಾಹಲ' 'ರಾಜಾರಾಣಿದೇಶೋ' ತರಾಸು, ಅವರ 'ತೊಟ್ಟಿಲು ತೂಗಿತು,' 'ರೂಪಸಿ' ಕಿಞ್ಞಣ್ಣರೈ ಅವರ 'ಅನ್ನದೇವರು ಮತ್ತು ಇತರ ಕಥೆಗಳು' ಮತಿಘಟ್ಟ ಕೃಷ್ಣಭಟ್ಟರ 'ಕಾಣದ ಕೈ' ಸೇವ ನಮಿರಾಜಮಲ್ಲರ 'ಲೋಹದ ಜೀವ' ಮಿರ್ಜಿ ಅಣ್ಣಾರಾಯರ 'ಪ್ರಣಯಸಮಾಧಿ' 'ವಿಜಯಶ್ರೀ' ಕೋ. ಚೆನಬಸಪ್ಪನವರ 'ನಮ್ಮೂರ ದೀಪ' 'ಗಡಿಪಾರು' ಕುಳಕುಂದ ಶಿವರಾಯರ 'ರಕ್ತಸರೋವರ' ಎ. ಕೇಶವರ 'ಒಂದೇದಾರಿ' ಪಾಟೀಲ ಪುಟ್ಟಪ್ಪನವರ 'ಸಾವಿನ ಮೇಜವಾನಿ' 'ಅನುಪಮಾ' ಅವರ 'ಕಣ್ಮಣಿ' ಚದುರಂಗರ 'ಶವದ ಮನೆ' ಇವೇ ಮೊದಲಾದ ಕಥಾಸಂಕಲನಗಳು ಪ್ರಗತಿಶೀಲ ಕತೆಗಳ ಒಳ್ಳೆಯ ಮಾದರಿಗಳೆಂದು ಹೇಳಬಹುದು.

ಪ್ರಗತಿಶೀಲರ ಈ ಕತೆಗಳು ಲಲಿತ ಕತೆಗಾರರ ಕತೆಗಳಿಗಿಂತ ಹಲವು ದೃಷ್ಟಿಯಲ್ಲಿ ಭಿನ್ನವಾಗಿದ್ದುವು. ಲಲಿತ ಕತೆಗಾರರ ಉದ್ದೇಶ ಆತ್ಮೋಲ್ಲಾಸ ಅಥವಾ ಕಾವ್ಯಾನಂದವಾಗಿದ್ದರೆ, ಪ್ರಗತಿಶೀಲರ ಉದ್ದೇಶ ಸಾಮಾಜಿಕ ಅನ್ಯಾಯ ಹಾಗೂ ಸುಲಿಗೆಗಳನ್ನು ಪರಿಣಾಮಕರವಾಗುವಂತೆ ಚಿತ್ರಿಸುವುದೇ ಆಗಿತ್ತು. ಲಲಿತ ಕತೆಗಾರರು ಯಾವ ತತ್ತ್ವಪ್ರಣಾಲಿಯ ಪ್ರಚಾರವನ್ನೂ ಉದ್ದೇಶವನ್ನಾಗಿ ಇಟ್ಟುಕೊಂಡಿರಲಿಲ್ಲ. ಪ್ರಗತಿಶೀಲರಿಗೆ ಒಂದು ಸಾಮಾಜಿಕ ಒಂದು ರಾಜಕೀಯ ತತ್ತ್ವಪ್ರಣಾಲಿಯನ್ನು ಪ್ರಚಾರ ಮಾಡುವ ಉದ್ದೇಶವಿತ್ತು. ಲಲಿತ ಕತೆಗಳಲ್ಲಿ ವರ್ಗಕಲಹದ ಪ್ರಶ್ನೆಯೇ ಇರಲಿಲ್ಲ. ಪ್ರಗತಿಶೀಲ ಕತೆಗಳಲ್ಲಿ ವರ್ಗಕಲಹದ ಚಿತ್ರ ಒಡೆದು ಕಾಣುತ್ತಿತ್ತು. ಲಲಿತಕತೆಗಳಲ್ಲಿ ಶುಚಿಯಾದ ಪ್ರಣಯಕ್ಕೆ ಮಾತ್ರ ಅಸ್ಪದವಿತ್ತು. ಪ್ರಗತಿಶೀಲ ಕತೆಗಳಲ್ಲಿ ಲೈಂಗಿಕ ಸಮಸ್ಯೆಗಳನ್ನು ಚಿತ್ರಿಸಲಾಗಿತ್ತು. ಲಲಿತ ಕತೆಗಳಿಗೆ ವಿಷಯದ ವಸ್ತುವಿನ ನಿರ್ಬಂಧವಿರಲಿಲ್ಲ. ಪ್ರಗತಿಶೀಲ ಕತೆಗಳಿಗೆ ವಸ್ತುವಿನ ನಿರ್ಬಂಧವಿತ್ತು. ಸಮಾಜದಲ್ಲಿಯ ಸುಲಿಗೆ, ಅನ್ಯಾಯ, ಅತ್ಯಾಚಾರ, ದುಃಖ-ದುಮ್ಮಾನ, ಲೈಂಗಿಕ ಸಮಸ್ಯೆ ಇವೇ ಮೊದಲಾದುವುಗಳನ್ನು ಅದು ವಸ್ತುವಾಗಿ ಆಯ್ದುಕೊಳ್ಳಬೇಕಾಗಿತ್ತು. ಆಗಾಗ ದ್ವೇಷಾಸೂಯೆಗಳನ್ನು ಹುಟ್ಟಿಸುವ ಭಾವನೆಗಳೂ ಅದರಲ್ಲಿ ವ್ಯಕ್ತವಾಗುತ್ತಿದ್ದುವು. ಇವೆಲ್ಲ ಕಾರಣಗಳಿಂದಾಗಿ ಪ್ರಗತಿಶೀಲ ಸಾಹಿತ್ಯವು ತನ್ನದೇ ಆದ ವಿಶಿಷ್ಟ ಗುಣಲಕ್ಷಣಗಳಿಂದ ಒಂದು ವಿಶಿಷ್ಟ ಸಾಹಿತ್ಯಪ್ರಕಾರವೇ ಎನಿಸಿತು.

೨, ೩, ೪, ಪ್ರಗತಿಶೀಲಸಾಹಿತ್ಯ—ಸಂಪಾದಕ ಅ. ನ. ಕೃಷ್ಣರಾಯ ಇವರ ಮುನ್ನುಡಿ.

ಕೂದಲನ್ನು
ಸೊಂಪಾಗಿ ಮೃದುವಾಗಿ
ಗುಂಗುರು ಗುಂಗುರಾಗಿ
ನೀಳವಾಗಿ
ಬೆಳೆಸುತ್ತದೆ
ದಿ ಸದ್ವೈದ್ಯಶಾಲಾ ಲಿ. ನಂಜನಗೂಡು
ಬ್ರಾಂಚುಗಳು: ಬೆಂಗಳೂರು, ಮೈಸೂರು, ಮಂಗಳೂರು, ಹುಬ್ಬಳ್ಳಿ
ಯಾವಾಗಲೂ ನಂಜನಗೂಡು ಟೂತ್ ಪೌಡರ್ ಉಪಯೋಗಿಸಿ

ಪ್ರಗತಿಶೀಲ ಸಾಹಿತ್ಯವು ಕನ್ನಡ ಸಾಹಿತ್ಯರಂಗದಲ್ಲಿ ಒಂದು ಬಿರುಗಾಳಿಯನ್ನೇ ಎಬ್ಬಿಸಿತು. ಮೊದಮೊದಲು ಅದರಲ್ಲಿ ಸಾಕಷ್ಟು 'ಬಿಸಿ' ಇದ್ದುದರಿಂದ, ಅದು ಉಗ್ರ ಸಾಹಿತ್ಯವೆನಿಸಿತು. ಅದು ನಮ್ಮ ಸಾಹಿತ್ಯದ ಮೂಲತತ್ತ್ವಗಳನ್ನೇ ಅಲುಗಾಡಿಸಿ ಬಿಟ್ಟಿತು. ಸಾಹಿತ್ಯದ ಉದ್ದೇಶವೇನು? ಸಾಹಿತ್ಯದಲ್ಲಿ ಪ್ರಗತಿ ಇದೆಯೇ? ಎಂಬಬಗ್ಗೆ ಹಲವು ವಾದ-ವಿವಾದಗಳಾದುವು. ಇದರ ಪರಿಣಾಮವಾಗಿ ಲಲಿತ ಕತೆಗಾರರು ಪ್ರಗತಿಶೀಲ ಸಾಹಿತ್ಯದಲ್ಲಿದ್ದ ಒಂದು ಸತ್ಯಾಂಶವನ್ನು ಕಂಡು-ಕೊಂಡರು. ಲಲಿತ ಸಾಹಿತ್ಯವು ಯಾವಾಗಲೂ ಶುದ್ಧ ಸಾಹಿತ್ಯವೆಂಬ ಮಾತನ್ನು ಪ್ರಗತಿಶೀಲರೂ ಒಪ್ಪಿಕೊಳ್ಳಬೇಕಾಯಿತು. ಹೀಗೆಂದ ಮಾತ್ರಕ್ಕೆ ಜೀವನದ ದುಃಖ, ದುಮ್ಮಾನಗಳು, ಶ್ರಮಜೀವಿಗಳ ಕಷ್ಟ-ಕಾರ್ಪಣ್ಯಗಳು, ಸಾಮಾಜಿಕ ಅನ್ಯಾಯಗಳು ಇವುಗಳಿಗೆ ಲಲಿತಸಾಹಿತ್ಯದಲ್ಲಿ ಸ್ಥಾನವೇ ಇಲ್ಲವೆಂದಲ್ಲ. ಆದರೆ ಈ ವಿಷಯ-ಗಳು ಲಲಿತಸಾಹಿತ್ಯದಲ್ಲಿ ಸಾಹಿತ್ಯವಾಗಿ ಬಂದಿರುತ್ತವೆಯಲ್ಲದೆ ಪ್ರಚಾರವಾಗಿ ಬಂದಿರುವುದಿಲ್ಲ ಪ್ರಗತಿಶೀಲತೆಯ ಮುದ್ರೆಯಿಲ್ಲದೆ ದಲಿತರ, ಶ್ರಮಜೀವಿಗಳ ಕಷ್ಟ-ಕಾರ್ಪಣ್ಯಗಳನ್ನೂ ಸಾಮಾಜಿಕ, ಕಟ್ಟಳೆಯಿಂದ, ಸುಲಿಗೆಯಿಂದ ಉಂಟಾಗುವ ಅನ್ಯಾಯಗಳನ್ನೂ ಸಾಹಿತ್ಯದಲ್ಲಿ ಪ್ರಭಾವಿ ಪರಿಣಾಮಕರವಾಗಿ ಚಿತ್ರಿಸುವುದು ಸಾಧ್ಯವಿದೆ. 'ಆನಂದಕಂದ'ರ 'ಬಡತನದ ಬಾಳು' ಕಾರಂತರ 'ಹಸಿವು', 'ಹಾವು' ಎಂಬ ಕಥಾ ಸಂಕಲನಗಳು 'ಶ್ರೀನಿವಾಸ'ರ 'ವೆಂಕಟ-ಶಾಮಿಯ ಪ್ರಣಯ' 'ಬೀದಿಯಲ್ಲಿ ಹೋಗುವ ನಾರಿ' ಕುವೆಂಪು ಅವರ 'ಸಾಲದ ಮಗು' 'ಧನ್ವಂತರಿಯ ಚಿಕಿತ್ಸೆ' 'ಆನಂದ'ರ 'ನಾನು ಕೊಂದ ಹುಡುಗಿ' 'ಭಾರತೀಪ್ರಿಯ'ರ 'ವೇಚಿ' ಪು. ತಿ. ನ. ಅವರ 'ಧ್ವಜರಕ್ಷಣೆ' ಟೆಂಗ್ಸೆ ಗೋವಿಂದರಾಯರ 'ದೊಡ್ಡ ಮೀನು, ಸಣ್ಣ ಮೀನು' ಇವೇ ಮೊದಲಾದ ಕತೆಗಳು ಶ್ರೇಷ್ಠವಾದ ಲಲಿತಕತೆಗಳಾದರೂ, ಪ್ರಗತಿಶೀಲರ ಕತೆಗಳಿಗೆ ಯಾವ ದೃಷ್ಟಿಯಿಂ-ದಲೂ ಕಡಮೆಯಾಗಿಲ್ಲ. ಪ್ರಗತಿಶೀಲ ಚಳವಳಿಯ ಮುದ್ರೆ, ಹೀಗೂ ಕಾವುಗಳಿಲ್ಲದೆ ಪ್ರಗತಿಶೀಲವಾದ ಕತೆಗಳನ್ನು ಬರೆಯಲು ಸಾಧ್ಯವಿದೆ ಎಂಬ ಮಾತನ್ನು ಅ. ನ. ಕೃಷ್ಣರಾಯರು ಒಪ್ಪಿಕೊಂಡಿದ್ದಾರೆ ಆದರೆ 'ಇದಿಷ್ಟೇ ಸಾಲದು' ಎಂದು ಅವರ ಅಭಿಪ್ರಾಯ. ಈ ಅಭಿಪ್ರಾಯವು ಪ್ರಗತಿಶೀಲಸಾಹಿತ್ಯಕ್ಕೂ ಅನ್ವಯಿಸುತ್ತದೆ.

ಇದೇ ರೀತಿ ಲಲಿತ ಕತೆಗಾರರೂ 'ಪ್ರಗತಿಶೀಲ ಸಾಹಿತ್ಯದಲ್ಲಿ ಒಂದು ಸತ್ಯಾಂಶವಿದೆ' ಎಂಬುದನ್ನು ಕಂಡರು. ಲಲಿತಸಾಹಿತ್ಯದಲ್ಲಿ ಜೀವನದ ಲಲಿತವಾದ ಮುಖವಷ್ಟೇ ಹೆಚ್ಚಾಗಿ ಕಂಡು ಬರುತ್ತದೆ. ಲಲಿತ ಕತೆಗಾರರ ಕಾಲದಲ್ಲಿ ಬಂದ ಕತೆಗಳಲ್ಲಿ ಶೃಂಗಾರಕ್ಕೇ ಹೆಚ್ಚಿನ ಸ್ಥಾನ ದೊರೆತ್ತು. ಪ್ರಗತಿಶೀಲ ಚಳವಳಿಯಿಂದ ಜೀವನದ ರೌದ್ರ-ಭಯಾನಕ ಮುಖವೂ ಸಾಹಿತ್ಯದಲ್ಲಿ ಕಂಡುಬರಬೇಕು.—ಅಂದಾಗ ಸಾಹಿತ್ಯವು ವಾಸ್ತವಿಕವಾಗುತ್ತದೆ. ಎಂಬ ಮಾತನ್ನು ಲಲಿತ ಕತೆಗಾರರು ಅರಿತುಕೊಂಡರು. "ಇನ್ನೊಂದು ಮುಖ್ಯ ವಿಚಾರ-ವೆಂದರೆ, ಲಲಿತಸಾಹಿತ್ಯದ ಮಿಕ್ಕ ಭಾಗಗಳಲ್ಲಿ ಎದ್ದಿರುವಂತೆ ಸಣ್ಣ ಕತೆಯ ವಿಭಾಗದಲ್ಲಿಯೂ ಆದರ್ಶ-ವಾಸ್ತವಗಳವಾದವು ಎದ್ದು-ವಾತಾವರಣವನ್ನು ಆಗಾಗ ಕಲಕು ಮಾಡುತ್ತಲಿದೆ. ಇದೇ ವಾದವೇ ಸೌಂದರ್ಯ ಮತ್ತು ಜೀವನ ಎಂಬ ದ್ವಂದ್ವದ ಹೆಸರಿನಿಂದಲೂ ನಡೆಯುತ್ತಲಿದೆ. ಇತ್ತೀಚೆಗೆ ಇದೇ ಜಗಳ ಸಂಪ್ರದಾಯ. ಪ್ರಗತಿ-ಶೀಲತೆ-ಎಂಬ ದ್ವಂದ್ವನನ್ನು ನಿರ್ಮಿಸಿ ಬೇರೆ ಬೇರೆ ಜನರ ಮನಸ್ಸಿ-ನಲ್ಲಿ ಗೊಂದಲವನ್ನು ಎಬ್ಬಿಸಿಬಿಟ್ಟಿದೆ. ಆದರೆ ಅಧ್ಯಾತ್ಮ ಅಧಿಭೂತಗಳ ಸಮನ್ವಯದಲ್ಲಿಯೆ ಸುಖಜೀವನವಿದೆಯೆಂದು ನಮ್ಮ ಅನುಭಾವಿಗಳು ಹೇಳಿರುವಂತೆ, ಆದರ್ಶ-ವಾಸ್ತವ, ಸೌಂದರ್ಯ-ಜೀವನ, ಸಂಪ್ರ-ದಾಯ-ಪ್ರಗತಿಶೀಲತೆ ಈ ದ್ವಂದ್ವಗಳ ಸಮನ್ವಯದಿಂದಲೇ ಒಳ್ಳೆಯ ಕೃತಿ ನಿರ್ಮಿತಿಯಾಗುದೆಂಬುವುದನು ನಾವೆಲ್ಲ ಮನವರಿಕೆ ಮಾಡಿ-ಕೊಂಡು ಬದುಕಬೇಕಾಗಿದೆ" ಎಂದು ಬೆಟಗೇರಿ ಕೃಷ್ಣಶರ್ಮರು ನಾಲ್ಕನೆಯ ಸಣ್ಣಕತೆಗಾರರ ಅಧ್ಯಕ್ಷ ಭಾಷಣದಿಂದ ಹೇಳಿದ ಮಾತುಗಳು, ಪ್ರಗತಿಶೀಲರನ್ನು ಲಲಿತ ಕತೆಗಾರರು ಹೇಗೆ ಅರಿತು-ಕೊಂಡರೆಂಬುದಕ್ಕೆ ಒಳ್ಳೆಯ ನಿದರ್ಶನವಾಗಿವೆ.

ಪ್ರಗತಿ ಎಂಬಮಾತು ಹೇಳಲು ಸುಲಭವಾಗಿರುವಷ್ಟು ಅರಿತು-ಕೊಳ್ಳಲು ಸುಲಭವಾಗಿಲ್ಲವೆಂಬುದನ್ನು ವಿ. ಕೃ. ಗೋಕಾಕರು ಈ ಕೆಳಗಿನ ಮಾತುಗಳಲ್ಲಿ ಬಹಳ ಚೆನ್ನಾಗಿ ವಿವರಿಸಿದ್ದಾರೆ. "ಪ್ರಗತಿ ಇಲ್ಲವೆ 'Progress' ಎಂದರೆ ಮುಂದಕ್ಕೆ ಹೆಜ್ಜೆಯಿಕ್ಕುವುದು. ಇದು ಸಾಹಿತ್ಯದಲ್ಲಿ ಸಾಧ್ಯವೆ? ಎಂಬ ಪ್ರಶ್ನೆಯೇಳುತ್ತದೆ, ಏಕೆಂದರೆ ಜೀವನದಲ್ಲಿಯೇ ಇದು ಸಾಧ್ಯವಿಲ್ಲವೆಂದು ಇನ್ನೊಂದು ವಾದವಿದೆ. ಜೀವನವೆಂದರೆ ಕರ್ಮಚಕ್ರ; ಸದಾ ಬುಡಮೇಲಾಗುತ್ತಿರುತ್ತದೆ. ಅಂದಮೇಲೆ ತನ್ನ ಸುತ್ತಲೂ ನಿತ್ಯ ತಾನೇ ತಿರುಗುತ್ತಿರುವ ಕರ್ಮ-ಚಕ್ರದ ಗತಿಯಲ್ಲಿ ಪ್ರಗತಿಯೆಲ್ಲಿಂದ ಬರಬೇಕು?.......

ಸೃಷ್ಟಿಯಲ್ಲಿ ಜೀವನಕ್ಕೆ ಒಂದು ಗುರಿಯಿದೆಯೆ? ಸೃಷ್ಟಿಯು ಹುಟ್ಟಿದಂದಿನಿಂದ ಇಂದಿನವರೆಗೆ ಈ ಗುರಿಯನ್ನು ಗುರುತಿಸಿ ಅದರ ಕಡೆಗೆ ಹೆಜ್ಜೆಯ ಮುಂದೆ ಹೆಜ್ಜೆಯನ್ನು ಹಾಕುತ್ತಿದೆಯೆ? ಗುರಿ ಯಿದ್ದರೆ ಯಾವ ಗುರಿ? ಮುಂದಡಿ ಇಟ್ಟಿದ್ದರೆ—ಈ ಹೆಜ್ಜೆಗಳು ಮೂಡಿವೆಯಲ್ಲಿ? ಈ ಪ್ರಶ್ನೆಗಳಿಗೆ ನಾವು ಕೊಡುವ ಉತ್ತರದ ಮೇಲೆ ಜೀವನದಲ್ಲಿ ಪ್ರಗತಿ ಇದೆಯೋ ಇಲ್ಲವೋ ಎಂಬುದು ನಿರ್ಣಯ-

ವಾಗುತ್ತದೆ. ಜೀವನವನ್ನು ಸಂಬಂಧಿಸಿದ ಪ್ರಶ್ನೆಯೇ ಹೀಗೆ ಸಂದಿಗ್ಧವಾಗುಳಿದಾಗ, ಅದರ ಪ್ರತಿಬಿಂಬ ಸಾಹಿತ್ಯವನ್ನು ಕುರಿತು ನಿರ್ಣಯಿಸುವುದು ಇನ್ನೂ ಕಠಿಣವಾಗುತ್ತದೆ.........

ಶ್ರೇಷ್ಠ ಸಾಹಿತ್ಯದ ಗೊತ್ತು ಗುರಿಗಳು ಯಾವಾಗಲೂ ಒಂದೇ ಆಗಿವೆ. ಅಂದಮೇಲೆ ಅದೇ ಶ್ರೇಷ್ಠತೆಯನ್ನು ಆಗಿಂದಾಗ ನಿಲುಕುವಾಗ ಪ್ರಗತಿಯೆಲ್ಲಿಂದ ಬಂತು ?

ಹೀಗೆ ವಿಚಾರ ಮಾಡಿದಾಗ ಜೀವನಕ್ಕೂ ಸಾಹಿತ್ಯಕ್ಕೂ ಪ್ರಗತಿ ಇರಲಿ ಇಲ್ಲವೆ ಇಲ್ಲದಿರಲಿ; ಅದಕ್ಕೆ ಗತಿ (movement) ಇದೆ ಎಂದು ಮಾತ್ರ ಸಿದ್ಧವಾಗುತ್ತದೆ. " ೫

ಪ್ರಗತಿಶೀಲರು ತಮ್ಮ ಚಳವಳಿಯ ಭರದಲ್ಲಿ ಈ ಮಾತುಗಳನ್ನು ವಿಚಾರಿಸದಿದ್ದರೂ, ಅದರ ಕಾವು ಕಡಿಮೆಯಾದ ಮೇಲೆ ಅವರಿಗೂ ಲಲಿತಸಾಹಿತ್ಯದ ಸತ್ಯಾಂಶ ಕಂಡುಬಂದಿತು. ಲಲಿತ ಕತೆಗಾರರ ವಿರುದ್ಧ ಅವರು ಮಾಡಿದ ದೂರುಗಳನ್ನೆಲ್ಲ ಅವರಿಗೂ ಅನ್ವಯಿಸಲು ಸಾಧ್ಯವಿತ್ತು. ಯಾಕೆಂದರೆ ಜೀವನವೆಂದರೆ ಬರೀ ಶೋಷಣೆ, ಅತ್ಯಾಚಾರಗಳಲ್ಲ, ದುಃಖ-ದುಮ್ಮಾನಗಳಲ್ಲ. ಅದರಂತೆ ಸಮಾಜ ಎಂದರೆ ಬರೀ ಶ್ರಮಜೀವಿಗಳಷ್ಟೇ ಅಲ್ಲ; ಆದುದರಿಂದ ಬರೀ ಮೇಲಿನ ವರ್ಗದವರ ಅಥವಾ ಮಧ್ಯಮವರ್ಗದವರ ಚಿತ್ರಣವಾಗಲಿ, ಬರೀ ಶೃಂಗಾರ ರಸವಾಗಲಿ, ಹೇಗೆ ಪರಿಪೂರ್ಣ ಸಾಹಿತ್ಯವಾಗಲಾರದೋ, ಹಾಗೆ ಬರೀ ಶೋಷಣೆ, ಕಷ್ಟ-ಕಾರ್ಪಣ್ಯಗಳ ಹಾಗೂ ದಲಿತ ಶ್ರಮಜೀವಿಗಳ ಚಿತ್ರವೂ ಪರಿಪೂರ್ಣ ಸಾಹಿತ್ಯವೆನಿಸಲಾರದು. ನಿಜವಾದ ಸಾಹಿತ್ಯದಲ್ಲಿ ಇದೂ ಬೇಕು; ಅದೂ ಬೇಕು. ಅದರಂತೆ ಶ್ರಮಜೀವಿಗಳ ಉದ್ಧಾರವಷ್ಟೇ ಪ್ರಗತಿಯಲ್ಲ. ಜೀವನವನ್ನು ಒಳ್ಳೆಯದನ್ನಾಗಿಸುವುದೆಲ್ಲವೂ ಪ್ರಗತಿಯೇ! ಲಲಿತ ಹಾಗೂ ಪ್ರಗತಿಶೀಲತೆ ಎರಡರಲ್ಲಿಯೂ ಸತ್ಯಾಂಶವಿದೆ. ಲಲಿತಸಾಹಿತ್ಯ ಸೌಂದರ್ಯಪ್ರಧಾನವಾದರೆ ಪ್ರಗತಿಶೀಲಸಾಹಿತ್ಯ ವಾಸ್ತವಪ್ರಧಾನ. ಒಂದರಲ್ಲಿ ಶೃಂಗಾರ, ಇನ್ನೊಂದರಲ್ಲಿ ರೌದ್ರ, ಭಯಾನಕ, ಕರುಣರಸಗಳಿಗೆ ಪ್ರಾಧಾನ್ಯವಿದೆ.

ಹೀಗೆ ೧೯೪೦ರಿಂದ ಮುಂದಿನ ಹತ್ತು-ಹನ್ನೆರಡು ವರುಷಗಳ ಕಾಲ ಪ್ರಗತಿಶೀಲಸಾಹಿತ್ಯದ ಪ್ರಭಾವವು ಕನ್ನಡ ಸಣ್ಣಕತೆಗಳಲ್ಲಿ ಹೆಚ್ಚಾಗಿ ಕಂಡುಬಂದಿತು. ಪ್ರಸಾರ, ರಾಜಕೀಯ, ಹಾಗೂ ವಸ್ತು-ನಿರ್ಬಂಧತೆಯ ಕಾರಣದಿಂದಾಗಿ ಪ್ರಗತಿಶೀಲಸಾಹಿತ್ಯದಲ್ಲಿ ಕಲೆಯ ಅಂಶ ಎಷ್ಟೋ ಪಾಲು ಕಡಮೆಯಾಗಿತ್ತು. ಈ ಮಾತನ್ನು ಪ್ರಗತಿಶೀಲರೂ ಒಪ್ಪಿಕೊಂಡಿದ್ದಾರೆ. "೧೯೪೩ರಿಂದ ಈ ವರೆಗೆ ಪ್ರಕಟವಾದ ಕೃತಿಗಳೆಲ್ಲದರಲ್ಲಿಯೂ "ಕಲಾಪರಿಣತಮತಿ"ಯನ್ನು ಕಾಣಲಾಗದಿದ್ದರೂ, ಸಾಧನಪ್ರಿಯತೆ, ನೂತನಮಾರ್ಗಗಳ ಆವಿಷ್ಕಾರಗಳನ್ನು ಖಂಡಿತ ಕಾಣಬಹುದು. ನಾಲ್ಕು ವರುಷದ ಪ್ರಯತ್ನವನ್ನು ಪ್ರಗತಿಶೀಲಸಾಹಿತ್ಯದ ಅರುಣೋದಯಕಾಲವೆಂದು ಪರಿಗ್ರಹಿಸಬಹುದು. ಈ ಅವಧಿಯಲ್ಲಿ ನಡೆದ ಪ್ರಾಚೀನ-ನೂತನಗಳ ಹೋರಾಟದಲ್ಲಿ ಕಲೆ ಸ್ವಲ್ಪ ಹಿಂದುಳಿಯಬೇಕಾಯಿತು. "೬ ಎಂದು ಅ. ನ. ಕೃಷ್ಣರಾಯರು ಹೇಳಿದ ಮಾತುಗಳು ಸತ್ಯವಾಗಿವೆ, ಪ್ರಾಮಾಣಿಕವಾಗಿವೆ.

ಹೀಗೆ ಪ್ರಗತಿಶೀಲ ಸಾಹಿತ್ಯದ ಚಳವಳಿಯಿಂದ ಕನ್ನಡಕಥಾಸಾಹಿತ್ಯ 'ಪ್ರಗತಿ'ಯನ್ನು ಸಾಧಿಸದಿದ್ದರೂ ಗತಿಯನ್ನು (movement) ಮಾತ್ರ ಸಾಧಿಸಿತು. ಬರಗಾಲ, ಯುದ್ಧ, ಸ್ವಾತಂತ್ರ್ಯಚಳವಳಿ, ನಿಯಂತ್ರಣ, ಕಳ್ಳಪೇಟೆ, ಲಂಚಗುಳಿತನ, ಮೊದಲಾದ ಹಲವು ತಾತ್ಕಾಲಿಕ ಸಮಸ್ಯೆಗಳನ್ನು ಪ್ರಗತಿಶೀಲರು ಕಥಾವಸ್ತುಗಳೆಂದು ಆಯ್ದುಕೊಂಡುದರಿಂದ, ಸಣ್ಣಕತೆಗಳಲ್ಲಿ ವೈವಿಧ್ಯತೆ, ವಾಸ್ತವಿಕತೆ, ಕಾಣಿಸಿಕೊಂಡುವು. ಕನ್ನಡಕತೆಗಳಲ್ಲಿದ್ದ ಒಂದು ಕೊರತೆ ತುಂಬಿಬಂದಿತು. ಕತೆಗಾರರ ಹಾಗೂ ಓದುಗರ ಸಂಖ್ಯೆಯೂ ಇದರಿಂದ ಸಾಕಷ್ಟು ಬೆಳೆಯಿತು. ಪ್ರಗತಿಶೀಲ ಚಳವಳಿಯಿಂದ ಕನ್ನಡ ಸಣ್ಣಕತೆ ಸಾಕಷ್ಟು ಗತಿಶೀಲವಾಯಿತು.

ಶಾಂತಿ ಸೇವಾಸದನದ ಹೊಸ ಪ್ರಕಟಣೆಗಳು

		ರೂ. ನ. ಪೈ
ಜೈನಧರ್ಮ		೧೫—೦

ಪ್ರೊ. ಮಿರ್ಜಿ ಅಣ್ಣಾರಾಯರು.

ಭಾರತದ ಬೆಳಕು	,,	೧—೦
ಭಾರತೀಯ ಸಂಸ್ಕೃತಿಯ ಹೃದಯ	,,	೧—೫೦
ಸಮಯಸಾರ	,,	೧—೫೫
ಶ್ರೇಯಾಂಸ (೨ ಭಾಗ)	,,	೩—೦
ಮೂಲಶಿಕ್ಷಣದ ಮೌಲ್ಯಮಾಪನ	,,	೦—೭
ಭರತೇಶನ ನಾಲ್ಕು ಚಿತ್ರಗಳು	,,	೧—೨
ಕೆನೆಮೊಸರು (ಮಕ್ಕಳ ಕತೆ)	,,	೦—೨

ಪ್ರತಿಗಳಿಗಾಗಿ ಬರೆಯಿರಿ:

ಶಾಂತಿ ಸೇವಾಸದನ, ಸೇಡಬಾಳ

ಪೋ. ಸೇಡಬಾಳ (ಜಿಲ್ಲಾ ಬೆಳಗಾಂವಿ)

೫ ಸಾಹಿತ್ಯದಲ್ಲಿ ಪ್ರಗತಿ—ವಿ. ಕೃ. ಗೋಕಾಕ

೬ ತುಂಬಿದ ಕೊಡ ಮತ್ತು ಇತರ ಕಥೆಗಳು—ಇವರ ಮುನ್ನುಡಿಯಲ್ಲಿ ಅ. ನ. ಕೃ.

ತಾರುಕಂಬಗಳು

(ಲಲಿತಪ್ರಬಂಧ)

ಶ್ರೀ. ಬಿ. ಆರ್. ವಾಡಪ್ಪಿ ಎಂ. ಎ. ಬಿ. ಟಿ. ಧಾರವಾಡ

卐

ಇಂದಿನ ವಿಜ್ಞಾನಪ್ರಚಾರ ನಮಗೆ ಭೌತಪ್ರಪಂಚದ ಪರಿಚಯವನ್ನು ಎಷ್ಟೇ ಮಾಡಿಕೊಟ್ಟಿದ್ದರೂ, ಮಾನವನ ಭಾವನಾವೃತ್ತಿ ಭೌತಿಕಬುದ್ಧಿಯ ಮೇಲೆ ಪರಿಣಾಮಮಾಡದೆ ಬಿಡದು. ವಿಜ್ಞಾನ ಜಡವೆಂದು ಸಾರುತ್ತಿದ್ದ ವಸ್ತುವಿನಲ್ಲಿಯೂ ಭಾವನೆ ಹೃದಯಯುಕ್ತ ಜೀವನವನ್ನು ಕಲ್ಪಿಸುತ್ತದೆ.

卐

ತಾರುಕಂಬಗಳನ್ನು ಕಂಡಾಗೆಲ್ಲ ನಾನು ತೀರ ಮುಗ್ಧನಾಗಿ ಬಿಡುತ್ತೇನೆ! ನನಗಾದರೋ ಈ ಹುಚ್ಚು ಬಹಳ ಸಣ್ಣವನಿದ್ದಾಗಿನಿಂದಲೂ ಅಂಟಿಕೊಂಡು ಬಂದಿದೆ. ಅದರ ಕಾರಣವನ್ನು ಸರಿಯಾಗಿ ನನಗೆ ಹೇಳಲು ಸಾಧ್ಯವಿಲ್ಲವೆಂದು ಹೇಳದೆ ಗತ್ಯಂತರವಿಲ್ಲ. ಈಗ ನಾವು ವಾಸಿಸುವ ಈ ಜಗತ್ತು ಒಂದು ಹುಚ್ಚರ ಸಂತೆಯೆಂದು ಹೇಳುವವರೂ ಇದ್ದಾರೆ! ಈ ಹೇಳಿಕೆಯನ್ನು ಕೇಳಿದಾಗ ಎಲ್ಲರಿಗೂ ತಾವು ಹುಚ್ಚರೆಂಬ ಅರಿವು ಕೂಡಲೆ ಉಂಟಾಗದಿದ್ದರೂ, ಮುಖದ ಮೇಲೆ ತುಸು ಹುಚ್ಚುಕಳೆಯಾದರೂ ಒಮ್ಮೆ ಮಿಂಚಿ ಮಾಯವಾಗುವುದರಲ್ಲಿ ಯಾವ ಸಂದೇಹವಿಲ್ಲವಷ್ಟೆ!—ಎಲ್ಲರೂ ತಮ್ಮ ವಿಚಾರ-ಧಾರೆಯೇ ಸರಿಯೆಂದು ನಂಬಿಕೊಂಡಿರುವಾಗ, ಈ ಪ್ರಪಂಚ ಒಂದೇ ರೀತಿಯಾಗಿ ನಡೆಯುವುದಾದರೂ ಹೇಗೆ? ಕೆಲವರಿಗೆ ಧರ್ಮದ ಹುಚ್ಚು ಹಿಡಿದಿದ್ದರೆ ಇನ್ನು ಕೆಲವರಿಗೆ ಧರ್ಮಭ್ರಷ್ಟರಾಗಿರುವ ಹುಚ್ಚು ತಲೆಗೇರಿರುತ್ತದೆ. ಹೆರವರಿಗೆ ನೀತಿಬೋಧೆಮಾಡುತ್ತ ತಾವೇ ಅನೀತಿಯಲ್ಲಿ ನಡೆಯುವ ಹುಚ್ಚರೆಷ್ಟೋ! ರಾಜಕೀಯರಂಗದಲ್ಲಿಯಂತೂ ಇಂತಹ ಹುಚ್ಚು ಈಗ ಅತಿರೇಕವಾಗಿರುವುದೆಂದು, ವಿವೇಕಿ-ಗಳಾದ ನಾವು ಪ್ರತಿದಿನವೂ ಹುಚ್ಚುಹರಟೆ ಕೊಚ್ಚುತ್ತ ಕಾಲ ಕಳೆಯುವುದಿಲ್ಲವೆ? ಒಮ್ಮೆ ಸುಪ್ರಸಿದ್ಧ ಆಂಗ್ಲ ನಾಟಕಕಾರರಾದ ಬರ್ನಾರ್ಡ್‌ಶಾರವರನ್ನು ಒಂದು ಹುಚ್ಚರಾಸ್ಪತ್ರೆಯ ಉದ್ಘಾಟನೆ ಮಾಡಲು ಕೇಳಿಕೊಳ್ಳಲಾಯಿತಂತೆ! ಅದಕ್ಕೆ 'ಶಾ' ನುಡಿದರಂತೆ:— 'ಬುದ್ಧಿವಂತರ ರಕ್ಷಣೆಗಾಗಿ ಮಾತ್ರ ಆಸ್ಪತ್ರೆ ಕಟ್ಟಿಸುವುದು ಅವಶ್ಯ' ಎಂದು! ಅವರ ಹೇಳಿಕೆಯ ಮರ್ಮ ನಮಗೆ ತಿಳಿದರೆ ಸಾಕು— ಹೆಚ್ಚಿಗೆ ಹೇಳುವುದೇನಿದೆ? ಎಲ್ಲರಿಗೂ ಒಂದೊಂದು ವಿಧದ ಹುಚ್ಚು ಇರುವಾಗ, ನನಗೆ ತಾರುಕಂಬಗಳ ಬಗ್ಗೆ ಹುಚ್ಚು ಇದ್ದರೇನು ತಪ್ಪು? ತಾರುಕಂಬಗಳೋ ನನಗೆ, ಯಾರಿಗೂ ಕೇಳದ—ನನಗೆ ಮಾತ್ರ ತಿಳಿಯುವ— ಅನೇಕ ಸಂದೇಶಗಳನ್ನು ಕೊಟ್ಟಿವೆ, ಎಂದು ಹೇಳಿದರೆ ನೀವು ನಂಬಬೇಕಾದರೂ ಹೇಗೆ? ನೀವು ನಂಬಬಹುದು ಅಥವಾ ನನ್ನ ಹೇಳಿಕೆಯನ್ನು ನಿರಾಕರಿಸಲೂ ಬಹುದು—ಆದರೆ ನನಗೆ ಮಾತ್ರ ತಾರು-ಕಂಬಗಳು ಪ್ರೀತಿಯ ಗೆಳೆಯರಿದ್ದಂತೆಯೇ ಸರಿ! ಗೆಳೆತನದ ಸಲುಗೆ-ಯಿಂದ ತಾರುಕಂಬಗಳ ಬಗ್ಗೆ ಇನ್ನು ನನ್ನ ವಿಚಾರಧಾರೆಯನ್ನು ಹರಿಬಿಡಬಹುದಷ್ಟೆ?

ಇಂದಿನ ಪ್ರಪಂಚ ಬಹಳ ನೀರಸವಾಗಿ ಹೋಗಿದೆ— ಎಂದು, ಯಾರ ಅಂಜಿಕೆ ಇಲ್ಲದೆ ಹೇಳಬಹುದು. ಆಶ್ಚರ್ಯಪಟ್ಟು ಯಾವುದನ್ನೂ ನಾವು ಇಂದು ಸ್ವಾಗತಿಸದಾಗಿದ್ದೇವಷ್ಟೆ? ಮೊದಲು ಏನಾದರೂ, ಒಂದು ಯಂತ್ರವೋ ಅಥವಾ ವಸ್ತುವೋ ಪೇಟೆಗೆ ಬಂದಾಗ,—ಅದು ಕೆಲವೇ ಜನರ ಸೊತ್ತಾಗುತ್ತಿತ್ತಷ್ಟೆ? ಈಗ ಹಾಗಿಲ್ಲ. ಎಲ್ಲರೂ ಅಂತಹ ವಸ್ತುಗಳನ್ನು ಪಡೆಯುವರಾದ್ದರಿಂದ— ವಿಪುಲತೆ (ಧಾನ್ಯ-ದವಸಗಳನ್ನು ಬಿಟ್ಟು ಮಾತ್ರ!) ಇಂದು ನಮ್ಮ ಕುತೂಹಲವನ್ನು ಕೊಂದುಬಿಟ್ಟಿದೆ! ಕುತೂಹಲವಿಲ್ಲದ ಬಾಳು ನನಗಂತೂ ಎಂದೂ ಬೇಡ—ಎನಿಸುತ್ತದೆ. ಯಂತ್ರಯುಗದ ಪ್ರಾರಂಭ ಸ್ಟೀಮ್ ಎಂಜಿನಿನ ಅವತಾರದಿಂದ ಪ್ರಾರಂಭವಾಯಿತೆನ್ನುತ್ತಾರಲ್ಲವೆ? ಮೊದಲಿನ ಆ ಎಂಜಿನನ್ನು ನೋಡಲು ಎಷ್ಟು ಜನರು ಕುತೂಹಲಿ-ಗಳಾಗಿದ್ದಾರು—ಅವರಿಗೆ ಅದೆಷ್ಟು ಆನಂದಕೊಟ್ಟಿರಬಹುದೆಂಬುದನ್ನು ಬರಿ ಮಾತುಗಳಿಂದ ಹೇಳಲು ಇಂದು ಸಾಧ್ಯವಿಲ್ಲ. ಕೇವಲ ಕಲ್ಪನೆಗೆ ಬಿಡುವುದೇ ಲೇಸು! ಒಂದು ಸ್ಥಳದಿಂದ ಬೇರೊಂದು ಸ್ಥಳಕ್ಕೆ ತಂತಿ-ಯಿಂದ ಸುದ್ದಿ ತಲಪುತ್ತದೆಂದು ಕೇಳಿದಾಗ, ಅಂದಿನ ಜನರು ಅದೆಷ್ಟು ಆಶ್ಚರ್ಯಪಟ್ಟಿರಬಹುದೆಂಬುದನ್ನು, ಕುತೂಹಲವನ್ನೇ ಕಳೆದುಕೊಂಡ ನಾವು ಊಹಿಸುವುದು ಕಷ್ಟವಲ್ಲವೆ? ನಮಗೋ ಈಗ—ತಾರು— ರೇಲ್ವೆ—ಅಂಚೆ— ಮೊದಲಾದುವುಗಳ ಬಗ್ಗೆ ಆತುರವಿಲ್ಲ, ಭಯವೂ ಇಲ್ಲ!

ದೂರದ ಸಂದೇಶವನ್ನು ಗುಪ್ತವಾಗಿ ತಂದು ತಲುಪಿಸುವ ತಾರುಕಂಬಗಳು ದೇವದೂತರಿದ್ದಂತೆ! ಬಳ್ಳಿಯನು ಹಿಡಿದು ಸಾಲಾಗಿ ನಿಂತಿರುವ ಈ ಕಂಬಗಳು, ನೂರು ನೂರು ಗಾವುದದ ಮೇರೆಯನ್ನು

ಮಾರಿವೆ. ರೈಲಿನಲ್ಲಿ ನಾವು ಪ್ರಯಾಣ ಬೆಳೆಸುತ್ತಿದ್ದಂತೆ ನಮಗೆ ತಾರುಕಂಬಗಳ ಪಡೆಯು ಎದುರಾಗುವುದು. ಅವುಗಳನ್ನು, ವೇಗವಾಗಿ ಓಡುತ್ತಿರುವ ಗಾಡಿಯಲ್ಲಿ ಕುಳಿತು ಎಣಿಸುವುದು ನನಗೊಂದು ಆನಂದವೆ! ಒಂದು ಕಂಬದಿಂದ ಮತ್ತೊಂದು ಕಂಬಕ್ಕೆ ಸಾಗಿಹೋಗಿರುವ ಆ ತಂತಿಗಳನ್ನೂ ಅವುಗಳ ಮೇಲೆ ಕುಳಿತಿರುವ ಅನೇಕ ಗುಬ್ಬಿಗಳನ್ನೂ ಕಂಡಾಗ, ನನ್ನ ಎಳೆಯ ಮನಸ್ಸು ಆ ಗುಬ್ಬಿಗಳಂತೆ ನಾನೂ ಹಾರಾಡಬಾರದೇ ಎಂದು ಭೇನಿಸುತ್ತಿತ್ತೆಂದು ಹೇಳಿದರೆ, ನೀವು ಈಗ ನಗುವುದಿಲ್ಲವಷ್ಟೆ? ನಾವು ಪ್ರಯಾಣ ಬೆಳೆಸುತ್ತಿದ್ದ ಗಾಡಿ ಸುತ್ತುಸುತ್ತಾಗಿ ದರಿ ಕೊಳ್ಳಗಳನ್ನು ಸುತ್ತುತ್ತ ನಡೆದಾಗ—ಅದೋ ಆ ತಾರುಕಂಬಗಳಾದರೂ ಹೇಗೆ ಬಹು ಠೀವಿಯಿಂದ ಅಲ್ಲೊಂದು ಇಲ್ಲೊಂದು ನಿಂತುಕೊಂಡಿರುತ್ತವೆ! ಕಾನನದ ಮಧ್ಯದಲ್ಲಿ ಹೇಗೋ, ಸ್ಥಳ ಮಾಡಿಕೊಂಡು ಮುಂದೆ ಮುಂದೆ ಹೊರಟಿರುವ ತಾರುಕಂಬಗಳು ನೋಡಲು ಬಲು ಚೆಂದ. ಗಾಡಿಯು ಮಾರ್ಗದಲ್ಲಿಯ ಸೇತುವೆಯನ್ನು ದಾಟುತ್ತಿದ್ದಾಗ, ಪ್ರವಾಹದ ಎರಡೂ ದಂಡೆಗಳ ಮೇಲೆ ನಿಂತುಕೊಂಡ ತಾರುಕಂಬಗಳು ಪ್ರವಾಹಕ್ಕೆ ಕಟ್ಟಿದ ಕಮಾನಿನಂತೆ ಕಾಣುವುದಿಲ್ಲವೆ? ಒಮ್ಮೊಮ್ಮೆ ಎತ್ತರದ ದಿನ್ನೆಯ ಮೇಲೆ ನಿಂತುಕೊಂಡ ಕಂಬ ತೀರ ಕೆಳಗೆ ನಿಂತುಕೊಂಡ ಕಂಬಕ್ಕೆ ಕೈ ಚಾಚಿ ಹಿಡಿದಂತೆ ಭಾಸವಾಗುತ್ತದೆ. ತಾರುಕಂಬಗಳ ಮೇಲೆ ಅಂಕಿಗಳನ್ನು ಏತಕ್ಕಾಗಿ ಬರೆದಿರುವರೊ ನನಗಂತೂ ತಿಳಿಯದು ಬಹುತರ ಅವುಗಳನ್ನು ಬರೆದವರಿಗಾದರೂ ಕಾರಣ ಗೊತ್ತಿದೆಯೊ ಇಲ್ಲವೊ! ಆದರೆ ಆ ಅಂಕಿಗಳಿಂದ ಅಲಂಕೃತವಾದ ಆ ಕಂಬಗಳು ಮಾತ್ರ ತಮ್ಮ ಅಧಿಕಾರದ ಹುದ್ದೆಯನ್ನು ಬಿಂಕದಿಂದ ತೋರಿಸುವಂತೆ ನೋಡುವವರಿಗೆ ಎನಿಸದಿರದು. ಸರಕಾರದ ಪ್ರತೀಕವಾದ ಈ ಕಂಬಗಳು ದಕ್ಷವಾಗಿ ನಿಂತುಕೊಂಡು ಹಗಲಿರುಳೆನ್ನದೆ—ಬಿಸಿ.. ಗಾಳಿಯೆನ್ನದೆ ದುಡಿಯುತ್ತಿರುವುದನ್ನು ಕಂಡು, ಉತ್ಕೃಷ್ಟ ಮನಸ್ಸಿನ ಮಾನವರಾದರೂ ತಮ್ಮ ಮನಸ್ಸನ್ನು ತಿದ್ದಿಕೊಳ್ಳಬಾರದೇಕೆ—ಎಂದು ಮುಂತಾಗಿ ವಿಚಾರಗಳು ನನ್ನ ತಲೆಯಲ್ಲಿ ಬಂದುಹೋದುದುಂಟು; ತಾರುಕಂಬಗಳಿಂದ ಪಡೆದ ಸ್ಫೂರ್ತಿ, ನೀತಿ ಸಾಮಾನ್ಯವೇನು ಅಲ್ಲವಷ್ಟೆ? ನಿತ್ಯದಲ್ಲೂ ತಾರುಕಂಬಗಳು ಅನೇಕ ರಹಸ್ಯದ ಸುದ್ದಿಗಳ ವಾಹಕವಾಗಿದ್ದರೂ, ಯಾವ ಗುಟ್ಟನ್ನೂ ರಟ್ಟುಮಾಡದೆ ಅತ್ಯಂತ ನಿಷ್ಠೆಯಿಂದ ಇರುವುದನ್ನು ನಾವು ಅರಿತರೆ, ಗುಪ್ತಸಂಗತಿಗಳನ್ನು ಸ್ಫೋಟಮಾಡುವ ಬುದ್ಧಿವಂತರೆನಿಸಿಕೊಳ್ಳುವ ಮಾನವರಾದರೂ ಪಾಠಕಲಿತುಕೊಳ್ಳಬಹುದಲ್ಲವೆ? ಹೀಗೆ ಏನೇನೋ ಹುಚ್ಚುವಿಚಾರಗಳು ತಾರುಕಂಬಗಳನ್ನು ಕಂಡಾಗೆಲ್ಲ ಬರುವುದುಂಟು. ತಂತಿಶಾಖೆಯ ದಕ್ಷಸೇವಕರಾದ ಈ ಕಂಬಗಳ ಇತಿಹಾಸ ತೀರ ಪುರಾತನವಾಗದಿದ್ದರೂ, ನೂರಾರು ವರುಷದ ಹಳೆಯ ಮಾತಾಗಿದೆ. ತಂತಿಯಿಂದ ಸುದ್ದಿಗಳನ್ನು ಕಳಿಸುವ ವಿಧಾನವನ್ನು ಕಂಡುಹಿಡಿದ ಮಹಾಪುರುಷನು ಯಾರೇ ಇರಲಿ—ಅದು ಅಷ್ಟು ಮಹತ್ತ್ವದ ವಿಷಯವಲ್ಲ—ಆದರೆ ಇಂದಿಗೂ ಆತನು ಕೊಟ್ಟ ಕಾಣಿಕೆಯನ್ನು ಮಾನವಕುಲಕ್ಕೆ ನಿತ್ಯವೂ ಒದಗಿಸುವ ತಾರುಕಂಬಗಳು ನಿಷ್ಕಾಮ ಸೇವಾಬುದ್ಧಿಯ ಪ್ರತೀಕಗಳಂತಿಲ್ಲವೆ?

ಮೊನ್ನೆ ಮೊನ್ನೆ ಭಾರತಸರಕಾರವು ತಂತಿಶಾಖೆಯ ಶತಸಾಂವತ್ಸರಿಕ ದಿನಾಚರಣೆಯನ್ನು ಬಹು ವೈಭವದಿಂದ ಆಚರಿಸಿತಲ್ಲದೆ- ತಂತಿಶಾಖೆಯ ಹುಟ್ಟು-ಬೆಳವಣಿಗೆಯ ಬಗ್ಗೆ ಅದೆಷ್ಟೋ ಲೇಖನಗಳನ್ನು ಪತ್ರಿಕೆಯಲ್ಲಿ ಪ್ರಕಟಿಸಿತು. ಅದನ್ನೆಲ್ಲ ಓದಿದ ನಮಗೆ, ತಾರುಕಂಬಗಳ ಬಗ್ಗೆ ಇನ್ನೂ ಹೆಚ್ಚು ಅಭಿಮಾನ ಉಂಟಾಗಬಹುದಲ್ಲವೆ? ಆಹುದು. ಅದೆಂತಹ ಅಭಿಮಾನವೆಂದು ಕೇಳಿ ನೀವು ನಮ್ಮನ್ನು ಕೆಣಕಿದರೆ ನಾವೇನು ನಿರುತ್ತರಕುಮಾರರಾಗುವಂತಿಲ್ಲ. ಯಾಕೆಂದರೆ ನಮ್ಮ ಹಿಂದಿನ ಪೀಳಿಗೆಯವರು ಈ ತಾರು-ತಂತಿಗಳ ವಿಚಾರಕ್ಕೆ ಕುತೂಹಲಿಗಳಾಗಿದ್ದಂತೆ ಬಹಳ ಭೀತಿಯುಳ್ಳವರೂ ಆಗಿದ್ದರು ಮನೆಗೆ ತಾರು ಬಂದಿದೆಯೆಂದು ಕೇಳಿದ ಕೂಡಲೆ ಯಾರೋ ಸ್ವರ್ಗಸ್ಥರೋ, ಕೈಲಾಸವಾಸಿಗಳೋ—ಅಥವಾ ವೈಕುಂಠವಾಸಿಗಳೋ ಆದರೆಂದು ಬಗೆದು ಅಳುವುದಕ್ಕೆ ಪ್ರಾರಂಭಿಸುತ್ತಿದ್ದರಂತೆ! ಪಾಪ ಅವರಿಗೆ ತಾರು, ಸತ್ತಾಗ ಸುದ್ದಿ ಕಳಿಸುವ ಒಂದು ಸಾಧನವೆಂದು ಮಾತ್ರ ಗೊತ್ತಿತ್ತು! ಈಗಿನ ದಿನಗಳಲ್ಲಿ ಮದುವೆಯ ಮಂಟಪದಲ್ಲಿ ಶುಭೇಚ್ಛೆಯನ್ನು ಕೋರಿ ಕಳುಹಿದ ತಾರುಗಳ ಸಂಖ್ಯೆಯಿಂದ ವರನ ವ್ಯಕ್ತಿತ್ವವನ್ನು ತಿಳಿದುಕೊಳ್ಳಬಹುದಲ್ಲವೇ? ಹಳ್ಳಿಗರೋ ಈ ಕಂಬಗಳನ್ನು ತಮ್ಮ ಹೊಲಗಳಲ್ಲಿ ನೆಟ್ಟರೆ—ಅದೇನೋ ಮಾಟವೋ ಮಂತ್ರವೋ ಎಂದು ಅಂಜಿ, ಅವರ ಹತ್ತಿರ ಕೂಡ ಸುಳಿಯುತ್ತಿದ್ದಿಲ್ಲವಂತೆ. ಅವರ ಭೀತಿಯು ಕೊನೆಗೆ ಪೂಜೆ-ಪುರಸ್ಕಾರಗಳಲ್ಲಿ ಕೂಡ ಪರಿಣಮಿಸಿತೆಂದು ಹೇಳಿದರೆ—ಯಾರೂ ಇಂದು ನಂಬಲಿಕ್ಕೂ ಇಲ್ಲ ತಾರುಕಂಬಕ್ಕೆ ಕಾಯಿ ಒಡೆದು ಪೂಜೆಮಾಡಿದ ಪುಣ್ಯಾತ್ಮರು ನಮ್ಮ ದೇಶದಲ್ಲಿ ಅದೆಷ್ಟೋ ಜನರು ಆಗಿಹೋಗಿರಬಹುದು! ಪಾಪ, ಅದು ಅವರ ತಪ್ಪಲ್ಲ ಆಶ್ಚರ್ಯವನ್ನುಂಟುಮಾಡಿದ ತಾರುಕಂಬದ ಮಹಿಮೆಯೇ ಅದಕ್ಕೆಲ್ಲ ಕಾರಣವಲ್ಲವೆ? ಯಂತ್ರಗಳ ಬಗ್ಗೆ ಏನೂ ಗೊತ್ತಿರದ ಜನರಿಗೆ ತಂತಿಯಿಂದ ಸುದ್ದಿ ಬರುವುದೆಂದು ಹೇಳಿದರೆ. ಅದೆಂತು ಅವರ ಅದನ್ನು ನಂಬಬೇಕು? ದೇ ಇಲ್ಲವೇ ದೆವ್ವ ಇವೆರಡೇ ವಿಚಿತ್ರ ಕೆಲಸ ನಡೆಸತಕ್ಕ ಶಕ್ತಿಗಳಲ್ಲವೆ? ದೇವ—ದೆವ್ವ ಬಯಸುವುದಾದರೂ ಏನನ್ನು? ಪೂಜೆ—ಬಲಿ.... ಇತ್ಯಾದಿಗಳನ್ನಲ್ಲವೆ?

ನಾನಂತೂ ತೀರ ಸಣ್ಣವನಿದ್ದಾಗ, ತಾರಿನಿಂದ ಸುದ್ದಿ ಕಳಿಸುವ ಬಗ್ಗೆ ಒಂದು ವಿಚಿತ್ರ ಕಲ್ಪನೆಯನ್ನೇ ಮಾಡಿಕೊಂಡಿದ್ದೆ. ಆ ವಿಚಾರ ಈಗ ಬಹಿರಂಗಪಡಿಸಿದರೆ, ಇಂದಿನ ಸುಧಾರಿಸಿದ ಜನರು ಬಿದ್ದುಬಿದ್ದು ನಗಬಹುದು. ಕಳುಹಿಸಬೇಕಾದ ಸುದ್ದಿಯನ್ನು ಹಾಳೆಯಲ್ಲಿ ಬರೆದು ತಾರುಕಂಬವನ್ನೇರಿ ತಂತಿಗೆ ಕಟ್ಟಿದಾಗ, ಅದು ಮುಂದಿನ ಊರಿಗೆ ತಂತಿಗಳ ಮೇಲೆ ಹೋಗಬಹುದೆಂದು ನಂಬಿಕೊಂಡವರಲ್ಲಿ ನಾನೊಬ್ಬನಾಗಿದ್ದೆ! ಈಗ ಮಾತ್ರ ಖಂಡಿತವಾಗಿ ಹಾಗೆ ನಂಬಿಲ್ಲವೆಂದು ಹೇಳಿದರೂ, ನನಗೆ ಮಾತ್ರ ಇಂದಿನ ಜ್ಞಾನದ ಸುಖಕ್ಕಿಂತ ಹಿಂದಿನ ಅಜ್ಞಾನದಲ್ಲಿಯೇ ಹೆಚ್ಚು ಸುಖವಿತ್ತೇನೋ ಎಂದು. ಒಮ್ಮೊಮ್ಮೆ ವಿಚಾರ ಬರುವುದುಂಟು— Ignoranee is bliss ಎಂದು ಹೇಳುತ್ತಾರಲ್ಲ—ಹಾಗೆ! ಪತ್ರಗಳನ್ನು ಅಂಚೆಯ ಪೆಟ್ಟಿಗೆಯಲ್ಲಿ ಒಗೆದು, ಮೂರು ಸಲ 'ಇಂಥ ಊರಿಗೆ ಮುಟ್ಟಿಸಿರಿ' ಎಂದು ಕೂಗಿ

ಕೊಂಡರೆ ಮಾತ್ರ ಪತ್ರಗಳು ಆ ವಿಳಾಸಕ್ಕೆ ತಲುಪುವವೆಂಬ ಹುಚ್ಚು ವಿಚಾರಗಳು ಸಹಿತ ಪ್ರಾರಂಭಕಾಲದಲ್ಲಿದ್ದುವೆಂದು. ನಾವು ಈಗ ಕೇಳಿದರೆ, ಗಹಗಹಿಸಿ ನಗಲೂಬಹುದು, ಹೀಗೆಲ್ಲ ರಂಜಕವಿಷಯಗಳನ್ನು ಹೇಳುತ್ತಹೋದರೆ ಅದೊಂದು ಹೊತ್ತಿಗೆಯೇ ಆದೀತೆಂಬ ಭಯದಿಂದ, ಮತ್ತೆ ನಮ್ಮ ತಾರುಕಂಬಗಳ ಕಡೆಗೆ ಹೊರಳುವುದೇ ಲೇಸು!

ಮೊದಲೇ ಹೇಳಿದಂತೆ ತಾರುಕಂಬಗಳೊಡನೆ ನನಗೆ ಗೆಳೆತನದ ಸಲುಗೆಯಿದೆ! ಗೆಳೆತನ ಬೆಳೆಯಬೇಕಾದರೆ ಪರಿಚಯವೂ ಅಗತ್ಯ-ವಷ್ಟೆ? ಈ ನಿರ್ಜೀವ ತಾರುಕಂಬಗಳೊಡನೆ ಗೆಳೆತನವೆಂದಾಗ, ಇದು ಎಂಥ ಹುಚ್ಚು—ಎಂದು ನಿಮಗೆ ಎನಿಸುವುದರಲ್ಲಿ ಸಂದೇಹವಿಲ್ಲ. ಸರಿ, ನಾನೋ ಮುಂಜಾವಿನಲ್ಲಿದ್ದು ಮನೆಯ ಜನರೆಲ್ಲ ಗೊರಕೇಹೊಡೆಯು-ತ್ತಿದ್ದಾಗ —ಅವರ ಗೊರಕೆಗೆ ಭಂಗ ಬರದಂತೆ ಸ್ಟೋವ್ ಹೊತ್ತಿಸಿ, ಚಹ ಮಾಡುತ್ತೇನೆ. ಒಂದು ಕಪ್ಪೋ ಇನ್ನೂ ತುಸು ಹೆಚ್ಚೋ ಕುಡಿದು ವಾಕಿಂಗ್‌ಸ್ಟಿಕ್ ಹಿಡಿದು ಹೊರಗೆ ಹೊರಡುತ್ತೇನೆ "Give me the claer blue sky over my head, and the green turf beneth my feet, a winding road before me, and three hours march to dinner and then to thinking!" ಎಂಬ ನುಡಿಯಂತೆ ಓ ಅದೆಂಥ ಆನಂದ!! ಊರ ಹೊರಗೆ ಹೋದಂತೆ, ಎಲ್ಲೆಲ್ಲಿಯೂ ಶಾಂತಿ. ಆ ಶಾಂತತೆಯ ನಡುವೆ "ಭಂಯ್‌ಽಽಽ" ಎಂಬ ಗಾಳಿಯ ಗಾನ ಹೆಚ್ಚಾದಂತೆ, ತಾರುಕಂಬಗಳ ಹತ್ತಿರ ಹೋಗಿ ನಿಲ್ಲಬೇಕು. ಅದೆಂತಹ ಧ್ವನಿ ಅಲ್ಲಿ ಕೇಳಿಸುತ್ತದೆಂಬುದನ್ನು ನೀವಾರಾದರೂ ಲಾಲಿಸಿದ್ದೀರಾ? ಆ ನಾದ ಕೇಳಿದಾಗ, ಜಗತ್ತಿನ ಸುದ್ದಿಯನ್ನೆಲ್ಲ ಈ ಈ ಪೊಳ್ಳು ಕಂಬಗಳು ತಮ್ಮ ಹೊಟ್ಟೆಯಲ್ಲಿ ತುಂಬಿಟ್ಟುಕೊಂಡಿವೆಯೋ ಎಂದು ಎನಿಸಬಹುದು. ಹಾದಿಗುಂಟ ನಾ ಮುಂದೆಯೋ ನೀ ಮುಂದೆಯೋ-ಎಂದು ಜಿದ್ದು ಕಟ್ಟಿ ಓಡಿದಂತೆ—ಸಾಲಾಗಿ ಹೊರಟಿರುವ ಆ ತಾರುಕಂಬಗಳ ಶೋಭೆಯನ್ನು ಕಂಡು ಆನಂದಪಡುವುದಕ್ಕೂ ಒಂದು ದೃಷ್ಟಿ ಬೇಕಷ್ಟೆ! ಅದೆಷ್ಟು ಜನಕ್ಕಿದೆ? ಸುತ್ತುಸುತ್ತಾಗಿ ಹೋಗಿರುವ ರಸ್ತೆಗುಂಟ ತಾರುಕಂಬಗಳನ್ನೆಣಿಸುತ್ತ ವಾಯುವೇಗ-ದಿಂದ ಹೊರಟಾಗ "ಮೂಡಲ ಮನೆಯ ಮುತ್ತಿನ ನೀರಿನ ಎರಕವ ಹೊಯ್ದಾ" ಎಂಬಂತೆ ಕವಿಯು ಹೊಂಗಿರಣಗಳನ್ನು ತೂರಹತ್ತಿ-ದಾಗ—ಅದೋ ದೂರದ ದಿನ್ನೆಯ ಮೇಲೆ ನಿಂತುಕೊಂಡ ಆ ತಾರುಕಂಬ ಎಷ್ಟು ಅಂದವಾಗಿ ಕಾಣುತ್ತದೆ! ಅದರ ಮೇಲಿನ ಗಾಜಿನ ಗುಬ್ಬಿಗಳು ಸಜೀವ ಗುಬ್ಬಿಗಳಂತೆ ಭಾಸವಾಗುವುದಿಲ್ಲವೆ? ಗಿಳಿಗಳ ಹಿಂಡು ತಂತಿಗಳ ಮೇಲೆ ಹಾರಿಬಂದು ಕುಳಿತಾಗ, ಸೂರ್ಯನ ಸುಸ್ವಾಗತಕ್ಕಾಗಿ ಕಟ್ಟಿದ ತೋರಣದಂತೆ ಕಂಡು ನಮ್ಮಂತಹ ವಾಯು-

ಗರ್ಭಾಶಯದ ದೋಷಗಳನ್ನು ನಿವಾರಿಸಲು ಅತ್ಯುತ್ತಮವಾದ ಸಿದ್ಧೌಷಧ
ಜೀವನಿ
ದಿ ಸದ್ವೈದ್ಯಶಾಲಾ ಲಿ., ನಂಜನಗೂಡು
ಬ್ರಾಂಚುಗಳು: ಬೆಂಗಳೂರು, ಮೈಸೂರು, ಮಂಗಳೂರು, ಹುಬ್ಬಳ್ಳಿ
ಯಾವಾಗಲೂ ನಂಜನಗೂಡು ಟೂತ್ ಪೌಡರ್ ಉಪಯೋಗಿಸಿರಿ

ವಿಹಾರಿಗಳ ಮನ ತಣಿಸದಿರದೆ? ನಾನು ಪ್ರತಿನಿತ್ಯ ಅಲೆದಾಡುತ್ತ ಹೋಗುವ ಆ ಮಾರ್ಗದಲ್ಲಿಯ ಒಂದು ತೋಟದ ಬಾಗಿಲ ಬಳಿಯೇ ಒಂದು ತಾರುಕಂಬ ನಿಂತುಕೊಂಡಿದೆ. ಅಲ್ಲಿಂದಲೇ ಬೇರೊಂದು ಮಾರ್ಗ ಹೊರಳಿದೆ. ಆ ದೊಡ್ಡ ತಾರುಕಂಬವು ಹಿರಿಯನಂತೆ ನಿಂತು ಮಾರ್ಗದರ್ಶನ ಮಾಡುವಂತೆ ನನಗಂತೂ ಭಾಸವಾಗುತ್ತದೆ! ನಾನೋ, ಅಲ್ಲಿ ತುಸು ವಿಶ್ರಮಿಸುತ್ತೇನೆ. ಒಮ್ಮೊಮ್ಮೆ ಹಳ್ಳಿಯ ಮುಗ್ಧಾಂಗನೆಯರು ಆ ತೋಟದ ಬಾವಿಯಿಂದ ತಲೆಯ ಮೇಲೆ ಕೊಡ ಹೊತ್ತುಕೊಂಡು ಬರುವುದನ್ನು ನೋಡಿ:—

ಇಯಂ ಸುಸ್ತನೀ ಮಸ್ತಕನ್ಯಸ್ತ ಕುಂಭಾ
ಕುಸುಂಭಾರುಣಂ ಚಾರುಚೇಲಂ ವಸಾನಾ ।
ಸಮಸ್ತಸ್ಯ ಲೋಕಸ್ಯ ಚೇತಃ ಪ್ರವೃತ್ತಿಂ
ಗೃಹೀತ್ವಾ ಘಟೇ ನ್ಯಸ್ಯಯಾತೀವ ಭಾತಿ ॥

ಎಂದು ಮುಂತಾಗಿ ರಸಿಕ ಶಿರೋಮಣಿಯಾದ ಜಗನ್ನಾಥ ಪಂಡಿತನ ನುಡಿಯನ್ನು ಹಾಡಬೇಕೆನಿಸುತ್ತದೆ; ಸರಸವಾದ ವಿಚಾರದ ಲಹರಿಯ-ಲ್ಲಿದ್ದ ನಾನೋ, ಹೊಟ್ಟೆಯ ಪಾಡಿಗಾಗಿ ದುಡಿಯಬೇಕಾದುದ-ರಿಂದ, ಮತ್ತೆ ತಾರುಕಂಬಗಳ ಗುಂಟ ಮರಳಿ ಮನೆಯ ಕಡೆಗೆ ಸಾಗುತ್ತೇನೆ,

ಇರಲಿ, ನಮ್ಮ ಜೀವನವೇ ಅನೇಕ ವಿಚಾರಗಳ ವಾಹಕವಾಗಿರು-ವಾಗ, ನಾವೆಲ್ಲ ಆ ವಿಚಾರಗಳಿಗೆ ಸಾಧನವಾಗಿರುವ ತಾರುಕಂಬಗಳೇ ಸರಿ! ಅನಂತವಾದ ವಿಶ್ವದಲ್ಲಿ ನಡೆದಿರುವ ಕ್ರಿಯೆಗೆ ಶಕ್ತಿಯನ್ನು ಒದಗಿಸುವ ಆ ದಿವ್ಯ ಮೂಲಶಕ್ತಿಯು ಕೊಡುವ ಸಂದೇಶಗಳನ್ನು ತಿಳಿದು ಆಚರಿಸಬೇಕಾಗಿದೆ ಸರಸ ವಿರಸಗಳ ಸವಿಪಾಕವೆಂದು ನಾವು ತಣಿಯಬೇಕಲ್ಲವೆ? ಈ ತಾರುಕಂಬಗಳಾದರೋ ಕ್ಷಣಕ್ಷಣಕ್ಕೆ ಬರುವ ಅನೇಕ ಸುದ್ದಿಗಳನ್ನು ತಲುಪಿಸುತ್ತ, ಯಾವುದನ್ನೂ ತಾವು ಮಾತ್ರ ಗ್ರಹಿಸದೆ ಇರುವಂತೆ, ನಾವಾದರೂ ಜೀವಿಸಬೇಕಲ್ಲವೆ?

ಮೊಹೆಂಜೊ-ದಾರೊ

(ಶಬ್ದಚಿತ್ರ)

ಶ್ರೀ. ಹಾ. ವೆಂ. ರಾಮಸ್ವಾಮಿ ಬಿ. ಎಸ್ ಸಿ. ಬೆಂಗಳೂರು

ನಿರೂಪಕ :

ಸುಮಾರು ಐದುಸಾವಿರ ವರ್ಷಗಳ ಹಿಂದೆ. ಭಾರತದ ವಾಯುವ್ಯ ದಿಕ್ಕಿನಲ್ಲಿ ಸಿಂಧುನದಿಯ ತಪ್ಪಲಿನಲ್ಲಿ, ನಾಗರಿಕತೆಯ ಉತ್ಕೃಷ್ಟಮಟ್ಟವನ್ನು ಮುಟ್ಟಿದ್ದ ಒಂದು ನಗರವಿತ್ತು. ಇಂದು ಅದರ ಅಳಿದುಳಿದ ಅವಶೇಷಗಳನ್ನು ನೋಡಿದರೆ, ಅಂಥ ನಗರವೊಂದು ಐದುಸಹಸ್ರ ವರ್ಷಗಳ ಹಿಂದೆ ಇದ್ದಿತೆಂಬುದನ್ನು ನಂಬುವುದೂ ಕಷ್ಟ....ಆ ನಗರದ ಹೆಸರು—ಮೊಹೆಂಜೊ-ದಾರೋ. ಅಂಥ ನಾಗರಿಕತೆಯು ನಾಮಾವಶೇಷವಾಗಿ ಹೋಗಲು ಕಾರಣ—ಸಿಂಧುನದಿಯ ಪ್ರವಾಹ, ಹಾಗೂ ಶತ್ರುಗಳ ಆಕ್ರಮಣವೆಂದು ಇತಿಹಾಸ ಹೇಳುತ್ತದೆ.

× × × ×

[ಮೊಹೆಂಜೊದಾರೊವಿನ ಕೊನೆಯ ದಿನಗಳಲ್ಲಿ ನಗರದ ಸೇನಾಪತಿ ಮತ್ತು ಪ್ರಧಾನ ಸಚಿವರು. ಹಿನ್ನೆಲೆಯಲ್ಲಿ ಮುಂದಗತಿಯ ನದಿಯ ಪ್ರವಾಹದ ಮಂಜುಳನಾದ]

ಸಚಿವ :—ಸೇನಾಪತಿಗಳೇ, ಈ ವರ್ಷ ಮಳೆಗಾಲದ ಆರಂಭವನ್ನು ನೋಡಿದರೇ ಭಯವಾಗುತ್ತಿದೆ. ಕಳೆದ ಹದಿನೈದು ದಿನಗಳಿಂದ ಸಿಂಧುವಿನ ಪ್ರವಾಹ ಒಂದೇ ಸಮನೆ ಏರುತ್ತಿದೆಯಲ್ಲ!

ಸೇನಾಪತಿ :— ಕಳೆದ ವರ್ಷಕ್ಕಿಂತ ಹೆಚ್ಚು ಹಾವಳಿಯುಂಟಾಗುವ ಸಂಭವವಿದೆಯೇ, ಸಚಿವರೇ ?

ಸಚಿವ :— ನನಗೇನೋ ಶಂಕೆಯಾಗುತ್ತದೆ. ಪ್ರವಾಹದ ರಭಸವನ್ನು ತಡೆಯಲಾರದೆ, ಕಟ್ಟೆಯ ಸ್ವಲ್ಪಭಾಗ ಉತ್ತರದಲ್ಲಿ ಸಡಿಲವಾಗುತ್ತಿದೆ. ನಾಲ್ಕು, ಐದು ವರ್ಷಕ್ಕೊಮ್ಮೆ ಪ್ರವಾಹ ಮಿತಿ ಮೀರುವುದು ಪದ್ಧತಿಯಾಗಿದೆ.

ಸೇನಾಪತಿ :— ಆದರೂ ನಮ್ಮ ಹಿರಿಯರು ನಿರ್ಮಿಸಿರುವ ಈ ಆಣೆಕಟ್ಟು ಇರುವುದರಿಂದ, ನಮ್ಮ ನಗರದ ಭದ್ರತೆಗೆ ಏನೂ ಭಯವಿಲ್ಲ, ಅಲ್ಲವೇ ?

ಸಚಿವ :— ಕಟ್ಟೆ ಭದ್ರವಾಗಿದೆ, ನಿಜ; ಆದರೆ ಅಷ್ಟೇ ಹಳೆಯದೂ ಆಗಿದೆ. ಈ ಮಳೆಗಾಲ ಮುಗಿದೊಡನೆ, ಜಾಗರೂಕತೆಯಿಂದ, ಅದರ ಪ್ರತಿಯೊಂದು ಭಾಗವನ್ನು ಪರೀಕ್ಷಿಸಿ, ಶಿಥಿಲವಾದ ಭಾಗಗಳನ್ನು ಸರಿಪಡಿಸಿಯೇ ತೀರಬೇಕು. ಹಾಗೆ ಮಾಡದೆ ಹೋದರೆ ನಗರಕ್ಕೆ ಕ್ಷೇಮವಿಲ್ಲ.

ಸೇನಾಪತಿ :— ಹೌದು ಸಚಿವರೇ, ಆದರೆ ಅದಕ್ಕೆಲ್ಲ ತುಂಬ ದ್ರವ್ಯ ಬೇಕಾಗುವುದಲ್ಲವೇ ? ಸಚಿವಮಂಡಲಿ ಅದಕ್ಕೆ ಒಪ್ಪುವುದೇ ?

ಸಚಿವ :— ಅದೇ ನನಗೂ ಆತಂಕವುಂಟುಮಾಡಿರುವ ವಿಷಯ! ಸೇನಾಪತಿಗಳೇ, ನಾವಿಬ್ಬರು ಹೊರತು, ಉಳಿದ ಸಚಿವರೆಲ್ಲ ವಯಸ್ಸಿನಲ್ಲಿ ಕಿರಿಯವರು. ನಮ್ಮ ಮಾತು ಕ್ರೀಡಾಭಿಲಾಷಿಗಳಾದ ಅವರಿಗೆ ಪ್ರಿಯವಾಗಲಾರದು. ಅದ್ಭುತವೂ, ಪ್ರಾಚೀನವೂ ಆದ ಈ ಕಟ್ಟೆಯ ಭದ್ರತೆಯನ್ನು ಶಂಕಿಸುವುದೇ ಅವರಿಗೆ ಹಾಸ್ಯಾಸ್ಪದವಾಗಿ ತೋರಬಹುದು. ಈ ಮುದುಕರಿಗೆ ಇಲ್ಲ ಸಲ್ಲದ ಭಯ— ಎಂದು ನಕ್ಕು ಸುಮ್ಮನಾದರೆ ಏನುಗತಿ ಅಂತ ಚಿಂತೆಯಾಗಿದೆ.

ಸೇನಾಪತಿ :— ಸೃಷ್ಟಿಯ ಸಮಸ್ತ ಚರಾಚರ ವಸ್ತುಗಳೂ ಹಳೆಯದಾದಂತೆ ಶಕ್ತಿಹೀನವಾಗಿ ಶಿಥಿಲವಾಗುತ್ತವೆ ಎಂಬುದು ತಾರುಣ್ಯದ ಮಬ್ಬಿನಲ್ಲಿ ತಿಳಿಯುವುದಿಲ್ಲ. ನಮ್ಮ ಸಚಿವರು ವಿವೇಕವಿಲ್ಲದೆ ಊರತುಂಬ ಕ್ರೀಡಾಂಗಣ, ದೇವಾಲಯಗಳನ್ನು ಕಟ್ಟಿಸುತ್ತ ಹಣವನ್ನು ಸುರಿಯುತ್ತಿದ್ದಾರೆ. ಸುಸಜ್ಜಿತವಾದ ಸೈನ್ಯವನ್ನು ಕೂಡಿಸಬೇಕೆಂದು ನಾನು ಎಷ್ಟು ಹೇಳಿದರೂ ಒಪ್ಪುತ್ತಿಲ್ಲ. ಇರುವ ಸೈನಿಕರಿಗೂ ಕಾಲಕಾಲಕ್ಕೆ ಭತ್ಯವಿಲ್ಲ. ಇರಲಿ. ನಮ್ಮ ಮನಸ್ಸಿನಲ್ಲಿರುವುದನ್ನು ಅವರ ಮುಂದೆ ಹೇಳಿಬಿಡೋಣ. ಅವರು ಹೇಗೆ ಬೇಕಾದರೂ ಮಾಡಲಿ!

ಸಚಿವ :— ಅಷ್ಟೇ! ಸೇನಾಪತಿಗಳೇ, ಒಂದು ಸುದ್ದಿ ಕಿವಿಗೆ ಬಿತ್ತು. ತಮಗೂ ತಿಳಿದಿರಬಹುದು. ಉತ್ತರ ದಿಕ್ಕಿನಲ್ಲಿ ಸುಮಾರು ಇನ್ನೂರು ಹರದಾರಿ ದೂರದಲ್ಲಿ ಒಂದು ನಗರ ನೆಲಸಮವಾಗಿ ಹೋಗಿದೆಯಂತೆ!

ಸೇನಾಪತಿ :—ಹಾಗೇನು ? ಕಾರಣವೇನಂತೆ ? ಪ್ರವಾಹವೇ?

ಸಚಿವ :— ಅಲ್ಲ.

ಸೇನಾಪತಿ :.... ಬೆಂಕಿಯೇ ? ಭೂಕಂಪವೇ ?

ಸಚಿವ :— ಅಲ್ಲ, ಅಲ್ಲ. ಶತ್ರುಗಳ ಆಕ್ರಮಣವಂತೆ. ಆ ನಗರದವರಿಗಿಂತ ನೂರು—ಸಾವಿರ—ಪಾಲು ಪರಾಕ್ರಮಶಾಲಿಗಳಾದ ಶತ್ರುಗಳ ಧಾಳಿ

ಸೇನಾಪತಿ :— ಅಂದರೆ ಆ ಶತ್ರುಗಳೇನು ಅತಿಮಾನವರೇ ? ರಾಕ್ಷಸರೇ ?

ಸಚಿವ :— ಏನಿಲ್ಲ, ಅವರ ಬಳಿ ಅಶ್ವಗಳೆಂಬ ಒಂದು ಬಗೆಯ ಪ್ರಾಣಿಗಳಿವೆಯಂತೆ. ಅವು ವಾಯುವೇಗದಲ್ಲಿ ಓಡುತ್ತವೆಯಂತೆ.

---

* ಶ್ರೀ. ಪ್ರಮಥನಾಥ ಬಿಸಿಯವರ ಕೃತಿಯೊಂದರ ಆಧಾರದಿಂದ. —ಲೇ.

ಶತ್ರುಗಳು ಅವುಗಳ ಮೇಲೆ ಹತ್ತಿ ಬಂದು ಊರನ್ನು ನಿರ್ನಾಮ ಮಾಡಿಬಿಟ್ಟರಂತೆ.

ಸೇನಾಪತಿ :— ಅಯ್ಯೋ, ಎಂಥ ದುರ್ಗತಿ !

ಸಚಿವ :— ಅಂಥದೇ ದುರ್ಗತಿ ನಮಗೂ ಒದಗೀತೋ ಏನೋ ಎಂದು ನನಗೆ ಭಯ.

ಸೇನಾಪತಿ :— ಅದು ನಡೆದದ್ದು ಇನ್ನೂರು ಹರದಾರಿ ದೂರದಲ್ಲಿ, ಅಲ್ಲವೇ ? ನಮಗೇಕೆ ಭಯ ?

ಸಚಿವ :— ಸೇನಾಪತಿಗಳೇ, ಆ ವಾಯುವೇಗದ ಅಶ್ವಗಳಿಗೆ ಇನ್ನೂರು ಹರದಾರಿಯೊಂದು ಅಸಾಧ್ಯವಾದ ದೂರವೇ ? ನಮ್ಮ ಸೈನ್ಯದ ಸ್ಥಿತಿಯಂತೂ ನೀವು ಹೇಳಿದ ಹಾಗೆ ನಗೆಗೇಡಾಗಿದೆ.

ಸೇನಾಪತಿ :— ಹೌದು, ಹೌದು. ನಾವು ತತ್‌ಕ್ಷಣ ಸಚಿವರೆಲ್ಲರಿಗೂ ಹೇಳಿಕಳಿಸಿ ಸಭೆ ಸೇರಿಸಿ, ನಮಗೆ ತಿಳಿದ ವಿಷಯವನ್ನೆಲ್ಲ ಅವರಿಗೂ ತಿಳಿಸಿಬಿಡೋಣ. ಹೇಗಾದರೂ ಮಾಡಿ ಅವರನ್ನು ಒಲಿಸಿ ಒಪ್ಪಿಸಿ, ನಗರರಕ್ಷಣೆಗೂ, ಕಟ್ಟೆಯನ್ನು ಸರಿಪಡಿಸುವುದಕ್ಕೂ ಸಾಕಷ್ಟು ದ್ರವ್ಯವನ್ನು ಪಡೆಯಲೇ ಬೇಕು. ಇಲ್ಲದಿದ್ದರೆ ನಮ್ಮ ಮೆಚ್ಚಿನ ನಗರ ನಮ್ಮ ಕಣ್ಣೆದುರಲ್ಲೇ ಮಣ್ಣುಪಾಲಾದೀತು ! ನಡೆಯಿರಿ.

× × × ×

[ಹಿನ್ನೆಲೆಯಲ್ಲಿ ನದಿ ಹರಿಯುವ ಶಬ್ದ. ತುಸು ಏರಿ, ಇಳಿಯುವುದು.]

× × × ×

(ಸಚಿವಮಂಡಲಿಯ ಸಭೆಯಲ್ಲಿ)

ಹಿರಿಯ ಸಚಿವ:— ಮಾನ್ಯ ಸಚಿವರೇ, ನಿಮ್ಮನ್ನೆಲ್ಲ ಅವಸರದಲ್ಲಿ ಇಲ್ಲಿಗೆ ಕರೆಸಿದ ಕಾರಣ ಇಷ್ಟೆ: ಇವೊತ್ತು ಬೆಳಗ್ಗೆ ನಾನೂ ಸೇನಾಪತಿಗಳೂ ನಗರದ ಕ್ಷೇಮದ ವಿಷಯದಲ್ಲಿ ವಿಚಾರವಿನಿಮಯ ಮಾಡುತ್ತಿದ್ದಾಗ, ಎರಡು ಮುಖ್ಯ ಸಂಗತಿಗಳು ನೆನಪಿಗೆ ಬಂದುವು. ಮೊದಲನೆಯದಾಗಿ, ನಗರವನ್ನು ಪ್ರವಾಹದ ಭೀತಿಯಿಂದ ರಕ್ಷಿಸುತ್ತಿರುವ ಕಟ್ಟೆ, ಮಳೆಗಾಲದ ಹಾವಳಿಯಿಂದ ಆಗಲೇ ಒಂದೆರಡು ಕಡೆ ಶಿಥಿಲವಾಗಿದೆ. ಹೀಗೇ ಬಿಟ್ಟರೆ, ಇನ್ನು ಒಂದು ವರ್ಷ ಅಥವಾ ಎರಡು ವರ್ಷದಲ್ಲಿ ನಗರಕ್ಕೆ ಅಪಾಯ ಖಂಡಿತ. ಆದ್ದರಿಂದ ಮಳೆಗಾಲ ಮುಗಿದ ಕೂಡಲೆ, ಅದನ್ನು ಪರೀಕ್ಷಿಸಿ, ಸರಿಪಡಿಸಬೇಕು. ಎರಡನೆಯದಾಗಿ, ಉತ್ತರ ದಿಕ್ಕಿನಲ್ಲಿ, ಸುಮಾರು ಇನ್ನೂರು ಹರದಾರಿ ದೂರದಲ್ಲಿ ಶತ್ರುಗಳು ದಾಳಿಮಾಡಿ ಒಂದು ನಗರವನ್ನು ಧೂಳಿಪಟ ಮಾಡಿದ್ದಾರೆ — ಎಂದು ಸುದ್ದಿ ಬಂದಿದೆ. ಯೋಧರನ್ನು ಬೆನ್ನಮೇಲೆ ಹೊತ್ತುಕೊಂಡು, ಮಿಂಚಿನ ವೇಗದಲ್ಲಿ ಓಡುವ ಅಶ್ವಗಳೆಂಬ ಒಂದು ಜಾತಿಯ ಪ್ರಾಣಿಗಳು ಶತ್ರುಗಳ ಬಳಿ ಇವೆಯಂತೆ. ಅದೊಂದೇ ನಗರವನ್ನು ಕೈವಶ ಮಾಡಿಕೊಂಡು ಶತ್ರುಗಳು ಸುಮ್ಮನೆ ಕೂರುವುದಿಲ್ಲ. ಇಂದಲ್ಲ, ನಾಳೆ ನಮ್ಮ ನಗರದ ಮೇಲೂ ದಂಡೆತ್ತಿ ಬರುತ್ತಾರೆ. ಆದ ಕಾರಣ, ನಮ್ಮ ನಗರ ಸುರಕ್ಷಿತವಾಗಿರಬೇಕಾದರೆ, ನಮ್ಮ ದಂಡನ್ನು ಸಜ್ಜುಗೊಳಿಸಬೇಕು. ಆಯುಧಗಳನ್ನು ಶೇಖರಿಸಬೇಕು ಮತ್ತು ಉತ್ತರದಿಕ್ಕಿನಲ್ಲಿ ಅಭೇದ್ಯವಾದ ಒಂದು ಕೋಟೆಯನ್ನು ಕಟ್ಟಿಸಬೇಕು, ಅಲ್ಲವೇ ಸೇನಾಪತಿಗಳೇ ?

ಸೇನಾಪತಿ :— ಮಾನ್ಯ ಸಚಿವರು ನಮ್ಮ ನಗರಕ್ಕೆ ಒದಗಬಹುದಾದ ದುಃಸ್ಥಿತಿಯನ್ನು ತಮಗೆಲ್ಲ ತಿಳಿಸಿದ್ದಾರೆ. ಸಚಿವರೆಲ್ಲರಲ್ಲಿ ನನ್ನ ಅರಿಕೆ ಇಷ್ಟೇ: ವಿಷಯವನ್ನು ದೀರ್ಘವಾಗಿ ಆಲೋಚನೆ ಮಾಡಿ, ಈ ಕಾರ್ಯಕ್ರಮಗಳಿಗೆ ಬೇಕಾಗುವ ದ್ರವ್ಯವನ್ನು ಒದಗಿಸಬೇಕು. ವಿಳಂಬವಾದರೆ ಕೇಡು ಖಂಡಿತ !

ದ್ವಿತೀಯ ಸಚಿವ :— ನಮ್ಮ ಸೇನಾಪತಿಗಳ ಮತ್ತು ಹಿರಿಯ ಸಚಿವರ ಮಾತನ್ನು ನಾವೆಲ್ಲ ಮನಸ್ಸು ಕೊಟ್ಟು ಕೇಳಿದ್ದೇವೆ. ಅವರ ಶಂಕೆಗಳು ಬುಡವಿಲ್ಲದ ಭಯದಿಂದ ಉತ್ಪನ್ನವಾಗಿವೆಯೆಂದು ನನ್ನ ಅಭಿಪ್ರಾಯ. ಎಂದೋ ಮುಂದೊಂದು ದಿನ ಒದಗಬಹುದಾದ ಅಪಾಯಕ್ಕೆ ಅಂಜಿ, ಇಂದಿನ ಜೀವನವನ್ನು ಕಷ್ಟಮಯ ಮಾಡಿಕೊಳ್ಳಬೇಕೇ ? ಅಶ್ವಗಳು ಇದ್ದ ಮಾತ್ರಕ್ಕೇ ಶತ್ರುಗಳು ಪ್ರಬಲರಾಗಿಬಿಡುತ್ತಾರೆಯೇ ? ನಾನೂ ಈ ಪ್ರಾಣಿಗಳ ವಿಷಯ ಕೇಳಿದ್ದೇನೆ. ಅವಕ್ಕೆ ಕೊಂಬಿಲ್ಲ, ಉಗುರಿಲ್ಲ; ಕಚ್ಚುವುದಿಲ್ಲ, ತಿನ್ನುವುದಿಲ್ಲ. ಈ ಅಲ್ಪ ವಿಷಯಕ್ಕೆ ಸೇನಾಪತಿಗಳು ಅಂಜಿಕೊಂಡಿರುವುದು ನಾಚಿಕೆಗೇಡು !

ತೃತೀಯ ಸಚಿವ :— ಹೌದು ! ಕಟ್ಟೆಯ ವಿಷಯವೂ ಅಷ್ಟೆ ! ನಮ್ಮ ಹಿರಿಯ ಸಚಿವರಿಗೆ ವಯಸ್ಸಾಗುತ್ತ ಬಂತು. ಎಲ್ಲ ವಿಷಯದಲ್ಲೂ ಅವರಿಗೆ ಅನುಮಾನ. ಈ ಕಟ್ಟೆಯನ್ನು ಕಟ್ಟಿದ ಕಾಲದ ನೆನಪು ನಮ್ಮ ತಾತಂದಿರಿಗೂ ಇಲ್ಲ. ಅನಾದಿ ಕಾಲದಿಂದ, ವರ್ಷವರ್ಷವೂ ಸಿಂಧುವಿನ ಪ್ರವಾಹವನ್ನು ಎದುರಿಸುವ ಕಟ್ಟೆ ಥಟ್ಟನೆ, ಈ ವರ್ಷ ಬಲಹೀನವಾಗಿ ಬಿಡುವುದೇ ? ಅದಕ್ಕೆ ಈಗ ವೃಥಾ ಹಣ ಸುರಿಯುವ ಆಗತ್ಯ ನನಗೇನೋ ಕಾಣುಬರುವುದಿಲ್ಲ.

[ಹೂಂ, ಹೂಂ, ಹೌದು. ನಿಜ ಮುಂತಾಗಿ ಇತರ ಸಚಿವರು ಒಬ್ಬರಿಗೊಬ್ಬರು ಹೇಳಿಕೊಳ್ಳುವರು].

ಈ ವಿಷಯದಲ್ಲಿ ಸಾಕಷ್ಟು ಚರ್ಚೆಯಾಗಿದೆಯೆಂದು ಕಾಣುತ್ತದೆ. ಮಾನ್ಯ ಸಚಿವರ ಅಮೂಲ್ಯ ಕಾಲವನ್ನು, ಅವಸರವಿಲ್ಲದ ಈ ಚರ್ಚೆಯಲ್ಲಿ ವ್ಯಯಮಾಡುವುದು ಉಚಿತವಲ್ಲ. ಸಭೆ ವಿಸರ್ಜನೆಯಾಗುವ ಮುನ್ನ ನನ್ನದೊಂದು ಅರಿಕೆ ಇದೆ: ನಗರದ ಸಾರ್ವಜನಿಕ ಸ್ನಾನಘಟ್ಟ ತೀರ ಹಳೆಯದಾಗಿದೆ. ಬಿಸಿನೀರು ಬೇಕಾದಾಗ ಸರಿಯಾಗಿ ಸಿಕ್ಕುತ್ತಿಲ್ಲ. ನೆಲದಲ್ಲಿ ಹಳ್ಳಗಳಾಗಿ, ಜನ ಮುಗ್ಗರಿಸಿ ಬೀಳುವ ಹಾಗಾಗಿ ಹೋಗಿದೆ. ಆದ್ದರಿಂದ ಸಾರ್ವಜನಿಕರ ಸೌಖ್ಯದ ದೃಷ್ಟಿಯಿಂದಲೂ, ನಗರದ ಕೀರ್ತಿಯ ದೃಷ್ಟಿಯಿಂದಲೂ, ಅತ್ಯಾಧುನಿಕ ವ್ಯವಸ್ಥೆಗಳನ್ನೊಳಗೊಂಡ, ಒಂದು ನೂತನ ರಮಣೀಯ ಸ್ನಾನಘಟ್ಟವನ್ನು ತತ್‌ಕ್ಷಣವೇ ನಿರ್ಮಿಸಬೇಕು. ಹಣವೇನೋ ಕೊಂಚ ಬೇಕಾಗುತ್ತೆ....

ದ್ವಿತೀಯ ಸಚಿವ :— ಆದರೆ ನಗರದ ಎಲ್ಲ ಪ್ರಜೆಗಳಿಗೂ ಅದರಿಂದ ಅನುಕೂಲವಾಗುವುದಲ್ಲ !

ತೃತೀಯ ಸಚಿವ :— ಅದೇ ನಾನು ಹೇಳುವುದು. ಸುಮ್ಮನೆ ಕೆಲಸಕ್ಕೆ ಬಾರದ ವಿಷಯಕ್ಕೆಲ್ಲ ಹಣ ಸುರಿಯುವ ಬದಲು, ನನ್ನ ಈ ಯೋಜನೆಗೆ ತಾವೆಲ್ಲ ಅನುಮತಿ ಕೊಟ್ಟರೆ ನಗರದ ಕೀರ್ತಿ ಮತ್ತು ತಮ್ಮೆಲ್ಲರ ಕೀರ್ತಿ ಶಾಶ್ವತವಾಗುತ್ತದೆ. ಸೇನಾಪತಿಗಳೂ ನಮ್ಮ ಮಾತನ್ನು ಒಪ್ಪುವರೆಂದು ನಂಬಿದ್ದೇನೆ.

ಸೇನಾಪತಿ :— ಸಚಿವರನೇಕರಿಗೆ ನನ್ನ ಮಾತು ಒಪ್ಪಿಗೆ ಯಾಗುತ್ತಿಲ್ಲವೆಂದು ನನಗೆ ತುಂಬಾ ವಿಷಾದವಾಗಿದೆ. ಈ ವಿಷಯ ವನ್ನು ನಿಮ್ಮೆಲ್ಲರ ಮುಂದೆ ಪ್ರಸ್ತಾಪ ಮಾಡುವ ಮೊದಲೇ ನಾನ ದೀರ್ಘವಾಗಿ ಆಲೋಚನೆ ಮಾಡಿದ್ದೇನೆ. ನಮ್ಮ ರಕ್ಷಣಾಬಲವನ್ನು ತತ್‌ಕ್ಷಣ ಇಮ್ಮಡಿಸದಿದ್ದರೆ ನಾಗರಿಕರಿಗೆ, ಸ್ನಾನ ಘಟ್ಟದಲ್ಲಿ ಮುಗ್ಗರಿ ಸುವುದಕ್ಕಿಂತ ನೂರುಪಾಲು ಘೋರವಾದ ಕೇಡು ಒದಗೀತು !

ತೃತೀಯ ಸಚಿವ :–ಸೇನಾಪತಿಗಳು ಅಮೋಘವಾದ ರಕ್ಷಣಾ- ಬಲವನ್ನು ರಚಿಸಿ, ತಮ್ಮ ಕೀರ್ತಿಯನ್ನು ಇಮ್ಮಡಿಗೊಳಿಸಿಕೊಳ್ಳಲು ಹಾತೊರೆಯುತ್ತಿರುವ ಹಾಗೆ ತೋರುತ್ತದೆ. ಸಚಿವರೇ, ಸಂಜೆ- ಯಾಗುತ್ತ ಬಂತು. ರಾತ್ರಿ ನಡೆಯಲಿರುವ ವೃಕ್ಷಪೂಜೆ, ನರಬಲಿ- ಗಳನ್ನು ನೋಡಲು ಎಲ್ಲರೂ ಕಾತರರಾಗಿದ್ದೀರಿ. ನಾನು ಹೇಳಿದ ಸ್ನಾನಘಟ್ಟದ ವಿಷಯ ಎಲ್ಲರಿಗೂ ಒಪ್ಪಿಗೆ ತಾನೆ ?....

[ಹೂಂ....ಆಗಲಿ....ಎಂದು ಅನೇಕರು ಹೇಳುವರು.]

ಸೇನಾಪತಿಗಳು ಮತ್ತು ಹಿರಿಯ ಸಚಿವರನ್ನುಳಿದು, ಇತರ ಎಲ್ಲ ಸಚಿವರೂ ಒಪ್ಪಿರುವುದು ಸಂತೋಷದ ಸಂಗತಿ. ನಿರ್ಮಾಣ- ಕಾರ್ಯವನ್ನು ವಿಳಂಬವಿಲ್ಲದೆ ಆರಂಭಿಸುತ್ತೇನೆ. ಇನ್ನು ಕೆಲವೇ ತಿಂಗಳಲ್ಲಿ ನೀವೆಲ್ಲ ಸುಖವಾಗಿ, ಆನಂದವಾಗಿ ಜಲಕ್ರೀಡೆಯಾಡ ಬಹುದು. ಇನ್ನು ಎಲ್ಲರೂ ಹೊರಡೋಣ, ಏಳಿ.

× × × ×

[ಹಿನ್ನೆಲೆಯಲ್ಲಿ ನದಿ ಹರಿಯುವ ಶಬ್ದ. ಪರಿ, ಇಳಿಯುವುದು.]

ನಿರೂಪಕ :— ಮೂರು ವರ್ಷಗಳುರುಳಿದುವು....ಪ್ರವಾಹದ ಹಾವಳಿ, ಶತ್ರುಗಳ ಭೀತಿ ಎರಡೂ ದೂರದಲ್ಲೇ ಉಳಿದುವು ... ಅನಂತರ,....ನಾಲ್ಕನೆಯ ವರ್ಷದ ಮಳೆಗಾಲದಲ್ಲಿ....

[ಹಿನ್ನೆಲೆಯಲ್ಲಿ ಭೋರ್ಗರೆಯುವ ನದಿಯ ಪ್ರವಾಹದ ಶಬ್ದ]

ಹಿರಿಯ ಸಚಿವ :—ಸೇನಾಪತಿಗಳೇ, ಪ್ರವಾಹದ ರಭಸವನ್ನು ನೋಡಿದಿರಾ ? ಕಟ್ಟೆಯ ಉತ್ತರದಿಕ್ಕಿನ ಭಾಗ ಸ್ವಲ್ಪ ಬಿದ್ದು ಹೋಗಿದೆ. ಯಾವ ಗಳಿಗೆಯಲ್ಲಿ ಏನಾಗುವುದೋ ಹೇಳುವಂತಿಲ್ಲ. ನಾನು ಬೆಳಗ್ಗೆ ಸಚಿವರುಗಳ ಬಳಿಗೆ ಸೇವಕನೊಬ್ಬನನ್ನು ಕಳಿಸಿದ್ದೆ— ವಿಷಯ ತಿಳಿಸಿ, ಎಲ್ಲರನ್ನೂ ಬರಹೇಳುವುದಕ್ಕೆ. ಎಲ್ಲರೂ ನೂತನ ಸ್ನಾನಘಟ್ಟದಲ್ಲಿ ಹಾಯಾಗಿ ಜಲಕ್ರೀಡೆಯಾಡುತ್ತ ಇದ್ದರಂತೆ. ನಾನು ಹೇಳಿಕಳಿಸಿದ್ದ ವಿಷಯವನ್ನು ಕೇಳಿ, ಒಬ್ಬ, " ಓಹೋ, ಕಟ್ಟೆ ಒಡೆದು ಹೋಗುವುದೇ ? ಸಂತೋಷ ! ನಮ್ಮ ಸ್ನಾನಘಟ್ಟಕ್ಕೆ ಸ್ವಲ್ಪ ನೀರು ಬೇಕಾಗಿತ್ತು ! " ಅಂದನಂತೆ. ಇನ್ನೊಬ್ಬ " ಹಾಗೇನು ? ನದಿಯ ನೀರು ನುಗ್ಗಿದರೆ, ಅದರ ಜೊತೆಯಲ್ಲಿ ಮೀನುಗಳೂ ಬರುತ್ತವೆ. ಒಳ್ಳೆ- ಯದೇ ಆಯಿತು. " ಅಂದನಂತೆ. ನನ್ನನ್ನು ಸಚಿವಸ್ಥಾನದಿಂದ ತೆಗೆದು- ಹಾಕಿಬಿಟ್ಟರೆ ಒಳ್ಳೆಯದೆಂದು ಮತ್ತೊಬ್ಬ ಸೂಚಿಸಿದನಂತೆ !

ಸೇನಾಪತಿ :— ನಾನು ಎಲ್ಲವನ್ನೂ ಬಲ್ಲೆ ಸಚಿವರೇ ! ಯಾರೋ ಬಂದು ತಿಳಿಸಿದರು. ಇನ್ನೊಂದು ಭಯಂಕರ ಸುದ್ದಿಯನ್ನು ತಿಳಿಸಿ ನಿಮ್ಮನ್ನು ಹೆಚ್ಚು ದುಃಖಕ್ಕೀಡು ಮಾಡಬೇಕಾಗಿ ಬಂದಿದೆ. ಇಂದು ಮುಂಜಾನೆ ನನ್ನ ದೂತನೊಬ್ಬನಿಂದ ಸುದ್ದಿ ಬಂತು. ಕೇವಲ ನಲವತ್ತು ಹರದಾರಿ ದೂರದಲ್ಲಿ ಭಯಂಕರ ಯುದ್ಧಮಾಡಿ, ಶತ್ರುಗಳು ಮತ್ತೊಂದು ಊರನ್ನು ವಶಪಡಿಸಿಕೊಂಡರಂತೆ. ಅಲ್ಲಿಂದ ಇಲ್ಲಿಗೆ ಬರುವುದು ಎಷ್ಟು ದಿನ ? ಮಧ್ಯೆ ಬೇರೆ ಯಾವ ಊರೂ ಇಲ್ಲ. ಲೋಕವಿಖ್ಯಾತವಾದ ನಮ್ಮ ನಗರದ ಮೇಲೆ ಶತ್ರುಗಳಿಗೆ ಮೊದಲಿ- ನಿಂದಲೂ ಕಣ್ಣಿದ್ದೇ ಇದೆ. ಅದಕ್ಕಾಗಿಯೇ ಅವರು ದಂಡೆತ್ತಿ ಬರು- ತ್ತಿರುವುದು. ದಾರಿಯಲ್ಲಿ ಸಿಕ್ಕಿದ ಊರುಗಳನ್ನೆಲ್ಲ ನೆಲಸಮಮಾಡಿ ಹಾಕಿದ್ದಾರೆ. ಆದರೆ, ಅವರ ಅಂತಿಮ ಗುರಿ, ನಮ್ಮ ನಗರದ ಮೇಲೆ ದಿಗ್ವಿಜಯ ಸ್ಥಾಪಿಸುವುದು. ನಮ್ಮ ಮೂರ್ಖ ಸಚಿವರ ತಿಳಿಗೇಡಿತನದ ದೆಸೆಯಿಂದ, ಶತ್ರುಗಳಿಗೆ ವಿಜಯ ಸಿದ್ಧವೆಂದು ನನಗೆ ಭಯವಾಗ- ತೊಡಗಿದೆ.

ಸಚಿವ :—ಅಂತ್ಯಕಾಲದಲ್ಲೂ ನಮ್ಮವರಿಗೆ ತಿಳಿವಳಿಕೆ ಮೂಡ- ಲಿಲ್ಲವಲ್ಲ ! ಏನಾದರೂ ಮಾಡಿ, ಕಾಡಿ, ಬೇಡಿ, ಅವರನ್ನು ಒಪ್ಪಿಸಿ ಸೈನ್ಯವನ್ನು ಸಜ್ಜುಗೊಳಿಸಲೇ ಬೇಕು. ನಮ್ಮ ನಚ್ಚಿನ ನಗರ, ನಮ್ಮ ಹೆಮ್ಮೆಯ ನಾಗರಿಕತೆಗಳಿಗೆ ಪರಕೀಯರ ಸೋಂಕು ತಗಲುವುದನ್ನು ನಾನು ನೋಡಿ ಬದುಕಿರಲಾರೆ, ಸೇನಾಪತಿಗಳೇ !

ಸೇನಾಪತಿ :— ಎಲ್ಲಗೂ ನಿಮ್ಮಂತೆ ಇರಬಾರದಾಗಿತ್ತೇ, ಸಚಿವರೇ ! ಸುದ್ದಿ ಬಂದ ಕೂಡಲೇ ನಾನೇ ಅವರ ಬಳಿಗೆ ಓಡಿ ಹೋದೆ. ಅವರಿರುವ ಜಾಗ ಗೊತ್ತೇ ಇದೆಯಲ್ಲ—ಸ್ನಾನಘಟ್ಟ ! ಅಲ್ಲಿಗೇ ಹೋಗಿ, ನನಗೆ ತಿಳಿದ ಬಗೆಯಲ್ಲೆಲ್ಲ ಹೇಳಿದೆ ಬೆದರಿಸಿದರೂ ಇಲ್ಲ; ಬೇಡಿದರೂ ಇಲ್ಲ ಶುದ್ಧ ಮೂರ್ಖರು ! ಕೆಲವರು ಕೊಳದಲ್ಲಿ ಈಜುತ್ತಿದ್ದರು. ಕೆಲವರು ಚದುರಂಗದಾಟ ಆಡುತ್ತಿದ್ದರು. ನನ್ನ ಮಾತು ಕೇಳಿ, ಒಬ್ಬ: " ನಾವು ಮಕ್ಕಳು ಅಂತ ತಿಳಿದುಕೊಂಡು, ಗಳಿಗೆ-ಗಳಿಗೆಗೂ ಹೆದರಿಸಲು ಬರುತ್ತೀರಿ, ಸೇನಾಪತಿಗಳೇ; ಆದರೆ ನಾವೇನು ಅಂಜುವ ಮಕ್ಕಳಲ್ಲ " ಎಂದು ಹೇಳಿದ. " ಚದುರಂಗದಾಟ ಕೆಡಿಸಬೇಡಿ " ಎಂದು ಇನ್ನೊಬ್ಬ ಹೇಳಿದ ನಮ್ಮ ಮಾತು ಕೇವಲ ವೃದ್ಧರ ಗೊಡ್ಡುಮಾತು—ಎಂದು ಹಾಸ್ಯಾಸ್ಪದವಾಗಿ ಹೋಗಿದೆ. ಪರಿಸ್ಥಿತಿಯ ವಿಷಮತೆ ಯಾರಿಗೂ ತಿಳಿಯುವುದಿಲ್ಲ ಇಂಥ ಜನರ ಮಧ್ಯೆ ಸಿಕ್ಕಿಕೊಂಡು ಏನು ಮಾಡುವುದಕ್ಕೂ ತೋಚದ ಹಾಗೆ ಆಗಿದೆ. ಕಾಲಕಾಲಕ್ಕೆ ಸರಿಯಾಗಿ ಭತ್ಯವಿಲ್ಲದೆ, ಅನೇಕ ಯೋಧರು ಸೈನ್ಯವನ್ನು ತೊರೆದಿದ್ದಾರೆ ಇರುವ ಕೆಲವರಿಗೂ ಅಲ್ಪಭತ್ಯದಿಂದ ಉತ್ಸಾಹ ಕಡಿಮೆಯಾಗಿದೆ. ಆಯುಧಗಳೂ ಸರಿಯಾಗಿಲ್ಲ. ನನ್ನ ಜೀರ್ಣ ದೇಹದಲ್ಲಿ ಹನಿರಕ್ತವಿರುವ ವರೆಗೂ ನಾನು ಹೋರಾಡುತ್ತೇನೆ. ನಗ- ರದ ಕ್ಷೇಮ ನಮ್ಮ ಕೈಲಿಲ್ಲವೆಂದು ತೋರುತ್ತದೆ.

ಸ್ವಾತಂತ್ರ್ಯದಿನೋತ್ಸವದ ನಿಮಿತ್ತ

ಒಲವಿನ ಕಾಣಿಕೆ!

ನಮ್ಮ ಕೋಟ್ಯವಧಿ ಗ್ರಾಹಕರಿಗೆ, ಸಹಸ್ರಾವಧಿ ಠೋಕ-ವ್ಯಾಪಾರಿಗಳಿಗೆ ಮತ್ತು ಕಿರುಕೋಳ ವ್ಯಾಪಾರಿಗಳಿಗೆ

ESTRELA

REGD TRADE MARK

ಎಸ್ಟ್ರೇಲಾ ನಿರ್ಮಾತೃಗಳ

ಬೆಳೆಬಾಳುವ ಟಾರ್ಚುಗಳು, ಸೆಲ್ಲುಗಳು, ಬ್ಯಾಟರಿಗಳು!

ಸಚಿವ :— ಬೇರೆ ದಾರಿಯೇ ಇಲ್ಲವಲ್ಲ, ಸೇನಾಪತಿಗಳೇ!

[ಹಿನ್ನೆಲೆಯಲ್ಲಿ ಪ್ರವಾಹಶಬ್ದ ಅಬ್ಬರಿಸಿ, ಇಳಿಯುವುದು.]

ಸೇನಾಪತಿ :— ಸಚಿವರೆ, ನನಗಾದ ಅಪಮಾನವನ್ನು ಲೆಕ್ಕಿಸದೆ, ಕೊನೆಯ ಬಾರಿ ಎಲ್ಲರನ್ನೂ ಬೇಡಿ ನೋಡಿದೆ. ಅಂಥ ವಿಷಮ ಸನ್ನಿವೇಶ ಬಂದರೆ ನಗರವನ್ನು ರಕ್ಷಿಸುವ ಮಾರ್ಗ ತಮಗೆ ತಿಳಿದಿದೆ ಎಂದೂ ನಾನು ನಿಶ್ಚಿಂತನಾಗಿರಬಹುದೆಂದೂ ಉತ್ತರ ಬಂತು. ನಗರದ ದುರ್ವಿಧಿಯನ್ನು ನೆನೆದರೆ ಮೈ ನಡುಗುತ್ತದೆ.

ಸಚಿವ :— ಸೇನಾಪತಿಗಳೇ, ಅಲ್ಲಿ ನೋಡಿ. ದೂರದಲ್ಲಿ ಗಗನವನ್ನು ಮುಟ್ಟುತ್ತಿರುವ ಧೂಳು ಕಾಣಿಸುತ್ತಿದೆಯಲ್ಲವೇ? ಈ ಕಡೆಗೇ ಮುನ್ನುಗ್ಗುತ್ತಿರುವ ಹಾಗಿದೆ. ಶತ್ರುಸೈನ್ಯದ ತಂಡವೇ ಇರಬೇಕು.

ಸೇನಾಪತಿ :— ಹೌದು. ಧೂಳಿನ ಮರೆಯಲ್ಲಿ ಸೈನ್ಯಬಲ ಕಾಣುವಂತಿಲ್ಲ.... ಈಗ ನೋಡಿ. ಇನ್ನೂ ಹತ್ತಿರ ಬಂದಿದ್ದಾರೆ. ನಗರದ ಹೊರವಲಯವನ್ನು ಸಮೀಪಿಸಿರುವ ಹಾಗಿದೆ. ನೋಡಿ, ಧೂಳು ಅಡಗುತ್ತಿದೆ. ಸೈನ್ಯ ಬೀಡುಬಿಟ್ಟಿತು. ನನ್ನ ಅಭಿಪ್ರಾಯದಲ್ಲಿ ಸುಮಾರು ಐನೂರು ಜನ ಇರುವಂತಿದೆ.

ಸಚಿವ :— ಸೇನಾಪತಿಗಳೇ, ಇದೇನು? ನಮ್ಮ ನಾಗರಿಕರು ಕೆಲವರು ಅವರ ಬಳಿಗೆ ಹೊರಬರುವಂತಿದೆ. ಬಂಡಿಗಳಲ್ಲಿ ಏನೋ ಹೇರಿಕೊಂಡು ಹೋಗುತ್ತಿದ್ದಾರೆ.

ಸೇನಾಪತಿ :— ಓಹೋ, ತಿಳಿಯಿತು! ರಾಶಿ ರಾಶಿ ಹೊನ್ನು, ದವಸ ಧಾನ್ಯ. ಶತ್ರುಗಳಿಗೆ ಬಳುವಳಿ ಕೊಟ್ಟು ಹಿಂತಿರುಗಿಸುವ ಹಂಚಿಕೆ!

ಸಚಿವ :— ನಿಮ್ಮ ಮಾತು ದಿಟ. ಶತ್ರುಗಳು ನಮ್ಮವರು ಕೊಟ್ಟ ಸರಕನ್ನೆಲ್ಲ ಹೇರಿಕೊಂಡು ಹಿಂತಿರುಗಿ ಹೊರಟಿರುವ ಹಾಗಿದೆ. ಒಳ್ಳೆಯದೇ ಆಯಿತಲ್ಲ ಸೇನಾಪತಿಗಳೇ!

ಸೇನಾಪತಿ :— ಒಳ್ಳೆಯದಲ್ಲ! ದುಃಖಾಂ...ಟಕಕ್ಕೆ ಇದು ನಾಂದಿ, ಅಷ್ಟೆ! ಶತ್ರುಗಳು ಈಗ ನೆಪಮಾತ್ರಕ್ಕೆ ...ಮ್ಮೆಟ್ಟಿದ್ದಾರೆ. ಇಷ್ಟು ಸಮೃದ್ಧಿಯಾದ ನಗರವನ್ನು ಸುಮ್ಮನೆ ಬಿಡುವಷ್ಟು ಮೂರ್ಖರಲ್ಲ, ಅವರು. ಕೆಲವೆ ದಿನದಲ್ಲಿ ಮತ್ತೆ ಹೆಚ್ಚು ದಂಡಿನೊಡನೆ ಬರುತ್ತಾರೆ, ನೋಡುತ್ತಿರಿ.

[ಹಿನ್ನೆಲೆಯಲ್ಲಿ ಪ್ರವಾಹದ ಏರಿಳಿಯುಶಬ್ದ ಮೊಳಗಿ, ಅಳಿಯುವುದು.]

ಸಚಿವ :— ಸೇನಾಪತಿಗಳೇ, ಬೆಳಗಿನ ಈ ಚೆಲುವಿನಲ್ಲಿ ಶಾಂತಿಯಿಂದ ಶೋಭಿಸುತ್ತಿರುವ ನಗರದ ಸಹಸ್ರಾರು ಸುಂದರಗೃಹಗಳನ್ನು ನೋಡಿ! ಇಂಥ ಸೊಬಗಿನ ನಾಡಿಗೆ ಏನು ಗಂಡಾಂತರ ಒದಗಿದೆ! ಕಳೆದ ರಾತ್ರಿಯೊಂದರಲ್ಲೇ ಪ್ರವಾಹ ಇಪ್ಪತ್ತು ಅಡಿ ಏರಿದೆ. ಕಟ್ಟೆಯನ್ನು ಸರಿಪಡಿಸಲು ಜನ ದುಡಿಯುತ್ತಲೇ ಇದ್ದಾರೆ. ಆದರೂ ಧೈರ್ಯವುಂಟಾಗುವಷ್ಟು ಉಪಯೋಗವಾಗಿಲ್ಲ.

ಸೇನಾಪತಿ :— ಅಲ್ಲಿ ನೋಡಿ. ಹಿಂಡುಹಿಂಡಾಗಿ ಬರುತ್ತಿವೆ, ಶತ್ರುಗಳ ದಂಡು. ನಾನು ಬಗೆದಂತೆಯೇ ಆಯಿತು. ಸಹಸ್ರಾರು ಮಂದಿ ಇದ್ದಾರೆ.

ಸಚಿವ :— ಅಗೋ, ನಮ್ಮವರು ಹಿಂದಿನಂತೆಯೇ ಹೊನ್ನಿನ ರಾಶಿಯನ್ನು ಹೊತ್ತುಕೊಂಡು ಹೋಗಿ ಕೊಡುತ್ತಿದ್ದಾರೆ. ಆದರೂ ಶತ್ರುಗಳು ಹಿಂತಿರುಗುತ್ತಿಲ್ಲ—ಮುಂದುವರೆಯುತ್ತಲೇ ಇದ್ದಾರೆ. ಸೇನಾಪತಿಗಳೇ, ನೀವು ಹೊರಡಿ. ಕೊನೆಯ ಪ್ರಯತ್ನಮಾಡಿಬಿಡಿ.

ಸೇನಾಪತಿ :— ಹೋಗಿ ಬರುತ್ತೇನೆ, ಸಚಿವರೇ. ನನ್ನ ಕರ್ತವ್ಯವನ್ನು ನಿರ್ವಹಿಸಿ ಬಿಡುತ್ತೇನೆ.

ಸಚಿವ :— ಒಳ್ಳೆಯದು. ಸೇನಾಪತಿಗಳೇ, ಇಷ್ಟು ಮಾತ್ರ ನೆನಪಿರಲಿ; ಏನೇ ಆದರೂ ನಗರವು ಶತ್ರುಗಳ ಕೈವಶವಾಗುವುದಿಲ್ಲ!!

[ಮೂರು-ನಾಲ್ಕು ನಿಮಿಷಕಾಲ, ಖುರಪುಟಗಳ ಸದ್ದು ಕಹಳೆಯ ಕೂಗು, ಕಾಳಗದ ಕೋಲಾಹಲದ ಶಬ್ದ....ಅನಂತರ, ಪ್ರವಾಹದ ಮೊರೆತದ ಮಂಜುಳಘೋಷ...]

ಸಚಿವ :— ಸೇನಾಪತಿಗಳೂ ತಮ್ಮ ಕರ್ತವ್ಯವನ್ನು ಮುಗಿಸಿ ಮಡಿದರು. ಇನ್ನು ನನ್ನ ಭಾಗ ಉಳಿದಿದೆ.. "ದೇವಿ, ಸಿಂಧೂ ಮಾತೆ! ನಾನು, ಜೀವಮಾನವೆಲ್ಲ ನಗರಕ್ಕೆ ನೀನು ಶತ್ರುವೆಂದು ತಿಳಿದು, ನಿನ್ನೆದುರು ನಿಂತು ಸೆಣಸಿದೆ. ನಿನ್ನ ಆಲಿಂಗನದಿಂದ ನಗರವನ್ನು ರಕ್ಷಿಸಲು ಯತ್ನಿಸುತ್ತಿದ್ದೆ. ಆದರೆ ಈಗ, ನೀನೇ ನಮ್ಮ ಏಕೈಕ ರಕ್ಷಕಳು!....ಮಾತೆ! ನಗರವನ್ನು ನಿನ್ನ ಸಹಸ್ರ ಜಿಹ್ವೆಗಳಿಂದ ಭಕ್ಷಿಸಿ, ರಕ್ಷಿಸು!....ಶತ್ರುವಿಗೆ ನಗರ ಕೈವಶವಾಗದಂತೆ ಮಾಡಿ ನಮ್ಮ ಅಭಿಮಾನವನ್ನು ಕಾಪಾಡು!....ನಮ್ಮ ನಗರದ ಮಾನಾಪಮಾನ ನಿನ್ನ ಕೈಯಲ್ಲಿದೆ....ನೀನು ನಗರವನ್ನು ಜಯಿಸಿದರೆ, ನಾವು ಶತ್ರುವನ್ನು ಜಯಿಸಿದಂತೆ! ದಯಮಾಡು, ತಾಯಿ!!....

[ಪ್ರವಾಹ ಭೋರ್ಗರೆದು ನಗರವನ್ನು ತೋಳ್ತೆಕ್ಕೆಯಲ್ಲಿ ಹಿಡಿಯುವ ಶಬ್ದ.]

ಚರಮಗೀತೆ

ಶ್ರೀ. ಅರವಿಂದ ನಾಡಕರ್ಣಿ ಮುಂಬೈ

卐

“ಓಹೋ, ಅವ ಔಟಾದ ಕ್ಲೀನ್‌ಬೋಲ್ಡಾದ ಪಾಪ”
ಎಂದ ನನ್ನ ಗೆಳೆಯ ವೃತ್ತಪತ್ರಮಸಾಲೆಯೊಡನೆ ಕಲಸಿ.
ಔಟಾದನೇ? ನಿಜಕ್ಕೂ? ಕೊನೆಗೊಮ್ಮೆ……?
ಹತ್ತಾರು ದಿಶೆಗಳಿಂದ ಪ್ರಶ್ನೆ ಝೇಂಕರಿಸಿತು ಕೊಂಡಿಚುಚ್ಚಿ.

ಓ,
ಮನೆ ತುಂಬಿದ ಆಫೀಸು ತುಂಬಿದ ಬಸ್ಸು ಹೋಟೇಲು
ಸಿನೇಮಾಮಂದಿರ ತುಂಬಿದ ಮಹದಾಕಾರ,
ಪಂಚಮಹಾಭೂತಗಳಾಮ್ಲದಲ್ಲಿ ವಿಲೀನವಾಯ್ತು.
ಲಕ್ಷ ಹರದಾರಿಗಳಲಿ ಒಂದು ಇಂಚು ರಿಕಾಮಿ.
ಸಹ್ಯಾದ್ರಿಯಲೊಂದು ತೂತು ಕೊರೆಯಿತು ಕಾಲ.
ಅಂತೂ ಕೊನೆಗೊಮ್ಮೆ,
ಕಣದೋಣಿ ಹರಿವ ಕಾಲುವೆ ಹಿಮಮಯ
ಧೂಮ್ರಕೀಡಾಸಕ್ತ ಜೀವ, ಹೊಕ್ಕಿತಿಂದು ಧೂಮ್ರವಳಯ….
ಧೂಮ್ರಾಕಾರವಾಗಿ.

ಇನ್ನೇನು?
ತೆಗೆ ಆ ಮಂಚ ಹಾಸಿಗೆ ಬಟ್ಟೆ-ಮೂಟೆ
ನೆಗೆ ಆ ಚಿತ್ರ ಚಿತ್ತಭಿತ್ತಿಯಲಿ ಹಚ್ಚಿಡು.
ನಾಲ್ದೆಸೆ ಹಬ್ಬಿದ ಈ ಪ್ರಚಂಡ ಗೋಡೆಯ ಮೇಲೆ
ಕಾಣಬೇಕಲ್ಲ!

ಇಂದು, ಜೀವದೆಳೆಯೊಂದು,
ಕಾಲಚೆಟ್ಟನ್ನೇರಿ ಹಾಕಿತು ವ್ಯೋಮದುಡ್ಡಾಣ.
ಎಲ್ಲೋ ಎಲ್ಲೋ ಕತ್ತಲಲ್ಲಿ
ಎಳೆಎಳೆಗಳ ಮಹಾಸಾಗರದಲ್ಲಿ
ಹಗಲಿರುಳುಗಳ ಭೂ-ವ್ಯೋಮಗಳ
ತೊಗಲ ಪಂಜರಗಳ ಮಹಾಚಕ್ರದಲ್ಲಿ
ದಿವ್ಯರೇಖೆ ಮೂಡದ ಅಂತರಿಕ್ಷದಲ್ಲಿ
ಅಜ್ಞಾನಸುರಂಗ ಮುಗಿಯದ ಯಾತ್ರಾಲಕ್ಷದಲ್ಲಿ.
ರಕ್ತಮಾಂಸದಮೃತಚೇಪಿ ಬಲಿತ ಅತಿರಕ್ಕಸರ
ಕುಲೋಪಕುಲ ಕುಣಿವಲ್ಲಿ—

ರಕ್ತ-ಮಾಂಸಪಕ್ವಾನ್ನ ಉಣುವಲ್ಲಿ.
ಎಲ್ಲೋ ಎಲ್ಲೋ ದೂರ ಬಹುದೂರ
ಥರಥರೋ ಥರಥರೋ ಎಂದಿತು ಚೆಟ್ಟು.
ಕಣ್ಮುಚ್ಚಿ ತೆರೆವುದರೊಳಗೆ ಮಾಯ!

“‘ಕುಣಿಯೋಣು ಬಾರಾ ಕುಣಿಯೋಣು ಬಾ’
ಏಕೆ ಚಿನ್ನಾ ಅಳುತ್ತೀ?
‘ಅಳು ನುಂಗಿ ನಗು ಒಮ್ಮೆ ನಾನೂನು ನಕ್ಕೇನ’
ಓ ತಮ್ಮ ಹಿಡಿ ಏನಾದರೂ, ಬಿಡಿ ಏನಾದರೂ
ಒಡೆ ಏನಾದರೂ, ಮಾಡುತಿರು ಏನಾದರೂ ತಮ್ಮ!
‘ಇದು ಅತ್ತರು ಇದು ನೆತ್ತರು’”
ಇತ್ಯಾದಿ ಸ್ವರಗಳನ್ನು ಪಾತಾಳಬಾಟ್ಲಿಯಲ್ಲಿ ತುರುಕಿ
ಬೂಚು ಜಡಿದು ಹಾರಿತು ಚೆಟ್ಟು:
ಥರಥರೋ….ಥರಥರೋ…. !

ಓಹೋ ಅವನೋ?
ನನಗೂ ಅವಗೂ ತುಂಬಾ ಪ್ರೀತಿಯಿತ್ತು, ಸ್ವಾಮಿ;
ಇನ್ನೂ ಕಣ್ಣು ಮಿನುಗುತಿವೆ, ಧ್ವನಿ ಕೇಳುತಿದೆ,
ಇಲ್ಲೇ ಮಾತಾಡುವಂತಿದೆ.
ಓ ಪಾಪ! ಕುಟುಂಬ….?
ಅವನಿಳಿಸಿದ ವಿಮೆ ಉಂಟಲ್ಲವೇ? ಅಷ್ಟಾದರೂ….ಪಾಪ….

೨

ಹೌದು, ಔಟಾದನೆಂದರೆ ಏನಾಯ್ತು?
ಇನ್ನು ತೀರಾ ಹೊಟ್ಟೆ-ಬಟ್ಟೆ ಪಂಜರಮುದಿಗಿಳಿಯ ಚಟಪಟ.
ಸುಸ್ತಾಗಿ [illegible] ಓಡಿದವನಿನ್ನು ಹಿಮಮಂಚದ ಮೇಲೆ
ವಡವಾಗ್ನಿಲಂಪಟು.
ಕ್ರಿಯಾವ್ಯಸನವಿಲ್ಲದ ಸಾಕಷ್ಟು ಕತ್ತಲವಸನವುಂಟಿನ್ನು.
ದಿಶೆಗಂಬಗಳ ಬಂಗಲೆಯಿರುವಾಗ ಒಗೆ ಕೋಣೆಬಿಡಾರ-
ಗಂಟನ್ನು
ನೌಕರಿಯ ಸೀತಾನ್ವೇಷಣಕ್ಕಾಗಿ ಬಾಲವೆತ್ತು ಸಮುದ್ರ
ಹಾರಬೇಕಾಗಿಲ್ಲ.
ಕ್ರೈಗಡ ಯಂತ್ರದಲ್ಲಿ ಮೇಣಪ್ರಸಂಗ ತಪ್ಪಿತೆಂದೇ ತಿಳಿ.
ಏನಾಯಿತು? ಏನಾಯಿತು ಮಹಾ….?
“ನಿಲ್ಲಲಿ ಚಿರ….ಚಿರ….ಚಿರ ಶಾಂತಿಃಶಾಂತಿ.”
ನನ್ನ ಗೆಳೆಯ ಸಾಕ್ಷಾತ್ ಭೀಷ್ಮಾಚಾರಿ,
ಮೇಲಾಗಿ ಅರ್ಥಶಾಸ್ತ್ರಪಂಡಿತ.
ಒಣಮೋರೆಯಲೆಂದ ವಿಷಯ ತೂಗುತ್ತ.
‘ಒಂದು ಉಣಾ ಆದರೆ ಅಧಿಕವೆಷ್ಟೋ ಗೊತ್ತೇ?
ಈ ಕಲ್ಲುಮರಗಳೆಲ್ಲಾ ಬಿದ್ದರೇನೇ ಭೂಮಿಗೆ ಹಿತ
ಇಲ್ಲದಿದ್ದರೆ ಪರಿಸ್ಥಿತಿ ವಿಪರೀತ!’

ಕೋಟಿ ಜನಾ ಒಂದು
ಸಾಗರಬಿಂದು—
ಲೋಕಶೆಟ್ಟಿಯ ತಕ್ಕಡಿ ಅಲುಗುವುದಿಲ್ಲ.
ಬಿಂದು ಬಿಂದು ಮುಳುಗುತಿವೆ ಬಿಂದು ಬಿಂದು ಏಳುತಿವೆ
ತಕ್ಕಡಿ ಅಲುಗುವುದೇ ಇಲ್ಲ.
ಎಲ್ಲ ಮಾಲಿಗೂ ತೂಕ ಇರುವುದಿಲ್ಲ.
ತೂಕದ ಮಾಲೇ ಬೆರಳಲೆಣಿಸಬಹುದಲ್ಲ!
ತೂಕವೋ ತೂಕಿಲ್ಲವೋ ರಾಮನಿಗೇನು? ಭೀಮನಿಗೇನು?
ರಾಮನೂ ಎದ್ದ ಭೀಮನೂ ಎದ್ದ; ಒಡಲಚೀಲದಲಿ
ಅನ್ನಪಿಂಡ ತುರುಕಿ
ನಡೆದರು ಆಫೀಸಿಗೆ ಒಬ್ಬೊಬ್ಬರಾಗಿ.

೩

‘ದಿನಮಪಿ ರಜನೀ ಸಾಯಂಪ್ರಾತಃ’
ಶೂನ್ಯರಾತ್ರಿಯ ಮೌನಕದಡಿ ಕೋಳಿ ಕೂಗುತಿದೆ
ಕೋ ಕೋ ಕೋ ಕೋ!
ಸುಪ್ತನಗರ ನಡುಗಿಸಿ ಒದರುತಿದೆ ಮದ್ದಾನೆಕಂಠದ
ರೈಲಿಂಜಿನ್ನು.
ಪುನಶ್ಚ ಸುರು ಮಾಡಿತು ಕಾಕಮೇಳ ನಿತ್ಯಗಾನ;
“ದೇವರ ಮಕ್ಕಳೆ ಎಲ್ಲರು ಏಳಿ
ಬೆಳಗೆ ಬೆಳಗಾಯಿತು ಬೇಗೇಳಿ”
ಕೆಟ್ಟಕನಸಿನ ಬೇವನ್ನು ತೊಳೆದು
ಕಂಗೊಳಿಸಿತು ವಜ್ರಸಮ ಲಕಲಕ ಬೆಳಕು.
ಏನಯ್ಯಾ ಅದರ ಮಾಟ!
ಸೂರ್ಯ-ಚಂದ್ರ ನಗುವರು ಮೇಲೆ.
ಸುತ್ತ ಕುಣಿವುವು ಗ್ರಹಬಾಲೆ.
ವೃಕ್ಷ-ಪಕ್ಷಿ-ಮೃಗ-ಜಂತು-ಕೀಟ-ನರ ಮಹಾಪ್ರೇಕ್ಷಕಗೋಲೆ
ಅಹಹಾ!
ಇದು ನಟರಾಜನ ಮಹಾಮಂದಿರ ಕಣೋ.
ಮಾಸ್ವಾಮೀ ಇಗೋ ಅಡ್ಡಬಿದ್ದೆ ನಿನ್ನ ಪಾದಕ್ಕೆ.
ಸತ್ತು ಬದುಕುವಂತಾದ ಈ ತೊಗಲಚೀಲಕ್ಕೆ.
ನಿನ್ನ ನೃತ್ಯವಿದ್ಯುಚ್ಛಕ್ತಿಸಂಚಾರವಾಗಲಿ,
ಜೆವರಿನುಗಿಯಲಿ ಬೆಂದ ನರನರಗಳಿಗೆ
ನಿನ್ನ ಟಾನಿಕ್ಕಿನ ಅಮೃತಸಿಂಚನವಾಗಲಿ,
ದೇಹಕ್ಕೇ ಭಾರವಾದ ಜೀವಕ್ಕೆ
ನಿನ್ನ ಪಂಚಾಮೃತ ಫಲ ದೊರೆಯಲಿ
ಇಗೋ ಬೇಡಿಕೊಂಡೆ ಲಕ್ಷಕೋಟಿ ಜನದ ಪರವಾಗಿ
ಏನು ಮಾಡಲಿ ಮಾರಾಯಾ?
ರಾಮ ಬಾರಿಸಿದ ಮೃದಂಗ ಕೃಷ್ಣ ಕಟ್ಟಿದ ಗೆಜ್ಜೆ.
ಶಕ್ತನೋ ಅಶಕ್ತನೋ ತಿಳಿದೋ ತಿಳಿಯದೆಯೋ
ಇದ್ದಕ್ಕಿದ್ದಂತೇ ಹಾಕಿದೆ ಹೆಜ್ಜೆ
“ಕೋಲು ಸಖೀ ಚಂದ್ರಮುಖೀ ಕೋಲೆ ನಾದಲೀಲೆ...

ಕಳವು! ಕಳವು! ಕಳವು!
ಹೆಗಲಮೇಲಿದ್ದ ಧನಮೂಟೆ ಹಾರಿಸಿದನಲ್ಲ ಯಾವನೋ
ಸೂಳೆಮಗ!
ತಲೆ ಕೆದರುತ ಅತ್ತಿತ್ತ ಅರಸತೊಡಗಿದೆ.
ಪಕ್ಕದಲ್ಲೇ ಮದುವೆಗೊಂದಲ. ಎದುರಲ್ಲಿ ತಿಂಡಿ ಚಪ್ಪರಿಸುವ
ಹೊಟೇಲುದಳ.
ಆಚೆಯ ಬಿಹಾರದಲಿ ತೊಟ್ಟಿಲ ಹಾಡು, ದೂರದುದ್ಯಾನದಲಿ
ಸಣ್ಣದೊಡ್ಡವರ ಕೂಟ.
ಹುಡುಕಿ ಹುಡುಕಿ ಬೇಸತ್ತು ಪೋಲೀಸಿಗೆ ಕೊಟ್ಟೆ ಫಿರ್ಯಾದು.
ಪೋಲೀಸಿಗೂ ಮಿಗಿಲಾದನಲ್ಲ ಪೋಲಿ!
ಅಂತೂ, ಫಿರ್ಯಾದು ಕೊಂಡ ಪೋಲೀಸು ತಿರುಗಿ ಬರಲೇ
ಇಲ್ಲ!
(ದೊಡ್ಡವನಿದ್ದರೆ ಹೆಸರಾದರೂ ಸಿಗುತ್ತಿತ್ತು ಪೇಪರಿನಲ್ಲಿ)
ಇದ್ದಕ್ಕಿದ್ದಂತೆಯೇ ಗಂಟು ಹೋಯ್ತಲ್ಲ!
ಅವನ ಮನೆಗೆ ಬೆಂಕಿ ಬೀಳಲಿ, ಅವನ ಕೂಲಿ ಹಾಳಾಗಲಿ,
ನೂರು ಜನ್ಮ ತಿಪ್ಪೆಹುಳುವಾಗಲಿ ಕಳ್ಳಸೂಳೇಮಗ.!

೪

ಓ ರುದ್ರ,
ನಿನ್ನ ಕರಾಗ್ನಿಕನಸು ಕೂರೆಯುತಿರೆ ಪ್ರಾಣಚ್ಛಿದ್ರ
ಮುಗಿಲ ಕಪ್ಪಿಡುವ ಕಾಲಾಭ್ರ ಕೈಯಲಿ ನಿನ್ನ ಟಪಾಲು
ನೋಡಿ
ಫೇಲಾಗುತಿದೆ ನಾಡಿ, ಕವಿಯುತಿದೆ ಕತ್ತಲರಾಡಿ.
‘ಸಹಿ’ನ್ನೇ ಕನಸನ್ನಾಗಿ ಮಾಡುವ ಕೈ ನಿನ್ನದು.
ಪಂಚಭೂತಗಳೊಂದಿಗೆ ಆಯುಷ್ಯನಕ್ಷೆಯನ್ನೇ ಸುಡುವ ಕೈ-
ನಿನ್ನದು.
ನಕ್ಷೆಗೇರುವ ಜೀವ ಜೀವಂತನೇ?
ಓ ರುದ್ರ,
ನಿನ್ನ ಪದವೊಂದೇ ಭದ್ರ
ಬ್ಯಾಟು ಹಿಡಿದಾಗಿನಿಂದಲೇ ಔಟು.
ಆದರೂ ನಡೆಯುತಿದೆ ಈ ಆಟ
ಉರುವಲ ಸ್ಟಂಪು ರಬ್ಬರುಚೆಂಡು.
ಓಹೋ ಇವ ಮೃತ್ಯುಮನ್ಮಥನಯ್ಯ,
ಉಗಿಬಳ್ಳಿಯ ಹೊಗೆತೊಟ್ಟಿಲ ತೂಗುವನಯ್ಯ.
ಬೊಬ್ಬುಳಿ ನಾಣ್ಯಗಳೊಟ್ಟಿ ಕರ್ಪೂರಬಂಗಲೆ ಕಟ್ಟಿದನಯ್ಯ.
ಸ್ಪಿರಿಟನು ಕುಡಿದು ನೀರ್ಮಂಚದ ಮೇಲೆ ಕುಣಿವನಯ್ಯ.
ಗಾಳಿಬಲೂನಿನಲ್ಲಿ ತೇಲಾಡುವನಯ್ಯ,
ಏನಾಶ್ಚರ್ಯ!
ವಿಷ್ಣುವಿನ ಚಾರ್ಜನ್ನೂ ರುದ್ರನೇ ಹೊರುವನು ಪಾಪ!
ಹೆಚ್ಚುಕಡಮೆ ರುದ್ರನೇ ವಿಷ್ಣು
ಮೃತ ಸಹಿಷ್ಣು.

ಸಾಹಿತ್ಯವನವಿಹಾರ

ಸುದಾಮಚರಿತಂ

(ಗ್ರಂಥಾವಲೋಕನ)

ಶ್ರೀ. ಎನ್. ಎಸ್. ಗದಗಕರ ಧಾರವಾಡ

ಚಿತ್ರಸೃಷ್ಟಿ, ರಾಮಾಯಣಗಳೆಂಬ ಕವನಸಂಕಲನ-ಕಾವ್ಯಗಳಿಂದ ಜಯಗುರುದೇವ, ಯದುಪತಿ ಕಾದಂಬರಿಗಳಿಂದ ಕನ್ನಡಿಗರ ಮನಸ್ಸನ್ನು ಆಕರ್ಷಿಸಿದ ಹಿರಿ ಸಾಹಿತಿಗಳಾದ ಶ್ರೀ. ಸಾಲಿ ರಾಮಚಂದ್ರ ರಾಯರ ಸಂಸ್ಕೃತಕಾವ್ಯ— ಈ ಸುದಾಮಚರಿತೆ. ಶ್ರೀಕೂಡಲಿ ಶೃಂಗೇರಿ ಜಗದ್ಗುರುಗಳ ಆಶೀರ್ವಚನ, ವಿದ್ಯಾರತ್ನ ಶ್ರೀ ಆರ್. ಎಸ್. ಪಂಚಮುಖಿಯವರ ಮುನ್ನುಡಿ, ಸಿವ್ಹಿಲ್ ಜಡ್ಜರಾದ ಶ್ರೀ. ಆರ್. ಬಿ. ನಾಯಕ ಅವರ ಅಭಿಪ್ರಾಯಗಳಿಂದೊಡಗೂಡಿದೆ ಪ್ರಸ್ತುತ ಹೊತ್ತಗೆ. ಐದು ಸರ್ಗಗಳಲ್ಲಿ ವಿಭಾಗಿಸಲಾದ ಈ ಕಾವ್ಯ, ಧಾರವಾಡ ಸಂಸ್ಕೃತಿ ಪ್ರಕಾಶನದ್ದು.

ಸುದಾಮಚರಿತೆ ನಿಜವಾಗಿಯೂ ಭಕ್ತಿಪರಕಾವ್ಯ. ಅತ್ಯಂತ ಲೋಕಪ್ರಿಯವೆನಿಸಿ ಹೆಣ್ಣುಮಕ್ಕಳಿಗಂತೂ ಸಾತ್ವಿಕ ಕತೆಯಾಗಿ ಪರಿಣಮಿಸಿದೆ. ಸುದಾಮ-ಕೃಷ್ಣರ ಉತ್ಕಟ ವಾತ್ಸಲ್ಯ ಎಂದೂ ಆದರ್ಶಪ್ರಾಯ. ಸುದಾಮನ ಬಡತನ ದಾರುಣವಾಗಿದ್ದರೂ ಅವನೆಂದಿಗೂ ದೈನ್ಯಾವಸ್ಥೆಗೆ ಇಳಿಯುವವನಲ್ಲವೆಂಬದು ಇಲ್ಲಿಯ ಪುಟಪುಟಗಳಲ್ಲಿ ಸ್ಫುಟವಾಗಿ ಮೂಡಿರುವುದು. ಹಾಗೆಯೇ ಅವನ ಪತ್ನಿ— ಸಾಧ್ವೀಶಿಖಾಮಣಿ.

ಮಹಾಕಾವ್ಯದ ಸರಣಿಯಲ್ಲಿಯೇ ಶ್ರೀ. ಸಾಲಿಯವರು 'ಕ್ವ ಸೂರ್ಯಪ್ರಭವೋ ವಂಶಃ ಕ್ವ ಚಾಲ್ಪ ವಿಷಯಾಮತಿಃ' ಎಂಬ ಆಶಯದ ನುಡಿಯೊಂದಿಗೆ ಪ್ರಾರಂಭಿಸುವರು. 'ಮಣೌ ವಜ್ರಸಮುತ್ಕೀರ್ಣೇ ಸೂತ್ರಸ್ಯೇವಾಸ್ತಿ ಮೇ ಗತಿಃ' ಎಂದು ನೇರವಾಗಿ ಹೇಳದಿದ್ದರೂ 'ತಥಾಪಿ ಮಾಮಚ್ಯುತಭಕ್ತ ಭಕ್ತಿಃ ಪ್ರಚೋದಯತ್ಯೇ ತದಹೋನುಗಾತುಂ'— ಎಂಬ ನುಡಿ ಅವರ ಭಕ್ತಿಪರವಶತೆಗೆ, ಸೌಜನ್ಯಕ್ಕೆ ಜೀವಂತನಿದರ್ಶನವಾಗಿದೆ. 'ನ ಪ್ರಾರ್ಥಯೇರ್ಥಂ ನ ಯಶೋ ಮಮೇಷ್ಟಂ' ಎನ್ನುವ ಬೇರೊಂದು ಉಕ್ತಿಯಂತೂ ಇಂದಿನ ಇಪ್ಪತ್ತನೆಯ ಶತಮಾನದ ಲೆಕ್ಕಾಚಾರದ ಪರಿಸ್ಥಿತಿಗೆ ತೀರ ವಿರೋಧವೆನಿಸಿ ಕುರುಡುಕುದುರೆಯಂತಹ ಜನಸಾಮಾನ್ಯರ ಕಣ್ಣು ತೆರೆಯಿಸುವಂತಿದೆ!

ಕೇವಲ ಕತೆಯನ್ನಷ್ಟೇ ಇದ್ದಕ್ಕಿದ್ದಂತೆ ಹೇಳುವ ಉದ್ದೇಶ ಸಾಲಿಯವರದಲ್ಲ ಇಲ್ಲಿ. ಸಾಹಿತ್ಯಿಕನ ಕೈಚಳಕ, ನಿರ್ಮಾಪಕ ಶಕ್ತಿಗೆ ಎರಡನೆಯ ಸರ್ಗವು ಒಳ್ಳೆಯ ನಿದರ್ಶನ. ಸುದಾಮ ಹಾಗೂ ಅವನ ಪತ್ನಿಯ ಜೀವನದರ್ಶನ ಇಲ್ಲಿ ಯಥಾವತ್ತಾಗಿ ಬಂದಿದೆ. ಆದರ್ಶ ದಾಂಪತ್ಯ ಜೀವನದ ಚಿತ್ರಣವಿದು.

ಕೃಷ್ಣ-ಸುದಾಮರ ಸಂದರ್ಶನ ಇನ್ನೂ ಮೋಹಕವಾದುದು. ಬಾಲ್ಯದ ಅವರ ರಸನಿಮಿಷಗಳ ನೆನಪು ನೈಜಕಾವ್ಯಕ್ಕೆ ವಸ್ತುವಾಗಿ ಪರಿಣಮಿಸಿದೆ. ಸುದಾಮನ ಕಾಣಿಕೆಯಾದ ಅವಲಕ್ಕಿಯನ್ನು ಶ್ರೀಕೃಷ್ಣನು ಮುಷ್ಟಿಯಲ್ಲಿ ಹಿಡಿದು ಒಬ್ಬನೇ ತಿನ್ನುವಾಗ, ರುಕ್ಮಿಣಿ ತಡೆದು—'ಅಶಿಷ್ಟಾಚರಣಂ ಪತ್ಯುರ್ನೋಪೇಕ್ಷೇಯುಃ ಕುಲಸ್ತ್ರಿಯಃ' ಎಂದು ಉದ್ಗಾರ ತೆಗೆಯುವುದು ಬಲು ರಸಮಯವಾದ ಪ್ರಸಂಗ. 'ಸಂವಿಭಜ್ಯೈವ ಭೋಕ್ತವ್ಯಂ' ಎಂದುಸುರುವ ಆಕೆಯ ಮಾರ್ಮಿಕ ಮಾತು 'ಅನ್ನಂ ಬಹು ಕುರ್ವೀತ ತದ್ವ್ರತಂ' ಎಂಬ ಉಪನಿಷದುಕ್ತಿಯನ್ನು ನೆನಪಿಗೆ ತರುವಂತಹದು.

ಛಂದೋವೈವಿಧ್ಯವು ಈ ಪುಟ್ಟಕಾವ್ಯದ ಹಿರಿಯಲಕ್ಷಣವೆಂದು ಹೇಳಲೇಬೇಕು ಅದರದೊಂದು ಸೊಗಸೇ ಎಂದರೆ ಸಲ್ಲುವುದು. ಸಹಜಸ್ಫೂರ್ತಿಯಿಂದ ಹೊರಹೊಮ್ಮುವ ಪದಬಂಧ ಪಂಡಿತ-ಪಾಮರರಿಬ್ಬರನ್ನೂ ಇಲ್ಲಿ ರಂಜಿಸುವುದು. 'ಕೃಷ್ಣಸ್ಯ ಕಾರುಣ್ಯ ಸುಧಾರ್ಣವಸ್ಯ' 'ಆಶೀವಿಷಾವಾಸವಿಭೂಷಿತಾಂಯೋಃ' ಎಂಬಂತಹ ಅನುಪ್ರಾಸದ ಪಂಕ್ತಿಗಳೂ, ಅಂದವಾದ ಉಪಮೆ ಅರ್ಥಾಂತರನ್ಯಾಸಗಳೂ ಇಲ್ಲಿಯ ಶೈಲಿಗೆ ವಿಶೇಷ ಮೆರುಗನ್ನಿತ್ತಿವೆ.

" ಸುದರ್ಶನೋದ್ದಾಮ ಮಹೋಭಿರಕ್ಷಿತಾ
ನಭಃಸ್ಪೃಶನ್ನಾದ ಮಹಾಬ್ಧಿವೇಷ್ಟಿತಾ
ವಿದಗ್ಧ ಸಂಗೀತ ಸುಧಾಮಧುಸ್ವನಾ
ಬಭೌ ಶುಭಾ ಪುಣ್ಯಪಯೋನಿಧೇಃ ಪುರೀ "

ಎಂಬ ದ್ವಾರಾವತಿಯ ವರ್ಣನಾಸರಣಿಯೊಂದೇ ಸಾಲಿಯವರ ಕಾವ್ಯಶಕ್ತಿಯ ಪರಾಕಾಷ್ಠತೆಗೆ ನಿದರ್ಶನವಾಗಿ ನಿಲ್ಲಬಲ್ಲುದು.

ಸಂಸ್ಕೃತ ವಾಙ್ಮಯದ ಅಭ್ಯಾಸಕ್ಕೆ ನಿರಂತರ ಚ್ಯುತಿ ಬಂದ ಈ ಸಂಧಿಕಾಲದಲ್ಲಿ, ಸ್ವಯಂಪ್ರತಿಭೆಯಿಂದ ರಂಜಿಸುವ ಭಕ್ತಿಪರ ಕಾವ್ಯವನ್ನು ರಚಿಸಿ, ಅಭ್ಯಾಸಪ್ರೇಮಿಗಳನ್ನು ಋಣಬದ್ಧರನ್ನಾಗಿಸಿದ ಸಾಲಿಯವರು ಅಭಿನಂದನಾರ್ಹರು. ಇನ್ನೂ ಇಂತಹ ಹಲವಾರು ಕೃತಿಗಳು ಶ್ರೀಯುತರಿಂದ ಬರಲಿ ಎಂದು ನಮ್ಮ ಹಾರೈಕೆ. ತನ್ಮೂಲಕ ದೇವವಾಣಿಯ ಉಪಾಸನೆಗೆ ಕಳೆಕಟ್ಟೀತು!

ಕಾವ್ಯದಲ್ಲಿ ಪ್ರತಿಮಾಸಂವಿಧಾನ

ಶ್ರೀ. ಜಿ. ವ್ಹಿ. ಕುಲಕರ್ಣಿ. ಬಿ. ಎ. (ಆನರ್ಸ್) ಧಾರವಾಡ
ಶ್ರೀ. ಅನಿಲಕುಮಾರ ವಿನಾಯಕ ಗೋಕಾಕ, ಧಾರವಾಡ

ಲೇಖಾಂಕ ೩

ಇಂದಿನ ಪ್ರತಿಮೆ

ಕನ್ನಡ ಸಾಹಿತ್ಯದ ಪ್ರವಾಹವು ಪೂರ್ವದ ಹಳಗನ್ನಡದಿಂದ ಪ್ರಾರಂಭವಾಯಿತು. ಹಳಗನ್ನಡ, ನಡುಗನ್ನಡ, ಹೊಸಗನ್ನಡ ಮುಂತಾದ ರೂಪಗಳನ್ನು ಪಡೆಯುತ್ತ, ಇಂದು ನವೀನ ಪ್ರವಾಹವಾಗಿ ಹರಿಯುತ್ತಿದೆ. ದೇಶದ ಇತಿಹಾಸ ಬದಲಾದಂತೆ ಅದರ ಸಾಹಿತ್ಯವೂ ಬದಲಾಗುತ್ತದೆ. ಸಮಾಜವು ತನಗೆ ಬೇಕಾದಂತಹ ಸಾಹಿತ್ಯವನ್ನು ಮತ್ತು ಕವಿಗಳನ್ನು ನಿರ್ಮಿಸಬಲ್ಲದು. ಇತಿಹಾಸವು ಬದಲಾದಂತೆ ಮಾನವನ ಪ್ರಗತಿಯು ಒಂದಿಲ್ಲೊಂದು ರೀತಿಯಿಂದ ಮುಂದುವರಿಯುತ್ತದೆ. ಹೊಸ ಹೊಸ ಶೋಧಗಳಾದಂತೆ ನವೀನ ವಸ್ತುಗಳು ಮಾನವನ ಜೀವನದಲ್ಲಿ ಬರುತ್ತವೆ; ಅವನ ಜೀವನದ ಅವಿಭಾಜ್ಯ ಅಂಗಗಳಾಗುತ್ತವೆ. ಹೀಗಾಗಿ ಹೊಸ ವಸ್ತುಗಳನ್ನು ಪ್ರತಿಮಾಸೃಷ್ಟಿಗಾಗಿ ಕವಿಗೆ ಇತಿಹಾಸವು ಕಾಲಕಾಲಕ್ಕೆ ನೀಡುವುದು. ಪ್ರೀತಿ, ಸಾವು, ನಿಸರ್ಗ ಇವು ಅತ್ಯಂತ ಸನಾತನ ವಿಷಯಗಳು. ಇವುಗಳ ಬಗ್ಗೆ ಇದ್ದ ಮಾನವೀ ಅನುಕಂಪನಗಳಲ್ಲಿ ಒಂದು ಮಾದರಿ ಇರುತ್ತದೆ. ಈ ಮಾದರಿಯನ್ನು ಇತಿಹಾಸವು ಬದಲಿಸುತ್ತಿರುತ್ತದೆ. ಈ ಕಾರಣದಿಂದ ಕವಿಯು ಹೊಸ ಪ್ರತಿಮೆಗಳನ್ನು ನಿರ್ಮಿಸುವ ಕಾರ್ಯದಲ್ಲಿ ತೊಡಗಬೇಕಾಗುತ್ತದೆ. ಹೊಸ ವಸ್ತುಗಳು, ಹೊಸ ವಿಚಾರಗಳು, ಹೊಸ ಆಚರಣೆಗಳು ನವೀನ ಪ್ರತಿಮೆಗಳಿಗೆ ಕಾರಣವಾಗುತ್ತವೆ. ಇವುಗಳಿಂದಲೇ ಹೊಸ ಶೈಲಿಗಳ ಆವಶ್ಯಕತೆಯುಂಟಾಗುತ್ತದೆ. ಕನ್ನಡ ಕಾವ್ಯವು ಕೂಡ ಅನೇಕ ಬದಲಾವಣೆಗಳನ್ನು ಪಡೆದು, ಇಂದು ಪ್ರತಿಮಾನಿಷ್ಠ ಮಾದರಿಯ ಕಡೆಗೆ ಒಲಿದಿದೆ. ಇಂದಿನ ಪ್ರತಿಮಾಮಾದರಿಯ ವೈಶಿಷ್ಟ್ಯವೇನು? ನವ್ಯತೆಯನ್ನು ಪಡೆಯಲು ಅದು ಎಷ್ಟರಮಟ್ಟಿಗೆ ಸಫಲವಾಗಿದೆ? ಮತ್ತು ಅದರೆದುರಿಗಿದ್ದ ಸಮಸ್ಯೆಗಳಾವುವು?— ಎಂಬ ವಿಷಯದ ಬಗ್ಗೆ ವಿಚಾರಿಸುವುದು ಅವಶ್ಯವಾಗಿದೆ.

ಪ್ರಪಂಚದಲ್ಲಿಯ ಯಾವ ವಸ್ತುವೂ ನೀರಸವಾಗಿಲ್ಲ. ಪ್ರತಿಯೊಂದು ವಸ್ತುವಿನಿಂದ ಕವಿಯು ಪ್ರತಿಮೆಯನ್ನು ನಿರ್ಮಿಸಬಲ್ಲ. ಇದು ಎರಡು ವಿಷಯಗಳನ್ನು ಅವಲಂಬಿಸಿದೆ: ೧) ಆ ವಸ್ತುವಿನ ಬಗ್ಗೆ ಕವಿಯಲ್ಲಿದ್ದ ಕಾಲ್ಪನಿಕ ಅನುಕಂಪನೆಯ (response) ಶಕ್ತಿ ೨) ಸರ್ವಸಾಮಾನ್ಯ ಪ್ರಜ್ಞೆಯು ಇದನ್ನು ಅಂಗೀಕರಿಸಿಕೊಳ್ಳುವಂತಹ ಈ ವಸ್ತುವಿನ ವಿಸ್ತಾರ. ಇದೇ ಮಾತನ್ನು ವಿವರಿಸಿ ಹೇಳಿದರೆ:— ಒಂದು ವಸ್ತುವನ್ನು ಕಾವ್ಯದಲ್ಲಿ ರೂಪಾತ್ಮಕವಾಗಿ ಉಪಯೋಗಿಸಬೇಕಾದರೆ, ಅದು ಸಾಮಾನ್ಯವಾಗಿ ಎಲ್ಲರಿಗೆ ಪರಿಚಿತವಾಗಿರಬೇಕು; ಸುಪ್ತಚೇತನದಲ್ಲಿ ತನ್ನ ಬೇರುಗಳನ್ನು ಬಿಟ್ಟಿರಬೇಕು. ಈ ವಸ್ತು ಯಾರಿಗೆ ಸಾಕಷ್ಟು ಪರಿಚಿತವಾಗಿರಬೇಕು, ಕವಿಗೋ? ವಾಚಕನಿಗೋ? ಬಹಳೇ ವ್ಯಕ್ತಿಗತವಾದ (Personal) ಪ್ರತಿಮೆಗಳನ್ನು ಆಕ್ಷೇಪಿಸಿ, ಅವುಗಳ ಅರ್ಥ ಕವಿಗಷ್ಟೇ ಆಗಿ, ತನಗಾಗುವುದಿಲ್ಲವೆಂದು ವಾಚಕನು ವಿರೋಧಿಸಬಹುದು. ನಾವು ಈ ಸಂದರ್ಭದಲ್ಲಿ ವಾಚಕನ ಬಗ್ಗೆ ಸಹಾನುಭೂತಿಯನ್ನು ತೋರಿಸಿ ಕವಿಯ ಪಕ್ಷವಹಿಸಬಹುದು. ಸಾಮಾನ್ಯ ಜನರಿಗಿಂತಲೂ ಸೂಕ್ಷ್ಮಗ್ರಾಹಿಯಾಗದಿದ್ದವನು ಕವಿಯೇ ಅಲ್ಲ. ಹೆಚ್ಚು ಸೂಕ್ಷ್ಮಗ್ರಾಹಿಯಾಗಿದ್ದರೆ ಸಾಮಾನ್ಯ ಜನರಿಗೆ ಗೊತ್ತಿಲ್ಲದಂತಹ ಸಂಬಂಧಗಳನ್ನು ಕಾಣುತ್ತಾನೆ. ಪ್ರತಿಮೆಗಳಲ್ಲಿಯ ನವೀನತೆಯು ಹೆಚ್ಚು ಜನರ ಮನವನ್ನೂ ತಟ್ಟುತ್ತದೆ. ಹೊಸ ವಸ್ತುಗಳೊಡನಿದ್ದ ಸಂಬಂಧದ ಮೂಲಕ ಮಿಂಚಿನ ರೂಪದಲ್ಲಿ ಸಹಜಜ್ಞಾನವಾಗುತ್ತದೆ. ಇದರ ಉಪಯೋಗವನ್ನು ಪಡೆಯಲು ಕವಿಗೆ, ಓದುಗ ಸಂಧಿಯನ್ನೊದಗಿಸದಿದ್ದರೆ, ಕಾವ್ಯ ಪ್ರತಿಮೆಯಲ್ಲಿ ನವ್ಯತೆಯು ಕಂಡುಬರದೆ ಕಾವ್ಯವು ಸಪ್ಪೆಯಾಗುತ್ತದೆ.

ಆಂಗ್ಲ ಸಾಹಿತ್ಯದಲ್ಲಿ ಈ ಪ್ರತಿಮಾನಿಷ್ಠ ನವ್ಯತೆಯು ಹೆಚ್ಚಾಗಿ ಕಂಡು ಬರುತ್ತದೆ. ಕೆಲವು ಉದಾಹರಣೆಗಳನ್ನು ನೋಡಬಹುದು:

“The dance along the artery
The circulation of the lymph
Are figured in the drift of stars”
(T. S. Eliot)

ಮಾನವನ ದೇಹವು ಒಂದು ಸೇಂದ್ರಿಯ ವಸ್ತುವಾಗಿದೆ (organism). ದೇಹದಲ್ಲಿ ಹರಿಯುವ ರಕ್ತದ ಎಲ್ಲ ಧಮನಿಗಳಲ್ಲಿಯೂ ರಕ್ತಗೋಲಕಗಳ ಕುಣಿತ ಅವ್ಯಾಹತವಾಗಿ ನಡೆದಿರುತ್ತದೆ ಒಂದು ನಿಯಮಿತವಾದ ವರ್ತುಲದಲ್ಲಿಯೇ ರಕ್ತಗೋಲಕಗಳು ಚಲಿಸುತ್ತವೆ. ಆಕಾಶವನ್ನೂ

ಒಂದು ಅನಂತವಾದ ಸೇಂದ್ರಿಯ ವಸ್ತುವಿಗೆ ಕವಿಯು ಹೋಲಿಸುತ್ತಾನೆ. ಆಕಾಶದಲ್ಲಿ ಕಾಣುವ ಗ್ರಹ, ನಕ್ಷತ್ರಗಳು ಒಂದೇ ಸ್ಥಳದಲ್ಲಿ ಇರದೆ, ಒಂದು ನಿಯಮಿತವಾದ ಕುಣಿತವನ್ನು ನಡೆಸಿದಂತೆ ಕಂಡು ಬರುತ್ತದೆ. ದೇಹದಲ್ಲಿ ಕಂಡುಬರುವ ಶ್ವೇತಗೋಲಕಗಳಲ್ಲಿ ಮತ್ತು ಆಕಾಶದಲ್ಲಿಯ ಗ್ರಹ, ನಕ್ಷತ್ರಗಳಲ್ಲಿ ಒಂದೇ ಬಗೆಯ ಕುಣಿತವು ಕಂಡುಬರುವುದೇಕೆ ? ಈ ವಿಚಾರವನ್ನು ಯಾವ ವೈಜ್ಞಾನಿಕ ಸತ್ಯವೂ ವಿವರಿಸಲಾರದು.

ಯಾವ ದೈವೀ ಶಕ್ತಿಯು ದೇಹವನ್ನು ನಿರ್ಮಿಸಿದೆಯೋ, ಅದೇ ಶಕ್ತಿಯು ಈ ಅನಂತ ಆಕಾಶವನ್ನೂ ನಿರ್ಮಿಸಿತು. ಅಂತೆಯೇ ಒಂದೇ ಬಗೆಯ ಕುಣಿತ ಎರಡರಲ್ಲಿಯೂ ಕಾಣುತ್ತದೆ. ಈ ಧ್ವನಿಯೇ ಈ ಮೇಲ್ಕಾಣಿಸಿದ ಪ್ರತಿಮೆಯಲ್ಲಿ ಒಂದು ಹೊಸ ಮೆರುಗನ್ನು ಕೊಟ್ಟಿದೆ. ಇಲ್ಲಿ ಶ್ವೇತಗೋಲಕಗಳನ್ನು ತಾರೆಗಳಿಗೆ ಹೋಲಿಸಿದ್ದರಲ್ಲಿ ಔಚಿತ್ಯವನ್ನು ಕಾಣಬಹುದು.

" As clerks in whited banks
With bird-claw pens column virgin papers
To snow we added foot-prints
(Spender)

ಉತ್ತರ ಧ್ರುವದೆಡೆಗೆ ಪರಿಶೋಧಿಸಲು ಹೊರಟಾಗ ಜನರ ಹೆಜ್ಜೆಗಳ ಗುರುತುಗಳು ಹೇಗೆ ಕಂಡುವು ಎಂಬುದನ್ನು ಈ ಪ್ರತಿಮೆಯಲ್ಲಿ ಕಾಣುತ್ತೇವೆ. ' ಮೊದಲು ಏನೂ ಇಲ್ಲದ ಬಿಳಿಯ ಕಾಗದದ ಮೇಲೆ ತಮ್ಮ ಲೆಕ್ಕಣಿಕೆಯಿಂದ ಸಾಲುಸಾಲಾದ ಗೆರೆಗಳನ್ನು ಮೂಡಿಸುವಂತೆ, ಏನೂ ಇಲ್ಲದ ಸಂಪೂರ್ಣ ಹಿಮಾಚ್ಛಾದಿತ ಪ್ರದೇಶದ ಮೇಲೆ ಸಾಲು-ಸಾಲಾಗಿ ತಮ್ಮ ಹೆಜ್ಜೆಗಳನ್ನು ಸೇರಿಸಿದರು ' ಎಂಬುದು ತೀರ ನವೀನವಾದ ಪ್ರತಿಮೆ. ಕಾರಕೂನರು ಬಿಳಿಯ ಕಾಗದದ ಮೇಲೆ ಎಳೆಯುವ ಗೆರೆಗಳೆಲ್ಲಿ ? ಹಿಮಾಚ್ಛಾದಿತ ಪ್ರದೇಶದ ಮೇಲೆ ಕಂಡುಬರುವ ಪದಹತಿಯಿಂದಾದ ಸಾಲುಗಳೆಲ್ಲಿ ? ಇವೆರಡರಲ್ಲಿಯೂ ಸಂಬಂಧವನ್ನು ಕವಿಯು ಸೂಕ್ಷ್ಮದೃಷ್ಟಿಯಿಂದ ಕಂಡುಹಿಡಿದು, ಹೊಸ ಪ್ರತಿಮೆಯನ್ನು ನಿರ್ಮಿಸಿದ್ದಾನೆ.

" It is no go the Yogi-man, it is no go Blavatsky,
All we want is a bank-balance and a bit of skirt in a taxi.
(Mac Neice)

' ಇಂದಿನ ಮಾನವನಿಗೆ ಯೋಗ-ಧರ್ಮಗಳು ಬೇಕಾಗಿಲ್ಲ. ಅವನಿಗೆ ಬೇಕಾದದ್ದು ಸಿರಿವಂತಿಕೆ ಮತ್ತು ಒಬ್ಬ ತರುಣಿಯ ಸಹವಾಸ ' ಎಂದು ಕವಿಯು ಹೇಳಿದ್ದಾನೆ. ' ಇದು ಪ್ರತಿಮೆಯೇ ? ಎಂಬ ಪ್ರಶ್ನೆ ಉದ್ಭವಿಸುತ್ತದೆ

ಇಲ್ಲಿ ಮೇಲೆ ಬರೆದಂತೆ ಕವಿ ನಿರೂಪಿಸಿಲ್ಲ. ಅದೇ ಕೇವಲ ನಿರೂಪಣೆಯಾಗಿದ್ದರೆ ಪ್ರತಿಮೆಯಾಗುತ್ತಿರಲಿಲ್ಲ. ಇಲ್ಲಿ ನಾವು ಒಂದು ಉಕ್ತಿವೈಶಿಷ್ಟ್ಯವನ್ನು ಕಾಣುತ್ತೇವೆ. ಕವಿ ' Yogi-man ' ಎಂದಾಗ, ನಮ್ಮೆದುರು ಮೂರ್ತಿಮಂತವಾದ ಯೋಗಿಯ ಸ್ವರೂಪ ನಿಲ್ಲುತ್ತದೆ. ' Blavatsky ' ಎಂದಾಗ, ಮನುಷ್ಯನು ಕೂಡ ತನ್ನ ಮನ-ದೇಹದ ಶುದ್ಧೀಕರಣದಿಂದ ದೇವನೊಡನೆ ಒಂದಾಗಬಹುದು ಎಂದು ಬೋಧಿಸಿದ ಒಬ್ಬ ತತ್ತ್ವವಿದಳ ಸ್ವರೂಪ ನಮ್ಮೆದುರು ನಿಲ್ಲುತ್ತದೆ. ಇಂದಿನ ಮಾನವನಿಗೆ ಇವೆರಡೂ ಬೇಕಾಗಿಲ್ಲ. ಅವನಿಗೆ ಬೇಕಾದುದನ್ನು ಮುಂದಿನ ಎರಡು ಚಿತ್ರಗಳಿಂದ ಕವಿ ಸ್ಪಷ್ಟಪಡಿಸಿದ್ದಾನೆ. ಸಿರಿವಂತಿಕೆಯನ್ನು ಸೂಚಿಸಲು ' bank-balance ' ಎಂಬ ಶಬ್ದವಿದೆ. ತರುಣಿಯ ಸಹವಾಸವೆಂದು ಹೇಳದೆ ' bit of skirt in a taxi ' ಎಂದು ಹೇಳಿ ಒಂದು ಚಿತ್ರರೂಪ ಕೊಡುತ್ತಾನೆ. ಇದು ಉಳಿದ ಎಲ್ಲ ಪ್ರತಿಮೆಗಳಿಗಿಂತ ಆಕರ್ಷಕವಾಗಿದೆ. ಇಲ್ಲಿ ನವ್ಯಕಾವ್ಯದ ತಂತ್ರವೈಶಿಷ್ಟ್ಯವನ್ನು ಕಾಣಬಹುದು.

ದಾಳಿಂಬೆಯ ಬಗ್ಗೆ ಒಬ್ಬ ಸ್ಪ್ಯಾನಿಶ್ ಕವಿಯು ಬರೆದ ಒಂದು ಕವಿತೆ. ಇಲ್ಲಿ ಪ್ರತಿಮಾನಿಷ್ಠ ಕವಿತೆಯು ಹೇಗಿರುತ್ತದೆಂಬುದನ್ನು ಕಾಣಬಹುದು;

" The fragrant pomegranates,
In it a heaven seems to crystallise
In every seed a star is lit,
In each red-film a sunset dies
It seems a tiny hive that drips
The life blood soaking through its mesh
Because the bees have formed its pulp
Of womens' mouth and kisses fresh
And when it bursts a thousand lips
Are shining in its crimson flesh
It is the arc of gems that blaze
Within the dim seen casque of gold.
(K. D. Setna ಅನುವಾದಿತ)

ಸ್ವರ್ಗವೇ ಸ್ಫಟಿಕದ ರೂಪದಲ್ಲಿ ದಾಳಿಂಬೆಯಾಯಿತೋ ಎಂದು ಕವಿಯು ಪ್ರತಿಮೆಗಳ ಜಾಳಿಗೆಯನ್ನೇ ಹೆಣೆದಿದ್ದಾನೆ. ಪ್ರತಿಯೊಂದು ಬೀಜದಲ್ಲಿಯೂ ನಕ್ಷತ್ರಕಾಂತಿಯಿದೆ. ಪ್ರತಿಯೊಂದು ಕೆಂಪು ಪಟಲದಲ್ಲಿಯೂ ಸೂರ್ಯಾಸ್ತದ ರಕ್ತರಂಜಿತ ಸಮಾಧಿಯು ಕಂಡು ಬರುತ್ತಿದೆ. ಒಂದು ಪುಟ್ಟ ಜೇನಹುಟ್ಟು ಸ್ರವಿಸುವಂತೆ ಕಂಡು, ಜೀವನದ ರಕ್ತವೇ ಒಂದು ಜಾಳಿಗೆಯಲ್ಲಿ ನೆನೆಸಿಟ್ಟಂತೆ ಕಾಣುತ್ತದೆ. ಇದರ ಬೀಜಗಳನ್ನು ಸ್ತ್ರೀಯರ ಮುಖ ಮತ್ತು ನವೀನ ಚುಂಬನದಿಂದ ಮಧುಕರಗಳು ನಿರ್ಮಿಸಿದಂತಿದೆ. ಈ ಹಣ್ಣು ಒಡೆದಾಗ, ಇದರ ಸಾವಿರ ತುಟಿಗಳು ತೆರೆದು ರಕ್ತರಂಜಿತವಾದ ದೇಹದಲ್ಲಿ ಹೊಳೆಯುತ್ತವೆ. ಬಂಗಾರದ ಪಾತ್ರೆಯಲ್ಲಿಟ್ಟ ರತ್ನಗಳ ಮಾಲೆಯಂತೆ ಪ್ರಕಾಶಿಸುತ್ತವೆ.

ಆಧುನಿಕ ಕನ್ನಡಕಾವ್ಯದಲ್ಲಿ ಸುಂದರವಾದ ಹೊಸ ಪ್ರತಿಮೆ-ಗಳನ್ನು ಕಾಣುತ್ತೇವೆ. ಅವುಗಳಲ್ಲಿ ಕೆಲವನ್ನು ನೋಡಬಹುದು:

" ನಡಿಯೋ ದೊಡ್ಡೊಡ್ ದೇವಲ್ನಂಗೆ
ಪಟ್ಣದ ಸುತ್ತಿನ ಕಾವಲ್ನಂಗೆ
ಅಲ್ಲಲ್ಲೇನೆ ಅಂಗಂಗೇನೆ
ಗಸ್ತಾಕ್ತಿತ್ತು ಮಂಜು " (ಜಿ. ಪಿ. ರಾಜರತ್ನಂ)

ನವ್ಯಕಾವ್ಯದಲ್ಲಿ ಕಂಡುಬರುವ ಪ್ರತಿಮೆಗಳು:—

" ಇದು ದೊಡ್ಡ ನಿಲ್ದಾಣ ಕೂಟ
ಇಲ್ಲಿಂದಲೇ ಹೊರಟು ಇಲ್ಲಿಗೇ ಬಂದು ಕೂಡುವವೆಲ್ಲ ಕಡೆಯ ಗಾಡಿ
ದೇಹಾದ್ಯಂತ ಸಂಚರಿಸಿ ಪುಪ್ಪುಸಕೆ ಹರಿವಂತೆ ರಕ್ತನಾಡಿ "
(ಚೆನ್ನವೀರ ಕಣವಿ)

ಈ ಪ್ರತಿಮೆಯು ಹೊಸದು. ರೇಲ್ವೆ ನಿಲ್ದಾಣವನ್ನು ದೇಹ-ದಲ್ಲಿರುವ ಪುಪ್ಪುಸಕ್ಕೆ ಹೋಲಿಸಿದ್ದು ಔಚಿತ್ಯಪೂರ್ಣವಾಗಿದೆ.

" ಮೆದುಳಿನಿಂದ ಕೆಳಗಿಳಿದ ಸ್ನಾಯುವ್ಯೂಹ—
ಅದೆ ಕಣಿವೆಯ ದಾರಿ
ಹಸಿರೆಡೆ ಮಣಿಯುತ ಟಿಸಿಲೊಡೆದಿದೆ ನೋಡು
ನೂರೆಡೆ ಸೊಗಬೀರಿ "— (ವಿನಾಯಕ)

ಈ ಸಾಲುಗಳನ್ನು ನಾವು 'ದ್ಯಾವಾ-ಪೃಥಿವಿ'ಯ 'ಇಳಾಗೀತ'-ವೆಂಬ ಕಾವ್ಯಭಾಗದಲ್ಲಿ ಕಾಣುತ್ತೇವೆ. ವಿಮಾನದಿಂದ ಹಾರುವಾಗ ಕೆಳಗೆ ಕಂಡ ಪರ್ವತ, ಅದರಿಂದ ಹೊರಟ ಕಣಿವೆಯ ದಾರಿಗಳನ್ನು ನೋಡಿ, ಮೆದುಳಿನಿಂದ ಕೆಳಗಿಳಿದ ಸ್ನಾಯುವ್ಯೂಹಕ್ಕೆ ಹೋಲಿಸಿ ಕವಿಯು ಹೊಸ ಪ್ರತಿಮೆಯನ್ನು ಸೃಷ್ಟಿಸಿದ್ದಾನೆ.

ವೈದ್ಯಕ ವಿದ್ಯಾಲಯವನ್ನು ಸಂದರ್ಶಿಸಿದಾಗ ಇದೇ ಕವಿಗಳು, ದೇಹದ ವಿವಿಧ ಅಂಗಗಳ ಬಗ್ಗೆ ಸುಂದರವಾದ ಹೊಸ ಪ್ರತಿಮೆಗಳನು ಸೃಷ್ಟಿಸಿದ್ದಾರೆ. ಅದರಲ್ಲಿಯ ಎರಡನ್ನು ನೋಡೋಣ:

" ಅಂಚೆಮನೆ ತಂತಿಮನೆಗಳ ತಂತಿವ್ಯೂಹದೊಲು
ಧಮನಿ-ಸ್ನಾಯುಗಳು ಸುತ್ತಿಹವೆಲ್ಲಿ ನೋಡಿದೊಡೆ,
ಕಾಲ್ಬೆರಳಿನಿಂದ ಮಸ್ತಕದ ಪರ್ಯಂತ ಓ! "—
('ವೈದ್ಯವಿದ್ಯಾಲಯ' ನವ್ಯಧ್ವನಿ)

" ಉತ್ತಮ ಒಟಾಟಿಯಲಿ ಕಾಲಿಫ್ಲಾವರು ಬೆಳೆದ-
ವೊಲು ಕಾಂಬ ಮೆದುಳಿದೊ ಛಿದ್ರರೋಗದ ರಾಹು! "—

'ಕೊನೆಯ ನಿಲ್ದಾಣ' ಎಂಬ ಕವಿತೆಯಲ್ಲಿಯ ಎರಡು ಸುಂದರ ಪ್ರತಿಮೆಗಳು:

" ಜೇನು ಹುಟ್ಟಿಗೆ ಯಾರೊ ಹೊಗೆಯಿಟ್ಟು ಹೋದಂತೆ
ಮಂದಿ ಗಿಜಿಗಿಟ್ಟಿರುವ ನಿಲ್ದಾಣ " (ಚೆನ್ನವೀರ ಕಣವಿ)
" ಕೈಯ್ಯ ಗಡಿಯಾರದಲಿ ಕಾಲದ ನಾಡಿ ಮಿಡಿಯುತಿದೆ "
(ಚೆನ್ನವೀರ ಕಣವಿ)

ಈ ಪ್ರತಿಮೆಯಲ್ಲಿ— 'ಕೈಯಲ್ಲಿಯ ಗಡಿಯಾರ ಕೇವಲ ವೇಳೆಯನ್ನು ಸೂಚಿಸದೇ ಕಾಲನ ನಾಡಿಯ ಮಿಡಿತವನ್ನು ಸೂಚಿಸು-ತ್ತದೆ—ಎಂಬ ಮಾತು ತೀರ ಹೊಸದಾಗಿದೆ.

'ಹಿಮಗಿರಿಯ ಕಂದರ' ದಲ್ಲಿ—

" ಕಾಲನಿಟ್ಟೆಟ್ಟಲ್ಲಿ ಕೀಲುಗುದುರೆ ಸವಾರಿ
ಕೈಚಾಚಿದಲ್ಲೆಲ್ಲ ಸ್ವಿಚ್ಚು ಸ್ವಿಚ್ಚು
ಎಲ್ಲಿ ತಿರುಗಿದರಲ್ಲಿ ಅಮೃತ ಸೂಸುವ ನಲ್ಲಿ
ಈ ಕಚೇರಿಯ ಮನೆಗೆ ಬೆಂಕಿ ಹಚ್ಚು. "
(ಗೋಪಾಲ ಕೃಷ್ಣ ಅಡಿಗ)

ಇದೊಂದು ಸುಂದರವಾದ ವಿಡಂಬನೆ. ಇಲ್ಲಿ ಹೆಚ್ಚು ಆಕರ್ಷಕ-ವಾದದ್ದು ಲಿಫ್ಟಿಗೆ (Lift) ಕೀಲುಗುದುರೆಯ ಸವಾರಿಯನ್ನು ಹೋಲಿಸಿದ್ದು.

" ಬಂದೆಯಾ, ಬಾ, ಅಂಬೆಗಾಲ ಅಂಚೆ! "
ಅಚೆದಡದಿ ಹೊಸತೇನು ಸಮಾಚಾರ–" (ಅಡಿಗ 'ನಂದನ')

ಇಲ್ಲಿ ಮಗುವನ್ನು ಅಂಚೆಗೆ ಹೋಲಿಸಿದ್ದು ಹೊಸದು.

'ವಾರಕ್ಕೆ ಒಂದೇ ರವಿವಾರ' ಎಂಬ ಕವಿತೆಯಲ್ಲಿ ಚಿಕ್ಕ ಮಗುವನ್ನು ಅಂಬೆಗಾಲ ರೈಲೆಂದು ಕರೆದ ಪ್ರತಿಮೆ ಇದೆ.

" ತಾಯ ತೊಡೆಯಿಂದಿಳಿದು ಕೂಗಿ ಸಿಳ್ಳನು ಹೊಡೆದು
ಈಚೆ ಹರಿವುದು ಅಂಬೆಗಾಲ ರೈಲು " (ಸಿದ್ದಣ್ಣ ಮಸಳಿ)

ಈ ಪ್ರತಿಮೆಯು ಇನ್ನೂ ಹೆಚ್ಚು ಮನಕ್ಕೆ ತಟ್ಟುತ್ತಿದೆ.

" ಸಕಲ ಗ್ರಹಸಂಚಾರಿ ಸಾಗರವಿಹಾರಿ
ದಶದಿಕ್ಕುಗಳನೇ ಹೊಲ್ದಾಲಿನಲಿ
ಬಿಗಿದಿರುವ ಸಾಹಸಿ ಮಾನವ " (ಮಂಗೇಶ ನಾಡಕರ್ಣಿ)

ಇದು ಇಂದಿನ ಮಾನವನ ಆತ್ಮವಿಶ್ವಾಸವನ್ನು ಮತ್ತು ಒಂದುರೀತಿಯ ಹೆಮ್ಮೆಯನ್ನು ತೋರುತ್ತಿದೆ. ಹೋಲ್ದಾಲಿನಲ್ಲಿ ದಶದಿಕ್ಕುಗಳನು ಹಿಡಿದಿರುವ ವಿಚಾರ ತೀರ ನವೀನವಾದುದು.

ಮೊದಲೇ ಹೇಳಿದಂತೆ ಮತ್ತು ಮೇಲೆ ತೋರಿಸಿದಂತೆ, ಕವಿಯು ಈ ಪ್ರತಿಮೆಗಳನ್ನು ನಿರ್ಮಿಸುತ್ತಾನೆ. ಕೆಲವು ಸಲ ಇಂತಹ ಪ್ರತಿಮೆ-ಗಳ ಅರ್ಥವೇ ಜನರಿಗೆ ಆಗಲಿಕ್ಕಿಲ್ಲ. ಇದರ ಮೂಲಕ ಕವಿಯನ್ನು ಎರಡು ರೀತಿಯ ಸಮಸ್ಯೆಗಳು ಎದುರಿಸುತ್ತವೆ: ಮೊದಲನೆಯದಾಗಿ, ಕೆಲವು ಸಲ ಕವಿಗೆ ತನ ಸಹಜಜ್ಞಾನದ (intuition) ಆಳವು ಗೊತ್ತಾಗುವುದಿಲ್ಲ. ಇದರಿಂದ ಪ್ರತಿಮೆಯ ಬದಲು ಆಳವಿರದ ಹೋಲಿಕೆಯು ಕಂಡುಬರಬಹುದು. ಇದು ಇಂದಿನ ಕವಿಗೆ ಮುಖ್ಯ-ವಾದದ್ದು; ಯಾಕೆಂದರೆ ಆವನ ಕಾವ್ಯದಲ್ಲಿ ಪ್ರತಿಮೆಗಳು ಮುಖ್ಯವಾದ ಪಾತ್ರವನ್ನು ವಹಿಸುತ್ತವೆ ಅವುಗಳಲ್ಲಿ ತೀಕ್ಷ್ಣತೆಯನ್ನು (intensity) ತರುವಾಗ, ಕವಿಯು ಅಸಫಲನಾಗಿ ದೋಷಯುಕ್ತ ರೂಪಕ-ಉಪಮೆಗಳನ್ನು ರಚಿಸಿದರೆ, ಕಾವ್ಯವು ಉತ್ತಮ ತರಗತಿಯದಾಗು-ವುದಿಲ್ಲ. ಎರಡನೆಯದಾಗಿ, ಇಂದಿನ ಯುಗವು ಬಹಳೇ ಪರಿವರ್ತನ ಶೀಲವಾಗಿರುವುದರಿಂದ, ಇಂದು ಪ್ರತಿಮೆಗಾಗಿ ಉಪಯೋಗಿಸುವ ವಸ್ತುಗಳು ನಾಳೆ ಅಸ್ತಿತ್ವದಲ್ಲಿಯೇ ಉಳಿಯಲಿಕ್ಕಿಲ್ಲ.

ಇದಲ್ಲದೆ ಬೇರೆ ಸಮಸ್ಯೆಗಳೂ ಅವನನ್ನು ಎದುರಿಸುತ್ತವೆ. ಮೊದಲು ಕವಿತೆಗಳ ಮಾಧ್ಯಮದಲ್ಲಿ ವೈವಿಧ್ಯ ಕಂಡುಬರುತ್ತಿತ್ತು. ಆದರೆ ಇಂದಿನ ಕಾವ್ಯವು ಒಂದು ವಿಶಿಷ್ಟ ಮಾಧ್ಯಮವನ್ನು ತಾಳಿದೆ. ಅದರ ಮಾಧ್ಯಮವು ಅರ್ಧ-ಧ್ಯಾನಪರ, ಅರ್ಧ-ಭಾವಪೂರ್ಣ (Semi-lyrical, semi-contemplative) ಆಗಿದೆ. ಈ ಕಾರಣದಿಂದ ಇಂದಿನ ಕಾವ್ಯದ ಮಾಧ್ಯಮವು ಮರ್ಯಾದಿತವಾಗಿದೆ. ಹೀಗಿದ್ದರೂ ಪ್ರತಿಯೊಂದು ವಸ್ತುವಿನ ಬಗ್ಗೆ ಕವಿಯು ಪ್ರತಿಮೆಯನ್ನು ನಿರ್ಮಿಸಲು ಇಚ್ಛಿಸುತ್ತಾನೆ. ಆದ್ದರಿಂದ ಪ್ರತಿಮಾಸೃಷ್ಟಿಯ ಕ್ಷೇತ್ರವು ವಿಶಾಲವಾಗಿದೆ. ಮಾಧ್ಯಮದ ಮರ್ಯಾದೆ, ಪ್ರತಿಮಾ-ಸೃಷ್ಟಿಯ ವೈಶಾಲ್ಯ, ಇವುಗಳಿಂದ ಇಂದಿನ ಕಾವ್ಯದ ತಂತ್ರದ ಮೇಲೆ ಭಾರ ಬಿದ್ದಿದೆ. ಇಂದಿನ ಕವಿಗೆ ಅಲಂಕಾರಿಕ ಭಾಷೆ, ಕೃತ್ರಿಮವಾದ ಹಾಗೂ ಒಂದೇ ಬಗೆಯ ಶೈಲಿ ಬೇಡವಾಗಿದೆ. ತನ್ನ ತಂತ್ರದ ನಿಯಮಗಳನ್ನು ಅನುಸರಿಸಿ ಕವಿತೆಯ ಅರ್ಥವನ್ನು ಪ್ರತಿಮೆಗಳಲ್ಲಿ ಹುದುಗಿಸಿ ಕವಿಯು ಕಾವ್ಯವನ್ನು ರಚಿಸುತ್ತಾನೆ. ಈ ರೀತಿ ಅನುಸರಿಸುವಾಗ, ಒಂದು ಬಗೆಯ ಒತ್ತಾಯಕ್ಕೊಳಪಟ್ಟಿರು-ತ್ತಾನೆ. ಇದರಿಂದ ತಾನು ರಚಿಸಿದ ಪ್ರತಿಮೆಗಳನ್ನು ಜೋಡಿಸುವ ಒಂದು ಸೂತ್ರದ ಕಡೆಗಾಗಲಿ, ವಾದಸರಣಿಯ ಕಡೆಗಾಗಲಿ, ವಿಶೇಷ ಲಕ್ಷ್ಯಕೊಡುವುದಿಲ್ಲ. ಈ ಕಾರಣದಿಂದ ಕಾವ್ಯತಂತ್ರದ ಮೇಲೆ ಹೆಚ್ಚಿನ ಭಾರ ಬಿದ್ದಂತಾಗಿದೆ. ಈ ಒತ್ತಡ (Compulsion) ವನ್ನು ನಾವು ಎರಡು ಕಡೆಗಳಲ್ಲಿ ನೋಡಬಹುದು: ೧) ಉತ್ಕಟ ಪ್ರತಿಮೆ-ಗಳಲ್ಲಿ ೨) ಪ್ರತಿಮೆಗಳ ಸಂಚಯದಲ್ಲಿ.

> " ಕುರುಡುಧರ್ಮಕ್ಕೆ ಸ್ಮಾರಕವು ನಿಂತಂತಾಗೆ
> ನ್ಯೈಮರೆತು ನಿಂತಾಗ ಗೂಗೆ ಹಾಡಿತ್ತು " (ಬೇಂದ್ರೆ)

ಪುಟ್ಟ ವಿಧವೆಯು ನಿಂತಾಗ ಹೇಗೆ ಕಾಣುತ್ತಾಳೆ ಎಂದು ಕವಿ ತನ್ನನ್ನು ಪ್ರಶ್ನಿಸಿದಾಗ, ಅವನೆದುರು ಕುರುಡುನಂಬುಗೆಗಳ ಸ್ಮಾರಕದ ಸ್ತಂಭವೇ ನಿಂತಂತೆ ಕಾಣುತ್ತದೆ. ಇದನ್ನು ನೆನೆದಾಗ ಕವಿಯ ಮುಂದೆ ಕತ್ತಲೆ ಕವಿದಂತಾಗುತ್ತದೆ. ಇದನ್ನೇ 'ಗೂಗೆ ಹಾಡಿತ್ತು' ಎಂಬ ಮಾತಿನಿಂದ ಕವಿಗಳ ಸ್ಪಷ್ಟಪಡಿಸಿದ್ದಾರೆ. ಇಲ್ಲಿ ಅಪಶಕುನದ ಧ್ವನಿಯೂ ಇದೆ.

> " ಪೆಟ್ರೋಲಿನದೇ ಪ್ರಸಾದ ತೀರ್ಥ
> ಕಲ್ಲಿದ್ದಲಿ ಲೋಬಾನ;
> ಮಿಂಚಿನ ಪಂಚಾರತಿ, ಅಣುವಾಯುಧ;
> ಗ್ರಾಮೋಫೋನಿನ ಗಾನ;
> ವೈಜ್ಞಾನಿಕ ಸೂತ್ರಗಳೇ ಮಂತ್ರಃ
> ವ್ಯಾಪಕವಿದು ತಂತ್ರ
> ಇಂದಿನ ಯುಗಕಿದೊ ಕಲಿಯೇ ಗುರುವು
> ಎಂಥ ತಿರುವುಮುರುವು ? " (ವಿನಾಯಕ)

ಇಲ್ಲಿ ಪ್ರತಿಮೆಗಳ ಸಂಚಯವಿದೆ. ಪ್ರತಿಯೊಂದು ಪ್ರತಿಮೆಯೂ ಒಂದು ವಿಚಾರವನ್ನು ಸೂಚಿಸುತ್ತದೆ. ಈ ರೀತಿಯಾದ ಪ್ರತಿಮೆ-ಗಳು ಇಂದಿನ ಕಾವ್ಯದಲ್ಲಿ ಕಂಡುಬರುತ್ತಿವೆ.

ಬ್ರಾಡ್ಲೆ ಎಂಬ ಆಂಗ್ಲ ವಿಮರ್ಶಕನು ಕವಿತೆಯ ಶ್ರೇಷ್ಠತೆಯನ್ನು ಕುರಿತು ಹೀಗೆ ಬರೆದಿದ್ದಾನೆ:—"ಕವಿತೆಯು ಶ್ರೇಷ್ಠವಾಗಿರಬೇಕಾದರೆ, ಒಂದು ಅರ್ಥದಲ್ಲಿ ಅದು ವರ್ತಮಾನಜೀವನಕ್ಕೆ ಸಂಬಂಧಿಸಿದ್ದಿರ-ಬೇಕು. ಕಾವ್ಯದ ವಿಷಯವೇನೇ ಇರಲಿ, ಅದು ಹುಟ್ಟುವ ಮನ ಹಾಗೂ ಅದು ಹೋಗಿ ತಟ್ಟುವ ಮನಗಳ ನಡುವೆ ಒಂದು ಜೀವಂತ-ವಾದ ಸಂಬಂಧವನ್ನು ತರಬೇಕು. ಅದರ ದೇಹವೆಲ್ಲಿಯೋ ಇರಲಿ, ಆದರ ಆತ್ಮ ಮಾತ್ರ ಈಗ ಇಲ್ಲಿಯೇ ಇರಬೇಕು." ಇಲ್ಲಿ ನಾವು ಮೆಥ್ಯೂ ಆರ್ನಾಲ್ಡನ ಮಾತನ್ನು ನೆನೆಯಬಹುದು: "ಇಂದಿನ ಅಪಾರವಾದ, ಪರಿವರ್ತನಶೀಲವಾದ ಹಾಗೂ ವಿಭ್ರಮೆಗೊಂಡಿಹ ದೃಶ್ಯಗಳ ಸಮ್ಮುಖದಲ್ಲಿ, ತಾಳ್ಮೆಯಿಲ್ಲದ ಕೆರಳಿದ ಮನಸ್ಸಿನ ತಾಪವನ್ನು ನಾವು ಅನುಭವಿಸುತ್ತೇವೆ. ಇದು ಸಂತತವಾಗಿ ನಮ್ಮ ಜಿಜ್ಞಾಸೆಯನ್ನು ಕೆರಳಿಸುತ್ತದೆ, ನಮ್ಮ ತಿಳಿವಳಿಕೆಗೆ ಭಂಗತರು-ತ್ತದೆ." ಈ ಎರಡೂ ಉಕ್ತಿಗಳನ್ನು ನೋಡಿದಾಗ, ಒಂದರಲ್ಲಿ ಆವಶ್ಯ-ಕತೆ ಹಾಗೂ ಇನ್ನೊಂದರಲ್ಲಿ ಸಮಸ್ಯೆಯು ಕಂಡುಬರುತ್ತದೆ. ಒಂದು ಕವಿತೆಯು ವರ್ತಮಾನಕ್ಕೆ ಸಂಬಂಧಿಸಿದ್ದು ಆ ಯುಗದ ತಿಳಿವಳಿಕೆ-ಯನ್ನು ಸಾರಬೇಕು. 'ಇಂದಿನ ದೃಶ್ಯವು ವಿಭ್ರಮೆಗೊಂಡದ್ದಿದ್ದು ನಮ್ಮ ತಿಳಿವಳಿಕೆಗೆ ಭಂಗ ತರುವಂಥದಿದೆ' ಎಂಬ ಮಾತು ನೂರಾರು ವರುಷಗಳ ಹಿಂದೆ ಮೆಥ್ಯೂ ಆರ್ನಾಲ್ಡ್ ಹೇಳಿದ್ದನು. ಆದರೆ ಇಂದಿನ ಪರಿಸ್ಥಿತಿಯು ಹೆಚ್ಚು ದಿಗ್ಭ್ರಮೆಗೊಳಿಸುವವಂತಹದಿದೆ. ವೈಜ್ಞಾನಿಕ ಶೋಧ ಮತ್ತು ಸಿದ್ಧಾಂತಗಳು ಈಗ ದಿನದಿನಕ್ಕೆ ಹೆಚ್ಚಾಗುತ್ತ ನಡೆದಿದ್ದರೂ ಕೂಡ ದೃಷ್ಟಿವೈಶಾಲ್ಯ, ಶಾಂತಿಗಳನ್ನು ತರುವ ಸಂಯೋಗವನ್ನು ಪಡೆದಿಲ್ಲ. ಬದಲಾವಣೆಯ ಗತಿಯು ತೀವ್ರವಾಗಿದೆ ಯಲ್ಲದೆ, ವಾಹನ ಸೌಕರ್ಯದ ಹೊಸ ಹೊಸ ಸಾಧನಗಳೆಲ್ಲ ಕವಿಯ ಮೇಲೆ ತಮ್ಮ ವಿಕಾಸದ ಪರಿಣಾಮವನ್ನುಂಟುಮಾಡುತ್ತವೆ.

ಕಾವ್ಯವು ಯಾವ ಮನಸ್ಸಿನಿಂದ ಹುಟ್ಟುತ್ತದೆಯೋ, ಮತ್ತು ಯಾವ ಮನಗಳಿಗೆ ಹೋಗಿ ಮುಟ್ಟುತ್ತದೆಯೋ, ಅವುಗಳಲ್ಲಿ ಒಂದು ಜೀವಂತವಾದ ಸಂಬಂಧವನ್ನು ತರಬೇಕಾಗಿದ್ದರೆ, ಅದು ಜೀವಂತ ಪ್ರತಿಮೆಗಳ ರೂಪದಲ್ಲಿರುವ ತನ್ನ ಸತ್ಯದ ಸನ್ಮಾರ್ಗದಿಂದಲೇ ಸಾಧಿ-ಸಬೇಕು. ಕವಿ ಹಾಗೂ ವಾಚಕ ಇವರಲ್ಲಿ ಜೀವಂತ ಸಂಬಂಧವನ್ನು ನಿರ್ಮಿಸುವಂತಹ ವಾಸ್ತವಿಕತೆಯ ಮಾದರಿಯೇ ವಿಲಕ್ಷಣ, ತೀವ್ರ, ಪರಿವರ್ತನಶೀಲವಾಗಿದ್ದರೆ, ಪ್ರತಿಯೊಂದು ಕವಿತೆಯ ಪ್ರತಿಮೆಗಳ ಗುಣದಲ್ಲಿ ವಿಲಕ್ಷಣತೆ ಹಾಗೂ ಮಾದರಿಯಲ್ಲಿ ಸಂಕೀರ್ಣತೆಯನ್ನು ನಿರೀಕ್ಷಿಸಬಹುದು. ಹೊಸ ವಸ್ತುಗಳ ಶೋಧನೆಯು ಜೀವನದಲ್ಲಿ ಮಹತ್ತ್ವವನ್ನು ಪಡೆದಾಗ, ಕಾವ್ಯವು ಪ್ರತಿಮಾನಿಷ್ಠವಾಗುವುದು ಸ್ವಾಭಾವಿಕವಾಗಿದೆ. ಆದರೆ ಇದು ಒಂದು ಪ್ರಮಾಣದ, ನವೀನತೆಯ ಅಥವಾ ಸಂಕೀರ್ಣತೆಯ ಮಾತಲ್ಲ. ಪ್ರತಿಮೆಗಳ ಪ್ರಭುತ್ತ್ವವನ್ನು ಸಾಧಿಸುವಾಗ ಕವಿಯು ಇಂದಿನ ನೋಟವನ್ನು ಸ್ಪಷ್ಟೀಕರಿಸಲು ಹಾಗೂ ನಿಯಂತ್ರಿಸಲು ಪ್ರಯತ್ನಿಸುತ್ತಾನೆ. ರೂಪಕವು ಮಾನಸಿಕ ಭಾರ ಅಥವಾ ಉದ್ರೇಕದ ಸಹಜಭಾಷೆಯಾಗಿದೆ. ಅದರ ನಿರೂ-ಪಣೆಯು ಸಂಕ್ಷೇಪವಾಗಿದ್ದರೂ ಅರ್ಥವು ಆಳವಾಗಿರುತ್ತದೆ. ಯಾವ

ಭಯಾನಕ ಸ್ಥಿತಿಗಳ ಮಧ್ಯದಲ್ಲಿ ಮೈತಾಳಿತೊ, ಆ ಸ್ಥಿತಿಗಳನ್ನು ನಾವೂ ಅನುಭವಿಸುವಂತೆ ಮಾಡುತ್ತದೆ. ಪ್ರತಿಮೆಗಳೆಂದರೆ ಜೀವನದ ಅತ್ಯುಚ್ಚ ಬಿಕ್ಕಟ್ಟುಗಳ ಬಡಿತಗಳು. ಕವಿಯು ಈ ಬಡಿತಗಳನ್ನು ವೈಶಿಷ್ಟ್ಯಪೂರ್ಣವಾಗಿ ಸಾಧಿಸಿ, ಅವನ್ನೇ ಸಾಮಾನ್ಯರ ಹೃದಯಕ್ಕೆ ಬೆಳಕನ್ನೂ ಹಾಗೂ ಸಮಾಧಾನವನ್ನೂ ಕೊಡುವಂತೆ ಉಪಯೋಗಿಸುತ್ತಾನೆ.

ಈಗ ನಾವು ಒಂದು ಇಂಗ್ಲೀಷ್ ಕತೆಯನ್ನು ನೋಡೋಣ:— ಪರ್‌ಸಿಯುಸ್ (Perseus) ಎಂಬವನು ಝೀಅಸ್ (Zeus) ಹಾಗೂ ಡೇನಇ (Danae) ಇವರ ಮಗ. ಒಮ್ಮೆ ಪೊಲಿಡಿಕ್ಟಸ್ (Polydectes) ಎಂಬವನು ಪರ್‌ಸಿಯುಸ್ ಹಾಗೂ ಅವನ ತಾಯಿ ಡೇನಇ ಇವರಿಬ್ಬರನ್ನೂ ಕಂಡನು. ಆಗ ಡೇನಇಳನ್ನು ಮೋಹಿಸಿದನು. ಪರ್‌ಸಿಯುಸ್‌ನಿಂದ ಉಂಟಾಗುವ ಅಡ್ಡಿಯನ್ನು ದೂರಮಾಡಲು, ಅವನನ್ನು, ಮೆಡ್ಯೂಸಾ (Medusa) ಎಂಬ ದೇವತೆಯ ತಲೆಯನ್ನು ತೆಗೆದುಕೊಂಡು ಬರಲು ಕಳುಹಿದನು. ಈ ವಿಚಿತ್ರ ದೇವತೆಯನ್ನು ನೋಡಿದವರೆಲ್ಲ ತತ್‌ಕ್ಷಣ ಕಲ್ಲಾಗುತ್ತಿದ್ದರು. ಅವಳನ್ನು ನೋಡಿ ಪರ್‌ಸಿಯುಸ್ ಕಲ್ಲಾದರೆ, ತನ್ನ ಪ್ರಣಯಕ್ಕೆ ಆತಂಕ ಬರುವುದಿಲ್ಲವೆಂದು ಊಹಿಸಿದನು. ಆದರೆ ದೈವಲೀಲೆ ವಿಚಿತ್ರವಾದುದು. ದೇವತೆಗಳು ಅವನಿಗೆ ಸಹಾಯ ಮಾಡಿದರು. ಫ್ಲ್ಯುಟೋ (Phuto) ಎಂಬ ದೇವನು ಪರ್‌ಸಿಯುಸ್‌ನಿಗೆ ಒಂದು ಶಿರಸ್ತ್ರಾಣವನ್ನು ಕೊಟ್ಟನು. ಇದರಿಂದ ಅವನಿಗೆ ಅದೃಶ್ಯನಾಗಿ ಚಲಿಸಲು ಬರುತ್ತಿತ್ತು. ಅಥೇನಿ (Athene) ಎಂಬ ದೇವತೆಯು ಕನ್ನಡಿಯಂತೆ ಹೊಳೆಯುವ ಒಂದು ಢಾಲನ್ನು ಅವನಿಗೆ ದಯೆಪಾಲಿಸಿದಳು. ಇದರಿಂದ ಮೆಡೂಸಾಳ ಕಡೆಗೆ ನೇರವಾಗಿ ನೋಡದೆಯೆ ಆ ಢಾಲಿನಲ್ಲಿ ನೋಡಲು ಬರುತ್ತಿತ್ತು. ಹರ್ಮಿಸ್ (Hermes) ಎಂಬ ದೇವನು ಅವನ್ನ ಕಾಲುಗಳಿಗೆ ರೆಕ್ಕೆಯನ್ನು ಕೊಟ್ಟನು. ಇವೆಲ್ಲವುಗಳ ಸಹಾಯದಿಂದ ಮೆಡ್ಯೂಸಾಳ ಕಣ್ಣು ತಪ್ಪಿಸಿ, ಆ ಢಾಲಿನಲ್ಲಿ ಅವಳ ಪ್ರತಿಬಿಂಬವನ್ನು ನೋಡಿ, ಖಡ್ಗದಿಂದ ಅವಕ್ಕೆ ಇರಿದನು. ಇದರಿಂದ ಅವಳು ಮೃತಳಾದಳು ...ಎಂದು ಮುಂತಾಗಿದೆ ಕಥೆ. ನಮ್ಮ ಅವಶ್ಯಕತೆಗೆ ಇಷ್ಟೇ ಕಥೆಯ ಭಾಗ ಸಾಕು.

ಪರ್‌ಸಿಯುಸ್ ಎಂದರೆ ಇಂದಿನ ಕವಿ ಇದ್ದಂತೆ. ಮೆಡ್ಯೂಸಾ ಎಂದರೆ ಇಂದಿನ ಭಯಾನಕವಾದ ವಾಸ್ತವಿಕ ಜೀವನದ ಪರಿಸರವಿದ್ದಂತೆ. ಇಂದಿನ ಕಾವ್ಯಪ್ರತಿಮೆ ಪರ್‌ಸಿಯುಸ್‌ನ ಢಾಲು ಇದ್ದಂತೆ. ಕಲ್ಪಕತೆಯು ಕವಿಯ ಖಡ್ಗವಿದ್ದಂತೆ. ಇಂದಿನ ಕವಿಯು ಕಾವ್ಯಪ್ರತಿಮೆಯನ್ನು ಢಾಲಿನಂತೆ ಉಪಯೋಗಿಸಿ, ವಾಸ್ತವಿಕತೆಯನ್ನು ಅದರಲ್ಲಿ ಕೇಂದ್ರೀಕರಿಸಿ, ಕಲ್ಪಕತೆಯ ಖಡ್ಗದಿರಿತವನ್ನು ಸಾಧಿಸುತ್ತಾನೆ. ಇದೇ ಇಂದಿನ ಪ್ರತಿಮೆಯ ವೈಶಿಷ್ಟ್ಯ. ಈ ಕಥೆಯಲ್ಲಿ ಹೊಸ ಅರ್ಥವನ್ನು ಕಂಡು ಸಿ. ಡೇ. ಲ್ಯೂಯಿಸ್‌ರು "The Image" ಎಂಬ ಕವಿತೆಯನ್ನು ಬರೆದಿದ್ದಾರೆ. ಆ ಕವಿತೆಯ ಕೊನೆಯ ಸಾಲು ಇಂತಿದೆ:—

"Let the shield take that image, the image shield you"

ಕಾವ್ಯಪ್ರತಿಮೆ ವಾಸ್ತವದಿಂದ ಹಿಂತೆಗೆದ ಒಂದು ಹೆಜ್ಜೆ. ವಾಸ್ತವದಲ್ಲಿ ಒಂದು ಹಿಡಿತವನ್ನು ಸಾಧಿಸಲು ಇದು ಉತ್ತಮ ಮಾರ್ಗ. ಪ್ರತಿಯೊಂದು ಸಫಲವಾದ ಕಾವ್ಯಪ್ರತಿಮೆಯು ವಾಸ್ತವದೊಡನೆ ಸಫಲವಾಗಿ ಒಂದುಗೂಡಿದ ಸಂಕೇತವಾಗಿದೆ. ಪ್ರತಿಮೆಯು ವಿಫಲವಾದರೆ, ಅದರ ದೋಷದ ಬೀಜವನ್ನು ಲಾಕ್ಷಣಿಕವಾಗಿ ಕಂಡು ಹಿಡಿಯಬಹುದು. ಸಂದರ್ಭಕ್ಕೆ ಹೊಂದಿಕೆಯಿಲ್ಲದ, ಅಥವಾ ಅತಿಶಕ್ತಿಯುತವಾದ, ಅತಿದುರ್ಬಲವಾದ ಕಾವ್ಯಪ್ರತಿಮೆಯು ವಿಫಲವಾಗುತ್ತದೆ. ಆಧುನಿಕ ಕವಿಯ ಮುಂದಿದ್ದ ಸಮಸ್ಯೆಯನ್ನು ಮೇಲೆ ಉದ್ಧರಿಸಿದಂತೆ ಮೆಥ್ಯೂ ಆರ್ನಾಲ್ಡರೇ ಉದ್ಧರಿಸಿದ್ದಾರೆ. ರಿಲ್ಕನು ಕವಿಯ ಗುಣಗಳಲ್ಲಿ ತಾಳ್ಮೆಗೆ ಪ್ರಾಧಾನ್ಯವನ್ನು ಕೊಟ್ಟಿದ್ದಾನೆ. ಇಂದಿನ ಕವಿಗೆ ಹೆಚ್ಚು ತಾಳ್ಮೆಯ ಆವಶ್ಯಕತೆಯಿರುತ್ತದೆ; ಯಾಕೆಂದರೆ ಇಂದು ನಮ್ಮ ಜಿಜ್ಞಾಸೆಯನ್ನು ಕೆರಳಿಸುವಂತಹ ಹಾಗೂ ನಮ್ಮಲ್ಲಿದ್ದ ಶೀಘ್ರಕೋಪದ ಮೂಲವನ್ನು ಕೆರಳಿಸುವಂತಹ ವಸ್ತುಗಳು ಬಹಳ ಇವೆ. ಕವಿಯು ಪ್ರತಿಯೊಂದರಲ್ಲಿ ಅರ್ಥವನ್ನು ಕಾಣಲು ಪ್ರಯತ್ನಿಸುತ್ತಾನೆ. ಅಪಕ್ವವಾದ ಹಣ್ಣುಗಳನ್ನು ಎತ್ತುವುದು ಇಂದಿನ ಕವಿಯ ತಾತ್ಕಾಲಿಕವಾದ ಆಕರ್ಷಣೆಯಾಗಿರುತ್ತದೆ. ಸುತ್ತಲೂ ಹೊಳೆಯುವ ವಸ್ತುಗಳು ಪ್ರತಿಮೆಗಳ ಕತ್ತ್ವವಾಗುವುದಕ್ಕಿಂತ ಮೊದಲೇ ಕವಿ ಅವನ್ನೇ ಎತ್ತಿಬಿಡುತ್ತಾನೆ.

ಯಾವುದೇ ರೀತಿಯ ಕೃತ್ಯ, ಸಂಕಲ್ಪಶಕ್ತಿ ಮುಂತಾದುವುಗಳಿಂದ ಕವಿಯು ಆಧುನಿಕನಾಗಲಾರ. ನವ್ಯತೆಯನ್ನು ಶೈಲಿಯಲ್ಲಿ, ಪ್ರತಿಮೆಯಲ್ಲಿ ಅಥವಾ ಕಾವ್ಯವಸ್ತುವಿನಲ್ಲಿ ಪ್ರದರ್ಶಿಸಬಹುದು. ಗತಕಾಲದ ಕವಿಗಳ ಕಾವ್ಯವನ್ನು ನೋಡಿದಾಗ, ಒಬ್ಬ ಕವಿಯ ವಾಕ್ಸಂಪ್ರದಾಯ ಅವನಿಗಿಂತಲೂ ಹಿಂದಿನ ಕಾಲದ ಕವಿಗಳಗಿಂತಲೂ ಎಷ್ಟು ಭಿನ್ನವಾಗಿದೆ ಮತ್ತು ಅವನ ಸಮಕಾಲೀನ ಕವಿಗಳ ವಾಕ್ಸಂಪ್ರದಾಯಗಳೊಡನೆ ಎಷ್ಟು ಹೋಲುತ್ತಿದೆ ಎಂಬುದು ಗೊತ್ತಾಗುತ್ತದೆ. ಯಾವುದೇ ಕಾಲದಲ್ಲಿ ಹುಟ್ಟಿದಂತಹ ಕಾವ್ಯದ ವಾಕ್ಸಂಪ್ರದಾಯವನ್ನು ನೋಡಿದಾಗ ಅಲ್ಲಿ, ಸಮಕಾಲೀನ ತಾಳಬದ್ಧತೆ ಅಥವಾ ದೈನಂದಿನ ಮಾತಿನ ಲಕ್ಷಣಗಳ ಸಾಮ್ಯವು ಕಂಡುಬರುತ್ತದೆ. ಕೆಲವು ಕವಿಗಳು ತಮ್ಮ ಪ್ರತಿಮೆಯ ಆಯ್ಕೆ ಮತ್ತು ಉಪಯೋಗದಲ್ಲಿ ಸ್ವಯಂಕಲ್ಪಿತರಾಗಿದ್ದು, ಇನ್ನು ಕೆಲವರು ಅನುಕರಣೆಯಲ್ಲಿ ತೊಡಗಿದ್ದು ಕಂಡುಬರುತ್ತದೆ. ಕೆಲವು ಕವಿಗಳು ಹಳೆಯ ಕಥೆ ಮತ್ತು ಕಾವ್ಯವಸ್ತುಗಳನ್ನು ತೆಗೆದುಕೊಂಡು, ಇಂದಿನ ಪರಿಸ್ಥಿತಿಗನುಸರಿಸಿ ಹೊಸ ಅರ್ಥವನ್ನು ಕಲ್ಪಿಸಿ, ಹೊಸ ಕಾವ್ಯವಸ್ತುಗಳನ್ನು ನಿರ್ಮಿಸಬಹುದು. ಇನ್ನು ಕೆಲವರು ಹಳೆಯ ವಸ್ತುಗಳಿಗೆ ಆಕರ್ಷಕ ರೂಪವನ್ನು ಕೊಟ್ಟು ಕಾವ್ಯ ನಿರ್ಮಿಸಬಹುದು. ಮತ್ತೆ ಕೆಲವರು ಹೊಸ ವಸ್ತುಗಳನ್ನು ತೆಗೆದುಕೊಂಡು ನಿರೂಪಿಸುವಲ್ಲಿ ವಿಫಲರಾಗಬಹುದು. ಆದರೆ ಕವಿಗೆ ಮುಖ್ಯವಾದದ್ದು ಚೇತನ; ಅದೇ ಜೀವನಶಕ್ತಿ. ಅತ್ಯುಚ್ಚ ಚೇತನವುಳ್ಳ ಕವಿಯೇ ಇಂದಿನ ಜಗತ್ತಿನೊಡನೆ ಹೋರಾಡಿ ಅದನ್ನು

- ಸಂಕಲ್ಪಿತ ರೂಪದಲ್ಲಿ ಚಿತ್ರಿಸಬಹುದು. ಇಂಥವನೇ ನಿಜವಾದ ಆಧುನಿಕ ಕವಿ. ಅವನ ಕಾವ್ಯವು ಒಂದು ವಿಶಿಷ್ಟ ಜಗದಲ್ಲಿ ರೂಪ ಗೊಳ್ಳುತ್ತಿರುವ ಮಾದರಿಯನ್ನು ಚಿತ್ರಿಸುತ್ತದೆ. ಇದರ ಮೂಲಕ ಅವನ ಕಾವ್ಯವು ಬರಲಿರುವ ಪೀಳಿಗೆಗೂ ಉಪಯೋಗವಾಗುತ್ತದೆ, ಅಲ್ಲದೆ ಮುಂದೆ ಹೆಚ್ಚಿನ ಅರ್ಥವನ್ನು ಪಡೆಯಬಹುದು. ಆದರೆ ಕವಿಯ ಈ ಚೇತನಶಕ್ತಿಯನ್ನು ಪೈಲವಾನನ ಸ್ನಾಯುಪಿಂಡದಂತೆ ಕೇವಲ ಸಂಕಲ್ಪಶಕ್ತಿ ಹಾಗೂ ಪ್ರಯತ್ನಗಳಿಂದ ಪಡೆಯಲು ಸಾಧ್ಯ-ವಿಲ್ಲ. ಆದುದರಿಂದ ಕೇವಲ ಸಂಕಲ್ಪಶಕ್ತಿಯಿಂದ ಯಾವ ಕವಿಯೂ ಆಧುನಿಕನಾಗಲಾರ.

ಕವಿಯು ಇಂದಿನ ವಾಕ್ಸಂಪ್ರದಾಯವನ್ನು ತನ್ನ ಕಾವ್ಯದಲ್ಲಿ ಉಪಯೋಗಿಸಲು ಪ್ರಯತ್ನಿಸುತ್ತಾನೆ. ಛಂದೋರಹಿತವಾದ ಪದ್ಯ-ಗಳನ್ನು ಬರೆಯುವುದರಿಂದಾಗಲಿ, ಅಥವಾ ಯಂತ್ರೋಪಕರಣಗಳ ಬಗ್ಗೆ ಪ್ರತಿಮೆಗಳನ್ನು ಬರೆದು ತನ್ನ ಕಾವ್ಯದಲ್ಲಿ ತುಂಬುವುದರಿಂದಾ-ಗಲಿ, ಕವಿಯು ಆಧುನಿಕನಾಗಲಾರ. ಇಂದಿನ ಅಪಾರ, ಪರಿವರ್ತನ ಶೀಲ ಹಾಗೂ ವಿಭ್ರಮೆಗೊಂಡ ನೋಟವು ಆಧುನಿಕ ಕಾವ್ಯದಲ್ಲಿ ತಾನೇ ಹೊರಹೊಮ್ಮಬೇಕು. ಯಾವ ಕವಿಯು ನಮ್ಮ ಜೀವನವನ್ನು ಭೇದಿಸಿ ನಮ್ಮ ನೈತಿಕ ಹಾಗೂ ಸಾಂಸ್ಕೃತಿಕ ಮೂಲ್ಯಗಳನ್ನು ಸೂಕ್ಷ್ಮವಾಗಿ ಗ್ರಹಿಸಿ, ನಮ್ಮ ಜೀವನದ ಪಡಿನೆಳಲನ್ನು ಕಾವ್ಯದಲ್ಲಿ ಚಿತ್ರಿಸಿರುವನೋ ಅವನ ಯೋಗ್ಯತೆಯು ನಮಗಿಂತಲೂ ಮುಂಬರಲಿರುವ ಪೀಳಿಗೆಗೆ ಹೆಚ್ಚು ಗೊತ್ತಾಗುತ್ತದೆ.

ಇಲ್ಲಿಯ ವರೆಗೆ ಪ್ರತಿಮಾನಿಷ್ಠ ಕಾವ್ಯದ ವೈಶಿಷ್ಟ್ಯ ಹಾಗೂ ಅದರ ನವ್ಯತೆಯ ಬಗ್ಗೆ ಸೋದಾಹರಣೆಗಳಿಂದ ವಿಚಾರಿಸಿದೆವು. ಇನ್ನು ಕವಿಯ ಮುಂದೆ ಹೊಸ ಪ್ರತಿಮೆಗಳನ್ನು ನಿರ್ಮಿಸುವಾಗ ಎದುರಾಗು-ವಂತಹ ಸಮಸ್ಯೆಗಳ ಬಗ್ಗೆ ವಿಚಾರಿಸುವ:

೧) ಇಂದಿನ ಕಾಲವು ನಿತ್ಯ ಪರಿವರ್ತನಶೀಲವಾಗಿರವುದು ರಿಂದ, ಇಂದು ಪ್ರತಿಮೆಗಳಿಗೆ ವಸ್ತುಗಳಾದ ವಿಷಯಗಳು ನಾಳೆ ಬಳಕೆ ತಪ್ಪಿ, ಅರ್ಥಹೀನವಾಗಬಹುದು.

೨) ಇಂತಹ ವಿಷಯಗಳು ಅಪರಿಚಿತನಾಗಿರುವುದರಿಂದ, ಭಾವಪ್ರೇರಿತ ಸಂಬಂಧಗಳು ಕ್ಷೀಣಿಸಿ, ಕಾವ್ಯಮಯಪ್ರಭಾವಕ್ಕೆ ವಿಧೇಯಕವಾಗಲಿಕ್ಕಿಲ್ಲ.

೩) ಪೂರ್ವದಲ್ಲಿದ್ದ ಗೀತನಾಟಕ, ಕಥನಕವನ, ಚಂಪೂಕಾವ್ಯ ಮುಂತಾದ ಪ್ರಖ್ಯಾತ ಮಾಧ್ಯಮಗಳು, ಆಧುನಿಕ ಕವಿಗೆ ಇಲ್ಲ. ಇಂದಿನ ವೈವಿಧ್ಯಪೂರ್ಣವಾದ ಕಾವ್ಯಪ್ರತಿಮೆಯು ಅಸಂಖ್ಯಾತ ವಸ್ತುಗಳಿಗೆ ಹಳೆಯ ಮಾಧ್ಯಮಗಳು ಕ್ಷೇತ್ರವನ್ನೊದಗಿಸಬಹುದಾಗಿತ್ತು.

೪) ಕಾವ್ಯಮಯ ವಾದಸರಣಿಯನ್ನು ಒತ್ತಿ ಹೇಳಲು ಹಾಗೂ ಸ್ಪಷ್ಟೀಕರಿಸಲು, ಮೊದಲಿನ ಕವಿಗಳು ಉಪಯೋಗಿಸುತ್ತಿದ್ದ ಅಲಂ-ಕಾರಿಕ ಭಾಷೆಯನ್ನು ತ್ಯಜಿಸಿದ್ದಾನೆ. ಮತ್ತು ಈ ವಾದಸರಣಿಯನ್ನು ಪ್ರತಿಮೆಗಳ ಮೂಲಕವಾಗಿಯೇ ನಡೆಸುವ ನಿರ್ಬಂಧಕ್ಕೊಳಗಾಗಿದ್ದಾನೆ. ಇದರಿಂದ ಅವನ ಕಾವ್ಯರಚನೆಯ ಮೇಲೆ ಹೊರಲಾರದ ಭಾರ ಬಿದ್ದಿದೆ.

೫) ನವ್ಯಪ್ರತಿಮೆಗಳನ್ನು ಯಶಸ್ವಿಯಾಗಿ ಉಪಯೋಗಿಸಲು ಕವಿಯು ಕೂಡ ಆಧುನಿಕವಾಗಿರಲೇಬೇಕು. ಇಂದಿನ ವಿಚಾರಗಳನ್ನು ಅವನು ಆಳವಾಗಿ ತಿಳಿದಿರಬೇಕಲ್ಲದೆ, ಸಹಾನುಭೂತಿಯಿಂದ ಸ್ವೀಕರಿ-ಸುವ ಶಕ್ತಿಯುಳ್ಳವನಾಗಿರಬೇಕು. ಯಾಕೆಂದರೆ ಇಂದಿನ ಜಗತ್ತಿನಲ್ಲಿ ವಿಶಿಷ್ಟವಾದ ಸಂಕೀರ್ಣತೆ, ಹಾಗೂ ವಿಭ್ರಮೆ ಕಂಡುಬರುತ್ತಿದೆ.

ಆಧುನಿಕ ಕವಿಯು ಮುಕ್ತಮನಸ್ಸಿನಿಂದ ಜಗತ್ತನ್ನು ಎದುರಿ-ಸುತ್ತಾನೆ. ಜಗತ್ತಿನಲ್ಲಿಯ ಯಾವ ವಸ್ತುವೂ ನೀರಸವಾಗಿಲ್ಲವೆಂದು ಅವನ ನಂಬಿಗೆಯಾಗಿದೆ. ತನ್ನ ವಿಷಯವನ್ನು ಆರಿಸಲು ದಾರಿ-ತೋರುವಂತಹ ಹೊರಗಿನ ಬೇರೆ ಯಾವ ಪ್ರಮಾಣವೂ ಅವನ ಪ್ರತಿಮೆಗಳ ಯೋಗ್ಯತೆಗೆ ಒರೆಗಲ್ಲಿನಂತಿಲ್ಲ. "ಎಲ್ಲ ವಿಷಯಗಳನ್ನು ಅರಿತು, ಬೇಕಾದ ವಿಷಯಗಳ ಬಗ್ಗೆ ಬರೆಯಬಲ್ಲ ಕವಿಯದೇ ಬಿಕ್ಕಟ್ಟಿನ ಕಾರ್ಯ "ಎಂದು ಬ್ರಾಡ್ಲೆ ಎಂಬ ಆಂಗ್ಲ ವಿಮರ್ಶಕ ಬರೆದಿದ್ದಾನೆ ಇವನು ಪರಂಪರೆಯ ಕವಿಗಳ ಬಗ್ಗೆ ಈ ರೀತಿಯಾಗಿ ಬರೆದಿದ್ದಾನೆ. ಅವನ '.......ಅವನ ವಸ್ತುಗಳು ಸರ್ವಮಾನ್ಯ ಕಲ್ಪಕತೆಯಲ್ಲಿ ಜೀವಿಸಿದ್ದುದರಿಂದ, ಅವು ಬಹಳೇ ಕಾವ್ಯಮಯವಾಗಿ-ದ್ದುವು. ಅವನ ಕಾವ್ಯಪ್ರಪಂಚವು ರೂಪರಹಿತವಿಚಾರ ಮತ್ತು ಭಾವನೆಗಳಿಂದ ಕೂಡಿರದೆ ದೃಶ್ಯ, ಆಕೃತಿ, ಕೃತಿ, ಘಟನೆ ಮುಂತಾ-ದುವುಗಳಿಂದ ಕೂಡಿದ್ದಿತು, ಮತ್ತು ಅವನು ಅವುಗಳೊಡನೆ ಒಂದಾಗಿ ಬಾಳುತ್ತಿದ್ದನು. ಈ ಜಗತ್ತು ಅವನ ನೈತಿಕ ಹಾಗೂ ಧಾರ್ಮಿಕ ಭಾವನೆ ಮತ್ತು ನಂಬುಗೆಗಳಿಗೆ ವಿಧೇಯಕವಾಗಿತ್ತು....."

ಪ್ರಸಿದ್ಧವಾದ ಧಾರ್ಮಿಕ ಪರಂಪರೆಗಳ ನಡುವೆ ಬೆಳೆದು, ಆ ಪರಂಪರೆಗಳ ಬಗ್ಗೆ ಸಹಾನುಭೂತಿಯಿಂದ ಬಾಳಿ, ಅದರಲ್ಲಿ ತನ್ನ ಧಾರ್ಮಿಕ ಹಾಗೂ ನೈತಿಕ ಸಿದ್ಧಾಂತಗಳನ್ನು ನಿರ್ಮಿಸುತ್ತಿದ್ದ ಹಳೆಯ ಕವಿಗಳು ಇಂದಿನವರಿಗಿಂತಲೂ ಭಾಗ್ಯವಂತರು. ಹಿಂದಿನ ಪುರಾಣಗಳ ಕತೆಗಳು ಸರ್ವಸಾಮಾನ್ಯರ ಕಲ್ಪಕತೆಯಲ್ಲಿ ಒಂದಾ-ಗಿದ್ದರಿಂದ, ಕಾವ್ಯವನ್ನು ಬರೆಯುವುದು ಸುಲಭವಾಗಿತ್ತು; ಆದರೆ ಇಂದಿನ ಜಗದಲ್ಲಿ ಆ ಕತೆಗಳು ಜೀವಂತವಾದ ಸಂಬಂಧವನ್ನು ಕಳೆದು ಕೊಂಡಿವೆ. ಅವುಗಳಲ್ಲಿಯ ಸತ್ಯವನ್ನು ನಾವು ಸ್ವೀಕರಿಸಿದ್ದರೂ, ಆ ಹಳೆಯ ಕತೆಗಳ ರೂಪದಲ್ಲಿ ನಾವು ಸ್ವೀಕರಿಸುತ್ತಿಲ್ಲ ಆಧುನಿಕ ಕವಿಯು ಈ ಪುರಾಣಗಳಲ್ಲಿ ಹೊಸ ಅರ್ಥಗಳನ್ನು ಹುಡುಕಬಹುದು, ಮತ್ತು ಪಡೆಯಲೂಬಹುದು. ಆದರೆ ಈ ಹೊಸ ಅರ್ಥಗಳನ್ನು ಪುರಾಣದ ರೂಪದಲ್ಲಿಯೇ ನಿರೂಪಿಸಿದರೆ, ಯಾವ ಪ್ರಮಾಣವೂ ದೊರೆಯುವುದಿಲ್ಲ. ಯಾಕೆಂದರೆ ಇಂದಿನ ಯುಗಕ್ಕೆ ಪುರಾಣಗಳ ಬಳಕೆ ತಪ್ಪಿದೆ. ಇನ್ನು ಕವಿಯು ಪ್ರತಿಮೆಯ ಕಡೆಗೆ ತಿರುಗಿದರೆ, ಅವನ ಪ್ರತಿಮೆಗಳು ಸಾಮಾನ್ಯರ ಕಲ್ಪಕತೆಯಲ್ಲಿ ಮೂಡಿರುವುದಿಲ್ಲ. ಕಾವ್ಯಪ್ರತಿಮೆಯು ಚೇತನಾಚೇತನ ವಸ್ತುಗಳಿಗೂ ಕೂಡ ಒಂದು ಆತ್ಮವಿದೆ—ಎಂಬುದನ್ನು ತೋರಿಸುತ್ತದೆ. ಎಲ್ಲ ವಸ್ತುಗಳ ಮೂಲದಲ್ಲಿ ಒಂದು ಆಧ್ಯಾತ್ಮಿಕ ಕ್ರಮವಿದೆಯೆಂಬುದು ಗೃಹೀತವಾದ ಸಿದ್ಧಾಂತ ವಾಗಿದೆ ಎಂಬುದನ್ನು ಪ್ರತಿಮೆ ತೋರಿಸುತ್ತದೆ. ಆಧ್ಯಾತ್ಮಿಕ ಹಿನ್ನೆ-ಲೆಯು ಇಂದಿನ ಜಗತ್ತಿನಲ್ಲಿಲ್ಲದ ಮೂಲಕ, ಕಾವ್ಯ ಪ್ರತಿಮೆಗೆ ಒಂದು ತೀವ್ರವಾದ ವಿರೋಧ ಕಂಡುಬರುತ್ತಿದೆ.

ಎನಿಮಿಝಮ್ (ನಿರ್ಜೀವ ವಸ್ತುಗಳಿಗೂ ಆತ್ಮವನ್ನು ಆರೋಪಿಸುವ ತತ್ತ್ವಸರಣಿ) ಕಾವ್ಯಪ್ರತಿಮೆಯ ಉಗಮದಲ್ಲಿಯೆ ಕಂಡುಬರುತ್ತದೆ. ಕಾವ್ಯಪ್ರತಿಮೆಯು ವಸ್ತುವಿನ ಆತ್ಮವನ್ನು ಪ್ರತಿನಿರೂಪಿಸುವುದಿಲ್ಲ. ಎಲ್ಲ ವಸ್ತುಗಳ ರೂಪದೊಳಗೆ ಒಂದು ಜೀವನವಿದೆ, ಆ ಜೀವನವು ನಮ್ಮ ಜೀವನಕ್ಕಿಂತ ಬೇರೆಯಿದ್ದು, ದೈನಂದಿನ ಬಳಕೆಯಿಂದಲೇ ನಮಗೆ ಅದರ ಅರಿವಾಗುವುದಿಲ್ಲ. ವಿಜ್ಞಾನದ ಯಾವ ಸಾಧನಗಳೂ ಅದನ್ನು ಅಳೆಯಲಾರವು. ಕಾವ್ಯಪ್ರತಿಮೆಯು ತನ್ನ ಸತ್ತ್ವ ಮತ್ತು ನಮ್ಮಲ್ಲಿ ಪ್ರತಿಧ್ವನಿಸುವ ಹೊಸ ರಹಸ್ಯದ ಸೇವನೆಯಿಂದ ಇದನ್ನು ಮನವರಿಕೆಗೊಳಿಸುತ್ತದೆ. ಎನಿಮಿಝಮ್ ತತ್ತ್ವದ ಕಾರ್ಯಾಚರಣೆಯನ್ನು ನಾವು ಆಧುನಿಕ ಕಾವ್ಯದಲ್ಲೆಲ್ಲ ಕಾಣುತ್ತೇವೆ. ಕಾರಖಾನೆ, ಪ್ರಯೋಗಶಾಲೆ, ಕ್ರೀಡಾಂಗಣ ಮತ್ತು ನಗರದ ಓಣಿಗಳಲ್ಲಿ ಕಂಡುಬರುವ ಜೀವನವನ್ನು ಪ್ರತಿಮಾಸೃಷ್ಟಿಯು ಹೆಣೆಯುತ್ತದೆ. ಕವಿಯು ತನ್ನ ಸಮಾಧಾನದ ಸಲುವಾಗಿ ವಸ್ತುಗಳನ್ನು ಪ್ರೋತ್ಸಾಹಿಸಬಹುದು; ಅಥವಾ ಗೂಢವಿಚಾರಗಳಿಗೆ ಜೀವಂತ ಕಳೆಯನ್ನು ಕೊಡಬಹುದು. ಇದು ಕವಿಯ ದೃಷ್ಟಿಯಿಂದ ಉತ್ತಮವಾಗಿದೆ. ಆದರೆ ವಾಚಕನಿಗಲ್ಲ.

ಸರ್ವಸಾಮಾನ್ಯ ಕಲ್ಪಕತೆ ಹಾಗೂ ಸರ್ವಸಾಮಾನ್ಯ ಪ್ರಜ್ಞೆಯಲ್ಲಿ ಬಹಳ ಅಂತರವಿದೆ. ಇಂದ್ರಿಯಗಳಿಗೆ ಗೋಚರವಾದ ವಸ್ತುಗಳನ್ನು ನಮ್ಮ ಸಾಮಾನ್ಯಪ್ರಜ್ಞೆಯು ಅರಿತಿದ್ದರೂ ಅವು ನಮ್ಮ ಸಾಮಾನ್ಯ ಕಲ್ಪಕತೆಯ ಕ್ಷೇತ್ರದಿಂದ ದೂರ ಉಳಿದಿರಬಹುದು. ಇಂದಿನ ಸಾಮಾನ್ಯಕಲ್ಪಕತೆಯ ಕ್ಷೇತ್ರ ಸಂಕುಚಿತವಾಗಿದೆ. ಒಂದು ಉದಾಹರಣೆಯನ್ನು ನೋಡೋಣ. ಟೆಲಿಗ್ರಾಫ್ ಕಂಬಗಳು ಭೂಪ್ರದೇಶದ ಸರ್ವಸಾಧಾರಣ ಭಾಗಗಳಾಗಿ, ನಾವೆಲ್ಲರೂ ಅದರ ಅಸ್ತಿತ್ತ್ವವನ್ನು ಒಪ್ಪಿಕೊಂಡಾಗಲೇ ಅವು ನಮ್ಮ ಸಾಮಾನ್ಯಪ್ರಜ್ಞೆಯ ಕ್ಷೇತ್ರದಲ್ಲಿ ಸಮಾವೇಶವಾದುವು. ಆದರೆ ಅವು ನಮ್ಮ ಸಾಮಾನ್ಯ ಕಲ್ಪಕತೆಯ ಕ್ಷೇತ್ರದಲ್ಲಿ ಬರಬೇಕಾದರೆ, ನಾವು ಅದನ್ನು ಕಾವ್ಯಮಯವಾಗಿ ಅನುಭವಿಸಿರಬೇಕು. ಆ ಕಂಬವನ್ನು ಮುಟ್ಟಿದಾಗ ಅದರ ತಂತಿಗಳ ನಾದವನ್ನು ಕೇಳಿರಬೇಕು. ಕಂಬಗಳನ್ನು ಕಾವ್ಯಮಯವಾಗಿ ಮಾಡುವುದು ಕವಿಯ ಕೆಲಸ. ಆದರೆ ಸರ್ವಸಾಮಾನ್ಯ ಕಲ್ಪಕತೆಯಿಂದ ಯಾವುದೇ ಸಹಾಯ ದೊರೆಯದ್ದರಿಂದ, ಈ ಕಾರ್ಯವು ಕಠಿಣವಾಗಿದೆ. ಗ್ರೀಕರು ಇದನ್ನು ಉಪಯೋಗದ ದೃಷ್ಟಿಯಿಂದ ಹಾಗೂ ಕಾವ್ಯಮಯ ದೃಷ್ಟಿಯಿಂದ ನೋಡಬಹುದಾಗಿತ್ತು. ಸಂಪರ್ಕದ ಒಂದು ಸಾಧನ ಮತ್ತು ಸಂಪರ್ಕದ ಒಂದು ಜೀವಂತ ಪ್ರತಿಮೆಯೆಂದು ತಿಳಿಯಬಹುದಾಗಿತ್ತು. ಈ ಕಟ್ಟಿಗೆಯ ಸಾಧನಕ್ಕೆ ತಂತಿಗಳನ್ನು ಬಿಗಿದಿದ್ದರೂ ಇದು ಒಂದು ಶಕ್ತಿಯನ್ನು ಸ್ವೀಕರಿಸಿ ಹೊರಬಿಡುವ ಯಕ್ಷನೆಂದು ತಿಳಿಯಬಹುದಾಗಿತ್ತು. ಆದರೆ ಆಧುನಿಕ ಮನುಷ್ಯನು ವಸ್ತುಗಳನ್ನು ಈ ರೀತಿ ನೋಡಲಾರ. ಆಶ್ಚರ್ಯಕಾರಕ ವಸ್ತುಗಳು ದಟ್ಟವಾಗಿ ಅವನನ್ನು ಮುತ್ತಿದ್ದರಿಂದ, ಅವನು ಆಶ್ಚರ್ಯದ ಜ್ಞಾನವನ್ನೇ ಕಳೆದುಕೊಂಡಿದ್ದಾನೆ. ಔಪಯೋಗಿಕ ದೃಷ್ಟಿಯು ಹೆಚ್ಚಾಗಿರುವುದರಿಂದ, ಒಂದು ವಸ್ತುವಿನ ಬಗ್ಗೆ ಏನಾದರೂ ಆಧ್ಯಾತ್ಮಿಕ ಭಾವನೆ ಇದ್ದರೆ, ಅವು ಅನಿವೇದನೀಯವಾಗುತ್ತವೆ. ವಿವೇಕ ಮತ್ತು ಅಂತಸ್ಫೂರ್ತಿ ಇವುಗಳು ಬೇರ್ಪಟ್ಟಿವೆ.

ಸರ್ವಸಾಮಾನ್ಯ ಕಲ್ಪಕತೆಯ ದಾರಿದ್ರ್ಯದ ಮೂಲಕವೇ ಕಾವ್ಯಪ್ರತಿಮೆಗೆ ಇಂದು ಪ್ರತಿರೋಧಗಳುಂಟಾಗಿವೆ. ಜನರು ಕಾವ್ಯಪ್ರತಿಮೆಯಲ್ಲಿ ಆನಂದವನ್ನು ಪಡೆಯದಿದ್ದರೆ ಅಥವಾ ಕಾವ್ಯಪ್ರತಿಮೆಯು ವಾಸ್ತವಿಕತೆಯನ್ನು ಪರಿಶೋಧಿಸುವ ಆನಂದದಾಯಕಮಾರ್ಗವೆಂದು ತಿಳಿಯದಿದ್ದರೆ, ಪ್ರತಿಮೆಯ ಮೂಲಕವೇ ಪ್ರಕಟಗೊಳ್ಳುವ ಸತ್ಯವನ್ನು ನಂಬದಿದ್ದರೆ, ಅಥವಾ ಅದರಲ್ಲಿ ಜಿಜ್ಞಾಸೆಯನ್ನು ತೋರದಿದ್ದರೆ, ಆ ಕವಿಗೆ ತನ್ನ ಪ್ರತಿಮೆಗಳ ಯೋಗ್ಯತೆಯ ಬಗ್ಗೆ ತಾಂತ್ರಿಕ ಹಾಗೂ ವೈಯಕ್ತಿಕ ಮಹತ್ತ್ವವನ್ನು ಬಿಟ್ಟು ಬೇರೆ ರೀತಿಯ ಬಿಗುಹು ದೊರೆಯಲಾರದು. ಸರ್ವಸಾಮಾನ್ಯ ಕಲ್ಪಕತೆಯ ಆಧಾರವಿಲ್ಲದಿದ್ದರೂ ಕವಿಗಳು, ಇಂದು ಪ್ರತಿಮೆಗಳನ್ನು ವಿಪುಲವಾಗಿ ಉಪಯೋಗಿಸುತ್ತಿರುವರು. ಇದೇ ಬಹುಶಃ ಇಂದಿನ ನವ್ಯಕಾವ್ಯದ ಅಸ್ಪಷ್ಟತೆ, ಅನಿಯಮಿತ ಸಂಬಂಧ ಮತ್ತು ಕೇಂದ್ರಬಾಹಿರವಾದ ಭಾರಕ್ಕೆ ಕಾರಣವೆಂದು ಹೇಳಬಹುದು.

ಇನ್ನು ವಿಷಯದ ಬಗ್ಗೆ ಇದ್ದ ಪ್ರಶ್ನೆ. ಕಾವ್ಯವಸ್ತುವನ್ನು ಅರಿಸುವಲ್ಲಿ ಕವಿಗೆ ಯಾವುದೇ ರೀತಿಯ ಬಾಹ್ಯಪ್ರಮಾಣವಿಲ್ಲ. ಆದರೆ ಕವಿತೆಯು ಯಾವುದಾದರೂ ಒಂದು ವಿಷಯದ ಬಗ್ಗೆ ಇರಬೇಕು. ಅಲ್ಲದೆ ತನ್ನಲ್ಲಿ ಏನಾದರೂ ಇರಬೇಕು. ಒಂದು ಕವಿತೆಯ ವಿಷಯವೆಂದರೆ ಆ ಕವಿತೆಯ ವಸ್ತುವಿನ ಆಧಾರ. ಈ ಕಾವ್ಯವಸ್ತುವಿನ (Subject) ಆಧಾರದಿಂದ ಬೆಳೆಯುವಾಗ ಕಾವ್ಯವಿಷಯವು (Theme) ಪ್ರತಿಮಾಸೃಷ್ಟಿಯ ಎಲೆಗಳನ್ನು ಹೊರಗೆ ಚೆಲ್ಲುತ್ತದೆ. ಕವಿತೆಯು ಪೂರ್ಣವಾಗಿ ಬೆಳೆದಾಗ ಈ ಆಧಾರವು ಅನಾವಶ್ಯಕವೆಂದೆನಿಸಿ ಅದನ್ನು ಬದಿಗಿರಿಸಬಹುದು. ಆಧಾರವಿಲ್ಲದಲೇ ಕವಿತೆಯು ಬೆಳೆದರೆ ಅಥವಾ ಅಯೋಗ್ಯವಾದ ಆಧಾರದಿಂದ ಬೆಳೆದರೆ, ಮುಂದೆ ಆತಂಕ ಉಂಟಾಗಬಹುದು. ಪರಂಪರೆಯ ಕಾವ್ಯಗಳಲ್ಲಿ ಈ ರೀತಿಯ ಆಧಾರವು ಕಂಡುಬರುತ್ತಿತ್ತು. ಅವು ಪುರಾಣ, ದಂತಕತೆಗಳಾಗಿದ್ದುವು. ಇವುಗಳ ಮೇಲೆಯೇ ತಮ್ಮ ಕಾವ್ಯವಸ್ತುವನ್ನು ನಿರ್ಮಿಸುತ್ತಿದ್ದರು. ಆದರೆ ಇಂದಿನ ಕವಿಗಳಿಗೆ ಈ ರೀತಿಯ ಆಧಾರವಿಲ್ಲ.

ಮೇಲೆ ತೋರಿಸಿದ ಸಮಸ್ಯೆಗಳು ಇಂದಿನ ಕವಿಯ ಮುಂದಿದ್ದರೂ ಕೂಡ, ಅವನು ತನ್ನ ಹೊಸಮಾರ್ಗದಲ್ಲಿ ನಡೆದಿದ್ದಾನೆ. ತನ್ನ ಕ್ಷೇತ್ರದಲ್ಲಿ ಸಫಲತೆಯನ್ನು ಪಡೆಯುವ ಆತ್ಮವಿಶ್ವಾಸ ಅವನಲ್ಲಿದೆ. ಕೆಲಮಟ್ಟಿಗೆ ಅವನು ಸಫಲನಾಗಿದ್ದಾನೆ. ಇಂದಿಲ್ಲ ನಾಳೆಯಾದರೂ ಈ ಮಾರ್ಗದಲ್ಲಿ ಅವನು ಸಫಲನಾಗುವನೆಂಬುದರಲ್ಲಿ ಸಂದೇಹವೇ ಇಲ್ಲ—

"The poetry of earth is never dead"

—Keats.

ಹೆಣ್ಣಿನ ಬುದ್ಧಿ

(ಸಣ್ಣ ಕತೆ)

ಶ್ರೀ. ಬಿ. ಎಂ. ಕುಲಕರ್ಣಿ ಬಿ. ಇ. (ಸಿವ್ಹಿಲ್), ಸಾಂಗಲಿ

ದಿನದಿನವೂ ಸವಿಯೂಟವನ್ನು ಉಣ್ಣುವವರ ಬಾಯಿ, ನಡು-ನಡುವೆ ಖಾರ-ರೊಟ್ಟಿಯ ರುಚಿಯನ್ನು ಬಯಸುತ್ತದೆ. ಈ ಬದಲಾದ ರುಚಿ-ದಿನದ ಸವಿಯೂಟಕ್ಕೆ ಹೊಸ ಮಾಧುರ್ಯವನ್ನು ಒದಗಿಸುತ್ತದೆ. ಪ್ರೀತಿಯ ದಾಂಪತ್ಯಜೀವನಕ್ಕಂತೂ ಇದರ ಆವಶ್ಯಕತೆ ಬಹಳ !

‘ ಸವಿತಾ, ಗಂಜಿಯವನಿಂದ ಬಂದ Collars ಎಲ್ಲಿವೆಯೇ ? ’

‘ ಈಗ ಯಾಕೆ ಬೇಕಾದುವು ಅವು ? ’

‘ ಅಲ್ಲಿ, ನನಗೆ ಬೇಕಾದ ಯಾವ ವಸ್ತುವನ್ನೂ, ನಿನ್ನ ಹತ್ತಿರ ಯಾತಕ್ಕಾಗಿ—ಎಂದು ಕಾರಣ ಹೇಳಿಯೇ ಪಡೆಯಬೇಕೇನೆ ? ’

‘ ಅಲ್ಲ, ಇಂತಹ ಹೊತ್ತಿನಲ್ಲಿ ಅವು ಯಾಕೆ ಬೇಕಾದುವು ? ಈಗ ತಾನೆ ಕ್ಲಬ್ಬಿನಿಂದ ಬಂದು ಊಟ ಮುಗಿಸಿದಿರಿ; ಮತ್ತೆ ಎಲ್ಲಿಗೆ ಹೋಗುವುದು ? ’

‘ ನಾನು ಎಲ್ಲಿಗೆ ಹೋಗುವೆನೆಂಬುದನ್ನು ನಿನಗೆ ಹೇಳಿಯೇ ಹೋಗಬೇಕೇನೇ ? ’

‘ ಅಲ್ಲ, ಅಂತಹ ಮಹತ್ತ್ವದ ಯಾವ ಕಾರ್ಯಕ್ಕೆ ಹೋಗುವುದು ಎಂದೆ ’ ಎಂದು ಎಲೆಮಡಿಚಿ ಕೊಡಬಂದಳು.

‘ ಬೇಡ, ಬೇಡ, ಹೇಗಾದರೂ ಅಲ್ಲಿಗೆ ಹೋಗಲೇಬೇಕು; ಅಲ್ಲಿಯೇ ತೆಗೆದುಕೊಂಡರಾಯಿತು. Collors ತೀವ್ರಕೊಡು ನೋಡೋಣ; ವೇಳೆಗಳೆಯಬೇಡ.... ’

‘ ಅಲ್ಲಾ, ಏನು ಎಲ್ಲಿಗೆ ಹೋಗುವುದು ? ರಾತ್ರಿ ೮.೩೦ ಆಯಿತು. ಅದೂ ಈ Full Dressನಲ್ಲಿ ! ಎಲೆಯನ್ನಾದರೂ ತಿನ್ನಬಾರದೆ? ಅದಕ್ಕೂ ವೇಳೆ ಇಲ್ಲವೆ? ನಿಮ್ಮದು ಯಾವಾಗಲೂ ಗಡಿಬಿಡಿಯೆ ! ’

‘ ಹರಟೆ ಬೇಡ– ವೇಳೆಯಾಗುವುದು, ತೀವ್ರ ಕೊಡು. ನಿನಗೆ ಒಮ್ಮೆ ಹೇಳಿಲ್ಲವೇನೆ ? ಸೋಪದ ಕೈ ಎಲ್ಲರಿಗೂ ಸಿಗುವಂತಹ ಸ್ಥಳದಲ್ಲಿ ಇಡು ಎಂದು—ಬೇಗದಕ್ಕೆ ತೆಗೆದುಕೊಂಡು Purseನಲ್ಲಿ ಇಟ್ಟುಕೊಳ್ಳುವುದು ....ನನಗೆ ಅರಿವೆ, Socks, Toilets ಏನೇ ಬೇಕಾದರೂ ನಿನ್ನನ್ನೇ ಕೇಳಬೇಕು—ಶಾಲೆಯ ಹುಡುಗ ಶಿಕ್ಷಕರನ್ನು ಕೇಳುವಂತೆ. ಕೇಳಿದ ಮೇಲಾದರೂ ಕೊಡುವಿಯಾ? ಎಲ್ಲಿ, ಯಾಕೆ, ಯಾವಾಗ್ಗೆ ?—ಇಂತಹ ನೂರಾರು ಪ್ರಶ್ನೆ. ಮನುಷ್ಯ ಮದುವೆಯ ಹೋಮಕುಂಡದಲ್ಲಿ ತನ್ನ ಸ್ವಾತಂತ್ರ್ಯವನ್ನು ಸುಟ್ಟಮೇಲೆಯೇ ತನ್ನ ಪತ್ನಿಯ ಕೈ ಹಿಡಿಯುತ್ತಾನೆ. ತೀವ್ರ ಕೊಡೇ, ವೇಳೆಯಾಗುವುದು— ಮತ್ತೆ ನನ್ನ Crepe Shoes ತೆಗೆದುಕೊಡು ! ’

‘ ಇಂದೇನಾಗಿದೆ ನಿಮಗೆ?–ಹೀಗೇಕೆ ಸಿಟ್ಟಿಗೇಳುವಿರಿ ? ಎಲ್ಲಿಗೆ ಎಂಬುದನ್ನಷ್ಟು ಹೇಳಬಾರದೆ ? ಮತ್ತೆ ಕ್ಲಬ್ಬಿಗೊ ? ಅಥವಾ ಆಫೀಸಿನಲ್ಲಿ ಕೆಲಸವೋ ? ಎಲ್ಲಿಗೆ ? ’

‘ಮತ್ತೆ ಶುರು ನಿನ್ನ ಹಾಳು ಹರಟೆ!—ಈಗ ತಾನೆ ಕ್ಲಬ್ಬಿನಿಂದ ಬಂದಿಲ್ಲವೇನೆ ? ಮತ್ತೆ ಕ್ಲಬ್ಬಿಗೆ ಅಟ್ಟಬೇಕೆಂದು ಮಾಡಿರುವೆಯಾ ? ಎಂದಾದರೂ ನನ್ನ ಆಫೀಸು ರಾತ್ರಿ ಇದ್ದುದು ಗೊತ್ತುಂಟೆ?—ತೀವ್ರ ತಂದುಕೊಡು; ನಿಲ್ಲಲು ವೇಳೆಯಿಲ್ಲ. ಇಲ್ಲವಾದರೆ ಕೈಯನ್ನಾದರೂ ಕೊಡು.’

‘ ಇಂತಹ ವೇಳೆಯಲ್ಲಿ ಕ್ಲಬ್ಬಿಗೆ ಇಲ್ಲ-ಆಫೀಸಿಗೆ ಇಲ್ಲ; ಹಾಗಾದರೆ ಹೋಗುವುದಾದರೂ ಎಲ್ಲಿಗೆ ? ಎಲೆ ತಿನ್ನಿರಿ ಎಂದರೆ, ಅಲ್ಲಿಯೇ ತೆಗೆದುಕೊಂಡರಾಯಿತು ’ ಎನ್ನುವಿರಿ. ಹೋಗುವುದೆಲ್ಲಿಗೆ ಎಂಬುದನ್ನಷ್ಟು ತೀವ್ರ ಹೇಳಬಾರದೆ ? ’

‘ ಏನೆ, ನಾನು ಹೋಗುವ ಸ್ಥಳಗಳನ್ನೆಲ್ಲ ನಿನಗೆ ಹೇಳಿಯೇ ಹೋಗಬೇಕೇನೆ ? ನನಗೆ ನನ್ನ ಮನಸ್ಸಿಗೆ ಬಂದ ಸ್ಥಳಗಳಿಗೆ ಹೋಗುವ ಸ್ವಾತಂತ್ರ್ಯವಿಲ್ಲವೇನೆ ? ನನ್ನ ಮನವನ್ನು ಆನಂದಿಸಿಕೊಳ್ಳಲು ನಿನ್ನನ್ನೇ ಕೇಳಬೇಕೇನೇ ? ನನಗೆ ಆನಂದ ಸಿಗುವಲ್ಲಿಗೆ ಹೋಗುವೆ ! ತೀವ್ರ ತಂದುಕೊಡು ! ’

‘ ಇಂದು ಕ್ಲಬ್ಬಿನಲ್ಲಿ, ಆ ರಾಧಾಬಾಯಿಯ ಗಂಡ ಬೆಟ್ಟೆ ಆಗಿದ್ದರೇನು ? ಅವರು ಕುಡಿಯುತ್ತಾರೆಂದು ಊರೆಲ್ಲ ಹೇಳುತ್ತಾರೆ ಅವರೊಂದಿಗೆ ನಿಮಗೂ ಸ್ವಲ್ಪ........ ’

‘ ಏ ಬಾಯಿಮುಚ್ಚು ! ಏನು ಮಾತಾಡುವಿ? Collars ಕೊಡ ಎಂಬುದಕ್ಕೆ ‘ ಸೆರೆ ಕುಡಿದಿರುವಿರಾ ’ ಎನ್ನುವಿ. ಅದನ್ನು ನೀನೇ

ಕೇಳಬೇಕು ? ನನಗೆ ಬೇಕಾದರೆ ಕುಡಿಯುವೆ; ಬೇಡವಾದರೆ ಬಿಡುವೆ-ಏನೇ, ನಿನಗೆ ನನ್ನ ಇಷ್ಟು ಕೆಲಸವನ್ನೂ ಮಾಡಲು ತೊಂದರೆ ಏನೆ? ನಿನಗೆ ಬೇಡವಾದರೆ ಬಿಟ್ಟುಬಿಡು; ನನ್ನೆಲ್ಲ ಕೆಲಸಗಳನ್ನು ನಾನು ಮಾಡಿಕೊಳ್ಳಲು ಸಿದ್ಧನಿದ್ದೇನೆ. ಬೀಗದ ಕೈಯನ್ನಾದರೂ ಕೊಡು ನೋಡೋಣ '

' ಇಂದು ನೀವು ಕುಡಿದಿರುವುದು ಖಂಡಿತ! ಎಂದಾದರೂ ನಿಮ್ಮ ಕೆಲಸ ಮಾಡಲು ಇಲ್ಲವೆಂದಿರುವೆನೆ? ನೀವೇ ಹೇಳಿ ! '

' ಸಾಕುಬಿಡಿ, ನಿನ್ನ ಗುಣವರ್ಣನೆಯನ್ನು ನೀನೇ ಮಾಡಿಕೊಳ್ಳಬೇಕು. ಒಂದು ದಿನವಾದರೂ ಆಫಿಸಿನಿಂದ ಬಂದಕೂಡಲೆ ' ದಣಿದಿರಾ ' ಎಂದು ಕೇಳುವೆಯೇನು ? ಬದಲಾಗಿ ' ಯಾಕೆ ತಡ ' ಎಂದು ಆಫೀಸ್ Boss ಕೇಳುವಂತೆ, ತಡವಾದದ್ದಕ್ಕೆ ಕಾರಣ ಕೇಳುವಿ. ಎಂದಾದರೂ ನಾನು ಬರುವ ವೇಳೆಗೆ ಚಹ ತಯಾರಿಸಿ ದಾರಿ ಕಾಯುವಿಯಾ ? ಬದಲಾಗಿ ಹಾಲಿನ ಬಟ್ಟಲಿನ ಸುತ್ತಲೂ ಬೆಕ್ಕು ಓಡಾಡುವಂತೆ ನನ್ನ ದೇಹದ ಸುತ್ತ ಓಡಾಡುವಿ. ಸಂಜೆಗೆ Makeup ಮಾಡಿಕೊಂಡು ಒಂದುದಿನವಾದರೂ ತಿರುಗಾಡಲು ಬರುವಿಯಾ? ಕರೆದರೆ ಹೇಳುವಿ: ಸಂಜೆಯ ಅಡುಗೆ ಇದೆ-ಎಂದು. ೧ ದಿನವಾದರೂ ನಮ್ಮ ಮನೆಯ ಮುಂದಿನ ಪಾರಸಿ ದಂಪತಿಗಳಂತೆ, Non-vegetarian ಹಾಟೆಲ್ಲಿಗೆ ಕರೆದರೆ ನಗುತ್ತ ಬರುವಿಯಾ?-ಬದಲಾಗಿ ಮಡಿ-ಮೈಲಿಗೆ! ಮಾಂಸ ಮುಟ್ಟಲಾರೆ-ಎಂದು ಯೋಗಿನಿಯಂತೆ ವೇದಾಂತ ಹೇಳುವಿ. ಎಂದಾದರೂ ಮೂಲೆಯ ಮನೆ ಆಷ್ಟೆಯವರಂತೆ, ಕ್ಲಬ್ಬಿಗೆ ಬಂದು ಇಸ್ಪೇಟ್ ಆಡುವಿಯಾ ?—ಅದಿರಲಿ, ಮನೆಯಲ್ಲಿ ಒಂದುದಿನವಾದರೂ ನನ್ನ ಸುಖಕ್ಕಾಗಿ ಚಿಂತಿಸುವಿಯಾ ? ಬೇಡವೆಂದರೂ ಎಲೆಯಲ್ಲಿ ಹೆಚ್ಚಿಗೆ ಉಣಬಡಿಸುವಿ. ತೇಗುತ್ತ ತಿಂದರೂ—ಎದ್ದಕೂಡಲೆ ' ೧೧ಗಂಟೆಗೆ ಇನ್ನೂ ಅರ್ಧತಾಸಿದೆ; ಯಾಕಿಷ್ಟು ಅವಸರ ? ' ಎಂದು ನನ್ನನ್ನು ಮನೆಯಲ್ಲಿ ನಿಲ್ಲಿಸುವಿ ! ಆಮೇಲೆ ವೇಳೆಯಾದರೆ, ಓಡುತ್ತ ಹೋಗಬೇಕು ಆಫೀಸಿಗೆ. ಮನೆಗೆ ಬೇಸತ್ತು ಬಂದು ಯಾವುದಾದರೂ ಪುಸ್ತಕ ಓದಲು ತೆಗೆದರೆ ' ಆಫೀಸಿನಲ್ಲಿ ಕೆಲಸಮಾಡಿ ಕಣ್ಣು ನೋಯುವುದಿಲ್ಲವೆ ? ಯಾಕೆ ಆ ಹಾಳು ಪುಸ್ತಕ '-ಎಂದು ಪುಸ್ತಕ ಹರಿಯುವಂತೆ ಎಳೆದು ಒಗೆದು, ಒರಟುದನವನ್ನು ಜಾಣ ಒಕ್ಕಲಿಗ ಸಮಾಧಾನ ಪಡಿಸಿ ತನ್ನ ಕೈಯಲ್ಲಿ ಹಿಡಿಯುವಂತೆ, ನನ್ನ ಗಲ್ಲ ನೇವರಿಸುತ್ತ ಹತ್ತಿರ ಕುಳಿತುಕೊಳ್ಳುವಿ. ಈ ಮನೆಯಲ್ಲಿ ನನಗೆ ತಿನ್ನಲು ಸ್ವಾತಂತ್ರ್ಯವಿಲ್ಲ-ಓದಲು ಸ್ವಾತಂತ್ರ್ಯವಿಲ್ಲ—ಇಲ್ಲಿ ನಾನು ಪೂರ್ಣ ಕೈದಿ. ಇದೇ ಏನೇ ನೀನು ನನ್ನ ಸಲುವಾಗಿ ದುಡಿಯುವುದು ? '

' ಇಂದು ಯಾವ ಯಕ್ಷಿಣಿಯ ದೃಷ್ಟಿತಾಗಿತು ನಿಮಗೆ ? ದಿನಾಲು ಮನೆಗೆ ಬಂದಕೂಡಲೆ ಎಂತಹ ಪ್ರೇಮದ ಮಾತನ್ನಾಡುತ್ತಿದ್ದಿರಿ; ಎಷ್ಟು ಮೃದುವಾಗಿ ಚುಂ....ಏನಾಯಿತು, ಇಂದು ಏನಾಯಿತು ? '

' ಹೌದು ಹೌದು, ಯಕ್ಷಿಣಿಯ ದೃಷ್ಟಿ ತಾಗಿತು. ಅದಕ್ಕಾಗಿ ಒಲೆಯಲ್ಲಿ ಮೆಣಸಿನಕಾಯಿ ಹಾಕಿ ಮನೆಯನ್ನೆಲ್ಲ ತುಂಬಿಸು, ಆ ಹೊಗೆಯಿಂದ ! ನಾನು ನಿನಗೆ ಪ್ರೇಮದ ಮಾತನ್ನೇ ಆಡಬೇಕು—ನಿನ್ನನ್ನೇ ಹೊಗಳಬೇಕು. ಇದನ್ನೇ ಅಲ್ಲವೇನೇ ನೀನು ನನ್ನಿಂದ ಅಪೇಕ್ಷಿಸುವುದು ? ಹಾಗಿದ್ದರೆ ನನಗೆ ಅದು ಇಂದು ಬೇಜಾರಾಗಿ ಹೋಗಿದೆ. ನಾನು ನಿನ್ನನ್ನು ಲಗ್ನವಾದದ್ದು ನಿನ್ನನ್ನು ಹೊಗಳಲಿಕ್ಕಲ್ಲ—ಆದರೂ ಹೊಗಳಿದರೂ ಏನೋ ಸ್ವಲ್ಪ ಸುಧಾರಿಸಿಕೊಳ್ಳಬಹುದು, ನನ್ನ ಸುಖದ ಸಲುವಾಗಿ ಪ್ರಯತ್ನಿಸಬಹುದು. ಎಂದುಕೊಂಡಿದ್ದೆ. ಆದರೆ ಅದು ಸುಳ್ಳಾಯಿತು. ಈ ಮನೆಯಲ್ಲಿ ನನಗೆ ಸುಖವಿಲ್ಲ. ತೀವ್ರ ಕೊಡು ನನ್ನ Collors ಮತ್ತು Shoes ! ವೇಳೆ ೯ಗಂಟೆಯಾಯಿತು. ಹೆಚ್ಚಿಗೆ ತಡೆಯಲು ಶಕ್ಯವಿಲ್ಲ; ನಾನು ಇಂದು ಸುಖ ಸಿಗುವಲ್ಲಿಗೆ ಹೋಗುತ್ತೇನೆ '

ಅವಳು ಒಮ್ಮೆಲೆ ಬಂದು ನನ್ನ ಕೈಗಳನ್ನು ಹಿಡಿದು, ತನ್ನ ಗಲ್ಲಗಳಿಗೆ ಹೊಡೆದುಕೊಳ್ಳುತ್ತ, ಅಳುವ ಧ್ವನಿಯಲ್ಲಿ ಹೇಳಿದಳು: ' ನನ್ನ ಯಾವ ತಪ್ಪಾಗಿದ್ದರೂ ಸಾವಿರಸಲ ಹೊಡೆಯಿರಿ; ನಿಮ್ಮ ಪ್ರತಿಕಾರ್ಯದಲ್ಲಿಯೂ ಆನಂದವಿದೆ ನನಗೆ—ನಿಮಗೆ ಒಪ್ಪುವಂತೆ ನಡೆಯುವೆ; ನನ್ನ ತಪ್ಪು ನೀವೇ ಕ್ಷಮಿಸಬೇಕು ! ನನ್ನನ್ನು ಬೇಕಾದಷ್ಟು ಹೊಡೆಯಿರಿ; ಎಲ್ಲಿಗೆ ಹೋಗುವಿರಿ ಹೇಳಿರಿ ! '

' ಸರಿಯೋ-ದೂರ ಸರಿ! ಸಾಕು ನಿನ್ನ ಈ ನಾಟಕ. ಪ್ರತಿದಿನವೂ ಹೇಳುವಿ: ನನ್ನ ಸಾವಿರ ಕೆಲಸ ಮಾಡಿದರೂ ತೊಂದರೆ ಇಲ್ಲ ಎಂದು. ನನಗೆ ಸುಖವಾಗುವಂತೆ ನಡೆಯುವೆ-ಎಂದು. ನಿನ್ನಬುದ್ಧಿ ನಾಯಿಯ ಬಾಲ! ನೀನು ನನಗೆ ಸುಖ ಕೊಡುವುದು ಶಕ್ಯವಿಲ್ಲ. ದೈವಶಾಪದಿಂದ ನಾವಿಬ್ಬರೂ ಒಂದಾಗಿದ್ದೇವೆ. ಇಂದು ನಾನು ನನಗೆ ಸುಖದೊರೆವಲ್ಲಿ ಹೋಗುವೆ. ಮೊದಲು ಕುಲಾಬಾಕ್ಕೆ ಹೋಗಬೇಕು—ಅಲ್ಲಿಂದ ಅವಳೊಂದಿಗೆ ತಾಜ್. ಅಲ್ಲಿ Violet Golsavesಳ mazrulk ನೃತ್ಯವಿದೆ- ಚಿಕ್ಕ ಜೋಕಜೋಟದ ಸಂಗೀತವಿದೆ. ಇಂದಂತೂ Wet day. ಅಲ್ಲಿಂದ ಹನ್ನೆರಡು ಗಂಟೆಗೆ ಕಂಬಾಲಾ ಹಿಲ್; ಅಲ್ಲಿಂದ Hanging Gorden. ಆಮೇಲೆ ಬೆಳುದಿಂಗಳಲ್ಲಿ ಜುಹು ಬೀಚ್. ಅಲ್ಲಿಂದ ಆಮೇಲೆ ಕುಲಾಬಾ. ನಾಳೆ ಬೆಳಗ್ಗೆ ಮತ್ತೆ ನಿನ್ನ ಈ ಸುಡುಗಾಡು ಮೋರೆಯ ದರ್ಶನ. ಸರಿ ಹೋಗು. ನನ್ನನ್ನು ದೇವರೆಂದು ತಿಳಿದಿರುವೆಯಲ್ಲವೆ?-ಹಾಗಿದ್ದರೆ ಅಲ್ಲಿ ಹೋಗು, ಆ ನನ್ನ ಫೋಟೋಕ್ಕೆ ಕುಂಕುಮ ಹಚ್ಚು; ಊದು ಹಾಕು! ನನ್ನೊಂದಿಗೆ ಬಂದು ಆನಂದಿಸುವ ಭಾಗ್ಯ ನಿನಗಿಲ್ಲ. ಬಿಡು ನನ್ನನ್ನು! ಅಂತಹ ಸ್ವರ್ಗಸುಖ ಬಿಟ್ಟು ನಿನ್ನೊಂದಿಗೆ ಹಾಳುಹರಟೆ ಹೊಡೆಯಲು ವೇಳೆಯಿಲ್ಲ—ತೀವ್ರಕೊಡು ನನ್ನ Collars ಮತ್ತು Shoes '

' ಇಲ್ಲ ಇಲ್ಲ! ನಾನವುಗಳನ್ನು ಕೊಡುವುದಿಲ್ಲ! ನಿಮ್ಮ ಈ ಚಂದವಾದ ಕತ್ತಿನಲ್ಲಿ ಮೆರೆಯುವ-ನಾನು ಮುಟ್ಟಿ ತೆಗೆಯುತ್ತಲಿದ್ದ-ಆ Collars ಗಳನ್ನು ಆ ಗಯ್ಯಾಳಿಗೆ ಮುಟ್ಟಗೊಡಲಾರೆ. ಆಫೀಸಿನಿಂದ ಬಂದಕೂಡಲೆ ನಾನು ತೆಗೆಯಬೇಕಾದ Shoesಗಳೊಂದಿಗೆ ನಿಮ್ಮನ್ನು ಆ ಬೀದಿಗಿತ್ತಿಯೊಂದಿಗೆ ಕುಣಿಯಗೊಡಲಾರೆ. ಇಂದು ಯಾವ ಅಂಗಡಿಗಿತ್ತಿಯ ದೃಷ್ಟಿ ನಿಮ್ಮಮೇಲೆ ಬಿತ್ತೊ ! ಅವಳ ಮನೆ ಹಾಳಾಗಲಿ— ಅವಳ ದೇಹ ತುಂಡು ತುಂಡು ಆಗಲಿ ! ಅವಳ ದೇಹವನ್ನು ನಾಯಿ-ನರಿ ಹಿಂಡುಂಬ ಎಳೆದಾಡಲಿ ! '

ಹೆಣ್ಣಿನ ಬುದ್ಧಿ

(ಸಣ್ಣಕಥೆ)

ಶ್ರೀ. ಬಿ. ಎಂ. ಕುಲಕರ್ಣಿ ಬಿ. ಇ. (ಸಿವ್ಹಿಲ್), ಸಾಂಗಲಿ

卐

ದಿನದಿನವೂ ಸವಿಯೂಟವನ್ನು ಉಣ್ಣುವವರ ಬಾಯಿ, ನಡು-ನಡುವೆ ಖಾರ-ರೊಟ್ಟಿಯ ರುಚಿಯನ್ನು ಬಯಸುತ್ತದೆ. ಈ ಬದಲಾದ ರುಚಿ-ದಿನದ ಸವಿಯೂಟಕ್ಕೆ ಹೊಸ ಮಾಧುರ್ಯವನ್ನು ಒದಗಿಸುತ್ತದೆ. ಪ್ರೀತಿಯ ದಾಂಪತ್ಯಜೀವನಕ್ಕಂತೂ ಇವರ ಅವಶ್ಯಕತೆ ಬಹಳ !

卐

ಸವಿತಾ, ಗಂಜಿಯುವನಿಂದ ಬಂದ Collars ಎಲ್ಲಿವೆಯೇ ?'

ಈಗ ಯಾಕೆ ಬೇಕಾದುವು ಅವು ?'

ಅಲ್ಲಿ, ನನಗೆ ಬೇಕಾದ ಯಾವ ವಸ್ತುವನ್ನೂ, ನಿನ್ನ ಹತ್ತಿರ ಯಾತಕ್ಕಾಗಿ—ಎಂದು ಕಾರಣ ಹೇಳಿಯೇ ಪಡೆಯಬೇಕೇನೆ ? '

' ಅಲ್ಲ, ಇಂತಹ ಹೊತ್ತಿನಲ್ಲಿ ಅವು ಯಾಕೆ ಬೇಕಾದುವು ? ಈಗ ತಾನೆ ಕ್ಲಬ್ಬಿನಿಂದ ಬಂದು ಊಟ ಮುಗಿಸಿದಿರಿ; ಮತ್ತೆ ಎಲ್ಲಿಗೆ ಹೋಗುವುದು ? '

' ನಾನು ಎಲ್ಲಿಗೆ ಹೋಗುವೆನೆಂಬುದನ್ನು ನಿನಗೆ ಹೇಳಿಯೇ ಹೋಗಬೇಕೇನೇ ? '

' ಅಲ್ಲ, ಅಂತಹ ಮಹತ್ತ್ವದ ಯಾವ ಕಾರ್ಯಕ್ಕೆ ಹೋಗುವುದು ಎಂದೆ ' ಎಂದು ಎಲೆಮಡಿಚಿ ಕೊಡಬಂದಳು.

' ಬೇಡ, ಬೇಡ, ಹೇಗಾದರೂ ಅಲ್ಲಿಗೆ ಹೋಗಲೇಬೇಕು; ಅಲ್ಲಿಯೇ ತೆಗೆದುಕೊಂಡರಾಯಿತು. Collors ಶೀಘ್ರಕೊಡು ನೋಡೋಣ; ವೇಳೆಗಳೆಯಬೇಡ.... '

' ಅಲ್ಲಾ, ಏನು ಎಲ್ಲಿಗೆ ಹೋಗುವುದು ? ರಾತ್ರಿ ೮-೩೦ ಆಯಿತು. ಅದೂ ಈ Full Dressನಲ್ಲಿ ! ಎಲೆಯನ್ನಾದರೂ ತಿನ್ನಬಾರದೆ? ಅದಕ್ಕೂ ವೇಳೆ ಇಲ್ಲವೆ? ನಿಮ್ಮದು ಯಾವಾಗಲೂ ಗಡಿಬಿಡಿಯೆ ! '

' ಹರಟ ಬೇಡ- ವೇಳೆಯಾಗುವುದು, ಶೀಘ್ರ ಕೊಡು. ನಿನಗೆ ಒಮ್ಮೆ ಹೇಳಿಲ್ಲವೇನೆ? ಸೋಪದ ಕೈ- ಎಲ್ಲರಿಗೂ ಸಿಗುವಂತಹ ಸ್ಥಳದಲ್ಲಿ ಇಡು ಎಂದು—ಬೇಗದಕ್ಕೆ ತೆಗೆದುಕೊಂಡು Purseನಲ್ಲಿ ಇಟ್ಟುಕೊಳ್ಳುವುದು ....ನನಗೆ ಅರಿವೆ, Socks, Toilets ಏನೇ ಬೇಕಾದರೂ ನಿನ್ನನ್ನೇ ಕೇಳಬೇಕು—ಶಾಲೆಯ ಮಗು ಶಿಕ್ಷಕರನ್ನು ಕೇಳುವಂತೆ. ಕೇಳಿದ ಮೇಲಾದರೂ ಕೊಡುವಿಯಾ? ಎಲ್ಲಿ, ಯಾಕೆ, ಯಾವಾಗ್ಗೆ?—ಇಂತಹ ನೂರಾರು ಪ್ರಶ್ನೆ. ಮನುಷ್ಯ ಮದುವೆಯ ಹೋಮಕುಂಡದಲ್ಲಿ ತನ್ನ ಸ್ವಾತಂತ್ರ್ಯವನ್ನು ಸುಟ್ಟಮೇಲೆಯೇ ತನ್ನ ಪತ್ನಿಯ ಕೈಹಿಡಿಯುತ್ತಾನೆ. ಶೀಘ್ರ ಕೊಡೇ, ವೇಳೆಯಾಗುವುದು— ಮತ್ತೆ ನನ್ನ Crepe Shoos ತೆಗೆದುಕೊಡು ! '

' ಇಂದೇನಾಗಿದೆ ನಿಮಗೆ?-ಹೀಗೇಕೆ ಸಿಟ್ಟಗೇಳುವಿರಿ ? ಎಲ್ಲಿಗೆ ಎಂಬುದನ್ನಷ್ಟು ಹೇಳಬಾರದೆ ? ಮತ್ತೆ ಕ್ಲಬ್ಬಿಗೊ ? ಅಥವಾ ಆಫೀಸಿನಲ್ಲಿ ಕೆಲಸವೋ ? ಎಲ್ಲಿಗೆ ? '

'ಮತ್ತೆ ಶುರು ನಿನ್ನ ಹಾಳು ಹರಟೆ!—ಈಗ ತಾನೆ ಕ್ಲಬ್ಬಿನಿಂದ ಬಂದಿಲ್ಲವೇನೆ ? ಮತ್ತೆ ಕ್ಲಬ್ಬಿಗೆ ಅಟ್ಟಬೇಕೆಂದು ಮಾಡಿರುವೆಯಾ ? ಎಂದಾದರೂ ನನ್ನ ಆಫೀಸು ರಾತ್ರಿ ಇದ್ದುದು ಗೊತ್ತುಂಟೆ?—ಶೀಘ್ರ ತಂದುಕೊಡು; ನಿಲ್ಲಲು ವೇಳೆಯಿಲ್ಲ. ಇಲ್ಲವಾದರೆ ಕೈಯನ್ನಾದರೂ ಕೊಡು.'

' ಇಂತಹ ವೇಳೆಯಲ್ಲಿ ಕ್ಲಬ್ಬಿಗೆ ಇಲ್ಲ-ಆಫೀಸಿಗೆ ಇಲ್ಲ; ಹಾಗಾದರೆ ಹೋಗುವುದಾದರೂ ಎಲ್ಲಿಗೆ ? ಎಲೆ ತಿನ್ನಿರಿ ಎಂದರೆ, ಅಲ್ಲಿಯೇ ತೆಗೆದುಕೊಂಡರಾಯಿತು ' ಎನ್ನುವಿರಿ. ಹೋಗುವುದೆಲ್ಲಿಗೆ ಎಂಬುದನ್ನಷ್ಟು ಶೀಘ್ರ ಹೇಳಬಾರದೆ ? '

' ಏನೆ, ನಾನು ಹೋಗುವ ಸ್ಥಳಗಳನ್ನೆಲ್ಲ ನಿನಗೆ ಹೇಳಿಯೇ ಹೋಗಬೇಕೇನೆ ? ನನಗೆ ನನ್ನ ಮನಸ್ಸಿಗೆ ಬಂದ ಸ್ಥಳಗಳಿಗೆ ಹೋಗುವ ಸ್ವಾತಂತ್ರ್ಯವಿಲ್ಲವೇನೆ ? ನನ್ನ ಮನವನ್ನು ಆನಂದಿಸಿಕೊಳ್ಳಲು ನಿನ್ನನ್ನೇ ಕೇಳಬೇಕೇನೇ ? ನನಗೆ ಆನಂದ ಸಿಗುವಲ್ಲಿ ಹೋಗುವೆ ! ಶೀಘ್ರ ತಂದುಕೊಡು ! '

' ಇಂದು ಕ್ಲಬ್ಬಿನಲ್ಲಿ, ಆ ರಾಧಾಬಾಯಿಯ ಗಂಡ ಬೆಟ್ ಆಗಿದ್ದರೇನು ? ಅವರು ಕುಡಿಯುತ್ತಾರೆಂದು ಊರೆಲ್ಲ ಹೇಳುತ್ತದೆ ಆವರೊಂದಿಗೆ ನಿಮಗೂ ಸ್ವಲ್ಪ....... '

' ಏ ಬಾಯಿಮುಚ್ಚು ! ಏನು ಮಾತಾಡುವಿ? Collars ಕೊಡು ಎಂಬುದಕ್ಕೆ ' ಸೆರೆ ಕುಡಿದಿರುವಿರಾ ' ಎನ್ನುವಿ. ಅದನ್ನು ನೀನೇ

ಕೇಳಬೇಕು ? ನನಗೆ ಬೇಕಾದರೆ ಕುಡಿಯುವೆ; ಬೇಡವಾದರೆ ಬಿಡುವೆ-ಏನೇ, ನಿನಗೆ ನನ್ನ ಇಷ್ಟು ಕೆಲಸವನ್ನೂ ಮಾಡಲು ತೊಂದರೆ ಏನೆ? ನಿನಗೆ ಬೇಡವಾದರೆ ಬಿಟ್ಟುಬಿಡು; ನನ್ನೆಲ್ಲ ಕೆಲಸಗಳನ್ನು ನಾನು ಮಾಡಿಕೊಳ್ಳಲು ಸಿದ್ಧನಿದ್ದೇನೆ. ಬೇಗದ ಕೈಯನ್ನಾದರೂ ಕೊಡು ನೋಡೋಣ'

'ಇಂದು ನೀವು ಕುಡಿದಿರುವುದು ಖಂಡಿತ! ಎಂದಾದರೂ ನಿಮ್ಮ ಕೆಲಸ ಮಾಡಲು ಇಲ್ಲವೆಂದಿರುವೆನೆ? ನೀವೇ ಹೇಳಿ!'

'ಸಾಕುಬಿಡೆ, ನಿನ್ನ ಗುಣವರ್ಣನೆಯನ್ನು ನೀನೇ ಮಾಡಿಕೊಳ್ಳಬೇಕು. ಒಂದು ದಿನವಾದರೂ ಆಫಿಸಿನಿಂದ ಬಂದಕೂಡಲೆ 'ದಣಿದಿರಾ' ಎಂದು ಕೇಳುವೆಯೇನು? ಬದಲಾಗಿ 'ಯಾಕೆ ತಡ' ಎಂದು ಆಫೀಸ್ Boss ಕೇಳುವಂತೆ, ತಡವಾದದ್ದಕ್ಕೆ ಕಾರಣ ಕೇಳುವಿ. ಎಂದಾದರೂ ನಾನು ಬರುವ ವೇಳೆಗೆ ಚಹ ತಯಾರಿಸಿ ದಾರಿ ಕಾಯುವಿಯಾ? ಬದಲಾಗಿ ಹಾಲಿನ ಬಟ್ಟಲಿನ ಸುತ್ತಲೂ ಬೆಕ್ಕು ಓಡಾಡುವಂತೆ ನನ್ನ ದೇಹದ ಸುತ್ತ ಓಡಾಡುವಿ. ಸಂಜೆಗೆ Makeup ಮಾಡಿಕೊಂಡು ಒಂದುದಿನವಾದರೂ ತಿರುಗಾಡಲು ಬರುವಿಯಾ? ಕರೆದರೆ ಹೇಳುವಿ: ಸಂಜೆಯ ಅಡುಗೆ ಇದೆ-ಎಂದು. ೧ ದಿನವಾದರೂ ನಮ್ಮ ಮನೆಯ ಮುಂದಿನ ಪಾರಸಿ ದಂಪತಿಗಳಂತೆ, Non-vegetarian ಹೋಟೆಲ್ಲಿಗೆ ಕರೆದರೆ ನಗುತ್ತ ಬರುವಿಯಾ?-ಬದಲಾಗಿ ಮಡಿ-ಮೈಲಿಗೆ! ಮಾಂಸ ಮುಟ್ಟಲಾರೆ-ಎಂದು ಯೋಗಿನಿಯಂತೆ ವೇದಾಂತ ಹೇಳುವಿ. ಎಂದಾದರೂ ಮೂಲೆಯ ಮನೆ ಆಪ್ಟೆಯವರಂತೆ, ಕ್ಲಬ್ಬಿಗೆ ಬಂದು ಇಸ್ಪೇಟ್ ಆಡುವಿಯಾ?—ಅದಿರಲಿ, ಮನೆಯಲ್ಲಿ ಒಂದುದಿನವಾದರೂ ನನ್ನ ಸುಖಕ್ಕಾಗಿ ಚಿಂತಿಸುವಿಯಾ? ಬೇಡವೆಂದರೂ ಎಲೆಯಲ್ಲಿ ಹೆಚ್ಚಿಗೆ ಉಣಬಡಿಸುವಿ. ತೇಗುತ್ತ ತಿಂದರೂ—ಎದ್ದಕೂಡಲೆ '೧೧ಗಂಟೆಗೆ ಇನ್ನೂ ಅರ್ಧತಾಸಿದೆ; ಯಾಕಿಷ್ಟು ಅವಸರ?' ಎಂದು ನನ್ನನ್ನು ಮನೆಯಲ್ಲಿ ನಿಲ್ಲಿಸುವಿ! ಆಮೇಲೆ ವೇಳೆಯಾದರೆ, ಓಡುತ್ತ ಹೋಗಬೇಕು ಆಫೀಸಿಗೆ. ಮನೆಗೆ ಬೇಸತ್ತು ಬಂದು ಯಾವುದಾದರೂ ಪುಸ್ತಕ ಓದಲು ತೆಗೆದರೆ 'ಆಫೀಸಿನಲ್ಲಿ ಕೆಲಸಮಾಡಿ ಕಣ್ಣು ನೋಯುವು ದಿಲ್ಲವೆ? ಯಾಕೆ ಆ ಹಾಳು ಪುಸ್ತಕ'-ಎಂದು ಪುಸ್ತಕ ಹರಿಯುವಂತೆ ಎಳೆದು ಒಗೆದು, ಒರಟುದನವನ್ನು ಜಾಣ ಒಕ್ಕಲಿಗ ಸಮಾಧಾನ ಪಡಿಸಿ ತನ್ನ ಕೈಯಲ್ಲಿ ಹಿಡಿಯುವಂತೆ, ನನ್ನ ಗಲ್ಲ ನೇವರಿಸುತ್ತ ಹತ್ತಿರ ಕುಳಿತುಕೊಳ್ಳುವಿ. ಈ ಮನೆಯಲ್ಲಿ ನನಗೆ ತಿನ್ನಲು ಸ್ವಾತಂತ್ರ್ಯವಿಲ್ಲ-ಓದಲು ಸ್ವಾತಂತ್ರ್ಯವಿಲ್ಲ—ಇಲ್ಲಿ ನಾನು ಪೂರ್ಣ ಕೈದಿ. ಇದೇ ಏನೇ ನೀನು ನನ್ನ ಸಲುವಾಗಿ ದುಡಿಯುವುದು?'

'ಇಂದು ಯಾವ ಯಕ್ಷಿಣಿಯ ದೃಷ್ಟಿತಾಗಿತು ನಿಮಗೆ? ದಿನಾಲು ಮನೆಗೆ ಬಂದಕೂಡಲೆ ಎಂತಹ ಪ್ರೇಮದ ಮಾತನ್ನಾಡುತ್ತಿದ್ದಿರಿ; ಎಷ್ಟು ಮೃದುವಾಗಿ ಚುಂ....ಏನಾಯಿತು, ಇಂದು ಏನಾಯಿತು?'

'ಹೌದು ಹೌದು, ಯಕ್ಷಿಣಿಯ ದೃಷ್ಟಿ ತಾಗಿತು. ಅದಕ್ಕಾಗಿ ಒಲೆಯಲ್ಲಿ ಮೆಣಸಿನಕಾಯಿ ಹಾಕಿ ಮನೆಯನ್ನೆಲ್ಲ ತುಂಬಿಸು, ಆ ಹೊಗೆಯಿಂದ! ನಾನು ನಿನಗೆ ಪ್ರೇಮದ ಮಾತನ್ನೇ ಆಡಬೇಕು—ನಿನ್ನನ್ನೇ ಹೊಗಳಬೇಕು. ಇದನ್ನೇ ಅಲ್ಲವೇನೇ ನೀನು ನನ್ನಿಂದ ಅಪೇಕ್ಷಿಸುವುದು? ಹಾಗಿದ್ದರೆ ನನಗೆ ಅದು ಇಂದು ಬೇಜಾರಾಗಿ ಹೋಗಿದೆ. ನಾನು ನಿನ್ನನ್ನು ಲಗ್ನವಾದದ್ದು ನಿನ್ನನ್ನು ಹೊಗಳಲಿಕ್ಕಲ್ಲ—ಆದರೂ ಹೊಗಳಿದರೂ ಏನೋ ಸ್ವಲ್ಪ ಸುಧಾರಿಸಿಕೊಳ್ಳಬಹುದು, ನನ್ನ ಸುಖದ ಸಲುವಾಗಿ ಪ್ರಯತ್ನಿಸಬಹುದು. ಎಂದುಕೊಂಡಿದ್ದೆ. ಆದರೆ ಅದು ಸುಳ್ಳಾಯಿತು. ಈ ಮನೆಯಲ್ಲಿ ನನಗೆ ಸುಖವಿಲ್ಲ. ಶೀಘ್ರ ಕೊಡು ನನ್ನ Collors ಮತ್ತು Shoes! ವೇಳೆ ೯ಗಂಟೆಯಾಯಿತು. ಹೆಚ್ಚಿಗೆ ತಡೆಯಲು ಶಕ್ಯವಿಲ್ಲ; ನಾನು ಇಂದು ಸುಖ ಸಿಗುವಲ್ಲಿಗೆ ಹೋಗುತ್ತೇನೆ'

ಅವಳು ಒಮ್ಮೆಲೆ ಬಂದು ನನ್ನ ಕೈಗಳನ್ನು ಹಿಡಿದು, ತನ್ನ ಗಲ್ಲಗಳಿಗೆ ಹೊಡೆದುಕೊಳ್ಳುತ್ತ, ಅಳುವ ಧ್ವನಿಯಲ್ಲಿ ಹೇಳಿದಳು: 'ನನ್ನ ಯಾವ ತಪ್ಪಾಗಿದ್ದರೂ ಸಾವಿರಸಲ ಹೊಡೆಯಿರಿ; ನಿಮ್ಮ ಪ್ರತಿಕಾರ್ಯದಲ್ಲಿಯೂ ಆನಂದವಿದೆ ನನಗೆ—ನಿಮಗೆ ಒಪ್ಪುವಂತೆ ನಡೆಯುವೆ; ನನ್ನ ತಪ್ಪು ನೀವೇ ಕ್ಷಮಿಸಬೇಕು! ನನ್ನನ್ನು ಬೇಕಾದಷ್ಟು ಹೊಡೆಯಿರಿ; ಎಲ್ಲಿಗೆ ಹೋಗುವಿರಿ ಹೇಳಿರಿ!'

'ಸರಿಯೋ-ದೂರ ಸರಿ! ಸಾಕು ನಿನ್ನ ಈ ನಾಟಕ. ಪ್ರತಿದಿನವೂ ಹೇಳುವಿ: ನನ್ನ ಸಾವಿರ ಕೆಲಸ ಮಾಡಿದರೂ ತೊಂದರೆ ಇಲ್ಲ ಎಂದು. ನನಗೆ ಸುಖವಾಗುವಂತೆ ನಡೆಯುವೆ-ಎಂದು. ನಿಷ್ಟಬುದ್ಧಿ ನಾಯಿಯ ಬಾಲ! ನೀನು ನನಗೆ ಸುಖ ಕೊಡುವುದು ಶಕ್ಯವಿಲ್ಲ. ದೈವಶಾಪದಿಂದ ನಾವಿಬ್ಬರೂ ಒಂದಾಗಿದ್ದೇವೆ. ಇಂದು ನಾನು ನನಗೆ ಸುಖದೊರೆವಲ್ಲಿ ಹೋಗುವೆ. ಮೊದಲು ಕುಲಾಬಾಕ್ಕೆ ಹೋಗಬೇಕು—ಅಲ್ಲಿಂದ ಅವಳೊಂದಿಗೆ ತಾಜ್. ಅಲ್ಲಿ Violet Golsavesಳ mazrulk ನೃತ್ಯವಿದೆ- ಚಿಕ್ಕ ಜೋಕಲೋಟದ ಸಂಗೀತವಿದೆ. ಇಂದಂತೂ Wet day. ಅಲ್ಲಿಂದ ಹನ್ನೆರಡು ಗಂಟೆಗೆ ಕಂಬಾಲಾ ಹಿಲ್; ಅಲ್ಲಿಂದ Hanging Gorden. ಆಮೇಲೆ ಬೆಳುದಿಂಗಳಲ್ಲಿ ಜುಹು ಬೀಚ್. ಅಲ್ಲಿಂದ ಆಮೇಲೆ ಕುಲಾಬಾ. ನಾಳೆ ಬೆಳಗ್ಗೆ ಮತ್ತೆ ನಿನ್ನ ಈ ಸುಡುಗಾಡು ಮೋರೆಯ ದರ್ಶನ. ಸರಿ ಹೋಗು. ನನ್ನನ್ನು ದೇವರೆಂದು ತಿಳಿದಿರುವೆಯಲ್ಲವೆ?-ಹಾಗಿದ್ದರೆ ಅಲ್ಲಿ ಹೋಗು, ಆ ನನ್ನ ಫೋಟೋಕ್ಕೆ ಕುಂಕುಮ ಹಚ್ಚು; ಊದು ಹಾಕು! ನನ್ನೊಂದಿಗೆ ಬಂದು ಆನಂದಿಸುವ ಭಾಗ್ಯ ನಿನಗಿಲ್ಲ. ಬಿಡು ನನ್ನನ್ನು! ಅಂತಹ ಸ್ವರ್ಗಸುಖ ಬಿಟ್ಟು ನಿನ್ನೊಂದಿಗೆ ಹಾಳುಹರಟೆ ಹೊಡೆಯಲು ವೇಳೆಯಿಲ್ಲ—ಶೀಘ್ರಕೊಡು ನನ್ನCollars ಮತ್ತು Shoes'

'ಇಲ್ಲ ಇಲ್ಲ! ನಾನವುಗಳನ್ನು ಕೊಡುವುದಿಲ್ಲ! ನಿಮ್ಮ ಈ ಕಾದವಾದ ಕತ್ತಿನಲ್ಲಿ ಮೆರೆಯುವ-ನಾನು ಮುಟ್ಟಿ ತೆಗೆಯುತ್ತಲಿದ್ದ-ಆ Collars ಗಳನ್ನು ಆ ಗಯ್ಯಾಳಿಗೆ ಮುಟ್ಟಗೊಡಲಾರೆ. ಆಫೀಸಿನಿಂದ ಬಂದಕೂಡಲೆ ನಾನು ತೆಗೆಯಬೇಕಾದ Shoesಗಳೊಂದಿಗೆ ನಿಮ್ಮನ್ನು ಆ ಬೀದಿಗಿತ್ತಿಯೊಂದಿಗೆ ಕುಣಿಯಗೊಡಲಾರೆ. ಇಂದು ಯಾವ ಅಂಗಡಿಗಿತ್ತಿಯ ದೃಷ್ಟಿ ನಿಮ್ಮಮೇಲೆ ಬಿತ್ತೊ! ಅವಳ ಮನೆ ಹಾಳಾಗಲಿ—ಅವಳ ದೇಹ ತುಂಡು ತುಂಡು ಆಗಲಿ! ಅವಳ ದೇಹವನ್ನು ನಾಯಿ-ನರಿ ಹಿಣಿತುಂಬ ಎಳೆದಾಡಲಿ!'

'ಸಾಕುಬಿಡೆ, ಅವಳಿಗೆ ಬಯ್ಯುವ ಅಧಿಕಾರ ನಿನಗಾರು ಕೊಟ್ಟರು ? Collors ಕೊಡದಿದ್ದರೆ ಬಿಡು; ನಿನ್ನೆಯ ಅಂಗಿಯನ್ನೇ ತೊಟ್ಟುಕೊಂಡು ಹೋಗುವೆ; Crape ಕೊಡದಿದ್ದರೆ ಬಿಡು; ಇಂದಿನ ಈ Shoesಗಳನ್ನೇ ಹಾಕುವೆ-ವೇಳೆಯಾಯಿತು ! ನಾನು ಹೋಗಲೇಬೇಕು; ಸರಿ ದೂರ, ಸರಿ ದೂರ !' ಎಂದು ಅವಳನ್ನು ಸರಿಸುತ್ತ ಬಾಗಿಲಿನೆಡೆಗೆ ನಡೆದೆ. ಅವಳು ಕಣ್ಣೀರಿಡುತ್ತ ಬಾಗಿಲಲ್ಲಿ ಅಡ್ಡನಿಂತು:

"ನಿಲ್ಲಿರಿ ನಿಲ್ಲಿರಿ, ನೀವು ಅಲ್ಲಿಗೆ ಹೋಗಲಾರಿರಿ. ಆ ಗಯ್ಯಾಳಿಯ ಮುಂದೆ ನನ್ನ ಸ್ತ್ರೀತ್ವದ ಅಪಮಾನ ಮಾಡಿಕೊಳ್ಳಲಾರೆ. ನಿಮ್ಮ ಸುಖವೇ ನನ್ನ ಧ್ಯೇಯವಿತ್ತು. ನಾನು ಅದನ್ನು ಕೊಡಲಾರೆನೆಂದು ಹೇಳುವಿರಿ. ಇಂದು ನೀವು ಇಷ್ಟು ಸುಲಭವಾಗಿ ಹೋಗಲಾರಿರಿ. ಒಂದುವೇಳೆ ನಿಮಗೆ ಹೋಗುವುದೇ ಬೇಕಾಗಿದ್ದರೆ, ನಾನು ಜೀವಂತ ಇರುವವರೆಗೂ ಹೋಗಲಾರಿರಿ ! ನನ್ನನ್ನು ನಿಮ್ಮ ಕೈಯಿಂದಲೇ ಕತ್ತುಹಿಸುಕಿ ಹಾಕಿ, ನನ್ನ ಮೃತಶರೀರವನ್ನು ನಿಮ್ಮ ಕಾಲಿನಿಂದ ಒದೆದು, ಆಮೇಲೆ ಹೋಗಿರಿ !" ಎಂದು ನನ್ನ ಕೈಗಳಿಂದ ತನ್ನ ಕತ್ತು ಹಿಸುಕಿಕೊಳ್ಳಹತ್ತಿದಳು.

ಅವಳ ಕಣ್ಣೀರು ಅವಳ ಎದೆಗಳನ್ನು ತೋಯಿಸಿದ್ದಿತು. ಅವಳ ಮೊಗ ಆರಕ್ತವಾಗಿತ್ತು. ಅಲ್ಲಿ ಅವರ್ಣನೀಯ ಸೌಂದರ್ಯವಿತ್ತು. ಇದುವರೆಗೆ ಪ್ರಯತ್ನಪೂರ್ವಕವಾಗಿ ತಡೆದ ನಗೆಯನ್ನು ಆಮೇಲೆ ತಡೆಯುವುದಾಗಲಿಲ್ಲ. ಅವಳ ಹಾಲುಗುಲಾಬಿಯ ತುಂಬುಗಲ್ಲಗಳನ್ನು ಹಿಂಡುತ್ತ ಹೇಳಿದೆ:

'ಸವಿತಾ, ಹೆಣ್ಣಿನ ಬುದ್ಧಿ.......... ಅಂತ ಏನೋ ಒಂದು ಗಾದೆಯನ್ನು ಕೇಳಿದ್ದೆ. ಅದರ ಪ್ರತ್ಯಕ್ಷ ಅನುಭವವಾಯಿತು ಬಿಡು. ನನ್ನವಳಾಗಿ ನಾಲ್ಕು ವರುಷವಾದರೂ, ನನ್ನನ್ನು ಗುರುತಿಸದೆ ಹೋದೆಯಲ್ಲೆ ? ನಿನ್ನನ್ನು ಬಿಟ್ಟು ಒಂದರಗಳಿಗೆ ನಾನು ಜೀವಿಸಲು ಶಕ್ಯವೆ ? ನಿನ್ನ ಹೊರತಾಗಿ ನನಗೆ ಸುಖವುಂಟೆ ? ಅಂದು ಹೇಳಿರಲಿಲ್ಲವೇನೆ—Knock on wood-Picture ಬಂದಮೇಲೆ ಹೋಗುವಾ—ಎಂದು. ಇಂದು Eros ನಲ್ಲಿ ಹಚ್ಚಿದೆ ಕಣೆ! ಅದಕ್ಕಾಗಿ ಟಿಕೆಟ್ಟು ಕೊಂಡುತಂದಿದ್ದೇನೆ. ಏಳು, ನಿನ್ನ ಈ ದಾಕ್ಷಾಯಣೀ ಅವತಾರ ತೊರೆ ! ಜಾರ್ಜೆಟ್ಟು ಉಟ್ಟು ಬಾ !'

ವರ್ಷಾಕಾಲದ ಆಕಾಶದಲ್ಲಿಯ ಮೋಡಗಳು ಗಾಳಿಗೆ ಹರಿದು ಹೋಗುವಂತೆ, ಅವಳ ಮೊಗ ನಿರ್ಮಲವಾಗಿ ಅಲ್ಲಿ ಮುಗುಳ್ನಗೆಯ ಮಿಂಚೊಂದು ಹರಡಿತು. ನನ್ನನ್ನು ಬಿಟ್ಟು ಒಳ ಹೋಗುವಾಗ ಕುಡಿಗಣ್ಣಿಂದ ನೋಡುತ್ತ

'ನಿಮಗೆ ನನ್ನನ್ನು ಎಷ್ಟುಸರಿ ಸತಾಯಿಸಿದರೂ ತೃಪ್ತಿ ಇಲ್ಲ' ಎಂದಳು.

ನನ್ನ ಹಾಡು

"ನೀಲಕಂಠ" ಮುಂಬಯಿ

ಒಮ್ಮೊಮ್ಮೆ
ಇದ್ದುದಿದ್ದಂತೆಯೆ ಎನಿಸುವುದು:
ಸತ್ತು ಬಿಡಬೇಕು.
ಇದು ಸುಖದ ಪರಮಾವಧಿಯು !
ಸಾಯುವೊಡೆ ಸಾಯುವುದು ಈಗಲೇ —ಎಂದಲ್ಲ;
ಈ ಜಗದ ಜಂಜಾಟ ನರಳಾಟ ಸಾಕಾಯ್ತು,
ಬೇಸತ್ತೆ—ಎಂದೂ ಅಲ್ಲ.
ಹೀಗೆಯೇ ಎನಿಸುವುದು: ಸತ್ತು ಬಿಡಬೇಕು.
ಬದುಕಬೇಕು ಎಂಬ ಹಂಬಲದಷ್ಟೇ
ಸಹಜವಾಗಿ—ತೀವ್ರವಾಗಿ.
ಎನಿಸುವುದು ಒಮ್ಮೊಮ್ಮೆ:
ನನ್ನ ಆತ್ಮದ ನರನರಗಳೆಲ್ಲ ಬಿದ್ದಿವೆ
ಗಿಜಬಿಜಿಯಾಗಿ, ಗಂಟು ಗಂಟಾಗಿ ಸುತ್ತಿಕೊಂಡು;
ಎದೆಯ ಬಿಚ್ಚಿದರೆ ಗುಮ್ಮೆನುವುದು ಎಂತಹದೋ
ವಿಚಿತ್ರ ವಾಸನೆ—ಹಳಸಿದೆಯೊ ಏನು ಮಣ್ಣೊ !
ಹೊರಟಾದರೂ ಹೋಗಬೇಕು ದೂರದ ಕಾಡುಬೆಟ್ಟಕ್ಕೆ.
ಯಾರಿಗೂ ಕಾಣದಂತೆ ಯಾರಿಗೂ ಕಾಣದ ತಾಣಕ್ಕೆ
ಅಲ್ಲಿ—
ಸ್ವಚ್ಛವಾದ ನೀರಿನ ಕೊಳದಲ್ಲಿ
ನನ್ನಾತ್ಮವನ್ನು ಬತ್ತಲೆಗೊಳಿಸಿ ತೋಯಿಸಬೇಕು.
ಝಳಝಳ; ಬಿಸಿಲಲ್ಲಿ ಹಾಕಿ ಒಣಗಿಸಬೇಕು.
ಬಿದ್ದ ಗಂಟುಗಳನ್ನೆಲ್ಲ ಬಿಡಿಸಿ, ನಿರಿಗೆ ತೆಗೆದು
ತೊಡಬೇಕು ತಿರುಗಿ; ತಿರುಗಿ
ಬರಬೇಕು ಹೊಚ್ಚ ಹೊಸಬನಾಗಿ !
ಒಮ್ಮೊಮ್ಮೆ (ಬೆಳಗ್ಗೆ),
ಹಾಸಿಗೆಯಿಂದ ಏಳುವ ಹೊತ್ತಿಗೇ
ಬೆಳಕು ತೂರಿಬಂದಾಗ ಕಿಡಕಿಯೊಳಗಿಂದ
ಮಡದಿಯು ತವಕದಿಂದ;
ರಾತ್ರಿ ಬಿದ್ದ ಮಳೆಯಲ್ಲಿ
ಸ್ವಚ್ಛವಾಗಿ ನಿಂತ ಗಿಡ, ಬಳ್ಳಿ
ನನ್ನೆಡೆಗೇ ನೋಡುವಾಗ ಹಸಿರು ಕಣ್ಣಿಂದ
ತಾಯ ನೋಟದಿಂದ;
ಬಾನು ನಿಲ್ಲುವುದು ದೇವರ ಹರಕೆಯಂತೆ—
ಕೇಕೆ ಹಾಕುವುದು ಮನ ಚಿಕ್ಕ ಮಗುವಿನಂತೆ
ತಂತಾನೆ ಹರುಷಗೊಂಡು:
ಬದುಕಬೇಕು, ಅಹಾ ಬದುಕಬೇಕು, ಅಹಾ
ಬದುಕಬೇಕು—ಎಂದು.
ಎಂದೂ ಸಾಯಬಾರದೆಂದು !

ಸಾಹಿತ್ಯವಿಮರ್ಶೆಯ ಶಿಕ್ಷಣರಂಗ

ಕಳೆದ ಸಂಚಿಕೆಯಲ್ಲಿ ಬಿನ್ನವಿಸಿಕೊಂಡಂತೆ 'ಸ್ಟ್ರೈಕು' ಜೀವನಚಿತ್ರವನ್ನು ಕುರಿತ ವಿಮರ್ಶೆ ಒಬ್ಬರಿಂದಲೂ 'ಟ್ರೊಕಾಪಿ' ವ್ಯಂಗ್ಯರೂಪಕವನ್ನು ಕುರಿತು ಒಂಬತ್ತು ಜನರಿಂದಲೂ ವಿಮರ್ಶೆಗಳು ಬಂದಿವೆ:

'ಸ್ಟ್ರೈಕು' ವಿಮರ್ಶಿಸಿದವರು:

ಶ್ರೀ. ಎಚ್. ಡಿ. ಟಿ. ಇನಾಮದಾರ, ಗುಲ್‌ಬರ್ಗಾ

'ಟ್ರೊಕಾಪಿ' ವಿಮರ್ಶಿಸಿದವರು:

೧ ಶ್ರೀ. ಜಿ. ಎಸ್. ಹೆಗಡೆ, ಕೇರಿಮನೆ, ಶಿರಸಿ. ೨ ಶ್ರೀ. ಐ. ಬಿ. ಪಾಂಡೇಲು, ನೀರ್ಚಾಲು. ೩ ಶ್ರೀ. ಹೆಚ್ ನಾಗರಾಜರಾವ್, ವೀರಶೈವ ಕಳಾಶಾಲೆ, ಬಳ್ಳಾರಿ. ೪ "ಗಮಕ" ಎಂ. ಎಸ್. ಸಿ. ಹೈಸ್ಕೂಲ್, ಪೆರಡಾಲ. ೫ ಶ್ರೀ. ವಿ. ಎಲ್. ಜೋಶಿ, ಬೋರ್ಡ್ ಹೈಸ್ಕೂಲ್, ಕೊಟ್ಟೂರು. ೬ ಶ್ರೀ. ಆರ್. ಎಸ್. ತಿವಾರಿಪುರ ಎಂ. ಎಸ್. ಯಾಳಗಿ. ೭ ಶ್ರೀ. ಎಮ್ಮೆ. ಶಂಕರ ನಾರಾಯಣಭಟ್ಟ, ಎಂ. ಎಸ್. ಕಾಲೇಜ್, ಪೆರಡಾಲ. ೮ ಶ್ರೀ. ಕೆ. ಎಸ್. ನಾರ್ಣ, ಎಂ. ಎಸ್. ಸಿ. ಹೈಸ್ಕೂಲ್, ಪೆರಡಾಲ. ೯ ಶ್ರೀ. ಕೆ. ಎಸ್. ಶರ್ಮಾ, 'ವಾಣೀಮಂದಿರಂ' ಕಾಸರಗೋಡು.

ಎಲ್ಲ ವಿಮರ್ಶೆಗಳನ್ನೂ ಸಂಪಾದಕ ಮಂಡಲಿಯವರೇ ನೋಡಿ ತಮ್ಮ ನಿರ್ಣಯವನ್ನು ಕೊಟ್ಟಿದ್ದಾರೆ:

"ಸ್ಟ್ರೈಕು" ಜೀವನ ಚಿತ್ರವನ್ನು ವಿಮರ್ಶಿಸಿ ಒಬ್ಬರಿಂದಲೆ ಮಾತ್ರ ಲೇಖನ ಬಂದುದು ಆಶ್ಚರ್ಯದ ವಿಷಯ. ಅಂತಹ ಒಳ್ಳೆಯ—ಹೊಸ ಮಾದರಿಯ—ಸ್ವಭಾವಚಿತ್ರಣವೂ ನಮ್ಮ ತರುಣ ವಿಮರ್ಶಕರ ನಿರ್ಲಕ್ಷ್ಯಕ್ಕೆ ಏಕೆ ಕಾರಣವಾಯಿತೋ ಗೊತ್ತಾಗಲಿಲ್ಲ ಇದರ ಬಗೆಗೆ ಒಂದೆ ಒಂದು ವಿಮರ್ಶೆ ಬಂದಿದ್ದರೂ ಹದವರಿತು ಮಾಡಿದುದಾಗಿದೆ. ಸಂತೋಷ!

"ಟ್ರೊಕಾಪಿ" ಬಗೆಗೆ ಬಂದ ವಿಮರ್ಶೆಗಳಲ್ಲಿ ಶ್ರೀ. ಕೆ. ಎಸ್. ಶರ್ಮಾ ಅವರದು ಅತ್ಯುತ್ತಮವಾಗಿದೆ. ಶ್ರೀ. ಕೆ. ಎಸ್. ನಾರ್ಣ, ಶ್ರೀ. ಎಲ್. ವಿ. ಜೋಶಿಯವರ ವಿಮರ್ಶೆಗಳು ಉತ್ತಮವಾಗಿವೆ. ಶ್ರೀ. ಜಿ. ಎಸ್ ಹೆಗಡೆ, "ಗಮಕ" ಅವರ ವಿಮರ್ಶೆಗಳು ಚೆನ್ನಾಗಿವೆ. ಮಿಕ್ಕವು ಸಾಮಾನ್ಯವಾಗಿವೆ."

ಮುಂದಿನ ತಿಂಗಳ ಶಿಕ್ಷಣರಂಗಕ್ಕಾಗಿ ಹೊಸ ರೀತಿಯೊಂದನ್ನು ಅನುಸರಿಸಬೇಕಾಗಿದೆ. **"ಕಳೆದ ಮೂರು ತಿಂಗಳಲ್ಲಿ ನಾನು ಓದಿದ ಒಂದು ಒಳ್ಳೆಯ ಹೊಸ ಕಾದಂಬರಿ"** ಎಂಬ ಶೀರ್ಷಿಕೆಯಲ್ಲಿ, ತಮಗೆ ಮೆಚ್ಚಿಕೆಯಾದ ಒಂದು ಹೊಸ ಕಾದಂಬರಿಯ ವಿಮರ್ಶೆ ಬರೆದು ಕಳುಹಬೇಕು. ಮೊದಲನೆಯ ಸ್ಥಾನ ಪಡೆದ ವಿಮರ್ಶಕರಿಗೆ ೩ ರೂಪಾಯಿ ಬೆಲೆಯುಳ್ಳ ಒಂದು ಪುಸ್ತಕವನ್ನು ಬಹುಮಾನ ಕೊಡುವುದಾಗಿ ಒಬ್ಬ ಮಹನೀಯರು ನಮಗೆ ತಿಳುಹಿರುವರು. ಹೆಚ್ಚು ಜನರು ಈ ಮೇಲಾಟದಲ್ಲಿ ಭಾಗವಹಿಸಬೇಕೆಂದು ನಮ್ಮ ಬಿನ್ನಹ.

—ಸಂಪಾದಕರು

"ಸ್ಟ್ರೈಕು"

(ಜೀವನಚಿತ್ರದ ವಿಮರ್ಶೆ)

ಶ್ರೀ. ಎಚ್. ಡಿ. ಟಿ. ಇನಾಮದಾರ, ಗುಲ್ಬರ್ಗಾ

ಜೀವನವನ್ನು ಸೂಕ್ಷ್ಮವಾಗಿ ಪರಿಶೀಲಿಸುವವಗೆ, ವ್ಯಕ್ತಿಗಳ ಅಂತರಂಗದಲ್ಲಿ ಅನವರತ ನಡೆದ ಅಲ್ಲೋಲ-ಕಲ್ಲೋಲವನ್ನೂ—ಅದರ ಮೂಕನುಡಿಯನ್ನೂ ಅರಿಯುವ ರಸಿಕನಿಗೆ—ಎಂತಹ ಕಟುತರ ಸಂನ್ನಿವೇಶಗಳಲ್ಲಿಯೂ ಹಾಸ್ಯ ಇಲ್ಲವೆ ಅದರ ಸುಳಿವು ಹತ್ತದಿರುವುದಿಲ್ಲ. 'ಜೀವನಚಿತ್ರಣ'ದಲ್ಲೂ ಈ ಮೋಜನ್ನು ಕಾಣಬಹುದು ಇಲ್ಲಿರುವ ವ್ಯಕ್ತಿಗಳ ಸ್ವಭಾವ ವೈವಿಧ್ಯಪೂರ್ಣವಾದದ್ದು, ಅವರ ಸ್ವಭಾವಾವಿಷ್ಕರಣ ಸ್ವಲ್ಪ ಬಿಗಿ; ಆದರೂ ಸೂಕ್ಷ್ಮವಾಗಿ ವ್ಯಕ್ತವಾಗುತ್ತವೆ. ಅವರ ಪರಿಚಯುವನ್ನು ಚೆನ್ನಾಗಿ ಹೊಂದಬಹುದಾದರೂ, ಅದನ್ನು ಅಲ್ಲಲ್ಲಿ ಸೂಚ್ಯವಾಗಿ ನಿರ್ದೇಶಿಸಲಾಗಿದೆ.

ಇಲ್ಲಿರುವ ವ್ಯಕ್ತಿಗಳಲ್ಲಿ ಏನಾದರೇನೆಂಬ ಗಂಗಾರಾಮ-ನಿದ್ದಾನೆ; 'ಪ್ರಿನ್ಸಿಪಲ್' ಎಂದು ಒಟಗುಟ್ಟಿಯೂ ಕೈಹಿಸುಕಿ ಹಿಂದೆ ಸರಿಯುವ—'ಆರಂಭಶೂರ' ವಾಸು ಪರಾಂಜಪೆ ಇದ್ದಾನೆ. ಇನಿಯನನ್ನರಸುವಿಕೆಯಲ್ಲೇ ತೊಡಗಿರುವ 'ಪ್ರಭಾ' ಇದ್ದಾಳೆ. 'ಕೋರ್ಟ್‌ಶಿಪ್'ಗಾಗಿಯೇ ಹೆಣಗುವ 'ದೇವದಾಸ'ನಿದ್ದಾನೆ. 'ದಾಂಪತ್ಯ ಜೀವಿಗಳು'—ತಾಮ್ಹಣಕರ್ ಹಾಗೂ ರೊಡ್ರಿಗ್ಸ್‌ರು, ಇನ್ನೂ ಹಲವರಿದ್ದಾರೆ—ಎಲ್ಲರೂ ನಿತ್ಯಜೀವನದ ಒಂದೊಂದು ಸ್ವಭಾವದ ಪ್ರತಿನಿಧಿಗಳು.

ವಸ್ತು?

ರಸವತ್ತಾದುದು. ಸ್ವಭಾವಾವಿಷ್ಕರಣವನ್ನೇ ಗುರಿಯಾಗಿಟ್ಟುಕೊಂಡು ಆರಿಸಿದ ಒಂದು ಸನ್ನಿವೇಶ:—ಬುದ್ಧಜಯಂತಿಗಾಗಿ ರಜೆ ಬೇಕಾಗಿದೆ;ಅದಕ್ಕಾಗಿ ಸ್ಟ್ರೈಕು–ಆದರೂ ಎಲ್ಲರೂ ಆಫೀಸಿಗೆ ಬರುತ್ತಾರೆ. ಆದರ್ಶ'ಕ್ಕಾಗಿ ಹೆಣಗಾಡುವ ಪರಾಂಜಪೆ. ಬಾಸಸ್ ಬರುವುದಕ್ಕಿಂತ ಮುಂಚೆ ಸಾಕಷ್ಟು ಮಾತಾಡುತ್ತಾನೆ; ಅವನ ಮನವನ್ನು ಗೆಲ್ಲುವ ಹುಚ್ಚುಮನಸ್ಸಿನಿಂದ–ಅಲ್ಲ–ಪ್ರೇಮಾತಿಶಯದಿಂದ, ಪ್ರಭಾ ಆತನಿಗೆ ಬೆಂಬಲವಾಗಿ ನಿಲ್ಲಲೆಳಸುತ್ತಾಳೆ—ಅಥವಾ ಹಾಗೆ ಕಾಣುವಂತೆ ವರ್ತಿಸುತ್ತಾಳೆ. 'ಸೇರಿದ್ದ' ಯಾರಲ್ಲಿಯೂ 'ಬಂದದ್ದು ಬರಲಿ' ಎಂಬ ಆ ಧಾರ್ಷ್ಟ್ಯ, ಆ ಬಿಗುಹು ಇಲ್ಲ. 'ಬಾಸಸ್' ಬಂದೊಡನೆ ತಾವು 'ಮರ್ಜಿ' ಕಾಯ್ದು ಗಳಿಸಿರುವ ಕೆಲಸಗಳಿಗೆಲ್ಲಾ ಎಲ್ಲಿ ಸಂಚಕಾರ ಬರುವುದೋ ಎಂದು ಬೆದರಿಕೆ. ತಾಮ್ಹಣಕರ ಸ್ಟ್ರೈಕಿನ ಉದ್ದೇಶವನ್ನು ಸ್ವಲ್ಪ ಧೈರ್ಯವಾಗಿಯೇ ಹೇಳುತ್ತಾರೆ—ಆದರೇನು? ಜೀವನಲಾಲರ ಚಾಣಾಕ್ಷತನದಿಂದ ಆಫೀಸು ನಡೆಯುತ್ತದೆ; ಆದರೆ ಜೀವನಲಾಲ-ಭಗತ್ ಡಿಸ್ಟ್ರಿಬ್ಯೂಟಿಂಗ್ ಸಂಸ್ಥೆಯ ಎಲ್ಲರ ಪರಿಚಯವೂ ಆಗುತ್ತದೆ.

ವ್ಯಕ್ತಿ ವೈಶಿಷ್ಟ್ಯ ??

ಈ ಚಿತ್ರಣದ ಮುಖ್ಯ ಉದ್ದೇಶವದು.

ಆರಂಭಶೂರ 'ಪರಾಂಜಪೆ'ಯಿಂದಲೆ ಈಗ ಆರಂಭಿಸೋಣ:— ಇವನನ್ನು ನೆನಸಿದೊಡನೆಯೆ "ಜ್ಯೂಲಿಯಸ್ ಸೀಝರ್"ನ ಕಾಸಿಯಸ್ ನೆನಪಿಗೆ ಬರುತ್ತಾನೆ. ಅಲ್ಲಿಯ ಪ್ರಸಂಗ ಸ್ವಲ್ಪ ಭಿನ್ನವಾದರೂ ಇಂತಹದೇ! ಆದರೆ 'ಕಾಸಿಯಸ'ನಲ್ಲಿದ್ದಷ್ಟು ಬಿಗುಹು, ಚಾಣಾಕ್ಷತೆ, ಕರ್ತವ್ಯ ಪರಿಪಾಲನೆ ಇವನಲ್ಲಿದ್ದರೆ–ಅಂದು ರಜೆ ಸಿಕ್ಕಬಹುದಿತ್ತೇನೊ! ಆದರೆ 'ಪರಾಂಜಪೆ' ಹಾಗಲ್ಲ. ಇದ್ದ ಏಳು ಜನರಲ್ಲಿ ಮಾತಾಡುವವನೆಂದರೆ ಇವನೊಬ್ಬನೆ; ಹೇಗೆ, ಹಾಗೂ ಯಾವಾಗ—ಮಾತಾಡಬೇಕೆಂಬುದನ್ನು ಮಾತ್ರ ಇವನು ಅರಿಯ. ಇವನು ಕೇಳಿದ ಪ್ರಶ್ನೆ. "ಬಾಸ್‌ಗಳು ಬಂದಮೇಲೆ, ಎಲ್ಲರೂ ತಮತಮಗಾಗಿಯೇ ಮಾತಾಡುವುದೆ? ಯಾರಾದರೊಬ್ಬನು ಎಲ್ಲರಿಗಾಗಿ ಮಾತಾಡುವುದೆ?" ಎಂಬುದು ಮೆಚ್ಚತಕ್ಕುದು; ಆದರೆ 'ಇಲ್ಲ'—'ಹೌದು' ಯಾವುದನ್ನೂ ಕೇಳದೆ, "ಮಾತಾಡುವ ಕೆಲಸ ನನಗೇ ಬಿಟ್ಟುಬಿಡಿ" ಎಂಬುದು ಮುತ್ಸದ್ದಿತನದ ಲಕ್ಷಣವಲ್ಲ—ಅದನ್ನವನರಿತಿಲ್ಲ. ಜವಾಬ್ದಾರಿ ತನ್ನ ಮೇಲೆಯೇ ಬಿತ್ತೆಂದುಕೊಂಡು, ಮನಸ್ಸಿನಲ್ಲಿ ಏನೇನೋ ಲೆಕ್ಕಹಾಕಿ, ಇನ್ನುಳಿದವರಿಗೆ ಮುನ್ನೆಚ್ಚರಿಕೆ ಕೊಡುತ್ತಾನೆ: "ಈಗ ಹೊ ಎಂದು ಕಡೆಗೆ ಯಾರಿಗೂ ತಿಳಿಯದಂತೆ ಎಪಾಲಜಿನೋಟ್ ಬರೆದು ಕಳಿಸಿ, ಕೇಸ್ ನಾಚಿಕೆಗೇಡುಮಾಡೀರಿ" ಎಂದು. ಇದು ಸ್ಪೃಹಣೀಯ. ಆದರೆ ಬಾಸುಗಳು ಬಂದನಂತರ ಕೈಬಿಡುತ್ತಾನೆ. ಇಂತಹವರ 'ನಾಯಕತ್ವ'ದಿಂದಲೇ ಕೆಲಸಗಳು ಹಾಳಾಗುವುದು. "ನಾನು ಮೊದಲೇ ಹೇಳಿರಲಿಲ್ಲವೆ?" ಎಂದು ತಲೆ ತುರಿಸುತ್ತಾನೆ—ಮುಂಚೆ—ಉತ್ತರಿಸುವುದಿಲ್ಲ. ಏಕೆ? ಈ ಬಗ್ಗೆ ಲೇಖಕರಿಗೇ ಸಂಶಯ.

ಮಿಸೆಸ್ ರೊಡ್ರಿಗ್ಸ್— ಮೆಚ್ಚತಕ್ಕಂತಹವಳು. ಅವಳದು "ಸಹಜ ಪ್ರೇಮುಲ ವ್ಯಕ್ತಿತ್ವ." ಅವಳಲ್ಲಿರುವ "ಸಾಂತ್ವನ ಬುದ್ಧಿ" ವ್ಯವಹಾರ ಜ್ಞಾನ, 'ಅನುಕಂಪ'— ಅನುಕರಣೀಯ. ಅದನ್ನು ಸೂಚ್ಯವಾಗಿ— ಆದರೂ— ಚಾಣಾಕ್ಷತನದಿಂದ ನಿರ್ದೇಶಿಸಿದ್ದಾರೆ. ದೇವದಾಸನಿಗೆ 'ಡೊಂಚ್ಯುವರಿ— ಆಕೆ ಸ್ವಲ್ಪ ಚಂಚಲ!" ಎಂದು ಹೇಳಿ, "ಲಕೀ ಗರ್ಲ್, ನಾನು ಹೇಳಲೇ ಮಿಸ್ಟರ್ ಪರಾಂಜಪೆಗೆ?" ಎಂದು ಅನುಕಂಪಿಸಿ, ಅವಳು "ಓ ನೋ, ನೆವ್ಹರ್, ನನ್ನಾಣೆ" ಎಂದು ಹುಸಿಮುನಿಸು ತೋರಿದಾಗ "ಆಲ್‌ರೈಟ್" ಎಂದು ನಕ್ಕು ಗಲ್ಲ ಹಿಂಡುತ್ತಾಳಂತೆ. ಎಂತಹ ಪ್ರೇಮುಲ ವ್ಯಕ್ತಿತ್ವ!!

ಇವಳಲ್ಲಿ ಮುತ್ಸದ್ದಿತನ ಬೇಕೋ? ಇದನ್ನು ನೋಡಿ:

"ಹೀಗೇಕೆ?—ಎಂದು ಕೇಳಿದಾಗ, ಸ್ಪಷ್ಟವಾಗಿ ಆದರೂ ಮರ್ಯಾದೆಯಾಗಿ ಹೀಗ್ಹೀಗೆ—ಎಂದು ಹೇಳಿದರಾಯಿತು. 'ರಿಸ್ಪಾನ್ಸಿಬಿಲಿಟಿ' ಎಲ್ಲರ ಮೇಲೆ ಬರುವಂತೆ ಮಾತಾಡಬೇಕು." ಮುತ್ಸದ್ದಿತನ ಅವಳಲ್ಲಿದೆಯಲ್ಲವೆ?

ಸ್ವಲ್ಪ ವಯಸ್ಸಾದ ವ್ಯಕ್ತಿ ಎಂದರೆ ತಾಮ್ಹಣಕರ್. ಅದನ್ನು ಲೇಖಕರು "ಕನ್ನಡಕವನ್ನು ಇನ್ನೂ ಮೇಲೇರಿಸುತ್ತ" ಎಂದು ಬರೆದೂ — ವಾಸುವಿನ ಬಾಯಿಂದ "ಗೀಲರಲ್ಲೇ ಕೆಲಸ ದೊರಕಿಸಿಕೊಂಡರೆಂದು" ಹೇಳಿಸಿಯೂ— ಬಲು ಜಾಣ್ಮೆಯಿಂದ ಸೂಚಿಸಿದ್ದಾರೆ. ಯಾವುದಕ್ಕೂ ಕುತೂಹಲವನ್ನೂ ಉತ್ಸಾಹವನ್ನೂ ಆಶ್ಚರ್ಯವನ್ನೂ—ಯಾವುದನ್ನೂ ವ್ಯಕ್ತಪಡಿಸದೆ—ಸಂಯಮದಿಂದ ವರ್ತಿಸಿ, ತಮ್ಮ ಬಗೆಗಿನ ಇತರರ ಅಭಿಪ್ರಾಯವನ್ನು "ಅನಿಶ್ಚಿತ" ವಾಗಿಯೇ ಉಳಿಸುವುದರಲ್ಲಿ ಯಶಸ್ವಿ ತಾಮ್ಹಣಕರ್. ಅದು ಅಧಿಕಾರಿಗಳ ಲಕ್ಷಣ. ಯಾವ ಪಕ್ಷವನ್ನೂ ವಹಿಸದೆ— ಉಭಯಪಕ್ಷಗಳಿಗೂ ಬೇಕಾಗುವಂತೆ ಪರಿಸ್ಥಿತಿಯ ಕಡಿವಾಣವನ್ನು ಹಿಡಿಯುವ ಜಾಣ್ಮೆ ಅವರದೇ. ಅವರ ಭಾಷೆ ನೇರವಾದದ್ದು; ಪರಿಣಾಮಕಾರಿಯಾದದ್ದು. ಮುನ್ನಾದಿನ ಸ್ಟ್ರೈಕಿನ ಪ್ರಸ್ತಾಪ ಬಂದಾಗ, ಯಾವ ಖಚಿತವಾದ ಅಭಿಪ್ರಾಯವನ್ನು ಕೊಡದಿದ್ದರೂ "ಹ್ಞಾ, ನೀವೆಲ್ಲಾ ಕೆಲಸ ಮಾಡದಿದ್ದರೆ—ನಮಗೂ ರಜಾ ಆಯಿತಲ್ಲ—ನಾನೇನು ಬಿಳಿ ಕಾಗದದ ಮೇಲೆ ಸಹಿ ಹಾಕ್ಬೇಕೆ?" ಎಂದು ಹೇಳ್ತಾರೆ. ಇದು ಮೇಲಿನ ಅಭಿಪ್ರಾಯಕ್ಕೆ ಸರಿ ಹೊಂದುವುದೋ ಹೇಗೆ—ನೋಡಿ.

ಇನ್ನುಳಿದ ವ್ಯಕ್ತಿಗಳಲ್ಲಿ 'ಪ್ರಭಾ ಮಹೇಶ್ವರ್' ಹಾಗೂ 'ದೇವದಾಸ ಶಾನಭಾಗ' ಮುಖ್ಯರು. 'ಮಜನು'ವನ್ನಾರಿಸುವ 'ಲೈಲಾ'— ಪ್ರಭಾ; ಅವಳಿಗಿದ್ದ ಒಂದೇ ಆಶೆ, ಪರಾಂಜಪೆಯ ಪ್ರೇಮ. 'ಲೈಲಾ' ಳನ್ನಾರಿಸುವ 'ಮಜನು'— ದೇವದಾಸ— ಅವನಿಗಿದ್ದ ಒಂದೇ ಆಶೆ, ಪ್ರಭಾ ಮಹೇಶ್ವರಳ ಕುಡಿನೋಟ. ಪ್ರಭಾ ಮಿತಭಾಷಿಣಿ ತಾರೆಯರಂತೆ ಕಾಣಬೇಕೆಂಬಾತುರ ಅವಳಿಗೆ ಅವಳು ಮುಖಸ್ತುತಿಗೆ ಒಳಗಾಗುತ್ತಾಳೆ. ಯಾರೋ ಹೇಳಿದ ಮಾತಿಗಾಗಿ 'ನರ್ಗೀಸಳ ಪ್ರತಿಯೊಂದು ಚಿತ್ರ ನೋಡುವುದು. - ಕನ್ನಡಿಯೆದುರು ನಿಂತಾಗ ಹುಬ್ಬೇರಿಸುವುದು'— ಇದಕ್ಕೆ ನಿದರ್ಶನ ಅದನ್ನೇ ಪರಾಂಜಪೆಯನ್ನು ಸೆಳೆಯುವ ಅಸ್ತ್ರವಾಗಿರಿಸಿಕೊಂಡಿದ್ದಳೆಂದೂ ತಿಳಿಯುತ್ತದೆ. 'ದೆವದಾಸ' ನಿಗೆ 'ಆದರ್ಶ' ಬೇಕಿಲ್ಲ; ರಜೆ ಸಿಕ್ಕರೆ, "ರೀಗಲ್‌ನಲ್ಲಿ ಬುಕ್ ಮಾಡುವುದೆ" ಅವನಿಚ್ಛೆ. ಅದಕ್ಕೆ ವಿಪರೀತವಾಗಿ—ಏಕೆ? ತೀರ ವ್ಯತಿರಿಕ್ತಳಾಗಿ—ಪ್ರಭಾ. 'ಪರಾಂಜಪೆ ಯನ್ನೇ ಅನವರತ ಧ್ಯಾನಿಸುವುದು ಅವಳ ದಿನಗೆಲಸ ಪ್ರಭಾಳನ್ನು ನೋಡುವುದು ದೇವದಾಸನ ಕೆಲಸ— ಆದಕ್ಕಾಗಿ 'ಚಕೋರಿ'ಯಂತೆ ಕಾಯುತ್ತಾನೆ. ಆದರೂ ಸ್ಥಿರಮನಸ್ಕನಲ್ಲ; 'ವಝೀರಾಣಿ'ಯ ತುಂಬುಗಲ್ಲಗಳನ್ನು ನೋಡಿ, ಕೆಲವೊಮ್ಮೆಯಾದರೂ ಏನೇನೋ ಲೆಕ್ಕ ಹಾಕುತ್ತಾನೆ; ಮನಸ್ಸು ವಿಚಲಿತವಾಗುತ್ತದೆ

ಇವರೆಲ್ಲರಿಗಿಂತ ಅಂಜುಬುರುಕ— ಧರ್ಮಭೀರು— ವರ್ಮಾ. 'ಸ್ಟ್ರೈಕ್'ನ ವಿಷಯ ಮಾತಾಡುವಾಗ 'ಬದಿಯ ಕಿವಿಗೆ ತನ್ನ ಮಾತು ಕೇಳಿದರೆ ಎಲ್ಲಿ ಘಾತವಾಗುತ್ತೆ' ಎನ್ನುವಂತೆ ಕೇಳಿದನಂತೆ ರೋಡ್ರಿಗ್ಸ್‌ಳ ಮಾತಿಗೆ "ನೈಸ್ ಐಡಿಯಾ" ಎನ್ನಲು ನಾಲ್ಕು ಸಲ ರಿಹರ್ಸಲ್ ಮಾಡಬೇಕಾಯಿತಂತೆ. ಇವನ ಪುಕ್ಕತನವನ್ನು ಜೀವನ ಲಾಲರೂ ಅರಿತಿರಬೇಕು. ಹಾಗಿಲ್ಲದಿದ್ದರೆ "Mr. ವರ್ಮಾ, ಯು ಕಮ್ ಇನ್ ಫಸ್ಟ್" ಎಂದೆನ್ನುತ್ತಿರಲಿಲ್ಲ.

ಮಿಸ್ 'ವಝೀರಾಣಿ' ಯ ಪಾತ್ರ ಬೆಳೆಯಲವಕಾಶವಿಲ್ಲ; ಅವಳಾಗಲೆ ಸಾಕಷ್ಟು ಬೆಳೆದಿದ್ದಾಳೆ— ಎಂದುಬಿಟ್ಟಿರಬಹುದು. ಇಲ್ಲಿ ಅವಳದೊಂದು ವ್ಯಂಗ್ಯಚಿತ್ರ!

'ಭಗತ್' ಹಾಗೂ 'ಜೀವನಲಾಲ'ರ ವ್ಯಕ್ತಿತ್ವ ಚೆನ್ನಾಗಿ ರೂಪುಗೊಳ್ಳಲು ಅವಕಾಶ ಕಲ್ಪಿಸಿಕೊಂಡಿಲ್ಲ. 'ಪರಸ್ಪರ ದ್ವೇಷ' ವೇ ಅಧಿಕಾರಿಗಳ ಗುಣ — ಎಂದು ಲೇಖಕರು ಮನಗಂಡಂತಿದೆ. ಗಂಗಾರಾಮನಿಗೆ ಇದಾವುದರ ಪರವೆಯೇ ಇಲ್ಲ. ಚೆನ್ನಾಗಿ ಗೊರಕೆ ಹೊಡೆಯುತ್ತಾನೆ. 'ಕರ್ತವ್ಯ ಪರಿಪಾಲನಾ' ಶಕ್ತಿ ಇದೆ ಎಂದರೆ ಇವನೊಬ್ಬನಲ್ಲೇ. ಇವನ ಪಾತ್ರ ಹರಕುಮುರುಕಾಗಿದೆ.

ಈ "ಜೀವನಚಿತ್ರ" ವನ್ನು ಓದಲಾರಂಭಿಸಿದ ಯಾವನಿಗೂ "ಇದೆಲ್ಲಾ ಏನು?" "ಹೀಗೇಕೆ?" ಎಂಬ ತಾಕಲಾಟದಲ್ಲಿ ಬೀಳಲೇ ಬೇಕಾಗುವುದು. "ಜ್ಯೂಲಿಯಸ್ ಸೀಝರ್" ನಲ್ಲೂ ಇಂತಹ ಸಂದರ್ಭ ಇದೆ. ಅರಸೊತ್ತಿಗೆ ರೋಮನ್ನರಿಗೆ ಬೇಡ; ಅದಕ್ಕಾಗಿ ಸೀಝರನ ಕೊಲೆಗಾಗಿ ಕಾನ್ಸ್‌ಪಿರಸಿ (Conspiracy) ಹೂಡುತ್ತಾರೆ ಆದರೆ ಶೇಕ್ಸ್‌ಪಿಯರ್ ಅದನ್ನು ನಾಟಕದ ಮೊದಲಂಕದಲ್ಲೇ 'ಮಾರ್ವೆಲಸ್' ನಿಂದ ತಿಳಿಯಪಡಿಸಿ, ವಾಚಕರ ಮನಸ್ಸನ್ನು ನಿಚ್ಚಳ ಮಾಡುತ್ತಾನೆ. ಇಲ್ಲಿ ಹಾಗಿಲ್ಲ ಸಂಶಯದಲ್ಲೇ ಸಾಗಬೇಕು. ಗಂಗಾರಾಮನಿಂದ—ಸ್ಟ್ರೈಕಿನ ಕಾರಣ ಹೊರಗೆಡಹುವ ಪ್ರಯತ್ನ ಮಾಡಲಾಗಿದೆ:— "ಈವತ್ತು ಕೆಲಸ ಮಾಡ್ಬಾರ್ದಂತ ಗೊತ್ತಾಗಿದ್ದಿಲ್ಲಾ? ಅಂದ್ರೆ ನನ್ನ ಕೆಲ್ಸಾನೂ ಅದರೊಳಗ ಶಾಮೀಲಲ್ಲೇನು?" ಆದರೆ ಯಶಸ್ವಿಯಾಗಿಲ್ಲ. "ಸ್ಟ್ರೈಕ್ ಏಕೆ?" ಎಂಬ ಪ್ರಶ್ನೆ ಕೊನೆಯವರೆಗೂ ಉಳಿದಿರುತ್ತದೆ; ಕೊನೆಗೆ ತಾಮ್ಹಣಕರರೇ ಹೇಳಬೇಕಾಗುತ್ತದೆ.

ಸ್ಟ್ರೈಕಿಗಾಗಿ ಇದೆಲ್ಲಾ ಗೊಂದಲ— ಎಂಬುದನ್ನೇ ಗೃಹೀತವಾಗಿಟ್ಟುಕೊಂಡು ಓದಿದರೆ, ರುಚಿ ಬೇರೆಯಾಗಬಹುದಿತ್ತೇನೋ!

ಲೇಖಕರ ಕಣ್ಣು 'ಪ್ರಭಾ' ಹಾಗೂ 'ದೇವದಾಸ'ರ ಮೇಲೆಯೇ ಹೆಚ್ಚಾಗಿದೆ ಔಚಿತ್ಯ ಮೀರಿ ಪ್ರಭಾಳನ್ನು ಚಿತ್ರಿಸಿದ್ದಾರೆ. ಚಿತ್ರಕ್ಕೆ ಹೆಚ್ಚು ಬಣ್ಣ ಬಳಿದರೆ ಅದು ಕೆಡಲಿಕ್ಕಿಲ್ಲವೆ? ಆದರೆ ಇಲ್ಲಿ ಕೆಟ್ಟಿಲ್ಲ; ಚಿತ್ರಣ ರುಚಿರವಾಗಿದೆ. 'ಚಿತ್ರಣ' ಮುಗಿಯಬಂದರೂ 'ದೇವದಾಸ' ನ ಮೇಲಿನ ಲೇಖಕರ ಕೃಪಾಕಟಾಕ್ಷ ಸರಿದಿಲ್ಲ ಇನ್ನೊಂದು ವಾಕ್ಯವನ್ನೂ ಸೇರಿಸಿದ್ದಾರೆ.

ಈ "ಜೀವನಚಿತ್ರಣ" ಕ್ಕೆ "ಸ್ಟ್ರೈಕು" ಎಂದೇಕೆ ಕರೆದರು? ಎಂಬ ಪ್ರಶ್ನೆಯನ್ನು ಉತ್ತರಿಸಿದ ಹೊರತು ವಿಮರ್ಶೆಯ ಕೆಲಸ ಪೂರ್ಣವಾಗಲಿಕ್ಕಿಲ್ಲ. ಲೇಖಕರಿಗೆ ಬೇಕಾದದ್ದು— 'ವ್ಯಕ್ತಿಚಿತ್ರಣ' ಅದನ್ನು ನಿಷ್ಕಾರಣವಾಗಿ ಹೇಳಬರುವಂತಿಲ್ಲ. ಔಚಿತ್ಯವಿರಬೇಕು; ಸಂದರ್ಭಬೇಕು. ಅವರಾರಿಸಿದ ಸನ್ನಿವೇಶ— ಚಿತ್ರಣಕ್ಕೆ ಅವಕಾಶ ಕೊಟ್ಟಿದೆ; 'ಧುತ್' ಎಂದು ಅವರೆದುರೊಂದು ಪ್ರಶ್ನೆ ನಿಲ್ಲಿಸಿ—ಲೇಖಕರು —ಪ್ರತಿಯೊಬ್ಬರ 'ಹೃದಯ ಪ್ರವೇಶ' ಮಾಡುತ್ತಾರೆ. ಶೇಕ್ಸ್‌ಪಿಯರ್ ಹೇಳಿರುವ 'Between the acting of a dreadful thing; and the first motion, all the interim is like a phantasma or a hideous dream" ಅಂತಹ ಸನ್ನಿವೇಶವಿದು. ಮುನ್ನಾದಿನ ಸ್ಟ್ರೈಕ್ ಮಾಡಬೇಕೆಂದು ನಿರ್ಧರಿಸಿಯಾಗಿದೆ ಈಗ ಮಾಡಬೇಕಾಗಿರುವುದು — ಇವುಗಳ ನಡುವಣ ಸಂದರ್ಭ ಇದು. 'ವ್ಯಕ್ತಿಚಿತ್ರಣ' ಇನ್ನಾವ ರೀತಿಯಿಂದ ಲಾದರೂ ನೆರವೇರಿಸಬಹುದಿತ್ತೇನೋ!— ಎಂಬ ಪ್ರಶ್ನೆಗೆ ಮೇಲಿನದು ಉತ್ತರವಾಗಬಹುದು.

× × ×

ಶ್ರೀ. ಹಾಸ್ಯಗಾರರ ಸೂಕ್ಷ್ಮವಾದ ಸ್ವಭಾವಾವಲೋಕನ ಸ್ತುತ್ಯರ್ಹ. ಚಿತ್ರಣ ಯಶಸ್ವಿಯಾಗಿದೆ. ಕನ್ನಡದಲ್ಲಿ ಈ ಬಗೆಯದು ಹೊಸ ಪ್ರಯೋಗ ಎಂದರೆ ಅತಿಶಯೋಕ್ತಿಯಾಗಲಿಕ್ಕಿಲ್ಲ. ಲೇಖಕರ ಇಂತಹ ಇನ್ನಿತರ ಪ್ರಯೋಗಗಳಿಗೂ ಹೃತ್ಪೂರ್ವಕ ಸ್ವಾಗತ.

“ಟ್ರೊ-ಕಾಪಿ”

(ವ್ಯಂಗ್ಯರೂಪಕದ ವಿಮರ್ಶೆ)

ಶ್ರೀ. ಕೆ. ಎಸ್. ಶರ್ಮಾ, ವಾಣೀಮಂದಿರಂ, ಕಾಸರಗೋಡು.

ಲೇಖಕರೇ ಹೇಳುವಂತೆ–ಈ ವ್ಯಂಗ್ಯರೂಪಕದಲ್ಲಿ ಕಾಣಿಸಲಾದ ಘಟನೆಗಳೂ—ಪಾತ್ರಗಳೂ ಯಾರಿಗೂ ಸಮನ್ವಯಿಸುವುದಿಲ್ಲ; ಸರಿ. ಆದರೂ ಇಂದು ಎತ್ತೆತ್ತಲೂ ತಲೆಯೆತ್ತಿ ನಿಂತ ನಿರುದ್ಯೋಗ ಪರ್ವದ ಮೊದಲು ನಿಂತ ಇಲ್ಲವೆ ನಾಂದಿಯಾಗಿ ಬೆಳಕುಬೀರುವ ಗಜೇಟೆಡ್ ಆಫೀಸರರ ಸಹಿಯನ್ನು ಪಡೆದು ಅರ್ಜಿಯನ್ನು ಗುಜರಾಯಿಸುವ ವ್ಯಕ್ತಿ ಹಾಗೂ ಆಫೀಸ್‌ಮರ್ಜಿಯ ಜೀವನದ ಒಂದು ಟ್ರೊಕಾಪಿ!

ನಿರುದ್ಯೋಗಪರ್ವದ ದುರಂತದ ಮಾದರಿ ಒಂದು ಬಗೆಯ. ದಾದರೆ—ಟ್ರೊಕಾಪಿಯ ವಿನೋದದ ದುರಂತ ಮತ್ತೊಂದು ಬಗೆ.

ಪ್ರಸ್ತುತ ಟ್ರೊಕಾಪಿ—ಒಂದು ಕಾಲ್ಪನಿಕ ಸನ್ನಿವೇಶದಲ್ಲಿ ಅರಳಿನಿಂತ ಜೀವನದ ಒಂದು ಸತ್ಯದರ್ಶನ!!

ರೂಪಕವಿದರಲ್ಲಿ ತುಸು ಅತಿಶಯವಿರಬಹುದು, ಅಸಂಭವ ಸನ್ನಿವೇಶದ ಅತಿರೇಕವಿರಬಹುದು; ಆದರೂ ನಿರುದ್ಯೋಗದ ಭೀಕರ ಸುಟ್ಟುರೆಯಲ್ಲಿ ಹಾರಿ ಹೋಗಿ, ವಿನೋದದ ಮೊದಲ ಹಂತದಲ್ಲಿ ತಲೆಯೆತ್ತಿ, ಆಂತರಿಕ ವಿಪ್ಲವವನ್ನು ತೋರುವ ಒಂದು ಬಗೆಯ ಸತ್ಯ ಜೀವನದ ದರ್ಶನವಿದೆ ಇಲ್ಲಿ!!

ಪ್ರಸ್ತುತ ಶ್ರೀ ಎಸ್. ವಿ. ಶ್ರೀನಿವಾಸರಾವ್ ಇವರು, ಟ್ರೊಕಾಪಿಯನ್ನು ವ್ಯಂಗ್ಯವಾಗಿ, ವಿನೋದದ ಕುಂಚದಲ್ಲಿ ಚಿತ್ರಿಸಿ ಕಾಣಿಸಿದ್ದಾರೆ. ಇಂದು ಬಕಾಸುರನಂತೆ ಎತ್ತೆತ್ತಲೂ ವಿದ್ಯಾವಂತ ತರುಣರ ಮುಂದೆ ತಲೆಯೆತ್ತಿನಿಂತ ನಿರುದ್ಯೋಗಭೂತದ –ಪೂರ್ವಭಾವಿಯಾಗಿ ನಿಂತ “ಅಪ್ಲಿಕೇಶನ್” ನಾಂದಿಯ ಸುಂದರ ದರ್ಶನವನ್ನು ಒರೆಗಾಣಿ. ಸುತ್ತ, ನಿರುದ್ಯೋಗೀ ತರುಣರ ತಂದೆ.ತಾಯಿಗಳ ನಿಲುವು—ಇಂದಿನ ಕಾಲದ ಆಫೀಸುಗಳ ಹೊರನೋಟ ಹಾಗೂ ಒಳನೋಟಗಳು— ಆ ನೋಟಗಳೊಳಗೂ ತಲೆಯೆತ್ತಿನಿಂತ ಜೀವನತೃಷ್ಣೆಗಳು—ಇವನ್ನು ಮಾರ್ಮಿಕವಾಗಿ ತೋರಿದ್ದಾರೆ. ರೂಪಕವಿದನ್ನು ಆದಿಯಿಂದ ಅಂತ್ಯದ ವರೆಗೂ ವ್ಯಂಗ್ಯರೂಪವಾಗಿ ತೇಲಿಸಿದಂತೆ, ಕೊನೆಯಲ್ಲೊಂದು ದುರಂತದ ನೋವುತಾಗದ ನಗೆಯ ಮಾಲೆಯನ್ನು ತೋರಿದ್ದಾರೆ. ಜನತೆಯು ಆತ್ಮಾದರದಿಂದ ಓದಬಹುದಾದ ಬಗೆಯಲ್ಲಿ—ಸಾಮಾನ್ಯ ಜನತೆಯ ತಿಳಿವಿಗೂ ಸುಲಭವಾಗಿ ಎಟಕುವ ಬಗೆಯಲ್ಲಿ –ಇಂದಿನ ಜೀವನಗತಿಗೆ ಅತ್ಯವಶ್ಯವಾಗಿಹೊಂದಿರಬಹುದಾದ ಗತಿಯ ಬಗೆಯಲ್ಲಿ, ಲೇಖಕರು ರೂಪಕವನ್ನು ಹೊಸೆದಿದ್ದಾರೆ. ನಗೆಯ ಮಾಲೆಯಲ್ಲಿ – ಎತ್ತೆತ್ತಲೂ ಪಸರಿಸಿ ನಿಲ್ಲಬೇಕಾಗಿದ್ದ ಜೀವನದ ವಿವಿಧ ಸ್ವರೂಪ-ಗಂಧವನ್ನು ತುಂಬಿನಿಲಿಸಿದ್ದಾರೆ. ರುಚಿರವೀ ಕೃತಿರಚನಾಪದ್ಧತಿ!

ಹಾಗಾದರೆ ಟ್ರೊಕಾಪಿ?—

“ಗ್ರಾಜುಯೇಟ್–ಅನಂತು ನಿರುದ್ಯೋಗೀ ತರುಣ. ಗುಮಾಸ್ತೆ ಶಾಮಣ್ಣನ ಹಾಗೂ ಸಾವಿತ್ರಮ್ಮನ ಪುತ್ರ. ಉದ್ಯೋಗಕ್ಕಾಗಿ ಅನೇಕ “Wanted”ಗಳನ್ನು ಕಂಡು ಆಶಿಸಿ, ಅದಕ್ಕಾಗಿ ಅರ್ಜಿಯನ್ನು ಸಲ್ಲಿಸಿ ಬೇಸತ್ತವನೆಂದಂತೆ, ಇದಕ್ಕಾಗಿ ತಂದೆಯ ಸಂಬಳದ ಬಹ್ವಂಶವನ್ನೂ ಖರ್ಚುಮಾಡಿ ಸೋತವನೆಂದೂ ಹೇಳಬೇಕಾಗಿದೆ. ತಂದೆ ಮಗನ ಈ ದುರವಸ್ಥೆಗಾಗಿ ಕೆಲವೊಮ್ಮೆ ಸಿಡುಕಾಡಿದರೂ, ತಾಯಿ ಸಾವಿತ್ರಮ್ಮ, ಇಂದಲ್ಲ ನಾಳೆಯಾದರೂ ಮಗನ ಪಾಲಿಗೆ ಸುದೈವವು ಒದಗಬಹುದೆಂದು ಆಶಿಸಿ, ತನಗಿಷ್ಟಬಂದ ದೇವತೆಗಳಿಗೆಲ್ಲಾ ಹರಕೆ ಹೊತ್ತ—ತಾಯ್ತನದ ತುಂಬುನಿಲುವಿನವಳೆಂದೆನ್ನಬಹುದು. ಒಂದು ದಿನ ಅನಂತು “U. P. S. C” Wanted ಕಂಡು, ಅದಕ್ಕಾಗಿ ಅರ್ಜಿಗುಜರಾಯಿಸಲು, ತಂದೆಯನ್ನು ೭॥ ರೂಪಾಯಿಯ ಪೋಸ್ಟಲ್ ಆರ್ಡರೊಂದನ್ನು ತರಲು ಕೇಳುವನು. ತಂದೆ ಉದಾಸೀನನಾದರೂ, ತಾಯಿ ಮಧ್ಯದಲ್ಲಿ ಬಾಯಿಹಾಕಿ, ಮಗನ ಪಕ್ಷವನ್ನೇ ಹಿಡಿದು ವಾದಿಸಿ ಗೆಲ್ಲುವಳು. ಇತ್ತ ಶಾಮಣ್ಣ ಹೊರ-ಹೊರಟನೆಂದಾದರೆ, ತಾಯಿ ಮಗನನ್ನು ಸಮಾಧಾನಪಡಿಸಿ, ಅರ್ಜಿಯನ್ನು ಟೈಪ್‌ಮಾಡಿಸಲು ಹಣವನ್ನಿತ್ತು ಕಳುಹುವಳು. ಮುಂದೆ ಅನಂತು, ತನ್ನ ಅರ್ಜಿಯೊಡನೆ ಕಳುಹಬೇಕಾದ ಸರ್ಟಿಫಿಕೇಟುಗಳ ಟ್ರೊಕಾಪಿಗಳನ್ನು ಹಿಡಿದುಕೊಂಡು, ಗಜೆಟೆಡ್ ಆಫೀಸರರ ಸಹಿಗಾಗಿ ಎಲ್ಲಾ ಆಫೀಸುಗಳನ್ನು ದರ್ಶಿಸುವನು ವಿಚಿತ್ರಾನುಭವದ ಮುಂದೆ ನಿರಾಶನಾಗಿ, ಸಾಗುವುದೊಂದೇ ಅನಂತುವಿನ ಪಾಲಿಗೆ ಬಂದ ಪ್ರತಿಫಲವೆಂದಾದರೆ, ಕೊನೆಯ ಆಫೀಸೊಂದು, ಅನಂತುವಿನ ಸರ್ಟಿಫಿಕೇಟುಗಳ ‘ಓರಿಜನಲ್’ನ್ನು ಕೇಳಿ, ಇನ್ನೊಂದು ಬಗೆಯ ನಿರಾಶೆಯನ್ನು ತಂದೀಯುವುದು. ಅನಂತು ನಿರಾಶೆಯಿಂದ ಹಿಂತಿರುಗಿದನು. ಮನೆಗೆ ಬಂದರೆ ಮನೆಯ ವಾತಾವರಣವು ಮತ್ತೊಂದು ಬಗೆಯ ನಗೆಯ ವ್ಯದು. ಲಾಸ್ಯದಲ್ಲಿ ಮೌನವಾಗಿ ನೆಲೆನಿಂತು, ದುಃಖದ ಸಂಧಿಯಲ್ಲೂ—ಆಶಾಬಂಧಕ್ಕೆ ನೆಲೆಯಾದ ಒಂದು ಬಗೆಯ ಉಕ್ಕುನಗೆಯ ತೆರೆಯನ್ನೇಳಿಸಿ ಸಮಾಪ್ತವಾಗುವುದು—

ಇದು ಟ್ರೊಕಾಪಿಯ ಒಂದು ರೂಪ!

ಇನ್ನಿದರ ಸ್ವಾರಸ್ಯಸಂಧಿಗಳನ್ನು ನಿಲುಕಿ ನೋಡೋಣ!

ಒಂದನೆಯ ಸಂಧಿ:—ಇಲ್ಲಿ ತಂದೆ-ತಾಯಿ–ಮಗನ ಜೀವಿತ ದರ್ಶನವಿದೆ ಮಗ ಉದ್ಯೋಗಕ್ಕಾಗಿ ತಪಿಸಿ–ತಂದೆಯೊಡನೆ, ಪೋಸ್ಟಲ್ ಆರ್ಡರಿಗಾಗಿ ಅಪೇಕ್ಷಿಸಿದರೆ–ತಂದೆಯಾಡುವ “ಸಾಕಪ್ಪಾ ಸಾಕು. ನೀನು ಕೆಲ್ಸಾ ಹೊಂಚೋ ಹೊತ್ಗೆ–ನಾನು ತಣ್ಣಗಾಗಿ ಹೋಗ್ತೇನೆ.... ನಿನ್ನ ಓದಿಗೆ, ನಿನ್ನ ಕೆಲ್ಸ ಹುಡುಗಾಟಕ್ಕೆ, ಖರ್ಚುಮಾಡಿರೊ ದುಡ್ಡನ್ನ ನೀನು ಸಂಪಾದಿಸಬೇಕಾದ್ರೆ—ಇವರ್ಷ ದುಡೀಬೇಕು.... ...ಸುಮ್ನೆ ಉಂಡ್ಕೊಂಡು ಬಿದ್ದಿರು!” ಎಂಬ ಮಾತಿನಿಂದಲೇ ತಂದೆಯ ನಿರಾಶೆಯ ಕಡಲಿನ ಉಕ್ಕುವಿಕೆಯನ್ನು ಕಾಣಬಹುದು. ಆಗಲೇ ತಾಯಿ ಮಧ್ಯದಲ್ಲಿ ಪ್ರವೇಶಿಸಿ ಏನೇನೋ ಆಡಿ ಕೊನೆಗೆ “ಮನೆ ತಾಪತ್ರಯ ತಪ್ಪೋದು ಎಂದು? ದಿನಾನೂ ಇದ್ದೇ ಇರುತ್ತೆ. ದಿನವೂ ಸಾಯೋರಿಗೆ ಅಳೋರು ಯಾರು?” ಎಂದಾಡುವುದು ಆಕೆಯ ಪಾತ್ರಕ್ಕೆ ಪೂರ್ಣರೂಪವನ್ನು ಎತ್ತಿ ತೋರುವುದು. ಅಂತೂ ಶಾಮಣ್ಣ ಪೋಸ್ಟಲ್ ಆರ್ಡರ್ ತರುತ್ತೇನೆಂದು ಹೇಳಿಹೋದರೆ–

ಇತ್ತ ತಾಯಿ ಮಗನನ್ನು ಸಮಾಧಾನಪಡಿಸಿ—ತಾನು ಹೊತ್ತ ಹರಕೆಯ ಪರಿವಿಡಿಯನ್ನು ವಿಶದಗೊಳಿಸಿ—ಉತ್ಸಾಹಗೊಳಿಸುವುದು ರುಚಿರವಿದ್ದಂತೆ ತಾಯ್ತನದ ಮಾರ್ದವವನ್ನು ಮೃದುವಾಗಿ ತೇಲಿಸುತ್ತಿದೆ. ಇಷ್ಟಾದರೂ ಅನಂತುವಿನಲ್ಲಿ ಗೆಲವಿಲ್ಲ. ಆತ ತುಂಬಾ ನೊಂದವನು. ಅವನು ತನ್ನ ಮಾತಿನ ಕೊನೆಯ ಕೊಳಿಕೆಯಲ್ಲಿ ಸಿಲುಕಿಸಿದ "ನಾನು ಹೋಗ್ಬೇಕು. ಗೆಜೆಟೆಡ್ ಆಫೀಸರರ ರುಜು ಪಡೆಯಬೇಕಾದರೆ ನನ್ನ ಹೆಣ ಇಟ್ಕಾಡುತ್ತೆ....ಸಾವಿರ ಆಫೀಸು ಸುತ್ತಾಡಬೇಕು" ಎಂಬೀ ಮಾತು, ಆ ಅನಂತುವಿನ ಜೀವನಾನುಭವದ ನುಡಿಯೆಂದು ಮಾತ್ರವಲ್ಲ, ಇಂದಿನ ತರುಣವೃಂದವು—ಉದ್ಯೋಗಕ್ಕಾಗಿ ಅಲೆದಾಡಿದ ತರುಣವೃಂದವು ಅನುಭವಿಸಿದ ಸತ್ಯದ ನುಡಿಯೆನ್ನಬೇಕು!—ಈ ಪ್ರಥಮಸಂಧಿಯು ಮುಂದೆ ಬರಲಿರುವ ಆಫೀಸುದ್ವಾರ ಪ್ರವೇಶೋತ್ಸವಕ್ಕೆ ಮೊದಲಲ್ಲಿರಿಸಿದ ನಾಂದಿಯೆನ್ನಬಹುದು. ನಾಟಕದ ಹೃದಯವು ಈ ನಾಂದಿಯಲ್ಲೆ ಸ್ಥಾಪಿತವಾಗಿದೆಯೆನ್ನಬೇಕು. ನಿರಾಶೆ, ಜುಗುಪ್ಸೆ, ಆಶಾವಾದ,—ಇನಿಲ್ಲಿ ಒಂದರಮೇಲೊಂದಾಗಿ ಕವಿದು ನಿಂತಿವೆಯೆನ್ನಬೇಕು. ಇಂತಹ ಮಿಶ್ರ ಭಾವಸಂಧಿಯಲ್ಲಿ ಒಂದು ವಿಶಿಷ್ಟವಾದ ಪಾಕವನ್ನೇಳಿಸಲೆಂದು, ಮುಂದಿನ ನಗೆಯ ದೃಶ್ಯಗಳು ಅರಳಿ ನಿಂತಿವೆ:—

ಮೊದಲಾಗಿ-ಕಾಣಿಸಿದೆ ಅಮಲ್ದಾರರ ಆಫೀಸು!

ಜವಾನ ತನ್ನೆದುರಿಗೆ ನಿಂತ ಅನಂತುವನ್ನು ಕಂಡೊಡನೆ ಕೇಳುವ ಮಾತಿನ ಒಳಗನ್ನು ನೋಡುವಾಗ ನಗು ಬರುತ್ತಿದೆ. ಆ ಮಾತು "ಹಗ್ಲೆಲ್ಲ ಯಾಕೆ ಬಾಗ್ಲತ್ರ ಬರ್‍ತೀರಿ" ಎಂದು. ಸಾಲದೇ ಈ ಮಾತು? ಅನಂತು ಅಂತೂ ಇಂತೂ ಸರದಿಯಂತೆ ಒಳಗೆ ಪ್ರವೇಶ ಪಡೆದು ಸಾಗುವಾಗಲೇ ಜವಾನನಾಡಿದ "ಹೋಗ್ಬನ್ನಿ.........ನಾನು ಇಲ್ಲೇ ಇರ್‍ತೀನಿ" ಎಂಬ ಮಾತನ್ನು ನಾವಿಲ್ಲಿ ಅರ್ಥವಿಸಲು ಮರೆಯಬಾರದು. ಅನಂತು ಅಮಲ್ದಾರರ ಮುಂದೆ ನಿಂತದ್ದೇ ತಡ. ಆಫೀಸರರು ಅನಂತುವಿನ ಡಿಗ್ರಿಯನ್ನು ವಿಚಾರಿಸಿ "ಆತನು ಯಾವ ಜಮಾನಿಗೆ ಅರ್ಜಿ ಹಾಕಿದ್ದಾನೆಂದು" ಕೇಳುತ್ತಾ, ಆತನು ಕೈದಿಯಾದ ಬಗೆ, ಆತನು ಇರಿಸಬೇಕಾದ ಸರ್ಟಿಫಿಕೇಟು—ಇತ್ಯಾದಿಗಳನ್ನು ವಿಚಾರಿಸುವುದು ನಗೆಯನ್ನು ಉಕ್ಕಿಸಿ ಹರಿಯಿಸುತ್ತದೆ ಅನಂತು ಈ ಮಾತುಗಳನ್ನು—ದರಖಾಸ್ತು, ಕೈದಿ, M. L. A, ಜಮಾನುಗಳ-ಸುರಿಮಳೆಯ ಪ್ರಶ್ನೆಗಳನ್ನು ಹೇಗೆ ಹೇಗೊ ತಡೆಹಿಡಿದು, ತನ್ನ ಮಾತನ್ನು ಮುಂದಿರಿಸಯತ್ನಿಸಿದರೂ, ಆಫೀಸರರು ತನ್ನ ಸ್ವರವನ್ನು ಬದಲಾಯಿಸದೆ, ಕೊನೆಗೆ ಇನ್ನೊಬ್ಬಗೆ ಒಳಗೆ ಬರಲು ಅವಕಾಶವೀಯುತ್ತಾ "ಗುಟ್ಟಾಗಿ ಮಾತ್ನಾಡೋದಿದ್ರೆ ಮನ್ಗೆ—ಬನ್ನಿ...." ಎಂದೆನ್ನುವುದು ಆಂತರಿಕವಾಗಿ ನೆಲೆನಿಂತ ಆ ಆಫೀಸಿನ ಹೃದಯವನು ಒಂದೇ ಬಾರಿಗೆ ಹೊರತೋರುತ್ತದೆ. ಕೊನೆಗೆ ಅನಂತು ಬಂದ ವಿಚಾರವರಿತ, ಗಡಿಬಿಡಿಯ ಆಫೀಸರರು, ನಿರುತ್ಸಾಹದಲ್ಲಿ ಅನಂತುವನ್ನು ಹೋಗಗೊಡುವುದು, ಆಫೀಸಿಗೆ ಬಂದ ಮಾದಯ್ಯನೆಂಬವನನ್ನು ಕೇಳುತ್ತಾ "ನಿಮ್ಮ ಗೌಡರು ಚೆನ್ನಾಗಿದ್ದಾರಾ? ಯಾಕೆ ಬಾಳ ದಿನದಿಂದ ಮನೆಕಡೆ ಬರ್‍ಲೇ ಇಲ್ಲವಲ್ಲಾ...." ಎನ್ನುವುದೂ ಈ ಆಫೀಸಿನ ಮುಂದೆ ಮರೆಯಲಾಗದ ಮಾತು!

ಮುಂದಿನ ಆಫೀಸು, ಎಕ್ಸೈಜ್-ಖಾತೆಯ ಆಫೀಸರರದು' ತನ್ನ ಬಾಳಿಗೆ ಬಂದವರೆಲ್ಲಾ—ಹೆಂಡದ ಬದ್ಲು ನೀರು ಮಾರುವ ಕಂಟ್ರಾಕ್ಟ್‌ದಾರರೆಂದೇ ಈತನ ಭಾವನೆ. ಅನಂತು-ಬಂದೊಡನೆ ಈತ ತೆಗೆದ ಪುರಾಣ ಬಹಳ ವಿಚಿತ್ರವಿದೆ. ಅನಂತು ಪಾಪ—ಆ ಆಫೀಸರರಿಗೆ ಹುಚ್ಚೆಂದು ಭಾವಿಸದಿದ್ದುದು ಆಶ್ಚರ್ಯ. ಅನಂತುವನ್ನು ಒರ್ವ ಕಾಂಟ್ರಾಕ್ಟ್‌ದಾರನೆಂದೇ ಬಗೆದ ಆ ಆಫೀಸರರು, ತನ್ನ ಅಧಿಕಾರ ದರ್ಪವೇ ಮೇಲ್ಗೈ ಆಗಬೇಕೆಂದು ಬಗೆದು — ತನ್ನಿಚ್ಛೆಗೂ ಮಿಗಿಲಾದ ಧನವನ್ನು ಕೂಡಿಹಾಕಬೇಕೆಂದು ಬಗೆದು— ನಡೆಸಿದ ವಿಚಿತ್ರ ವಿಚಾರಣೆಯದು. ಅನಂತು ತನ್ನ ಕಾರ್ಯವನ್ನೇ ಮುಂದೊಡ್ಡಬಗೆದರೂ, ಆ ಆಫೀಸರರು— ಹೆಂಡದ ಕತೆಯಲ್ಲೆ ತೇಲಾಡುತ್ತಾರೆ. ಕೊನೆಗಂತೂ, ಆ ಅನಂತು ಹೇಗೋ ಮಾಡಿ ತನ್ನ ಪುರಾವೆಯನ್ನು ವ್ಯಕ್ತಪಡಿಸಿದಾಗ, ಆಫೀಸರರಿಗೆ ಬಡಿದ ಹುಚ್ಚು ಮಾಯವಾಗಿ, ಆತ ಜವಾನನನ್ನು ಜರೆದಾಡಿ— ತಾನು "ನೊನ್ ಗೆಝೆಟೆಡ್ ಆಫೀಸರನೆಂದು" ಹೇಳಿದಾಗ, ಪಾಪ—ಅನಂತು ಕದವನ್ನು ತೆರೆದಿರಬೇಕು— "ಪಿತ್ತ ಹಿಡಿದವಗೆ ಲೋಕವೆಲ್ಲಾ ಅರಸಿಣ ಕಾಣುವಂತೆ" ಈ ಆಫೀಸರರ ವೃತ್ತಗಳು! ಸ್ವಾರಸ್ಯಪೂರ್ಣವೀ ಪ್ರಸಂಗ. ಇಲ್ಲಿ ಕಾಣುವ ಪ್ರತಿಯೊಂದು ಮಾತೂ ಗಡಿಬಿಡಿ ಆಫೀಸರರ ನಿಜವಾದ ರೂಪ! ಆದರೆ ಅನಂತು ಹುಚ್ಚನಾಗದಿದ್ದುದೂ, ಆತನ ಹಿರಿಯರ ಪುಣ್ಯ!

ಮುಂದಿನ ದೃಶ್ಯ— ಸಬ್‌ರಿಜಿಸ್ಟ್ರಾರರ ಆಫೀಸು! ಇವನೂ ಇದೇ ಜಾತಿಯವನು. ಅನಂತು ಎದುರಾದೊಡನೆ— ಯಾರು ಯಾರದೋ ಹೆಸರನ್ನು ದಸ್ತಾವೇಜಿನಲ್ಲಿ ಓದಿ, ರಿಜಿಸ್ಟ್ರಿಗಿರುವ ಕಾರಣಗಳ ಸುರಿಮಳೆಯನ್ನೇ ಸುರಿಸಿ— ಅನಂತುವನ್ನು ಪ್ರಶ್ನಿಸುವನು. ಅನಂತು—"ಅದಕ್ಕಲ್ಲ ಸಾರ್ ನಾನು ಬಂದಿರೋದು!" ಎಂದರೂ— ಆಫೀಸರರು ರಿಜಿಸ್ಟ್ರಿಯ ಪರಿವಿಡಿಯನ್ನೇ ಮುಂದೊತ್ತಿ, ಏನೇನೋ ಆಡಿದರು. ಕೊನೆಗೆ ಅನಂತುವಿನ ಬರವಿನ ಕತೆ ಗೊತ್ತಾದಾಗ, ಸಿಡುಕಿನಿಂದ, ಆಫೀಸರರು ಕೆಡೆನುಡಿವುದು ನೈಜವೃತ್ತವಲ್ಲದೆ ಬೇರೆನ್ನೇನು? ಕಾಣುವ ಆಫೀಸರರು ಕಾಲ್ಪನಿಕ ರೇಷೆಯಲ್ಲಿದ್ದರೂ— ಅನುಭವವು ಕಾಲ್ಪನಿಕವಲ್ಲ. ಈ ದೃಶ್ಯದ ಕೊನೆಯಲ್ಲಿ ಬಡ ಜವಾನನ ಬಾಯಿಂದುರುಳಿದ ಮಾತುಗಳು ಗಮನೀಯವಿವೆ.

ಮುಂದಿನ ಆಫೀಸರರು— ಇಂಜಿನಿಯರು! ಇವರು ಮೂರು ಕಾಲಿನ ಕುದುರೆಯ ಮೇಲೆ ಓಡುವವರು. ಯಾರೋ! ಒಬ್ಬ ಅನಂತು ಈ ಆಫೀಸರನ್ನು ಕಾಣದೆ— ಟೆಂಡರ್ ಸಿಕ್ಕಿಲ್ಲಾಂತ ಮೂಗರ್ಜಿ ಹಾಕಿದ್ದಕ್ಕೆ ಇವರು ಸಿಡಿದೆದ್ದು— "ತನ್ನನ್ನು ಕಾಣಬಾರದಾಗಿತ್ತೇ ಗುಪ್ತವಾಗಿ?"—ಎಂಬ ರಾಗವೆತ್ತಿ—ಈ ಟ್ರೂ ಕಾಪಿಗೆ ಸಹಿ ಕೇಳಲು ಬಂದಿದ್ದ ಅನಂತುವನ್ನು ಸಿಕ್ಕಾಬಟ್ಟೆಯಾಗಿ ಜರೆಯುವುದೂ, ಕೊನೆಗೆ ಅನಂತುವಿನ ವಿಚಾರವರಿತಾಗ ಬೇಸರಿಸಿದವರಂತೆ ಅಭಿನಯಮಾಡಿ, ಮಧ್ಯಾಹ್ನದ ಮೇಲೆ ಬಂದರೆ ಸಹಿ ಹಾಕಬಹುದೆನ್ನುವುದೂ— ವಿಚಿತ್ರದ ಪರಮಾವಧಿಯಲ್ಲಿದೆ! ಈ ಆಫೀಸರರು ಉಗ್ರನರಸಿಂಹನ

ಸಹೋದರರಲ್ಲಿ ಕಿರಿಯವನೋ, ಹಿರಿಯವನೋ ಎನ್ನುವುದು ಮಾತ್ರ ಸಂದೇಹ! ಒಪ್ಪಿಗೆಯ ಪರಮಾವಧಿಯಲ್ಲಿದೆ ಈ ರಮಣೀಯ ದೃಶ್ಯ.

ಆ ಬಳಿಕ ಅನಂತು ಪ್ರವೇಶಿಸುವುದು ಸೇಲ್ಸ್‌ಟ್ಯಾಕ್ಸ್ ಆಫೀಸರರ ಭವ್ಯ ಮಂದಿರಕ್ಕೆ. ಇವರನ್ನೂ ಮೇಲಿನವರ ಹುಚ್ಚು ಪೂರಾ ಬಿಡದಿದ್ದರೂ, ಇವರಲ್ಲಿ ಒಂದು ಬಗೆಯ ಹೃದಯಾನುಭೂತಿಯ ಸಹೃದಯತೆಯಿದೆ. ತನ್ನ ಬಳಿಗೆ ಬಂದ ಅನಂತುವನ್ನು— ತನ್ನ ಆಫೀಸಿನ ಕಾರುಭಾರಕ್ಕೆ ಸರಿಯಾಗಿ ಪ್ರಶ್ನಿಸಿ— ಕೊನೆಗೆ ವಿಚಾರ ತಿಳಿಯಬಂದಾಗ—ಟ್ರೂ ಕಾಪಿಗೆ ಸಹಿ ಮಾಡಲು ಒರಿಜನಲನ್ನು ಕೇಳುತ್ತಾ, ಒರಿಜನಲ್ ಇಲ್ಲದಿದ್ದರೆ ಬರಬಹುದಾದ ದುರಂತವನ್ನೆತ್ತುತ್ತ, ಅನಂತು ಪಡೆದ ಕಡಿಮೆ ಮಾರ್ಕಿನ ಕುರಿತು ಪ್ರಶ್ನಿಯೆತ್ತುತ್ತ, ಅನಂತುವನ್ನು ಕೇಳುತ್ತಿರುವುದು ತುಸು ಗಂಭೀರವಾಗಿದೆ. ಆದರೆ ಅನಂತು ಅದನ್ನು (ಒರಿಜನಲ್) ಎಲ್ಲೋ ಆಫೀಸಿನಲ್ಲಿ ಬಿಟ್ಟಿದ್ದ ಕಾರಣ—ಆಫೀಸರರು " Please go out now " ಎಂದೆಂದು ಕಳುಹುವುದೂ, ಒರಿಜನಲ್ ಸಮೇತ ಮನೆಗೆ ಬಂದರೂ ದಸ್ಕತ್ತು ಹಾಕುವೆನೆನ್ನುವುದೂ— ಒಂದು ಬಗೆಯಲ್ಲಿ ಆಂತರಿಕವಾದ ಸಂಕಟವನ್ನುಂಟು ಮಾಡುತ್ತಿವೆ

ಕೊನೆಗೆ ಬರುತ್ತಾನೆ ಅನಂತು— ಮ್ಯಾಜಿಸ್ಟ್ರೇಟ್ ಆಫೀಸರಕಲ್ಲಿಗೆ. ಆದರೆ ಅವರನ್ನು ಕಾಣಲು ವಕೀಲ ಬೇಕು. ವಕೀಲರು ರುಸುಂ ಇಲ್ಲದೆ ಮಾತಾಡುವವರಲ್ಲ. ಇಲ್ಲಿ ಕಾಣಿಸಿದ ವಕೀಲರು ನಮ್ಮ ಮುಂದೆ ನಗೆಯ ಮಾಲೆಯನ್ನೇ ಹೆಣೆಯುಸುತ್ತಾರೆ. ವಕೀಲರ ಹೃದಯವಿಲ್ಲಿ ಪರಿಸ್ಫುಟವಾಗಿದೆ. ಆದರಿಡೆಯಲ್ಲಿ ವಕೀಲರೊಡನೆ ವಕಾಲತ್ ನಡೆಸುವ ಜವಾನನ ಚಾಕಚಕ್ಯತೆ ಮತ್ತೊಂದು ಬಗೆ! ಆದರೆ ರುಸುಂ ತೆಯಲು ಅನಂತು ಶಕ್ತನಲ್ಲ! ಜವಾನ ಮಾತ್ರ "ಕೈಯಲ್ಲಿ ಒಂದು ಕಾಸಿಲ್ದೆ ಇದ್ರೂ—ಎಲ್ಲಾರೂ ಪ್ಯಾಂಟೂ ಬೂಟೂ ಹಾಕ್ಕೊಂಡು ಬರೋರೇ— ಕಾಲ ಕೆಟ್ಹೋಯ್ತು ಸಾಮಿ!" ಎಂದೆನ್ನುವಾಗ, ನಗುವುದು ಅವನು ಮಾತ್ರವಲ್ಲ— ಇಷ್ಟೆಲ್ಲಾ ಆಫೀಸರರ ಮುಖವನ್ನು ಅನಂತುವಿನಂತೆ— ನಾವೂ ಕಂಡು ಒಂದೆಡೆ ನಿಂತು ಸಹಿಸಲಾರದೆ ನಗಬೇಕು—

ಕೊನೆಯ ದೃಶ್ಯ ಬಹು ಚೆಂದ. ಅದು ಅನಂತುವಿನ ಮನೆ! ಅನಂತುವಿನ ತಂದೆ Postal order ತರಲಿಲ್ಲ; ತಾಯಿ ಮಾತ್ರ ಮಗನ ಕೆಲಸವಾದರೆ— ಮುಂದೆ ಅವನಿಗೆ ಹುಟ್ಟುವ ಗಂಡು ಮಗುವನ್ನೇ ದೇವರಿಗೆ ಕೊಡುವ ಹರಕೆ ಹೊತ್ತಿದ್ದಳು. ಶ್ಯಾಮಣ್ಣ— " ಆ ಮಗು ಹೆಣ್ಣಾದರೆ ನೀನೇನು ಮಾಡೀಯೆ ? " ಎಂದು ಕೇಳಿದರೆ ಆಕೆ " ನಮ್ಮ ವಂಶದಲ್ಲಿ ಎಲ್ಲರಿಗೂ ಮೊದಲ್ನೇದು ಗಂಡು " ಎಂದು ಶೀರ್ವಾನಕ್ಕೆ ಬರುವುದೂ— ಮುಂದೆ ಮಾತು ಹೊರಳುತ್ತ ಹುಟ್ಟಿದ ಮಗುವಿಗೆ ಹೆಸರಿಡುವ ವಿಚಾರಕ್ಕೆ ಬರುವುದೂ, ಮುಂದೆ ಅವೇ ಮಾತುಗಳು ಬಂದೊದಗಿದ ಸಂಕಟವನ್ನು ನೆನಸದೆ —ನಗೆಯ ಮಲ್ಲಿಗೆಗಳಾಗಿ ಅರಳುವುದೂ, ನಾಟಕೀಯ ಹೃದಯದ ಮಾಧುರ್ಯ ಸಂಧಿಯನ್ನು ಬಿಂಬಿಸುತ್ತಿವೆ. ಕೊನೆಯಲ್ಲಿ—ಅನಂತೂ ನಗುವನ್ನು ಬೀರಿದನೆಂದಾದರೆ— ತಾಯಿ "ನಿಮ್ಗೆ ನಿಮ್ಮಗಂಗೆ, ಎಲ್ಲಾ ಮಾತ್ನಲ್ಲೂ ಹಾಸ್ಯಾನೆ " ಎಂದಾಗ ಶ್ಯಾಮಣ್ಣ—"ಹೌದು .. ....ಟ್ರೂ ಕಾಪಿ ... ಎನ್ನುವುದೂ ಹೃದಯಂಗಮವಾಗಿದೆ

ಇಂಜನಿಯರ್ ಮತ್ತು ಸಬ್‌ರಜಿಸ್ಟ್ರಾರರ ಆಫೀಸಿನ ಪೂರ್ವಭಾಗವು ತುಸು ಅತಿರೇಕದಲ್ಲಿದೆಯೆನ್ನಬೇಕು. ಉಳಿದುವು ಸಮರ್ಪಕವಾಗಿವೆ.

ಒಟ್ಟು ನಾಟಕೀಯ ತಂತ್ರದ ಮಧುರ ಪಾಕದಲ್ಲಿ ಪುಟಗೊಂಡ ಈ ಚಿಕ್ಕ ವ್ಯಂಗ್ಯರೂಪಕವು ನೂತನ ಭಾವನಾಸ್ಪರ್ಶಿತವಿದ್ದು, ಲೇಖಕರ ಸಹೃದಯತೆಯನ್ನು ಬಿಂಬಿಸುತ್ತಿದೆ. ಇಂದಿನ ಲೋಕದ ಮುಂದೆ ಚಿತ್ರವಿದು ಸಾಹಜಿಕವಾದ ಗ್ರಂಥಿಯಲ್ಲಿ ಹೊಸೆಯಲ್ಪಟ್ಟಿದೆ.

ಆದರದ ಸ್ವಾಗತವೀ ರೂಪಕಕ್ಕೆ!

ಜಯಂತಿಯ ೧೮-೧೯ನೆಯ ಸಂಪುಟಗಳು!

ಮಾರಲಿಕ್ಕೆ ದೊರೆಯುವುವು! **ಬೇಕಾದವರು ಬರೆಯಿರಿ!!**

ಹಲವು ಬಗೆಯ ಉಪಯುಕ್ತ ಲೇಖನಗಳಿಂದಲೂ, ಮನೋಹರವಾದ ಕಥೆ, ನಾಟಕ ಕವನಗಳಿಂದಲೂ ತುಂಬಿ, ಯಾವಾಗಲೂ ಓದಲು ತಕ್ಕುವಾದ ಜಯಂತಿಯ ೧೮-೧೯ನೆಯ ವರ್ಷದ ಎಲ್ಲ ಸಂಚಿಕೆಗಳೂ ಮಾರಾಟಕ್ಕೆ ದೊರೆಯುತ್ತವೆ. ಬೇಕಾದವರು ೫ ರೂಪಾಯಿಗಳನ್ನು M. O ಮೂಲಕ ಕಳುಹಬೇಕು. ಅಂಚೆಯವೆಚ್ಚವನ್ನು ನಾವೇ ವಹಿಸಿ ಸಂಚಿಕೆಗಳನ್ನು ಕಳುಹುವೆವು. ನಮ್ಮ ನಾಡಿನಲ್ಲಿಯ ವಾಚನಾಲಯಗಳು ಈ ಸಂದರ್ಭದ ಪ್ರಯೋಜನವನ್ನು ಪಡೆದುಕೊಳ್ಳಬೇಕು.

ವ್ಯವಸ್ಥಾಪಕ

'ಜಯಂತಿ' ಧಾರವಾಡ

ಸಾದರ ಸ್ವೀಕಾರ

೩೯ **ಈಶಾವಾಸ್ಯೋಪನಿಷತ್ತು** (ಮೂಲ ಶ್ಲೋಕ ಸಹಿತ ಅರ್ಥವಿವರಣೆ). ಲೇಖಕರು: ಡಾ. ಎಚ್. ಬಿ. ಕೊಣ್ಣೂರ ಎಲ್. ಸಿ. ಪಿ. ಎಸ್., ಗದಗು. ಲೇಖಕರೇ ಪ್ರಕಾಶಕರು. ಕ್ರಾ. ಅ. ಸುಮಾರು ೯೦ ಪುಟಗಳು. ಬೆಲೆ ೧-೦-೦.

೪೦ **ಧನಂಜಯ** (ಸಾಮಾಜಿಕ ನಾಟಕ) ಬರೆದವರು ಡಾ. ರಂ. ಶ್ರೀ. ಮುಗಳಿಯವರು. ಧಾರವಾಡದ ಲಲಿತ ಸಾಹಿತ್ಯಮಾಲೆಯ ೪೬ ನೆಯ ಕುಡಿ. ಕ್ರಾ. ಅ. ೬೨ ಪುಟಗಳು. ಬೆಲೆ ಸಾಮಾನ್ಯಪ್ರತಿಗೆ ೦—೧೨—೦; ಉತ್ತಮ ಪ್ರತಿಗೆ ೧—೦—೦.

೪೧ **ಗುಬ್ಬಿಯ ಹಾಡು** (ಶಿಶುಕಾವ್ಯ ಸಂಕಲನ) ಬರೆದವರು: ಶ್ರೀ. ಬಿ. ಬಿ. ಹಿಂಗಮಿರೆ, ರಾಜಾಪುರ. ಪ್ರಕಾಶಕರು: ವಿಜಯ ಪ್ರಕಾಶನ, ಬೆಳಗಾವಿ. ಕ್ರಾ. ಅ. ೪೪ ಪುಟಗಳು. ಬೆಲೆ ೦—೫—೦.

೪೨ **ನವಚೇತನ** (ಮಾಸಪತ್ರಿಕೆಯ ದ್ವಿತೀಯ ವಾರ್ಷಿಕ ವಿಶೇಷ ಸಂಚಿಕೆ) ಸಂಪಾದಕರು: ಶ್ರೀ. ಕೊಳಾರಿ ವೆಂಕಟರಮಣಭಟ್ಟರು, ಕಾಸರಗೋಡು. ಪ್ರಕಾಶಕರು: ನವಚೇತನ ಪ್ರಕಾಶನ, ಕಾಸರಗೋಡು. ಡೆ. ಅ. ೧೦೦ ಪುಟಗಳು. ಬೆಲೆ ೦—೧೨—೦.

ಕಾಸರಗೋಡು ಪ್ರದೇಶದಲ್ಲಿ ಕನ್ನಡತನವನ್ನು ಜಾಗೃತವಾಗಿ ಇರಿಸಲು ಹೊರಟಿರುವ ಪತ್ರಿಕೆಯಿದು. ಈ ವಿಶೇಷ ಸಂಚಿಕೆಯಲ್ಲಿ ಹೊಸ ಹೊಸ ಲೇಖಕರು ಬರೆದ- ಕಥೆ, ಕವನ, ಏಕಾಂಕ, ಹರಟೆ, ಪ್ರಬಂಧ, ಪರಿಚಯಾತ್ಮಕ ಲೇಖನ ಇವೆಲ್ಲ ಇವೆ. ನವಚೇತನ ತನ್ನ ಗುರಿಯನ್ನು ಸಾಧಿಸಿ. ಕರ್ನಾಟಕಕ್ಕಾಗಿ ದುಡಿಯುತ್ತ ಬಹುಕಾಲ ಬಾಳಲಿ.

೪೩ **ನೀತಿಮಾರ್ಗ** (ಕಿರಿಯರಿಗಾಗಿ ಬರೆದ ಕವನ ಸಂಕಲನ) ಬರೆದವರು: ಶ್ರೀ ಕುಪ್ಪೆರಾವ ಉಕ್ಲಿ, 'ಕನ್ನಡ ಜಾಣ' ಲಿಂಗಸೂಗೂರು. ಪ್ರಕಾಶಕರು: ಮಿತ್ರಮಂಡಳಿ, ಜವಳಗೇರಿ, ತಾಲ್ಲೂಕು ಸಿಂಧನೂರು. ಕ್ರಾ. ಅ. ೪೪ ಪುಟಗಳು. ಬೆಲೆ ೦—೬—೦.

೪೪ **ವ್ಯಾಪಾರಿಮಿತ್ರ** (ಹೊಸ ಮಾಸಪತ್ರಿಕೆ) ಸಂಪಾದಕರು; ಶ್ರೀಮಾನ್ ಚುಳಕಿ ಗೋವಿಂದರಾಯರು. ಪ್ರಕಾಶಕರು: ಶ್ರೀ. ವಿ. ಜಿ. ಪಾಟಣೇಕರ, ೨೮೬೩ ಖಡೇಬಜಾರ, ಬೆಳಗಾಂವಿ. ಕ್ರಾ. ೧/೮ ದ ೮೦ ಪುಟಗಳು. ವಾ. ಚಂ. ೬-೦-೦. ಈ ಸಂಚಿಕೆಗೆ ೧—೦—೦.

ನಮ್ಮ ಕಡೆಗೆ ಬಂದಿರುವ ಈ ಮೊದಲನೆಯ ಸಂಚಿಕೆಯು ಸೆಂಟ್ರಲ್ ಸೇಲ್ಸ್ ಟ್ಯಾಕ್ಸದ ವಿಶೇಷ ಸಂಚಿಕೆ. ಇದರಲ್ಲಿ ಸೆಂಟ್ರಲ್ ಸೇಲ್ಸ್ ಟ್ಯಾಕ್ಸ ಕಾಯದೆಯ ಕನ್ನಡ ಅನುವಾದವು ಮೊದಲಿನ ೩೯ ಪುಟಗಳಲ್ಲಿದೆ. ಮುಂದಿನ ಪುಟಗಳಲ್ಲಿ ವ್ಯಾಪಾರಿಗಳಿಗೆ ಆವಶ್ಯಕವೆನಿಸುವ ವಿವಿಧವಿಷಯಗಳನ್ನು ಕುರಿತ ಲೇಖನಗಳಿವೆ. ಕನ್ನಡದಲ್ಲಿ ಇದು ಹೊಸಬಗೆಯ ಪ್ರಯತ್ನ. ನಾಡಿನ ವ್ಯಾಪಾರಿಗಳೆಲ್ಲರೂ ಇದರ ಪ್ರಯೋಜನ ಪಡೆದು, ಈ ಪತ್ರಿಕೆಯು ಬಹುಕಾಲ ಬದುಕುವಂತೆ ಸಹಕರಿಸಬೇಕು. ಸಂಪಾದಕ-ಪ್ರಕಾಶಕರಿಗೆ ನಮ್ಮ ಧನ್ಯವಾದಗಳು.

೪೫ **ಕರ್ನಾಟಕತ್ವದ ವಿಕಾಸ** (ಪರಿಚಯಾತ್ಮಕ ಗ್ರಂಥ) ಬರೆದವರು: ಶ್ರೀಮಾನ್ ಆಲೂರ ವೆಂಕಟರಾಯರು, ಧಾರವಾಡ. ಪ್ರಕಾಶಕರು ಶ್ರೀ. ಕೃಷ್ಣ ವೆಂ. ಆಲೂರ, ನವಜೀವನ ಗ್ರಂಥಭಾಂಡಾರ, ಸಾಧನಕೇರಿ—ಧಾರವಾಡ. ಕ್ರಾ. ಅ. ೧೯೩+೪೮ ಪುಟಗಳು. ಬೆಲೆ ೨—೬—೦.

೪೬ MYSORE INFORMATION BULLETIN (ಇಂಗ್ಲೀಷಿನಲ್ಲಿ ಮಾಸಪತ್ರಿಕೆ) ಸಂಪಾದಕರು ಮತ್ತು ಪ್ರಕಾಶಕರು: ಶ್ರೀ. ಬಿ. ಎನ್. ಸತ್ಯನ್ ಬಿ. ಎ (ಆನರ್ಸ), ಪ್ರಿನ್ಸಿಪಲ್ ಇನ್‌ಫರ್ಮೇಶನ್ ಆಫೀಸರ್, ಬೆಂಗಳೂರು. ಕ್ರಾ. ೧/೮ ದ ೨೦೦ ಪುಟಗಳು.

೪೭ **ಜೀವನ** (ಮಾಸಪತ್ರಿಕೆಯ ಭಾರತೀಯ ಕಾವ್ಯ ವಿಶಿಷ್ಟ ಸಂಚಿಕೆ) ಸಂಪಾದಕರು ಮತ್ತು ಪ್ರಕಾಶಕರು: ಶ್ರೀಮಾನ್ ಮಾಸ್ತಿ ವೆಂಕಟೇಶ ಅಯ್ಯಂಗಾರ್, ಗವೀಪುರ ವಿಸ್ತರಣ, ಬೆಂಗಳೂರು. ಕ್ರಾ. ೧/೮ ದ ೬೨ ಪುಟಗಳು. ಬೆಲೆ ೧—೦—೦.

ಈ ಸಂಚಿಕೆಯಲ್ಲಿ, ಭಾರತದ ಪ್ರಮುಖ ಭಾಷೆಗಳೆಲ್ಲದವರ ಆಧುನಿಕ ಕವನಸಾಹಿತ್ಯದ ಸಂಕ್ಷಿಪ್ತ ಪರಿಚಯಗಳೊಂದಿಗೆ ಆ ಆ ಭಾಷೆಯ ಕೆಲವು ಸುಪ್ರಸಿದ್ಧ ಕವಿಗಳ ಕವನಗಳನ್ನೂ ಅನುವಾದಿಸಿ ಕೊಡಲಾಗಿದೆ. ಕಾವ್ಯಪ್ರಿಯರಿಗೆ ಈ ಸಂಚಿಕೆ ತುಂಬ ಮೆಚ್ಚಿಗೆಯಾಗುವಂತಿದೆ.

೪೮ **ಪ್ರಭಾತ** (ವಾರಪತ್ರಿಕೆಯ ಪ್ರಥಮ ಸ್ವಾತಂತ್ರ್ಯ ಸಂಗ್ರಾಮ ಶತಮಾನೋತ್ಸವ ಸಂಚಿಕೆ). ಸಂಪಾದಕರು: ಮತ್ತು ಪ್ರಕಾಶಕರು: ಶ್ರೀ. ಕುಡ್ಪಿ ವಾಸುದೇವ ಶೆಣೈ, ಪ್ರಭಾತ ಕಾರ್ಯಾಲಯ. ರಥಬೀದಿ, ಮಂಗಳೂರು. ಕ್ರಾ. ಫೋ. ೫೦ ಪುಟಗಳು. ಬೆಲೆ ೪ ಆಣೆ.

೧೮೫೭ನೆಯ ಭಾರತ ಸ್ವಾತಂತ್ರ್ಯಸಂಗ್ರಾಮಕ್ಕೆ ಸಂಬಂಧಿಸಿದ ಲೇಖನಗಳೂ, ಸಚಿತ್ರ ವ್ಯಕ್ತಿಪರಿಚಯಗಳೂ ಈ ಸಂಚಿಕೆಯಲ್ಲಿ ಪ್ರಕಟವಾಗಿದ್ದು, ಕನ್ನಡಿಗರಿಗೆ ಅದರ ವಿಷಯವನ್ನು ಚೆನ್ನಾಗಿ ತಿಳುಹಿಕೊಡುವಂತಿವೆ. ಆದರೆ ಕರ್ನಾಟಕದಲ್ಲಿ ನಡೆದ ಚಟುವಟಿಕೆಗಳ ಬಗೆಗೆ ಬರೆದ ಲೇಖನಗಳು ಇದರಲ್ಲಿ ಕಾಣದಿರುವುದು ಒಂದು ಕೊರತೆಯೆಂದೇ ಹೇಳಬಹುದು.

R. No. 4161

ಕರ್ನಾಟಕದಲ್ಲಿ ಭಾವಗೀತಗಾಯನ ಬೆಳೆಯಬೇಕಾಗಿದೆ!

ಹಾಡಲಿಕ್ಕೆ ಬರುವಂತಹ ಕವಿತೆಗಳೇ ನಮ್ಮಲ್ಲಿ ಇಲ್ಲವೆಂದು ಸಂಗೀತಗಾರರ ಆಕ್ಷೇಪಣೆ!

ಇದು ನಿಜವಾದ ಆಕ್ಷೇಪಣೆಯೆಂದು ನಂಬುವಿರಾ?

ನಿಜವಲ್ಲವೆಂಬುದರ ಪ್ರತ್ಯಕ್ಷ ಸಾಕ್ಷಿಗಳಾಗಿ

'ಆನಂದಕಂದ' ಅವರ ಈ ಗೀತಸಂಕಲನಗಳಿವೆ:

ಮುದ್ದನ ಮಾತು (ಶಿಶುಭಾವದ ಗೀತಗಳು)	೦—೧೨—೦
ಒಡನಾಡಿ (ನಲ್ವಾಡುಗಳು) .... —	೧—೦—೦
ವಿರಹಿಣಿ (ತತ್ತ್ವರೂಪಕ ಗೀತಗಳು)	೧—೪—೦
ಕಾರಹುಣ್ಣಿವೆ (ವಿವಿಧ ಭಾವಗೀತಗಳು)	೨—೦—೦

ಕಾವ್ಯಪ್ರೇಮಿಗಳೂ ಸಂಗೀತಗಾರರೂ ಇವುಗಳನ್ನು ಒಮ್ಮೆ ಓದಿ ನೋಡಬೇಕು.

ಬೇಕಾದವರು ಕೆಳಗಿನವಿಳಾಸಕ್ಕೆ ಬರೆಯಿರಿ!

'ಜಯಂತಿ' ಕಾರ್ಯಾಲಯ, ಧಾರವಾಡ

Printed by N. A. Hoskeri at the Vijaya Press, Dharwar and published for the Proprietors Jayanti Publications, by K S. Betgeri at the Jayanti Office. Dharwar

ಜಯಂತಿ

ಸಂಪುಟ
೨೦

ಸಂಚಿಕೆ
೫

೯೫೭

ಅಕ್ಟೋಬರ್

ಜಯಂತಿಗೆ ಚಂದಾದಾರರಾಗಿರಿ !

ಜಯಂತಿಯಂತಹ ಸಂಸ್ಕೃತಿಪ್ರಚಾರಕ ಮಾಸಪತ್ರಿಕೆಯನ್ನು ಬಹುಕಾಲ ಬದುಕಿಸುವುದು ಕನ್ನಡ ಜನತೆಯ ಕರ್ತವ್ಯವಾಗಿದೆ.

*　*　*　*

ನಮ್ಮ ನಾಡಿನ ಪ್ರತಿಯೊಂದು ವಿದ್ಯಾಶಾಲೆಯೂ, ಪ್ರತಿಯೊಂದು ವಾಚನಾಲಯವೂ ಜಯಂತಿಯನ್ನು ಬರಮಾಡಿಕೊಳ್ಳಬೇಕು. ಹಿಂದಿನ ಕಾಲದ — ಕನ್ನಡ ಪ್ರದೇಶವನ್ನು ಒಳಗೊಂಡಿದ್ದ — ಎಲ್ಲ ಸರಕಾರಗಳೂ ಜಯಂತಿಗೆ ಮನ್ನಣೆಯನ್ನು ಕೊಟ್ಟಿದ್ದುವು.

ಮೈಸೂರು ಸರಕಾರದ ಡೈರೆಕ್ಟರ್ ಆಫ್ ಪಬ್ಲಿಕ್ ಇನ್‌ಸ್ಟ್ರಕ್ಷನ್ ಅವರ No. F. Dis. GL. 4250/48/49. D. 3 rd Aug 1948 ರ ಪ್ರಕಾರ, ಜಯಂತಿಯನ್ನು ರಾಜ್ಯದಲ್ಲಿಯ ಎಲ್ಲಾ ಹೈಸ್ಕೂಲ್, ಮಿಡಲ್‌ಸ್ಕೂಲ್, ಟ್ರೇನಿಂಗ್ ಸ್ಕೂಲುಗಳಿಗೆ ತರಿಸಿಕೊಳ್ಳಬಹುದೆಂದು ಸಮ್ಮತಿದೊರೆತಿದೆ.

ಎಲ್ಲ ಮುಖ್ಯಾಧ್ಯಾಪಕರೂ ಈ ಸಂಗತಿಯನ್ನು ಲಕ್ಷ್ಯದಲ್ಲಿ ಇರಿಸಿಕೊಂಡು, ಜಯಂತಿಯ ಪ್ರಯೋಜನ ಪಡೆಯಬೇಕು.

— ಸಂಪಾದಕ 'ಜಯಂತಿ'

JAYANTI

ಈ ಸಂಚಿಕೆಯಲ್ಲಿ:

ನಾಡಹಬ್ಬದ ಹೊಸರೂಪ (ಸಂಪಾದಕೀಯ)

ಸಂಪಾದಕರು ೧೬೧

ನಾಡನಡೆ (ಪ್ರಾಸಂಗಿಕ ಟಿಪ್ಪಣಿಗಳು)

‘ ಕಾಲಭೈರವ ’ ೧೬೫

‘ ಪೀಜಿ ’ (ಮುಂಬಯಿಜೀವನದ ಒಂದು ಕಥೆ)

ಶ್ರೀ. ಯಶವಂತ ಚಿತ್ತಾಳ ಬಿ. ಎಸ್‌ಸಿ. (ಆನರ್ಸ್), ಬಿ. ಎಸ್‌ಸಿ. (ಟೆಕ್) ಮುಂಬೈ ೧೬೬

ನನ್ನ ಹಣೆಬರಹ (ಸ್ವಾನುಭವ ಕಥನ)

ಶ್ರೀಮತಿ ಸೌ. ರಾಧಾಬಾಯಿ ಕಮಲಾಪುರ, ಧಾರವಾಡ ೧೭೦

ನನ್ನ ನೆರಳು (ಕವನ)

ಶ್ರೀ. ಶಂ. ರಾ. ಮೊಕಾಶಿ ಎಂ. ಎ. ಮುಂಬಯಿ ೧೭೩

ಒಂದಾನೊಂದು ರಾತ್ರಿಕಾಲದಲ್ಲಿ (ಅನುವಾದಿತ ಕಥೆ)

ಶ್ರೀ. ಮುದೇನೂರ ಸಂಗಣ್ಣ, ಚಿಗಟೇರಿ ೧೭೪

ಪಂಪಭಾರತದಲ್ಲಿಯ ಕೆಲವು ಸಮಸ್ಯೆಗಳು (ಕಾವ್ಯಾಭ್ಯಾಸ)

ಶ್ರೀ. ವೆಂ. ಬಿ. ಲೋಕಾಪುರ ಬಿ. ಎ, ಬಿ ಟಿ, ಡಿ ಬಿ. ಇ. ಹುಬ್ಬಳ್ಳಿ ೧೮೩

ಕಾಳಿದಸ ಬಾಳಿಯಾನು (ಒಂದು ಸಮಸ್ಯಾತ್ಮಕ ಸಣ್ಣಕತೆ)

ಶ್ರೀಮತಿ ಎಂ. ಕೆ. ಜಯಲಕ್ಷ್ಮಿ, ಕರಗಡ ೧೮೮

ಋತುವಸಂತ (ಕವನ)

ಶ್ರೀ. ಎಚ್. ಜಿ. ಉಪಾಧ್ಯೆ ಎಂ. ಎ. ಹೈದರಾಬಾದ್ ೧೯೩

ಕಾವ್ಯದಲ್ಲಿ ಪ್ರತಿಮಾಸಂವಿಧಾನ (೪ನೆಯ ಲೇಖಾಂಕ)

ಶ್ರೀ. ಜಿ. ವಿ. ಕುಲಕರ್ಣಿ ಬಿ. ಎ (ಆನರ್ಸ್) ಮತ್ತು
ಶ್ರೀ. ಅನಿಲಕುಮಾರ ಗೋಕಾಕ ೧೯೫

ಕಾರಕೂನ (ಲಘುಪ್ರಬಂಧ)

ಶ್ರೀ. ಸಂಜೀವ ಲಕ್ಷ್ಮೇಶ್ವರ ಬಿ. ಎ. ಮುಂಬಯಿ ೧೯೯

ಸಾದರ ಸ್ವೀಕಾರ — ಹೊದಿಕೆಯ ೩ನೆಯ ಪುಟದಲ್ಲಿ

ಜಯಂತಿ

ಸಂಪುಟ ೨೦ ಸಂಚಿಕೆ ೫

ಕುಟುಂಬದಲ್ಲಿಯ ಎಲ್ಲರೂ
ಜ್ಞಾನವನ್ನೂ ರಸಾನಂದವನ್ನೂ
ಪಡೆಯಬಹುದಾದ
ಮಾಸಪತ್ರಿಕೆ

●

ಸಂಪಾದಕರು :
ಶ್ರೀ. ಬೆಟಗೇರಿ ಕೃಷ್ಣಶರ್ಮ

●

ಸಂಚಿಕೆ ಪ್ರತಿತಿಂಗಳ
ಮೊದಲನೆಯ ತಾರೀಖಿಗೆ
ಪ್ರಕಟವಾಗುವುದು.

卐

ವಾರ್ಷಿಕ ವರ್ಗಣಿ ೫ ರೂ.
ಬಿಡಿ ಸಂಚಿಕೆಗೆ ೮ ಆಣೆ.

⁂

ಜಾಹೀರಾತು ಕೊಡಬಯಸುವವರು
ದರಗಳಿಗಾಗಿ ಬರೆದು ಕೇಳಬೇಕು.

●

ಅನೇಕ ಊರುಗಳಲ್ಲಿ
ಜಯಂತಿ ಮಾರುವ
ಏಜಂಟರು
ಬೇಕಾಗಿದ್ದಾರೆ

ಸಂಪಾದಕೀಯ

卐

ನಾಡಹಬ್ಬದ ಹೊಸರೂಪ

ಕರ್ನಾಟಕದಲ್ಲಿ ಜನತೆಯು ನಾಡಹಬ್ಬವನ್ನು ಆಚರಿಸಲು ತೊಡಗಿ ಇಂದಿಗೆ ಮೂವತ್ತೆರಡು ವರ್ಷಗಳಾದುವು. ಧಾರವಾಡದ ರಾಷ್ಟ್ರೀಯ ವಿದ್ಯಾಲಯ–ಶಾಂತೇಶ ವಾಚನಾಲಯಗಳು ಸೇರಿ ಪ್ರಾರಂಭಿಸಿದ ಈ ನಾಡಹಬ್ಬ, ಮೊದಲಿನ ಎರಡು ವರ್ಷ ಧಾರವಾಡದ ಮಟ್ಟಿಗೆ ಮಾತ್ರ ಇದ್ದಿತು. ಬರುಬರುತ್ತ ಈ ಹಬ್ಬದ ಆಚರಣೆಯ ಮಹತ್ತ್ವವು ಮನವರಿಕೆಯಾಗಿ ಕನ್ನಡನಾಡಿನ ಅನೇಕ ಪಟ್ಟಣಗಳಲ್ಲಿ ಇದು ಪ್ರಚಾರದಲ್ಲಿ ಬಂದಿತು. ಇತ್ತೀಚೆಗಂತೂ ನಮ್ಮ ನಾಡಿನ ಹಲವಾರು ಹಳ್ಳಿಗಳಲ್ಲಿಯೂ ನಾಡಹಬ್ಬದ ಸಾಂಸ್ಕೃತಿಕ ಸಮಾರಂಭ ಉತ್ಸಾಹದೊಂದಿಗೆ ನಡೆಯುತ್ತಲಿದೆ.

ಕನ್ನಡನಾಡಿಗೆ ನವರಾತ್ರಿಯ ನಾಡಹಬ್ಬದ ಸಮಾರಂಭ ಹೊಸತಲ್ಲವಾದರೂ, ಈ ನಾಡಿನ ರಾಜಕೀಯ ಛಿನ್ನ-ಭಿನ್ನತೆಯ ಮೂಲಕ ತಲೆದೋರಿದ ಸಾಂಸ್ಕೃತಿಕ ವಿಚ್ಛಿತ್ತಿಯ ಕಾರಣದಿಂದ, ಈ ಹಬ್ಬದಲ್ಲಿಯ ರಾಷ್ಟ್ರೀಯ ಭಾವನೆಯು ಅಳಿದು ಹೋಗಿತ್ತು; ಮಿಕ್ಕ ಹಬ್ಬಗಳಂತೆ ಇದೂ ಒಂದು ಪರಂಪರೆಯ ಹಬ್ಬವಾಗಿ ಪರಿಣಮಿಸಿತ್ತು.

ಕರ್ನಾಟಕತ್ವದ ಜಾಗೃತಿಯೊಂದಿಗೆ ಕರ್ನಾಟಕದ ಏಕೀಕರಣವು ಅವಶ್ಯವೆಂಬ ಭಾವನೆ ನಮ್ಮ ನಾಡಿನ ಕೆಲವು ಜನ ಧುರೀಣರಲ್ಲಿ ಮೂಡಿನಿಂತಿತು. ವಿವಿಧ ಆಡಳಿತದಲ್ಲಿ ಹರಿಹಂಚಾದ ಕನ್ನಡಿಗರನ್ನು ಸಾಹಿತ್ಯ-ಸಂಸ್ಕೃತಿಗಳ ಸೂತ್ರದಿಂದಲೂ ಬಂಧಿಸಿ, ಒಬ್ಬರನ್ನೊಬ್ಬರು ಸಮೀಪಿಸುವಂತೆ ಮಾಡಬೇಕೆಂದು ಉತ್ತರಕರ್ನಾಟಕ ಪ್ರದೇಶದಲ್ಲಿ ವಿವಿಧಮುಖದ ಚಳವಳಿ ನಡೆಯಿತು. ಅಂತಹ ಚಳವಳಿಯಲ್ಲಿ ಈ ನಾಡಹಬ್ಬದ ಆಚರಣೆಯು ಸಾಂಸ್ಕೃತಿಕ ಕಾರ್ಯಕ್ರಮವು ಒಂದು ಮಹತ್ತ್ವದ ಅಂಗವಾಗಿ ಪರಿಣಮಿಸಿತು.

೧೯೨೧ನೆಯ ಇಸ್ವಿಯ ವರೆಗೂ ನಮ್ಮ ನಾಡಿನ ನಗರಗಳಲ್ಲಿ, ಲೋಕಮಾನ್ಯ ಟಿಳಕರ ರಾಜಕೀಯ ಚಳವಳಿಯ ಪ್ರಭಾವದಿಂದ, ಗಣೇಶನ ಹಬ್ಬವೇ ರಾಷ್ಟ್ರೀಯಹಬ್ಬವೆಂದು ಆಚರಿಸಲ್ಪಡುತ್ತಿತ್ತು. ಆದರೆ, ಮಹಾರಾಷ್ಟ್ರೀಯರಿಗೆ ಅದು ಐತಿಹಾಸಿಕ ಸ್ಮೃತಿಗಳನ್ನು ನೆನಪಿಗೆ ತಂದುಕೊಟ್ಟು, ಅವರಲ್ಲಿ ಅಭಿಮಾನ–ಸಂಘಟನೆಗಳನ್ನು ಬೆಳೆಸಲು ಸಹಾಯಕವಾಗಿ ಇರಲಿಲ್ಲ. ಗಣೇಶನ ಹಬ್ಬ ಕನ್ನಡಿಗರಿಗೆ ಹೊಸತಲ್ಲವಾದರೂ, ಅದರಿಂದ ಅವರಿಗೆ ಸಮಾಜಸಂಘಟನೆಗಾಗಿ ಯಾವ ಪ್ರಚೋದನೆಯೂ ದೊರೆಯುವಂತಿರಲಿಲ್ಲ. ಆದುದರಿಂದಲೇ ಕನ್ನಡಸಂಸ್ಕೃತಿಯ ಅಭ್ಯಾಸಿಗಳ ತಲೆಯೊಳಗಿಂದ ನಾಡಹಬ್ಬದ ಆಚರಣೆಯ ವಿಚಾರವು ಹೊರಬಿದ್ದು ಅಂದಿನ ಸಂದರ್ಭಕ್ಕೆ ಅನುಗುಣವಾದ ಕಾರ್ಯಕ್ರಮಗಳನ್ನು ಜನರ ಕಣ್ಣುಮುಂದೆ ಇರಿಸಿತು. ಜನತೆ ಈ ವಿಚಾರದ ಹಿರಿಮೆಯನ್ನು ಅರಿತುಕೊಂಡಿತೆಂಬುದಕ್ಕೆ, ಈ ಮೂವತ್ತು ವರ್ಷಗಳಲ್ಲಿಯ ನಾಡಹಬ್ಬದ—ನಾಡಿನಲ್ಲಿಯ—ಹಬ್ಬುಗೆ ಪ್ರತ್ಯಕ್ಷಪ್ರಮಾಣವಾಗಿದೆ ಅಲ್ಲದೆ ಇಂದಿನ ನಮ್ಮ ಜನತಾ ಪ್ರಭುತ್ವವೂ ಈ ನಾಡಹಬ್ಬದ ಪರಂಪರೆ-ಪ್ರಯೋಜನಗಳನ್ನರಿತು, ಮನ್ನಣೆ ಕೊಟ್ಟುದು ಸಂತೋಷದ ಸಂಗತಿಯಾಗಿದೆ

ಈ ಶರನ್ನವರಾತ್ರಿಯ ಹಬ್ಬ ಕನ್ನಡಿಗರ ನಾಡಹಬ್ಬವಾಗಿತ್ತೆಂಬುದನ್ನು ನಮ್ಮ ನಾಡಿನ ವೈಭವಪೂರ್ಣವಾದ ಇತಿಹಾಸ ಸಾರಿಸಾರಿ ಹೇಳುತ್ತದೆ ರಾಜ್ಯಕ್ಕೆ ಒಂದು ವ್ಯಕ್ತಿ ರಾಜನಾಗಿರಲಿ; ಪ್ರಜಾಪ್ರಭುತ್ವದ ಆಡಳಿತವಿರಲಿ; ಆ ರಾಜ್ಯ ಸುರಾಜ್ಯವಾಗಿ ಪರಿಣಮಿಸಲು ನಾಲ್ಕು ಬಗೆಯ ಶಕ್ತಿಗಳ ಅಗತ್ಯ ಯಾವಾಗಲೂ ಇದ್ದೇ ಇರುವುದು. ಜ್ಞಾನ, ದೇಹಬಲ,

ಸಂಪತ್ತು, ಜನನಿಷ್ಠೆ–ಇವೇ ಆ ಶಕ್ತಿಗಳು. ನಮ್ಮ ನಾಡಿನ ಐತಿಹಾಸಿಕ ಕಾಲದ ರಾಜರು–ಸಮ್ರಾಜರುಗಳು ಈ ಹಬ್ಬವನ್ನು ಆ ನಾಲ್ಕು ಶಕ್ತಿಗಳ ಆಧ್ಯಾತ್ಮಿಕ ಉಪಾಸನೆಗಾಗಿ, ಭೌತಿಕಸ್ವರೂಪದ ಪ್ರದರ್ಶನ. ಪುರಸ್ಕಾರಗಳಿಗಾಗಿ ಆಚರಿಸುತ್ತಲಿದ್ದರು. ಈ ಪರಂಪರೆ ರಾಜಧಾನಿಯ ಸಮ್ರಾಜರಿಂದ ಮೊದಲಾಗಿ ಮಾಂಡಲಿಕರು, ಮನ್ನೆಯರು, ಪಾಳೆಯಗಾರರು ಸಹಿತ ಹಳ್ಳಿಯ ಗೌಡರಲ್ಲಿಯೂ ಆಚರಣೆಗೆ ಬಂದಿತು. ನಾಡಿಗೆ ಇದರ ಪ್ರಯೋಜನ ಅಂದು ಚೆನ್ನಾಗಿ ದೊರೆಯಿತು.

ಈ ನವರಾತ್ರಿಯ ಹಬ್ಬದಲ್ಲಿ ರಾಜ್ಯದಲ್ಲಿಯ ವ್ಯಕ್ತಿ-ವ್ಯಕ್ತಿಗಳ ಗುಣವಿಶೇಷಗಳೆಲ್ಲವೂ ರಾಜ್ಯದ ಪ್ರತಿನಿಧಿಗಳಿಂದ ಮನ್ನಣೆ ಪಡೆಯುತ್ತಿದ್ದವು. ತತ್ತ್ವಜ್ಞಾನಿಯನ್ನು ಮೊದಲು ಮಾಡಿ ಗಣೆಯಾಟದ ಡೊಂಬನ ವರೆಗೂ, ರಾಜರಿಂದ—ಅವರ ಪ್ರತಿನಿಧಿಗಳಿಂದ—ಮನ್ನಣೆ ಪುರಸ್ಕಾರಗಳು ದೊರೆಯುತ್ತಿದ್ದವು. ಇದರಿಂದ ದೇಶಕ್ಕೆ ಆವಶ್ಯಕವಾದ ವಿವಿಧ ವಿದ್ಯೆ, ಕಲೆ, ಕೈಗಾರಿಕೆ, ಕುಶಲತೆಗಳ ಬೆಳವಣಿಗೆಗೆ ಅನುಕೂಲವಾಗುತ್ತಿತ್ತು. ಜನತೆಯಲ್ಲಿ ತಮ್ಮ ಪ್ರಭುಗಳ ವಿಷಯದಲ್ಲಿ ನಿಷ್ಠೆ, ಆತ್ಮೀಯ ಭಾವಗಳು ಬೆಳೆಯುತ್ತಿದ್ದವು. ಈ ಪರಸ್ಪರ ಸಂಭಾವನೆಯ ಮೂಲಕ ದೇಶದಲ್ಲಿ ಸಂಸ್ಕೃತಿ–ಸುಖ–ಶಾಂತಿಗಳು ನೆಲೆಗೊಳ್ಳುತ್ತಿದ್ದವು.

ಹೊಸತಾಗಿ ಪ್ರಾರಂಭವಾದ ಜನತೆಯ ನಾಡಹಬ್ಬ, ಪರಿಸ್ಥಿತಿಗನುಸಾರವಾಗಿ, ಇದುವರೆಗೆ ಕನ್ನಡಿಗರನ್ನು ಒಗ್ಗೂಡಿಸುವ ಉದ್ದೇಶವನ್ನು ಜಾಗೃತಿಗೊಳಿಸುವ ಉಪನ್ಯಾಸ-ಪ್ರವಚನಗಳನ್ನೇ ಅದು ತನ್ನ ಮುಖ್ಯ ಕಾರ್ಯಕ್ರಮವನ್ನಾಗಿ ಇರಿಸಿಕೊಳ್ಳುತ್ತಿತ್ತು. ಆದರೆ ಈಗ ಕನ್ನಡಿಗರನ್ನು ಒಂದುಗೂಡಿಸುವ ಉದ್ದೇಶ ಸಾಧಿಸಿದಂತಾಯಿತು. ಆದುದರಿಂದ ನಾಡಹಬ್ಬ ಇನ್ನುಮೇಲೆ ನಾಡಿನಲ್ಲಿ ಹೊಸರೀತಿಯ ಕಾರ್ಯಕ್ರಮವನ್ನು ಆರಂಭಿಸಬೇಕಾಗಿದೆ. ಈಗ ನಾವು ರಾಜಕೀಯ ದೃಷ್ಟಿಯಿಂದ ಸ್ವತಂತ್ರರಾದುದರಿಂದ, ನಮ್ಮ ಐತಿಹಾಸಿಕ ಕಾಲದ ರಾಜ-ಸಾಮ್ರಾಜರು ಯಾವ ತತ್ತ್ವಸಾಧನೆಗಾಗಿ ಈ ಹಬ್ಬವನ್ನು ಆಚರಿಸುತ್ತಿದ್ದರೆಂಬುದರ ತಥ್ಯವನ್ನು ತಿಳಿದುಕೊಂಡು, ನಾಡಹಬ್ಬದ ಕಾರ್ಯಕಲಾಪಗಳಲ್ಲಿ ಮಾರ್ಪಾಡನ್ನು ಮಾಡಬೇಕಾಗಿದೆ.

ಕರ್ನಾಟಕದ ಪರಂಪರೆಯ ನಾಡಹಬ್ಬದ ಕಾರ್ಯಕಲಾಪಗಳನ್ನು ವಿಶ್ಲೇಷಿಸಿ ನೋಡಿದರೆ ನಮಗೆ ಕಂಡುಬರುವುದು ಇಷ್ಟು; ದೇಶದಲ್ಲಿ ಜ್ಞಾನೋಪಾಸಕರ ಸಂಖ್ಯೆ ಹೆಚ್ಚಬೇಕು; ಅದರಂತೆಯೆ ದೇಶವನ್ನು ಸಂರಕ್ಷಿಸಬಲ್ಲ ಭುಜಬಲಶಾಲಿಗಳ ಬಳಗ ಬೆಳೆಯಬೇಕು. ದೇಶದ ಜನರ ಜೀವನಕ್ಕೆ ಅತ್ಯಂತ ಆವಶ್ಯಕವಾದ ಕೃಷಿ, ಗೋರಕ್ಷಣ, ವಾಣಿಜ್ಯ ವ್ಯವಹಾರ ಅಭಿವೃದ್ಧಿ ಹೊಂದಬೇಕು. ಸಂಸ್ಕೃತಿ ಸಂವರ್ಧನೆಗೆ ಅವಶ್ಯವಾದ ಗ್ರಂಥಲೇಖನ, ಗಾಯನ, ವಾದನ, ನರ್ತನ, ನಾಟಕ, ಚಿತ್ರ, ಶಿಲ್ಪ—ಇವುಗಳ ಬೆಳವಣಿಗೆಯಾಗಬೇಕು ಆದುದರಿಂದಲೇ ನಾಡಹಬ್ಬದಲ್ಲಿ ನಾಡಿನ ಜ್ಞಾನ, ಕಲೆ, ಬಲ, ಪ್ರಾವೀಣ್ಯ, ನೈಪುಣ್ಯ ಇವುಗಳಿಗೆಲ್ಲ ಮನ್ನಣೆ–ಪುರಸ್ಕಾರಗಳು ದೊರೆಯುವಂತಹ ಕಾರ್ಯಕಲಾಪಗಳಿಗೆ ಹೆಚ್ಚಿನ ಪ್ರಾಧಾನ್ಯ ದೊರೆಯಬೇಕು.

ನಾಡಹಬ್ಬ ಹಳ್ಳಿಯಲ್ಲಿಯೆ ನಡೆಯಲಿ, ರಾಜಧಾನಿಯಲ್ಲಿಯೇ ನಡೆಯಲಿ, ತಮ್ಮ ತಮ್ಮ ಕ್ಷೇತ್ರದಲ್ಲಿಯ ಗುಣಶಾಲಿಗಳನ್ನು ಬೆಳಕಿಗೆ ತರಬೇಕು. ಯಾವ ವಿಶಿಷ್ಟಗುಣ ಗುಣವನ್ನೂ ಕ್ಷುದ್ರವೆಂದು ಭಾವಿಸಿ ಅದರ ಕಡೆಗೆ ಅಲಕ್ಷ್ಯವನ್ನಾಡಲಾಗದು. ಮುಂಬರುವ ನಾಡಹಬ್ಬ ನಮ್ಮ ನಾಡಿನಲ್ಲಿ ಇದೇ ದೃಷ್ಟಿಯಿಂದ ನಡೆಯಬೇಕೆಂದು ನಮ್ಮ ಹಾರಯಿಕೆ.

ಸಾಹಿತ್ಯವಿಮರ್ಶೆಯ ಶಿಕ್ಷಣರಂಗ

ಈ ಸಲದ ಸಂಚಿಕೆಯಲ್ಲಿ ಸಾ. ವಿ. ಶಿಕ್ಷಣರಂಗವು ಬರಲಿಲ್ಲ ಇದಕ್ಕೆ ಕಾರಣವು ಇಲ್ಲದೆ ಇಲ್ಲ. ಸ್ವತಂತ್ರ ವಿಷಯವೊಂದನ್ನು ಕೊಟ್ಟು ವಿಮರ್ಶೆಗಳನ್ನು ನಿರೀಕ್ಷಿಸಲಾಗಿತ್ತು. ಆದರೆ ದುರ್ದೈವದ ಸಂಗತಿಯೆಂದರೆ, ಕೇವಲ ಒಂದೆ ಒಂದು ವಿಮರ್ಶೆ ಬಂದಿದೆಯಲ್ಲದೆ, ಹೆಚ್ಚು ಜನರು ಈ ತಿಂಗಳ ಮೇಲಾಟದಲ್ಲಿ ಭಾಗವಹಿಸಿಲ್ಲ. ಆದುದರಿಂದ ಕಳೆದ ಸಂಚಿಕೆಯಲ್ಲಿ ಪ್ರಕಟಿಸಿದಂತೆ 'ಕಳೆದ ಮೂರು ತಿಂಗಳಲ್ಲಿ ನಾನು ಓದಿ ಮೆಚ್ಚಿದ ಹೊಸಕಾದಂಬರಿ' ಎಂಬ ವಿಷಯವನ್ನೇ ಮುಂದುವರಿಸಲಾಗಿದೆ. ನಮ್ಮ ತರುಣ ವಿಮರ್ಶಕರು ಹೆಚ್ಚು ಆಸಕ್ತಿ ತೋರಿಸಿ, ವಿಮರ್ಶೆಗಳನ್ನು ಬರೆದು ಕಳುಹಬೇಕಾಗಿ ಬಿನ್ನಹ.

—ಸಂಪಾದಕರು

ನಾಡನಡೆ

ಕನ್ನಡ ಗ್ರಂಥಕಾರರಿಗೆ ಬಹುಮಾನ

ಮುಂಬಯಿ ಸರಕಾರವು ಒಪ್ಪಿಸಿಕೊಟ್ಟ ಕರ್ತವ್ಯಭಾರದಲ್ಲಿಯ ಒಂದು ಭಾಗವಾದ ಕನ್ನಡ ಗ್ರಂಥಕರ್ತೃಗಳಿಗೆ ಬಹುಮಾನ ಹಂಚುವ ಹೊಣೆಯನ್ನು, ನಮ್ಮ ಸರಕಾರವು—ಐದಾರು ತಿಂಗಳ ವಿಲಂಬವಾದರೂ—ಇಳುಹಿಕೊಂಡುದು ಸಮಾಧಾನದ ಸಂಗತಿಯಾಗಿದೆ; ಆದರೆ, ಈ ಸಮಾಧಾನದಲ್ಲಿಯು ಅಸಮಾಧಾನದ ಸಂಗತಿಯೊಂದೆಂದರೆ, ಬಹುಮಾನ ಪಡೆದ ಗಂಥಕರ್ತೃಗಳಿಗೆ, ವರ್ತಮಾನಪತ್ರಗಳಲ್ಲಿಯ ಹೆಸರುಗಳ ಪ್ರಕಟನೆಯಿಂದಲ್ಲದೆ, ಸರಕಾರದಿಂದ ಅಧಿಕೃತವಾದ ತಿಳಿವಳಿಕೆಯು ಕಾಗದ ಬಾರದಿರುವುದು. ಇದು ಆಶ್ಚರ್ಯದ ಸಂಗತಿಯಾಗಿದೆ. ಕಳೆದ ವರ್ಷ ಮುಂಬಯಿ ಸರಕಾರ ಗ್ರಂಥಕಾರರಿಗೆ ಬಹುಮಾನಗಳನ್ನು ಕೊಟ್ಟಾಗ, ಪತ್ರಿಕೆಯ ಪ್ರಕಟನೆಯೊಂದಿಗೆ, ಗ್ರಂಥಕಾರರಿಗೆಲ್ಲ ಅದನ್ನು ತಿಳುಹುವ ಕಾಗದಗಳನ್ನು ಕಳುಹಿದ್ದರು. ಇಷ್ಟೇ ಅಲ್ಲ; ಆ ಪತ್ರದಲ್ಲಿಯೆ ಮುಂಬಯಿಗೆ ಬಂದು, ರಾಜ್ಯಪಾಲರ ಹಸ್ತದಿಂದ ಬಹುಮಾನಧನವನ್ನು ಪಡೆದುಕೊಂಡು ಹೋಗಬೇಕೆಂದು ಸಭೆಯು ಔತಣವೂ ಇದ್ದಿತು. ಆ ಸಭೆಗೆ ಹೋದವರಿಗಂತೂ ಸರಿಯೆ; ಹೋಗದೆ ಮನೆಯಲ್ಲಿ ಉಳಿದವರಿಗೂ ನಿರ್ಣಯವು ಹೊರಬಿದ್ದ ೮-೧೦ ದಿನಗಳಲ್ಲಿಯೆ ಬಹುಮಾನಧನವು ಕೈಗೆ ಬಂದಿತು. ಈಗ ನಮ್ಮ ಸರಕಾರ, ತನ್ನ ನಿರ್ಣಯವನ್ನು ಪತ್ರಿಕೆಯಲ್ಲಿ ಪ್ರಕಟಿಸಿ ಒಂದು ತಿಂಗಳು ಕಳೆದರೂ, ಬಹುಮಾನ ಪಡೆದ ಗ್ರಂಥಕಾರರಿಗೆ ಅದರ ವರ್ತಮಾನವನ್ನು—ವೈಯಕ್ತಿಕವಾಗಿ—ತಿಳುಹದಿರುವ ಈ ವ್ಯವಸ್ಥೆಗೆ ಏನೆಂದು ಹೇಳಬೇಕು?

ಹೇಗೋ ರಾಜಧಾನಿಯಲ್ಲಿ ರಾಜ್ಯಪಾಲರ ನಾಯಕತ್ವದಲ್ಲಿಯೇ ನಾಡಹಬ್ಬದ ಸಮಾರಂಭದ ಸಭೆಗಳು ನಡೆಯುತ್ತಿದ್ದವು. ಈ ಒಂದು ಸಭೆಯಲ್ಲಿ, ರಾಜ್ಯಪಾಲರ ಹಸ್ತದಿಂದ ಗ್ರಂಥಕಾರರಿಗೆ ಬಹುಮಾನವನ್ನು ಕೊಡಿಸುವ ಕಾರ್ಯಕ್ರಮವೊಂದನ್ನು ಇರಿಸಿಬಿಟ್ಟಿದ್ದರೆ, ಅದೊಂದು ಸರಕಾರಕ್ಕೂ ಗ್ರಂಥಕಾರರಿಗೂ ಭೂಷಣವೆನಿಸುವಂತಹ ಕಾರ್ಯಕ್ರಮವಾಗಬಹುದಾಗಿತ್ತಲ್ಲವೆ? ನಮ್ಮ ರಾಜ್ಯಸೂತ್ರ ಸಂಚಾಲಕರು, ಮೇಲಿನವರ ಮರ್ಜಿಯನ್ನು ಸಂಪಾದಿಸುವಂತಹ ಕಾರ್ಯಕ್ರಮಗಳಿಗೆ ಮಹತ್ತ್ವ ಕೊಡುವಷ್ಟು, ರಾಜ್ಯದ ಸುಸ್ಥಿರತೆ ಸಂವರ್ಧನಗಳಿಗೆ ಕಾರಣವೆನಿಸುವಂತಹ ಕಾರ್ಯಕ್ರಮಗಳಿಗೆ ಮಹತ್ತ್ವವನ್ನು ಕೊಡುವುದಿರುವುದು ತುಂಬ ವಿಷಾದದ ಸಂಗತಿಯಾಗಿದೆ.

ಇನ್ನೂ ಒಂದು ಹೊಣೆಯು ಇದೆ!

ಈಗ ಹೆಸರುಗಳನ್ನು ಪ್ರಕಟಿಸಿ, ಗ್ರಂಥಕರ್ತರಿಗೆ ಬಹುಮಾನವನ್ನು ಕೊಡುವ ಹೊಣೆಯಿಂದೇನೋ ನಮ್ಮ ಸರಕಾರ ಮುಕ್ತವಾಯಿತು. ಆದರೆ ಮುಂಬಯಿ ಸರಕಾರ ಒಪ್ಪಿಸಿಕೊಟ್ಟ ಇನ್ನೂ ಒಂದು ಹೊಣೆ ಅದರ ತಲೆಯ ಮೇಲೆ ಇದೆ. ಗ್ರಂಥಕರ್ತರಿಗೆ ಬಹುಮಾನ ಸಲ್ಲಿಸುತ್ತಿದ್ದಂತೆ ಮುಂಬಯಿ ಸರಕಾರ, ಆರ್ಥಿಕ ಆಪತ್ತಿನಲ್ಲಿರುವ ಕಲಾವಿದರಿಗೂ ಸಾಹಿತ್ಯಿಕರಿಗೂ ಆಸದ್ಧನ ಸಲ್ಲಿಸುವ ಕರ್ತವ್ಯವನ್ನೂ ಹೊತ್ತು ನಿರ್ವಹಿಸುತ್ತಿತ್ತು. ಅದರಂತೆಯೆ ೧೯೫೫-೫೬ನೆಯ ವರ್ಷದಲ್ಲಿ ಕರ್ನಾಟಕ ಭಾಗದಿಂದಲೂ ಆಪನ್ನ ಸ್ವಸ್ಥ-ಶ್ರೇಷ್ಠ-ಕಲಾವಿದರಿಂದಲೂ ಸಾಹಿತ್ಯಿಕರಿಂದಲೂ ಬೇಡಿಕೆಗಳನ್ನು ತರಿಸಿಕೊಂಡು, ಸಹಾಯದ ಆಶ್ವಾಸನವನ್ನೂ ಇತ್ತಿದ್ದಿತು; ಆದರೆ ರಾಜ್ಯಘಟನೆಯ ಕಾರಣದಿಂದಾಗಿ, ಮುಂಬಯಿ ಸರಕಾರ, ತನ್ನ ಕಾರ್ಯಭಾರವನ್ನು ನಮ್ಮ ಇಂದಿನ ಸರಕಾರದ ಕಡೆಗೆ ಒಪ್ಪಿಸಿಕೊಟ್ಟಿತು. ಮುಂಬಯಿ ಸರಕಾರ, ತನ್ನ ಆಡಳಿತ ಕ್ಷೇತ್ರದಲ್ಲಿಯ ಮರಾಠಿ ಗುಜರಾತಿ ಕಲಾವಿದರಿಗೂ ಸಾಹಿತ್ಯಿಕರಿಗೂ ಆಪನ್ನಿವಾರಕ ಧನಸಹಾಯವನ್ನು ಸಕಾಲದಲ್ಲಿ ಸಲ್ಲಿಸಿಬಿಟ್ಟಿದೆ; ಇಷ್ಟೇ ಅಲ್ಲ, ಹೊಸವರ್ಷದಲ್ಲಿಯ ಬೇಡಿಕೆಗಳನ್ನು ಆಹ್ವಾನಿಸುವ ಕಾರ್ಯವನ್ನೂ ಮಾಡಿ ಮುಗಿಸಿದೆ. ಆದರೆ ನಮ್ಮ ಸರಕಾರ ಇದುವರೆಗೆ ಅದರ ಸುದ್ದಿಯನ್ನೇ ಎತ್ತಿಲ್ಲ. ಇಷ್ಟೇ ಅಲ್ಲ; ಇದರ ವಿಷಯವಾಗಿ ಸಂಬಂಧಿಕ ಕಲಾವಿದರಿಗೂ ಸಾಹಿತ್ಯಕರಿಗೂ—ಪತ್ರ ಬರೆದು ಮೂರು ನಾಲ್ಕು ತಿಂಗಳು ದಾರಿ ಕಾಯ್ದರೂ-ಅಧಿಕಾರಿಗಳಿಂದ ಉತ್ತರ ಬಂದಿಲ್ಲ. ಸುಮ್ಮನೆ ಆಶೆಯನ್ನು ಇರಿಸಿಕೊಂಡು ಆ ಜನರನ್ನು ಹೀಗೆ ಕುತೂಹಲಗಳನ್ನಾಗಿಸಿ ಕೊರಗಿಸವುದಕ್ಕಿಂತ, ಬೇಗನೆ ಅದರ ನಿರ್ಣಯವನ್ನು ಪ್ರಕಟಿಸುವುದು ಒಳ್ಳೆಯದಲ್ಲವೆ? ಕೊಡುವುದಿಲ್ಲವೆಂದು ತಿಳುಹಿಸಿದರೂ, ಆ ಜನರಿಗೆ ಅದೊಂದು ಉಪಕಾರವೆನಿಸೀತು.

ಬಹುಮಾನ ಪಡೆದ ಗ್ರಂಥಕಾರರು

ಈ ಸಲದ ಬಹುಮಾನ ವಿತರಣೆಯು ಮುಂಬಯಿ ಸರಕಾರದ ಯೋಜನೆಯ ಫಲವಾದುದರಿಂದ, ಮುಂಬಯಿ ಕರ್ನಾಟಕ ಪ್ರದೇಶದಲ್ಲಿಯ ಗ್ರಂಥಕಾರರಿಗೆ ಮಾತ್ರ ಬಹುಮಾನಗಳು ದೊರೆತಿವೆ. ಈ ಯೋಜನೆಗನುಸಾರವಾಗಿ ಕಾದಂಬರಿ ವಿಭಾಗದ ಬಹುಮಾನಗಳು ಶ್ರೀ ಬಸವರಾಜ ಕಟ್ಟೀಮನಿ, ಶ್ರೀ. ಎನ್. ವ್ಯಾಸರಾವ್ ಬಲ್ಲಾಳ ಮತ್ತು ಶ್ರೀ ಬಿಂದುಮಾಧವ ಕುಲಕರ್ಣಿ ಅವರಿಗೆ ದೊರೆತಿವೆ. ಕಾವ್ಯ ವಿಭಾಗದ ಬಹುಮಾನಗಳು ಶ್ರೀ ಚೆನ್ನವೀರ ಕಣವಿ, ಶ್ರೀ. ಸಿದ್ದಣ್ಣ ಮಸಳಿ, ಶ್ರೀ. ದೇವರಗೆಣ್ಣೂರ ಮತ್ತು ಶ್ರೀ. ಮಹಾದೇವ ಬಣಕಾರ ಅವರಿಗೆ ದೊರೆತಿವೆ. ಸಣ್ಣಕತೆಯ ವಿಭಾಗದ ಬಹುಮಾನಗಳು ಶ್ರೀ. ಬಿ. ಆರ್. ವಾಡಪ್ಪಿ ಮತ್ತು ಶ್ರೀ. ಕೊಟ್ಟಲಗಿ ರಾಮಚಂದ್ರ ಅವರಿಗೆ ಸಿಕ್ಕಿವೆ. ಪ್ರಬಂಧ ವಿಭಾಗದ ಬಹುಮಾನಗಳು ಶ್ರೀ. ಸಿಂಪಿ ಲಿಂಗಣ್ಣ ಮತ್ತು ಎನ್. ಎಸ್ ಗದಗಕರ ಅವರಿಗೆ ಸಿಕ್ಕಿವೆ ಸಣ್ಣಕತೆ ಮತ್ತು ಪ್ರಬಂಧವಿಭಾಗದ ಮೊದಲನೆಯ ಬಹುಮಾನದ ಎರಡೆರಡು ಸಾವಿರ ರೂಪಾಯಿಗಳನ್ನು ಹಂಚದೆ ಹಾಗೆಯೆ ಬಿಟ್ಟಿರುವುದು ವಿಷಾದ ಪಡಬೇಕಾದ ವಿಷಯ. ಆ ವರ್ಷದಲ್ಲಿ ಅಂತಹ ಮಟ್ಟದಲ್ಲಿ ನಿಲ್ಲಬಹುದಾದ ಗ್ರಂಥಗಳು ರಚನೆಗೊಳ್ಳದಿರುವುದು, ನಮ್ಮ ಸಾಹಿತ್ಯದ ಪ್ರಗತಿಯ ದೃಷ್ಟಿಯಿಂದ ಅತೃಪ್ತಿಪಡಬೇಕಾದ ಸಂಗತಿಯೇ ಸರಿ.

ಶಿಶುಸಾಹಿತ್ಯದ ವಿಭಾಗವಂತು ಬಹುಮಾನದ ದೃಷ್ಟಿಯಿಂದ ಶೂನ್ಯವೆನಿಸಿದುದು ಇನ್ನೂ ನಿರಾಶೆಯ ಸಂಗತಿ. 'ದೇವರು ಕೊಟ್ಟದ್ದನ್ನು ದುರ್ಭಾಗ್ಯ ದಕ್ಕಗೊಡಲಿಲ್ಲ!' ಎನ್ನುವಂತಾಗಿದೆ ಈ ಸಲದ ಬಹುಮಾನದ ನಿರ್ಣಯ.

ಬಹುಮಾನ ದೊರೆಕಿಸಿದ ಗ್ರಂಥಕರ್ತರಿಗೆಲ್ಲ ನಮ್ಮ ಹೃತ್ಪೂರ್ವಕ ಅಭಿವಂದನೆಗಳು.

ಜತ್ತಿ ಸಮಿತಿಯ ವರದಿ

ರಾಜ್ಯದಲ್ಲಿ ಭೂಧಾರಣದ ಪುನರ್ವ್ಯವಸ್ಥೆಯ ವಿಚಾರ ಮಾಡಲು ನಮ್ಮ ಸರಕಾರವು ನಿಯಮಿಸಿದ ಜತ್ತಿಸಮಿತಿಯು ರಾಜ್ಯದಲ್ಲೆಲ್ಲ ತಿರುಗಾಡಿ, ಅಲ್ಲಲ್ಲಿಯ ಜನತೆಯ ಅಭಿಪ್ರಾಯವನ್ನು ಕೇಳಿಕೊಂಡು, ಇದೀಗ ತನ್ನ ಒಮ್ಮತದ ವರದಿಯನ್ನು ಸರಕಾರದ ಕಡೆಗೆ ಒಪ್ಪಿಸಿಬಿಟ್ಟಿದೆ. ಸರಕಾರವೂ ಅದನ್ನು ಪ್ರಕಟಿಸಿ ಜನತೆಯ ಕಣ್ಣೆದುರು ಇರಿಸಿದೆ. ಈ ವರದಿಯ ಅಭಿಪ್ರಾಯವನ್ನು ನೋಡಿದರೆ, ಮುಂಬಯಿಯ ಭೂಧಾರಣ ಪುನರ್ವ್ಯವಸ್ಥೆಯ ಶಾಸನಕ್ಕಿಂತ ಹೆಚ್ಚು ಸಮಾಧಾನಕರವಾಗಿದೆಯೆಂದು ಹೇಳಬಹುದು. ಮುಂಬಯಿಯ ಶಾಸನ ಜನತೆಯ ಅಭಿಪ್ರಾಯವನ್ನು ಸಂಪೂರ್ಣವಾಗಿ ಅಲಕ್ಷ್ಯಿಸಿ, ದುರಾಗ್ರಹಿಗಳಾದ ಒಬ್ಬಿಬ್ಬರು ಮಂತ್ರಿಗಳ ಸರ್ವಾಧಿಪತಿತ್ವದ ಪರಿಣಾಮವಾಗಿ ಮುಂದೆ ಬಂದುದು. ಅದರಲ್ಲಿ ಈ ಜಮೀನ್‌ದಾರರ ಬಗೆಗೆ ಇರುವ ವೈಯ್ಯಕ್ತಿಕ ಸೇಡಿನ ಭಾವನೆ ಹುದುಗಿದೆ ಹೊರತು, ಜನತಾಕಲ್ಯಾಣದ ಸದ್ಭಾವನೆ ಯಾವುದೂ ಅದರಲ್ಲಿರಲಿಲ್ಲ. ರಾಜ್ಯಸರಕಾರದಲ್ಲಿರುವ ಪ್ರಜಾಪ್ರತಿನಿಧಿಗಳು ಪಕ್ಷೀಯ ದಾಕ್ಷಿಣ್ಯಕ್ಕೆ ಒಳಗಾಗಿ, ಈ ವೈಯ್ಯಕ್ತಿಕ ಅಭಿಪ್ರಾಯಕ್ಕೂ ಒಪ್ಪಿಗೆ ಕೊಡಬೇಕಾಗಿ ಬಂದಿತು. ಆದರಿಂದ ಮುಂಬಯಿ ರಾಜ್ಯದ ಮಿಕ್ಕ ವಿಭಾಗದವರಿಗಿಂತ ಕರ್ನಾಟಕ ಪ್ರದೇಶದಲ್ಲಿಯ ಭೂಮಾಲಕರಿಗೇ ಹೆಚ್ಚಿನ ಅನ್ಯಾಯವಾಗುವ ಸಂದರ್ಭ ಒದಗಿತ್ತು. ಆದರೆ ಅದು ಪ್ರಚಾರದಲ್ಲಿ ಬರುವುದಕ್ಕಿಂತ ಮೊದಲೇ ರಾಜ್ಯ ಪುನರ್ಘಟನೆಯ ಏರ್ಪಾಡಾದುದರಿಂದ, ಉತ್ತರ ಕರ್ನಾಟಕದ ಜನರು, ತಾತ್ಪೂರ್ತಿಕವಾಗಿಯಾದರೂ ಆ ಕರಾಳ ಶಾಸನಶಾಪದ ಬಾಯಿಂದ ಪಾರಾದರು.

ಮುಂಬಯಿ ಭೂಧಾರಣಾ ಪುನರ್ವ್ಯವಸ್ಥೆಯ ಶಾಸನದ ಪರಿಣಾಮವಾಗಿ, ಈಗಾಗಲೇ ಉತ್ತರಕರ್ನಾಟಕದ ಭೂಮಿಯೊಡೆಯರ ನಿತ್ಯ ಜೀವನದಲ್ಲಿ, ಎಷ್ಟೆಷ್ಟೋ ಕ್ರಾಂತಿಗಳಾಗಿ ಬಿಟ್ಟವೆ. ಅನುಕೂಲತೆಯಿರುವವರೆಲ್ಲರೂ ತಂತಮ್ಮ ಒಡೆತನದ ಭೂಮಿಗಳನ್ನು ಮಾರಾಟಮಾಡಿ, ಭೂಮಿಯಿಲ್ಲದವರಾಗಿದ್ದಾರೆ. ಅಂತಹ ಅನುಕೂಲತೆಯಿಲ್ಲದವರು, ರೈತನಿಂದ ಭೂಮಿಯ ಉತ್ಪನ್ನ ಭಾಗವನ್ನು ಪಡೆಯದೆ, ಭೂಮಿಯಿದ್ದೂ ಇಲ್ಲದವರಂತಾಗಿದ್ದಾರೆ. ಭೂಮಿಯ ಒಡೆತನದ ಬಗೆಗೆ ಇನ್ನೂ ಸಂದಿಗ್ಧ ಪರಿಸ್ಥಿತಿಯೇ ಇದ್ದುದರಿಂದ, ಒಡೆಯನದೂ ರೈತನದೂ ಅಲ್ಲದ ಭೂಮಿ, ಕೃಷಿಯಿಲ್ಲದೆ ಬೀಳು ಭೂಮಿಯಾಗತೊಡಗಿದೆ. ಹೊಲದ ಉತ್ಪನ್ನದ ಮೇಲೆಯೇ ಜೀವನಾವಲಂಬನವಿದ್ದ ಮಧ್ಯಮ ತರಗತಿಯ ಭೂಮಿಯೊಡೆಯರಂತೂ ಜೀವಿತದ ದಾರಿಯನ್ನು ಕಾಣದೆ ಬಾಯಿ ಬಾಯಿಬಿಡುತ್ತಲಿದ್ದಾರೆ. ಬೀಳುಬಿದ್ದರೂ ಅಡ್ಡಿಯಿಲ್ಲ; ರೈತರ ಕಡೆಗೆ ಭೂಮಿಯನ್ನು ಒಪ್ಪಿಸಿ ಪರಂಪರಾಗತವಾಗಿ ಬಂದಿರುವ ಭೂಮಿಯನ್ನು ಕಳೆದುಕೊಳ್ಳಲಾರೆವೆಂಬ ಅಭಿಮಾನಕ್ಕೆ ಕಟ್ಟುಬಿದ್ದು, ತಮ್ಮ ಹೊಲಗಳನ್ನು ಬೀಳುಗೆಡಹಿದ ಭೂಪತಿಗಳೂ ಎಷ್ಟೋ ಜನರು, ಇದರಿಂದ ದುರ್ದಶೆಗೀಡಾಗಿ, ಸರಕಾರವನ್ನೂ ಸ್ವಾತಂತ್ರ್ಯವನ್ನೂ ನಿತ್ಯ ನಿತ್ಯ ಶಪಿಸುವ ಕಂಗೇಡಿಗಳಿಗೂ ಕೊರತೆಯಿಲ್ಲ.

ಜತ್ತಿ ಸಮಿತಿಯ ಸದಸ್ಯರು ಇದೆಲ್ಲ ದುರವಸ್ಥೆಯನ್ನು ಕಣ್ಣಾರೆ ಕಂಡಿರಬಹುದೆಂದು ನಮ್ಮ ಭಾವನೆ. ಅವರ ವರದಿಯಲ್ಲಿ, ಭೂಮಿಯೊಡೆಯರು ಬಡವರಾಗಿಯಾದರೂ ಬದುಕಿಕೊಂಡಿರುವುದಕ್ಕೆ ಅವಕಾಶವನ್ನು ಕಲ್ಪಿಸಿಕೊಟ್ಟಂತಿದೆ. ಇನ್ನು ಮುಂದೆ ನಮ್ಮ ರಾಜ್ಯ ಸಭೆಯು ಈ ವರದಿಯನ್ನು ಚರ್ಚಿಸಿ ನಿರ್ಣಯಿಸುವಾಗ, ಸರ್ವ ಹಿತಬುದ್ಧಿಯಿಂದ ವಿಚಾರಮಾಡಬೇಕೆಂಬುದೇ ನಮ್ಮ ಹಾರೈಕೆಯಾಗಿದೆ.

ಪ್ರಜಾಪ್ರಭುತ್ವ ತತ್ತ್ವದ ಉಪಹಾಸ

ನಮ್ಮ ಕೇಂದ್ರ ಸರಕಾರ–ಸಭೆಗಳಲ್ಲಿ ಪ್ರಜಾಪ್ರಭುತ್ವದ ತಿರುಳನ್ನು ಮನವರಿಕೆ ಮಾಡಿಕೊಂಡ ಮಹಾವ್ಯಕ್ತಿಗಳು ಕೆಲವಾದರೂ ಇವೆ. ಆದರೆ ರಾಜ್ಯಸರಕಾರಗಳಲ್ಲಿ, ಸ್ವಂತದ ಬೇಳೆಬೇಯಿಸಿಕೊಳ್ಳುವ ಉದ್ದೇಶದಿಂದ, ಪ್ರಜಾಪ್ರಭುತ್ವದ ಕೊರಳನ್ನು ಮೆಟ್ಟಿ ಕುಣಿಯುವ ವ್ಯಕ್ತಿಗಳ ಸಂಖ್ಯೆಯೇ ಹೆಚ್ಚಾಗಿರುವುದು. ಚುನಾವಣೆಯ ಕಾಲದ ಪ್ರಕಟನೆಗಳನ್ನು ನೋಡಿದರೆ, ಪ್ರತಿಯೊಬ್ಬ ಹುರಿಯಾಳೂ ಪ್ರಜಾಪ ಭುತ್ವದ ಕಡುತರ ಕೈವಾರಿಯೆಂದು ಭಾಸವಾಗುವುದು. ಮುಂದೆ ಚುನಾವಣೆಯಲ್ಲಿ ವಿಜಯಶಾಲಿಯಾದ ಮರುದಿನವೇ ಆ ಹುರಿಯಾಳಿನ ಮೊದಲಿನ ಮಾತುಗಳೆಲ್ಲ ಪುರಾಣದ ಬದನೆಕಾಯಿಗಳಾಗುವುವು. ನಮ್ಮ ಇಂದಿನ ಮೈಸೂರಿನ ಪ್ರಜಾಪ್ರತಿನಿಧಿಗಳಂತೂ ಪ್ರಜಾಪ್ರಭುತ್ವ ತತ್ತ್ವದ ಉಪಹಾಸ ಮಾಡುವುದರಲ್ಲಿ ಒಂದು ಬಗೆಯಿಂದ, ಮಿಕ್ಕ ರಾಜ್ಯದವರನ್ನೆಲ್ಲ ಮೀರಿಸಿದ್ದಾರೆ— ಎಂದು ಹೇಳಬಹುದಾಗಿದೆ.

ಈ ರಾಜ್ಯದ ಮಂತ್ರಿಮಂಡಲದ ಅಧಿಕಾರಸ್ಥಾನಗಳು ಇನ್ನೂ ಹೊಯ್ದಾಡುತ್ತಲಿವೆ. ಆದುದರಿಂದ, ಈಗ ಆ ಸ್ಥಾನಗಳನ್ನು ಹಿಡಿದು ಕುಳಿತವರಿಗೆ, ತಂತಮ್ಮ ಸ್ಥಾನಗಳನ್ನು ಹೇಗೆ ಭದ್ರವಾಗಿಸಿಕೊಳ್ಳುವುದೆಂಬ ಮಹಾ ಯೋಚನೆಯೆ ಹೆಚ್ಚಾಗಿ ಕುಳಿತಿದೆ. ಅವರಿಗೀಗ ಪ್ರಜೆಗಳ ಅಭಿಪ್ರಾಯವೇನೆಂಬುದನ್ನು ಕೇಳಲಿಕ್ಕೆ, ಅವರ ಯೋಗಕ್ಷೇಮಗಳನ್ನು ವಿಚಾರಿಸಲಿಕ್ಕೆ ಅವಕಾಶವೇ ಇಲ್ಲದಂತಾಗಿದೆ. ಸ್ವಪಕ್ಷವನ್ನು ಬಲಪಡಿಸಿಕೊಳ್ಳಲಿಕ್ಕೆಂದು, ಸದಸ್ಯ ವ್ಯಕ್ತಿಗಳ ಯಾವ ಆಕಾಂಕ್ಷೆಗಳೂ ಅಲ್ಲಿ ಪೂರಯಿಸಲ್ಪಡುತ್ತಿವೆ. ಮಂಗಳೂರು ಜಿಲ್ಲೆಯ ಕೆಲವು ಕಾಲೇಜುಗಳನ್ನು ಮೈಸೂರು ವಿಶ್ವವಿದ್ಯಾನಿಲಯಕ್ಕೆ ಬೇರೆ ಕೆಲವು ಕಾಲೇಜುಗಳನ್ನು ಕರ್ನಾಟಕ ವಿಶ್ವವಿದ್ಯಾಲಯಕ್ಕೆ ಸೇರಿಸುವುದರಲ್ಲಿ, ಪ್ರಜೆಗಳ ಅನುಕೂಲತೆಗಿಂತ ವ್ಯಕ್ತಿಗಳ ಪ್ರಸನ್ನೀಕರಣವೇ ಮುಖ್ಯ ಕಾರಣವಾಗಿದೆಯೆಂದು ಹೇಳುವುದಕ್ಕೆ ಸಾಕಷ್ಟು ಪ್ರಮಾಣಗಳಿವೆ. ಇಂತಹ ಉಪಹಾಸಾಸ್ಪದವಾದ ಪ್ರಜಾಪ್ರಭುತ್ವ, ಯಾವ ಪ್ರಜೆಗಳಿಗೆ ಕಲ್ಯಾಣಕಾರಿಯಾಗಿ ಪರಿಣಮಿಸೀತು ?

ಪೀಜೀ

(ಮುಂಬಯಿಜೀವನದ ಒಂದು ಚಿಕ್ಕ ದುರಂತಕಥೆ)

ಶ್ರೀ. ಯಶವಂತ ಚಿತ್ತಾಲ ಬಿ. ಎಸ್‌ಸಿ. (ಆನರ್ಸ್), ಬಿ ಎಸ್‌ಸಿ. (ಟೆಕ್) ಮುಂಬಯಿ

卐

ಇಂದಿನ ವೈಷಮ್ಯಪೂರ್ಣ ಜೀವನದ ಮೂಲಕ, ಅನಂತನಂತಹ ಅದೆಷ್ಟು ಯುವಕರ ನಿರಾಶೆಯ ನಿಟ್ಟುಸಿರು, ವಾತಾವರಣದಲ್ಲಿ ವಿಷಯವನ್ನು ಹರಡುತ್ತಿದೆಯೊ ! ಸುದೈವಿಗಳಾದ ಭೋಗಪ್ರಿಯ ಸಿರಿವಂತರು ಈ ವಿಷದ ಹರಡುವಿಕೆಗೆ ನೆರವಾಗುವರು !

卐

ಆಫೀಸು ಬಿಟ್ಟವನೇ ಅನಂತ ಫ್ಲೋರಾ ಫೌಂಟನ್ ಹತ್ತಿರದ ಬಸ್‌ಸ್ಟ್ಯಾಂಡಿನಲ್ಲಿ ಕ್ಯೂದಲ್ಲಿ ನಿಂತು 'ಎಚ್' ರೂಟ್ ಬಸ್ಸಿಗಾಗಿ ಕಾಯುತ್ತಿದ್ದ, ಚೌಪಾಟಿಗೆ ಹೋಗಲು. ಆದರೆ ಕ್ಯೂದಲ್ಲಿ ನಿಂತು ಆದಾಗಲೇ ಹದಿನೈದು ಮಿನಿಟುಗಳಾದರೂ ಒಂದೂ ಬಸ್ಸು ಬರದೇ ಮನಸ್ಸು ರೋಸಿಹೋಗಿತ್ತು. ಆಫೀಸು ಬಿಟ್ಟದ್ದೇ ಅಲ್ಲಿ ಬರುತ್ತಿರುವಾಗ, ಒಂದು ಬಸ್ಸು ಅದೇ ನಿಲ್ದಾಣಕ್ಕೆ ಬರುತ್ತಿದ್ದುದು ಕಂಡು, ಬೂಟುಹಾಕಿದ ಕಾಲುಗಳಿಂದಲೇ ಓಡಿದ್ದ. ಏದುತ್ತ, ತೇಕುತ್ತ ನಿಲ್ದಾಣವನ್ನೇನೋ ತಲುಪಿದ; ಆದರೆ ಬಸ್ಸಿನಲ್ಲಿ ಇವನೊಬ್ಬನಿಗಷ್ಟೇ ಜಾಗ ಸಿಗದೇ ಹೋಗಬೇಕೆ ? ಆ ಕಂಡಕ್ಟರನೂ ಎಷ್ಟು ಉದ್ಧಟ ! ಒಬ್ಬನನ್ನು ಹೆಚ್ಚಿಗೆ ತೆಗೆದುಕೊಂಡಲ್ಲಿ ಅವನ ಅಪ್ಪನ ಗಂಟು ಹೋಗುತ್ತಿತ್ತೇ ? ಹೊರಟು ನಿಂತ ಬಸ್ಸನ್ನು ಗಂಟೆ ಹೊಡೆದು ನಿಲ್ಲಿಸಿ ತನ್ನನ್ನು ಇಳಿಸಿದನಲ್ಲ ! 'ಈ ಜಗತ್ತೇ ನಿಷ್ಕರುಣಿ' ಎನಿಸಿತು ಅನಂತನಿಗೆ. ಅಬ್ಬಬ್ಬ ! ಬರಿಯೇ ಬಸ್ಸಿನಲ್ಲಿ ಜಾಗ ಸಿಗದೆ ನಿರಾಶೆಯಾದುದಕ್ಕೆ ಇಷ್ಟುದೊಡ್ಡ ಉದ್ಗಾರವೆ ?

ಏಕೊ, ಇತ್ತೀಚೆಗೆ ಅನಂತನ ಮನಸ್ಸಿನ ರೀತಿಯೇ ಒಂದು ತರವಾಗಿದೆ. ಏನೋ ಒಂದು ಅಸಮಾಧಾನ, ಎಂತಹದೋ ಅಸ್ವಸ್ಥತೆ ಅವನ ಮನಸ್ಸಿನ ಶಾಂತಿಯನ್ನು ಕದಡಿವೆ. ತನ್ನ ಮನಸ್ಸಿನ ವಿರುದ್ಧ ನಡೆದ ಸಣ್ಣಪುಟ್ಟ ಸಂಗತಿಗಳಿಗೂ ಸಿಡಿದೇಳುತ್ತಿದ್ದ, ಕ್ಷೋಭೆಗೊಳ್ಳುತ್ತಿದ್ದ.

ಕಳೆದ ಏಳುವರುಷಗಳ ತನ್ನ ಮುಂಬಯಿ ಜೀವನದಲ್ಲಿ ಹಾಸುಹೊಕ್ಕಾಗಿ ನಿಂತ, ನಿತ್ಯಪರಿಚಯದ ಈ ರುಕ್ಷ ಆಫೀಸು ಕೆಲಸ; ದಣಿಸುವ ಬಸ್‌ಕ್ಯೂ; ರುಚಿಯಿಲ್ಲದ ಬದಲಿಲ್ಲದ ಹೊಟೆಲ್ ಊಟ (ಊಟಕ್ಕೂ ಕ್ಯೂ ಮತ್ತೆ !) ಎಲ್ಲವೂ ಇತ್ತೀಚೆಗೆ ಹೊಸ ಅರ್ಥ ಹೊಸ ರೂಪ ತಳೆದು ಮನಸ್ಸನ್ನು ವ್ಯಗ್ರಗೊಳಿಸುತ್ತಿವೆ. ಬಾಳೆಲ್ಲ ಬರಿದು ಬರಿದು ಎನಿಸಹತ್ತಿದೆ. ಮುಂಬಯಿ ಜೀವನದ ವಿವಿಧ ರೀತಿನೀತಿಗಳಿಗೆ ಅತಿ ಸಹಜವಾಗಿ ಹೊಂದಿಕೊಂಡ ಅನಂತನಲ್ಲಿ, ಒಮ್ಮೆಲೇ ಹೊಸ ಅರಿವು ಬಂದಂತಾಗಿ ಜೀವನ ಬೇಸರ ಬೇಸರ ಎನಿಸುತ್ತಿದೆ.

ಮೊದಲಿನ ಬಸ್ಸು ಹೊರಟು ಆದಾಗಲೇ ಇಪ್ಪತ್ತು ಮಿನಿಟುಗಳಾದರೂ ಇನ್ನೊಂದು ಬಸ್ಸು ಬರುವ ಲಕ್ಷಣ ತೋರಲಿಲ್ಲ. ಕ್ಯೂ ಭರದಿಂದ ಬೆಳೆಯುತ್ತಲಿತ್ತು. ಕ್ಯೂದಲ್ಲಿ ತನ್ನದೇ ಮೊದಲ ಸ್ಥಾನ. ತನ್ನಂತೆಯೇ ಬಸ್ಸಿಗಾಗಿ ಕಾಯುವ ಜನ ಅನೇಕರಿದ್ದಾರಲ್ಲ ಎನ್ನುವ ನಿತ್ಯದ ಸಮಾಧಾನ ಇಂದು ಅನಂತನಿಗಿಲ್ಲ. ಕ್ಷಣ ಕ್ಷಣಕ್ಕೂ ಅವನ ಮನಸ್ಸಿನ ಅಸ್ವಸ್ಥತೆ ಮಾತ್ರ ಹೆಚ್ಚುತ್ತಿತ್ತು.

ತನ್ನ ಜೀವನ ಈಗ ಒಂದು ಸ್ತ್ರಿಮಿತಕ್ಕೆ ಬಂದಿದೆ, ಅದರ ಮಿತಿ ತನಗೆ ತಿಳಿದಿವೆ ಎಂದು ತಿಳಿದ ಅನಂತ, ಇಂದು ಕ್ಷುಲ್ಲಕ ಕಾರಣಗಳಿಂದಲೂ ತನ್ನ ಮನಸ್ಸಿನ ಶಾಂತಿಯನ್ನು ಕಳಕೊಳ್ಳಲು ಕಾರಣವೇನು ?

ಕಳೆದ ಐದಾರು ದಿನಗಳಲ್ಲಿ ಅನಂತನ ಜೀವನದಲ್ಲಿ ನಡೆದ ಒಂದು ದೊಡ್ಡ ಘಟನೆಯೆಂದರೆ ಅವನ ಗೆಳೆಯ—ಈಗ ಅವನು 'ಪೇಯಿಂಗ್‌ಗೆಸ್ಟ್' (ಪೀಜೀ) ಆಗಿ ನಿಂತ ಮನೆಯ ಯಜಮಾನನ ಮಗ—ಅರವಿಂದನ ಮದುವೆ. ಆದರೆ ಈ ಮದುವೆಗೂ ತನಗೂ ಸಂಬಂಧವೇನು ? ಸಂಬಂಧ ಇದೆಯೆ ? ಇಲ್ಲವೆ ? ತನಗಿಂತ ಎಷ್ಟೋ ವರುಷಗಳಿಂದ ಚಿಕ್ಕನನಾದ, ಒಮ್ಮೆ ತನ್ನ ವಿದ್ಯಾರ್ಥಿಯೂ ಆಗಿದ್ದ ಈ ಅರವಿಂದನ ಲಗ್ನದಿಂದ ತನ್ನ ಮನಶ್ಶಾಂತಿ ಏಕೆ ಕದಡಬೇಕು ? ಅರವಿಂದನ ವಿಷಯದಲ್ಲಿ ತನಗೆ ಅಸೂಯೆಯೆ ? ಮದುವೆಯನ್ನೇ ಮಾಡಿಕೊಳ್ಳಲಾರೆನೆಂದು ಮನಃಪೂರ್ವಕವಾಗಿಯೇ ನಿಶ್ಚಯಿಸಿದ್ದ ತನ್ನಲ್ಲಿ ಅಸೂಯೆ ಹುಟ್ಟುವ ಮಾತೆಲ್ಲಿ ಬಂತು ?

ಬಸ್ ನಿಲ್ದಾಣದಲ್ಲಿ ನಿಂತು ನಿಂತು ಬೇಸರ ಬಂದಾಗ, ಬಸ್ಸೊಂದು ದೂರದಲ್ಲಿ ಬರುವುದು ತೋರಿತು....'ಉಶ್ ! ಕೊನೆಗೂ ಬಂದಿತಲ್ಲ' ಎಂಬ ಬಿಡುಗಡೆಯ ನಿಶ್ವಾಸ ಬಿಟ್ಟು ನಿಂತಲ್ಲಿಯೇ ಬಸ್ ಹತ್ತುವ ಸಿದ್ಧತೆಯ ಚಲನೆ ಮಾಡಿದ, ಅನಂತ. ಆದರೆ ಅವನ ದುರ್ದೈವ; ಇಲೆಕ್ಟ್ರಿಕ್ ಹೌಸ್ ಸ್ಟಾಪಿನಲ್ಲೇ ತುಂಬಿ ಬಂದ ಬಸ್ಸು ಈತ ನಿಂತ ನಿಲ್ದಾಣದಲ್ಲಿ ಇಳಿಯುವವರಾರೂ ಇಲ್ಲದ್ದರಿಂದ, ನಿಲ್ಲದೇ ಮುಂದೆ ಸಾಗಿತು. ಬಸ್ಸಿನಲ್ಲಿ ಒಂದೂ ಜಾಗ ಖಾಲಿಯಿಲ್ಲ ಎಂಬ

ಶಿಶುಸಾಹಿತ್ಯದ ವಿಭಾಗವಂತು ಬಹುಮಾನದ ದೃಷ್ಟಿಯಿಂದ ಶೂನ್ಯವೆನಿಸಿದುದು ಇನ್ನೂ ನಿರಾಶೆಯ ಸಂಗತಿ. 'ದೇವರು ಕೊಟ್ಟರೂ ಪೂಜಾರಿ ಕೊಡ' ಎನ್ನುವಂತಾಗಿದೆ — 'ದೇವರು ಕೊಟ್ಟದ್ದನ್ನು ದುರ್ಭಾಗ್ಯ ದಕ್ಕಗೊಡಲಿಲ್ಲ!' ಎನ್ನುವಂತಾಗಿದೆ ಈ ಸಲದ ಬಹುಮಾನದ ನಿರ್ಣಯ.

ಬಹುಮಾನ ದೊರಕಿಸಿದ ಗ್ರಂಥಕರ್ತರಿಗೆಲ್ಲ ನಮ್ಮ ಹೃತ್ಪೂರ್ವಕ ಅಭಿವಂದನೆಗಳು.

ಜತ್ತಿ ಸಮಿತಿಯ ವರದಿ

ರಾಜ್ಯದಲ್ಲಿ ಭೂಧಾರಣದ ಪುನರ್ವ್ಯವಸ್ಥೆಯ ವಿಚಾರ ಮಾಡಲು ನಮ್ಮ ಸರಕಾರವು ನಿಯಮಿಸಿದ ಜತ್ತಿಸಮಿತಿಯು ರಾಜ್ಯದಲ್ಲೆಲ್ಲ ತಿರುಗಾಡಿ, ಅಲ್ಲಲ್ಲಿಯ ಜನತೆಯ ಅಭಿಪ್ರಾಯವನ್ನು ಕೇಳಿಕೊಂಡು, ಇದೀಗ ತನ್ನ ಒಮ್ಮತದ ವರದಿಯನ್ನು ಸರಕಾರದ ಕಡೆಗೆ ಒಪ್ಪಿಸಿಬಿಟ್ಟಿದೆ. ಸರಕಾರವೂ ಅದನ್ನು ಪ್ರಕಟಿಸಿ ಜನತೆಯ ಕಣ್ಣೆದುರು ಇರಿಸಿದೆ. ಈ ವರದಿಯ ಅಭಿಪ್ರಾಯವನ್ನು ನೋಡಿದರೆ, ಮುಂಬಯಿಯ ಭೂಧಾರಣ ಪುನರ್ವ್ಯವಸ್ಥೆಯ ಶಾಸನಕ್ಕಿಂತ ಹೆಚ್ಚು ಸಮಾಧಾನಕರವಾಗಿದೆಯೆಂದು ಹೇಳಬಹುದು. ಮುಂಬಯಿಯ ಶಾಸನ ಜನತೆಯ ಅಭಿಪ್ರಾಯವನ್ನು ಸಂಪೂರ್ಣವಾಗಿ ಅಲಕ್ಷಿಸಿ, ದುರಾಗ್ರಹಿಗಳಾದ ಒಬ್ಬಿಬ್ಬರು ಮಂತ್ರಿಗಳ ಸರ್ವಾಧಿಪತಿತ್ವದ ಪರಿಣಾಮವಾಗಿ ಮುಂದೆ ಬಂದುದು. ಅದರಲ್ಲಿ ಈ ಜಮೀನ್‌ದಾರರ ಬಗೆಗೆ ಇರುವ ವೈಯಕ್ತಿಕ ಸೇಡಿನ ಭಾವನೆ ಹುದುಗಿದೆ ಹೊರತು, ಜನತಾಕಲ್ಯಾಣದ ಸದ್ಭಾವನೆ ಯಾವುದೂ ಅದರಲ್ಲಿಲ್ಲ. ರಾಜ್ಯ ಸರಕಾರದಲ್ಲಿರುವ ಪ್ರಜಾಪ್ರತಿನಿಧಿಗಳು ಪಕ್ಷೀಯ ದಾಕ್ಷಿಣ್ಯಕ್ಕೆ ಒಳಗಾಗಿ, ಈ ವೈಯಕ್ತಿಕ ಅಭಿಪ್ರಾಯಕ್ಕೂ ಒಪ್ಪಿಗೆ ಕೊಡಬೇಕಾಗಿ ಬಂದಿತು. ಅದರಿಂದ ಮುಂಬಯಿ ರಾಜ್ಯದ ಮಿಕ್ಕ ವಿಭಾಗದವರಿಗಿಂತ ಕರ್ನಾಟಕ ಪ್ರದೇಶದಲ್ಲಿಯ ಭೂಮಾಲಕರಿಗೇ ಹೆಚ್ಚಿನ ಅನ್ಯಾಯವಾಗುವ ಸಂದರ್ಭ ಒದಗಿತ್ತು. ಆದರೆ ಅದು ಪ್ರಚಾರದಲ್ಲಿ ಬರುವುದಕ್ಕಿಂತ ಮೊದಲೇ ರಾಜ್ಯ ಪುನರ್ಘಟನೆಯ ಏರ್ಪಾಡಾದುದರಿಂದ, ಉತ್ತರ ಕರ್ನಾಟಕದ ಜನರು, ತಾತ್ಪೂರ್ತಿಕವಾಗಿಯಾದರೂ ಆ ಕರಾಳ ಶಾಸನದ ಸ್ಪರ್ಶದ ಬಾಯಿಂದ ಪಾರಾದರು.

ಮುಂಬಯಿ ಭೂಧಾರಣಾ ಪುನರ್ವ್ಯವಸ್ಥೆಯ ಶಾಸನದ ಪರಿಣಾಮವಾಗಿ, ಈಗಾಗಲೇ ಉತ್ತರಕರ್ನಾಟಕದ ಭೂಮಿಯೊಡೆಯರ ನಿತ್ಯ ಜೀವನದಲ್ಲಿ, ಎಷ್ಟೆಷ್ಟೋ ಕ್ರಾಂತಿಗಳಾಗಿ ಬಿಟ್ಟಿವೆ. ಅನುಕೂಲತೆಯಿರುವವರೆಲ್ಲರೂ ತಂತಮ್ಮ ಒಡೆತನದ ಭೂಮಿಗಳನ್ನು ಮಾರಾಟಮಾಡಿ, ಭೂಮಿಯಿಲ್ಲದವರಾಗಿದ್ದಾರೆ. ಅಂತಹ ಅನುಕೂಲತೆಯಿಲ್ಲದವರು, ರೈತನಿಂದ ಭೂಮಿಯ ಉತ್ಪನ್ನ ಭಾಗವನ್ನು ಪಡೆಯದೆ, ಭೂಮಿಯಿದ್ದೂ ಇಲ್ಲದವರಂತಾಗಿದ್ದಾರೆ. ಭೂಮಿಯ ಒಡೆತನದ ಬಗೆಗೆ ಇನ್ನೂ ಸಂದಿಗ್ಧ ಪರಿಸ್ಥಿತಿಯೇ ಇದ್ದುದರಿಂದ, ಒಡೆಯನದೂ ರೈತನದೂ ಅಲ್ಲದ ಭೂಮಿ, ಕೃಷಿಯಿಲ್ಲದೆ ಬೀಳು ಭೂಮಿಯಾಗತೊಡಗಿದೆ. ಹೊಲದ ಉತ್ಪನ್ನದ ಮೇಲೆಯೇ ಜೀವನಾವಲಂಬನವಿದ್ದ ಮಧ್ಯಮ ತರಗತಿಯ ಭೂಮಿಯೊಡೆಯರಂತೂ ಜೀವಿತದ ದಾರಿಯನ್ನು ಕಾಣದೆ ಬಾಯಿ ಬಾಯಿಬಿಡುತ್ತಲಿದ್ದಾರೆ. ಬೀಳುಬಿದ್ದರೂ ಅಡ್ಡಿಯಿಲ್ಲ; ರೈತರ ಕಡೆಗೆ ಭೂಮಿಯನ್ನು ಒಪ್ಪಿಸಿ ಪರಂಪರಾಗತವಾಗಿ ಬಂದಿರುವ ಭೂಮಿಯನ್ನು ಕಳೆದುಕೊಳ್ಳಲಾರೆವೆಂಬ ಅಭಿಮಾನಕ್ಕೆ ಕಟ್ಟುಬಿದ್ದು, ತಮ್ಮ ಹೊಲಗಳನ್ನು ಬೀಳುಗೆಡಹಿದ ಭೂಪತಿಗಳೂ ಎಷ್ಟೋ ಜನರು, ಇದರಿಂದ ದುರ್ದಶೆಗೀಡಾಗಿ, ಸರಕಾರವನ್ನೂ ಸ್ವಾತಂತ್ರ್ಯವನ್ನೂ ನಿತ್ಯ ನಿತ್ಯ ಶಪಿಸುವ ಕಂಗೇಡಿಗಳಿಗೂ ಕೊರತೆಯಿಲ್ಲ.

ಜತ್ತಿ ಸಮಿತಿಯ ಸದಸ್ಯರು ಇದೆಲ್ಲ ದುರವಸ್ಥೆಯನ್ನು ಕಣ್ಣಾರೆ ಕಂಡಿರಬಹುದೆಂದು ನಮ್ಮ ಭಾವನೆ. ಅವರ ವರದಿಯಲ್ಲಿ, ಭೂಮಿಯೊಡೆಯರು ಬಡವರಾಗಿಯಾದರೂ ಬದುಕಿಕೊಂಡಿರುವುದಕ್ಕೆ ಅವಕಾಶವನ್ನು ಕಲ್ಪಿಸಿಕೊಟ್ಟಂತಿದೆ. ಇನ್ನು ಮುಂದೆ ನಮ್ಮ ರಾಜ್ಯ ಸಭೆಯು ಈ ವರದಿಯನ್ನು ಚರ್ಚಿಸಿ ನಿರ್ಣಯಿಸುವಾಗ, ಸರ್ವಹಿತಬುದ್ಧಿಯಿಂದ ವಿಚಾರಮಾಡಬೇಕೆಂಬುದೇ ನಮ್ಮ ಹಾರೈಕೆಯಾಗಿದೆ.

ಪ್ರಜಾಪ್ರಭುತ್ವ ತತ್ತ್ವದ ಉಪಹಾಸ

ನಮ್ಮ ಕೇಂದ್ರ ಸರಕಾರ–ಸಭೆಗಳಲ್ಲಿ ಪ್ರಜಾಪ್ರಭುತ್ವದ ತಿರುಳನ್ನು ಮನವರಿಕೆ ಮಾಡಿಕೊಂಡ ಮಹಾವ್ಯಕ್ತಿಗಳು ಕೆಲವಾದರೂ ಇವೆ. ಆದರೆ ರಾಜ್ಯಸರಕಾರಗಳಲ್ಲಿ, ಸ್ವಂತದ ಬೇಳೆಬೇಯಿಸಿಕೊಳ್ಳುವ ಉದ್ದೇಶದಿಂದ, ಪ್ರಜಾಪ್ರಭುತ್ವದ ಕೊರಳನ್ನು ಮೆಟ್ಟಿ ಕುಣಿಯುವ ವ್ಯಕ್ತಿಗಳ ಸಂಖ್ಯೆಯೇ ಹೆಚ್ಚಾಗಿರುವುದು. ಚುನಾವಣೆಯ ಕಾಲದ ಪ್ರಕಟನೆಗಳನ್ನು ನೋಡಿದರೆ, ಪ್ರತಿಯೊಬ್ಬ ಹುರಿಯಾಳೂ ಪ್ರಜಾಪ ಭುತ್ವದ ಕಡುತರ ಕೈವಾರಿಯೆಂದು ಭಾಸವಾಗುವುದು. ಮುಂದೆ ಚುನಾವಣೆಯಲ್ಲಿ ವಿಜಯಶಾಲಿಯಾದ ಮರುದಿನವೇ ಆ ಹುರಿಯಾಳಿನ ಮೊದಲಿನ ಮಾತುಗಳೆಲ್ಲ ಪುರಾಣದ ಬದನೆಕಾಯಿಗಳಾಗುವುವು. ನಮ್ಮ ಇಂದಿನ ಮೈಸೂರಿನ ಪ್ರಜಾಪ್ರತಿನಿಧಿಗಳಂತೂ ಪ್ರಜಾಪ್ರಭುತ್ವ ತತ್ತ್ವದ ಉಪಹಾಸ ಮಾಡುವುದರಲ್ಲಿ ಒಂದು ಬಗೆಯಿಂದ, ಮಿಕ್ಕ ರಾಜ್ಯದವರನ್ನೆಲ್ಲ ಮೀರಿಸಿದ್ದಾರೆ—ಎಂದು ಹೇಳಬಹುದಾಗಿದೆ.

ಈ ರಾಜ್ಯದ ಮಂತ್ರಿಮಂಡಲದ ಅಧಿಕಾರಸ್ಥಾನಗಳು ಇನ್ನೂ ಹೊಯ್ದಾಡುತ್ತಲಿವೆ. ಆದುದರಿಂದ, ಈಗ ಆ ಸ್ಥಾನಗಳನ್ನು ಹಿಡಿದು ಕುಳಿತವರಿಗೆ, ತಂತಮ್ಮ ಸ್ಥಾನಗಳನ್ನು ಹೇಗೆ ಭದ್ರವಾಗಿಸಿಕೊಳ್ಳುವುದೆಂಬ ಮಹಾ ಯೋಚನೆಯೆ ಹೆಚ್ಚಾಗಿ ಕುಳಿತಿದೆ. ಅವರಿಗೀಗ ಪ್ರಜೆಗಳ ಅಭಿಪ್ರಾಯವೇನೆಂಬುದನ್ನು ಕೇಳಲಿಕ್ಕೆ, ಅವರ ಯೋಗಕ್ಷೇಮಗಳನ್ನು ವಿಚಾರಿಸಲಿಕ್ಕೆ ಅವಕಾಶವೇ ಇಲ್ಲದಂತಾಗಿದೆ. ಸ್ವಪಕ್ಷವನ್ನು ಬಲಪಡಿಸಿಕೊಳ್ಳಲಿಕ್ಕೆಂದು, ಸದಸ್ಯ ವ್ಯಕ್ತಿಗಳ ಯಾವ ಆಕಾಂಕ್ಷೆಗಳೂ ಅಲ್ಲಿ ಪೂರಯಿಸಲ್ಪಡುತ್ತಿವೆ. ಮಂಗಳೂರು ಜಿಲ್ಲೆಯ ಕೆಲವು ಕಾಲೇಜುಗಳನ್ನು ಮೈಸೂರು ವಿಶ್ವವಿದ್ಯಾನಿಲಯಕ್ಕೆ ಬೇರೆ ಕೆಲವು ಕಾಲೇಜುಗಳನ್ನು ಕರ್ನಾಟಕ ವಿಶ್ವವಿದ್ಯಾಲಯಕ್ಕೆ ಸೇರಿಸುವುದರಲ್ಲಿ, ಪ್ರಜೆಗಳ ಅನುಕೂಲತೆಗಿಂತ ವ್ಯಕ್ತಿಗಳ ಪ್ರಸನ್ನೀಕರಣವೇ ಮುಖ್ಯ ಕಾರಣವಾಗಿದೆಯೆಂದು ಹೇಳುವುದಕ್ಕೆ ಸಾಕಷ್ಟು ಪ್ರಮಾಣಗಳಿವೆ. ಇಂತಹ ಉಪಹಾಸಾಸ್ಪದವಾದ ಪ್ರಜಾಪ್ರಭುತ್ವ, ಯಾವ ಪ್ರಜೆಗಳಿಗೆ ಕಲ್ಯಾಣಕಾರಿಯಾಗಿ ಪರಿಣಮಿಸೀತು ?

ಪೀಜೀ

(ಮುಂಬಯಿಜೀವನದ ಒಂದು ಚಿಕ್ಕ ದುರಂತಕಥೆ)

ಶ್ರೀ. ಯಶವಂತ ಚಿತ್ತಾಲ ಬಿ. ಎಸ್‌ಸಿ. (ಆನರ್ಸ್), ಬಿ ಎಸ್‌ಸಿ. (ಟೆಕ್) ಮುಂಬಯಿ

ಇಂದಿನ ವೈಷಮ್ಯಪೂರ್ಣ ಜೀವನದ ಮೂಲಕ, ಅನಂತನಂತಹ ಅದೆಷ್ಟು ಯುವಕರ ನಿರಾಶೆಯ ನಿಟ್ಟುಸಿರು, ವಾತಾವರಣದಲ್ಲಿ ವಿಷಯವನ್ನು ಹರಡುತ್ತಿದೆಯೊ ! ಸುದೈವಿಗಳಾದ ಭೋಗಪ್ರಿಯ ಸಿರಿವಂತರು ಈ ವಿಷದ ಹರಡುವಿಕೆಗೆ ನೆರವಾಗುವರು !

ಆಫೀಸು ಬಿಟ್ಟವನೇ ಅನಂತ ಫ್ಲೋರಾ ಫೌಂಟನ್ ಹತ್ತಿರದ ಬಸ್‌ಸ್ಟ್ಯಾಂಡಿನಲ್ಲಿ ಕ್ಯೂದಲ್ಲಿ ನಿಂತು 'ಎಚ್' ರೂಟ್ ಬಸ್ಸಿಗಾಗಿ ಕಾಯುತ್ತಿದ್ದ, ಚೌಪಾಟಿಗೆ ಹೋಗಲು. ಆದರೆ ಕ್ಯೂದಲ್ಲಿ ನಿಂತು ಆದಾಗಲೇ ಹದಿನೈದು ಮಿನಿಟುಗಳಾದರೂ ಒಂದೂ ಬಸ್ಸು ಬರದೇ ಮನಸ್ಸು ರೋಸಿಹೋಗಿತ್ತು. ಆಫೀಸು ಬಿಟ್ಟದ್ದೇ ಅಲ್ಲಿ ಬರುತ್ತಿರುವಾಗ, ಒಂದು ಬಸ್ಸು ಅದೇ ನಿಲ್ದಾಣಕ್ಕೆ ಬರುತ್ತಿದ್ದುದು ಕಂಡು, ಬೂಟುಹಾಕಿದ ಕಾಲುಗಳಿಂದಲೇ ಓಡಿದ್ದ. ಏದುತ್ತ, ತೇಕುತ್ತ ನಿಲ್ದಾಣವನ್ನೇನೋ ತಲುಪಿದ; ಆದರೆ ಬಸ್ಸಿನಲ್ಲಿ ಇವನೊಬ್ಬನಿಗಷ್ಟೇ ಜಾಗ ಸಿಗದೇ ಹೋಗಬೇಕೆ ? ಆ ಕಂಡಕ್ಟರನೂ ಎಷ್ಟು ಉದ್ಧಟ ! ಒಬ್ಬನನ್ನು ಹೆಚ್ಚಿಗೆ ತೆಗೆದುಕೊಂಡಲ್ಲಿ ಅವನ ಅಪ್ಪನ ಗಂಟು ಹೋಗುತ್ತಿತ್ತೇ ? ಹೊರಟು ನಿಂತ ಬಸ್ಸನ್ನು ಗಂಟೆ ಹೊಡೆದು ನಿಲ್ಲಿಸಿ ತನ್ನನ್ನು ಇಳಿಸಿದನಲ್ಲ ! 'ಈ ಜಗತ್ತೇ ನಿಷ್ಕರುಣಿ' ಎನಿಸಿತು ಅನಂತನಿಗೆ. ಅಬ್ಬಬ್ಬ ! ಬರಿಯೇ ಬಸ್ಸಿನಲ್ಲಿ ಜಾಗ ಸಿಗದೆ ನಿರಾಶೆಯಾದುದಕ್ಕೆ ಇಷ್ಟುದೊಡ್ಡ ಉದ್ಗಾರವೆ ?

ಹಿಕೊ, ಇತ್ತಿತ್ತ ಅನಂತನ ಮನಸ್ಸಿನ ರೀತಿಯೇ ಒಂದು ತರವಾಗಿದೆ. ಏನೋ ಒಂದು ಅಸಮಾಧಾನ, ಎಂತಹದೋ ಅಸ್ವಸ್ಥತೆ ಅವನ ಮನಸ್ಸಿನ ಶಾಂತಿಯನ್ನು ಕದಡಿವೆ. ತನ್ನ ಮನಸ್ಸಿನ ವಿರುದ್ಧ ನಡೆದ ಸಣ್ಣಪುಟ್ಟ ಸಂಗತಿಗಳಿಗೂ ಸಿಡಿದೇಳುತ್ತಿದ್ದ, ಕ್ಷೋಭೆಗೊಳ್ಳುತ್ತಿದ್ದ.

ಕಳೆದ ಏಳುವರುಷಗಳ ತನ್ನ ಮುಂಬಯಿ ಜೀವನದಲ್ಲಿ ಹಾಸುಹೊಕ್ಕಾಗಿ ನಿಂತ, ನಿತ್ಯಪರಿಚಯದ ಈ ರುಕ್ಷ ಆಫೀಸು ಕೆಲಸ; ದಣಿಸುವ ಬಸ್‌ಕ್ಯೂ; ರುಚಿಯಿಲ್ಲದ ಬದಲಿಲ್ಲದ ಹೊಟೆಲ್ ಊಟ (ಊಟಕ್ಕೂ ಕ್ಯೂ ಮತ್ತೆ !) ಎಲ್ಲವೂ ಇತ್ತಿತ್ತ ಹೊಸ ಅರ್ಥ ಹೊಸ ರೂಪ ತಳೆದು ಮನಸ್ಸನ್ನು ವ್ಯಗ್ರಗೊಳಿಸುತ್ತಿವೆ. ಬಾಳೆಲ್ಲ ಬರಿದು ಬರಿದು ಎನಿಸಹತ್ತಿದೆ. ಮುಂಬಯಿ ಜೀವನದ ವಿವಿಧ ರೀತಿನೀತಿಗಳಿಗೆ ಅತಿ ಸಹಜವಾಗಿ ಹೊಂದಿಕೊಂಡ ಅನಂತನಲ್ಲಿ, ಒಮ್ಮೆಲೇ ಹೊಸ ಅರಿವು ಬಂದಂತಾಗಿ ಜೀವನ ಬೇಸರ ಬೇಸರ ಎನಿಸುತ್ತಿದೆ.

ಮೊದಲಿನ ಬಸ್ಸು ಹೊರಟು ಆದಾಗಲೇ ಇಪ್ಪತ್ತು ಮಿನಿಟುಗಳಾದರೂ ಇನ್ನೊಂದು ಬಸ್ಸು ಬರುವ ಲಕ್ಷಣ ತೋರಲಿಲ್ಲ. ಕ್ಯೂ ಭರದಿಂದ ಬೆಳೆಯುತ್ತಲಿತ್ತು. ಕ್ಯೂದಲ್ಲಿ ತನ್ನದೇ ಮೊದಲ ಸ್ಥಾನ. ತನ್ನಂತೆಯೇ ಬಸ್ಸಿಗಾಗಿ ಕಾಯುವ ಜನ ಅನೇಕರಿದ್ದಾರಲ್ಲ ಎನ್ನುವ ನಿತ್ಯದ ಸಮಾಧಾನ ಇಂದು ಅನಂತನಿಗಿಲ್ಲ. ಕ್ಷಣ ಕ್ಷಣಕ್ಕೂ ಅವನ ಮನಸ್ಸಿನ ಅಸ್ವಸ್ಥತೆ ಮಾತ್ರ ಹೆಚ್ಚುತ್ತಿತ್ತು.

ತನ್ನ ಜೀವನ ಈಗ ಒಂದು ಸ್ತಿಮಿತಕ್ಕೆ ಬಂದಿದೆ, ಅದರ ಮಿತಿ ತನಗೆ ತಿಳಿದಿವೆ ಎಂದು ತಿಳಿದ ಅನಂತ, ಇಂದು ಕ್ಷುಲ್ಲಕ ಕಾರಣಗಳಿಂದಲೂ ತನ್ನ ಮನಸ್ಸಿನ ಶಾಂತಿಯನ್ನು ಕಳಕೊಳ್ಳಲು ಕಾರಣವೇನು ?

ಕಳೆದ ಐದಾರು ದಿನಗಳಲ್ಲಿ ಅನಂತನ ಜೀವನದಲ್ಲಿ ನಡೆದ ಒಂದು ದೊಡ್ಡ ಘಟನೆಯೆಂದರೆ ಅವನ ಗೆಳೆಯ—ಈಗ ಅವನು 'ಪೇಯಿಂಗ್‌ಗೆಸ್ಟ್' (ಪೀಜೀ) ಆಗಿ ನಿಂತ ಮನೆಯ ಯಜಮಾನನ ಮಗ—ಅರವಿಂದನ ಮದುವೆ. ಆದರೆ ಈ ಮದುವೆಗೂ ತನಗೂ ಸಂಬಂಧವೇನು ? ಸಂಬಂಧ ಇದೆಯೆ ? ಇಲ್ಲವೆ ? ತನಗಿಂತ ಎಷ್ಟೋ ವರುಷಗಳಿಂದ ಚಿಕ್ಕವನಾದ, ಒಮ್ಮೆ ತನ್ನ ವಿದ್ಯಾರ್ಥಿಯೂ ಆಗಿದ್ದ ಈ ಅರವಿಂದನ ಲಗ್ನದಿಂದ ತನ್ನ ಮನಶ್ಶಾಂತಿ ಏಕೆ ಕದಡಬೇಕು ? ಅರವಿಂದನ ವಿಷಯದಲ್ಲಿ ತನಗೆ ಅಸೂಯೆಯೆ ? ಮದುವೆಯನ್ನೇ ಮಾಡಿಕೊಳ್ಳಲಾರೆನೆಂದು ಮನಃಪೂರ್ವಕವಾಗಿಯೇ ನಿಶ್ಚಯಿಸಿದ್ದ ತನ್ನಲ್ಲಿ ಅಸೂಯೆ ಹುಟ್ಟುವ ಮಾತೆಲ್ಲಿ ಬಂತು ?

ಬಸ್ ನಿಲ್ದಾಣದಲ್ಲಿ ನಿಂತು ನಿಂತು ಬೇಸರ ಬಂದಾಗ, ಬಸ್ಸೊಂದು ದೂರದಲ್ಲಿ ಬರುವುದು ತೋರಿತು....'ಉಶ್ ! ಕೊನೆಗೂ ಬಂದಿತಲ್ಲ' ಎಂಬ ಬಿಡುಗಡೆಯ ನಿಶ್ವಾಸ ಬಿಟ್ಟು ನಿಂತಲ್ಲಿಯೇ ಬಸ್ ಹತ್ತುವ ಸಿದ್ಧತೆಯ ಚಲನೆ ಮಾಡಿದ, ಅನಂತ. ಆದರೆ ಅವನ ದುರ್ದೈವ; ಇಲೆಕ್ಟ್ರಿಕ್ ಹೌಸ್ ಸ್ಟಾಪಿನಲ್ಲೇ ತುಂಬಿ ಬಂದ ಬಸ್ಸು ಈತ ನಿಂತ ನಿಲ್ದಾಣದಲ್ಲಿ ಇಳಿಯುವವರಾರೂ ಇಲ್ಲದ್ದರಿಂದ, ನಿಲ್ಲದೇ ಮುಂದೆ ಸಾಗಿತು. ಬಸ್ಸಿನಲ್ಲಿ ಒಂದೂ ಜಾಗ ಖಾಲಿಯಿಲ್ಲ ಎಂಬ

ಸಂಕೇತದ (ಅವಿರತ) ಗಂಟೆ ಬಾರಿಸುತ್ತ "No Seat please" ಎಂದು ಒದರಿದ ಕಂಡಕ್ಟರನ ಮೇಲೆ ಅನಂತನಿಗೆ ಬಂದ ಸಿಟ್ಟು ಅಷ್ಟಿಷ್ಟಲ್ಲ. "ಥೂ! ಇವರ ಮನೆ ಹಾಳಾಗ. ಇಲ್ಲಿಂದಲೇ ಒಂದು ಸ್ಪೇಸಲ್ ಬಸ್ಸು ಹೊರಡಿಸಿದರಾಗದೆ? ಇಷ್ಟೆಲ್ಲ ಜನ ಇಲ್ಲಿ ಕ್ಯೂದಲ್ಲಿ ಬಳಲುತ್ತಿರುವಾಗ...." ಆದರೆ ಇದು ದಿನನಿತ್ಯದ್ದೇ ಮಾತು. ಇಂದೇಕೆ ನೀನು ಇಷ್ಟು ಸಿಡಿಮಿಡಿಗೊಳ್ಳಬೇಕು?—ಎಂದು ವಿವೇಕ ಕೇಳಿದ ಪ್ರಶ್ನೆಗೆ ಅನಂತನ ಒಳಮನಸ್ಸು ಇನ್ನಿಷ್ಟು ಉದ್ವಿಗ್ನಗೊಂಡಿತ್ತು.

ಈ ಕ್ಯೂದಲ್ಲಿ ನಿಂತು ಹೀಗೆ ತೊಳಲುವುದಕ್ಕಿಂತ ಹೀಗೆಯೇ ನಡೆಯುತ್ತ 'ಮರೀನ್ ಡ್ರ್ಯಾವ್'ಗುಂಟ ಚೌಪಾಟಿಗೆ ಹೋದರೆ ಹೇಗೆ? ಆದರೆ ಒಬ್ಬಂಟಿಗನಾಗಿ ಹೋಗುವುದೆಂದರೆ ಬೇಸರ. ಕ್ಯೂದಲ್ಲಿ ತನ್ನದೇ ಮೊದಲಸ್ಥಾನ. ಇನ್ನೊಂದು ಬಸ್ಸು ಬಂದರೆ ಜಾಗಸಿಕ್ಕೀತೆ ಎಂಬ ಆಸೆ. ಇಷ್ಟು ಹೊತ್ತು ನಿಂತಾಗಿದೆ, ಇನ್ನೂ ಕೆಲ ಹೊತ್ತು.' ಅಷ್ಟರಲ್ಲಿ ಅಪರಿಚಿತ ದನಿಯೊಂದು ಇವನನ್ನು ಕರೆಯಿತು, "ಹಲ್ಲೋ' ಮಿಸ್ಟರ್ ಕುಲಕರ್ಣಿ" ಎಂದು. ಯಾರಿರಬಹುದೆಂದು ಹಿಂತಿರುಗಿ ನೋಡಿದಾಗ, ಮೋರೆಯೆಲ್ಲ ನಗುವಾಗಿಸಿ ತನ್ನೆಡೆ ಬರುತ್ತಿದ್ದ ವ್ಯಕ್ತಿಯೊಂದನ್ನು 'ಈತನೇ ಇರಬಹುದೇ ತನ್ನನ್ನು ಕರೆದವನು?' ಎಂಬಂತೆ ಅನಂತ ನೋಡುತ್ತಿದ್ದಾಗ, ಹೊಸ ಆಗಂತುಕನು ಭರದಿಂದ ಅವನನ್ನು ಸಮಿಾಪಿಸಿ, ಅತಿ ಉತ್ಸಾಹದಿಂದ ಕೈ ಮುಂದೆ ಚಾಚಿ, "ಅನಂತ ಕುಲಕರ್ಣಿಯವರಲ್ಲವೇ?" ಎಂದು ಕೇಳಿದ. "ನನ್ನ ಪರಿಚಯ ಸಿಗಲಿಲ್ಲವೆ? ಗಜಾನನ—ನಿಮ್ಮ ವರ್ಗದ ನಾರಾಯಣ ಪಾಟೀಲ-ಅವರ ತಮ್ಮ." "ಅಂ! ಪಾಟೀಲ ನಾರಾಯಣನ ತಮ್ಮ!! ಓಹೋಹೋ, ಇಷ್ಟು ದೊಡ್ಡವನಾಗಿದ್ದೀಯಾ! ನಾನು ಧಾರವಾಡ ಬಿಟ್ಟಾಗ ಇನ್ನೂ ಇಷ್ಟು ಸಣ್ಣವನಿದ್ದೆ." ಎಂದು, ಆನಂದದಿಂದ ಗಜಾನನನು ಮುಂದೆ ಮಾಡಿದ ಕೈಯನ್ನು ಕುಲುಕಿದ.

ಗಜಾನನನ ಮೋರೆಯಲ್ಲಿ ಅರಳಿದ ನಗೆಯುಲ್ಲಿ ಆರೋಗ್ಯ ತುಂಬಿ ತುಳುಕಾಡುತ್ತಿತ್ತು. ಅರೆಕ್ಷಣದಲ್ಲಿ ಅನಂತ ತನ್ನ ಮನದ ಬೇಸರವನ್ನು ಮರೆತಿದ್ದ. ಆದರೆ ಆ ಮರೆವಿನ ಹಿಂದೆಯೇ ಒಂದು ಅಧೀರತೆ ಮನೆಮಾಡಿತ್ತು. ಏಕೋ, ಇತ್ತಿತ್ತ ತುಂಬ ಚಟುವಟಿಕೆಯ, ಉತ್ಸಾಹದ, ಸಾಮರ್ಥ್ಯ ತುಂಬಿದ ತಾರುಣ್ಯದ ಸಾನ್ನಿಧ್ಯದಲ್ಲಿ ಅನಂತನ ಮನಸ್ಸು ಅಧೀರಗೊಳ್ಳುತ್ತಿತ್ತು.

"ಮುಂಬಯಿಗೆ ಯಾವಾಗ ಬಂದೆ?" ನಗುತ್ತ ಕೇಳಿದ ಅನಂತ.

"ಈಗ ಎರಡು ತಿಂಗಳಾದುವು. ನಾನು ಬಿ. ಎ. ಪಾಸಾದೆ, ಎರಡನೇ ವರ್ಗದಲ್ಲಿ. ಇಲ್ಲೇ ಸೆಕ್ರೆಟೇರಿಯೆಟ್ಟಿನಲ್ಲಿ ಕೆಲಸಕ್ಕಿದ್ದೇನೆ. ಆಯ್. ಎ. ಎಸ್ಸಿಗ್ಕೂ ಕೂಡ್ರುವ ಮನಸ್ಸಿದೆ. ಸಾಂತಾಕ್ರೂಝಿನಲ್ಲಿ ಗೆಳೆಯರೊಬ್ಬರ ಮನೆಯಲ್ಲಿರುತ್ತೇನೆ. ಇನ್ನೂ ಸ್ವಂತದ ಮನೆ ಸಿಕ್ಕಿಲ್ಲ; ಬೋರಿವ್ಲಿಯಲ್ಲಿ ಇನ್ನು ಕೆಲವೇ ತಿಂಗಳಲ್ಲಿ ಸಿಗುವ ಸಂಭವವಿದೆ." ಗಜಾನನನ ಮಾತಿನಲ್ಲಿ ಹುರುಪು ಇತ್ತು. ತನ್ನ ಭವಿಷ್ಯತ್ತಿನ ಕುರಿತು ಅಪಾರ ವಿಶ್ವಾಸವಿತ್ತು. ಅನಂತ ಅತಿ ಆದರ, ಕೌತುಕ ತುಂಬಿದ ಭಾವದಿಂದ ಅವನ ಮಾತನ್ನು ಆಲಿಸುತ್ತಿದ್ದ.

"ಬೋರಿವ್ಲಿ ಎಂದರೆ ಬಹಳೇ ದೂರವಾಯಿತು ಅಲ್ಲವೆ? ಮುಂಬಯಿಯಲ್ಲಿ ಮನೆ ಸಿಗುವುದೇ ಕಠಿಣವಂತೆ. ನಿಮಗೆ ಮಾತ್ರ ಒಳ್ಳೇ ಮನೆ ಸಿಕ್ಕಿರಬೇಕು—ನೀವು ಮುಂಬಯಿಗೆ ಬಂದು ಬಹಳ ವರುಷಗಳಾದುವು." ಗಜಾನನ ಅತಿ ಸಹಜವಾಗಿ ಕೇಳಿದ ಈ ಪ್ರಶ್ನೆಯಿಂದ ಅನಂತ ಒಮ್ಮೆಲೇ ಮ್ಲಾನಗೊಂಡ. ಅವನ ಇಂದಿನ ಮನಃಸ್ಥಿತಿಯಲ್ಲಂತೂ ಈ ಪ್ರಶ್ನೆ ಅತೀವ ಗಾಸಿಗೊಳಿಸಿತು.

"ಇಲ್ಲ, ನನಗೂ ಈ ವರೆಗೆ ಮನೆ ಸಿಗಲಿಲ್ಲ. (ಸಿಗುವ ಆಸೆಯೂ ಇಲ್ಲ. ನನಗೇಕೆ ಮನೆ?) ಗಿರಗಾಂವದಲ್ಲಿ ಒಂದು ಮಹಾರಾಷ್ಟ್ರಿಯನ್ ಕುಟುಂಬದಲ್ಲಿ 'ಪೇಯಿಂಗ್‌ಗೆಸ್ಟ್' ಅಂತ ಇದ್ದೇನೆ." ಅನಂತ ನುಡಿದ.

"ಅಹುದೆ? 'ಟೈಮ್ಸ್ ಆಫ್ ಇಂಡಿಯಾ'ದಲ್ಲಿ ಬಹಳೇ ಬರುತ್ತಿವೆ ಜಾಹೀರಾತುಗಳು—P. G. Accommodation ಕುರಿತು. ಕೋಣೆಗಳೆಷ್ಟು?" ಸಲುಗೆಯಿಂದ ಕೇಳಿದ ಗಜಾನನ.

"ಕೋಣೆಗಳ ಪ್ರಶ್ನೆಯೇ ಇಲ್ಲ; ಒಂದೇ ಒಂದು ಕೋಣೆ. ಹಾಗೆ ನೋಡಿದರೆ ಕೋಣೆಯೇ ಅಲ್ಲ. ಬಾಲ್ಕನಿಯೊಂದನ್ನು ಎಲ್ಲ ಬದಿಯಿಂದಲೂ ಬ್ಲ್ಯಾಂಡ್ಸು (ತಟ್ಟಿ) ಗಳಿಂದ ಮುಚ್ಚಿ ರೂಮಿನ ರೂಪ ತಂದಿದ್ದಾರೆ." ಅನಂತನ ಮಾತಿನಲ್ಲಿ ತನ್ನ ಬಗ್ಗೆ ತನಗೇ ಕನಿಕರ ತುಂಬಿತ್ತು.

"ಅಂದರೆ ನಿಮಗೆ ಮದುವೆ ಆಗಲಿಲ್ಲವೇ?" ಗಜಾನನ ಈ ಪ್ರಶ್ನೆ ಕೇಳಲೂ ನಿಲ್ದಾಣಕ್ಕೆ ಬಸ್ಸು ಬರಲೂ ಸರಿಯಾಯಿತು.

"ಓ ನನ್ನ ಬಸ್ಸು ಬಂದಿತು. ಇನ್ನೊಮ್ಮೆ ಎಂದಾದರೂ ಭೆಟ್ಟಿಯಾಗೋಣ?" ಎಂದವನೇ ಅನಂತ ತ್ವರೆಯಿಂದ ಬಸ್ಸು ಹತ್ತಿ ಜಾಗ ಹಿಡಿದು ಕುಳಿತ. ಬಸ್ಸಿನಲ್ಲಿ ಬರಿಯೇ ಇಬ್ಬರಿಗಷ್ಟೇ ಸ್ಥಳವಿತ್ತು. ಕೊನೆಗೊಮ್ಮೆ ಬಸ್ಸು ಸಿಕ್ಕಿತಲ್ಲ ಎಂದು ಹಿಗ್ಗಿದ ಅನಂತ. ಬಸ್ಸು ಹೊರಟಿತು. ಗಜಾನನ ಕಣ್ಮರೆಯಾದ. ಆದರೆ ಕಿವಿಯಲ್ಲಿನ್ನೂ ಅವನ ಕೊನೆಯ ಪ್ರಶ್ನೆ ಮಾರ್ದನಿಗೈಯುತ್ತಿತ್ತು.

"ನಿಮಗೆ ಲಗ್ನ ಆಗಲಿಲ್ಲವೆ?"

ತನ್ನಂತಹನಿಗಲ್ಲ ಮದುವೆ. ಮನೆ, ಮದುವೆ, ಸಂಸಾರ ಎಂದರೆ ಹೋರಾಟ. ಹೋರಾಡುವ ಶಕ್ತಿ ತನ್ನಲ್ಲಿ ಉಳಿದಿದೆಯೆ? ಏಕೋ, ಇದ್ದಲ್ಲೇ ತಾನು ಹಣ್ಣಾಗುತ್ತಿದ್ದೇನೆ, ಒಣಗುತ್ತಿದ್ದೇನೆ. ತನ್ನಂತಹನಿಗಲ್ಲ ಮದುವೆ. ಅನಂತ ತನ್ನ ನೊಂದ ಮನಸ್ಸನ್ನು ಸಮಾಧಾನಗೊಳಿಸುತ್ತಿದ್ದ.

ಗಜಾನನನ ಉತ್ಸಾಹದ ಮೂರ್ತಿ ಕಣ್ಣ ಮುಂದೆ ನಿಂತಿತು. ಮೊನ್ನೆ ಮೊನ್ನೆ 'ಕಚ್ಚೆಯುಟ್ಟು ತಿರುಗುತ್ತಿದ್ದ' ಪೋರ, ಇಂದು ಇಷ್ಟು ದೊಡ್ಡವನಾಗಿ ಬೆಳೆದು ನಿಂತಿದ್ದಾನಲ್ಲ! ಏಳು ವರುಷಗಳ ಹಿಂದೆ ತಾನೂ ಮೊದಲೊಮ್ಮೆ ಮುಂಬಯಿಗೆ ಬಂದಾಗ ತನ್ನಲ್ಲೂ ಇಂತಹದೇ ಉತ್ಸಾಹ, ಧೈರ್ಯ, ಸ್ಥೈರ್ಯ ಇರಲಿಲ್ಲವೇ? ಅಂದು ತನ್ನ ಬಿ. ಎ. ಪರೀಕ್ಷೆ ಮುಗಿಸಿ ನೌಕರಿಗೆಂದು ಮುಂಬಯಿಗೆ ಬಂದಾಗ ಏನೆಲ್ಲ ಸುಖದ ಕನಸನ್ನು ಕಟ್ಟಿ ಬಂದಿರಲಿಲ್ಲ! ಮುಂಬಯಿಯಲ್ಲಿ ಒಂದು ದೊಡ್ಡ ನೌಕರಿ ಹಿಡಿದು, (ಮುಂಬಯಿಯಲ್ಲಿ ನೌಕರಿಗೆ ಬರಗಾಲವೆ?)

ಸಣ್ಣದೊಂದು ಮನೆಯನ್ನು ಮಾಡಿ ತಾಯನ್ನು ಕರೆಸಿಕೊಳ್ಳಬೇಕು. ಮುಂದೆ ಶಕ್ಯವಾದಲ್ಲಿ (ಅವರಲ್ಲೇನು ಅಶಕ್ಯ?) ತನ್ನ ಸೋದರ ಮಾವನ ಮಗಳಾದ ಸುಮತಿಯನ್ನು (ಅವಳೆಂದರೆ ತನಗೆ ಅದೆಷ್ಟು ಪ್ರೀತಿ!) ಮದುವೆಯಾಗಿ ಸುಖದ ಸಂಸಾರ ಹೂಡಬೇಕು ಆಹಾ! ಎಂತಹ ಸೊಗಸಾದ ಕನಸು! ಆದರದು ಇಂದಿಗೂ ಕನಸಾಗಿಯೇ ಉಳಿದಿದೆ. ಮುಂದೆಯೂ ನನಸಾಗುವ ಆಸೆಯಿಲ್ಲ. ತಾಯಿ ತೀರಿ (ತಾನು ಇಂದು ತಂದೆ-ತಾಯಿ ಇಲ್ಲದ ಅನಾಥ) ಇದಾಗಲೇ ನಾಲ್ಕು ವರ್ಷಗಳಾಗಿವೆ. ಸುಮತಿಯ ಲಗ್ನ ಬೇರೊಬ್ಬನೊಡನೆ ಆಗಿ ಈಗ ಅವಳು ಮೂರು ಮಕ್ಕಳ ತಾಯಿ ಆಗಿದ್ದಾಳೆ—(ಎರಡು ಗಂಡು, ಒಂದು ಹೆಣ್ಣು ಎಂದು ಮೊನ್ನೆಯೇ ಯಾರೋ ಹೇಳಿದ್ದ ನೆನಪಿದೆ).

"ಟಿಕೆಟ್ ಪ್ಲೀಜ್"

"ಏಕ್ ಚೌಪಾಟಿ"

"ಕಿಧರ್‌ಸೇ?"

"ಫೌಂಟನ್"

ಅನಂತನ ಅಂತರ್ಮುಖತೆಗೆ ಭಂಗಬಂದಿತು. ಬಸ್ಸು ಧೋಬಿ ತಲಾವ್, ಪ್ರಿನ್ಸೆಸ್‌ರೋಡ್ ದಾಟಿ, ಗಿರಾಬಝಾರದ ಜನದಟ್ಟಣೆಯ ಮಾರ್ಗದಿಂದ ಸಾಗಿತ್ತು. ಇಕ್ಕೆಲದ ಫೂಟ್‌ಪಾಥಿನ ಮೇಲೆ ಲೆಕ್ಕವಿಲ್ಲದಷ್ಟು ಮನೆಗಳು!—ಒಂದರ ಹಿಂದೊಂದು; ಒಂದರ ಮೇಲೊಂದು ಎಷ್ಟೆಲ್ಲ ಮನೆಗಳು. ಆದರೆ ಒಂದರಲ್ಲೂ ತನಗೆ ಜಾಗವಿಲ್ಲ. ಜಾಗವಿದ್ದರೆ—ಇಂತಹ ಈ ಸುವಿಶಾಲ, ಪ್ರಚಂಡ ಮುಂಬಯಿ ನಗರದಲ್ಲಿ ತನಗೊಂದು ಮನೆ ಸಿಕ್ಕಿದ್ದರೆ......ಸುಮತಿ ಇಂದು ತನ್ನ ಹೆಂಡತಿಯಾಗುತ್ತಿದ್ದಳೆ?

ತಾನು—ಸುಮತಿ!

ಆಗಬಹುದಿತ್ತೇ ಸುಮತಿಯೊಡನೆ ತನ್ನ ಲಗ್ನ?

ಯಾರು ಬಲ್ಲರು?

ಮಾವನ ಮನೆಯಲ್ಲೇನೋ ಎಲ್ಲರೂ ಚೇಷ್ಟೆಮಾಡುತ್ತಿದ್ದರು. ಮಾವನೂ ಸ್ಪಷ್ಟವಾಗಿ ಲಗ್ನದ ಮಾತನ್ನು ಎತ್ತಿರದಿದ್ದರೂ, ತಾನು ಮುಂಬಯಿಗೆ ಬಂದ ಕೆಲವು ತಿಂಗಳ ವರೆಗೆ ತಪ್ಪದೇ ಪತ್ರ ಬರೆಯುತ್ತಿದ್ದರು, ತನ್ನ ಕ್ಷೇಮಸಮಾಚಾರ ವಿಚಾರಿಸುತ್ತಿದ್ದರು—ತನಗೆ ನೌಕರಿ ಸಿಗುವ ಮೊದಲು. ಆದರೆ ಇಷ್ಟರಿಂದಲೇ ಅವರಿಗೆ ತನ್ನನ್ನು ಅಳಿಯನನ್ನಾಗಿ ಮಾಡಿಕೊಳ್ಳುವ ಇಚ್ಛೆಯಿತ್ತು ಎಂದು ಹೇಗೆ ಹೇಳಬಹುದು? ಆದರೆ ಇಷ್ಟೊಂದು ನಿಜ; ಅವರಿಗೆ ತನ್ನ ಭವಿಷ್ಯತ್ತಿನ ಕುರಿತು ಆಸ್ಥೆಯಿತ್ತು, ಕಳಕಳಿಯಿತ್ತು. ಆದರೆ ತಾನೆ ಅವರನ್ನೆಲ್ಲ—ತನ್ನ ತಾಯಿ ತನ್ನ ಸೋದರಮಾವ, ಸುಮತಿಯನ್ನು ಕೂಡ ನಿರಾಶೆಗೊಳಿಸಿದೆ. ಮುಂಬಯಿಯಂತಹ ಉದ್ಯೋಗ, ಉದ್ಯಮಗಳ ಆಗರವಾದ ಈ ವಿಶಾಲನಗರಕ್ಕೆ ಬಂದು ಅವಿಶ್ರಾಂತ ಶ್ರಮದಿಂದ ದೊರಕಿಸಿದುದು ಯುನಿವ್ಹರ್ಸಿಟಿ ಆಫೀಸಿನಲ್ಲಿ ಒಂದು ಕಾರಕೂನಿಕೆಯ ಕೆಲಸ. ಬೇಸಿಕ್ ಸೆಲರಿ ಹಾಗೂ ಎಲೋವನ್ಸಿಸ್ ಕೂಡಿ ೨೫೦ ರೂ. ತಿಂಗಳಿಗೆ. ಸಾಲದೇ ಇಷ್ಟೆಲ್ಲ ಹಣ ಸುಖದ ಸಂಸಾರ ಹೂಡಲು!

ಮೊದಲಿನ ಎರಡು ವರ್ಷಗಳ ವರೆಗೂ ಮಾವನಿಂದ ಸರಿಯಾಗಿ ಪತ್ರ ಬರುತ್ತಿದ್ದವು; ತಾನೂ ಬರೆಯುತ್ತಿದ್ದ. ಸಣ್ಣದೊಂದು ಮನೆ ದೊರಕಿಸಲು ತಾನು ನಡೆಸಿದ ಹೋರಾಟ, ಅದರಲ್ಲಿಯ ತನ್ನ ಸೋಲು ಇತ್ಯಾದಿಯ ಕುರಿತು. ಹೆಚ್ಚಿನ ಪಗಾರದ ನೌಕರಿಯ ಬಗೆಗೂ ಪ್ರಯತ್ನ ನಡೆದಿತ್ತು. ಎರಡು ವರ್ಷಗಳ ಅನಂತರ ಮಾವನ ಪತ್ರಗಳು ಕ್ರಮೇಣ ವಿರಳವಾಗುತ್ತ ಬಂದು, ಒಂದು ದಿನ ನಿಂತೇ ಬಿಟ್ಟವು. ಆಮೇಲೆ ಒಮ್ಮೆಲೇ ಕೈಸೇರಿದುದು ಸುಮತಿಯ ಮದುವೆಯ ಆಮಂತ್ರಣ ಪತ್ರಿಕೆ ಹುಡುಗನಿಗೆ ಧಾರವಾಡದಲ್ಲೇ ಕೆಲಸವಂತೆ. ದೊಡ್ಡದಲ್ಲ—ತನ್ನಂತಹದೇ ಕಾರಕೂನಿಕೆಯ ಕೆಲಸ. ಆದರೂ ನಿಲ್ಲಲು ಮನೆಯಿದೆ ಸಂಸಾರ ಹೂಡುವ ತಾಕತ್ತಿದೆ. ಸುಮತಿಯೂ ಅವನಿಗೆ ತಕ್ಕ ಹೆಂಡತಿ—ಎಂತಹ ಕಷ್ಟ ಬಂದರೂ ಸಹಿಸಿಕೊಂಡು ಹೋಗುವ ಧೈರ್ಯವಿದ್ದ ಹುಡುಗಿ. ಎಷ್ಟು ಸೌಮ್ಯ ಸ್ವಭಾವ! ಎಂತಹ ತಾಳ್ಮೆ! ತನಗೊಂದು ಇರಲು ಮನೆಯಿದ್ದರೆ, ಆಗಬಹುದಿತ್ತೇನೋ ಅವಳೊಡನೆ ಮದುವೆ.........

ಅನಂತ ವಿಚಾರಮಗ್ನನಾಗಿದ್ದಾಗಲೇ ಬಸ್ಸು ಅಪೇರಾಹೌಸ್ ದಾಟಿ ಸೆಂಢರ್ಸ್ಟ್ರಬ್ರಿಜ್ ಏರುತ್ತಿತ್ತು ಚೌಪಾಟಿಗೆ ಹೋಗುವ ಜನರೆಲ್ಲ ಇಳಿಯುವ ಸಿದ್ಧತೆಯಲ್ಲಿದ್ದರು. ಅಬ್ಬಾ! ಎಷ್ಟು ಬೇಗ ಬಂದಿತು ಬಸ್ಸು—ಬಂದದ್ದು ತಿಳಿಯಲಿಲ್ಲ!

ಬಸ್ಸಿನಿಂದ ಇಳಿದವನೇ ಅನಂತ ಚೌಪಾಟಿಯ ಮೇಲಿನ ಜನಸಮುದಾಯದಲ್ಲಿ ಒಂದಾದ. ಅಬ್ಬಬ್ಬ! ಚೌಪಾಟಿಯ ಮೇಲೆ ಏನೊಂದು ಗದ್ದಲ, ಗುಲ್ಲು—ಬದಿಯಲ್ಲೇ ಹಬ್ಬಿಕೊಂಡ ಸಾಗರದ ಅಬ್ಬರದಂತೆ! ಈ ಗದ್ದಲದಲ್ಲಿ ಅನಂತ ಕ್ಷಣಹೊತ್ತು ಬಹಿರ್ಮುಖನಾದ. ಕಿಕ್ಕಿರಿ ತುಂಬಿದ ಈ ಜನಸಂದಣಿಯಲ್ಲಿ ಒಂದಾಗಿ ತನ್ನ ಪ್ರತ್ಯೇಕತೆಯನ್ನು ಕಳಕೊಳ್ಳುವುದರಲ್ಲಿಯೇ ತನ್ನ ವೈಯಕ್ತಿಕ ಅಸಮಾಧಾನವನ್ನು ಕಳೆಯಲು ಯತ್ನಿಸಿದ.

ಫೂಟ್‌ಪಾಥಿನ ಮೇಲೆ ಎಷ್ಟೆಲ್ಲ ಜನ!

ಎಷ್ಟು ಬಗೆಯ ಜನ!!—

ಗಂಡಸರು, ಹೆಂಗುಸರು—(ಹುಡುಗಿಯರು ಕೂಡ)—ಈ ಎಲ್ಲ ಜನರಿಗೆ ಮನೆಗಳಿವೆಯೆ? ಇಷ್ಟೆಲ್ಲ ಜನರಿಗೆ ಮನೆ ಒದಗಿಸಿದ ಈ ಮುಂಬಯಿ, ತನಗೊಬ್ಬನಿಗಷ್ಟೇ....ಹುಚ್ಚು. ತನ್ನಂತೆಯೇ ಪರರ ಮನೆಯ ಬಾಲ್ಕನಿಯಲ್ಲೋ, ಅಡುಗೆಯ ಮನೆಯಲ್ಲೋ ಮಲಗುವ ಜನ ಇವರಲ್ಲೆಷ್ಟೋ! ತನ್ನಂತೆಯೇ ಕೂಡ್ರಲೂ ರೂಮು ಇಲ್ಲದೆ, ಆಫೀಸು ಬಿಟ್ಟ ಮೇಲೆ ಅಲ್ಲಿ ಇಲ್ಲಿ ವೇಳೆ ಕಳೆದು, ರಾತ್ರಿ ಮಲಗಲಷ್ಟೇ ಮನೆ (ಹೆರವರದು) ಸೇರುವ ಜನ ಅದೆಷ್ಟೋ!

ಅನಂತ ನಡೆಯುತ್ತ ಚರ್ನಿರೋಡ್-ಸ್ಟೇಶನ್ ದಾಟಿ, ಹೆಣ್ಣು ಮಕ್ಕಳ ಹಾಸ್ಟೆಲನ್ನು ಸಮೀಪಿಸಿದ್ದ. "ಇಲ್ಲೇ ಕೂತರೆ ಹೇಗೆ?" ಎನ್ನುತ್ತ ಸಮುದ್ರತೀರದಗುಂಟ ಕಟ್ಟಿದ ಕಲ್ಲುಕಟ್ಟೆಯ ಮೇಲೆ ಒಂದೆಡೆ ಕುಳಿತ. ಕುಳಿತು ತನ್ನ ನಿತ್ಯದ ಆಟದಲ್ಲಿ ತಲ್ಲೀನನಾದ: ಫೂಟ್‌ಪಾಥಿನ ಮೇಲೆ ನಡೆಯುವ ಜನರ ಮೋರೆಯ ಮೇಲೆ ಆಡುವ ವಿವಿಧ ಭಾವವಿಲಾಸವನ್ನು ಅವಲೋಕಿಸಿ, ಅವರ ಹಿಂದೆ ಅಡಗಿದ ಭಾವನೆಗಳನ್ನೂ, ವಿಚಾರಗಳನ್ನೂ ತರ್ಕಿಸುವುದರಲ್ಲಿ.

ದೂರದಲ್ಲಿ ಬರುವ ಒಂದು ಮಹಾರಾಷ್ಟ್ರಿಯನ್ ಜೋಡಿಯನ್ನು ಕಂಡು ಎದೆ ಧಸ್ ಎಂದಿತ್ತು 'ಅರವಿಂದನಿರಬಹುದೇ?' ಎಂದು. ಅರವಿಂದನ ಹೆಂಡತಿಯನ್ನು ತಾನು ಇನ್ನೂ ನೋಡಿರಲಿಲ್ಲ. ಪುಣೆಯಲ್ಲಿ ಜರುಗಿದ ಅವನ ಲಗ್ನಕ್ಕೆ ತನಗೆ ಹೋಗಲಾಗಲಿಲ್ಲ, ಆಫೀಸಿನ ಕೆಲಸದ ಮೂಲಕ. (ಇದು ನಿಜವೆ?) ಪುಣೆಯಿಂದಲೇ 'ಹನಿಮೂನಿ'ಗೆಂದು ಮಹಾಬಲೇಶ್ವರಿಗೆ ಹೋದ ಅವರು ಇಂದೇ ಬರುವವರಿದ್ದರು. ಇಂದಾಗಲೇ ಬಂದಿರಬೇಕು. ಇಂದು ತಾನು ನೇರವಾಗಿ ಮನೆಗೆ ಹೋಗಿದ್ದರೆ ಅವಳ ಭೆಟ್ಟಿಯಾಗುತ್ತಿತ್ತು. ಆದರೆ—

ಏಕೋ ಆ ಪ್ರಸಂಗವನ್ನು ಎದುರಿಸಲು ಅವನ ಮನಸ್ಸು ಅಧೀರಗೊಳ್ಳುತ್ತಿತ್ತು. ಅವ್ಯಕ್ತ ಭೀತಿಯಿಂದ ನಡುಗುತ್ತಿತ್ತು. ಎಂತಹ ಭೀತಿ? ಎಂತಹ ಅಧೀರತೆ? ಅನಂತನಿಗೆ ಗೊತ್ತಿರಲಿಲ್ಲ. ಆದರೆ ಅವನ ವಿವೇಕ ಇಂತು ಸಮರ್ಥಿಸುತ್ತಿತ್ತು:

ಇಷ್ಟು ದಿನ ತಾನು, ಅರವಿಂದ—ಇಬ್ಬರೂ ಉಪಯೋಗಿಸುತ್ತಿದ್ದ ಕೋಣೆ ಇಂದಿನಿಂದ ಅರವಿಂದ ಹಾಗೂ ಅವನ ಹೆಂಡತಿಯ ಕೋಣೆಯಾಗಲಿದೆ. ಮನೆಯಲ್ಲೆಲ್ಲ ಒಬ್ಬ ಹೊಸ ಹೆಣ್ಣು (ಗೆಳೆಯನ ಹೆಂಡತಿಯಾದರೇನಂತೆ!) ಓಡಾಡುತ್ತಿರುವಾಗ, ತಾನೊಬ್ಬನೇ ಬಾಲ್ಕನಿಯಲ್ಲಿ ಒಂದು ಮೂಲೆಯಲ್ಲಿ ಮುದುಡಿ ಕೂಡ್ರುವುದಕ್ಕಿಂತ, ಇಲ್ಲಿ ತುಸು ಹೊತ್ತು ಕಳೆದು ಇಲ್ಲಿಂದಲೇ ಹೊಟೆಲ್ಲಿಗೆ ಹೋಗಿ, ಆದಷ್ಟು ರಾತ್ರಿ ಮಾಡಿ ಮನೆ ಸೇರಿದರೆ ಬಾಲ್ಕನಿಯಲ್ಲಿ ಮಲಗುವ ತನಗೆ ಯಾರಿಂದಲೂ ತೊಂದರೆಯಿಲ್ಲ, ತನ್ನಿಂದಲೂ ಇತರರಿಗೆ ತೊಂದರೆಯಿಲ್ಲ.

ಅಂತೆಯೇ ಅವನು ಆಫೀಸು ಬಿಟ್ಟದ್ದೇ ನೇರವಾಗಿ ಇಲ್ಲಿಗೆ ಬಂದದ್ದು. ಚೌಪಾಟಿಯ ಮೇಲೆ ಸಂಜೆಕಳೆದು, ಅಲ್ಲಿಂದ ನಡೆಯುತ್ತ 'ಬೆನ್‌ಹೆಮ್ ಹಾಲ್ ಲೇನಿ'ನ 'ವಸಂತಭುವನ'ದಲ್ಲಿ ಊಟ ಮುಗಿಸಿ, ಹಾಟೆಲ್ ಮಾಲಕನ ಹತ್ತಿರ ಕೆಲಹೊತ್ತು ಹರಟೆಹೊಡೆದು, ಅಲ್ಲಿಂದ ಹೊರಬಿದ್ದು, ಬದಿಯ ಎಲೆ!ಅಂಗಡಿಯೊಂದರಲ್ಲಿ 'ಬನಾರಸೀ ಮಸಾಲೆ'ಯೊಂದನ್ನು ಕೊಂಡು ಅಗಿಯುತ್ತ ಅನಂತ ತನ್ನ ರೂಮಿನತ್ತ ಸಾಗಿದ್ದ.... ...

ತಾನು ಇಂದಿನಿಂದ ಬಾಲ್ಕನಿಯಲ್ಲಿ ಮಲಗಬೇಕು—ಒಬ್ಬನೇ! ತಾನು ಮೊತ್ತಮೊದಲು ಈ ಮನೆಯಲ್ಲಿ 'ಪೇಜೀ' ಎಂದು ಇರಲು ಬಂದಾಗ, ತನಗೆ ಈ ಬಾಲ್ಕನಿಯ ಕೋಣೆಯನ್ನೇ ಕೊಟ್ಟಿದ್ದರೂ, ತನ್ನ ಪರಿಚಯ ಬೆಳೆದಬಳಿಕ ತನ್ನನ್ನು ತಮ್ಮ ಮನೆಯವನೇ ಎಂಬಂತೆ ನೋಡಿಕೊಳ್ಳುತ್ತಿದ್ದ ಮನೆಯ ಯಜಮಾನ, ಯಜಮಾನತಿ ಅಂದಿದ್ದರು, ತುಂಬಿದ ಮಮತೆಯಿಂದ: "ಅನಂತರಾಯರೇ, ಸದ್ಯಕ್ಕೆ ಮನೆಯಲ್ಲಿ ನಾವು ಮೂರೇ ಮಂದಿ; ನಮ್ಮಲ್ಲಿ ಅತಿಥಿಗಳು ಬಂದು ಇಲ್ಲವೆ ಬೇರೆ ಯಾವುದೇ ರೀತಿಯಿಂದ ಅಡಚಣೆಯಾದಾಗ ಮಾತ್ರ ನೀವು ಬಾಲ್ಕನಿಯ ಕೋಣೆಯಲ್ಲಿ ಮಲಗಬಹುದು. ಉಳಿದ ದಿನಗಳಲ್ಲಿ ಅರವಿಂದನ ಕೋಣೆಯಲ್ಲೇ ಮಲಗಲು ಅಡ್ಡಿಯಿಲ್ಲ." ಅಂತೆಯೇ ತನಗೆ ಈ ವರೆಗೆ (ಮೊದಲ ಐದಾರು ದಿನ ಬಿಟ್ಟು) ಬಾಲ್ಕನಿಯಲ್ಲಿ ಮಲಗುವ ಪ್ರಸಂಗ ಬಂದಿರಲಿಲ್ಲ. ಆದರೆ ಇಂದಿನಿಂದ?.......ವಿಚಿತ್ರ ವೇದನೆಯೊಂದು ಅನಂತನ ಮನವನ್ನು ತಿರುಗಿ ಆವರಿಸಿತ್ತು. ಅರವಿಂದ ಈಗ ಏನು ಮಾಡುತ್ತಿರಬಹುದು? ರಾತ್ರಿ ಹತ್ತರ ಹತ್ತಿರ ಬಂದಿದೆ. ಊಟವನ್ನು ಆಗಲೇ ಮುಗಿಸಿ ತನ್ನ ಮುದ್ದಿನ ಮಡದಿಯೊಡನೆ ಕೋಣೆ ಸೇರಿರಬಹುದು. ಅವರಿನ್ನೂ ಬಾಲ್ಕನಿಯಲ್ಲಿದ್ದು ತನ್ನನ್ನು ಮಾತನಾಡಿಸಿದರೆ?.......ಅದರಲ್ಲೇನಂತೆ?....ಆದರೂ ಆ ಪ್ರಸಂಗವನ್ನು ಎದುರಿಸಲು ಅನಂತನ ಮನಸ್ಸು ಇನ್ನೂ ಸಿದ್ಧವಿರಲಿಲ್ಲ.

ಅನಂತ ಮನೆ ತಲುಪಿದಾಗ ಬಾಲ್ಕನಿಯಲ್ಲಿ ದೀಪವಿರಲಿಲ್ಲ. ಸಾವಕಾಶ ಮಾಳಿಗೆಯ ಮೆಟ್ಟಲುಗಳನ್ನು ಏರಿ, ಕೋಣೆಯ ಬಾಗಿಲನ್ನು ತೆರೆದು ಒಳಗೆ ಹೋಗಿ ಬಾಗಿಲನ್ನು ಹಾಕಿಕೊಂಡ. ಸದ್ದು ಮಾಡದೆ ದೀಪ ಹಚ್ಚಿದ. ಬಾಲ್ಕನಿಯಿಂದ ಬದಿಯ ಕೋಣೆಗೆ ಹೋಗುವ ಬಾಗಿಲು ಮುಚ್ಚಿತ್ತು. ಅನಂತನಿಗೆ ಸಮಾಧಾನವಾಯಿತು. ಲಗುಬಗೆಯಿಂದ ಡ್ರೆಸ್ಸು ಬದಲಿಸಿ, ಆದಾಗಲೇ ಅಲ್ಲಿ ತಂದಿಟ್ಟ ತನ್ನ ಹಾಸಿಗೆ ಹಾಸಿ, ದೀಪ ಆರಿಸಿ ಹಾಸಿಗೆಯಲ್ಲಿ ಅಡ್ಡಾದ. ಬದಿಯ ರೂಮಿನಲ್ಲಿ ಇನ್ನೂ ದೀಪವಿತ್ತು. ಏನೋ ಗುಜು ಗುಜು ದನಿ, ಬಳೆಗಳ ಸದ್ದು: 'ಬಂದಿದ್ದಾರೆ' ಅನಿಸಿತು ಅನಂತನಿಗೆ. ಮರುಕ್ಷಣ ಮನಸ್ಸಿನಲ್ಲೇನೋ ಕಳವಳ.

ಏಳು ದಿನಗಳ ಹಿಂದೆ ತನ್ನೊಡನೆ ಹರಟೆಹೊಡೆಯುತ್ತ, ತನ್ನ ಸಮಿ-ಸಮೀಪ ಮಲಗುತ್ತಿದ್ದ ಅರವಿಂದ, ಇಂದು ಅದೇ ಕೋಣೆಯಲ್ಲಿ ಬೇರೊಬ್ಬರೊಡನೆ -ಒಬ್ಬ ಹೆಣ್ಣಿನೊಡನೆ ಮಲಗಿದ್ದ, ತಾನು ಪಾಪ, ಇಲ್ಲಿ ಹೊರಗೆ ಬಾಲ್ಕನಿಯಲ್ಲಿ ಏಕಾಂಗಿಯಾಗಿ ಮಲಗಿದ್ದಾಗ, ತನ್ನ ಬದಿಯ ಕೋಣೆಯಲ್ಲೇ—ಅಷ್ಟು ಸಮೀಪ ತನ್ನ ಗೆಳೆಯ -ತನಗಿಂತ ಎಷ್ಟೋ ಸಣ್ಣವನಾದ ಅರವಿಂದ—ತನ್ನ ಹರಯದ ಮಡದಿಯೊಡನೆ (ಅವಳು ರೂಪದಲ್ಲಿ ಹೇಗಿರಬಹುದು?) ಸುಖವಾಗಿ ಮಲಗಿದ್ದ.

ಅರವಿಂದ ನಿಜಕ್ಕೂ ಭಾಗ್ಯವಂತ! ಏಳೇ ವರುಷಗಳ ಹಿಂದೆ ತಾನು ಗೆಳೆಯರೊಬ್ಬರ ಮುಖಾಂತರ ಈ ಮನೆಯಲ್ಲಿ 'ಪೇಜೀ' ಎಂದು ನಿಲ್ಲಲು ಬಂದಾಗ, ಅರವಿಂದನಿನ್ನೂ ಮೆಟ್ರಿಕ್ಕಿನಲ್ಲಿ ಓದುತ್ತಿದ್ದ ಹಸುಗೂಸು. ಇನ್ನೂ ವಿಸೆಯುಗೆರೆಯೂ ಮೂಡಿತ್ತೋ ಇಲ್ಲವೋ! ಎಷ್ಟೋ ವಿಷಯಗಳಲ್ಲಿ ತನ್ನಿಂದಲೇ ಟ್ಯೂಶನ್ ಪಡೆಯುತ್ತಿದ್ದ. ನೋಡು-ನೋಡುತ್ತಿರುವಾಗ ಆಳೆತ್ತರದ ತರುಣನಾಗಿ ಬೆಳೆದು ಈಗ ಎಂ. ಎ. ಪಾಸಾಗಿದ್ದಾನೆ ಪರೀಕ್ಷೆಯ ಪರಿಣಾಮವಾದ ಕೆಲವೇ ದಿನಗಳಲ್ಲಿ ಅತಿ ಸುಲಭವಾದ ರೀತಿಯಲ್ಲೇ ಇಲ್ಲಿಯದೇ ಕಾಲೇಜೊಂದರಲ್ಲಿ ಲೆಕ್ಚರರ್‌ಶಿಪ್! ನೌಕರಿ ದೊರೆತ ಎರಡೇ ತಿಂಗಳಲ್ಲಿ ಅಕಸ್ಮಾತ್ತಾಗಿ ಒಂದು ದಿನ ಮದುವೆಯ ಸಂಬಂಧ ಹೇಳಿಬಂದು ಮದುವೆಯೂ ಆಗಿಬಿಟ್ಟಿತಲ್ಲ! ಪರರ ಜೀವನದಲ್ಲಿ ಇಂತಹ ಸಂಗತಿಗಳು ಎಷ್ಟು ಸಹಜವಾಗಿ, ಎಷ್ಟು ತೀವ್ರಗತಿಯಲ್ಲಿ ನಡೆಯುತ್ತವೆ! ತಾನು ಒಣಗುತ್ತಿದ್ದೇನೆ—ಎನಿಸಿತು ಅನಂತನಿಗೆ.

ಬದಿಯ ಕೋಣೆಯಲ್ಲಿ ಏನೋ ಪಿಸುದನಿ!
ಬಳೆಗಳ ಕಿಂಕಿಣ!
ದೀಪ ನಂದಿತು!—

ಅನಂತನ ಕುತೂಹಲ ಕೆರಳಿ ಮೈ ಜುಂ ಎಂದಿತು. ಒಳ್ಳೆ ಒಳ್ಳೆನೆನ್ನುತ್ತಲೂ ಅನಂತ ಮೈಯೆಲ್ಲ ಕಿವಿಯಾಗಿಸಿ ಕೇಳುತ್ತಿದ್ದ, ಬದಿಯ ಕೋಣೆಯಲ್ಲಿಯ ಚಟುವಟಿಕೆಗಳ ಸದ್ದನ್ನು :

"........ಯಾಕೆ ?........ಚಳಿಯಾಗುತ್ತದೆಯೆ ?........"

"........ಶೀ ! !........ನಾಚಿಕೆ ! "

"........ನಾಚಿಕೆ !........ಇನ್ನೂ ? "

ಥೂ ಇದೇನು ? ತುಸು ಸಾವಕಾಶ ನುಡಿಯಬಾರದೆ ? ತಾನು ಇಲ್ಲಿ ಮಲಗಿದ್ದೇನೆ ಎನ್ನುವ ಅರಿವೂ ಇರಬಾರದೇ ?—ಅನಂತನ ಸುಸಂಸ್ಕೃತ ಮನಸ್ಸು ತಿರಸ್ಕಾರ ವ್ಯಕ್ತಪಡಿಸಿತು. ಆದರೆ ?........ ಹೃದಯದಲ್ಲೋ ಅಲ್ಲೋಲ-ಕಲ್ಲೋಲ. ಮರುಕ್ಷಣ ತನ್ನ ಸ್ಥಿತಿಗೆ ತನಗೇ ಮರುಕವೆನಿಸಿತು. ತಾನಿದ್ದೇನೆ ಎನ್ನುವ ಅರಿವೇ ಇಲ್ಲ ಇವರಿಗೆ. ತಾನು ಇದ್ದರೇನು, ಇರದಿದ್ದರೇನು ?........

" ಕೆಲವೇ ದಿನಗಳಲ್ಲಿ ಬೋರಿವ್ಲಿಯಲ್ಲಿ ಮನೆ ಸಿಗುವ ಸಂಭವ ಐದೆ." ಗಜಾನನನ ಮಾತು ನೆನಪಿಗೆ ಬಂತು. ಪ್ರಯತ್ನಪಟ್ಟರೆ ತನಗೂ ಸಿಗುತ್ತಿತ್ತೋ ಏನೋ. ಆದರೆ ಅಷ್ಟು ದೂರ ! ಅಯ್ಯೋ. ಆ ಟ್ರೇನಿನಲ್ಲಿಯ ನೂಕುನುಗ್ಗಾಟ, ಆ ಗುಂಗಾಡುಗಳ ಕಾಟ ! ಮೇಲಾಗಿ ರೂಮು ಹಿಡಿದರೂ ಲಗ್ನವಾಗಿ ಸಂಸಾರ ಹೂಡುವ ಧೈರ್ಯ, ಹುಮ್ಮಸ್ಸು ಈಗ ತನಗೆ ಉಳಿದಿವೆಯೆ ? ಮನೆ, ಹೆಂಡತಿ, ಮಕ್ಕಳು, ಬೇನೆ ಬೇಸರಿಕೆ—ಬೇಡಪ್ಪ ಬೇಡ ! ತನ್ನಂತಹನಿಗಲ್ಲ ಹೇಳಿದ್ದು ಮನೆ, ಮದುವೆ........

" ಸ್ವಲ್ಪ ಇತ್ತಿತ್ತ........"

ಎಲ್ಲೋ ಹರಿದಾಡುತ್ತಿದ್ದ ಅನಂತನ ಮನಸ್ಸು ತಿರುಗಿ ಬದಿಯ ರೂಮಿನತ್ತ ಸಾಗಿತು. ಅನಂತ ತಾನರಿಯದೇ ತನ್ನ ಶ್ವಾಸೋಚ್ಛ್ವಾಸವನ್ನೂ ನಿಲ್ಲಿಸಿ ಕೇಳುತ್ತಿದ್ದ : ಮಂಚ 'ಕಿರ್' ಎಂದಿತು.

ಏನು ಮಾಡುತ್ತಿರಬಹುದು ?

ಥೂ ! ತನಗೇನಂತೆ !

ಏನೋ ಗುಜುಗುಜು—

ಎರಡು ಹರೆಯದ ದೇಹಗಳು ಒಂದನ್ನೊಂದು ಅಪ್ಪಿಕೊಂಡ ಅಸ್ಪಷ್ಟ ಚಿತ್ರ ಕಣ್ಣ ಮುಂದೆ ನಿಂತು ಅನಂತನ ದೇಹದಲ್ಲಿ ಮಿಂಚು ಸಂಚರಿಸಿತು. ತುಸು ದೊಡ್ಡಕ್ಕೆ ಮಾತನಾಡಬಾರದೆ ? ತಾನು ಕೇಳಿದರೆ ಇವರದೇನು ಗಂಟು ಹೋಗುತ್ತದೆಯೆ ?—ಅನಂತನ ಮನಸ್ಸು ಭುಸುಗುಟ್ಟಿತು.

" ತುಸು ಸಾವಕಾಶ........"

ಏನು ?

ಏನಿದ್ದರೇನು ?

ಮಾತು ನಿಂತೇಬಿಟ್ಟಿತಲ್ಲ !

ನಿಂತೇಬಿಟ್ಟಿತೇ ?

ಇಲ್ಲವೆ ? ಏನೋ ಗುಜುಗುಜು !

ಏನಿರಬಹುದು ?

ತನಗೇನಂತೆ !

ತಾ ಕೇಳಬಾರದೆ ?

ಅದೂ ತಪ್ಪೇ ?

ಬರಿಯ ಮಾತು ಕೇಳಿದರೇನಂತೆ ? ಅನಂತನ ಮನಸ್ಸಿನಲ್ಲಿ ಏನೋ ಗುದ್ದಾಟ ಕೊನೆಗೆ ಅನಂತನ ಜಾಗೃತ—ಸುಸಂಸ್ಕೃತ ಪ್ರಜ್ಞೆಯನ್ನು ಮೀರಿನಿಂತ ಅಗಾಧಶಕ್ತಿಯೊಂದು, ಅವನನ್ನು ಸಾವಕಾಶ ಹಾಸಿಗೆಯಿಂದ ಹೊಡೆದೆಬ್ಬಿಸಿ—" ಬಾ, ಇಲ್ಲಿ ಬಾ, ಇಲ್ಲಿ ಕಿವಿ ಹಚ್ಚು, ಕೇಳು " ಎಂದಿತು. ಅನಂತ ಮೆಲ್ಲನೆ ತನ್ನ ಹಾಸಿಗೆಯಿಂದ ಎದ್ದು, ಹುಚ್ಚನಂತೆ ಬದಿಯ ಕೋಣೆಯ ಬಾಗಿಲಿಗೆ ಕಿವಿ ಹಚ್ಚಿ ಕೇಳುತ್ತಿದ್ದ : ಆ ಬದಿಯಲ್ಲಿ ಮಲಗಿ ಸುಖಿಸುತ್ತಿದ್ದ ನವದಂಪತಿಗಳ ಏಕಾಂತದ ಸಂಭಾಷಣೆಯನ್ನು —ಅನಾಗರಿಕ ಕಿವಿಗಳ ಹೆದರಿಕೆಯಿಲ್ಲದೆ ಹೊರಟ ಮಾತನ್ನು :—

" ತುಸು ಸಾವಕಾಶ (ಮಾತನಾಡಬಾರದೆ ?)"

" ನಾಳೆಯೇ ಹೇಳುತ್ತೀರಲ್ಲ, ಹಾಗಾದರೆ ? "

" ಏನೆಂದು ? "

" ಬೇರೆಯೆಡೆ ರೂಮು ಹಿಡಿಯಲು "

" ಅವನಿದ್ದರೆ ತೊಂದರೆಯೆ ? "

" ತೊಂದರೆಯಲ್ಲ...... ಏನೋ ಸಂಕೋಚ........ಮೇಲಾಗಿ ಇದ್ದುದೊಂದು ಬಾಲ್ಕನಿ . .. ಆರಾಮಾಗಿ ಕೂಡ್ರೋಣ ಎಂದರೆ ... "

" ಇಷ್ಟೆಲ್ಲ ವರುಷ ನಮ್ಮಲ್ಲಿದ್ದವ....ಮೇಲಾಗಿ ಅಪ್ಪ ಒಪ್ಪುತ್ತಾರೋ ಇಲ್ಲವೋ : ಕುಳಿತಲ್ಲಿ ೪೦ ರೂ. ಭಾಡಿಗೆ. "

" ಅವರನ್ನು ಒಪ್ಪಿಸುವ ಕೆಲಸ ನನ್ನದು. "

" ಇಂತಹ ಸುಖದ ಸಮಯದಲ್ಲಿ ಅವನ ಹೆಸರೇಕೆ ?........ ತುಸು ಹತ್ತಿರ ಬಾರಲ್ಲ........"

ಅನಂತನಿಂದ ಮುಂದೆ ಕೇಳುವುದಾಗಲಿಲ್ಲ. ಯಾರೋ ಬಾರುಕೋಲಿನಿಂದ ಬೆನ್ನಮೇಲೆ ಹೊಡೆದಂತಾಗಿತ್ತು. ಆದಾಗಲೇ ಹಾಸಿಗೆಯ ಮೇಲೆ ಕುಳಿತ ಅವನ ಮನಸ್ಸು ಯಾವುದೋ ಅವ್ಯಕ್ತ ಭೀತಿಯಿಂದ ಕಂಪಿಸಿತು. ಮೈ ಬೆವರಿತು. ತುಸು ಹೊತ್ತಿನಲ್ಲಿ ಏನೆಲ್ಲ ನೆನೆದು ಅವನ ಕಣ್ಣು ತುಂಬಿ ಬಂದುವು. ಎಂದೋ ಕಳಕೊಂಡ ಅಪ್ಪ-ಅಮ್ಮಂದಿರ ಚಿತ್ರ ಕಣ್ಣಮುಂದೆ ಕಟ್ಟಿ, ಸಣ್ಣ ಮಗುವಿನಂತೆ ಅತ್ತುಬಿಟ್ಟ :

ತಾನಿಂದು ಈ ಜಗತ್ತಿನಲ್ಲಿ ಅನಾಥ !

ತಾನಿಂದು ಯಾರಿಗೂ ಬೇಡವಾಗಿದ್ದೇನೆ !!

ಅಂದು ರಾತ್ರಿ ಕತ್ತಲಲ್ಲಿ ಹಾಸಿಗೆಯಲ್ಲಿ ಏಕಾಂಗಿಯಾಗಿ ಕುಳಿತಾಗ, ಅವನ ಗಂಡುಗಣ್ಣುಗಳಿಂದ ಉದುರಿದ ಕಂಬನಿಗಳ ಅರ್ಥವೇನು ?—

ತನ್ನ ಬಾಳಿನ ನಿರರ್ಥಕತೆಯ ಅರಿವೆ ?

ತನ್ನ ಅನಾಗರಿಕತೆಯ ಬಗ್ಗೆ ಪಶ್ಚಾತ್ತಾಪವೆ ?

ನಾಳೆಯ ಚಿಂತೆಯೆ ?

ಇಲ್ಲವೆ, ಎಲ್ಲವೂನೊ ?

ಯಾರು ಬಲ್ಲರು ?

ಬದಿಯ ಕೋಣೆಯಲ್ಲಿ ಏಕಾಂತದ ಪಿಸುದನಿ, ಬಳೆಗಳ ಕಿಂಕಿಣ, ಮಂಚದ ಕಿರಕಿರ ಕ್ಷಣಕ್ಕೊಮ್ಮೆ ನಡೆದೇ ಇದ್ದುವು. ಆದರೆ ಅನಂತ ಈಗ ಅವಕ್ಕೆಲ್ಲ ಕಿವುಡನಾಗಿದ್ದ.

ನನ್ನ ಹಣೆಬರಹ

(ಸ್ವಾನುಭವ ಕಥನ)

ಶ್ರೀಮತಿ ಸೌ. ರಾಧಾದೇವಿ ಕಮಲಾಪುರ, ಧಾರವಾಡ

ಸಂಸಾರದಲ್ಲಿ ಸತಿ-ಪತಿಗಳಿಬ್ಬರಿಗೂ ಎರಡು ಬಗೆಯ ವ್ಯಕ್ತಿತ್ವಗಳಿರುವುವು. ಒಂದು ಶುದ್ಧ ಸತಿ-ಪತಿಭಾವದ ವ್ಯಕ್ತಿತ್ವ; ಇನ್ನೊಂದು ಲೌಕಿಕಭಾವದ ವ್ಯಕ್ತಿತ್ವ. ಈ ಎರಡು ಬಗೆಯ ವ್ಯಕ್ತಿತ್ವಗಳಲ್ಲಿಯೂ ಸಹಜಸಾಮರಸ್ಯವಿರುವ ದಾಂಪತ್ಯಗಳು ಎಷ್ಟು ದೊರೆತಾವು?

ನಮ್ಮ ದೇಶದ ಹೆಣ್ಣುಮಕ್ಕಳ ಹಣೆಯ ಬರೆಹವನ್ನು ಬ್ರಹ್ಮನೇನೂ ಬರೆದಿರಲಾರ; ದೊಡ್ಡವರಾಗಿ ಮದುವೆಯಾದ ಮೇಲೆ, ಅವರವರ ಗಂಡಂದಿರ ಬಾಳಿನ ರೀತಿಯೇ ಅವರವರ ಹಣೆಯಬರೆಹ-ವನ್ನು ಬರೆಯುವುದು. ಈ ಮಾತನ್ನು ಮಿಕ್ಕ ನನ್ನ ಅಕ್ಕ-ತಂಗಿಯರು ಒಪ್ಪುವರೋ ಇಲ್ಲವೋ; ನಾನೇನೋ ನನ್ನ ಸ್ವಂತದ ಅನುಭವದಿಂದ ಈ ಸತ್ಯವನ್ನು ಕಂಡುಕೊಂಡಿದ್ದೇನೆ.

ಹೆಣ್ಣುಮಗುವು ಹುಟ್ಟಿ, ಅದಕ್ಕೆ ತಿಳಿವು ಮೂಡಿದ ದಿನವೇ, ತಾನು ಒಬ್ಬ ಗಂಡನ ಹೆಂಡತಿಯಾಗಲಿರುವೆನೆಂಬ ವಿಚಾರವನ್ನು ಮೂಡಿಸುವುದು, ನಮ್ಮ ಸಮಾಜದ ಒಂದು ಸಂಪ್ರದಾಯ. ಈ ಸಂಪ್ರದಾಯದಲ್ಲಿ ಬೆಳೆಯುವುದರಿಂದಲೇ ನಮ್ಮ ಹೆಣ್ಣುಹುಡುಗಿಯರ ಗೊಂಬೆಯಾಟದಲ್ಲಿಯೂ ಹೆಣ್ಣು-ಗಂಡುಗಳ ಮದುವೆ ನಡೆಯುವುದು; ಗೊಂಬೆಗಳನ್ನು ಬಿಟ್ಟು ಹುಡುಗರಾಟವಾಡಿದರೂ ಹೆಣ್ಣು-ಗಂಡಿನ ಮದುವೆಯಾಟಕ್ಕೆ ಹೆಚ್ಚು ಪ್ರಾಮುಖ್ಯವಿರುವುದು. ಆಗ 'ಹೆಣ್ಣಿಗೆ ಗಂಡನಾಗಲು ಒಂದು ಗಂಡುಬೇಕು!'—ಎಂಬ ತಿಳಿವಳಿಕೆಯಷ್ಟೇ ಇರುವುದು. ಗಂಡನಾಗುವ ಆ ಗಂಡು ಹೇಗೆ ಇರಬೇಕು? ಎಷ್ಟು ಕಲಿತಿರಬೇಕು?— ಯಾವ ಉದ್ಯೋಗ ಮಾಡುತ್ತಿರಬೇಕು?—ಎಂಬ ಯಾವ ವಿಚಾರವೂ ಆ ಆಟವಾಡುವ ಹುಡುಗಿಯರಲ್ಲಿ ಬೆಳೆದಿರುವುದಿಲ್ಲ. ನಾನು ಕೂಡ ಇಂಥ ಹಳೆಯ ಸಂಪ್ರದಾಯದಲ್ಲಿಯೆ ಹುಟ್ಟಿಬೆಳೆದವಳು.

ಕಾಲ ಈಗ ಸ್ವಲ್ಪ ವಿಪರೀತವಾಗಿದೆ. ಹಿಂದಣ ಕಾಲದಲ್ಲಿ ಗೊಂಬೆಯಾಟವಾಡುವ ವಯಸ್ಸಿನಲ್ಲಿಯೆ, ಹುಡುಗಿಯರು ಒಬ್ಬ ಗಂಡ-ನಿಗೆ ಹೆಂಡತಿಯರಾಗಿ ಬಿಡುತ್ತಿದ್ದರು. ತಮ್ಮ ದಾಂಪತ್ಯಜೀವನದ ಭವಿಷ್ಯದ ಯೋಚನೆಯೇ ಅವರಿಗಿರುತ್ತಿರಲಿಲ್ಲ. ಇಷ್ಟೇ ಅಲ್ಲ, ತಮ್ಮ ಅಭಿರುಚಿಗಳೇನು? ಅವು ಗಂಡನ ಮನೆಯಲ್ಲಿ ಪೂರಯಿಸಲ್ಪಡು-ವುವೋ, ಇಲ್ಲವೋ?—ಎಂಬ ಅಳುಕು ಕೂಡ ನಮ್ಮ ಕನ್ನೆಯರ ಎದೆಯನ್ನು ಸೋಂಕುತ್ತಿರಲಿಲ್ಲ. ಪರಿಸ್ಥಿತಿಯು ಹೀಗಿದ್ದರೂ, ನಮ್ಮ ಸಾಂಪ್ರದಾಯಿಕ ದಾಂಪತ್ಯಜೀವನದಲ್ಲಿ ಒಡಕುಬಾಳಾದ ಉದಾ-ಹರಣೆಗಳು ತೀರಕಡಮೆ. ಇಂದಿನ ಲೌಕಿಕದೃಷ್ಟಿಯಿಂದ ನೋಡುವವ-ರಿಗೆ ಇದೊಂದು ದೊಡ್ಡ ಆಶ್ಚರ್ಯದ ವಿಷಯವೆಂದು ಕಾಣಬಹುದು.

ತಮಗೆ ಇಂತಿಂತಹ ಗುಣ-ಅಭಿರುಚಿಗಳುಳ್ಳ ಗಂಡನೇ ಬೇಕೆಂದು ಕನ್ನೆಯರು ಹಟಹಿಡಿದರೆ, ಮದುವೆಯಾಗದೆ ಉಳಿಯುವ ಕನ್ನೆಯರ ಸಂಖ್ಯೆಯೇ ಹೆಚ್ಚಾದೀತೆಂದು, ನನಗೆ ಈಗ ಹೆದರಿಕೆ. ಒಂದು ವೇಳೆ ಪರಿಸ್ಥಿತಿಯ ಒತ್ತಾಯದ ಮೂಲಕ, ಗುಣ-ಅಭಿರುಚಿಗಳ ವ್ಯತ್ಯಾಸವುಳ್ಳ—ವರನೊಡನೆ ಮದುವೆಯಾದರೆ, ಆ ಅತೃಪ್ತಿಯ ಮೂಲಕ ಅವರ ದಾಂಪತ್ಯಜೀವನ ಸುಖಮಯವಾಗಿ ಸಾಗೀತೆಂದು ಹೇಳಲು ಬರುವಂತಿಲ್ಲ. ನನ್ನ ವಿಷಯವನ್ನೇ ನಾನು ಹೇಳಬೇಕೆಂದರೆ, ಮದು-ವೆಯ ಕಾಲದಲ್ಲಿ ವರನನ್ನು ಆರಿಸಬೇಕೆಂಬ ತಿಳಿವಳಿಕೆ ಮೂಡಿದ್ದರೆ, ನಾನು ಡಾಕ್ಟರ್ ಉದ್ಯೋಗ ಮಾಡುವ ವರನನ್ನು ಆರಿಸುತ್ತಿದ್ದೆನೋ ಇಲ್ಲವೋ! ಆದರೆ ನನ್ನ ಹಣೆಬರೆಹ, ನನಗೆ ಡಾಕ್ಟರ್ ಪತಿಯ ಕೈಯನ್ನು ಹಿಡಿಯುವಂತೆ ಮಾಡಿತು ಹೀಗಾದುದಕ್ಕಾಗಿ, ಪಶ್ಚಾ-ತ್ತಾಪ ಪಡಬೇಕಾದ ಒಂದು ದಿನವೂ ನನ್ನ ಜೀವನದಲ್ಲಿ ಬಾರದೆ ಇದ್ದುದು ಅನೇಕರಿಗೆ ಆಶ್ಚರ್ಯದ ಮಾತಾಗಿ ತೋರಬಹುದು. ಇದಕ್ಕೆ ಕಾರಣವೆಂದರೆ, ದಾಂಪತ್ಯದ ವಿಷಯದಲ್ಲಿರುವ ನನ್ನ ಸಾಂಪ್ರದಾಯಿಕ ಭಾವನೆಯೇ ಎಂದು ನಾನು ನಂಬಿದ್ದೇನೆ.

ಸಂಸಾರದಲ್ಲಿ ಸತಿ-ಪತಿಗಳಿಬ್ಬರಿಗೂ ಎರಡೆರಡು ಬಗೆಯ ವ್ಯಕ್ತಿತ್ವಗಳಿರುವುವು: ಒಂದು ಶುದ್ಧ ಸತಿ-ಪತಿಭಾವದ ವ್ಯಕ್ತಿತ್ವ; ಇನ್ನೊಂದು ಲೌಕಿಕಭಾವದ ವ್ಯಕ್ತಿತ್ವ. ಈ ಎರಡು ಬಗೆಯ ವ್ಯಕ್ತಿತ್ವಗಳಲ್ಲಿಯೂ ಸಹಜ ಸಾಮರಸ್ಯವಿರುವ ದಾಂಪತ್ಯ, ದೇವ-ಲೋಕದಲ್ಲಿಯೂ ಇರಲಾರದೆಂದು ನನ್ನ ಭಾವನೆ. ಏಕೆಂದರೆ, ಭಕ್ತಪ್ರಿಯರಾದ ವಿಷ್ಣು, ಮಹಾದೇವ—ಇವರ ಜೊತೆಯಲ್ಲಿಯೂ ಮುನಿದು ಜಗಳವಾಡಿದ ಅವರ ಪತ್ನಿಯರ ಕಥೆಗಳನ್ನು ನಾನು ಪುರಾಣಗಳಲ್ಲಿ ಕೇಳಿದ್ದೇನೆ ಹೆಂಡತಿ ತನ್ನ ಗಂಡನನ್ನು ಲೌಕಿಕ-ವ್ಯಕ್ತಿತ್ವದಲ್ಲಿ ಸ್ವತಂತ್ರನನ್ನಾಗಿ ತಿಳಿದು ನಡೆದುಕೊಳ್ಳಬೇಕು ಗಂಡನು ಹೆಂಡತಿಗೆ ಗಂಡನಾಗಿರುವಂತೆ, ತಾಯಿ-ತಂದೆಗಳಿಗೆ ಮಗನಾಗಿರು-ವನು; ಅಣ್ಣಂದಿರಿಗೆ ತಮ್ಮನಾಗಿರುವನು; ತಂಗಿಯರಿಗೆ ಅಣ್ಣನಾಗಿರು-ವನು; ಸ್ನೇಹಿತರಿಗೆ ಸ್ನೇಹಿತನಾಗಿರುವನು ರೋಗಿಗಳಿಗೆ ಡಾಕ್ಟರ-ನಾಗಿರುವನು; ಪಕ್ಷಕಾರರಿಗೆ ವಕೀಲನಾಗಿರುವನು; ಕಚೇರಿಯಲ್ಲಿ

ಕಾರಕೂನನಾಗಿಯೂ ಇರುವನು. ಇವೆಲ್ಲವುಗಳಿಗೆ ಸಂಬಂಧಿಸಿದ ಕರ್ತವ್ಯಗಳನ್ನು ಗಂಡನ ಲೌಕಿಕ ವ್ಯಕ್ತಿತ್ವ ನೆರವೇರಿಸಬೇಕಾಗುವುದು. ಹೆಂಡತಿಯೆನಿಸಿಕೊಳ್ಳುವವಳು ಈ ಕರ್ತವ್ಯಗಳಿಗೆ ಸಹಕಾರಕೊಡದೆ ಹೋದರೆ, ಮೊದಲನೆಯದಾದ ದಾಂಪತ್ಯವ್ಯಕ್ತಿತ್ವದಲ್ಲಿಯೂ ಸಾಮರಸ್ಯ ಉಳಿಯಲಾರದೆಂಬುದು ನನ್ನ ಸ್ವಾನುಭವದ ಮಾತು. ಗಂಡನ ಲೌಕಿಕ ವ್ಯಕ್ತಿತ್ವದ ಬಗೆಗೆ ಅನೇಕ ಸಲ ಹೆಂಡತಿಗೆ ತೊಂದರೆಯೂ ಆಗಬಹುದು; ಆದರೆ ಅವುಗಳನ್ನು ಸಹಿಸುವುದರಲ್ಲಿಯೆ ದಾಂಪತ್ಯ-ಜೀವನದ ಸೌಂದರ್ಯ ಹೆಚ್ಚುವುದೆಂದು ನನ್ನ ವಿಶ್ವಾಸ.

ಡಾಕ್ಟರ್‌ಪತಿಯನ್ನು ಕೈಹಿಡಿದ ನನಗೆ ಅಸಮಾಧಾನ-ತೊಂದರೆಗಳನ್ನು ಅನುಭವಿಸಬೇಕಾದ ಸಂದರ್ಭಗಳು ಹಿಂದೆಯೂ ಅನೇಕ ಸಲ ಬಂದಿವೆ; ಈಗಲೂ ಬರುತ್ತಲಿವೆ; ಆದರೆ ಆಗ ನನಗೆ ಆಗುವ ವಿಷಾದ-ಅಸಂತೋಷಗಳು ಕ್ಷಣಿಕ—ತಾತ್ಕಾಲಿಕ ಮಾತ್ರ—ಆಗಿರುತ್ತವೆ. ಸ್ವಲ್ಪ ವೇಳೆಯಲ್ಲಿಯೇ ಆ ವಿಷಾದ ಅಸಂತೋಷಗಳನ್ನು ಮರೆತುಬಿಡುವುದು ನನ್ನ ಸ್ವಭಾವವಾಗಿ ಬಿಟ್ಟಿದೆ.

ಉದಾಹರಣೆಗೆಂದು ಕೆಲವು ನನ್ನ ತೊಂದರೆಗಳನ್ನು ಹೇಳುವೆನು ಕೇಳಿರಿ :—

ಮನೆಯಲ್ಲಿ ಹಬ್ಬವೋ ಹುಣ್ಣಿವೆಯೋ ಇರುವುದು. ಯಜಮಾನರ ಅಭಿರುಚಿಗೆ ಒಗ್ಗುವಂತಹ ಸವಿಯೂಟದ ಅಡಿಗೆಯನ್ನು ಮಾಡಿಸಿರುವೆನು. ಎಲ್ಲರೂ ಕೂಡಿ ಉಂಡು ಸಂತೋಷಪಡಬೇಕೆಂದು ಎಲ್ಲರಿಗೂ ಇಚ್ಛೆ. ಇನ್ನೇನು, ಎಲೆಯಲ್ಲಿ ಅನ್ನ ಬಡಿಸಬೇಕು; ಅಷ್ಟರಲ್ಲಿಯೆ ಬಾಗಿಲೆದುರು ಮೋಟಾರೋ ಟಾಂಗಾಗಾಡಿಯೊ ಬಂದು ನಿಂತ ಸಪ್ಪಳ ಕೇಳಿಸುವುದು. ನಮಗೆಲ್ಲರಿಗೂ ಗಾಬರಿ. ಡಾಕ್ಟರ ಕಡೆಗೆ ಅಂತಹ ವೇಳೆಯಲ್ಲಿ ಬರುವವರು ಸಹಜ ಬಂದಿರುವರೇ? ಮನೆಯಲ್ಲಿ ರೋಗಿ ಕೊನೆಯ ಅವಸ್ಥೆಯಲ್ಲಿ ಇರುವಾಗ—ಗಾಬರಿಗೊಂಡು ಓಡಿಬಂದಿರುವರು. ಸರಿ, ಆಗ ಡಾಕ್ಟರಿಗೆ ಊಟಮಾಡಲಿಕ್ಕೆ ಅವಕಾಶಕೊಡುವರೆ? ಡಾಕ್ಟರರು ಹಾಗೆಯೆ ಹೊರಟುಬಿಡುವರು. ಮನೆಯಲ್ಲಿ ಎಲ್ಲರಿಗೂ ಉತ್ಸಾಹಭಂಗ; ನಿರಾಶೆ! ಆ ನಿರಾಶೆಯ ಉತ್ಕಟತೆಯ ಕಾಲದಲ್ಲಿ ನಾನು ಅನೇಕಸಲ, ಡಾಕ್ಟರಿಕೆಯ ಉದ್ಯೋಗದ ಮೇಲೆ ಬೈಗಳ ಮಳೆಯನ್ನು ಸುರಿಸಿದುದೂ ಉಂಟು. ಒಂದೊಂದು ಸಲವಂತೂ ಅವರಿಗಾಗಿಯೇ ಮಾಡಿದ ಅಡಿಗೆ ಅವರ ಬಾಯಲ್ಲಿ ಬೀಳುವುದೇ ಇಲ್ಲ. ಈ ಬಗೆಯ ನಿರಾಶೆಯ ದಿನಗಳು ನನ್ನ ಜೀವನದಲ್ಲಿ ಲೆಕ್ಕವಿಲ್ಲದಷ್ಟು ಬಂದಿವೆ

ಇನ್ನೊಂದು ನಗೆಬರುವ ಮಾತನ್ನು ಕೇಳಿರಿ:

ಮನೆಯವರೆಲ್ಲರೂ ಊಟಕ್ಕೆ ಕುಳಿತಿರುತ್ತಾರೆ. ಸ್ವಾರಸ್ಯವಾಗಿ ಊಟ ನಡೆದಿರುತ್ತದೆ. ಆಗ ನೇರವಾಗಿ ಒಳಗೇ ಬಂದು ಬಿಡುತ್ತಾರೆ—ಆತುರದ ಗಿರಾಕಿಗಳು. ಅವರಿಗೆ ತಮ್ಮ ಚಿಂತೆಯೇ ಚಿಂತೆ. ಬಂದವರೇ ರೋಗಿಯ ಪರಿಸ್ಥಿತಿಯನ್ನು ಬಣ್ಣಿಸತೊಡಗುತ್ತಾರೆ:

“ಮೂರು ಸಾರೆ ಹಿಂದಕ ಆಯ್ತರಿ; ಅದು ಒಡಕ ಮಸರಿನ್ಹಾಂಗ ಇತ್ತರಿ. ಮತ್ತ ನಾಕ ಸಾರೆ ಹೊಟ್ಟಿ ಜಾಡಿಸಿತರಿ! ಅದರಾಗ ಗುಂಬಳವ್ಹಾಂಗ ಏನೇನೋ ಬಿತ್ತರಿ!”

ಅವರು ಹೀಗೆ ಹೇಳುವುದನ್ನು ಕೇಳಿ ಮೊದ-ಮೊದಲು, ಹೇಸಿಕೆಯಿಂದ ಹೊಟ್ಟೆಯಲ್ಲಿ ಮಳಮಳಿಸಿದಂತಾಗಿ ಊಟವನ್ನೇ ಬಿಟ್ಟು ಏಳುತ್ತಿದ್ದೆ; ಬರು-ಬರುತ್ತ ಡಾಕ್ಟರಂತೆ ನನಗೂ ಈ ಮಾತುಗಳ ಅಭ್ಯಾಸವಾಗಿಹೋಗಿದೆ. ಆದರೆ ಹೊಸತಾಗಿ ಅತಿಥಿಗಳು ಬಂದು ಊಟಕ್ಕೆ ಕುಳಿತಾಗ, ಈ ಬಗೆಯ ಮಾತುಗಳು ನಡೆದರೆ, ಅವರು ಊಟವನ್ನು ಬಿಟ್ಟು ಮುಖಮುರಿಯುತ್ತ ಕೂಡುವರು. ಆಗ ಮಾತ್ರ ನನಗೆ ಎನಿಸುವುದು : ‘ನಮ್ಮ ಯಜಮಾನರು ಎಲ್ಲವನ್ನೂ ಬಿಟ್ಟು ಈ ಡಾಕ್ಟರಿಕೆಯನ್ನು ಯಾಕೆ ಆರಿಸಿದರೋ!’ ಎಂದು.

ರಸಭಂಗದ ಸಂದರ್ಭಗಳಂತೂ ನನ್ನ ಜೀವನದಲ್ಲಿ ಬೇಕಾದಷ್ಟು ಬಂದಿವೆ. ನಾಟಕಕ್ಕೋ ಸಿನೇಮಾಕ್ಕೋ ಹೋಗಬೇಕೆಂದು—ಎಂದರೆ ಇಬ್ಬರೂ ಕೂಡಿ ಹೋಗಬೇಕೆಂದು—ಸಿದ್ಧರಾಗಿ ನಿಂತಿರುವೆವು. ಇನ್ನೇನು; ಕಾಲು ಮುಂದೆ ಇಡಬೇಕು; ಅಷ್ಟರಲ್ಲಿಯೆ ಕಾಲುಮುರಿದುಕೊಂಡೋ ತಲೆ ಒಡೆದುಕೊಂಡೋ—ಒಂದು ರೋಗಿ ಬಂದುಬಿಡುವುದು. ಅಂತಹದನ್ನು ಬಿಟ್ಟು ಹೋಗುವುದು ಹೇಗೆ? ಡಾಕ್ಟರರು ಕೂಡಲೆ ತಮ್ಮ ಉಡಿಗೆ-ತೊಡಿಗೆ ಬದಲಿಸಿ, ಉಪಚಾರದ ಸಿದ್ಧತೆಗೆ ತೊಡಗುವರು. ತಾಸುಗಟ್ಟಲೆ ಕುಳಿತು ಮಾಡಿಕೊಂಡ ನನ್ನ ಶೃಂಗಾರವೆಲ್ಲ ವ್ಯರ್ಥವಾಯಿತೆಂದು ಅಸಮಾಧಾನ ತಲೆದೋರುವುದು. ಆಗ ಒಳಗೊಳಗೇ ಬಂದರೋಗಿಗೂ ಡಾಕ್ಟರಿಕೆಯ ಉದ್ಯೋಗಕ್ಕೂ ಸಹಸ್ರಶಾಪಗಳನ್ನು ಕೊಡುವೆನು. ಆದರೆ ರಕ್ತಸುರಿಸುತ್ತ ನೋವಿನಿಂದ ನರಳುತ್ತ ಬಂದ ರೋಗಿ, ಡಾಕ್ಟರರ ಉಪಚಾರದಿಂದ ಸಮಾಧಾನಗೊಂಡು ಹೋಗುವುದನ್ನು ನೋಡಿದಾಗ, ಡಾಕ್ಟರ್‌ಪತಿ ದೊರೆತುದು ನನ್ನ ಪುಣ್ಯ—ಎಂದು ಭಾವಿಸುತ್ತೇನೆ.

ದಾಂಪತ್ಯಜೀವನದಲ್ಲಿ ಸಹನೆ-ಸಹಾನುಭೂತಿಗಳಿದ್ದರೆ ಗಂಡನ ಲೌಕಿಕವ್ಯಕ್ತಿತ್ವದ ಬಗೆಗೂ ಹೆಂಡತಿಗೆ ಆತ್ಮೀಯಭಾವ ಹುಟ್ಟುತ್ತದೆ. ನಿತ್ಯಸಂಬಂಧದ ಮೂಲಕ ನನಗೆ ರೋಗಗಳ ಮೂಲ ಕಾರಣ, ಅವುಗಳ ಸ್ವರೂಪ ಇವುಗಳ ಸಾಕಷ್ಟು ಪರಿಚಯವಾಗಿದೆ. ಹೆಚ್ಚು ಪರಿಚಯ ಮಾಡಿಕೊಳ್ಳಬೇಕೆಂಬ ಕುತೂಹಲವೂ ನನ್ನಲ್ಲಿ ಉಂಟಾಗಿದೆ. ಅನೇಕ ಔಷಧಿಯ ಗುಣಧರ್ಮಗಳನ್ನು ಗೊತ್ತುಮಾಡಿಕೊಂಡಿದ್ದೇನೆ. ಇದೆಲ್ಲವೂ ಡಾಕ್ಟರರ ಕೈಹಿಡಿಯದಿದ್ದರೆ ನನಗೆ ಎಲ್ಲಿ ಸಾಧ್ಯವಾಗುತ್ತಿತ್ತು? ಮಿಕ್ಕ ಉದ್ಯೋಗಸ್ಥರ ಹೆಂಡಂದಿರಿಗಿಂತ ಡಾಕ್ಟರ ಹೆಂಡತಿ ಸಮಾಜಸೇವೆಯನ್ನೂ ಹೆಚ್ಚು ಚೆನ್ನಾಗಿ ಮಾಡಬಲ್ಲಳೆಂದು ನನಗೆ ನಂಬಿಗೆಯಿದೆ. ಏಕೆಂದರೆ ನಾಚಿಕೆ, ಹೇಸಿಕೆ, ಗರ್ವ, ಅಭಿಮಾನ ಇವು ಸಮಾಜಸೇವೆಗೆ ದೊಡ್ಡ ಆತಂಕವಾಗಿರುವುವು. ಡಾಕ್ಟರ್ ಉದ್ಯೋಗಕ್ಕೆ ತೊಡಗಬೇಕಾದವರು ಇವೆಲ್ಲವನ್ನೂ ಬಿಟ್ಟೇ ಮುಂದೆ ಹೆಜ್ಜೆಯಿಡಬೇಕಾಗುವುದು. ಗಂಡನನ್ನು ಆದರಿಸುವವಳು ಗಂಡನ ಉದ್ಯೋಗವನ್ನೂ ಆದರದಿಂದ ನೋಡಲೇಬೇಕಾಗುವುದು. ಈ ಆದರವೇ ಆಕೆಯಲ್ಲಿ ಸಮಾಜಸೇವಾ ಭಾವವನ್ನು ತುಂಬುವುದು.

ಡಾಕ್ಟರರ ಹೆಂಡತಿಯಾಗುವೆನೆಂಬ ವಿಚಾರ ನನ್ನ ಕನಸು-ಮನಸಿನಲ್ಲಿಯೂ ಇರಲಿಕ್ಕಿಲ್ಲ. ಆದರೆ ಡಾಕ್ಟರರ ಕೈಯನ್ನು ಹಿಡಿಯುವಂತಹ ಯೋಗವನ್ನು ಒದಗಿಸಿಕೊಟ್ಟದ್ದಕ್ಕಾಗಿ ನನ್ನ ಹಣೆಯ ಬರೆಹವನ್ನು ನಾನೆಂದೂ ಬೈಯಲಾರೆ.

ನನ್ನ ನೆರಳು

ಶ್ರೀ. ಶಂ. ರಾ. ಮೊಕಾಶಿ ಎಂ, ಎ. ಮುಂಬಯಿ

ನಮ್ಮ ನೆರಳು, ನನ್ನ ನೆರಳು
ಎಂಥ ಚೆಲುವು ನನ್ನ ನೆರಳು !

ಮತ್ತನಂತೆ ಮರೆಯೆ ನಾನು
ಸುತ್ತ ಮುತ್ತ ಕೋಟಿ ಭಾನು–
ಚಿತ್ರಭಿತ್ತಿಯಲ್ಲಿ ನನ್ನ
ಉತ್ತಮಾಂಗದಾಟವನ್ನು
ಕೆತ್ತುತಿರುವುವು.

ಮಣ್ಣುಮೈಯು ಮಲಗಿರುವುದು,
ಒರೆಯು ಮರೆಯಲಲಗಿರುವುದು
ಕೃತಿಚೇತನೆ ತೊಲಗಿರುವುದು
ಜೀವ ತನ್ನ ಮರೆವುಗೋರಿಯನ್ನು ಮೆತ್ತುತಿರುವುದು.

ಆದರಿಗೋ, ನೆರಳಿನಾಟ
ಯಾವ 'ಚಮತು', ಯಾವ ಮಾಟ !
ನನ್ನ ನೆರಳೆ ನನ್ನ ದಿಕ್ಕ
ತಪ್ಪಿಸಿರುವುದು;
ನನ್ನ ಸ್ವಪ್ನಜಲ್ಪ ಖುಕ್ಕ
ಮುಪ್ಪಿಸಿರುವುದು.

ಮೊದ್ದು ಮೈಯ ನೆರಳು ಇದೋ ?–
ಘಟೋತ್ಕಚನ ಮರುಳು ಇದೋ ?–
ಅರಿಯದಾದೆನು !
ಒರಗುತಿರಲು ನೆಲದ ಮೇಲೆ
ನೆರಳು ಅದೋ ಮುಗಿಲ ಮೇಲೆ
ತೇಲುತಿರುವುದು
ಮುಗಿಲೆ ಸೋಲುತಿರುವುದು.

ಗ್ರಹಗಣಂಗಳೆಲ್ಲ ಕೈಯ ನೆಲ್ಲಿ ಹೋಲುತಿರುವುವು.
ಕವಳಿಗಂಟೆ ಕತ್ತಲು,—
ಹಣ್ಣು ಸುತ್ತು ಎತ್ತಲು,–
ತುಟಿಗೆ ತಾಕಲಾಡಿ ಉದಿರುತಿಹವು ಸುತ್ತುಮುತ್ತಲು.
ಕೈಯತುಂಬ ಹರಿಯುತ
ದೊನ್ನೆತುಂಬ ಸುರಿಯುತ

ನೆಲಕೆ ತರುತಲಿಹುದು ನೆರಳು
ನನ್ನ ಚೆಲುವ ನೆರಳದು !
ಕಾಮಧನುವ ಸರಳದು !
ಅಂತರಿಕ್ಷ ತಬ್ಬಿ ಒರಗಿ
ಮುಗಿಲ ಮೂರು ಬಯಲ ಹರಗಿ
ಹಗಲು ಬೀಜ ಬಿತ್ತಿದೆ,
ಬೆಳಕುಬೆಳೆಯು ಬೆಳೆದಿದೆ.
ನನ್ನ ನೆರಳಿನಾಟ ನೋಡಿ ಬೆರಗುಗೊಳ್ಳಲೆ ?
ದೇಹ ಗಂಡು, ನೆರಳು ಹೆಣ್ಣು
ಒರೆವ ಹುಬ್ಬು, ಕರೆವ ಕಣ್ಣು,
ಹೋಗಿ ಮುತ್ತನಿಕ್ಕಿ ಅದರ ಮುಸುಕ ತಳ್ಳಲೇ ?
ಅದರ ಮುಡಿಯ ಅರಳಿಗೆ
ಸೋತೆ ನಾನು ನೆರಳಿಗೆ !

ನನ್ನ ನೆರಳು ಶೃಂಗಿಭೃಂಗಿ
ನನ್ನ ನೆರಳು ಆ ದ್ವಿಲಿಂಗಿ
ನಾರದಿ–ಮುನಿನಾರದ,
ಪರ್ಯಟನ ವಿಶಾರದ.

ಸಿಡಿಲ ಮುಚ್ಚಿಕೊಂಡು ಜಗವ–
ನಲೆವ ಯಕ್ಷನೀರದ !
ದಿಕ್ಕು ದಿಕ್ಕು ಗಾಳಿಯಲ್ಲಿ
ನಡೆದ ಮದನ ಹೋಳಿಯಲ್ಲ
ರತಿಯ ವಿರಹದಶ್ರುವಾಗಿ
ಒಮ್ಮೆ ಉರುಳುತಿರುವುದು.
ಒಮ್ಮೆ ವ್ಯೋಮಶ್ಮಶ್ರುವಾಗಿ
ಒಡನೆ ಕೆರಳುತಿರುವುದು.
ಒಮ್ಮೆ ಮೂಢಗ್ರಾಮಿಯಾಗಿ
ಬೊಬ್ಬೆ ಕುಟ್ಟುತಿರುವುದು.
ಜಗದ ಯಾವ ನೋವು ನಲಿವು
ಜಗದ ಯಾವ ಸೋಲು ಗೆಲವು
ಜಗದ ಬೆಂದ ನೊಂದ ಒಲವು

ಎಲ್ಲವನ್ನು ಉಂಡಿದೆ.
ನೂರು ವಿಜಯನಗರ ನೂರು
ತಾಳಿಕೋಟೆ ಕಂಡಿದೆ.
ಯೋಜನಗಳ ಕಡಲ ದಾಂಟಿ

ಚೂಡಾಮಣಿಯೊಯ್ದಿದೆ;
ದುಃಶಾಸನ ರುಧಿರವೀಂಟಿ
ಕೃಷ್ಣೆ ಹೆರಳು ನೇಯ್ದಿದೆ.

ವಿದುಲೆಯಾಗಿ ಕೆರಳಿಸುತಿದೆ
ವಿದುರನಾಗಿ ಸೈ ಪಿಡುತಿದೆ
ಕಲ್ಪನೆಗಳ ಪ್ರೀತಿಯಲ್ಲಿ
ತೂಗುತಿದೆ ತೂಗುತಿದೆ—

ಕಲ್ಪನಾ ಪ್ರತೀತಿಯಲ್ಲಿ
ಹಾಗುತಿದೆ – ವಾಗುತಿದೆ—

ಚಿತ್ರಲೇಖೆಯಂತೆ ಚಿತ್ರ
ಚಿತ್ರದಿಂದ ಒರೆಸುತಿದೆ;
ಚಿತ್ರಸೇನನಂತೆ ಗೀತ
ಗೀತದಿಂದ ಮರೆಸುತಿದೆ.

ಚಿತ್ರಾಂಗದೆಯಂತೆ ನಾಟ್ಯ
ನಾಟ್ಯದಿ ಓಸರಿಸುತಿದೆ;
ಸೋಮಪಾನದಂತೆ ಅಮಲ,
ಅಘುವಿನಂತೆ ಮಾದಕ
ಮದುಗುಣಿಕೆಯ ಮದ್ದಿನಂತೆ
ತೀವ್ರ ಬುದ್ಧಿಭೇಧಕ–
ಸುರಾಪಾನದಂತೆ ಶೀಘ್ರ
ಚೇತನಾವಿಘಾತಕ

ವ್ಯಸನವಿದೋ, ವ್ಯಾಸಂಗವೊ,–
ಅಸುರಾಂಗವೊ, ದೇವಾಂಗವೊ,—
ದಿನದಿನಕೂ ನನ್ನ ಬಗೆಯು
ನೆರಳುರುಳಲಿ ಸಿಕ್ಕುತಿದೆ

ಬಿಡುವೆ ಇರದ ಸುಖವ ಕಂಡು
ನನಗೆ ಭೀತಿಯುಕ್ಕುತಿದೆ.
ತುಟಿಯ ಜೇನು ದಕ್ಕಲಿಲ್ಲ
ಒಡಲು ಮರಳಿ ಕಕ್ಕುತಿದೆ
ಏಕೆ ಹೀಗೆ, ಏಕೆ ಹೀಗೆ?

ಹಿಂದಕಾ ಪುರಾಣಕವಿಯು
ಕಲ್ಪನೆಗಳ ತಲ್ಪಕಟ್ಟಿ
ಒರಗುತಿರಲು, ಹೃದ್ಗರ್ಭದಿ
ಒಗೆದುದೊಂದು ಚೆಲುವುಗಟ್ಟಿ!
ಅವಳೆ ಶಾರದೆ!
ಅವಳಲ್ಲನುರಕ್ತ ವಿಧಿಯು
ಪ್ರೀತಿಸಿದ್ದು ಜಾಹಿರ

ನಾನೆ ಏಕೆ ನನ್ನ ಪ್ರೀತಿಗಾಗಿ ನೀತಿಬಾಹಿರ?
ನಾನಲ್ಲವೆ ನೂತ್ನಬ್ರಹ್ಮ?— ನಾನಲ್ಲವೆ ಶಾಹಿರ?

ನಾನು ಗಂಡು, ನೆರಳು ಹೆಣ್ಣು
ಕರೆವ ಹುಬ್ಬು, ಇರಿವ ಕಣ್ಣು
ಹೋಗಿ ವ _ನಿಕ್ಕಿ ಜವನಿಕೆಯನು ತಳ್ಳಲೇ?

ಕಣ್ಣು ಮೇಲದಾವ ಹುಣ್ಣು?
ಕೆನ್ನೆಯೆರಡು ಚಳ್ಳಹಣ್ಣು
ಅಯ್ಯೊ, ನನ್ನ ನೆರಳ ಚೆಲುವು ಎಲ್ಲ ಸುಳ್ಳಲೇ?

ನಡೆದಳಿಗೋ ದೂರದಲ್ಲಿ
ಮೋಹ ಕೆರಳಿಸುತ್ತ ನಲ್ಲೆ
ಹೊರಟೆನಿದೋ, ಅವಳ ನೋಟವೆನ್ನ ಕರೆವುದು!
ಚೆಲುವ ಬೊಕ್ಕಸಕ್ಕೆ ಕೊಳ್ಳೆ
ಇಡಲು ಓಡಿ ಬಂದೆನಲ್ಲೆ!
ತವ ವಿಷಾಕ್ತ ಅಧರ ಮಧುವನೆನಗೆ ಸುರಿವುದು
ಹಾಕು ಎನಗೆ ಹೂವಗಲ್ಲು
ನಗೆ ಮಲ್ಲಿಗೆಯಿಂದ ಕೊಲ್ಲು
ಸುಖವು ನಗುತ ಇನಿಸಿ:ನೇ ಸಾಯುತಿರುವುದು;

ಸುಳ್ಳೆ ಇರಲಿ, ದಿಟವೆ ಇರಲಿ
ಬರುವ ಘೋರ ಶಾಪ ಬರಲಿ
ಇಂಥ ಚೆಲುವು ಮರಳಿ ನನಗೆ ಎಲ್ಲಿ ದೊರೆವುದು?

ಕೊನೆಗೆ ದೇವ ಮಹಾದೇವ ನೀನೆ ಪೊರೆವುದು!

ಒಂದಾನೊಂದು ರಾತ್ರಿ ಕಾಲದಲ್ಲಿ.......

(ಸಣ್ಣ ಕತೆ)*

ಶ್ರೀ. ಮುದೇನೂರ ಸಂಗಣ್ಣ, ಚಿಗಟೇರಿ

卐

ತಮ್ಮ ಮಕ್ಕಳ ವಿಷಯಕವಾದ ಹಿರಿಯರ ಏಕಮುಖವಾದ ಹಿತದ ದೃಷ್ಟಿ, ಬಹಳ ಸಲ ಮಕ್ಕಳಿಗೆ ಇಷ್ಟವಲ್ಲದುದೂ ಎನಿಸಬಹುದು. ತಾಯಿಯ ವ್ಯವಹಾರಬುದ್ಧಿ ತಂದೆಯಲ್ಲಿಯೂ ಇದ್ದಿದ್ದರೆ, ನೀಲಾದ್ರಿ ಇಂತಹ ತೊಡಕಿನಲ್ಲಿ ಏಕೆ ಸಿಕ್ಕುತ್ತಿದ್ದ?

卐

ಗೋಡೆಯ ಮೇಲಿನ ಗಡಿಯಾರ, ಏಕಾಕ್ಷರ ಶಬ್ದವೊಂದನ್ನು ನುಡಿಸಿತು.......ಆಗ ಒಂಬತ್ತುವರೆ ಗಂಟೆ—ಇನ್ನೂ ಎರಡೂವರೆ ತಾಸು ಕಳೆಯಬೇಕು. ಅಷ್ಟು ಹೊತ್ತಾದಾಗ ಮಾತ್ರ ತಂದೆಯ ಕೋಣೆಯಲ್ಲಿಯ ದೀಪ ನಂದುವುದು. ಆಗ ಮಾತ್ರವೇ ನೀಲಾದ್ರಿ ತನ್ನ ಪಿನಲ್‌ಕೋಡನ್ನು ಮುಚ್ಚಿ, ರಾತ್ರಿಯ ಮಟ್ಟಿಗೆ ಬಿಡಬಹುದಿತ್ತು...... ಬಾಗಿಲನ್ನು ಹಾಕಿದ ತನ್ನ ತಂದೆಯ ಕೋಣೆಯ ಮುಂದೆ ಹಾಯ್ದು, ಮುಂಗಾಲಮೇಲೆ—ಆ ಕಾರ್ಗತ್ತಲಲ್ಲಿ—ನಿಶ್ಶಬ್ದವಾಗಿ ಹೋಗಬಹುದಿತ್ತು....ಆದರೆ ಮಧ್ಯರಾತ್ರಿ ಕಳೆವವರೆಗೆ, ಏನಾದರೂ, ಈ ಜಗತ್ತಿನ ಅವಸಾನ ಕಾಲ ಸಮೀಪಿಸಿ ಪ್ರಳಯ ಸನ್ನಿಹಿತವಾಗಿದ್ದರೂ—ಹಾಗೆ ಮಾಡಲು ಯೋಚಿಸುವಂತಿರಲಿಲ್ಲ!

ಹೊರಗೆ ಬೀದಿಯಲ್ಲಿ ಮಂದವಾದ ಬೆಳುದಿಂಗಳು ಮಂಜುಹೊಗೆಯ ಮೂಲಕ ಇಣುಕುಹಾಕುತ್ತಿತ್ತು. ನೀಲಾದ್ರಿ ಕೊನೆಗೆ ತಡೆಯಲಾರದೆ ಕೋಣೆಯಿಂದ ಹೊರಬಂದು, ಬೀದಿಯ ಮೂಲೆಯಿಂದ ಮೂಲೆಯವರೆಗೆ ಶತಪಥ ಹಾಕತೊಡಗಿದ. ಬೀದಿ ಬರಿಯದಾಗಿತ್ತು. ತಲೆಯೆತ್ತಿ ಮೇಲೆ ನೋಡಿದಾಗ, ತನ್ನ ಕಣ್ಣುಗಳನ್ನೇ ತನಗೆ ನಂಬಲಾಗಲಿಲ್ಲ. ಅವನಿಗೆ ತಾನು ಎಂದಾದರೂ ಇಷ್ಟು ಬೇಗ ಹೀಗೆ ಹೊರಬರುವ ಸಾಹಸ ಮಾಡಲು ಸಾಧ್ಯವೆ? .. ....ತಂದೆಯ ಕೋಣೆಯಲ್ಲಿ ಬೆಳಕಿಲ್ಲ! ಅದೇಕೆ ಇಂದು ಹೀಗೆ?.......ಅವನು ಆಲೋಚಿಸಿದ.

ರಾತ್ರಿಯ ನೀರವತೆಯಲ್ಲಿ ಅವನ ಅಶೋಕಕಕ್ಕನ ಮನೆಯಿಂದ ಹಾಡುವ ಧ್ವನಿ ಮತ್ತು ತಬಲಾ ವಾದನದ ಶಬ್ದಗಳು ಸ್ಪಷ್ಟವಾಗಿ ಕೇಳುತ್ತಿದ್ದುವು. ಸಂಧ್ಯಾಕಾಲದಲ್ಲಿಯೇ ಕೀರ್ತನೆಗೆಂದು ಅಲ್ಲಿ ಸೇರಿದ್ದ ಸಭೆಯ ಭಜನಗೀತಗಳ ತುಂಬುನಾದ ಇನ್ನೂ ಕೇಳಬರುತ್ತಿತ್ತು. ಎಂದಿನಂತೆ ಹೊತ್ತಿಗೆ ಮೊದಲೇ ಅಲ್ಲಿಗೆ ಹೋಗಿದ್ದ ಅವನ ತಾಯಿಯ ಬರುವನ್ನು, ಮಧ್ಯರಾತ್ರಿ ಕಳೆವವರೆಗೂ ನಿರೀಕ್ಷಿಸುವಂತಿರಲಿಲ್ಲ. ಆದರೆ ಇಂತಹ ವಿಷಯಗಳಲ್ಲಿ ಅತ್ಯಂತ ಭಕ್ತಿಯುತ ಆಸಕ್ತಿಯನ್ನು ತೋರಬೇಕಾಗಿದ್ದ ಆ ಕುಟುಂಬದಲ್ಲಿ, ಎಲ್ಲರಿಗೂ ಹಿರಿಯನಾದ ಯಜಮಾನನಿಗೆ ಮಾತ್ರ, ತನ್ನ ಕೋಣೆಯಿಂದ ಒಂದು ಇಂಚನ್ನು ಸಹ ಹೊರಸರಿಯುವ ಮನಸ್ಸಿದ್ದಂತೆ ಕಾಣಲಿಲ್ಲ. ಅವರ ಪಾಲಿಗೆ ಹಾಡುಗಳು ಭಕ್ತಿಯುತವಾಗಿದ್ದರೂ ಅಷ್ಟೆ; ಐಹಿಕವಾಗಿದ್ದರೂ ಅಷ್ಟೆ—ಅವು ಅವರಿಗೆ ಬುದ್ಧಿಭ್ರಮಣವನ್ನುಂಟುಮಾಡುತ್ತಿದ್ದುವು. ಮಾಡಲು ಬೇರೆಯೇನೂ ಕೆಲಸವಿಲ್ಲದಿದ್ದರೂ, ಅವರು ಮನೆಯಲ್ಲಿಯೇ ಉಳಿದು ತಮ್ಮ ವಕೀಲಿಯ ವಾದ-ಪ್ರತಿವಾದಗಳ ಬಗ್ಗೆ ಯೋಚಿಸುತ್ತ ಕುಳಿತುಕೊಳ್ಳುವರು.

ಆದರೆ ಇಂದೇಕೆ ಅವರು ಇಷ್ಟು ಬೇಗ ಮಲಗಿಬಿಟ್ಟರು? ಸಾಯಂಕಾಲ ಭೆಟ್ಟಿಗಾಗಿ ಬಂದಿದ್ದ ಅಶೋಕಕಕ್ಕನೇನಾದರೂ ಅವರನ್ನು ವಾಯುವಿಹಾರಕ್ಕಾಗಿ ಮನೆಯಿಂದ ಹೊರಗೆಳೆದುಕೊಂಡು ಹೋಗಿದ್ದನೇ? ಯಾರಿಂದಲೂ ಖಂಡಿತವಾಗಿ ಹೇಳಲು ಸಾಧ್ಯವಿಲ್ಲ—ಜೀವನದಲ್ಲಿ ಎಂತೆಂತಹ ವಿಲಕ್ಷಣ ಪ್ರಸಂಗಗಳು ಘಟಿಸುತ್ತವಲ್ಲ!

ಕೊನೆಗೊಮ್ಮೆ ನೀಲಾದ್ರಿ ಮನೋನಿರ್ಧಾರ ಮಾಡಿದ—ಶಬ್ದಮಾಡದಂತೆ ಮಹಡಿಯೇರಿದ. ತಂದೆಯ ಕೋಣೆಯಲ್ಲಿ ಕತ್ತಲಿತ್ತು. ಬಾಗಿಲ ಕದಗಳು ಮುಚ್ಚಿದ್ದುವು.......ಒಂದು ಪಕ್ಷ ಕದಗಳು ತೆರೆಯಲ್ಪಟ್ಟು ಆರಡಿ ಎತ್ತರದ ನಿಡುದೇಹ ಎದುರಿಗೆ ಬಂದು ನಿಂತರೆ!

ನೀಲೂ!—ಅವರು ಗರ್ಜಿಸಿಬಿಡುತ್ತಾರೆ.

—ಏನು ಅಪ್ಪಾ?

—ಎಲ್ಲಿ ಹೋಗಲು ಯೋಚಿಸಿರುವಿ?

ನೀಲಾದ್ರಿ ತನ್ನ ಗುರಿಯನ್ನು ಬಾಯಲ್ಲಿಯೇ ಗುನುಗುತ್ತಾನೆ:

—ಏತಕ್ಕಾಗಿ?

—ಪುಸ್ತಕವನ್ನು ಹುಡುಕಲಿಕ್ಕಾಗಿ.

---

* ವಂಗಸಾಹಿತ್ಯಿಕ ಶ್ರೀ ಮನೋಜ ಬಸು ಅವರ ಕಥೆಯೊಂದರ ಅನುವಾದವಿದು. ಸಂ. ಜ.

—ನಾನು ಹಾಗೇ ಅಂದುಕೊಂಡೆ. ಪುಸ್ತಕಗಳಿಗೆ ರೆಕ್ಕೆ ಬರುತ್ತವೆ, ಅಲ್ಲವೆ? ಪಕ್ಷಿಗಳಂತೆ ಅವು ಒಮ್ಮೆಲೇ ಹಾರಿ ಬಂದು ಇಲ್ಲಿ ಕುಳಿತುಬಿಡುತ್ತಿರುವಂತೆ ಕಾಣುತ್ತದೆ. ನಿನ್ನ ಪರೀಕ್ಷೆ ಎಂದು ಆರಂಭವಾಗುವುದು ಮಗು? ನಿನಗೆ ನಿಶ್ಚಿತ ತಾರೀಖೇ ನೆನಪಿಲ್ಲ-ವೆಂಬುದು ನನಗೆ ಖಾತ್ರಿಯಾಗಿ ಗೊತ್ತು. ಕಳೆದ ಸಲ ನಿನಗೆ ರೆಕ್ಕೆಗಳು ಬಂದಿದ್ದುವು;—ಹಾಸ್ಟೆಲಿನಲ್ಲಿ ನೀನಿದ್ದುದನ್ನೇ ನಾನು ನೋಡಲಿಲ್ಲ. ಈಗ ಮನೆಯಲ್ಲಿ ತಂದು ನಿನ್ನನ್ನು ಇಟ್ಟುಕೊಂಡಿರುವು-ದರಿಂದ, ನಿನ್ನ ಪುಸ್ತಕಗಳಿಗೆ ರೆಕ್ಕೆಗಳು ಹುಟ್ಟಿ, ಮಹಡಿಗೋ ಮತ್ತೆ ಇನ್ನೆಲ್ಲೆಲ್ಲಿಗೋ ಹಾರಾಡುತ್ತವೆ. ಅತ್ಯಂತ ಕೌತುಕದ ವಿಷಯ! ನಾನು ಹೇಳುತ್ತೇನೆ!........

× × × ×

ಚಂದ್ರಕಿರಣಗಳು ಮರಗಳ ರೆಂಬೆಗಳ ಹೆಣಿಕೆಯ ಮೂಲಕ ಒಳಹೊಕ್ಕು, ಮಾಳಿಗೆಯ ಮೇಲೆ ಬೆಳಕು-ನೆರಳುಗಳ ಕಂಡಿಗಳನ್ನು ರೂಪಿಸಿದ್ದುವು. ಇಂತಹ ಬೆಳುದಿಂಗಳಲ್ಲಿ ಯಾರಾದರೂ ಕಾಯಿದೆಯ ಪಠ್ಯಪುಸ್ತಕಗಳ ಬಗೆಗಾಗಲಿ, ಪಿನಲ್‌ಕೋಡಿನ ವಿಷಯದಲ್ಲಾಗಲಿ ಎಂದಾದರೂ ಚಿಂತಿಸುತ್ತಾರೆಯೇ? ನೀಲಾದ್ರಿ ದೊಡ್ಡ ನಿಟ್ಟುಸಿ-ರೊಂದನ್ನು ಬಿಟ್ಟು, ತುದಿಗಾಲಮೇಲೆ ನಡೆಯುತ್ತ ತನ್ನ ಮಲಗುವ ಕೋಣೆಯನ್ನು ಪ್ರವೇಶಿಸಿದ. ಆದರೆ ಅಲ್ಲಿ ಅವನಿಗಾಗಿ ನಿರಾಶೆಯೇ ಕಾದಿತ್ತು. 'ಇವಳನ್ನು ನೋಡು! ಇಂತಹ ಮನೋಮೋಹಕ ರಾತ್ರಿ-ಯಲ್ಲಿ. ಹೀಗೆ ಮರದ ದಿಮ್ಮಿಯಂತೆ ಬಿದ್ದು ನಿದ್ರೆಹೊಡೆಯಬೇಕೆ?'

ಮಲಗಿದವಳು ಅವನ ಹೆಂಡತಿ—ಉಮಾ. ಗಾಢವಾದ ನಿದ್ರೆಯಲ್ಲಿದ್ದಳು. ತನ್ನ ಕಾಯಿದೆಯ ಅಂತಿಮ ಪರೀಕ್ಷೆಯ ತಯಾರಿಗಾಗಿ ಕೆಳಗಡೆಯ ಕೋಣೆಯಲ್ಲಿ ನೀಲಾದ್ರಿ ಓದುತ್ತಿರುವಾಗಲೆಲ್ಲಾ, ಮೇಲಿನ ಈ ಕೋಣೆಯಲ್ಲಿ ಅವನ ತಾಯಿ, ಉಮಾಳೊಂದಿಗಿರುವುದು ವಾಡಿಕೆಯಾಗಿತ್ತು. ಅಂದು ರಾತ್ರಿ ತಾಯಿ ಕೀರ್ತನೆಗೆ ಹೋಗಿದ್ದಳು. ಎಲ್ಲೆಡೆಯಲ್ಲೂ ನೀರವತೆ ನೆಲಸಿತ್ತು. ಈ ಸುಂದರಿ ಮಾತ್ರ ಗುಲಾಬಿ ಪಕಳೆಗಳನ್ನು ಹೋಲುವ ಕಣ್ಣ ರೆಪ್ಪೆಗಳನ್ನು ಮುಚ್ಚಿಕೊಂಡು ತೆಳ್ಳನೆಯ ಹಸಿರು ಹಚ್ಚಡ ಹೊದ್ದು, ಸುಖವಾಗಿ ನಿದ್ರಿಸುತ್ತಿದ್ದಾಳೆ.

ಅದೇನೂ ಸೋಗಿನ ನಿದ್ರೆಯಂತೆ ಕಾಣುತ್ತಿರಲಿಲ್ಲ ನಿಜವಾಗಿಯೂ ಅವಳು ಗಾಢನಿದ್ರೆಯಲ್ಲಿದ್ದಳು. ಮಂಚದಿಂದ ಸ್ವಲ್ಪ ದೂರದಲ್ಲಿ ಮಬ್ಬುದೀಪವೊಂದು ಉರಿಯುತ್ತಿತ್ತು.

ನೀಲಾದ್ರಿ ಪಿಸುದನಿಯಲ್ಲಿ ಕರೆದ:—"ಉಮಾ ... . ಉಮಾ ರಾಣೀ!!"

ಉಮಾ ನಿದ್ರೆಯಲ್ಲಿಯೆ ದಿಂಬಿನಿಂದ ತಲೆಯೆತ್ತಿ ಮಗ್ಗಿಲು ತಿರುವಿದಳು. ಕೈ ಬಳೆಗಳು ಅವಳ ಹೊರಳುವಿಕೆಯೊಂದಿಗೆ 'ಕಿಣಿಕಿಣಿ' ಸಪ್ಪಳ ಮಾಡಿದುವು. ನೀಲಾದ್ರಿ ಹೊದಿಕೆಯನ್ನು ಸರಿಸಿ ಮುಖ-ವನ್ನು ಬಯಲು ಮಾಡಿದ; ಒಮ್ಮೆಲೇ ಅವಳು ಎದ್ದು ಕಿರುಚಿಬಿಟ್ಟಳು:

"ಯಾರು.— ಯಾರವರು?"

ಆಚೆಯ ಕೋಣೆಯಿಂದ ಯಾರೋ ಕೂಗಿದ ಶಬ್ದ ಕೇಳಿಸಿತು:—

"ಏನದು?"

ಅಯ್ಯೋ ದೇವರೇ! ಅವರು ವರದಾಕಾಂತರು, ನೀಲಾದ್ರಿಯ ತಂದೆ!

"ಚಿಂತಿಸಬೇಡ ಮಗು, ಬಂದೆ....ನನ್ನ ಸುಡುಗಾಡು ಕಟ್ಟಿಗೆಯ ಹಾವುಗೆಗಳೆಲ್ಲಿ?"

ಉಮಾ ಎದ್ದು ಕುಳಿತಳು. ಅವಳ ನಿದ್ರೆ ಹಾರಿಹೋಗಿತ್ತು. ನೀಲಾದ್ರಿಯ ಮುಖ ವಿವರ್ಣವಾಯಿತು. ಅಲ್ಲಿಂದ ತಪ್ಪಿಸಿಕೊಂಡು ಹೋಗಲಿಕ್ಕೆ ಅನುಕೂಲವಾದ ಹಾದಿಯನ್ನು ಹುಡುಕತೊಡಗಿದ. ಕಂಬಿ ಕೀಳಲಿಕ್ಕೆ ಇದ್ದ ಆ ಒಂದೇಒಂದು ಮಾರ್ಗದಲ್ಲಿಯೇ, ಕಟ್ಟಿಗೆಯ ಹಾವುಗೆಗಳ ಅವಸರದ ಚಟ್-ಪಟ್ ಶಬ್ದ ಕೇಳತೊಡಗಿತು. ಶಾಲಾ ಉಪಾಧ್ಯಾಯರ ಮನೋವೃತ್ತಿಯ ತನ್ನ ತಂದೆಯ ಮುಖವನ್ನು ಎದುರಿಸಲು ನೀಲಾದ್ರಿಯು ಸ್ವಲ್ಪವೂ ಸಿದ್ಧನಿರಲಿಲ್ಲ. ಏಕೆಂದರೆ ತಮ್ಮ ಮಗನ ಈ ನಡತೆಯನ್ನು ಖಂಡಿತವಾಗಿಯೂ ಅವರು ಒಪ್ಪುವವರಲ್ಲ ಸನ್ನಿಹಿತವಾಗುತ್ತಿರುವ ಪರೀಕ್ಷೆಯ ಸಮಯದಲ್ಲಿ ತನ್ನ ಅಧ್ಯಯನ-ವನ್ನೂ ದುರ್ಲಕ್ಷ್ಯಿಸಿ ಹೀಗೆ—ತಮ್ಮ ಮಗ—ತನ್ನ ಎಳೆಯ ಹೆಂಡತಿಯೊಂದಿಗೆ ಗುಪ್ತವಾಗಿ ಈ ಸ್ಥಳದಲ್ಲಿ ಭೆಟ್ಟಿಯಾಗುವುದಕ್ಕೆ ಅವರೆಂದೂ ಅವಕಾಶ ಕೊಡಲಾರರು.

ನೀಲಾದ್ರಿ ಉಮಾಳಲ್ಲಿ ಬೇಡಿಕೊಂಡ :—

"ದಯೆಮಾಡಿ ಅಪ್ಪನಿಗೆ ಹೇಳು—ಕನಸು ಬಿದ್ದಿತ್ತಲ್ಲದೆ ಬೇರೇನೂ ಇಲ್ಲವೆಂದು. ಅಯ್ಯೋ ದೇವರೇ. ಅದೋ ಅಲ್ಲಿ ಬರುತ್ತಿ-ದ್ದಾರೆ. ಹೂಂ ಬೇಗ, ಬೆಕ್ಕೋ ಅಥವಾ ಇನ್ನೇನೋ ಬಂದಿತ್ತೆಂದು ಹೇಳಿಬಿಡು. ತೊಂದರೆ ತೆಗೆದುಕೊಳ್ಳುವ ಅವಶ್ಯಕತೆ ಇಲ್ಲವೆಂದು ದಯೆಯಿಟ್ಟು ತಿಳಿಸು!"

ಉಮಾ ಮಾತನಾಡಲು ಯತ್ನಿಸಿದಳು, ಆದರೆ ಅವಳ ಗಂಟಲು ಒಣಗಿದಂತೆ ಕಾಣಿಸಿತು. ಕಾಲಸಪ್ಪಳ ಹತ್ತಿರ ಹತ್ತಿರ ಸಮೀಪಿ-ಸುತ್ತಿರುವ ಶಬ್ದ ಕೇಳುತ್ತಿತ್ತು.

ಹಾಸಿಗೆಯ ಇನ್ನೊಂದು ತುದಿಗೆ ಒಂದು ಸಣ್ಣ ತಲೆದಿಂಬು ಬಿದ್ದಿತ್ತು. ಪಾರಾಗಲು ಒಂದೇ ಒಂದು ಕ್ಷಣ ಮಾತ್ರ ಉಳಿದಿತ್ತು. ಆಶ್ಚರ್ಯಕರ ತೀವ್ರತೆಯೊಡನೆ ಮಂಚವನ್ನೇರಿ, ತಲೆದಿಂಬಿನ ಮೇಲೆ ಸಾಗರಬಿದ್ದು, ಹಚ್ಚಡದೊಳಕ್ಕೆ ನೀಲಾದ್ರಿ ತೂರಿಕೊಂಡ.

ಕಾತರದ ನೋಟದೊಂದಿಗೆ ವರದಾಕಾಂತರು ಕೋಣೆಗೆ ಬಂದು ಕೇಳಿದರು :—

"ಏನು ಸಮಾಚಾರ ಮಗು?"

ಉಮಾ ಚೇತರಿಸಿಕೊಂಡು ತನ್ನ ಮಾವನೊಂದಿಗೆ ಸಹಜವಾದ ರೀತಿಯಲ್ಲಿ ಉತ್ತರವಿತ್ತಳು :—

"ವಿಶೇಷವೇನೂ ಇಲ್ಲ; ಕೆಟ್ಟ ಕನಸು ಬಿದ್ದಿತ್ತು ಅಷ್ಟೇ! ಕಳ್ಳ ಬಂದನೇನೋ ಎಂದು ಭಾವಿಸಿದ್ದೆ."

"ಕಳ್ಳ! ಕಳ್ಳನೇ? ಹೌದು ಕಳ್ಳನೇ ಇರಬೇಕು. ಯಾರೋ ಸರಿದು ಹೋದಂತೆ ಶಬ್ದ ಕೇಳಿಸಿತು ನನಗೆ. ನಿನ್ನ ಅತ್ತೆ ಎಲ್ಲಿ? ಇದೆಲ್ಲವೂ ಅವಳ ತಪ್ಪೇ! ಇಷ್ಟು ರಾತ್ರಿಯಾದರೂ ಅವಳು ಅಲ್ಲಿ ಕೀರ್ತನದಲ್ಲಿ ತಲ್ಲೀನಳಾಗಿ ಕುಳಿತಿದ್ದಾಳೆ. ಇಲ್ಲಿ ನೋಡು, ಈ ಪುಟ್ಟ

ಸೊಸೆ ಬಾಗಿಲು ತೆರೆದ ಈ ಕೋಣೆಯಲ್ಲಿ ಒಬ್ಬಳೇ ಇದ್ದಾಳೆ! ಒಂದು ಪಕ್ಷ ಕಳ್ಳರು ಒಳಗೆ ಬಂದರೆ ನೀನೇನು ಮಾಡಬಲ್ಲೆ? " ವರದರು ಸಿಡಿನುಡಿದರು.

" ನಿಜವಾಗಿಯೂ ಕಳ್ಳನಲ್ಲ ಮಾವನವರೇ! ಕೇವಲ ಒಂದು ಸಾಮಾನ್ಯ ಕನಸಷ್ಟೇ! ಕನಸಿನಿಂದ ಎದ್ದು ನೋಡಿದರೆ, ಬೆಕ್ಕು ಕಾಣಿಸಿತು. " ಉಮಾ ನಸುನಕ್ಕು ನುಡಿದಳು.

ವರದಬಾಬು ಇದಾವುದನ್ನೂ ಒಪ್ಪಲು ತಯಾರಾಗಲಿಲ್ಲ.

" ಸರಿ, ಈಗ ಕಳ್ಳ ಒಳಗೆ ಬಾರದಿದ್ದರೇನಾಯಿತು; ಮನಸ್ಸು ಮಾಡಿದರೆ ಅವನು ಒಳಕ್ಕೆ ನಿರಾಯಾಸವಾಗಿ ನುಸುಳಿ ಬಿಡಬಹುದು· ನಿನ್ನೊಬ್ಬಳನ್ನೇ ಇಲ್ಲಿ ಬಿಟ್ಟು ಹೋಗಿದ್ದಾಳಲ್ಲ ನಿನ್ನ ಅತ್ತೆ! ಎಂಥ ಹೆಂಗಸು ಅವಳು? " ಅವರು ನುಡಿದರು.

" ಬಾಗಿಲು ಹಾಕಿಕೊಂಡು ಮಲಗುತ್ತೇನೆ. ಅತ್ತೆಯವರು ಬಂದಾಗ ಎದ್ದು ತೆರೆಯುತ್ತೇನೆ. ನಾನು ಹೆದರುವುದಿಲ್ಲ, ಬೇಕಾದರೆ ನೋಡಿರಿ. ನೀವೀಗ ನಿಮ್ಮ ಕೋಣೆಗೆ ಹೋಗಬಹುದು. ವ್ಯರ್ಥವಾಗಿ ನಿಮಗೆ ಎಚ್ಚರವನ್ನುಂಟು ಮಾಡಿದೆ. ಬಹಳ ತೊಂದರೆಯಾಯಿತೋ ಏನೋ! " ಉಮಾ ಉತ್ತರವಿತ್ತಳು.

" ಇಲ್ಲ, ಇಲ್ಲ; ಏನೂ ಇಲ್ಲ. ಇಷ್ಟು ಬೇಗ ಮಲಗುವ ಅಭ್ಯಾಸವಿಲ್ಲ ನನಗೆ. ಇದು ನಿನಗೂ ಗೊತ್ತು. "

ಗೋಡೆಯ ಮೇಲಿದ್ದ ಸಣ್ಣ ಚಾರಪಾಯಿಯನ್ನು ಕೆಳಗಿಟ್ಟು ಕೊಂಡು ಕುಳಿತರು ವರದಬಾಬು.

" ನನಗೆ ಸಂಪೂರ್ಣ ಎಚ್ಚರವಿತ್ತು. " ಅವರು ಹೇಳತೊಡಗಿದರು: " ಮೈಯಲ್ಲಿ ಸರಿಯಿದ್ದಿಲ್ಲ; ಆದಕ್ಕಾಗಿ ದೀಪವನ್ನು ಸ್ವಿಚ್‌ಆಫ್‌ಮಾಡಿ ಸುಮ್ಮನೇ ಕಣ್ಣು ಮುಚ್ಚಿಕೊಂಡು ಅಡ್ಡಾಗಿದ್ದೆನಷ್ಟೆ. ಆದರೆ ನನ್ನ ಮೆದುಳಿನ ಆಲೋಚನೆಗಳು ಮಾತ್ರ ಸ್ವಿಚ್‌ಆಫ್ ಆಗಲು ಒಪ್ಪಲಿಲ್ಲ. ನಾನು ವಾದಿಸಲಿರುವ ಖಟ್ಲೆಯೊಂದರ ಸಾಕ್ಷಿಗಳ ಹೇಳಿಕೆಗಳು ನನ್ನ ತಲೆಯಲ್ಲಿ ಚಡಪಡಿಸುತ್ತಲಿದ್ದುವು. ಈ ದಿನ ಸಾಯಂಕಾಲ, ನಾನು ಎಂಥ ವಿಚಿತ್ರ ಖಟ್ಲೆಯಲ್ಲಿ ಭಾಗವಹಿಸಬೇಕಿತ್ತೆಂಬುದನ್ನು ನೀನು ಬಲ್ಲೆಯಾ? ತಡೆ, ಒಂದು ಸಿಗರೇಟು ತರುತ್ತೇನೆ. ಅನಂತರ ಅದರ ಬಗ್ಗೆ ಎಲ್ಲವನ್ನೂ ನಿನಗೆ ಹೇಳುತ್ತೇನೆ. "

ವರದಬಾಬು ಕೋಣೆಯಿಂದ ಹೊರಬಿದ್ದೊಡನೆಯೇ ನೀಲಾದ್ರಿ ಎದ್ದು ಕುಳಿತ ಅವನಿಗೇನೂ ತನ್ನಿ ತೊಲಗಿದಂತೆನಿಸಲಿಲ್ಲ.

" ಇದು ನಿನ್ನ ತಪ್ಪು " ಕೋಪದ ದನಿಯಲ್ಲಿ ಅವನು ನುಡಿದ.

" ನನ್ನದೆ? ಅದು ಹೇಗೆ? " ಉಮಾ ಕಣ್ಣರಳಿಸಿದಳು

" ನಿನ್ನದೇ! ನೀನು ಕಿರುಚಿದ್ದೇಕೆ? "

" ಆಹಾ! ನೀವೇ ಎಂದು ನನಗೆ ಹೇಗೆ ಗೊತ್ತಾಗಬೇಕು? ನಿದ್ದೆಹತ್ತಿದ್ದಿಲ್ಲವೆ ನನಗೆ? "

" ಇಷ್ಟು ಬೇಗ ಏಕೆ ಮಲಗಿದೆ ನೀನು? ನಾನಿದನ್ನು ಒಪ್ಪುವುದಿಲ್ಲ. " ನೀಲಾದ್ರಿ ತಾಳ್ಮೆದಪ್ಪಿ ಕೇಳಿದ.

ಹೆಂಗುಸರ ಕೋಣೆಯಲ್ಲಿ ನುಗ್ಗಿ, ನಿದ್ರಿಸುತ್ತಿರುವವಳ ಮುಖದ ಮೇಲಿನ ಹಚ್ಚಡ ಎಳೆಯುವುದನ್ನು ಮಾತ್ರ ಒಪ್ಪಬಹುದೇನೊ! "

" ನಾನು ಹಾಗೆ ಮಾತಬಾರದಿತ್ತು. ಹೀಗಾಗುತ್ತದೆಂದು ನನಗೆ ಸ್ವಲ್ಪವೂ ಎನ್ನಿಸಿರಲಿಲ್ಲ. " ನೀಲಾದ್ರಿಯ ಸ್ವರ ಭಾರವಾಗಿತ್ತು.

ಅವನು ಕೋಪದಿಂದ ಕೋಣೆಯಿಂದ ಹೊರಬಿದ್ದ; ಆದರೆ ಮತ್ತೆ ಕೂಡಲೇ ಮರಳಿಬಂದ. ವರದಬಾಬು ಹಿಂತಿರುಗಿ ಬರುವ ಹೊತ್ತಾಗಿದ್ದುದರಿಂದ, ಹೊರಹೋಗಲು ಅವನಿಗೆ ಬೇರೆ ಮಾರ್ಗವೇ ಇರಲಿಲ್ಲ. ವರದಬಾಬುವಿನ—ಪೂರ್ತಿ ತೆರೆದ ಬಾಗಿಲ ಕೋಣೆಯಲ್ಲಿ ಬೆಳಕು ಹರಡಿತ್ತು. ಬಾಗಿಲಕಡೆಗೆ ಮುಖ ಮಾಡಿಕೊಂಡು ಅವರು ಕಾಲುಚೀಲ ಹಾಕಿಕೊಳ್ಳುತ್ತಿದ್ದರು. ಅವರವು ಹದ್ದಿನ ಕಣ್ಣುಗಳಿದ್ದಂತೆ. ಒಂದು ನೊಣ ಕೂಡ ಅವರ ಕಣ್ಣುತಪ್ಪಿಸಿ ಹಾರಿ ಹೋಗಲಾರದು.

ನೀಲಾದ್ರಿ ಮತ್ತೊಮ್ಮೆ ನಿಟ್ಟುಸಿರು ಬಿಟ್ಟು, ವ್ಯಸನದ ಧ್ವನಿಯಲ್ಲಿ ನುಡಿದ:—

" ನಾನೇನೂ ನಿನಗೆ ತೊಂದರೆ ಕೊಡುತ್ತಿದ್ದಿಲ್ಲ, ಉಮಾ! ನಿನ್ನನ್ನು ನೋಡಿ ಹೋಗಲು ಬಂದಿದ್ದೆ, ಅಷ್ಟೇ. ಗಲಾಟೆ ಮಾಡದಂತೆ ಮತ್ತೆ ಹಿಂತಿರುಗಿ ಹೋಗಿಬಿಡುತ್ತಿದ್ದೆ. ಅಷ್ಟನ್ನು ಕೂಗಿ ನನ್ನನ್ನೇಕೆ ಇಂತು ಪೇಚಿಗೆ ಕೆಡವಿದೆ ನೀನು? "

ಉಮಾಳಿಗೆ ಸ್ವಲ್ಪವೂ ವ್ಯಸನವಾದಂತೆ ಕಾಣಲಿಲ್ಲ. ಅದು ಒಳ್ಳೆಯ ಮೋಜಿನ ಪ್ರಸಂಗವೇನೋ ಎನ್ನುವಂತೆ, ಅವಳ ತುಟಿಗಳ ಮೇಲೆ ಮೆಲುನಗೆ ಲಾಸ್ಯವಾಡುತ್ತಿತ್ತು. ಕಳೆಯಾಡಿಸುತ್ತಾ ಅವಳು ನುಡಿದಳು:— " ಕೇವಲ ನನ್ನನ್ನು ನೋಡಿ ಹೋಗಲಿಕ್ಕಾಗಿಯೇ ನೀವು ಬಂದಿದ್ದರೆ, ನಾನು ಸತ್ತಿದ್ದೇನೇನೋ ಎನ್ನುವಂತೆ ನಿದ್ರಿಸುತ್ತಿದ್ದೆ ......ನಿಮಗೆ ತೊಂದರೆಯಾಗಿದೆಯೇ? ಸುಳ್ಳು ಹೇಳಬೇಡಿರಿ — ಹಚ್ಚಡಹೊದ್ದುಕೊಂಡು ನೀವು ಬೆಚ್ಚಗೆ ಸುಖವಾಗಿದ್ದೀರಿ. ಇಲ್ಲಿ ನೋಡಿರ, ಚಳಿಯಲ್ಲಿ ನಡುಗುತ್ತಿದ್ದೇನೆ ನಾನು. "

" ಕೆಳಗೆ ಕೋಣೆಯಲ್ಲಿ ಹಚ್ಚಡವಿದ್ದಿಲ್ಲ. ಅದಕ್ಕಾಗಿ ಇಲ್ಲಿಗೆ ಬಂದೆ " ನೀಲಾದ್ರಿ ಹೇಳಿದ.

ಹೆಚ್ಚಿಗೆ ಮಾತನಾಡಲು ಸಮಯವಿರಲಿಲ್ಲ. ಹೊರಗಿನಿಂದ ಬಾಗಿಲು ಹಾಕಿಕೊಂಡು, ಸೊಗಸಾಗಿ ಕುಳಿತು ಹರಟೆಹೊಡೆಯಲು ಸಂಪೂರ್ಣ ತಯಾರಾಗಿ, ಅಲ್ಲಿಗೆ ವರದಬಾಬು ಬರುತ್ತಿದ್ದಾರೆಂಬುದನ್ನು ಅವರ ಕೋಣೆಯ ಕದದ ಸರಪಳಿಯ ಸದ್ದು ಸೂಚಿಸಿತು.

ಉಮಾಳತ್ತ ನೀಲಾದ್ರಿ ನೋಡಿದ. ಅವನ ಕಣ್ಣುಗಳಲ್ಲಿ ಬಲಿಗೆ ತಂದ ಕುರಿಮರಿಯಂತಹ ದೈನ್ಯಭಾವವಿತ್ತು.

" ನನಗೋಸ್ಕರವಾಗಿ ದಯೆಮಾಡಿ ಹರಟೆಯನ್ನು ಸ್ವಲ್ಪದರಲ್ಲಿಯೇ ಮುಗಿಸು ಇಲ್ಲದಿದ್ದಲ್ಲಿ ಈ ಬಂಧನದಂತಹ ಹಚ್ಚಡದಲ್ಲಿ ಸಿಕ್ಕಿಕೊಂಡು, ಉಸಿರುಗಟ್ಟಿ ಸತ್ತುಹೋಗುತ್ತೇನೆ ನೋಡು! " ಅವನು ನುಡಿದ

ವರದಬಾಬು ಒಳಗೆ ಬಂದರು ನೀಲಾದ್ರಿ ಹಚ್ಚಡದ ಅಡಿಯಲ್ಲಿ ಅದೃಶ್ಯನಾದ. ಆ ಮುದುಕಮಹಾಶಯ ತಮಗೆ ಬರಲು ತಡವಾದದ್ದಕ್ಕೆ ಕಾರಣವನ್ನು ವಿವರಿಸತೊಡಗಿದರು:—

" ಸಿಗರೇಟೇನೋ ಸಿಕ್ಕಿತು. ಬೆಂಕಿಪೆಟ್ಟಿಗೆ ಮಾತ್ರ ಸಿಗಲಿಲ್ಲ. ಸ್ವಲ್ಪ ಚಳಿ ಎನಿಸಿತು. ಅದಕ್ಕಾಗಿ ಬೆಚ್ಚನೆಯ ಉಡುಪು ಹಾಕಿಕೊಳ್ಳುವಷ್ಟಕ್ಕೆ ಸ್ವಲ್ಪ ತಡವಾಯಿತು........ಹೆದರಿಕೆ ಎನಿಸಲಿಲ್ಲವಷ್ಟೆ ? "

ಉಮಾ ಅಲಕ್ಷ್ಯಭಾವವನ್ನು ತಳೆದು ನುಡಿದಳು :—

" ಇಲ್ಲ ಇಲ್ಲ; ಏತಕ್ಕಾಗಿ ಹೆದರಬೇಕು ನಾನು ? ದಯೆಯಿಟ್ಟು ತಾವು ಹಿಂತಿರುಗಿ ಹೋಗಿ ಮಲಗಲು ಯತ್ನಿಸಿರಿ ! ಯಾವುದಕ್ಕೂ ನಾನು ಹೆದರುವಂತಿಲ್ಲ. "

ಇದಾವುದೂ ವರದ ಬಾಬುವಿನ ಕಿವಿಯಲ್ಲಿ ನಾಟಲಿಲ್ಲ. ಚಿಕ್ಕ ಹೊರಸಿನ ಮೇಲೆ ಸ್ವಸ್ಥವಾಗಿ ಕುಳಿತುಬಿಟ್ಟರು. ಉಮಾ ಮುಂಬಾಗಿ ಮಂಚದ ಮೇಲೆ ಕುಳಿತಳು

" ಚಳಿಯಾಗುತ್ತಿದೆಯೇ ಮಗು ನಿನಗೆ ? " ಮುದುಕ ಮಹಾಶಯ ಕೇಳಿದರು.

" ಆ ಹಚ್ಚಡವನ್ನಾದರೂ ಹೊದ್ದುಕೊಂಡು ಬಿಡು ಅದನ್ನೇಕೆ ಹಾಗೆ ದುಂಡಗೆ ಮಾಡಿ ತಲೆದಿಂಬಿನ ಮೇಲಿರಿಸಿರುವಿ. " ಅವರು ಮತ್ತೆ ನುಡಿದರು

" ಅದು ಬಹಳ ಬೆಚ್ಚಗಿದೆ. " ಉಮಾ ಹೇಳಿದಳು.

" ಏನು ? ಬೆಚ್ಚಗಿದೆ ! ಹೀಗೆಂದರೇನರ್ಥ ? ಈ ಎಲ್ಲಾ ಬೆಚ್ಚಗಿನವುಗಳನ್ನು ಸುತ್ತಿಕೊಂಡಿದ್ದರೂ, ನಾನಿನ್ನೂ ನಡುಗುತ್ತಿದ್ದೇನೆ. ಖಂಡಿತವಾಗಿಯೂ ನಾನು ಬಲ್ಲೆ—ನಿನಗೆ ಚಳಿಯಾಗುತ್ತಿದೆ; ಆದರೆ ಅದನ್ನು ತಿಳಿದುಕೊಳ್ಳಲು ನಿನಗಾಗುತ್ತಿಲ್ಲವಷ್ಟೇ ! "

ವರದಬಾಬು ಮೇಲೇಳುವುದರಲ್ಲಿದ್ದರು. ಆದರೆ ಅವರು ಹಾಗೆ ಮಾಡುವುದರೊಳಗಾಗಿಯೇ ಉಮಾ ಚಟಕ್ಕನೇ ಮಂಚದಿಂದ ಎದ್ದು ಅವರ ಪಾದಗಳ ಬಳಿ ನೆಲದ ಮೇಲೆ ಕುಳಿತುಬಿಟ್ಟಳು.

ವರದಬಾಬು ಅತ್ಯಂತ ಗೊಂದಲದ ಸ್ವಭಾವದವರು. ಮರುಕ್ಷಣದಲ್ಲಿಯೇ ಅವರೇನು ಮಾಡುತ್ತಾರೆಂದು ಯಾರಿಗೂ ಖಚಿತವಾಗಿ ಹೇಳಲು ಸಾಧ್ಯವಿಲ್ಲ ತಾವೇ ಸ್ವತಃ ಆ ಹಚ್ಚಡವನ್ನು ಎತ್ತಿ ತೆಗೆದುಕೊಳ್ಳಲು ಆಲೋಚಿಸುತ್ತಿದ್ದರೂ ಇರಬಹುದು.

" ನನಗೆ ಚಳಿಯೇ ಆಗುತ್ತಿಲ್ಲ. ಆಗಲೆ ವಿನಾಕಾರಣವಾಗಿ ಹೆದರಿದ್ದರಿಂದ ನಡುಗುತ್ತಿದ್ದೆನಷ್ಟೆ; ಈಗ ಅದೂ ನಿಂತಿದೆ. ಕಣ್ಣು ಮುಚ್ಚಿಕೊಂಡರೆ, ಈಗಲೂ ಹುಲಿಯಂತಹ ಆ ಕ್ರೂರ—ವಿಶಾಲ—ಕಣ್ಣುಗಳ ಬೆಳಕು ನನಗೆ ಕಾಣುತ್ತಿದೆ ... ಸರಿ, ಮಾವನವರೇ, ಅದೆಲ್ಲವನ್ನೂ ಮರೆತುಬಿಡುವಂತೆ ಈ ದಿನ ನೀವು ವಾದಿಸಿದ ಖಟ್ಲೆಯ ಬಗ್ಗೆ ದಯೆಮಾಡಿ ಹೇಳಿರಿ. "

ಈ ಉಪಾಯವು ಮನೆಯಲ್ಲಿಯ ಚಿಕ್ಕಮಕ್ಕಳಿಗೆ ಕೂಡ ಗೊತ್ತಿತ್ತು. ಯಾವುದಾದರೊಂದು ಆಸಕ್ತಿಯುತ ಖಟ್ಲೆಯ ವಿಷಯವನ್ನು ಯಾರಾದರೂ ತೆಗೆದರೆ ಸಾಕು; ಮಿಕ್ಕದಾವುದನ್ನೂ ವರದ ಬಾಬು ಮರೆತು ಬಿಡುತ್ತಿದ್ದರು.

ಅವರು ಪ್ರಾರಂಭಿಸಿದರು :—

" ಹೆಚ್ಚಿಗೆ ಹೇಳುವಂತಹದೇನೂ ಇಲ್ಲ ಮಗು ! ಒಂದು ಸಾಧಾರಣ ಕಳವಿನ ಕೇಸಷ್ಟೇ. ಅಪರಾಧಿಯ ಪರವಾಗಿ ಹಣ ತೆಗೆದುಕೊಳ್ಳದೆ ವಾದಮಾಡಲು ಸ್ವಯಂ ಸ್ಫೂರ್ತಿಯಿಂದ ನಾನು ಒಪ್ಪಿಕೊಂಡೆ. "

ಅವರ ಮನಸ್ಸು ಕೆರಳಿತು :—

" ಈ ಪಾಯಿಂಟಿನ ಬಗ್ಗೆ ಕಾನೂನು ಏನು ಹೇಳುತ್ತದೆ ಎನ್ನುವುದು ಮುಖ್ಯವಲ್ಲ. ಅಪರಾಧಿ ಮಾಡಿರುವ ಕೃತಿಯಲ್ಲಿ ಅಪರಾಧದಂತಹದೇನೂ ಇಲ್ಲವೆಂದು ನಾನು ಒತ್ತಿ ಹೇಳುವೆ. ಇಲ್ಲಿ ನೋಡು, ಕಾಜಿನ ಭರಣಿಯಲ್ಲಿ ಒಂದು ತಟ್ಟೆಯಷ್ಟು ರಸಗುಲ್ಲಾ ಇತ್ತು. ಈ ಮನುಷ್ಯ ಮೂರು ದಿನಗಳಿಂದಲೂ ಹಸಿವೆಯಿಂದ ಬಳಲುತ್ತಿದ್ದ. ಸಹಜವಾಗಿಯೇ, ಭರಣಿಯನ್ನು ಒಡೆಯದಿರಲು ಅವನಿಗೆ ಸಾಧ್ಯವಾಗಲಿಲ್ಲ. ಆ ರೀತಿಮಾಡಿ, ಎರಡು ರಸಗುಲ್ಲಾಗಳನ್ನು ಬಾಯಿಯೊಳಕ್ಕೆ ಎಸೆದುಕೊಳ್ಳುತ್ತಿರುವಷ್ಟರಲ್ಲಿಯೇ, ಅವುಗಳನ್ನು ಕಸಿದುಕೊಂಡು ಅವನನ್ನು ಪೋಲೀಸರಿಗೆ ಒಪ್ಪಿಸಿದ್ದಾರೆ. "

" ಹಾಗಾದರೆ ಇದೊಂದು ಕಳವಿನ ಕೇಸೆನ್ನಿ. "

" ಇರಬಹುದು. ಆದರೆ ಹೊಟ್ಟೆ ಹಸಿದಾಗ ಆಹಾರವು ಸಿಕ್ಕುವಂತಿದ್ದರೆ ದೇವತೆಗಳೂ ಸುಮ್ಮನಿರಲಾರರು ಇದನ್ನೇ ನಾನು ನೇರವಾಗಿ ನ್ಯಾಯಾಧೀಶರಿಗೆ ಹೇಳಿಬಿಟ್ಟೆ—ನಾನೇ ಆಗಿದ್ದರೆ— "

" —ಏನು ಮಾಡುತ್ತಿದ್ದಿರಿ ? "

" ಇಡೀ ರಸಗುಲ್ಲಾದ ಡಬ್ಬಿಯನ್ನೇ ಅವನಿಗೆ ಕೊಟ್ಟುಬಿಡುತ್ತಿದ್ದೆ. ಪಾಪ ! ಬಡವ ! ಯಾರೇ ಆಗಲಿ, ಹೊಟ್ಟೆಯನ್ನು ಭರತಿ ಮಾಡಿಕೊಳ್ಳಲು ಅವನನ್ನೇಕೆ ಬಿಡಬಾರದು ? ಬಡವರ ಬಗ್ಗೆ ಅಂಗಡಿಕಾರರೇಕೆ ಇಷ್ಟೊಂದು ಕಠಿಣವಾಗಿ ವರ್ತಿಸುತ್ತಿದ್ದಾರೋ ನನಗರ್ಥವಾಗಲೊಲ್ಲದು. " ವರದರು ಉತ್ತರಿಸಿದರು.

" ಎಲ್ಲರಲ್ಲಿಯೂ ನಿಮ್ಮ ಬಂಗಾರದಂತಹ ಹೃದಯ ಅಪೇಕ್ಷಿಸಬಾರದು ! " ಉಮಾ ಮುಗುಳ್ನಗುತ್ತಾ ನುಡಿದಳು.

ಹಚ್ಚಡದ ಒಳಗಡೆ ನೀಲಾದ್ರಿ ಬೆವೆಯುತ್ತಿದ್ದ. ಹೀಗೆ ಉಸಿರುಗಟ್ಟಿ ಒಳಗೊಳಗೇ ಸಾಯುತ್ತಿರುವ ತನ್ನ ಮಗನ ಬಗ್ಗೆ ಲೆಕ್ಕಿಸದಿರುವ ಮನುಷ್ಯನಿಗೆ ಏನೆನ್ನಬೇಕು !

ಏನೇ ಆಗಲಿ, ಸಂಭಾಷಣೆ ಮತ್ತೆ ಮುಂದುವರಿಯುವ ಪ್ರಗತಿಯನ್ನು ಸಾಧಿಸಲಿಲ್ಲ. ನೀಲಾದ್ರಿಯ ತಾಯಿ, ಸೌದಾಮಿನಿ, ಬೇಗ ಮನೆಗೆ ಮರಳಿಬಂದಳು.

ವರದಬಾಬು ನಕ್ಕರು:

" ಸರಿ,— ಅಂತೂ ಕೊನೆಗೊಮ್ಮೆ ನನ್ನ ಒಲವಿನ ಸತೀಮಣಿ ಹಿಂತಿರುಗಿ ಬಂದು ಬಿಟ್ಟಳಲ್ಲ ! ಹಾಗಾದರೆ ಮನ ಸೆರೆ ಹಿಡಿಯುವ ಆ ಸಂಗೀತ ಮುಗಿಯಿತೆನ್ನು; ಅಲ್ಲವೆ ? "

" ಏಕೆ ? ನನ್ನ ಹೋಗುವಿಕೆ, ಯಾರಿಗಾದರೂ ತೊಂದರೆಯನ್ನು ಉಂಟು ಮಾಡಿತೆ ? " ಸೌದಾಮಿನಿ ಕೇಳಿದಳು.

" ಪಾಪ, ನಿನ್ನ ಈ ಸೊಸೆಯನ್ನು ನೋಡು; ಅವಳೊಬ್ಬಳೇ ಇದ್ದಾಳೆ. ಯಾರಾದರೂ ಒಬ್ಬರು ಅವಳೊಂದಿಗೆ ಜೊತೆಗಿರಬೇಕೆಂದು

ನಿನಗೆನಿಸುವುದಿಲ್ಲವೆ ?"

ಸೌದಾಮಿನಿ ನಸುನಗುತ್ತಾ ಉಮೆಯತ್ತ ನೋಡಿದಳು. ಅನಂತರ ವರದಬಾಬುವಿನ ಹತ್ತಿರ ಬಂದು ನುಡಿದಳು :—

"ಹೇಗೂ ಮಗ ಮನೆಯಲ್ಲಿಯೇ ಇದ್ದಾನಲ್ಲ? ಇಂತಹ ರಾತ್ರಿಯ ಸಮಯದಲ್ಲಿ ಇವಳ ಜೊತೆಗೆ ಬೇರೆಯವರಿರಬೇಕೆಂದು ನಿರೀಕ್ಷಿಸಲು ಸಾಧ್ಯವೆ ?"

ವರದಬಾಬು ಹುಬ್ಬು ಗಂಟಿಕ್ಕಿದರು. ಈ ಪುಟ್ಟ ಸೊಸೆಯನ್ನು ಕಾಯುವ ಕ್ಷುಲ್ಲಕ ಕಾರ್ಯಕ್ಕಾಗಿ ನನ್ನ ಮಗ ತನ್ನ ಅಭ್ಯಾಸವನ್ನು ಅಲಕ್ಷಿಸಿ ಹಾಳುಮಾಡಿಕೊಳ್ಳಬೇಕೆ ? ಅವನ ಪರೀಕ್ಷೆ ಸಮೀಪಿಸಿದೆ; ಓದಲಿಕ್ಕೆಷ್ಟೋ ಇದೆ! ಅವನು ಕಿಮ್ಮತ್ತಿಲ್ಲದ ಹರಟೆಖೋರನೆಂದು ಭಾವಿಸಬೇಡ! ನನ್ನ ಮಗ ಅವನು!"

ಸೌದಾಮಿನಿ ನಕ್ಕಳು.

"ಸರಿ ಮಗನಿಂದ ಸಾಧ್ಯವಿಲ್ಲದಿದ್ದಲ್ಲಿ ಮಗನ ತಂದೆಯಿಂದ ಸಾಧ್ಯವಿದೆಯೆನ್ನಿ: ಹೀಗೆ ಮಾಡಿದರೆ ಸೂಕ್ತವೂ ಆದೀತು...... ಅದೇನೇ ಇರಲಿ, ನೀವು ಹೋಗಬಹುದು. ನೀಲೂ ಮೇಲೆ ಬರಲು ಇನ್ನೂ ಸಮಯವೇನೋ! ಅಷ್ಟರಲ್ಲಿಯೇ ಒಂದು ಜೊಂಪು ನಿದ್ರೆ ಮಾಡೋಣ!"

ವರದಬಾಬು ಹೋದೊಡನೆಯೇ ಸೌದಾಮಿನಿ ಮಂಚದ ಕಡೆಗೆ ನೋಡಿದಳು. ಹಚ್ಚಡದ ಒಳಗಿರುವ ಅಸಹಜವಾದ ದೊಡ್ಡ ಕುಪ್ಪೆಯು ಅವಳಿಗೆ ಆಶ್ಚರ್ಯವನ್ನುಂಟು ಮಾಡಿತು.

"ಎಂತಹ ನಿಷ್ಪ್ರಯೋಜಕ ಆಳನ್ನಿಟ್ಟುಕೊಂಡಿದ್ದೇವಲ್ಲ ನಾವು, ಅವನೇ ಹೀಗೆ ಮಾಡಿದ್ದಾನೆಯೆ ? ನಿನಗೆ ಅದು ಬಹಳ ದೊಡ್ಡ ತಲೆದಿಂಬಾಗುತ್ತದೆ. ಇಡೀ ಹಾಸಿಗೆಯನ್ನೇ ಅದು ಆಕ್ರಮಿಸಿರುವಾಗ ನಾವು ಮಲಗುವುದೆಲ್ಲಿ ?" ಅವಳು ಗಟ್ಟಿಯಾಗಿ ನುಡಿದಳು

ಉಮಾ ಅವಸರದಿಂದ ಹೇಳಿದಳು:

"ಅದರ ಬಗ್ಗೆ ತಾವೇನೂ ಚಿಂತಿಸಬೇಡಿರಿ ಅತ್ತೆಯವರೇ, ನಾನಿಲ್ಲಿ ಬಹಳ ಆರಾಮವಾಗಿ ಮಲಗುತ್ತಿದ್ದೇನೆ. ನನಗೇನೂ ತೊಂದರೆ ಎನಿಸುತ್ತಿಲ್ಲ."

ಸೌದಾಮಿನಿಯೇನೂ ಅವಳ ಮಾತನ್ನು ಕೇಳಲಿಲ್ಲ.

"ತಡೆ, ಇದನ್ನು ತೆಗೆದುಕೊಂಡು ಹೋಗಿ ಅಲ್ಲಿಟ್ಟು ಸಣ್ಣ ತಲೆದಿಂಬನ್ನು ತರುತ್ತೇನೆ."

ಅವಳ ಹತ್ತಿರ ಹೋದಕೂಡಲೆ ತಲೆದಿಂಬು ಎದ್ದು ಕುಳಿತಿತು.

"ನೀನು ? ನೀಲು !"

ನೀಲಾದ್ರಿ ಕಣ್ಣೀರು ಸುರಿಸುವುದರಲ್ಲಿದ್ದ. ಆದರೆ ಒಸರುತ್ತಿರುವಂತೆಯೇ ಕೂಡಲೇ ಅವು ಆವಿಯಾಗಿ ಹೋದುವು ಸಿಡಿಲು ಬಡಿದವನಂತೆ ಅವನು ನಿಂತ.

ವರದಬಾಬು ಸಿಗರೇಟಿನ ಪೆಟ್ಟಿಗೆಯನ್ನು ಬಿಟ್ಟು ಹೋಗಿದ್ದರು. ಅದನ್ನೊಯ್ಯಲು ಅವರೀಗ ಮರಳಿಬಂದರು. ತಮ್ಮ ಮಗನನ್ನು ಅಲ್ಲಿ ಕಂಡೊಡನೆಯೇ ಅವರ ಹುಬ್ಬುಗಳು ಗಂಟಿಕ್ಕಿ ಹಣೆ ನೆರಿಗೆಗಟ್ಟಿತು.

"ಇಲ್ಲೇನು ಮಾಡುತ್ತಿರುವೆ ? ಓದುವುದು ಮುಗಿಯಿತೆ ? ಈಗೆಷ್ಟು ಗಂಟೆ ?" ಅವರು ಕೇಳಿದರು.

ನೀಲಾದ್ರಿ ನಿದ್ರೆಯ ದನಿಯನ್ನು ಅಳವಡಿಸಿಕೊಂಡು, ಆಕಳಿಸಿ ನುಡಿದ:— "ಹನ್ನೆರಡರ ಮೇಲಾಗಿದೆ ......"

"ಖಂಡಿತ ಆಗಿಲ್ಲ. ಇದೀಗ ಕೇವಲ ಹನ್ನೊಂದು ಹೊಡೆದು ಏಳು ನಿಮಿಷವಾಗಿದೆಯಷ್ಟೆ! ಅದರ ಮೇಲೆ ಒಂದು ಸೆಕಂಡೂ ಜಾಸ್ತಿಯಾಗಿಲ್ಲ ನೀನು ಓದುವ ಸಮಯದಲ್ಲಿ ಗಡಿಯಾರ ಯಾವಾಗಲೂ ಪಂದ್ಯದ ಕುದುರೆಗಿಂತಲೂ ವೇಗವಾಗಿ ಓಡುತ್ತದೆ. ನಡೆ, ಕೆಳಗಡೆ ಹೋಗಿ ಓದಿಕೋ!"

ಸೌದಾಮಿನಿ ಹೋಗುವವನನ್ನು ತಡೆದಳು.

"ಬೇಡ. ಅವನು ಹೋಗುವ ಆವಶ್ಯಕತೆಯಿಲ್ಲ ಕೆಳಗಡೆ ಬಹಳ ಸೊಳ್ಳೆಗಳಿವೆ. ಅವನಿಗೆ ಮಲೇರಿಯಾ ಅಂಟಲು ಬಿಡಲಾರೆ. ಏನಾದರೂ ಓದುವುದಿದ್ದಲ್ಲಿ ಇಲ್ಲಿಯೇ ಓದಲಿ!"

"ಸೊಳ್ಳೆಗಳು ? ನನಗೊಂದೂ ಕಾಣುವುದಿಲ್ಲವಲ್ಲ! ನಿನ್ನ ಮಗನನ್ನೇದಾರೂ ಬೆಣ್ಣೆಯ ಗೊಂಬೆಯನ್ನು ಮಾಡಬೇಕೆಂದಿರುವಿಯೇನು ? ನಾನೇ ಎದ್ದು ಕುಳಿತುಕೊಂಡು ಎಷ್ಟೋ ಕೆಲಸ ಮಾಡುತ್ತಿದ್ದೇನೆ; ಸೊಳ್ಳೆಗಳೇನೂ ನನಗೆ ತೊಂದರೆ ಕೊಡುತ್ತಲಿಲ್ಲ." ಕುಪಿತರಾಗಿದ್ದ ತಂದೆ ಕಿರುಚಿದರು.

ನೀಲಾದ್ರಿ ದೈನ್ಯದ ನೋಟದಿಂದ ತನ್ನ ತಾಯಿಯನು ನೋಡಿ ನುಡಿದ:— "ಸೊಳ್ಳೆಗಳು ರಾತ್ರಿ ಮಾತ್ರ ಹೊರಬರುತ್ತವೆ."

ಮಣಿಯಲಾರದ ಪಿತೃಮಹಾಶಯ ಹೇಳಿದರು:—

"ಹಾಗಾದರೆ ನನ್ನ ಕೋಣೆಗೆ ಬಂದು ಓದು. ಹನ್ನೆರಡಾಗಲು ಇನ್ನೂ ಐವತ್ತುಮೂರು ನಿಮಿಷಗಳಿವೆ. 'ಚೀಟಿಂಗ್ ಚಾಪ್ಟರ್' ಮುಗಿಸಿದೆಯಾ ?....ಇಲ್ಲವೆಂದು ಕಾಣುತ್ತದೆ ನೀನು ಎಲ್ಲಾದರೊಂದು ಕಡೆಗೆ ಗಟ್ಟಿಯಾಗಿ ಕುಳಿತರೆ, ನಾನು ಸಹಾಯ ಮಾಡೇನು ಹಾಗೆ ಮಾಡಿದರೆ ನಿನಗೂ ಅನುಕೂಲವಾಗುತ್ತದೆ; ಅಲ್ಲವೆ ?"

ವರದಬಾಬು ಚುಚ್ಚುನೋಟದಿಂದ ಮಗನತ್ತ ನೋಡಿದರು. ನೀಲಾದ್ರಿ ಅಸಹಾಯಕನಾಗಿದ್ದ. ತಲೆ ಹಾಕುತ್ತಾ ಅವನು ನುಡಿದ:— "ಸರಿ....ಹೌದು....ನನಗೂ ಹಾಗೇ ಎನ್ನಿಸುತ್ತದೆ ......"

ತಾಯಿ ಅವನ ರಕ್ಷಣೆಗೆ ಬಂದಳು;

"ನನಗೇನೂ ಅದು ಅನುಕೂಲವೆನಿಸುವುದಿಲ್ಲ. ಅವನು ಈಗ ಓದಲು ಕುಳಿತರೆ, ದೀಪವಂತೂ ಉರಿಯಲೇ ಬೇಕು ತಾನೆ? ಇದರಿಂದ ನನಗೆ ರವೆಯಷ್ಟು ಕೂಡಾ ನಿದ್ರೆ ಬರಲಾರದು. ದೀಪದ ಬೆಳಕಿದ್ದರೆ ನನಗೆ ನಿದ್ರೆ ಬರುವುದಿಲ್ಲವೆಂಬುದನ್ನು ನೀವು ಬಲ್ಲಿರಿ." ಅವಳು ಹೇಳಿದಳು

"ಹಾಗಾದರೆ ನೀನು ಈ ಕೋಣೆಯಲ್ಲಿಯೇ ಮಲಗಿಬಿಡು. ಓದುವುದು ಮುಗಿದಮೇಲೆ ಅವನಿಲ್ಲಿಗೆ ಬರುತ್ತಾನೆ ಅನಂತರ ನೀನು ಬರುವೆಯಂತೆ" ವೃದ್ಧಮಹಾಶಯ ಹೇಳಿದರು.

ಅವ್ವ ತಲೆಯಾಡಿಸಿದಳು

"ಏಕೆ ?" ಕೋಪಗೊಂಡಿದ್ದ ತಂದೆ ಕಿರುಚಿದ.

“ ನನ್ನ ಆರೋಗ್ಯ ಕೆಡುತ್ತಿದೆ. ಅರ್ಧನಿದ್ರೆಯನ್ನು ಇಲ್ಲಿ ಮಾಡಿ ಮತ್ತೆ ಇನ್ನರ್ಧ ನಿದ್ರೆಗೆ ಬೇರೆ ಕಡೆಗೆ ಓಡಲಾರೆ. ಈ ರಾತ್ರಿ ನಿಮ್ಮ ಮಗ ಇಷ್ಟಕ್ಕೇ ಓದುವುದನ್ನು ಮುಗಿಸಿದರೇನೂ ಸಾಮ್ರಾಜ್ಯ ಸೂರೆ ಹೋಗುವುದಿಲ್ಲ. ”

ತೊಂದರೆ, ನಿಜ ! ವರದಬಾಬು ತಲೆಯಾಡಿಸಿದರು ಈಗೇನು ಮಾಡಬೇಕೆಂದು ಅವರು ಆಲೋಚಿಸತೊಡಗಿದರು ಒಂದು ಒಳ್ಳೆಯ ಉಪಾಯ ಹೊಳೆಯಿತು

“ ಹಾಗೇ ಆಗಲಿ ಉಮಾಳನ್ನೇ ನಮ್ಮ ಕೋಣೆಗೆ ಕರೆದು-ಕೊಂಡು ಹೋಗೋಣ. ನೀಲೂನ ಅಭ್ಯಾಸ ಮುಗಿವವರೆಗೆ ಅವಳು ಅಲ್ಲಿರಲಿ. ಹನ್ನೆರಡಾದನಂತರ ಮತ್ತೆ ಇಲ್ಲಿಗೆ ಬರಲಿ ”

“ ಅದೂ ಸರಿಹೋಗುವುದಿಲ್ಲ ನಿಮ್ಮೊಡನೆ ಮಾತನಾಡುವುದಿದೆ. ಅವಳು ಎದುರಿಗಿದ್ದರೆ ಸರಿ ಬರುವುದಿಲ್ಲ. ” ಸೌದಾಮಿನಿ ನುಡಿದಳು.

ವರದಬಾಬು ತಾಳ್ಮೆದಪ್ಪಿದರು. “ ಏನು ಮಾಡೋಣ ಅವಳೊಬ್ಬಳನ್ನೇ ಇಲ್ಲಿ ಬಿಟ್ಟು ಹೋಗಲು ನಮಗೆ ಸಾಧ್ಯವಿಲ್ಲ ”

“ ನೀಲೂನನ್ನೇ ಕೇಳಿರಿ. ಅವನಿಗಿಷ್ಟವಿದ್ದರೆ— ” ಸೌದಾಮಿನಿ ಪ್ರಾರಂಭಿಸಿದಳು

ಖಂಡಿತ ಸಾಧ್ಯವಿಲ್ಲ. ಅವನ ಲಾ ಪರೀಕ್ಷೆ ಬಹಳ ಸಮೀಪಿಸಿದೆ. ಮೂರ್ಖ ಹೆಂಗಸರು ! ಪರೀಕ್ಷೆಯ ಪ್ರಾಮುಖ್ಯತೆಯನ್ನು, ಅದರಲ್ಲಿಯೂ ಪಿನಲ್ ಕೋಡನ್ನು ತನ್ನ ಮಗ ಬಾಯಿಪಾಠ ಮಾಡಬೇಕಾಗಿದೆ ಯೆಂಬುದನ್ನು ಈಕೆ ಅರಿಯಲಾರಳು !—ವರದಬಾಬು ತಮ್ಮ ಹೆಂಡ-ತಿಯ ಅಜ್ಞಾನಕ್ಕಾಗಿ ಮರುಕಪಟ್ಟರು.

ತಲೆಯಾಡಿಸುತ್ತ ಅವರು ಹೇಳಿದರು :

“ ಹಾಗೆ ಮಾಡೆಂದು ನಾನು ಅವನಿಗೆ ಹೇಳಲಾರೆ ಇಷ್ಟು ಬೇಗ ಅವನು ತನ್ನ ಪುಸ್ತಕಗಳನ್ನು ಬದಿಗಿರಿಸಿ, ಓದುವುದನ್ನು ಮುಗಿಸಿ ಮಲಗಿಬಿಡಬೇಕೆ ? ಸ್ವಲ್ಪವಾದರೂ ಬುದ್ಧಿ ಇರಬೇಕು ! ”

“ ಏನು ನಿಮ್ಮ ಬುದ್ಧಿಯೊ !” ಸೌದಾಮಿನಿ ವ್ಯಂಗ್ಯವಾಗಿ ಚುಚ್ಚು ನುಡಿದಳು. ಅವಳು ಮತ್ತೆ ತನ್ನ ಮಗನಿಗೆ ಹೇಳಿದಳು :— “ ಮಗು, ಈ ಕೋಣೆಯಲ್ಲಿಯೇ ನೀನು ಈ ರಾತ್ರಿ ಓದು. ಉಮಾ ತೊಂದರೆ-ಯನ್ನೇನೂ ಕೊಡುವುದಿಲ್ಲವೆಂದುಕೊಳ್ಳುತ್ತೇನೆ ಅವಳು ಸುಮ್ಮನೆ ಮಲಗುತ್ತಾಳೆ. ನಿನಗೇನಾದರೂ ಅನನುಕೂಲವಾಗುತ್ತದೆಯೇ ? ”

ಮಗನಿಗೆ ಬಹಳ ಸಂತೋಷವಾಯಿತು. ಅನನುಕೂಲವೇನೂ ಆಗುವುದಿಲ್ಲವೆಂದು ಒಪ್ಪಿಕೊಂಡುಬಿಟ್ಟ.

ಆದರೆ ವರದಬಾಬುವಿಗೆ ಅನುಮಾನ !

“ ನಿನಗೆ ಖಾತ್ರಿಯಿದೆಯೆ ? ” ಅವರು ಕೇಳಿದರು.

“ ಹೌದು ” ನೀಲಾದ್ರಿ ಉತ್ತರವಿತ್ತ.

“ ನಿನಗೆ ಅನನುಕೂಲವಾಗುವುದಿಲ್ಲವೆಂದು ಹೇಗೆ ಹೇಳುವಿ ? ”

ತಮ್ಮ ಮಗ ಪ್ರತಿಭಟಿಸಲು ನಾಚುತ್ತಿರುವನೆಂದು ಅವರು ಭಾವಿಸಿದರು. ಆದರೆ ಇದು ಕಡ್ಡಾಯ ಮಾಡುವಂತಹ ವಿಷಯವಲ್ಲ-ವೆಂದು ಅವರು ಹೇಗೋ ತಿಳಿದುಕೊಂಡರು.

ಮೌನವಾಗಿ ಕೋಣೆಯಿಂದ ಹೊರಬೀಳುವ ಮುನ್ನ ಅವರು ಬಾಗಿಲಲ್ಲಿ ನಿಂತು, ಹಿಂತಿರುಗಿ ಮತ್ತೆ ಹೇಳಿದರು : —

“ ಆ ಕಡೆಯ ಕೋಣೆಯಲ್ಲಿರುವ ನನಗೆ ಕೇಳುವಂತೆ ನೀನು ಗಟ್ಟಿಯಾಗಿ ಓದತಕ್ಕದ್ದು. ಅದು ಏಕಾಗ್ರಚಿತ್ತತೆಗೆ ಕೂಡ ಅನುಕೂಲವಾಗುತ್ತದೆ, ಗೊತ್ತೇ ? ‘ ಚೀಟಿಂಗ್ ’ನ ‘ ಸೆಕ್ಷನ್ ’ ಬಗ್ಗೆ ಸಹ ನೀನು ಸರ್ವಸಿದ್ಧನಾಗಿರತಕ್ಕದ್ದು ನಾಳೆ ಆ ವಿಷಯದಲ್ಲಿ ಒಂದೆರಡು ಪ್ರಶ್ನೆಗಳನ್ನು ಕೇಳಿದರೂ ಕೇಳಬಹುದು ನಾನು ! ”

ತಮ್ಮ ಪತಿ ಸೌದಾಮಿನಿಯೊಂದಿಗೆ ಅವರು ಕೋಣೆಗೆ ಮರಳಿ-ದರು. ನೀಲಾದ್ರಿ ಕದ ಮುಚ್ಚಿ ಒಳಚಿಲಕ ಹಾಕಿದ. ಉಮಾ ಆಗಲೇ ಕಣ್ಣು ಮುಚ್ಚಿಕೊಂಡು ಹಾಸಿಗೆಯಲ್ಲಿ ಮಲಗಿದ್ದಳು.

‘ ಉಮಾ ! ”

ಉತ್ತರವಿಲ್ಲ.

“ ಉಮಾರಾಣೀ ! ”

“ ಹೂಂ ? ”

ನೀಲಾದ್ರಿ ಬಂದು ಅವಳ ಪಕ್ಕದಲ್ಲಿ ಕುಳಿತ.

“ ಚಿನ್ನಾ, ಕಣ್ಣು ತೆರೆದು ನೋಡು, ಎಂತಹ ಮೋಹಕ ರಾತ್ರಿ ! ಒಮ್ಮೆಯಾದರೂ ಕಣ್ಣು ತೆರೆದು ನೋಡಬಾರದೇ ? ” ನುಡಿದ ಅವನು

“ ಹೌದು. ಮೋಹಕವಾಗಿದೆಯಲ್ಲ ! ” ಅವಳು ತೂಕಡಿ-ಸುತ್ತಾ ಹೇಳಿದಳು.

“ ಏನು ? ”

“ ಇಂತಹ ರಾತ್ರಿ ! ”

“ ಆದರೆ ನಿನ್ನ ಮುಖ ಈ ಕಡೆ ತಿರುಗಿದೆ. ಕಣ್ಣುಗಳು ಮುಚ್ಚಿವೆ. ತೆರೆದ ಕಿಟಕಿ ಆ ಕಡೆ ಪಕ್ಕಕ್ಕಿದೆ. ನಿಜವಾಗಿಯೂ ನಿನಗೇನಾದರೂ ಕಾಣುತ್ತಿದೆಯೆ ? ” ನೀಲಾದ್ರಿ ಕೇಳಿದ.

ಉಮಾ ಕಣ್ಣು ತೆರೆದು ತನ್ನ ಗಂಡನ ಕಾತರ ಮುಖದೊಳಕ್ಕೆ ಹಣಿಕಿ ನೋಡಿ ಮುಸಿ ಮುಸಿ ನಗುತ್ತಾ ಹೇಳಿದಳು :— “ ಕತ್ತಲಲ್ಲಿ, ಬಾಗಿಲು ಹಾಕಲ್ಪಟ್ಟ ಈ ಕೋಣೆ ಅತ್ಯಂತ ಮೋಹಕವಾಗಿದೆ. ”

“ ನಿದ್ರೆ ಮಾಡುವಷ್ಟು ಚೆನ್ನಾಗಿದೆ. ಅಲ್ಲವೆ ? ”

“ ಸರಿ. ನಿದ್ರಿಸುತ್ತಿರುವ ಸುಂದರಿಯನ್ನು ನೀವು ಮೆಚ್ಚುವು-ದಿಲ್ಲವೆಂದಾಯಿತು. ಪಾಠಗಳನ್ನು ಕಲಿಯಬೇಕಾಗಿರುವುದರಿಂದ ನೀವು ಮಲಗುವಂತಿಲ್ಲ. ಅದಕ್ಕಾಗಿಯೇ ನಿದ್ರೆಯ ಸುಖವನ್ನು ಅನುಭವಿಸು-ವವರನ್ನು ಕಂಡು ನೀವು ಹೊಟ್ಟೆಕಿಚ್ಚುಪಡುತ್ತಿರುವಂತೆ ತೋರು-ತ್ತದೆ ” ಉಮಾ ಹೇಳಿದಳು.

“ ಇಂತಹ ರಾತ್ರಿಯಲ್ಲಿ ಕೂಡ ಈ ರೀತಿ ನಿದ್ರಿಸುವುದು ಮಹಾ ಅಪರಾಧ. ” ನೀಲಾದ್ರಿ ನುಡಿದ.

“ ನಿಮ್ಮ ‘ ಪಿನಲ್ ಕೋಡ್ ’ ಈ ರೀತಿ ಹೇಳುತ್ತಿದೆಯೆ ? ” ಉಮಾ ಅರಿಯದ ಮುಗ್ಧತನವನ್ನು ತಂದುಕೊಂಡು ಕೇಳಿದಳು.

“ ಹೌದು. ಶಿಕ್ಷೆ ಏನೆಂದು ಗೊತ್ತೇ ನಿನಗೆ ? ”

ಉಮಾ ಚಟಕ್ಕನೆ ಎದ್ದು ಕುಳಿತು ನುಡಿದಳು :—

“ ಅಯ್ಯೋ, ಇಲ್ಲ. ಈಗ ಅದನ್ನು ಹೇಳಲೇಬೇಡಿರಿ; ನಾಳೆ

ನಿನಗೆನಿಸುವುದಿಲ್ಲವೆ ?"

ಸೌದಾಮಿನಿ ನಸುನಗುತ್ತಾ ಉಮೆಯತ್ತ ನೋಡಿದಳು. ಅನಂತರ ವರದಬಾಬುವಿನ ಹತ್ತಿರ ಬಂದು ನುಡಿದಳು :—

"ಹೇಗೂ ಮಗ ಮನೆಯಲ್ಲಿಯೇ ಇದ್ದಾನಲ್ಲ? ಇಂತಹ ರಾತ್ರಿಯ ಸಮಯದಲ್ಲಿ ಇವಳ ಜೊತೆಗೆ ಬೇರೆಯವರು ಬೇಕೆಂದು ನಿರೀಕ್ಷಿಸಲು ಸಾಧ್ಯವೆ ?"

ವರದಬಾಬು ಹುಬ್ಬು ಗಂಟಿಕ್ಕಿದರು. "ಈ ಪುಟ್ಟ ಹೊಸ ಮನೆಯನ್ನು ಕಾಯುವ ಕ್ಷುಲ್ಲಕ ಕಾರ್ಯಕ್ಕಾಗಿ ನನ್ನ ಮಗ ತನ್ನ ಅಭ್ಯಾಸವನ್ನು ಅಲಕ್ಷಿಸಿ ಹಾಳುಮಾಡಿಕೊಳ್ಳಬೇಕೆ? ಅವನ ಪರೀಕ್ಷೆ ಸಮೀಪಿಸಿದೆ; ಓದಲಿಕ್ಕೆಷ್ಟೋ ಇದೆ! ಅವನು ಕಿವಿಮಾತ್ತಿಲ್ಲದ ಹಂಟಮೋರನೆಂದು ಭಾವಿಸಬೇಡ! ನನ್ನ ಮಗ ಅವನು!"

ಸೌದಾಮಿನಿ ನಕ್ಕಳು.

"ಸರಿ ಮಗನಿಂದ ಸಾಧ್ಯವಿಲ್ಲದಿದ್ದಲ್ಲಿ ಮಗನ ತಂದೆಯಿಂದ ಸಾಧ್ಯವಿದೆಯಲ್ಲವೆ? ಹೀಗೆ ಮಾತಿನ ಸೂಳ್ನೂ ಆಡೀತು...... ಆದ್ದರಿಂದ ಇರಲಿ, ನೀವು ಹೋಗಬಹುದು. ನೀವೂ ಮೋಟರು ಬರಲು ಇನ್ನೂ ಸಮಯವೇನೋ! ಅಷ್ಟರಲ್ಲಿಯೇ ಒಂದು ಕೋಂಪು ನಿದ್ರೆ ಮಾಡ್ತೋಣ!"

ವರದಬಾಬು ಹೋದೊಡನೆಯೇ ಸೌದಾಮಿನಿ ಮಂಚದ ಕಡೆಗೆ ನೋಡಿದಳು. ಬೆಚ್ಚಗಿದ್ದ ಹೊಗರುವ [illegible] ದೊಡ್ಡ [illegible] ಆವಳಿಗೆ ಅಚ್ಚರಿಯನ್ನುಂಟು ಮಾಡಿತು.

"ಎಂತಹ ನಿಷ್ಪ್ರಯೋಜಕ ಆಳನ್ನಿಟ್ಟುಕೊಂಡಿದ್ದೇವಲ್ಲ [illegible] ಆವನೇ ಹೀಗೆ ಮಾಡಿದ್ದಾನೆಯೆ? ನಿನಗೆ ಅದು ಬಹಳ [illegible] ಬಂಬಾಗುತ್ತದೆ. ಇದೇ ಹಾಸಿಗೆಯನ್ನೇ ಆದು [illegible] ಮಲಗುವುದಲ್ಲ ?" ಆವಳು ಗಟ್ಟಿಯಾಗಿ ನುಡಿದಳು.

ಉಮಾ ಅವಸರದಿಂದ ಹೇಳಿದಳು:

"ಅದರ ಬಗ್ಗೆ [illegible] ನಾನಿಲ್ಲಿ ಬರೋ [illegible] ಮಲಗುತ್ತಿದ್ದೇನೆ. ನನಗೇನೂ [illegible] ಎನಿಸುತ್ತಿಲ್ಲ."

ಸೌದಾಮಿನಿಯು ಆವಳ ಮಾತನ್ನು ಕೇಳಲಿಲ್ಲ.

"ಇದೆ, ಇದನ್ನು ತೆಗೆದುಕೊಂಡು [illegible] ಹಾಸಿಕೊಳ್ಳುತ್ತೇನೆ."

[illegible]

[illegible]

[illegible]

ವರದಬಾಬು [illegible]

[illegible]

ಕೇಳಿಸಿಕೊಂಡ [illegible] ಅತನು ಕೇಳಿದನು

ನೀಲಾದ್ರಿ ಇದ್ದ [illegible] [illegible]

ನುಡಿದ:— "[illegible] ..."

"[illegible] ಆಗಿಲ್ಲ [illegible] ನಿಮಿಷವಾಗಿದೆಯಷ್ಟೆ! [illegible] ಜಾಸ್ತಿಯಾಗಿಲ್ಲ ನೀನು ಓದುವ ಸಮಯದಲ್ಲಿ [illegible] ಗಳೂ [illegible] ವೇಗವಾಗಿ ಓಡುತ್ತವೆ. [illegible] ಕೆಳಗಡೆ ಹೋಗಿ ಓದಿಕೋ!"

ಸೌದಾಮಿನಿ ಹೋಗುವವನನ್ನು ತಡೆದಳು.

"ಬೇಡ. ಅವನು ಹೋಗುವ ಅವಶ್ಯಕತೆಯಿಲ್ಲ. [illegible] ಬಹಳ ಸೊಳ್ಳೆಗಳಿವೆ. ಅವನಿಗೆ ಮಲೇರಿಯಾ ಅಂಟಲು ಬಿಡಲಾರೆ. ಏನಾದರೂ ಓದುವುದಿದ್ದರೆ ಇಲ್ಲಿಯೇ ಓದಲಿ!"

"ಸೊಳ್ಳೆಗಳು? ನನಗೊಂದೂ ಕಾಣುವುದಿಲ್ಲವಲ್ಲ! [illegible] ಮಗನಿಗೆ ಯಾರೂ ಬೆಣ್ಣೆಯ ಗೊಂಬೆಯನ್ನು ಮಾಡಬೇಕೆಂದಿದ್ದೀಯೇನು? ನಾನೇ ಎದ್ದು ಕುಳಿತುಕೊಂಡು ಎಷ್ಟೋ [illegible] ಮಾಡುತ್ತಿದ್ದೇನೆ. ಸೊಳ್ಳೆಗಳೇನೂ ನನಗೆ ತೊಂದರೆ ಕೊಡುತ್ತಿಲ್ಲ" [illegible]ರಾಗಿದ್ದ ತಂದೆ ಗುಡುಗಿದರು.

ನೀಲಾದ್ರಿ ವ್ಯಸ್ತನ ನೋಟದಿಂದ ತನ್ನ ತಾಯಿಯನ್ನು ನೋಡಿ ನುಡಿದ:— "ಸೊಳ್ಳೆಗಳು ರಾತ್ರಿ ಮಾತ್ರ ಹೊರಬರುತ್ತವೆ."

[illegible] ಎಕ್ಕ ಮಹಾಶಯರು ಹೇಳಿದರು:—

"ಹಾಗಾದರೆ ನನ್ನ [illegible] ಬಂದು ಓದು. [illegible] ಇನ್ನು ಹತ್ತು ನಿಮಿಷಗಳಿವೆ. [illegible] [illegible] ನೀನು ಎಲ್ಲಿಯವರೆಗೂ [illegible] ಗಟ್ಟಿಯಾಗಿ ಓದಿದರೆ, ನಾನು ಸಹಾಯ ಮಾಡೇನು [illegible] ಅನುಕೂಲವಾಗುತ್ತದೆ; ಅಲ್ಲವೆ ?"

[illegible] ಮಗನತ್ತ ನೋಡಿದ: [illegible] ತಲೆ [illegible] ಅವನು ನುಡಿದ: "[illegible] ನನಗೂ ಹಾಗೇ ಎನ್ನಿಸುತ್ತದೆ. ..."

[illegible]

"[illegible] ಎನಿಸುವುದಿಲ್ಲ [illegible]

[illegible] ಉರಿಯುತ್ತಿದೆ [illegible]

[illegible] ನಿದ್ರೆ ಬರಲಾರದು. [illegible]

[illegible]

[illegible]

[illegible]

[illegible] ಬರುತ್ತಾನೆ [illegible]

[illegible] ಹೇಳಿದರು.

[illegible]

[illegible] ಹೋದಳು.

"ನನ್ನ ಆರೋಗ್ಯ ಕೆಡುತ್ತಿದೆ. [illegible] ಮಾಡಿ ನಂತ್ರ ಇನ್ನರ್ಧ ವಿದ್ಯೆಗೆ [illegible] ನಿಮ್ಮ ಮಗ ಇನ್ನರ್ಧ [illegible] ನಡೆ ಹೋಗುವುದಿಲ್ಲ."

ಹೌದಂದರೆ, ನಿಜ! ವರದಬಾಬು [illegible] ಮಾಡಬೇಕೆಂದು ಅವರು ಆಲೋಚಿಸತೊಡಗಿದರು [illegible] ಉಪಾಯ ಹೊಳೆಯಿತು.

"ಹಾಗೇ ಆಗಲಿ [illegible] ಕೊಂಡು ಹೋಗೋಣ. [illegible] ಅಲ್ಲಿಗಲಿ. ಹನ್ನೆರಡಾದನಂತರ ನತ್ತೆ ಇಲ್ಲಿಗೆ ಬರಲಿ."

"ಅದೂ ಸರಿಹೋಗುವುದಿಲ್ಲ. [illegible]"

ವರದಬಾಬು [illegible] "[illegible] ಅಲ್ಲಿ [illegible]"

"[illegible]"

[illegible] ಮಹಾ [illegible] ತನ್ನ ಮಗ [illegible] ಯೆಂಬುದನ್ನು ಆಕೆ ಅರಿಯಬಾರದು [illegible] ತಿಯ ಅಜ್ಞಾನದಿಂದಾಗಿ [illegible]

ತಲೆಯಾಡಿಸುತ್ತ ಅವರು ಹೇಳಿದರು:

"ಹಾಗೆ ಮಾಡೆಂದು [illegible] ಬೇಗ ಅವನ ತನ್ನ ಪುಸ್ತಕಗಳನ್ನು [illegible]"

"[illegible] ನಿಮ್ಮ ಬುದ್ಧಿಯೋ! [illegible]"

[illegible]

[illegible]

ಅದರೆ ವರದಬಾಬು [illegible]

"[illegible]"

[illegible]

'[illegible]'

[illegible]

"[illegible]!"

[illegible]

[illegible]

ನಿಮ್ಮ ತಂದೆಯವರು ನಿಮ್ಮ ಪಾಠಗಳ ಬಗ್ಗೆ ಕೇಳಿದಾಗ, ಅದೆಲ್ಲವನ್ನೂ ಹೇಳುವಿರಂತೆ!"

ನೀಲಾದ್ರಿ ಅವಳಿಗೆ ಸೂಕ್ತ ಉತ್ತರವನ್ನು ಕೊಡುವ ಮುನ್ನವೇ ಯಾರೋ ಬಾಗಿಲನ್ನು ತಟ್ಟಿದರು.

"ನೀಲೂ ......! ನೀಲೂ.......!!"

ವರದಬಾಬು ಕೂಗಿದ್ದು.

ನೀಲಾದ್ರಿ ಮೇಜಿನತ್ತ ಓಡಿದ. ನ್ಯಾಯತಃ ಓದುತ್ತಾ ಕುಳಿತುಕೊಳ್ಳಬೇಕಾಗಿದ್ದ ಸಮಯದಲ್ಲಿ, ಹಾಗೆ ಮಾಡದೆ, ಹೆಂಡತಿಯ ಕಿವಿಯಲ್ಲಿ ಇಂತು ತಾನು ಗುಣುಗುಟ್ಟುತ್ತಿರುವಾಗ ಸಿಕ್ಕಿ ಬೀಳಲು ಅವನಿಗೆ ಮನಸ್ಸಿರಲಿಲ್ಲ.

ಅವನು ಬೆಪ್ಪಾಗಿನಿಂತ. ಪುಸ್ತಕಗಳನ್ನು ಕೆಳಗಡೆ ಬಿಟ್ಟು ಬಂದಿದ್ದ. ಅಲ್ಲಿ ಇಲ್ಲಿ ಹುಡುಕಿದರೂ ಅವನ ಕೈಯಳತೆಯಲ್ಲಿ ಒಂದಾದರೂ ಚಿಕ್ಕ ಪುಸ್ತಕ ಸಿಗಲಿಲ್ಲ. ಕೊನೆಗೆ ಸಿಕ್ಕಿದ ಪುಸ್ತಕವೆಂದರೆ ಅವನ ತಾಯಿಯ ಪುರಾತನದ್ದಾದ ಹರಕು ಮಹಾಭಾರತ. ಮೇಜಿನಮೇಲೆ ಅದನ್ನು ತೆಗೆದಿಟ್ಟುಕೊಂಡು, ಪಿನಲ್‌ಕೋಡಿನಿಂದ ಕಂಠಪಾಠ ಹಾಕಿದ್ದ ಯಾವುದೋ ಭಾಗದಲ್ಲಿ ನೆನಪಿದ್ದಷ್ಟನ್ನು, ಅವನು ಸಾಧ್ಯವಾದಷ್ಟು ಗಟ್ಟಿಯಾಗಿ ಓದಲಾರಂಭಿಸಿದ.

ಈ ಮಧ್ಯೆ ವರದಬಾಬು ಶಕ್ಯವಿದ್ದಷ್ಟು ಗಟ್ಟಿಯಾಗಿ ಕೂಗುತ್ತಾ ಬಾಗಿಲನ್ನು ಗುದ್ದುತ್ತಲೇ ಇದ್ದರು.

ಓದಿನಲ್ಲಿ ಮಗ್ನನಾಗಿದ್ದ ವಿದ್ಯಾರ್ಥಿ ಎದ್ದ. ಧ್ಯಾನಪರವಾದ ನೋಟವನ್ನು ಕಣ್ಣಿನಲ್ಲಿ ತುಂಬಿಕೊಂಡು ಬಂದು ಬಾಗಿಲನ್ನು ತೆರೆದ.

ವರದಬಾಬುವಿಗೆ ಬಹಳ ಸಂತೋಷವಾದಂತೆ ಕಾಣಿಸಿತು. ಅವನು ಓದುತ್ತಿರುವುದನ್ನು ಸ್ಪಷ್ಟವಾಗಿ ಅವರು ಕೇಳಿದ್ದರು. ನೆಟ್ಟಗೆ ಮಂಚದತ್ತ ನಡೆದರು. ಉಮಾ ಕಣ್ಣುಮುಚ್ಚಿಕೊಂಡು ಸೋಗಿನ ನಿದ್ರೆಯಿಂದ ಮಲಗಿದ್ದಳು.

"ಉಮಾ, ನಿದ್ರಿಸುತ್ತಿರುವೆಯಾ? ಖಾತ್ರಿಮಾಡಿಕೊಳ್ಳಲಿಕ್ಕಾಗಿಯೇ ಇಲ್ಲಿಗೆ ಬಂದಿದ್ದೆ." ಅವರು ನುಡಿದರು.

ಮಲಗಿದವಳು ಎಂತು ಮಾತನಾಡಬಲ್ಲಳು? ಆದ್ದರಿಂದಲೇ ಉಮಾಳಿಂದ ಉತ್ತರ ಬರಲಿಲ್ಲ. ಅವರು ಸಮಾಧಾನಗೊಂಡು ಮಗನತ್ತ ತಿರುಗಿದರು.

"ಕತ್ತೆಯಂತೆ ಏಕೆ ಒದರುತ್ತಿರುವಿ? ಕಿವಿಗೆ ಯಮಯಾತನೆಯಾಗುವಷ್ಟು ಗಲಾಟೆ ಮಾಡುವುದೆ? ನಿನ್ನ ಕೂಗು ಉಮಾಳ ನಿದ್ರೆ ಕೆಡಿಸಲಾರದೇ? ಅದಕ್ಕೆ ಏನಾದರೂ ಉಪಾಯಮಾಡೋಣವೆಂದು ಒಳಗೆ ಬಂದೆ." ಅವರು ಹೇಳಿದರು.

ನೀಲಾದ್ರಿ ತಲೆ ಕೆರೆದುಕೊಳ್ಳುತ್ತಾ ಉತ್ತರ ಕೊಟ್ಟ:—

"ಮೌನವಾಗಿ ಓದುವುದೇ ಒಳಿತೆಂದುಕೊಳ್ಳುತ್ತೇನೆ......"

"ಖಂಡಿತವಾಗಿಯೂ ಬೇಡ! ಪ್ರತಿಯೊಂದನ್ನೂ ನೀನು ಬಾಯಿಪಾಠ ಮಾಡಬೇಕಾಗಿದೆ. ಆದರೆ ಅದೆಲ್ಲವನ್ನೂ ನೀನು ಮೌನವಾಗಿ ಓದಿಕೊಂಡು ಮಾಡಲಾರೆ. ಉಮಾ ಈಗಾಗಲೇ ಗಾಢವಾಗಿ ನಿದ್ರಿಸುತ್ತಿದ್ದಾಳೆ. ನೀನು ಮಾಡುತ್ತಿರುವ ಗಲಾಟೆ ಇನ್ನಾರಿಗೂ ತೊಂದರೆಕೊಡುವುದಿಲ್ಲ. ಮೊದಲಿನಂತೆಯೇ ಓದನ್ನು ಮುಂದುವರಿಸು ಆದರೆ ಎಚ್ಚರಿಕೆಯಿಂದಿರು; ಯಾವ ವಿಧದಿಂದಲೂ ಅವಳಿಗೆ ತೊಂದರೆಯಾಗಬಾರದು ನೋಡು!" ವರದಬಾಬು ತಲೆ ಹಾಕುತ್ತಾ ಹೇಳಿದರು.

"ನಿಜವಾಗಿಯೂ ಇಲ್ಲ. ಈಗಲೇ ಬೇಕಾದರೆ ನೋಡಿರಿ; ಅವಳು ಭಾರೀ ನಿದ್ರೆಯಲ್ಲಿದ್ದಾಳೆ." ನೀಲಾದ್ರಿ ಅವಸರದಿಂದ ಉತ್ತರಕೊಟ್ಟ.

"ಹೌದು. ಆದರೆ ಯಾವ ಕ್ಷಣದಲ್ಲಿಯೂ ಅವಳಿಗೆ ಎಚ್ಚರವಾಗಬಹುದು. ನಿನ್ನನ್ನು ನಾನು ನಂಬಲಾರೆ; ಸ್ವಲ್ಪ ಹೊತ್ತು ಬಿಟ್ಟು ಮತ್ತೆ ಬರುತ್ತೇನೆ ಎಲ್ಲವೂ ಸರಿ ಇದೆ ಏನೋ ಎಂದು ನೋಡುತ್ತೇನೆ." ವರದಬಾಬು ಹೇಳಿದರು.

ನೀಲಾದ್ರಿಗೆ ಕೋಪ ಉಕ್ಕೇರಿತು. ಆದರೆ ಅದನ್ನು ತೋರಗೊಡಲಿಲ್ಲ ಅವನು ಶಾಂತವಾಗಿಯೇ ಉತ್ತರಕೊಟ್ಟ:—"ಹೊರಗೆ ಬಹಳ ಚಳಿ ಇದೆ. ನೀವೇಕೆ ಇಷ್ಟೆಲ್ಲಾ ತೊಂದರೆ ತೆಗೆದುಕೊಳ್ಳುತ್ತೀರೀ?"

ಈ ಮಾತು ಮುದುಕನಿಗೆ ಕ್ರೋಧವನ್ನು ಕೆರಳಿಸಿತು:— "ಅದು ನನಗೆ ಸಂಬಂಧಿಸಿದ್ದು; ನಿನಗಲ್ಲ! ನನಗೆ ಸ್ವಂತ ಮಗಳಿಲ್ಲ. ಉಮಾಳೇ ನನ್ನ ಸ್ವಂತ ಮಗಳಂತಿದ್ದಾಳೆ ಅವಳಿಗಾಗಿ ನಾನು ತೊಂದರೆ ತೆಗೆದುಕೊಂಡರೆ, ನಿನ್ನ ಮುದ್ದು ಹೃದಯದಲ್ಲಿ ಹೊಟ್ಟೆಕಿಚ್ಚನ್ನು ಪಟ್ಟುಕೊಳ್ಳಬೇಡ!"

"ಸರಿ. ನಾನು ಈ ರೀತಿ ಪದೇ ಪದೇ ಏಳುವುದು — ಬಾಗಿಲು ತೆರೆಯುವುದು ಮಾಡಿದರೆ, ಚಿತ್ತವಿಟ್ಟು ಓದುವುದೆಂತೋ ನನಗೆ ಕಾಣಲೊಲ್ಲದು." ಅವನು ವಿಶದೀಕರಿಸಲು ತವಕಿಸಿದ.

ಕೋಣೆಯ ಕಿಟಕಿಗಳೆಲ್ಲಾ ಮುಚ್ಚಿರುವುದು ವರದಬಾಬುವಿನ ಕಣ್ಣಿಗೆ ಬಿತ್ತು.

ಗರ್ಭಾಶಯದ ದೋಷಗಳನ್ನು ನಿವಾರಿಸಲು ಅತ್ಯುತ್ತಮವಾದ ಸಿದ್ಧೌಷಧ
ಜೀವನಿ
ದಿ ಸದ್ವೈದ್ಯಶಾಲಾ ಲಿ., ನಂಜನಗೂಡು
ಬ್ರಾಂಚುಗಳು: ಬೆಂಗಳೂರು, ಮೈಸೂರು, ಮಂಗಳೂರು, ಹುಬ್ಬಳ್ಳಿ
ಯಾವಾಗಲೂ ನಂಜನಗೂಡು ಟೂತ್ ಪೌಡರ್ ಉಪಯೋಗಿಸಿರಿ

“ಅಯ್ಯೋ ದೇವರೇ! ಕೋಣೆಯು ‘ಕಲ್ಕತ್ತೆಯ ಕತ್ತಲ ಕೋಣೆ’ಯಾಗಿದೆಯಲ್ಲ! ಅದಕ್ಕಾಗಿಯೇ ನೀನು ಓದುತ್ತಿರುವುದು ನನ್ನ ಕೋಣೆಗೆ ಕೇಳಿಸಲಿಲ್ಲ. ಪ್ರತಿ ಸಲವೂ ನಾನು ಬಂದಾಗಲೆಲ್ಲಾ ನೀನು ಬಾಗಿಲು ತೆರೆಯುವುದು ಅನಾವಶ್ಯಕ. ಕಿಟಕಿಗಳನ್ನು ತೆರೆದಿಡು; ಹೊರಗಿನಿಂದಲೇ ಬಂದು ಇಣುಕಿ ನೋಡುತ್ತೇನೆ.”

ಉಮಾ ಮಂಚದ ಮೇಲೆ ನಿಶ್ಶಬ್ದವಾಗಿದ್ದಳು. ಅವಳ ಮುಖದ ಮೇಲೆ ಮುಗ್ಧವಾದ ನಿದ್ರೆಯ ಭಾವವಿತ್ತು; ಆದರೆ ಅವಳೇನೂ ನಿಜವಾಗಿ ಮಲಗಿರಲಿಲ್ಲ. ನಿಲಾದ್ರಿಯೂ ಅದನ್ನು ಸಂಪೂರ್ಣ ಬಲ್ಲ. ಅವಳ ತುಟಿಗಳ ಮೇಲಿನ ಚೆಲ್ಲಾಟದ ಮೆಲುನಗೆಯ ಮಿನುಗು ಮತ್ತು ರೆಪ್ಪೆಗಳ ನಸುಕಂಪನಗಳು ಕೂಡ ಅವನಿಗೆ ಕಾಣುತ್ತಿದ್ದುವು. ಆದರೂ ಅವಳು ನಿಶ್ಶಬ್ದವಾಗಿರಬೇಕಿತ್ತು. ನೀಲಾದ್ರಿ ಅವಳ ಹತ್ತಿರ ಹೋಗಿ ಕುಳಿತು ಮಾತನಾಡುವಂತಿಲ್ಲ. ಸೂಜಿಬಿದ್ದ ಶಬ್ದವನ್ನು ಕೂಡ ಕೇಳುವಷ್ಟು ವರದಬಾಬುವಿನ ಕಿವಿಗಳು ದಕ್ಷವಾಗಿದ್ದುವು. ಯಾವ ಕ್ಷಣದಲ್ಲಿಯಾದರೂ ಅವರು ಕಿಟಕಿಯ ಹತ್ತಿರ ಪ್ರತ್ಯಕ್ಷರಾಗಿ, “ಕಳವಿನ ಅಧ್ಯಾಯವನ್ನು ಮುಗಿಸಿದೆಯಾ?” ಎಂದು ಕೇಳಬಲ್ಲರು.

ನೀಲಾದ್ರಿ ನಿಶ್ಶಬ್ದವಾಗಿ ಕೆಳಗೆ ಹೋಗಿ ‘ಪಿನಲ್‌ಕೋಡ್’ ಪುಸ್ತಕ ತಂದ. ಅನಂತರ ಮೇಜನ್ನು ಮಂಚದ ಹತ್ತಿರಕ್ಕೆ ಎಳೆದು ಕೊಂಡು ಉಮಾಳ ಕಿವಿಯ ಹರಿಯೊಳಕ್ಕೆ ಹೇಕರಿಸಲಾರಂಭಿಸಿದ. ಅವನ ಈ ಓದುವಿಕೆಯು ಪ್ರಬಲವಾದ ಎತ್ತರದ ದನಿಯಲ್ಲಿ ಮುಂದುವರಿಯಿತು. ತನ್ನ ಸುಂದರವಾದ ಪುಟ್ಟಕೈಗಳಿಂದ ಉಮಾ ಕಿವಿ ಮುಚ್ಚಿಕೊಂಡಳು. ನೀಲಾದ್ರಿ ಮತ್ತಷ್ಟು ಉತ್ಸಾಹಗೊಂಡು ಧ್ವನಿಯನ್ನು ತಾರಸ್ವರಕ್ಕೇರಿಸಿದ.

ಅಂತೂ ಕೊನೆಗೆ ಸೌದಾಮಿನಿ ಕಿಟಕಿಯ ಹತ್ತಿರ ಪ್ರತ್ಯಕ್ಷಳಾಗಿ ಕೂಗಿದಳು:—“ನೀನು ಈಗೇನು ಮಾಡುತ್ತಿದ್ದೀ ಎಂದು ಕೊಂಡಿರುವಿ ನೀಲೂ? ಈ ಮನೆಯಲ್ಲಿ ಯಾರನ್ನೂ ಮಲಗಗೊಡುವುದಿಲ್ಲ!”

ನೀಲಾದ್ರಿ ಕಣ್ಣೆತ್ತಿನೋಡಿ ಕುಂಯಿಗುಟ್ಟಿದ:— “ಆದರೆ ಅಪ್ಪ ಹೇಳಿದ್ದಾರೆ—ನಾನು.........”

“ಎಂಥ ಹುಚ್ಚುತನ! ದೇವರಾಣೆಯಿದೆ ನಿನಗೆ! ನಿನ್ನ ಪಿಶಾಚಿಯ ಕೂಗನ್ನು ನಿಲ್ಲಿಸು. ನೀನು ಕಿರುಚುತ್ತಿರುವ ಈ ರೀತಿ ಸತ್ತ ಮನುಷ್ಯನನ್ನೂ ಸಹ ಎಬ್ಬಿಸಿಬಿಡುತ್ತದೆ.”

ವರದಬಾಬು ಆಗಲೇ ಸೌದಾಮಿನಿಯ ಹಿಂದೆ ಬಂದು ನಿಂತು ಬಿಟ್ಟಿದ್ದರು. ಅವರ ಕೋಪ ಕೆರಳಿತು:—

“ಅವನ ಪರೀಕ್ಷೆ ಸಮೀಪಿಸಿರುವುದರ ಪರಿಜ್ಞಾನವಿಲ್ಲವೆ ನಿನಗೆ? ಆಗಲಿ. ನೀಲೂ, ಈಗ ನೀನು ಮೌನವಾಗಿಯೇ ಓದಿಕೋ. ‘ಕಳ್ಳ-ತನದ ಅಧ್ಯಾಯ’ದಲ್ಲಿ ಎಷ್ಟು ಓದಿರುವಿ?”

“ಸಂಪೂರ್ಣ ತಯಾರಾಗಿದ್ದೇನೆ.” ನೀಲಾದ್ರಿ ಉತ್ತರವಿತ್ತ.

“ಅದಿರಲಿ. ಕಿಟಕಿಗಳನ್ನೇಕೆ ತೆರೆದಿರುವಿ? ಈ ಬೆಳಕು ನನ್ನ

ದಿ ನ್ಯಾಶನಲ್ ಮ್ಯುಜಿಕಲ್ ಹಾಲ್
ಧಾರವಾಡ

ಗಡಿಯಾರ, ಚಾಳೀಸು, ರೇಡಿಯೊ, ಗ್ರಾಮೊಫೋನ್ ಮಾರಾಟಮಾಡುವವರು, ರಿಪೇರಿ ಮಾಡುವವರು.

ನಂಬುಗೆಯ ಮಾಲು! ಪ್ರಾಮಾಣಿಕ ವ್ಯವಹಾರ

ಧಾರವಾಡದಲ್ಲಿ ಹಲವು ವರ್ಷಗಳಿಂದ ನಮ್ಮ ವ್ಯವಹಾರ ನಡೆದಿದ್ದು, ಗ್ರಾಹಕರ ವಿಶ್ವಾಸಾದರಗಳನ್ನು ಗಳಿಸಿದೆ.

ಮಾಲಕರು: ಬಿ. ಜೆ. ಮುತ್ತಗಿ

ನಿದ್ರೆಯನ್ನು ಕೆಡಿಸುತ್ತಲಿದೆ.” ಸೌದಾಮಿನಿ ಕೇಳಿದಳು.

“ಅಪ್ಪ ಹೇಳುತ್ತಾರೆ........” ನೀಲಾದ್ರಿ ಕೃತಜ್ಞತೆಯಿಂದ ಹೇಳಲಾರಂಭಿಸಿದ.

ವರದಬಾಬುವಿಗೆ ಈಗ ಏನೋ ಸ್ವಲ್ಪ ಸಂತೋಷವಾದಂತೆ ಎನಿಸಿತು. ತಾವು ಔದಾರ್ಯ ತೋರಬಹುದೆಂದು ಅವರು ಭಾವಿಸಿ ನುಡಿದರು:—

“ಹಾಗೇ ಆಗಲಿ. ಕಿಟಕಿಗಳನ್ನು ಮುಚ್ಚಿಕೊಳ್ಳಬಹುದು. ಇವಳಿಗೆ ಇತ್ತಿತ್ತಲಾಗಿ ಮೈಯಲ್ಲಿ ಸರಿಯಿಲ್ಲ.”

ಈ ಬಗ್ಗೆ ಕಾತರರಾಗಿದ್ದವರೆಲ್ಲರಿಗೂ ಸಮಾಧಾನವಾಗುವಂತೆ ಕಿಟಕಿಗಳನ್ನು ತ್ವರಿತಗತಿಯಲ್ಲಿ ಮುಚ್ಚಲಾಯಿತು.

ಕಿಟಕಿಗಳ ದಡಲ್ ಎಂಬ ಶಬ್ದದೊಂದಿಗೆ ಕೊನೆಯ ಕದವನ್ನು ಮುಚ್ಚಲಾದೊಡನೆಯೇ, ವರದಬಾಬುವಿಗೆ ಸಂತೋಷವನ್ನು ಅಡಗಿ-ಸಿಟ್ಟುಕೊಳ್ಳಲಾಗಲಿಲ್ಲ. ಅವರು ನಕ್ಕು ಕೈಯಾಡಿಸುತ್ತಾ ಅಭಿನಯದೊಂದಿಗೆ ತಮ್ಮ ಹೆಂಡತಿಗೆ ಹೇಳಿದರು:—

“ಏ ನೋಡಿದೆಯೇನೇ, ನನ್ನ ಮಗ ತನ್ನ ಓದಿನಲ್ಲಿ ಎಷ್ಟು ಆಸಕ್ತಿಯಿಂದಿದ್ದಾನೆ! ಒಮ್ಮೆ ಪರೀಕ್ಷೆಯಲ್ಲಿ ಫೇಲಾಗಿದ್ದಕ್ಕಾಗಿಯೇ ಅವನೀಗ ಚಿತ್ತವಿಟ್ಟು ಗಂಭೀರವಾಗಿ ಅಭ್ಯಾಸ ನಡೆಸಿದ್ದಾನೆ. ಅದಿರಲಿ, ಆಗಲೇ ಹನ್ನೆರಡಾಗಿ ಬಹಳ ಹೊತ್ತಾಗಿದೆ, ಗೊತ್ತೋ? ಈ ಹುಡುಗನಿಗೆ ಇದರ ಪರಿವೆ ಕೂಡಾ ಇಲ್ಲ. ನಿಜ ಹೇಳಬೇಕೆಂದರೆ, ಅದರಲ್ಲಿಯೂ ನಾನು ನಿಮಿಷದ ಮುಳ್ಳನ್ನು ಹದಿನೈದು ನಿಮಿಷ ಹಿಂದಿರುಗಿಸಿದ್ದೇನೆ. ನನ್ನನ್ನು ನಂಬು—ಈ ಸಲದ ಕೊನೆಯ ಲಾ ಪರೀಕ್ಷೆಯಲ್ಲಿ ನಮ್ಮ ಹುಡುಗ ಖಂಡಿತವಾಗಿಯೂ ಪಾಸಾ-ಗುತ್ತಾನೆ........”

ಪಂಪಭಾರತದಲ್ಲಿಯ ಕೆಲವು ಸಮಸ್ಯೆಗಳು

ಶ್ರೀ. ನೇಂ. ಬಿ. ಲೋಕಾಪೂರ ಬಿ. ಎ, ಬಿ ಟಿ., ಡಿ. ಬಿ. ಇ. ಹುಬ್ಬಳ್ಳಿ.

卐

ವ್ಯಾಸರ ಭಾರತದಲ್ಲಿ ಕೃಷ್ಣನಿಗೆ ಪ್ರಾಮುಖ್ಯ ದೈವತದ ಸ್ಥಾನವಿದೆ. ಆದರೆ ಪಂಪಭಾರತದಲ್ಲಿ ಆತನಿಗೆ ಅಂತಹ ಸ್ಥಾನವಿಲ್ಲ. ಅಲ್ಲಲ್ಲಿ ಶಿವಪಾರಮ್ಯದ ಹೇಳಿಕೆಗಳೂ ಶಿವಸ್ತುತಿಗಳೂ ಬರುತ್ತವೆ. ಹೀಗಾಗಲು ಏನು ಕಾರಣವಿರಬಹುದು ?

卐

ಪಂಪನು ತನ್ನ ಭಾರತದಲ್ಲಿ ಅರ್ಜುನನು ಹರನಿಂದ ಪಾಶುಪತಾಸ್ತ್ರವನ್ನು ಪಡೆದ ಸಂಗತಿಯನ್ನು ಕೆಳಗಿನಂತೆ ಹೇಳಿದ್ದಾನೆ:—

ಪಾಂಡವರು ದ್ವೈತವನದಲ್ಲಿದ್ದಾಗ, ಯುಧಿಷ್ಠಿರನಿಂದ ಕಳುಹಿಸಲ್ಪಟ್ಟ ಕಿರಾತನು, ಋಷಿವೇಷದಿಂದ ಹೋಗಿ ದುರ್ಯೋಧನನ ವಾರ್ತೆಯೆಲ್ಲವನ್ನೂ ತಿಳಿದುಕೊಂಡು ಬಂದು, ಆತನು ಪ್ರಜೆಗಳಿಂದ ಗೌರವ ಪಡೆಯುತ್ತ ರಾಜ್ಯಭಾರ ಮಾಡುತ್ತಲಿರುವನೆಂದೂ ವೈಮರೆಯದೆ ಸಂಪೂರ್ಣವಾಗಿ ಎಚ್ಚತ್ತಿರುವನೆಂದೂ ಹೇಳಿದನು. ಆದಕ್ಕೆ ದ್ರೌಪದಿಯು, ಪಾಂಡವರೆಲ್ಲರೂ ನಾರುಬಟ್ಟೆಯನ್ನುಟ್ಟು ಪಡಬಾರದ ಕಷ್ಟಗಳನ್ನು ಪಡುತ್ತಿದ್ದುದನ್ನೂ, ದುಶ್ಶಾಸನನಿಂದ ತನಗಾದ ಅವಮಾನವನ್ನು ನೆನಸಿಯಾದರೂ ಇನ್ನು ಮುಂದೆ ಸುಮ್ಮನೆ ಇರುವುದು ಒಳ್ಳೆಯದಲ್ಲವೆಂದೂ ಧರ್ಮರಾಜನಿಗೆ ಹೇಳಿದಳು. ಭೀಮನು ದ್ರೌಪದಿಯ ಮಾತುಗಳನ್ನೇ ಎತ್ತಿಹಿಡಿದು " ಅರಸನೇ, ನೀನು ರಾಜ್ಯವನ್ನು ಸೋಲುವುದೂ ನಾರುಬಟ್ಟೆಗಳನ್ನುಟ್ಟುಕೊಂಡಿರುವುದೂ ಯೋಗ್ಯವಲ್ಲ. ಅವರು ದ್ರೌಪದಿಯ ಮುಂದಲೆಯನ್ನು ಹಿಡಿದಾಗಲೇ ನಮ್ಮ ವೀರ್ಯವನ್ನು ಸೆಳೆದರು. ಸಭೆಯಲ್ಲಿ ದ್ರೌಪದಿಗಾದ ಅವಮಾನವನ್ನು ನೋಡಿಯೂ ನಿನ್ನ ಸಲುವಾಗಿ ಸುಮ್ಮನಿದ್ದೆನು. ದುಶ್ಶಾಸನನ ಎದೆಯಲ್ಲಿಯ ರಕ್ತ ಕುಡಿಯಬೇಕೆಂದು ಎನಿಸಿದ ಮೇಲೆ ಇನ್ನು ನಾನು ಸುಮ್ಮನಿರಲಾರೆ! " ಎಂದು ಸಿಟ್ಟಿನಿಂದ ಗದೆ ತೆಗೆದುಕೊಂಡು ಹೊರಡಲು, ಧರ್ಮರಾಜನು ನಯದಿಂದ ಆತನನ್ನು ಸಮಾಧಾನಮಾಡುತ್ತಿರುವಾಗ, ವ್ಯಾಸಮಹಾಮುನಿಗಳು ಆಕಾಶದಿಂದ ಇಳಿದರು.

ಪಾಂಡವರು ಅವರನ್ನು ಉಚಿತವಾದ ಮರ್ಯಾದೆಯಿಂದ ಸತ್ಕರಿಸಿದರು. ತಮ್ಮನ್ನು ಆಪತ್ತಿನಿಂದ ಪಾರುಮಾಡಬೇಕೆಂದು ಧರ್ಮರಾಜನು ಅವರಲ್ಲಿ ಬೇಡಿಕೊಂಡನು. ಆಗ ಅವರು, " ನನ್ನ ಪ್ರೀತಿಯು ನಿಮ್ಮಲ್ಲಿಯೇ ಹೆಚ್ಚಾಗಿದೆ. ದುರ್ಯೋಧನನು ರಾಜ್ಯವನ್ನು ಕೊಡಲಾರನು. ನಿಮಗೆ ಆತನ ಕೂಡ ಯುದ್ಧಮಾಡಿದ ಹೊರತು ಗತ್ಯಂತರವೇ ಇಲ್ಲ. ಆತನ ಕಡೆಗೆ ದ್ರೋಣ, ಭೀಷ್ಮ, ಕರ್ಣ ಮೊದಲಾದ ಶೂರರು ಸಾಕಷ್ಟು ಜನ ಇದ್ದಾರೆ. ಅವರ ಹತ್ತಿರ ದಿವ್ಯಾಸ್ತ್ರಗಳೂ ಸಾಕಷ್ಟಿವೆ. ನೀವು ಅವರನ್ನು ಗೆಲ್ಲಬೇಕಾದರೆ ನೀವೂ ದಿವ್ಯಾಸ್ತ್ರಗಳನ್ನು ಪಡೆಯಬೇಕಾಗುವುದು. ನಿಮ್ಮಲ್ಲಿ ವಿಕ್ರಮಾರ್ಜುನನು ದಿವ್ಯಾಸ್ತ್ರಗಳನ್ನು ಪಡೆಯಲು ಯೋಗ್ಯನು. ಆತನು ಅವನ್ನು ದೊರಕಿಸುವ ಉಪಾಯಮಂತ್ರವನ್ನುಪದೇಶಿಸಲು ನಾನಿಲ್ಲಿ ಬಂದಿದ್ದೇನೆ." ಎಂದು ಹೇಳಿ, ಅರ್ಜುನನಿಗೆ ಮಂತ್ರಾಕ್ಷರಗಳನ್ನು ಉಪದೇಶ ಮಾಡಿ, ಇಂದ್ರಕೀಲ ಪರ್ವತಕ್ಕೆ ಮುಟ್ಟಿಸಿ ಬರುವಂತೆ ಗುಹ್ಯಕನಿಗೆ ಹೇಳಿ, ತಾವು ಆಕಾಶಮಾರ್ಗದಿಂದ ಹೊರಟುಹೋದರು.

ಗುಹ್ಯಕನು ಅರ್ಜುನನನ್ನು ಹೆಗಲಮೇಲೇರಿಸಿಕೊಂಡು ಇಂದ್ರಕೀಲ ಪರ್ವತದ ಚಂದ್ರಕಾಂತಶಿಲಾತಳದಲ್ಲಿಳಿಸಿ ಹೊರಟುಹೋದನು. ಅಲ್ಲಿ ಅರ್ಜುನನು ವ್ಯಾಸರ ಆದೇಶದಂತೆ ತಪಸ್ಸುಮಾಡಲು ತೊಡಗಿದನು. ಆತನ ತಪಶ್ಚರ್ಯದ ಪ್ರಭಾವದಿಂದ ಇಂದ್ರನ ಆಸನವು ನಡುಗಹತ್ತಿತ್ತು. ಆತನು ಅರ್ಜುನನ ತಪಸ್ಸನ್ನು ಕೆಡಿಸಲು ಅಪ್ಸರೆಯರನ್ನು ಕಳಿಸಿ ವಿಫಲನಾಗಿ, ತಾನೇ ಬ್ರಾಹ್ಮಣನ ವೇಷದಿಂದ ಬಂದು ಅರ್ಜುನನನ್ನು ಪರೀಕ್ಷಿಸಿದನು. ಆತನ ಉತ್ಕಟವಾದ ಭಕ್ತಿಯನ್ನು ನೋಡಿ ಆನಂದಪಟ್ಟು, ತನ್ನನ್ನು ಪ್ರಕಟಿಸಿಕೊಂಡು ಆತನು ತನ್ನ ಮಗನೆಂಬ ಪ್ರೇಮದಿಂದ 'ಶತ್ರುಗಳನ್ನು ಗೆಲ್ಲಲೂ ಅಸ್ತ್ರಗಳನ್ನು ಸಾಧಿಸಲೂ ಹರನನ್ನು ಆರಾಧಿಸು' ಎಂದು ಹೇಳಿ ಹೋದನು.

ಅರ್ಜುನನ ಉಗ್ರವಾದ ತಪಸ್ಸಿನಿಂದ ಉಳಿದ ತಪಸ್ವಿಗಳ ತಪಗಳು ಬೆಂದುಹೋಗಲಾಗಿ ಅವರೆಲ್ಲರೂ ಕೈಲಾಸಕ್ಕೆ ಹೋಗಿ ತಮ್ಮನ್ನು ಕಾಪಾಡೆಂದು ಈಶ್ವರನಲ್ಲಿ ಮೊರೆ ಇಟ್ಟರು. ಈಶ್ವರನು ತಪಸ್ಸು ಮಾಡುವವನು ಅರ್ಜುನನೆಂದು ಅರಿತುಕೊಂಡು, ಆತನಿಂದ ವರಾಹ ರೂಪದಲ್ಲಿರುವ ಮೂಕದಾನವನೆಂಬ ದೈತ್ಯನನ್ನು ಕೊಲ್ಲಿಸಬೇಕೆಂದು ಯೋಚಿಸಿದನು. ತಾನು ಆತನ ಕೂಡ ಮಾಯಾಯುದ್ಧ ಮಾಡಿ

ತನ ಸಾಹಸದ, ಚಲದ, ಬಲದ, ಹಾಗೂ ಬಿಲ್ಲಾಳ್ತನದ ಶಕ್ತಿಗಳನ್ನು ಪರೀಕ್ಷಿಸಿ ಆಮೇಲೆ ವರವನ್ನು ಕೊಡಬೇಕೆಂದು ನಿಶ್ಚೈಸಿಕೊಂಡನು

ಆಮೇಲೆ ಶಂಭುವು ಬೇಡನ ರೂಪ ತಾಳಿ ಗಿರಿಜೆಯನ್ನು ಬೇಡಿತಿಯನ್ನಾಗಿಸಿ ಭೂತಪಡೆಗಳನ್ನು ಬೇಡಪಡೆ ಮಾಡಿ ಆ ವನವನ್ನು ಮುತ್ತಿದನು. ಮೂಕ ದಾನವನು ಸಿಟ್ಟಿನಿಂದ ನೆಲವನ್ನಲ್ಲಾಡಿಸುತ್ತ ಹೊರಡಲು ಕೃತಕ ಬೇಡನು ಅದನ್ನು ಬೆನ್ನಟ್ಟಿಕೊಂಡು ಬರುವುದನ್ನು ನೋಡಿ ಅರ್ಜುನನು ಗಾಂಡೀವಕ್ಕೆ ಬಾಣ ಹೂಡಿ ಅದಕ್ಕೆ ಹೊಡೆದನು. ಬಾಣವು ಹಂದಿಯ ಮೋರೆಯಿಂದ ಬಾಲದವರೆಗೂ ಚುಚ್ಚಿಕೊಂಡಿತು. ಅದೇ ವೇಳೆಗೆ ಶಂಕರನು ಎಸೆದ ಬಾಣವು ಅದರ ಶರೀರವನ್ನು ಸೀಳಿತು

ಸತ್ತುಬಿದ್ದ ವರಾಹದ ಮೈಯಲ್ಲಿದ್ದ ತನ್ನ ಬಾಣವನ್ನು ಅರ್ಜುನನು ತೆಗೆದುಕೊಂಡು ತನ್ನ ಬತ್ತಳಿಕೆಯಲ್ಲಿಟ್ಟುಕೊಂಡು ಸಮೀಪದಲ್ಲಿದ್ದ ಪೂಗೊಳಕ್ಕೆ ಹೋಗಿ ಕೈಕಾಲು ತೊಳೆದುಕೊಂಡು ಪುನಃ ತಪಶ್ಚರ್ಯಕ್ಕೆ ಕುಳಿತನು. ಆಮೇಲೆ ಬೇಡಪಡೆಯ ನಾಯಕನಾದ ಗುಹನು ಬಂದು ಆ ಬಾಣವು ತಮ್ಮ ಒಡೆಯನದೆಂದೂ ಅದನ್ನು ತಿರುಗಿ ಕೊಡಬೇಕೆಂದೂ ಹೇಳಿದನು. ಅದನ್ನು ಕೇಳಿ ಅರ್ಜುನನು ವರಾಹವು ತನ್ನ ಬಾಣದಿಂದಲೇ ಸತ್ತಿದೆ. ಬೇಡನ ಬಾಣದಿಂದಲ್ಲ ತನ್ನಲ್ಲಿರುವ ಉಗ್ರಾಸ್ತ್ರಗಳ ಹೆಸರು ಕೂಡ ಹೇಳಲು ತಿಳಿಯದ ಬೇಡನಿಗೆ ತನ್ನ ಸಾಮರ್ಥ್ಯವನ್ನು ಅರಿಯನು ಎಂದು ಹೀಯಾಳಿಸಿ ಕಳಿಸಿದನು. ಗುಹನ ಮಾತನ್ನು ಕೇಳಿ, ಕಪಟ ಕಿರಾತನು ಸಿಟ್ಟಿಗೆದ್ದು ಮಾಯೆಯ ದಂಡನ್ನು ಅರ್ಜುನನ ಮೇಲೆ ಕಳಿಸಿದನು. ಅರ್ಜುನನು ಅವರೆಲ್ಲರನ್ನು ಸೋಲಿಸಲಾಗಿ ಶಿವನು ತಾನೇ ಯುದ್ಧಕ್ಕೆ ಬಂದನು.

ಈ ಪ್ರಕಾರ ಇವರಿಬ್ಬರೂ ಶೂನ್ಯಹಸ್ತದಿಂದ ಬಹಳ ಹೊತ್ತು ಹೋರಾಡಿ ಗಾಯಹೊಂದಿ ಯುದ್ಧಮಾಡುತ್ತಿರಲಾಗಿ,

ಇಕ್ಕಿದನಭವಂ ಪಾರ್ಥನ ।
ನಿಕ್ಕಿದನಾ ತ್ರಿಪುರಹರನನರ್ಜುನನೆಗೆ- ॥
ಲ್ಲಕ್ಕೆ ಮುಡಿಗಿಕ್ಕುವಂತೆವೊ ।
ಲಿಕ್ಕಿದನವಯವದೆ ನೆಲದೊಳರಿಗಂ ಹರನಂ

(ವಿಕ್ರಮಾರ್ಜುನವಿಜಯ VIII ೨೦)

ಅರ್ಜುನನನ್ನು ಶಿವನು ಮೊದಲು ಮೆಟ್ಟಿದನು; ಆಮೇಲೆ ಅರ್ಜುನನು ತ್ರಿಪುರಹರನನ್ನು ಆತಗಾದ ಗೆಲುವಿನ ಸೇಡನ್ನು ತೀರಿಸಿಕೊಳ್ಳುವಂತೆ ನೆಲದ ಮೇಲೆ ಚೆನ್ನಾಗಿ ನುಗ್ಗುನುರಿಯಾಗುವಂತೆ ಮೆಟ್ಟಿದನು. ಈ ಪ್ರಕಾರ ಅರ್ಜುನನು ಶಿವನನ್ನು ನೆಲಕ್ಕಿಕ್ಕಿ ಗಂಟಲನ್ನು ಮೆಟ್ಟಿದಾಗ ರುದ್ರನು ಪ್ರೀತಿಯಿಂದ ತನ್ನ ರೂಪವನ್ನು ಪ್ರಕಟಿಸಿದನು. ಆಗ ಅರ್ಜುನನು ಹರನ ಪಾದಗಳಿಗೆ ನಮಸ್ಕರಿಸಿ, 'ನೀನು ಇದ್ದದ್ದು ತಿಳಿಯಲಾರದೆ ನಾನು ಮಾಡಿದ ಅಪರಾಧವನ್ನು ಹೇಗೆ ನೀಗಿಸಲಿ? ದಯೆಮಾಡಿ ಅಪ್ಪಣೆ ಕೊಡು" ಎಂದು ವಿನಯದಿಂದ ಬೇಡಿಕೊಂಡದ್ದನ್ನು ನೋಡಿ ಹರನು, "ನಿನ್ನ ಪರಾಕ್ರಮಕ್ಕೆ ಮೆಚ್ಚಿರುತ್ತೇನೆ. ವರವನ್ನು ಬೇಡಿಕೊಳ್ಳು'' ಎನಲು, "ನನಗೆ ಪಾಶುಪತಾಸ್ತ್ರವನ್ನು ಕೊಡಬೇಕು" ಎಂದು ಬೇಡಿಕೊಳ್ಳಲಾಗಿ, "ನಿನ್ನ ತಪಶ್ಶಕ್ತಿಗೂ ಭಕ್ತಿಗೂ ಮೆಚ್ಚಿ ನಿನಗೆ ಪಾಶುಪತಾಸ್ತ್ರವನ್ನು ಕೊಟ್ಟಿರುತ್ತೇನೆ.'' ಎಂದು ಹರನು ಹೇಳಿದನು.

ಪಂಪನ ಈ ಮೇಲಿನ ಹೇಳಿಕೆಯನ್ನು ನೋಡಲಾಗಿ, ಅರ್ಜುನನು ಶಿವನಿಂದ ಪಾಶುಪತಾಸ್ತ್ರವನ್ನು ಪಡೆದದ್ದು ಆತನನ್ನು ನೆಲಕ್ಕಿಕ್ಕಿ ಗಂಟಲು ಮೆಟ್ಟಿಯೇ ಎಂದು ತೋರುತ್ತದೆ. ಈ ಸಂಗತಿಯನ್ನೇ ಅವಲಂಬಿಸಿ ರನ್ನನು ತನ್ನ ಗದಾಯುದ್ಧದಲ್ಲಿ ದುರ್ಯೋಧನನು ಅರ್ಜುನನನ್ನು ಅವಹೇಲನ ಮಾಡುವ ಅವಸರದಲ್ಲಿ, ಆತನಿಂದ ಕೆಳಗಿನಂತೆ ಹೇಳಿಸಿದ್ದಾನೆ:

ಬಿಡದಾರಾಧಿಸೆ ಮುನ್ನಮೆ ।
ಕುಡಲಾರದೆ ಬಳಿಕೆ ಗಂಟಲಂ ಮೆಟ್ಟಿದೊಡಿ- ॥
ಟ್ಟಡೆಯೊಳ್ ಕೊಟ್ಟಂ ಗೆಲ್ಲಂ ।
ಗುಡುವಂತೆ ನರಂಗೆ ಪಾಶುಪತಮನೆ ರುದ್ರಂ ॥

(ಗದಾಯುದ್ಧ III ೪೯)

ನೇಮಿಚಂದ್ರನು ಇದೇ ಸಂಗತಿಯನ್ನು ತನ್ನ 'ಲೀಲಾವತಿ' ಯಲ್ಲಿ

' ಕಟ್ಟುಗೆ ಕಟ್ಟದಿರ್ಕೆ ಕಡಲಂ ಕಪಿಸಂತತಿ ವಾಮನಕ್ರಮಂ
ಮುಟ್ಟುಗೆ ಮುಟ್ಟದಿರ್ಕೆ ಮುಗಿಲಂ ಹರನಂ ನರನೊತ್ತಿ ಗಂಟಲಂ
ಮೆಟ್ಟುಗೆ ಮೆಟ್ಟದಿರ್ಕೆ ಕವಿಗಳ್ ಕೃತಿಬಂಧದೊಳಲ್ತೆ
ಕಟ್ಟಿದರ್ ಮುಟ್ಟಿದರೊತ್ತಿ ಮೆಟ್ಟಿದರ್..............

ಎಂದು ಹೇಳಿದ್ದಾನೆ. ಆ ಹೇಳಿಕೆಯ ಪ್ರಕಾರ ಕವಿಗಳು ಅಭಿನವಬ್ರಹ್ಮರು. ಪ್ರತಿಸೃಷ್ಟಿಯನ್ನೇ ನಿರ್ಮಾಣ ಮಾಡಬಲ್ಲರು.

' ಹರನಂ ನರನೊತ್ತಿಗಂಟಲಂ ಮೆಟ್ಟುಗೆ ಮೆಟ್ಟದಿರ್ಕೆ ಕವಿಗಳ್॥
ಕೃತಿಬಂಧದೊಳಲ್ತೆ ....ಒತ್ತಿ ಮೆಟ್ಟಿದರ್ !

ಎಂದು ಹೇಳಿದ್ದನ್ನು ನೋಡಲಾಗಿ, ನೇಮಿಚಂದ್ರನು ರನ್ನನು ಗದಾಯುದ್ಧದಲ್ಲಿ ಪಂಪನ ಹೇಳಿಕೆಯನ್ನೇ ಅನುಸರಿಸಿದಂತೆ ತಾನೂ ಅನುಸರಿಸದೆ, ಆ ಸಂಗತಿಯ ನಿಜತ್ವದ ಬಗ್ಗೆ ಸಂಶಯ ತಾಳಿ, ಅದು ಕೇವಲ ಕಾವ್ಯಪ್ರಪಂಚಕ್ಕೆ ಸಂಬಂಧಿಸಿದ ಸಂಗತಿಯು 'ಅಘಟಿತಘಟನೆ' ಎಂದು ಹೇಳಿದ್ದಾನೆ.

ಅರ್ಜುನನು ಶಿವನಿಂದ ಪಾಶುಪತಾಸ್ತ್ರವನ್ನು ದೊರಕಿಸಿದ ಸಂಗತಿಯು ವ್ಯಾಸಭಾರತದಲ್ಲಿ ಕೆಳಗಿನಂತಿದೆ:—

ವರಾಹದ ನಿಮಿತ್ತವಾಗಿ ಶಿವ-ಅರ್ಜುನರಲ್ಲಿ ಕಾಳಗ ಪ್ರಾರಂಭವಾಯಿತು. 'ಅರ್ಜುನನು ಕಿರಾತನ ಮೇಲೆ ಬಾಣಗಳ ಮಳೆಯನ್ನು ಕರೆದನು. ಶಂಕರನು ಅದನ್ನು ಶಾಂತವಾಗಿ ಸ್ವೀಕರಿಸಿದನು. ಅವನ ಮೈಗೆ ಗಾಯವೇ ಆಗಲಿಲ್ಲ; ಬೆಟ್ಟದಂತೆ ಕದಲದೆ ಇದ್ದಿತು. ಅರ್ಜುನನಿಗೆ ಆಶ್ಚರ್ಯವಾಯಿತು. ಮತ್ತೆ ಬಾಣಗಳನ್ನು ಬಿಡಲಾರಂಭಿಸಿದನು. ಒಂದು ಕ್ಷಣದಲ್ಲಿ ಅವನ ಬಾಣಗಳೆಲ್ಲವೂ ಮುಗಿದು ಹೋದುವು. "ಈ ಬಿಲ್ಲಿನ ಕೊಪ್ಪಿನಿಂದಲೇ ಇವನನ್ನು ಘಟ್ಟಿಸಿಬಿಡುತ್ತೇನೆ!" ಎಂದು ಬಿಲ್ಲನ್ನು ಎತ್ತಿದನು. ಕಿರಾತನು ಬಿಲ್ಲನ್ನು ಕಿತ್ತುಕೊಂಡುಬಿಟ್ಟನು. ಆಮೇಲೆ ಅರ್ಜುನನು ತನ್ನ ಬಲನ್ನೆಲ್ಲಾಬಿಟ್ಟು

ಕತ್ತಿಯಿಂದ ಶಿವನ ತಲೆಯ ಮೇಲೆ ಹೊಡೆದನು. ತಲೆಗೆ ತಗುಲಿದ ಕೂಡಲೆ ಕತ್ತಿಯೇ ಎರಡು ತುಂಡಾಗಿ ಬಿತ್ತು. ಮುಷ್ಟಿಯಿಂದ ಹೊಡೆದನು. ಕಿರಾತನೂ ಹೊಡೆದನು; ಅರ್ಜುನನ ಮೈಯೆಲ್ಲಾ ಜಜ್ಜಿಹೋಗಿ ಅವನು ಕುಸ್ತಿಗೆ ಆರಂಭಿಸಿದನು ಆದರೆ ಶಿವನ ತೋಳು-ಗಳಲ್ಲಿ ಸಿಕ್ಕಿ ಕೈಕಾಲು ಆಡಿಸಲಾರದೆ ಉಸಿರು ಸಿಕ್ಕಿಕೊಳ್ಳುವಂತಾ-ಯಿತು. ಅರ್ಜುನನು ಜ್ಞಾನ ತಪ್ಪಿ ಕೆಳಗೆ ಬಿದ್ದನು. ಆಗ ಶಂಕರನು "ಅರ್ಜುನ! ಏಳು, ನನ್ನನ್ನು ನೋಡು! ನಿನ್ನ ಶೌರ್ಯ-ಧೈರ್ಯಗಳನ್ನು ನೋಡಿ ನನಗೆ ತುಂಬ ಸಂತೋಷವಾಗಿದೆ. ಕ್ಷತ್ರಿಯರಲ್ಲಿ ನಿನಗೆ ಸಮರಾದವರು ಯಾರೂ ಇಲ್ಲ; ತೇಜಸ್ಸಿನಲ್ಲಿಯೂ ವೀರ್ಯದಲ್ಲಿಯೂ ನನಗೆ ಸರಿಸಮಾನನಾದವನು ನೀನು." ಎಂದನು. ಅರ್ಜುನನು ಎದ್ದು ಶಂಕರನಿಗೆ ನಮಸ್ಕರಿಸಿ, ಅಜ್ಞಾನದಿಂದ ತಾನು ಮಾಡಿದ ಅಪ-ರಾಧವನ್ನು ಕ್ಷಮಿಸಬೇಕೆಂದು ಪ್ರಾರ್ಥಿಸಿದನು. ಶಂಕರನು ಕ್ಷಮಿಸಿ ಅವನಿಂದ ಕಿತ್ತುಕೊಂಡಿದ್ದ ಅಕ್ಷಯಬಾಣಗಳನ್ನೂ ಗಾಂಡೀವವನ್ನೂ ಹಿಂತಿರುಗಿ ಕೊಟ್ಟು, ಅವನ ಅಪೇಕ್ಷೆಯಂತೆ ತನ್ನಲ್ಲಿದ್ದ ಪಾಶುಪತಾಸ್ತ್ರ-ವನ್ನು ಕೊಟ್ಟನು."

(ವಚನಭಾರತ. ಪುಟ ೧೨೫.೧೨೬. ಶ್ರೀ. ಎ. ಆರ್. ಕೃಷ್ಣಶಾಸ್ತ್ರಿಗಳವರು)

ಮೇಲಿನ ಸಂಗತಿಯನ್ನು ನೋಡಲಾಗಿ, ಅರ್ಜುನನು ಶಿವನಿಂದ ಸೋತು ಪಾಶುಪತಾಸ್ತ್ರವನ್ನು ಪಡೆದನೆಂದು ಹೇಳಬಹುದು.

ಇದೇ ಸಂಗತಿಯು ಭಾರವಿಯ ಕಿರಾತಾರ್ಜುನೀಯದಲ್ಲಿ ಹೀಗಿದೆ:—

ವರಾಹದ ನಿಮಿತ್ತವಾಗಿ ಅರ್ಜುನ-ಶಿವರಲ್ಲಿ ಮುಷ್ಟಿಯುದ್ಧ-ವಾಗಲಾಗಿ ಶಿವನು ತನ್ನ ಮುಷ್ಟಿಯಿಂದ ಅರ್ಜುನನ ಕುತ್ತಿಗೆಯ ಮೇಲೆ ಹೊಡೆಯಲು, ಅವನ ಕಣ್ಣುಗುಡ್ಡೆಗಳು ತಿರುಗತೊಡಗಿದುವು-ಬವಳಿ ಬಂದಂತಾಯಿತು. ಬೇಡನಿಂದಾದ ಅಪಮಾನದಿಂದ ಅವನು ಸಿಟ್ಟಾಗಿ, ಬೇಡನ ಎರಡೂ ಕೈಗಳನ್ನು ಹಿಡಿದು ಮುಂದಕ್ಕೆ ಜಗ್ಗಿ, ತನ್ನಲ್ಲಿರುವ ಎಲ್ಲ ಶಕ್ತಿಯಿಂದ ಮೇಲಕ್ಕೆ ತೂರಿದನು. ಶಬರನು ನೆಲಕ್ಕೆ ಬೀಳುವಷ್ಟರಲ್ಲಿಯೇ ಅವನ ಕಾಲುಗಳನ್ನು ಗಟ್ಟಿಯಾಗಿ ಹಿಡಿದು ನೆಲಕ್ಕೆ ಅಪ್ಪಳಿಸಬೇಕೆಂದು ಅರ್ಜುನನು ಓಡಿಬಂದು ಹಿಡಿ-ಯಲು, ಶಂಕರನು ತನ್ನ ರೂಪವನ್ನು ಪ್ರಕಟಿಸಿ, ಅರ್ಜುನನನ್ನು ಎದೆಗೆ ಅವಚಿಕೊಂಡು ಗಾಢವಾಗಿ ಆಲಿಂಗಿಸಿದನು. ಆಗ ಅರ್ಜುನನಿಗೆ ಶಿವನ ಮನೋಹರವಾದ ಮೂರ್ತಿಯು ಕಣ್ಣಿಗೆ ಸುಂದರವಾಗಿ ಕಂಡಿತು. ಅವನು ಭಕ್ತಿಪರವಶನಾಗಿ ಈಶ್ವರನ ಅಡಿದಾವರೆಗಳಿಗೆ ಎರಗಿದನು. ಅನನ್ಯಭಕ್ತಿಯಿಂದ ಶಿವನನ್ನು ಸ್ತುತಿಸಿದನು. ಆಗ ಶಿವನು ಅರ್ಜುನ-ನನ್ನು ಅಪ್ಪಿಕೊಂಡು ಆಶೀರ್ವಾದಪೂರ್ವಕವಾಗಿ ಬ್ರಹ್ಮಶಿರೋಸ್ತ್ರವನ್ನೂ ಪಾಶುಪತಾಸ್ತ್ರವನ್ನೂ ಕೊಟ್ಟನು.

ಸಾಮಾನ್ಯವಾಗಿ ನೋಡಿದರೆ, ಶಿವನು ಅರ್ಜುನನನ್ನು ಸೋಲಿಸಿದ ಮೇಲೆಯೇ ತನ್ನ ರೂಪವನ್ನು ಪ್ರಕಟಿಸಿ, ಅತನಿಗೆ ಪಾಶುಪತಾಸ್ತ್ರವನ್ನು ಕೊಟ್ಟ ಸಂಗತಿಯು ವ್ಯಾಸರ ಭಾರತದ ಹೊರತಾಗಿ ಕನ್ನಡ ಸಾಹಿತ್ಯದಲ್ಲಿ ಕುಮಾರವ್ಯಾಸನ ಭಾರತ, ವಿರೂಪಾಕ್ಷಪಂಡಿತನ ಚೆನ್ನ-ಬಸವಪುರಾಣ ಹಾಗೂ ಷಡಕ್ಷರಿಯ ಶಬರಶಂಕರವಿಳಾಸಗಳಲ್ಲಿ ಕಂಡುಬರುತ್ತದೆ. ಹೀಗೆ ಆಗುವುದಕ್ಕೆ ಕಾರಣವೇನಿರಬಹುದು? ತನ್ನ ಆಶ್ರಯದಾತನಾದ ಅರಿಕೇಸರಿಯನ್ನು ಅರ್ಜುನನಿಗೆ ಹೋಲಿಸಿ ತನ್ನ ವಿಕ್ರಮಾರ್ಜುನ ವಿಜಯವನ್ನು ಪಂಪನು ಬರೆದದ್ದರಿಂದ, ತನ್ನ ಆಶ್ರಯದಾತನು—ಅರ್ಜುನನು—ಈಶ್ವರನನ್ನು ಕೂಡ ಸೋಲಿಸುವಷ್ಟು ಪರಾಕ್ರಮಶಾಲಿ ಎಂದು ಹೇಳಿಕೊಳ್ಳುವುದರ ಸಲುವಾಗಿ ಹೀಗೆ ಮಾಡಿರಬಹುದೆ? ಅಥವಾ ಭಾರವಿಯ ಕಥಾನಕವನ್ನೇ ಮುಂದು-ವರಿಸಿ ತನ್ನ ಕಲ್ಪನಾಸಾಮರ್ಥ್ಯವನ್ನೂ ಬೆರಸಿ ಹೀಗೆ ಮಾಡಿರಬಹುದೆ? ಅಥವಾ ಅರ್ಜುನನು ಶಿವನನ್ನು ಸೋಲಿಸಿ ಪಾಶುಪತಾಸ್ತ್ರಪಡೆದ ಸಂಗತಿಯುಳ್ಳ ಬೇರೊಂದು ಭಾರತವು ಪಂಪನ ಕಾಲದಲ್ಲಿ ಉಪಲಬ್ಧ-ವಿದ್ದು, ಪಂಪನು ಅದನ್ನು ಅನುಸರಿಸಿರಬಹುದೆ? ಅಥವಾ ಅರ್ಜುನನ ಮೇಲೆ ಪ್ರೇಮವುಳ್ಳ ಶಿವನು 'ಶಿಷ್ಯಾದಿಚ್ಛೇತ್ ಪರಾಜಯಂ' ಎಂಬಂತೆ, ತಾನೇ ಅರ್ಜುನನಿಂದ ಸೋತು ವರವನ್ನು ಕೊಟ್ಟಿರಬಹುದೇನೋ ಎನ್ನುವಂತೆ ಪಂಪನು ಈ ರೀತಿಯಾಗಿ ಚಿತ್ರಿಸಿರಬಹುದೆ?

೨

ಪಾಂಡವರು ತಮ್ಮ ಅಜ್ಞಾತವಾಸವನ್ನು ವಿರಾಟನಗರದಲ್ಲಿ ಕಳೆದರು. ಇನ್ನು ಮುಂದೆ ತಾವು ಸುಮ್ಮನೆ ಇರುವುದು ತರವಲ್ಲ-ವೆಂದೂ ದುರ್ಯೋಧನನು ಕಾದದೆ ತಮಗೆ ರಾಜ್ಯವನ್ನು ಕೊಡ-ಲಾರನೆಂದೂ, ಆದ್ದರಿಂದ ತಾವೇನು ಮಾಡಬೇಕೆಂದೂ ಧರ್ಮರಾಜನು ಕೃಷ್ಣನನ್ನು ಕೇಳಿದನು. ಅದಕ್ಕೆ ಕೃಷ್ಣನು "ಸಾಮೋಪಾಯವನ್ನು ಪ್ರಯೋಗಿಸದೆ ಒಮ್ಮೆಲೆ ದಂಡೋಪಾಯ ಕೈಕೊಳ್ಳುವುದು ನೀತಿ-ಜ್ಞರಮಾತಲ್ಲ. ಆದ್ದರಿಂದ ರಾಜ್ಯ ಬೇಡುವುದರ ಸಲುವಾಗಿ ಒಬ್ಬ ದೂತನನ್ನು ದುರ್ಯೋಧನನ ಕಡೆಗೆ ಕಳಿಸಿಕೊಡಬೇಕು. ಆತನು ರಾಜ್ಯ ಕೊಡದೆ ಹೋದರೆ ಯುದ್ಧಕ್ಕೆ ನಿಲ್ಲಬೇಕು. ಲೋಕದ ಬೆಂಬಲ ಸಿಗುವುದು." ಎಂದು ಹೇಳಲು, ಅದನ್ನು ಕೇಳಿ ಭೀಮನು ಸಿಟ್ಟಿನಿಂದ, "ಕೃಷ್ಣನೇ, ನಿನ್ನ ಅಭಿಪ್ರಾಯದ ವಿರುದ್ಧ ಹೇಳುವುದು ಸರಿಯಲ್ಲ; ಆದರೆ ದುರ್ಯೋಧನನು ಹಿಂದೆ ಮಾಡಿದ ಅಕೃತ್ಯಗಳು ನಿನಗೆ ಪ್ರತಿಹೇಳುವಂತೆ ಮಾಡುವುವು." ಎಂದು ಹೇಳಿ ಮತ್ತೆ

ಆ ಲಾಕ್ಷಾಗೃಹದಾಹವೊಂದೆ ವಿಷಸಂಯುಕ್ತಾನ್ನ-
ಮಂತೊಂದೆ ಪಾಂ- ।
ಚಾಲೀ ನಿಗ್ರಹವೊಂದೆ ಟಕ್ಕುವಗೆಯಿಂ ಗೆಲ್ದಿರ್ದ
ಜೂದೊಂದೆ ಶಾ- ॥
ರ್ದೂಲಾಭೀಲ ವನಂಗಳೊಳ್ ತಿರಿಪಿದೀಯುರ್ಕೊಂದೆ
ಲೆಕ್ಕಂಗೊಳಲ್ ।
ಕಾಲಂ ಸಾಲವೆ ಕಂಡುಮುಂಡುಮೆಮಗಿನ್ನಂತಂಗ-
ಳೊಳ್ ಪಾಳಿಯೇ ॥

(ವಿಕ್ರಮಾರ್ಜುನ ವಿಜಯ. IX. ೨೨)

ಎಂದು ಕೇಳುತ್ತಾನೆ.

ಈ ಪರ್ವದಲ್ಲಿ ದುರ್ಯೋಧನನು ಪಾಂಡವರಿಗೆ ಮಾಡಿದ ದುರ್ನಯಗಳು ಹೇಳಲ್ಪಟ್ಟಿವೆ. "ಅರಗಿನ ಮನೆಗೆ ಹಚ್ಚಿದ ಬೆಂಕಿ,

ಭೀಮನಿಗೆ ಉಣಿಸಿದ ವಿಷಸಂಯುಕ್ತಾನ್ನ, ಸಭೆಯಲ್ಲಿ ದ್ರೌಪದಿಯ ಕೂದಲನ್ನು ಹಿಡಿದೆಳೆದು ಅವಮಾನಿಸಿದುದು, ಮೋಸದಿಂದ ಜೂಜಾಡಿ ಗೆದ್ದದ್ದು ಹಾಗೂ ಕಾಡುಮೃಗಗಳಿಂದ ತುಂಬಿದ ಅರಣ್ಯಗಳಲ್ಲಿ ಬಳಲಿಸಿದ್ದು ಇವೆಲ್ಲವನ್ನೂ ನೋಡಿ ನೋಡಿ ಅನುಭವಿಸಿಯೂ ದುರ್ಯೋಧನನ ಕೂಡ ಸಂಧಿ ಮಾಡಿಕೊಳ್ಳುವುದು ಒಳ್ಳೆಯದೆ? ನೀವು ಮಾಡಿದ ಇಂತಹ ಸಂಧಿಯು, ನನ್ನಿಂದ ಜರಾಸಂಧನ ತೊಡೆಗಳ ಸಂಧಿಯು ನಾಶವಾದಂತೆ ಒಂದೇ ದಿನದಲ್ಲಿ ನಾಶವಾಗಲಾರದೆ?" ಎಂದು ಭೀಮನು ಕೃಷ್ಣನನ್ನು ಕೇಳುತ್ತಾನೆ.

ಮೇಲಿನ ಪದ್ಯದಲ್ಲಿ ಹೇಳಿದ ದುರ್ಯೋಧನನ ಅಕೃತ್ಯಗಳು ತಿರುವುಮುರುವು ಆಗಿ ಬಿದ್ದಿರುತ್ತವೆ. ಭೀಮನಿಗೆ ವಿಷಸಂಯುಕ್ತಾನ್ನ ತಿನ್ನಿಸಿದ ಸಂಗತಿಯು ನಂತರ ಅರಗಿನ ಮನೆಗೆ ಬೆಂಕಿ ಹಚ್ಚಿದ ಪ್ರಸಂಗ ಬರಬೇಕಾಗಿತ್ತು. ಯಾಕೆಂದರೆ ಭೀಮನಿಗೆ ವಿಷಸಂಯುಕ್ತಾನ್ನ ತಿನ್ನಿಸಿದ ಸಂಗತಿಯು ಪಂಪಭಾರತದ ಎರಡನೆಯ ಆಶ್ವಾಸದಲ್ಲಿ ಬಂದಿದೆ. ಮತ್ತು ಅರಗಿನ ಮನೆಗೆ ಬೆಂಕಿ ಹಚ್ಚಿದ ಸಂಗತಿಯು ಮೂರನೆಯ ಆಶ್ವಾಸದಲ್ಲಿದೆ. ಮೋಸದಿಂದ ಜೂಜಾಡಿ ಗೆದ್ದ ಸಂಗತಿ ಆದ ನಂತರ ಪಾಂಚಾಲಿಯ ಕೂದಲಿನ ಹಿಡಿದೆಳೆಯುವಿಕೆಯು ಬರಬೇಕು. ಧರ್ಮರಾಜನು ದ್ರೌಪದಿಯನ್ನು ದ್ಯೂತದಲ್ಲಿ ಸೋತ ಮೇಲೇ ದುರ್ಯೋಧನನು ದ್ರೌಪದಿಯನ್ನು ಕರೆತರಲು ಕರ್ಣನ ಸ್ನೇಹಿತನಾದ ಪ್ರಾತಿಕಾಮಿಗೂ ತನ್ನ ತಮ್ಮ ದುಶ್ಯಾಸನನಿಗೂ ಹೇಳಿದನು. ದ್ರೌಪದಿಯು ರಜಸ್ವಲೆಯಾಗಿದ್ದರೂ, ತನ್ನನ್ನು ಮುಟ್ಟಲಾಗದೆಂದು ಹೇಳಿದ್ದರೂ, ದುಶ್ಯಾಸನನು ಕೇಳದೆ ಒತ್ತಾಯದಿಂದ ಸಭಾಮಧ್ಯಕ್ಕೆ ಎಳೆತಂದು ಅವಳನ್ನು ಪರಿಪರಿಯಾಗಿ ಬಯ್ದು, ಆಕೆಯುಟ್ಟಿದ್ದ ಸೀರೆ ಸೆಳೆದು ಆಕೆಯ ಮುಡಿಯನ್ನು ಹಿಡಿದೆಳೆದನು

ಪಂಪನು ತನ್ನ ಭಾರತದಲ್ಲಿ ಮೇಲಿನ ದುರ್ನಯಗಳನ್ನು ಕ್ರಮವಾಗಿ ಬರೆದಿದ್ದು, ಭೀಮನ ಬಾಯಿಂದ ಮಾತ್ರ ತಿರುವುಮುರುವಾಗಿ ಏಕೆ ಹೇಳಿಸಿದನೋ ತಿಳಿಯದು.

೩

ಭೀಮನು ದುರ್ಯೋಧನ–ದುಶ್ಯಾಸನರಿಬ್ಬರನ್ನು ಬಿಟ್ಟು ಉಳಿದೆಲ್ಲ ಕೌರವರನ್ನು ಕೊಂದನು. ದ್ರೌಪದಿಗೆ ಮಾಡಿದ ಅಪಮಾನದ ಸಲುವಾಗಿ ದುಶ್ಯಾಸನನ ಎದೆ ಸೀಳದ ಹೊರತು ತನ್ನ ಪ್ರತಿಜ್ಞೆ ಪೂರ್ಣವಾಗದೆಂದು ದುಶ್ಶಾಸನನನ್ನು ಮೂದಲಿಸಿದನು. ಆಗ ಆತನು ಸಿಟ್ಟಿಗೆದ್ದು ಬಂದು ಭೀಮನ ಕೂಡ ಹೋರಾಡಲು ಪ್ರಾರಂಭಿಸಿದನು. ಇಬ್ಬರಿಗೂ ಘೋರ ಯುದ್ಧ ನಡೆದು, ಕಡೆಗೆ ಭೀಮನು ದುಶ್ಯಾಸನನನ್ನು ಗದೆಯಿಂದ ಮೆಟ್ಟಿ ಪ್ರಾಣಾಂತಿಕವಾಗಿ ಕೊಂದು, ದ್ರೌಪದಿಯನ್ನು ಕರೆಯಕಳುಹಿದನು ಅವಳು ಜಯವನಿತೆ ಬರುವಂತೆ ಯುದ್ಧರಂಗಕ್ಕೆ ಬರಲಾಗಿ ಮೇಲುಸಿರು ಬಿಡುತ್ತ ಒದ್ದಾಡಿ ಸಾಯುತ್ತಲಿರುವ ದುಶ್ಯಾಸನನನ್ನು ನೋಡಿದಳು. ಚರಮಾವಸ್ಥೆಯಲ್ಲಿದ್ದ ಆತನ ಸ್ಥಿತಿಯನ್ನು ಪಂಪ ಕೆಳಗಿನಂತೆ ವರ್ಣಿಸಿದ್ದಾನೆ :

ಉಸಿರೊತ್ತಿಂ ತಿದಿಯಂತಿರೊತ್ತಿದ ಬಸಿರ್ ಪೋತಂದ ಕಣ್
ಬಿಟ್ಟ ಬಾಯ್ |
ಮಸಕಂಗುಂದಿದ ಮೆಯ್ ವಲಂಬಡಿವ ಕಾಲ್ ಭೂಭಾಗ
ದೊಳ್ ತಂದು ತಾ- ||
ಟಿಸುತುಂ ಕೋಟಲೆಗೊಳ್ವ ರತ್ನಮಕುಟದ್ಯೋತೋತ್ತ-
ಮಾಂಗಂ ವಿರಾ |
ಜಿಸುವನ್ನಂ ಪುಡಿಯೊಳ್ ಪೊರಳ್ವ ಪಗೆಯಂ ಕಣ್ಣಾರ್ವಿನಂ
ನೋಡಿದಳ್ ||

(ವಿಕ್ರಮಾರ್ಜುನ ವಿಜಯ XII ೧೫೧)

ದುಶ್ಯಾಸನನು ಆ ಪರಿಸ್ಥಿತಿಯಲ್ಲಿರುವುದನ್ನು ಕಣ್ಣಾರೆ ಕಂಡ ದ್ರೌಪದಿಯು, ತಾನು ಅನುಭವಿಸಿದ ಅರಣ್ಯವಾಸದ ಕಷ್ಟಗಳನ್ನೆಲ್ಲ ಮರೆತು ಮನಸ್ಸಿನಲ್ಲಿ ಆನಂದಬಟ್ಟಳು.

ಆಗ ಭೀಮನು ತನ್ನ ಹೆಂಡತಿಯ ಮುಖವನ್ನು ನೋಡಿ, "ಇನ್ನು ನಿನ್ನ ಹಾಗೂ ನನ್ನ ಪ್ರತಿಜ್ಞೆಯನ್ನು ತೀರಿಸಿಕೊಳ್ಳೋಣ ಬಾ" ಎಂದು ಹೇಳಿ, ಭೀಮನು ದ್ರೌಪದಿಯನ್ನು ತನ್ನ ಸಮೀಪದಲ್ಲಿಯೇ ಕುಳ್ಳಿರಿಸಿಕೊಂಡು 'ದೃಢಕಠಿಣ ಹೃದಯಮಪ್ಪ ಹಿರಣ್ಯಾಕ್ಷನುರಮಂ ಪೋಳ್ವ ನಾರಸಿಂಗನಂತೆ' ತಾನೂ ದುಶ್ಯಾಸನನ ಹೃದಯವನ್ನು ಸುರಗೆಯಿಂದ ಸೀಳಿ, ಬೊಗಸೆಯಿಂದ ರಕ್ತವನ್ನು ಕುಡಿಕುಡಿದು ದ್ರೌಪದಿಯು ಜಡೆಗಟ್ಟಿಕೊಂಡಿದ್ದ ತಲೆಗೂದಲನ್ನು ಬಿಡಿಸಿ, ದುಶ್ಯಾಸನನ ಹಲ್ಲಿನ ಬಾಚಣಿಕೆಯಿಂದ ಆಕೆಯ ತಲೆಯನ್ನು ಬಾಚಿ ಆತನ ಕರುಳನ್ನು ಹೊಸ ಹೂಮಾಲೆಯಂತೆ ದ್ರೌಪದಿಯ ತಲೆಗೆ ಮುಡಿಸಿದನು.

ಶಾಂತಿ ಸೇವಾಸದನದ ಹೊಸ ಪ್ರಕಟಣೆಗಳು

		ರೂ ನ. ಪೈ
ಜೈನಧರ್ಮ		೧೫—೦
ಶ್ರೀ. ಮಿರ್ಜಿ ಅಣ್ಣಾರಾಯರು.		
ಭಾರತದ ಬೆಳಕು	,,	೧—೫೦
ಭಾರತೀಯ ಸಂಸ್ಕೃತಿಯ ಹೃದಯ	,,	೧—೫೦
ಸಮಯಸಾರ	,,	೧—೫
ಶ್ರೇಯಾಂಸ (೨ ಭಾಗ)	,,	೩—೦
ಮೂಲಶಿಕ್ಷಣದ ಮೌಲ್ಯಮಾಪಣ	,,	೦—೭೫
ಭರತೇಶನ ನಾಲ್ಕು ಚಿತ್ರಗಳು	,,	೧—೨೫
ಕೆನೆಮೊಸರು (ಮಕ್ಕಳ ಕತೆ)	,,	೦—೨೫

ಪ್ರತಿಗಳಿಗಾಗಿ ಬರೆಯಿರಿ:

ಶಾಂತಿ ಸೇವಾಸದನ, ಸೇಡಬಾಳ
ಪೋ. ಸೇಡಬಾಳ ಜಿಲ್ಲಾ ಬೆಳಗಾಂವಿ)

ಮೇಲಿನ ಸಂಗತಿಯಲ್ಲಿ ' ದೃಢ ಕಠಿಣ ಹೃದಯುಮಪ್ಪ ಹಿರಣ್ಯಾಕ್ಷನುರಮಂ ಪೋಳ್ವ ನಾರಸಿಂಗನಂತೆ ' ಎಂದರೆ ದೃಢಕಠಿಣ ಹೃದಯದವನಾದ ಹಿರಣ್ಯಾಕ್ಷನ ಹೃದಯುವನ್ನು ನಾರಸಿಂಹನು ಸೀಳಿದಂತೆ ಭೀಮನು ದುಶ್ಶಾಸನನ ಹೃದಯುವನ್ನು ಸುರಗಿಯಿಂದ ಸೀಳಿದನೆಂದು ಹೇಳಿದ್ದಾನೆ ಪಂಪ (ವಿಕ್ರಮಾರ್ಜುನ ವಿಜಯ XII ೧೫೨ ವಚನ); ಆದರೆ ಭಾಗವತಪುರಾಣದ ಪ್ರಕಾರ ಹರಿಯು ನರಸಿಂಹಾವತಾರವನ್ನು ತಾಳಿ ತನ್ನ ಉಗುರುಗಳಿಂದ ಹೊಟ್ಟೆ ಹರಿದದ್ದು ಹಿರಣ್ಯಕಶಿಪುವಿನದು; ಹಿರಣ್ಯಾಕ್ಷನದಲ್ಲ. ಹಿರಣ್ಯಾಕ್ಷನನ್ನು ಕೊಂದವನು ವರಾಹರೂಪೀ ಹರಿಯು. ನರಸಿಂಹನಿಗೂ ಹಿರಣ್ಯಾಕ್ಷನಿಗೂ ಏನೂ ಸಂಬಂಧವೇ ಇಲ್ಲ. ಹಿರಣ್ಯಾಕ್ಷನನ್ನು ನರಸಿಂಹನು ಕೊಂದೇ ಇಲ್ಲ.

ಜೈನ ಪುರಾಣಗಳ ಪ್ರಕಾರ ೧೫ನೆಯ ತೀರ್ಥಂಕರನಾದ ಧರ್ಮನಾಥನ ಕಾಲದಲ್ಲಿ, ಪುರುಷಸಿಂಹನೆಂಬ ಒಬ್ಬ ವಾಸುದೇವನಿದ್ದಾನೆ. ಆದರೆ ಹಿರಣ್ಯಾಕ್ಷನೆಂಬ ಒಬ್ಬ ಪ್ರತಿವಾಸುದೇವನಿದ್ದ ಬಗ್ಗೆ ಉಲ್ಲೇಖವು ಆ ಕಾಲದಲ್ಲಿ ಎಲ್ಲಿಯೂ ಇಲ್ಲ ಹೀಗಿದ್ದು ' ದೃಢಕಠಿಣಹೃದಯುಮಪ್ಪ ಹಿರಣ್ಯಾಕ್ಷನುರಮಂ ಪೋಳ್ವ ನಾರಸಿಂಗನಂತೆ ' ಎಂಬ ಈ ಉಪಮಾನವನ್ನು ಪಂಪನು ಏಕೆ ಕೊಟ್ಟಿದ್ದಾನೋ ತಿಳಿಯದು. ಹರಿಯು ವರಾಹಾವತಾರವನ್ನು ತಾಳಿದಾಗ, ಹಿರಣ್ಯಾಕ್ಷನನ್ನು ತನ್ನ ಕೋರೆದಾಡೆಗಳಿಂದ ಸೀಳಿ ಕೊಂದನು. ಆದ್ದರಿಂದ ದೃಢಕಠಿಣಹೃದಯುಮಪ್ಪ ಹಿರಣ್ಯಾಕ್ಷನುರಮಂ ಪೋಳ್ವ ' ನಾರಸಿಂಗನಂತೆ ' ಎಂಬುದರ ಬದಲು ' ದೃಢಕಠಿಣಹೃದಯುಮಪ್ಪ ಹಿರಣ್ಯಾಕ್ಷನುರಮಂ ಪೋಳ್ವ ವರಾಹನಂತೆ ' ಎಂದು ಪಂಪನು ಹೇಳಿದ್ದರೆ ಸರಿಯಾಗುತ್ತಿತ್ತು. ಆದರೆ ಹೀಗೆ ಹೇಳದೆ ಮೇಲೆ ಕಾಣಿಸಿದ ವಿಸಂಗತವಾದ ಉಪಮಾನವನ್ನು ಪಂಪನು ಏಕೆ ಕೊಟ್ಟಿದ್ದಾನೋ ತಿಳಿಯದು.

೪

ದುರ್ಯೋಧನನು ತನ್ನ ತಾಯಿ–ತಂದೆಗಳ ಆದೇಶದಂತೆ ಭೀಷ್ಮಾಚಾರ್ಯರ ಭೆಟ್ಟಿಗೆ ಹೋದಾಗ, ಅವರು ಶರಶಯನಗತರಾಗಿದ್ದರು. ಅವರ ಸ್ಥಿತಿಯು ಹೀಗೆ ಇತ್ತೆಂಬುದನ್ನು ಪಂಪನು ಕೆಳಗಿನಂತೆ ವರ್ಣಿಸಿದ್ದಾನೆ:

ಇಡಿದಿರೆ ರೋಮಕೂಪದೊಳಗುರ್ಚಿದ [ಸಾಲ] ಶರಲ್ಗ
[ಳಿಂ ತೆಱಿಂ |
ಬಿಡಿದಿರೆ ಬೆಟ್ಟುಪೊ] ಗುರ್ಡಿಸಿದಂತೆ ನೆಬಲ್ದಿರೆ ಸುಯ್ಯ
ಪುಣ್ಗಳಿಂ ||
ಬಡನಡುವಂ ಶರಾಳಿಭಯದಿಂ ನಡುಪಂಜರ ಚಿತ್ತದೊಳ್
ಮೃಡಂ |
ತೊಡರ್ವಿರೆ ಬಿಳ್ದದೇಸೆಪದನೋ ಶರಶಯ್ಯೆಯೊಳಂದು
ಸಿಂಧುಜಂ ||

ಕೂದಲನ್ನು
ಸೊಂಪಾಗಿ ಮೃದುವಾಗಿ
ಗುಂಗುರು ಗುಂಗುರಾಗಿ
ನೀಳವಾಗಿ
ಬೆಳೆಸುತ್ತದೆ
ನೀಲ
ದಿ ಸದ್ವೈದ್ಯ ಶಾಲಾ ಲಿ., ನಂಜನಗೂಡು
ಬ್ರಾಂಚುಗಳು: ಬೆಂಗಳೂರು, ಮೈಸೂರು, ಮಂಗಳೂರು, ಹುಬ್ಬಳ್ಳಿ
ಯಾವಾಗಲೂ ನಂಜನಗೂಡು ಟೂತ್ ಪೌಡರ್ ಉಪಯೋಗಿಸಿ

ಹರನೊಳೆ ಪತ್ತಿ ತೆತ್ತಿಸಿದ ಚಿತ್ತಮನಿರ್ಬಗಿಯಾಗೆ
ಮೋಹಮೊ |
ತ್ತರಿಸೆ ಸುಯೋಧನಂಗೆ ರಣಭೂಮಿಯೊಳೆಂತುಟವಸ್ಥೆಯೆ
ಕನ. ||
ಲ್ದುರಿದಪುದೆನ್ನ ಮೆಯ್ಯೆನುತಮತ್ತಣ ಸಂಬಲ ಬಂಬಲೊಳ್
ತೆರ
ದಿಂದುದು ಚಿತ್ತಮಾದೊರೆಯ ಯೋಗಿಗಮಿಂತುಟೆ ಮೋಹ
ಮಾಗದೇ ||

(ವಿಕ್ರಮಾರ್ಜುನ ವಿಜಯ XIII ೬೨-೬೩)

ಭೀಷ್ಮಾಚಾರ್ಯರ ಶರೀರದ ರೋಮರೋಮಗಳಲ್ಲೆಲ್ಲ ಬಾಣಗಳು ಚುಚ್ಚಿದ್ದುವು. ಅವು ಅವರ ಬಡನಡುವನ್ನು ಘಾಯವಾಗದಂತೆ ಬಾಣಗಳ ಸಮೂಹದ ಅಂಜಿಕೆಯಿಂದ ಕಾಪಾಡುತ್ತಿರಲಾಗಿ, ಅವರು ಮನಸ್ಸಿನಲ್ಲಿ ಈಶ್ವರನ ಧ್ಯಾನಮಾಡುತ್ತ ಶರಶಯನದಲ್ಲಿ ಮಲಗಿದ್ದರು. ಹೀಗೆ ಈಶ್ವರನಲ್ಲಿ ನೆಟ್ಟ ಮನಸ್ಸನ್ನು ಇಬ್ಭಾಗವಾಗಿಸಿ ಮೋಹ ಒತ್ತರಿಸಲಾಗಿ " ಸುಯೋಧನನಿಗೆ ರಣಭೂಮಿಯಲ್ಲಿ ಯಾವ ತರದ ಅವಸ್ಥೆಯಾಯಿತೋ! ಸಿಟ್ಟಿಗೆದ್ದು ನನ್ನ ಮೈ ಉರಿಯುವುದು " ಎನ್ನುತ್ತ ಅತ್ತಣ ಹಂಬಲದಲ್ಲಿಯೂ ಮನಸ್ಸನ್ನು ತೊಡಗಿಸಿದ್ದರು

ಮೇಲಿನ ಪದ್ಯಗಳಲ್ಲಿ ಭೀಷ್ಮಾಚಾರ್ಯರು ' ಚಿತ್ತದೊಳ್ ಮೃಡಂ ತೊಡರ್ದಿರೆ ' ಹಾಗೂ ' ಹರನೊಳೆ ಪತ್ತಿ ತೆತ್ತಿಸಿದ ಚಿತ್ತ'ವುಳ್ಳವರಾಗಿದ್ದರೆಂದು ಪಂಪನು ಹೇಳಿದ್ದಾನೆ ಅವರು ಶಿವನ ಧ್ಯಾನದಲ್ಲಿ ತಲ್ಲೀನರಾಗಿದ್ದರಿಂದ, ಅವರು ಶಿವೋಪಾಸಕರೆಂದು ಪಂಪನು ಹೇಳಿದಂತಾಯಿತು. ಆದರೆ ವ್ಯಾಸರ ಭಾರತದಲ್ಲಿಯ ಭೀಷ್ಮಾಚಾರ್ಯರು ಕೊನೆಯ ವರೆಗೂ ಕೃಷ್ಣನಲ್ಲಿ ಅತುಲ ಭಕ್ತಿಯುಳ್ಳವರು. ತಾವು ಜೀವವನ್ನು ಬಿಡುವ ಪೂರ್ವದಲ್ಲಿ, ತಮ್ಮ ಭೆಟ್ಟಿಗೆ ಬಂದ ಧರ್ಮರಾಜ, ಧೃತರಾಷ್ಟ್ರ ಮೊದಲಾದವರೆಲ್ಲರಿಗೂ ಉಪದೇಶಮಾಡಿ, ಕೃಷ್ಣನ ಕಡೆಗೆ ತಿರುಗಿ, " ವಾಸುದೇವ! ಪಾಂಡವರನ್ನು ಕಾಪಾಡಿಕೊ! ಅವರಿಗೆ ನೀನೇ ಗತಿ. ನೀನು ಸಂಧಾನಕ್ಕೆ ಬಂದಿದ್ದಾಗ ನಾನು ಕೃಷ್ಣನಿದ್ದ ಕಡೆಗೆ ಜಯವಾಗುತ್ತದೆ. ಸಂಧಾನ ಮಾಡಿಕೊ! ಎಂದು ದುರ್ಯೋಧನನಿಗೆ ಹೇಳಿದೆ. ಆ ಮೂಢ ನನ್ನ ಮಾತನ್ನು

ಕೇಳಲಿಲ್ಲ; ಭೂಮಿಯನ್ನು ನೋಯಿಸಿ ತಾನೂ ಪ್ರಾಣಬಿಟ್ಟ. ನೀನು ಪುರಾತನ ಋಷಿಯಾದ ನಾರಾಯಣನ ಅವತಾರವೆಂದು ನನಗೆ ವ್ಯಾಸನೂ ನಾರದನೂ ಹೇಳಿದ್ದಾರೆ. ನನಗೆ ದೇಹಬಿಡಲು ಅಪ್ಪಣೆ ಕೊಡು. ನೀನು ಅನುಜ್ಞೆ ಕೊಟ್ಟರೆ ನನಗೆ ಸದ್ಗತಿಯಾಗುತ್ತದೆ." ಎಂದನು. ಕೃಷ್ಣನು, "ಅನುಜ್ಞೆ ಕೊಟ್ಟಿದ್ದೇನೆ. ಭೀಷ್ಮ! ಹೋಗು! ಅಷ್ಟವಸುಗಳನ್ನು ಕೂಡಿಕೊ! ನೀನು ನಿರ್ದೋಷಿ; ಶುದ್ಧಾತ್ಮ; ಪಿತೃಭಕ್ತ; ರಾಜರ್ಷಿ; ಎರಡನೆಯ ಮಾರ್ಕಂಡೇಯ; ಆದ್ದರಿಂದ ಮೃತ್ಯುವು ನಿನಗೆ ವಶವಾಗಿ ಆಳಿನಂತೆ ಕೈ ಕಟ್ಟಿಕೊಂಡು ನಿಂತಿದೆ" ಎಂದನು.

ಇದನ್ನೆಲ್ಲ ನೋಡಿದರೆ, ವ್ಯಾಸರು ತಮ್ಮ ಭಾರತದಲ್ಲಿ ಭೀಷ್ಮಾಚಾರ್ಯರನ್ನು ಕೃಷ್ಣನಲ್ಲಿ ಅತುಲವಾದ ಆದರ ಹಾಗೂ ಪ್ರೇಮವುಳ್ಳವರೆಂದು ಚಿತ್ರಿಸಿದ್ದಾರೆ; ಅದೇ ಭೀಷ್ಮಾಚಾರ್ಯರನ್ನು ಪಂಪನು ತನ್ನ ಭಾರತದಲ್ಲಿ ಉದಾತ್ತ ಶಿವಭಕ್ತರೆಂದು ಚಿತ್ರಿಸಿದ್ದಾನೆಂದು ಹೇಳಬಹುದು.

ವ್ಯಾಸರ ಭಾರತದಲ್ಲಿ ಕೃಷ್ಣನಿಗೆ ಪ್ರಾಮುಖ್ಯವಾದ ಸ್ಥಾನವಿದೆ; ಆದರೆ ಪಂಪನು ತನ್ನ ಭಾರತದಲ್ಲಿ ಕೃಷ್ಣನಿಗೆ ಪ್ರಾಮುಖ್ಯವಾದ ಸ್ಥಾನ ಕೊಟ್ಟಿಲ್ಲ. ಕಾವ್ಯದಲ್ಲಿ ಅಲ್ಲಲ್ಲಿ ಶಿವನ ಪರವಾದ ಹೇಳಿಕೆಗಳು ಹಾಗೂ ಶಿವಸ್ತುತಿಗಳು ನೋಡಲು ಸಿಗುತ್ತವೆ. ದಿ. ಬಿ. ಎಂ. ಶ್ರೀ. ಯವರು ವಿಕ್ರಮಾರ್ಜುನ ವಿಜಯದಲ್ಲಿಯ ಪಂಪನ ಶಿವಭಕ್ತಿಯನ್ನು ಕೆಳಗಿನಂತೆ ಕಾಣಿಸಿದ್ದಾರೆ: (ಕನ್ನಡ ಕೈಪಿಡಿ ಸಂ. ೨; ಪುಟ ೫೧೯–೨೦)

೧) ಅರಿಕೇಸರಿ ಈಶ್ವರ ಉದಾರಮಹೇಶ್ವರ [ವಿ. ವಿ. ೧. ೨]

೨) ಗುಣಾರ್ಣವನಾದ ಅರ್ಜುನನು ಹುಟ್ಟುವುದಕ್ಕೆ ಆತನ ತಾಯಿ-ತಂದೆಗಳು ಶಿವನನ್ನು ಅರ್ಚಿಸುವರು. [೧. ೧೩೫]

೩) ತೀರ್ಥಯಾತ್ರೆಯಲ್ಲಿ ಅರ್ಜುನನು "ಗೋಕರ್ಣನಾಥನಂ ಗೌರೀನಾಥನಂ........ಕಂಡು ಕೈಗಳನ್ನು ಮುಗಿದು ಸರ್ವಜಗತಾಂ ಗುರುರ್ಗಿರಿಸುತಾಪತಿಃ ಪಾತುನಃ" ಎಂದು ಫಾಳೇಂದುಮೌಳಿಯಂ ಸ್ತುತಿಸುವನು. (IV. ೨೭)

೪) ಇಂದ್ರಕೀಲದಲ್ಲಿ ಬರುವ ಶಿವಪಾರಮ್ಯವನ್ನು ಬೇರೆ ಹೇಳಬೇಕಾಗಿಲ್ಲ (VIII ೮–೨೬)

೫) ಭೀಷ್ಮನು "ಶ್ವೇತನ ಬಿಲ್ಲೊಳಿರ್ದ ಮದನಾರಿಯ ರೂಪಿರ್ದೆಗೊಳ್ವುದುಂ ಉದಾತ್ತ ಭಕ್ತಿಯೊಳ್" ಕೈಮುಗಿಯುವನು. (X ೧೧೪)

೬) ಸೈಂಧವವಧೆಗಾಗಿ ವರವನ್ನು ಬೇಡಲು ಕೃಷ್ಣನು ಅರ್ಜುನನನ್ನು ಶಿವನಲ್ಲಿಗೆ ಕರೆದೊಯ್ಯುವನು. (IX ೩೦–೧೬೧)

೭) ಕರ್ಣಾರ್ಜುನರ ಕಾಳೆಗವನ್ನು ಆಕಾಶದಲ್ಲಿ ನೋಡುತ್ತಿದ್ದ ದೇವತೆಗಳಲ್ಲಿ ಶಿವನೂ ಪಾರ್ವತಿಯೂ ಪ್ರಮುಖರು. (XII ೧೬೯, ೧೪೨, ೪೪)

ಸ್ವಾತಂತ್ರ್ಯದಿನೋತ್ಸವದ ನಿಮಿತ್ತ
ಒಲವಿನ ಕಾಣಿಕೆ!
ನಮ್ಮ ಕೋಟ್ಯವಧಿ ಗ್ರಾಹಕರಿಗೆ, ಸಹಸ್ರಾವಧಿ ಥೋಕ-ವ್ಯಾಪಾರಿಗಳಿಗೆ ಮತ್ತು ಕಿರುಕೋಳ ವ್ಯಾಪಾರಿಗಳಿಗೆ
ESTRELA
REGD TRADE MARK
ಎಸ್ಟ್ರೇಲಾ ನಿರ್ಮಾತೃಗಳ
ಬೆಳಬಾಳುವ ಟಾರ್ಚುಗಳು, ಸೆಲ್ಲುಗಳು, ಬ್ಯಾಟರಿಗಳು!

೮) ಶರಶಯನದಲ್ಲಿ ಭೀಷ್ಮನು ಶಿವಧ್ಯಾನ ಮಾಡುತ್ತಿರುವನು. 'ಚಿತ್ತದೊಳ್ ಮೃಡಂ ತೊಡರ್ದಿರೆ' 'ಹರನೊಳೆ ಪತ್ತಿ ತೆತ್ತಿಸಿದ ಚಿತ್ತಮಂ' (XIII ೬೨–೬೩)

ಮೇಲೆ ಕಾಣಿಸಿದುವುಗಳನ್ನು ಹೇಳಿ ಕೊನೆಗೆ ದಿ. ಶ್ರೀಯವರು ಈ ಅಭಿಪ್ರಾಯಕ್ಕೆ ಬಂದಿದ್ದಾರೆ: ಪಂಪನ ಈ ಶಿವಭಕ್ತಿ ಕೇವಲ ಭಾರತಕಥೆಯಿಂದಲೇ ಬಂದುದಲ್ಲ; ರಾಜನ ಇಷ್ಟದೇವತೆಯ ನಿರ್ದೇಶಕ್ಕಾಗಿಯೇ ಅಲ್ಲ; ಪಂಪನ ಮನೆತನದ ಉಪಾಸನಾ ಫಲವೂ ಆಗಿರಬೇಕು. [ಕನ್ನಡ ಕೈಪಿಡಿ ಸಂ. ೨ ಪುಟ ೫೨೦]

ಪಂಪನ ಶಿವಭಕ್ತಿಯನ್ನು ತೋರಿಸುವುದಕ್ಕಾಗಿ ಮೇಲೆ ಕಾಣಿಸಿದ ಸಂಗತಿಗಳು ವ್ಯಾಸರ ಭಾರತದಲ್ಲಿಲ್ಲ. ಸೈಂಧವವಧೆಗಾಗಿ ವರವನ್ನು ಬೇಡಲು ಕೃಷ್ಣನು ಅರ್ಜುನನನ್ನು ಶಿವನಲ್ಲಿಗೆ ಕರೆದೊಯ್ಯುವ ಒಂದೇ ಒಂದು ಸಂಗತಿಯು ಸಾಕು, ಪಂಪನು ತನ್ನ ಭಾರತದಲ್ಲಿ ಕೃಷ್ಣನಿಗಿಂತ ಶಿವನಿಗೆ ಹೆಚ್ಚಿನ ಸ್ಥಾನ ಕೊಟ್ಟಿದ್ದಾನೆಂದು ತೋರಿಸಲು

ಆದ್ದರಿಂದ ಪಂಪನು ಮೇಲೆ ಕಾಣಿಸಿದ ಶಿವಭಕ್ತಿಯ ಕಥಾನಕಗಳುಳ್ಳ ಬೇರೊಂದು ಭಾರತವನ್ನು ಅನುಸರಿಸಿ ತನ್ನ ವಿಕ್ರಮಾರ್ಜುನ ವಿಜಯ ಬರೆದಿರಬಹುದೆ? ಇಲ್ಲವೆ ವ್ಯಾಸರ ಭಾರತದಲ್ಲಿಲ್ಲದ ಕಥಾನಕಗಳನ್ನು ಪಂಪನು ತನ್ನ ಆಶ್ರಯದಾತನ ಹಾಗೂ ತನ್ನ ಮನೆತನದ ಸಂಪ್ರದಾಯಕ್ಕನುಸರಿಸಿ ಯೋಗ್ಯವಾಗುವಂತೆ ಕಲ್ಪಿಸಿಕೊಂಡಿರಬಹುದೆ?

ತಾಳಿದವ ಬಾಳಿಯಾನು!

(ಸಣ್ಣ ಕತೆ)

ಶ್ರೀಮತಿ ಎಂ. ಕೆ. ಜಯಲಕ್ಷ್ಮಿ ಕರಗಡ

卐

ಸಿದ್ಧನ ಸ್ವೈರಣೆಯನ್ನು ನಮ್ಮ ಸಾಂಪ್ರದಾಯಿಕ ಬುದ್ಧಿ ಎಂದೂ ಒಪ್ಪಲಾರದು; ಆದರೆ ಆತನ ಸ್ವೈರಣೆ, ತಪ್ಪುಗಾರಗನ್ನು ಪಶ್ಚಾತ್ತಾಪಕ್ಕೆ ಗುರಿಮಾಡಿದುದೂ ಸ್ವಂತದ ಬದುಕನ್ನು ಬೆಲ್ಲದ ಸವಿಯಿಂದ ತುಂಬಿಕೊಂಡುದೂ ವಾಸ್ತವಸಂಗತಿ!

卐

ಬಸ್ಸು ಬರುವುದನ್ನೇ ಕಾಯುತ್ತ ಕೂತಿದ್ದರು. ಮಾದ-ಗಂಗೆಯರು. ಅವರ ಕಳೆಗುಂದಿದ ಮುಖ ಕಂಡು ಲಾರಿಯವನು ವೇಗ ಕಡಿಮೆ ಮಾಡಿ, "ಎಲ್ಲಿಗೆ ಹೋಗ್ಬೇಕು ? ಲಾರಿ ಖಾಲಿಯಿದೆ-ಟೌನಿಗೆ ಹೋಗುವುದಾದರೆ ಬನ್ನಿ" ಎಂದ.

"ಇಲ್ಲಪ್ಪಾ. ನಾವು ಎಲ್ಲಿಗೂ ಹೋಗಬೇಕಾಗಿಲ್ಲ. ನಮ್ಮ ಅಣ್ಣಯ್ಯ ಬರುವುದನ್ನು ಕಾಯ್ತಿದ್ದೇವೆ." ಎಂದ ಮಾದ.

ಮತ್ತೊಂದು ಬಸ್ಸು ಹೋಯಿತು; ಅದರಲ್ಲೂ ಸಿದ್ದಣ್ಣ ಬರಲಿಲ್ಲ.

"ಗಂಗೆ, ನಂಗೇಕೋ ಅನುಮಾನ—ಅಣ್ಣಯ್ಯ ಸಿನಿಮಾ ನೋಡೋಕೆ ಪೇಟೇಲೇ ನಿಂತನೋ ಏನೋ! ಈ ದಿನ ಖಂಡಿತ ಬರಬೇಕಾಗಿತ್ತು—ನಿನ್ನೆಗೇ ಕೆಲಸದ ಗಡು ತೀರಿತು."

"ಇಲ್ಲ, ಇಲ್ಲ! ಭಾವಯ್ಯ ಹಾಗೆ ನಿಲ್ಲುವುದಿಲ್ಲ. ನಮ್ಮನ್ನ ಬಿಟ್ಟು ಯಾವ ನೋಟ ನೋಡಿದರೂ ನೋಡಿದಂತಾಗುವುದಿಲ್ಲ—ಎಂದು ಹೇಳ್ತಾರೆ. ರಾತ್ರಿಗೆ ಖಂಡಿತ ಬರ್‍ತಾರೆ; ಏಕೋ ತಡವಾಗಿದೆ."

"ಏನು ಅಡಿಗೆ ಮಾಡಿದ್ದಾಳೆ ಅತ್ತಿಗೆ ?"

"ಅತ್ತಿಗೆ ಏಕೆ—ನಾನೇ ಮಾಡಿಟ್ಟು ಬಂದೆ. ತೂಬಿನ ಬಳಿ ಬಲೆ ಹಾಕಿ ಮೀನು ಹಿಡಿದಿದ್ದೆ. ಅದನ್ನೇ ಉಜ್ಜಿ, ಮೇಲೋಗರ ಮಾಡಿದ್ದೇನೆ."

"ಸರಿ. ನೀ ಗಡಾ ಮನೇ ಕಡೆ ನಡೆ. ಕಡೆಯ ಬಸ್ಸು ಬರುವುದು ಇನ್ನೂ ತಡ; ಅದೊಂದನ್ನು ನೋಡಿಕೊಂಡು ಬಂದ್ಬಿಡ್ತೀನಿ...."

ಗಂಗೆ ಮೇಲೆದ್ದಳು. ಮನೆಯ ಕಡೆಯಿಂದ ಏಳು-ಬೀಳುವುದನ್ನೂ ಲೆಕ್ಕಿಸದೆ ಕಾಳಿ-ರಂಗಿಯರು ಓಡಿಬರುವುದನ್ನು ಕಂಡು, ಹಾಗೇ ನಿಂತಳು. ರಂಗಿಯನ್ನು ತಬ್ಬಿಕೊಂಡು ಮುದ್ದಿಸಿದಳು.

ರಂಗಿಗೆ ಮೂರು ವರ್ಷ. ಕೆದರಿದ ಕೂದಲು, ಹೊಳಪುಗಣ್ಣು, ನಸುಗೆಂಪುಬಣ್ಣ. "ಚಿಕ್ಕವ್ವಾ, ಅಪ್ಪಂಗೆ ಕೊಡೋಕೆ ರೂಪಾಯಿ ತಂದನ್ನಿ !"

—ಎಂದು ಹೆಮ್ಮೆಯಿಂದ ಹುಬ್ಬು ಹಾರಿಸಿದಳು—ಲಂಗದಲ್ಲಿ ತುಂಬಿ ತಂದಿದ್ದ ಕಲ್ಲುಗಳನ್ನು ತೋರಿಸುತ್ತಾ.

"ಅಸ್ಸೀ....!" ಎಂದು ಸಿಟ್ಟಿನಿಂದ ಕಲ್ಲುಗಳನ್ನೆಲ್ಲಾ ಕೆಡವಿ ಗದರಿದಳು ಗಂಗೆ—

"ಎಲ್ಲೋ ಶುದ್ಧ ಮಂಗಾ, ಹೊಸ ಲಂಗಾನ ಹಾಳು ಮಾಡ್ಕೊಳ್ತೀ !"

ರಂಗಿಯ ಮುಖ ಸಪ್ಪೆಯಾಯಿತು. ಅದನ್ನು ಕಂಡು ಗಂಗೆಗೂ ಕಸಿವಿಸಿಯಾಯಿತು.

"ಈಗ ನಿಮ್ಮಪ್ಪ, ಕಾಫಿ ತೋಟದಲ್ಲಿ ದುಡಿದು ಗಳಿಸಿದ ರೂಪಾಯಿ ತರ್‍ತದೆ. ನಿನ್ನ ಲಂಗದ ತುಂಬಾ ರೂಪಾಯಿ ತುಂಬುತ್ತೆ. ಹೋಗಿ ಬೇಲಿಯ ಹೂ ಕಿತ್ತು ತಾ. ಆಮೇಲೆಯಂತೆ."—ಎಂದು ನಕ್ಕು ಅವಳನ್ನೂ ನಗಿಸಿದಳು.

ರಂಗಿ ಉತ್ಸಾಹದಿಂದ ಕೈ ಚಪ್ಪಾಳೆಯಿಟ್ಟುಕೊಂಡು ಕುಣಿಯ ಹತ್ತಿದಳು—

"ಅಪ್ಪಾ ಬರ್‍ತಾನೆ—ಹೂವು ತರ್‍ತಾನೆ—ಹಣ್ಣು ತರ್‍ತಾನೆ. ರೂಪಾಯಿ ತರ್‍ತಾನೆ—ಲಂಗದ ತುಂಬಾ ರೂಪಾಯಿ ತುಂಬ್ತಾನೆ—ಕೆನ್ನೆ ತುಂಬಾ ಮುತ್ತು ಕೊಡ್ತಾನೆ...."

ಗಂಗೆ ಹೇಳಿಕೊಟ್ಟಂತೆ ತನ್ನ ಬಾಲಭಾಷೆಯಲ್ಲಿ ಹೇಳುತ್ತಾ ಕುಣಿದಳು.

ಕಾಳನಿಗೆ ಸುಮಾರು ಎಂಟು ಒಂಬತ್ತು ವರ್ಷ. ಸಾಹುಕಾರರ ಮನೆಯಲ್ಲಿ ದನಕಾಯುವ ಜೀತಕ್ಕಿದ್ದ. ಅವನೂ ಅಪ್ಪನನ್ನು ಎದುರುಗೊಳ್ಳಲು ಬಂದಿದ್ದ.

"ಅಕ್ಕಯ್ಯಾ—ಬಸ್ಸುಸದ್ದು ಕೇಳಿ ಅಪ್ಪ ಬಂದಾ—ಅ ತಾ ಒಂದೇ ಉಸುರಿಗೆ ಓಡಿ ಬಂದೆ. ಧಣಿಗಳ ಮನೇಲಿ 'ಹಾಲುಬಾಯಿ' ಕೊಟ್ಟಿದ್ದರು; ಅಪ್ಪನಿಗೆ ಕೊಟ್ಟರು ಅಂತ ಅವ್ವನ ಕೈಲಿ ಕೊಟ್ಟು ಓಡಿ ಬಂದೆ. ಈ ರಂಗಿಯೂ ಬೆನ್ನುಹತ್ತಿಬಿಡ್ತು" ಎಂದ ತುಂಬಿದ ಉತ್ಸಾಹದಿಂದ.

"ನೀ ಹೋಗು ಗಂಗೆ. ಅಣ್ಣಯ್ಯನಿಗೆ ಅಂತ ಹಲಸಿನಹಣ್ಣು ತಂದಿಟ್ಟಿದ್ದೇನೆ. ತೊಳೆ ಬಿಡಿಸಿಟ್ಟಿರು."

ಬಸ್ಸು ದಿನಕ್ಕಿಂತ ತಡವಾಗಿ, ರಾತ್ರಿ ಎಂಟಕ್ಕೆ ಬಂದಿತು. ನಿತ್ಯವೂ ಆ ವೇಳೆಗೆ ನಿದ್ರೆಯಲ್ಲಿ ಮುಳುಗಿರುತ್ತಿದ್ದ ರಂಗಿ-ಕಾಳರು ಹಸಿವನ್ನೂ ಮರೆತು ಅಲ್ಲೇ ಕಾದಿದ್ದರು.

ಬಸ್ಸು ನಿಂತದ್ದೇ ತಡ—ಇಳಿಯುವವರಿಗೂ ಸ್ಥಳ ಬಿಡದಂತೆ ಆಕಾದವರೂ, ಮುತ್ತಿಕೊಂಡರು. ಕಂಡಕ್ಟರನ ಸಿಡಿಮಾತು ಅವರ ಕಿವಿಗೇ ಬೀಳಲಿಲ್ಲ.

ಸಿದ್ದಣ್ಣ—ಮುಂದುಗಡೆಯಲ್ಲಿದ್ದವನು, ಅಲ್ಲಿಂದಲೇ ಕೂಗುಹಾಕಿ ಜಾಗಮಾಡಿಕೊಂಡು ಇಳಿದ. ರಂಗಿ ಅವನ ಕಾಲುಗಳನ್ನು ಅಪ್ಪಿಕೊಂಡಳು. ಸಿದ್ದಣ್ಣ ಅವಳನ್ನೆತ್ತಿಕೊಂಡು ಮುದ್ದಿಸಿದ. ಮಾದ ಬಸ್ಸಿನಿಂದ ಗಂಟುಮೂಟೆ ಇಳಿಸಿಕೊಂಡ.

ಎಲ್ಲರೂ ಆನಂದವಾಗಿ ಮಾತನಾಡುತ್ತ ಮನೆಯತ್ತ ನಡೆದರು.

ಸಿದ್ಧ, ಮಾದ ಅಣ್ಣ—ತಮ್ಮಂದಿರು. ರಂಗಮ್ಮ ಅವರ ತಾಯಿ. ಅವಳು ಸಿದ್ಧನಿಗೆ ಗೌರಿಯನ್ನು ತಂದು ಲಗ್ನಮಾಡಿದಳು. ತನ್ನ ಮಕ್ಕಳು ಮುಂದೂ ಅನ್ಯೋನ್ಯವಾಗಿರಲೆಂದು ಆ ತಾಯಿಯ ಹಂಬಲ. ಗಂಡಸರು ಕೂಡಿ ನಡೆದರೂ, ಅವರ ಹೆಂಗಸರು ಹೊಂದಾಣಿಕೆಯಿಲ್ಲದೆ ನಡೆದರೆ ಅನ್ಯೋನ್ಯತೆ ಉಳಿಯುವುದಿಲ್ಲನೆಂದು ಅವಳಿಗೆ ತಿಳಿದಿತ್ತು. ಆದ್ದರಿಂದ ಅಣ್ಣ-ತಮ್ಮಂದಿರಿಗೆ ಅಕ್ಕ-ತಂಗಿಯರನ್ನೇ ತಂದರೆ ಕರುಳ್ಳು ಸಂಬಂಧ ನೆನೆದಾದರೂ ಮನೆಯ ಹೆಂಗಸರು ಒಗ್ಗಟ್ಟಾಗಿರುವರೆಂದು ಬಗೆದಳು. ಗೌರಿಯ ತಂಗಿ ಗಂಗೆಯನ್ನು ಮಾದನಿಗೆ ಕೊಡುವೆನೆಂಬುದಾಗಿ ಕೈಮುಟ್ಟಿಸಿ ಭಾಷೆ ತೆಗೆದುಕೊಂಡಳು. ತನ್ನ ಕಡೆಗಾಲದಲ್ಲಿ ಸಿದ್ಧನನ್ನು ಕರೆದು, ತಮ್ಮ ಯಾವ ತಪ್ಪು ಮಾಡಿದರೂ—ತನ್ನನ್ನು ನೆನೆದು ಕ್ಷಮಿಸುವಂತೆ ಪ್ರಮಾಣ ಮಾಡಿಸಿಕೊಂಡಳು.

ರಂಗಮ್ಮನ ಬಯಕೆ ನೆರವೇರಿತು. ಗಂಗೆ ಮಾದನ ಮಡದಿಯಾದಳು. ಸಿದ್ಧ, ಮಾದ ಅನ್ಯೋನ್ಯವಾಗಿದ್ದರು. ಗೌರಿ-ಗಂಗೆಯರು ಒಗ್ಗಟ್ಟಿನಿಂದ ಯಾವ ಭೇದಭಾವವೂ ಇಲ್ಲದೆ ಸಂಸಾರ ಸಾಗಿಸುತ್ತಿದ್ದರು.

ಗೌರಿಗೆ ಮೂರು ಮಕ್ಕಳು: ಕಾಳ, ರಂಗಿ, ಎರಡು ತಿಂಗಳ ಮಗು ಹನುಮಿ. ಗಂಗೆಗೆ ಆದ ಮಗು ತೀರಿಹೋಗಿತ್ತು. ಆದರೂ ಗಂಗೆ ಅಕ್ಕನ ಮಕ್ಕಳೇ ತನ್ನವೆಂದು ಭಾವಿಸಿಕೊಂಡು ನಡೆಸಿಕೊಳ್ಳುತ್ತಿದ್ದಳು.

ಮನೆ ತಲುಪಿದೊಡನೆಯೇ ಗಂಗೆ ಲಗುಬಗೆಯಿಂದ ಭಾವನಿಗೆ ಕಾಲುತೊಳೆಯಲು ನೀರುಕೊಟ್ಟಳು. ಗೌರಿ ಮಗುವಿನ ಅಳುವಿನತ್ತವೂ ಗಮನವಿಲ್ಲದೆ, ಗಂಡನನ್ನು ನೋಡಲು ಕೋಣೆಯ ಬಾಗಿಲ ಬಳಿ ನಿಂತು, ಗೆಲವು ಸೂಸಿದಳು.

ಸಿದ್ಧ ಕೈಕಾಲುತೊಳೆದು ಒಳಗೆ ಬಂದ ಗೌರಿಯನ್ನು ಮಾತನಾಡಿಸಿ, ಹನುಮಿಯ ಕೆನ್ನೆ ಸವರಿ, ಊಟಕ್ಕೆ ಹೋದ. ರಂಗಿ ಗೋಣಿಕಾಟಿನ ಕೆಳಗೆ ಮಲಗಿದ್ದ ತನ್ನ ಗೊಂಬೆಯನ್ನೆತ್ತಿಕೊಂಡು, ಬಹಳ ಅಭಿಮಾನದಿಂದ ಬೀಗುತ್ತಾ, ತಂದೆಯ ಬಳಿಗೆ ಬಂದಳು.

ಗಂಗೆ ರಂಗಿಯ 'ಮಗು'ವನ್ನು ನೋಡಿ, ಉಕ್ಕಿದ ನಗುವನ್ನು ...ದಿಂದ ತಡೆದುಕೊಂಡಳು.

"ಏನ್ಲೇ ಮಗಾ ಅದು?" ಎಂದು ಕೇಳಿದ ಸಿದ್ದಣ್ಣ.

"ನೀ ಕಾಪಿ ತೋಟಕ್ಕೆ ಹೋಗಿ ತುಂಬಾ ರೂಪಾಯಿ ತಂದಿದೀ ಎಂತೆ ನನ್ನ ಗೊಂಬೇಗೆ ಜರೀಲಂಗಾ, ಬಳೆ, ಸರ ಎಲ್ಲಾ ಕೊಡಿಸು" ಎಂದಳು ಗತ್ತಾಗಿ.

ಸಿದ್ಧ, ಮಾದ ಜೋರಾಗಿ ನಕ್ಕರು.

ರಂಗಿ ಪೆಚ್ಚಾಗಿ, ಮುಖ ಉದ್ದಮಾಡಿಕೊಂಡು ನಿಂತಳು.

"ಈಕೆ ಸಾಮಾನ್ಯ ಹೆಣ್ಣಾಗುವುದಿಲ್ಲ.. ಸರಿಯಾದ ಗಂಡನನ್ನು ನೋಡ್ಬೇಕು" ಎಂದು ನಕ್ಕಳು ಗಂಗೆ.

ಗೌರಿ ಹನುಮಿಯನ್ನು ಸಮಾಧಾನ ಮಾಡಿ, ಸಿದ್ಧನ ಪಕ್ಕದಲ್ಲಿ ದಟ್ಟಿಹಾಕಿ, ಮೇಲೆ ಮಗುವನ್ನು ಮಲಗಿಸಿದಳು. ರಂಗಿ ಗಂಭೀರವಾಗಿ ಬಂದು ಸಿದ್ಧನ ತೊಡೆಯ ಮೇಲೆ ತನ್ನ ಗೊಂಬೆಯನ್ನು ಮಲಗಿಸಿ ತಾನೂ ಪಕ್ಕದಲ್ಲಿ ಕೂತಳು.

"ನನ್ನ ಗೊಂಬೆಗೆ ಜರೀಲಂಗ ಬೇಕು!" — ಎಂದಳು ಗಂಭೀರವಾಗಿ.

"ಆಗಲವ್ವಾ. ಸರ, ಬಳೆ—ಅಷ್ಟೇ ತಾನೇ?"

"ಹೂಂ. ನೀಲೀಲಂಗ—ತುಂಬಾ ಜರಿ ಇರ್ಬೇಕು. ಯಾ ದಿನ ತಂದುಕೊಡ್ತೀಯಾ?"

ಸಿದ್ಧ ಕತ್ತೆತ್ತಿ ನೋಡಿದ. ಗೌರಿ ತುಂಬುಗಣ್ಣುಗಳಿಂದ, ಹೆಮ್ಮೆಯಿಂದ, ತನ್ನನ್ನು ನಿಟ್ಟಿಸುವುದನ್ನು ಕಂಡ.

"ನಿನ್ನ ಮಿರಿಸ್ತಾಳೆ, ಗೌರಿ, ನಿನ್ನ ಮಗಳು! ನೀನು ಮಗೂನ ಪಕ್ಕದಲ್ಲಿ ಮಲಗಿಸಿದರೆ, ಇವಳು ತೊಡೇ ಮೇಲೆ ಮಲಗಿಸಿದಾಳೆ!"

ಮತ್ತೆ ಎಲ್ಲರೂ ನಕ್ಕರು. ರಂಗಿ ಮತ್ತೂ ತಂದೆಯ ಪಕ್ಕಕ್ಕೆ ಸರಿದಳು.

"ಇಷ್ಟು ದಿನ ಮನೆಗೇ ಮಂಕು ಕವಿದಂತಿತ್ತು ಭಾವ. ನೀವಿಲ್ಲದಿದ್ದರೆ ಗೆಲವಿಲ್ಲ, ಕಳೆಯಿಲ್ಲ. ಎಷ್ಟು ಬೇಗ ಕಾಪಿಯ ಕುಯ್ಲು ಮುಗಿದು ನಿಮ್ಮ ಗಡು ತೀರುವುದೋ ಎಂದು, ದಿನಾನೇ ಎಣಿಸುತ್ತಿದ್ದೆವು." ಎಂದಳು ಗಂಗೆ.

ಅದು ಉತ್ಪ್ರೇಕ್ಷೆಯಲ್ಲ, ಎದೆಯಾಳದಿಂದ ಬಂದ ಮಾತು—ಎಂದು ಎಲ್ಲರಿಗೂ ಗೊತ್ತು.

ಹಿತಸಂಸಾರದ ಸುಖಸರ್ವಸ್ವ ಅವನದಾಗಿತ್ತು. ಬೆಲೆ ಕೊಟ್ಟು ಕೊಳ್ಳಲಾಗದ, ತಾಳ್ಮೆ-ಪ್ರೀತಿ-ವಿಶ್ವಾಸಗಳಿಂದ ಮಾತ್ರ ಗಳಿಸಬಹುದಾದ. ಮಧುರ ಆತ್ಮೀಯತೆ, ಗೌರವಾದರಗಳು ಅವನ ಪಾಲಿಗಿದ್ದುವು.

ಸಿದ್ಧ ಅವರೆಲ್ಲರ ಗೆಲವು, ನಲಿವನ್ನು ಕಂಡು ಹಿಗ್ಗಿದ, ತೃಪ್ತನಾದ, ಪ್ರಸನ್ನನಾದ.

ಊಟವಾದನಂತರ, ಅಂಗಳದಲ್ಲಿ ತಿಂಗಳ ಬೆಳಕಲ್ಲಿ ಕೂತು ಸಿದ್ಧ ತಾಂಬೂಲ ಜಗಿದ. ಬೇಸಾಯದ ಬಗ್ಗೆ, ಕಂದಾಯದ ಬಗ್ಗೆ ಮಾತು ತಿರುಗಿತು.

"ಶ್ಯಾನುಭೋಗರು ಕಂದಾಯ ವಸೂಲಿಗೆ ತಗಾದೆ ಮಾಡ್ತಾ ಇದಾರೆ. ನೀ ಕಾಪಿ ತೋಟದಿಂದ ಬಂದ ಕೂಡಲೆ ಕಂದಾಯ ಮಾಡ್ತೀನಿ ಅಂತಾ ಗಡುಹೇಳಿದೇನೆ."

" ಆದ್ಯಾಕೆ ಮಾದ? ದೇವೀಕೆರೆಯ ಭೈರಪ್ಪನಿಗೆ ನೋಟ ಹೊಡೆದುಕೊಟ್ಟಿದ್ದೇನೆ. ಆ ಪೈಕಿ ಐವತ್ತು ರೂಪಾಯಿ ಬರಬೇಕು. ವಸೂಲಿ ಮಾಡಿಕೋ ಅಂತ ಹೇಳಿ ಹೋಗಿರಲಿಲ್ಲವೇ ?"

" ಸ....ರಿ, ಆ ಹಣ ಇನ್ನು ಬಂದಂತೇನೇ ಸೈ! ಅವನ್ನ ಪೋಲೀಸಿನೋರು ಲಾಕಪ್ಪಿಗೆ ಒಯ್ದು ವಾರದ ಮೇಲಾಯಿತು!"

" ಏಕೆ?"—ಅಚ್ಚರಿಯಿಂದ ಕೇಳಿದ ಸಿದ್ದ.

ಬೋರಪ್ಪ ದೊಡ್ಡ ಆಳು, ದೊಡ್ಡ ಕುಳ. ಅವನಿಗೆ ಜೈಲುವಾಸವಾಗಬೇಕಾದರೆ ?

" ಬೋರಪ್ಪನಿಗೆ ಹೋದವರ್ಷ ಮೂರನೇ ಲಗ್ನವಾಗಲಿಲ್ವಾ? ಅವನ ಹೆಂಡತಿ ಬೇರೆ ಯಾವನನ್ನೋ ಇಟ್ಕೊಂಡಿದ್ದಳಂತೆ. ಬೋರಪ್ಪನಿಗೆ ಅನುಮಾನವಿತ್ತು ಅಂತ ಕಾಣುತ್ತೆ. ಪೇಟೆಗೆ ಹೋಗ್ತೀನೆ ಅಂತ ಸುಳ್ಳು ಹೇಳಿ, ಹೊಂಚಿ ಕಾಯ್ದನಂತೆ. ಹೆಂಡತೀನೂ ಆಯಪ್ಪನೂ ಮಾತಾಡ್ತಾ ಇದ್ದಾಗ, ಏಕ್‌ದಂ ಬಂದವನೇ ಕುಡ್ಲಿನಿಂದ ಇಬ್ಬರನ್ನೂ ಕಡಿದುಬಿಟ್ಟನಂತೆ. ಎರಡು ತಲೆಗಳನ್ನೂ ಗೋಣೀ ಚೀಲಕ್ಕೆ ಹಾಕಿಕೊಂಡು 'ಸರ್ಕಾರದವರಿಗೆ ಎರಡು ತೆಂಗಿನಕಾಯಿನ ಹರಕೆ ಒಪ್ಪಿಸುತೇನೆ' ಅಂತ ಕೇಕೆ ಹಾಕುತ್ತಾ ಪೇಟೆಗೆ ಹೋಗಿ ಪೋಲೀಸಿನವರಿಗೆ ಚೀಲ ಕೊಟ್ಟನಂತೆ. ಆ ರಕ್ತ, ಆ ರುಂಡ ನೋಡಿ ಪೋಲೀಸಿನವರೂ ಭಯಬಿದ್ದರಂತೆ. ಈಗ ಲಾಕಪ್ಪಿನಲ್ಲಿ ಅವನನ್ನು ಕೂಡಿಸಿ ಕೇಸ್ ಹಾಕಿದಾರೆ."

" ಅನ್ಯಾಯ, ತುಂಬಾ ಅನ್ಯಾಯ! ಒಳ್ಳೆಯ ಗುಣಸ್ಥ. ಸಿಟ್ಟಿನ ಕೈಗೆ ಬುದ್ಧಿ ಕೊಟ್ಟು ತೈಮೇಲೆ ಗಂಡಾಂತರ ತಂದುಕೊಂಡ!"

ಸಿದ್ದ ವ್ಯಾಕುಲದಿಂದ ಹೇಳಿದ.

" ಎಲ್ಲರೂ—ಅವನಿಗೆ ಗಲ್ಲಾಗುವುದು ನಿಶ್ಚಯ ಅಂತಾರೆ?"

" ಗಲ್ಲಾಗುತ್ತೆ—ಇಲ್ಲಾ—ಜೀವಾವಧಿ ಶಿಕ್ಷೆಯಾಗುತ್ತೆ. ಅವನ ಗತ್ತು ಗೌರವ ಎಷ್ಟಿತ್ತು! ಅವನಿಗೆ ಇಂತಹ ಅವಸ್ಥೆಯಾಯಿತಲ್ಲಾ ಅಂತ ನನ್ನ ಎದೆ ಕುದಿಯುತ್ತೆ."

" ಅವನೂ ಅಷ್ಟು ದುಡುಕಬಾರದಾಗಿತ್ತು. ಹೆಂಡತಿ ಅಂತಹವಳು ಎಂದು ತಿಳಿದ ಮೇಲೆ, ಅವಳನ್ನು ಬಿಟ್ಟು ಬೇರೆ ಲಗ್ನವಾಗಬಹುದಿತ್ತು. ಹಣಸ್ಥ—ಯಾರಾದರೂ ಹೆಣ್ಣು ಕೊಡೋರು ಅವರನ್ನೂ ಕೊಂದು ತಾನೂ ಹೀಗೆ ಅವಸ್ಥೆ ಪಡುವಂತೆ ಮಾಡಿಕೊಂಡ!" ಎಂದಳು ಗಂಗೆ.

ಸಿದ್ದನ ಮುಖ ಗಂಭೀರವಾಯಿತು.

" ಹೇಳೋದು ಸುಲಭ, ಅನುಭವಿಸೋದು ಕಷ್ಟ, ಗಂಗೆ! ಕಣ್ಣಾರೆ ಅನ್ಯಾಯ ಕಂಡರೂ ದುಡುಕದೆ ಸೈರಣೆ ತೆಗೆದುಕೊಳ್ಳೋದು ಕಷ್ಟ. ಆ ವಿಷಗಳಿಗೇಲಿ ನಮ್ಮ ಪೂರ್ವಪುಣ್ಯವೇ ದಾರಿ ತೋರಬೇಕು; ನಮಗೆ ತಾಳ್ಮೆ ಕೊಡಬೇಕು."

ಅದೇಕೋ ಈ ನಾಟಕತೆ ಹಿಡಿಸದವರಂತೆ ಮಾದ, ಗೌರಿ ಚಡಪಡಿಸಿದರು. ಮಾದನ ಮುಖ ವಿವರ್ಣವಾಯಿತು. ತಲೆ ತಗ್ಗಿಸಿಕೊಂಡೇ ಎತ್ತಿಗೆ ಹುಲ್ಲುಹಾಕಲು ಹೋದ. ಗೌರಿ ಮಗುವಿನೆಡೆಗೆ ಹೋದಳು.

ಯಾವುದೋ ನೆನಪು—ಕಹಿನೆನಪು—ಸಿದ್ದನ ಮನದಾಳವನ್ನು ಕಲಕಿತು; ಸಿದ್ದ ನಿಡುಸುಯ್ದ.... ಅವನ ಮನ ನೆನಪಿನ ಗಾಳಿಯನ್ನು ತಿರುವಿತು.... ಹಿಂದೆ :—

ಹದಿನೈದು ವರ್ಷಗಳ ಹಿಂದೆ—

ಗೌರಿ ಹೊಸದಾಗಿ ಸಂಸಾರಕ್ಕೆ ಬಂದಿದ್ದಳು. ಮಾದನಿಗೂ ಮದುವೆಯಾಗಿತ್ತು. ಆದರೆ ಗಂಗೆ ಇನ್ನೂ ಹೆಣ್ಣಾಗಿ ಸಂಸಾರಕ್ಕೆ ಬಂದಿರಲಿಲ್ಲ. ಆಗಲೂ— ಈಗಿನಂತೆಯೇ ಸಿದ್ದ ಕಾಪಿ ಕುಯ್ಲು ಮಾಡಲು ಆಳಾಗಿ ತೋಟಕ್ಕೆ ಹೋಗಿದ.

ಸಿದ್ದನಿಗೆ ಗೌರಿಯ ಹಂಬಲ ಹೆಚ್ಚಿತು. ಅವಳನ್ನು ಬಿಟ್ಟಿರುವುದು ತುಂಬಾ ಕಷ್ಟವಾಯಿತು. ಕೆಲಸದ ಗಡು ತೀರುವ ಮೊದಲೇ, ತನಗೆ ಹೊಟ್ಟೆಶೂಲೆಯೆಂದು ಸುಳ್ಳಾಡಿ, ಗೌರಿಯನ್ನು ಕಾಣಲು ಉತ್ಸಾಹದಿಂದ ಬಂದ...

ತನ್ನ ಬರವಿನಿಂದ ಗೌರಿ ಹೇಗೆ ಚಕಿತಗೊಳ್ಳುವಳೆಂದು. ಎಷ್ಟು ಹಿಗ್ಗುವಳೆಂದು ನೆನೆನೆನೆದು ಪುಲಕಿತನಾಗುತ್ತ ಬಂದ.

ಅವನು ಪೇಟೆಗೆ ಬರುವ ವೇಳೆಗೆ ರಾತ್ರಿ ಎಂಟು ಗಂಟೆ. ಬಸ್ಸುಗಳೆಲ್ಲವೂ ಹೊರಟುಹೋಗಿದ್ದುವು. ಆದರೂ ಅವ ನಿರಾಶನಾಗಲಿಲ್ಲ. ದಾರಿಯಲ್ಲೇ ಕಾದು ಕುಳಿತು, ಆ ಮಾರ್ಗವಾಗಿ ಹೋಗಲಿದ್ದ ಲಾರಿಯನ್ನೇರಿ ಊರಿಗೆ ಬಂದ.

ಅವನು ಮನೆಯ ಬಳಿಗೆ ಬಂದಾಗ ನಡುರಾತ್ರಿ. ಊರೆಲ್ಲಾ ನಿದ್ದೆಯ ಹೊದಿಕೆಯನ್ನು ಹೊದ್ದು ನಿಶ್ಶಬ್ದವಾಗಿ ಮಲಗಿತ್ತು.

ಜಗುಲಿಯ ಮೇಲೆ ನೋಡಿದ—ಮಾದನ ಹಾಸಿಗೆ ಬರಿಯದಾಗಿತ್ತು.

ಸಿದ್ದನಿಗೆ ಅಚ್ಚರಿಯಾಯಿತು. ಈ ನಡುರಾತ್ರಿ ಎಲ್ಲಿ ಹೋಗಿದ್ದಾನೆಂದು ಯೋಚಿಸಿದ; ಹಾಗೇ ಸಮಾಧಾನ ಹೇಳಿಕೊಂಡ—ಎಲ್ಲೋ ಗದ್ದೆಗೆ ನೀರುಕಟ್ಟ ಕಾವಲಿರಲು ಹೋಗಿರಬಹುದು. ಕೆಲಸದಲ್ಲಿ ತುಂಬಾ ಮುತವರ್ಜಿ ಮಾದನಿಗೆ.......

ಬಾಗಿಲನ್ನು ಬಡಿದು ಎಬ್ಬಿಸಿ ಗೌರಿಗೇಕೆ ತೊಂದರೆ ಕೊಡಬೇಕು? ಹಿತ್ತಲಿನ ಮೋಟುಗೋಡೆ ಹಾರಿ ಅಂಗಳಕ್ಕೆ ಬಂದರೆ, ಕದವನ್ನು ಮೀಟಿಕೊಂಡು ಒಳಕ್ಕೆ ಬಂದುಬಿಡಬಹುದು—ಹಾಗೇ ಮಾಡುವುದು—ಎಂದು ನಿರ್ಧರಿಸಿದ.

ತುಂಬಿದ ಉತ್ಸಾಹದಿಂದ, ಚಿಕ್ಕನಂತೆ ಗೋಡೆ ಹಾರಿ ಅಂಗಳಕ್ಕೆ ಬಂದ. ಅಂಗಳದಲ್ಲಿದ್ದ ಗಡಾರಿಯಿಂದ ಕದವನ್ನು ಮೀಟಿದ. ಹಳೆಯ ಕದ. ಅಗಳಿ ಸರಿಯಾಗಿ ಸಿಗುತ್ತಿರಲಿಲ್ಲ. ಕಿರ್ರೆಂದು ಜಾಗ ಕೊಟ್ಟಿತು.

" ಗೌರೀ.... ." ಎಂದು ಕೂಗುತ್ತಾ, ಕೋಣೆಯ ಬಾಗಿಲಿಗೆ ಬಂದ.

ಕೋಣೆಯಲ್ಲಿಯ ದೀಪದ ಕುಡಿ ಅವನನ್ನು ನೋಡಿ ನಕ್ಕಿತು.

ಒಳಗಿನ ದೃಶ್ಯ ನೋಡಿ,—

ಅವನೆದೆ ಬೆಚ್ಚಿತು; ತಲೆ ಚಕ್ರ ಹೊಡೆಯಿತು; ಕಣ್ಣಿಗೆ ಕತ್ತಲೆ ಕವಿಯಿತು.

ಅವನ ಉತ್ಸಾಹ ಝರ್ರನೆ ಇಳಿದುಹೋಯಿತು.

ಎದೆ ಬಿರಿಯುವುದೇನೋ ಎಂಬಂತಹ ತೀಕ್ಷ್ಣ ವೇದನೆಯಿಂದ ಕ್ಷಣ ಸ್ತಂಭಿತನಾಗಿ ನಿಂತುಬಿಟ್ಟ.

ಕನಸು, ಮನಸಿನಲ್ಲೂ ಅವನು ನೆನೆಯದ ಘೋರದೃಶ್ಯ ಅವನ ಕಣ್ಮುಂದಿತ್ತು !

ಗೌರಿ-ಮಾದರು ಪರಸ್ಪರ ತೋಳತೆಕ್ಕೆಯಲ್ಲಿದ್ದರು !

ಸಿದ್ಧನನ್ನು ಕಂಡವರೇ ಮೃತ್ಯುವನ್ನು ಕಂಡವರಂತೆ ಬೆಚ್ಚಿದರು ! ಬಿಳಿಚಿಕೊಂಡರು ಚಳಿ ಬಂದವರಂತೆ ಗಡ ಗಡ ನಡುಗಿದರು.

ಮಾದ ತಲೆ ತಗ್ಗಿಸಿಕೊಂಡು ಕೈಕೈಹಿಸುಕಿಕೊಳ್ಳುತ್ತಾ ಸರಿದು ನಿಂತ ಗೌರಿಯ ನಡುಕ ನಿಲ್ಲಲೇ ಇಲ್ಲ

ಸಿದ್ದ ಸ್ವಲ್ಪ ಚೇತರಿಸಿಕೊಂಡ. ಭೀಕರ ರೋಷ, ಎದೆ ಬಿರಿಯುವ ವ್ಯಸನ. ಅತೀವ ತಿರಸ್ಕಾರ—ಉಕ್ಕಿ ಉಕ್ಕಿ ಹರಿದುವು.

ಆ ಸ್ಥಳದಲ್ಲಿ ಮತ್ತೊಂದು ಕ್ಷಣ ನಿಲ್ಲುವುದೂ ಅವನಿಗೆ ಸಹ್ಯವಾಗಲಿಲ್ಲ

"ಥೂ, ಥೂ...." ಎಂದು ಇಬ್ಬರ ಮುಖಕ್ಕೂ ಉಗಿದು, ಮರುಕ್ಷಣ ಆ ಸ್ಥಳದಿಂದ ಓಟಕಿತ್ತ.

ಉನ್ಮತ್ತ ಅವೇಶ ಅವನ ಮನಸ್ಸನ್ನು ವಿನಾಶಕ್ಕೆ ಪ್ರೇರೇಪಿಸುತ್ತಿತ್ತು ಅವರಿಬ್ಬರನ್ನೂ ಕೊಂದು ತಾನೂ ಆತ್ಮಹತ್ಯೆಮಾಡಿಕೊಂಡರೆ? ಈ ಎದೆಯ ಧಗೆ ಅಗಲಾದರೂ ಅಳಿಯುವುದೇನೋ....!

ಆದರೆ ಅವನ ಕಣ್ಣೆದುರು ಕಟ್ಟಿದಂತಿತ್ತು—ಎರಡು ವರ್ಷಗಳ ಹಿಂದೆ ಕಂಡ ತಾಯ ಕಡೆಗಾಲದ ದೃಶ್ಯ. ತಾಯಿಗೆ ಕಾನಿತ್ತ ಭಾಷೆ ... 'ತಾಳಿದವ ಬಾಳಿಯಾನು' ಎಂದ ತಾಯಿಯ ಮಾತು....ತಮ್ಮನ ತಪ್ಪುಗಳನ್ನು ತಾಳ್ಮೆಯಿಂದ ಕ್ಷಮಿಸುವೆನೆಂದ ತನ್ನ ಮಾತು........

ಹೋಗಲಿ, ತಮ್ಮ ಬದುಕಲಿ... ಈ ಅವಮಾನ ಸಹಿಸಿ ತಾನೇಕೆ ಬದುಕಬೇಕು ? ತಾನು ಹೋದರೆ ತಮ್ಮನ ಹಾದಿ, ಗೌರಿಯ ಹಾದಿ ಸುಗಮವಾಗುವುದು .. ತನಗೂ ಈ ನೋವು ತಪ್ಪುವುದು ... ..

ವ್ಯಸನಭಾರದಿಂದ ಕುಗ್ಗಿ ಕಾಲೆಳೆದುಕೊಂಡು ಶ್ಯಾನುಭೋಗರ ಮನೆಗೆ ಬಂದ. ಸರಿರಾತ್ರಿ—ಕಲ್ಲುನೀರು ಕರಗುವ ವೇಳೆ—ಎಂಬುದನ್ನೂ ಲಕ್ಷಿಸದೆ ದಬದಬ ಬಾಗಿಲು ತಟ್ಟಿದ. ಶ್ಯಾನುಭೋಗ ಸದಾಶಿವಯ್ಯ ಗಾಬರಿಯಿಂದ ಎದ್ದು ಬಂದರು. ಸಿದ್ದನ ಉದ್ರಿಕ್ತತೆ ಕಂಡು ಬೆದರಿದರು

ಸಿದ್ದ ಕಣ್ಣೀರಿಟ್ಟುಕೊಂಡು ವಿಷಯ ತಿಳಿಸಿದ

"ನಾ ಹೇಗೆ ...ಸಲಿ ಸ್ವಾಮಿ ? ಈ ಯಾತನೇನ ನಾ ತಡೆಯಲಾರೆ. ನಾನು ಕೆರೆಗೆ ಬೀಳೋದೇ ನಿಜ........"

ಸದಾಶಿವಯ್ಯ ಸಮಾಧಾನ ಹೇಳಿದರು :

"ನಿನ್ನ ಯಾತನೆ ನನಗೆ ಅರ್ಥವಾಗುತ್ತೆ ಸಿದ್ಧ! ನಿನ್ನ ತಮ್ಮನೂ ಒಳ್ಳೆಯವನು ಗೌರಿಯೂ ಅಂತಹವಳಲ್ಲ ಏನೋ ವಿಷಗಳಿಗೆ. ಕಾಲು ಜಾರಿದಾರೆ ಈಗ ನೀನು ಸ್ಥೈರ್ಯ ಬಿಡಬೇಡ. ಸಿಟ್ಟಿನ ಕುಚ್ಚೇರಿದ ಮನಸೆಂಬ ಕುದುರೆಗೆ ವಿವೇಕದ ಕಡಿವಾಣ ಹಾಕು."

"ಏನಾದರೂ ನಾನಿಲ್ಲಿರೋಕೆ ಸಾಧ್ಯವಿಲ್ಲ, ಸ್ವಾಮಿ! ನಾ ದೇಶಾಂತರ ಹೋಗ್ತೇನೆ....ಅವರ ಪಾಡಿಗೆ ಅವರು ಸುಖವಾಗಿರಲಿ"

ಸಿದ್ದನ ಮನಃಸ್ಥಿತಿ ಅರಿತು ಸದಾಶಿವಯ್ಯ ವಿರೋಧಿಸಲಿಲ್ಲ.

"ನಾಲ್ಕು ದಿನ ಓಡಾಡಿಕೊಂಡು ಬಾ. ನಿನ್ನ ತಾಪವೂ ಕಳೆಯಲಿ. ಆದರೆ ಇಲ್ಲಿಗೆ ಬರದೆ ಇರ್ಬೇಡ. ನಿನ್ನ ಹೆಂಡತಿ, ತಮ್ಮ ಎಷ್ಟು ಕೊರಗ್ತಾರೆ ಎಂಬುದನ್ನು ಕಾಣುವುದಕ್ಕಾದರೂ ಬಾ."

ಸಿದ್ದ ನಸುಕಿನಲ್ಲೇ ಊರು ಬಿಟ್ಟ. ಅವನು ಎಲ್ಲಿದ್ದಾನೆ, ಏನು ಮಾಡುತ್ತಿದ್ದಾನೆ ಎಂಬುದು ನಾಲ್ಕೈದು ವರ್ಷ ಯಾರಿಗೂ ಪತ್ತೆಯಾಗಲಿಲ್ಲ.

ಗೌರಿ-ಮಾದರಿಗೆ ತಮ್ಮ ಕೃತ್ಯದ ಘೋರತೆಯು ಅರಿವಾಗಿತ್ತು. ತೀವ್ರ ಪಶ್ಚಾತ್ತಾಪದಿಂದ ಅವರೆದೆ ಬೇಯುತ್ತಿತ್ತು. ಶ್ಯಾನುಭೋಗರು ಪ್ರತ್ಯೇಕವಾಗಿ ಅವರಿಬ್ಬರನ್ನೂ ಕರೆಸಿಕೊಂಡು ಛೀಮಾರಿ ಹಾಕಿದಾಗ. ತಮ್ಮ ತಪ್ಪನ್ನೊಪ್ಪಿಕೊಂಡು ಮಕ್ಕಳಂತೆ ಅತ್ತುಬಿಟ್ಟರು.

ಅನಂತರ, ಮಾದ ಗೌರಿಯತ್ತ ಕತ್ತೆತ್ತಿ ನೋಡುತ್ತಿರಲಿಲ್ಲ. ಅಣ್ಣಯ್ಯ ಬಂದರೆ ಸಾಕೆಂದು ಅವನು ಜೀವಕ್ಕೆ ಅಪಾಯ ಮಾಡಿಕೊಳ್ಳದಿದ್ದರೆ ಸಾಕೆಂದು—ಎಲ್ಲ ದೇವರಿಗೂ ಹರಕೆ ಕಟ್ಟಿಕೊಂಡ.

ಗೌರಿ ಕೊರಗುಹಿಡಿದು ದಿನದಿನಕ್ಕೂ ನವೆಯುತ್ತಿದ್ದಳು.

ಸಿದ್ದ ಐದು ವರ್ಷ ದೇಶಾಟನೆ ಮಾಡಿದ ನಾಲ್ಕಾರು ಮನೆಗಳಲ್ಲಿ ಜೀತ ಮಾಡಿದ. ಅವನ ಅನುಭವ ಆಳವಾಯಿತು. ದೃಷ್ಟಿ ವಿಶಾಲವಾಯಿತು. ತಿಳುವಳಿಕೆ, ಸಹನೆ ಹೆಚ್ಚಿತು.

'ಕುಂಬಾರನಿಗೆ ವರ್ಷ, ದೊಣ್ಣೆಗೆ ನಿಮಿಷ' ಎಂಬಂತೆ ಸಂಸಾರ. ಕಟುವುದು ಕಷ್ಟ, ಕೆಡಹುವುದು ಸುಲಭ. ಸಂಸಾರ ಕಟ್ಟಲುಬೇಕು. ತಾಳ್ಮೆ, ಸಂಸಾರ ಒಡೆಯಲು ಸಾಕು. ಕೋಪ—ಎಂಬ ತತ್ತ್ವವರಿತ.

ಬಾಳಲ್ಲಿ ರಸ ಸವಿಯಬೇಕಾದರೆ ಸ್ಥೈರ್ಯ, ಕ್ಷಮೆ ಅಗತ್ಯ ಸ್ವಾರ್ಥದ ಮರಳು ಕಾಡು ಈ ಲೋಕಸಂಸಾರವೇ ಅಲ್ಲಿರುವ ಓಯಸಿಸ್‌ಗಳು. ಅದನ್ನು ರಕ್ಷಿಸಿ, ಪೋಷಿಸಿಕೊಳ್ಳಬೇಕು, ಸುಖಶಾಂತಿ ಬೇಕಾದರೆ—ಎಂದು ಅರಿತ

ಗೌರಿ, ಮಾದರನ್ನು ಹೇಗಿರುವರೆಂದು ನೋಡಲು ಊರಿಗೆ ಬಂದ.

ಮಾದ ಅವನ ಕಾಲು ಹಿಡಿದು ಕಣ್ಣೀರಿಂದ ತೊಳೆದ

ಗೌರಿಯ ನಲುಗಿದ ಆಕೃತಿ ಕಂಡು ಸಿದ್ದನ ಕರುಳು ಕಿವಿಚಿದಂತಾಗಿ ಕಣ್ಣೀರು ಹರಿಯಿತು.

ಸಿದ್ದ ಬರುವವರೆಗೂ ಗಂಗೆಯನ್ನು ಮನೆಗೆ ಕರೆಸಿಕೊಳ್ಳುವುದಿಲ್ಲವೆಂದು ಶಪಥ ಮಾಡಿದ್ದ ಮಾದ.

ಸದಾಶಿವಯ್ಯ ಎಲ್ಲರಿಗೂ ರಾಜಿಮಾಡಿಸಿ, ಅಣ್ಣತಮ್ಮಂದಿರನ್ನು ಒಂದುಗೂಡಿಸಿದರು.

ಅಂದಿನಿಂದ ಏಕದೇಹನ್ಯಾಯದಿಂದ ನಡೆದುಕೊಳ್ಳುತ್ತಿದ್ದಾರೆ ಸಿದ್ದ-ಮಾದರು ಆ ಹಳೆಯ ನೆನಪು ಕನಸೋ ಸತ್ಯವೋ ಎಂದು ಭ್ರಮೆ ಹುಟ್ಟಿಸುವಂತಿವೆ ಗೌರಿ-ಮಾದರ ನಡತೆಗಳು. ಒಳಗೆ ಮಲಗಿದ್ದ ರಂಗಿ "ಅಪ್ಪಾ, ಜರೀ ಲಂಗಾ...." ಕನವರಿಸಿದಳು.

ಸಿದ್ದ ನಿಡುಸುಯ್ದು ಮೇಲೆದ್ದ. ರಂಗಿಯ ಬಳಿ ಬಂದು ಕುಳಿತು

ಅವಳ ಮುಖ ನೇವರಿಸಿದ. ಅವಳ ಮುಗ್ಧ ಮುಖವನ್ನು ಕಂಡು, ಅವನ ವಾತ್ಸಲ್ಯ ಉಕ್ಕಿ ಬಂದಿತು. ಅವನ ಮನ ಪ್ರಸನ್ನವಾಯಿತು.

ಕನಸಿನಿಂದ ಆಗತಾನೇ ಎಚ್ಚೆತ್ತವನಂತೆ ಸುತ್ತಲೂ ದೃಷ್ಟಿ ಹರಿಸಿದ.

ತನ್ನ ಮನೆ, ತನ್ನ ಸಂಸಾರ, ತನ್ನ ಮಕ್ಕಳು, ತನ್ನ ಮಡದಿ—

ತನಗೆ ಸುಖ-ಶಾಂತಿಯೀಯುವ ತಾಣ, ತನ್ನನ್ನೇ ನೆಚ್ಚಿರುವ ಜನ—

ಇವೆಲ್ಲ ತನ್ನದಾದುದು ಹೇಗೆ? ಹೇಗೆ?

ತಾಳ್ಮೆಯಿಂದ! ತಾಳ್ಮೆಯಿಂದ!!

ಆದಿನ,—ಆ ವಿಷಗಳಿಗೆಯಲ್ಲಿ,—

ತಾಳ್ಮೆಗೆಟ್ಟು ತಾನೂ ಬೈರಪ್ಪನಂತೆ ಮಾಡಿದ್ದರೆ? ಮಾಡಿದ್ದರೆ?

ಈ ಎಲ್ಲ ಸುಖ ಸಂತೋಷಗಳಿಂದ ವಂಚಿತನಾಗಿ, ಜೈಲಿನಲ್ಲಿ ಕಣ್ಣೀರಿಡುತ್ತ ಕೊಳೆಯಬೇಕಾಗುತ್ತಿತ್ತು.

ಸ್ತ್ರೀಹತ್ಯೆ, ಬಂಧುಹತ್ಯೆಯ ಪಾಪದ ಹೊರೆಯನ್ನು ಹೊತ್ತು-ಕೊಳ್ಳಬೇಕಾಗಿತ್ತು.

ಬಿಡುಗಡೆಯಿಲ್ಲದ ಬೆಂಕಿಯ ಬಲೆಯಲ್ಲಿ ಬೇಯಬೇಕಾಗಿತ್ತು.

ಮಾದ ಹುಲ್ಲುಹಾಕಿ, ಮೇದೆ ಸರಿಮಾಡಿ ಬಂದಾಗಲೂ ಸಿದ್ದ ರಂಗಿಯ ಬಳಿಯಲ್ಲೇ ಕುಳಿತಿದ್ದ.

“ಬಸ್ಸಿನಲ್ಲಿ ಬರುವಾಗ ತುಂಬ ಆಯಾಸವಾಗಿದೆ. ಮಲಗಿಕೋ, ಅಣ್ಣಯ್ಯಾ. ನಾಳೆ ಗಂಗೆ ಎಣ್ಣೆ ನೀರು ಹಾಕ್ತಾಳೆ. ಮೈನೋವು ಹೋಗುತ್ತೆ.” ಎಂದ, ವಿಶ್ವಾಸದಿಂದ.

ಸಿದ್ದ ಕೃತಜ್ಞತೆಯಿಂದ ಅವನತ್ತ ನೋಡಿ, ಬೆಚ್ಚನೆಯ ಹಾಸಿಗೆಯಲ್ಲಿ ಮಲಗಿಕೊಂಡ. ರಂಗಿಯ ಕೂದಲುಗಳಲ್ಲಿ ಅವನ ಬೆರಳುಗಳು ಆಡಿದುವು.

ಅವನ ಮನಸ್ಸು ಮಾತ್ರ ಬೈರಪ್ಪ ದುಡುಕಿ, ಬಾಳಲಿದ್ದ ಎಂತಹ ಅವಕಾಶ ಕಳೆದುಕೊಂಡನೆಂದು ಮರುಗುತ್ತಿತ್ತು. ಜೈಲಿನಲ್ಲಿ ಒಂಟಿಯಾಗಿ ಎಲ್ಲ ಸುಖಗಳಿಂದಲೂ ಮಧುರಭಾವನೆಗಳಿಂದಲೂ ವಂಚಿತನಾಗಿರುವ ಅವನ ಸ್ಥಿತಿಯನ್ನು ನೆನೆದು ನಡುಗಿದ

ತನ್ನ ತಾಯ ಹರಕೆ, ಪೂರ್ವಪುಣ್ಯ ತನಗೆ ಆ ಪ್ರೇರಣೆ ಇತ್ತೇನೋ—ಇಷ್ಟು ಸುಖವನ್ನಾದರೂ ಕಾಣುವಂತೆ ಮಾಡಿತೇನೋ ಎಂದು ಬಗೆದು ಅವನ ಮನ ಕೃತಾರ್ಥತೆಯ ಭಾವದಿಂದ ಹಿಗ್ಗಿತು, ನಲಿಯಿತು.

ಋತುವಸಂತ

ಶ್ರೀ. ಎಚ್. ಜಿ. ಉಪಾಧ್ಯಾಯ, ಎಂ. ಎ., ಹೈದರಾಬಾದು ದಕ್ಷಿಣ.

ಬಂದಿತಿಳೆಗೆ ಋತುವಸಂತ
ಸಿಂಗರಿಸುತೆ ವನವನಾಂತ! || ಪಲ್ಲವಿ ||

ಮೇಲೆ ಹೊಳೆವ ಗಗನ ನೀಲ
ಮುಗಿಲ ಮಾಲೆ ಫೇನಧವಲ
ಕೆರೆತೊರೆಯಲಿ ತುಂಬಿ ಸುಜಲ
ಸಿರಿಯಾಯಿತು ಶ್ಯಾಮಲ. ೧

ಬಿಸುಪನುಳಿದ ರವಿಯಗೋಲ
ಹರಡೆ ತನ್ನ ಕಿರಣಜಾಲ
ಸಿರಿಸೋಜ್ವಲ ಪೃಥಿವಿಭಾಲ
ಹೊದೆದು ಸ್ವರ್ಣಮಯದುಕೂಲ. ೨

ಹಸಿರನುಟ್ಟ ಪರ್ವತಾಳಿ
ಹೂತುನಿಂತ ತರುಲತಾಳಿ
ಕೆಂಪು ಹಸಿರು ಹಳದಿ ನೀಲಿ
ವಿವಿಧ ವರ್ಣರಾಗ ಕೇಳಿ ೩

ಬನಬನದಲಿ ಪಿಕದ ರುತಿಯು
ಸುಮ-ಸುಮದಲಿ ಭೃಂಗರತಿಯು
ಗಂಡಿಗಾಯ್ತು ಹೆಣ್ಣ ಜೊತೆಯು
ಬಾಳಿಗಾಯ್ತು ನೇಹಸವಿಯು. ೪

ಕಳಿತ ಫಲಿತ ಬಾಳೆ ಮಾವು
ಚಿಗುರನಾಂತ ಹುಣಿಸೆ-ಬೇವು
ಸಂಪುನಿದ್ದೆಗಾಯ್ತು ತಾವು
ಮರೆತುಹೋಯ್ತು ದುಡಿಮೆದಣಿವು. ೫

ಲತೆ-ಲತೆಯಲಿ ತಳಿರ ಕುಡಿಯು
ಮರಮರದಲಿ ಮೊಗ್ಗುಮಿಡಿಯು
ಬಳವಾಯಿತು ಅಲರ ಗುಡಿಯು
ಘಮಘಮಿಸಿತು ಮಲರ ಹುಡಿಯು. ೬

ಇಹುದೆ ಇಂಥ ಸೊಬಗಿನೆಡೆಯು?
ಸ್ವರ್ಗವಿದಕೆ ತೀರ ಕಡೆಯು
ಮಧುಮಾಸದ ಅಮೃತದೆಡೆಯು
ಇದ ಸವಿಯಲು ಯಾರ ತಡೆಯು? ೭

ಸವಿಯಿರೀ ವಸಂತಮಧುವ
ಮರೆತು ಬಾಳ ನೂರು ನೋವ
ಭೂಮಿತಾಯ ಹೃದಯದೊಲವ—
ದೇವನಿತ್ತ ಧರಾಮೃತವ. ೮

ಕಾವ್ಯದಲ್ಲಿ ಪ್ರತಿಮಾಸಂವಿಧಾನ

ಶ್ರೀ. ಜಿ. ವ್ಹಿ. ಕುಲಕರ್ಣಿ, ಬಿ. ಎ. (ಆನರ್ಸ) ಧಾರವಾಡ
ಶ್ರೀ. ಅನಿಲಕುಮಾರ ಗೋಕಾಕ, ಧಾರವಾಡ

ಲೇಖಾಂಕ ೪

ಭಗ್ನ ಪ್ರತಿಮೆಗಳು

卐

ಇಂದಿನ ಕವಿಗೆ, ಕಾವ್ಯವಸ್ತುವಿನ ಆಯ್ಕೆಯಷ್ಟೇ ಕಾವ್ಯ ನಿರೂಪಣೆಯೂ ಕಠಿಣವಾಗಿದೆ. ಸಂಕೀರ್ಣತೆ ಹಾಗೂ ಪರಿವರ್ತನ-ಶೀಲತೆಯಿಂದ ಇಂದಿನ ನೋಟವು ತುಂಬಿ ತುಳುಕುತ್ತಲಿದೆ. ಪ್ರಸಿದ್ಧ ಕಾವ್ಯದ ನೆಲೆಗಟ್ಟಾದ ಕಾಲ್ಪನಿಕ ಚಿಚ್ಛಕ್ತಿಯನ್ನು, ಜನಸಾಮಾನ್ಯರು ಇಂದು ಕಳೆದುಕೊಂಡಿದ್ದಾರೆ; ಇದಕ್ಕೆ ಬದಲಾಗಿ ನಿಶ್ಚಿತವಾದ ವರ್ತಮಾನವನ್ನು ತಿಳಿದುಕೊಳ್ಳುವ ಆಸೆಯುವರಾಗಿದ್ದಾರೆ. ಸಿನೇಮಾ ಮತ್ತು ಕಾದಂಬರಿಗಳ ಕಡೆಗಿರುವ ಒಲವಿನ ಮೂಲಕ, ಕಾವ್ಯದ ಕಡೆಗಿದ್ದ ಒಲವು ಕಡಿಮೆಯಾಗಿದೆ. ಹೆಚ್ಚು ಕಲಿತವರು ಸ್ವಯಂ-ಪ್ರಜ್ಞೆ ಹೆಚ್ಚಾಗಿ ಸಂಶಯಪ್ರವೃತ್ತಿಯುವರಾಗಿದ್ದಾರೆ. ಆದ್ದರಿಂದ ಕವಿಗೆ ತನ್ನ ಮಾಧ್ಯಮದಿಂದ ಅವರನ್ನು ಪ್ರಭಾವಿಸಲು ಸಾಧ್ಯವಾಗಿಲ್ಲ.

ನವ್ಯಕಾವ್ಯದಲ್ಲಿ ಕವಿಯು ಪ್ರತಿಮೆಗಳನ್ನು ಉಪಯೋಗಿಸು-ವಾಗ, ಎರಡು ವಿಷಯಗಳನ್ನು ಗಮನಕ್ಕೆ ತರಬೇಕು: ಆಧುನಿಕ ಯುಗದ ವಿಭ್ರಮೆಯಲ್ಲಿ ಕವಿಯು, ಪ್ರತಿಮೆಯ ಸಹಾಯದಿಂದ ತನ್ನ ಮಾರ್ಗವನ್ನು ಭಾವಪ್ರೇರಣೆ ಹಾಗೂ ಬುದ್ಧಿವಿಷಯಗಳಿಂದ ಹುಡುಕುತ್ತಾನೆ. ೨) ಕದಡಿದ ಮನಸ್ಸಿನ ಮೇಲೆ ಪ್ರಭಾವವನ್ನು ಉಂಟು ಮಾಡಲು ಪ್ರಯತ್ನಿಸುತ್ತಾನೆ. ಪ್ರತೀಕನಿಷ್ಠವಾದವು ಪ್ರಾರಂಭವಾದಂದಿನಿಂದ, ತರ್ಕಬಾಹಿರವಾದ ಪ್ರತಿಮೆಗಳನ್ನು ನಿರ್ಮಿ-ಸುವುದೂ ಪ್ರಾರಂಭವಾಯಿತು. ಇದು ಆಧುನಿಕ ಕಾಲದಲ್ಲಿ ಬಹಳೇ ಕಂಡುಬರುತ್ತಿದೆ. ಪ್ರತಿಯೊಂದು ಕವಿತೆಯಲ್ಲಿ ಕಾವ್ಯಾತ್ಮಕ ವಿವೇಕವು ಇರಲೇಬೇಕು. ತರ್ಕಜ್ಞತೆಯೇ ಕಾವ್ಯಾತ್ಮಕ ವಿವೇಕದ ಮೂಲವಲ್ಲ; ಆದರೆ ಇದು ಇಲ್ಲದೆ ಕಾವ್ಯಾತ್ಮಕ ವಿವೇಕವು ಪೂರ್ಣವಾಗುವುದಿಲ್ಲ. ಕಲ್ಪಕತೆಯಿಂದಲೇ ವಿಚಾರ ಮತ್ತು ಭಾವಗಳ ಐಕ್ಯವು—ಒಂದು ಕಾವ್ಯಮಯ ಕ್ಷೇತ್ರದಲ್ಲಿ—ಆಗುತ್ತದೆಯೆಂದು ನಾವು ತಿಳಿಯಬಾರದು. ಅಸಂಗತವಾದ ಮತ್ತು ಉಗ್ರವಾದ ಪ್ರತಿಮೆಗಳನ್ನು ನಿರ್ಮಿಸುವುದ-ರಿಂದ, ಕವಿಯು ಸ್ಮೃತಿಚಿತ್ರಗಳ ಏಕರೂಪತೆಗಿಂತಲೂ, ಕಾವ್ಯದ ಪೂರ್ಣತೆ ಮತ್ತು ಕಾವ್ಯವಸ್ತುವಿನ ಪ್ರಾಧಾನ್ಯವನ್ನು ಬಲಿಕೊಡು-ತ್ತಾನೆ. ಈ ಮೊದಲು ವಿವರಿಸಿದ ಕಾವ್ಯನಿರೂಪಣೆಯ ಸಮಸ್ಯೆಗಳನ್ನು ಬಿಟ್ಟು, ಇಂದಿನ ವಿಭ್ರಮಕ್ಕೆ ಕವಿಯು ಯಾವ ರೀತಿಯ ಪ್ರತೀಕಾರ-ವನ್ನು ತೋರುತ್ತಾನೆ, ನೋಡೋಣ.

ಕಲ್ಪಕತೆಯು ಬೇರೆ ಏನೂ ಮಾಡದೆ, ಇಂದಿನ ನೋಟದ ಸ್ಮೃತಿಚಿತ್ರಗಳಿಗೆ (imp'ession) ತಾನಾಗಿಯೇ ಪ್ರತಿಕ್ರಿಯೆ-ಯನ್ನು ಮಾಡುತ್ತದೆಯೆಂದು ತಿಳಿಯಕೂಡದು. ಕವಿಯು ಕೇವಲ ಭಗ್ನಪ್ರತಿಮೆಗಳಿಂದ ಕಟ್ಟಿದ ಒಂದು ಕಾವ್ಯಕ್ಕೆ, ಮನೆಯೆಂದು ಕರೆಯುವುದಲ್ಲದೆ, ಅದನ್ನು ಆಧುನಿಕ ಶಿಲ್ಪಶಾಸ್ತ್ರವೆಂದು ಕರೆಯುವ ವರೆಗೆ ಈ ದೋಷ ನಮ್ಮನ್ನು ಒಯ್ಯುತ್ತದೆ. ಈ ದೋಷವು ಒಂದು ಸುಂದರವಾದ ಅವನತಿಯ ನಿರ್ಮಾಣಕ್ಕೆ ಕಾರಣವಾಗುತ್ತದೆ. ಈ ಪ್ರವೃತ್ತಿಯು ಯಾವಾಗಲೂ ದೋಷಯುಕ್ತವಾಗಿರುತ್ತದೆ. ಹೆಚ್ಚು ಸಂಕೀರ್ಣವಾದ ನಾಗರಿಕತೆಯು ಕವಿತೆಯ ಪ್ರತಿಮಾಮಾಲಿಯ-ಲ್ಲಿದ್ದ ಸಂಕೀರ್ಣತೆಯನ್ನೂ ಸಮರ್ಥಿಸಬಹುದು. ಯಾವ ಯುಗ ತನ್ನ ಹೊಸ ವಿಚಾರಗಳನ್ನು ಹಾಗೂ ಯಂತ್ರಗಳನ್ನು ರಾಶಿ ರಾಶಿ-ಯಾಗಿ ಹೊರಪಡಿಸುತ್ತದೆಯೋ, ಅದು ತನ್ನ ಕಾವ್ಯದಲ್ಲಿ ನವೀನ ಹಾಗೂ ದಿಟ್ಟತನದ ಪ್ರತಿಮಾಸೃಷ್ಟಿಯನ್ನು ಆಹ್ವಾನಿಸುತ್ತದೆ. ಆದರೆ ಒಂದು ಹರಿದು ಹಂಚಿದ ನಾಗರಿಕತೆಗೆ, ಹರಿದು ಹಂಚಿದ ಕಾವ್ಯವೇ ಉತ್ತರವಲ್ಲ. ನಿಜವಾಗಿ ನೋಡಿದರೆ, ಇಂತಹ ಪರಿಸರದಲ್ಲಿಯೇ ಒಂದು ಪರಿಪೂರ್ಣ ದರ್ಶನದ ಕಾವ್ಯಗಳು ಹೊರಬೀಳಬೇಕು.

ಕಲ್ಪಕತೆಯು ಕೇವಲ ಒಂದು ಕನ್ನಡಿಯಲ್ಲ; ಪ್ರತಿಮೆಗಳು ಕೇವಲ ಅದರಲ್ಲಿ ಮೂಡುವ ಪ್ರತಿಬಿಂಬಗಳಲ್ಲ. ಕಲ್ಪಕತೆಯು ಚೈತನ್ಯಯುಕ್ತವಾಗಿದ್ದು ಕವಿಗೆ ವಾಸ್ತವಿಕತೆಯನ್ನು ಪರಿಶೋಧಿ-ಸಲು ಸಾಧನವಾಗಿದೆ. ಕಾವ್ಯಪ್ರತಿಮೆ ಕೂಡ ವಾಸ್ತವಿಕ ಪ್ರಪಂಚ-ವನ್ನು ಸಂಗ್ರಹರೂಪದ ಒಂದು ಹಿಡಿತದಲ್ಲಿ ತಂದು ಅದರ ವೈವಿಧ್ಯ-ವನ್ನು ಪ್ರಕಟಿಸುವ ಮಾರ್ಗವಾಗಿರುತ್ತದೆ. ಬಾಹ್ಯಜಗವನ್ನು ಪರಿಶೋಧಿಸುವಾಗ – ಅಥವಾ ಮಾನವನ ಮನಸ್ಸಿನ ಆಂತರಿಕ ಜಗತ್ತನ್ನು ಪರಿಶೋಧಿಸುವಾಗ ಕೂಡ ಈ ಮಾತು ಸತ್ಯವಾಗಿದೆ. ನಮ್ಮ ಜಗತ್ತು ಅಥವಾ ಮನಸ್ಸು ಒಂದು ಕೋಲಾಹಲದ ಸ್ಥಿತಿ-

ಯಲ್ಲಿರಬಹುದು; ಆದರೆ ಈ ಕೋಲಾಹಲದಿಂದಲೇ ಒಂದು ನಿಯಮವನ್ನು ನಿರ್ಮಿಸುವುದು ಕಾವ್ಯಮಯ ವಿವೇಕದ ಕೆಲಸ. ಇದರ ಕೆಲಸವು ಜಗತ್ತಿನಲ್ಲಿದ್ದ ಕೋಲಾಹಲದ ಕಾಲ್ಪನಿಕ ಪ್ರತಿ ನಿರೂಪಣೆಯಾಗಿದ್ದರೂ, ಅದರಲ್ಲಿ ಒಂದು ನಿಯಮನಿಷ್ಠ ಮಾದರಿ ಇರಬೇಕು. ತನ್ನ ಹಲಗೆಯ ಮೇಲೆ ಕರಿಯ ಬಣ್ಣವನ್ನು ಸಂಪೂರ್ಣವಾಗಿ ಲೇಪಿಸುವುದರಿಂದ, ಒಬ್ಬ ಚಿತ್ರಗಾರ ರಾತ್ರಿಯ ಕಲ್ಪನೆಯನ್ನು ಕೊಡಲಾರ.

ಇಂದಿನ ಕವಿಯು ಬುದ್ಧಿಗೂ ಭಾವಕ್ಕೂ ಸಂಬಂಧವಿಲ್ಲದ ಪ್ರತಿಮೆಗಳನ್ನು ಯಾಕೆ ನಿರ್ಮಿಸುತ್ತಾನೆಂದು ಕೇಳಬಹುದು. ಯಾವ ಕಾವ್ಯಾತ್ಮಕ ತರ್ಕದಿಂದ ಅವನು ತನ್ನ ಪ್ರತಿಮೆಗಳನ್ನು ಹೆಣೆಯುತ್ತಿದ್ದಾನೋ ಆ ತರ್ಕದ ಬದಲು ಇಂದು ಏನು ಉಪಯೋಗಿಸುತ್ತಾನೆ? ಕಾವ್ಯಾತ್ಮಕ ತರ್ಕದ ಮೂಲ ಸ್ವಭಾವವನ್ನು ಅರಿಯಲು ನಾವು ಡಬ್ಲಿಯು ಪಿ ಕೇರ್ (W. P. Ker) ಎಂಬ ವಿಮರ್ಶಕನ ಮಾತನ್ನು ಲಕ್ಷ್ಯಿಸಬೇಕು: ಸ್ಥಾನದ ಅಥವಾ ಮನಃಸ್ಥಿತಿಯ ಬದಲಾವಣೆಗನುಸರಿಸಿ, ಸಾಮಾನ್ಯವಾಗಿ ಕಾವ್ಯಾತ್ಮಕ ತರ್ಕದಿಂದ ಕಾವ್ಯಾತ್ಮಕ ನಿರ್ಣಯಗಳು ಬರುತ್ತವೆ. ಕಾವ್ಯಾತ್ಮಕ ತರ್ಕವು ಸಂಭಾವನೆ ಹಾಗೂ ಲಕ್ಷಣಗಳಿಂದ ಒಂದು ಸ್ಥಿತಿಯನ್ನು ಸಿದ್ಧಮಾಡುವುದಿಲ್ಲ; ಆದರೆ ಅದರ ಬದಲಾವಣೆಯ ಪ್ರತಿಮೆಯೊಂದು ಕ್ರಮವೂ ಕೇಳುವವನ ಮನಕ್ಕೆ ಸಮಾಧಾನಕರವಾಗಿದ್ದು, ಸ್ಪಷ್ಟವಾಗಿರಬೇಕು. ಮತ್ತು ಅದರ ಬೆಳವಣಿಗೆಯು ಹಿಂದಿನ ಕ್ರಮಗಳ ನಿರಾಕರಣೆಯಾಗಿರಬಾರದು. ಕಾವ್ಯಾತ್ಮಕ ತರ್ಕವನ್ನೇ ಸ್ವಲ್ಪದರಲ್ಲಿ ಹೇಳುವುದಾದರೆ (ಕೇರನು ಹೇಳಿದಂತೆ) ಒಂದು ಕಾವ್ಯವಸ್ತುವಿನ (theme) ಬೆಳವಣಿಗೆ. ಇಂದಿನ ಕವಿ ಈ ಆವಶ್ಯಕತೆಯನ್ನು ತಾನು ಪೂರೈಸಿದ್ದಾನೆಂದೂ ಹೇಳಬಹುದು. ಆದರೆ ಒಂದು ಸ್ಥಿತಿಯಿಂದ ಇನ್ನೊಂದು ಸ್ಥಿತಿಗೆ ಹೋಗುವಾಗ ಮಾತ್ರ ವಿಮರ್ಶಕರು, ಇಂದಿನ ಕವಿಯ ದೋಷವನ್ನು ತೋರಿಸಲು ಸಮರ್ಥರಾಗಿರುತ್ತಾರೆ. ಒಂದು ಪ್ರತಿಮೆಯಿಂದ ಇನ್ನೊಂದು ಪ್ರತಿಮೆಗೆ ಅಥವಾ ಒಂದು ವಿಚಾರದಿಂದ ಪ್ರತಿಮೆಯ ಕಡೆಗೆ ಸಾಗುವಾಗ, ಅವನ ಬದಲಾವಣೆಗಳು ಸ್ಪಷ್ಟವಾಗುವುದಿಲ್ಲ. 'ಸ್ಪಷ್ಟ'ವೆಂದರೆ ತರ್ಕಕ್ಕೆ ಅಸಂಗತವೆಂದೆನ್ನುವುದಕ್ಕಿಂತ ಕಲ್ಪಕತೆಗೆ ಸ್ವೀಕಾರಯೋಗ್ಯವಾಗಿರುವುದಿಲ್ಲವೆಂದೆನ್ನಬಹುದು. ಇದರ ಪರಿಣಾಮದಿಂದ ಕವಿತೆಯ ಬೆಳವಣಿಗೆಯೆಂದರೆ ಆದರ ಹಿಂದಿನ ಕ್ರಮಗಳ ಖಂಡನೆಯೆಂದು ತೋರುತ್ತದೆ.

ಕಾವ್ಯವು ಆಂತರಿಕ ವಿಷಯಗಳ ಬಗ್ಗೆ ಇರುವುದಾದರೆ, ಅದಕ್ಕೆ ವೇಳೆ ಮತ್ತು ಸ್ಥಳಗಳ ಕಾಣಿಕೆಯು ಅಪ್ರಸ್ತುತವಾಗಿ ಪರಕೀಯವಾಗುತ್ತದೆ. ಇಂಥ ಸಮಯದಲ್ಲಿ, ಆಂತರಿಕ ಅನುಭವಗಳನ್ನು ಬಾಹ್ಯ ಜಗತ್ತಿನ ಪ್ರತೀಕಗಳ ಮೂಲಕ ಚಿತ್ರಿಸುವುದಲ್ಲದೆ, ಒಂದು ಕ್ರಮಬದ್ಧ ರೀತಿಯಲ್ಲಿ ನಿರೂಪಿಸುವ ಪದ್ಧತಿಯನ್ನು ಕಾವ್ಯವು ಅಂಗೀಕರಿಸಬೇಕು. ಒಂದು ಕವಿತೆಗೆ ಪ್ರಾರಂಭ, ಮಧ್ಯ ಮತ್ತು ಅಂತ್ಯ ಇರಬೇಕು. ಆದಕ್ಕೊಂದು ತಾಳದ ಗತಿಯಿರಬೇಕು. ಬಾಹ್ಯ ಜಗತ್ತಿನಿಂದ ತೆಗೆದುಕೊಂಡ ಅದರ ಪ್ರತಿಮೆಗಳು ಅದರ ವಿಷಯವನ್ನು ಬೆಳೆಸಬೇಕು; ಅಥವಾ ಆ ವಿಷಯಗಳೊಳಗಿಂದ ಪ್ರತಿಮೆಯು ಬೆಳೆಯಬೇಕು. ಈ ಕಾರ್ಯವು ವಿಶಿಷ್ಟ ಸಂಬಂಧ ಹಾಗೂ ಕ್ರಮದಿಂದ ನಡೆಯಬೇಕು. ಒಂದು ದಿನವು ಮುಂಬರುವ ದಿನಕ್ಕೆ ಜನ್ಮವನ್ನು ಕೊಡುವಂತೆ, ಒಂದು ಪ್ರತಿಮೆಯು ಇನ್ನೊಂದು ಪ್ರತಿಮೆಯನ್ನು ಸೃಷ್ಟಿಸಬೇಕು. ಈ ರೀತಿಯ ಸೃಷ್ಟಿಯನ್ನು ಪರಿಶೀಲಿಸುವಾಗ, ವಾಚಕನು ಏಕಕಾಲಿಕವಾಗಿ ಕವಿತೆಯ ತಿರುಳನ್ನು ಗ್ರಹಿಸುವುದಿಲ್ಲ. ಯಾಕೆಂದರೆ ಕವಿತೆಯು ಅನುಭವಗಳ ಪರಂಪರೆಯಿದ್ದಂತೆ. ಆಧುನಿಕ ತತ್ತ್ವಜ್ಞಾನವು ಯಾವ ಪರಿಣಾಮ ಮಾಡಿದರೂ, ಕವಿಯು ಕ್ರಮವನ್ನು ದುರ್ಲಕ್ಷ್ಯಿಸಲಾರ ಮತ್ತು ಕಾರ್ಯ-ಕಾರಣವನ್ನೂ ದುರ್ಲಕ್ಷ್ಯಿಸಲಾರ.

ಹೀಗಿದ್ದಾಗ ಕವಿಯು ತನ್ನ ಪ್ರತಿಮೆಗಳ ಉಪಯೋಗವನ್ನು ಹೇಗೆ ಸಮರ್ಥಿಸುತ್ತಾನೆ? ಮತ್ತು ಅದರ ಹಿಂದಿರುವ ಮಾದರಿ ಯಾವುದು? ಎಂಬ ಪ್ರಶ್ನೆಯನ್ನು ನಾವು ಹೆಚ್ಚು ಜೋರಿನಿಂದ ಕೇಳಬೇಕಾಗುತ್ತದೆ. ಹಿಂದಿನ ಕಾವ್ಯದಲ್ಲಿ ಕಾವ್ಯಾತ್ಮಕವಾದ ಸರಣಿಯು ಪ್ರತಿಮೆಗಳೊಳಗಿದ್ದ ಸಂಬಂಧವನ್ನು ಸ್ಪಷ್ಟವಾಗಿ ವಿವರಿಸುತ್ತಿತ್ತು. ಇಂದು ಆ ವಾದಸರಣಿಯನ್ನು ಕವಿಯು ತ್ಯಜಿಸಿದ್ದಾನೆ. ಕಾವ್ಯಾತ್ಮಕ ವಾದಸರಣಿಯ ಬದಲು ಕವಿಯು ತನ್ನ ಪ್ರತಿಮೆಗಳ ಒಳಗೆ ಧ್ವನಿತಸಾಮ್ಯವನ್ನು ತರಬೇಕಾಗಿದೆ. ಆದರೆ ಇದನ್ನು ನಾವು ಇಂದಿನ ಕಾವ್ಯದಲ್ಲಿ ಮೇಲಿಂದ ಮೇಲೆ ಕಾಣುವುದಿಲ್ಲ. ಅವನ ಪ್ರತಿಮೆಗಳು ಕವನದ ಕೇಂದ್ರವನ್ನು ತ್ಯಜಿಸಿ ವಾಸಿಸುವಂತೆ ಅನೇಕ ಬಾರಿ ಕಂಡುಬರುತ್ತದೆ.

ಕವಿತೆಯು ಪ್ರತಿಮೆಗಳೊಳಗಿಂದ ಸ್ವಾಭಾವಿಕವಾಗಿ ಬೆಳೆದು ಬರಬೇಕು. ವಿಚಾರ ಹಾಗೂ ಸಂಕೇತಗಳಿಂದ ಅಜ್ಞಪ್ತವಾಗಿ ಒತ್ತಾಯದಿಂದ ಪ್ರತಿಮೆಗಳ ಮಾದರಿಯನ್ನು ನಿರ್ಮಿಸಬಾರದು. ಪ್ರತಿಮೆಗಳೇ ಕವಿತೆಯ ರೂಪವನ್ನು ಸೃಷ್ಟಿಸಬೇಕು. ಸಿಝೇನ್ (Cezanne) ಎಂಬ ಒಬ್ಬ ಚಿತ್ರಕಾರನು ಸೃಷ್ಟಿಯ ರೂಪ ಹಾಗೂ ಬಣ್ಣಗಳಲ್ಲಿ ಒಂದು ಅಖಂಡವಾದ ಸಂಬಂಧವನ್ನು ಕಂಡನು. ಅದರ ಮೂಲಕ ಅವನು ಸಾಮಾನ್ಯವಸ್ತುಗಳನ್ನು ನೋಡಿದಾಗ, ಈ ಎರಡು ಗುಣಗಳನ್ನೂ ಬೇರೆ ಬೇರೆಯಾಗಿ ಧ್ಯಾನಿಸಲು ಅಸಮರ್ಥನಾದನು. ಮುಂದೆ ಅವನು ರೂಪದ ಕಡೆಗೆ ಲಕ್ಷ್ಯವೀಯದೆ ಕೇವಲ ಬಣ್ಣ ಬಣ್ಣದ ಚಿತ್ರಗಳನ್ನು ತೆಗೆಯತೊಡಗಿದನು. ಈ ರೀತಿ ಕಲೆಯಲ್ಲಿ ಪರಿಣಮಿಸಿದ ಕ್ರಾಂತಿ ಹಾಗೂ ಅನುಭವದ ರೂಪವನ್ನು ರೂಪಕಗಳ ಅಥವಾ ಪ್ರತಿಮೆಗಳ ಬಣ್ಣದೊಳಗೆ ನಿರೂಪಿಸುವ ಕಾವ್ಯದ ಕ್ರಾಂತಿ ಇವೆರಡರಲ್ಲಿಯೂ ಸಾಮ್ಯವಿದೆ. ಈ ಸಾಮ್ಯವೇ ಹೊಳೆದಂತೆ ಕಂಡರೂ ವಿಜಾತೀಯ ಭಗ್ನಪ್ರತಿಮಾಸೃಷ್ಟಿಗೆ ಕಾರಣವಾಗಿದೆ. ಈ ವಾದವು ಎಷ್ಟರಮಟ್ಟಿಗೆ ಸರಿಯಾಗಿದೆಯೆಂಬುದನ್ನು ನೋಡೋಣ. ರಾಬರ್ಟ್ ಹಿಲರ್ (Robert Hillyer) ಎಂಬ ಅಮೇರಿಕನ್ ವಿಮರ್ಶಕನು ಈ ವಾದಸರಣಿಯನ್ನು ವಿರೋಧಿಸಿದ್ದಾನೆ. ಅವನು ಈ ರೀತಿಯಾಗಿ ತನ್ನ ಮಾತನ್ನು ಹೇಳಿದ್ದಾನೆ: "ಇಂದ್ರಿಯ ಜನಿತ ಪ್ರತಿಮೆಯ ಮೇಲಿನ ಒತ್ತಾಯವು ಗೂಢವಾದ ವಿಚಾರಕ್ಕೆ

ವಿರೋಧಿಯಾಗಿರುವುದು, ಇದರ ಪರಿಣಾಮವು ಚಿತ್ರಕಾವ್ಯದಲ್ಲಿ ಮೂಡಿತು. ಅಲ್ಲಿ ಚಿತ್ರವೇ ಸರ್ವಸ್ವವಾಗಿ, ಸಾಮಾನ್ಯ ಮಾನವೀಯ ಅನುಭವದ ಸಂಬಂಧವು ಅದರೊಡನೆ ಇರಲಿಲ್ಲ. ಇರುವಿಕೆಯನ್ನು ಅರ್ಥದಿಂದ ಬೇರ್ಪಡಿಸಲು ಇದೇ ಮೊದಲನೆಯ ದೋಷಯುಕ್ತ ಹೆಜ್ಜೆ."

ಹಿಂದಿನ ಕಾಲದಲ್ಲಿ ಒಂದು ಗೂಢವಾದ ವಿಚಾರವನ್ನು ಕಾವ್ಯಾತ್ಮಕ ಶೈಲಿಯಲ್ಲಿ ಹೇಳಿದರು ಕೂಡ, ಅದನ್ನು ಪ್ರತಿಮೆಗಳ ರೂಪದಲ್ಲಿ ನಿರೂಪಿಸುತ್ತಿರಲಿಲ್ಲ. ಇಂದು ಗೂಢ ವಿಚಾರವನ್ನೇ ಪ್ರತಿಮೆಗಳು ಹೇಳುತ್ತವೆ. ಇದರ ಪರಿಣಾಮವಾಗಿ ವಾಚಕನು ಪ್ರತಿಮೆಗಳ ಪರಂಪರೆಯ ಹಿಂದಿದ್ದ ಕಾವ್ಯವಸ್ತುವನ್ನು ಗ್ರಹಿಸುವುದಿಲ್ಲ. ಪ್ರತಿಮೆಗಳು ವೈಯಕ್ತಿಕವಾಗಿ ಅನಿಯಂತ್ರಿತವಾದಾಗ, ವಾಚಕನಿಗೆ ಕವಿತೆಯ ಪೂರ್ಣಚಿತ್ರವು ಗೊತ್ತಾಗುವುದಿಲ್ಲ. ಹೀಗಾದಾಗ ಕವಿತೆಯು ಸಾಮಾನ್ಯವಾದ ಮಾನವೀಯ ಅನುಭವಕ್ಕೆ ಸಂಬಂಧಿಸಿರುವುದಿಲ್ಲ. ಚಿತ್ರರಹಿತವಾದ ಕೆಲವು ಅವತರಣಿಕೆಗಳನ್ನು ಇಂದಿನ ಕವಿಯು ದುರ್ಲಕ್ಷ್ಯಿಸಿ ಉಪಯೋಗಿಸುವುದಿಲ್ಲ. ಇವುಗಳಿಂದ ಕಾವ್ಯದ ವಸ್ತು ಮತ್ತು ಪ್ರತಿಮೆಗಳ ಸಂಬಂಧವು ನಮಗೆ ಸ್ಪಷ್ಟವಾಗಿ ಗೊತ್ತಾಗಬಹುದಾಗಿತ್ತು. ಆದರೆ ಇಂದು ಇದು ಸಾಧ್ಯವಿಲ್ಲ. ಆದುದರಿಂದಲೇ ಹಿಲರ್ ಅವರು 'ಇರುವಿಕೆಯ ಅರ್ಥದಿಂದ ಬೇರ್ಪಡಿಸಿದ್ದು ದೋಷಯುಕ್ತವಾಗಿದೆ' ಎಂದು ವಾದಿಸುತ್ತಾರೆ. ಆದರೆ ಈ ವಾದದಲ್ಲಿ ಕೂಡ ನಾವು ಒಂದು ತಪ್ಪನ್ನು ಕಾಣುತ್ತೇವೆ:— 'ಕವಿಯು ಗೂಢವಾದ ವಿಚಾರಗಳನ್ನು ಗೂಢವಾದ ಶಬ್ದಗಳಲ್ಲಿ ಚಿತ್ರಿಸಬಹುದು; ಅಥವಾ ಗೂಢವಾದ ವಿಚಾರಗಳನ್ನು ಪ್ರತಿಮೆಗಳಲ್ಲಿ ಪರಿವರ್ತಿಸಬಹುದು' ಎಂದು ಈ ವಾದಸರಣಿಯು ಹೇಳುತ್ತದೆ. ಆದರೆ ಸಾಮಾನ್ಯವಾಗಿ ಇಂದು ಕವಿಯು ಈ ರೀತಿ ಮಾಡುವುದಿಲ್ಲವೆಂಬುದನ್ನು ಬಲ್ಲೆವು. ಒಂದು ವಿಚಾರವನ್ನು ಇಟ್ಟುಕೊಂಡೇ ಅದಕ್ಕೆ ಅತ್ಯುತ್ತಮವಾದ ಪ್ರತಿಮೆಯನ್ನು ಪರಿಶೋಧಿಸುವುದಿಲ್ಲ. ಪ್ರತಿಮೆಯಿಂದಲೇ ವಿಚಾರ—ರೂಪಕ್ಕೆ ಹಾಗೂ ಪರಿಪೂರ್ಣತೆಗೆ ಅವನು ಬರುತ್ತಾನೆ. ಆಧುನಿಕ ಕವಿಯ ಪ್ರತಿಮಾನಿರೂಪಣೆಯ ಬಗೆಗೆ, ಕೆಳಗೆ ಡಿಲನ್ ಟಾಮಸ್ (Dylan Thomas) ಇವರ ಮಹತ್ತ್ವಪೂರ್ಣವಾದ ಚರ್ಚೆ ಇದೆ :

"ಕವಿತೆಯನ್ನು ಬರೆಯುವಾಗ ನನಗೆ ಪ್ರತಿಮೆಗಳ ಗುಂಪೇ ಬೇಕು. ಯಾಕೆಂದರೆ ಪ್ರತಿಮೆಗಳ ಗುಂಪೇ ನನ್ನ ಕವಿತೆಯ ಕೇಂದ್ರ. ನಾನು ಒಂದು ಪ್ರತಿಮೆಯನ್ನು ನಿರೂಪಿಸುತ್ತೇನೆ— ಎಂದರೆ 'ನಿರ್ಮಿಸು' ಎಂಬ ಶಬ್ದಶಃ ಅರ್ಥದಲ್ಲಿ ಅಲ್ಲ; ಆದರೆ ಪ್ರತಿಮೆಯು ಭಾವಪೂರ್ಣವಾಗಿ ನನ್ನೊಳಗೇ ನಿರ್ಮಿತವಾಗುವಂತೆ ಆಸ್ಪದವನ್ನು ಕೊಡುತ್ತೇನೆ. ಈ ರೀತಿ ಪ್ರತಿಮೆಯು ನಿರ್ಮಿತವಾದ ಮೇಲೆ, ನನ್ನ ಬೌದ್ಧಿಕ ಮತ್ತು ವಿಮರ್ಶಕ ಪ್ರಜ್ಞೆಗಳನ್ನು ಅದರ ಮೇಲೆ ಪ್ರಯೋಗಿಸುತ್ತೇನೆ. ಈ ಪ್ರತಿಮೆಯು ಇನ್ನೊಂದು ಪ್ರತಿಮೆಗೆ ಜನ್ಮವನ್ನು ಕೊಡಲಿ, ಮತ್ತೂ ಮತ್ತೂ ಬಂದ ಪ್ರತಿಮೆಯು ಮೂಲ ಪ್ರತಿಮೆಯನ್ನೇ ವಿರೋಧಿಸಲಿ; ಈ ಎರಡೂ ಪ್ರತಿಮೆಗಳು ಕೂಡಿ ಮೂರನೆಯ ಪ್ರತಿಮೆಗೆ ಜನ್ಮವನ್ನು ಕೊಡಲಿ ನಾಲ್ಕನೆಯ ಪ್ರತಿಮೆಯು ಮೂರನೆಯದನ್ನು ವಿರೋಧಿಸಲಿ; ನಾನೇ ಸಿದ್ಧಪಡಿಸಿದ ನಿಯಮನಿಷ್ಠ ಮರ್ಯಾದೆಗಳಲ್ಲಿ ಈ ಪ್ರತಿಮೆಗಳು ಕಾದಾಡಲಿ; ಪ್ರತಿಯೊಂದು ಪ್ರತಿಮೆಯು ತನ್ನಲ್ಲಿಯೇ ತನ್ನ ನಾಶದ ಬೀಜವನ್ನು ಹಿಡಿದಿಟ್ಟಿರುತ್ತದೆ. ಈ ಕೇಂದ್ರವರ್ತಿಯಾದ ಬೀಜದಿಂದ ಹುಟ್ಟುವಂತಹ ಪ್ರತಿಮೆಗಳನ್ನು ಕಟ್ಟುವುದು ಮತ್ತು ಒಡೆದು ಹಾಕುವುದು ಸಂತತವಾಗಿ ನಡೆದಿರುತ್ತದೆ—ಎಂಬುದನ್ನು ನನ್ನ ತರ್ಕದ ಪ್ರಕಾರ ನಂಬಿದ್ದೇನೆ. ಈ ಕೇಂದ್ರವರ್ತಿಬೀಜವೇ ಏಕಕಾಲದಲ್ಲಿ ವಿಧಾಯಕವೂ ವಿಧ್ವಂಸಕವೂ ಆಗಿರುತ್ತದೆ........ನನ್ನ ಯಾವುದೇ ಕವಿತೆಯ ಮುಖ್ಯ ಪ್ರತಿಮೆಯ ಸುತ್ತಲೂ ಕವನದ ಜೀವ ಸುತ್ತಾಡುವುದಿಲ್ಲ. ಯಾಕೆಂದರೆ ಕವಿತೆಯ ಜೀವ ಆದರ ಕೇಂದ್ರದಿಂದ ಹೊರಬರಬೇಕು. ಒಂದು ಪ್ರತಿಮೆಯು ಹುಟ್ಟಿ ಇನ್ನೊಂದು ಪ್ರತಿಮೆಯ ಜೀವನಕ್ಕೆ ಕಾರಣವಾಗಿ ಮುಕ್ತಾಯಗೊಳ್ಳಬೇಕು. ಮತ್ತು ನನ್ನ ಪ್ರತಿಮೆಗಳ ಕ್ರಮವೆಂದರೆ ನಿರ್ಮಿತಿ, ಪುನರ್ನಿರ್ಮಿತಿ, ನಾಶ, ವಿರೋಧ ಇವುಗಳದೇ ಕ್ರಮವಾಗಿರಬೇಕು....ಪ್ರವರ್ತಕವಾಗಿರುವ ನನ್ನ ಕವಿತೆಯ ಕೇಂದ್ರ ಉತ್ಪಾದಕ, ಪುನರುತ್ಪಾದಕ, ವಿಧ್ವಂಸಕ, ಮತ್ತು ವಿರೋಧಕ ಸ್ವಭಾವದ ಮೂಲಕ, ಪ್ರತಿಮೆಗಳಲ್ಲಿ ಹುಟ್ಟುವ ಸಂಘರ್ಷವು ಅಪರಿಹಾರ್ಯವಾಗಿರುತ್ತದೆ. ಹೀಗೆ ನನ್ನ ಕವಿತಾ ಕೇಂದ್ರವೆಂದರೆ ಒಂದು ಆಂತರಿಕ ಯುದ್ಧದ ಗರ್ಭ. ಯುದ್ಧದಲ್ಲಿ ದೊರೆತ ಕ್ಷಣಿಕಶಾಂತಿಯೇ ನನ್ನ ಕವಿತೆ......."

ಕೆಲವರ ಕವಿತೆಗಳಲ್ಲಿ ಒಂದು ಮುಖ್ಯ ಪ್ರತಿಮೆಯು ಇರುತ್ತದೆ; ಬೇರೆ ಪ್ರತಿಮೆಗಳು ಅದರ ಸುತ್ತಲೂ ತಿರುಗುತ್ತವೆ. ನಡುನಡುವೆ ಪ್ರತಿಮೆಯ ಉಲ್ಲೇಖವೂ ಕಂಡುಬರುತ್ತದೆ. ಆದರೆ ಡಿಲನ್ ಟಾಮಸ್‌ರಂತಹ ಕವಿಗಳಲ್ಲಿ, ಇಂಥ ಪ್ರಮುಖ ಪ್ರತಿಮೆಯೇ ಕವಿತೆಯ ಕೇಂದ್ರವಾಗದೆ, ಪ್ರತಿಮೆಗಳ ಗುಂಪೇ ಕವಿತೆಯ ಕೇಂದ್ರವಾಗಿರುತ್ತದೆ.

ಭಗ್ನಪ್ರತಿಮೆಗಳನ್ನು ಒಂದು ಉತ್ತಮಕಾವ್ಯದಲ್ಲಿ ಯಾರೂ ಸ್ವೀಕರಿಸಲಾರರು. ಈ ಭಗ್ನಪ್ರತಿಮೆಗಳು ಹುಟ್ಟಲು ಕಾರಣಗಳು, ಪರಿಸರಗಳು ಏನೆಂಬುದನ್ನು ಈವರೆಗೆ ನೋಡಿದ್ದಾಯಿತು. ಇನ್ನು ಯಾವ ರೀತಿಯಲ್ಲಿ ಈ ಭಗ್ನಪ್ರತಿಮೆಗಳು ನಿರ್ಮಾಣಗೊಳ್ಳುತ್ತವೆ ಎಂಬುದನ್ನು ನೋಡೋಣ :

೧) ಎರಡು ವಸ್ತುಗಳಲ್ಲಿ ಸಮಾನತೆ ತೋರದಿದ್ದರೂ ಅದನ್ನು ಕಲ್ಪಿಸುವುದು, ಎಂದರೆ ದೋಷಯುಕ್ತ ರೂಪಕ— ಉಪಮೆಗಳನ್ನು ನಿರ್ಮಿಸುವುದು.

೨) ಪ್ರತಿಮೆಯಲ್ಲಿಯ ಅಸ್ಪಷ್ಟತೆ.

೩) ಕಾವ್ಯಾತ್ಮಕ ವಿವೇಕದ ಕೊರತೆ ಹಾಗೂ ತರ್ಕರಹಿತ ಸೌಂದರ್ಯ.

೪) ಔಚಿತ್ಯವಿಲ್ಲದ ಭಾವನೆ.

ಉದಾಹರಣೆಗಳು :—

೧) " ದೇವಮಂದಿರದಲ್ಲಿ
ಬಾನ ಹಂದರದಲ್ಲಿ
ರೂಹುಗೊಂಡಿಹ
ಜೀಕ ಜೀಕೋಣ—

('ಬಾಳಜೋಕಾಲಿ' ಎಸ್. ಡಿ. ಇಂಚಲ)

ಇಲ್ಲಿ ಆಕಾಶವನ್ನು ಹಂದರಕ್ಕೆ ಹೋಲಿಸಿದ್ದಾರೆ. ಆಕಾಶದ ಭವ್ಯತೆಯು ಬಹುಶಃ ಹಂದರಕ್ಕೆ ಬರುವುದಿಲ್ಲ.

ಮೊದಲು ಕವಿಗಳು ಬಾಳನ್ನೇ ಒಂದು ಜೋಕಾಲಿಗೆ ಹೋಲಿಸಿ ರೂಪಕವನ್ನು ಹೆಣೆದಿದ್ದಾರೆ. ಈ ಜೋಕಾಲಿಯು ಒಂದು ಅನಂತವಾದ ಕ್ಷೇತ್ರದಲ್ಲಿ ತೂಗುತ್ತಿದೆ—ಎಂದು ಅವರಿಗೆ ಹೇಳಬೇಕಾಗಿದೆ. ಆದುದರಿಂದಲೇ ಈ ಜೋಕಾಲಿಯನ್ನು ಕಟ್ಟಲು ಆಕಾಶವನ್ನು ಹಂದರಕ್ಕೆ ಹೋಲಿಸಿದ್ದಾರೆ.

" ನಮಗೀ ವಿಶ್ವವೆ ಪರಿಣಯಶಾಲೆ
ಬಾನೇ ಚಪ್ಪರವಾಗಿದೆ ಮೇಲೆ
ಹಾರುವ ಹಸುರಿನ ಗಿಳಿಗಳ ಗಣವು
ಚಪ್ಪರದಲಿ ತೋರುವ ತೋರಣವು "

('ಮದುವೆ' ಮೂರ್ತಿ)

ವಿಚಾರವೇನೋ ಚೆನ್ನಾಗಿದೆ. ಇಲ್ಲಿಯ ಪ್ರತಿಮೆಯಲ್ಲಿ ಗಿಳಿಗಳ ಗಣ ತೋರಣದಂತೆ ಕಾಣುತ್ತದೆ; ಆದರೆ ಈ ಸುಂದರಕಲ್ಪನೆಗೆ ಚಪ್ಪರವು ಅಡ್ಡ ಬಂದಂತಾಗಿದೆ.

೨) " ಅಗಸದೊಡಲೊಳು ಈಜುತ ಈಜುತ
ಜೀವನಪಕ್ಷಿಯು ಹಾರುತಿದೆ.

(ಮಹದೇವ ಬಣಕಾರ)

ಜೀವನವನ್ನು ಒಂದು ಪಕ್ಷಿಗೆ ಹೋಲಿಸಿ ರೂಪಕವನ್ನು ಹೆಣೆದಿದ್ದಾರೆ. ಇದು ಆಕಾಶದಲ್ಲಿ ಹಾರಾಡುತ್ತಿದೆ—ಎಂಬ ಪ್ರತಿಮೆ ಸ್ಪಷ್ಟವಾಗುತ್ತದೆ. ಆದರೆ ಇಷ್ಟೇ ಹೇಳದೆ ಕವಿಗಳು, ಆಕಾಶವನ್ನು ಸಮುದ್ರಕ್ಕೆ ಹೋಲಿಸಿದ್ದಾರೆ. ಆಕಾಶ ಸಮುದ್ರವಾದಾಗ, ಪಕ್ಷಿ ಮೀನದಂತೆ ಈಸಬಹುದು. ಈ ಪ್ರತಿಮೆಯನ್ನು ಬೇರೆಯಾಗಿ ತೆಗೆದುಕೊಂಡಾಗ ಸ್ಪಷ್ಟವಾಗುತ್ತದೆ ಆದರೆ ಇಲ್ಲಿ ಕವಿಗಳು ಮಿಶ್ರರೂಪಕಗಳನ್ನುಪಯೋಗಿಸಿ ' ಈಜುತ ಈಜುತ ಹಾರುತಿದೆ ' ಎಂದು ಹೇಳಿದ್ದರಿಂದ, ಅಸ್ಪಷ್ಟತೆಯು ತಲೆದೋರಿದೆ.

" ಚಂದ್ರಮ ನಭಲೋಭಾನದ ಧೂಪ "

(ಹಾಡು—ಶು. ರಂ. ಎಕ್ಕುಂಡಿ)

ಚಂದ್ರಮನನ್ನು ಬೆಳ್ಳಿಯ ಲೋಭಾನಪಾತ್ರೆಗೆ ಹೋಲಿಸಿ, ಅವನು ಪಸರಿಸುವ ಬೆಳುದಿಂಗಳನ್ನು ಲೋಭಾನದ ಧೂಪಕ್ಕೆ ಹೋಲಿಸಬಹುದು. ಆದರೆ ಇಲ್ಲಿ ಕವಿಗಳು ಚಂದ್ರನನ್ನು ಲೋಭಾನಪಾತ್ರೆಗೆ ಹೋಲಿಸುವುದರ ಬದಲು, ಧೂಪಕ್ಕೇ ಹೋಲಿಸಿದ್ದಾರೆ. ಆದ್ದರಿಂದ ಅಸ್ಪಷ್ಟತೆ ಇದೆ.

ಕೆಲವು ಸಲ ನಿರೀಕ್ಷಣೆಯು ತಪ್ಪುವುದರಿಂದಲೂ ಪ್ರತಿಮೆಯಲ್ಲಿ ಅಸ್ಪಷ್ಟತೆಯು ತಲೆದೋರುತ್ತದೆ. ವಿಮಾನವು ಬಾನಿನ ಮೌನವನ್ನು ಸೀಳಿಬರುವಾಗ ಯಾವ ಸಪ್ಪಳವಾಗುತ್ತದೆ ಎಂಬುದು ಎಲ್ಲರಿಗೂ ಗೊತ್ತಿರುವ ವಿಷಯ. ಅದಕ್ಕೆ ' ಸಿಳ್ಳು ' ಹೊಡೆಯುತ್ತದೆಂದರೆ ಅಸ್ಪಷ್ಟತೆಯು ಕಂಡುಬರುತ್ತದೆ. ಉದಾಹರಣೆಗೆ—

" ರಣಭೈರವ ಹಕ್ಕಿಯೀಸಿ
ಹಾರಿಬರಲು ರೆಕ್ಕೆಬೀಸಿ
ಸೀಳಿಬರಲು ಬಾನ ಮೌನ
ಸಿಳ್ಳು ಹೊಡೆಯುವೀ ವಿಮಾನ. "

(' ಎಚ್ಚರಿಕೆ ' ಶು. ರಂ. ಎಕ್ಕುಂಡಿ)

" ಹೊಸ ಚೈತನ್ಯದ ಹಾಲ್ ತುಳುಕಾಡಿದೆ
ಸೃಷ್ಟಿಯ ಹೃದಯದ ಪಾತ್ರೆಯಲಿ. "

(ಜಿ. ಎಸ್. ಶಿವರುದ್ರಪ್ಪ)

ಇಲ್ಲಿ ಸೃಷ್ಟಿಯ ಹೃದಯವಾವುದು ? ನಮಗೆ ಸಹಜವಾಗಿ ತಿಳಿಯದ ವಿಷಯ. ಇದರಿಂದಲೇ ಈ ಪ್ರತಿಮೆಯ ಅಸ್ಪಷ್ಟತೆ.

(೩) ಇಂದ್ರಿಯಗಳಿಗೆ ಗೋಚರವಾಗಲು ಸಾಧ್ಯವಿರದಂತಹ ನಮ್ಮ ಭಾವನೆ ಮತ್ತು ಮನಃಸ್ಥಿತಿಗಳನ್ನು ಇಂದ್ರಿಯಗೋಚರ ವಿಷಯಗಳಿಗೆ ಸಾದೃಶ್ಯವಿಲ್ಲದಿದ್ದರೂ ಹೋಲಿಸಿ ರೂಪಕಗಳನ್ನು ನಿರ್ಮಿಸುವುದು ಅನೇಕ ಕವಿಗಳಲ್ಲಿ ಕಾಣುತ್ತದೆ. ಕೆಲವೆಡೆ ಕಾವ್ಯಾತ್ಮಕ ವಿವೇಕದ ಕೊರತೆಯೂ ತುಂಬ ಕಂಡುಬರುತ್ತದೆ.

" ನಿನ್ನ ಎದೆಯ ಬಟ್ಟಲಲ್ಲಿ
ಭಕ್ತಿತೈಲ ತುಂಬಿಡು,
ಚಿತ್ತವೆಂಬ ಬತ್ತಿಯನ್ನು
ಹೊಸೆದು ಬಟ್ಟಲಲ್ಲಿಡು. "

(ಮಹದೇವ ಬಣಕಾರ)

" ಮುನ್ನೀರ ಮಡಲಿನಲಿ ಮಲಗಿರುವಳು
ಶಾಂತಿಮೂರುತಿ ಶಶಿಯ
ಸೇರುವುದಕಾಶಿಸುತ
ಅಲೆಗಳನು ಛೇದಿಸುತ ಬರುತಲಿಹಳು. "

(' ಶಾಂತಿ ' ಜಿ. ಪಿ. ರಾಜರತ್ನಂ)

ಇಲ್ಲಿಯ ಪ್ರತಿಮೆ ಸುಂದರವಾಗಿದೆ. ಆದರೆ ಇಲ್ಲಿ ಕಾವ್ಯಾತ್ಮಕ ವಿವೇಕದ ಕೊರತೆ ಇದೆ. ಶಾಂತಿಯೆಂಬ ದೇವತೆ ಮುನ್ನೀರ ಮಡಲಿನಲ್ಲಿ ಮಲಗಿರುವಳು. ಇವಳು ಮೊದಲು ಮಲಗಿದವಳು ಅನಂತರ ಅಲೆಗಳನ್ನು ಛೇದಿಸಿ ಹೇಗೆ ಬರುತ್ತಾಳೆ? ಚಂದ್ರಮನನ್ನು ಸೇರುವ ಆಸೆ ಇದ್ದುದೇ ಆದರೆ, ಅಲೆಗಳನ್ನು ಛೇದಿಸಿ ಬಂದರೇನು ಪ್ರಯೋಜನ? ಅವಳು ಮೇಲೆ ಏರಿದರೆ ಶಾಂತಿಮೂರುತಿ ಶಶಿಯನ್ನು ಪಡೆಯುವಳು. ಈ ಶಾಂತಿದೇವಿಗೆ, ಅಲೆಗಳನ್ನು ಛೇದಿಸಿ ಬರುವ ಅಶಾಂತಿಯೇಕೆ?

ಕೆಲವೆಡೆ ತರ್ಕರಹಿತ ಸೌಂದರ್ಯವನ್ನು ಕಾಣಬಹುದಾಗಿದೆ.

" ರಜತಮೂಲಚ್ಛಾಯೆಯಲ್ಲಿ ಬಿಚ್ಚಿತು ಬೋಧಿವೃಕ್ಷ-
ದಗ್ನಿಯ ಛತ್ರಿ "

('ಕೊನೆಯರಾತ್ರಿ '—ಅಡಿಗ)

ಬೋಧಿವೃಕ್ಷದ ಕೆಳಗೆ ಕುಳಿತ ಬುದ್ಧದೇವನಿಗೆ ಜ್ಞಾನೋದಯ ವಾಯಿತು. ಅವನ ಹಿಂದೆ ಬೆಳಕು ಮೂಡಿತು. ಆ ಗಿಡವು ಬೆಳಕಿನ ಗಿಡದಂತೆ ಕಂಡಿತು. ಇದು ಸರಳವಾಗಿ ತಿಳಿಯಬಹುದಾದ ವಿಚಾರ. 'ಅಗ್ನಿಯ ಛತ್ರಿ' ಎಂದಾಗ್ಯ ಅಸ್ಪಷ್ಟತೆಯೊಡನೆ, ತರ್ಕರಹಿತ ಸೌಂದರ್ಯವೂ ಕಂಡುಬರುತ್ತದೆ.

(೪) "ಅಂಗ್ಯೆಯ ಸೊಡರಾರಿ
ಬೆಳಕಳಿದು ಹೋಯ್ತು,
ಕೈಗೆ ಸೊಡರಿನ ಕಾವು
ತಾಕಿ ನೋವಾಯ್ತು."

(ಹೊನಲು—ಮಧುರ).

ಇದನ್ನು ಓದಿದಾಗ, ಅಂಗ್ಯೆಯಲ್ಲಿ ಸೊಡರು ಇರಬಹುದೇ ಎಂಬ ಪ್ರಶ್ನೆ. ಒಂದು ವೇಳೆ ಇದ್ದರೂ, ಅದು ಇದ್ದಾಗ ನೋವಾಗದೇ ನಂದಿದ ಮೇಲೆ ಹೇಗೆ ನೋವಾಯಿತು? ಇವರ ಅಂಗ್ಯೆಯಲ್ಲಿ ಪ್ರಣತಿ ಇದೆಯೆಂದು ತಿಳಿಯೋಣ; ಇದು ನಂದಿದ ಮೇಲೆ ಹೇಗೆ ಕಾವು ತಾಕಿತು? ಇಲ್ಲಿಯ ಔಚಿತ್ಯವಿಲ್ಲದ ಭಾವನೆಯ ಮೂಲಕ ಪ್ರತಿಮೆಯ ಅರ್ಥವೇ ಆಗುವುದಿಲ್ಲ.

ಇನ್ನು ಸೌಂದರ್ಯದೃಷ್ಟಿಗೆ ಹೊರತಾಗಿ, ಕೇವಲ ಒಂದು ಬೀಭತ್ಸ ಚಿತ್ರವನ್ನು ಕೊಡುವ ಪ್ರತಿಮೆಗಳೂ ಇವೆ:

"ಪಾರ್ಲಿಮೆಂಟಿನ ವೇದಿಕೆಯ ಮೇಲೆ ಪ್ರತಿಯೊಂದು ಪೀಠ-
ದಲ್ಲೂ—ಮತ್ತೆ ಗೋಪುರದ ಮೇಲೆ
ಬಾಯ್ಬಿಡುಕೊಂಡು ಲಬೋ ಲಬೋ ಚೆಲ್ಲಿ ಕೀವನ್ನು"

(ಗೋಪಾಲಕೃಷ್ಣ ಅಡಿಗ).

ಇನ್ನು ಕೆಲವು ಪ್ರತಿಮೆಗಳ ಅರ್ಥವನ್ನು ತಿಳಿದುಕೊಳ್ಳುವಾಗ ಶ್ರಮಿಸಬೇಕಾಗುತ್ತದೆ. ಅವನ್ನು ಒಮ್ಮೆಲೇ ಭಗ್ನಪ್ರತಿಮೆಗಳಲ್ಲಿ ಸೇರಿಸಲಾಗದು. ಅಂತಹ ಪ್ರತಿಮೆಯ ಒಂದು ಉದಾಹರಣೆಯನ್ನು ನೋಡುವಾ:

"ಭೃಂಗದ ಬೆನ್ನೇರಿ ಬಂತು ಕಲ್ಪನಾವಿಲಾಸಾ,
ಮಸೆದ ಗಾಳಿ ಪಕ್ಕ ಪಡೆಯುತಿತ್ತು ಸಹಜಪ್ರಾಸಾ"

(ದ. ರಾ. ಬೇಂದ್ರೆ)

ಇಲ್ಲಿ 'ಮಸೆದ ಗಾಳಿ' ಎಂಬ ಪದದ ಅರ್ಥವಾಗದೆಯೆ ಅನೇಕರು ಇದನ್ನು ಭಗ್ನಪ್ರತಿಮೆಯಲ್ಲಿ ಸೇರಿಸುವುದುಂಟು. ಹಾಗಾದರೆ ಇದರ ಅರ್ಥ ಏನಿರಬಹುದು?

ಈ ಭಾವಗೀತದ ಕಲ್ಪನಾವಿಲಾಸದೇವತೆಯು ಒಂದು ಭೃಂಗದ ಬೆನ್ನೇರಿ ಬಂದಿದ್ದಾಳೆ. ಇಲ್ಲಿ ಬರುವ ಭೃಂಗ ಸಾಮಾನ್ಯವಾದ ಭೃಂಗವಲ್ಲ. ಅದನ್ನು ನಾವು ಕಾಣಲಾರೆವು, ಯಾಕೆಂದರೆ ಅದು ಕಲ್ಪನಾ-ವಿಲಾಸದೇವತೆಯ ವಾಹನವಾಗಿರುತ್ತದೆ. ಅದರ ಪಕ್ಕ ಎಷ್ಟು ತೆಳ್ಳಗಾಗಿವೆ ಗೊತ್ತೇ? ಗಾಳಿಯನ್ನೇ ಹಿಡಿದು, ಅದನ್ನೆ ಮಸೆದು ತೆಳ್ಳಗೆ ಮಾಡಿ ಹಚ್ಚಿದಂತಿದೆ ಅದರ ಪಕ್ಕ! ಗಾಳಿಯನ್ನು ಹಿಡಿಯಬಹುದೇ? ಅದನ್ನು ಮಸೆಯಬಹುದೇ? ಅದರಿಂದ ಪಕ್ಕ ಮಾಡಬಹುದೇ? ಸಾಧ್ಯವಿಲ್ಲ. ಆದರೆ ಈ ಗಾರುಡಿಗೆ ಅದು ಸಾಧ್ಯವಿದೆ. ಹಾಗಾದರೆ ಕಣ್ಣಿಗೆ ಕಾಣುವಂತಹ ನಯವಾದ, ತೆಳುವಾದ ಪಾತರಗಿತ್ತಿಯ ಪಕ್ಕ ಹೇಗಿದೆ ಎಂಬುದನ್ನು ಇದೇ ಕವಿ ಹೇಗೆ ಬಣ್ಣಿಸಿದ್ದಾನೆಂದರೆ—

"ಗಾಳಿ ಕೆನಿಲೇನಃ
ಮಾಡಿದ್ದಾರ ತಾನ!"—

('ಗರಿ' ಬೇಂದ್ರೆ).

ಈ ಗಾಳಿಯನ್ನು ಕಾಸಿ ಹಾಲಿನ ಕೆನೆಯನ್ನು ತೆಗೆಯುವ ತೆರದಿ ತೆಗೆದರೆ ಎಷ್ಟು ತೆಳ್ಳಗೆ ಅದು ಕಾಣಬಹುದೋ ಅಷ್ಟು ತೆಳ್ಳಗಿದ್ದುವು, ಇವರ ಪಾತರಗಿತ್ತಿಯ ಪಕ್ಕಗಳು! ಇದರಿಂದ, ಈ ಕವಿ ಗಾಳಿಯನ್ನು ಹೇಗೆ ಮಸೆದು ಭೃಂಗದ ಪಕ್ಕಮಾಡಿದ ಎಂಬುದನ್ನು ಊಹಿಸಬಹುದಾಗಿದೆ. ಈ ಪಕ್ಕ ಸಹಜವಾದ ಒಂದು ಪ್ರಾಸವನ್ನು ಪಡೆಯುತ್ತಿತ್ತೆಂದು ಕವಿ ಹೇಳುತ್ತಾನೆ. ಈ ಜಾತಿಯ ಪ್ರತಿಮೆಗಳನ್ನು ಭಗ್ನಪ್ರತಿಮೆಗಳೆಂದು ತಿಳಿಯಬಾರದು.

ಕೆಲವು ಸಲ ಅಲಂಕಾರಿಕ ರೀತಿಯ ಪ್ರಯೋಗಗಳೂ ಕಾವ್ಯದಲ್ಲಿ ಸಾಕಷ್ಟಿರುತ್ತವೆ ಅವನ್ನು ತಪ್ಪಿ ಭಗ್ನಪ್ರತಿಮೆಗಳಲ್ಲಿ ಕೂಡಿಸುವ ಸಂಭವವಿರುತ್ತದೆ. ಇದಾಗದಂತೆ ಎಚ್ಚರಿಕೆ ವಹಿಸುವುದು ಅವಶ್ಯ.

ವೈಚಿತ್ರ್ಯದ ಮೂಲಕ (Fancy) ಭಗ್ನಪ್ರತಿಮೆಗಳು ಹುಟ್ಟುತ್ತವೆ. ಪ್ರತಿಮೆಗಳು ಸ್ವತಂತ್ರವಾಗಿ ಶುದ್ಧವಾಗಿರುವುದಿಲ್ಲ. ಕೆಲವು ಸ್ಥೂಲ ಅಂಶಗಳಿಂದ ಕೂಡಿರುವುದರಿಂದಲೇ ಅವು ಅಸ್ತಿತ್ವದಲ್ಲಿ ಬರುತ್ತವೆ. ಆ ಸ್ಥೂಲ ಅಂಗಗಳಾವುವು? ಭಾವನೆ, ಇಂದ್ರಿಯ ಗೋಚರತೆ, ಗದ್ಯ ಅರ್ಥ. ಪ್ರತಿಮೆಯ ಸಂಬಂಧವು ಇಂದ್ರಿಯಜನ್ಯ ವಿಷಯಗಳೊಡನೆ ಇರುವುದರಿಂದ, ಕವಿತೆಯು ಭಾವಪೂರ್ಣವಾದ ಎತ್ತರಕ್ಕೆ ಹೋಗಿ ಮುಟ್ಟುತ್ತದೆ. ಆದುದರಿಂದಲೇ ನಾವು ಒಂದು ಮನಸ್ಸಿನ ಅನುಭವವನ್ನು ಪಡೆಯುತ್ತೇವೆ. ಕವಿತೆಯ ಭಾವನಾಪೂರ್ಣ ಪ್ರಗತಿಯ ಹಿಂದೆ ಅದೃಶ್ಯವಾಗಿಯೂ ಕೂಡ ಅಖಂಡವಾದ ಒಂದು ಸೂತ್ರವು ಅನುಸರಿಸುತ್ತದೆ. ನಾವು ಒಂದು ಅರ್ಥವನ್ನು ಇದರ ಮೂಲಕ ಅನುಭವಿಸುತ್ತೇವೆ. ಈ ಸೂತ್ರದ ಬಹಳ ಹತ್ತಿರವೇ ಪ್ರತಿಮೆಗಳನ್ನು ಕಟ್ಟಿರುವುದರಿಂದ, ಅದು ಅದೃಶ್ಯವಾಗಿರುತ್ತದೆ. ಅದೃಶ್ಯ ಅಸ್ತಿತ್ವವುಳ್ಳ ಈ ಸೂತ್ರವು ಗದ್ಯವಾದ ಸರಣಿಯಲ್ಲಿ ಕಾಣುತ್ತದೆ. ಹೀಗಿರದಿದ್ದರೆ ಕವಿತೆಯ ಬೆಳವಣಿಗೆಯಲ್ಲಿ ವಿರೋಧ ಮತ್ತು ಸಮಾನತೆ ಇವುಗಳು ಕಾಣುತ್ತಿರಲಿಲ್ಲ. ವಿವೇಕದಿಂದ ವಿವರಿಸಬಲ್ಲ ಒಂದು ವಿಚಾರದೊಡನೆ ಎರಡು ಪ್ರತಿಮೆಗಳ ಸಂಬಂಧವಿರುವಾಗ, ಅವೆರಡೂ ಪರಸ್ಪರ ವಿರೋಧಿಯಾಗಿರಬಹುದು.

ವೈಯಕ್ತಿಕ ಅನುಭವಗಳ ಆಳವನ್ನು ಧ್ವನಿಸಲು ಪ್ರಯತ್ನ ಮಾಡುವಾಗ ಆಧುನಿಕ ಕಾವ್ಯವು, ವೈವಿಧ್ಯ ಹಾಗೂ ಮನುಷ್ಯತ್ವ ಇವುಗಳನ್ನು ಬಲಿ ಕೊಟ್ಟಿದೆ. ಹೆಚ್ಚು ಶುದ್ಧವಾದ ಕಾವ್ಯವೆಂದರೆ ಕವಿಯ ಗ್ರಹಣಶಕ್ತಿಯ ಪರಿಶೋಧನೆ. ಆದರೆ ಹೆಜಲಿಟ್‌ರವರು

ಹೇಳಿದಂತೆ ಅನುರಕ್ತಕಾವ್ಯವೆಂದರೆ (Impassioned) ನಮ್ಮ ಸ್ವಭಾವದ ನೈತಿಕ, ಬೌದ್ಧಿಕ ಹಾಗೂ ಶೀಘ್ರವೇಧಿ ಭಾಗಗಳ ಉತ್ಪತ್ತಿ. ಎಂದರೆ, ಅರಿತುಕೊಳ್ಳುವ ಇಚ್ಛೆ, ಕೆಲಸ ಮಾಡುವ ಸಂಕಲ್ಪ, ಮತ್ತು ಅನುಭವಿಸುವ ಶಕ್ತಿ ಇವುಗಳ ಉತ್ಪತ್ತಿ! ಇದು ಪರಿಪೂರ್ಣವಾಗಲು, ನಮ್ಮ ಶರೀರಸ್ವಭಾವದ ಬೇರೆ ಬೇರೆ ಭಾಗಗಳಿಗೆ ಮುಟ್ಟಬೇಕು."

ವಿವೇಕದ ಶೋಧನೆಗಳನ್ನು ಹಾಗೂ ನೈತಿಕ ಜ್ಞಾನದ ತೀವ್ರತೆಗಳನ್ನು ಬೇರ್ಪಡಿಸುವ ಕಾವ್ಯವು ಅನುರಕ್ತವಾಗುವುದಿಲ್ಲ. ಇಂಥ ಕಾವ್ಯವು ಹೆಚ್ಚು ವೈವಿಧ್ಯವನ್ನು ಪಡೆಯುವುದಿಲ್ಲ. ಅಲ್ಲದೆ ಹೆಚ್ಚು ಮಾನವೀಯವಿರುವುದಿಲ್ಲ ಕಲ್ಪಕತೆಯ ಶಿಖರದ ಮೇಲಿನಿಂದ ಬಂದ ಕವಿಯ ಕೃತಿಯಾಗುವುದಿಲ್ಲ ಇಂಥ ಕಾವ್ಯದಲ್ಲಿಯ ಪ್ರತಿಮೆಗಳು ಕೃತ್ರಿಮವೆಂದೆನಿಸುತ್ತವೆ. ನಮ್ಮ ಸ್ವಭಾವದ ಬೌದ್ಧಿಕವಿಷಯಗಳ ಉತ್ಪತ್ತಿಯಂತಿರುವ ಕಾವ್ಯಮಯ ವಾದಸರಣಿಯು ಕವಿತೆಯಲ್ಲಿ ಇರದಿದ್ದರೆ, ಅದರಲ್ಲಿಯ ಪ್ರತಿಮೆಗಳು ಅಸಂಗತವಾಗಿದ್ದು ಭಗ್ನವಾಗಿರುತ್ತವೆ. ಅದಲ್ಲದೆ ಅವುಗಳಲ್ಲಿಯ ಸಂಬಂಧವು ಸ್ಫುಟವಾಗಿ ನಮಗೆ ತಿಳಿಯುವುದಿಲ್ಲ. ಕವಿತೆಯು ಅನುರಕ್ತವಾಗಿದ್ದರೆ ಪ್ರತಿಮಾಸೃಷ್ಟಿಯಲ್ಲಿದ್ದ ಭಾವಪೂರ್ಣ ಹಾಗೂ ಇಂದ್ರಿಯಜನ್ಯ ಸ್ಥೂಲಅಂಶಗಳು ಸೋಸಿಹೋಗಿ, ಕೇವಲ ಶುದ್ಧ ಪ್ರತಿಮೆಗಳು ಉಳಿಯುವುವು. ಇಂಥ ಕವಿತೆಯು ನಮಗೆ ಮಾನವ ಇಂದ್ರಿಯಗಳು ಅನುಭವಿಸದಂತಹ ಬಹಳೇ ಉದಾಸೀನ ಅಥವಾ ಅತಿ ಪ್ರಸನ್ನ ಅನುಭವ ನೀಡಬಹುದು. ಇದರಲ್ಲಿ ಶುದ್ಧವಾದ ಚಿಚ್ಛಕ್ತಿಯಿಂದ ಹೊರಬಿದ್ದಿರುವ ಪ್ರತಿಮೆಗಳನ್ನು ಏಕೀಕರಿಸಲು ಮತ್ತು ನಿಯಂತ್ರಿಸಲು ಒಟ್ಟೈಸುವ ಶಕ್ತಿ ಅಂದರೆ ಭಾವನೆಯ ತೀಕ್ಷ್ಣತೆ ಇರುವುದಿಲ್ಲ. ಈ ಭಾವನೆಯ ತೀಕ್ಷ್ಣತೆಯೊಂದೇ ಕಾವ್ಯಾತ್ಮಕ ವಿವೇಕದ ಸಾಧನವನ್ನಲಂಕರಿಸಬಹುದಾಗಿತ್ತು. ಭಾವನೆಯು ಪ್ರಮಾಣಬದ್ಧ ಹಿನ್ನೆಲೆಯನ್ನು ಕಳೆದುಕೊಂಡು ಈ ಪ್ರತಿಮೆಗಳು ಅನಿಯಂತ್ರಿತ ಹಾಗೂ ವಿಕಟಾಕೃತಿಯವಾಗಬಹುದು.

ಕೊನೆಯದಾಗಿ, ಪ್ರತಿಮೆಗಳಲ್ಲಿಯೇ ತನ್ನ ಅರ್ಥವನ್ನು ಕೇಂದ್ರೀಕರಿಸುವ ಕಾವ್ಯವನ್ನು ಎರಡು ಸಮಸ್ಯೆಗಳು ಎದುರಿಸಿವೆಯೆಂದು ಹೇಳಬಹುದು. ಈ ಸಮಸ್ಯೆಗಳು ಎರಡೆರಡು ಕಂಡರೂ, ನಿಜವಾಗಿ ನೋಡಿದರೆ ಒಂದೇ ಆಗಿವೆ. ಪ್ರತಿಮೆಗಳು ತಮ್ಮ ಸಂದರ್ಭಕ್ಕೆ ಬಹಳೇ ಶಕ್ತಿಯುತವಾಗಿ, ಸಂದರ್ಭವನ್ನೇ ಛಿನ್ನವಿಚ್ಛಿನ್ನವಾಗಿ ಮಾಡಬಹುದು. ಅಥವಾ ಮಾನವೀಯ ಸಂಬಂಧದಿಂದ ಬಹಳೇ ಶುದ್ಧೀಕೃತವಾಗಿ, ನಮ್ಮ ಭೌತಿಕಕಲ್ಪಕತೆಗೆ ನಿಲುಕುವುದೇ ಇಲ್ಲ. ಎರಡರಲ್ಲಿಯೂ ಒಂದೇ ಪರಿಣಾಮವಿದೆ. ಇದರ ಪರಿಣಾಮವಾಗಿ ವಿವರಣೆಯಲ್ಲಿ ಪ್ರಕಾಶಮಾನವಾಗಿದ್ದರೂ ಅದರ ಕ್ಷಣಿಕ ಸಹಜಜ್ಞಾನವು ಆಳವಾಗಿ ಭೇದಿಸುತ್ತಿದ್ದರೂ ಕೂಡ ತನ್ನ ಕ್ಷೇತ್ರದಲ್ಲಿ ಅಸಮಾಧಾನಕಾರಕವಾದ ಕವಿತೆ ಹುಟ್ಟುತ್ತದೆ. ಅದು ಒಂದು ಅಪೂರ್ಣ ಕವಿತೆ! ಭಗ್ನಪ್ರತಿಮೆಗಳ ರಾಶಿ!!

ಸುದರ್ಶನ

'ಆನಂದಕಂದ'ರ ಸಾಮಾಜಿಕ ಕಾದಂಬರಿಯ ೪ನೆಯ ಆವೃತ್ತಿ ಮುದ್ರಿತವಾಗಿ ಹೊರಗೆ ಬಂದಿದೆ.

ಪುಟ ಸಂಖ್ಯೆ ೧೫೦. ಬೆಲೆ ೧-೮-೦.

ಓದಲು ಕೈಯಲ್ಲಿ ತೆಗೆದುಕೊಂಡವರಿಗೆ, ಮುಗಿಸದೆ ಇದನ್ನು ಕೆಳಗಿಡಲಿಕ್ಕೆ ಮನಸ್ಸು ಒಪ್ಪಲಾರದು.

* * * *

ಈ ಕಾದಂಬರಿಯನ್ನು ನೂರು ನೂರು ಸಲ ಓದಿಯೂ ಇನ್ನೂ ಓದಬೇಕೆನ್ನುವ ರಸಿಕರು ಹಲವು ಜನರು.

ಬೇಕಾದವರು ಕೂಡಲೆ ಪತ್ರ ಬರೆಯಿರಿ!

'ಜಯಂತಿ' ಕಾರ್ಯಾಲಯ, ಧಾರವಾಡ

ಭೂಲೋಕದ ಚಿತ್ರಗುಪ್ತ "ಕಾರಕೂನ"

(ಲಘುಪ್ರಬಂಧ)

ಶ್ರೀ. ಸಂಜೀವ ಲಕ್ಷ್ಮೀಶ್ವರ ಬಿ. ಎ ಮುಂಬೈ

卐

ಕಾರಕೂನರ ಜೀವನ, ಗಾಣದೆತ್ತಿನ ಜೀವನ, ಒಂದೆ ಬಗೆಯವು. ಗಾಣಿಗ ತನ್ನ ಎತ್ತಿನ ಹೊರಗಣ್ಣು ಬಿಗಿದು ಕಟ್ಟಿರುತ್ತಾನೆ; ಸರಕಾರ ತನ್ನ ಕಾರಕೂನರ ಒಳಗಣ್ಣುಗಳನ್ನು ಬಿಗಿದು ಕಟ್ಟಿರುತ್ತದೆ.

卐

ಕಾರಕೂನ ಎಂದೊಡನೆ ಪ್ರತಿಯೊಬ್ಬರಿಗೆ—ಕೊಳಕು ಬಟ್ಟೆ ಧರಿಸಿದ, ಗಡ್ಡದಿಂದ ತುಂಬಿದ ಹಾಗು ಸುಖ-ಸಂತೋಷಗಳು ಕೇವಲ ಭ್ರಾಂತಿ ಎಂಬ ಭಾವನೆಯಿಂದ ಕೂಡಿದ ಮುಖವುಳ್ಳ ವ್ಯಕ್ತಿಯ ಕಲ್ಪನೆ ಬರಲು ಸಾಕು. ಇಂದು ಕಾಲ ಬದಲಾದಂತೆ ಕಾರಕೂನನ ಇರುವಿಕೆಯಲ್ಲಿಯೂ ಕೆಲವು ಬದಲಾವಣೆಗಳಾಗಿವೆ. ಅಂದು ಕೊಳಕು ಧೋತರದ ವ್ಯಕ್ತಿಯಾಗಿದ್ದರೆ, ಇಂದು ಪ್ಯಾಂಟು-ಬೂಟುಗಳನ್ನು ಧರಿಸುವ ವ್ಯಕ್ತಿಗಳಾಗಿದ್ದಾರೆ ಇಷ್ಟೆ! ಆದರೆ ಅವರ ವೃತ್ತಿ, ಅನುಭವಿಸುವ ಸ್ಥಾನ-ಮಾನಗಳಲ್ಲಿ ಯಾವುದೇ ಸ್ಥಿತ್ಯಂತರವೂ ಆಗಿಲ್ಲ.

ಕಾರಕೂನ ಎಂದೊಡನೆ ಪ್ರಾಥಮಿಕಶಾಲೆಯ ಶಿಕ್ಷಕನಂತೆ ಸಮಾಜದ ಒಬ್ಬ ನಿರುಪದ್ರವ ಜೀವಿ—ಎಂಬ ಭಾವನೆ ಬೇರೂರಿದೆ. ಕಾರಕೂನ ಹಾಗು ಪ್ರಾಥಮಿಕಶಾಲೆಯ ಶಿಕ್ಷಕ ಇವರಿಬ್ಬರ ಸ್ಥಾನ-ಮಾನಗಳು ಒಂದೇ ಮಟ್ಟದಲ್ಲಿವೆ, ಅರ್ಥಾತ್ ಇಬ್ಬರಿಗೂ ಯಾವುದೇ ವಿಶಿಷ್ಟ ಸ್ಥಾನವಿಲ್ಲ. ಅದರಂತೆಯೇ ಇವರಿಬ್ಬರ ಅಸ್ತಿತ್ವವು ಸಮಾಜಕ್ಕೆ ಅಷ್ಟೇ ಅವಶ್ಯವಾದುದು—ಎಂಬುದು ನಿರ್ವಿವಾದ.

ಮಹಿಷಾಸುರನಿಗೆ, ಭೂಮಿಯ ಮೇಲೆ ಬೀಳುವ ಅವನ ಪ್ರತಿಯೊಂದು ರಕ್ತದ ಹನಿಗೂ ಒಬ್ಬೊಬ್ಬ ರಾಕ್ಷಸ ಹುಟ್ಟಲಿ ಎಂದು ವರವು ಇತ್ತೆಂದು ಪುರಾಣದಲ್ಲಿ ಕೇಳುತ್ತೇವೆ. ಅದರಂತೆಯೇ ಕಲಿಯುಗದಲ್ಲಿ 'ಕಾರಕೂನರ ಮಕ್ಕಳೂ ಕಾರಕೂನರೇ ಆಗಲಿ' ಎಂಬ ವರವೋ ಶಾಪವೋ ಇರಬಹುದೋ ಏನೋ! ಇಂದು ಕಾರಕೂನರ ಸಂಖ್ಯೆ ದಿನದಿನಕ್ಕೆ ಬೆಳೆದು, ಅವರು ಸರ್ವವ್ಯಾಪಿಗಳಾಗಿದ್ದಾರೆ.

ಯಾವುದೇ ಕಾರಕೂನನನ್ನು ನೋಡಿರಿ; ಅವನ ಪ್ರಪಂಚವೇ ವಿಶಿಷ್ಟವಾದದ್ದು. ತನ್ನ ಕಚೇರಿ, ತನ್ನ ಕೆಲಸ ಮಾಡುವ ಕಾರ್ಯದಕ್ಷತೆ (Efficiency), ತನ್ನ ಸಂಬಳದ ಸ್ಕೇಲು (Scale), ತನ್ನ ಮುಂಬರುವ ಬಢತಿ (Promotions), ತನ್ನ ಸಾಹೇಬರು—ಇವಿಷ್ಟನ್ನು ಬಿಟ್ಟು, ಉಳಿದದ್ದೆಲ್ಲ ಅವನ ಪಾಲಿಗೆ ಶೂನ್ಯ. ತನ್ನ ಕೆಲಸದಲ್ಲಿ (ಅರ್ಥಾತ್ ಕರಡು ಗೀಚುವುದರಲ್ಲಿ) ಅವನಿಗೆಷ್ಟು ವಿಶ್ವಾಸ ಹಾಗು ಅಭಿಮಾನವೆಂದರೆ, ತನ್ನಿಂದಲೇ ಜಗತ್ತು ನಡೆದಿದೆಯೇನೋ ಎನ್ನುವ ತನಕ ಅವನ ತಿಳಿವಳಿಕೆ. ಇಬ್ಬರು ಕಾರಕೂನರು ಭೆಟ್ಟಿ ಆದರಂತೂ ತೀರಿಯೇ ಹೋಯಿತು; ಒಬ್ಬನು ತಾನು ಮಾಡಿದ ಕಾರಕೂನಿಕೆಯ ಮಹತ್ಕಾರ್ಯಗಳನ್ನು (?) ಹೇಳಿದರೆ, ಮತ್ತೊಬ್ಬನೇನು ಕಡಿಮೆಯವನೇ? ಅವನೂ ತನ್ನ ಪುರಾಣಬಿಚ್ಚುವನು. ಹೀಗೆಯೆ ಇಬ್ಬರು ಕಾರಕೂನರು ಭೆಟ್ಟಿ ಆಗಿ ತಮ್ಮ ತಮ್ಮ ಪ್ರವಚನದಲ್ಲಿ ತೊಡಗಿದಾಗ, ಅಲ್ಲಿ ಯಾರಾದರೂ ಮೂರನೆಯವರು (ಕಾರಕೂನರಲ್ಲದವರು) ಇದ್ದರೆ, ಅವರ ಅಸ್ತಿತ್ವವನ್ನು ಈ ಕಾರಕೂನದ್ವಯರು ಲೆಕ್ಕಿಸದೆ, ತಮ್ಮ ತಮ್ಮ ಆತ್ಮಸ್ತುತಿಗಳಲ್ಲಿ ನಿರಂತರವಾಗಿ ತೊಡಗಿರುವರು ಇಂತಹ ಪರಿಸ್ಥಿತಿಯಲ್ಲಿ ಮೂರನೆಯವರ ಪರಿಸ್ಥಿತಿಯ ವಿಚಾರ ಹೇಳತೀರದು. ಅವನ ಮೇಲೆ ಇಬ್ಬರೂ ಕಾರಕೂನರು ತಮ್ಮ ತಮ್ಮ ಜೀವನರಸಾನುಭವದ (?) ಮಳೆಯನ್ನೇ ಸುರಿಸುವರು. ಆಗ ಮೂರನೆಯವನು "ದೇವರೆ, ಹೇಗಾದರೂ ಮಾಡಿ ಇವರಿಂದ ನನ್ನನ್ನು ಪಾರುಮಾಡು" ಎಂದು ಮನಸ್ಸಿನಲ್ಲಿಯೇ ಪ್ರಾರ್ಥಿಸಿದರೆ ಆಶ್ಚರ್ಯವೇನೂ ಅಲ್ಲ.

ಕೆಲವು ಜನರಿಗಂತೂ ಕಾರಕೂನಿಕೆಯಲ್ಲಿಯೇ ತಮ್ಮ ಸರ್ವಸ್ವವಿದೆ—ಎಂದು ತಿಳಿದು, ಅದರ ಆರಾಧನೆಯೇ ತಮ್ಮ ಜೀವನದ ಪರಿಪೂರ್ಣತೆ ಎಂದು ತಿಳಿದವರಿದ್ದಾರೆ. ಕೆಲವರ ವಿಶ್ವಾಸ ಇಷ್ಟಕ್ಕೆ ನಿಲ್ಲದೆ ತಮ್ಮ ಅಡ್ಡ ಹೆಸರನ್ನು ಕೂಡ "ಕಾರಕೂನ" ಎಂದು ಬದಲಿಸಿದವರಿದ್ದಾರೆ ಈ ಅಂಟುರೋಗ ಭಾರತೀಯರಲ್ಲಷ್ಟೇ ಅಲ್ಲ, ಆಂಗ್ಲರಲ್ಲಿಯೂ ಕೂಡ ಇದ್ದದ್ದು ಕಂಡುಬರುವುದು. ಆಂಗ್ಲರಲ್ಲಿ ಕೂಡ ಎಷ್ಟೋ ಜನರ ಹೆಸರು Mr. Clerk ಎಂದು ಇರುವುದು ಕಂಡುಬರುವುದು.

ಕಾರಕೂನಿಕೆಯಲ್ಲಿಯೂ ನಾನಾತರದ ಸ್ಥಾನ-ಮಾನಗಳಿವೆ. ಕಿರಿಯ ಕಾರಕೂನ (Junior clerk), ಹಿರಿಯ ಕಾರಕೂನ (Senior clerk) ಮುಖ್ಯ ಕಾರಕೂನ (Head clerk)

ಮುಂತಾದುವುಗಳು ಪ್ರಮುಖವಾದುವುಗಳು. ಯಾವುದೇ ಕಾರಕೂನ ಮುಖ್ಯ ಕಾರಕೂನನಾದನೆಂದರೆ, ಅವನಿಗೆ ಇಂದ್ರಪದವಿ ದೊರೆತಂತೆ ಎನಿಸುವುದು. ಅವನ ಹಿರಿಮೆಯನ್ನು ಹೇಳತೀರದು. ಇಷ್ಟೇ ಅಲ್ಲ, ಮನೆಯಲ್ಲಿ ಅವನ ಹೆಂಡತಿಗೂ ಪ್ರತಿಷ್ಠೆಯ ರೆಕ್ಕೆ ಮೂಡುವುವು. ತನ್ನ ಕೈಕೆಳಗಿನ ಎಲ್ಲ ಕಾರಕೂನರೂ ತನಗೆ ಆಜ್ಞಾಧಾರಕರಾಗಿ (Most obedient) ನಡೆಯಬೇಕು—ಎಂದು ಅವನ ಇಚ್ಛೆ. ತಾನು ಹೇಗೆ ತನ್ನ ಮುಖ್ಯ ಕಾರಕೂನನಿಗೆ ಬಾಗಿ ನಡೆದಿದ್ದನೋ ಅದರಂತೆಯೇ ತನ್ನ ಕೆಳಗಿನ ಕಾರಕೂನರು ತನ್ನೊಂದಿಗೆ ನಡೆಯಬೇಕು—ಎಂಬುದೇ ಅವನ ಜೀವನದ ಹಿರಿಯಾಸೆ.

"ಏಕ ದಿನಕಾ ಸುಲ್ತಾನ್" ಎಂಬಂತೆ, ಹಿರಿಯ ಕಾರಕೂನ ಬಾರದಿದ್ದ ಒಂದೆರಡು ದಿನ, ಅವನ ಜಾಗೆಯನ್ನು ಅಲಂಕರಿಸಿ ಅಧಿಕಾರ ನಡೆಸಿ ತೃಪ್ತಿಪಡೆದ ಕಾರಕೂನರೂ ಅನೇಕರಿದ್ದಾರೆ.

ಕಾರಕೂನನೂ ಒಬ್ಬ ಭಾವನಾಜೀವಿ. ಇಂದಿಲ್ಲ ನಾಳೆಯಾದರೂ ತನ್ನ ಕರಡುಗೀಚುವ ಈ ಕಾರಕೂನಿಕೆಗೆ ಆಫೀಸರ್ ಪದವಿಯ ಪ್ರತಿಫಲ ದೊರೆತೀತೆಂಬ ನಿರೀಕ್ಷೆಯಿಂದ, ತನ್ನ ಜೀವಮಾನವೆಲ್ಲ ಕರಡು ಗೀಚಿಗೀಚಿ ಕೈ ನೋಯಿಸಿಕೊಂಡವರೇ ಬಹುಜನ. ಅವರ ಈ ಅವಿರತ ಗೀಚುವಿಕೆಗೆ ದೊರೆಯಬಹುದಾದ ಹೆಚ್ಚಿನ ಸಂಭಾವನೆ-ಯೆಂದರೆ ಹಿರಿಯ ಕಾರಕೂನಿಕೆ; ಅದರಲ್ಲಿಯೇ ತೃಪ್ತಿಪಟ್ಟು ಜೀವನ ನೀಗಿಸಿ ಕಣ್ಣು ಮುಚ್ಚಿದವರು ಕಡಿಮೆ ಸಂಖ್ಯೆಯಲ್ಲಿಲ್ಲ. ಆದ್ದರಿಂದಲೇ ಕಾರಕೂನರು ಪ್ರಾಥಮಿಕ ಶಾಲೆಯ ಶಿಕ್ಷಕರಂತೆ ಅಲ್ಪ ತೃಪ್ತಿಯುವರು. ಆಫೀಸರ್ ಪದವಿಯ ಕನಸು ಕಂಡು ನಿರಾಶೆಹೊಂದಿದ ಹಗಲುಗನಸಿಗ ಕಾರಕೂನರೂ ಅನೇಕರಿದ್ದಾರೆ.

ನನ್ನೊಬ್ಬ ಕಾರಕೂನ ಮಿತ್ರ, ತಾನು ಇಂದಿಲ್ಲ ಒಂದು ದಿನ ಅಧಿಕಾರಿಯಾಗಿ ಮೆರೆಯುವೆನೆಂದು ದಿನವೆಲ್ಲ ತನ್ನ ಮಿತ್ರಮಂಡಳಿಯ ಮುಂದೆ ಬಡಬಡಿಸಿ, ರಾತ್ರಿ ನಿದ್ದೆ ಹೋದಾಗ ತಾನು ಅಧಿಕಾರಿ-ಯಾದಂತೆ ಕನಸು ಕಂಡ. ರಾತ್ರಿ ಮನೆಯಲ್ಲಿ ಓಡಾಡಿದ ಇಲಿ ಹೆಗ್ಗಣಗಳ ಸಪ್ಪಳವು, ತನ್ನ ಕೈಕೆಳಗಿನ ಕಾರಕೂನರು ಕೆಲಸ ಮಾಡದೆ ಹರಟುತ್ತ ಕುಳಿತ ಸಪ್ಪಳವೆಂದು ತಿಳಿದು, ಅದನ್ನು ತಡೆಯಲು ತನ್ನ ಮುಂದಿದ್ದ ಟೇಬಲ್ಲನ್ನು ಜೋರಿನಿಂದ ಗುದ್ದಿದ. ಆದರೆ ಅಷ್ಟು ಕಸುವಿನಿಂದ ಗುದ್ದಿದ್ದು ಟೇಬಲ್ಲಾಗಿರದೇ, ತನ್ನ ಒಡೆದು ರಕ್ತ ಸೋರುತ್ತಿರುವ ಮೂಗೆಂದು ಅನಂತರ ತಿಳಿದು ಪಟ್ಟ ಪಶ್ಚಾತ್ತಾಪ ಅಷ್ಟಿಷ್ಟಲ್ಲ. ಅವನ ಹೆಂಡತಿಯಿಂದ ಈ ವಿಷಯ ಕೇಳಿದ ನಂತರ ನಾವೆಲ್ಲರೂ ಅವನಿಗೆ "ನೈಟ್ ಆಫೀಸರ್" ಎಂದು ಗೇಲಿ ಮಾಡಿದ್ದುಂಟು.

ನನ್ನ ಮಿತ್ರನ ಈ ಕನಸಿನ ವಿಷಯ ಕೇಳಿ, "ಸರಕಾರೀ ನೌಕರರು, ದಿನದ ೨೪ ತಾಸೂ ಸರಕಾರದ ನೌಕರರು" (Goverment servants for all the twenty-four hours) ಎಂಬ ಸರಕಾರದ ಹೇಳಿಕೆಯಲ್ಲಿ ಬಹಳೇ ತಥ್ಯವಿದೆ—ಎಂದು ಕಂಡುಬಂದಿತು.

ಸುದಾಮ ಚರಿತಂ

ಶ್ರೀ. ಸಾಲಿ ರಾಮಚಂದ್ರರಾಯ ವಿರಚಿತಂ

ಸಂಸ್ಕೃತ ನೂತನಕಾವ್ಯ — ಕ್ರಯ ೧ ರೂಪಾಯಿ

"ತುಂಬ ಆಶ್ಚರ್ಯವಾಯಿತು ಮನಮೆಚ್ಚಿದೆ. ಬಹಳ ಚನ್ನಾಗಿದೆ. ಬಹಳ ಚಲೋದಾಗಿದೆ ತುಂಬ ಸರಲವೂ ಸರಸವೂ ಆಗಿದೆ, ಸಂಸ್ಕೃತ ಕಾವ್ಯಸಾಹಿತ್ಯದ ಉದ್ದಾಮ ಕವಿಗಳನ್ನು ಪದೇ ಪದೇ ನೆನವರಿಸುತ್ತಲೂ ಇದೆ. ಹಳಗಾಲದ ಸಂಸ್ಕೃತ ಸಾಹಿತ್ಯ ವನದಿಂದ ಎತ್ತಿಕೊಂಡು ಇಂದಿನ ಸಾಹಿತ್ಯವನದಲ್ಲಿ ಕಸಿ ಮಾಡಿದ ಬಳ್ಳಿಯ ಹಣ್ಣಿನಂತಿದೆ. ಕಸಿಯ ಹಣ್ಣು ರೂಪದಲ್ಲೂ ರುಚಿಯಲ್ಲೂ ತಾಯಿ ಹಣ್ಣನ್ನು ಬಿಟ್ಟಿರಲಾರದಷ್ಟೆ"

ರಾಷ್ಟ್ರಕವಿ — ಶ್ರೀ. ಎಂ. ಗೋವಿಂದ ಪೈ

ಪ್ರತಿಗಳು

ಅಕಳವಾಡಿ ಬುಕ್‌ಡಿಪೋ, ವಿಜಯರೋಡ

ಧಾರವಾಡ

ಸಂಸ್ಕೃತಿ ಪ್ರಕಾಶನ ಮಾಳಮಡ್ಡಿ ಧಾರವಾಡ

ಕನಸಿನಲ್ಲಿ ಕೂಡ ಅಪ್ಪಿ ತಪ್ಪಿ ಅಧಿಕಾರಿಗಳಾಗಿ ಮೆರೆದೀರಿ—ಎಂಬ ಎಚ್ಚರಿಕೆ ಕೊಡುವುದೇ ಈ ಹೇಳಿಕೆಯ ಉದ್ದೇಶವಿರಬಹುದು. ಹೀಗಿದೆ ಕಾರಕೂನನ ಜೀವನ.

ಜಗತ್ತಿನಲ್ಲಿಯ ಪ್ರತಿಯೊಬ್ಬ ಮಾನವನ ಪಾಪ-ಪುಣ್ಯಗಳ ಲೆಕ್ಕವಿಡಲು ಪರಲೋಕದಲ್ಲಿ "ಚಿತ್ರಗುಪ್ತ"ರು ಇರುವರೆಂದು ನಾವು ಪುರಾಣಗಳಲ್ಲಿ ಕೇಳುತ್ತೇವೆ. ಭೂಲೋಕದಲ್ಲಿ ದಿನಂಪ್ರತಿ ನಡೆಯುವ ಆಯವ್ಯಯಗಳ ಲೆಕ್ಕಪತ್ರಗಳಿಡುವ ಕಾರಕೂನರು ಭೂಲೋಕದ ಚಿತ್ರಗುಪ್ತರೆಂದೆನ್ನಲು ಅಡ್ಡಿ ಇಲ್ಲ. ಪರಲೋಕದ ಚಿತ್ರಗುಪ್ತರಿಗೆ ನಮ್ಮಲ್ಲಿ ಬಹಳೇ ಮನ್ನಣೆ ಇದೆ. ಊಟ ಪ್ರಾರಂಭಿಸುವ ಮುನ್ನ ಅವರಿಗೆ ಅನ್ನಸಂತರ್ಪಣೆ ಮಾಡಿಯೇ ನಾವು ಊಟಮಾಡುವೆವು; ಆದರೆ ಭೂಲೋಕದ ಚಿತ್ರಗುಪ್ತರಾದ ಕಾರಕೂನರಲ್ಲಿ ಎರಡು ಹೊತ್ತು ಊಟಕ್ಕೂ ಗತಿ ಇಲ್ಲದವರಿದ್ದಾರೆ.

ನಮ್ಮಲ್ಲಿ ಇನ್ನೂ Dignity of labourದ ಭಾವನೆ ಜನತೆಯಲ್ಲಿ ಬೇರೂರಿಲ್ಲವಾದ್ದರಿಂದ "ಕಾರಕೂನ" ಎಂದೊಡನೆ ಒಂದು ತರದ ಕೀಳುಭಾವನೆ, ಅವನ ಬಗ್ಗೆ ಅಲ್ಪತೆ ಕಂಡುಬರುವುದು. ಆದರೆ 'ಅವನೂ ಒಬ್ಬ ಸಮಾಜದ ಆಧಾರಿ, ಅವನ ಕೆಲಸಕ್ಕೂ ಬೆಲೆ ಇದೆ' ಎಂಬ ಭಾವನೆ ಬಂದ ಹೊರತು ಕಾರಕೂನನ ಸ್ಥಿತಿ-ಗತಿಗಳಲ್ಲಿ ಬದಲಾವಣೆಗಳಾಗಲಾರವು.

ಸಾದರ ಸ್ವೀಕಾರ

೪೯ GANAMANDIRA ಬೆಂಗಳೂರಿನ ಸಂಗೀತ ಸಂಸ್ಥೆಯೊಂದರ ೧೫ನೆಯ ವರ್ಷದ ವರದಿ)

ಬೆಂಗಳೂರಿನ ಸಂಗೀತ ವಿದುಷಿಯರಾದ ಶ್ರೀಮತಿ ಜಿ. ಚೆನ್ನಮ್ಮನವರ ತ್ಯಾಗ ಸೇವೆಗಳ ಫಲವಾಗಿಯೆ ಈ ಸಂಸ್ಥೆ ನಡೆದಿರುವಂತೆ ವರದಿಯಿಂದ ವ್ಯಕ್ತವಾಗುತ್ತಿದೆ. ಇಂತಹ ಸಂಸ್ಥೆ ಜನತೆಗೆ ಅಗತ್ಯವೆಂಬುದನ್ನು ಅರಿತು, ನಮ್ಮ ಜನರೂ ಸರಕಾರವೂ ಸಹಕರಿಸಬೇಕು

೫೦ **ಕೆಣಕೋಣು ಬಾರ** (ಸಚಿತ್ರ ಅಣಕವಾಡುಗಳ ಸಂಕಲನ). ಬರೆದವರು ' ರಾ. ಶಿ. ' ಅವರು. ಪ್ರಕಾಶಕರು 'ಕೊರವಂಜಿ' ಕಾರ್ಯಾಲಯ, ಬಳೇಪೇಟೆ—ಬೆಂಗಳೂರು. ಕ್ರೌ. ಅ. ೧೬ + ೧೮ ಪುಟಗಳು. ಬೆಲೆ ಸಾಮಾನ್ಯಪ್ರತಿಗೆ ೨-೦-೦, ಉತ್ತಮ ಪ್ರತಿಗೆ ೫-೦-೦.

೫೧ **ಸ್ವಾತಂತ್ರ್ಯಯುದ್ಧ–೧೮೫೭** (ಪರಿಚಯಾತ್ಮಕ ಗ್ರಂಥ). ಮುಖ್ಯ ಸಂಪಾದಕರು ಶ್ರೀಮಾನ್ ರಂಗನಾಥ ದಿವಾಕರ ಅವರು. ಸಾಹಾಯ್ಯಕ ಸಂಪಾದಕರು ಶ್ರೀ. ಶಿವಾಜಿ ನಾಡಗೀರ ಅವರು. ಪ್ರಕಾಶಕರು ಲೋಕಶಿಕ್ಷಣ ಟ್ರಸ್ಟ್, ಹುಬ್ಬಳ್ಳಿ. ಕ್ರೌ. ಅ. ೨೫೨ ಪುಟಗಳು. ಬೆಲೆ ೨-೦-೦.

೫೨ **ನಮ್ಮ ದೇವರು** (೬ ಕಥೆಗಳು). ಬೇರೆ ಬೇರೆ ಮೂವರು ತರುಣ ಕಥೆಗಾರರು ಬರೆದ ಎರಡೆರಡು ಕಥೆಗಳನ್ನು, ಶ್ರೀ ರಾಜಾರಾಮ ಮಜಲೀಕರ, ಗೋಕಾಕ ಅವರು ಸಂಗ್ರಹಿಸಿದ್ದಾರೆ. ಪ್ರಕಾಶಕರು ಸಾಹಿತ್ಯಸೇವಾನಿಲಯ, ಗೋಕಾಕ, ಜಿಲ್ಲಾ ಬೆಳಗಾಂವಿ. ಕ್ರೌ. ಅ. ೮೪ ಪುಟಗಳು. ಬೆಲೆ ೧-೦-೦.

೫೩ KITTUR CHENNAMMA RANI (ಇಂಗ್ಲಿಷ್ ಭಾಷೆಯಲ್ಲಿ ಜೀವನಚರಿತ್ರೆ). ಲೇಖಕರು ಶ್ರೀಮಾನ್ ಶ್ರೀಧರ ತೇಲಕರ ಅವರು. ಪ್ರಕಾಶಕರು : ಕಿತ್ತೂರ ಚೆನ್ನಮ್ಮರಾಣಿ ಇತಿಹಾಸ ಮಂಡಲ, ಬೈಲಹೊಂಗಲ. ಕ್ರೌ. ಅ. ೫೪ ಪುಟಗಳು. ಬೆಲೆ ೧-೦-೦.

೫೪ **ದೀಪಹಚ್ಚಿತು** (ಸಾಮಾಜಿಕ ಕಾದಂಬರಿಯ ' ಕಿಡಿಹಾರಿತು ' ಎಂಬ ಹೆಸರಿನ ಪ್ರಥಮಸಂಪುಟ). ಬರೆದವರು ಶ್ರೀಮಾನ್ ಕೊಟ್ಟಲಗಿ ರಾಮಚಂದ್ರ, ಧಾರವಾಡ. ಮನೋಹರ ಗ್ರಂಥಮಾಲೆಯ ೧೩೬–೧೩೭ನೆಯ ಪುಷ್ಪ; ಕ್ರೌ ಅ ೩೦೦ ಪುಟಗಳು ಬೆಲೆ ೩ ರೂ ೨" ನ ಪೈ

೫೫ **ಮುನಿತ್ರಯರು** (ಮಾಧ್ವ ಸಂಪ್ರದಾಯದ ಸುಪ್ರಸಿದ್ಧ ಸ್ವಾಮಿಗಳವರ ಸಂಕ್ಷಿಪ್ತ ಪರಿಚಯ). ಬರೆದವರು ಶ್ರೀಮಾನ್ ಜಯರಾಮ ಸದರ ಜೋಶಿ, ' ಹಿಂದೀ ವಿದ್ವಾನ್ ' ಗಂಗಾವತಿ. ಪ್ರಕಾಶಕರು ಶ್ರೀಮಾನ್ ಹನುಮಂತಾಚಾರ್ಯ ಸದರ ಜೋಶಿ, ಕಾರ್ಯದರ್ಶಿ ಶ್ರೀ ರಾಘವೇಂದ್ರ ಸ್ವಾಮಿಗಳವರ ಮಠ, ಗಂಗಾವತಿ. ಫೂ. ಕ್ಯಾ. ಅ. ೨೮ ಪುಟಗಳು.

೫೬ **ಪಾಣಿನೀಯ ಪ್ರವೇಶಿಕಾ** (ಮೂಲ ಸಂಸ್ಕೃತ ' ಲಘುಕೌಮುದಿ ' ವ್ಯಾಕರಣ ಗ್ರಂಥಕ್ಕೆ ಕನ್ನಡದಲ್ಲಿ ಬರೆದ ವ್ಯಾಖ್ಯಾನ). ಲೇಖಕರು ವಿದ್ವಾನ್ ಜಿ ವಿಷ್ಣುಮೂರ್ತಿ ಭಟ್ಟರು, ವ್ಯಾಕರಣ—ಅಲಂಕಾರಶಾಸ್ತ್ರ — ತರ್ಕ — ಕನ್ನಡ ವಿದ್ವಾನ್; ಅಧ್ಯಾಪಕರು ಶ್ರೀಮನ್ಮಹಾರಾಜ ಸಂಸ್ಕೃತ ಮಹಾಪಾಠಶಾಲೆ, ಮೈಸೂರು. ಪ್ರಕಾಶಕರು ವಿದ್ವಾನ್ ಜಿ ವಿಷ್ಣುಮೂರ್ತಿಭಟ್ಟ, ಶಿವಸ್ವಾಮಿ ಭವನಮ್, ವಾಣೀವಿಲಾಸರೋಡು, ಮೈಸೂರು. ಡೆ. ಅ ೧೭೦೦ ಪುಟಗಳು; ಬೆಲೆ ಕಾಲಿಕೊ ಪ್ರತಿಗೆ ೧೨-೦-೦; ಸಾಮಾನ್ಯ ಪ್ರತಿಗೆ ೯-೦-೦.

೫೭ **ಚಂದ್ರಕಲಾ** (ಛಂದಶ್ಶಾಸ್ತ್ರಗ್ರಂಥ), ಮೂಲ ಸಂಸ್ಕೃತದಲ್ಲಿರುವ ' ವೃತ್ತರತ್ನಾಕರ ' ಎಂಬ ಛಂದೋಗ್ರಂಥಕ್ಕೆ ಬರೆದ ಕನ್ನಡ ವ್ಯಾಖ್ಯಾನ). ಬರೆದವರು ಮತ್ತು ಪ್ರಕಾಶಕರು ವಿದ್ವಾನ್ ಜಿ. ವಿಷ್ಣುಮೂರ್ತಿ ಭಟ್ಟರು, ಮೈಸೂರು. ಕ್ರೌ. ಅ. ೧೦೪ ಪುಟಗಳು; ಬೆಲೆ ೧-೪-೦.

೫೮ **ಚಂದ್ರಾಲೋಕಃ** (ಅಲಂಕಾರ ಶಾಸ್ತ್ರಗ್ರಂಥ) ಮೂಲ ಸಂಸ್ಕೃತ ಕವಿ ಜಯದೇವನ ಗ್ರಂಥಕ್ಕೆ ಬರೆದ ಕನ್ನಡ ವ್ಯಾಖ್ಯಾನ. ಬರೆದವರು, ಪ್ರಕಾಶಕರು ಮೇಲೆ ಹೇಳಿದವರೆ ಕ್ರೌ. ಅ. ೧೦೦ ಪುಟಗಳು. ಬೆಲೆ ೧-೮-೦.

ಕರ್ನಾಟಕದಲ್ಲಿ ಭಾವಗೀತಗಾಯನ ಬೆಳೆಯಬೇಕಾಗಿದೆ!

ಹಾಡಲಿಕ್ಕೆ ಬರುವಂತಹ ಕವಿತೆಗಳೇ ನಮ್ಮಲ್ಲಿ ಇಲ್ಲವೆಂದು
ಸಂಗೀತಗಾರರ ಆಕ್ಷೇಪಣೆ!

ಇದು ನಿಜವಾದ ಆಕ್ಷೇಪಣೆಯೆಂದು ನಂಬುವಿರಾ ?

ನಿಜವಲ್ಲವೆಂಬುದರ ಪ್ರತ್ಯಕ್ಷ ಸಾಕ್ಷಿಗಳಾಗಿ

'ಆನಂದಕಂದ' ಅವರ ಈ ಗೀತಸಂಕಲನಗಳಿವೆ:

ಮುದ್ದನ ಮಾತು (ಶಿಶುಭಾವದ ಗೀತಗಳು)	೦—೧೨—೦
ಒಡನಾಡಿ (ನಲ್ವಾಡುಗಳು)	೧—೮—೦
ವಿರಹಿಣಿ (ತತ್ತ್ವರೂಪಕ ಗೀತಗಳು)	೧—೪—೦
ಕಾರಹುಣ್ಣಿವೆ (ವಿವಿಧ ಭಾವಗೀತಗಳು)	೨—೦—೦

ಕಾವ್ಯಪ್ರೇಮಿಗಳೂ ಸಂಗೀತಗಾರರೂ ಇವುಗಳನ್ನು ಒಮ್ಮೆ ಓದಿ ನೋಡಬೇಕು.

ಬೇಕಾದವರು ಕೆಳಗಿನವಿಳಾಸಕ್ಕೆ ಬರೆಯಿರಿ!

'ಜಯಂತಿ' ಕಾರ್ಯಾಲಯ, ಧಾರವಾಡ

Printed by N. A. Hoskeri at the Vijaya Press, Dharwar and published for the Proprietors Jayanti Publications, by K. S. Betgeri at the Jayanti Office, Dharwar

ಜಯಂತಿ

ಕರ್ನಾಟಕ ಥೇಟರ್ಸ್, ಮುಂಬಯಿ

ಪುಟ ೨೦

ಸಂಚಿಕೆ ೬

೯೫೭ ನವಂಬರ

ದಿನಾಂಕ ೧-೧೦-೫೭ ರಂದು ಮುಂಬಯಿಯಲ್ಲಿ ಅಭಿನಯಿಸಿದ 'ಜೀವನ ಜೋಕಾಲಿ' ಎಂಬ ನವೀನ ನಾಟಕದಲ್ಲಿಯ ಒಂದು ದೃಶ್ಯ

(ವಿವರಕ್ಕಾಗಿ ೨೪೦ನೆಯ ಪುಟ ನೋಡಿರಿ)

JAYANTI

ಜಯಂತಿ

ಸಂಪುಟ ೨೦ ಸಂಚಿಕೆ ೬

ಕುಟುಂಬದಲ್ಲಿಯ ಎಲ್ಲರೂ
ಜ್ಞಾನವನ್ನೂ ರಸಾನಂದವನ್ನೂ
ಪಡೆಯಬಹುದಾದ
ಮಾಸಪತ್ರಿಕೆ

●

ಸಂಪಾದಕರು:
ಶ್ರೀ. ಬೆಟಗೇರಿ ಕೃಷ್ಣಶರ್ಮ

●

ಸಂಚಿಕೆ ಪ್ರತಿತಿಂಗಳ
ಮೊದಲನೆಯ ತಾರೀಖಿಗೆ
ಪ್ರಕಟವಾಗುವುದು.

卐

ವಾರ್ಷಿಕ ವರ್ಗಣಿ ೫ ರೂ.
ಬಿಡಿ ಸಂಚಿಕೆಗೆ ೮ ಆಣೆ.

ಜಾಹೀರಾತು ಕೊಡಬಯಸುವವರು
ದರಗಳಿಗಾಗಿ ಬರೆದು ಕೇಳಬೇಕು.

●

ಅನೇಕ ಊರುಗಳಲ್ಲಿ
ಜಯಂತಿ ಮಾರುವ
ಏಜಂಟರು
ಬೇಕಾಗಿದ್ದಾರೆ

ಸಂಪಾದಕೀಯ

卐

ಕನ್ನಡ ರಾಜ್ಯ ಕಳೆದ ಒಂದು ವರ್ಷ

ಇದೇ ಮುಗಿದ ಅಕ್ಟೋಬರ್ ಕೊನೆಯ ದಿನಕ್ಕೆ, ಕನ್ನಡಜನತೆ ಒಂದೆ ಆಡಳಿತದ ಛತ್ರದಲ್ಲಿ ಒಂದುಗೂಡಿ ಒಂದು ವರ್ಷವಾಯಿತು. ನಾವೆಲ್ಲರೂ ರಾಜಕೀಯ ದೃಷ್ಟಿಯಿಂದ ಒಂದುಗೂಡಿದರೆ ನಮ್ಮ ಅಭ್ಯುದಯವಾಗುವುದೆಂಬ ವಿಶ್ವಾಸದಿಂದ, ಪ್ರತ್ಯೇಕರಾಜ್ಯ ನಿರ್ಮಾಣಕ್ಕಾಗಿ ನಮ್ಮ ಜನರು, ಬಹುಕಾಲದಿಂದ ಹೆಣಗಾಡಿ ಗುರಿಯನ್ನು ಸಾಧಿಸಿದರು ಆದರೆ ಕರ್ನಾಟಕ ರಾಜ್ಯೋದಯದ ಮೊದಲ ವರ್ಷದಲ್ಲಿ ನಾವು ಸಾಧಿಸಿದುದೇನು ?—ಎಂಬುದನ್ನು ನಾವಿಂದು ವಿಚಾರಮಾಡಬೇಕಾಗಿದೆ; ಒಂದು ವರ್ಷದ ನಡಿಗೆಯಲ್ಲಿ ತಪ್ಪುಹೆಜ್ಜೆಗಳೇನಾದರೂ ಬಿದ್ದಿದ್ದರೆ. ಅದರ ಪರಿಣಾಮವನ್ನು ಕುರಿತು ವಿಮರ್ಶೆಮಾಡಿಕೊಂಡು, ಮುಂದಿನ ನಡಿಗೆಯಲ್ಲಿ ಅಂತಹ ತಪ್ಪುಹೆಜ್ಜೆಗೆ ಅವಕಾಶ ದೊರೆಯದಂತೆ ಜಾಗೃತಿವಹಿಸಬೇಕಾಗಿದೆ.

× × × ×

ತತ್ತ್ವತಃ ನಾವು ಪ್ರಜಾಪ್ರಭುತ್ವವನ್ನು ಒಪ್ಪಿಕೊಂಡಿರುವೆವಾದರೂ, ಸಂಪೂರ್ಣವಾಗಿ ಅದನ್ನು ವ್ಯವಹಾರದಲ್ಲಿ ತಂದುತೋರಿಸಲಿಕ್ಕೆ—ಭಾರತದ ಮಿಕ್ಕ ರಾಜ್ಯಗಳಂತೆಯೆ—ನಮ್ಮ ಕನ್ನಡರಾಜ್ಯದಲ್ಲಿಯೂ ಅನುಕೂಲ ಪರಿಸ್ಥಿತಿ ಇಲ್ಲವೆಂಬುದನ್ನು ಎಲ್ಲರೂ ಒಪ್ಪಿಕೊಳ್ಳಬಹುದು. ನಮ್ಮ ಸಾಮಾನ್ಯಜನತೆಗೆ ಚುನಾವಣೆಯೆಂಬುದರ ಹೊರರೂಪು ಮಾತ್ರ ಗೊತ್ತಾಗಿದೆ ಹೊರತು, ಅದರ ತತ್ತ್ವ-ಸತ್ತ್ವಗಳಾವುವೂ ತಿಳಿದಿಲ್ಲ ಆದುದರಿಂದಲೇ ಜನತೆಗೆ, ನಮ್ಮ ಸರಕಾರ ತನ್ನಿಂದಲೇ ನಿರ್ಮಿತವಾದುದೆಂಬ ಕಲ್ಪನೆ ಸ್ವಲ್ಪವೂ ಉಂಟಾಗಿಲ್ಲ ಆದುದರಿಂದಲೇ ಸರಕಾರವನ್ನು ನೋಡುವ ಅದರ ದೃಷ್ಟಿಯಲ್ಲಿ ಯಾವ ಬದಲಾವಣೆಯೂ ಕಂಡುಬರುವುದಿಲ್ಲ. ಇಷ್ಟೇ ಅಲ್ಲ, ಪ್ರಜಾಪ್ರಭುತ್ವ ತತ್ತ್ವದ ಘೋಷಣೆಯಿಂದ ಆಡಳಿತ ನಡೆಸುವ ಸರಕಾರದಿಂದ, ವೈಯಕ್ತಿಕ ಅನುಕೂಲತೆಗಳಿಗೆ ವ್ಯತ್ಯಯ ಬರುವಂತಹ ಸಂದರ್ಭ ಬಂದಾಗಲೆಲ್ಲ, ಹಿಂದಿನ ಪರಕೀಯ ಸರಕಾರವನ್ನು ಕಾಣುತ್ತಿದ್ದ ದ್ವೇಷ-ತ್ವೇಷಗಳ ಭಾವನೆಯಿಂದಲೇ ಅದನ್ನು ನೋಡುತ್ತಲಿದ್ದಾರೆ. ಸರಕಾರದ ವಿಷಯದಲ್ಲಿ ಆತ್ಮೀಯಭಾವವೆಂಬುದು ಇಲ್ಲವೇ ಇಲ್ಲ ಜನತೆಯಲ್ಲಿ ಎಲ್ಲಿ ನೋಡಿದಲ್ಲೆಲ್ಲ ಸರಕಾರದ ವಿಷಯದಲ್ಲಿ ಭೀತಿ ಸಂದೇಹ, ತಿರಸ್ಕಾರ! ಜಾಗತಿಕ ಪರಿಸ್ಥಿತಿಯ ಒತ್ತಡದ ಪರಿಣಾಮಗಳನ್ನೂ ನಮ್ಮ ಜನತೆ ಸರಕಾರದ ತಲೆಯ ಮೇಲೆ ಹೇರಿ, ತಮ್ಮ ಭೀತಿ-ಸಂದೇಹ-ತಿರಸ್ಕಾರಗಳನ್ನು ಇನ್ನಿಷ್ಟು ಹೆಚ್ಚಿಸಿಕೊಳ್ಳುತ್ತಲಿದೆ. ಇದೀಗ ನಮ್ಮ ಸಾಮಾನ್ಯಜನತೆಯ ವಾಸ್ತವಚಿತ್ರ

× × × ×

ಇನ್ನು ನಮ್ಮ ಮುಂದಾಳುಗಳ ವಿಚಾರ. ಇವರಲ್ಲಿ ತಲೆದೋರಿರುವ ವಿಷಮಭಾವನೆಯನ್ನು ನೋಡಿದರೆ, ಇವರಲ್ಲಿಯ ಬಹುಸಂಖ್ಯಾಕರು, ದೇಶದ ಅಭ್ಯುದಯಕ್ಕಿಂತ ಸ್ವಾರ್ಥಸಾಧನೆಯ ಕಡೆಗೇ ಹೆಚ್ಚು ಲಕ್ಷ್ಯವಿಂಸಿ ಹೊರಟಿದ್ದಾರೆಂದು ಕಾಣುವುದು; ಅಧಿಕಾರಸೂತ್ರ ಕೈಗೆ ಬಂದಿರುವ ಮುಂದಾಳುಗಳ ವಿಷಯದಲ್ಲಿ ಸಂದೇಹ-ಭೀತಿ-ದ್ವೇಷ-ತ್ವೇಷಗಳನ್ನು ಹರಡುವ ಕೆಲಸವನ್ನಿವರು ಅಖಂಡವಾಗಿ ನಡೆಸಿರುವರು. ತಮ್ಮ ಕಡೆಗೆ ಆಡಳಿತಸೂತ್ರಗಳು ಬಂದಾಗ, ತಮ್ಮಂತೆಯೆ ಮಿಕ್ಕವರಿಗೂ ಕುಚೇಷ್ಟೆಗಳನ್ನು ನಡೆಯಿಸಲು ಬರುವದೆಂಬ ಎಚ್ಚರವೂ ಇವರಿಗಿಲ್ಲ. ಸದ್ಯ ಇವರಿಗೆ ಕನ್ನಡನಾಡಿನ ಭದ್ರತೆಯೂ ಬೇಕಾಗಿಲ್ಲ; ಪ್ರಜಾಪ್ರಭುತ್ವಾನುಗುಣವಾದ ಬಹುಮತದ ಸರಕಾರವೂ ಬೇಕಾಗಿಲ್ಲ. ವೈಯಕ್ತಿಕವಾಗಿ ತಮ್ಮ ಕೈಯಲ್ಲಿ ಅಧಿಕಾರಸೂತ್ರ ಬರಬೇಕೆಂಬ ದುರಾಶೆ ಇವರನ್ನು ಅಡ್ಡದಾರಿಯಲ್ಲಿಯೆ ನಡೆಸುತ್ತಿದೆ.

ಎಂತಲೇ ಕಳೆದುಹೋಗಿದ್ದ ಕನ್ನಡ ಪ್ರದೇಶಗಳನ್ನು ಉಳಿಸಿಕೊಳ್ಳ-ಬೇಕೆಂಬ ಪರವೆ ಇವರಿಗಿಲ್ಲ; ಈಗ ಒಂದುಗೂಡಿರುವ ಭಾಗದಿಂದಲೇ ಕರ್ನಾಟಕದ ಖಂಡ-ಖಂಡಗಳನ್ನು ಕಿತ್ತುಕೊಳ್ಳಲು ಹೊಂಚು ಹಾಕಿರುವ ನೆರೆನಾಡಿಗರ ಚಟುವಟಿಕೆಗಳ ಕಡೆಗೂ ಇವರ ದೃಷ್ಟಿ-ಯಿಲ್ಲ.

× × ×

ಸದ್ಯ ಅಧಿಕಾರಸೂತ್ರವನ್ನು ಕೈಕೊಂಡಿರುವ ಮಂತ್ರಿವರ್ಗದ ಕಡೆಗೆ ದೃಷ್ಟಿಹರಿಸಿದರೆ, ಅವರು ಕೂಡ— ಪಕ್ಷೋಪಪಕ್ಷಗಳ ಕುಟಿಲ-ತಂತ್ರದ ಮೂಲಕ ನಿರ್ವಿಣ್ಣರೂ ನಿಷ್ಕ್ರಿಯರೂ ಆಗಿರುವರೆಂಬುದು ಕಂಡುಬರುತ್ತದೆ. ಅವರಿಗೆ ತಮ್ಮ ಸ್ಥಾನಭದ್ರತೆಯ ಬಗೆಗೆ ನಂಬುಗೆ ತಪ್ಪಿರುವುದರಿಂದ, ಆಡಳಿತದ ವಿಚಾರಕ್ಕಿಂತ ಹೆಚ್ಚಾಗಿ, ಸ್ಥಾನ ಸಂರ-ಕ್ಷಕ ಯೋಜನೆಗಳ ವಿಚಾರವನ್ನೇ ಅವರು ತಲೆಯಲ್ಲಿ ತುಂಬಿಕೊಂಡಿ-ದ್ದಾರೆ. ಎಂತಲೇ ಅವರಿಗೆ ರಾತ್ರಿಯಲ್ಲಿ ನಿದ್ದೆಕೂಡ ಹತ್ತಲಿಕ್ಕಿಲ್ಲ. ಇಂತಹರ ಮನದೆದುರು ರಾಜ್ಯದ ಪ್ರಗತಿಯ ವಿಚಾರಗಳು ಹೇಗೆ ಸ್ಥಿರವಾಗಿ ನಿಲ್ಲಬೇಕು?

× × ×

ಇನ್ನೊಂದು ಮಹತ್ತ್ವದ ಸಂಗತಿಯೆಂದರೆ, ಇದುವರೆಗೂ ಬೇರೆ ಬೇರೆ ಐದು ರಾಜಕೀಯ ಆಡಳಿತಕ್ಕೊಳಗಾದ ಕನ್ನಡ ಪ್ರದೇ-ಶಗಳ ಪ್ರತಿನಿಧಿಗಳು ರಾಜ್ಯಸಭೆಯಲ್ಲಿ ಒಟ್ಟು ಸೇರಿದ್ದಾರೆ. ಒಂ-ದೊಂದು ಕಡೆಯವರ ಒಲವು-ಅಭಿರುಚಿಗಳೂ, ಭಾಷೆ-ಸಂಪ್ರದಾಯ ಗಳೂ ಒಂದೊಂದು ವೈಶಿಷ್ಟ್ಯದಿಂದ ಕೂಡಿದುವಾಗಿವೆ. ಆದುವರಿಂದ ಪರಸ್ಪರರಲ್ಲಿ ಇನ್ನೂ ಸರಿಯಾದ ಹೊಂದಿಕೆಯಾಗಿಲ್ಲ. ಒಂದು ಕಡೆ-ಯವರು ಇನ್ನೊಂದು ಕಡೆಯವರನ್ನು ಸಂದೇಹ-ಭೀತಿಗಳಿಂದ ನೋಡುತ್ತಲಿದ್ದಾರೆ. ಪರಸ್ಪರರ ನಡೆನುಡಿಗಳನ್ನು ಪರಸ್ಪರರು ಬೀಳು-ಗಳೆದು ಆಗಾಗ ಮಾತನಾಡುತ್ತಾರೆ. ಇಂದಿನ ಬಹುಮತ ಪಕ್ಷ ವಾಗಿರುವ ಕಾಂಗ್ರೆಸ್ ಸದಸ್ಯರಲ್ಲಿಯೂ, ಈ ಕಾರಣವು ಒಂದು ತನ ಉಳಿಯದಂತೆ ಮಾಡಿದೆ.

× × ×

ಆಡಳಿತ ಯಂತ್ರದ ಕಡೆಗೆ ದೃಷ್ಟಿಯನ್ನು ಹರಿಸಿದರೆ, ಅದರ ವೇಗವೂ ಅತಿ ಮಂದವಾಗಿದೆಯೆಂಬುದರ ಅನುಭವ— ವರ್ಷದು-ದ್ದಕ್ಕೂ—ಎಲ್ಲರಿಗೂ ಬಂದಿದೆ. ಸದ್ಯದ ಆಡಳಿತ ಯಂತ್ರದ ಮುಖ್ಯ ಮುಖ್ಯ ಅಧಿಕಾರಿಗಳೆಲ್ಲ ಮೊದಲಿನ ಮೈಸೂರು ಸರಕಾರಕ್ಕೆ ಸೇರಿ-ದವರಾಗಿದ್ದಾರೆ. ಮುಂಬಯಿ-ಮದ್ರಾಸ್ ಸರಕಾರಗಳ ಕಾರ್ಯದ ತೀವ್ರವೇಗವನ್ನು ಕಂಡುಂಡವರಿಗೆ, ಮೊದಲಿನ ಮೈಸೂರು ಸರಕಾರದ ಕಾರ್ಯವೇಗವು ಆನೆಯ ನಡಿಗೆಯಂತೆ ಎನಿಸಬಹುದು. ರಾಜ-ಧಾನಿಯ ಮುಖ್ಯ ಕಚೇರಿಯ ಕಾರ್ಯವೆಲ್ಲ ಕೂರ್ಮಗತಿಯಿಂದಲೇ ಸಾಗಿದೆ. ಆದುದರಿಂದ ಮೈಸೂರೇತರ ಜಿಲ್ಲೆಗಳಲ್ಲಿಯ ಜನರು ಈ ಮಂದಗತಿಗಾಗಿ ಬೇಸತ್ತು ಹೋಗಿದ್ದಾರೆ. ಜಿಲ್ಲಾ ಕಾರ್ಯಾಲಯ-ಗಳಿಂದ ರಾಜಧಾನಿಯ ಮುಖ್ಯ ಕಾರ್ಯಾಲಯಕ್ಕೆ ಹೋದ ವ್ಯವ-ಹಾರಗಳು, ಬೇಗನೆ ಯಾವ ವಿಚಾರ-ನಿರ್ಣಯಗಳಿಲ್ಲದೆ ಕೊಳೆಯುತ್ತ ಬಿದ್ದಿರುವುವು. ಬೇರೆ ಬೇರೆ ಶಾಖಾಧಿಕಾರಿಗಳಿಗೆ ತಮ್ಮ ತಮ್ಮ ಶಾಖೆಗೆ ಸಂಬಂಧಿಕವಾಗಿ ಬಂದ ಪ್ರಕರಣಗಳ ಸುದ್ದಿಯೇ ಇರುವದಿಲ್ಲ. ಅವೆಲ್ಲ ಕಾರಕೂನರ ಫಾಯಿಲುಗಳಲ್ಲಿ ನಿದ್ದೆ ಮಾಡುತ್ತಿರುವುವೆಂಬ ವರ್ತಮಾನ ಎಲ್ಲೆಲ್ಲಿಯೂ ಹರಡಿಕೊಂಡಿದೆ. ಅಲ್ಲದೆ ಕಾರಕೂನ ಸಾಹೇಬರ ಕೈಬೆಚ್ಚಗೆ—ಕರುಳು ಶಾಂತ - ಮಾಡದೆ ಹೋದರೆ, ಆ ನಿದ್ರಿಸುತ್ತಿದ್ದ ಪ್ರಕರಣಗಳಿಗೆ ಎಚ್ಚರವೇ ಆಗುವುದಿಲ್ಲವೆಂದು ಸ್ವಾನು-ಭವದಿಂದ ಹೇಳುವ ಜನರು ಅನೇಕರಿದ್ದಾರೆ. ಇದರ ಪರಿಣಾಮ-ವಾಗಿಯೇ ಅನೇಕ ಜನರಿಗೆ ಆರಾರು ತಿಂಗಳ ಸಂಬಳ ಸಿಕ್ಕಿಲ್ಲವಂತೆ; ಪೇನ್ಶನರ್ ಜನರು ನಿರ್‍ಯೋಪವಾಸ ವ್ರತವನ್ನು ಮಾಡಬೇಕಾಗಿದೆ-ಯಂತೆ.

× × ×

ಸರಕಾರದ ಮಂದಗತಿಯ ಶಾಸನಕ್ರಮವೂ ಸುಸೂತ್ರವಾಗಿ ಸಾಗದಂತಹ ಅತೃಪ್ತ ಪರಿಸ್ಥಿತಿಯಲ್ಲಿ ನಮ್ಮ ನಾಡಿನ ಜನತೆಯಿದೆ. ರಾಜ್ಯದಲ್ಲೆಲ್ಲ ಒಂದೆ ಬಗೆಯ ಆಡಳಿತಕ್ರಮವನ್ನು ಇರಿಸಬೇಕೆಂದು ಶಾಸನಸಭೆ ನಿರ್ಣಯಿಸುತ್ತಿದೆ. ಆದರೆ ಈ ನಿರ್ಣಯಗಳು ಒಂದು ಭಾಗದವರಿಗೆ ಅನುಕೂಲವಾದರೆ, ಇನ್ನೊಂದು ಭಾಗದವರಿಗೆ ಪ್ರತಿ-ಕೂಲವಾಗಿ ಪರಿಣಮಿಸುತ್ತಿವೆ. ಈ ಸಂಬಳದ ಪ್ರಮಾಣದ ಶಾಸನ-ವನ್ನೇ ನೋಡಬಹುದು. ಇದು ಹಳೆಯ ಮೈಸೂರಿಗರಿಗೆ ಸಂತೃಪ್ತಿ-ಯನ್ನುಂಟು ಮಾಡಿದರೆ, ಮಿಕ್ಕ ಭಾಗಗಳವರಲ್ಲೆಲ್ಲ ಅತೃಪ್ತಿಯನ್ನು ಹುಟ್ಟಿಸಿದೆ. ಮಿಕ್ಕ ಭಾಗಗಳಲ್ಲಿಯ ಕಾಲೇಜು ಶುಲ್ಕದ ಪ್ರಮಾಣಕ್ಕೆ ಮೈಸೂರು ವಿಶ್ವವಿದ್ಯಾಲಯಕ್ಕೆ ಸೇರಿದ ಕಾಲೇಜುಗಳ ವಿದ್ಯಾರ್ಥಿ-ಶುಲ್ಕವನ್ನೂ ಏರಿಸಬೇಕೆಂದು ಸರಕಾರ ನಿರ್ಣಯಿಸಿತು. ಅಲ್ಲದೆ ಕಾಲೇಜು ವಿದ್ಯಾರ್ಥಿಗಳು ಬಂಡಾಯವನ್ನೇ ಹೂಡಿದರು. ವ್ಯಾಪಾರ ಶುಲ್ಕಶಾಸನದ ಪರಿಣಾಮದಿಂದ ಗಡಿಪ್ರದೇಶದಲ್ಲಿಯ ವ್ಯಾಪಾರ ಪರಿಸ್ಥಿತಿಯೇ ತಲೆಕೆಳಗಾಗಿ ನಿಂತಿದೆ. ಗಡಿಯೀಚೆಗಿನ ಊರುಗಳಲ್ಲಿಯ ದರಗಳೇ ಬೇರೆ; ಗಡಿಯಾಚೆಗಿನ ಊರೊಳಗಿನ ದರಗಳೇ ಬೇರೆ ಇದರಿಂದ ವ್ಯಾಪಾರಸ್ಥರು, ಜನರನ್ನೂ ವಂಚಿಸುತ್ತಿದ್ದಾರೆ; ಸರಕಾರ-ವನ್ನೂ ವಂಚಿಸುತ್ತಲಿದ್ದಾರೆ.

× × ×

ಕನ್ನಡರಾಜ್ಯವಿನ್ನೂ ಬೆಳೆಯಬೇಕಾದ ಎಳಗೂಸು. ಅದ ಸದ್ಯದ ಪರಿಸ್ಥಿತಿಯನ್ನರಿ ನೋಡಿದರೆ ಸರಕಾರ-ಜನತೆ ಎರಡು ಅದಕ್ಕೆ ಬಾಲಾರಿಷ್ಟವನ್ನು ತಗುಲಿಸಿಬಿಟ್ಟಿವೆ. ಈಗ ನಾಡಿನ ವಿಚಾರಿ ಗಳೆಲ್ಲರೂ ಒಂದೆಡೆ ಸೇರಿ, ಸಹಾನುಭೂತಿಯಿಂದ ಯೋಚನೆ ಮಾಡ ಬೇಕು. ರಾಜ್ಯದ ಅಭ್ಯುದಯವನ್ನು ಕುರಿತು ಯೋಚಿಸಬೇಕು. ಬರಲಿರುವ ವರ್ಷದಲ್ಲಿಯಾದರೂ ಇಂದಿನ ದುಷ್ಟಪರಿಸ್ಥಿತಿಯ ಮುಂದುವರಿದು ಬೆಳೆಯದಂತೆ ತಕ್ಕ ಏರ್ಪಾಡನ್ನು ಮಾಡಬೇಕು.

ನಾಡ ನಡೆ

ಇನ್ನೂ ಎಷ್ಟು ಕಾಲ ಇಂತಹ ಮಾತು?

ಹಳೆಯ ಮೈಸೂರಿನ ಮುಂದಾಳುಗಳಲ್ಲಿ ಅನೇಕರಿಗೆ ಇದು ವರೆಗೂ ಕರ್ನಾಟಕತ್ವದ ಬಗೆಗೆ ಆತ್ಮೀಯ ಭಾವನೆ ಮೂಡದೆ ಇರುವುದು ವಿಷಾದದ ಸಂಗತಿ. ಕರ್ನಾಟಕದ ಮಿಕ್ಕ ಭಾಗಗಳ ವಿಚಾರದಲ್ಲಿ—ಹಳೆಯ ಮೈಸೂರಿನ ದುರಭಿಮಾನಪ್ರೇರಿತರಾಗಿ—ಸಾಮಾನ್ಯ ಜನರು ಏನಾದರೂ ಹೀನಾಯದ ಮಾತನಾಡಿದರೆ, 'ಪಾಪ, ತಿಳಿವಳಿಕೆ ಸಾಲದೆ ಮಾತನಾಡುವರು' ಎಂದು ಸಹನ ಮಾಡಿಕೊಳ್ಳಬಹುದು; ಆದರೆ ಮಂತ್ರಿಸ್ಥಾನದಂತಹ ಹೊಣೆಗಾರಿಕೆಯ ಅಧಿಕಾರದಲ್ಲಿರುವವರೂ, ಮೈಸೂರೇತರ ಕನ್ನಡ ಜನತೆಯನ್ನು 'ಅಸಂಸ್ಕೃತರು!' 'ಪ್ರಗತಿಯಿಲ್ಲದವರು!' ಎಂದು ಬೀಳುಗಳೆದು ನುಡಿಯುವುದೆಂದರೆ—ಇದೇನು ದೇಶದ ಆರೋಗ್ಯದ ಲಕ್ಷಣವಲ್ಲ.

ಬೆಂಗಳೂರಿನ ಕನ್ನಡ ಸಾಹಿತ್ಯಪರಿಷತ್ತಿನಲ್ಲಿ, ಮೊನ್ನೆ ಮೊನ್ನೆ ಜರಗಿದ ಕನ್ನಡ ರಾಜ್ಯೋದಯ ಸಮಾರಂಭದ ಸಭೆಯಲ್ಲಿ, ನಮ್ಮ ಒಕ್ಕಲುತನದ ಮಂತ್ರಿಗಳಾದ ಶ್ರೀಮಾನ್ ಎಚ್. ಎಸ್. ರುದ್ರಪ್ಪನವರು ಭಾಷಣ ಮಾಡುತ್ತ, ಹಳೆಯ ಮೈಸೂರುರಾಜ್ಯವು ಬಹಳ ಪ್ರಗತಿಯನ್ನು ಹೊಂದಿದೆಯೆಂದೂ—ತೀರ ಹಿಂದುಳಿದ ಕನ್ನಡ ಭಾಗಗಳನ್ನು ಈಗ ಹೊಸ ಮೈಸೂರು ರಾಜ್ಯಕ್ಕೆ ಸೇರಿಸುವುದರಿಂದ ರಾಜ್ಯದ ಪ್ರಗತಿಗೆ ಧಕ್ಕೆ ತಟ್ಟಿದೆಯೆಂದೂ ನುಡಿಮುತ್ತುಗಳನ್ನು ಸುರಿಸಿದರಾಗಿ ಪತ್ರಿಕೆಗಳಲ್ಲಿ ವರದಿಯಾಗಿದೆ. ವೀರಕನ್ನಡಿಗರಾದ ಶ್ರೀಮಾನ್ ಹಳ್ಳಿಕೇರಿ ಗುದ್ಲೆಪ್ಪನವರು, ಅಂದಿನ ಆ ಸಭೆಯಲ್ಲಿದ್ದು, ಶ್ರೀಮಾನ್ ರುದ್ರಪ್ಪನವರ ಅಭಿಪ್ರಾಯವನ್ನು ಪ್ರತಿಭಟಿಸಿ ಮಾತನಾಡಿದರೆಂದೂ ಆ ವರದಿಯಲ್ಲಿ ಪ್ರಕಟವಾಗಿದೆ. ಇದೆಲ್ಲವೂ ನಿಜವೇ ಆಗಿದ್ದರೆ, ಇಂತಹ ಅಭಿಪ್ರಾಯದ ಮಂತ್ರಿಗಳಿಂದ ನಮ್ಮ ರಾಜ್ಯದ ಪ್ರಗತಿ ಎಂದೂ ಆಗಲಾರದೆಂದು ನಾವು ಖಂಡಿತವಾಗಿ ತಿಳಿದುಕೊಳ್ಳಬೇಕು!

ಶ್ರೀಮಾನ್ ರುದ್ರಪ್ಪನವರು ಹಳೆಯ ಮೈಸೂರಿನಲ್ಲಿ ಕಂಡ ಪ್ರಗತಿಯೇನು? ಹೊಸ ಮೈಸೂರಿಗೆ ಸೇರಿದ ಮಿಕ್ಕ ಭಾಗಗಳಲ್ಲಿ ಕಂಡ ಪರಾಗತಿಯೇನು? ಹಳೆಯ ಮೈಸೂರಿನ ಹಿಂದಿನ ರಾಜಕೀಯ ಪರಿಸ್ಥಿತಿಯ ಮೂಲಕ ಬೆಂಗಳೂರು ಮೈಸೂರಗಳೆರಡನ್ನು ಥಳುಕಿನ ನಗರಗಳನ್ನಾಗಿಸಿದುದು ಪ್ರಗತಿಯೆನ್ನಬೇಕೆ? ಈ ನಗರಗಳನ್ನು ಬೆಳೆಸುವುದಕ್ಕೆ ಎಷ್ಟೊಂದು ಬಡಕಲು ಆಡು-ಕುರಿಗಳು ಆಹುತಿಯಾಗಿವೆಯೋ ಏನೋ! ಬೆಂಗಳೂರು-ಮೈಸೂರುಗಳ ಜನರಷ್ಟು ಇಡ್ಲಿ-ದೋಸೆ ತಿಂದು, ಕಾಫೀ ಕುಡಿದು, ಜರಿಗೆಯಂಚಿನ ರುಮಾಲು ಸುತ್ತಿಕೊಂಡು—'ಇದು ನಮ್ಮ ಪ್ರಗತಿ' ಎಂದು ಹೆಮ್ಮೆಪಟ್ಟುಕೊಳ್ಳುತ್ತಿರಬಹುದು ಆದರೆ ಅರೆಹೊಟ್ಟೆಗೂ ಸಾಲದಂತೆ ರಾಗಿಯ ಮುದ್ದೆಯನ್ನು ಹೊಟ್ಟೆಯಲ್ಲಿ ಸೇರಿಸಿಕೊಂಡು, ಅರೆಬೆತ್ತಲೆಯಾಗಿ ದಿನಗಳೆಯುವ ಹಳ್ಳಿಗರನ್ನು ಕಣ್ಣುಬಿಟ್ಟು ನೋಡಿರುವರೇ ಈ ಪ್ರಗತಿಶಾಲಿಗಳು?

ಸರಕಾರದಿಂದಲೇ ಸ್ಥಾಪಿತವಾದ ನಾಲ್ಕೆಂಟು ಕಾರಖಾನೆ-ಗಿರಣಿಗಳು ಮೈಸೂರು-ಬೆಂಗಳೂರುಗಳಲ್ಲಿ ಮಾತ್ರ ಇರಬಹುದು. ಉತ್ತರ ಕರ್ನಾಟಕದ ಗಾಳಿ ಬಡಿದು ಜನತೆಯಿಂದಲೆ ಬೆಳೆದುನಿಂತ ದಾವಣಗೆರೆಯೊಂದನ್ನು ಬಿಟ್ಟರೆ, ಹಳೆಯ ಮೈಸೂರುರಾಜ್ಯದಲ್ಲಿ, ಪ್ರಗತಿಯನ್ನು ಪಡೆದ ಪಟ್ಟಣಗಳು ಯಾವುವಿವೆ?

ಈಗ ಹೊಸತಾಗಿ ಬಂದ ಭಾಗಗಳಲ್ಲಿರುವ ವ್ಯಾಪಾರಪ್ರಗತಿಯ ಪಟ್ಟಣಗಳನ್ನು ಲೆಕ್ಕಮಾಡಿ ಹೇಳಿದರೆ, ಸಂಖ್ಯೆ ಅಂಕೆ ಮಿಕ್ಕಬಹುದು; ಒಂದು ಬೆಳಗಾಂವಿ ಜಿಲ್ಲೆಯನ್ನೇ ತೆಗೆದುಕೊಳ್ಳೋಣ: ಸಂಕೇಶ್ವರ-ನಿಪ್ಪಾಣಿಯ ತಂಬಾಕಿನ ವ್ಯಾಪಾರ, ಅಂತರ ರಾಷ್ಟ್ರೀಯ ಖ್ಯಾತಿಯನ್ನು ಗಳಿಸಿದೆ ಹುಕ್ಕೇರಿ-ಗೋಕಾಕಗಳ ಪೇಟೆ, ಬೆಲ್ಲದ ವ್ಯಾಪಾರಕ್ಕಾಗಿ ಮುಂಬಯಿ ಇಲಾಖೆಯಲ್ಲಿಯೇ ಹೆಸರು ಪಡೆದುದು. ಬೆಳಗಾಂವಿ ಶಹಾಪುರಗಳ ಪೇಟೆಯನ್ನು ನೋಡಿದರೆ, ಮೈಸೂರು-ಬೆಂಗಳೂರವರು ಬೆರಳುಕಚ್ಚಿ ನಿಲ್ಲಬಹುದು. ಗೋಕಾಕದ ನೂಲುವ ಗಿರಣಿಗೆ ಸಮಾನವಾದುದು ಹಳೆಯ ಮೈಸೂರಲ್ಲಿ ಇದೆಯೆ?

ರಾಜಧಾನಿಯಲ್ಲದೆ ಹೋದರೂ, ಹುಬ್ಬಳ್ಳಿ ಬಾಗಲಕೋಟೆ ಬಳ್ಳಾರಿಗಳು ವ್ಯಾಪಾರ-ಸಂಸ್ಕೃತಿಗಳೆರಡರಿಂದಲೂ ಏಳಿಗೆಯನ್ನು ಪಡೆದ ನಗರಗಳು ಧಾರವಾಡದ ಗಾಳಿಯು ಸೋಂಕಿದರೂ, ಜನರು, ವಿದ್ಯೆ-ಸಂಸ್ಕೃತಿಗಳನು ಪಡೆಯುವರು. ಗದಗನ್ನು ದೊಡ್ಡದನ್ನಾಗಿ ಬೆಳೆಸಿದವರು ಅಲ್ಲಿಯ ಸಿರಿವಂತರಾದ ವ್ಯಾಪಾರಿಗಳು. ಮಂಗಳೂರು-ಕಾರವಾರ ಜಿಲ್ಲೆಗಳು, ಹಳೆಯ ಮೈಸೂರಿಗೆ ಇಲ್ಲದ ಸಮುದ್ರತೀರದ ಸೌಕರ್ಯ ಒದಗಿಸಿರುವುವು ಆ ಜಿಲ್ಲೆಗಳು ಬೆಳೆಯುವ ತೆಂಗು-ಅಡಿಕೆಗಳು, ಹೊಸ ರಾಜ್ಯದ ಪ್ರಗತಿಗೆ ಸಹಾಯ್ಯಕವಾದಾವೆ ಹೊರತು, ಅದನ್ನು ಮುಂದಗೊಳಿಸಲಾರವು.

ಸುಶಿಕ್ಷಿತರು ಸಾಕ್ಷರರು ಇವರ ಸಂಖ್ಯೆಯನ್ನು ನೋಡಿದರೆ, ಮೈಸೂರೇತರ ಕನ್ನಡಭಾಗದ ಪ್ರಮಾಣ. ಹೆಚ್ಚಾದೀತೇ ಹೊರತು ಕಡಮೆಯಾಗಲಾರದು. ಜೀವನದ ರೀತಿ-ನೀತಿಗಳಲ್ಲಿಯೂ ಮಿಕ್ಕ ಭಾಗದ ಜನರು, ಹಳೆಯ ಮೈಸೂರಿನ ಜನರನ್ನು ಬೆರಗುಗೊಳಿಸಬಹುದು. ಶ್ರೀಮಾನ್ ರುದ್ರಪ್ಪನವರೂ, ಅವರಂತಹ ಅಭಿಪ್ರಾಯದವರೂ, ಕನ್ನಡನಾಡಿನ ತುಂಬ—ಸಂಶೋಧಕ ದೃಷ್ಟಿಯನ್ನಿರಿಸಿಕೊಂಡು ತಿರುಗಾಡಲಿ; ಹಳೆಯ ಮೈಸೂರು-ಮತ್ತು ಬೇರೆ ಭಾಗಗಳ ಪರಿಸ್ಥಿತಿಗಳನ್ನು ತೂಕಮಾಡಿ ನೋಡಲಿ. ಬರೀ ಕುರುಡು ಅಭಿಮಾನದಿಂದಲೋ, ಕುಟಿಲ ರಾಜಕಾರಣದ ಮೂಲಕವೋ, ಹೀಗೆಲ್ಲ ಸುಳ್ಳು ಮಾತುಗಳನ್ನು ಬಳಸುತ್ತ ಹೋದರೆ, ಜನತೆಯ ವಿಶ್ವಾಸವನ್ನವರು ಕಳೆದುಕೊಳ್ಳಬೇಕಾದೀತು!

ಹಳೆಯ ಮೈಸೂರನ್ನುಳಿದ ಬೇರೆ ಭಾಗಗಳ ಜನತೆಗೂ ಶ್ರೀಮಾನ್ ರುದ್ರಪ್ಪಮಂತ್ರಿಗಳು ಬೇಕಾಗಿಯಾಗುವ ಸಂದರ್ಭ ಬರಬಹುದು. ಆ ಜನತೆಯ ಬಗೆಗೆ ಇಂತಹ ಪೂರ್ವಗ್ರಹವನ್ನು ಇರಿಸಿಕೊಂಡವರು—ಮಂತ್ರಿಗಳಾಗಿದ್ದರೂ—ಜನತೆ ಅವರನ್ನು ಹೇಗೆ ಆತ್ಮೀಯತೆಯಿಂದ, ಆದರದಿಂದ ಸ್ವಾಗತಿಸಬೇಕು? ಈ ಬಗೆಯ ಹೀನ ವಚನಗಳಿಗೆ ಪೂರ್ಣವಿರಾಮ ದೊರೆಯದೆ ಹೋದರೆ, ಕನ್ನಡಿ

ಗರಿಗೆ ಸುಖವು ಕನಸಿನ ಸಂಗತಿ. ಶ್ರೀಮಾನ್ ಗುದ್ಲೆಪ್ಪನವರು ಸಕಾಲದಲ್ಲಿಯೆ ಮಂತ್ರಿ ರುದ್ರಪ್ಪನವರಿಗೆ ಎಚ್ಚರಿಕೆಯ ಮಾತುಗಳನ್ನು ಹೇಳಿದುದಕ್ಕಾಗಿ ಅವರಿಗೆ ನಮ್ಮ ಧನ್ಯವಾದಗಳು.

'ದ್ರಾವಿಡ ಕಳಗಂ' ಅವರ ಕ್ರಿಮಿನಲ್ ಮನೋವೃತ್ತಿ

ಮದರಾಸಿನ 'ದ್ರಾವಿಡ ಕಳಗಂ' ಗುಂಪಿನ ಹಿರಿಯರಾದ ರಾಮಸ್ವಾಮಿ ನಾಯಿಕರರು, ದಿನದಿನಕ್ಕೂ ರಾಷ್ಟ್ರವಿಘಾತಕವಾದ ಚಳವಳಿಗಳನ್ನು ಹೂಡುತ್ತಲಿದ್ದಾರೆ. ಒಮ್ಮೆ ಗಣಪತಿಯ ಮೂರ್ತಿಯನ್ನು ಒಡೆಯುವ ಚಳವಳಿ ಮಾಡಿದರು. ಇನ್ನೊಮ್ಮೆ ಬ್ರಾಹ್ಮಣರ ಹೋಟಲುಗಳ ಹೆಸರಿನ ಹಲಗೆಗೆ ಮಸಿಯನ್ನು ಬಳಿಯುವ ಮಹಾಕಾರ್ಯಕ್ಕೆ ಕೈ ಹಾಕಿದರು ರಾಮಾಯಣ, ಹಿಂದೀಭಾಷೆಗಳ ವಿರೋಧದ ಚಳವಳಿಯನ್ನು ಅವಿಚ್ಛಿನ್ನವಾಗಿ ನಡೆಸಿದ್ದಾರೆ. ಬೇಗನೆ ನೆರವೇರಿಸಲಿರುವ ಇನ್ನೊಂದು ಅವರ ಕಾರ್ಯಕ್ರಮವೆಂದರೆ ಭಾರತದ ರಾಜ್ಯಘಟನೆಯ ಪುಸ್ತಕವನ್ನು ಹೋಳಿಮಾಡುವುದು. ಭಾರತದ ರಾಷ್ಟ್ರಧ್ವಜವನ್ನು ಸುಡುವ ಕಾರ್ಯಕ್ರಮವೊಂದನ್ನು ಇರಿಸಿಕೊಂಡಿದ್ದರಾದರೂ, ಅದೇಕೋ ಅದನ್ನವರು ಬಿಟ್ಟುಕೊಟ್ಟರು. ಇವೆಲ್ಲವನ್ನೂ, ಮದ್ರಾಸದ ಸಂಕಾರ, ಕೇವಲ ಸಾಕ್ಷೀಭೂತವಾಗಿ ನೋಡುತ್ತದೆ. ಯಾರಾದರೂ ಇವರ ಬಗೆಗೆ ಶಾಸನಸಭೆಗಳಲ್ಲಿ ಪ್ರಶ್ನೆಗಳನ್ನು ಕೇಳಿದರೆ, ಮಂತ್ರಿಗಳೆನಿಸಿಕೊಳ್ಳುವವರು ಕೊಡುವ ಉತ್ತರದಲ್ಲಿ, ಪ್ರಶ್ನೆ ಕೇಳಿದವರ ವಿಷಯದಲ್ಲಿಯೇ ತಿರಸ್ಕಾರ-ವಿಡಂಬನೆಗಳು ತುಂಬಿರುವವಲ್ಲದೆ, ಸಹಾನುಭೂತಿ ಸಹಕಾರ ಮನೋಭಾವಗಳಿರುವುದಿಲ್ಲ. ಈ ರೀತಿಗಳನ್ನು ನೋಡಿದಾಗ, ರಾಮಸ್ವಾಮಿ ನಾಯಿಕರರ ಚಳವಳಿಗಳಿಗೆ ಮದ್ರಾಸ್ ಮಂತ್ರಿ-ಮಂಡಲಿಯ ಆಂತರಿಕ ಸಮ್ಮತಿಯಿದೆಯೇನೋ—ಎನಿಸುವಂತಿದೆ.

ದ್ರಾವಿಡ ಕಳಗಂ-ನವರ ಇದುವರೆಗಿನ ಚಳವಳಿಗಳು ಕೇವಲ ವಿರೋಧ ಪ್ರದರ್ಶನವಾಗಿದ್ದುವೇ ಹೊರತು, ಪ್ರತ್ಯಕ್ಷ ಹಿಂಸೆಗೆ ಕಾರಣವಾಗಿರಲಿಲ್ಲ. ಆದರೆ ಇಂದು ರಾಮನಾಯಕರು ಪ್ರತ್ಯಕ್ಷ ಹಿಂಸೆಯ ಪ್ರಚಾರವನ್ನು ನಡೆಸಿದ್ದಾರೆ. ಅವರು ಇಂದು ನಡೆಯಿಸಿರುವ ಪ್ರಚಾರವೆಂದರೇ (ಪ್ರಾರಂಭದ ಪ್ರಯೋಗವೆಂದು) ಒಂದು ಸಾವಿರ ಬ್ರಾಹ್ಮಣರ ಕೊಲೆ ಮಾಡುವುದು; ಎರಡು ಸಾವಿರ ಬ್ರಾಹ್ಮಣರ ಮನೆಗಳನ್ನು ಸುಡುವುದು. ಇದನ್ನು ಕೇಳಿಯೂ ಮದ್ರಾಸ್ ಸರಕಾರ ಮೌನಿಯಾಗಿಯೇ ಇದೆ. ಒಬ್ಬಿಬ್ಬರು ಇವರ ಬಗೆಗೆ ಪ್ರಶ್ನೆ ಕೇಳಿದುದಕ್ಕೆ, ಮದ್ರಾಸಿನ ಗೃಹಮಂತ್ರಿಗಳಾದ ಶ್ರೀ ಭಕ್ತವತ್ಸಲಂ ನಾಯುಡು ಅವರು ಚುಟುಕುಮಾತಿನಲ್ಲಿಯೇ ಉತ್ತರ ಕೊಟ್ಟಿದ್ದಾರೆ ಆದರೂ ಅಂತಹ ಪರಿಸ್ಥಿತಿಯೊದಗಿದಾಗ ಸಂರಕ್ಷಣೆಗಾಗಿ ಸಿದ್ಧರಾಗಿ ಇರುವಂತೆ, ಪೋಲೀಸರಿಗೆ ಮುನ್ನೆಚ್ಚರಿಕೆ ಕೊಡಲಾಗಿದೆಯೆಂದು ಅಪ್ಪಣೆ ಕೊಡಿಸಿದ್ದಾರೆ. ನಡೆಯಬೇಕಾದ ದುರ್ಘಟನೆ ನಡೆದ ಮೇಲೆ, ಪೋಲೀಸರು ಕೆಲವು ಜನ ನಿರಪರಾಧಿಗಳನ್ನೊ ನಿಜವಾದ ಅಪರಾಧಿಗಳನ್ನೊ—ಹಿಡಿದು ತರಬಹುದು, ಆಮೇಲೆ ನ್ಯಾಯನಿರ್ಣಯದ ನಗೆಯಾಟ ನಡೆದು, ಸರಿಯಾದ ಸಾಕ್ಷಿಗಳಿಲ್ಲವೆಂದು ಅವರನ್ನೆಲ್ಲ ಬಿಟ್ಟು ಬಿಡಬಹುದು.

ಅಲ್ಲ! ಪ್ರತ್ಯಕ್ಷ ಕೊಲೆ-ಸುಲಿಗೆಯ ಪ್ರಚಾರಕರಾಗಿ ಕಾರ್ಯ ಮಾಡುವುದು ಕ್ರಿಮಿನಲ್ ಕಾಯದೆಯಂತೆ ಅಪರಾಧವೆನಿಸಲಾರದೆ? ಮದರಾಸ್ ರಾಜ್ಯದ ಕ್ರಿಮಿನಲ್ ಕಾಯದೆಯೇನಾದರೂ ಬೇರೆ ರೀತಿಯದಾಗಿದೆಯೆ? ಮದ್ರಾಸ್ ರಾಜ್ಯದಲ್ಲಿ ಬ್ರಾಹ್ಮಣರಾಗಿ ಹುಟ್ಟುವುದೇ ಅಪರಾಧವೆಂದು ರಾಮಸ್ವಾಮಿ ನಾಯಕರಿಗೂ ಅವರ ಅನುಯಾಯಿಗಳಿಗೂ ಎನಿಸುತ್ತಿದ್ದರೆ, ಹಾಗೆ ಆ ಕಾಯಿದೆಯ ಕಲಮುಗಳಲ್ಲಿ ತಿದ್ದುಪಡೆ ಮಾಡುವ ಚಳವಳಿಯನ್ನೂ ಅವರು ಹೂಡುವ ಅಗತ್ಯವಿದೆ.

ಇದೆಲ್ಲ ಹುಚ್ಚಾಟವನ್ನು ಮದ್ರಾಸ್ ಸರಕಾರ ಮಾನವತೆಯ ದೃಷ್ಟಿಯಿಂದ ನೋಡುವ ಮನಸ್ಸನ್ನು ಮಾಡದೆ ಹೋದರೆ, ಕೇಂದ್ರ ಸರಕಾರದವಾದರೂ ನಿಷ್ಪಕ್ಷಪಾತ ದೃಷ್ಟಿಯಿಂದ ಇದರ ವಿಚಾರ ಮಾಡುವುದೆಂದು ನಮ್ಮ ವಿಶ್ವಾಸ.

ಎ. ಐ. ಆರ್. ಮತ್ತು ಕನ್ನಡಭಾಷೆ

ಅಖಿಲಭಾರತ ಆಕಾಶವಾಣಿ ಮೊದಲಿನಿಂದಲೂ ಕನ್ನಡ ಭಾಷೆಯನ್ನು ದುರ್ಲಕ್ಷಿಸುತ್ತ ಬಂದಿದೆ. ಈಗ ಹೆಸರಿಗೆ ಮಾತ್ರ ಕರ್ನಾಟಕದಲ್ಲಿ ಎರಡು ಕೇಂದ್ರಗಳಿದ್ದರೂ ಹೊರನಾಡಿನ ಕನ್ನಡಿಗರಿಗೆ ಅವುಗಳಿಂದ ಯಾವ ಪ್ರಯೋಜನವೂ ಆಗುವಂತಿಲ್ಲ ಒಂದೆ ಒಂದು ಕಿಲೋವ್ಯಾಟ್ ಶಕ್ತಿಯ ಧಾರವಾಡ ಕೇಂದ್ರವು ಕನ್ನಡನಾಡಿಗೂ ಸಂಪೂರ್ಣ ಪ್ರಯೋಜನಕಾರಿಯಾಗಿಲ್ಲ. ಹೆಚ್ಚಿನ ಶಕ್ತಿಯುಳ್ಳ ಬೆಂಗಳೂರು ಕೇಂದ್ರವು ಮಧ್ಯಮ ತರಂಗಗಳ ಮೇಲಷ್ಟೇ ತನ್ನ ಕಾರ್ಯಕ್ರಮಗಳನ್ನು ಬಿತ್ತರಿಸುತ್ತಿರುವುದರಿಂದ ಹೊರನಾಡ ಕನ್ನಡಿಗರಿಗೆ ಅದರ ಉಪಯೋಗ ದೊರೆಯುವಂತಿಲ್ಲ ಮುಂಬಯಿ–ಮದ್ರಾಸ್ ಕೇಂದ್ರಗಳವರು ಕನ್ನಡ ಕಾರ್ಯಕ್ರಮಗಳಿಗಾಗಿ ಕೊಡುತ್ತಿದ್ದ ಅವಕಾಶವನ್ನು ಈಗ ಕಡಿಮೆಮಾಡಿ ಬಿಟ್ಟಿದ್ದಾರೆ ಇದರಿಂದ ಹೊರನಾಡಿನ ಕನ್ನಡಿಗರಿಗೆ, ಕನ್ನಡ ಕಾರ್ಯಕ್ರಮಗಳನ್ನು ಕೇಳಬೇಕೆಂದರೆ ಅದಕ್ಕೆ ಅನುಕೂಲವೇ ಇಲ್ಲದಂತಾಗಿದೆ

ಇನ್ನೊಂದು ಮಾತು: ಪುಣೆ, ಮುಂಬಯಿ, ಮದ್ರಾಸ ನಗರಗಳಲ್ಲಿ ಕನ್ನಡಿಗರು ಸಾಕಷ್ಟು ಸಂಖ್ಯೆಯಲ್ಲಿದ್ದಾರೆ. ಇದುವರೆಗೂ ಅಲ್ಲಿಯ ಕನ್ನಡ ಕಲಾವಿದರಿಗೂ ವಿದ್ಯಾವಂತರಿಗೂ ಮುಂಬಯಿ-ಮದರಾಸ್ ಕೇಂದ್ರಗಳಲ್ಲಿ ಪ್ರೋತ್ಸಾಹ ದೊರೆಯುತ್ತಿತ್ತು. ಆದರೆ ಈಗ ಆ ಕೇಂದ್ರದವರು ಕನ್ನಡ ಕಾರ್ಯಕ್ರಮಗಳನ್ನು ನಿಲ್ಲಿಸಿ ಬಿಟ್ಟುದರಿಂದ ಆ ಕಲಾವಿದರನ್ನು ಕೇಳುವವರೇ ಇಲ್ಲದಂತಾಗಿದೆ ಈಗ ಅವರಿಗೆ ಗತಿ ಯಾವುದು? ನಮ್ಮ ಎ. ಐ. ಆರ್ ಅಧಿಕಾರಿಗಳು ಕನ್ನಡಿಗರ ಈ ಕೊರತೆಗಳನ್ನು ಕುರಿತು ಸರಿಯಾದವಿಚಾರ ಮಾಡಬೇಕಾಗಿ ನಮ್ಮ ಬಿನ್ನಹ.

ಕನ್ನಡ ಪ್ರಾಚೀನಕಾವ್ಯಗಳಲ್ಲಿ ಬಂದಿರುವ

ವನ್ಯಮೃಗ-ಪಶುಸಂಕುಲ

(ಒಂದು ಶ್ರುತಿಚಿತ್ರ)*

ಪಾತ್ರವಿವರ :

ನೇಮಿಚಂದ್ರ ಮಂಗರಸ ಜನ್ನಿಗ	ಕನ್ನಡ ಕವಿಗಳು	ನಿವೇದಕ ರಾಜಣ್ಣ (ನಿವೇದಕನ ಜೊತೆಗಾರ) ಬೇಟೆಗಾರರು.

(ಪ್ರಾರಂಭದಲ್ಲಿ ಲಕ್ಷ್ಮೀಶಕವಿಯ ಕಾಡಿನ ಬಣ್ಣನೆ.) (ದೂರದಿಂದ ಕೇಳಿಸುತ್ತ ಧ್ವನಿ ಸಮಾಪಿಸುವುದು.)

ಶಕುನಿಚೀತ್ಕಾರ ಘೋಷಣಮಯಂ ತೃಣಮಯಂ
ವಿಕಿರದುಪಲಾಳಿ ಕರ್ಕಶಮಯಂ ಶಶಮಯಂ
ಪ್ರಕಟಕಂಟಕಕೀರ್ಣ ತರುಮಯಂ ಕುರುಮಯಂ ವಿವಿಧೋಗ್ರಜಂತುಮಯವು ||
ನಕುಲ ಮೂಷಕ ಸರೀಸೃಪಮಯಂ ದ್ವಿಪಮಯಂ
ಸಕಲಭೂವಿಷಮಸಂಕುಲಮಯಂ ಬಿಲಮಯಂ
ವೃಕಸೂಕರ ವ್ಯಾಘ್ರಚಯಮಯಂ ಭಯಮಯಂ ತಾನೆನಿಸಿ ಕಾಡಿರ್ದುದು ||

ನಿವೇದಕ :

ಕನ್ನಡನಾಡಿಗೆ ಕಾಡಿನ ಜೀವನವು ಅಪರಿಚಿತವಾದುದೇನೂ ಅಲ್ಲ; ಕರ್ನಾಟಕದ ಪಡುವಣದುದ್ದಕ್ಕೂ ಚಾಚಿಕೊಂಡುನಿಂತ, ಸಹ್ಯಾದ್ರಿಯ ಓವರಿಗುಂಟ ನಿಬಿಡವಾದ ಹೆಗ್ಗಾಡು ಹರಡಿಕೊಂಡಿದೆ. ಪೂರ್ವಭಾಗದವರು ಘಟ್ಟವನ್ನಿಳಿದು ಕರಾವಳಿಗೆ ಹೋಗಬೇಕಾದರೂ ಕಾಡಿನದಾರಿಯಲ್ಲಿ ಪಯಣ ಮಾಡಬೇಕಾಗುವುದು; ಪರಶುರಾಮ-ಕ್ಷೇತ್ರದವರು ರಾಮಕ್ಷೇತ್ರಕ್ಕೆ ಏರಿಬರಬೇಕಾದರೂ ಕಗ್ಗಾಡನ್ನು ದಾಟಿ ಬರಬೇಕಾಗುವುದು.

"ದೂರದ ಕಾಡು ಕಣ್ಣಿಗೆ ನುಣ್ಣಗೆ" ಎಂದು ನಮ್ಮ ನಾಡಿನಲ್ಲಿ ಒಂದು ಗಾದೆಯ ಮಾತು ಇದೆ. ಕಾಡಿನ ರಮ್ಯ ರೌದ್ರತೆಯ ಪರಿಣಾಮಗಳನ್ನು ಪ್ರತ್ಯಕ್ಷವಾಗಿ ಅನುಭವಿಸಿದವರ ದಿಟದ ನುಡಿಯಿದು. ಕಾಡಿನಲ್ಲಿ ಬೆಳೆದ ಮರ-ಗಿಡ-ಕಂಟಿ-ಬಳ್ಳಿಗಳ ವಿವಿಧಸ್ವರೂಪದ ಸಹಜಸೌಂದರ್ಯ, ಎಂತಹರ ಕಣ್ಣುಗಳನ್ನೂ ಆಕರ್ಷಿಸಬಹುದಾದರೂ, ಅಲ್ಲಿ ಮನೆಮಾಡಿಕೊಂಡಿರುವ ಕ್ರೂರಮೃಗಗಳೂ, ವನ್ಯಪಶುಗಳೂ, ಹಿಂಸ್ರಜಂತುಗಳೂ, ಎಲ್ಲರ ಹೃದಯದಲ್ಲಿ ಮೃತ್ಯು-ಭೀತಿಯನ್ನು ತುಂಬುವುವು. ಕಾಡಿನಲ್ಲಿ ವಾಸಿಸುವ ಜನರ ಜೀವನ ಸುಸೂತ್ರವಾದುದೇನೂ ಅಲ್ಲ. ಪ್ರತಿದಿನವೂ ಒಂದಿಲ್ಲೊಂದು ಬಗೆಯ ಕಾಡಿನ ಉಪದ್ರವವನ್ನು ಎದುರಿಸುತ್ತಲೇ ಬಾಳಬೇಕಾಗುವುದು.

ಕಾಡಾಡಿಗಳಾದ ಬೇಡರನ್ನು ಬಣ್ಣಿಸುತ್ತ ರಾಘವಾಂಕ ಕವಿಯು ಏನು ಹೇಳುವನು ನೋಡಿ :

ಮದಹಸ್ತಿಯಿರಿದ ಘಾಯಂಗಳ, ವರಾಹನೆ-
ತ್ತಿದ ಡೋರುಗಳ, ಮೃಗಾಧಿಪನುಗಿದು ಬಗಿದು ತೋ-
ಡಿದ ಬಾದಣದ, ಕರಡಿ ಕವುರಿ ಬತ್ತಿದ ತೋಳ
ಹುಲಿಹೊಯ್ದು ಜರಿದ ಹೆಗಲ ||
ಪದದಿ ಕೋಣಂ ಹೊಯಿದ ಹೋರ, ಭೇರುಂಡನೆರ-
ಗಿದ ಗಂಟುಗಳ, ಕಡವೆ ತುಳಿದ ಹಜ್ಜೆಗಳ ಚಿ-
ಹ್ನದ ಬೇಡನಾಯಕರು ನೆರೆದರು ಹರಿಶ್ಚಂದ್ರ-
ಭೂನಾಥನೋಲಗದೊಳು ||

ನಿವೇದಕ :

ಎಲ್ಲರೂ ಒಂದಿಲ್ಲೊಂದು ವನ್ಯಪ್ರಾಣಿಯ ಹಿಂಸೆಗೆ ಸಿಲುಕಿ ಗಾಯಗೊಂಡವರೇ! ಇಂತಹ ತೊಂದರೆಗಳ ಬೀಡಾದ ಕಾಡನ್ನು ನಾಡಿಗರು ಎಂದೂ ಬಯಸದಿರಬಹುದು; ಆದರೆ ನಮ್ಮ ನಾಡಿನ

---

* ತಾ. ೪-೧೦-೫೭ರಂದು ಬೆಂಗಳೂರು ಮತ್ತು ಧಾರವಾಡದ ಬಾನುಲಿಕಟ್ಟೆಗಳಿಂದ ಬಿತ್ತರಗೊಂಡುದು. ಸಂ.

ಗರಿಗೆ ಸುಖವು ಕಸಿಸಿನ ಸಂಗತಿ. ಶ್ರೀಮಾನ್ ಗುದ್ಲೆಪ್ಪನವರು ಸಕಾಲದಲ್ಲಿಯೆ ಮಂತ್ರಿ ರುದ್ರಪ್ಪನವರಿಗೆ ಎಚ್ಚರಿಕೆಯ ಮಾತುಗಳನ್ನು ಹೇಳಿದುದಕ್ಕಾಗಿ ಅವರಿಗೆ ನಮ್ಮ ಧನ್ಯವಾದಗಳು.

'ದ್ರಾವಿಡ ಕಳಗಂ' ಅವರ ಕ್ರಿಮಿನಲ್ ಮನೋವೃತ್ತಿ

ಮದರಾಸಿನ 'ದ್ರಾವಿಡ ಕಳಗಂ' ಗುಂಪಿನ ಹಿರಿಯರಾದ ರಾಮಸ್ವಾಮಿ ನಾಯಿಕರರು, ದಿನದಿನಕ್ಕೂ ರಾಷ್ಟ್ರವಿಘಾತಕವಾದ ಚಳವಳಿಗಳನ್ನು ಹೂಡುತ್ತಲಿದ್ದಾರೆ. ಒಮ್ಮೆ ಗಣಪತಿಯ ಮೂರ್ತಿಯನ್ನು ಒಡೆಯುವ ಚಳವಳಿ ಮಾಡಿದರು. ಇನ್ನೊಮ್ಮೆ ಬ್ರಾಹ್ಮಣರ ಹೋಟಲುಗಳ ಹೆಸರಿನ ಫಲಗೆಗೆ ಮಸಿಯನ್ನು ಬಳಿಯುವ ಮಹಾಕಾರ್ಯಕ್ಕೆ ಕೈ ಹಾಕಿದರು ರಾಮಾಯಣ, ಹಿಂದೀಭಾಷೆಗಳ ವಿರೋಧದ ಚಳವಳಿಯನ್ನು ಅವಿಚ್ಛಿನ್ನವಾಗಿ ನಡೆಸಿದ್ದಾರೆ. ಬೇಗನೆ ನೆರವೇರಿಸಲಿರುವ ಇನ್ನೊಂದು ಅವರ ಕಾರ್ಯಕ್ರಮವೆಂದರೆ ಭಾರತದ ರಾಜ್ಯಘಟನೆಯ ಪುಸ್ತಕವನ್ನು ಹೋಳಿಮಾಡುವುದು. ಭಾರತದ ರಾಷ್ಟ್ರಧ್ವಜವನ್ನು ಸುಡುವ ಕಾರ್ಯಕ್ರಮವೊಂದನ್ನು ಇರಿಸಿಕೊಂಡಿದ್ದರಾದರೂ, ಆದೇಕೋ ಅದನ್ನವರು ಬಿಟ್ಟುಕೊಟ್ಟರು. ಇದೆಲ್ಲವನ್ನೂ ಮದ್ರಾಸದ ಸರಕಾರ, ಕೇವಲ ಸಾಕ್ಷೀಭೂತವಾಗಿ ನೋಡುತ್ತದೆ. ಯಾರಾದರೂ ಇವರ ಬಗೆಗೆ ಶಾಸನಸಭೆಗಳಲ್ಲಿ ಪ್ರಶ್ನೆಗಳನ್ನು ಕೇಳಿದರೆ, ಮಂತ್ರಿಗಳೆನಿಸಿಕೊಳ್ಳುವವರು ಕೊಡುವ ಉತ್ತರದಲ್ಲಿ, ಪ್ರಶ್ನೆ ಕೇಳಿದವರ ವಿಷಯದಲ್ಲಿಯೇ ತಿರಸ್ಕಾರ-ವಿಡಂಬನೆಗಳು ತುಂಬಿರುವವಲ್ಲದೆ, ಸಹಾನುಭೂತಿ ಸಹಕಾರ ಮನೋಭಾವಗಳಿರುವುದಿಲ್ಲ. ಈ ರೀತಿಗಳನ್ನು ನೋಡಿದಾಗ, ರಾಮಸ್ವಾಮಿ ನಾಯಿಕರರ ಚಳವಳಿಗಳಿಗೆ ಮದ್ರಾಸ್ ಮಂತ್ರಿಮಂಡಲಿಯ ಆಂತರಿಕ ಸಮ್ಮತಿಯಿದೆಯೇನೋ—ಎನಿಸುವಂತಿದೆ.

ದ್ರಾವಿಡ ಕಳಗಂನವರ ಇದುವರೆಗಿನ ಚಳವಳಿಗಳು ಕೇವಲ ವಿರೋಧ ಪ್ರದರ್ಶನವಾಗಿದ್ದುವೇ ಹೊರತು, ಪ್ರತ್ಯಕ್ಷ ಹಿಂಸೆಗೆ ಕಾರಣವಾಗಿರಲಿಲ್ಲ. ಆದರೆ ಇಂದು ರಾಮನಾಯಕರು ಪ್ರತ್ಯಕ್ಷ ಹಿಂಸೆಯ ಪ್ರಚಾರವನ್ನು ನಡೆಸಿದ್ದಾರೆ. ಅವರು ಇಂದು ನಡೆಯಿಸಿರುವ ಪ್ರಚಾರವೆಂದರೇ (ಪ್ರಾರಂಭದ ಪ್ರಯೋಗವೆಂದು) ಒಂದು ಸಾವಿರ ಬ್ರಾಹ್ಮಣರ ಕೊಲೆ ಮಾಡುವುದು; ಎರಡು ಸಾವಿರ ಬ್ರಾಹ್ಮಣರ ಮನೆಗಳನ್ನು ಸುಡುವುದು. ಇದನ್ನು ಕೇಳಿಯೂ ಮದ್ರಾಸ್ ಸರಕಾರ ಮೌನಿಯಾಗಿಯೇ ಇದೆ. ಒಬ್ಬಿಬ್ಬರು ಇವರ ಬಗೆಗೆ ಪ್ರಶ್ನೆ ಕೇಳಿದುದಕ್ಕೆ, ಮದ್ರಾಸಿನ ಗೃಹಮಂತ್ರಿಗಳಾದ ಶ್ರೀ ಭಕ್ತವತ್ಸಲಂ ನಾಯುಡು ಅವರು ಚುಚ್ಚುಮಾತಿನಲ್ಲಿಯೇ ಉತ್ತರ ಕೊಟ್ಟಿದ್ದಾರೆ ಆದರೂ ಅಂತಹ ಪರಿಸ್ಥಿತಿಯೊದಗಿದಾಗ ಸಂರಕ್ಷಣೆಗಾಗಿ ಸಿದ್ಧರಾಗಿ ಇರುವಂತೆ, ಪೋಲೀಸರಿಗೆ ಮುನ್ನೆಚ್ಚರಿಕೆ ಕೊಡಲಾಗಿದೆಯೆಂದು ಅಪ್ಪಣೆ ಕೊಡಿಸಿದ್ದಾರೆ. ನಡೆಯಬೇಕಾದ ದುರ್ಘಟನೆ ನಡೆದ ಮೇಲೆ, ಪೋಲೀಸರು ಕೆಲವು ಜನ ನಿರಪರಾಧಿಗಳನ್ನೊ ನಿಜವಾದ ಅಪರಾಧಿಗಳನ್ನೊ—ಹಿಡಿದು ತರಬಹುದು, ಆಮೇಲೆ ನ್ಯಾಯನಿರ್ಣಯದ ನಗೆಯಾಟ ನಡೆದು, ಸರಿಯಾದ ಸಾಕ್ಷಿಗಳಿಲ್ಲವೆಂದು ಅವರನ್ನೆಲ್ಲ ಬಿಟ್ಟು ಬಿಡಬಹುದು.

ಅಲ್ಲ! ಪ್ರತ್ಯಕ್ಷ ಕೊಲೆ-ಸುಲಿಗೆಯ ಪ್ರಚಾರಕರಾಗಿ ಕಾರ್ಯ ಮಾಡುವುದು ಕ್ರಿಮಿನಲ್ ಕಾಯದೆಯಂತೆ ಅಪರಾಧವೆನಿಸಲಾರದೆ? ಮದರಾಸ್ ರಾಜ್ಯದ ಕ್ರಿಮಿನಲ್ ಕಾಯದೆಯೇನಾದರೂ ಬೇರೆ ರೀತಿಯದಾಗಿದೆಯೆ? ಮದ್ರಾಸ್ ರಾಜ್ಯದಲ್ಲಿ ಬ್ರಾಹ್ಮಣರಾಗಿ ಹುಟ್ಟುವುದೇ ಅಪರಾಧವೆಂದು ರಾಮಸ್ವಾಮಿ ನಾಯಕರಿಗೂ ಅವರ ಅನುಯಾಯಿಗಳಿಗೂ ಎನಿಸುತ್ತಿದ್ದರೆ, ಹಾಗೆ ಆ ಕಾಯಿದೆಯ ಕಲಮುಗಳಲ್ಲಿ ತಿದ್ದುಪಡಿ ಮಾಡುವ ಚಳವಳಿಯನ್ನೂ ಅವರು ಹೂಡುವ ಅಗತ್ಯವಿದೆ.

ಇದೆಲ್ಲ ಹುಚ್ಚಾಟವನ್ನು ಮದ್ರಾಸ್ ಸರಕಾರ ಮಾನವತೆಯ ದೃಷ್ಟಿಯಿಂದ ನೋಡುವ ಮನಸ್ಸನ್ನು ಮಾಡದೆ ಹೋದರೆ, ಕೇಂದ್ರ ಸರಕಾರದವಾದರೂ ನಿಷ್ಪಕ್ಷಪಾತ ದೃಷ್ಟಿಯಿಂದ ಇದರ ವಿಚಾರ ಮಾಡುವುದೆಂದು ನಮ್ಮ ವಿಶ್ವಾಸ

ಎ. ಐ. ಆರ್. ಮತ್ತು ಕನ್ನಡಭಾಷೆ

ಅಖಿಲಭಾರತ ಆಕಾಶವಾಣಿ ಮೊದಲಿನಿಂದಲೂ ಕನ್ನಡ ಭಾಷೆಯನ್ನು ದುರ್ಲಕ್ಷಿಸುತ್ತ ಬಂದಿದೆ. ಈಗ ಹೆಸರಿಗೆ ಮಾತ್ರ ಕರ್ನಾಟಕದಲ್ಲಿ ಎರಡು ಕೇಂದ್ರಗಳಿದ್ದರೂ ಹೊರನಾಡಿನ ಕನ್ನಡಿಗರಿಗೆ ಅವುಗಳಿಂದ ಯಾವ ಪ್ರಯೋಜನವೂ ಆಗುವಂತಿಲ್ಲ. ಒಂದೆ ಒಂದು ಕಿಲೋವ್ಯಾಟ್ ಶಕ್ತಿಯ ಧಾರವಾಡ ಕೇಂದ್ರವು ಕನ್ನಡನಾಡಿಗೂ ಸಂಪೂರ್ಣ ಪ್ರಯೋಜನಕಾರಿಯಾಗಿಲ್ಲ. ಹೆಚ್ಚಿನ ಶಕ್ತಿಯುಳ್ಳ ಬೆಂಗಳೂರು ಕೇಂದ್ರವು ಮಧ್ಯಮ ತರಂಗಗಳ ಮೇಲಷ್ಟೇ ಅನ್ನ ಕಾರ್ಯಕ್ರಮಗಳನ್ನು ಬಿತ್ತರಿಸುತ್ತಿರುವುದರಿಂದ ಹೊರನಾಡ ಕನ್ನಡಿಗರಿಗೆ ಅದರ ಉಪಯೋಗ ದೊರೆಯುವಂತಿಲ್ಲ ಮುಂಬಯಿ-ಮದ್ರಾಸ್ ಕೇಂದ್ರಗಳವರು ಕನ್ನಡ ಕಾರ್ಯಕ್ರಮಗಳಿಗಾಗಿ ಕೊಡುತ್ತಿದ್ದ ಅವಕಾಶವನ್ನು ಈಗ ಕಡಿಮೆಮಾಡಿ ಬಿಟ್ಟಿದ್ದಾರೆ ಇದರಿಂದ ಹೊರನಾಡಿನ ಕನ್ನಡಿಗರಿಗೆ, ಕನ್ನಡ ಕಾರ್ಯಕ್ರಮಗಳನ್ನು ಕೇಳಬೇಕೆಂದರೆ ಅದಕ್ಕೆ ಅನುಕೂಲವೇ ಇಲ್ಲದಂತಾಗಿದೆ

ಇನ್ನೊಂದು ಮಾತು: ಪುಣೆ, ಮುಂಬಯಿ, ಮದ್ರಾಸ ನಗರಗಳಲ್ಲಿ ಕನ್ನಡಿಗರು ಸಾಕಷ್ಟು ಸಂಖ್ಯೆಯಲ್ಲಿದ್ದಾರೆ. ಇದುವರೆಗೂ ಅಲ್ಲಿಯ ಕನ್ನಡ ಕಲಾವಿದರಿಗೂ ವಿದ್ಯಾವಂತರಿಗೂ ಮುಂಬಯಿ-ಮದರಾಸ್ ಕೇಂದ್ರಗಳಲ್ಲಿ ಪ್ರೋತ್ಸಾಹ ದೊರೆಯುತ್ತಿತ್ತು. ಆದರೆ ಈಗ ಆ ಕೇಂದ್ರದವರು ಕನ್ನಡ ಕಾರ್ಯಕ್ರಮಗಳನ್ನು ನಿಲ್ಲಿಸಿ ಬಿಟ್ಟುದರಿಂದ ಆ ಕಲಾವಿದರನ್ನು ಕೇಳುವವರೇ ಇಲ್ಲದಂತಾಗಿದೆ ಈಗ ಅವರಿಗೆ ಗತಿ ಯಾವುದು? ನಮ್ಮ ಎ. ಐ. ಆರ್ ಅಧಿಕಾರಿಗಳು ಕನ್ನಡಿಗರ ಈ ಕೊರತೆಗಳನ್ನು ಕುರಿತು ಸರಿಯಾದವಿಚಾರ ಮಾಡಬೇಕಾಗಿ ನಮ್ಮ ಬಿನ್ನಹ.

ಕನ್ನಡ ಪ್ರಾಚೀನಕಾವ್ಯಗಳಲ್ಲಿ ಬಂದಿರುವ

ವನ್ಯಮೃಗ-ಪಶುಸಂಕುಲ

(ಒಂದು ಶ್ರುತಿಚಿತ್ರ)*

ಪಾತ್ರವಿವರ :

ನೇಮಿಚಂದ್ರ, ಮಂಗರಸ, ಜನ್ನಿಗ } ಕನ್ನಡ ಕವಿಗಳು

ನಿವೇದಕ
ರಾಜಣ್ಣ (ನಿವೇದಕನ ಜೊತೆಗಾರ)
ಬೇಟೆಗಾರರು.

(ಪ್ರಾರಂಭದಲ್ಲಿ ಲಕ್ಷ್ಮೀಶಕವಿಯ ಕಾಡಿನ ಬಣ್ಣನೆ.) (ದೂರದಿಂದ ಕೇಳಿಸುತ್ತ ಧ್ವನಿ ಸಹಿತಾಪಿಸುವುದು.)

ಶಕುನಿಚೀತ್ಕಾರ ಘೋಷಣಮಯಂ ತೃಣಮಯಂ
ವಿಕಿರದುಪಲಾಳಿ ಕರ್ಕಶಮಯಂ ಶಶಮಯಂ
ಪ್ರಕಟಕಂಟಕಕೀರ್ಣ ತರುಮಯಂ ಕುರುಮಯಂ ವಿವಿಧೋಗ್ರಜಂತುಮಯವು ||
ನಕುಲ ಮೂಷಕ ಸರೀಸೃಪಮಯಂ ದ್ವಿಪಮಯಂ
ಸಕಲಭೂವಿಷಮಸಂಕುಲಮಯಂ ಬಿಲಮಯಂ
ವೃಕಸೂಕರ ವ್ಯಾಘ್ರಚಯಮಯಂ ಭಯಮಯಂ ತಾನೆನಿಸಿ ಕಾಡಿರ್ದುದು ||

ನಿವೇದಕ :

ಕನ್ನಡನಾಡಿಗೆ ಕಾಡಿನ ಜೀವನವು ಅಪರಿಚಿತವಾದುದೇನೂ ಅಲ್ಲ; ಕರ್ನಾಟಕದ ಪಡುವಣದುದ್ದಕ್ಕೂ ಚಾಚಿಕೊಂಡು ನಿಂತ, ಸಹ್ಯಾದ್ರಿಯ ಓವರಿಗುಂಟ ನಿಬಿಡವಾದ ಹೆಗ್ಗಾಡು ಹರಡಿಕೊಂಡಿದೆ. ಪೂರ್ವಭಾಗದವರು ಘಟ್ಟವನ್ನಿಳಿದು ಕರಾವಳಿಗೆ ಹೋಗಬೇಕಾದರೂ ಕಾಡಿನದಾರಿಯಲ್ಲಿ ಪಯಣ ಮಾಡಬೇಕಾಗುವುದು; ಪರಶುರಾಮಕ್ಷೇತ್ರದವರು ರಾಮಕ್ಷೇತ್ರಕ್ಕೆ ಏರಿಬರಬೇಕಾದರೂ ಕಗ್ಗಾಡನ್ನು ದಾಟಿ ಬರಬೇಕಾಗುವುದು.

"ದೂರದ ಕಾಡು ಕಣ್ಣಿಗೆ ನುಣ್ಣಗೆ" ಎಂದು ನಮ್ಮ ನಾಡಿನಲ್ಲಿ ಒಂದು ಗಾದೆಯ ಮಾತು ಇದೆ. ಕಾಡಿನ ರಮ್ಯ ರೌದ್ರತೆಯ ಪರಿಣಾಮಗಳನ್ನು ಪ್ರತ್ಯಕ್ಷವಾಗಿ ಅನುಭವಿಸಿದವರ ದಿಟದ ನುಡಿಯದು. ಕಾಡಿನಲ್ಲಿ ಬೆಳೆದ ಮರ-ಗಿಡ-ಕಂಟಿ-ಬಳ್ಳಿಗಳ ವಿವಿಧಸ್ವರೂಪದ ಸಹಜಸೌಂದರ್ಯ, ಎಂತಹರ ಕಣ್ಣುಗಳನ್ನೂ ಆಕರ್ಷಿಸಬಹುದಾದರೂ, ಅಲ್ಲಿ ಮನೆಮಾಡಿಕೊಂಡಿರುವ ಕ್ರೂರಮೃಗಗಳೂ, ವನ್ಯಪಶುಗಳೂ, ಹಿಂಸ್ರಜಂತುಗಳೂ, ಎಲ್ಲರ ಹೃದಯದಲ್ಲಿ ಮೃತ್ಯು-ಭೀತಿಯನ್ನು ತುಂಬುವುವು. ಕಾಡಿನಲ್ಲಿ ವಾಸಿಸುವ ಜನರ ಜೀವನ ಸುಸೂತ್ರವಾದುದೇನೂ ಅಲ್ಲ. ಪ್ರತಿದಿನವೂ ಒಂದಿಲ್ಲೊಂದು ಬಗೆಯ ಕಾಡಿನ ಉಪದ್ರವವನ್ನು ಎದುರಿಸುತ್ತಲೇ ಬಾಳಬೇಕಾಗುವುದು.

ಕಾಡಾಡಿಗಳಾದ ಬೇಡರನ್ನು ಬಣ್ಣಿಸುತ್ತ ರಾಘವಾಂಕ ಕವಿಯು ಏನು ಹೇಳುವನು ನೋಡಿ:

ಮದಹಸ್ತಿಯಿರಿದ ಘಾಯಂಗಳ, ವರಾಹನೆ-
ತ್ತಿದ ಡೋರುಗಳ, ಮೃಗಾಧಿಪನುಗಿದು ಬಗಿದು ತೋ-
ಡಿದ ಬಾದಣದ, ಕರಡಿ ಕವುರಿ ಬತ್ತಿದ ತೋಳ
ಹುಲಿಹೊಯ್ದು ಜರಿದ ಹೆಗಲ ||
ಪದದಿ ಕೋಣಂ ಹೊಯಿದ ಹೋರ, ಭೇರುಂಡನೆರ-
ಗಿದ ಗಂಟುಗಳ, ಕಡನೆ ತುಳಿದ ಹಜ್ಜೆಗಳ ಚಿ-
ಹ್ನದ ಬೇಡನಾಯಕರು ನೆರೆದರು ಹರಿಶ್ಚಂದ್ರ-
ಭೂನಾಥನೋಲಗದೊಳು ||

ನಿವೇದಕ :

ಎಲ್ಲರೂ ಒಂದಿಲ್ಲೊಂದು ವನ್ಯಪ್ರಾಣಿಯ ಹಿಂಸೆಗೆ ಸಿಲುಕಿ ಗಾಯಗೊಂಡವರೇ! ಇಂತಹ ತೊಂದರೆಗಳ ಬೀಡಾದ ಕಾಡನ್ನು ನಾಡಿಗರು ಎಂದೂ ಬಯಸದಿರಬಹುದು; ಆದರೆ ನಮ್ಮ ನಾಡಿನ

* ತಾ. ೪-೧೦-೫೭ರಂದು ಬೆಂಗಳೂರು ಮತ್ತು ಧಾರವಾಡದ ಬಾನುಲಿಕಟ್ಟೆಗಳಿಂದ ಬಿತ್ತರಗೊಂಡುದು. ಸಂ.

ಪ್ರತಿಯೊಬ್ಬ ಮಹಾಕವಿಯೂ ಕಾಡಿನ ರುದ್ರರಮ್ಯತೆಯನ್ನು ಮನೋಹರವಾಗಿ ಬಣ್ಣಿಸಿರುವನು. ಮಹಾಕಾವ್ಯದಲ್ಲಿ ಬರುವ ಅಷ್ಟಾದಶ ವರ್ಣನೆಗಳಲ್ಲಿ ಕಾಡಿನ ವರ್ಣನೆಗೆ ಒಂದು ಪ್ರಮುಖವಾದ ಸ್ಥಾನವಿರುವುದು. ಈ ವರ್ಣನೆಗಳಲ್ಲಿ ಕಾಡಿನ ನಿಸರ್ಗಸೌಂದರ್ಯದ ಚಿತ್ರಣವಿರುವಂತೆ, ಕಾಡಿನಲ್ಲಿ ವಾಸಿಸುವ ಮೃಗ-ಪಶುಗಳ ರೌದ್ರ-ಭಯಾನಕ ಚಿತ್ರಗಳೂ ಇರುವುವು. ಇಂತಹ ಚಿತ್ರಗಳ ಕೆಲವು ಮಾದರಿಗಳನ್ನು ನಿಮಗಿಂದು ಪರಿಚಯ ಮಾಡಿಕೊಡಬೇಕೆಂದಿರುವೆನು. ಅದಕ್ಕಾಗಿ ನಿಮ್ಮನ್ನು ಈಗ ಕಾಡಿಗೆ ಕರೆದೊಯ್ಯುವೆನು. ನಡೆ ರಾಜಣ್ಣಾ!

(ಕಾಡನ್ನು ಸೂಚಿಸುವಂತಹ ವಿವಿಧಧ್ವನಿಗಳ ಸಮ್ಮಿಶ್ರ ಗಜಬಜಿ ಕೇಳಬೇಕು.)

ಇದೋ ಕಾಡು! ಓ, ಅದಾರು? ಇಬ್ಬರು ನಾಗರಿಕರು ನಿಂತುಕೊಂಡು, ಕಾಡಿನಲ್ಲಿ ಬೆಳೆದ ಮರ-ಗಿಡ-ಬಳ್ಳಿಗಳನ್ನು ನೋಡುತ್ತಿದ್ದಾರೆ. ಅವರ ಮುಖಲಕ್ಷಣವನ್ನು ನೋಡಿದರೆ, ಇಬ್ಬರೂ ನಮ್ಮ ನಾಡಿನ ಪ್ರಾಚೀನ ಮಹಾಕವಿಗಳಿರುವಂತೆ ತೋರುವುದು. ನಾವು ಇಲ್ಲಿಯೇ ನಿಂತು ಅವರ ಮಾತುಗಳನ್ನು ಕೇಳೋಣ.

(ಕಾಡಿನಲ್ಲಿ ನೇಮಿಚಂದ್ರಕವಿ, ಮಂಗರಸಕವಿ ನಿಂತಿರುವರು.)

ಮಂಗರಸ— ನೇಮಿಚಂದ್ರಕವಿಕುಂಜರಾ, ನೀನೀಗ ಈ ಕಾಡನ್ನು ಬಣ್ಣಿಸಬೇಕಲ್ಲವೆ? ಮೊದಲು ನಾವು ನೋಡಿದ ಕಾಡುಮರ-ಗಿಡಗಳ ಹೆಸರುಗಳನ್ನು ಪದ್ಯದಲ್ಲಿ ಹೆಣೆದು ಹೇಳು!

ನೇಮಿಚಂದ್ರ— ಅಹುದಯ್ಯಾ, ನೀನು ಹೇಳಿಕೇಳಿ ಮಂಗರಸ! ಗಿಡ-ಮರಗಳ ಮೇಲೆಯೇ ಅಲ್ಲವೆ ನಿನಗೆ ಹೆಚ್ಚಿನ ಮಮತೆ? (ನಗುತ್ತ) ಆಗಲಿ, ಕೇಳು ಹಾಗಾದರೆ ಹೇಳುತ್ತೇನೆ:

ಎಲವದ ಬೇಲ ಚೆನ್ನಗೆಯ ಹೊನ್ನೆಯ ಕಮ್ಮರದಾರಗೇರ ನೇ-
ರಿಲ ಸಿರಿತಾಳಿಯಿಂಗುಳದ ನಿಂಬದಶೋಕೆಯ ಗೋಣಿಯಾಲದೀ-
ಚಿಲ ಕರಿಬೇವಿನಂಬಟೆಯ ತಾಡಸಿಸಾಸಿನ ತುಂಬುರಿಕ್ಕೆ ಬೊ-
ಬ್ಬುಲಿಯರನೇರಿಲಂಕೊಲೆಯ ಸೆಳ್ಳ ತಮಾಳದ ಪಾರಿವಾಳದಿಂ-

ಮಂಗರಸ— ಏನು, ಇಷ್ಟೇ?

ನೇಮಿಚಂದ್ರ— ಹೆಸರಿಗೆ ತಕ್ಕ ಸ್ವಭಾವ ನಿನ್ನದು. ಸ್ವಲ್ಪ ತಾಳ್ಮೆಯಿಂದ ಕೇಳಿಕೊಳ್ಳಯ್ಯಾ!

ತದುಕಿನ ತಾಳ ತೆಂಗಿನ ತಮಾಲದ ತುಂಬುರ
ಚಿಲ್ಲ ಬೆಲ್ಲವ-
ತ್ತದ ಬಿಳಿಲತ್ತಿಯಿಪ್ಪೆಯ ಮರಂಗಳ ಕೊಂಬುಗ-
ಳಂಬರಂಬರಂ।
ಪುದಿದು ಪೊದಳ್ದು ಪಸುರ್ಪಡರೆ ಪರ್ವಿರೆ ಕಾರಿರು-
ಳೋಳಿ ಕೊಂಬುಗೊಂ-
ಡುದೆನೆ ಕರಂಗಿ ಕಳ್ತಲಿಸುತಿರ್ದುದು ಕಾನನ-
ಮೆತ್ತನೋಳ್ಪೊಡಂ ॥

ಮಂಗರಸ—ಭಲೆ, ನೀನು ಕವಿಕುಂಜರನೇ ಸರಿ. ನೀನೆಂದಂತೆ, ಕತ್ತಲೆಯ ರಾಶಿಗೇ ಕೊಂಬೆಗಳೊಡೆದಂತೆ ಇದೆ, ಈ ಕಗ್ಗಾಡು.

ನೇಮಿಚಂದ್ರ— ಮಂಗರಸಾ, ಇನ್ನು ನಿನ್ನ ಸರದಿ.

ಮಂಗರಸ—ಏನು? ನಾನೂ ಗಿಡಗಳನ್ನೇ ಹೆಸರಿಸಿ ಹಾಡಲೇ?

ನೇಮಿಚಂದ್ರ— ಬೇಡ ಬೇಡ! ಈ ಕಾಡಿನ ವೈಶಿಷ್ಟ್ಯವನ್ನು ಹೊಗಳು, ನೋಡೋಣ.

ಮಂಗರಸ— ಸರಿ, ಹಾಗಾದರೆ ಕೇಳು!

ಎರಲೆಯ ಬೀಡೆಕ್ಕಲನ ಕೊಟಾರಂ,
ಕರಡಿಯ ಹಟ್ಟಿ, ಕಡವೆಯ ಊರ್, ಚಮರಿಯ
ಹುರಮೆಂಟಡಿಯ ಹೊಳಲ್, ಕಾಟಿಯ ಕೊಟ್ಟಂ,
ಖಳ್ಗಿಯ ಪಳ್ಳಿ
ಅರಸುಮಿಗದ ಪಟ್ಟಣಮಾನೆಯ ಮಟ-
ಮುರಲುಣಿಗಳ ನೆಲೆವನೆಯೆನಲಿ ಬಂ-
ಧುರಮಾದುದು ಭೀಮಾರಣ್ಯಮಗಣ್ಯ-
ಮೃಗಾಳಿ ಶರಣ್ಯಂ ॥

ಮಂಗರಸ— ಸರಿ ಸರಿ. (ನಗುತ್ತ) ಮೂರನೆಯ ದಾರಿ ಮುರಾರಿಯದಲ್ಲ; ಮಂಗರಸನದು! ಯಾರೂ ಕೈಹಚ್ಚದ ವೃತ್ತವನ್ನು ಆರಿಸಿದ್ದೀಯೋ! ಹೇಳು ಹೇಳು, ಈ ಕಾಡಿನಲ್ಲಿರುವ ಪ್ರಾಣಿಗಳ ಹೆಸರುಗಳನ್ನು ಸೂಚಿಸುವ ಇನ್ನೊಂದು ಪದ್ಯ ಹೇಳು ಕೇಳುವ!

ಮಂಗರಸ— ಹನುಮನ ಮುಂದೆ ಹಾರುವ ಗುಬ್ಬಿಯಂತೆ! ನಿನ್ನ ಕೃತಿಸಾಮರ್ಥ್ಯದ ಮುಂದೆ ನನ್ನ ಕೃತಿಯು ಬೆಲೆಯೇನು? ಆದರೂ ನಿನ್ನ ಅಪ್ಪಣೆಯನ್ನು ಮನ್ನಿಸಿ, ಈ ಕಾಡಿನಲ್ಲಿರುವ ಪ್ರಾಣಿಗಳ ವರದಿಯನ್ನು ಒಪ್ಪಿಸುವೆ; ಕೇಳು:

ಕರಡಿ ಕಡವೆ ಕಾಡೆಮ್ಮೆ ಸೊಣಗ ಮೊಲ
ಮರೆ ಮೂಗುರಿ ಕೂರಂಗಿ ಅಳಿಲು ಬೆ-
ಕ್ಕರಲೆ ಕೊರವ ಮುಸು ಸಾರಗ ಸೀರುಡು
ಎಕ್ಕಲ ಕಪಿ ಪಂದಿ-
ನರಿ ಹುಲಿ ಉಡು ತರುಮಂಗಿ ಚಮರಿಮಿಗ
ಎರಲುಣಿ ಆನೆ ಅರಸುಮಿಗ ಎಂಟಡಿ
ಎರಡುತಲೆಯ ಪಕ್ಕಿಯಿನೊಪ್ಪಿದುದೀ
ದಾರುಣಮಪ್ಪಡವಿ. ॥

ನೇಮಿಚಂದ್ರ— ಭಾಪು ಭಾಪು! ಮಂಗರಾಜಾ! ನಿನ ರಚನೆ ನನ್ನನ್ನು ಮೆಚ್ಚಿಸಿತು. "ಅಪೇಕ್ಷಿತ ಪದಭಾಂಡಾರಿ" ಎಂದು ನಿನಗೆ ನಾನು ಬಿರುದನ್ನು ಕೊಡುತ್ತೇನೆ. ಇಲ್ಲಿ ನೋಡಿದೆಯಾ? ಇಲ್ಲಿಯ ಮರಮರಗಳ ಮೇಲೂ ಅದೆಷ್ಟು ಜಾತಿಯ ಬಳ್ಳಿಗಳು ಹಬ್ಬಿಕೊಂಡಿವೆ ನೋಡು!

ಕಡಸಿಗೆ ಕಾಗೆದೊಂಡೆ ಕಹಿದೊಂಡೆ ಕವುಂಗಿನ ಹಾಲೆ ಏಲೆದಾಂ-
ಗುಡಿಯುಗುರ್ವೇರಿ ಈಶ್ವರಿ ಸುಗಂಧಿ ಕುರುಂಟಿಗೆ ಮೊಲ್ಲೆ
ಬಿಂಬಮಾ-
ರುಡ ಮದದಾನೆ ಸುಚುರ್ಣಿಕೆ ಕಬ್ಬಿಳಿ ಹಾವುಸವುಂತೆ ಸೋರೆ ತ-
ಳ್ತುಡರ್ದುವು ಬಳ್ಳಿವಳ್ಳಿ ಬನದೊಳ್ ಸಲೆಕಳ್ತಲೆ-
ಯಿರ್ಕೆಯೆಂಬಿನಂ।

ಮಂಗರಸ— ಅಲ್ಲಿ ನೋಡು ಕವಿಕುಂಜರಾ, ಆ ಮರದ ಮೇಲೆ ಮುಸುವ ಹೇಗೆ ಕುಳಿತಿದೆ ನೋಡು!

ನೇಮಿಚಂದ್ರ— ನಾಮಸಾಮ್ಯ! ನಿನಗೆ ಅದರ ಮೇಲೆ ತುಂಬ ಪ್ರೀತಿಯಲ್ಲವೆ? ಅದನ್ನು ಬಣ್ಣಿಸುವ ಒಂದು ಪದ್ಯ ರಚಿಸು ನೋಡೋಣ.

ಮಂಗರಸ— ಇದೇನಪ್ಪಾ, ನನ್ನ ಪರೀಕ್ಷೆಯ ಪ್ರಸಂಗವೇ ಬಂದಿತಲ್ಲ! ವಾಣೀ, ವೀಣಾಪಾಣೀ, ಈಗ ನನಗೆ ಸ್ಫೂರ್ತಿಕೊಡು ಬ್ರಹ್ಮನ ರಾಣೀ! ನೇಮಿಚಂದ್ರಾ, ಕೇಳು ಹಾಗಾದರೆ!

ನವಶಾಖೆಯ ಕವಲೆಸೆವ ಕವಣೆಕೋಲ್
ತವೆಸೊಗಯಿಪ ಪಲ್ಲವ ನಿಕುರುಂಬಂ
ಕವಳಿಗೆಗೆದರ್ದ ಲಸತ್ ಪುಸ್ತಕಮೋದುವ
ಮರಿಗಿಳಿಯಳಿಯ—
ನಿವಹಂ ವಟುಸಂತತಿ ಯಾಗಲ್ಕೊಂ-
ದವನಿಜದುಪರಿಮದೊಳಗೆ ಕುಳಿತ ಮುಸು
ವಿವಿಧ ನಿಗಮಮೋದಿಪ ಗಡ್ಡದ ದೀಕ್ಷಿತ-
ನೆಂಬಂತಾಯ್ತು ||

ನೇಮಿಚಂದ್ರ— (ಗಟ್ಟಿಯಾಗಿ ನಗುತ್ತ) ಭಲೆ ಭಲೆ, ಮುಸುವನ್ನು—ವೇದವನ್ನು ಕಲಿಸುವ ಮುದಿ ದೀಕ್ಷಿತನಿಗೆ ಹೋಲಿಸಿದೆಯಾ? ನಿನ್ನ ಮಂಗತನಕ್ಕೆ ಮತ್ತೆ ಮತ್ತೆ ನಮಸ್ಕಾರ.

(ಮತ್ತೊಂದು ಕಡೆಯಿಂದ ಒಂದು ಕಪಿವರ್ಣನೆಯ ಪದ್ಯ ಗೇಯವಾಗಿ ಕೇಳಿಸುವುದು.)

ಪರಿದಲೆಯಿಟ್ಟು ಪಲ್ಗಿರಿದು ಹರ್ರೆನುತುರ್ಬುತೆ
ಪುರ್ಬನೇರಿಸು—
ತ್ತುರುಗಿಸಿ ನೋಡಿ ದಾಂಟಲನುಗೆಯ್ಯುತೆ ಕೂಗುತೆ
ಝುಂಕಿಸುತ್ತೆ ಬಾಯ್—
ದೆರೆದೊಲೆಯುತ್ತೆ ಕೆಯ್ನೆಗಪಿ ಜಾಗ್ರಿಸಿ ಕುರ್ಗುತು—
ಮೇಡಿಸುತ್ತೆ ತಾಂ
ನೆರೆ ನಗಿಸಿತ್ತು ತಾಪಸಕುಮಾರರನಲ್ಲಿಯದೊಂದು
ಮರ್ಕಟಂ ||

ಮಂಗರಸ—ಇದಾರದಿದು—ಸಹಜ ಮನೋಹರವಾದ ಕಪಿ-ವರ್ಣನೆ?

ನೇಮಿಚಂದ್ರ— ಯಾಕೆ? ಧ್ವನಿಯು ಯಾರದೆಂಬುದು ಗೊತ್ತಾಗಲಿಲ್ಲವೇನು? ರಗಳೆಯ ರಾಜ ಹರಿಹರತಾತನದು! ಮರ್ಕಟದ ಒಂದೊಂದು ಚೇಷ್ಟೆಯನ್ನೂ ಹೇಗೆ ಕಣ್ಣಿಟ್ಟು ನೋಡಿ ಬಣ್ಣಿಸುತ್ತಿದ್ದಾನೆ ನೋಡು! ಸರಿ, ನಾವೀಗ ನಡುಗಾಡಿಗೆ ಹೋಗೋಣವಲ್ಲವೆ?

ಮಂಗರಾಜ— ನಡೆ ನಡೆ!

× × ×

ನಿವೇದಕ:

ನಾವೂ ನಡುಗಾಡಿಗೆ ಬಂದಿದ್ದೇವೆ. ಅಬ್ಬಾ, ಮುಗಿಲನ್ನು ಮುಟ್ಟುವ ಮರಗಳ ನಡುವೆ ಕಂದರ-ಕೊಳ್ಳಗಳೆಷ್ಟು ಹುದುಗಿಕೊಂಡಿವೆ! (ಆನೆ ಘೀಳಿಡುವ ಸಪ್ಪುಳ ಕೇಳುವುದು). ಓ, ಇದೀಗ ಆನೆಗಳ ಕಾಡು! ಅಲ್ಲಿ ನೋಡಿ, ಆನೆಯ ಮರಿ ಹೇಗೆ ಚೆಲ್ಲಾಟವಾಡುತ್ತಿದೆ!

(ದೂರದಿಂದ ಧ್ವನಿಯು ಕೇಳುವುದು.)

"ಪರಿಪರಿದು ನಲಿದು ಮೊಲೆಗಳ್
ತೊರೆದಿರೆ ಕಣಿಯುಂಡು ಪಾಲ್ಗಳಂ ಪುಷ್ಕರದಿಂ-
ಬರೆತೆಗೆದು ಮುರಿದು ನೋಡುವ
ಕರಿಣಿಯ ಮೆಯ್ಯೊಳ್ ತುಳುಂಕಿತೊಂದಿಭಕಳಭಂ"

ಓ, ನಾವು ಅಲ್ಲಿ ಕಂಡ ನೇಮಿಚಂದ್ರಕವಿಯೇ ಇಲ್ಲಿಗೆ ಬಂದಿರುವನೆಂದು ತೋರುವುದು. ನಿಶ್ಚಯವಾಗಿಯೂ ಅವನದೇ ಧ್ವನಿ! ನೋಡಿ, ಆ ಮರಿಯಾನೆ ತಾಯ ಮೊಲೆವಾಲನ್ನು ಪುಷ್ಕರದಲ್ಲಿ ಸಂಗ್ರಹಿಸಿ, ತನ್ನ ಕಡೆಗೆ ನೋಡುವ ತಾಯಾನೆಯ ಮೈಮೇಲೆ ಹೇಗೆ ಎರಚಿತು! ಇದನ್ನೇ ನಮ್ಮ ಕವಿ ಎಷ್ಟು ಸೊಗಸಾಗಿ ಕಂಡು ಬಣ್ಣಿಸಿದ

(ಮತ್ತೊಂದು ಕಡೆಯಿಂದ ಧ್ವನಿಯು ಕೇಳಬರುವುದು.)

"ಮೊಲೆಗಳನುಂಬ, ಪೆಪ್ಪಳಿಸಿ ನೋಡುವ, ತಾಯ್ಪಿಡಿ
ಮೆಲ್ವ ಸಲ್ಲಕೀ-
ದಲಮನಲಂಪಿನಿಂ ತೆಗೆದು ಸೂಸುವ ಸುಂಡಲನೆತ್ತಿ
ಸುತ್ತನಾಲ್-
ಗೆಲದೊಳಡುರ್ತು ಪಾಯ್ದು ಪರಿದಾಡುವನೇಕ
ರಸಾನುಭಾವಮ-
ಗ್ಗಲಿಸಲದೊಂದು ಪಲ್ಲಮರಿ ಲಕ್ಷ್ಮಿಯಚೆಲ್ಲಮನೇ
ನೊಡರ್ಚಿತೋ!"

ಓ, ಇದು ಇನ್ನೊಂದು ಆನೆಮರಿಯ ವರ್ಣನೆ. ಈ ಮಧುರ ಪದಬಂಧ ಮಧುರಕವಿಯದೇ ಹೊರತು ಬೇರೆಯವರದಲ್ಲ. ನಮ್ಮ ಕನ್ನಡ ಕವಿಗಳಿಗೆ ಆನೆಗಳ ಮೇಲೆ ತುಂಬ ಪ್ರೀತಿ. ಅವುಗಳನ್ನು ಎಷ್ಟು ಬಣ್ಣಿಸಿದರೂ ತೃಪ್ತಿಯಿಲ್ಲ. ಕವಿ ನಾಗಚಂದ್ರನು ಮಾಡಿದ ಮದಗಜದ ವರ್ಣನೆಯಂತೂ ಭೀಷಣ ರಮಣೀಯವಾಗಿದೆ:

"ಸೊವಡಿಂಗೇವಯ್ಸಿ, ಪುಲ್ವಟ್ಟೆಯ ತಿವಳಿಯನಾರಯ್ದು,
ಘರ್ಮದ್ರವಂ ಮೆಯ್
ನವಿರುಂ ಮೆಯ್ವೆರ್ಚೆ, ಕಣ್ಬೇಡುರಿಯನುಗುಳೆ, ಕಣ್ಮುಟ್ಟೆನೋಳ್
ಕಂಡು ಕಾಯ್ಪಿಂ
ಜವದಿಂ ಬೆಂಕೊಂಡು, ಕೋಡೇರಿನ ಮಸಕಮುಗುರ್ವಾಗೆ
ಕಾಡಾನೆವಿಂಡಂ
ತವೆ ಕೊಂದುಂ ತನ್ನ ಕೋಪಂ ತವದಿರೆ, ಮರವಾಯ್ದತ್ತು
ಮತ್ತದ್ವಿಪೇಂದ್ರಂ"

(ಸಿಂಹಗಳ ಗರ್ಜನೆ ಕೇಳಿಸುತ್ತಿದೆ)

ಅಲ್ಲಿ ನೋಡಿರಿ, ಸಿಂಹಗರ್ಜನೆಯನ್ನು ಕೇಳಿದ ಮದದಾನೆ ಹೇಗೆ ಕಕ್ಕಾಬಿಕ್ಕಿಯಾಗಿ ಓಡುತ್ತಲಿದೆ. ಹೀಗೆ ಓಡುವ ಆನೆಯನ್ನೇ ನಮ್ಮ ನಾಗಚಂದ್ರಕವಿ ಹೇಗೆ ಬಣ್ಣಿಸಿದ್ದಾನೆ; ನಿನಗೆ ಗೊತ್ತಿದೆಯಲ್ಲವೆ ರಾಜಣ್ಣಾ ? ಹೇಳು ಅದನ್ನ.

ರಾಜಣ್ಣ—ಆಗಲಿ, ಕೇಳು.

ಪರಿಮೂತ್ರಂ, ಛಿನ್ನಲಂಡಂ, ಸುರಿವ ಮದಜಳಂ
ಮೆಯ್ಯೊಳಿಲ್ಲಾಡೆ ಭೀತಾ-
ತುರಚಿತ್ತಂ ಸುತ್ತಲುಂ ಪೆರ್ಚಳಿಸೆ ನಯನಮುತ್-
ಕಂಪಿತಂ ಕುಂಚಿತಾಂಗಂ ।
ಪರಿದೇಳಾಕುಂಜಮಂ ಪೊಕ್ಕೆವೆಮಿಡುಕದೆ ನಿಂದಿತ್ತು
ಮತ್ತೊಂದಿಭಂ ಸಾ-
ರ್ತರೆ ಕರ್ಣಾಭ್ಯರ್ಣಮಂ ವನ್ಯಮೃಗವಿಳಯ-
ನಿಷ್ಪಾದಕಂ ಸಿಂಹನಾದಂ ।

ನಿವೇದಕ :

ಬೆಟ್ಟದಂತಹ ಮದದಾನೆಯೂ ಪುಟ್ಟಸಿಂಹನಿಗೆ ಹೆದರಿ ಬಾಯಿ ಬಿಡುವುದು. ಇಲ್ಲಿ ನೋಡಿರಿ, ಆನೆಯ ಬೇಟೆಗಾಗಿ ಸಿಂಹ ಹೇಗೆ ಸಾಗಿಬರುತ್ತಲಿದೆ! ನಾವೀಗ ಇಲ್ಲಿ ನಿಲ್ಲುವುದು ಬೇಡ. ದೂರಹೋಗಿ ಮರೆಯಲ್ಲಿ ನಿಲ್ಲೋಣ.

(ನೇಮಿಚಂದ್ರನೊಡನೆ ಬೇರೊಬ್ಬ ಕವಿ ಇರುವನು.)

ನೇಮಿಚಂದ್ರ—ನೋಡು ಕವಿಜನ್ನಿಗ! ಪಾಪ, ಮಂಗರಸನಿಗೆ ಕಾಲಲ್ಲಿ ಕಾಡಿನ ಮುಳ್ಳು ಮುರಿದು, ಮುಂದೆ ಹೆಜ್ಜೆಯಿಡಲಿಕ್ಕೇ ಬಾರದಾಯಿತು. ಈ ಸಿಂಹಗಳ ಬೀಡಿನಲ್ಲಿ ಒಬ್ಬನೇ ಹೇಗೆ ಹೋಗಬೇಕೆಂಬ ಯೋಚನೆಯಲ್ಲಿರುವಾಗ ನೀನು ಜೊತೆಗೂಡಿದೆ. ಒಳ್ಳೆಯದಾಯಿತು.

ಜನ್ನಿಗ— ಅಲ್ಲಿ ನೋಡು, ಆ ಸಿಂಹ ಹೇಗೆ ಬರುತ್ತಿದೆ! ದುರ್ಗಸಿಂಹಕವಿ ಇಂತಹ ಸಿಂಹೇಂದ್ರನನ್ನೇ ನೋಡಿ, ಪಂಚತಂತ್ರದ ಪಿಂಗಳಕನನ್ನು ರೂಪಿಸಿರಬೇಕು.

ನೇಮಿಚಂದ್ರ—ಹೇಗೆ ರೂಪಿಸಿದ್ದಾನೆ ಆ ಮಕ್ಕಳ ಕತೆಗಾರ ?

ಜನ್ನಿಗ - ಯಾವಾಗಲೂ ನಿನಗೆ ಬಿಂಕ ಬಹಳವಪ್ಪಾ! ದುರ್ಗಸಿಂಹ ಮಕ್ಕಳ ಕತೆಗಾರನಾದರೂ, ಸಿಂಹನನ್ನು ಹೇಗೆ ಎರಕ ಹೊಯ್ದಿದ್ದಾನೆ ನೋಡು, ತನ್ನ ಮಾತಿನಲ್ಲಿ!

ಭಂಗುರಭೀಷಣಭ್ರುಕುಟಿದಂಷ್ಟ್ರನುದಗ್ರದವಾನಳ ಪ್ರಭಾ- !
ಭಂಗಪಿಶಂಗಕೇಸರಸಟಾವೃತರೌದ್ರಮುಖಂ ಮದಾಂಧಮಾ-
ತಂಗಘಟಾವಿಘಟ್ಟನಪಟಿಷ್ಠಕಠೋರನಖಾಳಿ, ನಾಮದಿಂ
ಪಿಂಗಳಕಂ ಮೃಗೇಂದ್ರನೆಸೆದಿರ್ಪುದತರ್ಕ್ಯಪರಾಕ್ರಮಕ್ರಮಂ ।

ನೇಮಿಚಂದ್ರ— ಅಬ್ಬಾ, ತುಂಬ ಸತ್ತ್ವ ಇದೆಯಲ್ಲ ಅಜ್ಜಯ್ಯನ ಮಾತಿನಲ್ಲಿ! ಅವೇನು, ಮಕ್ಕಳ ಕಥೆಗಳೆಂದು ನಾನು ಅವನ ಕೃತಿಯನ್ನೇ ನೋಡಿಲ್ಲ! ಓಹೋ, ಜನ್ನಿಗಾ, ನೋಡಲ್ಲಿ! ಸಿಂಹವೊಂದು ಮದ್ದಾನೆಯ ತಲೆಯಲ್ಲಿ ಹೇಗೆ ಕುಳಿತಿದೆ:

ಕೆದರಿದ ಕೇಸರಂ ಕುಸಿದು ಪಿಂದೊಗೆದೊಡ್ಡಿದ
ಕಂದವೇರಿ ಕ-
ಟ್ಟಿದ ಬಸಿರೆತ್ತಿದೇಕ ಚರಣಂ ತೆರೆದಾನನವಾಳ
ಸುತ್ತಿಸು-
ತ್ತಿದ ಕುಡಿವಾಲಮೊಪ್ಪೆ, ಕಿವಿಗಳ್ ಕಿರಿಪುತ್ತಿರೆ-
ಪಾಯ್ದು ದೇವಕೂ-
ಟದ ಕರುವಿಟ್ಟ ಕೇಸರಿವೊಲಿರ್ದುದು ಕೇಸರಿ ಕುಂಭಿ-
ಕುಂಭದೊಳ್ ॥

ಜನ್ನಿಗ - ಏನು ? ದೇವರ ಪ್ರಭಾವಲಯದ ಸಿಂಹಮುಖದಂತೆ ಕಾಣುವುದೆಂದೆಯಾ ಆ ಸಿಂಹ ? ಸುಂದರವಾದ ಉಪಮಾನ! ನಿನ್ನ ಕವಿತಾಪ್ರೌಢಿಮೆಯನ್ನು ನಾನು ಮೆಚ್ಚುತ್ತೇನೆ. ಆದರೆ ನಿನ್ನ ಅತ್ಯಹಂಕಾರ ಮಾತ್ರ ನನಗೆ ರುಚಿಸುವುದಿಲ್ಲ. ನೇಮಣ್ಣಾ, ಆ ಬೆಟ್ಟದ ಕೋಡಿನಲ್ಲಿ ಕಾಣುವ ಅದ್ಭುತವನ್ನು ನೋಡು; ಹೆಣ್ಣು ಸಿಂಹವೊಂದು ಹೆಂಗೆಯ ಬೇನೆಯಿಂದ ಹೇಗೆ ಬಳಲುತ್ತಿದೆ, ನೋಡು, ನೋಡು.

ಕಡೆವಾಯುಂ ಬಿರ್ಚೆ, ಬೆನ್ನುಂ ಕುಸಿದು, ನೆಗಪಿವಾಲಾಗ್ರಮಂ,
ಬೇನೆಯಿಂದೂ-
ಳಿಡುತುಂ ಶೈಲಾಗ್ರದೊಳ್ ಕುಕ್ಕುರಿಸಿ ಮುರುಕದಿಂದೀಂಬ
ಸಿಂಹೀಕಿಶೋರಂ ! ॥
ನಡುಸೂಲೊಳ್ ಸಿಲ್ಕಿ ಕಣ್ಣಂ ತೆರೆದಿಭಪತಿಯಂ
ತಾರಲೊಳ್ ಕಂಡು ಕಾಯ್ಪಿಂ
ನಿಡುವಾಯ್ದಾ ತಾಯ್ಗೆ ದುಃಖಪ್ರಸವಸಮಯದೊಳ್
ತಂದುದಂದೊಂದಲಂಪಂ ॥

ನೇಮಿಚಂದ್ರ— ಸರಿ! ಮಕ್ಕಳು ಹುಟ್ಟಿದರೆ ಇಂತಹರು ಹುಟ್ಟಬೇಕು.

(ಭಯಂಕರವಾದ ಸಿಂಹಗರ್ಜನೆ)

ಜನ್ನಿಗಾ, ಸದ್ಯ ನಾವು ಇಲ್ಲಿಂದ ಕಾಲನ್ನು ತೆಗೆಯುವುದೇ ಒಳ್ಳೆಯದು. ನಮ್ಮಲ್ಲಿರುವುದು ಕೇವಲ ಶಬ್ದಾಯುಧ; ಆದರಿಂದ ನಾವು ಮಾನವರನ್ನೇನೋ ಕೊಲ್ಲಬಹುದು; ಈ ಮೃಗರಾಜರನ್ನು ಅವು ಏನನೂ ಮಾಡವು. ಅದೇಕೋ ತುಂಬ ಕೆರಳಿದಂತಿವೆ, ಈ ಕೇಸರಿಗಳು ನಡೆನಡೆ!

× × × ×

ನಿವೇದಕ :

ಅಬ್ಬಾ, ಆ ಸಿಂಹದ ಸಮೂಹದಿಂದ ಪಾರಾಗಿ ಬಂದೆವು ಇಲ್ಲಿ ಸ್ವಲ್ಪ ಮರಗಳು ವಿರಳವಾಗಿವೆ. ಆದುದರಿಂದಲೇ ಇಲ್ಲಿ ಕಡವೆ, ಸಾರಗ, ಎರಳೆ, ಹುಲ್ಲೆ ಇವೆಲ್ಲ ನಿರ್ಭೀತಿಯಿಂದ ತಿರುಗಾಡುತ್ತಲಿವೆ. ಅಲ್ಲಿ ನೋಡು ರಾಜಣ್ಣಾ, ಆ ಎರಳೆ ಅದೇಕೋ ಗಾಬರಿಗೊಂಡು ಓಡುತ್ತಲಿದೆ.

ಮಿರುಗುವ ತನು ಬೆದರುವ ಕಣ್
ಪರಿವ ಮನಂ ನೆಟ್ಟ ಕಿವಿಯುಡುಗುವ ಮುಯ್ಯಿಂ
ಸರಳಂ ಮಾರುತಿ ಹರಿಣಂ
ಸರಳಿಸಿತೆಯ್ದಾರನೇಳನೆಂಟೊಂಬತ್ತುಂ ||

ಹಾಗೆಯೆ ಬಿಟ್ಟಬಾಣ ನೆಗೆದಂತೆ ನೆಗೆಯುತ್ತಲಿದೆ. ಓ! ಇದೇನು! ಹಿಂಡಿಗೆ ಹಿಂಡೇ ಗಾಬರಿಗೊಂಡು ಓಡಾಡುತ್ತಲಿದೆ. (ಹುಲಿಯ ಗುಡುಗು ಕೇಳಿಸುವುದು.)

ರಾಜಣ್ಣ— ಅಣ್ಣಯ್ಯಾ, ಅಕೋ ಆ ಪೊದೆಯಿಂದ ಹೊರಟು ಹೊರಗೆ ಬರುವ ಹುಲಿಯನ್ನು ನೋಡು! ಕವಿ ಸೋಮರಾಜನ ಪದ್ಯ ನನಗೆ ನೆನಪಾಗುತ್ತಲಿದೆ:

ಕೆಂಪಿಡಿದಕ್ಷಿ, ರೌದ್ರವದನಂ, ಮಿಗೆಪೊಣ್ಮುವ ನಿಷ್ಠುರಸ್ವನಂ,
ಕಂಪಿಪ ಮೀಸೆ, ನೀಡಿ ನಿಮಿರ್ದಿಕ್ಕುವ ಕಾಲ್ಮಹಿಯಂ
ಮಹೋಗ್ರದಿಂ |
ದಂ ಪೊಡೆವಗ್ರವಾಲಮಿರದೇಳ್ವ ಕೊಡಂಕೆಗಳಿಂ
ನಿಕುಂಜಮಂ
ತಾಂ ಪೊರಮಟ್ಟುದೊಂದು ಪುಲಿ ಗರ್ಜಿಸುತುಂ ಬಿರಿವಂತು
ದಿಕ್ಚಯಂ ||

ನಿವೇದಕ:

ಬೇಡವಪ್ಪಾ ಈ ಕಾಡಿನ ಕೆಳೆತನ! ಸಿಂಹದ **ಪಂಜರದಿಂದ ಪಾರಾಗಿ ಈಗ ಹುಲಿಯ ಬಾಯಿಗೆ** ಬೀಳುವ ಸಂದರ್ಭ **ಬಂದಿತೋ** ಏನೋ! ಅಯ್ಯೋ ಪಾಪ! ಎಂತಹ ಚೆಲುವಾದ ಚಿಗರಿ! ಹುಲಿಯ ಬಾಯಿಗೆ ಆಹುತಿಯಾಯಿತು ನೋಡು!

ಜಡಿಯುತ್ತುಂ ಬಾಲಮಂ ಕಣ್ಣುರಿಯನುಗುಳೆ,
ಜಿಹ್ವಾನಲಂ ಪೆರ್ಚೆ, ಬಾಯ್ವಿ-
ಟ್ಟೊಡೆವನ್ನಂ ಗರ್ಜಿಸುತ್ತುಂ, ಪವನಜವದೆ ಮೇಲ್ವಾಯ್ದು,
ಪೊಯ್ವುತ್ತು ಕೆಯ್ಯೇ-
ರಿಡೆಯಿಂ ಬಾಯೇರ ಬಾಯಿಂದೊಡನೆ ರುಧಿರಮುಂ
ಖಂಡಮುಂ ಸೂಸುವನ್ನಂ
ಸಿಡಿಲೆಂಬಾಶಂಕೆಯಂ ಪೆರ್ಬುಲಿ ಪಡೆದು ಮೃಗೀ-
ರಕ್ತಸೇವಾನುರಕ್ತಂ ||

ರಾಜಣ್ಣ ಪಾಪ, ಈ ಹರಿಣಗಳ ಹಣೆಯಲ್ಲಿ ಬ್ರಹ್ಮ ಅಕಾಲ-ಮರಣವನ್ನೇ ಬರೆದಿಂಬೇಕು. ಬೇಟೆಗಾರರ ಬಾಣಗಳಿಗೆ ಬಲಿಯಾಗಬೇಕು; ಇಲ್ಲವೆ ಬೇಟೆಯ ನಾಯಿಗಳ ಬಾಯಿಗೆ ತುತ್ತಾಗಬೇಕು. ಹುಲಿ-ಸಿಂಹ ಚಿರ್ಚ-ಕಿರುಬಗಳಿಗಂತೂ ಇವು ನಿತ್ಯದ ಆಹಾರ. ಇಂತಹ ಹತದೃವಿಗಳ ಚೆಲುವನ್ನು ನಮ್ಮ ಕವಿಗಳು ಬಣ್ಣಿಸಿಯೇ ಬಣ್ಣಿಸುವರು. ಈ ಚೆಲುವಿನ ನೆಲೆಯ ಜೀವನನಶ್ವ-ರತೆಯ ಕಡೆಗೆ ಅವರು ತಮ್ಮ ಕವಿದೃಷ್ಟಿಯನ್ನು ಏಕೆ ಹೊರಳಿಸಿಲ್ಲವೋ ಏನೋ! ಈ ಸಾಧುಸೌಂದರ್ಯದ ಸಂಹಾರದರ್ಶನ ಸಾಕಾಯಿತು. ಬೇರೆ ಕಡೆಗೆ ಹೋಗೋಣ ನಡೆ

× × ×

ನಿವೇದಕ:

ರಾಜಣ್ಣಾ, ಇದು ಎಕ್ಕಲಕೋಟಾರ—ಎಂದರೆ ಕಾಡುಹಂದಿಗಳ ನೆಲೆವೀಡಿದು. ನಾಡಿನ ಕಬ್ಬಿನ ತೋಟಗಳನ್ನು ಹಾಳುಗೆಡಹುವುವು. ಇಲ್ಲಿಯ ಹಂದಿಗಳ್ಗೆ! ಮೂಕದಾನವನ ಸಂತಾನಕ್ಕೆ ಸೇರಿದ ಮಹಾ ಸತ್ತ್ವಗಳಿವು. ಅದೊ, ಅವರು ಬರುತ್ತಿದ್ದಾರೆ ನೋಡು. ನಾವು ಈ ಮೊದಲು ಕಂಡ ಕವಿಗಳೇ ಅವರು! ಸರಿ, ಅವರೀಗ ಹಂದಿಗಳನ್ನು ಹೇಗೆ ಹೊಗಳುವರೊ- ಮರೆಯಲಿದ್ದು ಕೇಳೋಣ.

(ಮಂಗರಸ, ಜನ್ನಿಗ, ನೇಮಿಚಂದ್ರ, ಮೂವರೂ ಬರುವರು.)

ಮಂಗರಸ— ನೀನು ನನ್ನನ್ನು ಬಿಟ್ಟು ಹೋದೆಯಲ್ಲ ನೇಮಿ-ಚಂದ್ರ! ಕಾಡಿನ ಗೊಲ್ಲನೊಬ್ಬ ಬಂದು, ನನ್ನ ಪಾಡನ್ನು ನೋಡಿದ; ಕೂಡಲೇ ಯಾವುದೋ ಒಂದು ಔಷಧಿಯ ಸೊಪ್ಪನ್ನು ತಂದು, ಮುಳ್ಳು ತುಳಿದ ಗಾಯಕ್ಕೆ ತಿಕ್ಕಿದ. ನೋವು ಮಿಂಚಿನಂತೆ ಪಾಯ-ವಾಯಿತು. ಬೇಕಾದ ಹಾಗೆ ಓಡಾಡಲು ಸಿದ್ಧನಾದೆ. ಈ ಕಾಡು ಜನರ ಔಷಧಿಗಳು ಆಶ್ಚರ್ಯಕರವಾಗಿವೆ.

ನೇಮಿಚಂದ್ರ— ಅಹುದು ಮತ್ತೆ; ಅವರಿಗೆ ಪ್ರತಿನಿತ್ಯದ ಆವಶ್ಯಕ ವಸ್ತುಗಳವು. ಪ್ರತಿದಿನವೂ ಒಂದಿಲ್ಲೊಂದು ರೀತಿಯಿಂದ ಅವರು ರಕ್ತದ ಮುಖವನ್ನು ಕಂಡೇಕಾಣುವರು. ಓ, ಅದು ನೋಡು ಮಂಗರಸ, ಎಕ್ಕಲವಂದಿ! ವರಾಹದೇವ!!

ನಡುವಿಂ ನಾಲ್ವಡಿ ಕೊರ್ವ್ವಿವೆತ್ತ ಕೊರಲೊಳ್
ಕರ್ಬೊನ್ನ ಬಲ್ಸಾಜಿಗಳ್
ನಡೆ ಬೊಟ್ಟಿಟ್ಟವೊಲುರ್ಚೆ ರೋಮನಿಕರಂ
ಕಂಕಾಳಮಂ ರಕ್ಷಿಸಲ್
ಕಡೆವಾಯೊಳ್ ಕುಡಿದೋರ್ಪಿನಂ ಮಡಗಿದೋಲ್
ದಂಷ್ಟ್ರಾಂಕುರಂ ತೋರೆ ಕಣ್
ಕಿರಿಯಂ ಸಾಲಿಡೆ ಹಂದಿ ಹಿಂಡೊಡೆದು ಗಂಡಂ
ಸಾರಿ ಪೋಯ್ತುಕ್ಕಲಂ ||

ಮಂಗರಸ—ಏನು ಕವಿಜನ್ನಿಗ! ಎತ್ತ ನೋಡುತ್ತಿದ್ದೀಯೆ? ಕವಿಕುಂಜರ ಬಣ್ಣಿಸಿದ ಹಂದಿಯನ್ನು ನೋಡಲಿಲ್ಲವೆ?

ಜನ್ನಿಗ:— ಅಲ್ಲಿ ನೋಡು ಮಂಗರಸಾ; ಒಂದು ಭಯಂಕರವಾದ ಕಾಡುಹಂದಿ ಇತ್ತ ಕಡೆಗೇ ಬರುತ್ತಲಿದೆ:

ಮಿರುಗುವ ದಾಡೆಯಿಂದಣೆದು ಪೆರ್ಮರಿಯಂ
ಕರದಿಂದವೆತ್ತುತುಂ
ತುರುತುರು ತಿಂಬ ಕಂದರಮನೊತ್ತರಗೊಂಡು
ಮಹಾಮಹೀಜದೊಳ್
ತರತರನಾಗಿ ಮಾರೊರಸುತುಂ ಮಲೆಯುತ್ತೊಲೆ-
ಯುತ್ತಮಲ್ಲಿ ಕೈ-
ಪರಿವ ಗಜೇಂದ್ರನಂತೆ ಬರುತಿರ್ಪುದು
ಭೀಕರನೊಂದು ಸೂಕರಂ ||

ಜನ್ನಿಗ:— ನಿಜವಾಗಿಯೂ ಸೊಂಡೆಯಿಲ್ಲದ ಮದಗಜದಂತೆ ಸಾಗಿಬರುತ್ತಿದೆ ನೋಡು! ನನಗೆ ಭೀತಿ! ನಾವೀಗ ಎಲ್ಲಿ ಅಡಗಿಕೊಳ್ಳೋಣ?

(ಬೇಟೆಗಾರರ ತಮ್ಮಟೆಗಳ ಶಬ್ದ, ಕೂಗು, ಗಲಾಟೆ, ನಾಯಿಗಳ ಬೊಗಳು ಕೇಳಿಸುವುದು.)

ನಿವೇದಕ:

ಓಹೋ, ಬೇಟೆಗಾರರ ಪಡೆಬಂದಿದೆ, ನೋಡಿದೆಯಾ ರಾಜಾ, ಈ ಕಾಡು ಬೇಡರನ್ನು?

ತಪ್ಪತಪ್ಪಲೊಳಲ್ಲಿಗಲ್ಲಿ ಮುಂಜುಗಳೆಸೆವ
ಕಪ್ಪಕಪ್ಪನೆಯ ಗಿರಿಗಳ ಪರ್ಬುಗೆಗಳಂತೆ
ಬಪ್ಪಬಪ್ಪೆಳನಾಯ್ಗಳಂ ಹಾಸೊಳಾಂತು
ಬಂದುದು ಶಬರಸೇನೆಯಲ್ಲಿ!

ರಾಜಣ್ಣ:— ಅಬ್ಬಾ ಅವರ ನಾಯಿಗಳು ಹೇಗಿವೆ ನೋಡು!

ಉಬ್ಬಿದುರದೇರುದೆಗೆದೊಡಲ ಬಾಗಿದ ಬೆನ್ನ-
ಹಬ್ಬುಗೆಯ ಪಚ್ಚಳದ ಸೆಳೆದ ಬಾಲದ ಕೊನೆಯ |
ಕೊಬ್ಬಿದ ಕೊರಳ ಸಣ್ಣ ಜಂಘೆಗಳ ಕೊಂಕುಗುರ
ಮಿಗಿಲಿಯ ಕಿಡಿಗಣ್ಗಳ,
ಹೆಬ್ಬಲ್ಲ ಬಿಡುವಾಯ ಜೋಲ್ವ ಕೆನ್ನಾಲಗೆಯ
ಗಬ್ಬಿನಾಯ್ಗಳ ಹಾಸನುಗಿದುಬಿಡೆ ಸಂದಿಗಳ-
ನಬ್ಬರಿಸಿ ತುಡುಕಿದುವು ಕೇಸರಿಗಡರ್ದು
ಮೇಲ್ವಾಯ್ದು ಪುಲಿಯಂಕೊಂದುವು|

[ಬೇಟೆಗಾರರ ಗದ್ದಲ.]

ಜನ್ನಿಗ:—ಕವಿಕುಂಜರ, ವರಾಹ ತೀರ ಸಮೀಪಕ್ಕೇ ಬಂದಿತು! ನಾವೀಗ ಎಲ್ಲಿಗೆ ಹೋಗೋಣ? ಏನು ಮಾಡೋಣ?

[ಬಾಣದ ಸುಂಯ್ ಸಪ್ಪಳ; ಹಂದಿಯು ಅರಚುವುದು.]

ನೇಮಿಚಂದ್ರ— ಜನ್ನಿಗ, ಗಂಡಾಂತರ ಪಾರಾಗಿ ತೊಲಗಿತು. ಯಾವುದೋ ಬೇಟೆಗಾರನ ಬಾಣ—ಹಂದಿಯ ಮೈಯಲ್ಲಿ ನೆಟ್ಟು, ಮುಖದಿಂದ ಪಾರಾಗಿ ಹೋಯಿತು. ಅದು ನೋಡು, ಹಂದಿ ಗಾಯಗೊಂಡು ಹೇಗೆ ಬಿದ್ದು ಒದ್ದಾಡುತ್ತಲಿದೆ!

(ಹಂದಿಯ ಮರಣಸಂಕಟದ ಅರಚಾಟ)

ಜನ್ನಿಗ— (ಸಮಾಧಾನ ಸ್ವರದಲ್ಲಿ) ಅಪ್ಪಾ! ಪೀಡೆ ತೊಲಗಿತು. ಆ ಬಾಣ ಬಿಟ್ಟ ಬೇಟೆಗಾರ ಹಂದಿಯ ಬಳಿ ಓಡಿಬರುತ್ತಿದ್ದಾನೆ ನೋಡು! ಮಂಗರಸ, ಎಂತಹ ಅದ್ಭುತವಾದ ನೋಟವದು!

ಮಂಗರಸ— (ನಗುತ್ತ) ಆ ಬಿದ್ದುಕೊಂಡು ಬಳಲುತ್ತಿರುವ ಎಕ್ಕಲ, ನನಗೆ ಕಮ್ಮಾರನ ತಿದಿಯಂತೆ ಕಾಣುತ್ತಿದೆ. ಅಹುದೋ ಅಲ್ಲವೋ ನೋಡಿರಿ:

ಭರದಿಂ ಬಿಸುನೆತ್ತರು ಸುರಿವಾನನ
ಉರಿಯನುಗುಳ್ವೊಲೆವಾಗೆನಲಳ್ಕೆಯ.
ನಿರದೆ ಕರಂ ಹುಯ್ಯುತ ಕುಕ್ಕುರಿಸಿದ
ಕಲಗಂ ತಿದಿಯೆನಲು |

ಉರವಣೆಯಿಂ ಮೊದಲೆಚ್ಚು ಕೆಡಪಿ ಒಡ-
ವರಿದಾ ಬಾಲವಿಡಿದು ಬಾಗಿದ ವನ-
ಚರನೊಪ್ಪುವನದನೊರ್ಕೆಯಿಂದೊತ್ತುವ
ಕಮ್ಮಾರನಂತೆ ||

ಜನ್ನಿಗ— ಭಲೆ ಭಲೆ! ಸುಂದರವಾದ ಜಾನಪದಜೀವನದ ಉಪಮೆ!

ನೇಮಿಚಂದ್ರ— ಇವನ ಹೆಸರೇನು ಗೊತ್ತಿಲ್ಲವೇ ನಿನಗೆ? ಲೋಕ ವಿಲಕ್ಷಣವಾದ ಕಲ್ಪನೆ ಈತನದು? ಈತನ ತಂದೆ-ತಾಯಿಗಳು ಮುಂಗಂಡು, ತಕ್ಕ ಹೆಸರನ್ನು ಇರಿಸಿದ್ದಾರೆ.

ಜನ್ನಿಗ— (ನಗುತ್ತ) ಸರಿ ಸರಿ! ಒಳ್ಳೆಯ ಮಾತು! ಇನ್ನು ನಾವು ಇಂದಿನ ನಮ್ಮ ಈ ಅರಣ್ಯಸಂದರ್ಶನವನ್ನು ಇಷ್ಟಕ್ಕೆ ಮುಗಿಸೋಣವೆ!

ಮಂಗರಸ— ಆಗಲಿ; ಇಂದು ಮುಗಿಸೋಣ! ಇನ್ನೊಂದು ಸಲ, ಕೇವಲ ಬೇಟೆಯಾಟವನ್ನು ನೋಡಲು ಬರೋಣ! ಆಗ ಕಾಡು ಪಳ್ಳಿಗೆ ಹೋಗಿ, ಅಲ್ಲಿಯ ಕಾಡಾಡಿಗಳ ನಿತ್ಯಜೀವನವನ್ನೂ ಅರಿತುಕೊಳ್ಳೋಣ.

× × × ×

ನಿವೇದಕ:

ರಾಜಣ್ಣ, ಕಾಡಿನ ಜೀವನವನ್ನು ನೋಡಿದೆಯಾ ಕಣ್ಣಿಂದ? ಇಲ್ಲಿ ಒಂದು ಸಲ ಹೊಕ್ಕು ಹೊರಬೀಳಬೇಕಾದರೆ, ಜೀವನಸೂತ್ರ ತುಂಬ ಗಟ್ಟಿಯಾಗಿರಬೇಕು. ನಾವೂ ಈಗ ಮನೆಗೆ ಮರಳೋಣವೇ?

ರಾಜಣ್ಣ— ಎಂತಹ ಗಂಡಾಂತರದ್ದಯ್ಯಾ ಕಾಡಿನ ಜೀವನ! ಎಂತಲೇ ಲಕ್ಷ್ಮೀಶಕವಿ ಕಾಡನ್ನು ಹಾಗೆ ಬಣ್ಣಿಸಿದ್ದಾನೆ:

(ಭೈರವೀ ರಾಗದಲ್ಲಿ)

ಶಕುನಿಚೀತ್ಕಾರ ಘೋಷಣಮಯಂ ತೃಣಮಯಂ
ವಿಕಿರದುಪಲಾಳಿ ಕರ್ಕಶಮಯಂ ಶಶಮಯಂ
ಪ್ರಕಟ ಕಂಟಕಕೀರ್ಣತರುಮಯಂ ರುರುಮಯಂ
ವಿವಿಧೋಗ್ರ ಜಂತುಮಯವು |
ನಕುಲ-ಮೂಷಕ ಸರೀಸೃಪಮಯಂ ದ್ವಿಪಮಯಂ
ಸಕಲ ಭೂವಿಷವಸಂಕುಲಮಯಂ ಬಿಲಮಯಂ
ವೃಕ-ಸೂಕರ-ವ್ಯಾಘ್ರಚಯಮಯಂ ಭಯಮಯಂ
ತಾನೆನಿಸಿ ಕಾಡಿರ್ದುದು ||

(ರಣಹಲಿಗೆಗಳ ಸಪ್ಪಳದೊಂದಿಗೆ ಮುಕ್ತಾಯ.)

ಕನ್ನಡದಲ್ಲಿ ಸಣ್ಣಕತೆಗಳು

ಪ್ರೊ. ಸಿ. ಎಸ್. ಕುಲಕರ್ಣಿ ಎಂ. ಎ., ಬಿ ಟಿ. ಜನತಾಕಾಲೇಜ್, ಧಾರವಾಡ.

ಲೇಖಾಂಕ ೨

卐

ಬೆಳವಣಿಗೆ

(ಕಳೆದ ಸಂಚಿಕೆಯಿಂದ ಮುಂದುವರಿದದ್ದು)

ಸಂಕೀರ್ಣ ಹಾಗೂ ವಿಶಿಷ್ಟ ಕತೆಗಾರರು :—

ಎರಡನೆಯ ಮಹಾಯುದ್ಧದ ಕೊನೆಯಾದ ಕೂಡಲೆ ಪ್ರಗತಿ. ಶೀಲ ಸಾಹಿತ್ಯಕ್ಕೆ ಬಂದ ನೆರೆ ಇಳಿಯಲಾರಂಭಿಸಿತು. ಈ ನೆರೆ ಇಳಿದಾಗ, ಪ್ರಗತಿಶೀಲ ಚಳವಳಿಯ ಪರಿಣಾಮಗಳು ಸ್ಪಷ್ಟವಾಗಿ ಕಾಣಿಸಿಕೊಳ್ಳತೊಡಗಿದುವು. ಪ್ರಚಾರವು ಎಂದೂ ಸಾಹಿತ್ಯದ ಗುರಿಯಾಗಲಾರದು; ಪ್ರಚಾರವನ್ನೇ ಗುರಿಯನ್ನಾಗಿರಿಸಿಕೊಂಡ ಸಾಹಿತ್ಯ ತನ್ನ ಸಾಹಿತ್ಯಿಕ ಗುಣವನ್ನು ಕಳೆದುಕೊಳ್ಳುತ್ತದೆ; ಯಾವುದೇ ತತ್ತ್ವ ಪ್ರಣಾಲಿಯು ಸಾಹಿತ್ಯದಲ್ಲಿ ಕಾಣಿಸಿಕೊಳ್ಳಬೇಕಾದರೆ ಅದು ಸಾಹಿತ್ಯವಾಗಿಯೇ ಬರಬೇಕಲ್ಲದೆ ಪ್ರಚಾರವಾಗಿ ಬರಬಾರದು — ಇವೇ ಮುಂತಾದ ಮಾತುಗಳು ಪ್ರಗತಿಶೀಲ ಚಳವಳಿಯಿಂದ ಚೆನ್ನಾಗಿ ಸ್ಪಷ್ಟಗೊಳಿಸಲ್ಪಟ್ಟುವು. ಇದರಂತೆ ಬಾಳಿನ ನಲವು-ಒಲವು-ಚೆಲುವುಗಳಂತೆ. ದುಃಖ-ದುಮ್ಮಾನಗಳೂ, ಹಸಿವು-ಬಡತನಗಳೂ ಒಳ್ಳೆಯ ಸಾಹಿತ್ಯದ ವಿಷಯಗಳಾಗಬಲ್ಲವು—ಎಂಬುದು ವ್ಯಕ್ತವಾಯಿತು. ಪ್ರಗತಿಶೀಲ ಚಳವಳಿ, ಸಾಹಿತ್ಯವನ್ನು ವಾಸ್ತವಿಕತೆಯ ಕಡೆಗೆ ಒಯ್ಯುವ ತನ್ನ ಕಾರ್ಯವನ್ನು ಮಾಡಿ, ಮೆಲ್ಲನೇ ಹಿಮ್ಮೆಟ್ಟತೊಡಗಿತು.

ಪ್ರಗತಿಶೀಲ ಚಳವಳಿಯು ಹಿಮ್ಮೆಟ್ಟಿದರೂ ಸಾಹಿತ್ಯವಾಹಿನಿ ಹಿಂಗಡಿಯಲಿಲ್ಲ. ಈ ಹೊತ್ತಿಗೆ ಮತ್ತೆ ಹೊಸ ಕತೆಗಾರರು ಕಾಣಿಸಿಕೊಳ್ಳತೊಡಗಿದರು. ಈ ಹೊಸ ಕತೆಗಾರರು ತಾವು ಸಂಪೂರ್ಣವಾಗಿ ಲಲಿತಕತೆಗಳನ್ನೇ ಬರೆಯುವವರಾಗಬೇಕೆಂದಾಗಲಿ. ಇಲ್ಲವೆ ತಾವು ಸಂಪೂರ್ಣವಾಗಿ ಪ್ರಗತಿಶೀಲ ಕತೆಗಳನ್ನೇ ಬರೆಯುವವರಾಗಬೇಕೆಂದಾಗಲಿ ಬಯಸಿದವರಲ್ಲ. ಅವರು ನಿರ್ದಿಷ್ಟವಾದ ಯಾವುದೇ ಒಂದು ವಿಭಾಗಕ್ಕೆ ಅಂಟಿಕೊಂಡವರಲ್ಲ. ತಮ್ಮ ಆತ್ಮಾಭಿವ್ಯಕ್ತಿಗೆ, ವಿಷಯನಿರೂಪಣೆಗೆ ಯಾವ ವಿಶಿಷ್ಟ ರೂಪವು ಸರಿಹೊಂದುವುದೋ ಅದನ್ನು ಅವರು ತಮ್ಮ ಕತೆಗಳಿಗೆ ಬಳಸತೊಡಗಿದರು. ಆದುದರಿಂದ ಅವರ ಕತೆಗಳಲ್ಲಿ ಲಲಿತ ಹಾಗೂ ಪ್ರಗತಿಶೀಲ ಕತೆಗಳ ಕೆಲವು ಒಳ್ಳೆಯ ಗುಣಗಳ ಪಡಿನೆಳಲು ಬಿದ್ದಿತು. ಅವರ ಕತೆಗಳಲ್ಲಿ ಕೆಲವು ಲಲಿತ ಕತೆಗಳೆನಿಸಿದರೆ, ಹಲವು ಪ್ರಗತಿಶೀಲ ಕತೆಗಳೆನ್ನಿಸುತ್ತಿದ್ದುವು. ಒಮ್ಮೊಮ್ಮೆ ಬೇರೆ ಹೊಸರೂಪವನ್ನು ತಾಳುತ್ತಿದ್ದುವು. ಆದಕ್ಕಾಗಿ ಈ ಕತೆಗಾರರನ್ನು 'ಸಂಕೀರ್ಣ ಕತೆಗಾರ'ರು ಎಂದು ಕರೆಯಲಾಗಿದೆ.

ಈ ಸಂಕೀರ್ಣ ಕತೆಗಾರರು ತಮ್ಮದೇ ಆದ ಕೆಲವು ವೈಶಿಷ್ಟ್ಯಗಳನ್ನು ಉಳ್ಳವರಾಗಿರುವರು. ಇವರ ಮೊದಲನೆಯ ವೈಶಿಷ್ಟ್ಯವೆಂದರೆ ಇವರು 'ಲಲಿತ' ಅಥವಾ 'ಪ್ರಗತಿಶೀಲ' ಎಂಬ ಯಾವುದೇ ಸಂಪ್ರದಾಯಕ್ಕೆ ಸೇರಿದವರಲ್ಲ. ಇವರಿಗೆ ಎರಡೂ ಸಂಪ್ರದಾಯಗಳು ಇಷ್ಟವೇ. ಇವರ ಎರಡನೆಯ ವೈಶಿಷ್ಟ್ಯವೆಂದರೆ ಇವರು ಸಮನ್ವಯವಾದಿಗಳು. ಲಲಿತ ಹಾಗೂ ಪ್ರಗತಿಶೀಲ ಮಾರ್ಗಗಳಲ್ಲಿ ಸಮನ್ವಯವನ್ನು ಸಾಧಿಸಿದವರು. ಇಲ್ಲಿಯವರೆಗೆ ಲಲಿತ ಕತೆಗಾರರ ರೀತಿ ಪ್ರಗತಿಶೀಲರಿಗೆ ಒಗ್ಗುತ್ತಿರಲಿಲ್ಲ; ಪ್ರಗತಿಶೀಲರ ರೀತಿ ಲಲಿತ ಕತೆಗಾರರಿಗೆ ಸೇರುತ್ತಿರಲಿಲ್ಲ ಇದರಿಂದ ಕನ್ನಡ ಸಾಹಿತ್ಯದಲ್ಲಿ ಸಾಹಿತ್ಯಿಕರಲ್ಲಿ ಕೆಲವು ದಿನ ವಿಷಮ ವಾತಾವರಣ ಹಬ್ಬಿತ್ತು. ಇದು ತಿಳಿಯಾಗಿ, ಒಬ್ಬರನ್ನೊಬ್ಬರು ಅರಿತುಕೊಳ್ಳಲು ಈ ಸಂಕೀರ್ಣ ಕತೆಗಾರರಿಂದ ಬಹಳ ಸಹಾಯವಾಯಿತು. ಅಲ್ಲದೆ ಲಲಿತ ಹಾಗೂ ಪ್ರಗತಿಶೀಲ ಮಾರ್ಗಗಳಲ್ಲಿಯ ಗುಣ-ದೋಷಗಳೂ ಚೆನ್ನಾಗಿ ಕಂಡು ಬಂದುವು 'ಸಣ್ಣಕತೆಗೆ ಯಾವುದೇ ಒಂದು ವಿಶಿಷ್ಟಮಾರ್ಗವು ಮೀಸಲಾಗಿಲ್ಲ' ಎಂಬ ಮಾತು ಸಮನ್ವಯವಾದಿಗಳಿಂದ ಸ್ಪಷ್ಟಗೊಳಿಸಲ್ಪಟ್ಟಿತು.

ಇವರ ಮೂರನೆಯ ವೈಶಿಷ್ಟ್ಯವೆಂದರೆ ಇವರ ಕತೆಗಳಲ್ಲಿಯ ವಿಷಯವಿಸ್ತಾರ ಕೆಲವು ವಿಷಯಗಳು ಲಲಿತ ಕತೆಗಾರರಿಗೆ ಸೇರುತ್ತಲೇ ಇರಲಿಲ್ಲ; ಕೆಲವು ವಿಷಯಗಳು ಪ್ರಗತಿಶೀಲರಿಗೆ ಆಗುತ್ತಿರಲಿಲ್ಲ. ಇದರಿಂದ ಆ ಎರಡೂ ಸಂಪ್ರದಾಯದ ಕತೆಗಾರರಿಗೆ ವಿಷಯ ನಿರ್ಬಂಧವಿತ್ತು; ಆದುದರಿಂದ ಅವರಲ್ಲಿ ವಿಷಯವಿಸ್ತಾರವಿರಲಿಲ್ಲ. ಸಂಕೀರ್ಣ ಕತೆಗಾರರಿಗೆ ಈ ನಿರ್ಬಂಧವಿರಲಿಲ್ಲವೆಂದು ಅವರ ವಿಷಯವ್ಯಾಪ್ತಿ ವಿಸ್ತಾರವಾಯಿತು

ವಿಷಯದಂತೆ ಸಂಖ್ಯೆಯಲ್ಲಿಯೂ ಸಂಕೀರ್ಣ ಕತೆಗಾರರ ವ್ಯಾಪ್ತಿ ವಿಸ್ತಾರವಾಗಿದೆ. ಇಲ್ಲಿ ಎಲ್ಲ ಕತೆಗಾರರ ಹೆಸರನ್ನು ಹೇಳುವುದು

ಸಾಧ್ಯವಿಲ್ಲ. ಆದರೂ 'ಅಶ್ವತ್ಥ,' ಕೃಷ್ಣಮೂರ್ತಿ ಪುರಾಣಿಕ, ಲಕ್ಷ್ಮಣರಾವ ಬೇಂದ್ರೆ, ಎಂ. ವಿ. ಸೀತಾರಾಮಯ್ಯ, 'ಭಾರತೀಸುತ' ವರದರಾಜ ಹುಯಿಲಗೋಳ, ಬಿ. ಆರ್. ವಾಡಪ್ಪಿ, ಎನ್. ಎಸ್. ಗದಗಕರ, ರಾಮಚಂದ್ರ ಕೊಟ್ಟಲಗಿ, ವ್ಯಾಸರಾಯ ಬಲ್ಲಾಳ, ಶ್ರೀನಿವಾಸ ಹಾವನೂರ, ಶ್ರೀ ರಘು, ಧನ್ವಂತ, ಷಣ್ಮುಖಯ್ಯ ರಾಮಚಂದ್ರ ಶರ್ಮ, ಹಿತ್ತಲಮನಿ, ಬನ್ನಂಜೆ ರಾಮಾಚಾರ್ಯ, ಶ್ರೀಮತಿ ವಾಣಿ, ಶ್ರೀಮತಿ ಗೀತಾದೇವಿ ಕುಲಕರ್ಣಿ, ಶ್ರೀಮತಿ ಲಲಿತಮ್ಮ, ಶ್ರೀಮತಿ ಶಾಂತಾದೇವಿ ಮಾಳವಾಡ, ರಮಾಕಾಂತ, ಜಯಲಕ್ಷ್ಮಿ ಶ್ರೀನಿವಾಸನ್ ಮುಂತಾದವರ ಹೆಸರನ್ನು ಇಲ್ಲಿ ಹೇಳಬಹುದು.

ಹೀಗೆ ಸಂಕೀರ್ಣ ಕತೆಗಾರರ ಸಂಖ್ಯೆ ಬೆಳೆಯುತ್ತಿದ್ದಾಗ, ನಮ್ಮಲ್ಲಿ ಕೆಲವು ಒಳ್ಳೆಯ ವಿಶಿಷ್ಟ ಕತೆಗಾರರೂ ಕಾಣಿಸಿಕೊಂಡಿದ್ದಾರೆ. ಈ ವಿಶಿಷ್ಟ ಕತೆಗಾರರು ಯಾವುದೊಂದು ಸಂಪ್ರದಾಯಕ್ಕೆ ಸೇರಿದವರಲ್ಲ ಜೀವನದಲ್ಲಿಯ ಒಂದು ವಿಶಿಷ್ಟರೀತಿ, ಒಂದು ವಿಶಿಷ್ಟ ಮುಖ ಅವರನ್ನು ಆಕರ್ಷಿಸುತ್ತದೆ ಅದನ್ನೇ ಅವರು ತಮ್ಮ ಸಾಹಿತ್ಯಸೇವೆಯ ವೈಶಿಷ್ಟ್ಯವನ್ನಾಗಿ ಮಾಡಿಕೊಂಡು ಮುಂದುವರಿಯುತ್ತಾರೆ. ಹೀಗೆ ಹಾಸ್ಯ, ವಿನೋದ, ವಿಡಂಬನೆ, ಜೀವನಚಿತ್ರ, ವಿಜ್ಞಾನ, ಕೋರ್ಟು-ಕಚೇರಿಗಳು ಇವೇ ಮೊದಲಾದ ಒಂದೊಂದು ವಿಷಯಗಳು ಇವರಿಂದ ವಿಶಿಷ್ಟರೀತಿಯಲ್ಲಿ ಮನ್ನಣೆ ಹೊಂದಿ, ಆ ವಿಧವಾದ ಸಾಹಿತ್ಯ ಕೃತಿಗಳನ್ನು ಕೊಡುತ್ತವೆ. ಸಾಹಿತ್ಯದ ಪ್ರಗತಿಗೆ, ಮಾನವನ ಪ್ರಗತಿಗೆ, ಇಂತಹ ವಿಶಿಷ್ಟಸಾಹಿತ್ಯವೂ ಅಗತ್ಯವಿದೆ. ಆದರೆ ಇಂತಹ ಸಾಹಿತ್ಯ ನಮ್ಮಲ್ಲಿ ಇನ್ನೂ ಎಷ್ಟು ಬೇಕೋ ಅಷ್ಟು ಬೆಳೆದುಬಂದಿಲ್ಲ.

ವಿನೋದವನ್ನೇ ಸಣ್ಣಕತೆಯ ಉದ್ದೇಶವನ್ನಾಗಿಟ್ಟುಕೊಂಡು ಬರೆಯುವವರು ನಮ್ಮಲ್ಲಿ ಬಹಳ ಕಡಿಮೆ. ವಿನೋದದ ಬರೆಹ ಸಣ್ಣಕತೆಗಿಂತಲೂ ಹರಟೆ-ಪ್ರಬಂಧ-ನಾಟಕಗಳಲ್ಲಿಯೇ ಹೆಚ್ಚಾಗಿ ರೂಪುಗೊಳ್ಳುತ್ತದೆ. ನಮ್ಮಲ್ಲಿಯ ಹಲವು ಕತೆಗಾರರು ತಮ್ಮ ಕತೆಗಳಲ್ಲಿ ಅಲ್ಲಲ್ಲಿ ವಿನೋದವನ್ನು ತಂದಿದ್ದಾರೆ. ಕೆಲವು ವಿನೋದ ಪೂರ್ಣವಾದ ವಿಷಯಗಳನ್ನು ಕತೆಗಳನ್ನಾಗಿ ಬರೆದಿದ್ದಾರೆ. ಆದರೆ ವಿನೋದವನ್ನೇ ತಮ್ಮ ಕತೆಗಳ ವೈಶಿಷ್ಟ್ಯವನ್ನಾಗಿ ಮಾಡಿಕೊಂಡವರು ತೀರ ವಿರಳ. ವಿನೋದವನ್ನು ತಮ್ಮ ವಿಶೇಷ ಗುಣವನ್ನಾಗಿ ಮಾಡಿಕೊಂಡ ಕನ್ನಡ ಕತೆಗಾರರಲ್ಲಿ ಗೊರೂರು ರಾಮಸ್ವಾಮಿ ಅಯ್ಯಂಗಾರರು ಮೊದಲಿಗರಾಗಿದ್ದಾರೆಂದು ಹೇಳಬಹುದು. ಅವರು ಬರೆದ 'ನಮ್ಮೂರ ರಸಿಕರು' 'ಹಳ್ಳಿಯ ಚಿತ್ರಗಳು' 'ಬೈಲಹಳ್ಳಿ ಸರ್ವೆ' ವಿನೋದಕತೆಗಳ ಸಂಕಲನಗಳಾಗಿವೆ.

ವಿನೋದವನ್ನು ವಿಡಂಬನೆಗೆ ಮಾರ್ಪಡಿಸಿ ಬರೆಯುವವರೆಂದರೆ 'ಬಳ್ಳಾರಿ ಬೀಚಿ'ಯವರು. ಅವರು ಬರೆದ ಹಲವು ವಿನೋದಕತೆಗಳು ವಿಡಂಬನೆಗಳಾಗಿವೆ. ಅವರ ವಿಡಂಬನೆಯ ಕತೆಗಳು ಒಮ್ಮೊಮ್ಮೆ ಹರಟೆಯಂತೆ ಎನಿಸಿದರೂ, ಅವುಗಳಲ್ಲಿ ಒಂದು ಸೂತ್ರಬದ್ಧವಾದ

ಕೂದಲನ್ನು
ಸೊಂಪಾಗಿ ಮೃದುವಾಗಿ
ಗುಂಗುರು ಗುಂಗುರಾಗಿ
ನೀಳವಾಗಿ
ಬೆಳೆಸುತ್ತದೆ
ನೀಲಿ
ಶ್ರೀ ಸದ್ವೈದ್ಯಶಾಲಾ ಲಿ., ನಂಜನಗೂಡು
ಬ್ರಾಂಚುಗಳು: ಬೆಂಗಳೂರು, ಮೈಸೂರು, ಮಂಗಳೂರು, ಹುಬ್ಬಳ್ಳಿ
ನಂಜನಗೂಡು ಟೂತ ಪೌಡರ ಉಪಯೋಗಿಸಿ

ಕತೆ ಇರುವುದರಿಂದ ಅವುಗಳನ್ನು ನಾವು ಚಿಕ್ಕಕತೆಗಳಲ್ಲಿ ಎಣಿಸಬಹುದು. 'ತ್ರಿಶೂಲಿಗಳು' ಎಂಬುದು ಇಂತಹ ಕತೆಗಳ ಸಂಕಲನಕ್ಕೆ ಒಂದು ಒಳ್ಳೆಯ ನಿದರ್ಶನವಾಗಿದೆ.

ಇವರಂತೆಯೇ ವಿಡಂಬನೆಯನ್ನು ಸಣ್ಣಕತೆಯ ವಿಷಯವನ್ನಾಗಿಮಾಡಿಕೊಂಡು ಬರೆಯುವವರೆಂದರೆ ಜಿ. ಪಿ ರಾಜರತ್ನಂ ಮತ್ತು ಎ. ಜಿ ಭಟ್ಟ ಅವರು. ಇವರಿಬ್ಬರೂ ಬರೆದ ವಿಡಂಬನೆಯ ಸಣ್ಣಕತೆಗಳನ್ನು ನಾವು 'ಹಸಿಗತೆ'ಗಳು ಎಂದು ಕರೆಯಬಹುದು. ಯಾಕೆಂದರೆ ಅವು ಒಂದು ಹನಿಯಂತೆ ಚಿಕ್ಕವಾಗಿಯೂ ಪೂರ್ಣವಾಗಿಯೂ ಇರುತ್ತವೆ. ಅವರ ವಿಡಂಬನೆಯೂ ಸಾಕಷ್ಟು ಮೊನೆಯಾಗಿರುತ್ತದೆ. ಆ ವಿಡಂಬನೆ ಕತೆಯ ಈ ಚಿಕ್ಕತನದಿಂದಲೇ ಹೆಚ್ಚು ಮೊನೆಯಾಗಿರುತ್ತವೆ. ರಾಜರತ್ನಂ ಅವರ 'ಪಂಗಳು' ಎ. ಜಿ. ಭಟ್ಟರ 'ಪೆದ್ದಂ ಕತೆಗಳು' ವಿಡಂಬನಾತ್ಮಕ ಹಸಿಗತೆಗಳಿಗೆ ತುಂಬ ಒಳ್ಳೆಯ ಉದಾಹರಣೆಗಳಾಗಿವೆ

ವಿನೋದ-ವಿಡಂಬನೆಯ ತರುವಾಯ ಅಲ್ಲಲ್ಲಿಯ ಪ್ರಾದೇಶಿಕ ಜೀವನವನ್ನು ಚಿತ್ರಿಸುವ ಕೆಲವು ಕತೆಗಳೂ ಬಂದಿವೆ. ರ ಸು. ಭಟ್ಟ, ಹಾಗೂ ಎ ಜಿ. ಭಟ್ಟರು, ಇಂತಹ ಜೀವನಚಿತ್ರಗಳನ್ನು ಚೆನ್ನಾಗಿ ಚಿತ್ರಿಸಿದ್ದಾರೆ. ಎ. ಜಿ ಭಟ್ಟ ಅವರ 'ಸಹ್ಯಾದ್ರಿ' ಮತ್ತು 'ಜೀವನಚಿತ್ರಗಳು' ಉತ್ತರಕನ್ನಡ ಜಿಲ್ಲೆಯ ಜನಜೀವನವನ್ನು ಅಲ್ಲಿಯ ಬಳಕೆಯ ಮಾತುಗಳಿಂದಲೇ ಸಣ್ಣ ಕತೆಗಳನ್ನಾಗಿ ಚಿತ್ರಿಸಿದ್ದಾರೆ. ಇದರಂತೆ ಪದ್ಮಾವತಿ ರಸ್ತಾಗಿಯವರು ಕೊಡಗಿನ ಜೀವನವನ್ನು ಚಿತ್ರಿಸಿದ್ದಾರೆ.

ಜೀವನ ಚಿತ್ರಗಳಂತೆ ವ್ಯಕ್ತಿಚಿತ್ರಗಳನ್ನು ಸಣ್ಣಕತೆಯ ತಂತ್ರಕ್ಕೆ ಬಳಸಿಕೊಂಡವರೆಂದರೆ ಧಾರವಾಡದ ವ. ಬಾ ಕುಲಕರ್ಣಿಯವರು. ಅವರ 'ಹಾಸುಹೊಕ್ಕು' 'ಕಪ್ಪುಹುಡುಗಿ' ಎಂಬ ಸಂಕಲನಗಳಲ್ಲಿ ವ್ಯಕ್ತಿಚಿತ್ರಗಳು ಸಣ್ಣಕತೆಗಳಾಗಿ ಬಂದಿವೆ

ಮೊದಲನೆಯ ಮಹಾಯುದ್ಧದ ಕಾಲಕ್ಕೆ ನಮ್ಮಲ್ಲಿ ಸಣ್ಣಕತೆ ಇನ್ನೂ ಜನ್ಮತಾಳುವುದರಲ್ಲಿತ್ತು. ಆದಕಾರಣ ಆ ಯುದ್ಧದ ಕತೆಗಳು ನಮ್ಮಲ್ಲಿ ಕಾಣಿಸಿಕೊಳ್ಳಲಿಲ್ಲ ಎರಡನೆಯ ಮಹಾಯುದ್ಧದಲ್ಲಿ

ನಮ್ಮ ಸಣ್ಣಕತೆ ಪ್ರೌಢಾವಸ್ಥೆಯಲ್ಲಿತ್ತು. ಆದುದರಿಂದ ಯುದ್ಧದ ಪಡಿನೆಳಲು ನಮ್ಮ ಸಣ್ಣಕತೆಗಳಲ್ಲಿಯೂ ಕಾಣಿಸಿಕೊಂಡಿತು. ಕಳ್ಳಪೇಟೆ, ನಿಯಂತ್ರಣ, ಅತ್ಯಾಚಾರ ಮೊದಲಾದ ಈ ಯುದ್ಧದ ಅನಿಷ್ಟಗಳು ಸಣ್ಣಕತೆಯ ವಿಷಯಗಳಾಗಿ ಬಂದರೂ, ಪ್ರತ್ಯಕ್ಷವಾಗಿ ಸೈನಿಕ ಜೀವನದಿಂದ ಬಂದ ಕತೆಗಳು ಕನ್ನಡದಲ್ಲಿ ಬಹಳ ಕಡಿಮೆ. ನಮ್ಮಲ್ಲಿ ಸೈನಿಕಜೀವನದ ಅನುಭವದಿಂದ ವಿಶಿಷ್ಟಪ್ರಕಾರದ ಕತೆಗಳನ್ನು ಬರೆದವರೆಂದರೆ ಶ್ರೀ. ವೆಂ ಮು, ಜೋಶಿ ಹಾಗೂ ಶ್ರೀ. ಎ. ಎನ್. ರಾವ ಅವರು. ಇವರಲ್ಲಿ ವೆಂ ಮು ಜೋಶಿಯವರ ಕತೆಗಳು ಮಲಾಯಾದ ಹಿನ್ನೆಲೆಯನ್ನಿಟ್ಟುಕೊಂಡು ಬರೆದುವುಗಳಾಗಿವೆ. ಶ್ರೀ. ಎ. ಎನ್. ರಾವ್ ಅವರು ಭಾರತದ ಸೈನಿಕಜೀವನವನ್ನು ಹಿನ್ನೆಲೆಯಾಗಿಟ್ಟುಕೊಂಡಿದ್ದಾರೆ.

ನಮ್ಮಲ್ಲಿ ಹಲವು ಪ್ರತಿಭಾವಂತ ವಕೀಲರೂ ದಕ್ಷರಾದ ಪೋಲೀಸ ಅಧಿಕಾರಿಗಳೂ ಸಾಕಷ್ಟಿದ್ದರೂ, ತಮ್ಮ ಅನುಭವದಿಂದ ಸಣ್ಣಕಥಾ ಸಾಹಿತ್ಯವನ್ನು ಬೆಳಗಿಸಿದವರು ಬೆರಳಿನ ಮೇಲೆ ಎಣಿಸುವಷ್ಟು ಇಲ್ಲ ಶ್ರೀ. ತಲಚೇರಿ ರಂಗರಾಯರು ಮಾತ್ರ ತಮ್ಮ ವಕೀಲಿ ಜೀವನದ ಹಲವು ಸ್ವಾರಸ್ಯವಾದ ಸಂಗತಿಗಳನ್ನು "ಹುಟ್ಟಿದಿದ್ದವನ ಖೂನಿ" ಮೊದಲಾದ ಸಣ್ಣಕತೆಗಳಿಗೆ ವಸ್ತುವನ್ನಾಗಿ ಬಳಸಿಕೊಂಡು, ಕನ್ನಡ ಸಣ್ಣಕತೆಗಳಿಗೆ ಒಂದು ಹೊಸ ಮೆರುಗನ್ನು ಕೊಟ್ಟಿದ್ದಾರೆ.

ನಿರಾಶ್ರಿತರ ಸಮಸ್ಯೆಯ ಬಗ್ಗೆಯೂ ನಮ್ಮಲ್ಲಿ ಸಾಕಷ್ಟು ಕತೆಗಳು ಬಂದಿಲ್ಲ. ಆದರೂ ಶ್ರೀಮತಿ ಎಚ್. ವಿ. ಸಾವಿತ್ರಮ್ಮ ಹಾಗೂ ವ್ಯಾಸರಾಯ ಬಲ್ಲಾಳರು ಈ ವಿಷಯದಲ್ಲಿ ಹೆಚ್ಚಾಗಿ ಕತೆಗಳನ್ನು ಬರೆದಿದ್ದಾರೆ.

ನಮ್ಮಲ್ಲಿ ಹಲವು ಜಾನಪದ ಕತೆಗಳೂ ಉಂಟು. ಇಂತಹ ಜಾನಪದ ಕತೆಗಳನ್ನು ತಮ್ಮ ಸಣ್ಣಕತಗಳ ವೈಶಿಷ್ಟ್ಯವನ್ನಾಗಿ ಮಾಡಿಕೊಂಡು ಉತ್ತಮ ಕತೆಗಳನ್ನು ಒದಗಿಸಿದವರೆಂದರೆ ಶ್ರೀ. ಗೋವಿಂದಮೂರ್ತಿ ದೇಸಾಯಿಯವರು. ಅವರು ಹಲವು ಸ್ಥಳ ಪುರಾಣಗಳನ್ನು ಒಳ್ಳೆಯ ಕತೆಗಳನ್ನಾಗಿ ಅಳವಡಿಸಿಕೊಂಡು ಕನ್ನಡ ಸಣ್ಣಕತೆಗಳಲ್ಲಿ ಒಂದು ವಿಶಿಷ್ಟ ಪರಂಪರೆಯನ್ನು ಸ್ಥಾಪಿಸಿದ್ದಾರೆ

ವೈಜ್ಞಾನಿಕ ಸಂಶೋಧನೆಗಳನ್ನು ಹಾಗೂ ಚಮತ್ಕಾರಗಳನ್ನು ಕಥಾವಸ್ತುವನ್ನಾಗಿ ಮಾಡಿಕೊಂಡು ಸಣ್ಣಕತೆ ಬರೆಯುವವರು ನಮ್ಮಲ್ಲಿ ಇಲ್ಲವೇ ಇಲ್ಲವೆಂದು ಹೇಳಬಹುದು. ಆದರೂ ಶ್ರೀಮತಿ ಸುಶೀಲಾ ಕೊಪ್ಪರ ಅವರು ಈ ದಿಶೆಯಲ್ಲಿ ಕೆಲವು ಯಶಸ್ವೀ ಪ್ರಯೋಗಗಳನ್ನು ಮಾಡಿದ್ದಾರೆ.

ಮನೋವಿಶ್ಲೇಷಣವೂ ನಮ್ಮ ಸಾಹಿತ್ಯದ ಮೇಲೆ ತನ್ನ ಪ್ರಭಾವವನ್ನು ಬೀರದೆ ಉಳಿದಿಲ್ಲ ಇತ್ತೀಚಿನ ಹಲವು ಕತೆಗಳಲ್ಲಿ ಮನೋವಿಶ್ಲೇಷಣೆ ಚೆನ್ನಾಗಿ ಕಂಡುಬಂದಿದೆ. ಆದರೆ ಅದನ್ನೇ ವೈಶಿಷ್ಟ್ಯವನ್ನಾಗಿ ಮಾಡಿಕೊಂಡವರೆಂದರೆ ಶ್ರೀಮತಿ ಎಂ. ಕೆ ಜಯಲಕ್ಷ್ಮಿ, ಕರಗಡ ಅವರು ಎಂದು ಹೇಳಬಹುದು. ಅವರ 'ಗುಲಾಬಿ ಪತ್ತಲ' ಹಾಗೂ ಇನ್ನೂ ಹಲವು ಕತೆಗಳಲ್ಲಿ ಮನೋವಿಶ್ಲೇಷಣವು ಬಹಳ ಚೆನ್ನಾಗಿ ಮೂಡಿಬಂದಿದೆ.

ಹೀಗೆ ಹಲವು ವೈಶಿಷ್ಟ್ಯಗಳನ್ನು ತಳೆದು ಮುಂದುವರಿದ ಕನ್ನಡ ಸಣ್ಣಕತೆಯ ಹೊನಲು ಇಂದು 'ನವ್ಯತೆ'ಯ ಕಡೆಗೆ ಹೊರಳಿದೆ. ಈ ನವ್ಯತೆ ಎಲ್ಲ ರೀತಿಯಿಂದಲೂ ನವ್ಯವಾಗಿ ಇನ್ನೂ ಬಂದಿಲ್ಲ. ಬರಬೇಕಾಗಿದೆ. ಆದರ ಕೂಡ ಹೊಸ ಹೊಸ ತರುಣ ಕತೆಗಾರರು ಮುಂದೆ ಬರುತ್ತಲಿದ್ದಾರೆ. ಈ ಹೊಸ ಕತೆಗಾರರೆಲ್ಲ ನವ್ಯಕತೆಗಾರರೇ ಆಗಿಲ್ಲ. ಅವರಲ್ಲಿ ಬಹಳಷ್ಟು ಜನರು ಸಂಕೀರ್ಣ ಕತೆಗಾರರಾಗಿದ್ದಾರೆ. ನವ್ಯತೆಯ ಬಗ್ಗೆ ನಮ್ಮಲ್ಲಿ ಈಗ ಸ್ವಲ್ಪ ವಿಚಾರ, ಚರ್ಚೆ ನಡೆದಿದೆ. ಅದು ಇನ್ನೂ ಸಾಕಷ್ಟು ನಡೆದಿಲ್ಲ. ನವ್ಯತೆಯ ನಿರ್ದಿಷ್ಟ ರೂಪರೇಷೆಗಳು ಕನ್ನಡ ಸಣ್ಣಕತೆಯಲ್ಲಿ ಇನ್ನೂ ಮೂಡಿ ಬಂದಿಲ್ಲ. ಆದರೂ ಈ ದಿಶೆಯಲ್ಲಿ ಪ್ರಯತ್ನ ನಡೆದಿದೆ. ಈ ಪ್ರಯತ್ನದ ಆಗು-ಹೋಗುಗಳೇನು? ಎಂಬದನ್ನು ಇನ್ನು ಮೇಲೆ ವಿಚಾರಿಸೋಣ.

ಶಾಂತಿ ಸೇವಾಸದನದ ಹೊಸ ಪ್ರಕಟಣೆಗಳು

		ರೂ ನ. ಪೈ
ಜೈನಧರ್ಮ		೧೫—೦

ಶ್ರೀ. ಮಿರ್ಜಿ ಅಣ್ಣಾರಾಯರು.

ಭಾರತದ ಬೆಳಕು	,,	೧—೫೦
ಭಾರತೀಯ ಸಂಸ್ಕೃತಿಯ ಹೃದಯ	,,	೧—೫೦
ಸಮಯಸಾರ	,,	೧—೫
ಶ್ರೇಯಾಂಸ (೨ ಭಾಗ)	,,	೩—೦
ಮೂಲಶಿಕ್ಷಣದ ಮೌಲ್ಯಮಾಪಣ	,,	೦—೭೫
ಭರತೇಶನ ನಾಲ್ಕು ಚಿತ್ರಗಳು	,,	೧—೨೫
ಕನೆಮೊಸರು (ಮಕ್ಕಳ ಕತೆ)	,,	೦—೨೫

ಪ್ರತಿಗಳಿಗಾಗಿ ಬರೆಯಿರಿ:

ಶಾಂತಿ ಸೇವಾಸದನ, ಸೇಡಬಾಳ

ಪೋ. ಸೇಡಬಾಳ ಜಿಲ್ಲಾ ಬೆಳಗಾಂವಿ)

ಎರಡು ಸಮುದ್ರಗೀತಗಳು

ಶ್ರೀ. ಗಂಗಾಧರ ಚಿತ್ತಾಲ, (ವಾಶಿಂಗ್ಟನ್) ಅಮೇರಿಕಾ

೧.

ನಾಲ್ಕು ದಿನ ಕಂಡಕಂಡಲ್ಲಿ ನೀರೇ ನೀರು !
ಕಣ್ ಸುತ್ತ, ಮೈಸುತ್ತ, ಮತ್ತೆ ಮನವನು ಸುತ್ತಿ
ಬರಿಯ ನೀರೇ ನೀರು !
ದಿಕ್ಕುಗಳ ಕಂಠಮಟ ತುಂಬಿ ಅಪರಂಪಾರ
ನೀಲ ಜಲಕೋಶಹಬ್ಬಿತ್ತು ತೆರೆ ತೆರೆ ತೂಗಿ
ಅವಿರತ ಅವಿಶ್ರಾಂತ
ಪ್ರಜ್ಞೆಯನ್ನಾವರಿಸಿ ನಿಂತ ಅತಿ ಪ್ರಜ್ಞೆಯೊಲು.

ಹಾಯಿ ಬೀಸುತ ತೇಲಿ ಬಂದೆವಯ್ಯಾ ಇಲ್ಲಿ
ಜಲಮಯ ಜಗತ್ತಿನಲಿ
ನಿದ್ದೆಯಲಿ ಕನಸು ಬಂದಂತೆ.
ನೀರ್ತಡಿಗೆ ನಿಂತು ಕೈಯಲೆದು ಬೀಳ್ಕೊಡಬಂದ
ಬಂದರಿನ ಬಂಧು-ಹಾಸವನು ದಂಡೆಗೆ ಬಿಟ್ಟು.
ಹೆಜ್ಜೆ ಮೂಡದ ಸಾಹಿನಲ್ಲೀಸಿ ನಡೆದಿತ್ತು
ಹಡಗ ದಿಗ್ದೇಶಕ್ಕೆ
ಮೂಗು ಗಾಳಿಯ ನಂಬಿ ನಡೆದ ಜಲಚರದವೊಲು.

ದಂಗುವಡೆದಿತು ಜೀವ ದಿಙ್ಮಂಡಲವ ತುಂಬಿ.
ತೆರೆಯ ಜಲಮಂಡಲದ ನೀಲ ರೇಖಾವಲಯ
ದಿಕ್ಕಿಲ್ಲ ದಿಶೆಯಿಲ್ಲದಂಥ ಲೋಕವಿದಯ್ಯ
ವಿಜನರಮಣೀಯ, ಗಭೀರ, ಗೋಲಾಕಾರ.
ಸುತ್ತ ವ್ಯೋಮದ ಪಾರ
ಮೈಯೊಡ್ಡಿದಲ್ಲೆಲ್ಲ ನಿಸ್ಸೀಮದಿಂದ ನಿಸ್ಸೀಮಕೂ
ಹಾಯ್ದು ಬಹ ಮರುತನುಚ್ಛ್ವಾಸ
ಶೀತಲ ಅನಿರ್ಬಂಧ ಸ್ವಚ್ಛಂದ ಸ್ವಚ್ಛಂದ-
ಸಡಿಲಿದುವು ಅಹಾ ನಿಂತಲ್ಲೆ ಜೀವದ ಬಂಧ !
ಮನಸಿನಾಳದಲೆಲ್ಲ
ಧವಲಮೇಘಗಳ ಆಕಾಶಗಮನದ ಚೆಂದ !

ಅಡಿಗೆ ತೂಗುತಲಿತ್ತು ತನ್ನ ಕಾಲಾತೀತ
ತಾಲದಲಿ ಸಾಗರದಪಾರ ಬಲ.
ಹಬ್ಬಿತ್ತು ನಾಲ್ದೆಸೆಗು ಸೃಜನ–ಹನನ–ನಿಮಗ್ನ
ಲವಣಸಿಂಧುವಿನ ಪ್ರಾಚೀನ ಚೇತನದುಸಿರು.
ಕಣ್ಣಂಚಿನಾಚೆಗೂ ಕುಣಿದು ಕಂಗೊಳಿಸಿತ್ತು
ಖಂಡಗಳನೆತ್ತಿ ಖಂಡಗಳಳಿಸಿ ಉಚ್ಛಲಿಪ
ಅಹ ತಿಮಿಂಗಿಳ ಜನನಿ ! ಅಹಾ ನವರಂಗ ಜಲ !

೨.

ನೀರಂಚಿನಲಿ ಕುಳಿತ ಬಿಳಿಯ ಕೊಕ್ಕರೆ ಪಕ್ಕ
ತೆರೆದು ಹವ್ವನೆ ಹವೆಗೆ ಹಾರಿ, ಬೆಳ್ಳಗೆ ಮಿಂಚಿ
ಹೊಡೆಯೆ ಚಕ್ಕರು,
ಬಾಯಿಲ್ಲದಭಿಲಾಷೆಗಳು ಕೆರಳಿ ನಿಂತವನೆ
ಬಾ ಇಲ್ಲಿ.

ಮಳಲಲಲೆದಾಡಿ ಓಂಕಾರವಡಗಿಹ ಶಂಖ
ಮಳೆಬಿಲ್ಲಿನೇಳು ಬಣ್ಣಗಳ ಪಡೆದಿಹ ಶಿಂಪು
ಕಡಲ ಬಳ್ಳಿಯ ಬೀಜ
ರವಿಯಗ್ನಿಯುಂಡು ಝಳಪಿಸುವ ಮೀನದ ಎಲುಬು-
ಒಂದೊಂದು ಕೌತುಕವನೂ ಎತ್ತಿ ಕಡಲ
ಗೂಢಗಳನ್ನೆ ಧೇನಿಸುತ ನಡೆದವನೆ
ಬಾ ಇಲ್ಲಿ.

ನೆಲವ ವ್ಯಾಪಿಸಿ ಮೆರೆವ ವರುಣಸಾಮ್ರಾಜ್ಯವನು
ಬ್ರಹ್ಮದೇವರ ಗುಡ್ಡವೇರಿ ಝುಗ್ಗನೆ ಕಂಡು
ಜಲಚಕಿತನಾದವನೆ
ಬಾ ಇಲ್ಲಿ.

ಮನೆಗೆ ಮರಳಿದರೂನು, ದಿನಗಳುರುಳಿದರೂನು,
ದಿಗ್ದೇಶಗಳಿಗೆ ತೆರಳಿದರೂನು ಉದಧಿಯುದ್-
ಘೋಷವನಗಾಧ ವಿಶ್ವದ ಕೂಗಿನೊಲು
ಎದೆಯಲಿ ಹೊತ್ತು ನಡೆದವನೆ
ಬಾ ಇಲ್ಲಿ.

ಇದು ನೀರು !
ಮನೆಯ ಹಿತ್ತಿಲ ಬಾವಿಯಲ್ಲಿ ತುಂಬುವ

ಪ್ರಾಣಜಲವಲ್ಲ.
ಊರು ಕೇರಿಗೆ ಹಸಿರ ಹಾಸಿ ಹರಿಯುವ
ಹಳ್ಳ–ಹೊಳೆಯಲ್ಲ.
ನೆಲಫಲತ್ತು ಬಿತ್ತುವರೆ
ಮುಗಿಲಿಂದ ಸುರಿವ ಸೋನೆಯುದಲ್ಲ.

ಕಲ್ಪಾಂತ ಜಲವೆ ನವಖಂಡ ಪೃಥ್ವಿಯ ನುಂಗಿ
ನೊರೆಯುವೊಲು
ಮುಗಿಲಿಗೂ ತೆರೆಹಾಯ್ಸಿ ಹರಿಹಾಯ್ವ ನೀರು!
ಎಲೆಲೆ ಧೀರು!
ಕ್ಷಿತಿಜ ಪರಿವೃತ ಜಲಧಿ
ದಿಕ್ಕುಗಳ ಮುಕ್ಕುಳಿಸುವೀ ವಿರಾಟವ ಕಾಣೆ–

ನಡುಗು—
ದಂಡೆಯಿಡಕ್ಕಿಲ್ಲ ಬಂಧನವಿಲ್ಲ ಹುಡು ಹಿಂ—
ಡಾಗಿ ಅಂಡಲೆಯುತಿದೆ ಜಲರಾಶಿ;
ಕಾಲನ ಕಿರಿಯ ತಂಗಿ, ನೆಲನ ಹಿರಿಯಕ್ಕ
ಇದನಾಳಬಲ್ಲವ ಗಂಡು ಯಾರಯ್ಯ?
ನೆಲದಣುಗ,
ಕಾಲನಿಟ್ಟಲ್ಲಲ್ಲಿ ನುಂಗೆ ಕಾದಿಹುದು ಬಾಯ್
ತೆರೆದು ಪಾತಾಳದೊಲು,
ದುಂಡು ತೆಕ್ಕೆಯ ಹಾಕಿ ಕರಿನೀಲ ಜಲಶೇಷ
ಕ್ಷಣ ಸ್ತಬ್ಧ ಮರುಕ್ಷಣವೆ ವಿಕ್ಷುಬ್ಧ ಪ್ರಕ್ಷುಬ್ಧ,

ಕಣ್ಣೀರ ಹೊಲವಯ್ಯ, ಬರಿಯ ಉಪ್ಪಿನ ಹಳುವು—
ದುಡುಕದಿರು ಈ ಅಮಾನುಷ ವಿಫಲ ಸೀಮೆಯು ಸೇರಿ.
ಇದರ ಬಾಳ್ ಬೇರೆ, ಅಂತರಂಗವೆ ಬೇರೆ
ಉಸಿರ ಮೇಲುಸಿರಿನಲಿ ದಿಕ್ತಟಗಳಾಚೆಗೂ
ಹಾಯ್ವ ಉರುಬೇ ಬೇರೆ,
ಬಸಿರಲ್ಲಿ ತುಡಿವ ಬಲವೇ ಬೇರೆ.

ಎದೆಯ ಬಯಲಲ್ಲಿ ಹಗಲಿರುಳು ತೆರೆಗಳನಟ್ಟಿ
ತುರುಬಿ ಹುಯಿಲುವ ಗಾಳಿ,
ಒಡಲ ಕಂದರದಿ ಹೊಯ್ದಾಡು ಪಂಥಃಕಾರ-
ದಲ್ಲಿ ಯುಗ ಯುಗ ಜನಿತ ಹಿಂಸ್ರ ಭೀಕರ ಸೃಷ್ಟಿ
ತನ್ನ ತೋಷವನೊ ರೋಷವನೊ ಮಡಿಲೊಳಗಿಟ್ಟು
ಯಾವ ಛಂದಕೋ ತೂಗಿ ನೂಗುವುದು ದಿನರಾತ್ರಿ.
ಹೊಗದಿರಯ್ಯಾ ಇದರ ನೀಲ ಏಕಾಂತವನು
ಈಚೆಯಿಂದಾಚೆಗೂ ಚಾಚಿ ಕದಿಯುವುದಿಲ್ಲಿ
ಮತ್ಸ್ಯಗಂಧಿತ ತಿಮಿತಿಮಿಂಗಿಲೋದರ ಮರಣ!

ಸುದಾಮ ಚರಿತಂ

ಶ್ರೀ. ಸಾಲಿ ರಾಮಚಂದ್ರರಾಯ ವಿರಚಿತಂ

ಸಂಸ್ಕೃತ ನೂತನಕಾವ್ಯ — ಕ್ರಯ ೧ ರೂಪಾಯಿ

"ತುಂಬ ಆಶ್ಚರ್ಯವಾಯಿತು ಮನಮೆಚ್ಚಿದೆ. ಬಹಳ ಚನ್ನಾಗಿದೆ. ಬಹಳ ಚಲೋದಾಗಿದೆ ತುಂಬ ಸರಲವೂ ಸರಸವೂ ಆಗಿದೆ, ಸಂಸ್ಕೃತ ಕಾವ್ಯಸಾಹಿತ್ಯದ ಉದ್ದಾಮ ಕವಿಗಳನ್ನು ಪದೇ ಪದೇ ನೆನಪಿಸುತ್ತಲೂ ಇದೆ. ಹಳಗಾಲದ ಸಂಸ್ಕೃತ ಸಾಹಿತ್ಯ ವನದಿಂದ ಎತ್ತಿಕೊಂಡು ಇಂದಿನ ಸಾಹಿತ್ಯವನದಲ್ಲಿ ಕಸಿ ಮಾಡಿದ ಬಳ್ಳಿಯ ಹಣ್ಣಿನಂತಿದೆ. ಕಸಿಯ ಹಣ್ಣು ರೂಪದಲ್ಲೂ ರುಚಿಯಲ್ಲೂ ತಾಯಿ ಹಣ್ಣನ್ನು ಬಿಟ್ಟಿರಲಾರದಷ್ಟೆ"

ರಾಷ್ಟ್ರಕವಿ — ಶ್ರೀ. ಎಂ. ಗೋವಿಂದ ಪೈ

ಪ್ರತಿಗಳು

ಆಕಳವಾಡಿ ಬುಕ್‌ಡಿಪೋ, ವಿಜಯರೋಡ
ಧಾರವಾಡ

ಸಂಸ್ಕೃತಿ ಪ್ರಕಾಶನ ನೂಳನುಡಿ ಧಾರವಾಡ

ದೇವರ ಸಾನ್ನಿಧ್ಯಕ್ಕೆ

(ಒಂದು ಕಥೆ)

ಶ್ರೀ. ಕೆ. ಶಂಕರ ಭಟ್ಟ ಪೆರ್ಲಾ, ಬಿ. ಎ., ಬಿ. ಟಿ.

卐

ಕೆಲವೊಂದು ವ್ಯಕ್ತಿಗಳ ಬಾಳಿನಲ್ಲಿ ಬರಿ ದುಃಖವೇ ತುಂಬಿರುವುದು. ಇಂತಹರು ಸುಖದ ಆಶೆಯಿಂದ ಮಾಡುವ ದೈವಿಕ ವ್ರತ-ನಿಯಮಗಳೂ ಹೊಸ ಹೊಸ ದುಃಖದ ಘಟನೆಗಳಿಗೆ ಕಾರಣವಾಗುವುವು. ಇದರ ಲೌಕಿಕಕಾರಣವನ್ನು ತಿಳಿಯದ ಸಾಮಾನ್ಯ ಜನತೆ, ಅಂತಹ ವ್ಯಕ್ತಿಗಳನ್ನು ದುರ್ದೈವಿಗಳ ಮಾಲಿಕೆಗೆ ಸೇರಿಸುವುದು.

卐

ಹೊತ್ತು ಇಳಿಯುತ್ತ ಬಂದಂತೆ ಅವನ ನಡಿಗೆಯ ಗತಿ ನಿಧಾನವಾಯಿತು. ಅವನೊಬ್ಬನೇ ಆಗಿದ್ದರೆ ದಾರಿಯನ್ನು ವೇಗವಾಗಿ ಕ್ರಮಿಸುತ್ತಿದ್ದನೋ ಏನೋ; ಆದರೆ ಅವನ ಹೆಗಲಿಗೆ ಭಾರವಾಗಿ ಮಗುವೊಂದು ಬಿದ್ದಿತ್ತು. ಅದು ಅವನದೇ ಮಗು—ತನ್ನ ಹೆಗಲಿಗೆ ಹೊರೆ ಎಂದು ಹೇಳಲಾರ. ಅವನಿಂದ ಹತ್ತು ಮಾರು ಹಿಂದೆ ಅವನ ಹೆಂಡತಿಯೂ ಅವನನ್ನು ಅನುಸರಿಸುತ್ತಿದ್ದಾಳೆ ಹೆಗಲಿನಲ್ಲಿಲ್ಲದಿದ್ದರೂ, ತನ್ನುದರದಲ್ಲೇ ಇನ್ನೊಂದು ಶಿಶುವನ್ನು ಹೊತ್ತ ಆಕೆ—ಹೊರೆಯಿಂದ ಭಾರವಾದ ಹೆಜ್ಜೆಗಳನ್ನು ನಿಧಾನವಾಗಿ ಇಟ್ಟರೂ—ಬಳಲಿದ್ದಾಳೆ. ತನ್ನ ಮುಂದೆ ನಡೆಯುವ ಗಂಡನನ್ನು ಅನುಸರಿಸುವ ಪ್ರಯತ್ನದಲ್ಲಿ ಕಾಲುಗಳು ಸೋತು ಸುಣ್ಣವಾಗಿದ್ದಾಳೆ.

ಗುಡ್ಡದ ಇಳಿಜಾರಿನಲ್ಲಿ ಏರುತಗ್ಗಿಗನುಸಾರವಾಗಿ ಸಾಗುವ ದಾರಿಯಲ್ಲಿ, ಅಲ್ಲಲ್ಲಿ ಪೊದರುಗಳು ಆಡ್ಡವಾಗಿ ನಿಂತಿವೆ. ಬಸುರಿಯಾದ ಆಕೆ, ಹೊರೆಹೊತ್ತ ಹೆಂಗಸಿನಂತೆ, ಉಸಿರನ್ನು ಎಳೆದೆಳೆದು ಬಿಡುವಾಗ, ಎದೆಯ ಏರಿಳಿತದಲ್ಲಿ ಲಾಸ್ಯವಿತ್ತು—ಎನ್ನಲಾರೆ; ಬದಲು ಆಯಾಸ-ಅನುಕಂಪಗಳ ತೆರೆಗಳ ಏಳುಬೀಳುಗಳನ್ನು ಗುರುತಿಸಬಲ್ಲೆ. ಆ ಗುಡ್ಡವನ್ನು ಸುತ್ತಿ ಸಾಗುವ ಬಳಸುದಾರಿಗೆ ಕೊನೆಯಿಲ್ಲವೋ ಏನೋ! ದೂರದೂರಕ್ಕೆ ಸಾಗಿದಂತೆ ದಾರಿಯೇ ಅಸ್ಪಷ್ಟವಾಗಿ, ಹುಲ್ಲು ಪೊದೆಗಳ ಹಸುರೇ ಕಂಗೊಳಿಸುವುದು ಹೊರತು, ದಾರಿಯ ಗೆರೆ ಮಸಕಾಗುತ್ತ ಬರುತ್ತದೆ.

ಮಸಕಾಗುತ್ತ ಬರುತ್ತದೆ - ಪಡುವಲಲ್ಲಿ ನೇಸರು ಕಣ್ಮರೆಯಾಗುತ್ತಿದ್ದಾನೆ. ದಿನವಿಡೀ ಬಾನಲೆದ ನೇಸರಿಗೆ ದಣಿವಡಸಿದಂತೆ ವಿಶ್ರಾಂತಿಯ ನೆಲೆಗೆ ತೆರಳುತ್ತಿದ್ದಾನೆ.

ಆದರೆ ಆ ದಂಪತಿಗಳಿಬ್ಬರ ದಾರಿ ಕೊನೆಗೊಂಡಿಲ್ಲವೇನೋ! ಅವರ ಗುರಿ ದೂರದಲ್ಲಿದೆ. ಅವರು ದಾರಿ ಸಾಗುತ್ತಲೇ ಇದ್ದಾರೆ. ಗಂಡಸಿನ ಕೈಯಲ್ಲಿದ್ದ ಮಗು ಕೀರುಧ್ವನಿ ತೆಗೆದು ಅಳತೊಡಗಿತು. ಅದು ಹಸಿವೆಯ ಸೂಚನೆಯನ್ನು ಕೊಟ್ಟದ್ದು ಎಂದು ಆತನಿಗೆ ಗೊತ್ತು. ಬಾಯಲ್ಲಿಟ್ಟು ಚೀಪುವ ಬೆರಳನ್ನು ತೆಗೆದು 'ಮಮ್ಮು' ಎಂದು ಕಿರಿಚುವುದಕ್ಕೆ ಕಲಿತ ಪ್ರಾಯ ಅದಕ್ಕೆ. ಅದರ ಹಸಿವೆಯನ್ನು ತೀರಿಸುವ ಯಾವುದೇ ಸಾಧನ ಗಂಡಸಿನ ಕೈಯಲ್ಲಿ ಇಲ್ಲದಾಗಿದೆ. ಅವನ ಹೃದಯದಿಂದ ಮೂಡಿಬಂದ ಕರುಣೆ, ಸಿಟ್ಟಿನ ಅಂಗಿಯನ್ನು ತೊಟ್ಟು, ಮೋರೆಯಲ್ಲಿ ಹೆಣೆದುಕೊಂಡಿರುವ ಭಂಗಿಯಲ್ಲಿ ವ್ಯಕ್ತವಾಗುತ್ತಿದೆ. ಅಳುವ ಮಗುವನ್ನು ಅದರ ತಾಯ ಕೈಯಲ್ಲಿ ಆತ ಕೊಡಲಾರ. ಅವಳು ಕ್ಷಣಕ್ಷಣಕ್ಕೂ ಆಯಾಸಗೊಂಡು ನಡೆಯಲಾರದವಳಾಗಿದ್ದಾಳೆ. ಅವರೊಳಗಿನ ಅಂತರ ಹೆಚ್ಚುತ್ತಿದೆ. ಆ ಗಂಡಸು ನಡಿಗೆಯನ್ನು ನಿಲ್ಲಿಸಿ, ಹೆಂಗುಸಿನ ಕಡೆಗೆ ತಿರುಗಿ ಬೇಸರದ ಎಳೆಯಲ್ಲಿ ಸಹಾಯಕತೆಯ ಮಾತನ್ನು ನೇಯುತ್ತಾನೆ: "ಹೌದೇ, ನೀನು ಹೀಗೆ ನಡೆದರೆ ಹೇಗೆ? ಈ ರಾತ್ರಿಯನ್ನು ಗುಡ್ಡದಲ್ಲಿ ಕಳೆಯುವುದೇ ನಮ್ಮ ಗತಿಯೋ ಏನೋ! ನೀನು ಸ್ವಲ್ಪ ಹುಷಾರಾಗಿ ನಡೆ. ಎಲ್ಲಿಯಾದರೂ ಸಮೀಪದಲ್ಲಿ ಇರುವ ಬ್ರಾಹ್ಮಣರ ಮನೆಯೊಂದನ್ನು ತಲಪೋಣ. ಈ ಮಗುವಿಗೆ ಒಂದಿಷ್ಟು ಗಂಜಿ ತಿಳಿ ಸಿಕ್ಕಿದರೆ......ನಾವು ರಾತ್ರಿಯನ್ನು ಹೇಗೂ ಕಳೆಯಬಹುದು."

"ಯಾರ ಮನೆಯೂ ಆದೀತು. ಬ್ರಾಹ್ಮಣರ ಮನೆ ಹುಡುಕುತ್ತ ಎಲ್ಲಿ ಅಲೆಯೋಣ. ಮುಂದೆ ಅರ್ಧ ಮೈಲು ನಡೆದರೆ ಶ್ರೀಮಂತರ ಮನೆಯೊಂದು ಸಿಗುತ್ತದೆಂದು, ಆಗ ಕಾಣಸಿಕ್ಕಿದ ಹೆಂಗುಸೊಬ್ಬಳು ಹೇಳಿದಳು...." ಅವಳ ಮಾತುಗಳು ನಿಧಾನವಾಗಿ ಬರುತ್ತಿದ್ದುವು. ಅವಳ ರೀತಿಯನ್ನು ನೋಡಿದಾಗ, ಅವಳೊಡನೆ ಮಾತನ್ನು ಸಾಕು ಮಾಡುವುದೇ ಲೇಸೆಂದು ಆ ಗಂಡನಿಗೆ ಕಂಡಿತು

"ಆಗಲಿ, ನೀನೊಮ್ಮೆ ಆದಷ್ಟು ಬೇಗನೆ ಬಾ; ಹಿಂದೆ ಬೀಳಬೇಡ." ಎಂದು ನುಡಿದು, ದಾರಿ ನಡೆಯುತ್ತಿದ್ದಂತೆಯೇ ಅಳುವ ಮಗುವನ್ನು ತನ್ನೆದೆಗೆ ಬಲವಾಗಿ ಅಪ್ಪಿಕೊಂಡು—ನಿರ್ದಯತೆಯನ್ನೇ ಆಲಿಂಗಿಸಿದವನಂತೆ—ಹೆಜ್ಜೆಯಿಕ್ಕತೊಡಗಿದ.

ಹಗಲಲ್ಲಿ ಹರಡಿದ್ದ ಬೆಳಕಿನ ಲೇಶ ಕತ್ತಲೆಯ ಮಸಿಯಲ್ಲಿ

ತೋರುತ್ತಿದ್ದಂತೆ, ಆ ವ್ಯಕ್ತಿಗಳಿಬ್ಬರೂ ಅಸ್ಪಷ್ಟವಾಗತೊಡಗಿದರು. ಮೈಚಾಚಿ ಮಲಗಿದ ಗುಡ್ಡದ ಓರೆಯ ಹಿನ್ನೆಲೆಯಲ್ಲಿ ಕರಿನೆರಳು-ಗಳೆರಡು ಚಲಿಸಿದಂತೆ ತೋರುತ್ತದೆ. ಗಂಡುಸು ಯಾರು—ಹೆಂಗುಸು ಯಾರು—ಎಂಬ ವ್ಯತ್ಯಾಸ ಕೊನೆಗೆ ಮಾಸಿಹೋಗಿ, ನೆರಳುಗಳ ನಡಿಗೆಯೇ ಕತ್ತಲಲ್ಲಿ ಕರಗುತ್ತದೆ.

ಗುಡ್ಡದ ಇಳಿಜಾರಿನಲ್ಲಿ ಸಂಜೆಯ ಕಿರುಗಾಳಿ ಶೀತಲವಾಗಿ ಬೀಸುತ್ತಿದೆ. ಬಾನಲ್ಲಿ ಅಲ್ಲೊಂದು ಇಲ್ಲೊಂದು ಹರಡಿಕೊಂಡಿರುವ ತೊನ್ನುಮೋಡಗಳು ನಿಧಾನವಾಗಿ ದಟ್ಟೈಯಿಸುವಂತೆ ತೋರುತ್ತಿದೆ. ಮೋಡಗಳೆಲ್ಲದೆಡೆ ಸಂಜೆಯ ತಾರೆಗಳು ಕ್ಷೀಣ ಬೆಳಕಿನಲ್ಲಿ ತೊಳಗುತ್ತಿವೆ. ಇಂತಹ ಸಮಯದಲ್ಲಿ ಮಳೆಯೂ ಹನಿಯತೊಡಗಿದರೆ ತಮ್ಮ ಗತಿಯೇನೆಂಬ ಹೊಸ ಭೀತಿ ಗಂಡುಸಿನ ಮನಸಿನಲ್ಲಿ ಗುಡು-ಗಾಡುತ್ತದೆ. ಕೂಡಲೇ ಆತನ ನಡಿಗೆ ನಿಂತುಹೋಗಿ, ತನ್ನ ಹೆಂಡತಿಗಾಗಿ ಕಾಯುತ್ತಾನೆ. ಪೊದರುಗಳೆಡೆಯಲ್ಲಿ, ಸೀರೆಯ ನೆರಿಯನ್ನು ಎತ್ತಿಹಿಡಿದುಕೊಂಡು, ಹರಿದಾಡುವ ಜಂತುಗಳಿಗೆ ಅಂಜುತ್ತ, ಆಕೆ ಅವಸರವಾಗಿ ನಡೆಯುತ್ತಿದ್ದರೂ ಅವಳ ನಡಿಗೆ ಎಷ್ಟು ನಿಧಾನ! ಗಂಡಸಿನ ತಾಳ್ಮೆ ಕೆಡುತ್ತಿದ್ದರೂ ಆತ ಕಾಯುತ್ತಾನೆ. ಅವಳು ಬಂದು ಅವನನ್ನು ಸೇರಿ ಅವನು ಪುನಃ ನಡಿಗೆಯನ್ನು ಆರಂಭಿಸಿದಾಗ, ಮಿಂಚುವ ಮಿಣುಕು ಹುಳದಂತೆ ದೂರ ಮನೆಯೊಂದರಲ್ಲಿ ಉರಿಯುವ ದೀಪದ ಕುಡಿಬೆಳಕು ಗೋಚರಿಸುತ್ತದೆ. ಆ ಚಿಕ್ಕ ಸೊಡರೊಂದು ಅವರ ಎದೆಬಾನಿನಲ್ಲಿ ತಾರೆಯ ಮಂದ ಪ್ರಕಾಶದಂತೆ ಆಸೆಯ ಬೆಳಕನ್ನು ಮೊಳೆಯಿಸುತ್ತದೆ.

ನಿಧಾನವಾಗಿ ಕಳೆಗಳೆದ ದಾರಿ, ಒಂದು ಗದ್ದೆಯನ್ನು ಅಡ್ಡ ಹಾಯ್ದು, ಹಲಸಿನ ಬುಡವೊಂದರ ಬದಿಯಲ್ಲಾಗಿ, ಒಂದು ಮನೆ-ಯತ್ತ ಸಾಗುವುದು. ಗದ್ದೆಹುಣಿಯಲ್ಲಿ ಎಲ್ಲಿ ಆಕೆ ಜಾರಿ ಬೀಳುವಳೋ—ಎಂದು ಆತನಿಗೆ ಭಯ. ಕಾರಣ— ಶೀತಗಾಳಿಗೆ ಮೋಡಗಳು ಕರಗಲು ತೊಡಗಿ ಚಿಕ್ಕ ಧೂಳಹನಿಯಂತೆ ಮಳೆ ಬೀಳತೊಡಗಿದಾಗ, ವಾತಾವರಣದಲ್ಲೇ ಒದ್ದೆ ಆವರಿಸಿದಂತೆ ಚಳಿಯಾಗತೊಡಗಿತು. ಗದ್ದೆಹುಣಿಯ ಹುಲ್ಲು ಶೀತಗೊಂಡು ಕಾಲಿಗೆ ತಾಕಿದಾಗ, ಹೆಂಗುಸಿನ ನಡಿಗೆ ನಿಧಾನವಾಯಿತು. ಆ ಬಸುರಿ 'ತಡಮೆ'ಯೊಂದನ್ನು ನಿಧಾನವಾಗಿ ದಾಟುವ ಪ್ರಯತ್ನ ಮಾಡುತ್ತಿರುವಾಗ, ಮಳೆ ಹನಿ ದೊಡ್ಡದಾಗಿ, ಹಲಸಿನ ಮರದ ಎಲೆಗಳ ಮೇಲೆ 'ಪಟ, ಪಟ' ಸದ್ದಿನೊಡನೆ ಬೀಳುವುದಲ್ಲದೆ, ಮಣ್ಣಿನ ನೆಲದ ಮೇಲೆ ಭಾರವಾದ ನೀರಹನಿಗಳು ಬೀಳುವಾಗ ಒಡೆದು ಚೂರಾಗಿ ಕೆಸರಿನೊಂದಿಗೆ ಚಿಮ್ಮುವಾಗ, ಮೊಣಕಾಲ ವರೆಗೆ ನೆಗೆಯತೊಡಗಿದವು. ಆದಷ್ಟು ಬೇಗನೆ ಮನೆಯನ್ನು ಸೇರುವ ತವಕದಿಂದ, ಆ ಗಂಡುಸು ನಾಚಿಕೆ-ಯನ್ನು ಬಿಟ್ಟು ಆಕೆಯ ಕೈಹಿಡಿದು ಬೇಲಿ ದಾಟಿಸಿ, ಮೆಟ್ಟಲುಗಳಲ್ಲಿ ಜಾಗರೂಕತೆಯಿಂದ ಹೆಜ್ಜೆಯಿರಿಸತೊಡಗಿದ. ಅಲ್ಲಿ ಸುಮಾರು ಮೂವತ್ತರಷ್ಟು ಮೆಟ್ಟಲುಗಳಿದ್ದಿರಬಹುದು. ಅಷ್ಟು ತಗ್ಗಿನಲ್ಲಿದ್ದ ಮನೆ ಅದು.

ಅಪರಿಚಿತರ ಆಗಮನದ ಅರಿವಾಗಿ ಮನೆಯ ನಾಯಿ ದೊಡ್ಡ ದನಿ ತೆಗೆದು ಬೊಗಳತೊಡಗಿತು. ದಂಪತಿಗಳು ಭೀತರಾಗಿ ಮೆಟ್ಟಲಿನ ಬಳಿಯೇ ನಿಂತರು. ಚಾವಡಿಯಿಂದ, "ಕೇಶವ, ಯಾರದು ನೋಡು" ಎಂಬ ದೊಡ್ಡ ಸ್ವರ ಕೇಳಿಸುತ್ತಿದ್ದಂತೆ, ಎಂಟು ಹತ್ತು ವರುಷದ ಹುಡುಗನೊಬ್ಬನು ಬಾಗಿಲ ಬಳಿಗೆ ಬಂದು, "ದಾಸು, ದಾಸು.... ತ್ಸು....ತ್ಸು...." ಎಂದು ನಾಯನ್ನು ಕರೆದನು. ನಾಯಿ ದನಿ ಕೆಳಗಿಳಿಸುತ್ತಾ ಹಿಂದೆ ಹಿಂದೆ ಸರಿದು, ಜಗಲಿಯ ಬಾಗಿಲ ಬಳಿಗೆ ಬಂದಿತು.

ಆ ದಂಪತಿಗಳು ಅಂಗಳಕ್ಕಿಳಿದು ಚಾವಡಿಯ ಹೊರಗಿನ ಜಗಲಿಯ ಬಳಿಗೆ ಬಂದು ಒರಗಿ ನಿಂತರು. ಆ ಗಂಡುಸು ಮಗುವನ್ನು ಜಗುಲಿಯಲ್ಲಿಳಿಸಿದ. "ನಿಮಗೆ ಯಾವ ಊರಾಯಿತು ?" ಎಂದು ಚಾವಡಿಯಲ್ಲಿ ಕುಳಿತ ಮನೆಯ ಯಜಮಾನ ಮಲೆಯಾಳದಲ್ಲಿ ಕೇಳಿದ. "ನಾವು ಮಲೆಯಾಳಿಗಳಲ್ಲ. ನಾವು ಕುದ್ರುಪದವಿನವರು. ಧರ್ಮಪುರಕ್ಕೆ ಹೋಗಬೇಕಿತ್ತು; ದಾರಿಯಲ್ಲಿ ಕತ್ತಲಾಯ್ತು. ಹಾಗೆ ಇಲ್ಲಿಗೆ ಬಂದೆವು. ನಮಗೆ ಮಲಗಲಿಕ್ಕೆ ಒಂದಿಷ್ಟು ಜಾಗೆ ಕೊಟ್ಟರೆ ಸಾಕು. ಊಟಗೀಟ ಒಂದೂ ಬೇಡ." ಎಂದು ಎಲ್ಲವನ್ನೂ ಒಂದೇ ಉಸಿರಿನಲ್ಲಿ ಆ ಗಂಡುಸು ಹೇಳಿದ.

"ಹಾಗಾದರೆ ನೀವು ದೇಶಾವರಕ್ಕೆ ಬಂದವರಲ್ಲವೋ ?" ಎಂದು ಕೇಳಿದುದಕ್ಕೆ, "ಅದು ನಮ್ಮ ಉದ್ದೇಶವಲ್ಲ" ಎಂದು ಗಂಡುಸು ಉತ್ತರಿಸಿದ. ಬೇಡುವ ಮಲೆಯಾಳಿಗಳಲ್ಲವೆಂಬುದನ್ನು ಕೇಳಿ, ಮನೆಯ ಯಜಮಾನನಿಗೆ ಅವರು ಕೆಟ್ಟವರೂ ಕಳ್ಳರೂ ಇರಲಾರರೆಂದು ನಂಬಿಕೆ ಹುಟ್ಟಿತು. ಅಷ್ಟರಲ್ಲಿ ಹೊರಗೆ ಮಳೆ ಜೋರಾಗಿ ಸುರಿಯಲು ಆರಂಭಿಸಿ, ಅವರಿಗೆ ರಾತ್ರಿ ಮನೆಯಲ್ಲೇ ಆಶ್ರಯಕೊಡುವುದೆಂಬ ನಿರ್ಧಾರವನ್ನು ದೃಢಗೊಳಿಸಿತು. "ನೀವು ಆ ಹೊರಜಗುಲಿಯಲ್ಲೇ ರಾತ್ರಿಯಿರಬೇಕಷ್ಟೆ!" ಎಂದು ಹೇಳಿದುದಕ್ಕೆ, "ಓ, ಅದೇ ನಮಗೆ ಧಾರಾಳವಾಯಿತು." ಎಂದು ಆತ ಹೇಳಿ, ಜಗುಲಿಯಲ್ಲಿ ಕುಳಿತ. ಆ ಹೆಂಗುಸು ಆಗಲೇ ಜಗುಲಿಯಲ್ಲಿ ಕುಳಿತಿದ್ದಳು

ಮಲಗಲು ಜಾಗೆ ಕೊಡುವೆನೆಂದು ಆ ಮನೆಯ ಯಜಮಾನ ಹೇಳಿದ್ದರೂ, ಅವನು ಕಠಿಣಮನಸ್ಕನೂ ಲೋಭಿಯೂ ಆಗಿರಲಿಲ್ಲ. ಅವನು ಊಟವನ್ನು ತೀರಿಸಿ ಹೊರಗೆ ಬಂದು ವೀಳೆಯ ಜಗಿಯಲು ಆರಂಭಿಸಿದಾಗ, ಅವನ ಮುದಿತಾಯಿ ಎರಡು 'ಹಾಳೆ'ಗಳನ್ನೂ, ಚೆಂಬಿನಲ್ಲಿ ನೀರನ್ನೂ ತಂದು ಹೊರಜಗಲಿಯಲ್ಲಿರಿಸಿದಳು. ಅವರಿಬ್ಬರೂ ತುಂಬ ಸಂತೋಷಗೊಂಡರು. ದಣಿದು ಜಲ್ಲೇ ನಿದ್ರಿಸಿದ್ದ ಮಗುವನ್ನು ಆ ತಾಯಿ ಎಬ್ಬಿಸಿದಳು. ಮಗುವು ಅರೆನಿದ್ರೆಯಲ್ಲಿ ಅಳುವುದಕ್ಕಾ-ರಂಭಿಸಿದರೂ, ಊಟದ ಹಾಳೆಯನ್ನು ನೋಡಿ ಅದರ ಬುಡಕ್ಕೆ ಬಂದಿತು. ಅದೇ ಅಜ್ಜಮ್ಮ ಒಳಗಿನಿಂದ ಹರಿವಾಣದಲ್ಲಿ ಅನ್ನ ತಂದು ಎರಡು ಹಾಳೆಗಳಿಗೂ ಇಕ್ಕಿದಳು. ಅವಳ ದೃಷ್ಟಿ ಆ ಹೆಂಗುಸಿನ ಕಡೆಗೆ ಹೊರಳಿದಾಗ, ಅವಳು ಬಸುರಿ ಎಂಬುದು ಆಕೆಗೆ ಅರಿವಾಗಿ, ಯಾವುದೋ ಅವ್ಯಕ್ತ ಕರುಣೆ ಮೂಡಿ ಬಂದು, "ಈ ದಿನ ನಾಯಿಗೆ ಕೂಳಿಲ್ಲದಿದ್ದರೆ ಅಷ್ಟೇ ಹೋಯಿತು" ಎಂಬ ಭಾವ ಬಂದು, ತಿರುಗಿ ಒಂದಿಷ್ಟು ಅನ್ನ ತಂದು ಹಾಳೆಗಳಿಗೆ ಸುರುವಿದಳು. ಹಸಿದು

ದೇವರ ಸಾನ್ನಿಧ್ಯಕ್ಕೆ

(ಒಂದು ಕಥೆ)

ಶ್ರೀ. ಕೆ. ಶಂಕರ ಭಟ್ಟ ಪೆರ್ಲಾ, ಬಿ. ಎ., ಬಿ. ಟಿ.

卐

ಕೆಲವೊಂದು ವ್ಯಕ್ತಿಗಳ ಬಾಳಿನಲ್ಲಿ ಬರಿ ದುಃಖವೇ ತುಂಬಿರುವುದು. ಇಂತಹರು ಸುಖದ ಆಶೆಯಿಂದ ಮಾಡುವ ದೈವಿಕ ವ್ರತ-ನಿಯಮಗಳೂ ಹೊಸ ಹೊಸ ದುಃಖದ ಘಟನೆಗಳಿಗೆ ಕಾರಣವಾಗುವುವು. ಇದರ ಲೌಕಿಕಕಾರಣವನ್ನು ತಿಳಿಯದ ಸಾಮಾನ್ಯ ಜನತೆ, ಅಂತಹ ವ್ಯಕ್ತಿಗಳನ್ನು ದುರ್ದೈವಿಗಳ ಮಾಲಿಕೆಗೆ ಸೇರಿಸುವುದು.

卐

ಹೊತ್ತು ಇಳಿಯುತ್ತ ಬಂದಂತೆ ಅವನ ನಡಿಗೆಯ ಗತಿ ನಿಧಾನ-ವಾಯಿತು. ಅವನೊಬ್ಬನೇ ಆಗಿದ್ದರೆ ದಾರಿಯನ್ನು ವೇಗವಾಗಿ ಕ್ರಮಿಸುತ್ತಿದ್ದನೋ ಏನೋ; ಆದರೆ ಅವನ ಹೆಗಲಿಗೆ ಭಾರವಾಗಿ ಮಗುವೊಂದು ಬಿದ್ದಿತ್ತು. ಅದು ಅವನದೇ ಮಗು—ತನ್ನ ಹೆಗಲಿಗೆ ಹೊರೆ ಎಂದು ಹೇಳಲಾರ. ಅವನಿಂದ ಹತ್ತುಮಾರು ಹಿಂದೆ ಅವನ ಹೆಂಡತಿಯೂ ಅವನನ್ನು ಅನುಸರಿಸುತ್ತಿದ್ದಾಳೆ ಹೆಗಲಿನಲ್ಲಲ್ಲದಿದ್ದರೂ, ತನ್ನುದರದಲ್ಲೇ ಇನ್ನೊಂದು ಶಿಶುವನ್ನು ಹೊತ್ತ ಆಕೆ—ಹೊರೆಯಿಂದ ಭಾರವಾದ ಹೆಜ್ಜೆಗಳನ್ನು ನಿಧಾನವಾಗಿ ಇಟ್ಟರೂ—ಬಳಲಿದ್ದಾಳೆ. ತನ್ನ ಮುಂದೆ ನಡೆಯುವ ಗಂಡನನ್ನು ಅನುಸರಿಸುವ ಪ್ರಯತ್ನದಲ್ಲಿ ಕಾಲುಗಳು ಸೋತು ಸುಣ್ಣವಾಗಿದ್ದಾಳೆ.

ಗುಡ್ಡದ ಇಳಿಜಾರಿನಲ್ಲಿ ಏರುತಗ್ಗಿಗನುಸಾರವಾಗಿ ಸಾಗುವ ದಾರಿಯಲ್ಲಿ, ಅಲ್ಲಲ್ಲಿ ಪೊದರುಗಳು ಅಡ್ಡವಾಗಿ ನಿಂತಿವೆ. ಬಸುರಿಯಾದ ಆಕೆ, ಹೊರೆಹೊತ್ತ ಹೆಂಗಸಿನಂತೆ, ಉಸಿರನ್ನು ಎಳೆದೆಳೆದು ಬಿಡುವಾಗ, ಎದೆಯ ಏರಿಳಿತದಲ್ಲಿ ಲಾಸ್ಯವಿತ್ತು—ಎನ್ನಲಾರೆ; ಬದಲು ಆಯಾಸ-ಅನುಕಂಪಗಳ ತೆರೆಗಳ ಏಳುಬೀಳುಗಳನ್ನು ಗುರುತಿಸಬಲ್ಲೆ. ಆ ಗುಡ್ಡವನ್ನು ಸುತ್ತಿಸಾಗುವ ಬಳಸುದಾರಿಗೆ ಕೊನೆಯಿಲ್ಲವೋ ಏನೋ! ದೂರದೂರಕ್ಕೆ ಸಾಗಿದಂತೆ ದಾರಿಯೇ ಅಸ್ಪಷ್ಟವಾಗಿ, ಹುಲ್ಲು ಪೊದೆಗಳ ಹಸುರೇ ಕಂಗೊಳಿಸುವುದು ಹೊರತು, ದಾರಿಯ ಗೆರೆ ಮಸಕಾಗುತ್ತ ಬರುತ್ತದೆ.

ಮಸಕಾಗುತ್ತ ಬರುತ್ತದೆ - ಪಡುವಲಲ್ಲಿ ನೇಸರು ಕಣ್ಮರೆ-ಯಾಗುತ್ತಿದ್ದಾನೆ. ದಿನವಿಡೀ ಬಾನಲೆದ ನೇಸರಿಗೆ ದಣಿವಡಸಿದಂತೆ ವಿಶ್ರಾಂತಿಯ ನೆಲೆಗೆ ತೆರಳುತ್ತಿದ್ದಾನೆ.

ಆದರೆ ಆ ದಂಪತಿಗಳಿಬ್ಬರ ದಾರಿ ಕೊನೆಗೊಂಡಿಲ್ಲವೇನೋ! ಅವರ ಗುರಿ ದೂರದಲ್ಲಿದೆ. ಅವರು ದಾರಿ ಸಾಗುತ್ತಲೇ ಇದ್ದಾರೆ. ಗಂಡಸಿನ ಕೈಯಲ್ಲಿದ್ದ ಮಗು ಕೀರುಧ್ವನಿ ತೆಗೆದು ಅಳತೊಡಗಿತು. ಅದು ಹಸಿವೆಯ ಸೂಚನೆಯನ್ನು ಕೊಟ್ಟುದು ಎಂದು ಆತನಿಗೆ ಗೊತ್ತು. ಬಾಯಲ್ಲಿಟ್ಟು ಚೀಪುವ ಬೆರಳನ್ನು ತೆಗೆದು 'ಮಮ್ಮು' ಎಂದು ಕಿರಿಚುವುದಕ್ಕೆ ಕಲಿತ ಪ್ರಾಯ ಅದಕ್ಕೆ. ಅದರ ಹಸಿವೆಯನ್ನು ತೀರಿಸುವ ಯಾವುದೇ ಸಾಧನ ಗಂಡಸಿನ ಕೈಯಲ್ಲಿ ಇಲ್ಲದಾಗಿದೆ. ಅವನ ಹೃದಯದಿಂದ ಮೂಡಿಬಂದ ಕರುಣೆ, ಸಿಟ್ಟಿನ ಅಂಗಿಯನ್ನು ತೊಟ್ಟು, ಮೋರೆಯಲ್ಲಿ ಹೆಣೆದುಕೊಂಡಿರುವ ಭಂಗಿಯಲ್ಲಿ ವ್ಯಕ್ತ-ವಾಗುತ್ತಿದೆ. ಅಳುವ ಮಗುವನ್ನು ಅದರ ತಾಯ ಕೈಯಲ್ಲಿ ಆತ ಕೊಡಲಾರ. ಅವಳು ಕ್ಷಣಕ್ಷಣಕ್ಕೂ ಆಯಾಸಗೊಂಡು ನಡೆಯ-ಲಾರದವಳಾಗಿದ್ದಾಳೆ. ಅವರೊಳಗಿನ ಅಂತರ ಹೆಚ್ಚುತ್ತಿದೆ. ಆ ಗಂಡಸು ನಡಿಗೆಯನ್ನು ನಿಲ್ಲಿಸಿ, ಹೆಂಗುಸಿನ ಕಡೆಗೆ ತಿರುಗಿ ಬೇಸರದ ಎಳೆಯಲ್ಲಿ ಸಹಾಯಕತೆಯ ಮಾತನ್ನು ನೇಯುತ್ತಾನೆ: "ಹೌದೇ, ನೀನು ಹೀಗೆ ನಡೆದರೆ ಹೇಗೆ? ಈ ರಾತ್ರಿಯನ್ನು ಗುಡ್ಡದಲ್ಲಿ ಕಳೆಯ-ಯುವುದೇ ನಮ್ಮ ಗತಿಯೋ ಏನೋ! ನೀನು ಸ್ವಲ್ಪ ಹುಷಾರಾಗಿ ನಡೆ. ಎಲ್ಲಿಯಾದರೂ ಸಮೀಪದಲ್ಲಿ ಇರುವ ಬ್ರಾಹ್ಮಣರ ಮನೆಯೊಂದನ್ನು ತಲಪೋಣ. ಈ ಮಗುವಿಗೆ ಒಂದಿಷ್ಟು ಗಂಜಿ ತಿಳಿ ಸಿಕ್ಕಿದರೆ.........ನಾವು ರಾತ್ರಿಯನ್ನು ಹೇಗೂ ಕಳೆಯಬಹುದು."

"ಯಾರ ಮನೆಯೂ ಆದೀತು. ಬ್ರಾಹ್ಮಣರ ಮನೆ ಹುಡು-ಕುತ್ತ ಎಲ್ಲಿ ಅಲೆಯೋಣ. ಮುಂದೆ ಅರ್ಧ ಮೈಲು ನಡೆದರೆ ಶ್ರೀಮಂತರ ಮನೆಯೊಂದು ಸಿಗುತ್ತದೆಂದು, ಆಗ ಕಾಣಸಿಕ್ಕಿದ ಹೆಂಗುಸೊಬ್ಬಳು ಹೇಳಿದಳು...." ಅವಳ ಮಾತುಗಳು ನಿಧಾನವಾಗಿ ಬರುತ್ತಿದ್ದುವು. ಅವಳ ರೀತಿಯನ್ನು ನೋಡಿದಾಗ, ಅವಳೊಡನೆ ಮಾತನ್ನು ಸಾಕು ಮಾಡುವುದೇ ಲೇಸೆಂದು ಆ ಗಂಡಸಿಗೆ ಕಂಡಿತು

"ಆಗಲಿ, ನೀನೊಮ್ಮೆ ಆದಷ್ಟು ಬೇಗನೆ ಬಾ; ಹಿಂದೆ ಬೀಳ-ಬೇಡ." ಎಂದು ನುಡಿದು, ದಾರಿ ನಡೆಯುತ್ತಿದ್ದಂತೆಯೇ ಅಳುವ ಮಗುವನ್ನು ತನ್ನೆದೆಗೆ ಬಲವಾಗಿ ಅಪ್ಪಿಕೊಂಡು—ನಿರ್ದಯತೆಯನ್ನೇ ಆಲಿಂಗಿಸಿದವನಂತೆ—ಹೆಜ್ಜೆಯಿಕ್ಕತೊಡಗಿದ.

ಹಗಲಲ್ಲಿ ಹರಡಿದ್ದ ಬೆಳಕಿನ ಲೇಪ ಕತ್ತಲೆಯ ಮಸಿಯಲ್ಲಿ

ತೋಯುತ್ತಿದ್ದಂತೆ, ಆ ವ್ಯಕ್ತಿಗಳಿಬ್ಬರೂ ಅಸ್ಪಷ್ಟವಾಗತೊಡಗಿದರು. ಪೈಚಾಚಿ ಮಲಗಿದ ಗುಡ್ಡದ ಓರೆಯ ಹಿನ್ನೆಲೆಯಲ್ಲಿ ಕರಿನೆರಳು-ಗಳೆರಡು ಚಲಿಸಿದಂತೆ ತೋರುತ್ತದೆ. ಗಂಡುಸು ಯಾರು—ಹೆಂಗುಸು ಯಾರು—ಎಂಬ ವ್ಯತ್ಯಾಸ ಕೊನೆಗೆ ಮಾಸಿಹೋಗಿ, ನೆರಳುಗಳ ನಡಿಗೆಯೇ ಕತ್ತಲಲ್ಲಿ ಕರಗುತ್ತದೆ.

ಗುಡ್ಡದ ಇಳಿಜಾರಿನಲ್ಲಿ ಸಂಜೆಯ ಕಿರುಗಾಳಿ ಶೀತಲವಾಗಿ ಬೀಸುತ್ತಿದೆ. ಬಾನಲ್ಲಿ ಅಲ್ಲೊಂದು ಇಲ್ಲೊಂದು ಹರಡಿಕೊಂಡಿರುವ ತೊನ್ನು ಮೋಡಗಳು ನಿಧಾನವಾಗಿ ದಟ್ಟಯಿಸುವಂತೆ ತೋರುತ್ತಿದೆ. ಮೋಡಗಳಿಲ್ಲದೆಡೆ ಸಂಜೆಯ ತಾರೆಗಳು ಕ್ಷೀಣ ಬೆಳಕಿನಲ್ಲಿ ತೊಳಗುತ್ತಿವೆ. ಇಂತಹ ಸಮಯದಲ್ಲಿ ಮಳೆಯೂ ಹನಿಯತೊಡಗಿದರೆ ತಮ್ಮ ಗತಿಯೇನೆಂಬ ಹೊಸ ಭೀತಿ ಗಂಡುಸಿನ ಮನಸಿನಲ್ಲಿ ಗುಡುಗಾಡುತ್ತದೆ. ಕೂಡಲೇ ಆತನ ನಡಿಗೆ ನಿಂತುಹೋಗಿ, ತನ್ನ ಹೆಂಡತಿಗಾಗಿ ಕಾಯುತ್ತಾನೆ. ಪೊದರುಗಳೆಡೆಯಲ್ಲಿ, ಸೀರೆಯ ನೆರಿಯನ್ನು ಎತ್ತಿಹಿಡಿದುಕೊಂಡು, ಹರಿದಾಡುವ ಜಂತುಗಳಿಗೆ ಅಂಜುತ್ತ, ಆಕೆ ಅವಸರವಾಗಿ ನಡೆಯುತ್ತಿದ್ದರೂ ಅವಳ ನಡಿಗೆ ಎಷ್ಟು ನಿಧಾನ! ಗಂಡಸಿನ ತಾಳ್ಮೆ ಕೆಡುತ್ತಿದ್ದರೂ ಆತ ಕಾಯುತ್ತಾನೆ. ಅವಳು ಬಂದು ಅವನನ್ನು ಸೇರಿ ಅವರು ಪುನಃ ನಡಿಗೆಯನ್ನು ಆರಂಭಿಸಿದಾಗ, ಮಿಂಚುವ ಮಿಣುಕು ಹುಳದಂತೆ ದೂರ ಮನೆಯೊಂದರಲ್ಲಿ ಉರಿಯುವ ದೀಪದ ಕುಡಿಬೆಳಕು ಗೋಚರಿಸುತ್ತದೆ. ಆ ಚಿಕ್ಕ ಸೊಡರೊಂದು ಅವರ ಎದೆಬಾನಿನಲ್ಲಿ ತಾರೆಯ ಮಂದ ಪ್ರಕಾಶದಂತೆ ಆಸೆಯ ಬೆಳಕನ್ನು ಮೊಳಗಿಸುತ್ತದೆ.

ನಿಧಾನವಾಗಿ ಕೆಳಗಿಳಿದ ದಾರಿ, ಒಂದು ಗದ್ದೆಯನ್ನು ಅಡ್ಡ ಹಾಯ್ದು, ಹಲಸಿನ ಬುಡವೊಂದರ ಬದಿಯಲ್ಲಾಗಿ, ಒಂದು ಮನೆಯತ್ತ ಸಾಗುವುದು. ಗದ್ದೆಹುಣಿಯಲ್ಲಿ ಎಲ್ಲಿ ಆಕೆ ಜಾರಿ ಬೀಳುವಳೋ—ಎಂದು ಆತನಿಗೆ ಭಯ. ಕಾರಣ—ಶೀತಗಾಳಿಗೆ ಮೋಡಗಳು ಕರಗಲ-ತೊಡಗಿ ಚಿಕ್ಕ ಧೂಳಹನಿಯಂತೆ ಮಳೆ ಬೀಳತೊಡಗಿದಾಗ, ವಾತಾವರಣದಲ್ಲೇ ಒದ್ದೆ ಆವರಿಸಿದಂತೆ ಚಳಿಯಾಗತೊಡಗಿತು. ಗದ್ದೆಹುಣಿಯ ಹುಲ್ಲು ಶೀತಗೊಂಡು ಕಾಲಿಗೆ ತಾಕಿದಾಗ, ಹೆಂಗುಸಿನ ನಡಿಗೆ ನಿಧಾನವಾಯಿತು. ಆ ಬಸುರಿ 'ಕಡಮೆ' ಯೊಂದನ್ನು ನಿಧಾನವಾಗಿ ದಾಟುವ ಪ್ರಯತ್ನ ಮಾಡುತ್ತಿರುವಾಗ, ಮಳೆ ಹನಿ ದೊಡ್ಡದಾಗಿ, ಹಲಸಿನ ಮರದ ಎಲೆಗಳ ಮೇಲೆ 'ತಟ, ಪಟ' ಸದ್ದಿನೊಡನೆ ಬೀಳುವುದಲ್ಲದೆ, ಮಣ್ಣಿನ ನೆಲದ ಮೇಲೆ ಭಾರವಾದ ನೀರಹನಿಗಳು ಬೀಳುವಾಗ ಒಡೆದು ಚೂರಾಗಿ ಕೆಸರಿನೊಂದಿಗೆ ಚಿಮ್ಮುವಾಗ, ಮೊಣಕಾಲ ವರೆಗೆ ನೆಗೆಯತೊಡಗಿದವು. ಆದಷ್ಟು ಬೇಗನೆ ಮನೆಯನ್ನು ಸೇರುವ ತವಕದಿಂದ, ಆ ಗಂಡುಸು ನಾಚಿಕೆ-ಯನ್ನು ಬಿಟ್ಟು ಆಕೆಯ ಕೈಹಿಡಿದು ಬೇಲಿ ದಾಟಿಸಿ, ಮೆಟ್ಟಿಲುಗಳಲ್ಲಿ ಜಾಗರೂಕತೆಯಿಂದ ಹೆಜ್ಜೆಯಿರಿಸತೊಡಗಿದ. ಅಲ್ಲಿ ಸುಮಾರು ಮೂವತ್ತರಷ್ಟು ಮೆಟ್ಟಿಲುಗಳಿದ್ದಿರಬಹುದು. ಅಷ್ಟು ತಗ್ಗಿನಲ್ಲಿದ್ದ ಮನೆ ಅದು.

ಅಪರಿಚಿತರ ಆಗಮನದ ಅರಿವಾಗಿ ಮನೆಯ ನಾಯಿ ದೊಡ್ಡ ದನಿ ತೆಗೆದು ಬೊಗಳತೊಡಗಿತು. ದಂಪತಿಗಳು ಭೀತರಾಗಿ ಮೆಟ್ಟಿಲಿನ ಬಳಿಯೇ ನಿಂತರು. ಚಾವಡಿಯಿಂದ, "ಕೇಶವ, ಯಾರದು ನೋಡು" ಎಂಬ ದೊಡ್ಡ ಸ್ವರ ಕೇಳಿಸುತ್ತಿದ್ದಂತೆ, ಎಂಟು ಹತ್ತು ವರುಷದ ಹುಡುಗನೊಬ್ಬನು ಬಾಗಿಲ ಬಳಿಗೆ ಬಂದು, "ದಾಸು, ದಾಸು.... ತ್ಸು....ತ್ಸು...." ಎಂದು ನಾಯನ್ನು ಕರೆದನು. ನಾಯಿ ದನಿ ಕೆಳ-ಗಿಳಿಸುತ್ತಾ, ಹಿಂದೆ ಹಿಂದೆ ಸರಿದು, ಜಗಲಿಯ ಬಾಗಿಲ ಬಳಿಗೆ ಬಂದಿತು.

ಆ ದಂಪತಿಗಳು ಅಂಗಳಕ್ಕಿಳಿದು ಚಾವಡಿಯ ಹೊರಗಿನ ಜಗಲಿಯ ಬಳಿಗೆ ಬಂದು ಒರಗಿ ನಿಂತರು. ಆ ಗಂಡುಸು ಮಗುವನ್ನು ಜಗುಲಿಯಲ್ಲಿಳಿಸಿದ. "ನಿಮಗೆ ಯಾವ ಊರಾಯಿತು?" ಎಂದು ಚಾವಡಿಯಲ್ಲಿ ಕುಳಿತ ಮನೆಯ ಯಜಮಾನ ಮಲೆಯಾಳದಲ್ಲಿ ಕೇಳಿದ. "ನಾವು ಮಲೆಯಾಳಿಗಳಲ್ಲ ನಾವು ಕುದ್ಮಪದವಿನವರು. ಧರ್ಮಪುರಕ್ಕೆ ಹೋಗಬೇಕಿತ್ತು; ದಾರಿಯಲ್ಲಿ ಕತ್ತಲಾಯ್ತು. ಹಾಗೆ ಇಲ್ಲಿಗೆ ಬಂದೆವು. ನಮಗೆ ಮಲಗಲಿಕ್ಕೆ ಒಂದಿಷ್ಟು ಜಾಗೆ ಕೊಟ್ಟರೆ ಸಾಕು. ಊಟಗೀಟ ಒಂದೂ ಬೇಡ." ಎಂದು, ಎಲ್ಲವನ್ನೂ ಒಂದೇ ಉಸಿರಿನಲ್ಲಿ ಆ ಗಂಡುಸು ಹೇಳಿದ.

"ಹಾಗಾದರೆ ನೀವು ದೇಶಾವರಕ್ಕೆ ಬಂದವರಲ್ಲವೋ?" ಎಂದು ಕೇಳಿದುದಕ್ಕೆ, "ಅದು ನಮ್ಮ ಉದ್ದೇಶವಲ್ಲ" ಎಂದು ಗಂಡುಸು ಉತ್ತರಿಸಿದ. ಬೇಡುವ ಮಲೆಯಾಳಿಗಳಲ್ಲವೆಂಬುದನ್ನು ಕೇಳಿ, ಮನೆಯ ಯಜಮಾನನಿಗೆ ಅವರು ಕೆಟ್ಟವರೂ ಕಳ್ಳರೂ ಇರಲಾರರೆಂದು ನಂಬಿಕೆ ಹುಟ್ಟಿತು. ಅಷ್ಟರಲ್ಲಿ ಹೊರಗೆ ಮಳೆ ಜೋರಾಗಿ ಸುರಿಯಲು ಆರಂಭಿಸಿ, ಅವರಿಗೆ ರಾತ್ರಿ ಮನೆಯಲ್ಲೇ ಆಶ್ರಯಕೊಡುವುದೆಂಬ ನಿರ್ಧಾರವನ್ನು ದೃಢಗೊಳಿಸಿತು. "ನೀವು ಆ ಹೊರಜಗುಲಿಯಲ್ಲೇ ರಾತ್ರಿಯಿರಬೇಕಪ್ಪ!" ಎಂದು ಹೇಳಿದುದಕ್ಕೆ, "ಓ, ಅದೇ ನಮಗೆ ಧಾರಾಳವಾಯಿತು." ಎಂದು ಆತ ಹೇಳಿ, ಜಗುಲಿಯಲ್ಲಿ ಕುಳಿತ. ಆ ಹೆಂಗುಸು ಆಗಲೇ ಜಗುಲಿಯಲ್ಲಿ ಕುಳಿತಿದ್ದಳು.

ಮಲಗಲು ಜಾಗೆ ಕೊಡುವೆನೆಂದು ಆ ಮನೆಯ ಯಜಮಾನ ಹೇಳಿದ್ದರೂ, ಅವನು ಕಠಿಣಮನಸ್ಕನೂ ಲೋಭಿಯೂ ಆಗಿರಲಿಲ್ಲ. ಅವನು ಊಟವನ್ನು ತೀರಿಸಿ ಹೊರಗೆ ಬಂದು ವೀಳೆಯ ಜಗಿಯಲು ಆರಂಭಿಸಿದಾಗ, ಅವನ ಮುದಿತಾಯಿ ಎರಡು 'ಹಾಳೆ'ಗಳನ್ನೂ, ಚೆಂಬಿನಲ್ಲಿ ನೀರನ್ನೂ ತಂದು ಹೊರಜಗಲಿಯಲ್ಲಿರಿಸಿದಳು. ಅವರಿಬ್ಬರೂ ತುಂಬ ಸಂತೋಷಗೊಂಡರು. ದಣಿದು ಆಗಲೇ ನಿದ್ರಿಸಿದ್ದ ಮಗುವನ್ನು ಆ ತಾಯಿ ಎಬ್ಬಿಸಿದಳು. ಮಗುವು ಅರೆನಿದ್ರೆಯಲ್ಲಿ ಅಳುವುದಕ್ಕಾ-ರಂಭಿಸಿದರೂ, ಊಟದ ಹಾಳೆಯನ್ನು ನೋಡಿ, ಅದರ ಬುಡಕ್ಕೆ ಬಂದಿತು. ಅದೇ ಅಜ್ಜಮ್ಮ ಒಳಗಿನಿಂದ ಹರಿವಾಣದಲ್ಲಿ ಅನ್ನ ತಂದು ಎರಡು ಹಾಳೆಗಳಿಗೂ ಇಕ್ಕಿದಳು. ಅವಳ ದೃಷ್ಟಿ ಆ ಹೆಂಗುಸಿನ ಕಡೆಗೆ ಹೊರಳಿದಾಗ, ಅವಳು ಬಸುರಿ ಎಂಬುದು ಆಕೆಗೆ ಅರಿವಾಗಿ, ಯಾವುದೋ ಅವ್ಯಕ್ತ ಕರುಣೆ ಮೂಡಿ ಬಂದು, "ಈ ದಿನ ನಾಯಿಗೆ ಕೂಳಿಲ್ಲದಿದ್ದರೆ ಅಷ್ಟೇ ಹೋಯಿತು" ಎಂಬ ಭಾವ ಬಂದು, ತಿರುಗಿ ಒಂದಿಷ್ಟು ಅನ್ನ ತಂದು ಹಾಳೆಗಳಿಗೆ ಸುರುವಿದಳು. ಹಸಿದು

ಬಂದವರಿಗೆ ಅಮೃತವೇ ಸಿಕ್ಕಿದಂತೆ ಆನಂದವಾಯಿತು. ತನ್ನ ಬಾಳಿನ ಸಂಕಷ್ಟನಿವಾರಣೆಗಾಗಿ ದೇವರಲ್ಲಿ ಮೊರೆಯಿಡಲು ಹೋಗುವ ತನಗೆ, ಇಲ್ಲಿ ಸಿಕ್ಕಿದ ಆಶ್ರಯವನ್ನೂ ಸತ್ಕಾರವನ್ನೂ ನೆನೆದಾಗ, ತನ್ನ ಕಷ್ಟಗಳು ನೀಗಲು ಈಗಲೇ ಆರಂಭವಾದುವೋ—ಎಂದೆನಿಸಿತು.

ಆ ಮನೆಯ ಅಜ್ಜಮ್ಮ ಊಟತೀರಿಸಿ ಬಂದು ಚಾವಡಿಯಲ್ಲಿ ಚಾಪೆ ಹಾಸಿದಳು. ಮನೆಯ ಯಜಮಾನ, ಒಂದು ಹರಕು ಹಸೆ. ಯನ್ನು ತಂದು ಅವನಿಗೆ ಕೊಟ್ಟು, ಒಳಗಿನ ಕೋಣೆಗೆ ಮಲಗುವ. ದಕ್ಕಾಗಿ ಹೋದ. ಅಜ್ಜಮ್ಮ ಹೊರಗಿನ ಬಾಗಿಲಿನ ಚಿಲಕವನ್ನು ಹಾಕಿ, ದೀಪವಾರಿಸಿ, ಕೂಡಲೆ ಬೆಂಕಿಪೆಟ್ಟಿಗೆಯ ನೆನಪಾಗಿ ತಲೆದಿಂಬಿನ ಕೆಳಗೆ ಅದಿರುವುದನ್ನು ಖಂಡಿತ ಮಾಡಿಕೊಂಡು, 'ರಾಮ, ರಾಮ' ಎನ್ನುತ್ತ ಮಲಗಿಕೊಂಡಳು.

ಮಳೆನಿಂತಿತ್ತು. ಬಾನು ತಿಳಿಯಾಗಿತ್ತು. ತಾರೆಗಳು ಮಿನು. ಗುತ್ತಿದ್ದುವು; ಆದರೆ ಶೀತಗಾಳಿ ಮಾತ್ರ ಒಂದೇ ಸವನೆ ಬೀಸು ತ್ತಿದ್ದುದರಿಂದ, ಆ ಹೆಂಗಸಿಗೆ ಇನ್ನೂ ನಿದ್ರೆ ಬಂದಿರಲಿಲ್ಲ. ಆ ಚಿಕ್ಕ ಮಗು ಎಚ್ಚತ್ತು ಅಳಲು ತೊಡಗಿದುದರಿಂದ, ಎಲ್ಲಿ ಮನೆಯವರಿಗೆ ತೊಂದರೆಯಾದೀತೋ—ಎಂದು ಭಾವಿಸಿ, ಮಗುವನ್ನು ತನ್ನ ಸಮೀಪಕ್ಕೆ ಎಳೆದುಕೊಂಡು ಸಮಾಧಾನ ಪಡಿಸತೊಡಗಿದಳು. ಆ ಗಂಡುಸು ಥಕ್ಕನೆ ನಿದ್ರೆಯಿಂದೆಚ್ಚತ್ತು, "ಹೌದೇ, ಏನು ನಿದ್ರಿಸಬಾರದೆ? ನಾಳೆ ಕೋಳಿ ಕೂಗುವ ಹೊತ್ತಿಗೆ ಎದ್ದು ನಡೆಯಬೇಕು. ಬಿಸಿಲಾದರೆ ಮತ್ತೆ ನಡೆಯುವುದು ಕಷ್ಟ" ಎಂದು ಹೇಳಿ, ಮಗ್ಗಲು ಬದಲಾಯಿಸಿ ಎರಡು ಮಿನಿಟಿನೊಳಗೆ ಪುನಃ ನಿಧಾನವಾಗಿ ಗೊರಕೆ ಹೊಡೆಯಲು ಆರಂಭಿಸಿದನು.

ಒಳಗೆ ಮಲಗಿದ ಅಜ್ಜಮ್ಮನಿಗೆ ನಿದ್ರೆ ಬಂದಿರಲಿಲ್ಲ. ಹೊರಗೆ ಮಲಗಿದ ಹೆಂಗುಸಿಗೆ ನಿದ್ರೆ ಬಾರದಿರುವುದನ್ನು ತಿಳಿದು ಆಕೆ, "ನಾಳೆ ಎಲ್ಲಿಗೆ ಹೋಗಬೇಕು?" ಎಂದು ವಿಚಾರಿಸಿದಳು.

"ಧರ್ಮಪುರಕ್ಕೆ – ದೇವರ ದರ್ಶನವಾಗಬೇಕಿತ್ತು" ಎಂದಳು.

"ಏನಾದರೂ ಹರಕೆಯಿತ್ತೇ?" ಎಂದು ಕೇಳಿದಳು. ಇಬ್ಬರು ಹೆಂಗಸರೂ ದೇವರ ವಿಚಾರದ ಮಾತುಗಳಲ್ಲಿ ತೊಡಗಿದರೆ, ಒಬ್ಬರು ಇನ್ನೊಬ್ಬರಲ್ಲಿ ಮನಸ್ಸು ಬಿಚ್ಚಿಕೊಂಡು, ದೇವರ ಮಹಿಮೆಯನ್ನು ಕೊಂಡಾಡುವರು. ಆದುದರಿಂದ 'ಏನಾದರೂ ಹರಕೆಯಿತ್ತೇ?' ಎಂದು ಕೇಳಿದ ಅಜ್ಜಮ್ಮನ ಮಾತಿಗೆ ಆಕೆ, ತನ್ನ ಕತೆಯ ಬಣ್ಣನೆಗೆ ತೊಡಗಿದಳು. ಅಜ್ಜಮ್ಮನ ಕುತೂಹಲ ಹೆಚ್ಚಿ, ಆಕೆ ದೀಪಹಚ್ಚಿ ವೀಳ್ಯ ತಿನ್ನುತ್ತ, ಕತೆ ಕೇಳತೊಡಗಿದಳು:

"ಅಜ್ಜಮ್ಮಾ....ನರಮಾನಿಗೆ ಬಡತನ ಬಂದರೂ ಆಗಬಹುದು! ಶ್ರೀಮಂತಿಕೆ, ಬಡತನ ಏನು – ಇಂದು ಬರುತ್ತೆ, ನಾಳೆ ಹೋಗುತ್ತೆ. ಸಂಸಾರವೆಂದಮೇಲೆ ಅವುಗಳಿಗಂಜಿ ನಾವು ಬದುಕಲಾರೆವು. ಆದರೆ ....ಇಂಥ ಸಂಸಾರವಾಗಬಾರದು. ನೋಡಿ! ನನಗೀಗ ನಲುವತ್ತು ವರುಷ. ಈ ನನ್ನ ಹುಡುಗಿ ಎರಡು ವರ್ಷದ್ದು. ಇದಕ್ಕೆ ಎಷ್ಟು ಜನ ಅಣ್ಣಂದಿರಿದ್ದರೆಂದು ಕೇಳುತ್ತೀರಿ? ಇದರ ದೊಡ್ಡಣ್ಣ ಬದುಕಿದ್ದರೆ ನನಗೊಬ್ಬಳು ಸೊಸೆ ಬರುತ್ತಿದ್ದಳು. ಇಷ್ಟರಲ್ಲಿ ಆ ದೊಡ್ಡ ಮಗುವಿನ ನಂತರ ಆರು ಹೆತ್ತ ಕರುಳು ಇದು. ನಾಲ್ಕು ಗಂಡು ಎರಡು ಹೆಣ್ಣು ......ಆದರೆ ಈಗ ಉಳಿದಿರುವುದು ಏಳನೆಯದಾದ ಈ ಹೆಣ್ಣು........"

ಅಜ್ಜಮ್ಮ ವೀಳ್ಯ ತಿಂದು ಮುಗಿಸಿ ಒಮ್ಮೆ ಉಗುಳಿ ಬಂದು, "ಏನಾಯಿತು?" ಎಂದು ಕೇಳಿದಳು.

"ಎಲ್ಲ ದೇವರಲ್ಲಿಗೆ ಹೋದುವು. ಕೊಟ್ಟವನೇ ಕೊಂಡು ಹೋದರೆ ಮಾಡುವುದೇನು? ಎಲ್ಲ ಎರಡು ಮೂರು ವರ್ಷದವರೆಗೆ ಮುದ್ದು ಮುದ್ದಾಗಿ ಬೆಳೆದುವು. ಹೋ! ಎಷ್ಟು ಚೆಂದವೆನ್ನುತ್ತೀರಿ?" ಎಂದು ಸ್ವಲ್ಪ ಹೊತ್ತು ಮಾತು ನಿಲ್ಲಿಸಿ, "ಅಷ್ಟರಲ್ಲಿ ನೆಪಮಾತ್ರಕ್ಕೆ ಜ್ವರ, ಬಿದ್ದುದು, ಹೊಟ್ಟೆನೋವು....ಹೀಗೆ ಕೈಬಿಟ್ಟುವು. ಇವರು ಪಂಚಾಂಗ ಇಡಿಸಿ ನೋಡಿದರು. ಊರಿನ ದೈವ—ಪಂಜುರ್ಲಿಗೆ ಎರಡು ಮೂರು ಕೋಲಕೊಟ್ಟಿತು. ಬೇರೆ ಉಪದ್ರವ ಏನೂ ಇಲ್ಲವೆಂದರು. ಮಾಡುವುದೇನು? ....ಕೊನೆಗೆ ಒಬ್ಬರು ಹೇಳಿದರು: 'ನೀವು ಧರ್ಮಪುರಕ್ಕೆ ಹೋಗಿ, ದೇವರ ಮುಂದೆ ಪರಿಹಾರ ಕೇಳಿ ಭಕ್ತಿಸಲ್ಲಿಸಿ ಬನ್ನಿ' ಎಂದು. ಹಾಗೇ ಹೊರಟೆವು ಈಗ ನೋಡಿ ನನ್ನ ಹೊಟ್ಟೆಯಲ್ಲಿ ಇನ್ನೊಂದು ಮಗು ಬೆಳೆಯುತ್ತಿದೆ. ಆ ಶ್ರೀನಾಥನ ದಯೆ ಕಾಪಾಡಬೇಕಲ್ಲದೆ, ನಾವು ಮನುಷ್ಯರು ಎಷ್ಟರವರು" ಎಂದು ನಿಡಿದುಸಿರುಗರೆದಳು.

ರಾತ್ರಿ ಹೆಚ್ಚುತ್ತ ಬಂದಂತೆ ಅವರ ಮಾತುಗಳು ನಿಧಾನಿಸುತ್ತ ಹೋದುವು. ಹೊರಗಿನ ವಾತಾವರಣ ಮಳೆಯಿಂದ ಒದ್ದೆಯಾದುದರಿಂದ ಶೀತವೇರಿತ್ತು. ಮನಸ್ಸಿಗೆ ಬೇಸರಿಕೆಯನ್ನು ತಂದೊಡ್ಡಿ, ನಿದ್ರೆಯ ಬೆಚ್ಚನೆಯ ಲೋಕಕ್ಕೆ ಹಿತವಾಗಿ ಕರೆದೊಯ್ಯುವಲ್ಲಿಗೆ ಅವರ ಮಾತುಗಳು ನಿಂತು, ಮೌನವೂ ಕತ್ತಲೂ ತಾವೇ ತಾವಾಗಿ ತುಂಬಿಕೊಂಡುವು.

ಆ ಮಗು ರಾತ್ರಿ ಎಚ್ಚರಗೊಂಡು ಅಳಲಿಲ್ಲ. ಸುಖವಾಗಿ ನಿದ್ರೆ ಬಂದಿರಬೇಕು. ಆ ಮನೆಯ ಅಜ್ಜಮ್ಮ ಮಾತ್ರ ರಾತ್ರಿ ನಾಲ್ಕು ಗಂಟೆಯ ಸಮಯಕ್ಕೆ ದೇವರ ಸ್ಮರಣೆ ಮಾಡುತ್ತ ಎದ್ದು, ದೀಪಹಚ್ಚಿ, ಎಲೆ ಅಡಿಕೆ ಹರಿವಾಣವನ್ನು ಹತ್ತಿರಕ್ಕೆಳೆದು ಜಗಿಯ ತೊಡಗಿದಳು. ಅಷ್ಟರಲ್ಲಿ ಆ ಗಂಡುಸು ಎಚ್ಚತ್ತು ತನ್ನ ಹೆಂಡತಿಯನ್ನು ಎಬ್ಬಿಸಿದನು ತನ್ನ ಹೆಂಡತಿಯ ಹೆಸರು ಹೇಳಿ ಕೂಗಿದನು—ದೀರ್ಘ ಕಾಲದ ಸಂಸಾರ ಅವನ ನಾಚಿಕೆಯನ್ನು ಕಳೆದಿತ್ತು. ಅವಳೂ ಥಕ್ಕನೆ ಎಚ್ಚತ್ತಾಗ, "ಬೆಳಗಾಗಲು ಇನ್ನೂ ಸ್ವಲ್ಪ ಸಮಯವಿದೆ" ಎಂದು ಅಜ್ಜಮ್ಮ ಹೇಳಿದಳು. ಆ ಗಂಡುಸು ಹೊರಗೆ ಹೋಗಿ ಬಂದು ಆಕಾಶದೆಡೆಗೊಮ್ಮೆ ದೃಷ್ಟಿ ಬೀರಿ, ಮೂಡಲಲ್ಲಿ ಬೆಳ್ಳಿಮೂಡಿದೆಯೆಂದು ತಿಳಿಸಿದನು ಕಷ್ಟದಿಂದ ದಾರಿ ನಡೆಯಬಹುದೆನ್ನುವ ಆ ನಸು. ಬೆಳಕಿನಲ್ಲಿ, ಅಜ್ಜಮ್ಮನೊಡನೆ ಹೋಗಿ ಬರುತ್ತೇವೆಂದು ತಿಳಿಸಿ ಅವರು ಹೊರಟರು. ಆ ಗಂಡುಸು, ತನ್ನ ಮಗು ನಿದ್ರಿಸುತ್ತಿದ್ದಂತೆಯೇ ಹೆಗಲಮೇಲೇರಿಸಿ ನಡೆಯತೊಡಗಿದ. ಹೆಂಗುಸು ಅವನನ್ನು ಹಿಂಬಾಲಿಸಿದಳು.

ದಾರಿಯ ಹೊಂಡಗಳಲ್ಲಿ ಇನ್ನೂ ನೀರು ಕಾಣುತ್ತಿದ್ದುದರಿಂದ, ಹಿಂದಿನ ರಾತ್ರಿ ಮಳೆ ಚೆನ್ನಾಗಿಯೇ ಬಂದಿರಬೇಕೆಂದು ಅವರಿಬ್ಬರೂ

ಒಬ್ಬರಿಗೊಬ್ಬರು ಮಾತಾಡದೆಯೇ ಊಹಿಸಿಕೊಂಡರು. ದಾರಿಯ ಸಮೀಪದ ಪೊದರುಗಳೆಲ್ಲ ಒದ್ದೆಯಾಗಿದ್ದುದರಿಂದ, ಕಾಲಿಗೆ ನೀರಹನಿ ಸೋಂಕಿದಾಗ, ಆ ಗಂಡುಸಿಗಿಂತಲೂ ಹೆಚ್ಚಾದ ಛಳಿಯ ಅನುಭವ ಆ ಹೆಂಗುಸಿಗಾಯಿತು. ಹೊರಗಿನ ಪ್ರಪಂಚದ ಅನುಭವಗಳನ್ನು ತಮ್ಮ ಹೃದಯದ ಅರಕೆಗಳನ್ನು, ಮೌನವಾಗಿಯೇ ಅರಿಯುವ ಕಲೆಯನ್ನು, ಆ ದಂಪತಿಗಳಿಬ್ಬರೂ ತಮ್ಮ ಬಾಳುವೆಯ ಅನುಭವದಿಂದ ಕಲಿತಿರಬೇಕು. ಅವರು ಮೌನವಾಗಿಯೇ ದಾರಿಸಾಗುತ್ತಿದ್ದರು. ಹೊರಗಿನ ಶೀತವಾದ, ನಿರುತ್ಸಾಹ ಜನಕವಾದ ವಾತಾವರಣವೂ ಅದಕ್ಕೆ ಕಾರಣವಿರಬೇಕು.

ಸ್ವಲ್ಪದೂರ ನಡೆಯುವಷ್ಟರಲ್ಲಿ ಗಂಡುಸು ತಾನು ಬಹಿರ್ದೇಶಕ್ಕೆ ಹೋಗುವೆನೆಂದು ಹೇಳಿ, ಮಗುವನ್ನು ಹೆಂಡತಿಯ ಕೈಗೆ ಕೊಟ್ಟನು. ಮಗುವನ್ನು ತನ್ನೆದೆಗೆ ಅಪ್ಪಿಕೊಂಡವಳೇ ಆ ಹೆಂಗುಸು ಗಾಬರಿಯಿಂದ "ಮಗುವಿನ ಮೈ—ಇದೇಕೆ ಕಾಯುತ್ತಿದೆ?" ಎಂದು ನುಡಿದಳು. "ನಾನು ಹಿಡಿದುಕೊಂಡು ಮೈ ಬಿಸಿಯೇರಿದಾಗ, ನಿನ್ನ ಶೀತ ಕೈಗೆ ಬಿಸಿಯೆನಿಸಿರಬೇಕು." ಎಂದು ನಿರ್ಲಕ್ಷ್ಯಭಾವದಿಂದ ಆತ ಹೋದನು. ಆದರೆ ಆ ತಾಯಿ ಮನಸ್ಸಿನಲ್ಲಿಯೇ ಅಂಜಿಕೊಂಡಳು ನಿನ್ನೆ ರಾತ್ರಿಯ ಮಳೆಗೆ ಆ ಮಗುವನ್ನು ತೋಯಿಸಿದುದರಿಂದ ಹೀಗಾಗಿರಬೇಕೆಂದು ತಿಳಿದಳು. ಆತ ತಿರುಗಿ ಬಂದು ಮಗುವನ್ನು ಎತ್ತಿಕೊಳ್ಳುತ್ತಲೇ, 'ಮಗುವಿಗೆ ಜ್ವರ ಬರುತ್ತಿದೆ' ಎನ್ನುವ ಭೀತಿ ಆತನ ಮನಸ್ಸಿನಲ್ಲಿ ಬಂದರೂ, ತನ್ನ ಹೆಂಡತಿಯೊಡನೆ ಹಾಗೆ ಹೇಳಲಿಲ್ಲ. ತಾನು ಮೊದಲು ಹೇಳಿದ ಮಾತನ್ನು ಸಮರ್ಥಿಸುವ, ಮತ್ತು ಸತ್ಯಸಂಗತಿಯನ್ನು ಹೇಳಿದರೆ ಆಕೆ ಹೆದರಿಕೊಳ್ಳುವಳೆಂಬ ಭೀತಿ ಅವನನ್ನು ಮೌನಿಯಾಗಿಸಿತು. 'ತಾವು ದೇವರ ಸಾನ್ನಿಧ್ಯಕ್ಕೆ ಹೋಗುತ್ತಿದ್ದೇವೆ ಹಾಗೇನೂ ಅಪಾಯವಾಗಲಾರದು.' ಎನ್ನುವ ಶಕ್ತಿ ಅವರಿಗೆ ಧೈರ್ಯದ ಕಲ್ಪನೆಯನ್ನು ಕೊಡುತ್ತಿತ್ತು. ಆದರೆ ಎಲ್ಲವೂ ಅಸ್ಪಷ್ಟ, ಮಸುಕು ಮಸುಕು.

ನಸು ಬೆಳಕಿನಲ್ಲಿ ಮಸುಕು-ಮಸುಕಾದ ನೆರಳುಗಳ ಚಲನೆಯಂತೆ ಕಾಣುತ್ತಿದ್ದ ಅವರ ಚಲನೆ, ಬೆಳಕು ಹರಿದಂತೆ ಸ್ಪಷ್ಟವಾಗತೊಡಗಿತು. ಕೆಂಪುದಳೆದ ಮೂಡಲ ಬಾನು, ಚೈತನ್ಯದ ಚಿಹ್ನೆಯನ್ನು ಉಲಿಯುವ ವಿಹಗಕುಲ, ಮುಂಜಾವದಲ್ಲಿ ಬೀಸುವ ಸೂಗಾಳಿ, ದಳದರೆದು ಕಂಪುಗುವ ಹೂಗೊಂಚಲು. ಎಲ್ಲವೂ ಈ ಜಗತ್ತು ಜಡತೆಯನ್ನು ಕಳೆಯುತ್ತಿದೆಯೆಂದು ತಿಳಿಯ ಹೇಳದುವು. ಅವರು ನಡೆಯುತ್ತಲೇ ಇದ್ದರು ......

ನಡೆಯುತ್ತಲೇ ಇದ್ದರು........ಕಾಡಿನ ಹಾದಿ........ಮೌನ.... ಏರಿಳಿವ ಗುಡ್ಡ-ಬೆಟ್ಟಗಳು........ನಡುವೆ ಹರಿವ ತೊರೆಯೊಂದನ್ನು ಎಚ್ಚರಿಕೆಯಿಂದ ಹಾಯ್ದು, ಪುನಃ ಕಾಡಿನ ಹಾದಿ ಹಿಡಿದರು ...... ತಮ್ಮಿಬ್ಬರ ನಡುವೆ ಮೌನವೇ ಮನೆ ಮಾಡಿದೊಲು, ತಾವು ಏಕಾಂಗಿಗಳೆಂಬಂತೆ ನಡೆಯುತ್ತಲೇ ಇದ್ದರು. ಹಿಂದಿನ ರಾತ್ರಿಯ ಮಳೆಯಿಂದ ಒದ್ದೆಯಾದ ತರಗೆಲೆಗಳು ಮೌನವ್ರತ ಹಿಡಿದಿದ್ದವು ಆಕೆಯ ಕಾಲುಗಳು ಸೋತು ನೋರಿ ಕಪ್ಪಿಟ್ಟಿದ್ದಿತು ಆಕೆಯ ಕಷ್ಟದ ಅರಿವು ಗಂಡುಸಿಗಾಗಿದ್ದರೂ, ಅದನ್ನು ಹೇಳುವುದರಿಂದ ಆಕೆಯ ಧೈರ್ಯ ಕುಂದಿ, ಆಕೆ ಎಲ್ಲಿ ಅಳುತ್ತಾಳೋ ಎನ್ನುವ ಅಂಜಿಕೆಯಿಂದ ಅವನು ಮಾತಾಡಲಿಲ್ಲ... ...ಮೌನ........ದಾರಿ.... ಏಕಾಂತ ....ನಡೆ .. ..ಹೆಜ್ಜೆ ಹೆಜ್ಜೆಯನ್ನು ಯಾತನೆಯ ತೆಕ್ಕೆಯಲ್ಲಿ ಕಳೆದಂತೆ—ನಡೆದರು ......

ದೂ ...ರದಲ್ಲಿ, ಕಟ್ಟರಣ್ಯದ ನಡುವೆ ದೇವಾಲಯದ ಗೋಪುರವನ್ನು ಕಂಡಾಗ, ತನ್ನ ಬಾಳಿನ ಭವಿಷ್ಯದ ಆಶಾಗೋಪುರವನ್ನೆ ಕಂಡಂತೆ ಆತನು ಸಂತಸಗೊಂಡನು. ಆ ಹೆಂಗುಸು ತನ್ನೆಲ್ಲ ಆಯಾಸವನ್ನು ಆ ಅಮೃತದೃಶ್ಯದಲ್ಲಿ ಪರಿಹರಿಸಿಕೊಂಡಳೋ ಎನ್ನುವಂತೆ ಬಿಡುಗಡೆಯ ನಿಡಿದುಸಿರನ್ನು ಬಿಟ್ಟಳು.

ಪಟ್ಟಣಗಳಿಂದ ಬಹು ದೂರದಲ್ಲಿ ಕಾಡಿನ ಹಾದಿಯನ್ನು ಹಾಯ್ದು ಬಂದಬಳಿಕ ಕಾಣುವ ಈ ಸುಂದರ ದೇವಾಲಯ, ಬದುಕಿನ ಕತ್ತಲಲ್ಲಿ ಹೊಸ ಬೆಳಕು ಬೀರುವ ಚೈತನ್ಯವುಳ್ಳದ್ದು ಎನ್ನುವ ನಂಬಿಕೆ ಹುಟ್ಟಿಸುವಂತಹುದಾಗಿತ್ತು. ಅಲ್ಲವಾದರೆ?........ ಎಲ್ಲೆಲ್ಲಿಂದಲೋ ಜನ ಬರುತ್ತಾರೆ—ಎಷ್ಟೆಷ್ಟೊ ಕಷ್ಟಗಳನ್ನು ಸಹಿಸಿ. ಧರ್ಮಪುರದ ಶ್ರೀನಾಥ ದೇವಾಲಯದ ಸೊಗಸು, ಸ್ವಚ್ಛತೆ, ನಿಯಮಬದ್ಧವಾದ ಪೂಜೆ, ಉತ್ಸವಗಳು ಜನರನ್ನು ದಾರಿದೀವಿಗೆಗಳೆನ್ನುವಂತೆ ಆಕರ್ಷಿಸುತ್ತವೆ

ಗಂಡ-ಹೆಂಡಿರಿಬ್ಬರೂ ಹೋದವರೇ ದೇವಾಲಯಕ್ಕೆ ಒಂದು ಪ್ರದಕ್ಷಿಣೆ ಬಂದು, ಅಲ್ಲಿಯ ಪಾರುಪತ್ಯಗಾರರನ್ನು ಕಂಡು, ತಾವು ಹೊತ್ತ ಹರಕೆಯ ವಿವರವನ್ನು ಅರುಹಿದರು. ಕುರುಚಲುಗಡ್ಡದ ನಡುವೆ, ಗಲ್ಲ ಮೀಸೆಯನ್ನು ಇಳಿಯಬಿಟ್ಟು, ಹಣೆ, ಮೈ, ಕೈಗಳಿಗೆ ಭಸ್ಮಧಾರಣೆ ಮಾಡಿ, ಕೊಳಕು ಪಂಚೆಯ ಕಚ್ಚೆಯನ್ನು ಧರಿಸಿದ್ದ ಆ ವ್ಯಕ್ತಿ, ಅಧಿಕಾರವಾಣಿಯ ಕೊರಕಲು ಕೊರಕಲಾದ ಏರುಸ್ವರದಲ್ಲಿ "ಛೆ, ಇಷ್ಟೆ ತಾನೆ" ಎನ್ನುವಂತೆ, ಅವರು ನೆರವೇರಿಸಬೇಕಿದ್ದ ವಿಧಿಗಳನ್ನು ನಿರ್ಲಕ್ಷ್ಯಭಾವದಿಂದ ಯಾಂತ್ರಿಕವಾಗಿ ಅರುಹಿದನು. ತಮ್ಮ ಬದುಕಿನಲ್ಲಿ ತಾವು ಯಾವುದನ್ನು ಸಹಿಸಲಾರದ ಕಷ್ಟದ ಪರಮಾವಧಿಯೆಂದು ತಿಳಿದು ಆ ದಂಪತಿಗಳು ಭಕ್ತಿಯ ನೆಲೆವೀಡಿಗೆ ಪರಿಹಾರಕ್ಕಾಗಿ ಬಂದಾಗ, ಅವರಲ್ಲಿದ್ದ ಒಂದು ಪೂಜ್ಯ ಭಾವನೆಗೆ ವ್ಯತಿರಿಕ್ತವಾದ ಆ ಪಾರುಪತ್ಯಗಾರನ ತಿರಸ್ಕಾರಭಾವ, ಅವರನ್ನು ಬಹುವಾಗಿ ಕುಗ್ಗಿಸಿತು ಒಂದು ಅಧೈರ್ಯದ ಎಳೆ ಅವನ ಎದೆಯಲ್ಲಿ ಮೂಡಿತು. ಆದರೂ ಅವನ ಭಕ್ತಿ ಕರ್ತವ್ಯಶ್ರದ್ಧೆಗೆ ಕುಂದುತರಲಿಲ್ಲ.

ದಂಪತಿಗಳಿಬ್ಬರು ದೇವಾಲಯದ ಸಮೀಪದಲ್ಲಿದ್ದ ಕೆರೆಯಲ್ಲಿ ಮಿಂದರು ಹಸುರು ಹಾವಸೆಯಾದ ನೀರನ್ನು ತೀರ್ಥವೆಂಬ ಶ್ರದ್ಧೆಯಿಂದ ಮೈತೊಳೆದರು—ತಮ್ಮ ಈ ಜನ್ಮದ ಪಾಪವೇ ಇದರಲ್ಲಿ ಕಳೆವುದೆಂಬಂತೆ; ಆದರೆ ಅವರ ಮಗುವಿನ ಮೈಬೆಚ್ಚನೆ ಸುಡುತ್ತಿತ್ತು! ಅದಕ್ಕೆ ಇನ್ನು ದೇವಾಲಯದಲ್ಲಿ ಕಲಶಸ್ನಾನ ನಡೆಯಬೇಕು. ಅದರ ಮೊದಲು ಈ ಕೆರೆಯ ತೀರ್ಥದಲ್ಲಿ ಮಿಂದು ಬರಬೇಕೆಂದು ಪಾರುಪತ್ಯಗಾರರು ತಿಳಿಸಿದ್ದರು. ತಾವೀಗ ಏನು ಮಾಡುವುದೆಂಬುದರಲ್ಲಿ

ಆ ಹೆಂಗುಸು ಸಂಶಯ ತಾಳುತ್ತಿದ್ದುದನ್ನು ಗಂಡುಸು ಮೌನದಲ್ಲೇ ಅರಿತು, "ಆಲೋಚನೆಯೇನು ? ವಿಧಿಪೂರ್ವಕ ಹರಕೆ ನಡೆಯ-ಬೇಕು" ಎಂದವನೇ ಆ ಕೂಸನ್ನು ಹೆಂಗುಸಿನ ಕೈಯಿಂದ ಪಡೆದು ಕೊಂಡು ಸ್ನಾನಮಾಡಿಸಿದನು. ತಡೆಯಲಾರದ ಶೀತದ ಅನುಭವ ದಿಂದ ಮಗು ಅತ್ತಿತು. ಆದಷ್ಟು ಬೇಗನೆ ಸ್ನಾನವನ್ನು ಮುಗಿಸಿ ಅದರ ಮೈಯ ಒದ್ದೆಯನ್ನು ಸವರಿ ಅವಸರ ಅವಸರವಾಗಿ ದೇವಾ-ಲಯಕ್ಕೆ ನಡೆದರು

ದೇವಾಲಯದ ಒಳಗೆ ನೂರು-ನೂರೈವತ್ತು ಜನ ಸೇರಿದ್ದರು. ಹರಕೆಗಳನ್ನು ಸಲ್ಲಿಸುವುದಕ್ಕೆ ಏರ್ಪಾಟಿತ್ತು. ದೇವಾಲಯದ ಹೊರನಡೆಯಲ್ಲಿ ಪಾರುಪತ್ಯಗಾರನೊಬ್ಬ ಕಚ್ಚೆ ಹಾಕಿ ತಲೆಗೆ ಮುಂ-ಡಾಸು ಧರಿಸಿ, ಗಂಧ ವಿಭೂತಿ ಅಕ್ಷತೆಗಳನ್ನು ಹಚ್ಚಿ ದೇವರ ಅಧಿಕೃತ ಪ್ರತಿನಿಧಿ ತಾನೆಂಬಂತೆ ನಿಂತಿದ್ದನು. ಜನರು ತಮ್ಮ ದುರಿತಗಳನ್ನು ನಿವೇದಿಸಿಕೊಂಡಂತೆ ಅವುಗಳಿಗೆ ಪರಿಹಾರವನ್ನು ಹೇಳುತ್ತಿದ್ದನು. 'ಹತ್ತು ರೂಪಾಯಿ ಕಾಣಿಕೆ ಮಾಡಿ, ಪ್ರಸಾದ ತೆಕ್ಕೊ' 'ಪ್ರತಿ ವರ್ಷವೂ ಇಪ್ಪತ್ತೈದು ರೂಪಾಯಿಗಳನ್ನು ದೇವಾಲಯಕ್ಕೆ ಸಲ್ಲಿಸು.' 'ದೇವರಿಗೆ ಚಿನ್ನದ ಗುಲಾಬಿ ಹೂವೊಂದನ್ನು ಮಾಡಿಸಿ ಹಾಕು.' 'ಬೆಳ್ಳಿಯಲ್ಲಿ ನಿನ್ನ ತುಲಾಭಾರ ಮಾಡಿಸು,' '……. ….' '.. ….'

ಯಾವುದೋ ಹೆಂಗುಸನ್ನು ಭೂತವೊಂದು ಹಿಡಿದುಕೊಂಡಿತ್ತು. ಒದ್ದೆ ಬಟ್ಟೆಯುಟ್ಟು, ಮುಡಿಗೆದರಿ, ಹುಚ್ಚು ಬೈರಾಗಿಯಂತೆ ಕಾಣು-ತ್ತಿದ್ದ ಆಕೆಯನ್ನು, ಆಕೆಯ ಕಡೆಯ ಧಾಂಡಿಗರಿಬ್ಬರು ರಟ್ಟೆ ಹಿಡಿದು ಪಾರುಪತ್ಯಗಾರನ ಮುಂದೆ ತಂದು ನಿಲ್ಲಿಸಿದರು. ಅವರಿಂದ ಕೊಸರಿ ಬಿಡಿಸಿಕೊಳ್ಳಲು ಆವಳು ಪ್ರಯತ್ನಿಸುತ್ತಿದ್ದಳು. ಅವರು ಪಾರುಪತ್ಯ ಗಾರನಿಗೆ ಆಕೆಯ ಕತೆಯನ್ನು ವಿವರಿಸುತ್ತಿದ್ದಂತೆಯೇ, "ನೀನು ಇವಳನ್ನು ಬಿಟ್ಟು ಹೋಗುತ್ತೀಯೋ ಇಲ್ಲವೋ" ಎಂದು ಏರುಸ್ವರ-ದಿಂದ ಗುಡುಗಿದನು. "ನಾನು ಬಿಟ್ಟು ಹೋಗಲಾರೆ; ಖಂಡಿತ ಕ್ಕೊ" ಎಂದು ಆ ಹೆಂಗುಸು ಅಟ್ಟಹಾಸದಿಂದ ಕುಣಿದಾಡಿದಳು. ಪಾರುಪತ್ಯ-ಗಾರನು ಜೋಡಿಸಿದ ನಾಗರ ಬೆತ್ತಗಳ ಕಟ್ಟನ್ನು ತೆಗೆದು 'ರೊಂಯ್, ರೊಂಯ್' ಎಂದು ನಾಲ್ಕೇಟುಗಳನ್ನು ಅವಳ ಬೆನ್ನಿಗೆ ಬಿಗಿದು, "ತೊಲಗುತ್ತೀಯೋ ಇಲ್ಲವೋ ? ತೊಲಗುತ್ತೀಯೋ ಇಲ್ಲವೊ ?" ಎಂದಬ್ಬರಿಸಿದನು. "ಹೋಗುತ್ತೇನೆ….ಶ್ರೀನಾಥನ ಆಣೆಯಾಗಿಯೂ ಹೋಗುತ್ತೇನೆ…." ಎಂದು ಹೆಂಗುಸು ರಂಬಾಟ ಮಾಡಿದಳು.

ಆ ಹೆಂಗುಸು ಇದನ್ನು ದಿಟ್ಟಿಸುತ್ತಲೇ ಇದ್ದಳು. ತಾನು 'ಇಲ್ಲ, ಇಲ್ಲ'ವೆಂದು ಹೇಳಿಕೊಳ್ಳುತ್ತಲೇ ಇದ್ದರೂ, ಅಸ್ಪಷ್ಟವಾದ ಭೀತಿ ಯೊಂದು ಅವಳ ಕರುಳಲ್ಲಿ ಸುಳಿದಾಡಿತು. ಮೈ ಒದ್ದೆಯಾದರೂ ಜ್ವರದಿಂದ ಕಾಯುತ್ತಿರುವ ಮಗುವನ್ನು ತನ್ನೆದೆಗೆ ಬಿಗಿಯಾಗಿ ಅಪ್ಪಿಕೊಂಡಳು.

… ದೇವಾಲಯದಲ್ಲಿ ನುಗ್ಗಾಟವಿದ್ದುದರಿಂದ, ದೊಡ್ಡ ದೊಡ್ಡ ಹರಕೆಗಳಾದ ಬಳಿಕ ಇವರ ಸರದಿ ಬಂತು. ದೇವರ ಮುಂದೆ ಹೋಗಿ ನಿಂತಾಗ ಅವರಿಗೆ ಸ್ವಲ್ಪ ಭಯವಾಯಿತು. ತಾವು ಯಾವುದೋ ಮಹತ್ತಾದ ಅಪರಾಧದ ವಿಚಾರಣೆಗೆ ಒಳಗಾಗುತ್ತಿದ್ದೇವೆಂದು

ಗರ್ಭಾಶಯದ ದೋಷಗಳನ್ನು ನಿವಾರಿಸಲು ಅತ್ಯುತ್ತಮವಾದ ಸಿದ್ಧೌಷಧ
ಜೀವನಿ
ದಿ ಸದ್ವೈದ್ಯಶಾಲಾ ಲಿ., ನಂಜನಗೂಡು
ಬ್ರಾಂಚುಗಳು: ಬೆಂಗಳೂರು, ಮೈಸೂರು, ಮಂಗಳೂರು, ಹುಬ್ಬಳ್ಳಿ
ಯಾವಾಗಲೂ [illegible] ಉಪಯೋಗಿಸಿ

ಕಂಡಿತವರಿಗೆ. ಅವನ ಏರುಸ್ವರದ ವಿಚಾರಣೆಗೆ, ಮೆಲುದನಿಯಿಂದ ಆತನು ಕತೆಯನ್ನು ಸುರಿದನು! "ನನ್ನ ಆರುಮಂದಿ ಮಕ್ಕಳೂ ಹೋದುವು….ಅಸೆ. ಇದು ಏಳನೆಯದು—ಎರಡು ವರ್ಷವಾಯಿತು … ಶ್ರೀನಾಥನನ್ನು ನಂಬಿದ್ದೇನೆ….ಬದುಕಿಸಿಕೊಡುವ ಭಾರ ಕರುಣಾಳು ವಿಗೆ ಸೇರಿದ್ದು…."

"ಭಕ್ತಿಯಿಂದ ನಂಬಿಕೊಂಡು ಬಾ! ಈಗ ಐವತ್ತು ರೂಪಾಯಿ ಕಾಣಿಕೆ ಕೊಡು. ಮತ್ತೆ ಪ್ರತಿವರ್ಷವೂ ಇಪ್ಪತ್ತೈದು ಸ್ಥಳಕ್ಕೆ ಸಲ್ಲಿಸುತ್ತ ಬರಬೇಕು. ಭಕ್ತಿ ಬಿಡಬೇಡ. ಅಲ್ಲಿಗೆ ನಿನಗೆ ಪುತ್ರ-ಸಂಪತ್ತು ನೆಲೆನಿಲ್ಲುವುದು"

ಐವತ್ತು ರೂಪಾಯಿ ಎಂದಾಗ, ತನ್ನ ಪತಿಯ ಮೋರೆ ಏಕೆ ವಿವರ್ಣವಾಯಿತು ಎನ್ನುವುದು—ಆ ಹೆಂಗಸಿಗೆ ಗೊತ್ತು. ಆ ಪ್ರಶ್ನೆಗೆ ಆತನು ಏನುತ್ತರಕೊಡುವನೆಂಬುದನ್ನು ಕಾಯದೆ, ಆ ಹೆಂಗುಸು ತನ್ನ ಕಿವಿಯಲ್ಲಿದ್ದ ಬೆಂಡೋಲೆಗಳ ಕಡೆಗೆ ಕೈ ಹಾಕಿದಳು. ಅದರರ್ಥ ವನ್ನು ನೋಟದಿಂದಲೇ ಗ್ರಹಿಸಿಕೊಂಡ ಅವನು, "ಹಣದ ಬದಲು ಇದ್ದ ಬಂಗಾರದಲ್ಲಿ ಸಂತೋಷಮಾಡಿಕೊಳ್ಳುವ ಕೃಪೆ ಮಾಡಬೇಕು. ಶ್ರೀದೇವರಲ್ಲಿ ಇದೇ ನಮ್ಮ ಬೇಡಿಕೆ ಅಪ್ಪಣೆಯಾದರೆ ಪ್ರತಿ ವರ್ಷದ ಹಣ ಸಲ್ಲಿಸುತ್ತೇನೆ. ಕಾಪಾಡುವ ಭಾರ ಅವನದು…." ಎಂದಾಗ, ಪಾರುಪತ್ಯಗಾರನಿಗೆ ಏನು ಕರುಣೆದೋರಿತೋ—ಅವನು 'ಆದಾಗದು.' ಎನ್ನಲಿಲ್ಲ.

ಗಂಡುಸು ತಾನು ಸೊಂಟದಲ್ಲಿ ಅರಿವೆಯೊಳಗೆ ಸುತ್ತಿಟ್ಟಿದ್ದ ಇಪ್ಪತ್ತು ರೂಪಾಯಿಗಳನ್ನು ಬಿಚ್ಚುತ್ತಿದ್ದಂತೆಯೇ ಆಕೆ ತನ್ನ ಬೆಂಡೋಲೆಗಳನ್ನು ಕಳಚಿ ಅವನ ಕೈಗಿತ್ತಳು. ತಮ್ಮ ಹರಕೆಯನ್ನು ರೂಪಾಯಿಗಳ ರಾಶಿ ಬಿದ್ದಿದ್ದ ಹರಿವಾಣದಲ್ಲಿ ಒಪ್ಪಿಸಿ, ಇಬ್ಬರೂ ಸಾಷ್ಟಾಂಗ ಪ್ರಣಾಮಗಳನ್ನು ಮಾಡಿದರು. ಎದ್ದುನಿಂತು ಭಕ್ತಿ ಯಿಂದ ಅರೆತೆರೆದ ಕಣ್ಣೆವೆಗಳಿಂದ ಒಳಗಡೆ ದೃಷ್ಟಿಹಾಯಿಸುತ್ತಿ ದ್ದಂತೆಯೇ –

ಒಳಗೆ, ಬಹುದೂರದಲ್ಲೆಂಬಂತೆ, ಹಸುವಿನ ತುಪ್ಪದಲ್ಲಿ ಉರಿವ ನಾಲು ನಂದಾದೀಪಗಳ ಮಂದಪ್ರಕಾಶದಲ್ಲಿ, ಆಭರಣ ಪುಷ್ಪಾ-ಲಂಕೃತನಾದ ಶ್ರೀನಾಥನ ಪ್ರತಿಮೆಯನ್ನು ಕಂಡು, ಆ ದಿವ್ಯದರುಶನ

ಲ್ಲಿ ತಮ್ಮ ಇಷ್ಟಾರ್ಥಗಳನ್ನು ಕೈಗೂಡಿಸುವ ತೇಜಃಪುಂಜವಾದ ಕ್ತಿಯೊಂದು ಕೆಲಸ ಮಾಡುವುದೆಂಬ ಭರವಸೆಯನ್ನು ಕಂಡರು.

ಅವರು ಅಲ್ಲಿ ಹೆಚ್ಚು ಹೊತ್ತು ಕಳೆಯುವುದಕ್ಕಿರಲಿಲ್ಲ. ಇನ್ನೂ ಂಯುತ್ತಲೇ ಇದ್ದರು ಪ್ರಸಾದವನ್ನು ಸ್ವೀಕರಿಸಿ, ಮಗುವನ್ನು ರಿದುಕೊಂಡು ಅಲ್ಲಿಂದ ದೂರ ಹೋಗಿ, ಇನ್ನೊಬ್ಬ ಪೂಜಾರಿಯ ಯಿಂದ ಮಗುವಿಗೆ ತೀರ್ಥಸ್ನಾನ ಮಾಡಿಸಿದರು. ತಣ್ಣೀರಿನ ರಿಗೆ ಮೈಯೊಡ್ಡುತ್ತಿದ್ದಂತೆಯೇ ಆ ಮಗು ಇನ್ನೊಮ್ಮೆ ಏರುಸ್ವರ ಲ್ಲಿ ಅತ್ತಿತು. ಪೂಜಾರಿಯ ಗಮನಕ್ಕೆ ಅದು ಬರಲೇ ಇಲ್ಲ ವನಿಗೆ ಅದೆಲ್ಲ ದಿನನಿತ್ಯದ ಅನುಭವ. ಆ ತಾಯಿ ಮಾತ್ರ ಮಗುವಿಗೆ ನಾಗುವುದೋ—ಎಂದು ಬೆದರಿದಳು. ಸ್ನಾನವಾದಕೂಡಲೇ ಅದರ ್ಯಯುಜ್ಜಿ, ಗಂಧ ಪ್ರಸಾದವನ್ನು ಅದರ ಮೋರೆಗೆ ಹಚ್ಚಿದಳು; ೊಮುಡಿಸಿದಳು.

ಮಗುವಿನ ಮೈ ಸುಡುತ್ತಲೇ ಇತ್ತು!

ದೇವಸ್ಥಾನದ ಕಂಚಿನ ಸಾಲುಗಂಟೆಗಳೆಲ್ಲವೂ, 'ಢಣ, ಢಣ' ಂದು ಬಾರಿಸತೊಡಗಿದುವು. ಡೋಲು, ಕಹಳೆ, ವಾದ್ಯ, ತಮಟೆ, ಾಗಟೆ, ಚಂಡೆ, ತುತೂರಿಗಳೆಲ್ಲವೂ ಮಹಾವೈಭವದಿಂದ ಭಿನ್ನ ಭಿನ್ನ ಾದಗಳಿಂದ ಬಾರಿಸಲು, ವೇದಘೋಷದ ದಿವ್ಯಸ್ವರದೊಂದಿಗೆ ಬೆರೆತು ಾನಲ್ಲಿ ಚಿತ್ರರಗೊಂಡುವು. ದೇವಾಲಯದಲ್ಲಿ ಮಹಾಮಂಗಳಾರತಿ ಡೆದು, ಮಹಾಪೂಜೆಯಾಯಿತು. ಭಕ್ತವೃಂದವೆಲ್ಲವೂ ಶ್ರೀನಾಥ- ಡೆಗೆ ನೆಟ್ಟದೃಷ್ಟಿಯಿಂದ ನೋಡುತ್ತಿದ್ದಿತು ಅವರಲ್ಲಿ ಆ ದಂಪತಿ ಳೂ ಸೇರಿದ್ದರು. ಒಳಗೆ ಉರಿಸಿದ ಕರ್ಪೂರ, ಅಗರು, ಚಂದನಗಳ ಏಗಂಪು ವಾತಾವರಣದಲ್ಲಿ ಕವಿದು, ಯಾವುದೋ ಶಾಂತಿ ಖ, ನೆಮ್ಮದಿಯ ಸಂದೇಶವೇ ಗಾಳಿಯಲ್ಲಿ ಸುಳಿದಾಡುವ ಅನುಭವ ಂದಿತು.

ಎಲ್ಲರೂ ದೇವಾಲಯದ ಛತ್ರದಲ್ಲಿ ಊಟ ತೀರಿಸಿದರು.

ಆ ದಂಪತಿಗಳು ಮತ್ತೆ ಮನೆಗೆ ಹಿಂದಿರುಗುವ ಯೋಚನೆ ಾಡಿದರು. ದೇವಾಲಯದಲ್ಲಿ ಉಳಿದುಕೊಳ್ಳುವುದು ಕಷ್ಟ; ಮಗು- ಗೆ ಜ್ವರ ಬರುತ್ತಿದ್ದುದರಿಂದ, ಆದಷ್ಟು ಬೇಗನೆ ಮನೆ ಸೇರುವ ೂಳಿತೆಂದು ಕಂಡಿತು. ಕತ್ತಲಾದಲ್ಲಿ ತಂಗುವುದೆಂಬ ನಿರ್ಧಾರದಿಂದ ವರು ಹೊರಟರು.

ನಡೆದು ಹೋಗಬೇಕಾದ ದಾರಿ. ಅವರ ಕೈಯಲ್ಲಿ ಕಾಸಿರಲಿಲ್ಲ. ಂದ ದಾರಿಯಲ್ಲೇ ಹಿಂದಿರುಗಬೇಕು. ಅದೇ ಕಾಡಿನ ಹಾದಿ.... ಡು ಗುಡ್ಡಗಳಲ್ಲಿ ಸಾಗುವ ಓರೆಕೋರೆಯಾದ ಬಳಸು ದಾರಿ...... ೊದಲಿನಂತೆ ಗಂಡುಸು ಮುಂದೆ; ಬಸುರಿನ ಭಾರಕ್ಕೆ ಕುಗ್ಗಿ — ಡೆಯಲಾರದ ಹೆಂಗುಸು ಹಿಂದೆ........ಮೌನವೇ ಸಂಗಾತಿ.. ....

ನಡೆಯುತ್ತಿದ್ದಂತೆ ಬಾನಲ್ಲಿ ಮುಗಿಲು ಕವಿಯತೊಡಗಿತು. ಾವು ಇಂದು ಹೊರಟುದು ಸರಿಯಲ್ಲವೆಂದು ಈಗ ಅವರಿಗೆ ಎನಿಸ ೊಡಗಿತು. ಆದರೆ ಯಾರು ಹಾಗೆ ಹೇಳಲಿಲ್ಲ....ಸ್ವಲ್ಪ ಹೊತ್ತಿನಲ್ಲಿ ಂಗಾಳಿ ಬೀಸತೊಡಗಿ ದೊಡ್ಡ ದೊಡ್ಡ ಹನಿಗಳು ಬೀಳತೊಡಗಿ

ದುವು. ಗಂಡುಸಿನ ಕೈಯಲ್ಲಿದ್ದ ಮಗು ಅಳತೊಡಗಿತು. ಅವನು ಅದನ್ನು ಎಷ್ಟು ಸಂತಯಿಸಿದರೂ ಅದು ಕೇಳಲಿಲ್ಲ ಮಳೆ ಬಲವಾಗಿ ಬೀಳತೊಡಗಿತು. ಯಾರೂ ಅಷ್ಟು ಮಳೆ ಬಂದೀತೆಂದು ಎಣಿಸು ವುದಕ್ಕೆ ಸಾಧ್ಯವಿರಲಿಲ್ಲ. ಮಗು ತಾಯ ಹೆಸರಿಡಿದು ಕೂಗುತ್ತಿತ್ತು. ಅದನ್ನು ಸಂತಯಿಸಲೆಂದು ಮಗುವನ್ನು ಒಮ್ಮೆ ತಾಯೊಡನೆ ಕೊಟ್ಟನು. ಮಗು ಅಳುವನ್ನು ನಿಲ್ಲಿಸಿತು. ಆದರೆ ಆಕೆ ಮಗುವನ್ನು ಎತ್ತಿಕೊಂಡು ನಡೆಯಲಾರದವಳಾಗಿದ್ದಳು. ಆದುದರಿಂದ ಆ ಗಂಡುಸು ಪುನಃ ಮಗುವನ್ನು ಎತ್ತಿಕೊಂಡನು ಅದು ಅಳುವುದಕ್ಕೆ ಆರಂಭಿ ಸಿತು; ಆದರೆ ಅವನು ಅದಕ್ಕೆ ಕಿವಿಗೊಡಲಿಲ್ಲ........ಪ್ರೊದರಿನಿಂದ ಆವರಿಸಿದ ದಾರಿ....ಅದೇ ತೊರೆ. ಆದರೆ ಅಷ್ಟರಲ್ಲೇ ಕೆಂಪುನೀರಿನ ಪ್ರವಾಹ ಅದರಲ್ಲಿ ಹರಿಯತೊಡಗಿತ್ತು. ಆ ತೊರೆಯ ಹುಟ್ಟಿನಲ್ಲಿ ಮಳೆ ಚೆನ್ನಾಗಿ ಬಂದಿರಬೇಕು ಗಂಡುಸು ಸಂದೇಹಕ್ಕೊಳಗಾದನು: ಹಿಂದಿರುಗುವುದೆಂದರೆ ಪ್ರಯಾಸದ ಕೆಲಸ. ಈ ಹೊಳೆಯನ್ನು ದಾಟಿದರೆ, ಆಚೆಯ ಬದಿಯಲ್ಲಿ ಸಮೀಪದಲ್ಲೇ ಅವರು ಮೊನ್ನೆ ತಂಗಿದ ಮನೆ ಸಿಗುತ್ತದೆ. ಆದಷ್ಟು ಬೇಗನೇ ಈ 'ಹೊಳೆ'ಯನ್ನು ದಾಟುವುದು ಒಳ್ಳೆಯದೆನ್ನುವ ನಿರ್ಧಾರಕ್ಕೆ ಅವನು ಬಂದನು. ತನ್ನ ಹೆಂಡತಿಯ ಅನುಮತಿಗಾಗಿ ಕಾಯದೆ, "ಬೇಗನೇ ದಾಟಿ ಬಿಡೋಣ" ಎಂದವನೇ

ನೀರಿಗಿಳಿದು ಮುಂದೆ ಸಾಗಿದನು. ಮಳೆ ಬರುತ್ತಲೇ ಇತ್ತು. ತನ್ನ ಗಂಡ ನೀರಿಗಿಳಿಯುವುದನ್ನು ನೋಡಿ ಆಕೆಗೆ ಭಯವಾಯಿತು; ಆದರೆ ಅವನು ಮುಂದೆ ಹೋಗುತ್ತಿದ್ದಂತೆ ನೀರು ಹೆಚ್ಚಿದ್ದಂತೆ ತೋರಲಿಲ್ಲ. ಅವನ ಮೊಣಕಾಲು, ತೊಡೆಯವರೆಗೆ ನೀರು ಬಂದಿತು. ಹೆಂಗುಸಿಗೆ ತಾನು ಹೇಗೆ ದಾಟುವುದೆನ್ನುವ ನಾಚಿಕೆಗಿಂತ ಭೀತಿಯೇ ಹೆಚ್ಚಾಯ್ತು. ಆದರೆ ಗಂಡನನ್ನು ಹಿಂದೆಬಾರೆಂದು ಕರೆಯುವುದು ಆಕೆಗೆ ಸಂಕಾಣ ಲಿಲ್ಲ. ಅಂಜಿಕೆಯೋ, ತಾನು ಹೇಡಿಯೆಂದು ತೋರಿಸಿಕೊಳ್ಳಬಾರ ದೆಂಬ ಭಾವವೋ, ಅವನನ್ನು ಹೇಗೆ ಹೆಸರಿಡಿದು ಕರೆವುದೆಂಬ ನಾಚಿಕೆಯೋ—ಅಂತು ಆಕೆ ಅವನನ್ನು ಕರೆಯಲಿಲ್ಲ.

ಆಕೆ ಆಲೋಚಿಸುತ್ತಿದ್ದಂತೆಯೇ ಅವನು ಆಚೆಯ ದಡವನ್ನು ತಲಪಿದನು. ಅವನು ಆಕೆಯ ಬರವಿಗಾಗಿ ಕಾಯ್ದನು. ಆ ಮಗುವೂ ತಾಯಿಡೆಗೇನೇ ನೋಡುತ್ತಿತ್ತು. ಅವಳು ಧೈರ್ಯಮಾಡಿ ನೀರಿ ಗಿಳಿದಳು. ನೀರಿನಲ್ಲಿ ಸೆಳೆತ ವಿಶೇಷವಿರಲಿಲ್ಲ. ಅವಳು ಧೈರ್ಯ ಗೊಂಡಳು. ಹೆಜ್ಜೆಹೆಜ್ಜೆಯನ್ನೂ ಜಾಗರೂಕತೆಯಿಂದ ಇರಿಸು ತ್ತಿದ್ದಳು. ಮೊಣಕಾಲಿನ ಮೇಲೆತ್ತಿದ ಸೀರೆಯ ನೆರಿಯನ್ನು ಪ್ರವಾಹದ ಸೆಳವು ತೋಯಿಸತೊಡಗಿತು. ಮುಂದೆ ಇನ್ನೂ ಆಳ ವಿವೆಯೇ ಎಂದು ಆಚೆಯ ದಡದಲ್ಲಿ ನಿಂತ ಗಂಡನೆಡೆಗೆ ನೋಡು ತ್ತಿದ್ದಂತೆಯೇ—ಅವನು ಬಾಯಲ್ಲಿ ಏನೋ ಹೇಳಿದನು. ಆದರೆ ಈಗ ಕಾಡಿನ ಮರಗಳ ಮೇಲೆ ಜೋರಾಗಿ ಸುರಿವ ಮಳೆಯ ಏಕನಾದ ದೊಂದಿಗೆ, ಹರಿವ ತೊರೆಯ ಗರ್ಜನೆಯೂ ಸೇರಿ, ಆಮಾತು ಅವಳಿಗೆ ಕೇಳಿಸಲೇ ಇಲ್ಲ—ಅವಳು ಕಾಲುಜಾರಿದಳು! ಯಾವ ಆಧಾರವೂ ಅವಳಿಗೆ ಸಿಗಲಿಲ್ಲ. ಆಚೆಯ ದಡದಲ್ಲಿ ನಿಂತ ಗಂಡುಸು ಒಂದೇ ಒಂದು ಕ್ಷಣ ಏನು ಮಾಡುವುದೆಂದು ದಿಗ್ಭ್ರಾಂತನಾಗಿ, ಅಷ್ಟರಲ್ಲಿಯೇ ಒಂದು ನಿರ್ಧಾರಕ್ಕೆ ಬಂದು, ಆ ಮಗುವನ್ನು ಅಲ್ಲೇ ಇಳಿಸಿ, ಪ್ರವಾಹ ದೆಡೆಗೆ ಇಳಿದನು. ಈಗ ಉಕ್ಕಿಹರಿಯುತ್ತಿರುವ ತೊರೆಯಲ್ಲಿ ಆ ಹೆಂಗುಸು ಸಂಪೂರ್ಣ ಮುಳುಗೇಳುತ್ತಿದ್ದಳು! ಆಕೆಯ ಸೀರೆಯ ಸೆರಗು, ತಲೆಕೂದಲಿನ ರಾಶಿ ನೀರಿನಲ್ಲಿ ತೇಲಿ ಒಂದು ಕರಿಯದಾದ ಕುರುಹನ್ನು ತೋರಿಸುತ್ತಿದ್ದಂತೆಯೇ, ಆಕೆ ಪ್ರವಾಹದೊಂದಿಗೆ ತೇಲಿ ಹೋಗುತ್ತಿದ್ದಳು!

ಅವನು ನೀರಿಗೆ ಹಾರುವ ಸಿದ್ಧತೆಯಲ್ಲಿದ್ದನು

ಅವನ ಮಗು ಜೋರಾಗಿ, ಆದರ ಎಲ್ಲ ಶಕ್ತಿಯನ್ನೂ ಶೇಖರಿಸಿ ಅಳತೊಡಗಿತು. ಅವನು ಅದರ ಕಡೆಗೆ ತಿರುಗಿದನು. ನೀರಿಗೆ ಹಾರಲಿಲ್ಲ! ಹೆಂಗುಸು ನೀರಿನಲ್ಲಿ ಒಂದು ಫರ್ಲಾಂಗಿನಷ್ಟು ಕೆಳಗೆ ತಲಪಿದ್ದಳು. ತಾನು ನೀರಿಗಿಳಿದರೆ, ಅವಳೊಡನೆ ತಾನೂ ಪ್ರವಾಹ ದೊಂದಿಗೆ ಹೋದರೆ ಮಗುವಿನ ಗತಿಯೇನು ಎಂದು ಅಂಜಿದನೋ ಏನೋ! ಅಂತೂ ಅವನು ನೀರಿಗಿಳಿಯಲಿಲ್ಲ. ಮಗು ಅಳುತ್ತಲೇ ಇತ್ತು. ಅವನು ತಿರುಗಿ ಬಂದು ಮಗುವನ್ನೆತ್ತಿಕೊಂಡನು. ಆದರ ಮೈ ಕೆಂಡದಂತೆ ಸುಡುತ್ತಿತ್ತು! ಶೀತವಾದ ವಾತಾವರಣಕ್ಕೆದುರಾಗಿ, ಆ ಮಗುವನ್ನೆತ್ತಿ ಅಪ್ಪಿ ಹಿಡಿದುಕೊಂಡನು. ಅದು ಇನ್ನಷ್ಟು ಜೋರಾಗಿ ಅಳತೊಡಗಿತು. ಹುಚ್ಚುಹಿಡಿದವನಂತೆ, "ನಿನ್ನ ಬದುಕಿಗೆ ಬೇಡಿದ್ದು ನಿಜ. ಆದರೆ ತಾಯನ್ನು ಕೊಂದೆಯೋ, ಪಾಪಿ!" ಎಂದು ಹೇಳಿ ಆ ಮಗುವಿನ ಕೆನ್ನೆಗೆ ಒಂದೇಟು ಬಾರಿಸಿದನು! ಮಗು ಮತ್ತಷ್ಟು ಅತ್ತಿತು!

....ಅಳುತ್ತಲೇ ಇತ್ತು....ಮಳೆ ಬರುತ್ತಲೇ ಇತ್ತು... ತೊರೆ ಕೆಂಪು ನೀರಿನಿಂದ ತುಂಬಿ ಹರಿಯುತ್ತಿತ್ತು.........ವಾತಾವರಣದಲ್ಲಿ ಮಳೆಯ ಶಬ್ದ ತುಂಬಿ ಸುಯ್ಲಿಡುತಿತ್ತು.....ಕಾಡಿನ ದಾರಿ....ಮನೆಗೆ ಇನ್ನೂ ದೂರವಿತ್ತು....ಅಳುವ ಮಗುವನ್ನು ಎರಡು ಕೈಗಳಿಂದಲೂ ಬಲವಾಗಿ ತನ್ನೆದೆಗೆ ಬಿಗಿದಪ್ಪಿಕೊಂಡು ಅವನು ಮುಂದೆ ನಡೆಯ ತೊಡಗಿದನು.

ಸುದರ್ಶನ

'ಆನಂದಕಂದ'ರ ಸಾಮಾಜಿಕ ಕಾದಂಬರಿಯ
೪ನೆಯ ಆವೃತ್ತಿ ಮುದ್ರಿತವಾಗಿ ಹೊರಗೆ ಬಂದಿದೆ.
ಪುಟ ಸಂಖ್ಯೆ ೧೫೦. ಬೆಲೆ ೧-೮-೦.

ಓದಲು ಕೈಯಲ್ಲಿ ತೆಗೆದುಕೊಂಡವರಿಗೆ, ಮುಗಿಸದೆ
ಇದನ್ನು ಕೆಳಗಿಡಲಿಕ್ಕೆ ಮನಸ್ಸು ಒಪ್ಪಲಾರದು.

* * * *

ಈ ಕಾದಂಬರಿಯನ್ನು ನೂರು ನೂರು ಸಲ ಓದಿಯೂ
ಇನ್ನೂ ಓದಬೇಕೆನ್ನುವ ರಸಿಕರು ಹಲವು ಜನರು.

ಬೇಕಾದವರು ಕೂಡಲೆ ಪತ್ರ ಬರೆಯಿರಿ!

'ಜಯಂತಿ' ಕಾರ್ಯಾಲಯ, ಧಾರವಾಡ

ಪತ್ತೇದಾರಿ ಕಾದಂಬರಿಗಳು

(ವಿಡಂಬನಾತ್ಮಕ ವಿಮರ್ಶೆ)

ಶ್ರೀ. ಅ. ರಾ. ಸೇ. ದಾವಣಗೆರೆ

卐

ಇಂದು ನಿತ್ಯನಿತ್ಯವೂ ನೂರಾರಾಗಿ ಹೊರಬೀಳುತ್ತಿರುವ ಕಾದಂಬರಿಗಳು ಓದಲು ತಕ್ಕುವುಗಳೇ? ಆರ್ಟ್ಸ್ ಕಾಲೇಜಿನ ಮೀನಲೋಚನೆ—ಪದ್ಮಾವತಿಗೂ, ಕಾಮರ್ಸ್ ಕಾಲೇಜಿನ ವಿದ್ಯಾರ್ಥಿ ವೆಂಕಟೇಶನಿಗೂ ಬೆಳೆದ ಅಮರ(?)ಪ್ರೇಮದ ಕತೆಯಲ್ಲಿ ಅಂತಹ ಕುತೂಹಲವೇನಿದೆ?

卐

"ಅವಳಿಗೆ ಮುಂದಿನ ದಾರಿ ಕಾಣುತ್ತಿರಲಿಲ್ಲ. ಸಮಸ್ತ ಲೋಕವೂ ತನ್ನನ್ನು ಹೊರಗೆಸೆದಂತೆ ಕಂಡಿತು. ಘೋರ ನಿರಾಶೆಯ ಕಾರಿರುಳ ವಿದ್ರಾವಕ ಸಮುದ್ರದಲ್ಲಿ ಅವಳ ಮನಸ್ಸಿನ ತೆಪ್ಪ ಚೂರು ಚೂರಾದಾಗ ಅದು ಹೇಗಿತ್ತೆಂದರೆ......"

ಈ ಮೇಲ್ಕಂಡ ಮನೋವಿಶ್ಲೇಷಣೆ, ಸುಪ್ರಸಿದ್ಧ ಲೇಖಕ ಶ್ರೀ.... ರವರು ತಮ್ಮದೇ ಆದ ಶೈಲಿಯಲ್ಲಿ ಬರೆದಿರುವ 'ಮನೆಗೆ ಬಂದ ಮಾರಿ'ಯ ೩೨೮ನೆಯ ಪುಟದಲ್ಲಿ ಬರುತ್ತದೆ. 'ಮನೆಗೆ ಬಂದ ಮಾರಿ' ಕೊನೆಗೊಳ್ಳುವುದು ೩೯೮ನೆಯ ಪುಟದಲ್ಲಿ. ಆದರೆ ಅವಳು ತೊಲಗಿ ಹೋಗುವುದು 'ತೊಲಗಿಹೋದಳು' ಕಾದಂಬರಿಯ ಕೊನೆಯಲ್ಲಿ. ಪುಟಗಳು ೪೩೭; ಬೆಲೆ ಕೇವಲ ದೀಡ್ ರುಪಾಯಿ.

ನನಗಂತೂ. ಶ್ರೀ....ರವರ ಸಹವಾಸ ಸಾಕಾಗಿದೆ. ಆದರೇನು, ವಿಮರ್ಶಕರು ಅವರನ್ನು ಹೊಗಳಿ, ಹಿಗ್ಗಿಸಿ, ಅಟ್ಟಕ್ಕೇರಿಸಿ ಬೆಟ್ಟಕ್ಕೂ ಮುಟ್ಟಿಸುತ್ತಾರೆ. ಶ್ರೀ....ರವರ ಮನಶ್ಲೇಷ್ಮ ವಿಮರ್ಶಕರಿಗೇ ಇರಲಿ; ಅವರ ಮಿತ್ರರಾದ ಲಾರೆನ್ಸ್, ಆಸ್ಟಿನ್, ಡಿಕನ್ಸ್, ಗಾರ್ಕಿ ಮತ್ತು ಕೊನೆಯದಾಗಿ, ಸಮೃದ್ಧ ಸಾಹಿತಿಗಳು ಕನ್ನಡದಲ್ಲಿ—ಅವರ ಸಹವಾಸವೂ ಅವರಿಗೇ ಅಂದರೆ ವಿಮರ್ಶಕ ಮಹಾಶಯರಿಗೇ ಇರಲಿ! ನನ್ನಮಟ್ಟಿಗೆ ಸದ್ಯಕ್ಕೆ ಶ್ರೀ....ರವರ ಶ್ಲೇಷ್ಮ ಬೇಡ.

ಬರೆಯುವವರಿದ್ದಾರೆ, ಬರೆಯಲಿ ರಾಜ್ಯಾಂಗದತ್ತ ಹಕ್ಕು ಅವರಿಗಿದೆ. 'ಇದೇ ಸಾಹಿತ್ಯದ ಪರಮಸಿದ್ಧಿ' ಎನ್ನುವ ವಿಮರ್ಶಕರು ಇದ್ದಾರೆ. ಅವರೂ ಇರಲಿ! ಆದರೆ ಅವರಷ್ಟಕ್ಕೆ ಅವರಿರಲಿ.

ಇಲ್ಲ. ಅವರಷ್ಟಕ್ಕೆ ಅವರಿರುವುದಿಲ್ಲ. ಅವರ ತಲೆ ತಿರುಗಿ ಹೋಗಿದೆ. ತಾವೇ ಸರಿ, ಇನ್ನುಳಿದವರು ಕೆಲಸಕ್ಕೆ ಬಾರದವರು. ಎನ್ನುತ್ತಿದ್ದಾರೆ. ಈ ಸ್ವಪ್ರತಿಷ್ಠೆ ನನಗೆ ಸರಿ ಬೀಳುತ್ತಿಲ್ಲ; ಆದುದರಿಂದಲೇ ಆ ಜಂಬದ ಕೋಳಿಗಳ ಪುಸ್ತಕಗಳನ್ನೆಲ್ಲಾ ಮೂಲೆಗೆಸೆದಿದ್ದೇನೆ. ಅವರು ಕಡೆಗಣಿಸಿ ಕೀಳ್ಗಣ್ಣಿನಿಂದ ನೋಡುತ್ತಿರುವವೆಸ್ಟರ್ನ್ ಎಸ್ಪಿಯನೇಜ್ ಹಾಗೂ ಪತ್ತೇದಾರಿ ಕಾದಂಬರಿಗಳನ್ನು ಕೈಗೆತ್ತಿಕೊಂಡಿದ್ದೇನೆ. ಅದರಲ್ಲೂ ಇಂಗ್ಲಿಷ್ ಪುಸ್ತಕಗಳನ್ನು ಮಾತ್ರ. ಇದುವರೆಗೆ ನಾನು ಓದಿರುವುದು ಒಂದೇ ಪತ್ತೇದಾರಿ ಕಾದಂಬರಿ—ಕನ್ನಡದ.

ಕನ್ನಡಮಾತೆಗೆ ನನ್ನ ಮೇಲೆ ಸಿಟ್ಟು ಬಂದರೂ ಚಿಂತೆಯಿಲ್ಲ; ಸಾಮಾಜಿಕ ಕಾದಂಬರಿಗಳ ನಾಯಕ–ನಾಯಕಿಯರ ಸಹವಾಸವೇ ಬೇಡ.

ಹಾದರದ ಕತೆಯನ್ನು ಮಾದೇವಿಗಳ ವ್ಯಥೆಯ
ಆದರಿಸಿ ಸಾಹಿತ್ಯವೆಂದೆನುವ ಕಕವಗಳು
ಸೋದೆಗಳು ನೋಡೊ ಸರ್ವಜ್ಞ.

ನನಗೆ ಬೇಕಾದ ಕಾದಂಬರಿ ಹೀಗಿರಬೇಕು: ಕೋಟ್ಯಂತರ ಕಾದಂಬರಿಗಳ ಕಳವೋ, ನೂರಾರು ಹೆಣಗಳ ಉತ್ಪನ್ನವೋ ಆಗಬೇಕು. ಕದ್ದವರು ಯಾರು? ಕೊಂದವರು ಯಾರು?—ಎಂಬ ಕುತೂಹಲ ನನ್ನಲ್ಲಿ ಕೆರಳಿಯೇ ಕೆರಳುತ್ತದೆ. ಪತ್ತೇದಾರಿ ಕಾದಂಬರಿಕಾರರು ಆ ಪಿತ್ತವನ್ನು ಇಳಿಸಿಯೇ ಇಳಿಸುತ್ತಾರೆ. ಆಗ ಜೀವನ ಹಿತಕರವಾಗುತ್ತದೆ.

ನೀವು ಕದ್ದು ಅಥವಾ ಕೊಂದುಬಿಟ್ಟರೆ ಆಯಿತು—ಎಂದು ಅಂದುಕೊಂಡಿದ್ದೀರಿ. ಸುಳ್ಳು ನಿಮ್ಮ ಎಣಿಸಿಕೆ. ನಿಮ್ಮ ಎಣಿಸಿಕೆ ಬರಿಯ ಭ್ರಮೆ.

ಷೇರ್ ಲಾಕ್ ಹೋಮ್ಸ್—ಅದೋ ಅಲ್ಲಿ ನಿಂತಿದ್ದಾನೆ. ಡಾ|| ವಾಟ್ಸನೆ ಹಿಂದೆಯೇ ಸಿದ್ಧ.

ಹೋಮ್ಸ್ This, if I mistake not, dear watson is a Corpse, and Think dear watson, tne

prit, still at large, is laughing at us as rely as this boday is teering at us, ಎನ್ನುತ್ತಿ-ದ್ದನೆ. ಎಂದಮೇಲೆ ಪತ್ತೆ ಆಗಿಯೇ ಆಗುತ್ತದೆ.

ಅದೋ! ಕಾವ್ರೇಡ್ ಸ್ಲಿಂ ಕ್ಯಾಲಘನ್, ವ್ಹಿಸ್ಕಿ ಬಾಟಲ್ ...ತ್ತು ಸಿಗರೇಟುಗಳೊಡನೆ ನಿಂತಿದಾನೆ. ಅವನಂತಹ ಕುಶಾಗ್ರ-...ತಿಗಳು ಮಂಕು ಹಿಡಿಸುವ ಕೊಲೆಗಳು ನಡೆಯುತ್ತಲೇ ಇವೆ. ...ವನ ಸೆಕ್ರೆಟರಿ ಮಿಸ್ ಎಫೀ ಥಾಂಪ್ಸನ್ ಟೈಪರೈಟರ್ ಮುಂದೆ ...ಳಿತಿದ್ದಾಳೆ. ಹುಡುಗಿ ಅಂದರೆ ಅವಳು! ಹೊರಗಿನಿಂದ ಬಂದ, ...ಂಡಿನಿಕಾಲ್ಸ್. ಎಫೀನ ನೋಡಿದ. ವಿಂಡಿಗೆ ಪ್ರೇಮ ಕಾಮಗಳ ...ದ್ದಿ ತಿಳಿಯದು. ಹುಡುಗಿ ಅಂದರೆ ಅವನ ಪಾಲ್ಗೆ ಹುಡುಗಿಯೇ-...ಂದೆಣ್ಣಿಯಾಗಿದ್ದರಾಯ್ತು. ಎಫೀನ ನೋಡಿ ವಿಂಡಿಗೆ ಇಡಾಹೋ ...ಹುಡುಗಿಯ ನೆನಪಾಯ್ತು. ಅವಳ ಕಥೆಯನ್ನು ಸ್ಲಿಂಗೆ ಹೇಳಿದ: ...ಂದುದಿನ ನಾನು ಇಡಾಹೋ ಹೊಟಲ್ಲಿ ಕುಳಿತಿದ್ದೆ ಆ ಹುಡುಗಿಯ ...ದ್ದಿಯನ್ನೇ ಮೆಲುಕು ಹಾಕುತ್ತಿದ್ದೆ ಮನಸ್ಸಿನಲ್ಲಿ. ಹಿಂದಿನ ದಿನ ...ವಳಿಗೆ ಏನೋನೋ ಹೇಳಿದ್ದೆ. ಹಾಗಿದೀ, ಹೀಗಿದೀ, ನಿನ್ನ ನೋಡಿ ಹೀಗ್ಹೀಗೋ ಆಗ್ತಾ ಇದೆ—ಅಂತ ಬಿಟ್ಟಿದ್ದೆ ಎಕ್ಸ್‌ಪ್ರೆಸ್. ಅವಳು ...ಂದಳು 'ವಿಂಡಿ, ನನ್ನ ಬಗ್ಗೆ ನಿನ್ನ ಅಂಬೋಣ ಏನು ಅನೆ? ...ಂದಳು. ಮತ್ತೆ ಬಿಟ್ಟೆ ಎಕ್ಸಪ್ರೆಸ್' 'ಹಾಗಿದೀ, ಹೀಗಿದೀ, ನಿನ್ನ, ನೋಡಿದರೆ ಹೇಗ್ಹೇಗೋ ಆಗ್ತಾ ಇದೆ ಗ್ರೇಟಾಗಾರ್ಬೊ, ವಿವಿನ್ ಲೀ, ...ಟಾ ಹೇವರ್ತ್ ಇವರೆಲ್ಲ ನಿನ್ನ ಮುಂದೆ ಮೂದೇವಿಗಳು' ಅಂತ. ಅವಳು ಅಲ್ಲೇ ಕುಳಿತುಬಿಟ್ಟಳು 'ನೀನೊಬ್ಬೇ ನನಗ್ಗತಿ. ಇನ್ಯಾರೂ ನನಗ್ಬೇಡ' ಅಂದೆ. ಅವಳಿಗೆ ರೇಗಿತು. ಕೂತಿದ್ದ ಕುರ್ಚಿನೇ ಎತ್ತಿ ಬಿಟ್ಟಳು ನನ್ನ ತಲೆಗೆ. ಎಚ್ಚರವಾಗಿ 'ವ್ಯೆಕ ಸಾಹೂಂ' ಎಂದರೆ ಆಸ್ಪತ್ರೆ ನರ್ಸ್ ಬಂದಳು. ಏಕೆ ಗೊತ್ತೋ. ಮೊದಲ್ನೇ ಹುಡುಗೀನೂ, ನನಗೊದ್ದ ಎರಡ್ನೇ ಹುಡುಗೀನೂ ಅವಳ-ಅವಳಿಗಳು. ಅದು ನನಗೆ ಗೊತ್ತಿರಲಿಲ್ಲ

ಈ ಕಥೆ ಕೇಳಿ ಸ್ಲಿಂ ಕ್ಯಾಲಘನ್ ಕೊಲೆಗಾರನ ರಹಸ್ಯವನ್ನು ಕಂಡು ಹಿಡಿದೇ ಬಿಟ್ಟ. ಏಕೆಂದರೆ 'ಕತ್ತಲು ಅವನನ್ನು ಮುತ್ತಿತ್ತು. ಅವನು ದಿಙ್ಮೂಢನಾಗಿದ್ದನು' ಎಂಬಂತಹ ಕನ್ನಡ ಕಾದಂಬರಿಕಾರನಲ್ಲ ಅವನು.

'ಹಾರಿಹೋದ ಹಕ್ಕಿ' 'ಅಮರಪ್ರೇಮ ಭಗ್ನವಾಯಿತು' ಇತ್ಯಾದಿ ಕಾದಂಬರಿಗಳನ್ನು ಓದಬೇಕೇಕೆ? ಆರ್ಟ್ಸ್ ಕಾಲೇಜಿನ ಮೀನಲೋಚನೆ-ಸದಾಶಿವನಿಗೂ, ಕಾಮರ್ಸ್ ಕಾಲೇಜಿನ ವಿದ್ಯಾರ್ಥಿ ವೆಂಕಟೇಶನಿಗೂ, ಬೆಳೆದ ಅಮರಪ್ರೇಮದ ಕಥೆಯಲ್ಲಿ ಅಂತಹ ಕುತೂಹಲವೆಲ್ಲಿದೆ? ಆ ಪ್ರೇಮದ ಫಲಿತಾಂಶ ನನಗೆ ಮೊದಲೇ ಗೊತ್ತಿರುತ್ತದೆ. ಮೀನಲೋಚನೆಗಳಲ್ಲಿ ಕಂಬನಿ, ಕಾಮರ್ಸ್ ಡಿಗ್ರಿಗೆ ತಿಲಾಂಜಲಿ.

ಕವಿಗಳು ಕಾಣುವ ಸೌಭಾಗ್ಯದರ್ಶನ ಅಷ್ಟರಲ್ಲೇ ಇದೆ. ರಾಮರಾಜ್ಯದಲ್ಲೇ ಸೀತೆಗೆ ವನವಾಸವಂತೆ. ಅಂದಮೇಲೆ 'ಕಲಿಯುಗ ಸೌಭಾಗ್ಯದರ್ಶನ'ವನ್ನು ಕವಿಗಳು ಕಾಣದೆ ಸೌಭಾಗ್ಯ ದರ್ಶನವನ್ನು ಕಂಡರೇನು ಬಂತು? ಕುರುಡಿಕುಕ್ಕರಿ ಹೊಳೆದ ಕೂಗಿನಲ್ಲಿ ವಿರಹವನ್ನು ಕಾಣುವ ಈ ಜನ, ನಮಗೆ ಸೌಭಾಗ್ಯದರ್ಶನ ಮಾಡಿಸಬೇಕಾದುದೇನಿಲ್ಲ. ಬಾಳು ಹಸನಾಗುವ ಕನಸು ಕಂಡು ಬಿಟ್ಟರೆ ಸಾಕೇ? ಬಾಳು ಕನಸಲ್ಲ; ಎಚ್ಚರವಾಗಿದ್ದಾಗ ಕನಸು ಏನನ್ನೂ ಕೊಡಲಾರದು. ಮಾನವ ಎಂದೆಂದೂ ಹೇಡಿ, ಸ್ವಾರ್ಥಿ, ಕ್ರೂರಿ, ಆಸೆಬಡುಕ; ಅದಕ್ಕಾಗಿ ಕೊಲೆ, ಕಳವು, ದರೋಡೆ, ಮೋಸ, ದಗಲ್ಬಾಜಿಗಳು ಎಂದೆಂದೂ ನಡೆದೇ ಇವೆ. ಸಾಹಿತ್ಯ ಮಾನವ ಪ್ರತಿಬಿಂಬವಾಗಿದ್ದರೆ, ಪತ್ತೇದಾರಿ ಕಾದಂಬರಿಗಳಿಗೆ ಸಾಹಿತ್ಯದ ಅಗ್ರ ಪಟ್ಟವನ್ನು ಕೊಡಲೇಬೇಕು. ನೀವು ಕೊಡದಿದ್ದರೂ ನಾನು ಕೊಟ್ಟಿದೇನೆ. ಮತ್ತು ನನ್ನ ವಿಮರ್ಶನಾ ಶಕ್ತಿ ಅತ್ಯಂತ ಉತ್ತಮವಾದದ್ದೆಂದು ನೀವೆಲ್ಲ ಒಪ್ಪಿದೀರಿ.

ಕ್ಲೈಬ್ಯವನ್ನು ತೆಗೆದೊಗೆಯಿರಿ. ಕ್ಷುದ್ರ ಹೃದಯ ದೌರ್ಬಲ್ಯದ ಉಳಿದ ಸಾಹಿತ್ಯವನ್ನು ಮರೆಯಿರಿ. ಬುಕ್‌ಸ್ಟಾಲಿಗೆ ಹೋಗಿ ಪತ್ತೇದಾರೀ ಕಾದಂಬರಿಗಳನ್ನು ಕೊಳ್ಳಿರಿ. ಆದರೆ ಪುಸ್ತಕ ಕೊಳ್ಳುವಾಗ ಮೋಸ ಹೋಗದಿರಿ. 'ಇದೊಂದು ಪತ್ತೇದಾರೀ ಕಾದಂಬರಿ' ಎಂದಿರುವುದನ್ನು ನೋಡಿ ಕೊಳ್ಳಿರಿ. ಹೊಂಬಳದ ಹುಡುಗ ಬಿದ್ದ ಹಾಗೆ ಪಾಶಿ ಬೀಳಬೇಡಿರಿ. ಅವನ ಕಥೆ ಕೇಳಿ: ಹೋದವರ್ಷ ಗದಗ್-ಸೊಲ್ಲಾಪುರ ರೈಲಿನಲ್ಲಿ ಪ್ರಯಾಣ ಮಾಡುವ ಅಮೋಘ ಅನುಭವ ದೊರೆಯಿತು. ಗದಗಿನಿಂದ ನಡೆಯುತ್ತಾ ಹೊರಟ ರೈಲು ಯಾವುದೋ ಒಂದು ಸ್ಟೇಶನಿನಲ್ಲಿ ನಿಂತೇ ಬಿಟ್ಟಿತು. (ಆ ಮಾರ್ಗದಲ್ಲಿ ರೈಲು ಓಡುವುದಿಲ್ಲ. ಕುಂಟುತ್ತವೆ. ನಡೆದರೆ ಅದು ಪ್ರವಾಸಿಕರ ಪುಣ್ಯ) ನಾನು ಎಡ್ಗರ್ ವ್ಯಾಲೇಸನ ಕಥೆಯೊಂದನ್ನು ಓದಿ ಮುಗಿಸುವುದಕ್ಕೂ, ರೈಲು ನಿಲ್ಲುವುದಕ್ಕೂ ಕೂಡಿಬಂತು.

ನಿಂತ ರೈಲು ಬಹಳ ಹೊತ್ತು ಹೊರಡಲಿಲ್ಲ. ನನ್ನೆದುರು ಕುಳಿತ ಹೊಂಬಳದ ಹುಡುಗನೊಬ್ಬ, ಸ್ಟ್ಯಾನ್ಲಿ ಗಾರ್ಡ್‌ನರ್ ಓದುತ್ತಿದ್ದ. ನಾನು ಅವನ ಕೈಯ ಪುಸ್ತಕವನ್ನೇ ಬಕಪಕ್ಷಿಯಂತೆ ನೋಡುತ್ತಾ ಕುಳಿತಿದ್ದೆ. ಎಡ್ಗರ್ ವ್ಯಾಲೇಸ್ ರೋಮಾಂಚಕ, ಗಾರ್ಡ್‌ನರ್ ವಾಕೀಲಕ ಅಥವಾ ಕಾನೂನಿಕ ರೋಮಾಂಚಕನನಾತರ ಕಾನೂನಿಕ ಸಿಕ್ಕರೆ ಚಿಂತೆಯಿಲ್ಲ—ಎಂದು ಯೋಚಿಸುತ್ತಿದ್ದೆ. ರೈಲು ಸುಸುಪ್ತಿಯಲ್ಲಿತ್ತು; ಗಾರ್ಡ್, ತನ್ನ ಕೋಟು ಹಾಸಿ ಪ್ಲ್ಯಾಟ್‌ಫಾರ್ಮಿನ ಮೇಲೆ ಒರಗಿದ್ದ ಬಿಸಿಲು ಚುರುಗುಡುತ್ತಿತ್ತು. ಹೊಂಬಳದ ಹುಡುಗ ನನ್ನ ಕಡೆ ತಿರುಗಿದ.

“ಯಾಕ್ ರಾವ್‌ಸಾಬ್ರ, ಪುಸ್ತಕ ಮುಗೀತೇನ್ರಿ? ಪರಂತು ಈ ಗಾಡಿ ಹೊರಡೂ ಲಕ್ಷಣಾನ ಇಲ್ಲ. ನಿಮ್ಮಂಬೋಣ ಏನದೋ ಗೊತ್ತಿಲ್ರಿ; ನನ್ನಂಬೋಣ ಏನದಂದ್ರ, ಈ ಗಾಡೀಕಿಂತ ಆ ಮೀನ ಲಗು ಲಗು ಓಡ್ತತಿ ಇದ್ಕೆ ಏನು ದ್ಯಾನಿ ಬಂದದೋಣ ಆ ಹೋಮ್ಸ ಬಲ್ಲ ನೋಡ್ರಿ. ಹಿಂಗೇ ಊರೊಳ್ಗ ಹೋಗಿ ಬರ್ತೇನ್ರಿ; ಥೋಡೇ ವ್ಯವಹಾರ ಅದ! ಪನ್ನೇತೀನಾತು; ಸಾಹೇಬಾಂಪ್ಕ ಏನಾರೇ ಈ ಗಾಡೀ ಹೊರಟೀತು. ನಿಮ್ಗೊಂದು ಪುಸ್ತಕ ಬೇಕೇನ್ರಿ?” ಎಂದ.

" ಪತ್ತೇದಾರೀ ಇದ್ರೆ ಬೇಕು " ಎಂದೆ ನಾನು.

ಅತ, ಒಂದು ಕನ್ನಡ ಪುಸ್ತಕಕೊಟ್ಟ.

"ನೋಡ್ರಿ ಆ ಗದಗ್‍ದಾಗ ಡೋನ್ ಪುಸ್ತಕ ಕೊಂಡೆ. ಇದೂ ಗುನ್ಹೇದ ಪುಸ್ತಕಾನೇ ಅದ, ಓದ್ತೀರ್ರಲಾ " ಎಂದು, ಆ ಹುಡುಗ 'ಧೋಡೇ ವ್ಯವಹಾರ' ಮುಗಿಸಿಕೊಂಡು ಬರಲು ದಿಗಂತದ ಕಡೆಗೆ ಹೋಗಿಯೆಬಿಟ್ಟ.

ಅನಂತರ ನಾನು ಆ ಪುಸ್ತಕವನ್ನು ಓದಲಾರಂಭಿಸಿದೆ. ಓದುತ್ತಾ ಓದುತ್ತಾ ಆ ಪುಸ್ತಕದ ಬಗ್ಗೆ ಈ ಕೆಳಗಿನ ವಿಷಯಗಳನ್ನು ಪತ್ತೆ ಹಚ್ಚಿದೆ:

೧) ಆ ಪುಸ್ತಕದ ಹೆಸರು 'ದೇವರು ಯಾರು ?'

೨) ಅದರಲ್ಲಿ ಯಾವ ಕೊಲೆಯೂ ಆಗುವ ಲಕ್ಷಣ ಕಾಣುವುದಿಲ್ಲ.

೩) ಅರ್ಧ ಪುಸ್ತಕ ಮುಗಿದರೂ ಪತ್ತೇದಾರನ ಸುಳುವಿಲ್ಲ.

೪) ನಾಯಕನೂ ಇಲ್ಲ, ನಾಯಕಿಯೂ ಇಲ್ಲ.

೫) ಪೋಲೀಸರೂ ಇಲ್ಲ; ಪಂಚನಾಮೆ ಮಾಡುವುದರಲ್ಲೂ ಬರಲಿಲ್ಲ.

೬) ಕೊನೆಯ ಪುಟದಲ್ಲೂ ಸಹ ದೇವರು ಯಾರು ?– ಎಂಬ ವಿಷಯ ತಿಳಿಯಲಿಲ್ಲ.

ಹಾಗಾದರೆ ಅದು ಎಂಥ ಪುಸ್ತಕವಿದ್ದೀತು? ಪತ್ತೇದಾರಿಯಂತೂ ಅಲ್ಲ. ಫಿಲಾಸಫಿ ಇದ್ದೀತೇ ?

ಇಂತು, ನಾನು ಚಿಂತಾಮಗ್ನನಾಗಿದ್ದಾಗ, ನನ್ನೆದುರು ಹೊಂಬಳದ ಹುಡುಗ ಪ್ರತ್ಯಕ್ಷನಾದ.

" ಏನ್ರಾವ್‍ಸಾಬ್ರ, ಎಷ್ಟ್ನೇ ಹೆಣಬಿತ್ತು ? " ಎಂದು ಅತ್ಯಂತ ಕಾತರದಿಂದ ಕೇಳಿದ.

" ಸರ್, ಇದರಲ್ಲಿ ಇದುವರೆಗೂ ಒಂದು ಹೆಣ ಕೂಡ ಬಿದ್ದಿಲ್ಲ. " ಎಂದೆ.

" ಅಲೆ ಇವ್ನಾಪ್ನ ! ಇದೇನ್ರೀ ಸೋಜಿಗ ? "

" ಇದು ಫಿಲಾಸಫೀ ಬುಕ್ ಸರ್ ! "

" ಹೀಂಗದೇನ! ಘೋಟಾಳ್ಯಾತ್ತಗೇರಿ. ಆ ಬುಕ್‍ಸ್ಟಾಲಿನಾಂವಾ ಆಗ್ದೀ ತಲೆತಿರಕ ಇಂಥಾದು. ಎಲಾ ಮಗನ ಎರಡು ಆಗ್ದೀ ಛಲೋ ಗುನ್ಹೆಗಾರೀ ಕಿತಾಬ್ ಕೊಡೋ ಅಂದ್ರ, ಹಿಂಗ್ಯಾಡಿದ್ನೇನು ? ನೀವು ಮೊದಲೇ ಹೇಳಿದ್ದು ಠೀಕ್ ಆತ್ತಗೇರಿ. ಅದ್ನೋದೋ ಪ್ರಸಂಗಾನೇ ತಪ್ಪಿತು. " ಎಂದ. ಅವನ ಮುಖದಲ್ಲಿ ಯಾತನೆ ತಲೆದೋರಿತು ಕೊಂಚಹೊತ್ತು ಸುಸ್ತಾಗಿ ಕುಳಿತಿದ್ದ ಅನಂತರ ಉಸಿರಿಟ್ಟ:

" ಹೋದ ತಿಂಗ್ಳ 'ಗುನ್ಹೇಗಾರನು ಯಾರು ?' ಅಂಬೂ-ಆಗ್ದೀ ಮಾರಾಮಾರಿ ನಾವೆಲ್ ಓದಿದ್ದೆ. 'ದೇವರು ಯಾರು' ಹಾಂಗೇನೇ ಅಂತ ತಿಳ್ದೆ. ಮೋಸಾತ್ತಗೇರಿ " ಎಂದ. ಆದುದರಿಂದ ನೀವು ಹೊಂಬಳದ ಹುಡುಗನ ತಾಗಬೇಡಿ.

ಪತ್ತೇದಾರಿ ಕಾದಂಬರಿಗಳಿಂದ ನಮಗೆ ಸಾಮಾಜಿಕ, ಆರ್ಥಿಕ, ಬೌದ್ಧಿಕ, ನೈತಿಕ, ರಾಸಾಯನಿಕ, ಭೂಭೌತಿಕ, ಜ್ಯೋತಿಷ ಲಾಭವಿದೆ.

ಸಾಮಾಜಿಕ ಜೀವನವನ್ನಾಚರಿಸುವ ಸೋಮಾರಿತನ ನಮ್ಮ ಸಾಹಿತ್ಯವನ್ನೂ ಆವರಿಸಿದೆ. ನಾನು ಮೊದಲೇ ಹೇಳಿದ ಶ್ರೀ .. ರವರ ಮನೋವಿಶ್ಲೇಷ್ಣದ ೩೯೮+೪೩೭ ಪುಟಗಳ 'ಮನೆಗೆ ಬಂದ ಮಾರಿ' 'ತೊಲಗಿ ಹೋದಳು' ಕತೆಯ ಕೊನೆಗೆ ಏನಾಗುವುದು ಬಲ್ಲಿರಾ ? ನಾಯಕ-ನಾಯಕಿಯರ ಪ್ರೇಮವ್ಯಾಧಿಗೆ ಔಷಧಿ ಹುಡುಕಿ ಸೋತ ಡಾಕ್ಟರು, ಹಗ್ಗವೊಂದನ್ನು ತೊಲೆಗೆ ಕಟ್ಟುತ್ತಾರೆ. ಇಷ್ಟು ಹೇಳಲು ಅಷ್ಟು ಪುಟಗಳೇ ?

ಪತ್ತೇದಾರಿ ಕಾದಂಬರಿಯಾಗಿದ್ದರೆ ಹಾಗಾಗುತ್ತಿರಲಿಲ್ಲ. ಪ್ರಸಿದ್ಧ ಸಿನಿಮಾ ನಟಿ–ಆತ್ಮಹತ್ಯೆ ಮಾಡಿಕೊಂಡು ಮೊದಲನೆಯ ಪುಟದಲ್ಲೇ ನೇತಾಡುತ್ತಿದ್ದಳು. ಅದು ಆತ್ಮಹತ್ಯೆಯೆಂದು ಪೋಲೀಸರು ಒಪ್ಪಿ ಬಿಡುತ್ತಿದ್ದರು. ನೀವೂ ಒಪ್ಪುತ್ತಿದ್ದಿರಿ. ಆದರೆ ಪತ್ತೇದಾರ ಶಂಕಾಕ್ರಾಂತನಾಗುತ್ತಾನೆ. ಇದು ಆತ್ಮಹತ್ಯೆಯಲ್ಲ ಕೊಲೆ—ಎಂದು ನಿರ್ಧರಿಸುತ್ತಾನೆ. ಹಾಗಾದರೆ ಕೊಂದವರು ಯಾರು ? ಉದ್ದೇಶವೇನು? ? ಅವಳು ತನ್ನಿಂದ ಹೆಚ್ಚು ಹಣ ಕಸಿದುಕೊಂಡಳೆಂದು ಪ್ರೊಡ್ಯೂಸರೋ. ಅವಳ ಅದ್ಭುತ ಅಭಿನಯಹೀನತೆಯಿಂದ ನೊಂದ ಡೈರೆಕ್ಟರೋ, ಅವಳ ಮೇಲಿನ ಮತ್ಸರದಿಂದ ಚಿತ್ರನಾಯಕನ ಧರ್ಮಪತ್ನಿಯೋ, ಅವಳನ್ನು ಕೊಂದಿರಬಹುದೆಂದು ನೀವು ಊಹಿಸುತ್ತೀರಿ. ಆದರೆ ಪತ್ತೇದಾರ, ಈ ಕ್ಲೂಗಳೊಂದನ್ನೂ ಒಪ್ಪದೆ ಮುಂದುವರಿಯುತ್ತಾನೆ. ಪುಸ್ತಕದ ಕೊನೆಗೆ ಈ ಸತ್ಯ ಹೊರಬೀಳುತ್ತದೆ; ನಟಿಯನ್ನು ಕೊಂದವಳು ಚಿತ್ರಕಥೆಯ ಮೂಲನಾಯಕಿ. ತನ್ನ ಪಾತ್ರದ ಕಗ್ಗೊಲೆ ಮಾಡಿದುದರಿಂದ, ಅವಳು ಆತ್ಮರಕ್ಷಣಾರ್ಥವಾಗಿ ನಟಿಯನ್ನು ಕೊಂದಳು !

ಗ್ಯಾಂಗ ಗಳು, ಗ್ಯಾಂಗ್ ಧ್ವಂಸಕರು, ಷೇರ್‍ಮಾರ್ಕೆಟ್, ರೇಸ್‍ಕೋರ್ಸ್; ಪೋಲೀಸ್ ವ್ಯಾನ್‍ಗಳ ಆ ಪ್ರಪಂಚ ನಮ್ಮ ಸೋಮಾರಿತನವನ್ನು ನಿರ್ಮೂಲ ಮಾಡುತ್ತದೆ. ಬೆಲೆಯೂ ಕಡಿಮೆ–ಅದೇ ಪತ್ತೇದಾರಿ ಕಾದಂಬರಿಗಳ ಆರ್ಥಿಕ ಲಾಭ. ಕದ್ದು ಓದಿದರೆ ಇನ್ನೂ ಉತ್ತಮ. ಕೊನೆಗೆ ಕಳ್ಳನ ಪತ್ತೆಯಾಗಿಯೇ ಆಗುತ್ತದೆ. ಅದರ ಧ್ವನ್ಯರ್ಥ 'ಸತ್ಯಮೇವ ಜಯತೇ ನಾನೃತಂ'

ಹೀಗಿರಲು ಒಂದೇ ಒಂದು ಹೆಣ–ಅದೂ ನಾಟಕದ ಕೊನೆಗೆ–ಬೀಳುವ ರುದ್ರನಾಟಕ, ಹೇರಳವಾಗಿ ಹೆಣ ಬೀಳುವ ಪತ್ತೇದಾರೀ ಕಾದಂಬರಿಗಿಂತ ಉತ್ತಮವೆಂದು ವಿಮರ್ಶಕರು ಹೇಳುತ್ತಿರುವುದು ಅರ್ಥವಿಲ್ಲದ ಮಾತು. ಅಷ್ಟೇ ಅಲ್ಲ, ಹಾಗೆ ಹೇಳುವುದು ಮಹಾ ಅಪರಾಧ. ಆ ಅಪರಾಧೀ ವಿಮರ್ಶಕರಿಗೆ ತಕ್ಕ ಶಿಕ್ಷೆ ಇದ್ದೇ ಇದೆಯೆನ್ನಿ; ಮೊನ್ನೆ ತಾನೇ ಮಾನ್ಯ ಶ್ರೀ....ರವರು ಹೇಳಿಕೆಯೊಂದನು ಕೊಟ್ಟು 'ಮನೆಗೆ ಬಂದ ಮಾರಿ' 'ತೊಲಗಿ ಹೋದಳು' ಅಲ್ಲಿಗೇ ಮುಗಿಯಲಿಲ್ಲ; ಇನ್ನೂ ಮೂರು ಮುಂದಿನ ಭಾಗಗಳು ಶೀಘ್ರದಲ್ಲೇ ಬರಲಿವೆ. (ತಲಾ ೪೦೦ ಪುಟಗಳು) ಎಂದು ತಿಳಿಸಿದಾರೆ. ವಿಮರ್ಶಕರು ಅವನ್ನೋದಲಿ.

ಅದಕ್ಕಿಂತಲೂ ಹೆಚ್ಚಿನ ಶಿಕ್ಷೆ ಇನ್ನೊಂದಿದೆಯೇ ?

ನನಗಾದರೋ ಕಾನನ್‍ಡಾಯ್ಲ್. ಪೀಟರ್‍ಚೆನಿ, ಗಾರ್ಡ್‌ನರ್, ಎಡ್ಗರ್ ವ್ಯಾಲೇಸ್, ಅಗಾಥಕ್ರಿಸ್ಟೀ ಮೊದಲಾದವರ ಪುಸ್ತಕಗಳೇ ಬೇಕು.

ಹಾಗೆ ನೋಡಿದರೆ ವೇದಾಂತವೆಲ್ಲಾ ಪತ್ತೇದಾರಿಯೇ ! ಪ್ರತಿಯೊಬ್ಬ ಮಾನವನ ಪರಮುತ್ಕರ್ಷವ್ಯ ಪತ್ತೇದಾರನಾಗುವುದು. ಅವನು ಭೇದಿಸಬೇಕಾದ ರಹಸ್ಯ :— ನಾನು ಯಾರು ?

"ಉಡನ್ ಖಟೋಲಾ"

(ಒಂದು ಹಾಸ್ಯಕಥೆ)*

ಶ್ರೀ. ಕೆ. ಜಿ. ನಾಯಕ, ಕಲಬುರಗಿ

卐

ಪಟ್ಟಣವಾಸಿಗಳೆಂಬ ಹೆಮ್ಮೆಯಿದ್ದ ಭಟ್ಟರು, ಮಾವನಿರುವ ಹಳ್ಳಿಗೆ—ಅದೂ—ಅಳಿಯತನಕ್ಕೆ—ಎತ್ತಿನ ಬಂಡಿಯಲ್ಲಿ ಕುಳಿತು ಬರುವರೆ? ಟ್ಯಾಕ್ಸಿಯಲ್ಲಿ ಕುಳಿತು ಬಂದರು. ಅದೆಂತಹ ಟ್ಯಾಕ್ಸಿ! ನಜೀಸಾಹೇಬನ 'ಉಡನ್ ಖಟೋಲಾ' ಅದು!

卐

ದೀಪಾವಳಿಯ ಆಮಂತ್ರಣ! ಅದೂ ಮಾವನ ಮನೆಯಿಂದ! ಅಂದಮೇಲೆ ಕೇಳಬೇಕೆ? ಪ್ರತಿವರ್ಷವೂ ಆಮಂತ್ರಣ ಬರುವಂತೆ, ಈ ವರ್ಷವೂ ಭಟ್ಟರಿಗೆ ಮಾವನ ಮನೆಯಿಂದ ದೀವಳಿಗೆಯ ನಿಮಿತ್ತ ಆಮಂತ್ರಣದ ಪತ್ರ ಬಂತು ಹಬ್ಬ ಇನ್ನೂ ನಾಲ್ಕು ದಿನ ಮುಂದೆ ಇರುವಾಗಲೇ ಒಂದು ದಿನ, ನಾಲ್ಕೈದು ಬಟ್ಟೆಗಳನ್ನು ಸುತ್ತಿ ಬಗಲಲ್ಲಿ ಬಡಿದುಕೊಂಡು, ಭಟ್ಟರು ಸ್ಟೇಶನಿಗೆ ಹೊರಟೇಬಿಟ್ಟರು. ಹಬ್ಬದ ಉನ್ಮಾದದಲ್ಲಿದ್ದ ಭಟ್ಟರಿಗೆ ಗಾಡಿಯಲ್ಲಿ ನಡೆದ ಕೆಲ ಸಂಗತಿಗಳ ಕಡೆಗೆ ಲಕ್ಷ್ಯವೇ ಹೋಗಲಿಲ್ಲ. ತಾವು ಇಳಿಯಬೇಕಾದ ಸ್ಟೇಶನ್ನು ಸಮೀಪಕ್ಕೆ ಬಂದಂತೆಲ್ಲ ತಮ್ಮಣ್ಣ ಭಟ್ಟರು ಎಚ್ಚರದಿಂದ ಇರಹತ್ತಿದರು; ಆ ಸ್ಟೇಶನ್ನು ದೂರದಿಂದ ಕಾಣುತ್ತಲೆ ಮನಸ್ಸಿನಲ್ಲಿ ಮಾತಾಡಿಕೊಳ್ಳಹತ್ತಿದರು:

"ಹುಂ.. ಈ ನಮ್ಮ ಮಾವನೊ? ಬಲು ವಿಚಿತ್ರಮನುಷ್ಯ.... ಮನಿಯಾದರೂ ಎಲ್ಲಿ ಮಾಡ್ಯಾನ ಮಹಾರಾಯ....ಹೆಸರೇ? ಏನು ಹೆಸರು ಹಳ್ಳೀದು? ಎಮ್ಮೀಹಳ್ಳಿ ಅಂತ....ಆಹಹಾ!! ಇಷ್ಟು ದೊಡ್ಡ ಸರಕಾರೀ ನೌಕರೀ ಮಾಡಿ ಪೆನ್ಶನ್ ತೆಗೆದುಕೊಂಡರೂ, ಈತನ ಹಣೆಬರಹ ಹೀಗಾಯಿತು. ಮೂವತ್ತು ಸ್ಟೇಶನ್ನು ದಾಟಿ, ಮುಂದೆ ೧೫ ಮೈಲು ಹೋಗಬೇಕು ಹಳ್ಳಿಗೆ. ಸ್ಟೇಶನ್ನಾದರೂ ಏನು ಸ್ಟೇಶನ್ನು! ಗಾಡಿ ಅರ್ಧ ಮಿನೀಟು ಸಹಿತ ನಿಲ್ಲೋದಿಲ್ಲ ಮುಂಡೇದು!'

ಎಂದು ಯೋಚಿಸುತ್ತಿರುವಾಗಲೆ ಗಾಡಿ ಪ್ಲಾಟಫಾರ್ಮ್ ಎನ್ನುವ—ಭೂಮಿಯ ಸಮನಾದ—ಸ್ಥಳಕ್ಕೆ ಮುಟ್ಟುವುದಕ್ಕಾಗಿ ಬ್ರೆಕ್ಕಿನ 'ಚಿಂ, ಚಿಂ,' ಎನ್ನುವ ಶಬ್ದ ಮಾಡುತ್ತ, ಸ್ವಲ್ಪ ಮೆಲ್ಲಗೆ ಹೊರಟು, ಇನ್ನೂ ಸ್ವಲ್ಪ ದೂರ ಮುಂದೆ ಹೋಗಿ ನಿಲ್ಲುವ ಸ್ಥಿತಿಯಲ್ಲಿತ್ತು. ಅಷ್ಟರಲ್ಲೀ ತಮ್ಮಣ್ಣಭಟ್ಟರಿಗೆ ಒಂದು ಯೋಚನೆ ಮಿಂಚಿನಂತೆ ಹೊಳೆದುಹೋಯಿತು. ಇಳಿಯುವುದಕ್ಕೆ ಸ್ವಲ್ಪವೇ ತಡವಾದರೂ ಗಾಡಿ ಪುನಃ ಬಿಟ್ಟೀಬಿಡುವ ಸಂಭವವುಂಟು—ಎಂದು ಯೋಚಿಸುತ್ತಲೇ ಭಟ್ಟರು, ಏರುಗಚ್ಚೆ ಕಟ್ಟಿ; ಗಾಡಿ ನಿಲ್ಲುವ ಮೊದಲೇ ಕಣ್ಣುಮುಚ್ಚಿಕೊಂಡು "ಜೈ ಶಂಕರ!" ಎಂದು ಪ್ಲಾಟಫಾರ್ಮಿನ ಮೇಲೆ ಜಿಗಿದ್ಬಿಟ್ಟರು.......ಕೂಲಿಯವನ ಬುಟ್ಟಿಯಿಂದ ದೊಡ್ಡ ಕುಂಬಳಕಾಯಿ ಬಿದ್ದಂತೆ ಪ್ಲಾಟಫಾರ್ಮಿನ ಮೇಲೆ ಬಿದ್ದು, ಮೂರ್ನಾಲ್ಕು ಉರುಳಿಕೆ ಉರುಳಿದರು.

ಭಟ್ಟರು ಬಿದ್ದದ್ದನ್ನು ನೋಡಿ ಸುತ್ತಲಿನ ಜನ: "ಅಯ್ಯಯ್ಯೊ! ಸತ್ತ! ಸತ್ತ!" ಎನ್ನುತ್ತ ಅವರ ಸುತ್ತಲೂ ನೆರೆದರು. ಅಷ್ಟರಲ್ಲೀ ಭಟ್ಟರು ಗಡಬಡಿಸಿಕೊಂಡು ಎದ್ದು, ಟೊಪ್ಪಿಗೆ ಜಾಡಿಸಿಕೊಂಡರು.

ಕೂಡಿದ ಜನರಲ್ಲಿ ಯಾವನೊ ಒಬ್ಬ ಸಭ್ಯ ಗೃಹಸ್ಥ ಮೆಲ್ಲಗೆ ನುಡಿದ: "ಹಳ್ಳಿಯ ಹುಂಬ ಎಲ್ಲೋ!....ಹೋಗೋ ಗಾಡಿಯಿಂದ ಹಾರಿಬಿಟ್ಟ ಮಹಾರಾಯ!"....

ತಮಗೆ "ಹುಂಬ" ಅಂದದ್ದು ಕೇಳಿ ಭಟ್ಟರ ರಕ್ತ ಕುದಿಯಿತು. ಈ ವರೆಗಿನ ತಮ್ಮ ಆಯುಷ್ಯವನ್ನೆಲ್ಲಾ ಅವರು ದೊಡ್ಡ ಪಟ್ಟಣದಲ್ಲೀ ಕಳೆದಿದ್ದರು....ಅವರ ಹದಿನಾಲ್ಕು ತಲೆಮಾರುಗಳೂ ದೊಡ್ಡ ಪಟ್ಟಣದಲ್ಲೀ ಕಣ್ಣು ತೆರೆದು ಮುಚ್ಚಿದ್ದವು. ಅಂಥವರಿಗೆ ಜನ "ಹಳ್ಳಿಯ ಹುಂಬ" ಅಂದರಲ್ಲ?

ಭಟ್ಟರಿಗೂ ತಡೆಯಲಾಗಲಿಲ್ಲ "ರಾಯರ, ಸೀದಾ ಪಟ್ಟಣದಿಂದ ಬಂದೀನಿ....ತಿಳೀತಿಲ್ಲೊ?.......'ಹಳ್ಳಿಯ ಹುಂಬ' ಅಂತ ಯಾರಿಗಂತೀರಿ ನೀವು?"

ಗುಂಪಿನ ಹಿಂದಿನಿಂದ ಮತ್ತೊಬ್ಬ ಯಾವನೋ ನುಡಿದ: "ಹೌದು ಭಟ್ಟರs, ಹೋಗೋ ಗಾಡಿಯಿಂದ ಹಾರಿ, ಉರುಳಿ ಬಿದ್ದು' ಪಟ್ಟಣದ ನಿಮ್ಮ ಬುದ್ಧಿವಂತಿಕೀ ತೋರಿಸಿದಿರಲ್ಲಾ!"

ಗುಂಪೆಲ್ಲಾ ಜೋರಾಗಿ ನಗಹತ್ತಿತು.

ಈಗಂತೂ ಭಟ್ಟರಿಗೆ ಪಿತ್ತ ನೆತ್ತಿಗೇರಿತು ಹಿಂದು ಮುಂದು ನೋಡದೆ, "ಹೌದ್ರೀ, ನಿಮ್ಮೂರ ಸ್ಟೇಶನಿನೊಳಗ ಗಾಡಿ ಅರ್ಧ ಮಿನೀಟು ಸಹಿತ ನಿಲ್ಲೋದಿಲ್ಲ ಇಷ್ಟು ಜಲ್ದಿ ಇಳೀದಿದ್ದರ, ಹೋದ

* ಹಿಂದೀ ಕಥೆಯೊಂದರ ಆಧಾರದಿಂದ ಬರೆದುದು. - ಲೇ.

ವರ್ಷದಂತೆ ಮೂರು ಸ್ಟೇಶನ್ನು ಮುಂದಕ್ಕ ಹೋಗಬೇಕಾಗತಿತ್ತು. ಅದನ್ನ ಯಾರಿಗೆ ಹೇಳ್ತೀರಿ....? ”

ಇದನ್ನು ಕೇಳಿದ ಮೇಲಂತೂ ಜನ ಹೊಟ್ಟೆ ಹುಣ್ಣಾಗುವಂತೆ ನಗಹತ್ತಿದರು. ಅವರು ನಗುವುದನ್ನು ನೋಡಿ ತಮ್ಮಣ್ಣಭಟ್ಟರು ಹುಚ್ಚನಂತಾಗಿ, ಮೆಲ್ಲಗೆ ಅಲ್ಲಿಂದ ಕಾಲ್ತೆಗೆದರು.

ಸ್ಟೇಶನಿನಿಂದ ಹೊರಗೆ ಬಂದು ತಮ್ಮಣ್ಣಭಟ್ಟರು, ತಮ್ಮನ್ನೇ ತಾವು ಒಂದು ಕರುಣಾದೃಷ್ಟಿಯಿಂದ ನೋಡಿಕೊಂಡರು. ಮಂಡೆಯ ಮೇಲಿನ ಪಂಚೆ ಹರಿದು ಮಣ್ಣಾಗಿಬಿಟ್ಟಿತ್ತು. ಮೈಮೇಲಿನ ಅಂಗಿಯೂ ಮಣ್ಣಿನಿಂದ ಹೊಲಸಾಗಿತ್ತು.

“ಈ ಸ್ಥಿತಿಯಲ್ಲೇ ಮಾವನ ಮನೆಗೆ ಹೋಗಲಿ?” ಎಂದು ಯೋಚಿಸಿದರು. ನಿರ್ವಾಹವೇ ಇದ್ದಿಲ್ಲ. ಇಲ್ಲಿಯ ವರೆಗೆ ಬಂದ ಮೇಲೆ ಹೋಗಲೇಬೇಕಲ್ಲ! ಅಲ್ಲದೆ ಅತ್ತೆಯವರು ಗಿಲಗಂಚಿ, ಅತಿರಸ, ಬೇಸನ್‌ಉಂಡಿ, ಚಕ್ಕಲಿ, ಕೋಡಬಳೆ ಮುಂತಾದ ಸವಿ ಸವಿ ಪಕ್ವಾನ್ನಗಳನ್ನು ಮಾಡಿ ಹಾಕುವರೆಂಬ ಆಶೆ ಬೇರೆ.

ಸ್ಟೇಶನಿನ ಹೊರಗೆ, ಬೇವಿನ ಗಿಡದ ಕೆಳಗೆ, ಮೂರು ಎತ್ತಿನ ಬಂಡಿಗಳು ನಿಂತದ್ದನ್ನು ಭಟ್ಟರು ನೋಡಿದರು. ಭಟ್ಟರನ್ನು ನೋಡಿದ ಕೂಡಲೆ ಬಂಡಿಯವರು ಓಡಿ ಬಂದು, ಅವರಲ್ಲಿಯ ಒಬ್ಬನೆಂದ: “ಎಲ್ಲಿಗೆ ಹೋಗಬೇಕಾಗೇದ ಸ್ವಾಮೇರು?”

“ಬರ್ರಿ, ಧಣಿ, ನನ್ನ ಗಾಡ್ಯಾಗ ಬರ್ರಿ!”

“ನನ್ನ ಚಕ್ಕಡಿ ರತಾ ಹ್ವಾದಾಂಗ ಹೊಕ್ಕೈತ್ರಿ; ನಡೀರಿ ನನ್ನ ಚಕ್ಕಡ್ಯಾಗ ಯಜಮಾನ್ರ!”

ಹೀಗೆಂದು ಮೂರೂ ಚಕ್ಕಡಿಯವರೂ ಭಟ್ಟರನ್ನೂ, ಭಟ್ಟರ ಬಗಲೊಳಗಿನ ಗಂಟನ್ನೂ ಹಿಡಿದು ಜಗ್ಗಾಡಹತ್ತಿದರು. ಅವರ ಆ ಜಗ್ಗಾಟಕ್ಕೆ, ತಮ್ಮ ಜೀವ ಹೋಗಲು ಇನ್ನು ತಡವೇನಿಲ್ಲ—ಎನಿಸಿತು ಭಟ್ಟರಿಗೆ.

“ಏ, ಏ, ಏನ್ರ್ಯೊ ಇದು? ಇಂಥ ದೊಡ್ಡ ಯಜಮಾನ್ರ ಸಂಗಾಟ ಈ ರೀತಿ ವ್ಯವಹಾರಾ ಮಾಡ್ತೀರಾ? ಬಿಡ್ರೊ, ಕೈನ ಅವರದು! ಹಾಥ್ ಛೋಡೊ!” ಎಂದು ಗಡುಸುಧ್ವನಿಯಲ್ಲಿ ಯಾರೋ ಹಿಂದಿನಿಂದ ಗದ್ದರಿಸಿದರು. ಮೂರೂ ಬಂಡಿಯವರ ಭಟ್ಟರನ್ನು ಬಿಟ್ಟು ಹಿಂದೆ ಸರಿದರು.

ದೇವರಂತೆ ಅಕಸ್ಮಾತ್ ಬಂದ ತಮ್ಮ ಪ್ರಾಣರಕ್ಷಕರಾರೆಂದು ಭಟ್ಟರು ಹಿಂದೆ ತಿರುಗಿ ನೋಡಿದರು.

ಆರು ಫೂಟು ಎತ್ತರದ, ದೊಡ್ಡ ತಲೆಯ, ಗಿಳಿಮೂಗಿನ, ಕರಿಯ ಬಣ್ಣದ, ಒಬ್ಬ ದೈತ್ಯಾಕಾರದ ಮನುಷ್ಯ, ಹೊಲಸು ಖಾಕೀಶರ್ಟು ಹಾಕಿಕೊಂಡು, ಲಂಡಚಣ್ಣವೂ ಅಲ್ಲದ, ಉದ್ದ ಪ್ಯಾಂಟೂ ಅಲ್ಲದಂತಹ ಒಂದು ಚಣ್ಣವನ್ನು ಹಾಕಿಕೊಂಡು, ಕೂದಲು ಹರವಿಕೊಂಡವನೊಬ್ಬ ಭಟ್ಟರೆದುರಿಗೆ ಬಂದು “ಬರ್ರಿ ಸರ್, ನನ್ನ ಜೊತೆ....” ಎಂದು ಭಟ್ಟರ ಮುಂಗೈ ಹಿಡಿದು ಎಳೆದುಕೊಂಡೇ ಹೊರಟ.

ಭಟ್ಟರಿಗೆ ದಿಗಿಲುಬಿತ್ತು. ಅಂಜುತ್ತಂಜುತ್ತ ಮೆಲ್ಲಗೆ ಕೇಳಿದರು: ನೀನು ಯಾರಪ್ಪಾ?”

“ಯಾರೂ ಅಲ್ರಿ....! ಇಷ್ಯಾಕ ಹೆದರತೀರಿ ನೀವು?” ಎಂದು ಮೈಲುದ್ದದ ನಗೆ ನಕ್ಕ.

“ಹೌದು! ಬರುವುದಾದರೂ ಎಲ್ಲಿಗೆ?......ನೀನು ಯಾರು ಅನ್ನೋದರ ಹೇಳು ಕೊನಿಗೆ!”

“ಈ ಸೇವಕನ ಹೆಸರು ನಬೀಸಾಬ ಅಂತೈತಿರಿ!....ಆದ್ರ ಜನ ನನ್ನ ‘ನಬಿ’ ಅಂತ ಕರೀತಾರ್ರಿ,........ಈಗ ನೀವು ನನ್ನ ಸವಾರಿ, ರಾಯರ”........

ಈ ಮಾತು ಭಟ್ಟರಿಗೆ ಬಹಳ ವಿಚಿತ್ರವಾಗಿ ಕಂಡಿತು:

“ನಾನು ನಿನ್ನ ಸವಾರೀನಾ?...ಅದ್ಹೆಂಗ ನಿನ್ನ ಸವಾರೆಪ್ಪಾ?”

“ರಾಯರs....ಎಷ್ಟೋ ಪುಣ್ಯಾ ಮಾಡಿದ ಮ್ಯಾಲೆ, ನಿಮ್ಮಂಥ ಸವಾರಿ ಒಮ್ಮೆ ಸಿಗತಾವರಿ....ಎಲ್ಲಿಗೆ ಹೋಗಬೇಕಾಗೇದ ನಿಮಗ? ನಡೀರಿ, ಮೋಟರಿನ್ಯಾಗ ಬಿಟ್ಟುಬರತೀನಿ........”

“ಮೋಟರು? ಎಲ್ಲಿದ ಮೋಟರು?” ಭಟ್ಟರು ಆಶ್ಚರ್ಯ ಚಕಿತರಾಗಿ ಕೇಳಿದರು.

“ಅಗೋ! ಅಲ್ಲಿ ಆರಳೀಗಿಡದ ಬುಡಕ ನಿಂತಾದಲ್ಲರಿ? ಕಾಣೋದಿಲ್ಲೇನು ನಿಮಗ?”

ಭಟ್ಟರು ಮೋಟರಿನ ಕಡೆಗೆ ದೃಷ್ಟಿಚೆಲ್ಲಿದರು. ೧೦೦ ವರ್ಷದ ಹಳೆಯ ಒಂದು ‘ಆಸ್ಟಿನ್’ಗಾಡಿ, ಸೊಟ್ಟ ಡೊಂಕು......ಮಡ್‌-ಗಾರ್ಡಲ್ಲಾ ಹೊಡೆತಬಿದ್ದು ಮುರಿದುಹೋಗಿತ್ತು. ಇಂಜಿನ್ ಕವ್ಹರಿನಿಂದ ಡ್ರಾಯವ್ಹರನ ಸೀಟು ತಯಾರಾಗಿತ್ತು. ಮೊದಲೇ ಯಾರಾದರೂ ಹೇಳದೆ ಇದ್ದರೆ, ಜ್ಯೋತಿಷಿಗೂ ಅದು ಮೋಟರೆಂದು ಹೇಳುವುದು ಕಠಿಣವಾಗಿತ್ತು.

“ಇದೇ ನಿನ್ನ ಟ್ಯಾಕ್ಸಿ ಏನು?” ಭಟ್ಟರು ಆಶ್ಚರ್ಯಚಕಿತರಾಗಿ ಕೇಳಿದರು “ಹೌದು ರಾಯರ!....... ಇದs ನನ್ನ ಟ್ಯಾಕ್ಸಿ. “ಉಡನ್ ಖಟೋಲಾ” ಅಂತ ಇದಕ್ಕ ಹೆಸರು.” ಭಟ್ಟರು ಮುಂದೆ ಮಾತಾಡುವ ಮೊದಲೇ ನಬೀಸಾಬ, ತೆಂಗಿನ ಹಗ್ಗದಿಂದ ಬಿಗಿದ ಮೋಟರಿನ ಬಾಗಿಲ ತೆರೆದು “ಕೂಡ್ರಿರಾಯರ.......ಹಿಂಗ್ಯಾಕ ನೋಡಿಕೋತ ನಿಂತ್ರಿ? ಒಳಗ ಕೂತಂತೂ ನೋಡ್ರಿ. ಎರಡು ಮಿನೀಟಿನಾಗ ನಿದ್ದಿ ಹತ್ತದಿದ್ದರ ಹೇಳ್ರಿ!”

“ಒಳಗ ಕೂಡ್ಲೀ....ಇಲ್ಲೆ?”

“ಹಂ, ಹಂ, ಅಲ್ಲೇ ಕೂಡ್ರಿ ಮತ್ತ. ಇಂಜನ್ನ ಮ್ಯಾಲೆ ಕೂಡ್ಲಿಕ್ಕ ಹೇಳಲಿಲ್ಲ ನಿಮಗ ರಾಯರ?...ಒಳಗ ಕೂಡ್ರಿ, ಸಿಟೀನ ಮ್ಯಾಲೆ ಅಂದೆ.”

“ಹೌದೋ ಸಾಬು, ಆದ್ರ ಕೂಡ್ಲಿ ಎಲ್ಲೆ?.......ಸೀಟು ಎಲ್ಲಿ ಅದ?”

ನಿಜವಾಗಿಯೂ ‘ಸೀಟು’ ಎನ್ನುವ ಸ್ಥಳದ ಮೇಲೆ ನಾಲ್ಕಾರು ಸ್ಪ್ರಿಂಗುಗಳು ಇದ್ದು, ಅದರ ಮೇಲೆ ಟೆಂಗಿನ ಜುಬ್ಬರ ಹರವಿತ್ತು. ಆದಕ್ಕೆ ಸೀಟು ಎನ್ನುವ ಬದಲು ‘ಶರಶಯ್ಯೆ’ ಎಂದಿದ್ದರೆ ನೆಟ್ಟಗಿತ್ತು.

“ಕೂತಂತೂ ನೋಡ್ರಿ, ರಾಯರ! ಕುತನೀಗಾದಿ ಆಗೇದ” ಎಂದು ನಬೀಸಾಬ, ಸೀಟಿನ ಮೇಲೆ ಒಂದು ತಟ್ಟು ಒಗೆದು, ಭಟ್ಟರ

ರಟ್ಟೆಹಿಡಿದು ಒಳಗೆ ದಬ್ಬಿ, ಬಾಗಿಲಿಗೆ ಹಗ್ಗಬಿಗಿದು ಹ್ಯಾಂಡಲ್ ತಿರುವಿದ. ಇಪ್ಪತ್ತು ಸಾರಿ ತಿರುವಿದ ಮೇಲೆ ಗಾಡಿ ಒಮ್ಮಿಂದೊಮ್ಮೆಲೆ ಎಡಕ್ಕೊಮ್ಮೆ ಬಲಕ್ಕೊಮ್ಮೆ ಎತ್ತಿ ಒಗೆದಂತಾಗಿ, ಮೋಟರಿಗೆ ಮೋಟರೇ ಗಡಗಡ ನಡುಗಹತ್ತಿತ್ತು. ಶರಶಯ್ಯೆಯ ಮೇಲೆ ಕುಳಿತ ಭಟ್ಟರು ಜೋಲಿಹೋಗಿ ಮೋಟರಿನ ಆಕಡೆ ಒಮ್ಮೆ, ಈಕಡೆ ಒಮ್ಮೆ ಹಾಯ್ದಾಡಿದರು.

"ಸಾಬು, ಆರಾಮಂತೂ ಅನಿಸಲೊಲ್ಲದಪ್ಪಾ. ಬುಡಕ ಸೀಟು ಒತ್ತಲಿಕ್ಕೆ ಹತ್ತೇದ." ಎಂದು ಒಟಗುಟ್ಟಿದರು ಭಟ್ಟರು.

"ಇರಬಹುದು ರಾಯರ, ಇರಬಹುದು, ಹೊತ್ತು ಬಂದಾಗ ನಿಮಗ ಗೊತ್ತಾಗ್ತದ." ಎಂದು ನಬೀಸಾಬ ಸೀಟಿನ ಮೇಲೆ ಹೋಗಿ ಕುಳಿತು, ಬಲವಾಗಿ ಹಾರ್ನ್ ಬಾರಿಸಿದ. ಅದರ ಜೋರಾದ ಧ್ವನಿಗೆ ಎಡಬಲದ ಹೊಲಗಳಲ್ಲಿ ಮೇಯುತ್ತ ನಿಂತಿದ್ದ ಎಮ್ಮೆ, ಆಕಳುಗಳು ಹೆದರಿ, ಒಂದೇ ಹಾರಿಕೆಯಿಂದ ಓಡಹತ್ತಿದ್ದವು; ತಿರುಗಿ ಎಲ್ಲಿ ನಿಂತುವೋ ಗೊತ್ತಾಗಲಿಲ್ಲ.

'ಉಡನ್‌ಖಟೋಲಾ' ತನ್ನ ಹಿಂದೆ ರೋಡಿನ ತುಂಬೆಲ್ಲ ಧೂಳೆಬ್ಬಿಸುತ್ತ (ವೈಭವದಿಂದ) ಹೊರಟಿತು. ಮುಂದೆ ಸ್ವಲ್ಪ ದೂರ ಹೋಗುತ್ತಲೆ ಗಾಡಿ—ಎರತು ಮೊಳ ಮೇಲೆ ಹಾರಿ—ಕೆಳಗೆ ಬಿದ್ದು ಮುಂದೋಡಿತು.

"ಅಯ್ಯಯ್ಯೋ ಸತ್ತೆ!" ಎಂದು ಭಟ್ಟರು ಕೂಗಿದರು.

"ಅಷ್ಟ್ಯಾಕ ಹೆದರತೀರಿ ರಾಯರ? ನಾನೆಲ್ಲೆ ನಿಮ್ಮನ್ನ ಇಷ್ಟು ಲಗೂ ಸಾಯಗೊಡತೇನಿ? ಇನ್ನೂ ನಿಮ್ಮನ್ನ ಎಮ್ಮೀಹಳ್ಳಿಗೆ ಮುಟ್ಟಿಸಬೇಕಾಗೇದ ನನಗ. ಹಾಂ! ನಿಮಗ ಸಂಧಿವಾತ ಏನಾರೇ ಅದ ಏನು ರಾಯರ?

"ಸಂಧಿವಾತ?........ಯಾರಿಗೆ?" ಭಟ್ಟರು ಸಿಟ್ಟಿಗೆ ಬಂದರು.

"ಸುಮ್ಮನೆ ಕೇಳಿದೆ ರಾಯರ!"

"ನನಗ್ಯಾಕ ಆಗುವದೋ ಸಂಧಿವಾತ?"

"ಅಲ್ಲ...ಏನೋ....ಆಗಿದ್ರ ಬೇಕಿತ್ತು!"

"ಅನ್ನೋದರೆ ಏನು ಅಂತೀದ್ಯೋ ಸಾಬ?....ನಿನ್ನ ತಲೀ ಗಿಲಿ ತಿರಿಗೇದೇನು?

"ಅಲ್ರಿ, ಅಂಥವ್ರ ನನ್ನ ಗಾಡ್ಯಾಗ ಕೂಡ್ರೊದ್ರಿಂದ ಕಡಿಮೀನ ಆಗಿ ಹೋಗ್ತಿತ್ತು. ಈಗ ಎಷ್ಟೋ ಮಂದಿಗೆ ಸಂಧಿವಾತ ಕಡಿಮೆ ಮಾಡಿ ಕಳಿಸೇನಿ, ನನ್ನ ಗಾಡ್ಯಾಗ ಕೂಡ್ರಿಸಿ" ಎಂದು ಸಾಬು ಹಾರ್ನ್ ಬಾರಿಸಿದ.

"ಎಲೆ ಇವ್ನ! ದಾರಿ ಖಾಲೀನ ಅದ; ಸುಮ್ಮ ಸುಮ್ಮನ ಹಾರ್ನ್ ಯಾಕ ಬಾರಿಸ್ತಿ ಸಾಬು?"

"ರಾಯರ, 'ಉಡನ್‌ಖಟೋಲಾ' ಹೋಗಲಿಕ್ಕೆ ಹತ್ತೇದ. ಅದಕ್ಕ ಮೊದಲಕ ಜನರಿಗೆ ಎಚ್ಚರಿಕೆ ಕೊಡೋದು ಮೇಲು.............. ಮೋಟರಿಗೆ ಸ್ವಲ್ಪ ಬ್ರೆಕ್ ಇಲ್ಲ; ಅದಕ್ಕ ರಾಯರ—ಇಲ್ದಿದ್ರ ಹಿಂದಾಗಡೆ ಏನಾರಾ ಆಗೋಪೈಕಿ!"

ಇದುವರೆಗೂ ಮೋಟರಿನ ತೊಂದರೆಯನ್ನು ಹೇಗೋ ಸಹಿಸಿಕೊಂಡಿದ್ದ ಭಟ್ಟರು ಕೆಂಡವಾದರು. "ಬ್ರೆಕ್ ಇಲ್ಲ? ಏನಂತೀದ್ಯೋ ಸಾಬು? ಎಲ್ಲ್ಯಾರೆ ಯಾರ್ನರೆ, ಕೊಂದು ಇಟ್ಟ?"

"ಇಲ್ಲ ರಾಯರ! ನೀವ್ಯಾಕ ಇಷ್ಟು ಹೆದರತೀರಿ? ೧೫ ವರ್ಷದಿಂದ ಈ ಗಾಡೀ ನಡಿಸಲಿಕ್ಕೆ ಹತ್ತೇನಿ. ಅಂಥಾದ್ದು ಕೇವಲ ೧೨ ಜನ ಸತ್ತಾರ. ನೀವು ಉಳಿದ್ರೂ ಉಳೀಬಹುದು"

"ನಿಲ್ಲಿಸೋ, ನಿಲ್ಲಿಸೋ, ಗಾಡಿ ನಿಲ್ಲಿಸಿಬಿಡು! ನಾನು ಇಳಿದು ಬಿಡತೇನಿ" ಭಟ್ಟರು ಚೀರಿಕೊಂಡರು.

"ನಿಲ್ಲಿಸೋ ಇಚ್ಛಾ ಮಾಡಿದ್ರೆಲ್ಲಾ ಗಾಡಿ ನಿಲ್ಲತದೇನು ರಾಯರ?"

"ಯಾಕ?"

"ಬ್ರೆಕ್ ಒಂದು ಇಲ್ಲಲ್ಲ ರಾಯರ! ಎಣ್ಣಿ ಮುಗಿದ ಮ್ಯಾಲೆ ತನ್ನಷ್ಟಕ್ಕ ತಾನss ನಿಂತುಬಿಡತದೇಳ್ರಿ" ಸಾಬು ಹೇಳಿದ.

"ಹಾಗಾದರೆ ಇದು ಎಮ್ಮೀಹಳ್ಳಿಗೂ ನಿಲ್ಲೋದಿಲ್ಲ ಏನಪಾ ಸಾಬು?"

ಭಟ್ಟರು ಅಂಜುತ್ತಲೇ ಕೇಳಿದರು.

"ಹಳ್ಳಿಗೆ ಸ್ವಲ್ಪ ಇತ್ಲಾಗ ಇಲ್ಲ—ಸ್ವಲ್ಪ ಅತ್ಲಾಗ ನಿಲ್ಲಬಹುದು. ದಯಮಾಡಿ ನೀವು ನನ್ನ ಮಾತಾಡಿಸಬ್ಯಾಡ್ರಿ....ಹಿಂದಾಗಡೆ ಎಲ್ಯಾರ ಎಕ್ಸಿಡೆಂಟ್ ಆದಗೀದೀತು...."

"ಅಯ್ಯಯ್ಯೋ! ಇದನ್ನೇನು ಹೇಳಿದ್ಯೋ ಸಾಬು!" ಎಂದು ತಮ್ಮಣ್ಣಭಟ್ಟರು ಅತ್ಲಾಗೊಮ್ಮೆ, ಇತ್ಲಾಗೊಮ್ಮೆ ಮೋಟರಿಗೆ ಹಾಯುತ್ತ ಕುಳಿತರು

'ಉಡನ್ ಖಟೋಲಾ' ಹುಚ್ಚು ಹಿಡಿದವರಂತೆ ದಣ ದಣ ಓಡಹತ್ತಿತ್ತು. ಭಟ್ಟರ ತಲೆ ತಿರುಗಹತ್ತಿತ್ತು. ಎಡಗೈಯಲ್ಲಿ ಜೀವ ಹಿಡಿದುಕೊಂಡು ಅವರು ದೇವರನ್ನು ನೆನೆಯಹತ್ತಿದ್ದರು.

"ಜೀವದಿಂದಾದರೂ ಉಳೀತೇನೊ ಇಲ್ಲಪಾ ಸಾಬು?" ಕ್ಷೀಣವಾದ ಸ್ವರದಲ್ಲಿ ಭಟ್ಟರು ಕೇಳಿದರು.

"ಯಾವುದನ್ನೂ ಹೇಳಲಿಕ್ಕೆ ಬರುವಂತಿಲ್ಲ ರಾಯರ....ಆದಷ್ಟು ನಾನು ಪ್ರಯತ್ನ ಮಾಡತೇನಿ"

ಇಷ್ಟರಲ್ಲಿ ಡ್ರಾಯವ್ಹರ್ ನಬೀಸಾಬ ಕೂಗಹತ್ತಿದ:

"ರಾಯರ! ರಾಯರ!....ಇಕಾ ಬಂತು ನೋಡ್ರಿ, ಬಂತು ನೋಡ್ರಿ, ಇದsss ಎಮ್ಮೀಹಳ್ಳಿ...." ಎಂದು ಹೇಳು-ಹೇಳುತ್ತಲೆ 'ಉಡನ್ ಖಟೋಲಾ' ಬಾಣದಂತೆ ಒಂದು ಹಳ್ಳಿಯ ಮಧ್ಯದಿಂದ ಹಾಯ್ದು ಮುಂದೆ ಹೋಗಿಬಿಟ್ಟಿತು.

"ನಿಲ್ಲಿಸೊ! ನಿಲ್ಲಿಸೊ! ನಾನು ಇಲ್ಲೇ ಇಳೀಬೇಕಾಗೇದ" ಎಂದು ಭಟ್ಟರು ಕೂಗಿಯೇ ಕೂಗಿದರು.

"ನಾನು ಮೊದಲಕ ಹೇಳೀನಲ್ಲ ರಾಯರ; ಬ್ರೆಕ್ ಇಲ್ಲಂತ. ಎಣ್ಣಿ ಮುಗಿದ ಮ್ಯಾಲೆ ಗಾಡಿ ತನ್ನಷ್ಟಕ್ಕ ತಾನss ನಿಲ್ಲತದ, .. ನೀವು ಇಷ್ಟ್ಯಾಕ ಹೆದರತೀರಿ—ಅಂತೇನಿ. ಮುಂದ ಐದು ಮೈಲಿನ ಮ್ಯಾಲೆ ಒಂದು ತಿರುವು ಅದ; ಅಲ್ಲಿಂದ ಗಾಡಿ ಹೊರಳಿಸಿಗೊಂಡು ವಾಪಸ್

ಬರ್ತೀನಿ—ಅಷ್ಟು ಬರೋಣರಾಗ; ಗಾಡ್ಯಾಗಿನ ಎಣ್ಣೀನೂ ಮುಗೀ ಬಹುದು ”

“ ಎಣ್ಣಿ ಮುಗೀದಿದ್ದರ....? ”

“ ಪುನಃ ಸ್ಟೇಶನಕ್ಕ ಹೋಗಿ ವಾಪಸ್ ಬರ್ತೀನಿ ರಾಯರ ”

“ ಆವಾಗೂ ಎಮ್ಮೇಹಳ್ಳಿ ಹಿಂದ ಉಳದು ಬಿಟ್ರ ಹೆಂಗಪಾ, ಸಾಬು ? ”

“ ಪುನಃ ಮತ್ತ ಇದೇ ತಿರುವಿನಿಂದ ಹೊಳ್ಳಿಸಿಗೊಂಡು ಬರ್ತೀನಿ ರಾಯರ ! ” ಇದನ್ನು ಕೇಳಿ ಭಟ್ಟರ ಪಿತ್ತ ನೆತ್ತಿಗೇರಿತು. ಅವರಿಗೆ ಹೆಚ್ಚು ತಡೆದುಕೊಳ್ಳಲಾಗಲಿಲ್ಲ. “ ಕಳ್ಳ....ಮಗನ, ದರೋಡೆಖೋರಾ, ಕುತ್ತಿಗ್ಗೊಯ್ಕ, ನಿನ್ನ ಮನೆ ಹಾಳಾಗ, ನೀನೆಲ್ಲಿ ನನಗ ಗಂಟು ಬಿದ್ದಿ ” ಎಂದು ಮನಬಂದಂತೆ ಡ್ರಾಯವ್ಹರನನ್ನು ಬೈಯ ಹತ್ತಿದರು.

“ ಬೈಬ್ಯಾಡ್ರೀ ರಾಯರ, ನನಗ ಸಿಟ್ಟು ಬಂದರ ಮನಿಸ್ಯಾ ಅಲ್ಲ. ಎಲ್ಲ್ಯಾರೆ ಎಕ್ಸಿಡೆಂಟ್ ಮಾಡಿಬಿಟ್ಟೇನು ?....ಮೇರಾ ಕುಚ್ಛ ನಹಿಂ. ”

ಭಟ್ಟರು ಬಾಯಿ ಮುಚ್ಚಿಕೊಂಡು ತೆಪ್ಪಗೆ ಕುಳಿತುಕೊಳ್ಳಬೇಕಾಯಿತು. ಗಾಡಿಯು ಒಂದು ತಿರುವಿನಿಂದ ಹೊರಳಿ ಪುನಃ ಬಂದ ದಾರಿಯ ಮೇಲೆ ನಾಗಾಲೋಟದಿಂದ ಓಡಹತ್ತಿತು.

“ ಈ ಸಲಕ್ಯಾದರೂ ನಿಲ್ಲಬಹುದೇನಪಾ ಸಾಬು ? ”

“ ಹೇಳ್ಳಿಕ್ಕೆ ಬರೋದಿಲ್ಲ ರಾಯರ..........ಎಣ್ಣೀ ಅಳಿಯೋ ಯಂತ್ರಾನೂ ಮುರಿದುಬಿಟ್ಟದ. ಎಣ್ಣೀ ಎಷ್ಟು ತುಂಬಿಸೀನೋ ಅದೂ ಮುಗಿತು ಹೋಗೇದ........”

“ ನನ್ನ ಏನು ಸರ್ವನಾಶಕ್ಕ ತಂದೆಪಾ ? ”

“ ಜೀವಕ್ಕ ಎಷ್ಟು ಹೆದರತೀರಿ ರಾಯರ........! ಇಂದಿಲ್ಲ ನಾಳೆ ನಿಂತೇ ನಿಲ್ಲತದ........! ಒಂದು ವ್ಯಾಳ್ಯಾ ನಿಲ್ಲದಿದ್ರ, ನನ್ನ ಹೆಸರಿನ ಮ್ಯಾಲೆ ಒಂದು ನಾಯೀ ಸಾಕ್ರಿ ನಿಮ್ಮ ಮನ್ಯಾಗ, ಆತಿಲ್ರಿ ? ”

“ ಹುಂ ! ಇವತ್ತಿಲ್ಲ ನಾಳೆ! ನಾಳೆ ಅನ್ನೋದ್ರಾಗ ನನ್ನ ಶ್ರಾದ್ಧ ಆಗ್ತೈತಿ ” ಭಟ್ಟರ ಮೋರೆಯ ಮೇಲೆ ಚಿವುಟಿದರೆ ರಕ್ತ ಇಲ್ಲ. ದಂತಾಯಿತು.

“ ನಾ ಏನು ಇವತ್ತ ಜೀವಸಹಿತ ಊರು ಸೇರೋದಿಲ್ಲ; ತಿಳಿದ್ಹಾಂಗಾತು .... ಇಕೋಳಪಾ ನಬಿಸಾಬು........ನನಗ ಎಮ್ಮೇಹಳ್ಳಿಗೆ ಹೋಗೋದೇ ಬೇಕಾಗಿಲ್ಲ. ಸೀದಾ ಸ್ಟೇಶನಕ್ಕೇ ಹೊಡದುಬಿಡು ಗಾಡೀನ. ”

“ ಸ್ಟೇಶನಕ್ಕ ಹೋದ ಮ್ಯಾಲೂ ಗಾಡಿ ನಿಲ್ಲತದ ಅಂತ ಭರೋಸ ಎಲ್ಲ್ಯದ ರಾಯರ........ಆಹಾ, ಆಹಾ, ಬಂತು ನೋಡ್ರಿ, ... ಬಂತು ನೋಡ್ರಿ, ... ಎದುರಿಗೆ ಕಾಣೋದೇ ಎಮ್ಮೇಹಳ್ಳಿ. ” ಡ್ರಾಯವ್ಹರ್ ಸಾಬು ಕೂಗಿಕೊಳ್ಳಹತ್ತಿದ.

“ ಈ ಸಾರೇನೂ ನಿಲ್ಲೋದಿಲ್ಲೇನೊ ಸಾಬು ? ” ಭಟ್ಟರು ಕೂಗಿ ಕೇಳಿದರು.

ಅರೆರೆ! ಸಮೀಪ ಬಂತಲ್ರೀ ರಾಯರ......ಗಾಡಿ ನಿಲ್ಲತದೊ, ನಿಲ್ಲೋದೇ ಇಲ್ಲೊ! .. ....ಆಹಾ, ಎಮ್ಮೇಹಳ್ಳಿ ಬಂತು.... ...ಇಕೊಳ್ರಿ ....ಇಕೊಳ್ರಿ........ಇದೇ ಹಳ್ಳಿ..... .. ಹೋತು ....ಹೋತು.... ಛುಕ್ ಛಿಕ್ಕಿ........ ಸಿಕಲ್ಗಯಾ ಗಾಂವ ” ಎಂದು ಡ್ರಾಯವ್ಹರ್ ನಿರಾಶನಾದ.

ಎರಡನೆಯ ಉಪಾಯ ತೋಚದಂತಾಗಿ ಭಟ್ಟರು ಗಂಟು ಬಗಲಲ್ಲಿಟ್ಟು ಏರುಗಚ್ಚಿ ಕಟ್ಟಹತ್ತಿದ್ದು, ಡ್ರಾಯವ್ಹರ್ ತನ್ನೆದುರಿನ ಕನ್ನಡಿಯಲ್ಲಿ ನೋಡಿ “ ಅಯ್ಯೋ.... ...? ರಾಯರ, ಇದನ್ನೇನು ನಡಿಸೀರಿ ನೀವು ?..... ...ರಾಯರ..... . ಆಚಾರ ಸೋಮೋರ........ ರಾಯರ !! ”

ಭಟ್ಟರು ಅದಾವುದನ್ನೂ ಕಿವಿಯ ಮೇಲೆ ಹಾಕಿಕೊಳ್ಳದೆ, ಕಣ್ಣು ಮುಚ್ಚಿ ರಭಸದಿಂದ ಹೊರಟ ಮೊಟರಿನಿಂದ ‘ಜೈ, ಭಜರಂಗ ಬಲಿ ’ ಎಂದು ಭೂಮಿಗೆ ಧುಮುಕೇ ಬಿಟ್ಟರು

“ ಧುತ್ ತೇರಿ.........ಮರಗಯಾ ಬಮ್ಮನ್ ” ಎಂದು ನಬೀ ಸಾಬ ನುಡಿಯುವುದರೊಳಗೇ ‘ ಉಡನ್ ಖಟೋಲಾ ’ ಆಗಲೆ ಎರಡು ಮೈಲು ಮುಂದೆ ಹೋಗಿ ಬಿಟ್ಟಿತ್ತು.

ಎರಡು ಗಂಟೆಯ ಮೇಲೆ ಭಟ್ಟರಿಗೆ ಎಚ್ಚರ ಬಂದು, ಕಣ್ಣು ಬಿಟ್ಟು ನೋಡಿದರೆ, ತಮ್ಮ ಮಾವ, ಡಾಕ್ಟರು, ನಾಲ್ಕಾರು ಆಳುಗಳು ಬ್ಯಾಂಡೇಜ್ ಪಟ್ಟಿ ಹಿಡಿದು ಸುತ್ತಲೂ ನಿಂತಿದ್ದರು.

“ ನೀವು ಇಲ್ಲಿಗೆ ಹೇಗೆ ಬಂದಿರಿ ? ” ಎಂದು ಭಟ್ಟರು ಮಾವಂದಿರಿಗೆ ಕೇಳಿದರೆ “ ನನಗೆ ಗೊತ್ತಿತ್ತು. ನೀವು ಶಹರಿನ ಜನ, ಎತ್ತಿನ ಬಂಡಿಯಲ್ಲಿ ಬರಲಾರದೆ ನಬೀಸಾಬನ ಟ್ಯಾಕ್ಸಿಯಲ್ಲಿ ಬರುತ್ತೀರೆಂತ ! ಅದಕ್ಕಾಗಿಯೇ ಮೊದಲೇ ಡಾಕ್ಟರರನ್ನು ಕರೆದುಕೊಂಡು ದಾರಿಗೆ ಬಂದು ನಿಂತದ್ದು. ಬಂದಿದ್ದು ಒಳ್ಳೆಯದೇ ಆಯಿತು, ಅಲ್ಲವೆ ? ”

ಮಾವಂದಿರ ಮುಂಜಾಗ್ರತೆಗೆ ಭಟ್ಟರು ಮಲಗಿದಲ್ಲಿಂದಲೆ ತಲೆದೂಗಿದರು. ಡಾಕ್ಟರರು ಭಟ್ಟರನ್ನು ಸಂಪೂರ್ಣವಾಗಿ ಪರೀಕ್ಷಿಸಿ ಹೇಳಿದರು. “ ದೇವರು ದೊಡ್ಡವ—ಅನ್ನೋದು ಸುಳ್ಳಲ್ಲ ರಾಯರ ! ಪುಣ್ಯಕ್ಕೆ ಒಂದೇ ಕಾಲು ಮುರದೈತಿ. ಎರಡೂ ಕಾಲು ಮುರಿದಿದ್ರ ಏನು ಗತಿ. ಹೌದಲ್ಲೋ ರಾಯರ? ”

ಭಟ್ಟರನ್ನು ಆಳುಗಳ ಮೇಲೆ ಹೇರಿಕೊಂಡು ದವಾಖಾನೆಗೆ ಒಯ್ಯುವಾಗ, ಕರುಣಸ್ವರದಿಂದ ಭಟ್ಟರು ಕೇಳಿದರು! “ ಯಾಕ, ನಬೀಸಾಬ ಟ್ಯಾಕ್ಸೀ ಬಾಡಿಗೆ ತೆಗೆದುಕೊಳ್ಳುವುದಿಲ್ಲವೇನು? ”

“ ತೆಗೆದುಕೊಳ್ಳದೆ ಏನು ? ಎಂದಾದರೂ ಅವನ ಗಾಡಿ ಎಮ್ಮೇ ಹಳ್ಳಿಗೆ ನಿಂತಿತು ಅಂದರೆ, ಅಂದೇ ಬಂದು ತನ್ನ ಬಾಡಿಗೆ ವಸೂಲ ಮಾಡಿಕೊಳ್ಳುತ್ತಾನೆ. ಇಂದಿಲ್ಲ ನಾಳೆ.... ನಾಳೆ ಇಲ್ಲ ಒಂದು ತಿಂಗಳಮ್ಯಾಲೆ ಬಂದಾದರೂ ತೆಗೆದುಕೊಂಡು ಹೋಗುತ್ತಾನೆ ” ಎಂದರು ಮಾವಂದಿರು.

ಕರ್ನಾಟಕ ಥೇಟರ್ಸ್, ಮುಂಬಯಿ

(ಪರಿಚಯಾತ್ಮಕ ಲೇಖನ)

ಶ್ರೀ. ಸಂಜೀವ ಲಕ್ಷ್ಮೇಶ್ವರ ಬಿ ಎ. ಮುಂಬಯಿ

ಮುಂಬಯಿಯಂತಹ ಹೊರನಾಡಿನಲ್ಲಿದ್ದ ಕನ್ನಡ ನಾಟ್ಯವಿಲಾಸಿಗಳನ್ನು ಒಂದೆಡೆ ಕಲೆಹಾಕಿ, ಅವರಲ್ಲಿದ್ದ ಅಭಿನಯಕಲೆಗೆ ಪ್ರೋತ್ಸಾಹ ಕೊಡುವ ಉದ್ದೇಶದಿಂದ, 'ಕರ್ನಾಟಕ ಥೇಟರ್ಸ್' ೧೯೫೭ರಲ್ಲಿ ಸ್ಥಾಪಿತವಾಯಿತು. ಇಂದಿನ ಸಿನೇಮಾ ಯುಗದಲ್ಲಿ ರಂಗಭೂಮಿಯ ಮಹತ್ತ್ವ ಕಡಿಮೆಯಾಗುತ್ತಿರುವುದು. ಆದಕ್ಕಾಗಿ ನಾಟಕ, ನೃತ್ಯ, ಹಾಗು ಮತ್ತಿತರ ಕಾರ್ಯಕ್ರಮಗಳನ್ನು ಏರ್ಪಡಿಸುವುದಕ್ಕಾಗಿ, ಕನ್ನಡ ರಂಗಭೂಮಿಯಲ್ಲಿ ನೂತನ ತಂತ್ರಗಳನ್ನು ಪ್ರಯೋಗಿಸಿ, ಮುಂಬಯಿ ಕನ್ನಡಿಗರಲ್ಲಿ ಕನ್ನಡ ನಾಟಕಗಳ ಬಗ್ಗೆ ಆಸ್ಥೆ ಹುಟ್ಟಿಸಬೇಕೆಂಬ ಉದ್ದೇಶದಿಂದ, ಈ ಸಂಸ್ಥೆ ಜನ್ಮ ತಾಳಿತು. ಅಂದಿನಿಂದ ಮುಂಬಯಿಯಲ್ಲಿ ಈ ಸಂಸ್ಥೆಯ ಕಲಾವಿದರು ಅನೇಕ ನಾಟಕಗಳನ್ನು ಅಭಿನಯಿಸಿ, ಮುಂಬಯಿ ಕನ್ನಡಿಗರ ಪ್ರೀತಿಗೆ ಪಾತ್ರರಾಗಿದ್ದಾರೆ

ಮುಂಬಯಿ ರಾಜ್ಯದ ದ್ವಿತೀಯ ನಾಟಕ ಮಹೋತ್ಸವದಲ್ಲಿ ಈ ಸಂಸ್ಥೆಯು ಅಭಿನಯಿಸಿದ ಶ್ರೀರಂಗರ "ಸಂಧ್ಯಾಕಾಲ" ಎಂಬ ನಾಟಕಕ್ಕೆ ಪ್ರಥಮಬಹುಮಾನ ದೊರೆತು ಕೀರ್ತಿಯನ್ನು ಗಳಿಸಿತು. ಅಂದಿನಿಂದ ಈ ಸಂಸ್ಥೆಗೆ ಹೆಚ್ಚಿನ ಜೀವಕಳೆ ಬಂದು, ತನ್ನ ಉದ್ದೇಶ ಸಾಧನೆಗಾಗಿ ಹೆಚ್ಚು ಉತ್ಸಾಹದಿಂದ ಕಾರ್ಯಪ್ರವೃತ್ತವಾಗಿದೆ.

ಈ ಸಂಸ್ಥೆಯ ಇನ್ನೊಂದು ಉದ್ದೇಶವೆಂದರೆ ಎಲ್ಲ ಬಗೆಯ ಕನ್ನಡ ನಾಟಕಗಳ ಗ್ರಂಥಗಳುಳ್ಳ ವಾಚನಾಲಯವೊಂದನ್ನು ಸ್ಥಾಪಿಸುವುದು. ಈಗಾಗಲೇ ನೂರಾರು ಕನ್ನಡ ನಾಟಕ ಪುಸ್ತಕಗಳನ್ನು ಸಂಗ್ರಹಿಸಲಾಗಿದೆ. ಇತರ ಭಾಷೆಗಳಲ್ಲಿದ್ದ ಉತ್ತಮ ನಾಟಕಗಳನ್ನು ಅಭ್ಯಸಿಸುವ ದೃಷ್ಟಿಯಿಂದ ಮರಾಠಿ, ಹಿಂದಿ ಮುಂತಾದ ಬೇರೆ ಭಾಷೆಗಳಲ್ಲಿಯ ಉತ್ತಮ ಕೃತಿಗಳನ್ನು ಶೇಖರಿಸಲಾಗಿದೆ. ಸಾಧ್ಯವಾದಲ್ಲಿ ಬೇರೆ ಭಾಷೆಗಳಲ್ಲಿಯ ಉತ್ತಮ ನಾಟಕಗಳನ್ನು ಕನ್ನಡದಲ್ಲಿ ಭಾಷಾಂತರಿಸಿ ಅಭಿನಯಿಸುವ ವಿಚಾರವೂ ಈ ಸಂಸ್ಥೆಗೆ ಇದೆ

ತನ್ನದೇ ಆದ ರಂಗಸಾಮಗ್ರಿಗಳನ್ನು ದೊರಕಿಸಿಕೊಳ್ಳುವುದು, ನಾಟಕ ಸ್ಪರ್ಧೆಗಳನ್ನು ಏರ್ಪಡಿಸುವುದು, ಬಹುಮಾನ ಹಾಗು ಶಿಷ್ಯವೃತ್ತಿಗಳನ್ನಿಟ್ಟು ಅಭಿನಯಕಲೆಯನ್ನು ಪ್ರೋತ್ಸಾಹಿಸುವುದು ಮುಂತಾದುವುಗಳು, ಕರ್ನಾಟಕ ಥೇಟರ್ಸ್‌ನ ಮುಂದಿನ ಕಾರ್ಯಕ್ರಮಗಳಾಗಿವೆ.

ಹೋದ ವರುಷ ಕರ್ನಾಟಕ ರಾಜ್ಯನಿರ್ಮಾಣವಾದ ಕೂಡಲೆ, ಮುಂಬಯಿಯ ಪ್ರಮುಖ ಕನ್ನಡಿಗರು ಹೊಸರಾಜ್ಯಕ್ಕೆ ಹೋಗುವಾಗ, ಈ ಸಂಸ್ಥೆಯು ಅವರೆಲ್ಲರನ್ನು ಆಮಂತ್ರಿಸಿ, ಪ್ರೋ. ಮುಗುಳಿಯವರ 'ನಾಮಧಾರಿ' ಎಂಬ ನಾಟಕವನ್ನು ಅಭಿನಯಿಸಿ ಬೀಳ್ಕೊಡಲಾಯಿತು. ಅದರಂತೆ ಈ ಸಲ ಅಕ್ಟೋಬರ್ ಒಂದನೆಯ ದಿನಾಂಕ, ಕರ್ನಾಟಕದ ಪ್ರಖ್ಯಾತ ನಾಟಕಕಾರರಾದ ಶ್ರೀರಂಗರ "ಜೀವನ ಜೋಕಾಲಿ" ಎಂಬ ಹೊಸ ತಂತ್ರದಿಂದೊಡಗೂಡಿದ ನಾಟಕವನ್ನು ಜಯಹಿಂದ್ ಕಾಲೇಜಿನ ನಾಟ್ಯಗೃಹದಲ್ಲಿ ಒಳ್ಳೇ ಯಶಸ್ವಿಯಾಗಿ ಅಭಿನಯಿಸಲಾಯಿತು. ಪ್ರೋ. ಮುತಾಲಿಕರಿಂದ ದಿಗ್ದರ್ಶಿತವಾದ ಈ ನಾಟಕದಲ್ಲಿ, ಕರ್ನಾಟಕ ಥೇಟರ್ಸಿನ ಕಲಾವಿದರಾದ ಸರ್ವಶ್ರೀ ಮುತಾಲಿಕ, ಗುಡೂರ, ಸಂಜೀವ ಲಕ್ಷ್ಮೇಶ್ವರ, ಹಾನಗಲ್ಲ, ಜಹಾಗಿರದಾರ ಹಾಗು ಶ್ರೀಮತಿ ಸುನೀತಾ ಕುಲಕರ್ಣಿಯವರು ಪಾತ್ರವಹಿಸಿದ್ದರು. ಎಲ್ಲ ಕಲಾವಿದರೂ ಚೆನ್ನಾಗಿ ಅಭಿನಯಿಸಿದ್ದರಿಂದ, ಮುಂಬಯಿ ಕನ್ನಡಿಗರಿಗೆ ಈ ನಾಟಕವು ತುಂಬ ಮೆಚ್ಚಿಕೆಯಾಯಿತು.

ಮುಂಬಯಿಯಂತಹ ಹೊರನಾಡಿನಲ್ಲಿ ನಾಟ್ಯಕಲೆಗಾಗಿ ಶ್ರಮಿಸುತ್ತಿರುವ ಈ ಸಂಸ್ಥೆಗೆ ಎಲ್ಲ ಕನ್ನಡಿಗರ,-ಅದರಲ್ಲಿಯೂ ವಿಶೇಷವಾಗಿ ಮುಂಬಯಿ ಕನ್ನಡಿಗರ-ಸಹಾಯ-ಸಹಕಾರಗಳು ಅತ್ಯವಶ್ಯವಾಗಿವೆ-ಎಂದು ಹೇಳದೆ ಉಪಾಯವಿಲ್ಲ.

ಮುಖಪುಟದ ಚಿತ್ರದಲ್ಲಿ ಎಡದಿಂದ ಬಲಕ್ಕೆ : –

ಶ್ರೀಮತಿ ಕುಲಕರ್ಣಿ, ಶ್ರೀ. ಗುಡೂರ, ಶ್ರೀ ಹಾನಗಲ್ಲ,
ಶ್ರೀ. ಮುತಾಲಿಕ, ಶ್ರೀ ಜಹಗಿರದಾರ, ಶ್ರೀ. ಲಕ್ಷ್ಮೇಶ್ವರ.

ಒಂದು ಯೋಜನೆ

ಹೊರನಾಡಿನಲ್ಲಿರುವ ಕನ್ನಡಿಗರ ಸಂಘ-ಸಂಸ್ಥೆಗಳನ್ನು ಜಯಂತಿಯ ಮೂಲಕ ಎಲ್ಲ ಕನ್ನಡಿಗರಿಗೂ ಪರಿಚಯ ಮಾಡಿಕೊಡಬೇಕೆಂಬ ವಿಚಾರವದೆ. ಆದುದರಿಂದ, ಅಂತಹ ಸಂಘ-ಸಂಸ್ಥೆಗಳ ಸಂಚಾಲಕರು, ತಮ್ಮ ತಮ್ಮ ಸಂಘ-ಸಂಸ್ಥೆಗಳ ಸಂಕ್ಷಿಪ್ತ ಪರಿಚಯಗಳನ್ನು ಬರೆದು ಕಳುಹಬೇಕು. ಚಿತ್ರಗಳನ್ನೂ ಪ್ರಕಟಿಸಬೇಕೆಂದು ಬಯಸುವವರು, ಮೂಲಚಿತ್ರದ ಪಡಿಯಚ್ಚು (ಬ್ಲಾಕ್) ಮಾಡಿಸಿ ಕಳುಹಬೇಕು.

ಸಂಪಾದಕ 'ಜಯಂತಿ'

ಕಾವ್ಯದಲ್ಲಿ ಪ್ರತಿಮಾಸಂವಿಧಾನ

ಶ್ರೀ. ಜಿ. ವ್ಹಿ. ಕುಲಕರ್ಣಿ, ಬಿ. ಎ. (ಆನರ್ಸ್) ಧಾರವಾಡ
ಶ್ರೀ. ಅನಿಲಕುಮಾರ ಗೋಕಾಕ, ಧಾರವಾಡ

ಲೇಖಾಂಕ ೫

ಚಿರಂತನ ಚೈತನ್ಯದ ಲೀಲೆ (ಭಾಗ ೧)

卐

'ರೂಪಕದ ಉಗಮಾಗಮ ತಿಳಿಯಬೇಕಾದರೆ, ನಾವು ಸಾಮಾನ್ಯ ಪ್ರಜ್ಞೆಯ ಮೇರೆಯನ್ನು ಮೀರಿದರೇ ಸಾಧ್ಯ' ಎಂದು ಮಿಡ್ಲಟನ್‌ಮರಿ (Middleton murry) ಹೇಳಿದ್ದಾರೆ. ನಾವು ಒಂದು ಪ್ರತಿಮೆಯ ಪಾತಳಿಯನ್ನೇ ಬಡಿಯುತ್ತ ಕುಳಿತುಕೊಳ್ಳುವುದರಿಂದ, ನಮಗೆ ಅದರ ಆಳದ ಅರ್ಥವಾಗದೆಯೆ, ಒಂದು ಕಪ್ಪು ಮುಸುಕಿನಲ್ಲಿಯೇ ಉಳಿದುಬಿಡುತ್ತೇವೆ. ಇದರಿಂದ ಕವಿ ನಮ್ಮೆದುರು ಇದ್ದಾನೆಂಬ ಸಮಾಧಾನ ಆ ಮುಸುಕಿನಲ್ಲಿರುತ್ತದೆ. ಅಲ್ಲಿ ಕವಿ ಶಾಂತನಾಗಿರುತ್ತಾನೆಯೇ? ಅವನ ನಿಜವಾದ ಸ್ವರೂಪವನ್ನು ಮುಸುಕಿನಲ್ಲಿ ಕಾಣುವೆವೋ? ಕವಿತೆಯ ಹೃದಯ ಮತ್ತು ಮಹತ್ತ್ವಗಳು ಎಷ್ಟರ ಮಟ್ಟಿಗೆ ಅದರ ಅಜಾಗೃತ ಉಗಮವನ್ನು ಮತ್ತು ಓದುಗನ ಸುಪ್ತ ಚೇತನದ ಮೇಲಾಗುವ ಪರಿಣಾಮವನ್ನು ಅವಲಂಬಿಸಿರುತ್ತದೆ? ಸುಪ್ತ ಚೇತನದ ಗಡಿಯು ನಮಗೆ ಅಗೋಚರವಾಗಿರುತ್ತದೆ. ಅದರ ಬಗ್ಗೆ ನಮಗೆ ವಿಶೇಷವಾದ ಅರಿವೂ ಇಲ್ಲ ಆದರೂ ಕೂಡ ಒಂದು ಕವಿತೆಯೆಂದರೆ ಸಮ್ಮಿಶ್ರಪ್ರತಿಮೆಯೆಂಬ ಮಾತನ್ನು ಸಿದ್ಧಪಡಿಸಲು ಸುಪ್ತ ಚೇತನದ ಆಳದಲ್ಲಿ ಇಳಿಯಲೇ ಬೇಕಾಗುತ್ತದೆ.

ಒಂದು ಬಾವಿಯನ್ನು ಇಳಿದು ತಳವನ್ನು ಕಂಡುಬರಬೇಕಾದರೆ ಒಂದು ಹಗ್ಗದ ಆಧಾರವು ಬೇಕಾಗುತ್ತದೆ. ಈ ಆಧಾರವು ಹೊರಗಿನ ಜಗತ್ತಿನಲ್ಲಿಯ ಒಂದು ಸ್ಥಿರವಾದ ವಸ್ತುವಿಗೆ ಕಟ್ಟಿದೆಯೆಂಬುದನ್ನು ನಿಶ್ಚಿತವಾಗಿ ತಿಳಿದೇ ಬಾವಿಯ ಆಳಕ್ಕೆ ಇಳಿಯಬೇಕಾಗುವದು. ನಾವು ಸುಪ್ತಚೇತನದ ಆಳವನ್ನು ಹೀಗೆಯೇ ಸೇರಬೇಕು. ಇಲ್ಲಿಕೂಡ ನಮಗೆ ಹೊರಪ್ರಪಂಚದ ಆಧಾರಬೇಕು. ಪ್ರೊ. ಲಿವ್ಹಿಂಗ್‌ಸ್ಟನ್ ಲೋಜ್ (Living Stone Lowes) ಎಂಬ ವಿಮರ್ಶಕನು ಹೇಳಿದ ಕೆಳಗಿನ ಮಾತೇ ಆಧಾರ: "ರೂಪಕ ಮತ್ತು ಉಪಮೆಗಳು ಕಾವ್ಯವನ್ನು ಅಲಂಕರಿಸುವ ಸಾಧನಗಳು ಎಂಬ ಮಾತು ಸ್ಪಷ್ಟವಾಗಿದೆ. ಈ ಮಾತು ನಮಗೆ ಅತಿ ಪರಿಚಿತವಾಗಿರುವುದರಿಂದ, ಇವು ಪ್ರತಿಮಾಸೃಷ್ಟಿಯ ಅನಿವಾರ್ಯತೆಗೆ ಕಾರಣವಾಗಿವೆಯೆಂಬ ಮಾತನ್ನೇ ಮರೆಯುತ್ತೇವೆ. ನಾಟ್ಯಕ್ಕೆ ರಂಗಭೂಮಿಯು ಅನಿವಾರ್ಯವಾಗಿರುವಂತೆ ಕಾವ್ಯಕ್ಕೆ ಪ್ರತಿಮಾಸೃಷ್ಟಿಯು ಅನಿವಾರ್ಯವಾಗಿದೆ."

ಪ್ರತಿಮಾಸೃಷ್ಟಿಯು ಕಾವ್ಯದ ಅಲಂಕಾರವಾಗಿರದೆ ಒಂದು ಅನಿವಾರ್ಯವಾಗಿದೆ. ಕವಿಯ ಮಾಧ್ಯಮವಾದ ಭಾಷೆಯ ಸ್ವಭಾವವು ಪ್ರತಿಮಾಸೃಷ್ಟಿಯನ್ನು ಏಕೆ ಅನಿವಾರ್ಯವನ್ನಾಗಿ ಮಾಡುತ್ತದೆ? ಯಾಕೆಂದರೆ, ಸರಳವಾದ ಭಾಷೆಯು ಕವಿಯು ನಿರೂಪಿಸತಕ್ಕ ವಿಷಯಕ್ಕೆ ಸಾಲದಾಗಿದೆ. ಹಾಗಾದರೆ ಅವನು ನಿರೂಪಿಸಲಿಚ್ಛಿಸುವ ವಿಷಯವಾವುದು? ಈ ಪ್ರಶ್ನೆಯನ್ನು ಕೇಳಿದಾಗ ನಾವು 'ಪ್ರತಿಮಾಸೃಷ್ಟಿಯೆಂದರೆ ಭಾಷೆಯ ಒಳಗಿರುವ ಒಂದು ಗುಣ' ಎಂಬ ಅಪೂರ್ಣ ಸಿದ್ಧಾಂತದಿಂದ, 'ಪ್ರತಿಮಾಸೃಷ್ಟಿಯೆಂದರೆ ಕಾವ್ಯಮಯ ವಿಚಾರವನ್ನು ನಿರೂಪಿಸುವ ರೀತಿ' ಎಂಬ ಸಿದ್ಧಾಂತದೆಡೆಗೆ ತೆರಳಬೇಕಾಗುತ್ತದೆ. ಕವಿಯು ತನ್ನ ಅನುಭವದ ಸತ್ಯದೆಡೆಗೆ ಸುತ್ತಾದ ಮಾರ್ಗದಿಂದ ಬರುತ್ತಾನೆ. ಇದನ್ನು ನೇರವಲ್ಲದ ಭಾಷೆಯಿಂದ ಸಾಧಿಸುತ್ತಾನೆ. ಅವನು ತನ್ನ ಮನಸ್ಸಿನಿಂದ ಯಾವುದೋ ಒಂದು ಭಾರವನ್ನು ಹೊರಹಾಕಲು ಇಚ್ಛಿಸುತ್ತಾನೆ. ('An aweful warmth about my heart like a load of immortality') ಅವನು ಹೇಳುವುದು ಸಂಬಂಧವಿಲ್ಲದ ನಿರ್ಜೀವಸ್ಮೃತಿಗಳ ಭಾರವನ್ನಲ್ಲ. ಅವನಲ್ಲಿ ಇಂತಹ ಭಾರವಿದ್ದರೆ ಅವನು ಅದನ್ನು ಕಳೆದುಕೊಳ್ಳಲು ಮಾನಸಶಾಸ್ತ್ರಜ್ಞನನ್ನು ವಿಚಾರಿಸಬಹುದಾಗಿತ್ತು ಅಥವಾ ತನ್ನ ಆತ್ಮಚರಿತ್ರೆಯನ್ನು ಬರೆಯಬಹುದಾಗಿತ್ತು. ಆದರೆ ಅವನ ಭಾರದ ರೀತಿಯೇ ಬೇರೆ. ಈ ಭಾರವೆಂದರೆ ತನಗೆ ಗೊತ್ತಿಲ್ಲದೇ ತನ್ನಲ್ಲಿಯೇ ಒಟ್ಟುಗೂಡಿದ ಸ್ಮೃತಿಗಳ ಸಂಕೀರ್ಣತೆ. ಈ ಒಟ್ಟುಗೂಡಿದ ಸ್ಮೃತಿಗಳು ಪ್ರಚುರವಾಗಿ ತೃಪ್ತಿಯನ್ನು ಬಯಸುತ್ತವೆ. ಪ್ರತಿಯೊಂದು ಸ್ಮೃತಿಯು ಒಂದು ಸತ್ಯವನ್ನು ನಿರ್ಮಿಸುತ್ತದೆ; ಆದರೆ ಎಲ್ಲ ಸ್ಮೃತಿಗಳು ಒಟ್ಟೈಸಿ ಬಂದಾಗ ಹುಟ್ಟುವ ಸತ್ಯವು ಹೆಚ್ಚು ವಿಶ್ವವ್ಯಾಪಿಯಾಗಿರುತ್ತದೆ. ಈ ಮಾತನ್ನು ಸಮರ್ಥಿಸಲು ದ. ರಾ. ಬೇಂದ್ರೆಯವರ 'ರುದ್ರವೀಣೆ' ಎಂಬ ಕವಿತೆಯನ್ನು ನೋಡೋಣ:

ರುದ್ರವೀಣೆ

ಯಾಕೊ ಕಾಣೆ
ರುದ್ರವೀಣೆ
        ಮಿಡಿಯುತಿರುವುದು—
ಜೀವದಾಣೆ—
ಯಂತೆ ತಾನೆ
        ನುಡಿಯುತಿರುವುದು.
ತಂತಿ ಮಿಂಚಿ ನಡುಗುತಿವೆ,
ಸೊಲ್ಲುಸಿಡಿದು ಗುಡುಗುತಿವೆ,
ಮಿಡಿವ ಬೆರಳು ಅಡಗುತಿವೆ
ಮುಗಿಲ ಬಯಲಲಿ.
        ಚಿಕ್ಕೆ ಬಾಲ ಬೀಸುತಿವೆ,
        ಸೂರ್ಯಚಂದ್ರ ಈಸುತಿವೆ,
        ಹೊಸ ಬೆಳಕನೆ ಹಾಸುತಿವೆ
        ಕಾಲ ಪಥದಲಿ.
ನೆಲದ ಬಸಿರೊಳುರಿಯುತಿದೆ,
ಬೆಟ್ಟದೆದೆಯು ಬಿರಿಯುತಿದೆ,
ನೀರು ಮಾರಿ ಹರಿಯುತಿದೆ
ಕೆಂಪು ನೆಲದಲಿ.
        ಧರ್ಮಾಸನ ಹೊರಳುತಿದೆ,
        ಸಿಂಹಾಸನ ಉರುಳುತಿವೆ,
        ಜಾತಿಪಂಥ ತೆರಳುತಿವೆ
        ಮನದ ಮರೆಯಲಿ.
ಗಂಡು ಹೆಣ್ಣು ಕೆರಳುತಿವೆ,
ಬೇನೆತಿನುತ ನರಳುತಿವೆ,
ಸಾಯಲಾರದುರುಳುತಿವೆ
ಬರುವ ಹಗಲಲಿ. "

ಇದನ್ನು ಓದಿದಾಗ ಸಾಮಾನ್ಯವಾಚಕರು ಹೀಗೆನ್ನಬಹುದು: 'ಇದೊಂದು ಸುಂದರವಾದ ಕವಿತೆ. ಇದರ ಶಬ್ದಚಿತ್ರಗಳು ಆನಂದವನ್ನು ತರುತ್ತಿವೆ. ಹೃದಯಸ್ಪರ್ಶಿಯಾಗಿವೆ. ಆದರೆ ಇಲ್ಲಿ ಪ್ರತೀಕವಾದವೆಲ್ಲಿದೆ? ಇಲ್ಲಿ ಜನ್ಮ-ಮರಣಕ್ಕೆ ಸಂಬಂಧಿಸಿದ ಒಂದು ಸತ್ಯವನ್ನು ನಾನು ಕಾಣುವುದಿಲ್ಲ. ನಾನು ಕೇವಲ ಈಸುವ ಸೂರ್ಯ-ಚಂದ್ರರನ್ನು, ಮಾರಿ ಹರಿಯುವ ನೀರನ್ನು, ಬೀಸುವ ಚಿಕ್ಕೆಬಾಲವನ್ನು, ಬಿರಿಯುವ ಪರ್ವತಗಳನ್ನು ಕಾಣುತ್ತೇನೆ.'

ಇದು ಸುಲಭವಾಗಿ ತಿಳಿಯುವ ಸಂಗತಿ. ಇಂತಹ ವಾಚಕರಿಗೆ ನಾವು ಈ ರೀತಿ ಉತ್ತರಿಸಬೇಕಾಗುವುದು: 'ನೀವು ಗಾಳಿಯನ್ನು, ಬೀಸುತ್ತಿದ್ದರೂ ಕಾಣಲಾರಿರಿ; ಆದರೆ ಗಾಳಿಯ ದಿಶೆಯನ್ನು ಸೂಚಿಸುವ ಅಲ್ಲಾಡುವ ಗಿಡಗಳನ್ನೂ ಹೊಗೆಯನ್ನೂ ಧ್ವಜಗಳನ್ನೂ ಕಾಣುತ್ತೀರಿ. ಇದೆ ರೀತಿ ಒಂದು ಸುಂದರ ಕವಿತೆಯ ಪ್ರತಿಮೆಗಳು ಕೂಡ ಒಂದೇ ಸತ್ಯದೆಡೆಗೆ ಒಲೆದಿರುತ್ತವೆ. ಕವಿತೆಯಲ್ಲಿ ಸತ್ಯವು ಸ್ಪಷ್ಟವಾಗಿ ವಿವರಿಸಲ್ಪಟ್ಟು ಕಂಡುಬಾರದಿದ್ದರೂ, ಅಲ್ಲಿಯ ಪ್ರತಿಮೆಗಳು ಸತ್ಯದೆಡೆಗೆ ಒಲೆದದ್ದು ಕಂಡುಬರುತ್ತದೆ. ಶ್ರೀ. ಬೇಂದ್ರೆಯವರ ರುದ್ರವೀಣೆಯು ಈ ರೀತಿಯ ಒಂದು ಉದಾಹರಣೆಯಾಗಿದೆ. ಇದರಲ್ಲಿಯ ಪ್ರತಿಮೆಗಳನ್ನು ಅಭ್ಯಸಿಸಿದರೆ, ಅವು ಒಂದೇ ಕಡೆಗೆ ಒಲೆದಿರುವುದು ಕಂಡುಬರುತ್ತದೆ. ದೇವನಲ್ಲಿ ಸೃಷ್ಟಿ, ಸ್ಥಿತಿ, ಲಯ ಈ ಮೂರು ಶಕ್ತಿಗಳಿರುತ್ತವೆ. ಶೆಲ್ಲಿ ಕವಿ ಬರೆದ 'Ode to the west wind' ಎಂಬ ಕವಿತೆಯಲ್ಲಿ, ಸಂರಕ್ಷಕ ಮತ್ತು ವಿಧ್ವಂಸಕವಾದ ವಿಶ್ವವ್ಯಾಪೀ ಪ್ರಜ್ಞೆಯನ್ನು ಕಾಣುತ್ತೇವೆ. ಆದರೆ ಇಲ್ಲಿ ವಿಧ್ವಂಸಕವಾದ ವಿಶ್ವವ್ಯಾಪೀಪ್ರಜ್ಞೆಯನ್ನು ನೋಡಬಹುದು. 'ತಂತಿ ಮಿಂಚಿ ನಡುಗುತಿವೆ, ಚುಕ್ಕೆ ಬಾಲ ಬೀಸುತಿವೆ, ಸೂರ್ಯ ಚಂದ್ರ ಈಸುತಿವೆ, 'ನೆಲದ ಬಸಿರೊಳುರಿಯುತಿದೆ' ಸಿಂಹಾಸನ ಉರುಳುತಿವೆ ಇವೆಲ್ಲವೂ ವಿಶ್ವವ್ಯಾಪೀ ವಿಧ್ವಂಸಕ ಪ್ರಜ್ಞೆಯನ್ನೇ ಸೂಚಿಸುತ್ತವೆ. 'ಕೆಂಪು ನೆಲದಲಿ' ಎಂಬ ಪ್ರತಿಮೆ ರಕ್ತಪಾತ,—ಕ್ರಾಂತಿಯನ್ನು ತೋರಿಸಿದರೆ, 'ಚುಕ್ಕೆಬಾಲ' ಧೂಮಕೇತುವಿನ ಅಶುಭಸೂಚನೆಯನ್ನು ತೋರುತ್ತದೆ. ಬರಲಿರುವ ಪ್ರಲಯಕಾಲದ ದೂತರಂತೆ ಪ್ರತಿಮೆಗಳು ಒಂದೊಂದಾಗಿ ಬರುತ್ತವೆ. ಇಲ್ಲಿಯ ಶಬ್ದಚಿತ್ರಗಳು ಕೇವಲ ಶಬ್ದಚಿತ್ರಗಳಾಗಿಲ್ಲ; ಒಂದು ಸರ್ವಸಾಮಾನ್ಯವಾದ ಸತ್ಯದ ಹಿನ್ನೆಲೆಯಲ್ಲಿ ಅವು ಪ್ರತಿಮೆಗಳಾಗಿರುತ್ತವೆ.

ಸಾಮಾನ್ಯ ವಾಚಕನು ಇಲ್ಲಿ ಹೀಗೆನ್ನಬಹುದು: 'ಈ ತತ್ತ್ವವು ಬಹಳ ಒಳ್ಳೆಯದಿದೆ; ಬೇಂದ್ರೆಯವರ ಈ ಕವಿತೆಯಲ್ಲಿ ಪ್ರತಿಮೆಗಳು ಒಂದೇ ಸತ್ಯವನ್ನು ಚಿತ್ರಿಸುತ್ತಿವೆ ಎಂಬುದನ್ನು ತಿಳಿಸಿಕೊಟ್ಟಿರುವಿರಿ. ಇಲ್ಲಿ ಒಂದು ಸರ್ವಸಾಮಾನ್ಯವಾದ ಕಾವ್ಯಮಯ ಸತ್ಯವು ಇದೆಯೆಂಬುದು ಗೊತ್ತಾಗುತ್ತದೆ; ಆದರೆ ಇದರ ನಿಜವಾದ ಅರ್ಥವಾಗುವುದಿಲ್ಲ'

ಸಾಮಾನ್ಯವಾಚಕನ ಈ ಮಾತು ವಿಚಾರಾರ್ಹವಾಗಿದೆ. ಕವಿತೆಯೊಳಗಿಂದ ಒಂದು ಸತ್ಯವು ವಾಚಕನಿಗೆ ತಿಳಿಯುವಂತಹ ರೂಪದಲ್ಲಿಯೇ ಹೊರಬಿದ್ದಿದೆ—ಎಂದು ನಾವು ಹೇಳಲಾರೆವು. ಆದರೂ ಕೂಡ ಇದೊಂದು ಅಪ್ರತಿಮ ಕವಿತೆಯೆಂಬುದರಲ್ಲಿ ಸಂದೇಹವಿಲ್ಲ ಈ ಎಲ್ಲ ಪ್ರತಿಮೆಗಳು ಬೇರೆ ಬೇರೆ ಸ್ಮೃತಿಗಳಿಂದ ಬಂದಿರುತ್ತವೆ. ನಮ್ಮ ಜಾಗೃತಪ್ರಜ್ಞೆಯ ಬೆಳಕನ್ನು ಬಿಟ್ಟು ಬೇರೆ ಯಾವ ಮಾರ್ಗದಿಂದಾದರೂ ಈ ಸಾಮಾನ್ಯ ಸತ್ಯವು ನಮ್ಮ ಮೇಲೆ ತನ್ನ ಪ್ರಭಾವ ಬೀರಬಹುದೇ?

ಈ ಸಂದರ್ಭದಲ್ಲಿ ನಾವು ಬಾವಿಯ ಆಳವನ್ನು ನೋಡಬೇಕು. ಅಲ್ಲಿ ಕತ್ತಲೇ ತುಂಬಿರುವುದು. ಸಾಮಾನ್ಯ ಓದುಗನು ಅದನ್ನೊಂದು ಕರಾಳ ಕಣಿಯೆಂದು ತಿಳಿಯಬಹುದು. ಈ ಕತ್ತಲೆಯಲ್ಲಿ ಸಫಲವಾದ ಸ್ಮೃತಿಗಳೆಂದರೆ ಪ್ರತಿಮೆಗಳೆಂದು ಕೆಲವರು ಹೇಳಿದ್ದಾರೆ. ಕಾವ್ಯವು ವಾಚಕನಿಗೆ ತನ್ನ ಅತ್ಯುಚ್ಚ ವಿಚಾರಗಳ ಧ್ವನಿಯಂತೆ ತಟ್ಟಿ ಅವನಿಗೆ ಒಂದು ಜ್ಞಾಪಕದಂತೆ ಕಾಣಬೇಕು' ಎಂದು ಕೀಟ್ಸ್ ಹೇಳಿದ್ದಾನೆ. ಸ್ಮೃತಿಯೇ ಕಾವ್ಯದ ಚಿಚ್ಛಕ್ತಿಯೆಂದು ಹೇಳಬಹುದು.

ಹಾಕೆಂದರೆ ಕಲ್ಪಕತೆಯೇ ಸ್ಮೃತಿಯ ಅಭ್ಯಾಸವಾಗಿದೆ. ('It is perhaps true to say that memory is the faculty of poetry because the imagination itself is an exercise of memory'— Spender) ನಮಗೆ ಗೊತ್ತಿಲ್ಲದ ಯಾವ ವಿಷಯವನ್ನೂ ನಾವು ಕಲ್ಪಿಸುವುದಿಲ್ಲ. ಮೊದಲೇ ಅನುಭವಿಸಿದ ಸಂಗತಿಗಳನ್ನು ಸ್ಮರಿಸುವ ಮತ್ತು ಅವುಗಳನ್ನು ಬೇರೆ ಸಂದರ್ಭಗಳಿಗೆ ಅನ್ವಯಿಸುವ ಸಾಮರ್ಥ್ಯವೇ ನಮ್ಮ ಕಲ್ಪನಾ ಸಾಮರ್ಥ್ಯ—ಎಂದು ಸ್ಪೆಂಡರ್ ಹೇಳಿದ್ದಾರೆ.

'ಕವಿಯು ತನ್ನ ಮೊದಲಿನ ಅನುಭವವನ್ನು ಕಾಲ್ಪನಿಕವಾಗಿ ಬೇರೆ ಸಂದರ್ಭಗಳಿಗೆ ಅನ್ವಯಿಸಲೇ ಬೇಕು. ಇದರಿಂದಲೇ ಕಾವ್ಯದಲ್ಲಿ ಸ್ಮೃತಿಗಳು ರೂಪಕಾತ್ಮಕವಾಗಿರುತ್ತವೆ ಅವುಗಳಿಗೆ ಪ್ರತಿಮೆಗಳ ಮಹತ್ತ್ವ ಮತ್ತು ಗಾಂಭೀರ್ಯ ಬರುತ್ತದೆ'— (ಸ್ಪೆಂಡರ್)

ಕವಿಯು ತನ್ನ ಮೊದಲಿನ ಅನುಭವವನ್ನು ಅನ್ವಯಿಸುವ ಸಂದರ್ಭವು ಯಾವುದು? ಮೊದಲು ಅದು ಕಾವ್ಯವಸ್ತು (theme) ವಾಗಿರುತ್ತದೆ. ಕಾವ್ಯವಸ್ತು ಒಂದು ವಿಶಿಷ್ಟವಾದ ಮತ್ತು ಗಟ್ಟಿಯಾದ ಅನುಭವದ ರೂಪದಲ್ಲಿ ತನ್ನನ್ನೇ ತಾನು ಪ್ರಕಟಗೊಳಿಸಬಹುದು; ಅಥವಾ ಅದು ಕವಿತೆಯ ಪ್ರಾರಂಭದ ಒಂದು ಜಾಗೃತ ಹೆಜ್ಜೆಯಾಗಿರಬಹುದು. ಈ ಮಟ್ಟದಲ್ಲಿ ಕಾವ್ಯವಸ್ತು ಅವ್ಯಕ್ತವಾಗಿರುತ್ತದೆ. ಕವಿಯ ಒಟ್ಟು ಅನುಭವದ ಭಾಗಗಳು ಅವನ ವಿಶಿಷ್ಟ ಸ್ಮೃತಿಗಳು ಈ ಅವ್ಯಕ್ತ ಕಾವ್ಯವಸ್ತುವಿನ ಕಕ್ಷೆಯಲ್ಲಿ ಆಕರ್ಷಿಸಲ್ಪಟ್ಟಾಗ, ಆ ಅವ್ಯಕ್ತ ಕಾವ್ಯವಸ್ತುವಿಗೆ ಒಂದು ನಿಶ್ಚಿತತೆ ಮತ್ತು ತಾತ್ಪರ್ಯ ಬರುತ್ತದೆ. ಈ ರೀತಿ ಸ್ಮೃತಿಗಳು ತಮ್ಮ ಮೂಲ ಸಂದರ್ಭದಿಂದ ಸ್ಥಾನಾಂತರ ಹೊಂದಿ, ಕಾವ್ಯವಸ್ತುವಿನ ಬೇಡಿಕೆಗೆ ಅನುಗುಣವಾಗಿ ರೂಪಾಂತರ ಹೊಂದಿ, ಕಾವ್ಯದಲ್ಲಿ ರೂಪಾತ್ಮಕವಾಗಿ ಉಪಯೋಗಿಸಲ್ಪಟ್ಟು ನಮಗೆ ಪ್ರತಿಮೆಗಳಾಗಿ ತೋರುತ್ತವೆ. ಕವಿಗೆ ವೈಯಕ್ತಿಕ ಹಾಗೂ ಅದ್ವಿತೀಯವಾಗಿ ತೋರುವ ಈ ಸ್ಮೃತಿಗಳು ವಾಚಕರಿಗೂ ಕೂಡ ಏಕೆ ಸಮ್ಮತವಾಗುತ್ತವೆ— ಎಂಬುದನ್ನು ಈ ಗತಿಯು ಕೆಲಮಟ್ಟಿಗೆ ವಿವರಿಸುತ್ತದೆ. ಕಾವ್ಯವಸ್ತುವೆಂದರೆ ಸರ್ವಸಾಮಾನ್ಯವಾದ ಒಂದು ಸತ್ಯದ ಕವಿಯ ವೈಯಕ್ತಿಕ ವಿವರಣೆ. ಆದರೆ ಕವಿಯು ಯಾವಾಗಲೂ ಕವಿತೆಯಲ್ಲಿ ಅಡಗಿದ ಸಾಮಾನ್ಯ ಸತ್ಯದ ಬಗ್ಗೆ ಜಾಗೃತನಿರುವುದಿಲ್ಲ. ಮತ್ತು ನಿಕಟ ಸಂಬಂಧದವನಿರುವುದಿಲ್ಲ. (ಆದುದರಿಂದ ಕಾವ್ಯವಸ್ತುವೆಂದರೆ ಕವಿಯು ಅನುಭವದ ಭಾಷೆಯಿಂದ ತನ್ನನ್ನೇ ವಿವರಿಸಿಕೊಳ್ಳುವ ಒಂದು ಸತ್ಯವೆನ್ನಬಹುದು. ಶಾಸ್ತ್ರೀಯವಾಗಿ ಹೇಳುವುದಾದರೆ, ಒಂದು ಕವಿತೆಯ ಪ್ರತಿಮಾ ಸೃಷ್ಟಿಯಲ್ಲಿ ಎರಡು ಪಾತಳಿಗಳಿರುತ್ತವೆ: (೧) ಕಾವ್ಯವಸ್ತುವಿಗೆ ಸಂಬಂಧಿಸಿದ ಭಿನ್ನಪ್ರತಿಮೆಗಳು (೨) ಸಾಮಾನ್ಯ ಸತ್ಯವನ್ನು ಮೂರ್ತಿಸುವ ಕಾವ್ಯವಸ್ತು.

ಕೊನೆಗೆ ನಾವು ಬಾವಿಯ ತಳವನ್ನು ಮುಟ್ಟಿರುವೆವೆಂದು ಭಾಸವಾಗುತ್ತದೆ. ಹಾಗಾದರೆ ಮೇಲೆ ಹೇಳಿದ ಸಾಮಾನ್ಯ ಸತ್ಯಗಳೆಂದರೇನು? ಅವು ಕೇವಲ ಮೂಲಸೂತ್ರಗಳಾಗಿವೆ. ನಾವು ಸತ್ಯವೆಂದಾಗ, ಅದು ವಿಜ್ಞಾನ ಅಥವಾ ತತ್ತ್ವಜ್ಞಾನ ಅರ್ಥಮಾಡುವ ಸತ್ಯವಲ್ಲ; ತರ್ಕ ಮಾಡುವ ಸತ್ಯ ಮತ್ತು ಗೂಢವಾದ ಹೇಳಿಕೆಗಳು ನಮ್ಮ ಬುದ್ಧಿಗೆ ಮನಗಾಣಿಸುವಂತಹವಿದ್ದು, ಇವು ಕಾವ್ಯದಲ್ಲಿ ಸಾಕಷ್ಟು ಕಂಡು ಬರುತ್ತವೆ. ಇವುಗಳಿಗೆ ಕಾವ್ಯದಲ್ಲಿ ಒಂದಿಲ್ಲ ಒಂದು ಸ್ಥಾನವಿರುತ್ತದೆ. ಆದರೆ ಕಾವ್ಯದ ಸಾಮಾನ್ಯಸತ್ಯಗಳನ್ನು ಕೇವಲ ಭಾವಪೂರ್ಣ ಪ್ರಭಾವದಿಂದಲೇ ಗುರುತಿಸಬೇಕಾಗುತ್ತದೆ. ಈ ಸತ್ಯಗಳು ಕಾವ್ಯಗಳಲ್ಲಿ ಮತ್ತೆ ಮತ್ತೆ ಹೇಳಿದ್ದು ಕಂಡುಬಂದರೂ, ತಂತ್ರದ ವಿಷಯದಲ್ಲಿ ಅಷ್ಟೇ ಶುದ್ಧವಾದ ಕಾವ್ಯಗಳಿಗಿಂತ ಅವು ಓದುಗರ ಮನವನ್ನು ಎಳೆಯುತ್ತವೆ. ಈ ಸತ್ಯಗಳು ಯಾವ ಕಾಲದಲ್ಲಿ ಹೆಚ್ಚಾಗಿ ಕಂಡುಬರುತ್ತವೆಯೋ ಅದೇ ಸರ್ವೋತ್ತಮ ಕಾವ್ಯವಸ್ತುಗಳಲ್ಲಿ (theme) ಒಂದು ಅಸಾಮಾನ್ಯಸಾಮರ್ಥ್ಯ ಮತ್ತು ವಿಶ್ವವ್ಯಾಪಕತ್ವ ಕಂಡುಬರುತ್ತದೆ ಎಂದು ನಾವು ಊಹಿಸಬಹುದು.

ಕಾವ್ಯದಿಂದಾಗುವ ಮಾನಸಿಕ ಪರಿಣಾಮದ ಬಗ್ಗೆ ಡಾ. ಯಂಗ್‌ರವರು ಬರೆದ ಸಿದ್ಧಾಂತದ ಸಾರದಲ್ಲಿದ್ದ ಒಂದೆರಡು ವಾಕ್ಯ ನೋಡೋಣ: "ಕೆಲವು ಕವನಗಳಲ್ಲಿ ಕಂಡುಬರುವ ವಿಶಿಷ್ಟವಾದ ಭಾವಪೂರ್ಣ ಮಹತ್ತ್ವವು ಒಂದು ಮರ್ಯಾದಿತ ಅರ್ಥವನ್ನು ಮೀರಿಹೋಗುತ್ತದೆ. ವಾಚಕನ ಮನಸ್ಸಿನಲ್ಲಿ ಹುಟ್ಟುವ ಕದಡೇ ಇದಕ್ಕೆ ಕಾರಣ ಈ ಕದಡುವಿಕೆಯು ಅವನ ಜಾಗೃತ ಪ್ರತಿಕ್ರಿಯೆಯ ಕ್ಷೇತ್ರದಲ್ಲಿ ಅಥವಾ ಅದರೊಳಗೇ ಹುಟ್ಟಬಹುದು; ಅಥವಾ ಈ ಕದಡು ವಾಚಕನಲ್ಲಿದ್ದ ಅಜಾಗೃತ ಪ್ರಜ್ಞೆಗಳ ಮೂಲಕ ಹುಟ್ಟಬಹುದು. ಈ ಅಜಾಗೃತ ಪ್ರಜ್ಞೆಗಳ ಮೂಲಪ್ರಕೃತಿಯ ಪ್ರತಿಮೆಗಳು ಅಥವಾ ಕಾರಣರೂಪಗಳೆಂದು ಕರೆಯಬಹುದು. ಈ ಕಾರಣರೂಪಗಳೆಂದರೆ ಮನದಾಳದಲ್ಲಿ ಉಳಿದುಬಿಟ್ಟದ್ದ ಒಂದೇ ಪ್ರಕಾರದ ಅಸಂಖ್ಯ ಅನುಭವಗಳು. ಈ ಅನುಭವಗಳು ಕೇವಲ ಒಂದು ವ್ಯಕ್ತಿಯ ಜೀವನಕ್ಕೆ ಸಂಬಂಧಿಸಿದುವಿರುವದಿಲ್ಲ. ಇಂತಹ ಅನುಭವಗಳನ್ನು ನಮ್ಮ ಪೂರ್ವಜರು ಪಡೆದಿದ್ದರು. ಪರಂಪರಾಗತವಾಗಿ ಇವುಗಳ ಪರಿಣಾಮವು ನಮ್ಮ ಮಿದುಳಿನ ರಚನೆಯ ಮೇಲೆಯೇ ಆಗಿರುತ್ತದೆ"

ಕವಿಗೆ ಹಾಗೂ ವಾಚಕನಿಗೆ ಎರಡು ಪ್ರಕಾರದ ಸ್ಮೃತಿಗಳಿರುತ್ತವೆ. ನಮಗೆ ಸೃಷ್ಟಿಯ ಕೆಲವು ವೈಯಕ್ತಿಕ ಸ್ಮೃತಿಗಳಿರುತ್ತವೆ. ಈ ವೈಯಕ್ತಿಕ ಸ್ಮೃತಿಗಳ ಕೆಳಗೆ ಸೃಷ್ಟಿಯೆಡೆಗೆ ನಾವು ತೋರಿಸುವ ೧) ಅನುಕಂಪನೆಯ ೨) ಕಾರಣರೂಪಗಳ ಮಾದರಿಗಳಿರುತ್ತವೆ. ಇವುಗಳು ನಮ್ಮ ಪೂರ್ವಜರ ಅಸಂಖ್ಯಾತ ಸಂತಾನಗಳಿಂದ ಪರಂಪರಾಗತವಾಗಿ ಬಂದಿರುತ್ತವೆ. ಜಿ ಎಂ ಟ್ರೆವಿಲ್ಯನ್ ಅವರು ಹೇಳಿದಂತೆ: "ನಮ್ಮೆಲ್ಲರ ಜೀವಂತಮಾತೆಯಾದ ಭೂಮಿಗೆ ಒಂದು ಭಾಷೆಯಿದ್ದು ಅದು ನಮ್ಮ ಹೃದಯದ ಅಂತರಾಳಕ್ಕೆ ಹೋಗಿ ಮುಟ್ಟುತ್ತದೆ. ಅನುಕ್ತ ಪುರಾತನವಸ್ತುಗಳು ನಮ್ಮಲ್ಲಿ ಹಿಂದಿನ ಜನಾಂಗಗಳ ಸ್ಮೃತಿಗಳನ್ನು ತರುತ್ತವೆ; ಮತ್ತು ಅವ್ಯಕ್ತವಾದ ಒಂದು ಭರವಸೆಯನ್ನು ಮಾನವನ ಬೀಜರೂಪಕ್ಕೆ ಉಸಿರುತ್ತವೆ. ಈ ರೂಪಗಳು ಕವಿಯಲ್ಲಿಯು ಕೂಡ ಇದ್ದು, ಅವನ ವರ್ತಮಾನ ಅನುಭವದ ಹಿಂದೆ

ಅಸ್ಪಷ್ಟವಾಗಿ ಗೋಚರಿಸುತ್ತವೆ. ಕಾರಣರೂಪಗಳು ಕವಿಯ ವೈಯಕ್ತಿಕ ಸ್ಮೃತಿಯ ಹಿಂದೆಯೂ ಇರುತ್ತವೆ. ಅವು ತಮ್ಮ ಪ್ರಭಾವವನ್ನು ರಹಸ್ಯಮಯವಾಗಿ ಕವಿಯ ಮೇಲೆ ಬೀರುತ್ತವೆ." ವರ್ಡ್ಸ್‌ವರ್ಥ್ ಇದೇ ಮಾತನ್ನೇ ಹೇಳಿದ್ದಾನೆ........

"Huge and mighty forms, that do not live
Like living men, moved slowly through the minds
By, day and were trouble to my dreams."

ಕಾರಣರೂಪಗಳು ಕವಿಯ ದರ್ಶನದ ಮಾಧ್ಯಮದೊಳಗಿಂದಲೇ ಪ್ರವರ್ತಕವಾಗುತ್ತವೆ. ಜಿರಾರ್ಡ್ ದಿ ನರ್ವಲ್ ಎಂಬವನು ಹೀಗೆ ಹೇಳಿದ್ದಾನೆ: 'ಪೂರ್ವಕಾಲದ ಪ್ರತಿಮೆಗಳು ಅಸ್ಪಷ್ಟವಾಗಿ ರೂಪಗೊಂಡುವು; ತಮ್ಮಷ್ಟಕ್ಕೆ ತಾವೇ ಚಿತ್ರಿತಗೊಂಡುವು. ನಿಶ್ಚಿತವಾದುವು; ಅನಂತರ ಪ್ರತೀಕಗಳ ಪ್ರತಿನಿಧಿಗಳಾದಂತೆ ತೋರಿದುವು. ಈ ವಿಚಾರವನ್ನು ಬಹಳೇ ಕಷ್ಟದಿಂದ ತಿಳಿದುಕೊಳ್ಳಬೇಕಾಯಿತು' ಈ ಪ್ರತಿಮೆಗಳೆಂದರೆ ವಿಶಿಷ್ಟರೀತಿಯ ಅನುಭವದ ಪುನರಾವೃತ್ತಿಯ ಗುರುತುಗಳು ಇವುಗಳು ವಿಶಾಲವಾದ ಸ್ಮೃತಿಯ ಕ್ಷೇತ್ರದಲ್ಲಿರುತ್ತವೆ. ಭೂಮಿಯಲ್ಲಿದ್ದ ಇತಿಹಾಸಪೂರ್ವದ ಕುರುಹುಗಳನ್ನು ಸಂಶೋಧಿಸುವಾಗ ಆ ಪ್ರದೇಶಗಳ ಮೇಲೆಯೇ ಇದ್ದರೂ ಏನೂ ಹೊಳೆಯುವುದಿಲ್ಲ. ಆದರೆ ವಿಮಾನದ ಮೇಲಿಂದ ಈ ಪ್ರದೇಶಗಳನ್ನು ಗುರುತಿಸಬಹುದು. ಇದೇ ರೀತಿ ನಮ್ಮಲ್ಲಿದ್ದ ಹಿಂದಿನ ಸ್ಮೃತಿಗಳು, ಅವುಗಳ ಮಧ್ಯದಲ್ಲಿಯೇ ಇದ್ದಾಗ ನಮಗೆ ಗೊತ್ತಾಗುವುದಿಲ್ಲ; ಆದರೆ ಕಲ್ಪನಾವಿಹಾರದಲ್ಲಿದ್ದಾಗ ಒಮ್ಮೆಲೇ ಗೊತ್ತಾಗುವುವು. ಈ ಸ್ಮೃತಿಗಳನ್ನು ಪಡೆಯಲು ಆನಂದಭರಿತವಾದ ವ್ಯಕ್ತ್ಯತೀತವಾದ ಕಲೆಯ ದೂರದೃಷ್ಟಿ ಬೇಕು.

ಯಂಗ್‌ರವರು ಕಲೆಯ ನಿರ್ಮಿತಿ ಎರಡು ರೀತಿಯಿಂದ ಆಗುತ್ತದೆಯೆಂದು ಹೇಳಿದ್ದಾರೆ: (೧) ಮಾನಸಿಕ (೨) ದಾರ್ಶನಿಕ. ಮೊದಲನೆಯದು ಮಾನವೀಪ್ರಜ್ಞೆಯ ರಾಜ್ಯದೊಳಗಿಂದ ತನ್ನ ಸಾಧನಗಳನ್ನು ತೆಗೆದುಕೊಳ್ಳುತ್ತದೆ. ಅವುಗಳೊಡನೆ ಸಂಬಂಧವನ್ನು ಬೆಳೆಸುತ್ತದೆ. ಎರಡನೆಯದು ಮಾನವನ ಮನದ ಹಿನ್ನೆಲೆಯಲ್ಲಿ ಜನಿಸಿದ್ದು ಮೊದಲಿನದರಷ್ಟು ಸ್ಪಷ್ಟವಾಗಿರುವುದಿಲ್ಲ. ಇದು ಕಾಲಾತೀತ ಆಳಗಳೊಳಗಿಂದ ಹುಟ್ಟಿ ಬಹುಮುಖವಾಗಿದ್ದು ಅಲೌಕಿಕ ಮತ್ತು ಅಲಂಕರಿಸುವ ಸಾಮರ್ಥ್ಯವುಳ್ಳುದಾಗಿರುತ್ತದೆ. ಆದರೆ ಸಿ. ಡೆ ಲ್ಯುಯಿಸ್ ಅವರಿಗೆ ಈ ರೀತಿಯು ಉಪಯುಕ್ತವಾಗಿಲ್ಲವೆಂದು ತೋರುತ್ತದೆ. ಕೆಲವು ಕವಿತೆಗಳು ಸಾಮಾನ್ಯ ಅನುಭವಗಳನ್ನು ಸೂಚಿಸುವಂತೆ ಕಂಡರೂ, ಅವು ಹಾಗಿಂದೆ ಸಾಮಾನ್ಯ ಅನುಭವದಿಂದ ಅಳೆಯಲಾರದ ಆಳವನ್ನು ತೋರಿಸುತ್ತವೆ.

ಸಾಮುಷ್ಟಿಕ ಸುಪ್ತಚೇತನ (Collective unconscious) ವನ್ನು ಸೇರಿದರೆ ಅಲ್ಲಿ ಬೇರೆ ದಿಶೆಯಿಂದ ಕಾರಣ ರೂಪಗಳು ಒಟ್ಟೈಸಿದ್ದು ಕಂಡುಬರುತ್ತವೆ. ಮೊದಲಿನ ಪ್ರಕರಣದಲ್ಲಿ ಹೇಳಿದಂತೆ ಸೌಂದರ್ಯದ ಮೂಲಕ ನಮ್ಮಲ್ಲಿ ಹುಟ್ಟುವ ಭಾವನೆಯು ಬೇರೆ ಯಾವುದೆ ಭಾವನೆಗಿಂತಲೂ ಬೇರೆಯಾಗಿದೆ. ಎಂದರೆ ಕವಿತೆಯ ಮೂಲಕ ಹುಟ್ಟಿದ ಭಾವನೆಗಳು ನಮ್ಮಲ್ಲಿದ್ದ ಉಳಿದ ಭಾವನೆಗಳಿಗಿಂತ ತೀರ ಭಿನ್ನವಾಗಿರುತ್ತವೆ; ಒಂದು ಮಾದರಿ ಮತ್ತು ಸಂಪೂರ್ಣತೆಯ ಬಗ್ಗೆ ಇರುವ ಒಬ್ಬನ ಇಚ್ಛೆಯ ತೃಪ್ತಿಯಿಂದ ಇದು ಹುಟ್ಟುತ್ತದೆ. ಕವನದ ರೂಪದಲ್ಲಿರುವ ಒಂದು ಸಂಪೂರ್ಣತೆಯು ಈ ಇಚ್ಛೆಯನ್ನು ಕೆಲಮಟ್ಟಿಗೆ ಪೂರಯಿಸುತ್ತದೆ. ಇಲ್ಲಿ ಎರಡು ಬಗೆಯ ಪ್ರಶ್ನೆಯುದ್ಭವಿಸುತ್ತವೆ. ಈ ಸಂಪೂರ್ಣತೆಯು ಕವಿಯ ತಾಂತ್ರಿಕ ನೈಪುಣ್ಯವನ್ನು ಬಿಟ್ಟು ಬೇರೆಯೇನನ್ನಾದರೂ ತೋರುತ್ತಿದೆಯೆ? ಸುಪ್ತಚೇತನದ ಸಂಯೋಜನೆಯನ್ನು ಎಷ್ಟರಮಟ್ಟಿಗೆ ಇದು ಸಾಧಿಸುತ್ತದೆ? ಕವಿತೆಯಲ್ಲಿರುವ ಒಂದು ಸಾಮಾನ್ಯ ಸತ್ಯವು ಎಷ್ಟರಮಟ್ಟಿಗೆ ಓದುಗನಲ್ಲಿ ಸೌಂದರ್ಯದ ಭಾವನೆಯನ್ನು ಹುಟ್ಟಿಸಬಹುದು? ಈ ಸತ್ಯವನ್ನೇ ನಾವು ಬಾವಿಯ ಆಳದಲ್ಲಿರು ಮೂಲಸೂತ್ರವೆಂದು ಭಾವಿಸಿದ್ದೇವೆ.

ಎರಡನೆಯ ಸಮಸ್ಯೆಯನ್ನು ಮೊದಲು ವಿಚಾರಿಸೋಣ: ಕುಮಾರಿ ಬಾಡ್‌ಕಿನ್ನರು ಬರೆದ 'Archetypal patterns in poetry' ಎಂಬ ಪುಸ್ತಕದಲ್ಲಿ ಇದರ ಉತ್ತರವನ್ನು ಕಾಣುವೆವು. "ಎಲ್ಲರಿಗೂ ಗೊತ್ತಿದ್ದ ಒಂದು ದೈವೀಶಕ್ತಿಯಿದೆ. ಮನುಷ್ಯರೇ ಅದರ ಭಾಗಗಳಾಗಿ ಅದರ ನಿರೂಪಣೆಯ ಸಾಧನಗಳಾಗಿದ್ದಾರೆ ಆ ಶಕ್ತಿಯೇ ಮನುಷ್ಯರನ್ನು ನಿರ್ಮಿಸಿದೆ. ಮಾನಸಶಾಸ್ತ್ರದ ಈ ಪೂರ್ವಸಿದ್ಧಾಂತವನ್ನು ನಾನು ಇಲ್ಲಿ ಸೂಚಿಸಬಲ್ಲೆ. ಈ ಶಕ್ತಿಯು ಎಲ್ಲರಲ್ಲಿಯೂ ಇರುವ ಒಂದು ಸಾಮಾನ್ಯ ಸ್ವಭಾವ. ಇದನ್ನು ಒಂದು ಗುಂಪಿನ ಅಥವಾ ಒಂದು ಜನಾಂಗದ ಸದಸ್ಯರು ಒಮ್ಮೆಲೇ ಅನುಭವಿಸಬಹುದು ಆ ಶಕ್ತಿಯೆಂದರೆ, ಜನಾಂಗದ ಸಾರ್ವತ್ರಿಕ ಭಾವನೆ ಮತ್ತು ಪ್ರವೃತ್ತಿಯಾಗಿದೆ. ಕ್ರಿಸ್ಟೊಫರ್ ಕಾಲ್ಡ್‌ವೆಲ್ಲರು ಹೀಗೆ ಹೇಳಿದ್ದಾರೆ:—"ಸಾರ್ವತ್ರಿಕವಾಗಿ ಹುಟ್ಟುವ ಭಾವನೆಗಳು ಏಕಾಂತವನ್ನೇ ಬಯಸುತ್ತವೆ. ತನ್ನಷ್ಟಕ್ಕೆ ತಾನೇ ಹಾಡಿಕೊಳ್ಳುವವನಿಗೆ ತನ್ನ ಭಾವನೆಗಳು ಪ್ರತಿಮೆಗಳಿಂದಲೇ ಕದಡಿದಂತೆ ಎನಿಸುತ್ತದೆ ಇವನು ಕಲೆಯ ಒಂದು ವಿರೋಧಾಭಾಸವನ್ನೇ ಪ್ರದರ್ಶಿಸುತ್ತಾನೆ ತನ್ನ ಬಾಂಧವರಿಂದ ದೂರ ಸರಿದು ಕಲಾಪ್ರಪಂಚವನ್ನು ಸೇರಿದ ಕಲಾವಿದನು ಮನುಷ್ಯತ್ವದೊಡನೆ ಹೆಚ್ಚು ನಿಕಟವಾದ ಸಂಬಂಧವನ್ನು ಬೆಳಸದೇ ಈ ರೀತಿ ವರ್ತಿಸುತ್ತಾನೆ.

ಈ ಇಬ್ಬರೂ ವಿಮರ್ಶಕರು, ಸಾಮಾಜಿಕ ಅನುಭವ — ಸಾಮಾಜಿಕ ಭಾವನೆಯನ್ನೇ ಒತ್ತಿ ಹೇಳುತ್ತಾರೆ. ಈ ಮಾತುಗಳು ನಮ್ಮನ್ನು ವ್ಯಕ್ತಿ ಮತ್ತು ಸಮಾಜ ಇವುಗಳಲ್ಲಿ ಭೇದವಿಲ್ಲದ ಮತ್ತು ತನ್ನ ಭಾವನೆಗಳನ್ನು ಪುರಾಣಗಳ ರೂಪದಲ್ಲಿ ನಿರೂಪಿಸಿದ ಒಂದು ಹಿಂದಿನ ಕಾಲದ ಸಮಾಜಕ್ಕೆ ಕರೆದೊಯ್ಯುತ್ತವೆ ಈ ಭಾವನೆಗಳು ಇಂದಿನ ಓದುಗರ ಸಾಮುಷ್ಟಿಕ ಚೇತನದಲ್ಲಿಯೂ ಅಡಗಿರುತ್ತವೆ. ಒಂದು ಕವಿತೆಯು ಈ ಭಾವನೆಗಳನ್ನು ತಟ್ಟಿದರೆ, ಅವುಗಳು ಒಮ್ಮೆಲೇ ಓದುಗನ ಮನಸ್ಸನ್ನು ಕದಡಬಹುದು. ಆದರೆ ಈ ಭಾವನೆಗಳ ಸುಪ್ತಚೇತನದ ಸಾಗರದಲ್ಲಿ ಶತಮಾನಗಳಿಂದ ಮುಳುಗಿವೆ. ಇದರಿಂದ ಪ್ರತಿಯೊಂದು ಭಾವನೆಯು ತನ್ನ ವಿಶಿಷ್ಟವಾದ ಗುಣಗಳನ್ನು ಕಳೆದು

ಕೊಂಡಿದೆ. ಇದು ಪ್ರೇಮ, ವೈರ ಇತ್ಯಾದಿ ರೂಪಗಳಲ್ಲಿ ಹೊರಬೀಳದೆ ಸರ್ವಸಾಮಾನ್ಯವಾದ ಕಾಲ್ಪನಿಕ ಅನುಕಂಪನೆ – ಎಂದರೆ ಸೌಂದರ್ಯದ ಭಾವನೆಯ ರೂಪದಲ್ಲಿ ಹೊರಬೀಳುತ್ತದೆ. ಈ ಅನುಕಂಪನೆಯು ಒಂದು ಗುರುತಿನ ಭಾವನೆಯನ್ನು ಒಳಗೊಂಡಿರುತ್ತದೆ. ಇದರಿಂದಲೇ ಅದು ಕವಿತೆಯನ್ನು ಒಂದು ನೆನಪಿನಂತೆಯೆ ಮಾಡುತ್ತದೆ.

ಸಂಪೂರ್ಣತೆಯನ್ನು ಸಾಧಿಸಲು ಮನುಷ್ಯನಲ್ಲಿದ್ದ ಹಂಬಲವನ್ನು ಈ ಅನುಕಂಪನೆಯು ಪೂರಯಿಸುತ್ತದೆ. ಕಾವ್ಯವು ಪ್ರತಿಯೊಬ್ಬನಿಗೂ ಗತಕಾಲದ ಸಾಮಾಜಿಕ ಅನುಭವಗಳ ಸಂಬಂಧವನ್ನು ತರುತ್ತದೆ. ವ್ಯಕ್ತಿಯ ಎದುರು ಮಾನವಜನಾಂಗಗಳನ್ನು, ಸಂತತವಾಗಿ ಏಕೀಕರಿಸುವ ಸಾಮಾನ್ಯ ಸತ್ಯಗಳನ್ನು ಪ್ರದರ್ಶಿಸಿರುತ್ತದೆ. ಕಲೆಯ ಮುಖಾಂತರ ನಾವು ಈ ಜಗದಿಂದ ವಿಮುಖರಾಗುತ್ತೇವೆ (escape) ಮತ್ತು ಕಲೆಯು ನಮ್ಮ ಸಂಬಂಧವನ್ನು ಜಗದೊಡನೆ ತರುತ್ತದೆ. ಸಂಪೂರ್ಣತೆಯನ್ನು ನಾವು ಕಲೆಯ ಮುಖಾಂತರ ಪಡೆಯುತ್ತೇವೆ.

(ಮುಂದುವರಿಯುವದು)

<u>ಪುಸ್ತಕ ವಿಮರ್ಶೆ</u>

ಕಿತ್ತೂರ ಚನ್ನಮ್ಮರಾಣಿ

(ಇಂಗ್ಲಿಷ್ ಪುಸ್ತಕ)

ಶ್ರೀ. ಶ್ರೀಧರ ತೇಲಕರರ ಐತಿಹಾಸಿಕ ಹೊತ್ತಗೆ ಇದು. ಬೈಲಹೊಂಗಲದ ಇತಿಹಾಸ ಮಂಡಲದಿಂದ ಪ್ರಕಟವಾಗಿ ಡಾ. ಬಿ. ಎ. ಸಾಲೆತೊರೆಯವರ ರಸವತ್ತಾದ ವಿದ್ವತ್ಪರಿಪ್ಲುತವಾದ ಮುನ್ನುಡಿಯೊಡಗೂಡಿದೆ.

ಲೇಖಕರೇ ತಮ್ಮ ನಿವೇದನೆಯಲ್ಲಿ ನಿವೇದಿಸಿದಂತೆ ಕಿತ್ತೂರ ರಾಣಿ ಚೆನ್ನಮ್ಮನ ಬಗೆಗೆ ಅವರು ಚಿಕ್ಕಂದಿನಿಂದಲೂ ಕೇಳಿದ್ದರಂತೆ. ಆಗ ಅವರಿಗೆ ಆ ಹೆಸರಿನ ಸಂಮ್ಮೋಹಕತೆ ಇರಲಿಲ್ಲ. ನಿಜವಾದ ಅಭ್ಯಾಸಿಗಳಂತೆ ಈಗ ರಾಣಿಯ ಬಗ್ಗೆ ಅತ್ಯಾದರ ಅಭಿಮಾನ ಎನಿಸಿದುದು ಸಹಜ. ತನ್ನ ಜನತೆಯ ಸ್ವಾತಂತ್ರ್ಯಕ್ಕಾಗಿ ಬ್ರಿಟಿಶರನ್ನು ಎದುರಿಸಿದ ಪ್ರಥಮ ಭಾರತೀಯಳಾಕೆ ಅದೆಲ್ಲ ೧೮೨೪ರ ಘಟನೆ. ೧೮೫೭ರ ಸ್ವಾತಂತ್ರ್ಯ ಸಂಗ್ರಾಮಕ್ಕಿಂತಲೂ ಪೂರ್ವದ್ದು !

ಕರ್ನಾಟಕದಲ್ಲಿಯೇ ಈ ಪ್ರಥಮ ಸ್ವಾತಂತ್ರ್ಯಸಂಗ್ರಾಮವಾಗಿದ್ದರೂ ವ್ಯವಸ್ಥಿತವಾದ ಒಂದು ಐತಿಹಾಸಿಕ ಹೊತ್ತಿಗೆ ಏಕೆ ಹೊರಬಲಿಲ್ಲವೆಂದು ಕನಿಕರ ಉದ್ವಿಗ್ನತೆಯಿಂದ ಪ್ರಶ್ನೆ ಕೇಳಿದ್ದಾರೆ, ಲೇಖಕರು. ಆದರೂ ಕ್ಷಿಪ್ರದಲ್ಲಿಯೇ ಇಂಥ ಯತ್ನ ಕಾರ್ಯರಂಗಕ್ಕಿಳಿದೀತೆಂಬ ಅವರ ಆತ್ಮವಿಶ್ವಾಸದಲ್ಲಿ ನಾವೂ ಪಾಲುಗಾರರು.

ಈ ಹೊತ್ತಗೆಯ ನಿರ್ಮಿತಿಯ ಕಾಲದಲ್ಲಿ ಲೇಖಕರು ಅನೇಕ ಐತಿಹಾಸಿಕ ವಿವರ. ಹಿಂದಿನ ಕೈಬರಹಗಳ ಪ್ರತಿ, ಇಂದಿನ ಪ್ರಚಲಿತ ಗ್ರಂಥಗಳ ಸೂಕ್ಷ್ಮಪರಿಚಯ ಮಾಡಿಕೊಂಡು, ಅವುಗಳ ಸದುಪಯೋಗ ಸಾಧಿಸಿದ್ದು ಪುಟಪುಟಗಳಲ್ಲಿಯೂ ಓದುಗರ ನಿದರ್ಶನಕ್ಕೆ ಬರುವುದು. ಪ್ರೊ. ಸಾಲೆತೊರೆಯವರು ತಮ್ಮ ಮುನ್ನುಡಿಯಲ್ಲಿ ಅಭಿಪ್ರಾಯಪಟ್ಟಂತೆ. ಶ್ರೀ. ತೇಲಕರರು ಕೇವಲ ಮುಂಬಯಿ ಗಝೆಟಿಯರನ್ನವಲಂಬಿಸಿ, ಕಿತ್ತೂರಿನ ಬಗ್ಗೆ ಬರೀ ವರದಿಯನ್ನೊಪ್ಪಿಸಿ ಒಮ್ಮೆ ಪಾರಾದೆನೆಂದು ಉಸಿರು ಕರೆದಿಲ್ಲ. ಇತಿಹಾಸದ ಉತ್ಕಟ ಪ್ರೇಮಿಗಳು ಅಲ್ಪ ಸಂತುಷ್ಟಿಗಳಿರುವುದು ಸಾಧ್ಯವೆ? ಅಂತೇ ಈ ಚಿಕ್ಕ ಕ್ಷೇತ್ರವನ್ನು ಕ್ರಮಿಸಿ, ಬೈಲಹೊಂಗಲದ ಇತಿಹಾಸ ಮಂಡಲದ ಸಾಹಿತ್ಯಿಕ ಸಾಧನೆಗಳನ್ನೆಲ್ಲ ಅವರು ಹಿಂಜಿ ಹಿಳಿದು ನೋಡಿ, ಪರಿಣಾಮಕಾರಿಯಾಗಿ ಬಳಸಿಕೊಂಡಿರುವರು. ಇಂತು ಶ್ರದ್ಧೆ, ಸಹಾನುಭೂತಿ, ಉತ್ಕಟ ಪ್ರೀತಿಗಳಿಂದೊಡಗೂಡಿದ ಕಿತ್ತೂರು ರಾಣಿಯ ಹಾಗೂ ಕಿತ್ತೂರ ಚಿತ್ರವು ರೋಮಾಂಚಕಾರಿಯಾಗಿದೆ; ಸ್ಫೂರ್ತಿಯುತವಾಗಿದೆ

೧೩೩ ವರ್ಷದ ಹಿಂದಿನ ಕಿತ್ತೂರು ಇಂದಿಲ್ಲ. ಎಷ್ಟೋ ಪರಿವರ್ತನೆ ಕಾಲಚಕ್ರದ ಗತಿಯಲ್ಲಾಗಿದ್ದರೂ, ಅನಿವಾರ್ಯವಾದ ಕೆಲವು ಶಾಶ್ವತ – ಜೀವಂತ ಲಕ್ಷಣಗಳು ಮಾತ್ರ ಎಂಥ ಸಂದರ್ಶಕನ ಮನವನ್ನೂ ಸೂರೆಗೈಯದಿರವು. ಅಭಿಮಾನ ಆನಂದಗಳ ಆವಿರ್ಭಾವವಾಗದಿರದು. · ಏನೂ ಅರಿಯದ ಕುರುಬ ಅಲ್ಲಿಯ ಹಚ್ಚ ಹಸಿರು ಮುರಿಯುವ ಗುಡ್ಡಗಳಲ್ಲಿ ಆಗೀಗ ರಾಣಿಯ ಬಗೆಗಿದ್ದ ಲಾವಣಿಗಳನ್ನು ಉತ್ಸಾಹದಿಂದ ಗುಣಗುಣಿಸುವುದು, ದನಗಾಹಿ ಹುಡುಗ ಅವನ್ನೇ ಕೊಳಲಿಗೆ ಅಳವಡಿಸುವುದು, ಹಸಿರು ಮುಖಮಲ್ಲಿನ ವಿಸ್ತೃತ ನಿಸರ್ಗದುಡಿಯಲ್ಲಿ ದನಗಳು ನಿಶ್ಚಿಂತ ನೋಡುತ್ತಿರುವುದು ಘಿಲ್ ಘಿಲ್ ಸದ್ದಿನೊಡನೆ ಚಿಮಣಿಎಂಣೆಯ ದೀಪದ ಮಂದ ಪ್ರಕಾಶದ ಇರುಳು ಎತ್ತಿನ ಬಂಡಿ ಸಾಗಿರುವದು, ಕಟ್ಟಿಗೆಯ ರಂಟೆಯ ಸಂಸಾರದಲ್ಲಿ ನೇಗಿಲಯೋಗಿ ತನ್ಮಯತೆ ತಳೆದಿರುವುದು, ಸಂತೆಗಾಗಿ ಸುತ್ತುಮುತ್ತಲಿನ ಹಳ್ಳಿಯವರ ಸಂದಣಿ, ಮಣ್ಣಿನ ಮನೆ ಹಾಗೂ ಚಪ್ಪರದ ಗುಡಿಸಲು'—ಮೊದಲಾದ ಸಂಗತಿಗಳು ಕಿತ್ತೂರಿನ ಸಿರಿ ಹೆಚ್ಚಿಸಿವೆ—ಎಂದು ಲೇಖಕರು ಕುಶಲ ಚಿತ್ರಕಾರನಂತೆ ರೂಪಿಸುವಾಗ, ಕಾವ್ಯಲೋಕದಲ್ಲಿಯೇ ನಾವು ವಿಹರಿಸುತ್ತಿರುವೆವೆಂಬ ಅರಿವಾಗುವದು. ಐತಿಹಾಸಿಕ ಪ್ರಮಾಣಗಳ ವಿವರಣೆಯಲ್ಲಿ ಪತ್ರಿಕಾ ವ್ಯವಸಾಯಿಯ ಕೈಚಳಕ ಗೋಚರವಾದರೆ, ಕಿತ್ತೂರಿನ ಸಂಗ್ರಾಮ ಚಿತ್ರಣದಲ್ಲಿ ಇತಿಹಾಸಕಾರನ ಶ್ರದ್ಧೆ ಪರಿಶ್ರಮವೃತ್ತಿ, ಸಂಶೋಧಕ ಮನಸ್ಸು ವ್ಯಕ್ತವಾಗುವುವು.

ಏನೇ ಆದರೂ ಕುತೂಹಲ ಕೆರಳಿಸುವ, ಅಭಿಮಾನ ಜಾಗೃತವಾಗಿಸುವ ಇಂತಹ ಒಂದೆರಡು ಗ್ರಂಥ ನಿರ್ಮಿತಿಯಿಂದ ತೃಪ್ತರಾಗದೆ ಶ್ರೀ. ಶ್ರೀಧರ ತೇಲಕರರು ಅಖಂಡ ಕರ್ನಾಟಕದ ಸಮಗ್ರ ಐತಿಹಾಸಿಕ ಸಂಪತ್ತನ್ನು ಜನತೆಗೆ ಒದವಿಸಿಕೊಡಲಿ ಎಂದು ನಮ್ಮ ಹಿರಿಯಾಶೆ.

—ಎನ್. ಎಸ್. ಗದಗಕರ

ಸಾಹಿತ್ಯವಿಮರ್ಶೆಯ ಶಿಕ್ಷಣರಂಗ

ಸಪ್ಟಂಬರ್ ಸಂಚಿಕೆಯಲ್ಲಿ ಅಪೇಕ್ಷಿಸಿದಂತೆ, ಮೆಚ್ಚುಗೆಯ ಹೊಸ ಕಾದಂಬರಿಯನ್ನು ಕುರಿತು— ಎರಡು ತಿಂಗಳ ಅವಧಿಯನ್ನು ಕೊಟ್ಟರೂ— ಮೂರೇ ಮೂರು ಜನರಿಂದ ವಿಮರ್ಶೆಗಳು ಬಂದುದು, ಆಶ್ಚರ್ಯ ಮತ್ತು ವಿಷಾದಗಳನ್ನು ಉಂಟುಮಾಡುವಂತಹದಾಗಿದೆ. ಈ ಉದಾಹರಣೆಯಿಂದ, ನಮ್ಮ ಜನರಲ್ಲಿ ಕಾದಂಬರಿಯನ್ನು ಓದುವವರೇ ಕಡಮೆಯೆಂದು ಭಾವಿಸಬಹುದೆ ? ಆದರೆ ಪ್ರತ್ಯಕ್ಷ ಪರಿಸ್ಥಿತಿಯು ಹಾಗಿಲ್ಲ. ಬಹು ಜನರು ಹೆಚ್ಚಾಗಿ ಕಾದಂಬರಿಗಳನ್ನೇ ಓದಲು ಬಯಸು-ತ್ತಾರೆ. ಎಂತಲೇ ಇಂದು ದಿನದಿನವೂ ಹೊಸ ಹೊಸ ಹೆಸರಿನ ಕಾದಂಬರಿಗಳು ಪ್ರಕಟವಾಗುತ್ತಲಿವೆ; ಪುಸ್ತಕಗಳ ಪೇಟೆ-ಯಲ್ಲಿ ಕಾದಂಬರಿಗಳ ಮಾರಾಟವೇ ಹೆಚ್ಚಾಗಿದೆ. ಮನೆಮನೆಯಲ್ಲಿಯೂ ಸ್ತ್ರೀ-ಪುರುಷ ವಾಚಕರ ಕೈಯಲ್ಲಿ ಕಾದಂಬರಿ-ಗಳೇ ಕಾಣುತ್ತಿರುತ್ತವೆ. ವಿದ್ಯಾರ್ಥಿವರ್ಗವು ಕೂಡ ಪಠ್ಯಪುಸ್ತಕಗಳ ವಾಚನಕ್ಕಿಂತ ಕಾದಂಬರೀವಾಚನದಲ್ಲಿ ಹೆಚ್ಚಿನ ವೇಳೆಯನ್ನು ಕಳೆಯುತ್ತಾರೆ. ನಾಲ್ಕು ಜನ ಸಾಕ್ಷರರು ಸೇರಿದಲ್ಲೆಲ್ಲ " ಆ ಕಾದಂಬರಿ ಹೀಗೆ, ಈ ಕಾದಂಬರಿ ಹೀಗೆ ' ಎಂಬ ಚರ್ಚೆ-ವಿಚರ್ಚೆಗಳನ್ನು ನಡೆಸುತ್ತಾರೆ. ಇದರ ಮನವರಿಕೆಯಿಂದಲೇ ನಾವು ನಮ್ಮ ಶಿಕ್ಷಣರಂಗದಲ್ಲಿ ಹೊಸ ಕಾದಂಬರಿಯ ವಿಮರ್ಶೆಗೆ ಅವಕಾಶವನ್ನು ಕಲ್ಪಿಸಿಕೊಟ್ಟೆವು. ಇದರ ಪರಿಣಾಮವೆಂದರೆ ಕೇವಲ ನಿರಾಶೆ

ಯಾವುದೇ ಕೃತಿಯ ವಿಮರ್ಶೆಯ ಹರಟೆಯನ್ನು ಬರೀ ಹವೆಯಲ್ಲಿ ಹಾರಾಡಿಸುವುದರಿಂದ ನಮ್ಮ ಸಾಹಿತ್ಯಕ್ಕೆ ವಿಧಾಯಕ ಸೇವೆಯನ್ನೇನೂ ಸಲ್ಲಿಸಿದಂತಾಗುವುದಿಲ್ಲ. ತಾವು ಓದಿದ ಕೃತಿ ತಮಗೆ ಹೇಗೆ ಒಪ್ಪಿಯಿತೆನಿಸಿತೆಂಬುದನ್ನು ಸಪ್ರ-ಮಾಣ ವಿವೇಚನೆ-ವಿವರಣೆಗಳೊಂದಿಗೆ ವಿಮರ್ಶೆಗಳನ್ನು ಬರೆಯುವುದರಿಂದ, ಆ ಕೃತಿಕಾರನಿಗೂ ಹಿತ; ವಾಚಕವರ್ಗಕ್ಕೂ ಹಿತ. ಅಲ್ಲದೆ ತಮ್ಮ ವೈಯಕ್ತಿಕ ಅಭಿರುಚಿ-ಉಪಜ್ಞತೆಗಳನ್ನು ಒಳಗೆ ಹೆಚ್ಚಿಕೊಳ್ಳುವುದಕ್ಕೂ ಅನುಕೂಲವಾಗುವುದು. ಸುಸಂಸ್ಕೃತ ಜನಾಂಗದ ಒಂದು ಮುಖ್ಯ ಲಕ್ಷಣವೆಂದರೆ, ಆ ಆ ಪ್ರದೇಶದಲ್ಲಿ ನಿರ್ಮಿತವಾದ ವಿಮರ್ಶಕ ಸಾಹಿತ್ಯ. ಕನ್ನಡ ನಾಡಿನಲ್ಲಿ ವಿಮರ್ಶಕ ಸಾಹಿತ್ಯದ ಕೊರತೆ ತುಂಬ ಇದೆಯೆಂಬುದನ್ನು ನಮ್ಮ ತರುಣ ಸಾಹಿತ್ಯಿಕರು ಅವಶ್ಯವಾಗಿ ಲಕ್ಷ್ಯಕ್ಕೆ ತಂದುಕೊಳ್ಳಬೇಕು; ಈ ಕೊರತೆಯ ನಿವಾರಣೆಗಾಗಿ ಮುಂದೆ ಬರಬೇಕು.

ಈ ಸಲ ವಿಮರ್ಶೆ ಕಳುಹಿದವರು

೧. ಶ್ರೀ. ಗೋಪಾಲಕೃಷ್ಣ ಹೆಗಡೆ ಕೇರಿಮನೆ (ಉ. ಕ.); ಇವರು ಶ್ರೀ ಅ ನ. ಕೃಷ್ಣರಾಯರ ' ಅಗ್ರ-ತಾಂಬೂಲ ' ಎಂಬ ಕಾದಂಬರಿಯನ್ನು ಕುರಿತು ವಿಮರ್ಶೆ ಬರೆದಿದ್ದಾರೆ.

೨. ಶ್ರೀ. ಕೆ. ಎಸ್. ಕಮರ್ಾ, ಕಾಸರಗೋಡು (ದ. ಕ.) ಇವರು ಶ್ರೀಮತಿ ' ತ್ರಿವೇಣಿ ' ಅವರು ಬರೆದ ' ಕಂಕಣ ' ಎಂಬ ಕಾದಂಬರಿಯ ವಿಮರ್ಶೆ ಕಳುಹಿದ್ದಾರೆ.

೩. ಶ್ರೀ. ಆರ್. ಜಿ. ಕುಲಕರ್ಣಿ ಬಿ. ಎ. (ಆನರ್ಸ್), ಧಾರವಾಡ ಇವರು ಶ್ರೀ. ನೇಂ. ಮು. ಜೋಶಿ-ಯವರ ' ಸಮರಸೌದಾಮಿನಿ ' ಎಂಬ ಕಾದಂಬರಿಯನ್ನು ವಿಮರ್ಶೆ ಮಾಡಿದ್ದಾರೆ.

ಇದ್ದುದರಲ್ಲಿಯೆ ಸಂತೋಷದ ಸಂಗತಿಯೊಂದೆಂದರೆ, ಮೂವರ ವಿಮರ್ಶೆಗಳೂ ಉತ್ತಮವಾಗಿವೆ. ಅದರಲ್ಲಿಯೂ ಶ್ರೀ. ಆರ್. ಜಿ. ಕುಲಕರ್ಣಿ ಮತ್ತು ಶ್ರೀ. ಕೆ. ಎಸ್. ಕರ್ಮಾ ಅವರ ವಿಮರ್ಶೆಗಳು ಮೇಲಿನ ಮಟ್ಟದುವು-ಗಳಾಗಿವೆ. ಆದುದರಿಂದ, ಈ ಎರಡೂ ವಿಮರ್ಶೆಗಳನ್ನು ಜಯಂತಿಯಲ್ಲಿ ಪ್ರಕಟಿಸಲಾಗುವುದು. (ಈ ಸಲ ಒಂದನು ಪ್ರಕಟಿಸಲಾಗಿದೆ).

ಮುಂದಿನ ಸಂಚಿಕೆಯ ವಿಮರ್ಶೆಯ ಮೇಲಾಟಕ್ಕಾಗಿ, ಈ ಸಂಚಿಕೆಯಲ್ಲಿ ಪ್ರಕಟವಾದ ' ವನ್ಯಮೃಗ-ಪಕ್ಷಿ ಸಂಕುಲ ' ಎಂಬ ಪ್ರತಿಚಿತ್ರವನ್ನಾಗಲಿ, ' ದೇವರ ಸಾನ್ನಿಧ್ಯಕ್ಕೆ ' ಎಂಬ ಕಥೆಯನ್ನಾಗಲಿ ತೆಗೆದುಕೊಳ್ಳಬೇಕು.

—ಸಂಪಾದಕರು

ಸಮರ ಸೌದಾಮಿನಿ

ಶ್ರೀ. ಆರ್. ಜಿ. ಕುಲಕರ್ಣಿ, ಬಿ. ಎ. (ಆನರ್ಸ), ಧಾರವಾಡ

ಶ್ರೀ. ವೆಂ. ಮು. ಜೋಶಿಯವರ " ಸಮರ ಸೌದಾಮಿನಿ "ಯು ರಜತರಂಗದಲ್ಲಿ ಮಿಂಚಾಗಿ ಸಂಚಲಿಸಬೇಕಾದ ಜೀವಂತಕೃತಿ; ಬರಿ ಓದಿ ಅರಿಯಬೇಕಾದ ಸಾಮಾನ್ಯ ಕಾದಂಬರಿಯಲ್ಲ. ಅಲ್ಲಿ ಕಣ್ಣಿನ ಕೌತುಕವು ಕಾತರತೆಯಾಗಿ, ಕಾತರತೆ ದಿಙ್ಮೂಢತೆಯಾಗುವುದು. ಆ ದಿಙ್ಮೂಢತೆಯಲ್ಲಿ ಭಯವಿಹ್ವಲತೆ, ಪ್ರಕೃತಿರಮ್ಯತೆ, ಅನುರಾಗದ ಅನುಕಂಪಗಳು ತರಂಗ-ತರಂಗಗಳಾಗಿ ಸುಳಿಯುವುವು. ರಜತರಂಗದ ತಂತ್ರಕ್ಕೆ, ಅದನ್ನು ನೋಡುವ ಪ್ರೇಕ್ಷಕವರ್ಗಕ್ಕೆ ಇಷ್ಟೊಂದು ಪರಿಪೂರ್ಣ ರೀತಿಯಲ್ಲಿ ಮನ ಹಿಡಿಯುವಂಥ ಕಥಾಸಂವಿಧಾನವಿದ್ದ ಕನ್ನಡ ಕಾದಂಬರಿ, ಸಧ್ಯದ ಮಟ್ಟಿಗಂತೂ ಇದೊಂದೇ. ಹಿಂದೀ ಚಿತ್ರಪ್ರಪಂಚವನ್ನು ಬಿಟ್ಟರೆ, ಕನ್ನಡ ಜನತೆ, ಕನ್ನಡ ಸಾಹಿತ್ಯ. ಇದುವರೆಗೆ ಕಂಡಿರದ ತೀರ ಅಪರಿಚಿತ ಪರಿಸರವಿಲ್ಲಿದೆ. ಕನ್ನಡ ನೆಲದ ಹೃದಯ ಮಲಾಯದ ಕಗ್ಗಾಡಿನಲ್ಲಿ, ವಿಚಿತ್ರ ಸನ್ನಿವೇಶಗಳಲ್ಲಿ, ರಬ್ಬರು ಗಿಡಗಳ ದಟ್ಟ ಛಾಯೆಯಲ್ಲಿ, ಮೊಸಳೆದುಂಬಿದ, ಸೂರ್ಯ ಪ್ರಕಾಶ ಕಾಣದ, ಕಪ್ಪಗಿನ ನೀರಿನ ಸರೋವರಗಳ ದಂಡೆಯಲ್ಲಿ ಸಂಚರಿಸುತ್ತಿದೆ. ಇಂಫಾಲದಿಂದ, ರಂಗೂನ—ಮಂಡಾಲೆಗಳನ್ನು ದಾಟಿ, ಮಲಯಾದ ಪೂರ್ವ-ಪಶ್ಚಿಮ ಕರಾವಳಿಯ ನಾನಾ ಪಟ್ಟಣಗಳಲ್ಲಿ ಕಥಾಸಂಚಾರವಿದೆ. ಎರಡನೆಯ ಮಹಾಯುದ್ಧದ ಕಗ್ಗತ್ತಲೆ ಹರಿಯುವ ಮುಂಬೆಳಗು ಅದು. ಸುಭಾಷಚಂದ್ರ ಬೋಸರ ಆಜಾದ್-ಹಿಂದ್ ಫೌಜಿನ ಹೃದಯದ್ರಾವಕ ಪತನ-ಬಲಿದಾನಗಳ ಹಿನ್ನೆಲೆ, ಜಪಾನಿಯರ ಬಾಂಬಿನ ಬೆಳಕು, ಜಿಟಿಜಿಟಿ ಮಳೆ, ಸಾಯುವರ ಚೀರಾಟ, ಕೊಲ್ಲುವವರ ಕೂಗಾಟ ಈ ಭೀಕರ ಸನ್ನಿವೇಶಗಳಲ್ಲಿ ಧಾರವಾಡದ ಮಂಗಳವಾರಪೇಟೆ, ದತ್ತಾತ್ರೇಯ ದೇವಾಲಯ, ನವರಾತ್ರಿಯ ಲಕ್ಷ್ಮೀನಾರಾಯಣನ ಗುಡಿಯ ಜಾತ್ರೆ, ಕಿಲ್ಲೆಯೊಳಗಿನ ದುರ್ಗಾದೇವಿಯ ಗುಡಿ, ರಾಯರ ಮಠ, ವಿಠೋಬದೇವರ ಗುಡಿ, ಕಾಮನ ಕಟ್ಟೆಯ ದೇಶಪಾಂಡೆಯರು, ಇವರೆಲ್ಲಾ ಮಿಂಚಿನಂತೆ ಮೂಡುತ್ತಾರೆ. ಯಾವ ಸಂಬಂಧ ? ಎಂಥ ಸಂಪರ್ಕ ? ಎಲ್ಲವೂ ರೋಮಾಂಚಕಾರಿ! ವಿಧಿಯ ಕಂಚು-ಮಿಂಚಿನಂಥ ವಿಚಿತ್ರಲೀಲೆ ! ಜಪಾನಿಯರ ರಾಕ್ಷಸ ಕಾರ್ಯದ ಹಿನ್ನಡೆ, ಆಜಾದ್‌ಹಿಂದ್ ಫೌಜಿನ ದುರಂತ ಯಜ್ಞ, ಪಾಶ್ಚಾತ್ಯರ ಪುನರ್ವಿಜಯಗಳು ಹಳೆಯ ಶಕ್ತಿಗಳು. ಇವುಗಳಿಗೆ ಅಣುಬಾಂಬಿನ ಸ್ಫೋಟ, ಮಲಾಯದ ಕಮ್ಯುನಿಸ್ಟ ಕ್ರಾಂತಿಕಾರರ ಬೆಂಕಿಯಂತಹ ಚಲನವಲನಗಳೂ ಕೂಡಿವೆ. ಈ ಎಲ್ಲ ಹಳೆ ಹೊಸ ವಿಚಿತ್ರ ಭಯಾನಕ ಶಕ್ತಿಗಳ ಆಘಾತದ ಕೆಳಗೆ, ಮಲಯಾದ ಮೂಲ ನಿವಾಸಿಗಳ ಅಲಸ್ಯ, ನಿತ್ರಾಣ, ದಾಸ್ಯಜೀವನ ನಡೆದಿದೆ. ಅವರ ಮೇಲೆ ಪ್ರಭುತ್ವ ನಡೆಸಿ ಸುಲಿಯ ಬಯಸಿದ ಯುರೋಪಿಯನ್ ವಲಸೆಗಾರರು, ವಿಲಾಸಕ್ಕೆ ಮರುಳಾಗಿ ದರ್ಪದಿಂದ ಹುಚ್ಚೆದ್ದು ಕುಣಿವ ಸೈನಿಕರು ಇವರಜೊತೆಗೆ ಇಡಿ ಮಲಯಾದ ವ್ಯಾಪಾರವನ್ನೆಲ್ಲ ತಮ್ಮ ಕೈಯಲ್ಲಿ ಹಿಡಿದ ಚೀನೀಯರು ! ಪೋಲೀಸ್‌ಖಾತೆ, ಸರಕಾರಿ ಕಚೇರಿಯ ಕಾರಕೂನ್ ಜಾಗೆ ಇವನ್ನೆಲ್ಲಾ ವ್ಯಾಪಿಸಿನಿಂತ ಭಾರತೀಯರು ! ಟ್ಯಾಕ್ಸಿಡ್ರಾಯ್‌ವ್ಹರರಾದ ಶೀಖರು. (ಸಿಂಗಾಪುರದಲ್ಲಿ) ಅದೊಂದು ನಿಜವಾಗಿಯೂ ವಿಚಿತ್ರ ಗೊಂದಲಪುರ !

ವಿಲಕ್ಷಣಕಾಲ, ಅಭೂತಪೂರ್ವ ಸನ್ನಿವೇಶ, ಚಿತ್ರ-ವಿಚಿತ್ರ ಜನಾಂಗಗಳ ಗೊಂದಲಮಯ ಸಂಕರ! ಈ ಸಂಕರವು ಸಾಮರಸ್ಯವಾಗಿ ಪರಿಣಮಿಸೀತೆ ? ಎಲ್ಲಿ ನೋಡಿದಲ್ಲಿ ಅವಿಶ್ವಾಸ, ವಂಚನೆ! ಎಲ್ಲಿ ನೋಡಿದಲ್ಲಿ ಅನಾಗರಿಕ ಕ್ರೌರ್ಯ, ವಿಜ್ಞಾನದ ರಾಕ್ಷಸೀ ರಿಂಗಣ ! ಇದರಲ್ಲಿ ಮಾನವೀಯತೆ ಎಲ್ಲಿಯಾದರೂ ಮಿಂಚೀತೆ ? ಈ ವಿರಸದ ವಿಕೃತಿಯಲ್ಲಿ ಸಮರಸದ ಸುಕೃತಿ ಎಂದಾದರೂ ಮಿನುಗೀತೆ ? ಶ್ರೀ. ವೆಂ. ಮು. ಜೋಶಿಯವರು ಒಂದು ಮಿಂಚನ್ನು ಕಂಡಿದ್ದಾರೆ. ಅವಳೇ ' ಸಮರ ಸೌದಾಮಿನಿ ' ! ! ಮಾನವನ ಪೌರುಷದ ಕೆಚ್ಚೆಲ್ಲ ಸೀಳಿಹೋಗುವ ಕಾಲವದು ಸೈನಿಕ ಸಾಮರ್ಥ್ಯದ ವಜ್ರಕವಚದ ಒಳಗೆ ಇರುವುದಾದರೂ ಏನು ? ನಿಜವಾಗಿಯೂ ಒಂದು ಬೆಣ್ಣೆಯ ಮುದ್ದೆ. ಉಳಿದುದೆಲ್ಲ ವಿಭ್ರಮ ! ಉದ್ರೇಕ ! ಉನ್ಮಾದ ! ಈ ಒಳಗುಟ್ಟನ್ನು ಈ ಕಾಲ ತೆರೆದು ತೋರಿಸಿದೆ ... ಅದರ ಪ್ರತೀಕವೇ— ಅನಂತ.... ' ಸಮರ ಸೌದಾಮಿನಿಯ ' ನಾಯಕ ! ಆ ಸೌದಾಮಿನಿ ಒರ್ವ ಚೀನೀ ಕುಮಾರಿ ! ...ಚುಯಮಿಂಗ್ ! ಅವಳು ಹೆಣ್ಣು ನಿಜ. ಸುಕುಮಾರಜೀವವೂ ಅಹುದು. ಸುಸಂಸ್ಕೃತ ಹೃದಯ ಇದೆ. ಅಂತರಂಗವನ್ನೇ ಒಂದು ಪ್ರಶಾಂತ ಸಂಭ್ರಮದಿಂದ ಕಂಪಿಸುವಂತೆ ಮಾಡುವ ಶುದ್ಧಪ್ರೇಮ, ಕಾಂತಿ, ತಾರುಣ್ಯ ಇವೆ. ಆದರೆ ಅವಳು ನಿಜದಲ್ಲಿ ಸೌದಾಮಿನಿ ! ಮಿಂಚಿನಂತಹ ಜೀವ ಅವಳದು—ಒಂದೇ ಮಾತಿನಲ್ಲಿ ಹೇಳಬೇಕೆಂದರೆ–ವಜ್ರಕೋಮಲತೆ ! ವಜ್ರಕವಚದಲ್ಲಿಯ ಬೆಣ್ಣೆಯಂತಹ ಹೃದಯ ಅನಂತನದಾದರೆ, ಕುಸುಮ ಕೋಮಲ ಆಕಾರದಲ್ಲಿಯ ವಜ್ರವ್ಯಕ್ತಿತ್ವ ಚುಯಮಿಂಗಳದು ! ಒಂದು ಜೀವ, ಧಾರವಾಡದಿಂದ ಮಹಾಪೂರದೊಳಗಿನ ಮೀನ ತೇಲಿದಂತೆ ತೇಲಿ ಮಲಯಾಕ್ಕೆ ಬಂದು, ಈ ಚೀನೀ ಸೌದಾಮಿನಿಯನ್ನು ಸಂಧಿಸುತ್ತದೆ. ಮಹಾಯುದ್ಧದ ಹೆಬ್ಬೇಗೆಯಲ್ಲಿ ಸಂಬಂಧಿಸಿದ ಸಾವಿರಾರು ಜೀವಿಗಳಲ್ಲಿ ಪರಸ್ಪರ ವಿದ್ವೇಷದ ದಳ್ಳುರಿಯೇ ಭಗ್ಗೆಂದು ಉಗ್ಗಿದರೆ, ಈ ಜೀವಗಳ ಸಂಪರ್ಕದಲ್ಲಿ ಸಮರಸದ ಮಿಂಚೇಕೆ ಸಂಚಲಿಸಬೇಕು ? ಒಂದು ಸೈನಿಕ ಗಂಡು ಒಂದು ಅಸಹಾಯ ಹೆಣ್ಣನ್ನು–ಸೋತಜನದ ದೀನ ಹೆಂಗುಸನ್ನು ಸಂಧಿಸಿದಾಗ ಆಗುವುದೇನು ?

" ಹಸಿದ ಹುಲಿಗೆ ಏನು ಸಿಕ್ಕರೂ ಸರಿಯೇ. ಅದರಲ್ಲಿ ನೀವು ಹೆಣ್ಣು — ಇಲ್ಲಿಯೇ ನಿಮ್ಮ ಹೆಣ ಮಲಗಬಹುದು—ಗುಂಡಿನಿಂದಲ್ಲ– ಗಂಡಿನಿಂದ ! "

ಆದರೆ ಅನಂತ 'ಗಂಡಾಗಿ' ಚುಯುಮಿಂಗಳನ್ನು ಸಂಧಿಸಲಿಲ್ಲ. ಸುಸಂಸ್ಕೃತ ಮಾನವನ ಸುಕುಮಾರ ಮೂರ್ತಿಯಾಗಿ ಸಂಧಿಸಿದ! ಎಂದರೆ ಆತ ಕಾಮನನ್ನು ಗೆದ್ದ ದೇವತೆಯಲ್ಲ; ಆದು ತನ್ನನ್ನು ಪಶುವನ್ನಾಗಿಸದಂತೆ ನಿಯಂತ್ರಿಸಿಕೊಂಡ ಮಾನವಮಾತ್ರ! ಮಹಾಯುದ್ಧದ ವಿರಸದ ಘೋರ ವಿಕೃತಿಯಲ್ಲಿ, ಕಾಮದ ಪೈಶಾಚ್ಯ ಕುಣಿತದಲ್ಲಿ ಆತನ ವ್ಯಕ್ತಿತ್ವ ದೇವತಾರೂಪವಾಗಿಯೇ ಕಂಡರೆ ಆಶ್ಚರ್ಯವಲ್ಲ. ಚುಯುಮಿಂಗಳಿಗೆ ಆತ ಕಂಡದ್ದು ಹೀಗೆ! ಅವಳ ಹೃದಯವನ್ನಾತ ಗೆದ್ದ; ಅವಳ ಇನಿಯನಾದ; ಅವಳ ಸ್ವಾಮಿಯಾದ!

ಅನಂತನ ವ್ಯಕ್ತಿತ್ವವನ್ನು ರೂಪಿಸಿದವಳು ಆವನ ತಾಯಿ! ಆಕೆ ಪತಿಯಿಂದ ದೂರವಾಗಿ—ಅಥವಾ ಅವಳ ಪತಿ ಅವಳಿಂದ ದೂರವಾದದ್ದರಿಂದ—ಕೊರಗಿ ತಪಿಸುತ್ತಿರುವ ಹಿಂದೂ ಹೆಣ್ಣುಮಗಳು. ಅವಳಿಗೆ ಮಗನ ಮುದ್ದುಮುಖವನ್ನು ಬಿಟ್ಟರೆ, ಬಾಳಿನಲ್ಲಿ ಬೇರೆ ಆಶೆಯಿಲ್ಲ! ಇದ್ದರೆ ಪತಿ ಮರಳಿ ಬರುವ ಆಶೆಯೊಂದಿದೆ. ಅವಳ ಪತಿ ಶೇಷವರಾಯರು, ಧಾರವಾಡದಲ್ಲಿ ಒಂದು ಇಂಗ್ಲಿಷ್ ಶಾಲೆಯ ಮಾಸ್ತರರಾಗಿದ್ದರು. ವಿಲಾಸಕ್ಕೆ ಬಿದ್ದು ಆಸ್ತಿಯನ್ನು ಕಳೆದುಕೊಂಡು, ಸಾಲದಲ್ಲಿ ಸಿಕ್ಕು, ಪರಾಭವದ ಅಪಮಾನಿತರಾಗಿ ನಾಡ ನೆಲವನ್ನೇ ಬಿಟ್ಟು ಮಲಯಾಕ್ಕೆ ಓಡಿ ಹೋದವರು. ಪತ್ನಿಯನ್ನು ಬಿಟ್ಟು ಹೋದವರೂ ಪತ್ನಿಯ ಬಗೆಗಿನ ಪ್ರೇಮ ಬಿಟ್ಟಿರಲಿಲ್ಲ. ಅವಳ ನೆನಹು ಅವರ ಕರುಳಿಗೆ ಕಿಚ್ಚಿಡುತ್ತಿತ್ತು. ಅಂತಹ ದೇವಿಗೆ ತಾವು ಅಯೋಗ್ಯರೆಂದು ಆತ್ಮಭರ್ತ್ಸನೆ ಮಾಡಿಕೊಳ್ಳುತ್ತಿದ್ದರು. ಮಲಯಾದಲ್ಲಿ ಹೋದಾಗ ಅಲ್ಲಿಯ ಒಂದು ಅಸಹಾಯ ಹೆಣ್ಣುಜೀವಕ್ಕೆ ಆಸರೆಯಾಗಿ ನಿಂತು, ಕೊನೆಗೆ ಅವಳನ್ನು ಮದುವೆಯಾದರು. ಅವಳೇ ಚುಯುಮಿಂಗಳ ತಾಯಿ! ಆದರೆ ಶೇಷವರಾಯರ ಮಗಳು ಚುಯುಮಿಂಗಳಲ್ಲ. ಚುಯುಮಿಂಗಳ ತಾಯಿಗೆ ಶೇಷವರಾಯರು ದ್ವಿತೀಯಪತಿ! ಹೀಗೆ ಜೀವನದ ವಾಸ್ತವ ನಾಟಕದಲ್ಲಿ ಲೇಖಕರು ತಮ್ಮ ಕಲೆಯ ನಾಟಕೀಯತೆಯನ್ನು ಬೆರಸಿದ್ದಾರೆ. ಅನಂತನು ಚುಯುಮಿಂಗಳನ್ನು ಸಂಧಿಸಿದ್ದು ಸಿಂಗಾಪುರದಲ್ಲಿ! ಜಪಾನೀಯರ ಬಾಂಬುದಾಳಿ ನಡೆದಾಗ! ಇರುಳು ಬ್ಲ್ಯಾಕ್ ಔಟ್ ಆಗಿ, ಬಾಂಬಿನ ಬೆಂಕಿಯ ಬೆಳಕು ಮಾತ್ರ ಮಿಂಚುವಾಗ, ಬ್ರಿಟಿಶರು ತಮ್ಮ ಸೈನಿಕರನ್ನು ಬಿಟ್ಟು ಓಡಿಹೋದಾಗ, ಅನಂತ ಹಿಂದೆ ಉಳಿದ! ಆತ ತನ್ನ ತಂದೆಯನ್ನು ಹುಡುಕುವುದಕ್ಕಾಗಿ, ಹಿಂದುಸ್ಥಾನದ ಸೈನ್ಯದಡಿಯಲ್ಲಿ ಸೇರಿ ಸಿಂಗಾಪುರಕ್ಕೆ ಬಂದಿದ್ದ. ಅದು ಗೆಲುವಿನ ಸೈನ್ಯವೆ-ಸೋಲಿನ ಸೈನ್ಯವೆ [illegible]! ಆತ ಸಿಂಗಾಪುರದಲ್ಲಿ [illegible] ಕ್ಯಾಂಪ್ ಹಾಸ್ಪಿಟಲ್‌ನಲ್ಲಿ ಅಮ್ಯುನಿಶನ್ ಗಾರ್ಡ್ ಸ್ವಯಂಸೇವಕನಾಗಿ ಸೇವೆ ಮಾಡುತ್ತಿದ್ದಾಗ ದಾಳಿಯಾಯಿತು. ಆ ದಾಳಿಯಲ್ಲಿ ಅವನೂ [illegible] ಓಡಿಹೋಗುತ್ತಿದ್ದಾಗ, ಅವನಂತೆಯೇ ಓಡಿಹೋಗುತ್ತಿದ್ದ ಚುಯುಮಿಂಗಳನ್ನು ಕಂಡು, ಅವಳಿಗೆ ಸಹಾಯ [illegible], ಅವಳ ಗೌರವಕ್ಕೆ ಧಕ್ಕೆ ತಾರದೆ, ಅವಳ ಹೃದಯವನ್ನು ಗೆದ್ದ. ಮುಂದೆ [illegible] ಸೇನೆಯಲ್ಲಿ [illegible] ಕಾಲದಲ್ಲಿ [illegible] ಗುಂಡು ತಗುಲಿ [illegible] ಒಂದು [illegible] ಆಸ್ಪತ್ರೆಯಲ್ಲಿ (Casualty clearing sections) ಚುಯುಮಿಂಗಳ ಆರೈಕೆಗೊಳಗಾದ. ಪೂರ್ವದ ಸಂಗಮದ ನೆನಹು ಮರುಕೊಳಿಸಿದಾಗ ಪರಸ್ಪರರ ಹೃದಯ ಪುನಃ ಕೂಡಿ, ಮದುವೆಗೆ ಸಿದ್ಧರಾಗುತ್ತಾರೆ. ಈ ಸಲ ಅನಂತನಿಗೆ ಧೈರ್ಯ ಕೊಡುವವಳು ಚುಯುಮಿಂಗ್! ರಂಗೂನಿನಿಂದ ಅವಳು ಆತನನ್ನು ಕರೆದುಕೊಂಡು ಮಲಯಾಕ್ಕೆ ಬರುತ್ತಾಳೆ. ಅಲ್ಲಿ ಅವಳ ಸೋದರಮಾವ ಮೊಂಗಚಾಂಗ್, ಜೇಮ್ಸ್‌ನೆಂಬ ಇಂಗ್ಲೀಷ್ ತೋಟಗಾರನಬಳಿ ಮಡಿಯಲಿಕ್ಕಿದ್ದ. ಆತನ ಊರು, ಕೆ. ಕೆ. ಬಾರ್ರು. ಮಲಯಾದ ರಾಜಧಾನಿ ಕೋಲಾಲಂಪೂರದಿಂದ ೧೫ ಮೈಲು ದೂರದಲ್ಲಿರುವ 'ಕೋಲಾಕೋಬಾ ಬಾರ್ರು' ಎಂಬುದರ ಸಂಕ್ಷಿಪ್ತರೂಪ ಕೆ. ಕೆ. ಬಾರ್ರು. ಅನಂತ-ಚುಯುಮಿಂಗಳ ಸಂಗತ ಸೋದರ ಮಾವನ ಮನೆಗೆ ಬಂದಾಗ, ಅಲ್ಲಿ ಜೇಮ್ಸನ ಕೊಲೆಯಾಗಿ ಹೆಣ ಬೀಳುತ್ತಿದೆ. ಮಲಯಾದ [illegible] ಐರೋಪ್ಯರ ವಂಚನೆ, ಕಮ್ಯೂನಿಷ್ಟ ಕ್ರಾಂತಿಕಾರಿ ಮೊಂಗಚಾಂಗನ ವಿಲಕ್ಷಣ ವ್ಯಕ್ತಿತ್ವ, ಸ್ವದೇಶೀ ಅಸಹಾಯ ವ್ಯಕ್ತಿಗಳಿಗೆ ಆತ ತೋರುವ ಕರುಣೆ, ಯುರೋಪಿಯನ್ನರ ಬೆನ್ನಲ್ಲಿ ಇರಿದು ನಿಲ್ಲುವಂತಹ ಆತನ ಗುಪ್ತಚಾರವಳ, ಅವನ ಮಿಂಚಿನಂತಹ ಸಂಚಾರ—ಇವೆಲ್ಲ ಅನಂತನಿಗೆ ಹುಚ್ಚು ಹಿಡಿಸುತ್ತವೆ. ಕ್ಷಣಕ್ಷಣಕ್ಕೂ ತಾಯ ನೆನಹಿನಿಂದ ಕೊರಗುತ್ತಿದ್ದಾನೆ. ಇನ್ನು ಪ್ರತ್ಯಕ್ಷ ಹುಚ್ಚು ಹಿಡಿಯುವುದೊಂದು ಉಳಿದಿದೆ. ಈ ಅವಧಿಯಲ್ಲಿಯೇ ಒಂದು ಸಣ್ಣ ನಗುವಿನ ಪ್ರಸಂಗ—ಹುಲಿಯ ಬಾಯಲ್ಲಿ ಸಿಕ್ಕವನ ನಗುವಿನಂತೆ—ಬರುತ್ತದೆ. ಮೊಂಗ್‌ಚಾಂಗನ ಮಗಳು 'ಲೀ' ಅನಂತನನ್ನು ಕಾಮಿಸುತ್ತಾಳೆ. ಅದಕ್ಕಾಗಿ ಚುಯುಮಿಂಗಳನ್ನು ವೇಶ್ಯಾಲಯಕ್ಕೆ ಅಟ್ಟುತ್ತಾಳೆ. ಆದರೆ ಮಲಯಾದ ವೇಶ್ಯಾಲಯಗಳೆಲ್ಲ ಮೊಂಗ್‌ಚಾಂಗನ ಕ್ರಾಂತಿಯ ಗುಪ್ತಸ್ಥಳಗಳಾಗಿವೆ. ಅಲ್ಲಿಯ 'ಮಾಮ್' ಎಂಬವಳು ಚುಯುಮಿಂಗಳನ್ನು ಪುನಃ ಅನಂತನ ಸಂಗತ ಕೂಡಿಸುತ್ತಾಳೆ. ಆದರೆ ಈ ಬಾರಿ [illegible] ಅನಂತನು "[illegible]" [illegible], ಮೊಂಗ್‌ಚಾಂಗನ ಗುಪ್ತಚಾರ [illegible] ಕೈಕೊಳ್ಳಬೇಕಾಗುತ್ತದೆ: 'ಮ.-ಪಾ.ಜ.-ಸೇ.ಸಾ' [illegible] ಬ್ರಿಟಿಶ್ [illegible] ಕೇಂದ್ರದಲ್ಲಿ ಆತ [illegible] ಕೆಲಸ ಮಾಡುತ್ತಾನೆ. ಆದರೆ ಈ ಯಾತನೆ ಅವನಿಗೆ ಹುಚ್ಚು ತರುತ್ತದೆ. [illegible] ತಾಯಿಯ ನೆನಹು, ಕಮ್ಯೂನಿಸ್ಟರ ಭೀಕರ ಕ್ರಾಂತಿ, ಚುಯುಮಿಂಗಳ ಅಗಲಿಕೆ—ಇವೆಲ್ಲ ಕೂಡಿ, ಆತನ [illegible] ಕೆಡಿಸುತ್ತವೆ. ಕೊನೆಗೆ [illegible] ಬ್ರಿಟಿಶ್ [illegible] ಸೈನಿಕನೆಂದು [illegible] ಗುರಿಯಾಗುತ್ತಾನೆ. ಆದರೆ ಆಕಸ್ಮಾತ್ ಆತನಿಂದ 'ಮೊಂಗ್‌ಚಾಂಗ್' ಎಂಬ ಕಮ್ಯೂನಿಸ್ಟ [illegible] ಕೊಲೆಯಾಗುವುದರಿಂದ [illegible]. ಆತನನ್ನು [illegible] ಮೊಂಗ್‌ಚಾಂಗನ [illegible] ಆತನ ಕೊಲೆಯಿಂದ ಆತನಿಗೂ [illegible] ಆಗುತ್ತದೆ. ಕೊನೆಗೆ ಚುಯುಮಿಂಗಳ ಸಂಗತ ಕೂಡಿ ಅನಂತ ಹಿಂದುಸ್ಥಾನಕ್ಕೆ [illegible] ತಂದೆಯನ್ನು ಕಂಡು, ಚುಯುಮಿಂಗಳನ್ನು [illegible] ಅಧಿಕೃತ ಪತ್ನಿಯಾಗಿ ಗೆದ್ದು ಅವಳ ಸ್ವಾಮಿಯಾಗುತ್ತಾನೆ.

ಅನಂತ ಚುಯುಮಿಂಗಳ ಸ್ವಾಮಿಯಾದನೆ? ಚುಯುಮಿಂಗ್ ಅನಂತನ ಸ್ವಾಮಿನಿಯಾದಳೆ? ' ಸಮರ ಸೌದಾಮಿನಿ ' ನಾಯಕ-ಪ್ರಧಾನ ಕಾದಂಬರಿಯಲ್ಲ. ಅನಂತನ ಬಗೆಗೆ ಕರುಣೆ, ಚುಯುಮಿಂಗಳ ಬಗೆಗೆ ಗೌರವ, ಪ್ರೇಮ ಹುಟ್ಟುತ್ತವೆ. ಆದರೆ ಕಾದಂಬರಿ ನಿಜವಾಗಿಯೂ ಸನ್ನಿವೇಶಗಳ ಅಭೂತಪೂರ್ವತೆಯಿಂದ, ವಿಲಕ್ಷಣ ಅಪರಿಚಿತ ವಾತಾವರಣ, ಜನ, ಸಂಸ್ಕೃತಿಗಳಿಂದ ಓದುಗರ ಚಿತ್ತ ಹರಣ ಮಾಡುತ್ತದೆ. ಲೇಖಕರ ಪಾತ್ರಸೃಷ್ಟಿ ತೀರ ಸಹಜವಾಗಿದೆ. ಜೀವಂತ ವ್ಯಕ್ತಿಗಳು ಕಣ್ಮುಂದೆ ಬಂದು ನಿಲ್ಲುತ್ತಾರೆ. ಮೆಂಗ್-ಚಾಂಗನ ಭೀಕರವ್ಯಕ್ತಿತ್ವ, ' ಲೀ ' ಯಂತಹ ಕಾಡಿನ ಹುಲಿಯಂಥ ಹೆಣ್ಣುಮಗಳು, ಕ್ಯಾಥರಿನ್‌ಳಂಥ ಕಾಮುಕಿ ವೇಶ್ಯೆ, ಜೇಮ್ಸ್, ವ್ಯಾಟ್ಸನ್‌ರಂಥ ಆಂಗ್ಲ ವಿಲಾಸೀ ದರ್ಪಜೀವಿಗಳು, ಸಹಜ ಚೈತನ್ಯದಿಂದ ತುಂಬಿ ತುಳುಕುತ್ತಾರೆ ಈ ಸಹಜ ಜೀವಸೃಷ್ಟಿ ನಿಜವಾಗಿಯೂ ಹೃದಯಂಗಮವಾಗಿದೆ. ಚುಯುಮಿಂಗಳ ತಾಯಿಯ ಮಾತೃಹೃದಯ, ಕೇಶವರಾಯರ ಅನುತಾಪಪೂರ್ಣ ಜೀವ,— ಯಾರನ್ನೂ ನಾವು ಸಹಜವಾಗಿ ಮರೆಯಲಾರೆವು. " ಪೆಂಗ್‌ಯಾವ 'ನ ವ್ಯಕ್ತಿತ್ವವಂತೂ ಒಂದು ಅವ್ಯಕ್ತ ಮಿಂಚಿನಂತಿದೆ. ಆತನ ನೇರವಾದ ವರ್ಣನೆಯಿಲ್ಲ. ಆದರೆ ಮಲಾಯಾದ ತುಂಬ ಹರಡಿದ ಕ್ರಾಂತಿಜಾಲ, ಆತನ ನಿರ್ಭೀತ ಸರ್ವವ್ಯಾಪೀ ವ್ಯಕ್ತಿತ್ವ, ಭೀಕರ ಕಾರುಣ್ಯ, ಎಲ್ಲವೂ ಹೃದಯ ನಡುಗಿಸುವಂತಹವು! ಇವೆಲ್ಲವನ್ನೂ ಲೇಖಕರು ಒಂದೊಂದು ಚಿಕ್ಕ ಸನ್ನಿವೇಶಗಳನ್ನು ರಚಿಸಿ, ಒಂದೊಂದು ಚಿಕ್ಕ ಮಾತನ್ನು ಯಾರ ಬಾಯಲ್ಲೋ ಹೇಳಿಸಿ, ಅಷ್ಟಿಷ್ಟು ವರ್ಣನೆ ಮಾಡಿ ಸಾಧಿಸುತ್ತಾರೆ.

ಕಾದಂಬರಿಯ ಇಷ್ಟೆಲ್ಲ ಅಂಶಗಳನ್ನು ಇದ್ದಕ್ಕಿದ್ದಂತೆ ಹೇಳಿದ್ದರೆ ಯಾವ ಪರಿಣಾಮವಾಗುತ್ತಿತ್ತೋ ಹೇಳಲು ಬಾರದು. ಆದರೆ ಅದಷ್ಟೇ ಈ ಕಾದಂಬರಿಯನ್ನು ಚಲಚಿತ್ರಕ್ಕೆ ಅತ್ಯುತ್ತಮವಾದ ಕಲಾಕೃತಿಯನ್ನಾಗಿ ಮಾಡುತ್ತಿರಲಿಲ್ಲ. ಇದರ ಕಥಾಸಂವಿಧಾನದಲ್ಲಿದ್ದ ನಾಟಕೀಯತೆ ಅತ್ಯಂತ ಕುತೂಹಲಕಾರಿಯಾಗಿದೆ. ರೋಮಾಂಚಕಾರಿಯಾಗಿದೆ. ಪ್ರತಿಯೊಂದು ಪ್ರಕರಣದಲ್ಲಿ ಲೇಖಕರವೆಂದು ಬರುವ ಮಾತುಗಳನ್ನೆಲ್ಲ ಕ್ಯಾಮರಾದಿಂದ ಫೋಟೋ ತೆಗೆದುಕೊಳ್ಳಬಹುದು ಅಲ್ಲಿ ಬರುವ ಸಂಭಾಷಣೆ, ಚಲಚ್ಚಿತ್ರದ ಸಂಭಾಷಣೆಯಾಗುವುದು. ಸನ್ನಿವೇಶಗಳ ಮೇಲೆ ಸನ್ನಿವೇಶ, ಭಾವನೆಯ ಮೇಲೆ ಭಾವನೆ, ಕುತೂಹಲದ ಮೇಲೆ ಕುತೂಹಲ, ಮುಂದೇನಾಗುವುದೋ ಎಂಬ ಕಾತರತೆ, ಭೀತಿ, ಇವು ಓದುಗರನ್ನು— ಪ್ರೇಕ್ಷಕರಾದರೆ ಪ್ರೇಕ್ಷಕರನ್ನು— ದಂಗುಬಡಿಸುತ್ತವೆ ಕಾಳಗದ ಭೀಕರ ವಾತಾವರಣಕ್ಕಾಗಿ ಮೈ ನಡುಗಿದರೆ, ಅದರಲ್ಲಿಯೇ ಮಿಂಚಿದ ಸೌದಾಮಿನಿ ಚುಯುಮಿಂಗಳು ಅನಂತನನ್ನು ಉಪಚರಿಸುತ್ತಿರುವ ಪ್ರೇಮುಲ ಸನ್ನಿವೇಶ ನಮ್ಮ ಅಂತರಂಗವನ್ನು ಸೆಳೆಯುತ್ತದೆ. ಮುಂದೆ ಮಲಯಾದ ವಿಚಿತ್ರ ವಾತಾವರಣ, ಪಕ್ಷಿಮ ಕರಾವಳಿ. ಸಿಂಗಾಪೂರ, ಕುಲಾಲ್ಲಂಪುರ, ಇಪೋ, ಟಾಯ್‌ಪಿಂಗ್, ಪೆನಾಂಗ್, ಅಲ್ಲಿಯ ಸ್ನೇಕ್ ಟೆಂಪಲ್, ಕ್ಲಾಂಗ್ ಮುಂತಾದ ಪಟ್ಟಣಗಳು ಮಾನವನ ನಿರ್ಮಿತಿಯ ಹೊಸ ಮುಖಗಳು, ಪ್ರಕೃತಿ ರಮ್ಯತೆಯ ಹೊಸ ನೋಟಗಳು ಪ್ರೇಕ್ಷಕರನ್ನು ಬೇರೊಂದು ಲೋಕಕ್ಕೆ ಒಯ್ಯುತ್ತವೆ. ಪುನಃ ಮಾನವನ ಘೋರ ಜೀವನರಂಗ! ಕೆ. ಕೆ. ಬಾರ್ಲ್ಲಿನಲ್ಲಿ ಮೆಂಗ್ ಚಾಂಗನ ಮನೆಯಲ್ಲಿ ಜೇಮ್ಸನ ಹೆಣದ ದೃಶ್ಯ ಭಯಾನಕವಾಗಿದೆ. ಮನೋರಂಜನೆ ಬೇಡುವವರಿಗೆ— ವಿಲಾಸಕ್ಕೆ ಮನಸೋತ ಪ್ರೇಕ್ಷಕ ಹಾಗೂ ಚಿತ್ರ ನಿರ್ಮಾಪಕರಿಗೆ ಕೋಲಾಹಲಪೂರದ ಪಾಲಸ್ಟ್ರೀಟ— ವೇಶ್ಯಾನಾಟಕ — ಬಾಲ ಡ್ಯಾನ್ಸ್ ರೂಮ್ — ಕ್ಯಾಥರೀನಳಂಥ ನೃತ್ಯಾಂಗನೆ ಎಲ್ಲವೂ ಅನುಕೂಲವಿದೆ. ' ಡು ಸಾನ್ ತುವಾ ' ಎಂಬಲ್ಲಿ ಆಂಗ್ಲರು ತೆರೆದ ಸೈನಿಕ ತರಬೇತಿಯ ಗುಪ್ತ ಕೇಂದ್ರವು ಬೇರೊಂದು ಹೊಸ ದೃಶ್ಯವನ್ನು ನೀಡುತ್ತದೆ. ' ರಾಪ್ತಿಬ್ ' ' ಜರಾಂಟ್ ' ಹೊಳೆಗಳ ಭೀಕರ ಪ್ರವಾಹ. ಅವುಗಳಲ್ಲಿ ' ಫೇರಿ 'ಗಳ ಮುಖಾಂತರ ಬಸ್ಸುಗಳನ್ನು ಸಾಗಿಸುವ ನೋಟ ಈ ಚಿತ್ರದಲ್ಲಿಯ ಆಸಕ್ತಿಯನ್ನು ಅತ್ಯುತ್ಕಟಗೊಳಿಸುವಂಥವು ಕಾದಂಬರಿಯ ಕೊನೆ ಕೊನೆಗೆ ಬಂದಾಗಲಂತೂ ಲೇಖಕರು ತಮ್ಮ ವಿಲಕ್ಷಣ— ನಾಟಕೀಯ ಶಕ್ತಿಯಿಂದ ಓದುಗರ ಕುತೂಹಲ ಕೆರಳಿಸಿ ಕೊನೆಯವರೆಗೂ ಅವರ ಆಸಕ್ತಿಯನ್ನು ಕಾಯ್ದುಕೊಳ್ಳುತ್ತಾರೆ. ಅನಂತ ಚುಯುಮಿಂಗಳ ಸಂಗಕ್ಕಾಗಿ ಕಾತರಿಸಿದ್ದಾನೆ ಆದರೆ ಅವಳು ಅನಂತನು ಸರ್ವಸಂಕಟಗಳಿಂದ ಪಾರಾಗುವುದಕ್ಕಾಗಿ ದೇವರಲ್ಲಿ ಒಂದು ಹರಕೆಹೊತ್ತಿರುತ್ತಾಳೆ. ಪೆನಾಂಗ್‌ನಲ್ಲಿರುವ ಸರ್ಪದೇವತೆಯ (Snake temple) ದರ್ಶನ ಪಡೆಯುವವರೆಗೆ ಅನಂತನ ದೈಹಿಕ ಸಂಪರ್ಕ ಮಾಡುವುದಿಲ್ಲವೆಂದು ಅವಳ ಹರಕೆಯಿದೆ. ' ಲೀ ' ಅನಂತನಿಗೆ ತನ್ನ ದೇಹ ಒಪ್ಪಿಸಿದಳು; ಆದರೆ ಆತ ಅದನ್ನು ತಿರಸ್ಕರಿಸಿದ! ಇಲ್ಲಿ ಎರಡು ಹೃದಯಗಳು ಒಂದಾಗಿವೆ! ದೇಹ ಒಂದಿಲ್ಲ!! ಅನಂತನ ಕಾತರತೆ! ಚುಯುಮಿಂಗಳ ಸ್ಥೈರ್ಯ! ಅನಂತನ ಕಾತರತೆಗೆ ಪ್ರತಿಯಾಗಿ ಚುಯುಮಿಂಗಳ ' ಮಂದಹಾಸ! ' ಹಸುಗೂಸಿನ ಹಟವನ್ನು ತಾಯಿ ತಡೆದು ರಂಬಿಸುವಂತೆ ಅವಳು ಅನಂತನನ್ನು ರಂಬಿಸುತ್ತಾಳೆ: ' ಚುಯುಮಿಂಗ್, ಒಂದು ಸಲ ಅನಂತನ ಕೈಯನ್ನು ಅದುಮಿದಳು. ಅನಂತ ಕೇಳಿದ:

' ಚುಯುಮಿಂಗ್, ಈ ಏಕಾಂತವನ್ನು ಅರ್ಥಮಾಡಿಕೊಳ್ಳಲಾರೆಯಾ ... .. ? '

' ಕೇವಲ ಇನ್ನೆರಡು ದಿನ ತಡೆಯಿರಿ. ನನ್ನ ಹರಕೆ ಕೈಗೂಡಲಿ. '

' ನಾನು ದೊಡ್ಡ ತಪ್ಪು ಮಾಡಿದೆ. ಅಂದು ಲೀ ಹೀಗೆ ಕೇಳಿದ್ದಳು ಒಪ್ಪಿಕೊಂಡು ಬಿಡಬೇಕಿತ್ತೇನೋ ಎಂದೆನಿಸುತ್ತದೆ— ನಿನ್ನ ನಕಾರದ ಉತ್ತರ ಕೇಳಿ. '

' ಸಾಕುಬಿಡಿ. ಆ ವಾರ ಮೊದಲು ಬಂದಿರುವಿರಿ ಏನೋ ದೇವರ ದಯೆಯಿಂದ — ಆ ವಾರ ಮುಂಚಿತ ಮುಕ್ತತೆಯನ್ನು ದೊರಕಿಸಿದ್ದೇನೆ. ಬುದ್ಧನ ಕೃಪೆ ತಾಳಿದವನು ಬಾಳಿಯಾನು '

' ಇನ್ನು ಎರಡು ದಿನ ಅಂದರೆ ಎಲ ತಾಸು ದೀರ್ಘ ಅವಧಿ '

' ಕೇವಲ ಎರಡೇ ದಿನ '

ಹೀಗೆಯೇ ಹದಿ ನಡೆದು ಬೆಳಗಾಯಿತು. ಇಬ್ಬರೂ ಒಂದು ಸಲ ನಕ್ಕುಬಿಟ್ಟರು. ಚುಯುಮಿಂಗ್ ನಕ್ಕು ಕೇಳಿದಳು:

‘ಇನ್ನು ಕೇವಲ ೨೪ ತಾಸು ಮಾತ್ರ’

‘ಇನ್ನೂ ೨೪ ತಾಸುಗಳೇ?....’ ಎಂದು ಅನಂತ ಕೇಳಿದ.

ಈ ದಂಪತಿಗಳ ಕಳವಳ ಇಲ್ಲಿಗೆ ಮುಗಿಯಲಿಲ್ಲ. ಪೆನಾಂಗ್‌ನಲ್ಲಿ ದೇವರ ದರ್ಶನ ತೆಗೆದುಕೊಂಡು ಹರಕೆ ಮುಗಿಸಿ ಇನ್ನೇನು ಜೊತೆಗೂಡಬೇಕು, ಆಗ ಚುಯಮಿಂಗಳ ತಾಯಿಯ ತಾರು ಬರುತ್ತದೆ. ಕ್ಯಾಂಟನ್ನಕ್ಕೆ ಅವರು ಆಗಿಂದಾಗ ಹೋಗಬೇಕು. ಅವಳ ತಂದೆಗೆ ಮೃತ್ಯುಜ್ವರ ಬಂದಿದೆ. ಅವಳು ತನ್ನ ದುಃಖ ನುಂಗಿಕೊಂಡು ಅನಂತನಿಗಾಗಿ ಮರುಗುತ್ತಾಳೆ:

‘ಅನಂತ, ನನ್ನ ಮೇಲೆ ಕೋಪಿಸಿಕೊಳ್ಳಬೇಡ!’

‘ಕೋಪವೇತಕ್ಕೆ?’

‘ನಿನ್ನ ಇಚ್ಛೆ—ಬಹುದಿನದ ಇಚ್ಛೆ ಈಗಲಾದರೂ ನೆರವೇರಲಿಲ್ಲ’

‘ಹುಚ್ಚುಚ್ಚು ಮಾತಾಡಬೇಡ ನಾನು ಭಾರತೀಯ. ಒಬ್ಬರ ದುಃಖವನ್ನು ಅರ್ಥಮಾಡಿಕೊಳ್ಳುವ ಹೃದಯವಿದೆ’

ಇಲ್ಲಿ ಕುತೂಹಲ—ಕರುಣಾ ಮಿಶ್ರಿತ ಸನ್ನಿವೇಶವಿದೆ; ಇಷ್ಟೇ ಅಲ್ಲ. ಸಂಸ್ಕೃತಿಯ ಸುಕುಮಾರ ದೃಷ್ಟಿಯೂ ಇದೆ. ಇದರ ಕೊನೆಯ ಮುಖ ಚುಯಮಿಂಗಳ ತವರು ಮನೆಯಲ್ಲಿ ಬರುತ್ತದೆ ಅದೂ ಶೋಭನಪ್ರಸ್ಥದ ರಾತ್ರಿ! ಅವರೂ ದಂಪತಿಗಳು ಮೂಕರಾಗಿ ದೂರ ದೂರ ಕುಳಿತಿದ್ದಾರೆ. ಈ ಚಲ ಚುಯಮಿಂಗಳು ತನಗೆ ತಂಗಿಯಾಗಬೇಕೆಂಬುದಾಗಿ ತಿಳಿದುಕೊಂಡು ಅನಂತ ವಿಮೂಢನಾಗಿದ್ದಾನೆ. ಆದರೆ ಕೇಳಿಸಂತಾಯಿತು ಅನಂತನ ತಂದೆಯಿಂದಾದಂತೆ ಚುಯಮಿಂಗಳ ತಂದೆಯಿಲ್ಲ. ಅವಳ ತಾಯಿಯ ದ್ವಿತೀಯ ಪತಿ....ಈ ಮಾತನ್ನು ಅವಳ ತಾಯಿಯೇ ನಗುವ ಬಂದು ಹೇಳಿ ಈ ನವದಂಪತಿಗಳ ಸುಚ್ಛಸಂಕಟವನ್ನು ನಿವಾರಿಸುತ್ತಾಳೆ ‘ಚೂಯಾಂಗ್

ದಿ ನ್ಯಾಶನಲ್ ಮ್ಯುಜಿಕಲ್ ಹಾಲ್
ಧಾರವಾಡ

ಗಡಿಯಾರ, ಟಾರ್ಚು, ರೇಡಿಯೊ, ಗ್ರಾಮೊಫೋನ್ ಮಾರಾಟಮಾಡುವವರು, ರಿಪೇರಿ ಮಾಡುವವರು.

ನಂಬುಗೆಯ ಮಾಲು! ಪ್ರಾಮಾಣಿಕ ವ್ಯವಹಾರ

ಧಾರವಾಡದಲ್ಲಿ ಹಲವು ವರ್ಷಗಳಿಂದ ನಮ್ಮ ವ್ಯವಹಾರ ನಡೆದಿದ್ದು, ಗ್ರಾಹಕರ ವಿಶ್ವಾಸವನ್ನು ಗಳಿಸಿದೆ.

ಮಾಲೀಕರು: ಬಿ. ಜೆ. ಮುತ್ತಗಿ

ವಧೂವರರ ಜ್ಯೋತಿಷ್ಯ

ಕನ್ನಡದಲ್ಲಿಯೆ ಒಂದು ಹೊಸಪುಸ್ತಕ!

ಒಂದು ವಾರದಲ್ಲಿಯೇ ಬೆಳಕಿಗೆ ಬರಲಿರುವುದು.

ಲೇಖಕರು:— ಜ್ಯೋತಿಷಿ ಎನ್. ಕೆ. ಜೋಗಳೇಕರ

ಮದುವೆಗೆ ಮೊದಲು ವಧೂ-ವರರ ಸಲುವಳಿಯನ್ನು ಕೂಡಿಸಿ ನೋಡುವುದಕ್ಕೆ ಬೇಕಾಗುವ ಜ್ಯೋತಿಷ್ಯದ ಪ್ರತಿಯೊಂದು ಸಂಗತಿಯನ್ನೂ ವಿವರ-ವಿವರವಾಗಿ ಈ ಪುಸ್ತಕದಲ್ಲಿ ನಿರೂಪಿಸಲಾಗಿದೆ.

ಬೇಕಾದವರು ಕೂಡಲೆ ಬೇಡಿಕೆಗಳನ್ನು ಕಳುಹಿರಿ!

ಕ್ರಾ. ೩. ೮೦ ಪುಟಗಳು. ಬೆಲೆ ೭೫ ನ. ಪೈ.

ವ್ಯಾಪಾರಸ್ಥರಿಗೆ ಯೋಗ್ಯ ಕಮಿಶನ್ನು ಕೊಡಲಾಗುವುದು.

ಜ್ಯೋತಿಷಿ ಎನ್. ಕೆ. ಜೋಗಳೇಕರ

ಶಿವಾಜಿ ರೋಡ, ಮಂಗಳವಾರಪೇಟೆ, ಧಾರವಾಡ

(ಚುಯಮಿಂಗಳ ತಾಯಿ) ಮುಗುಳ್ನಗೆಯಿಂದೇಳುತ್ತ “ನಾವು ಹೋಗುವೆ. ಇನ್ನು ಇಲ್ಲದ ಹುಚ್ಚುತನ ಮಾಡಬೇಡಿ” ಎಂದು ಹೇಳಿ ಹೊರನಡೆದಳು. ಆವಳು ಹೊರಗೆ ಹೋದಾಕ್ಷಣ ಚುಯಮಿಂಗ್ ಎದ್ದು ಹೋಗಿ ಬಾಗಿಲಿಗೆ ಚಿಲಕಹಾಕಿ, ಅನಂತನ ಹತ್ತಿರಬಂದು ನಗುನಗುತ್ತ ಕೇಳಿದಳು:

“ಈಗಲಾದರೂ ಈ ಏಕಾಂತದ ಅರ್ಥಮಾಡಿಕೊಳ್ಳುತ್ತೀರಾ? ಅನಂತ ಮುಗುಳುನಗೆಯನ್ನೇ ನಕ್ಕು ದೀಪವನ್ನಾರಿಸಿದ. ಅಲ್ಲಿ ಪಸರಿಸಿದ ಗಾಢ ಕತ್ತಲೆ ಚುಯುಮಿಂಗ್-ಅನಂತರ ಜೀವನಕ್ಕೆ ಚಿರಂತನ ಬೆಳಕನ್ನು ನೀಡಿತು.

ಶ್ರೀ ವೆಂ. ಮು. ಜೋಶಿಯವರ ‘ಸಮುದ್ರದಾಚೆಯಿಂದ’ ಯಲ್ಲಿ ನಾವು ಭವ್ಯತೆಯನ್ನು ನಿರೀಕ್ಷಿಸುವುದಿಲ್ಲ. ಭವ್ಯತೆಯ ಹಿನ್ನೆಲೆಯಲ್ಲಿ ಎರಡು ಸುಕುಮಾರ ಹೃದಯಗಳು ತಮ್ಮ ಸಂಸ್ಕಾರದ ಸುಗಂಧವನ್ನು ಪರಸ್ಪರರಿಗೆ ನೀಡುವುದನ್ನು ಕಾಣುತ್ತೇವೆ. ಇವರ ಭಾಷಾಶೈಲಿಯಲ್ಲಿ ಕಾವ್ಯದ ಕಾವು ಇಲ್ಲ. ಆದರೆ ಅಕೃತ್ರಿಮ, ನೇರ ಗದ್ಯಶೈಲಿಯಿದೆ. ಅನುಭವದ ವಿಸ್ತಾರದ ಮೂಲಕ ವೈವಿಧ್ಯದ ಜೀವನಕ್ಕೆ ಹೊಸ ಕುರುಹು ಭಾಷಾಶೈಲಿಗೆ ಬಂದಿದೆ. ‘ಅಶೋಕ ಕಲಾ’ ದಂತಹ ಪ್ರಯೋಗ, “ಆಪಾ ಕಲಾ—(ಏನು ವಿಶಾಯಿತು?)” “ಟಿಡಾಕ್ ತಾಹು (ಏನೂ ಆಗಿಲ್ಲ)” ಎಂಬಂತಹ ಮಲಾಯಾ ಭಾಷೆ, ಅಲ್ಲದೆ ಇಂಗ್ಲೀಷ ಶಬ್ದಗಳು ಎಲ್ಲ ಸೇರಿ ನವ್ಯ ಧ್ವನಿಯನ್ನು ಹುಟ್ಟಿಸುತ್ತವೆ. ಕನ್ನಡದ ಪುಣ್ಯದಿಂದ ‘ಸಮುದ್ರದಾಚೆಯಿಂದ’ ಬರೆಯಲ್ಪಟ್ಟ ಪ್ರವಾಸ ಕಥೆ— ಇವು ಕ್ಷೇತ್ರದಲ್ಲಿ ಶಾಶ್ವತತೆಗಳನ್ನು, ಕಾಲದ ಧ್ವನಿಗಳನ್ನು ಬಿಟ್ಟಿರುತ್ತವೆ. ಆದರೆ ಅಂತಹ ಆಕೆ ಏಕೆ ದೊಡ್ಡದಾಗಿತ್ತೇ?

ಕರ್ನಾಟಕದಲ್ಲಿ ಭಾವಗೀತಗಾಯನ ಬೆಳೆಯಬೇಕಾಗಿದೆ!

ಹಾಡಲಿಕ್ಕೆ ಬರುವಂತಹ ಕವಿತೆಗಳೇ ನಮ್ಮಲ್ಲಿ ಇಲ್ಲವೆಂದು ಸಂಗೀತಗಾರರ ಆಕ್ಷೇಪಣೆ!

ಇದು ನಿಜವಾದ ಆಕ್ಷೇಪಣೆಯೆಂದು ನಂಬುವಿರಾ?

ನಿಜವಲ್ಲವೆಂಬುದರ ಪ್ರತ್ಯಕ್ಷ ಸಾಕ್ಷಿಗಳಾಗಿ

'ಆನಂದಕಂದ' ಅವರ ಈ ಗೀತಸಂಕಲನಗಳಿವೆ:

ಮುದ್ದನ ಮಾತು (ಶಿಶುಭಾವದ ಗೀತಗಳು)	೦—೧೨—೦
ಒಡನಾಡಿ (ನಲ್ವಾಡುಗಳು)	೧—೦—೦
ವಿರಹಿಣಿ (ತತ್ತ್ವರೂಪಕ ಗೀತಗಳು)	೧—೪—೦
ಕಾರಹುಣ್ಣಿವೆ (ವಿವಿಧ ಭಾವಗೀತಗಳು)	೨—೦—೦

ಕಾವ್ಯಪ್ರೇಮಿಗಳೂ ಸಂಗೀತಗಾರರೂ ಇವುಗಳನ್ನು ಒಮ್ಮೆ ಓದಿ ನೋಡಬೇಕು.

ಬೇಕಾದವರು ಕೆಳಗಿನವಿಳಾಸಕ್ಕೆ ಬರೆಯಿರಿ!

'ಜಯಂತಿ' ಕಾರ್ಯಾಲಯ, ಧಾರವಾಡ

Printed by N. A. Hoskeri at the Vijaya Press, Dharwar and published for the Proprietors Jayanti Publications, by K. S. Betgeri at the Jayanti Office, Dharwar

ಜಯಂತಿ

ಸಂಪುಟ ೨೦

ಸಂಚಿಕೆ ೭

೧೯೫೭ ಡಿಸೆಂಬರ್

ಜಯಂತಿಗೆ ಚಂದಾದಾರರಾಗಿರಿ!

ಜಯಂತಿಯಂತಹ ಸಂಸ್ಕೃತಿಪ್ರಚಾರಕ ಮಾಸಪತ್ರಿಕೆಯನ್ನು ಬಹುಕಾಲ ಬದುಕಿಸುವುದು ಕನ್ನಡ ಜನತೆಯ ಕರ್ತವ್ಯವಾಗಿದೆ.

*　*　*　*

ನಮ್ಮ ನಾಡಿನ ಪ್ರತಿಯೊಂದು ವಿದ್ಯಾಶಾಲೆಯೂ, ಪ್ರತಿಯೊಂದು ವಾಚನಾಲಯವೂ ಜಯಂತಿಯನ್ನು ಬರಮಾಡಿಕೊಳ್ಳಬೇಕು. ಹಿಂದಿನ ಕಾಲದ — ಕನ್ನಡ ಪ್ರದೇಶವನ್ನು ಒಳಗೊಂಡಿದ್ದ— ಎಲ್ಲ ಸರಕಾರಗಳೂ ಜಯಂತಿಗೆ ಮನ್ನಣೆಯನ್ನು ಕೊಟ್ಟಿದ್ದುವು.

ಮೈಸೂರು ಸರಕಾರದ ಡೈರೆಕ್ಟರ್ ಆಫ್ ಪಬ್ಲಿಕ್ ಇನ್‌ಸ್ಟ್ರಕ್ಷನ್ ಅವರ No. F. Dis. GL. 4250/48/49-D.. 3rd Aug 1948ರ ಪ್ರಕಾರ, ಜಯಂತಿಯನ್ನು ರಾಜ್ಯದಲ್ಲಿಯ ಎಲ್ಲಾ ಹೈಸ್ಕೂಲ್, ಮಿಡಲ್‌ಸ್ಕೂಲ್, ಟ್ರೇನಿಂಗ್ ಸ್ಕೂಲುಗಳಿಗೆ ತರಿಸಿಕೊಳ್ಳಬಹುದೆಂದು ಸಮ್ಮತಿ ದೊರಕಿದೆ.

ಎಲ್ಲ ಮುಖ್ಯಾಧ್ಯಾಪಕರೂ ಈ ಸಂಗತಿಯನ್ನು ಲಕ್ಷ್ಯದಲ್ಲಿ ಇರಿಸಿಕೊಂಡು, ಜಯಂತಿಯ ಪ್ರಯೋಜನ ಪಡೆಯಬೇಕು.

—ಸಂಪಾದಕ 'ಜಯಂತಿ'

JAYANTI

ಈ ಸಂಚಿಕೆಯಲ್ಲಿ:

ದ್ರಾವಿಡ ಕಳಗಮಿನ ದೌರ್ಜನ್ಯ (ಸಂಪಾದಕೀಯ)
ಸಂಪಾದಕರು ೨೪೧

ನಾಡನಡೆ (ಪ್ರಾಸಂಗಿಕ ಟಿಪ್ಪಣಿಗಳು)
'ಕಾಲಭೈರವ' ೨೪೩

ಯಾರ ಗೆಲವು? (ಒಂದು ಸಣ್ಣ ಕಥೆ)
ಶ್ರೀ. ವ್ಹಿ. ಬಿ. ದೇಶಪಾಂಡೆ ಬಿ. ಎಸ್‌ಸಿ. ಮುಂಬಯಿ ೨೪೫

ಬೇಸರಿಕೆ ಭಾರತದ ಬೇಸಾಯಶಾಸ್ತ್ರ (ಕವನ)
ಶ್ರೀ. ಕೆ. ವಿರೂಪಾಕ್ಷ ಬಿ. ಕಾಮ್. (ಸೀ), ಹುಬ್ಬಳ್ಳಿ ೨೫೪

ಭಕ್ತಿಯ ಹಿರಿಮೆ (ಪರಿಚಯಾತ್ಮಕ ಪ್ರಬಂಧ)
ಶ್ರೀ. ಉ. ವೆಂಕಟಕೃಷ್ಣರಾವ್ ಎಂ. ಎ. ಮದ್ರಾಸ ೨೫೫

ಇದೂ ಪ್ರೇಮವೆ? (ಒಂದು ಸಣ್ಣ ಕತೆ)
ಶ್ರೀ. ನಾ. ನರಸಿಂಹಮೂರ್ತಿ, ಮೈಸೂರು ೨೫೮

ಒಂಟಿಚಂದ್ರ (ಕವನ)
'ರಂಜನ'ಭಟ್ಟ, ನಾಗಪುರ ೨೬೧

ಗೆಳೆತನದ ಗುಟ್ಟು (ಒಂದು ವಿವೇಚನೆ)
ಶ್ರೀ. ಎಸ್. ಸಿ. ಶಿರಹಟ್ಟಿ ಬಿ. ಎ. ಶಿರಹಟ್ಟಿ ೨೬೨

ಓಂನಮಃ ಸರ್ವೇಶ್ವರಾಯ ಚಕ್ರಾಯ (ಕವನ)
ಶ್ರೀ. ಎಚ್. ಜಿ. ಉಪಾಧ್ಯಾಯ ಎಂ. ಎ. ಹೈದರಾಬಾದ್ ೨೬೪

ಕಲೆಯ ಹುಳು (ಕವನ)
ಶ್ರೀ. ಅ. ರಾ ಸೇ. ದಾವಣಗೆರೆ ೨೬೫

ಅಜೇಜಾ (ಐತಿಹಾಸಿಕ ಲಘುಕಥೆ)
ಶ್ರೀ. ಅನಂತರಾವ್ ಕೆ. ಭೋಸಗೆ, ಸೇಡಬಾಳ ೨೬೬

ಕಾವ್ಯದಲ್ಲಿ ಪ್ರತಿಮಾಸಂವಿಧಾನ (ಸಾಹಿತ್ಯವಿಚಾರ)
ಶ್ರೀ. ಜಿ. ವಿ. ಕುಲಕರ್ಣಿ ಬಿ. ಎ. (ಆನರ್ಸ್), ಶ್ರೀ. ಅನಿಲಕುಮಾರ ಗೋಕಾಕ } ಧಾರವಾಡ ೨೭೦

ಸಾಹಿತ್ಯವಿಮರ್ಶೆಯ ಶಿಕ್ಷಣರಂಗ
ಶ್ರೀ. ಕೆ. ಎಸ್. ಶರ್ಮಾ ವಾಣೀಮಂದಿರಂ, ಕಾಸರಗೋಡು ೨೭೫

ಪುಸ್ತಕ ವಿಮರ್ಶೆ ೨೭೯

ಸಾದರ ಸ್ವೀಕಾರ ಹೊದಿಕೆಯ ೩ನೆಯ ಪುಟದಲ್ಲಿ

ಜಯಂತಿ

ಸಂಪುಟ ೨೦ ಸಂಚಿಕೆ ೭

ಕುಟುಂಬದಲ್ಲಿಯ ಎಲ್ಲರೂ
ಜ್ಞಾನವನ್ನೂ ರಸಾನಂದವನ್ನೂ
ಪಡೆಯಬಹುದಾದ
ಮಾಸಪತ್ರಿಕೆ

●

ಸಂಪಾದಕರು:
ಶ್ರೀ. ಬೆಟಗೇರಿ ಕೃಷ್ಣಶರ್ಮ

●

ಸಂಚಿಕೆ ಪ್ರತಿತಿಂಗಳ
ಮೊದಲನೆಯ ತಾರೀಖಿಗೆ
ಪ್ರಕಟವಾಗುವುದು.

ವಾರ್ಷಿಕ ವರ್ಗಣಿ ೫ ರೂ.
ಬಿಡಿ ಸಂಚಿಕೆಗೆ ೮ ಆಣೆ.

ಜಾಹೀರಾತು ಕೊಡಬಯಸುವವರು
ದರಗಳಿಗಾಗಿ ಬರೆದು ಕೇಳಬೇಕು.

●

ಅನೇಕ ಊರುಗಳಲ್ಲಿ
ಜಯಂತಿ ಮಾರುವ
ಏಜಂಟರು
ಬೇಕಾಗಿದ್ದಾರೆ

ಸಂಪಾದಕೀಯ

ದ್ರಾವಿಡ ಕಳಗಮಿನ ದೌರ್ಜನ್ಯ

ಕಾಶ್ಮೀರದ ಸಲುವಾಗಿ ಪಾಕಿಸ್ತಾನಿಗಳೊಂದಿಗೆ, ಗೋವೆಯ ಸಲುವಾಗಿ ಪೋರ್ತುಗೀಜರೊಂದಿಗೆ ಅಖಿಲಭಾರತವು ತನ್ನ ಸಂಪೂರ್ಣಶಕ್ತಿಯಿಂದ ಹೋರಾಡಬೇಕಾಗಿರುವ ಈ ಆಯಕಟ್ಟಿನ ಸಂದರ್ಭದಲ್ಲಿ, ಮದರಾಸ ರಾಜ್ಯದಲ್ಲಿ ರಾಷ್ಟ್ರಘಾತಕವಾದ, ಅಂತಃಕಲಹಗಳು ಆಗಾಗ ತಲೆದೋರತೊಡಗಿದುದು, ಭಾರತೀಯರಿಗೆಲ್ಲ ಕಳವಳವನ್ನು ಉಂಟು ಮಾಡುವಂತಹ ಸಂಗತಿಯಾಗಿದೆ. ಈ ಅಂತರಿಕ ಕಲಹಗಳಿಗೆ ಬೇರೆ ಯಾವ ಕಾರಣವೂ ಇರದೆ, ಸ್ವತಂತ್ರ ಭಾರತದ ಧ್ಯೇಯ-ಧೋರಣೆಗಳಿಗೆ ಅತ್ಯಂತ ವಿರೋಧಿಯಾದ ಜಾತಿ-ಪಂಗಡಗಳ ದ್ವೇಷವೇ ಮುಖ್ಯ ಕಾರಣವಾಗಿರುವುದು ಹೆಚ್ಚು ಉದ್ವಿಗ್ನತೆಯನ್ನು ಉಂಟುಮಾಡುವಂತಹ ಮಾತಾಗಿದೆ.

ಕಳೆದ ಎರಡು ತಿಂಗಳ ಹಿಂದೆ, ಆ ರಾಜ್ಯದ ತಿರುನಲ್ವೇಲೀ ಜಿಲ್ಹೆಯಲ್ಲಿ ತೀರ ಉಲ್ಬಣಾವಸ್ಥೆಗೆ ಏರಿನಿಂತಿದ್ದ ಪಂಗಡ-ಪಂಗಡಗಳ ಒಳಜಗಳ, ಇದೀಗ ಸ್ವಲ್ಪ ಶಾಂತವಾಗಿದೆಯೆಂದು ಸಮಾಧಾನದ ಉಸಿರನ್ನು ಹೊರಹಾಕುವುದರಲ್ಲಿಯೆ, ರಾವಣಪ್ರಿಯರಾದ ರಾಮಸ್ವಾಮಿ ನಾಯಕರು, ಹಿಂದಿನ ಯುಗಗಳ ಹಗೆತನದ ನುಡಿಯನ್ನು ತಿರಿಸಲೆಂದು ದ್ರಾವಿಡ-ಆರ್ಯ ಕಲಹದ ಕಹಳೆಯನ್ನು ಊದಲು ತೊಡಗಿದ್ದಾರೆ. ಅವರ ಮನದ ರೀತಿಯೆಂತಹದೇನೋ! ಜಗತ್ತಿನ ಜನರೆಲ್ಲರೂ ಶಾಂತಿ-ಸಮಾಧಾನಗಳನ್ನು ಮನಸಾರೆ ಬಯಸಿ ಮಾತನಾಡುತ್ತಿರುವಾಗ, ರಾಮಸ್ವಾಮಿ ನಾಯಕರು ಬರೀ ಕೊಲೆ-ಸುಲಿಗೆಯ ಮಾತುಗಳನ್ನೇ ಗುಡುಗುತ್ತಲಿದ್ದಾರೆ.

ಆರ್ಯದ್ವೇಷಿಗಳಾದ ದ್ರಾವಿಡ ರಾಮಸ್ವಾಮಿ ನಾಯಕರು, ಇಂದಿನ ಬ್ರಾಹ್ಮಣರಷ್ಟೇ ಆರ್ಯರೆಂದು ತಿಳಿದುಕೊಂಡುದು, ಅವರ ಇತಿಹಾಸ-ಸಂಸ್ಕೃತಿಗಳ ಅಜ್ಞಾನದ ನಿದರ್ಶನವಾಗಿದೆ. ಮೂರು ಯುಗಗಳ ಹಿಂದೆ ಆಗಿ ಹೋಗಿರಬಹುದಾದ—ನಾಯಕರ ಅಭಿಮಾನೀ ಪುರುಷನಾದ ರಾವಣನೂ ಒಬ್ಬ ಆರ್ಯಋಷಿಯ ಮಗನೆಂಬುದು ಅವರಿಗೆ ಗೊತ್ತಿದೆಯೋ, ಇಲ್ಲವೋ! ಅಲ್ಲದೆ ಬ್ರಾಹ್ಮಣ ವಿರೋಧಿಗಳಾದ ನಾಯಕರಿಗೆ, ಅವರು ದ್ವೇಷಿಸುವ ರಾಮನು ಬ್ರಾಹ್ಮಣನಿರದೆ ಕ್ಷತ್ರಿಯನಿದ್ದನೆಂಬ ಸಂಗತಿಯೂ ಅವರ ಲಕ್ಷ್ಯದಲ್ಲಿ ಇದ್ದಂತಿಲ್ಲ. ಬ್ರಾಹ್ಮಣರಷ್ಟೇ ಆರ್ಯರೆಂದು ರಾಮನಾಯಕರು ಭ್ರಮಿಸುವುದರ ಕಾರಣವೇನಿರಬಹುದು? ಅಜ್ಞಾನವೇ ಎನ್ನಬೇಕೆಂದರೆ ಅದು ಈ ಕಾಲದಲ್ಲಿ ಸರಿಯಾದ ಮಾತೆನಿಸದು. ಕೇವಲ ದ್ವೇಷಭೂತದ ಚೇಷ್ಟೆಯಿದೆಂದು ಹೇಳಿದರೆ, ಅದು ಸಪ್ರಮಾಣವಾಗಿ ಸರಿಹೊಂದಬಹುದಾಗಿದೆ. ಹಾಗಾದರೆ ಈ ೨೦ನೆಯ ಶತಮಾನದ ಸ್ವತಂತ್ರ ಭಾರತದಲ್ಲಿಯೂ ನಾಯಕರಿಗೆ ದ್ವೇಷಭೂತವು ಬಡಿದುಕೊಳ್ಳಲು ಕಾರಣವೇನು?

ಆರ್ಯ-ದ್ರಾವಿಡರಲ್ಲಿ ಒಂದು ಕಾಲದಲ್ಲಿ **ಹೋರಾಟ** ನಡೆದಿರಬಹುದು. ಹಾಗೆಯೆ ಸಾಮಾನ್ಯ ಮಾನವೀಯ ಸ್ವಭಾವವನ್ನು ಅನುಸರಿಸಿ, ಆರ್ಯ-ಆರ್ಯರಲ್ಲಿಯೂ ಹೊಡೆದಾಟವಾಗಿರಬಹುದು; ದ್ರಾವಿಡ-ದ್ರಾವಿಡರಲ್ಲಿಯೂ ಹೊಡೆದಾಟವಾಗಿರಬಹುದು. ಮುಂದೆ ಬರುಬರುತ್ತ ಆರ್ಯ-ದ್ರಾವಿಡರಲ್ಲಿ ಸಾಮರಸ್ಯವುಂಟಾಗಿ, ಅವರಲ್ಲಿ ಪರಸ್ಪರ ಸಂಬಂಧ ಬಂದುದೂ ಐತಿಹಾಸಿಕ ಸತ್ಯವಾಗಿದೆ. ಇಷ್ಟೇ ಅಲ್ಲ, ಇಂದು ಸಂಪೂರ್ಣ ಭಾರತದಲ್ಲಿ ಶುದ್ಧ ಆರ್ಯಸಂತಾನವನ್ನೂ ಶುದ್ಧ ದ್ರಾವಿಡಸಂತಾನವನ್ನೂ ಕಂಡುಹಿಡಿಯಲು ಬಾರದಷ್ಟು ಆವೆರಡರ ಸ್ವಾಭಾವಿಕ ಸಮ್ಮಿಲನವುಂಟಾಗಿದೆ. ವಸ್ತುಸ್ಥಿತಿಯು ಹೀಗೆ ಇರುವಾಗ, ಈಗ ಇಲ್ಲದ ಆರ್ಯ-ದ್ರಾವಿಡ ಪಂಗಡಗಳನ್ನು ಹುಟ್ಟಿಸಿ ಕಾದಾಟಹೂಡಲು ಕಾರಣವೇನು?

ಆರ್ಯರ ಸಮಾಜ ರಚನೆಯಂತೆ, ಚಾತುರ್ವರ್ಣಗಳಲ್ಲಿ ಾತ್ರ, ಸಮಾಜವು ವಿಭಾಗಗೊಂಡಿರಬಹುದು. ಆದರೆ ಅರ್ವಾಚೀನ ಾಲದಲ್ಲಿ ಉದ್ಯೋಗಕಾರಣದಿಂದ ತಲೆಯೆತ್ತಿದ ನೂರೆಂಟು ಜಾತಿ- ಳು ಆರ್ಯರ ಕೈವಾಡದಿಂದ ಆದುವಲ್ಲ. ಒಂದು ಕಾಲದಲ್ಲಿ ವಮಾನೋದ್ಯಮಿಗಳ ಸಹಕಾರ ಸಂಬಂಧ ಹೆಚ್ಚಿ, ಈ ಜಾತಿಗಳು ಾವೇ ತಲೆದೋರಿವೆ. ಜಾತಿ-ಜಾತಿಗಳಲ್ಲಿ ಅಂತಃಕಲಹ-ವೈಷಮ್ಯ ಳು ತಲೆದೋರಿದಾಗ, ಅವುಗಳನ್ನು ಮತ್ತೆ ಒಂದುಗೂಡಿಸುವುದ- ಕ್ಕಾಗಿ ಧಾರ್ಮಿಕ-ಸಾಮಾಜಿಕ ಚಳವಳಿಯನ್ನು ಹೂಡಿದ ಐತಿಹಾಸಿಕ ಮಹಾಪುರುಷರು— ರಾಮಸ್ವಾಮಿನಾಯಕರ ಅಭಿಪ್ರಾಯದಲ್ಲಿ— ಆರ್ಯರೇ—ಎಂದು ಹೇಳಬೇಕಾಗುವುದಲ್ಲವೆ?

ಸಾವಿರಾರು ವರ್ಷಗಳ ಹಿಂದೆ ಭಾರತದಲ್ಲಿ, ಬ್ರಾಹ್ಮಣ ವರ್ಣ- ದವರು ಸಮಾಜಪುರುಷನ ಒಂದು ಪ್ರಮುಖಾಂಗವಾಗಿ ಕಾರ್ಯ ಮಾಡಿರಬಹುದು; ಎಂತಲೇ ಆ ಕಾಲದ ಸಾಮಾಜಿಕ ಸುಖ-ಶಾಂತಿ- ಗಳಿಗಾಗಿ ಅವರೇ ನಿಯಮ-ಶಾಸನಗಳನ್ನು ಕಲ್ಪಿಸಿಕೊಟ್ಟಿರಬಹುದು. ಆ ನಿಯಮ-ಶಾಸನಗಳು ಜೀವನಕ್ಕೆ ಅನಾವಶ್ಯಕ-ಅಸಾಧ್ಯ- ಎಂದು ಎನಿಸತೊಡಗಿದಂತೆ, ಅವುಗಳನ್ನು ಮಿಕ್ಕವರು ಬಿಡುತ್ತ ಬಂದರಷ್ಟೇ ಅಲ್ಲ; ಬ್ರಾಹ್ಮಣವರ್ಗದವರೂ ಅವುಗಳನ್ನು ತ್ಯಜಿಸುತ್ತ ಬಂದರು- ಅರ್ಥದ ತಳಹದಿಯ ಮೇಲೆ ನಿಂತಿರುವ ಇಂದಿನ ನಮ್ಮ ಸಮಾಜದಲ್ಲಿ, 'ಬ್ರಾಹ್ಮಣವರ್ಗ' ಎಂಬ ಕಾರಣದಿಂದ ಅದಕ್ಕೆ ಯಾವ ವಿಶಿಷ್ಟ ಸ್ಥಾನವೂ ಉಳಿದಿಲ್ಲ. ಎಲ್ಲ ನಾಗರಿಕರಂತೆಯೇ ಅವರೂ ಇರುವರು. ಇಂದು ಸಮಾಜದಲ್ಲಿ ಯಾರಿಗಾದರೂ ಸ್ಥಾನವಿದೆಯೆಂದರೆ, ಪಾಶವ- ಶಕ್ತಿಶಾಲಿಗಳಿಗೆ— ಲಕ್ಷ್ಮೀಪುತ್ರರಿಗೆ— ಕುಟಿಲ ರಾಜಕಾರಣಿಗಳಿಗೆ ಇಂತಹರು. ಇಂತಹರು, ಬ್ರಾಹ್ಮಣರಲ್ಲಿಯೂ ಇರಬಹುದು; ಮಿಕ್ಕವ ರಲ್ಲಿಯೂ ಇರಬಹುದು. ಹೀಗಿರುವಾಗ, ರಾಮಸ್ವಾಮಿನಾಯಕರಿಗೆ ಬ್ರಾಹ್ಮಣರೇ ಕಣ್ಣಲ್ಲಿ ಒತ್ತುವ ಕಾರಣವೇನು?

ಬಂಡವಾಳ, ಆಡಳಿತದ ಅಧಿಕಾರ— ಇವು, ಅವಿಲ್ಲದ ಮಹತ್ವಾಕಾಂಕ್ಷಿಗಳಲ್ಲಿ ದ್ವೇಷ-ತ್ವೇಷವನ್ನು ಹುಟ್ಟಿಸಬಹುದು. ಬ್ರಿಟಿಷರ ಕಾಲದಲ್ಲಿ— ದಕ್ಷಿಣ ಭಾರತದಲ್ಲಿ— ಮೊದಮೊದಲು ಬ್ರಾಹ್ಮಣರು ಆಡಳಿತದ ಅಧಿಕಾರಸ್ಥಾನಗಳನ್ನು ಗಳಿಸಿದ್ದರೇನೋ ಸರಿ! ಇದಕ್ಕೆ ಕಾರಣ, ಇತಿಹಾಸಕಾಲದಲ್ಲಿ ಅವರು ತಮ್ಮ ಬ್ರಾಹ್ಮಣವೃತ್ತಿಯನ್ನು ಬಿಟ್ಟು—ಕರಣಿಕ ವೃತ್ತಿಯನ್ನು ವಹಿಸಿದುದೇ ಮುಖ್ಯ ಕಾರಣವಾಗಿದೆ. ಮಿಕ್ಕವರಿಗೆ ಅವರ ಕುಲಪರಂಪರಾಗತ ಉದ್ಯಮ-ವ್ಯವಸಾಯಗಳಿ- ದ್ದುವು; ಅವರು ಅವುಗಳನ್ನು ಬಿಟ್ಟು ಕಚೇರಿ-ಕಾರ್ಯಾಲಯಗಳಿಗೆ ಬರಲಿಲ್ಲ. ಬ್ರಾಹ್ಮಣರು, ಧರ್ಮದ ಸಲುವಾಗಿ ಕಲಿತ ಅಕ್ಷರವಿದ್ಯೆ- ಯನ್ನು—ಅನಿವಾರ್ಯವಾಗಿ—ಅರ್ಥಾರ್ಜನೆಯ ಕಡೆಗೆ ತಿರುಗಿಸಿದರು ಅಂದಿನ ರಾಜವರ್ಗಕ್ಕೂ ಇವರ ಈ ಕೆಲಸ ಅವಶ್ಯಕವೆನಿಸಿತ್ತು. ಮುಂದೆ ಬ್ರಿಟಿಷರ ಕೋಪಕ್ಕೆ ಪಾತ್ರರಾಗಿ, ಆಡಳಿತದ ಕ್ಷೇತ್ರವೂ ಇವರ ಕೈಯನ್ನು ಬಿಟ್ಟಿತು. ಬ್ರಾಹ್ಮಣರಿಗಿರುವ ಆ ಕಾರಕೂನಿಕೆಯ ವೈಶಿಷ್ಟ್ಯವೂ ಈಗ ಇಲ್ಲದಂತಾಗಿದೆ. ಎಲ್ಲರಂತೆಯೇ ಅವರೂ ಇಂದು ದೇಹಶ್ರಮಮಾಡಿ ಹೊಟ್ಟೆ ಹೊರೆದುಕೊಳ್ಳುತ್ತಿದ್ದಾರೆ. ಇಂತಹ ನಿರ್ಭಾಗ್ಯರೂ ರಾಮಸ್ವಾಮಿ ನಾಯಕರಿಗೆ ಅದೇಕೆ ಜನ್ಮಶತ್ರುಗಳಾಗಿ ತೋರುವರು? ಸಂಖ್ಯಾಬಲವಾದರೂ ಇದೆಯೆನ್ನಬೇಕೆ? ದಕ್ಷಿಣ ಭಾರತದ ಯಾವ ಮೂಲೆಯಲ್ಲಿ ನೋಡಿದರೂ, ನೂರಕ್ಕೆ ಹತ್ತರಷ್ಟಾ- ದರೂ ಬ್ರಾಹ್ಮಣರು ಇದ್ದಾರೋ ಇಲ್ಲವೋ!

ವಿವೇಕಬುದ್ಧಿಯಿಂದ ವಿಚಾರ ಮಾಡಿದರೆ, ರಾಮಸ್ವಾಮಿ ನಾಯಕರಿಗೆ ಇವೆಲ್ಲದರ ರಹಸ್ಯವು ತಿಳಿಯದೆ ಹೋಗದು ಆದರೆ ಅವಿವೇಕಾಶ್ವದ ಮೇಲೆ ಕುಳಿತ —ಪಾಕಿಸ್ತಾನೀ ಮನೋವೃತ್ತಿಯ— ರಾಮಸ್ವಾಮಿ ನಾಯಕರಿಗೆ, ಇದಾವ ಯುಕ್ತಾಯುಕ್ತ ವಿಚಾರವೂ ಬೇಕಾಗಿಲ್ಲ. ಅವರಿಗೆ ಬಡಿದಾಟ ಬೇಕಾಗಿದೆ. ಬಡಿದಾಟಕ್ಕಾಗಿ ಯಾರಾದರೂ ವಿರೋಧಿಗಳು ಬೇಕಾಗಿದ್ದಾರೆ; ಆದುದರಿಂದ ಈಗ ಈ ಅಲ್ಪಸಂಖ್ಯಾಕರಾದ ಬ್ರಾಹ್ಮಣಜಾತಿಯನ್ನು ಆಯ್ದುಕೊಂಡಿದ್ದಾರೆ. ಇವರ ಹುಟ್ಟನ್ನು ಅಡಗಿಸಿ ಬಿಟ್ಟಮೇಲೆ, ಅವರ ಕಲಹಸ್ವಭಾವ ಇನ್ನೊಂದು ಜಾತಿಯನ್ನು ದ್ವೇಷಿಯನ್ನಾಗಿ ಮಾಡಿಕೊಳ್ಳಬಹುದು. ಅದಾದ ಮೇಲೆ ಮತ್ತೊಂದು ಜಾತಿ; ಬರುಬರುತ್ತ ಅಣ್ಣ-ತಮ್ಮ, ಹೆಂಡತಿಯ ವರೆಗೂ ಬಂದು ನಿಲ್ಲಬಹುದು

ಪಾಕಿಸ್ತಾನದ ಇಂದಿನ ನಾಯಕರನ್ನು ನೋಡುವುದಿಲ್ಲವೆ? ಭಾರತದಲ್ಲಿರುವವರೆಗೂ ಹಿಂದುಗಳೊಂದಿಗೆ ಜಗಳವಾಡಿದರು ಈಗ ಹಿಂದುಗಳಿಂದ ದೂರರಾದುದರಿಂದ ತಮ್ಮ ತಮ್ಮೊಳಗೆ ಜಗಳವಾಡುತ್ತ ಲೋಕದ ನಗೆಗೆ ಗುರಿಯಾಗುತ್ತಿರುವರು. ಬ್ರಿಟಿಷರ ಕುಟಿಲ ರಾಜ ಕಾರಣ— ಭಾರತೀಯರ ಮೇಲಿನ ದ್ವೇಷದಿಂದ—ಪಾಕಿಸ್ತಾನಿಗಳಿಗೆ ಸಲುಗೆ ಕೊಟ್ಟು, ಭಾರತವನ್ನೂ ಹಾನಿಗೆ ಗುರಿಮಾಡಿತು; ಪಾಕಿ- ಸ್ತಾನವನ್ನೂ ಹಾನಿಗೆ ಗುರಿಮಾಡಿತು. ಮದ್ರಾಸರಾಜ್ಯದ ಇಂದಿನ ಆಡಳಿತದ ಅಧಿಕಾರಿಗಳು—ಏನೇನೋ ಕುಟಿಲತಂತ್ರರಾಗಿ— ರಾಮಸ್ವಾಮಿ ನಾಯಕರ ಮತ್ತು ಅವರ ಅನುಯಾಯಿಗಳ ದ್ವೇಷ- ಪೂರಿತ ಹಿಂಸಾಚಳವಳಿಗಳನ್ನು ಸಲುಗೆಯ ನೋಟಗಳಿಂದ ನೋಡುತ್ತ ಹೋದರೆ, ಮದ್ರಾಸ್‌ರಾಜ್ಯದ ಆಂತರಿಕ ಪರಿಸ್ಥಿತಿಯನ್ನು ಹಾಳುಮಾಡುವರು - ಇಷ್ಟೇ ಅಲ್ಲ— ಭಾರತದ ಪ್ರಗತಿಪಥದಲ್ಲಿ ಕಾಲ್ತೊಡಕಾಗಿ, ರಾಷ್ಟ್ರಘಾತಕ್ಕೆ ಕಾರಣರಾಗುವರು.

ಇಂದು ಭಾರತದಲ್ಲಿ ಭಾರತೀಯರೆಂಬುದೊಂದೇ ಜಾತಿ. ಅವರೆಲ್ಲರ ಸುಖ-ದುಃಖಗಳು ಪರಸ್ಪರರ ಸ್ನೇಹ-ಸಹಕಾರಗಳನ್ನು ಅವಲಂಬಿಸಿಕೊಂಡಿವೆ ಇತಿಹಾಸಕಾಲದ ದೇಶ-ಜಾತಿ-ಪಂಗಡಗಳ ದ್ವೇಷದ ಕಟುಫಲವನ್ನು ಸಾಕಷ್ಟು ಉಂಡು ನಾವು ಬುದ್ಧಿ ಕಲಿತಿದ್ದೇವೆ. ಕಷ್ಟಪಟ್ಟು ಸ್ವಾತಂತ್ರ್ಯವನ್ನು ಸಂಪಾದಿಸಿದ್ದೇವೆ. ಅದರ ಸವಿಯೂಟ ವನು ಂಡು ಸುಖದಿಂದಿರಬೇಕೆಂದು ಶಿವಪೂಜೆಯಲ್ಲಿರುವಾಗ, ದ್ರಾವಿಡ ಕಳಗಮಿನವರು ತಮ್ಮ ಕರಡಿಯನ್ನು ಬಿಟ್ಟಿದ್ದಾರೆ. ಮದ್ರಾಸ್ ರಾಜ್ಯನಾಯಕರಿಗೆ ಬೇಗನೆ ವಿವೇಕೋದಯವಾಗಲಿ; ಈ ಕರಡಿ- ಯನ್ನು ಕಾಡಿನ ಗವಿಗೆ ಕಳುಹಲಿ!

ನಾಡ ನಡೆ

卐

ಮದ್ರಾಸ ಸರಕಾರದ ವಿಚಿತ್ರ ವರ್ತನೆ

ಭಾರತ ರಾಜ್ಯಘಟನೆಯ ಪುಸ್ತಕವನ್ನು ಸುಡುವುದು ರಾಜಕೀಯ ಅಪರಾಧವೆಂದು, ಮದ್ರಾಸ್ ಸರಕಾರವು ಅವಸರದ ಕಾಯಿದೆಯೊಂದನ್ನು ವಿಧಾನಸಭೆಯಲ್ಲಿ ಪಾಸ್ ಮಾಡಿಕೊಂಡಿತು. ಅದರಂತೆಯೆ ರಾಜ್ಯಘಟನೆಯನ್ನು ಸುಟ್ಟ ದ್ರಾವಿಡ ಕಳಗಂ ಅನುಯಾಯಿಗಳನ್ನು ಅಪರಾಧಿಗಳೆಂದು ಬಂಧಿಸಲು ತೊಡಗಿದೆ. ಆದರೆ ದ್ರಾವಿಡ ಕಳಗಮಿನ ಮುಖ್ಯ ನೇತಾರರಾದ ರಾಮಸ್ವಾಮಿ ನಾಯಕರನ್ನು, ಒಂದುದಿನ ಮಾತ್ರ ನಿಮಿತ್ತಕ್ಕೆ ಬಂಧಿಸಿ ಇಟ್ಟಂತೆ ಮಾಡಿ, ಮರು. ದಿನವೇ ಅವರನ್ನು ಮುಕ್ತಗೊಳಿಸಲಾಯಿತು. ಹೊರಗೆ ಬಂದೊಡನೆ ನಾಯಕರು ತಮ್ಮ ಸಂಸ್ಥೆಯ ಮುಂದಿನ ಕಾರ್ಯಕಲಾಪಗಳ ವಿವರಗಳನ್ನು ಉಗ್ಗಡಿಸುತ್ತಲಿದ್ದಾರೆ. ರಾಜ್ಯಘಟನೆಯ ಪುಸ್ತಕದ ಪ್ರತಿಗಳನ್ನು ಸುಡುವುದು ವೆಚ್ಚದ ಕೆಲಸವಾದುದರಿಂದ, ಇನ್ನು ಮೇಲೆ ಮಹಾತ್ಮಾಗಾಂಧಿಯವರ ಚಿತ್ರಗಳನ್ನು ಸುಡುವ ಮತ್ತು ಅವರ ಪ್ರತಿಮೆಗಳನ್ನು ಒಡೆಯುವ ಕಾರ್ಯವನ್ನು ಕೈಕೊಳ್ಳಬೇಕೆಂದು, ರಾಮಸ್ವಾಮಿ ನಾಯಕರು ತಮ್ಮ ಅನುಯಾಯಿಗಳಿಗೆ ಬೋಧಿಸ. ತೊಡಗಿದ್ದಾರೆ. ಒಕ್ಕೂಟರಾಷ್ಟ್ರದಿಂದ ದ್ರಾವಿಡರಾಜ್ಯವನ್ನು ಮುಕ್ತಗೊಳಿಸುವ ಮಹಾಕಾರ್ಯಕ್ರಮವನ್ನೂ ಅವರು ತಮ್ಮ ಕಣ್ಣೆದುರು ಇರಿಸಿಕೊಂಡಿದ್ದಾರೆ. ಇದೆಲ್ಲವನ್ನೂ ಅಲ್ಲಲ್ಲಿ ಸಾರುತ್ತ ಸಾಮಾನ್ಯ ಜನತೆಯ ಮನಸ್ಸನ್ನು ಕೆರಳಿಸುತ್ತ ತಿರುಗಾಡುತ್ತಿರುವ ರಾಮಸ್ವಾಮಿ ನಾಯಕರು, ಇನ್ನೂ ಅನಿರ್ಬಂಧರಾಗಿ ಇರುವುದು ಮದ್ರಾಸರಾಜ್ಯ ಸರಕಾರದ ವರ್ತನೆಯ ವೈಚಿತ್ರ್ಯವನ್ನೆ ತೋರಿಸುತ್ತದೆ ಇದರಿಂದ ಹೊರಗಿನ ಜನರು ಮದ್ರಾಸ್ ಸರಕಾರವನ್ನೇ ಸಂದೇಹದಿಂದ ನೋಡುವಂತಾಗಿದೆ.

ಬ್ರಿಟಿಷರ ಆಡಳಿತವಿರುವಾಗ, ಅವರ ಅಂಗಾಲನ್ನು ನೆಕ್ಕುತ್ತ ಸುತ್ತುತ್ತಿದ್ದ ಶ್ವವೃತ್ತಿಯ ಸ್ವಾರ್ಥಸಾಧಕರು, ಇಂದಿನ ಪ್ರಜಾ. ಪ್ರಭುತ್ವದ ಸ್ವತಂತ್ರ ವಾತಾವರಣದ ದುರ್ಲಾಭವನ್ನು ಪಡೆಯುತ್ತಲಿದ್ದಾರೆ. ಇಂತಹ ಕೆಲವು ಜನರು ಬಹುಮತದ ಲಾಭಪಡೆಯ ಕಾಂಗ್ರೆಸ್ಸಿನಲ್ಲಿಯೂ ಸೇರಿಕೊಂಡಿದ್ದಾರೆ; ಸರಕಾರದಲ್ಲಿ ಮುಖ್ಯ ಮುಖ್ಯ ಅಧಿಕಾರಸ್ಥಾನಗಳನ್ನೂ ಹಿಡಿದು ಕುಳಿತುಕೊಂಡಿದ್ದಾರೆ. ರಾಮಸ್ವಾಮಿ ನಾಯಕರಿಗೆ ಇಂತಹರ ಬೆಂಬಲವಿಲ್ಲದೆ, ಈ ಬಗೆಯ ಹಿಂಸಾತ್ಮಕ ಚಳವಳಿಯನ್ನು ಬಹಿರಂಗವಾಗಿ ನಡೆಸಲು ಧೈರ್ಯವುಂಟಾಗಲು ಸಾಧ್ಯವೇ ಇಲ್ಲ ಅದುದರಿಂದ ಕಾಂಗ್ರೆಸ್ ನಾಯಕರೂ ಕೇಂದ್ರ ಸರಕಾರದವರೂ, ಈ ವಿಷಯದಲ್ಲಿ ಸಂಪೂರ್ಣ ಮನಸ್ಸು ಹಾಕಿ, ಮನೆಮುರುಕತನವನ್ನು ಒಳಗೊಳಗೇ ನಡೆಸಿರುವವರಾರೆಂಬುದನ್ನು ಕಂಡುಹಿಡಿದು, ನಿರ್ದಾಕ್ಷಿಣ್ಯವಾಗಿ ಆ ದೇಶವಿಘಾತಕರಿಗೆ ತಕ್ಕ ದಂಡನೆಯನ್ನು ವಿಧಿಸಬೇಕು. ಇಲ್ಲದ ದಾಕ್ಷಿಣ್ಯಕ್ಕೆ ಕಟ್ಟುಬಿದ್ದು ಈಗ ಶೈಥಿಲ್ಯವನ್ನು ತೋರಿಸಿದರೆ, ಮದ್ರಾಸಿನಲ್ಲಿ ತಲೆದೋರಿದ ಈ ವಿಷವಾಯು ಮಿಕ್ಕ ಕಡೆಯಲ್ಲಿಯೂ ಪಸರಿಸಿ, ಭಾರತದ ಐಕ್ಯ-ಭಾವವನ್ನೇ ಹಾಳುಮಾಡುವುದು.

ಪಾಕಿಸ್ತಾನದ ಪುಂಡಾಟಿಕೆ

ಭಾರತ ಸರಕಾರದ ಧ್ಯೇಯವಾದ ಶಾಂತಿ-ಸಂಯಮಗಳನ್ನು ಇಂದು ಪಾಕಿಸ್ತಾನ ಸರಕಾರವು ಒರೆಗೆ ಹಚ್ಚಲು ನಿಂತಿದೆಯೆಂಬುದು, ಪ್ರತಿನಿತ್ಯವೂ ಕಿವಿಗೆ ಬೀಳುತ್ತಿರುವ ಪಾಕಿಸ್ತಾನಿಗಳ ಕಿಡಿಗೇಡಿತನದ ಕೃತಿಗಳಿಂದ ಸ್ಪಷ್ಟವಾಗುತ್ತಲಿದೆ. ಪಶ್ಚಿಮ ಸೀಮಾಪ್ರದೇಶದ ಪಾಕಿಸ್ತಾನಿಗಳು ಒಂದುಬಗೆಯಿಂದ ಪುಂಡಾಟಿಕೆ ನಡೆಸಿದ್ದರೆ, ಪೂರ್ವ ಸೀಮಾಪ್ರದೇಶದಲ್ಲಿ ಇನ್ನೊಂದು ಬಗೆಯ ಪುಂಡಾಟಿಕೆಯನ್ನು ನಡೆ. ಸಿದ್ದಾರೆ. ಭಾರತಪ್ರದೇಶವೆಂದು ಖಂಡಿತವಾಗಿ ಗೊತ್ತಾಗಿದ್ದ ಪೂರ್ವಸೀಮಾಪ್ರದೇಶದಲ್ಲಿ, ಭಾರತದ ಒಕ್ಕಲಿಗರು ವರ್ಷದುದ್ದಕ್ಕೂ ದುಡಿದು ದೇಹವನ್ನು ಸವೆಸಿ ಮಾಡಿದ ಹೊಲಗಳ ಬೆಳೆಯನ್ನು, ಪಾಕಿಸ್ತಾನದ ಜನರು ಪೋಲೀಸರ ನೆರವಿನೊಂದಿಗೆ ಒಳನುಗ್ಗಿ ಬಂದು ಒಕ್ಕಿಕೊಂಡು ಒಯ್ಯತೊಡಗಿದ್ದಾರೆ. ಈ ಸ್ವೈರಾಚಾರವೃತ್ತಿಯನ್ನು ಕಂಡೂ ಭಾರತ ಸರಕಾರ, ತನ್ನ ಧ್ಯೇಯಕ್ಕಾಗಿ ಸುಮ್ಮಗಿದ್ದು ಸಹಿಸ. ಬೇಕೆ? ಶಾಸನಬದ್ಧ ರೀತಿಯಿಂದ ಪ್ರತಿಭಟನೆ ಕಳುಹಿದರೆ, ಪಾಕಿಸ್ತಾನ್ ಸರಕಾರವೂ ಶಾಸನಬದ್ಧವಾದ ರೀತಿಯಿಂದ ಹಾರಿಕೆಯ ಉತ್ತರವನ್ನು ಕೊಟ್ಟು ಕಡೆಗಾಗಬಹುದು; ತಮ್ಮ ಜನರು ಮಾಡಿ. ದುದು ತಪ್ಪೆಂದು ಸಿದ್ಧವಾದಾಗ, ತೋರಿಕೆಯ ವಿಷಾದ ಪ್ರದರ್ಶನವನ್ನೂ ಮಾಡಬಹುದು. ಇದರಿಂದ ವರ್ಷದ ಅನ್ನವನ್ನು ಕಳೆದು. ಕೊಂಡು ಬಾಯಿಬಾಯಿಬಿಡುತ್ತಿರುವ ರೈತರಿಗೆ ಯಾವ ಪರಿಹಾರವು ಸಿಕ್ಕಂತಾಗುವುದು? ಅವರ ಯೋಗ-ಕ್ಷೇಮವನ್ನು ನೋಡಿಕೊಳ್ಳುವ ಹೊಣೆಯನ್ನು ನಮ್ಮ ಸರಕಾರವು ಹೊತ್ತರೂ, ಆದರಿಂದ ಒಳ್ಳೆಯದಕ್ಕಿಂತ ಹೆಚ್ಚಾಗಿ ಕೆಡುಕೇ ಅಗುವ ಸಂಭವ ಹೆಚ್ಚಾಗಿದೆ. ಏಕೆಂದರೆ, ದುಡಿತದ ಫಲವು ಕೈಬಿಟ್ಟು ಹೋದುದರಿಂದ, ಆ ರೈತರು ಪರರ ಮುಖ ನೋಡುತ್ತ ಬದುಕಬೇಕಾಗುವುದು ಇಷ್ಟೇ ಅಲ್ಲ, ಪರಾವಲಂಬನೆಯ ಚಟಬಿದ್ದು ಅವರು ತಮ್ಮ ದುಡಿಯುವ ರೂಢಿಯನ್ನೂ ಕಳೆದುಕೊಳ್ಳಬಹುದು. ಇದಲ್ಲದೆ, ಸರಕಾರಕ್ಕೆ ಇಂತಹ ನಿರಾಶ್ರಿತರನ್ನು ಪೋಷಿಸುವುದರಲ್ಲಿಯೆ ಅರ್ಥವ್ಯಯ ಮಾಡುವ ಪ್ರಸಂಗ ಬರುತ್ತ ಹೋದರೆ, ದೇಶದ ಪ್ರಗತಿಗಾಗಿ ಬೇಕಾಗುವ ಅರ್ಥಕ್ಕೆ ದಾರಿ ಯಾವುದು? ಅದುದರಿಂದ ಭಾರತ ಸರಕಾರ, ತನ್ನ ಗಡಿಯ ಸಂರಕ್ಷಣೆಯನ್ನು ಭದ್ರಗೊಳಿಸಬೇಕು. ಪುಂಡಾಟಿಕೆ ನಡೆಸಲು ನುಗ್ಗಿಬಂದವರನ್ನು, ಅಲ್ಲಿಂದಲ್ಲಿಯೆ ಆಗಿಂದಾಗಲೇ ದಂಡಿಸಬೇಕು. ಭಾರತ ಸರಕಾರದ ಸಂಯಮ-ಸೈರಣೆಗಳ ಈ ದೊಡ್ಡತನವನ್ನು. ಪಾಕಿಸ್ತಾನಿಗಳು ಹೇಡಿತನವೆಂದು ಭಾವಿಸಿಬಿಟ್ಟಿದ್ದಾರೆ; ಅದರಂತೆ ಅವರು ಪರ. ರಾಷ್ಟ್ರಗಳಲ್ಲಿ ಪ್ರಚಾರವನ್ನೂ ಮಾಡುತ್ತಿರುತ್ತಾರೆ. ಏನೇ ಇರಲಿ,

ಪಾಕಿಸ್ತಾನಿಗಳ ಪುಂಡಾಟಿಕೆ ಭಾರತದ ಗಡಿಗಳಲ್ಲಿ ನಡೆಯದಂತಾಗಬೇಕು!

ಕಾಶ್ಮೀರದ ಕಂಚು-ಮಿಂಚಾಟ

ಜಗತ್ತಿನಲ್ಲಿ ನ್ಯಾಯಮಾರ್ಗಕ್ಕಿಂತ ಪಕ್ಷಪಾತತನದ ಅನ್ಯಾಯ ಮಾರ್ಗವೇ ಹೇಗೆ ಪುರಸ್ಕೃತವಾಗುವುದೆಂಬುದಕ್ಕೆ ಕಾಶ್ಮೀರದ ಸಮಸ್ಯೆಯು ಇಂದಿನ ಒಂದು ಪ್ರತ್ಯಕ್ಷ ಉದಾಹರಣೆಯಾಗಿದೆ. ಸಂಯುಕ್ತರಾಷ್ಟ್ರದ ಭದ್ರತಾಮಂಡಲವು ಪಾಕಿಸ್ತಾನದ ಅನ್ಯಾಯ ಕೃತಿಯ ಮೇಲೆ ಮುಸುಕು ಹಾಕುವ ಕಾರ್ಯವನ್ನು, ಈಗ ಹತ್ತು ವರ್ಷಗಳಿಂದಲೂ ಎಡೆಬಿಡದೆ ನಡೆಸಿಬಿಟ್ಟಿದೆ. ೧೯೫೧ರಲ್ಲಿ ಸಂಯುಕ್ತ-ರಾಷ್ಟ್ರಸಂಘದ ಪ್ರತಿನಿಧಿಯು ಬಂದು, ಕಾಶ್ಮೀರದ ಪರಿಸ್ಥಿತಿಯನ್ನು ಕಣ್ಣಾರೆಕಂಡು, ಸತ್ಯಸಂಗತಿಯನ್ನು ಚೆನ್ನಾಗಿ ತಿಳಿದುಕೊಂಡು, ಪಾಕಿಸ್ತಾನಕ್ಕೆ ಸಹಾಯವಾಗುವಂತೆ ತಮ್ಮ ವರದಿಯನ್ನು ಸಿದ್ಧಪಡಿಸಿಕೊಟ್ಟರಾದರೂ, ಪಾಕಿಸ್ತಾನದ ಆಕ್ರಮಣದ ಅನ್ಯಾಯವನ್ನು ಮುಚ್ಚಿಡುವುದಕ್ಕೆ ಸಾಧ್ಯವಾಗಲಿಲ್ಲ. ಆಮೇಲೆ ಕಳೆದ ವರ್ಷ ಯಾರಿಂಗ್‌ಸಾಹೇಬರು ಬಂದು, ವಸ್ತುಸ್ಥಿತಿಯನ್ನು ಅರಿತುಕೊಂಡು ಪಾಕಿಸ್ತಾನದ ಅನ್ಯಾಯವು ಮಸ-ಮಸಕಾಗಿಯಾದರೂ ಪ್ರಕಟ-ವಾಗುವಂತೆ ತಮ್ಮ ವರದಿಯನ್ನು ಒಪ್ಪಿಸಿದರು. ಆದರೆ ಈ ವರದಿ-ಯನ್ನು, ಪಾಕಿಸ್ತಾನದ ಪಕ್ಷ ವಹಿಸಿ ಮೊದಲಿನಿಂದಲೂ ಅದಕ್ಕೆ ಬೆಂಬಲವಾಗಿ ನಿಂತಿರುವ, ಭದ್ರತಾಮಂಡಲದಲ್ಲಿ ಪ್ರಮುಖಪಾತ್ರ ವಹಿಸುತ್ತಿರುವ ಕೆಲವು ಮಹಾರಾಷ್ಟ್ರಗಳು ಒಪ್ಪದೆ ಹಿಂದೆ ಸರಿಸಿ, ಮತ್ತೆ 'ಶ್ರೀಗಣೇಶಾಯನಮಃ'ದಿಂದ ಆ ನಿರ್ಣಯಕಾರ್ಯವನ್ನು ಪ್ರಾರಂಭಿಸಬೇಕೆಂದು ಹೆಣಗಾಡಿದುವು. ಆದರೆ ರಶಿಯದ ಪ್ರತಿನಿಧಿಯ ವಿರೋಧಾಭಿಪ್ರಾಯದ ಮೂಲಕ, ಆ ಮಹಾರಾಷ್ಟ್ರಗಳು ನಿರ್ವಿಣ್ಣ ಭಾವದಿಂದ ಸುಮ್ಮಗೆ ಕುಳಿತುಕೊಳ್ಳಬೇಕಾಯಿತು; ಆದರೂ ಆ ಕುತಂತ್ರದ ರಾಷ್ಟ್ರಗಳು ಸುಮ್ಮನೆ ಕೂಡುವವರೆ! ತಮ್ಮ ಪಕ್ಷವನ್ನು ಸಾಧಿಸಿಕೊಡುವುದಕ್ಕಾಗಿ, ಸ್ವಿಡನಿನ ಪ್ರತಿನಿಧಿ ಯಾರಿಂಗರ ಕಿವಿಯಲ್ಲಿ ಗಾಳಿಯನ್ನು ತುಂಬಿದ್ದಾರೆ. ಅವರೀಗ ನ್ಯಾಯಕ್ಕೂ ಅನ್ಯಾಯಕ್ಕೂ ಒಪ್ಪಿಗೆಯೆನಿಸದಂತಹ ಕೆಲವು ತಿದ್ದುಪಡಿಗಳೊಂದಿಗೆ ಗೊತ್ತುವಳಿಯನ್ನು ಭದ್ರತಾಮಂಡಲದೆದುರು ತಂದಿದ್ದಾರೆ. ಎರಡೂ ಪಕ್ಷದವರಿಗೆ ಒಪ್ಪಿಗೆಯಾಗದ ಈ ಗೊತ್ತುವಳಿಯ ಗತಿ ಏನಾಗುವುದೆಂಬುದನ್ನು ಬೇರೆ ಹೇಳಬೇಕಾಗಿಲ್ಲ.

ಭದ್ರತಾಮಂಡಲವು ಕತ್ತೆಯನ್ನು ಕುದುರೆಯನ್ನಾಗಿ ಮಾಡಲು ಹವಣಿಸುತ್ತಲಿದೆ. ಅದರೆ, ಕಾರಣವು ಏನೇ ಇರಲಿ, ರಸಿಯಾ ಮೊದಲಾಗಿ ಕೆಲವು ರಾಷ್ಟ್ರಗಳಾದರೂ ಕತ್ತೆಯೆಂದೂ ಕುದುರೆಯಾಗದೆಂದು ಹೇಳುತ್ತಲಿದ್ದಾರೆ. ಪಶ್ಚಿಮಖಂಡಗಳಲ್ಲಿ ರಾಜಕೀಯವಾದಗಳೆರಡರ ತಿಕ್ಕಾಟವಿಲ್ಲದೆ ಹೋಗಿದ್ದರೆ, ಇಷ್ಟರಲ್ಲಿಯೇ ಕತ್ತೆ ಕುದುರೆಯೆಂದಾದರೂ ಸಿದ್ಧವಾಗುತ್ತಿತ್ತು; ಇಲ್ಲವೆ ಕತ್ತೆ ಕತ್ತೆಯೇ ಎಂದು ಸಿದ್ಧವಾಗುತ್ತಿತ್ತು. ಸಂಯುಕ್ತರಾಷ್ಟ್ರ ಸಂಸ್ಥೆಯಲ್ಲಿ ನಡೆದಿರುವ ಈ ಕಾಶ್ಮೀರದ ಕಂಚುಮಿಂಚಾಟವನ್ನು ಪಾಶ್ಚಿಮಾತ್ಯ ದೇಶಗಳಲ್ಲಿಯ ಪರಸ್ಪರ ಸ್ಪರ್ಧೆಯು ಎಲ್ಲಿಗೊಯ್ದು ಮುಟ್ಟಿಸುವುದೋ ನೋಡಬೇಕು.

ಕಳ್ಳ-ಸುಲಿಗೆಗಾರರ ಸಹಕಾರ

ಪಾಶ್ಚಿಮಾತ್ಯರ ರಾಜಕಾರಣದ ಭೇದನೀತಿಯ ಕೈಯಲ್ಲಿ ಸಿಕ್ಕಿಕೊಂಡು ಗೋವೆಯ ಬಿಡುಗಡೆಯ ವಿಚಾರವೂ ಒಂದು ತಲೆ ತಿನ್ನುವ ಸಮಸ್ಯೆಯಾಗಿ ಪರಿಣಮಿಸಿದೆ. ಜಗತ್ತಿನ ಪರಿಸ್ಥಿತಿಯ ತಿಳುವಳಿಕೆಯಿದ್ದ —ಸುಸಂಸ್ಕೃತರಾದ— ಫ್ರೆಂಚರು, ಬೇರೆಯವರ ಮಾತಿನ ಬಲೆಗೆ ಬೀಳದೆ, ಭಾರತ ಮತ್ತು ತಮ್ಮ ನಡುವಿನ ತೊಡಕನ್ನು, ಸುಸೂತ್ರವಾಗಿ ಬಿಡಿಸಿಕೊಂಡು ಸ್ನೇಹಿತರಾಗಿ ಉಳಿದರು. ಆದರೆ ಅಸಂಸ್ಕೃತರೂ ಹುಂಬರೂ ಆದ ಪೋರ್ತುಗೀಜರಿಗೆ ಪರಿಸ್ಥಿತಿಯ ತಿಳುವಳಿಕೆಯೂ ಇಲ್ಲ. ಸ್ನೇಹ-ಸಹಕಾರಗಳ ಬೆಲೆಯೂ ಗೊತ್ತಿಲ್ಲ. ಇಂತಹ ಮರ್ಕಟಕ್ಕೆ ಪಾಕಿಸ್ತಾನದ ನಾಯಕರು ತಮ್ಮ ಪ್ರೋತ್ಸಾಹದ ಮಾತುಗಳ ಮದ್ಯವನ್ನು ಕುಡಿಸುತ್ತಲಿದ್ದಾರೆ.

ಮೊನ್ನೆಮೊನ್ನೆಯೆ ಪೋರ್ತುಗಲ್ ಸರಕಾರದ ಅತಿಥಿಗಳಾಗಿ ಹೋದ ಪಾಕಿಸ್ತಾನದ ಮುಖ್ಯಮಂತ್ರಿಗಳೂ ಅಧ್ಯಕ್ಷರೂ 'ಗೋವೆಯು ಯಾವಾಗಲೂ ಪೋರ್ತುಗೀಜರದೇ!' ಎಂದು ಮಾತನಾಡಿಬಂದಿದ್ದಾರೆ. ಒಬ್ಬ ಕಳ್ಳನಿಗೆ ಇನ್ನೊಬ್ಬ ಸುಲಿಗೆಗಾರನ ಸಹಕಾರ. ಕಾಶ್ಮೀರನ್ನು ತಮ್ಮದನ್ನಾಗಿ ಮಾಡಿಕೊಳ್ಳಬೇಕೆಂಬ ಲೋಭದ ಭ್ರಾಂತಿಯಲ್ಲಿ ಈ ನೆರೆಮನೆಯ ದಾಯಾದಿಗಳು, ಗೋವೆಯು ಪೋರ್ತುಗೀಜರದೆಂದು ಸಾರಲು ಸಿದ್ಧರಾಗಿದ್ದಾರೆ. ಮೂರು ದಿನಗಳಗೊಂದು ಸರಕಾರ ಕಟ್ಟಿ ಉರುಳಿಸುತ್ತಿರುವ ತಮ್ಮ ಹುಂಬತನಕ್ಕಾಗಿ ಜಗತ್ತೇ ನಗುತ್ತಿರುವಾಗ, ತಮ್ಮ ಮಾತಿಗೆ ಈ ಜಗತ್ತಿನ ರಾಜಕೀಯ ಪೇಟೆಯಲ್ಲಿ ಎಂತಹ ಬೆಲೆಯಿದೆಯೆಂಬುದನ್ನು ಅವರು ಅರಿಯುವುದೆಂತು? ಈ ಶಿಶುಪಾಲಾಪರಾಧಗಳನ್ನು ನಮ್ಮ ಭಾರತದ ರಾಜಕೀಯ ಕೃಷ್ಣ, ಇನ್ನು ಎಲ್ಲಿಯ ವರೆಗೆ ಎಣಿಸುತ್ತ ಕೂಡುವನೋ ನೋಡಬೇಕು!

ಯಾರ ಗೆಲವು?

(ಒಂದು ಸಣ್ಣ ಕತೆ)

ಶ್ರೀ. ವ್ಹಿ. ಬಿ. ದೇಶಪಾಂಡೆ ಬಿ. ಎಸ್‌ಸಿ. ಮುಂಬಯಿ.

卐

ದಾಂಪತ್ಯಜೀವನದ ಸಂಪೂರ್ಣ ಸೌಖ್ಯ ಏತರಲ್ಲಿದೆ? ಪತಿ-ಪತ್ನಿಯರು ವಾತ್ಸಲ್ಯ-ಭಾವಭರಿತ ಹೃದಯದಿಂದ ತಮ್ಮ ಹಸುಳೆಯನ್ನು ಮುದ್ದಾಡುವುದರಲ್ಲಿಯೇ ಅಲ್ಲವೆ? ಮಂಜುಳೆ, ರಂಗನಾಥ ಇಬ್ಬರೂ ಅದನ್ನು ಬೇಡವೆಂದಿದ್ದರು; ಆದರೆ....?

ಸಪ್ಟಂಬರ್ ತಿಂಗಳ ಕೊನೆಯ ದಿನಗಳು. ಮುಂಬಯಿಯ ಮಳೆಗಾಲ ಪೂರ್ತಿ ಮುಗಿದಂತಾಗಿ, ಅಕ್ಟೋಬರಿನ ಸೆಕೆಯ ದಿನಗಳು ಕಾಲಿಕ್ಕಬೇಕೆನ್ನುವ ಸಮಯ. ಅಂದು ಶನಿವಾರ. ಪ್ರತಿದಿನದಂತೆ ಒಂಬತ್ತುವರೆ ಗಂಟೆಗೆ ಬಾಂದ್ರಾದಿಂದ ಹೊರಡುವ ಲೋಕಲ್ ಗಾಡಿಗಾಗಿ, ಮಾಹೀಮ ಸ್ಟೇಶನ್‌ನಲ್ಲಿ ಮಂಜುಳೆ ತನ್ನ ಗಂಡ ರಂಗನಾಥನೊಂದಿಗೆ ಕಾಯುತ್ತ ನಿಂತಿದ್ದಾಳೆ. ಸರಿಯಾದ ಸಮಯಕ್ಕೆ ಬಂದ ಗಾಡಿಯಲ್ಲಿ ಗಂಡ, ಹೆಂಡತಿ-ಇಬ್ಬರೂ ತಮ್ಮ ನಿತ್ಯದ ಸ್ಥಳಗಳಲ್ಲಿ ಕುಳಿತುಕೊಂಡು ಆಫೀಸಿಗೆ ತೆರಳಿದರು. ಮರೀನ್ ಲಾಯಿನ್ಸ್ ಸ್ಟೇಶನ್‌ನಲ್ಲಿಳಿಯಲು ಸಿದ್ಧವಾಗತೊಡಗಿದ ರಂಗನಾಥ; ಆಗ ಮಂಜುಳಾ ತನ್ನ ಹ್ಯಾಂಡಬ್ಯಾಗ್ ತೆರೆದು, ಹಿಂದಿನ ದಿನವೇ ತಾನು ರಿಝರ್ವ್ ಮಾಡಿಸಿದ ಎರಡು ತಿಕೀಟುಗಳಲ್ಲಿ ಒಂದನ್ನು ರಂಗನಾಥನಿಗೆ ಕೊಟ್ಟು, "ಸರಿಯಾಗಿ ಮೂರೂಕಾಲಿಗೆ ಇರೋಸ್ ಥಿಯೇಟರಿಗೆ ಬರ್ತೀರಿ ತಾನೆ? ೨-೨೫ರವರೆಗೆ ಹೊರಗೆ ದಾರೀಕಾಯ್ತು, ನಾನು ಒಳಗೆ ಹೋಗಿ ಕೂತ್ಕೊಳ್ತೀನೆ. ದಯವಿಟ್ಟು ಬೇಗನೆ ಬನ್ನಿ" ಎಂದು ಹೇಳುವಷ್ಟರಲ್ಲಿ ಗಾಡಿ ನಿಂತಿತು.

ರಂಗನಾಥ "ಆದಷ್ಟು ಬೇಗ ಬರುವೆ" ಎಂದು ಹೇಳಿ, ಗಾಡಿಯಿಂದಿಳಿದು ಇನ್‌ಕಮ್‌ಟ್ಯಾಕ್ಸ್ ಆಫೀಸಿನಲ್ಲಿ ದಿನದ ಕೆಲಸಕ್ಕೆ ಸಾಗಿದ.

ಮಂಜುಳೆ ಚರ್ಚ್‌ಗೇಟಿನಲ್ಲಿಳಿದು, ಮ್ಯಾಕ್ಸ್‌ಬೇಕರ್ ಕಂಪನಿಯಿದ್ದ ಕಟ್ಟಡದ ಕಡೆಗೆ ಸಾಗಿದಳು. ವಾರದಲ್ಲಿ ಐದು ದಿನ ಹತ್ತುವರೆಯಿಂದ ಐದುವರೆ ವರೆಗೆ ಟೆಲಿಫೋನ್ ಆಪರೇಟರ್ ಕೆಲಸಮಾಡಿ ಬೇಜಾರು ಪಟ್ಟುಕೊಂಡು, ಶನಿವಾರದ ಆಗಮನವನ್ನು ಆತುರದಿಂದ ಕಾಯ್ದು, ಅರ್ಧದಿವಸದ ಕೆಲಸವನ್ನು ಮಧ್ಯಾನ್ಹ ಎರಡುವರೆಗೆ ಮುಗಿಸಿಕೊಂಡು, ಇರೋಸ್‌ನಲ್ಲಿ ಜೇನ್‌ವಾಯ್‌ಮನ್‌ಳು ಅಭಿನಯಿಸಿದ "ದಿ ಬ್ಲೂ ವೇಲ್" (The Blue Veil) ಎಂಬ ಚಿತ್ರವನ್ನು ನೋಡಿಯೇ ಮನೆಗೆ ಹೋಗುವುದೆಂದು ಮೊದಲೇ ನಿರ್ಧರಿಸಿ, ಶುಕ್ರವಾರ ಸಾಯಂಕಾಲವೇ ತಿಕೀಟುಗಳನ್ನು ಪಡೆದುಕೊಂಡಿದ್ದಳು. ಮ್ಯಾಕ್ಸ್‌ಬೇಕರ್‌ಕಂಪನಿಯ ಆಫೀಸರುಗಳು ಸರಿಯಾಗಿ ಎರಡುವರೆಗೆ ಕೆಲಸ ಮುಗಿಸಿಕೊಂಡು, ಕಾರಿನಲ್ಲಿ ಹೊರಟುಹೋಗುತ್ತಿದ್ದರು. ಅವರು ಹೋದಮೇಲೆ ಐದುನಿಮಿಷಗಳಲ್ಲಿಯೇ ಕೀಬೋರ್ಡನ್ನು ಮುಚ್ಚಿಬಿಟ್ಟು, ಮಂಜುಳೆಯೂ ಹೊರಡುತ್ತಿದ್ದಳು. ಆದರೆ ರಂಗನಾಥ ಮಾತ್ರ ಎಷ್ಟೇ ಜಾಗ್ರತೆಯಾಗಿ ಕೆಲಸ ಮುಗಿಸಿ ಹೊರಡಬೇಕೆಂದರೂ, ಹೊರಡುವ ಸಮಯದಲ್ಲಿ ಯಾರಾದರೂ ತಮ್ಮ ಕೇಸಿನ ಬಗ್ಗೆ ಕೇಳಲು ಬಂದುಬಿಟ್ಟು, ಅವನನ್ನು ವೇಳೆಗೆ ಸರಿಯಾಗಿ ಹೊರಡದಂತೆ ಮಾಡುತ್ತಿದ್ದರು. ಅಂತೆಯೇ ದಿನಾಲು ಮಂಜುಳೆ ಅವನಿಗೋಸ್ಕರ ಮರೀನ್ ಲಾಯಿನ್ಸ್ ಸ್ಟೇಶನ್ನಿನಲ್ಲಿ ಅವನ ದಾರಿ ಕಾಯದೆ,-ತನ್ನ ಆಫೀಸು ಮುಗಿಸಿಕೊಂಡು ನೇರವಾಗಿ ಮನೆಗೆ ಬಂದುಬಿಡುತ್ತಿದ್ದಳು. ರಂಗನಾಥ ಏಳು—ಕೆಲವು ಸಲ ಎಂಟು ಗಂಟೆಯವರೆಗೂ ಕೆಲಸಮಾಡಿ ದಣಿದು ಮನೆ ಸೇರುತ್ತಿದ್ದ. ಅವನದು ಬಹಳ ಅನಿಯಮಿತವಾದ ದಿನಚರ್ಯೆ. ಇವೊತ್ತು ಹಾಗಾದಲ್ಲಿ—ಮಂಜುಳೆಗೆ, ತಾನೊಬ್ಬಳೇ ಚಿತ್ರಪಟವನ್ನು ನೋಡುವ ಪ್ರಸಂಗ ಬರಬಹುದು. ಏನೇ ಆದರೂ ಇಂಟರವ್ಹಲ್ ವರೆಗೆ ಅವನ ದಾರಿ ಕಾಯ್ದು, ಅವನು ಬಾರದಿದ್ದಲ್ಲಿ ಮನೆಗೆ ಎದ್ದು ಹೋಗಿಬಿಡಬೇಕು—ಎಂದುಕೊಂಡಿದ್ದಳು.

ಸರಿಯಾಗಿ ಎರಡುವರೆಗೆ ಆಫೀಸು ಬಿಟ್ಟಕೂಡಲೆ, ಮಂಜುಳೆ ಆಫೀಸಿನ ಟಾಯಪಿಸ್ಟ ಸ್ನೇಹಿತೆಯೊಂದಿಗೆ ಚಹಾಕುಡಿದು, ಮೂರು ಗಂಟೆಗೆ 'ಇರೋಸ್' (Eros) ಬಾಗಿಲಲ್ಲಿ, ರಂಗನಾಥನಿಗಾಗಿ ದಾರಿ ಕಾಯುತ್ತ ನಿಂತಳು. ೨-೨೫ ಆದರೂ ಅವನ ಸುಳಿವಿಲ್ಲ. ಬರುವಾಗಲೇ ಅವನಿಗೆ ಫೋನ್‌ಮಾಡಿ ಕೇಳಿದಾಗ, 'ಬೇಗನೇ ಕೆಲಸ ಮುಗಿಸಿ ಮೂರುಗಂಟೆಯೊಳಗಾಗಿ ಆಫೀಸಿನಿಂದ ಹೊರಡುವೆ' ಎಂದು ಭರವಸೆ ಕೊಟ್ಟಿದ್ದ. ಆದರೂ ಅರ್ಧಗಂಟೆ ಕಾಲ ದಾರಿ ಕಾಯ್ದು, ಕೊಂಚ ಅನುಮಾನದಿಂದಲೇ ಆಕೆ ಥಿಯೇಟರಿನಲ್ಲಿ ಹೋದಳು. ಸರಿಯಾಗಿ ಮೂರುವರೆಗೆ ಸಮಾಚಾರಚಿತ್ರ ಆರಂಭವಾಯಿತು. ಅನಂತರ ಐದು ನಿಮಿಷಗಳಲ್ಲಿ ರಂಗನಾಥ ಧಾವಿಸಿ ಏದುತ್ತ ಬಂದು ಮಂಜುಳೆಯ ಪಕ್ಕದ ಸೀಟಿನಲ್ಲಿ ಕುಳಿತ.

"ಕೊನೆಗೂ ಬಂದಿರಾ? ಇಂಟರ್‌ವ್ಹಲ್‌ವರೆಗೆ ನಿಮ್ಮ ದಾರಿ ಕಾಯ್ದು, ನಾನು ಎದ್ದು ಮನೆಗೆ ಹೋಗಬೇಕೆಂದುಕೊಂಡಿದ್ದೆ" ಎಂದು—ಮೆಲ್ಲಗೆ, ಸ್ವಲ್ಪ ಕೋಪಬೆರೆಸಿದ ದನಿಯಲ್ಲಿ—ಹೇಳಿದಳು ಮಂಜುಳಾ. "ನಿನ್ನ ಫೋನ್ ಬಂದಾಗ ನಾನೆಲ್ಲ ಕೆಲಸ ಪೂರ್ತಿ ಮುಗಿಸಿಬಿಟ್ಟಿದ್ದೆ; ಆದರೆ ಹೊರಡಬೇಕೆಂದುಕೊಂಡಾಗ, ಈ ತಿಂಗಳ

ಸ್ಟೇಟ್‌ಮೆಂಟ್ ಕೇಳಿದರು ನಮ್ಮ ಆಫೀಸರರು. ಅದನ್ನು ಅವರ ಕಣ್ಣಿಗೆ ಹಾಕಿ, 'ಸೋಮವಾರ ಬೆಳಗ್ಗೆ ಪೂರ್ತಿ ಮಾಡಿದ್ದನ್ನು ಒಪ್ಪಿಸುವೆ' ಎಂದು ಹೇಳಿ, ಈ ಕಾಗದಗಳ ಕಟ್ಟನ್ನು ಹೊತ್ತುಕೊಂಡು ಬಂದಿರುವೆ."

"ಸರಿ, ಭಾನುವಾರವೂ ಆಫೀಸನ್ನು ಮನೆಗೆ ತಂದಿರಾ? ಏನೇ ಆಗಲಿ, ಸದ್ಯ ಪಿಕ್ಚರ್ ಆದರೂ ನೋಡಬಹುದು!"

\+ + +

ಚಿತ್ರಪಟವನ್ನು ನೋಡಿ, ಕಣ್ಣಂಚಿನಲ್ಲಿ ಕೂಡಿದ ನೀರನ್ನು ಮಿದುವಾಗಿ ಒರಸುತ್ತಾ, ರಂಗನಾಥನೊಂದಿಗೆ ಮಂಜುಳೆ ಚರ್ಚ್ ಗೇಟಿಗೆ ಬಂದಳು. ಅತಿ ಗದ್ದಲವಾಗಿರುವ ಅಂಧೇರಿ-ಬೋರಿವಿಲಿಯ ಗಾಡಿಗಳನ್ನು ಬಿಟ್ಟು, ಬಾಂದ್ರಾ ಲೋಕಲನ್ನು ಹತ್ತಿ, ಒಂದು ಕಿಟಕಿಯ ಬಳಿ ಕುಳಿತರು. ಅಲ್ಲಿಯವರೆಗೆ ಇಬ್ಬರಲ್ಲಿಯೂ ಮಾತೇ ಇರಲಿಲ್ಲ. "ಕೊನೆಯ ಸೀನ್ಸುಗಳು ಎಷ್ಟು ಮಾರ್ಮಿಕವಾಗಿವೆ, ಅಲ್ಲವೇ? ನನ್ನ ಕಣ್ಣುಗಳೂ ತೇವಗೊಂಡುವು, ಮಂಜೂ!" ಮೌನವನ್ನು ಮುರಿದು ಮಾತನಾಡಿದ ರಂಗನಾಥ. "ನೋಡಿ, ಜೀವಮಾನವೆಲ್ಲ ಹೆರರ ಮಕ್ಕಳನ್ನು ಪ್ರೀತಿಯಿಂದ ಸಾಕಿ ಸಲಹಿದಳು. ಯಾವ ಪ್ರತಿಫಲದ ಅಪೇಕ್ಷೆಯೂ ಇರಲಿಲ್ಲ. ಮುಪ್ಪಿನ ಕಾಲದಲ್ಲಿ ತನ್ನವರೆನ್ನುವವರು ಯಾರೂ ಇಲ್ಲದಾಗ, ಅವಳು ಸಾಕಿ ಸಲಹಿದ ಬೇರೆ ಜನರ ಮಕ್ಕಳೇ ಈಗ ದೊಡ್ಡವರಾಗಿ, ಅವಳನ್ನು ಗುರುತಿಸಿ, ಅವಳಿಗೆಷ್ಟು ಸಹಾಯ ಸಹಕಾರ ನೀಡಿ ಆತ್ಮೀಯತೆ ತೋರಿಸುತ್ತಾರೆ. ಇವೊತ್ತಿನ ಈ ಚಿತ್ರ ನೋಡದಿದ್ದಲ್ಲಿ, ಒಂದು ಒಳ್ಳೆಯ ಚಿತ್ರವನ್ನು ನಾವು ತಪ್ಪಿಸಿಕೊಂಡಂತಾಗುತ್ತಿತ್ತು, ಅಲ್ವೆ?" ಎಂದು ಮಂಜುಳೆಯೂ ದನಿಗೂಡಿಸಿದಳು.

ಮನೆ ತಲುಪಿದಾಗ ಏಳು ಗಂಟೆಯಾಯಿತು. ಬಾಗಿಲನ್ನು ತೆರೆದು, ಅಂಚೆಯವನು ಏನಾದರೂ ಕಾಗದ ಒಗೆದಿದ್ದಾನೆಯೇ ಹೇಗೆ-ಎಂದು ನೋಡಿದಳು. "ಅಮ್ಮನ ಕಾಯಿಲೆಯ ಬಗ್ಗೆ ಇವೊತ್ತು ಆಫೀಸಿನಲ್ಲಿಯೂ ಕಾಗದ ಬರಲಿಲ್ಲ; ಇಲ್ಲಿಯೂ ಬಂದಿಲ್ಲ. ಹೇಗಿದ್ದಾರೋ ಏನೋ? ಬಂದ ಜ್ವರ ಇಳಿದಿಲ್ಲವೆಂದು ಹೋದ ಸಲವೇ ಕಾಗದದಲ್ಲಿದೆ. ಡಾಕ್ಟರರು ಟೈಫಾಯಿಡ್ ಎಂದು ಬೇರೆ ಹೇಳಿದ್ದಾರಂತೆ." ಅದಕ್ಕೆ ರಂಗನಾಥ "ನಾಳೆ ಭಾನುವಾರ, ಇನ್ನು ಸೋಮವಾರವೇ ಬರಬೇಕು ಕಾಗದ. ಜ್ವರವಿಳಿದಿರಬಹುದು!" ಎಂದನು. ಮಂಜೂ ಬಟ್ಟೆ ಬದಲಾಯಿಸಿ, ಎರಡು ಕಪ್ ಕಾಫಿ ಮಾಡಿ ಇಬ್ಬರೂ ಕುಡಿದ ನಂತರ, ಅಡಿಗೆಯನ್ನು ಪ್ರಾರಂಭಿಸಿದಳು. ಇಬ್ಬರ ಊಟ ಮುಗಿದು ಒಳಗಿನ ಕೆಲಸ ಮುಗಿಸಿಕೊಂಡು ಮಲಗುವ ಸಿದ್ಧತೆ ಮಾಡಿದಾಗ, ರಾತ್ರಿ ಹತ್ತು ಗಂಟೆಯಾಯಿತು. ರಂಗನಾಥನಿಗಾಗಿ ಒಂದು ಒಳ್ಳೆಯ ಚಿಗುರೆಲೆಯ ವೀಡಾ ತಯಾರಿಸಿ ಮಂಜೂ ಮುಂದೆ ಹಿಡಿದಳು.

"ಮಂಜೂ, ಈ ಒಣ ವೀಡಾ ನಾನು ತಿಂದದ್ದು ಯಾವಾಗ?"

"ಒಂದು ಸಲವಾದರೂ ಮರೆತು ತೆಗೆದುಕೊಳ್ಳೀರಾ, — ಎಂದು ನೋಡಬೇಕೆಂದಿದ್ದೆ" ಎಂದವಳು, ಅದನ್ನು ಬಾಯಲ್ಲಿ ಹಾಕಿಕೊಂಡು ಅರ್ಧನುರಿಸುತ್ತಿರುವಾಗ, ರಂಗನಾಥ ಅವಳನ್ನು ಸೆಳೆದುಕೊಂಡು:

"ಮಂಜೂ, ಏನು ಬಹಳ ದೂರವಾಗಿಬಿಟ್ಟಿಯಲ್ಲೇ?"

"ಇಷ್ಟು ಸಮೀಪ ಹಿಡಿದುಕೊಂಡೂ, ಬಹಳ ದೂರವಾಗಿದ್ದೇನೆ ಅಂತ ಹೇಳ್ತೀರಲ್ಲಾ?"

"ನನ್ನನ್ನು ಅರ್ಥ ಮಾಡಿಕೊಂಡರೂ, ಬೇಕೆಂತಲೇ ಕೇಳ್ತೀಯಾ?"

"ಸರಿ, ಅದೇ—ಅರ್ಥವಾಯಿತು. ಮಗೂಗೆ ಹೇಳಿದ ಹಾಗೆ ಪದೇ ಪದೇ ಹೇಳಿದ್ದೇ ಹೇಳಬೇಕು. ನಮ್ಮ ಮದುವೆಯಾಗಿ ಈಗ ಮೂರುವರೆ ವರ್ಷಗಳಾಗಿರಬೇಕು. ನಮ್ಮ ಸ್ಥಿತಿ-ಗತಿಗಳಲ್ಲಿ ಏನೂ ಬದಲಾವಣೆಯಿಲ್ಲ. 'ಕನಿಷ್ಟ ಐದುವರ್ಷಗಳಾದರೂ ಕಳೆಯದೇ ನನಗೆ ಮಗು ಆಗುವುದು ಬೇಡ' ಎಂದು ನಿರ್ಧಾರ ಮಾಡಿದ್ದು ಮರೆತುಬಿಟ್ಟಿರಾ?"

"ಈ ವಯಸ್ಸಿನಲ್ಲಿ, ಇಂಥ ನಿರ್ಧಾರಕ್ಕೆ ಜೋತು ಬೀಳುವುದೇ?"

"ನಮ್ಮಿಬ್ಬರ ಹಿತಕ್ಕಾಗಿ, ನಾವಿಬ್ಬರೂ ಕೂಡಿಯೇ ಈ ಕಟ್ಟುನಿಟ್ಟನ್ನು ಪಾಲಿಸುವುದೆಂದುಕೊಂಡಿರಲಿಲ್ಲವೇ? ಈಗ ಈ ನಿರ್ಧಾರ ಮುರಿದು ನಮ್ಮ ಸೋಲನ್ನೊಪ್ಪಿಕೊಳ್ಳಬೇಕೇ?"

"ಯಾರ ಸೋಲೇ, ಯಾರ ಗೆಲವೇ?"

"ಅಯ್ಯೋ, ನಿಮಗೆಷ್ಟು ಆತುರ ನನಗೂ ಅಷ್ಟೇ ಕಣ್ರೀ ಆದರೆ ನಾವು ನಮ್ಮ ಜೀವನವನ್ನು ಈ ರೀತಿ ರೂಪಿಸಿಕೊಳ್ಳುವುದೆಂದು ಮದುವೆಗೆ ಮೊದಲೇ ನಾನ್ ಮಾಡಿದ ಯೋಜನೆಗೆ, ನೀವೇ ಅಡ್ಡ ಬಂದರೆ, ನಮ್ಮ ಬದುಕಿಗೆ ಗೊತ್ತು ಗುರಿ ಒಂದೂ ಉಳಿಯುವುದಿಲ್ಲ. ಸರಿ ಮತ್ತೆ ಮತ್ತೆ ಅದನ್ನೇ ಚರ್ಚಿಸಲು ನನಗೆ ಬೇಜಾರು! ಇಷ್ಟಕ್ಕೂ ಸಾಧನೆಗಳನ್ನು ತಂದಿದ್ದೀರಿ ತಾನೇ? ಮೊನ್ನೆಯೇ 'ತೀರಿ ಹೋಗಿವೆ, ತರಬೇಕು' ಅಂದಿರಲ್ಲ?"

"ನಿನ್ನ ಸಾಧನೆಗಳಿಗೆ ಬೆಂಕೀ ಹಾಕ್ತು. ಇನ್ನು ಸಾಧನೆಯುನೆಂದೂ ಮುಟ್ಟೋದಿಲ್ಲ. ನೀನೂ ಬೇಡ—ನಿನ್ನ ಸಾಧನೇನೂ ಬೇಡ, ತೊಲಗಾಚೆ!" ಎಂದು ತಳ್ಳಿಬಿಟ್ಟ.

ದುಃಖವುಕ್ಕಿ ಬಂದು, ಮಂಜೂ ತನ್ನ ಮಂಚದ ಮೇಲೆ ಅಳುತ್ತಾ ಬಿದ್ದುಕೊಂಡಳು. ಹತ್ತು ನಿಮಿಷಗಳ ಮೇಲೆ ಕಣ್ಣಹನಿಗಳ ಮೊದಲ ಸೆಳಕು ಸುರಿದನಂತರ, ಮೆಲ್ಲಗೆ ಎದ್ದು ರಂಗನಾಥನ ಮಗ್ಗುಲಿಗೆ ಬಂದು ಕುಳಿತು, ಅವನ ಮುಂಗುರುಳಲ್ಲಿ ಬೆರಳಾಡಿಸುತ್ತಾ:

"ನನ್ನದು ತಪ್ಪಾಯಿತು ಕಣ್ರೀ! ನೀವಿಷ್ಟು ಕೋಪ ಮಾಡಿಕೊಂಡರೆ ನನ್ನ ಎದೆ ಒಡೆದಷ್ಟು ಭಯವಾಗ್ತದೆ. ಇನ್ನೆಂದೂ ನಿಮ್ಮ ಮನಸ್ಸಿಗೆ ವಿರುದ್ಧವಾಗಿ ಹೋಗುವುದಿಲ್ಲ. ನಿಮಗೆ ಹೇಗೆ ತಿಳಿಯತ್ತೋ ಹಾಗೆ ಮಾಡಿ! ದಯವಿಟ್ಟು ಈ ಕಡೆಗೆ ಮುಖಮಾಡ್ತೀರಾ?"

ಆದರೆ ರಂಗನಾಥ ಗೋಡೆಯ ಕಡೆಗೆ ಮುಖಮಾಡಿಕೊಂಡು ಮಲಗಿದವ, ಮಿಸುಕಲಿಲ್ಲ ಅವಳಮೇಲೆ ಕೋಪ ಇನ್ನೂ ಉಕ್ಕುತ್ತಿತ್ತು. ಅವಳು ಇನ್ನೊಂದು ಸಲ ಅಂಗಲಾಚಬಹುದೇನೋ ಎಂದುಕೊಂಡಿದ್ದ. ಮಂಜೂ ಮಾತ್ರ ಗಂಡನ ನಿಶ್ಚಲತೆಯನ್ನು ಕಂಡು ಅಲ್ಲಿಂದೆದ್ದು, ತನ್ನ ಮಂಚದ ಮೇಲೆ ಬಿದ್ದುಕೊಂಡಳು. ಹಾಗೆಯೆ ರಾತ್ರಿ ಕಳೆಯಿತು.

ಮರುದಿನ ಭಾನುವಾರ. ಆಫೀಸಿನ ಗಡಿಬಿಡಿಯಿಲ್ಲದಿದ್ದರೂ, ಬೇಗನೇ ಎಚ್ಚರವಾಯಿತು ಮಂಜುಳೆಗೆ. ಎದ್ದು ನಿತ್ಯದಂತೆಯೇ ಬೇಗನೆ ಸ್ನಾನ ಮುಗಿಸಿ ಕಾಫಿಮಾಡಿ, ರಂಗನಾಥನನ್ನು ಎಬ್ಬಿಸಿ-ದಳು. ಶುಭ್ರ ವಸನಧಾರಿಣಿಯಾದ—ನಿರಾಭರಣ ಸುಂದರಿಯಾದ—ಹೆಂಡತಿಯ ಕಡೆಗೆ ನೋಡಿದ. ಬೇಸಗೆಯಲ್ಲಿಯ ಅಡ್ಡಮಳೆಯ ಚೆನ್ನಾದ ಸೆಳಕುಗಳಿಂದ ತೊಳೆದು, ಸ್ವಚ್ಛವಾದ ಪ್ರಕಾಶಮಾನವಾದ ಪ್ರಾತಃಕಾಲದಂತೆ ಕಂಡಳು ಮಂಜೂ. ಹಿಂದಿನ ರಾತ್ರಿಯ ಯಾವ ಅಸಂತೋಷದ ಛಾಯೆಯೂ ಪತಿಯ ಮುಖದಲ್ಲಿ ಕಾಣದಿರಲು, ಮಂಜುಳೆಯ ಮುಖ ಗೆಲುವಾಯಿತು. ಅವನ ಜೊತೆ ಕಾಫಿ ಕುಡಿಯುತ್ತಾ:

"ಇವತ್ತು ಸಂಡೇಫೀಸ್ಟ್ ಏನು ಮಾಡಲಿ?" ಎಂದು ಕೇಳಿದಳು.

"ನೀನೇನು ಮಾಡಿದ್ರೂ ಫೀಸ್ಟೇ ಕಣೇ. ನಿನ್ನನ್ನು ಮದುವೆ ಯಾದ ಮೊದಲು ನಿನ್ನ ಅಡಿಗೆ ಉಂಡು ಹೇಗೆ ಬದುಕೇನು ಎಂದು ಕೊಂಡಿದ್ದೆ. ಆದರೆ ಈಗ ನಿನ್ನ ಅಡಿಗೆಯ ವಾಸನೆ ಹಿಡಿದು, ನೆರೆ-ಹೊರೆಯವರು ನಿನ್ನ ತಾರೀಫ್ ಮಾಡೋದನ್ನು ಕೇಳಲು ನನ್ನೆರಡೂ ಕಿವಿ ಸಾಲದಾಗಿವೆ."

"ಬಿಡೀಂದ್ರೆ, ಈಗ ಏನು ಬೇಕು ಹೇಳಿ, ಕೇಸರೀಭಾತ್ ಮಾಡಲಾ?"

"ಸರಿ. ಜೊತೆಗೆ ಕೊಂಚ ಈರುಳ್ಳಿಯ ಬೋಂಡಗಳನ್ನೂ ತಯಾರಿಸು!" ಎಂದು ಹೇಳಿ, ಸಂಡೇ-ಪೇಪರು ಸ್ವಲ್ಪ ಹೊತ್ತು ಓದಿ, ಆಫೀಸಿನ ಕಾಗದಗಳನ್ನು ಹರಡಿಕೊಂಡು ಕುಳಿತ ರಂಗಣ್ಣ. ಒಳಗೆ ಒಲೆ ಹೊತ್ತಿಸಿ ಅಡಿಗೆಗಿಟ್ಟು, ಮಂಜುಳಾ, ಸಂಡೇ ಪೇಪರಿನ ಫಿಲ್ಮ್ ಪೇಜನ್ನು ಓದ್ತಾ ಓದ್ತಾ ಅಡಿಗೆ ಪೂರೈಸಿದಳು. ರಂಗನಾಥನ ಸ್ನಾನ ವಾದಮೇಲೆ, ಇಬ್ಬರೂ ಎದುರುಬದುರಾಗಿ ತಾಟುಗಳನ್ನು ಮಂಡಿಸಿ ಊಟಕ್ಕೆ ಕುಳಿತುಕೊಳ್ಳಲು ಅಣಿಮಾಡಿಕೊಂಡರು

ಹೊರಗೆ ಯಾರೋ ಬಾಗಿಲನ್ನು ಬಡಿದಂತಾಯಿತು; ರಂಗನಾಥ ಬಾಗಿಲ ತೆರೆದಾಗ, ಎದುರಿಗೆ ಟೆಲಿಗ್ರಾಮಿನವ "ಜಿ ಎಸ್. ರಂಗನಾಥ–ಎಕ್ಸ್‌ಪ್ರೆಸ್ ಟೆಲಿಗ್ರಾಮ್" ಎಂದು ಕವ್ಹರನ್ನು ಮುಂದೆ ಮಾಡಿದ. ಮಂಜೂ ಕುಡಿಯುವ ನೀರನ್ನು ತುಂಬಿಡುತ್ತಿದ್ದ ತಂಬಿಗೆಯನ್ನು ಕೈಯಲ್ಲಿ ಹಿಡಿದುಕೊಂಡೇ ಬಾಗಿಲತ್ತ ಬಂದು:

"ಅಯ್ಯೋ ಟೆಲಿಗ್ರಾಮೋ? ಅಮ್ಮನಿಗೆ ಹೇಗೋ ಏನೋ! ಬೇಗನೇ ಒಡೆದು ನೋಡಿ" ಎಂದು ಅತ್ಯಾತುರಪಡಿಸಿದಳು. ದಸ್ಕತ್ತು ಹಾಕಿ ರಂಗನಾಥ, ಅಂಚೆಯವನನ್ನು ಕಳುಹಿ, ಕವ್ಹರ್ ಒಡೆದು ನೋಡಿದ! 'ಮಂಜೂನ ಅಮ್ಮನಿಗೆ ಕಾಯಿಲೆ ಹೆಚ್ಚಾಗಿದೆ. ಕೂಡಲೇ ಹೊರಡಿ!' ಎಂದು ಮಂಜೂನ ತಂದೆ ತಂತಿಬಿಟ್ಟಿದ್ದರು.

ಅದನ್ನು ಕೇಳಿ ಮಂಜೂ ಕುಸಿದು ಕುಳಿತಳು. "ಅಮ್ಮಾ ಅಮ್ಮಾ" ಎಂದು ಅಳಹತ್ತಿದಳು. ರಂಗನಾಥ ಹೆಂಡತಿಯ ಕೈಯಲ್ಲಿಯ ತಂಬಿಗೆ ತೆಗೆದುಕೊಂಡು, "ಏನು, ಹುಚ್ಚೀ ನಿನಗೆ? ಮಗುವಿನ್ಹಾಗೆ ಅಳ್ತಾ ಕುಳಿತುಕೊಂಡರೆ ಆಯಿತೇ?—ಅಮ್ಮನ್ನ ಕಾಣಬೇಕೆಂದರೆ ಬೇಗನೆ ಗಾಡಿಹಿಡಿಯಬೇಡವೇ? ಏಳು, ಊಟ ಮುಗಿಸೋಣ!" ಎಂದು ಅವಳನ್ನು ಹಿಡಿದು ಎಬ್ಬಿಸಿದ. ಹೇಗೋ ನಾಲ್ಕು ತುತ್ತು ಊಟಮಾಡಿ ಮಂಜೂ ಏಳುವುದರಲ್ಲಿದ್ದಳು.

"ಒಂದು ದಿನವೆಲ್ಲ ಪೂರ್ತಿ ಪ್ರವಾಸ ಮಾಡಬೇಕು. ಹೀಗೆ ಅರೆಹೊಟ್ಟೆ ಊಟಮಾಡಿ ಹೋಗೋದೇ?" ಎಂದು ಬಲವಂತ ಮಾಡಿ, ಅವಳು ಇನ್ನಷ್ಟು ಊಟಮಾಡುವಂತೆ ಮಾಡಿದ ರಂಗನಾಥ.

"ನಿಮಗೂ ಬರಲಿಕ್ಕಾಗತ್ತೇನ್ರೀ?"

"ಮಂಜೂ, ನನಗೂ ನಿಮ್ಮಮ್ಮನ್ನ ಕಾಣಬೇಕೆಂಬಾಶೆ ಇದೆ. 'ಚಿಕ್ಕ ಅಳಿಯ' ಎಂದು ನನ್ನ ಮೇಲೆ ಅವರಿಗೆ ಮಮತೆ ಬಹಳ ಎನ್ನುವುದನ್ನೂ ತಿಳಿದಿದ್ದೇನೆ. ನಿನಗೆ ಗೊತ್ತೇ ಇದೆ—ನನ್ನ ಆಫೀಸಿನ ವಿಷಯ! ನೀನು ಹೋಗಿ ಅವರ ಆರೋಗ್ಯದ ಬಗ್ಗೆ ನನಗೆ ತಂತಿ-ಯಿಂದ ತಿಳಿಸು. ನಾನೂ ಕೂಡಲೆ ಹೊರಡಲು ಹವಣಿಸುವೆ."

"ನಾನೊಬ್ಬಳೇ ದಿನವೆಲ್ಲ ಪ್ರವಾಸಮಾಡಿ, ಬೆಂಗಳೂರು ಹೇಗೆ ತಲುಪುತ್ತೇನೋ ದೇವರೇ ಬಲ್ಲ!"

"ಗಾಡಿಯಲ್ಲಿ ಯಾರಾದರೂ ಜೊತೆ ಸಿಕ್ಕಬಹುದು. ಇಷ್ಟಕ್ಕೂ ನೀನೇನು ಹಳ್ಳಿಯ ಮುಕ್ಕೇ? ಕೊಂಚ ಧೈರ್ಯ ತಂದುಕೋ!" ಎಂದು ನುಡಿದ ರಂಗನಾಥ.

ಊಟ ಮುಗಿಸಿ ಅವಳ ಪ್ರವಾಸಕ್ಕಾಗಿ ಅಣಿಮಾಡಿದ. ಕೆಲಸದವಳ ಕೈಯ್ಯಲ್ಲಿ ಬೀಗದ ಕೈ ಕೊಟ್ಟು, ಮನೆಗೆಲಸ ಮುಗಿಸಿ ನೆರೆಮನೆಯಲ್ಲಿ ಬೀಗದ ಕೈ ಕೊಡಲು ಹೇಳಿ, ಹಾರ್ಬರ್ ಗಾಡಿಯಿಂದ ವ್ಹಿಕ್ಟೋರಿಯಾ ಟರ್ಮಿನಸ್‌ಗೆ ಹೊರಟರು.

ಮಧ್ಯಾಹ್ನ ಒಂದೂವರೆಗೆ-ಗಾಡಿಯಲ್ಲಿ ಅಲ್ಲಿ ಇಲ್ಲಿ ಕೆಲವೇ ಜನ ಕುಳಿತಿದ್ದರು ಮಂಜೂ ಮೆಲ್ಲಗೆ "ನನ್ನ ಮೇಲೆ ಕೋಪ ಇಲ್ಲ ತಾನೇ? ದಯವಿಟ್ಟು, ನನ್ನನ್ನು ಕ್ಷಮಿಸಿ. ನಿನ್ನೆ ರಾತ್ರಿ ನಿಮಗೆ ಬಹಳ ಅಸಮಾಧಾನವಾಯಿತೇ?" ಎಂದು ಕೇಳಿದಳು.

"ಮಂಜೂ, ನಿನ್ನೆ ನೀನು ಹಾಗೆ ವರ್ತಿಸಿದ್ದು, ಆಗಿನ ಮಟ್ಟಿಗೆ ಕೊಂಚ ಕೋಪ ಕೆರಳಿಸಿತು, ನಿಜ! ಆದರೆ ಸ್ವಲ್ಪ ಹೊತ್ತಿನ ಮೇಲೆ ಮನಸ್ಸು ಸ್ತಿಮಿತದಲ್ಲಿ ಬಂದು, ನಾವಿಬ್ಬರೂ ಮದುವೆಗೆ ಮೊದಲು ಮಾಡಿದ್ದ ನಿರ್ಧಾರ ನೆನಪಿಗೆ ಬಂದು, ನನ್ನದೇ ದುಡುಕು—ಅಂತ ಅನಿಸ್ತು."

"ಅಯ್ಯೋ, ನಾನಿವತ್ತು ಹೀಗೆ ಹೊರಟುಬಿಟ್ಟೆ ಅಮ್ಮನಿಗೆ ಗುಣವಾಗದೇ ಬೇಗನೇ ಬರಲಿಕ್ಕಾಗೋಲ್ಲ. ಎಷ್ಟು ದಿನವಾಗುತ್ತೋ ಏನೋ! ನಿಮ್ಮನ್ನು ನಾನು ಕೆರಳಿಸಿಬಿಟ್ಟು, ಹೀಗೆ ಹೊರಟುಹೋಗ್ತಾ ಇದ್ದೇನೆ. ನಿಮಗೆ ತುಂಬಾ ಅನ್ಯಾಯಮಾಡಿದೆ. ನನ್ನಿಂದ ನಿಮಗೆ ನಿಜವಾಗಿಯೂ ಸುಖವಿಲ್ಲ ಇತ್ತೀಚೆ ನಮ್ಮೊಳಗೆ ಕಾರಣವಿಲ್ಲದೆ ಮನಸ್ತಾಪವಾಗ್ತಿದೆ." ಎನ್ನುವಾಗ ಕಣ್ಣಲ್ಲಿ ನೀರು ಸೆಲೆಯಿತು.

"ಹಾಗೆಲ್ಲ ವ್ಯಥೆಪಡಬೇಡ ಮಂಜೂ! ಸದ್ಯ ನಿಮ್ಮ ಅಮ್ಮನಿಗೆ ಗುಣವಾಗಲಿ! ಬೇಗ ಬಾದ ಬಿಡು" ಎಂದು ರಂಗನಾಥ ಸಮಾಧಾನ ಪಡಿಸಲು ಯತ್ನಿಸಿದ.

"ನಾಳೆ ನಮ್ಮ ಆಫೀಸಿನ ಮ್ಯಾನೇಜರರಿಗೆ ನನ್ನ ರಜೆಯ ವಿಷಯ ತಿಳಿಸಿಬಿಟ್ಟು, ಆಮೇಲೆ ನೀವು ಆಫೀಸಿಗೆ ಹೋಗಿರಿ—ತಿಳಿ-

ಯಿತೇ?" ಎಂದು ಹೇಳುತ್ತಿದ್ದ ಹಾಗೆಯೇ ಗಾಡಿಯು ವಿ. ಟಿ. ಯಲ್ಲಿ ಬಂದಿತು.

ಮದ್ರಾಸ್ ಎಕ್ಸ್‌ಪ್ರೆಸ್ ಗಾಡಿಯಲ್ಲಿ ಹೆಣ್ಣು ಮಕ್ಕಳ ಕಂಪಾರ್ಟ್‌ಮೆಂಟಿನಲ್ಲಿ ಮಂಜುಳೆಯನ್ನು ಹತ್ತಿಸಿದ; ಬೆಂಗಳೂರಿಗೆಂದೇ ಹೊರಟಿರುವ ಇನ್ನೊಬ್ಬ ಮಧ್ಯವಯಸ್ಕ ಹೆಂಗುಸಿನ ಪರಿಚಯವೂ ಗಾಡಿಯಲ್ಲಿ ಆಯಿತು. ಒದ್ದೆಗಣ್ಣಿನ ಕಂದಿದ ಮುಖದ ಮಂಜುಳೆಯನ್ನು, ಗಾಡಿಯು ರಂಗನಾಥನಿಂದ ದೂರ ಕೊಂಡೊಯ್ದಿತು ಸ್ಟೇಶನ್ನಿನಿಂದಲೇ ಮಂಜೂ ಹೊರಟ ಬಗ್ಗೆ ಬೆಂಗಳೂರಿಗೆ ಟೆಲಿಗ್ರಾಮ್ ಮಾಡಿದ.

ರಂಗನಾಥನಿಗೆ ಮಂಜುಳೆಯಿಲ್ಲದ ಮನೆಗೆ ಹೋಗಲು ತುಂಬಾ ಬೇಜಾರು. ಹೋಟಲಲ್ಲಿ ಕಾಫಿ ಕುಡಿದು, ಒಂದು ಗಂಟೆಕಾಲ ಗುರಿಯಿಲ್ಲದೆ ಅಲೆದಾಡಿ, ಇಳಿಹೊತ್ತಿಗೆ ಮಲಬಾರ್ ಹಿಲ್ ಗಾರ್ಡನ್ನಿಗೆ ಬಂದು ಹುಲ್ಲುಹಾಸಿಗೆಯ ಮೇಲೆ ಒರಗಿದ. ಕಳೆದ ಕೆಲ ವರ್ಷಗಳ ತನ್ನ ಜೀವನವನ್ನು ಮೆಲುಕಾಡಿಸಹತ್ತಿದ:

ರಂಗನಾಥ ತಾನು ಹುಟ್ಟಿದ ಆರೆಂಟು ವರ್ಷಗಳಲ್ಲಿಯೆ ತಂದೆ-ತಾಯಿಗಳನ್ನು ಕಳೆದುಕೊಂಡು ತಬ್ಬಲಿಯಾಗಿದ್ದ. ಅವನ ಚಿಕ್ಕಮ್ಮ ಅವನನ್ನು ಕರೆದುಕೊಂಡು ಬೆಂಗಳೂರಿಗೆ, ಹೋದಳು; ತನ್ನ ಮೂವರು ಚಿಕ್ಕಮಕ್ಕಳ ಜೊತೆಗೆ ರಂಗನಾಥನನ್ನು ನಾಲ್ಕನೆಯವನನ್ನಾಗಿ ಸಾಕಿ ಸಲಹಿದಳು. ಚಿಕ್ಕಮ್ಮನ ಗಂಡ ಗೋವಿಂದರಾಯರು ಬ್ಯಾಂಕ್ ನೌಕರರು. ಬಡತನದಲ್ಲಿಯೇ ಸಾಧ್ಯವಿದ್ದ ಮಟ್ಟಿಗೆ ನೆಮ್ಮದಿಯಾಗಿ ಸಂಸಾರ ಸಾಗಿಸಿಕೊಂಡು ನಡೆದಿದ್ದರು ರಂಗನಾಥನ ಮೇಲೆ ಅವರಿಗೂ ತುಂಬಾ ಪ್ರೀತಿ. ಲಕ್ಷಣವಾಗಿದ್ದ, ಸುಸ್ವಭಾವಿ. ಚುರುಕು ಬುದ್ಧಿಯ ರಂಗನಾಥ ಎಲ್ಲರಿಗೂ ಬೇಕಾಗಿದ್ದ. ಸ್ಕೂಲಿನಲ್ಲಿ ಫ್ರೀಶಿಪ್ಪು ದೊರಕಿಸಿ ಎಸ್. ಎಸ್. ಸಿ. ಯಲ್ಲಿ ಒಳ್ಳೆಯ ಗುಣಗಳನ್ನು ಪಡೆದು ತೇರ್ಗಡೆಯಾದ. ಮುಂದೆ ಓದಿಸಲು ಗೋವಿಂದರಾಯರು ಶಕ್ತರಾಗಿರಲಿಲ್ಲ. ಆಗ ಗೋವಿಂದರಾಯರ ಒಬ್ಬ ನೆಂಟರು—ಧಾರವಾಡದವರು–ಬೆಂಗಳೂರಿಗೆ ಬಂದಾಗ, ರಂಗನಾಥನ ಸ್ವಭಾವ-ಬುದ್ಧಿಗಳಿಗೆ ಮಾರು ಹೋಗಿ, 'ಇವನನ್ನು ಮುಂದಕ್ಕೆ ಓದಲು ಕಾಲೇಜಿಗೆ ಕಳಿಸಲೇಬೇಕು' ಎಂದು ಅಭಿಪ್ರಾಯಪಟ್ಟು, ಚಿಕ್ಕಮ್ಮ ಹಾಗೂ ಗೋವಿಂದರಾಯರನ್ನು ಒಪ್ಪಿಸಿ, ಅವನನ್ನು ಧಾರವಾಡಕ್ಕೆ ಕರೆತಂದರು. ಅವನಿಗೆ ಊಟಕ್ಕಾಗಿ ವಾರದ ಮನೆ ಹಚ್ಚಿಕೊಟ್ಟು, ತಮ್ಮ ಪರಿಚಯದ ಒಬ್ಬ ಪ್ರೊಫೆಸರರಿಗೆ ಗಂಟುಬಿದ್ದು, ರಂಗನಾಥನಿಗೆ ಮುಕ್ಕಾಲು ಭಾಗ ಫ್ರೀಶಿಪ್ಪು ಸಿಗುವಂತೆ ಮಾಡಿದರು. ತಮ್ಮ ಮನೆಯಲ್ಲಿಯೇ ಒಂದು ಕೋಣೆಯನ್ನು, ಅವನಿಗೆ ಅಭ್ಯಾಸಮಾಡಲು ತೆರವು ಮಾಡಿಕೊಟ್ಟರು. ರಂಗನಾಥ ಇದಕ್ಕೆ ಬದಲಾಗಿ ಅವರ ಮನೆಯಲ್ಲಿ ತಾನು ನೆರವಾಗಬಲ್ಲ ಕೆಲಸಗಳನ್ನು ವಹಿಸಿಕೊಂಡು, ಅವರ ಮನೆಯವನಂತೆಯೇ ಇದ್ದು, ನಾಲ್ಕು ವರ್ಷಗಳಲ್ಲಿ ಅರ್ಥಶಾಸ್ತ್ರ ವಿಷಯ ತೆಗೆದುಕೊಂಡು ಬಿ. ಎ. ಆನರ್ಸ್ ಉಚ್ಚ ಶ್ರೇಣಿಯಲ್ಲಿ ಪಾಸುಮಾಡಿದ. ಪರಿಸ್ಥಿತಿ ಅನುಕೂಲವಾಗಿರದ ಕಾರಣ ಸಕಾಲಕ್ಕೆ ಅಲೆದಾಡಿದ ಚಿಕ್ಕಮ್ಮನನ್ನು ಕಂಡು, ಅಲ್ಲಿಂದ ಬೊಂಬಾಯಿಗೆ ಬಂದು, ಇನ್‌ಕಮ್‌ಟ್ಯಾಕ್ಸ್ ಆಫೀಸಿನಲ್ಲಿ ಕ್ಲಾರ್ಕ್ ಎಂದು ಕೆಲಸಕ್ಕೆ ಸೇರಿದ.

ಒಂದು ವರ್ಷ ದುಡಿದು ಕೆಲವು ಹಣವನ್ನು ಉಳಿಸಿಕೊಂಡು, ಮರುವರ್ಷ ಎಮ್. ಎ. ಗೆ ಅಭ್ಯಾಸಮಾಡತೊಡಗಿದ. ಚಿಕ್ಕಮ್ಮನ ಮಗನ ಉಪನಯನಕ್ಕಾಗಿ ೧೫ ದಿನ ರಜೆ ಪಡೆದು ಆತ ಬೆಂಗಳೂರಿಗೆ ಹೋಗಬೇಕಾಯಿತು. ಗೋವಿಂದರಾಯರು ಮಗನ ಮುಂಜಿಯನ್ನು ಚಾಮರಾಜಪೇಟೆಯಲ್ಲಿಯ ಒಂದು ಬಾಡಿಗೆಯ ಮನೆಯಲ್ಲಿ—ತಮ್ಮ ಶಕ್ತ್ಯನುಸಾರ—ನೆರವೇರಿಸಿದರು. ಗೋವಿಂದರಾಯರ ಹಿರಿಯ ಮಗಳಾದ ಲಲಿತೂನ ಕ್ಲಾಸಮೇಟ್ ಹಾಗೂ ಪರಮ ಸ್ನೇಹಿತೆ ಮಂಜುಳೆ ಹಾಗೂ ಅವಳ ತಾಯಿ ಉಪನಯನಕ್ಕಾಗಿ, ಬಸವನ ಗುಡಿಯಿಂದ ತಮ್ಮ ಕಾರಿನಲ್ಲಿ ಬಂದಿದ್ದರು. ರಂಗನಾಥನ ಚಿಕ್ಕಮ್ಮ ಹಾಗೂ ಮಂಜುಳೆಯ ತಾಯಿ, ಲಲಿತಾ-ಮಂಜುಳೆಯರ ಸ್ನೇಹದಿಂದ ಅವರೂ ಆತ್ಮೀಯರಾಗಿದ್ದರು. ಮಂಜುಳೆಯ ತಾಯಿ ಊಟವಾದ ಮೇಲೆ ಬಿಡುವಾದಾಗ, ದೃಢಕಾಯನಾದ ಸಲಕ್ಷಣನಾಗಿದ್ದ ರಂಗನಾಥ, ಉಪನಯನದ ಮಂಗಲಕಾರ್ಯದಲ್ಲಿ ಓಡಾಡುತ್ತಿದ್ದುದನ್ನು ಕಂಡು, ಅವನ ಬಗೆಗೆ ಕುತೂಹಲಿಗಳಾಗಿ ವಿಚಾರಿಸಿದರು.

"ಅವನೇ, ರಂಗೂ—ರಂಗನಾಥ! ನನ್ನ ಅಕ್ಕನ ಮಗ. ಅವನು ಚಿಕ್ಕವನಿದ್ದಾಗಲೇ ನನ್ನ ಅಕ್ಕ, ಅಕ್ಕನ ಗಂಡ ತೀರಿಕೊಂಡರಮ್ಮ—ಅವನು ಅನಾಥನಾಗಿಬಿಟ್ಟ. ಆಗಿನಿಂದ ಅವನು ನನ್ನ ಹತ್ತಿರ ಇಲ್ಲಿಯೇ ಇದ್ದ. ಆದರೆ ಎಸ್. ಎಸ್. ಸಿ. ಪ್ಯಾಸ್‌ಮಾಡಿಬಿಟ್ಟು ಧಾರವಾಡದ ಕಾಲೇಜಿನಲ್ಲಿ ಓದಿ ಬಿ. ಎ. ಆನರ್ಸ್ ಆಗಿದ್ದಾನೆ. ಈಗ ಎಮ್. ಎ. ಗೂ ಅಭ್ಯಾಸಮಾಡ್ತಿದ್ದಾನೆ. ಬೊಂಬಾಯಿಯಲ್ಲಿ ಇನ್‌ಕಮ್‌ಟಾಕ್ಸ್ ಆಫೀಸಿನಲ್ಲಿ ಕ್ಲಾರ್ಕ್ ಆಗಿ ಕೆಲಸಕ್ಕೂ ಸೇರಿದ್ದಾನೆ. ತಾನೇ ತನ್ನ ಬುದ್ಧಿಬಲದಿಂದ ತನ್ನ ಜೀವನದ ಹಾದಿಯನ್ನು ಕಂಡು-ಕೊಂಡಿದ್ದಾನಮ್ಮ! ನಮ್ಮಿಂದೇನೂ ಹೆಚ್ಚಿಗೆ ಮಾಡಲಾಗಲಿಲ್ಲ. ಒಂದು ಒಳ್ಳೆಯ ಹುಡುಗಿಯನ್ನು ತಂದು ಅವನ ತಲೆಯ ಮೇಲೆ ಅಕ್ಷತೆ ಹಾಕಿಬಿಟ್ಟರೆ, ಅವನ ತಾಯಿಯ ಆತ್ಮಕ್ಕೆ ಶಾಂತಿಯಾದೀತೆಂದು ಭಾವಿಸಿದ್ದೇನೆ" ಎಂದು ಕಳಕಳಿಯಿಂದ ನುಡಿದರು. "ಇಷ್ಟು ಮಾಡಿದವರಿಗೆ, ಇಂಥಾ ಮಗನ ಮದುವೆ ಏನು ದೊಡ್ಡ ಮಾತೇ?" ಎಂದು ಮಂಜುಳೆಯ ತಾಯಿ ಮರುನುಡಿದರು.

ಮರಳಿ ಮನೆಗೆ ಹೊರಟಾಗ, ಮಂಜುಳೆಯನ್ನು ಅವಳ ತಾಯಿ, "ಮಂಜೂ, ನಿನ್ನ ಗೆಳತಿ ಲಲಿತೂನ ಅಣ್ಣಾ ಅಂತೆ ರಂಗನಾಥ! ಒಳ್ಳೇ ಹುಡುಗ ಅಂತ ಕಾಣುತ್ತೆ ಅಲ್ವೇ?" ಎಂದು ಕೇಳಿದರು.

ಮಂಜೂನ ಕಣ್ಣು ಒಮ್ಮೆಲೆ ವಿಶಾಲವಾಗಿ 'ನಾನು ಅವನ ಕಡೆಗೆ ನೋಡ್ತಿದ್ದದ್ದನ್ನು ಅಮ್ಮ ಕಂಡಳೇನೋ' ಎಂದು ಬೆಚ್ಚಿದಳು. ಒಮ್ಮೆಲೇ 'ಆಂ' ಎಂದು, ಕೂಡಲೆ ಸಾವರಿಸಿಕೊಳ್ಳುತ್ತ "ನನಗೇನು ಗೊತ್ತಮ್ಮಾ? ನಾನು ಲಲಿತೂನ ಜೊತೆಗೇ ಇದ್ದೆ" ಎಂದು ನಾಚಿಕೆಯಿಂದ ಕೆಂಪೇರುತ್ತಿರುವ ಮುಖವನ್ನು, ಕಾರಿನ ಹೊರಗೆ ನೋಡುವುದಕ್ಕಾಗಿ ತಿರುಹಿದಳು.

ಮಂಜುಳೆಯ ತಾಯಿ ಅದನ್ನು ಸೂಕ್ಷ್ಮವಾಗಿ ಅರ್ಥಮಾಡಿಕೊಂಡು, ಅಂದೇ ರಾತ್ರಿ ತಮ್ಮ ಯಜಮಾನರ ಜೊತೆಗೆ ಚರ್ಚಿಸಿದರು. ಅದಕ್ಕೆ ಮಂಜೂನ ತಂದೆ "ಅವರು ಬಹಳ ಬಡವರು ಅಂತ ಹೇಳ್ತೀಯಾ; ಅಲ್ಲದೆ ಮಂಜೂ ಕೂಡ ಗ್ರ್ಯಾಜುಯೇಟ್ ಆಗುವವರೆಗೆ ಮದುವೆ ಬೇಡ—ಎಂದು ಹೇಳಿ ಕಾಲೇಜು ಸೇರಿಲ್ಲವೇ?" ಎಂದು ಧ್ವನಿಯೆಳೆದರು.

"ನಿಮಗೆ ಈ ವಿಷಯವೆಲ್ಲ ತಿಳಿಯೋದಿಲ್ಲ. ಸುಮ್ಮನಿರಿ! ಈಗೇನೋ ಬಡವರು ನಿಜ. ಆದರೆ ಹುಡುಗ ಬಹಳ ಬುದ್ಧಿವಂತ ಮುಂದೆ ಅವನ ಭಾಗ್ಯ ಏನೋ ಯಾರು ಬಲ್ಲರು? ಅಲ್ಲದೆ ಮಂಜೂಗೂ ಅವನಲ್ಲಿ ಆಸಕ್ತಿ ಇದೆಯಂತೆ ಕಾಣುತ್ತದೆ. ನಾನು ಪ್ರಸ್ತಾಪಿಸಿ ನೋಡ್ತೇನೆ." ಎಂದು ಗಂಡನನ್ನು ಸುಮ್ಮನಿರಿಸಿದರು.

ಮಾರುದಿನವೇ ರಂಗನಾಥನ ಚಿಕ್ಕಮ್ಮನೊಂದಿಗೆ ಮಂಜುಳೆಯ ತಾಯಿ, ರಂಗನಾಥನಿಗೆ ಮಂಜುಳೆಯನ್ನು ತೋರಿಸುವ ಬಗ್ಗೆ ಮಾತನಾಡಿ, ಬರುವ ಭಾನುವಾರ ತಮ್ಮ ಮನೆಗೆ ರಂಗನಾಥನನ್ನು ಕರೆತರಲು ಹೇಳಿಯೇ ಹೋದರು. ಮಂಜುಳೆಯನ್ನು ನೋಡಲು ರಂಗನಾಥನು ಎಲ್ಲರ ಜೊತೆಗೆ ಅವರ ಮನೆಗೆ ಹೋಗಬೇಕಾಯಿತು. ಅಂದು ಮಂಜುಳೆ ರಂಗನಾಥನ ಚಿತ್ತವನ್ನಾಕರ್ಷಿಸಬೇಕೆಂದು ದಿನಕ್ಕಿಂತಲೂ ಹೆಚ್ಚಾಗಿ ಪೌಡರ್, ಸ್ನೋ, ಬಣ್ಣ, ಒಡವೆಗಳಿಂದ ಹೆಚ್ಚು ಅಲಂಕರಿಸಿಕೊಂಡಿದ್ದಳು.

ಮನೆಗೆ ಬಂದಮೇಲೆ "ಚಿಕ್ಕಮ್ಮಾ, ಅವರ ಅಂತಸ್ತು ದೊಡ್ಡದಮ್ಮಾ, ನನಗ್ಯಾಕೆ ಅವರ ಸಂಬಂಧ! ಅಲ್ಲದೇ ಆ ಹುಡುಗಿಯ ಪೌಡರ್, ಸ್ನೋ, ಸೆಂಟಿಗಾಗಿ ನನ್ನ ಇನ್‌ಕಮ್‌ನಲ್ಲಿ ಮುಕ್ಕಾಲು ಭಾಗವನ್ನೇ ಟ್ಯಾಕ್ಸ್ ಎಂದು ಅವಳಿಗೆ ತೆರಬೇಕಾದೀತು. ಈ ಶ್ರೀಮಂತರ ಮನೆಯ ಕನ್ಯೆ ಬೇಡವಮ್ಮಾ" ಎಂದು ಹೇಳಿದ.

ಈ ವಾರ್ತೆ ಮಂಜುಳೆಯ ಹಾಗೂ ಅವಳ ತಂದೆ-ತಾಯಿಗಳ ಕಿವಿಗೂ ಹೋಯಿತು. ಮಂಜುಳೆಯ ತಂದೆ "ನಾನು ಹೇಳಲಿಲ್ಲವೆ? ನಾವು ಶ್ರೀಮಂತರು ಎಂದು! ಈಗ ಅವರು ಮೂಗು ಮುರಿದು ನಮ್ಮ ಹುಡುಗಿ ಬೇಡ ಅಂದ್ರು. ಈಗ ಸರಿಹೋಯ್ತೇ!"

"ಅಲ್ಲಾಂದ್ರೆ, ಮಂಜೂ ಬಹಳ ಮನಸ್ಸಿಗೆ ಹಚ್ಚಿಕೊಂಡ ಹಾಗೆ ಕಾಣುತ್ತೆ. ನಿನ್ನೆಯಿಂದ ಅವಳು ಕನ್ನಡಿಯ ಮುಂದೆ ನಿಂತದ್ದೇ ಇಲ್ಲ; ಇನ್ನು ಸ್ನೋ ಪೌಡರ ಅಂತೂ ದೂರ ಉಳಿಯಿತು. ಆ ಹುಡುಗ ಈ ತರಹಾ ಅಂತ ಅವಳಿಗೆ ಮೊದಲಿಗೇ ಗೊತ್ತಾಗಿದ್ರೆ, Simple ಆಗಿ ತೋರಿಸಿಕೊಳ್ಳುತ್ತಿದ್ದಳೇನೋ? ಅಂತೂ ಬ್ರಹ್ಮ ಈ ಹುಡುಗನ್ನ ಅವಳಿಗೆ ಬರೆದಿಲ್ಲ ಅಂತ ಕಾಣುತ್ತದೆ!" ಎಂದು ಮರುಗಿದರು.

ಮುಂದೆ ಮೂರು ನಾಲ್ಕು ದಿನಗಳ ಮೇಲೆ ಮಂಜೂ, ಮನೆಯಲ್ಲಿ ತುಂಬಾ ಬೇಜಾರೆಂದು ಸಾಯಂಕಾಲ ಇನ್ನೊಬ್ಬ ಗೆಳತಿಯ ಮನೆಗೆಂದು ಹೊರಟಿದ್ದಳು. ಚಾಮರಾಜಪೇಟೆಯ ಆರನೆಯ ಬೀದಿಯ ಕ್ರಾಸ್ ಹತ್ತಿರ ಬಸ್ಸಿಗಾಗಿ ರಂಗನಾಥ ಕಾಯುತ್ತ ನಿಂತಿದ್ದ. ಆ ಬೀದಿಯಿಂದ ಹೊರಟ ಮಂಜೂ ರಂಗನಾಥನನ್ನು ಕಂಡು ಬೆಚ್ಚಿದಳು. ಅಲ್ಲಿಂದ ದೂರ ಸರಿದು ಹೋಗಬೇಕೆನೋ—ಎನ್ನಿಸಿತು. ಆದರೆ ಸ್ವಲ್ಪ ಧೈರ್ಯ ತಂದುಕೊಂಡು ತಾನೂ ಬಸ್ಸಿಗಾಗಿ ಅವನ ಹತ್ತಿರ ನಿಂತು "ನಮಸ್ತೇ" ಎಂದಳು. ಅಂದು ಕಾಣಿಸಿಕೊಂಡ ಬಣ್ಣದ ಬೊಂಬೆ ಮಂಜುವಿಗೂ, ಇಂದು ತೀರ ಸಾದಾ ಉಡುಪಿನಲ್ಲಿ ಸ್ವಾಭಾವಿಕ ಸೌಂದರ್ಯದಿಂದ ಒಪ್ಪುತ್ತಿರುವ ಮಂಜುವಿಗೂ ಬಹಳ ಅಂತರವಿತ್ತು.

"ನಮಸ್ತೇ" ಎಂದು ಮರುನಮಸ್ಕಾರ ಮಾಡಿ ಮುಗುಳುನಗೆ ನಕ್ಕು ಸುಮ್ಮನಾದ ರಂಗನಾಥ.

"ನಿಮ್ಮ ಜೊತೆ ಸ್ವಲ್ಪ ಮಾತನಾಡುವುದಿತ್ತು. ಲಾಲ್‌ಬಾಗಿನ ಕಡೆ ಹೋಗೋಣವೇ?" ಎಂದು ಮೃದುವಾದ ಧ್ವನಿಯಲ್ಲಿ ಕೇಳಿದಳು ಮಂಜೂ.

ರಂಗನಾಥನಿಗೆ ಒಲ್ಲೆನ್ನಲು ಮನಸ್ಸೇ ಬರಲಿಲ್ಲ. ಅಲ್ಲಿಂದ ಇಬ್ಬರೂ ಲಾಲ್‌ಬಾಗಿಗೆ ಬಂದು, ಜನ ವಿರಳವಾಗಿದ್ದ ಒಂದು ಕಡೆ ಹುಲ್ಲು ಹಾಸಿಗೆಯ ಮೇಲೆ ದೂರ ದೂರ ಕುಳಿತರು. ಕೆಲಹೊತ್ತು ಇಬ್ಬರಿಗೂ ಮಾತು ಹೊರಡದಾಯಿತು. ರಂಗನಾಥ ಗಿಡ-ಮರಗಳ ತುದಿಗಳನ್ನು ನೋಡುತ್ತಿದ್ದರೆ, ಮಂಜೂ ಮುಖ ತಗ್ಗಿಸಿ ಹುಲ್ಲಿನ ಕಡ್ಡಿಗಳನ್ನು ಚಿವುಟುತ್ತಿದ್ದಳು.

ಕೊನೆಗೆ ಮಂಜುಳೆ ತಾನೇ ಅವನನ್ನು ಕರೆತಂದದ್ದರಿಂದ, "ಲಲಿತಾ ಮನೆಯಲ್ಲಿದ್ದಳೇ?" ಎಂದು ಕೇಳಿದಳು.

ಈ ಪ್ರಶ್ನೆಯನ್ನು ಬಸ್ ಹಾಲ್ಟಿನ ಹತ್ತಿರವೇ ಇವಳು ಕೇಳಬಹುದಿತ್ತಲ್ಲಾ—ಎಂದು ರಂಗನಾಥ ಮನಸ್ಸಿನಲ್ಲಿಯೇ ಎಂದುಕೊಂಡರೂ "ಮನೆಯಲ್ಲಿಯೇ ಇದ್ದಳು. ನಿಮ್ಮ ಮನೆಯ ಕಡೆಗೆ ಹೊರಡಬೇಕೆಂದು ಸಿದ್ಧವಾಗುತ್ತಿದ್ದಳು" ಎಂದನು.

"ಲಲಿತಾಳಿಂದ ತಿಳಿಯಿತು—ನಾನು ನಿಮಗೆ ಒಪ್ಪಿಗೆಯಾಗಲಿಲ್ಲವೆಂದು!"

"ಅಂ......ಅಂದ್ರೆ......ಹಾಗೇನಲ್ಲಾ. ನಾವು ಬಡವರು. ಇನ್‌ಕಮ್‌ಟ್ಯಾಕ್ಸ್ ಆಫೀಸಿನಲ್ಲಿ ನಾನೊಬ್ಬ ಕ್ಲಾರ್ಕ್. ಸಂಬಳ ಸದ್ಯ ಸುಮಾರು ನೂರೆಂಬತ್ತು ಮುಂಬಯಿ ಜೀವನ. ಮನೆ ಬಾಡಿಗೇನೇ ತಿಂಗಳಿಗೆ ನಾಲ್ವತ್ತು ರೂಪಾಯಿ ನೀವು ಇಲ್ಲಿ....ರೇಡಿಯೋ, ಟೆಲಿಫೋನ್, ಕಾರು, ನಿಮ್ಮ ಸ್ವಂತದ ಬಂಗ್ಲೆ ಇಂಥ ಉತ್ತಮವಾದ ಪರಿಸ್ಥಿತಿಯಲ್ಲಿದ್ದವರನ್ನು ನಾನು ಮದುವೆಯಾದರೆ, ನಿಮಗೇನು ಸುಖ ಹೇಳಿ? ನಿಮ್ಮ ತಂದೆಯವರ, ಒಳ್ಳೇ ದೊಡ್ಡ ಹುದ್ದೆಯಲ್ಲಿದ್ದ ಅಥವಾ ಬೇರೆ ಯಾವ ಶ್ರೀಮಂತ ವರನನ್ನು ಆರಿಸಿ ನಿಮಗೆ ಮದುವೆ ಮಾಡುವ ಸ್ಥಿತಿಯಲ್ಲಿದ್ದಾರೆ. ಅದಕ್ಕೋಸ್ಕರ ನಿಮ್ಮ ಅಂತಸ್ತಿಗೆ ನಾವು ತಕ್ಕವರಲ್ಲ—ಎಂದು ಹೇಳಿದೆನೇ ವಿನಾ, ನಿಮ್ಮಲ್ಲಿ ಕುಂದು ಕಾಣಲಿಲ್ಲ."

"ನಿಮ್ಮ ಜೊತೆಗೆ ಸ್ವಲ್ಪ ಮನಸ್ಸು ಬಿಚ್ಚಿ ಮಾತನಾಡಬೇಕು ಎನಿಸುತ್ತದೆ. ಇವಳು ನಾಚಿಕೆಗೆಟ್ಟವಳು—ಎನ್ನಬೇಡಿ ನಿಮ್ಮ ತಮ್ಮನ ಉಪನಯನದ ದಿನ ನಿಮ್ಮನ್ನು ನೋಡಿದಾಗಲೇ ನಿಮ್ಮೆಡೆಗೆ ಮನಸ್ಸು ಸೆಳೆದು ಹೋಯಿತು. ಅದಕ್ಕೆ ಅನುಕೂಲವಾಗಿ ದೇವರೇ ಅಮ್ಮನನ್ನು ಪ್ರೇರೇಪಿಸಿದನೇನೋ—ನಿಮಗೆ ನನ್ನನ್ನು ಇನ್ನೊಮ್ಮೆ ತೋರಿಸಿದರು.

ಈಗ ಹೇಳಿದ್ದಾಗೆ ನೀವು ನನ್ನನ್ನು ಒಪ್ಪಿದ್ದೀರಿ; ನೀವು ದಯವಿಟ್ಟು ಆರ್ಥಿಕವಿಷಯದಲ್ಲಿ ಮೇಲು-ಕೀಳೆಂಬ ತಾರತಮ್ಯ ಮಾಡಬೇಡಿ. ನಮ್ಮ ತಂದೆ ನಿಮಗೆ ಬೇಕಷ್ಟು ಸಹಾಯ ಮಾಡಬಲ್ಲರು......"

ಕೂಡಲೇ ಅವಳನ್ನು ಮುಂದೆ ಮಾತನಾಡಲು ಬಿಡದೇ "ನಿಮ್ಮ ತಂದೆಯ ಸಂಪಾದನೆಯ ಮೇಲೆಯೇ ನಾನು ಜೀವಮಾನ ಕಳೆಯಬೇಕೆಂದು ನಿಮ್ಮ ಅಭಿಪ್ರಾಯವೇ? ನಿಮ್ಮನ್ನು ಮದುವೆ ಮಾಡಿಕೊಳ್ಳುವುದಾದರೆ, ಕವಡೆಕಾಸೂ ಕೂಡ ವರದಕ್ಷಿಣೆ ತೆಗೆದುಕೊಳ್ಳಲಿಕ್ಕಿಲ್ಲ" ಎಂದು ಉದ್ವೇಗದಿಂದ ಹೇಳಿದ ರಂಗನಾಥ.

"ನಿಮ್ಮ ಸ್ವಾಭಿಮಾನ, ಗೌರವ ಕಂಡು ನನಗೆ ತುಂಬಾ ಸಂತೋಷವಾಗ್ತದೆ. ಆದರೆ ಇಲ್ಲಿ ಕೇಳಿ, ನಾವೀಗ ಇಂಟರ್ ಮೀಡಿಯೇಟಿನಲ್ಲಿ ಓದ್ತಾ ಇದ್ದೇನೆ; ಗ್ರ್ಯಾಜುಯೇಶನ್ ಕೂಡ ಮುಗಿಸಬೇಕೆಂದಿದ್ದೇನೆ. ನೀವೂ ನಿಮ್ಮ ಎಮ್. ಎ ಮುಗಿಸಿಬಿಡಿ. ನಾನು ಮದುವೆ ಆದ ಮೇಲೂ—ನಿಮ್ಮ ಅಭ್ಯಂತರವಿಲ್ಲದಿದ್ದರೆ ಕೆಲಸಕ್ಕೆ ಸೇರಿಕೊಳ್ತೇನೆ ನಮ್ಮಿಬ್ಬರ ಸಂಪಾದನೆಯಲ್ಲಿ ನಾವು ನೆಮ್ಮದಿಯಾಗಿರಲಾರೆವೇ? ಅಷ್ಟಲ್ಲದೇ...." ಎಂದು ಅನುಮಾನಿಸುತ್ತ ಮುಖ ಕೆಳಗೆ ಹಾಕಿ ಸುಮ್ಮನಾದಳು.

"ಹೇಳಿ, ನಿಮ್ಮ ಯೋಜನೆ ಏನೇನಿದೆ ಎಲ್ಲವನ್ನೂ ಸಂಕೋಚವಿಲ್ಲದೇ ಹೇಳಿಬಿಡಿ!" ಎಂದು ರಂಗನಾಥ ಉತ್ಸುಕನಾಗಿ ಸರಿಪಡಿಸಿಕೊಂಡು ಕುಳಿತ.

ನಾಚಿಕೆಯಿಂದ ಆರಕ್ತವಾದ ಅವಳ ಮುಖವು ಸಂಜೆಯ ಹೊಂಬಿಸಿಲಲ್ಲಿ ರಮ್ಯವಾಗಿ ಕಾಣಿಸಿತು.

"ಅಷ್ಟಲ್ಲದೇ, ಮದುವೆಯಾದ ಮೇಲೆ ಕನಿಷ್ಠ ಐದು ವರುಷಗಳ ವರೆಗೆ, ನಮಗೆ....ಮಕ್ಕಳು ಆಗದ ಹಾಗೆ....ನಾವಿಬ್ಬರೂ ನೋಡಿಕೊಳ್ಳಬೇಕು" ಇಷ್ಟು ಅಂದವಳೇ ಈ ಮಾತನ್ನು ತಾನು ಹೇಗೆ ಹೇಳಿದೆ ಎಂದು ಆಶ್ಚರ್ಯಪಟ್ಟು, ರಂಗನಾಥನ ಮುಖವನ್ನು ಇದಿರಿಸಲಾಗದೆ ತಗ್ಗಿಸಿದಳು.

"ನೀವು ಘಾಟಿ ಕಣ್ರೀ! ನಿಮ್ಮ ಎಲ್ಲ ಕಟ್ಟಳೆಗಳಿಗೂ ಒಪ್ಪಿದೆ: ಆದರೆ ಈ ಕೊನೆಯ ನಿರ್ಬಂಧ ಸಾಧ್ಯವೆ? ನೀವು ಯೋಚಿಸಿದೀರಾ?" ಎಂದು ನಗುತ್ತ ಅನುಮಾನವನ್ನು ಸೂಚಿಸಿದ ರಂಗನಾಥ

"ಮನಸ್ಸಿನಲ್ಲಿ ಮಾರ್ಗವಿವೆ. ನಮ್ಮಿಬ್ಬರಲ್ಲಿ ಯಾರೂ ಸೋಲಬಾರದು. ಇನ್ನಾದರೂ ಒಪ್ಪಿಗೆಯೇ?" ಎಂದಳು ಮಂಜೂ.

"ಸರಿ, ಒಪ್ಪಿದೆ; ಆದರೆ ನಿಮ್ಮ ತಂದೆ ತಾಯಿ ನಮ್ಮ ಮದುವೆಗೆ ಒಪ್ಪುತ್ತಾರೆಯೇ?"

"ಆ ವಿಷಯ ನನಗೆ ಬಿಡಿ" ಎಂದು ಹಿಗ್ಗಿ ಹೇಳಿದಳು, ಮಂಜೂ.

ಮುಚ್ಚಂಜೆ ಮನೆಗೆ ಹೋಗಲು ಎದ್ದರು "ಮಂಜೂ" ಎಂದು ಅವನರಿಗರಿವಿಲ್ಲದೆಯೇ ಅವನ ಉಸಿರೊಡೆಯಿತು ಮಂಜೂ ಕೈಚಾಚಿದಳು ದೊಡ್ಡ ಬೀದಿ ಸುವರೆಗೆ ಇಬ್ಬರೂ ಆಗಲೇ ಪಾಣಿಗ್ರಹಣ ಮಾಡಿದ್ದರು.

× × × ×



ಮಂಜುಳೆಯ ಹಟಕ್ಕೆ ಅವಳ ತಂದೆ-ತಾಯಿ ಮಣಿದರು. ಕೊನೆಯ ಮಗಳ ಮನಸ್ಸಿನ ವಿರುದ್ಧ ಹೋಗಲಾರದೆ, ಮಗಳು ಉಲ್ಲಾಸವಾಗಿರುವುದನ್ನು ನೋಡಲಿಚ್ಛಿಸಿ, ಅವಳ ಇಂಟರ್ ಮೀಡಿಯೆಟ್ ಪರೀಕ್ಷೆ ಮುಗಿದ ಕೂಡಲೇ, ಬಹು ವಿಜೃಂಭಣೆಯಿಂದ ಮದುವೆಯನ್ನು ನೆರವೇರಿಸಿದರು.

ಮದುವೆಯಾದ ಮೇಲೆ ರಂಗನಾಥ, ಹೆಂಡತಿ ಮಂಜುಳೆಯನ್ನು ಕರೆತಂದು ಮನೆ ಹೂಡಿದ. ಮದುವೆಯಾದ ಮೊದಲು ಕೆಲ ತಿಂಗಳು, ಸಂತಾನನಿರೋಧಶಾಸ್ತ್ರಕ್ಕೆ ಸಂಬಂಧಿಸಿದ ಅನೇಕ ಪುಸ್ತಕಗಳನ್ನು ತರಿಸಿ ಮಂಜುಳೆ ತಾನು ಓದಿದಳಲ್ಲದೇ, ರಂಗನಾಥನಿಗೂ ಅಭ್ಯಸಿಸಲು ಹೇಳಿದಳು. ಅನಂತರ ಮ್ಯಾಕ್‌ಬೇಕರ್ ಕಂಪನಿಯ ಒಡೆಯರು ಇನ್‌ಕಮ್‌ಟ್ಯಾಕ್ಸ್ ವಿಷಯದಲ್ಲಿ ತಮ್ಮ ಕೆಲಸಕ್ಕಾಗಿ ಬಂದಾಗ, ರಂಗನಾಥ ಅವನ ಜೊತೆಗೆ ಕೆಲಹೊತ್ತು ಲೋಕಾಭಿರಾಮವಾಗಿ ಮಾತನಾಡಿ, ತನ್ನ ಹೆಂಡತಿಗೆ ಅವರ ಕಂಪನಿಯಲ್ಲಿ ಒಂದು ಕೆಲಸವನ್ನು ದೊರಕಿಸಿಕೊಟ್ಟ. ಟೆಲಿಫೋನ್ ಆಪರೇಟಿಂಗ್ ಕೆಲಸದ ಪರಿಚಯ ಮಾಡಿಕೊಂಡು, ಆ ಕಂಪನಿಯಲ್ಲಿ ಕೆಲಸಕ್ಕೆ ಸೇರಿದಳು ಮಂಜೂ. ಮರುವರುಷ ರಂಗನಾಥ ಎಮ್. ಎ. ಪರೀಕ್ಷೆಯಲ್ಲಿ ಒಳ್ಳೆಯ ಪ್ರಶಸ್ತಿ ಪಡೆದು ಪಾಸಾದ.

ಕಳೆದ ಮೂರು ವರ್ಷಗಳಲ್ಲಿ ಗಂಡ, ಹೆಂಡತಿ ಇಬ್ಬರೂ ಸಂದಿಸಿಕೊಂಡು ಅನ್ಯೋನ್ಯವಾಗಿದ್ದರು. ಕೆಲವು ಸಲ ಸಂತತಿನಿರೋಧದ ವಿಷಯವಾಗಿ ಇಬ್ಬರಿಗೂ ವಿಶೇಷಚರ್ಚೆಯಾಗಿ ವಿರಸವುಂಟಾಗಲಾರಂಭಿಸಿತ್ತು. ಆದರೂ ಮದುವೆಗೆ ಮೊದಲು ಲಾಲಬಾಗಿನಲ್ಲಿ ಹಾಕಿಕೊಂಡ ನಿರ್ಬಂಧಕ್ಕೆ ಇಬ್ಬರೂ ಒಪ್ಪಿ, ತಮ್ಮ ಜೀವನವನ್ನು ಹೊಂದಿಸಿಕೊಂಡಿದ್ದರು. "ಇದರಲ್ಲಿ ಮಂಜೂವಿನದು ಏನೂ ತಪ್ಪಿಲ್ಲ. ನಾನೇಕೆ ಅವಳ ಮೇಲೆ ಅಷ್ಟು ಹರಿಹಾಯಬೇಕು? ಆದರೂ ಈ ವಯಸ್ಸಿನಲ್ಲಿ ಈ ಕಟ್ಟಳೆಗೆ ನಾವು ಇಷ್ಟು ಅಧೀನರಾಗಬೇಕೇ?" ಎಂದು ಆಲೋಚಿಸುತ್ತ, ಮಂಜೂವಿನ ವಿರಹದಿಂದ ಖಿನ್ನನಾಗಿ ಮಲಬಾರ್ ಹಿಲ್ ಗಾರ್ಡನ್ನಿನಿಂದ ಮನೆಯ ಕಡೆಗೆ ನಡೆದ ರಂಗನಾಥ.

× × × ×

ಮರುದಿನ ಸಾಯಂಕಾಲ ೫ ಗಂಟೆಗೆ ಬೆಂಗಳೂರು ಸ್ಟೇಶನ್ನಿನಲ್ಲಿ ಇಳಿದಾಗ, ಮಂಜುವಿನ ತಂದೆ ಕಾರು ತೆಗೆದುಕೊಂಡು ಸ್ಟೇಶನ್ನಿಗೆ ಬಂದಿದ್ದರು. ಗಾಡಿಯಿಂದ ಇಳಿದವಳೇ ತಂದೆಯ ಚಿಂತಾಗ್ರಸ್ತ ಮುಖ ಕಂಡು "ಅಮ್ಮ ಹೇಗಿದ್ದಾಳಪ್ಪಾ?" ಎಂದು ಕೇಳಿದಳು.

"ಮೈಮೇಲೆ ಶುದ್ಧಿಯಿಲ್ಲ. ಮೇಲಿಂದ ಮೇಲೆ ನಿನ್ನನ್ನು ಕನವರಿಸ್ತಾ ಇದ್ದಾಳೆ." ಎಂದಳು.

ಮನೆಗೆ ಬಂದಾಗ ಮಂಜುಳೆಯ ಇಬ್ಬರು ಅಕ್ಕಂದಿರು ತಾಯಿಯ ಶುಶ್ರೂಷೆ ಮಾಡುತ್ತಿದ್ದರು. ಕೆಲದಿನಗಳಲ್ಲಿಯೇ ಎಲ್ಲರ ಆರಯಿಕೆಯಿಂದ ಮಂಜುಳೆಯ ತಾಯಿ ಸುಧಾರಿಸಹತ್ತಿದರು. ಜ್ವರ ಬಿಟ್ಟು ಹಾಸಿಗೆಯಲ್ಲಿಯೇ ಎದ್ದು ಕುಳಿತುಕೊಳ್ಳಬೇಕಾದರೆ ಮೂರು ವಾರಗಳು ಹಿಡಿದುವು. ಮೃತ್ಯುವಿನ ದವಡೆಯಿಂದ ಹೊರಗೆ ಬಂದ ಹಾಗೆನಿಸಿತು.

ಮಂಜುಳೆಯ ತಾಯಿ ಮಂಜುಳೆಯ ಮುಂಬಯಿಜೀವನದ ಬಗ್ಗೆ ವಿಚಾರಿಸಹತ್ತಿದರು. "ನೀನೇಕಮ್ಮಾ ದುಡಿದು ಸಣ್ಣಾಗೋದು? ನಿನಗೆ ಏನು ಬೇಕೋ ಹೇಳು, ನಿನ್ನ ತಂದೆ ಕೊಡಲಾರರೇ? ನಿನ್ನ ಗಂಡನ ಅಭಿಮಾನ ಬಹಳ! ಮಂಜೂ, ಮದುವೆಯಾಗಿ ಮೂರು ವರ್ಷಗಳ ಮೇಲಾಯಿತು. ಇನ್ನೂ ಬರಿಗೈಯಲ್ಲಿದ್ದೀಯಲ್ಲೇ? ನಿನ್ನ ಕೈಗಳಲ್ಲಿ ಮಗುವಾಡ್ತಾ ಇರೋದನ್ನ ನಾನು ನೋಡದೇ ಸದ್ಯ ಸಾಯಲಿಲ್ಲ ಕಣೇ!" ಎಂದು ಏನೇನೋ ಹರಟುತ್ತಿದ್ದರು. ಮಂಜೂ ಎಲ್ಲವನ್ನೂ ಕೇಳಿ ಸುಮ್ಮನಿರುತ್ತಿದ್ದಳು. ಕೆಲವು ಸಲ "ನೀನು ಹೆಚ್ಚು ಮಾತನಾಡಿ ಆಯಾಸ ಮಾಡಿಕೊಳ್ಳಬೇಡಮ್ಮಾ, ನನ್ನ ಬಗ್ಗೆ ಏನೂ ಯೋಚನೆ ಬೇಡ." ಎಂದಿಷ್ಟೇ ಹೇಳುತ್ತಿದ್ದಳು.

ನೆರೆಯ ಬಂಗ್ಲೆಯ ಔಟ್‌ಹೌಸಿನಲ್ಲಿದ್ದ ಸಾವಿತ್ರಮ್ಮ, ಒಂದು ದಿನ ಸಾಯಂಕಾಲ, ಮಂಜನ ತಾಯಿಯ ಆರೋಗ್ಯ ವಿಚಾರಿಸಲು ಬಂದಾಗ "ಮಂಜೂನ ಮದುವೆಯಾಗಿ ಮೂರುವರ್ಷದ ಮೇಲಾಯ್ತಲ್ಲವೇ? ಮಗಳೂ ಅಳಿಯ ಅನ್ಯೋನ್ಯವಾಗಿದ್ದಾರೆ ತಾನೇ? ಏನಮ್ಮ ಅವಳನ್ನೂ ಫಲಬಿಡಲಿಲ್ಲ ಅವಳಿಗೆ ದೇವರು ಬರೆದಿದ್ದಾನೋ ಇಲ್ವೋ ಯಾರಿಗೆ ಗೊತ್ತು!" ಎಂದು ಅಂದು ಹೋದರು. ಅದನ್ನು ಕೇಳಿ ಮಂಜೂನ ತಾಯಿಯ ಕಣ್ಣಲ್ಲಿ ನೀರಾಡಿದ್ದನ್ನು ಮಂಜೂ ನೋಡಿದಳು.

"ಏನಮ್ಮಾ, ಇವರಿಗ್ಯಾಕೆ ಇನ್ನೊಬ್ಬರ ಮನೆಯ ಪಂಚಾಯತಿ? ತಮ್ಮೊಟ್ಟಿಗೆ ತಾವು ಇರಲಾರರೇ? ನಾನು ಮಗುವನ್ನು ಹಡೆಯದಿದ್ದರೆ ಇವರ ತಾತನಿಗೆ ಸ್ವರ್ಗಸಿಕ್ಕಲಾರದೇ?" ಎಂದು ರೇಗಿ ನುಡಿದಳು.

"ಮಂಜೂ, ಅವರ ಮೇಲೆ ಯಾಕಮ್ಮಾ ಕೋಪ? ನಿನಗೇನು ಚಿಕ್ಕ ವಯಸ್ಸು? ಮಗುವಾಗುವ ವಯಸ್ಸು ತಾನೇ? ಅದಕ್ಕೆ ಕೇಳ್ತಾರೆ! ರೇಗಬೇಡಮ್ಮಾ. ಅವರ ಆಶೀರ್ವಾದದಿಂದಲಾದರೂ ನಿನಗೆ ಮಗುವಾಗಬಹುದು ಕಣೇ!" ಎಂದರು. ಅವಕ್ಕೆ ಮಂಜೂ ನಿರುತ್ತರಳಾದಳು.

ಶಾಂತಿಸೇವಾಸದನದ ಹೊಸ ಪ್ರಕಟಣೆಗಳು

		ರೂ ನ. ಪೈ
ಜೈನಧರ್ಮ		೧೫—೦
ಶ್ರೀ. ಮಿರ್ಜಿ ಅಣ್ಣಾರಾಯರು.		
ಭಾರತದ ಬೆಳಕು	,,	೧—೫೦
ಭಾರತೀಯ ಸಂಸ್ಕೃತಿಯ ಹೃದಯ	,,	೧—೫೦
ಸಮಯಸಾರ	,,	೧—೫
ಶ್ರೇಯಾಂಸ (೨ ಭಾಗ)	,,	೩—೦
ಮೂಲಶಿಕ್ಷಣದ ಮೌಲ್ಯಮಾಪನ	,,	೦—೭೫
ಭರತೇಶನ ನಾಲ್ಕು ಚಿತ್ರಗಳು	,,	೧—೨೫
ಕನಸೊಸರು (ಮಕ್ಕಳ ಕತೆ)	,,	೦—೨೫

ಪ್ರತಿಗಳಿಗಾಗಿ ಬರೆಯಿರಿ:

ಶಾಂತಿಸೇವಾಸದನ, ಸೇಡಬಾಳ
ಪೋ. ಸೇಡಬಾಳ, (ಜಿಲ್ಲಾ ಬೆಳಗಾಂವಿ)

ರಂಗನಾಥನ ಚಿಕ್ಕಮ್ಮನ ಮನೆಗೆ ಒಮ್ಮೆ ಹೋದಾಗ, "ನಿಮ್ಮ ಅಮ್ಮನಿಗೆ ಈಗ ವಾಸಿಯೇ?" ಎಂದು ಪ್ರಾರಂಭಿಸಿ, ಹರಟುತ್ತಾ "ಮಂಜೂ ನಿನ್ನ ಮದುವೆಯಾಗಿ ನಾಲ್ಕು ವರ್ಷಗಳಾಗ್ತಾ ಬಂದುವು ಇನ್ನೂ ಬಸಿರು ಬಯಕೆ ಏನೂ ಇಲ್ಲವೇ? ರಂಗೂನ ತೀರಿಹೋದ ತಾಯಿ ತಂದೆಗಳು ಮೊಮ್ಮಗನ ಆಟಾನ ಅಲ್ಲಿಂದಾನೇ ನೋಡಿ ನಲಿಯಬೇಕಮ್ಮಾ" ಎಂದು ಪುರಾಣ ಓದಿದರು. ಮಂಜೂನಿಗೆ ಮುಖಹೀನವಾದಂತಾಯಿ. ಇನ್ನು ಯಾರ ಮನೆಗೂ ಹೋಗಲೇಕೂಡದೆಂದರೂ ಯಾರಾದರೂ ಅವಳ ತಾಯಿಯ ಕಾಯಿಲೆ ಬಗ್ಗೆ ವಿಚಾರಿಸುತ್ತಾ ಮನೆಗೆ ಬಂದು, ಮಂಜೂನಿಗೆ ಮಕ್ಕಳಾಗದ್ದಕ್ಕೆ ವಿಷಯ ಹಠಾತ್ತಾನೆ ಬಂದು ನಿಲ್ಲುತ್ತಿತ್ತು.

ಕೆಲವು ದಿನಗಳ ಮೇಲೆ ಮಂಜೂ, ತನ್ನ ಒಬ್ಬಳು ಕ್ಲಾಸಮೇಟು-ಈಗ ಮೆಡಿಕಲ್ ಕೋರ್ಸಿನಲ್ಲಿದ್ದಾಕೆಯ ಮನೆಗೆ ಒಂದು ದಿನ ಹೋದಾಗ, ತಮ್ಮೆಲ್ಲ ಸ್ಕೂಲು-ಕಾಲೇಜಿನ ದಿನಗಳ ಬಗ್ಗೆ ಎಲ್ಲ ಹರಟೆ ಮುಗಿದ ಮೇಲೆ, ಆ ಗೆಳತಿಯೂ ಮಂಜುವಿನ ತಾಯ್ತನದ ಬಗ್ಗೆ ಪ್ರಶ್ನಿಸಿದಳು. ಈಗ ಮಾತ್ರ ಮಂಜೂ ವಸ್ತುಸ್ಥಿತಿಯನ್ನೆಲ್ಲ ಅವಳಿಗೆ ಸಾದ್ಯಂತವಾಗಿ ಅರುಹಿದಳು ಮಂಜೂನ ಗೆಳತಿ ಕೊನೆಗೆ "ಮಂಜೂ ಮಕ್ಕಳು ಬೇಕು ಅಂತ ಎಲ್ಲ ದೇವರಿಗೆ ಹರಕೆ ಹೊತ್ತರೂ ಮಕ್ಕಳಾಗುವುದಿಲ್ಲ ದೇವಾ, ಮಕ್ಕಳು ಸಾಕಪ್ಪಾ—ಎಂದರೂ ಮಕ್ಕಳು ಆಗ್ತಾನೇ ಇರ್ತಾವೆ; ಆದರೆ ಬುದ್ಧಿವಂತರು ಈ ಭಿನ್ನ ಪರಿಸ್ಥಿತಿಗಳನ್ನು ಸ್ವಲ್ಪ ತೂಗಿ ನೋಡಬೇಕು. ನೀನು ಮಕ್ಕಳನ್ನು ಹಡೆಯಬಲ್ಲೆಯೋ ಇಲ್ಲವೋ—ಅದೇ ನಿನಗೆ ಗೊತ್ತಿಲ್ಲ. ಮದುವೆಯಾದ ಪ್ರಾರಂಭದಿಂದಲೇ

ಇಷ್ಟು ಉಗ್ರವಾಗಿ ನಿರೋಧವನ್ನು ಪಾಲಿಸಿ, ನಿನ್ನ ಗಂಡನನ್ನು ಗೋಳು ಹುಯ್ದುಕೊಳ್ಳಬೇಡ. ಬಹಳ ವಯಸ್ಸಾದ ಮೇಲೆ ಗರ್ಭನಿಂತರೆ, ಸ್ವಾಭಾವಿಕ ಹೆರಿಗೆಯಾಗುವುದು ಕೂಡ ದುಸ್ತರವಾಗುತ್ತದೆ. ಆದ್ದರಿಂದ ನಿನಗೆ ಎರಡಾದರೂ ಮಕ್ಕಳು ಆದಮೇಲೆ, ನಿನ್ನ ಈ ನಿರೋಧಕ್ರಮಗಳನ್ನು ಕೈಕೊಳ್ಳಬಾರದೇ ?" ಎಂದು, ಅವಳು ತನಗೆ ತೋರಿದ ಸೂಕ್ತ ಸಲಹೆಗಳನ್ನು ಸೂಚಿಸಿದಳು. 'ಮಂಜುಳೆಗೂ ಈ ಸಲಹೆ ಸಮಂಜಸವೆನಿಸದಿರಲಿಲ್ಲ. ಇವೆಲ್ಲ ಸನ್ನಿವೇಶಗಳಿಂದ ಮಂಜೂನ ಮನಸ್ಸು ಕದಡಿ. ತುಂಬ ಯೋಚನೆಗಿಟ್ಟುಕೊಂಡಿತು. ಸಾಲದ್ದಕ್ಕೆ ಇತ್ತೀಚಿನ ಒಂದು ಕೈಹೊತ್ತಿಗೆಯ ಕಾದಂಬರಿಯಲ್ಲಿ, ಕಥಾನಾಯಕ ತನ್ನ ಹೆಂಡತಿಯಲ್ಲಿ ಅತೃಪ್ತನಾಗಿ ಬೀದಿಹೆಂಗುಸಿನಲ್ಲಿ ಅನುರಕ್ತನಾದದ್ದನ್ನು ಓದಿದ ಮೇಲಂತೂ ಗಾಬರಿಯಾದಳು. "ಅಯ್ಯೋ, ನಾನಿವರನ್ನು ಬಿಟ್ಟು ಬಂದು ಎರಡು ತಿಂಗಳ ಮೇಲಾಯಿತು. ಇವರೂ ಆ ಕಥಾನಾಯಕನಂತೆ ಆಗಿದ್ದರೆ ಏನು ಗತಿ ?" ಎಂದು ರಂಗನಾಥನ ಆಚರಣೆಯ ಬಗ್ಗೆ ಸಂಶಯ ತಳೆದು ತವಕಪಡಹತ್ತಿದಳು.

ಮಂಜುಳೆಯ ತಾಯಿ ಎಷ್ಟು ಓಡಿಯಾಡತೊಡಗಿದರು. ಮಂಜೂ ಒಂದು ದಿನ, ತನ್ನ ಅಕ್ಕನ ಆರು ತಿಂಗಳ ಮುದ್ದುಮಗುವಿಗೆ ಹಾಲುಹಾಕುತ್ತಿದ್ದಳು. ಹಾಲು ಕುಡಿಯುವಾಗ ನಡುನಡುವೆ ಆ ಮಗು ಅವಳ ಕೈಯ ಕಿರುಬೆರಳನ್ನು ತನ್ನ ಹಲ್ಲಿಲ್ಲದಪುಟ್ಟ ಬಾಯಲ್ಲಿಟ್ಟುಕೊಂಡು ನಲಿಯುತ್ತಿದ್ದಾಗ, ಆ ಮುದ್ದು ಬಾಯಿಯ ಸ್ಪರ್ಶದಿಂದ ಅವಳಿಗೆ ಒಂದು ಬಗೆಯ ಅವ್ಯಕ್ತ ಆನಂದವಾಯಿತು ಆ ಮಗುವಿನ ಆಟ-ನೋಟಗಳನ್ನು ನೋಡುವುದರಲ್ಲಿ ತಲ್ಲೀನಳಾಗಿ ತನ್ನನ್ನೆ ಮರೆಯಹತ್ತಿದಳು. "ಈ ಕಿರುಬೆರಳನ್ನು ಮಗುವು ಬಾಯಲ್ಲಿಟ್ಟಾಗ ಇಷ್ಟೊಂದು ಆನಂದವಾಗುತ್ತಿದ್ದಲ್ಲಿ, ನಿಜವಾಗಿಯೂ ಮಗು ಎದೆಹಾಲು ಕುಡಿಯುವಾಗ ಹೇಗಾದೀತೋ !" ಎಂದು ಮನದಲ್ಲಿಯೇ ಆಶ್ಚರ್ಯಪಟ್ಟಳು. ಬಯಕೆ ತಡೆಯಲಾರದೆ, ಒಂದು ಸಲ ಮಗುವನ್ನೆತ್ತಿಕೊಂಡು ಎದೆಗವಚಿಕೊಂಡಳು. ಪುಟ್ಟ ಮಗು ತನ್ನ ಹೂವಿನಂತಹ ಮೃದುವಾದ ಕೈಗಳಿಂದ ಅವಳ ಎದೆಯನ್ನು ಹಿಡಿದು ಹಾಲನ್ನು ಹೀರಬೇಕೆಂದು ಹವಣಿಸುತ್ತಿದ್ದಾಗ, ಮಂಜುವಿನ ದೇಹದ ರಕ್ತನಾಳಗಳಲ್ಲಿ ಕಚಕುಳಿಯಿಟ್ಟಂತಾಯಿತು ಆನಂದಾತಿರೇಕವಾದ ಕೆಲ ನಿಮಿಷ ಮಂಜು ಕಣ್ಣುಮುಚ್ಚಿ ಕುಳಿತಳು. ಅಷ್ಟರಲ್ಲಿ ಅವಳ ಅಕ್ಕ "ಹಾಲು ಕುಡಿಸುವುದಾಯಿತೇನೇ ಮಂಜೂ !" ಎಂದು ಕೂಗುತ್ತಾ ಅಲ್ಲಿಗೆ ಬಂದಳು.

"ಇಲ್ಲ, ಅಕ್ಕಾ ! ನನ್ನ ಕೈಯಿಂದ ಹಾಲು ಕುಡಿಸಿಕೊಳ್ಳುವುದಿಲ್ಲಮ್ಮಾ" ಎಂದು ಗಾಬರಿಯಾಗಿ, ತನ್ನ ಈ ಸ್ಥಿತಿಯನ್ನು ಅಕ್ಕ ನೋಡಿದಳೇನೋ ಎಂದು ಅನುಮಾನಿಸಿ, ಮಗುವನ್ನೆತ್ತಿ ಅವಳ ಕೈಯಲ್ಲಿಟ್ಟು ಹೊರಗಿನ ರೂಮಿಗೆ ಹೋದಳು.

ರಾತ್ರಿಯೂಟವಾದ ಮೇಲೆ ಅಂದು "ಅಮ್ಮಾ, ನಾನು ಬಂದು ಎರಡುವರೆ ತಿಂಗಳಾಯ್ತಮ್ಮಾ ! ಅವರು ಹೇಗಿದ್ದಾರೋ ಏನೋ, ನಾನಿನ್ನು ಹೊರಡಲಾ ?" ಎಂದು ಬೇಡಿದಳು. "ಹೌದು ಮಗೂ, ನಾಡಿದ್ದು ಸತ್ಯನಾರಾಯಣನ ಪೂಜೆ ಮುಗಿಸಿಕೊಂಡು, ಬರುವ ಭಾನುವಾರ ಹೊರಡಬಹುದಮ್ಮ" ಎಂದು ತಾಯಿ ಸಮ್ಮತಿಸಿದರು.

ಹೊರಡುವ ದಿನ ಮಂಜುವನ್ನು ಒಳಗೆ ಕರೆದು. "ಮಗೂ, ಮಂಜೂ, ನಿನ್ನ ಗಂಡನೊಂದಿಗೆ ಪ್ರೇಮದಿಂದ ಇದ್ದೀಯಷ್ಟೇ ? ನನ್ನ ಮಗಳು ಬಂಜೆಯೆನ್ನಿಸಬೇಡ. ನೀವೆಲ್ಲ ಈಗಿನವರು, ಕಲಿತವರು ! ನಿಮ್ಮ ವಿಚಾರಗಳೇನೋ ತಿಳಿಯದು. ದೇವರು ಬೇಗನೇ ನಿನಗೆ ತಾಯ್ತನ ದಯಪಾಲಿಸಲಿ" ಎಂದು ಮಗಳ ಮೈದಡವಿ ಆಶೀರ್ವದಿಸಿದರು. ತಾಯಿಯನ್ನಗಲಿ ಹೋಗಲು ಕಣ್ಣಲ್ಲಿ ನೀರು ಹರಿಯುತ್ತಿದ್ದರೂ, ನಗುಮುಖ ಮಾಡಿಕೊಂಡು ಮಂಜೂ ಬೊಂಬಾಯಿಗೆ ಹೊರಟಳು ಫಸ್ಟ್‌ಕ್ಲಾಸ್ ಬರ್ಥ್ ರಿಝರ್ವ್ ಮಾಡಿ ಮಗಳನ್ನು ಬೆಂಗಳೂರಿನ ಸ್ಟೇಶನಿನಲ್ಲಿ ಬೀಳ್ಕೊಟ್ಟು, ಅವಳ ತಂದೆ ರಂಗನಾಥನಿಗೆ ಟೆಲಿಗ್ರಾಮ್ ಕೊಟ್ಟರು

ಸೋಮವಾರ ರಜೆಪಡೆದು ರಂಗನಾಥ ಸ್ಟೇಶನ್ನಿಗೆ ಬಂದು, ಮಂಜುಳೆಯನ್ನು ಮದ್ರಾಸ್ ಎಕ್ಸ್‌ಪ್ರೆಸ್ಸಿನಿಂದ ಇಳಿಸಿಕೊಂಡ ಗಂಡನನ್ನು ನೋಡುತ್ತಲೂ "ಎಷ್ಟು ಇಳಿದು ಹೋಗಿದ್ದೀರಾ ನೀವು ? ಎರಡುವರೆ ತಿಂಗಳಿಂದ ನಿಮಗೆ ಬರೀ ಕವನೆ ಹೋಟಲೂಟ !"

"ನಿನ್ನ ವಿರಹದಿಂದ ಕೊರಗಿ ಹೀಗಾಗಿದ್ದೇನೆ ಎಂದು ನೇರೆ ಹೇಳಬೇಕೆ ?"

ಮೊದಲೇ ಮನೆಯನ್ನೆಲ್ಲ ಕೆಲಸದವಳಿಂದ ಸ್ವಚ್ಛವಾಗಿರಿಸಿದ್ದ. ಮಧ್ಯಾಹ್ನದ ಊಟವಾಗಬೇಕಾದರೆ ನಾಲ್ಕು ಗಂಟೆಯಾಯಿತು ಸಂಜೆ ದಾದರ್ ಬೀಚಿನಲ್ಲಿ ಇಬ್ಬರೂ ತಿರುಗಾಡಿ ಬಂದರು.

ಸುದರ್ಶನ

'ಆನಂದಕಂದ'ರ ಸಾಮಾಜಿಕ ಕಾದಂಬರಿಯ
೪ನೆಯ ಆವೃತ್ತಿ ಮುದ್ರಿತವಾಗಿ ಹೊರಗೆ ಬಂದಿದೆ.

ಪುಟ ಸಂಖ್ಯೆ ೧೫೦. ಬೆಲೆ ೧-೮-೦.

ಓದಲು ಕೈಯಲ್ಲಿ ತೆಗೆದುಕೊಂಡವರಿಗೆ, ಮುಗಿಸದೆ
ಇದನ್ನು ಕೆಳಗಿಡಲಿಕ್ಕೆ ಮನಸ್ಸು ಒಪ್ಪಲಾರದು.

* * * *

ಈ ಕಾದಂಬರಿಯನ್ನು ನೂರು ನೂರು ಸಲ ಓದಿಯೂ
ಇನ್ನೂ ಓದಬೇಕೆನ್ನುವ ರಸಿಕರು ಹಲವು ಜನರು.

ಬೇಕಾದವರು ಕೂಡಲೆ ಪತ್ರ ಬರೆಯಿರಿ !

'ಜಯಂತಿ' ಕಾರ್ಯಾಲಯ, ಧಾರವಾಡ

ಗರ್ಭಾಶಯದ ದೋಷಗಳನ್ನು ನಿವಾರಿಸಲು ಅತ್ಯುತ್ತಮವಾದ ಸಿದ್ಧೌಷಧ

ಜೀವನಿ

ದಿ ಸದ್ವೈದ್ಯಶಾಲಾ ಲಿಮಿಟೆಡ್, ನಂಜನಗೂಡು

ಬ್ರಾಂಚುಗಳು: ಬೆಂಗಳೂರು, ಮೈಸೂರು, ಮಂಗಳೂರು, ಹುಬ್ಬಳ್ಳಿ

ಯಾವಾಗಲೂ ನಂಜನಗೂಡು ಹಲ್ಲುಪುಡಿ ಉಪಯೋಗಿಸಿರಿ

ಡಿಸೆಂಬರ್ ತಿಂಗಳಿನ ಚಳಿ ಆರಂಭವಾಗಿದೆ. ಅಂದು ರಾತ್ರಿ ರಂಗನಾಥ ಮಂಜುವನ್ನು ಬಲವಾಗಿ ತಬ್ಬಿಕೊಂಡಾಗ,

ಮಂಜುವೆಂದಳು: "ಎಷ್ಟೋ ಕಾಲ ನಿಮ್ಮಿಂದ ಎಷ್ಟು ದೂರ ನಾಗಿದ್ದೆ!"

"ಅಷ್ಟು ದೂರವಾಗಿದ್ದರೂ, ನೀನು ನನ್ನ ಹೃದಯದಲ್ಲಿಯೇ ಸಮೀಪವಾಗಿದ್ದೆ ಮಂಜೂ! ಯಾವಾಗಲೂ ನಿನ್ನದೇ ಧ್ಯಾನ ಕಣೇ! ?"

"ಸಾಧನೆಗಳನ್ನಿಟ್ಟದೀರಾ?" ಎಂದು ಕೆಣಕಿದಳು.

"ಮಂಜೂ ...." ಎಂದು ಒನ್ನೆಲೆ ಬುಸುಗುಟ್ಟಿ ಇನ್ನೂ ಏನೋ ಅನ್ನುವವನಿದ್ದ. ಆದರೆ ಮಂಜೂ ಕೂಡಲೇ ಅವನ ಬಾಯನ್ನು ಯೋಗ್ಯರೀತಿಯಿಂದ ಮುಚ್ಚಿಬಿಟ್ಟಳು

ದೀಪವಾರಿಸಿ "ಸ್ವಾಮೀ, ಕ್ಷಮಿಸಿ, ಇನ್ನೆಂದೂ ನಿಮ್ಮನ್ನು ರೇಗಿಸುವುದಿಲ್ಲ" ಎಂದುಬಿಟ್ಟಳು. ತ್ರಯೋದಶಿಯ ಚಂದ್ರನು ಕಿಟಕಿಯಲ್ಲಿಂದ ಬೆಳ್ದಿಂಗಳನು ಚೆಲ್ಲುತ್ತಿದ್ದ

ಕೆಲಹೊತ್ತಿನ ಮೇಲೆ ಮಗ್ಗುಲಲ್ಲಿ ನಿದ್ದೆಗೊಂಡಿದ್ದ ಗಂಡನ ಮುಖವನು ನೋಡಿ "ಎಷ್ಟು ಶಾಂತವಾಗಿ ಮಗುವಿನ ಹಾಗೆ ಮಲಗಿದ್ದಾರೆ. ಇವರೇ ನನ್ನ ಮಗು ಅಲ್ಲವೇ?" ಎಂದು ಯೋಚಿಸುತ್ತಾ ನಿದ್ದೆ ಹೋದಳು

ಸಂಕ್ರಮಣಕ್ಕಾಗಿ ಮಂಜು ಕುಸುರೆಳ್ಳುಗಳನ್ನು ಕಳಿಸುವಾಗ, ಜೊತೆಗೆ ಒಂದು ಕಾಗದವನ್ನೂ ಅವ್ವನಿಗಾಗಿ ಬರೆದು, ಅದರ ಕೊನೆಯಲ್ಲಿ, ತಾನು ಹೊರಗಾಗಿ ಒಂದೂವರೆ ತಿಂಗಳ ಮೇಲಾಯಿತು ಎಂದು ತಿಳಿಸಿದಳು. ರಂಗನಾಥನ ಕೈಯಲ್ಲಿ ಆ ಕಾಗದವನ್ನು ಓದಲು ಕೊಟ್ಟಳು. ಕಾಗದ ಓದುವುದು ಮುಗಿಯುತ್ತಲೂ "ಮಂಜೂ, ನಿಜವೇ?" ಎಂದು ಆತ ಉತ್ಸಾಹಿತನಾಗಿ ಕೇಳಿದಾಗ ಮಂಜೂ ನಾಚಿಕೆಯ ಮುದ್ದೆಯಾಗಿದ್ದಳು.

× × × ×

ಮಂಜುವನ್ನು ಹೆರಿಗೆಗಾಗಿ ಬೆಂಗಳೂರಲ್ಲಿ ಬಿಟ್ಟುಬಂದಮೇಲೆ ಗುಮಾಸ್ತೆ ಕೆಲಸ ಮಾಡಿ ಬೇಸತ್ತು, ರಂಗನಾಥ ಅಲ್ಲಿ ಇಲ್ಲಿ ಬೇರೆ ಕೆಲಸಕ್ಕಾಗಿ ಪ್ರಯತ್ನಿಸಹತ್ತಿದ.

ಕಾಮರ್ಸ್ ಕಾಲೇಜಿನಲ್ಲಿ ಲೆಕ್ಚರರ್ ಜಾಗೆಗೆ ಅರ್ಜಿ ಬರೆದುಕೊಂಡಿದ್ದ. ಸದ್ಯದ ಎರಡಷ್ಟು ಸಂಬಳದ ಮೇಲೆ ಲೆಕ್ಚರರ್ ಎಂದು ನಿಯಮಿಸಿದ ಬಗ್ಗೆ ಆರ್ಡರ್ ಕೂಡ ಬಂದಿತ್ತು. ಮರುದಿನ ಆಫೀಸಿನಲ್ಲಿ, ಬೆಂಗಳೂರಿನಿಂದ ಟ್ರಂಕ್ ಕಾಲ್ ಬಂದಿದೆ ಎಂದು ಕೇಳಿದಾಗ, ರಂಗನಾಥನ ಕಾಲು ಉಡುಗಿಹೋದುವು "ಚೊಚ್ಚಿಲು ಹೆರಿಗೆ; ನನ್ನ ಮಂಜೂವಿಗೆ ಏನಾಯಿತೋ!" ಎಂದು ಅಂಜುತ್ತಾ ಫೋನ್ ತೆಗೆದುಕೊಂಡ.

ಮಂಜೂ ಹಿಂದಿನ ದಿನ ಗಂಡುಮಗುವನ್ನು ಹಡೆದ ವಾರ್ತೆಯನ್ನು ತಿಳಿಸಿ, ಫೋನನ್ನು ಅವಳ ಕೈಯಲ್ಲಿ ಕೊಟ್ಟಿದ್ದರು.

"ಮಂಜೂ, ನೀನೇ ಮಾತನಾಡುತ್ತಿದ್ದೀಯಾ? ಅಷ್ಟು ಕೂಗಿ ಮಾತನಾಡಿ ಆಯಾಸ ಮಾಡಿಕೊಳ್ಳಬೇಡ!"

"ನಿಮ್ಮ ಕುಮಾರನ ಅಳು ಅಲ್ಲಿ ಕೇಳಿಸುತ್ತದೆಯೋ ನಿಮಗೆ."

"ಹೌದು ಕೇಳಿಸುತ್ತೆ. ಮಂಜೂ, ಇನ್ನೊಂದು ಶುಭ ಸಮಾಚಾರ ಕಾಮರ್ಸ್ ಕಾಲೇಜಿನಲ್ಲಿ ನನಗೆ ಲೆಕ್ಚರರ್ ಕೆಲಸ ಸಿಕ್ಕಿದೆ. ಈಗಿನ ಎರಡಷ್ಟು ಸಂಬಳ! ನಿನ್ನ ಕೆಲಸಕ್ಕೆ ರಾಜೀನಾಮೆ ಕಳಿಸಿಬಿಡು ಅಲ್ಲಿಂದಲೇ!"

"ಬಹಳ ಸಂತೋಷ! ಅಲ್ರೀ, ಕೊನೆಗೂ ನೀವೇ ಸೋತುಬಿಟ್ರಲ್ಲಾ?"

"ಸರಿ, ಸೋತದ್ದು ನಾವಿಬ್ಬರೂ! ಗೆದ್ದವನು ಅವನೇ ನಿನ್ನ ಸುಕುಮಾರ!" ಎಂದಾಗ ಟ್ರಂಕ್ ಲಾಯಿನ್ ನಿಂತುಹೋಗಿತ್ತು.

ಸುದಾಮ ಚರಿತಂ

ಶ್ರೀ. ಶಾಲಿ ರಾಮಚಂದ್ರರಾಯ ವಿರಚಿತಂ

ಸಂಸ್ಕೃತ ನೂತನಕಾವ್ಯ — ಕ್ರಯ ೧ ರೂಪಾಯಿ

"ತುಂಬ ಆಶ್ಚರ್ಯವಾಯಿತು ಮನಮೆಚ್ಚಿದೆ ಬಹಳ ಚನ್ನಾಗಿದೆ ಬಹಳ ಚಲೋದಾಗಿದೆ ತುಂಬ ಸರಳವೂ ಸರಸವೂ ಆಗಿದೆ, ಸಂಸ್ಕೃತ ಕಾವ್ಯಸಾಹಿತ್ಯದ ಉದ್ದಾಮ ಕವಿಗಳನ್ನು ಪದೇ ಪದೇ ನೆನಪಿಸುತ್ತಲೂ ಇದೆ ಹಳಗಾಲದ ಸಂಸ್ಕೃತ ಸಾಹಿತ್ಯ ವನದಿಂದ ಎತ್ತಿಕೊಂಡು ಇಂದಿನ ಸಾಹಿತ್ಯವನದಲ್ಲಿ ಕಸಿ ಮಾಡಿದ ಬಳ್ಳಿಯ ಹಣ್ಣಿನಂತಿದೆ. ಕಸಿಯ ಹಣ್ಣು ರೂಪದಲ್ಲೂ ರುಚಿಯಲ್ಲೂ ತಾಯಿ ಹಣ್ಣನ್ನು ಬಿಟ್ಟಿರಲಾರದಷ್ಟೆ."

ರಾಷ್ಟ್ರಕವಿ — ಶ್ರೀ. ಎಂ. ಗೋವಿಂದ ಪೈ

ಪ್ರತಿಗಳಿಗಾಗಿ:

ಆಕಳವಾಡಿ ಬುಕ್‌ಡಿಪೊ, ವಿಜಯರೋಡ್ ಧಾರವಾಡ.

ಸಂಸ್ಕೃತಿ ಪ್ರಕಾಶನ ಮಾಳಮಡ್ಡಿ, ಧಾರವಾಡ.

ಬೇಸರಿಕೆ ಭಾರತದ ಬೇಸಾಯಶಾಸ್ತ್ರ !

ಶ್ರೀ. ಕೆ. ವಿರೂಪಾಕ್ಷ ಬಿ. ಕಾಮ್. (ಸೀ), ಹುಬ್ಬಳ್ಳಿ

ಮುದಿ ಎತ್ತುಗಳ ಕಟ್ಟಿ ರಂಟೆ ಹೊಡೆವೊಲು ಹೊಲದಿ-
ತೂಕಡಿಸಿ ನಡೆದಿತ್ತು ನಮ್ಮ ಕ್ಲಾಸು;
ಪ್ರೊಫೆಸರರೊ ! ಮೊನ್ನೆ ಬಂದರು ಲಂಡನ್ನಿನಿಂದೋದಿ
ಅವರ ಭಾಷಣ ಕೇಳೆ ನಮಗೆ ಜಸ್ಸು !
ಭಾರತದ ವ್ಯಸಾಯ ಶಾಸ್ತ್ರವನು ಲಂಡನ್ನಿನಲ್ಲೋದಿ
ಅರೆದು ನೀರು ಕುಡಿದಿಹರಂತೆ
ಏಸೊನೂರು ರೂಪಾಯಿ ಸಂಬಳದ ತಜ್ಞರು !
" ಭಾರತದ ಬೇಸಾಯ ಬೆನ್ನೆಲುಬು ದೇಶಕ್ಕೆ
ಹಣಕಾಸು-ವ್ಯವಹಾರ ಸಾಗಬೇಕೆ ?
ಬೇಸಾಯವೇ ಮೂಲವೆನಲು ಸಂಕೋಚವೇಕೆ ?
ಮೇನ್‌ಸ್ಪ್ರಿಂಗ್ ಗಡಿಯಾರಕಿರುವವೊಲು,
ದೇಹವನು ಜೀವಕಣ ನಡೆಸುವಂತೆ,
ಬೇಸಾಯವೇ ಸಕಲ ಕಾರಣ ನಮ್ಮೇಳ್ಗೆಗೆ !
ನೋಡಿ ತರುಣರೆ, ನಮ್ಮ ರೈತನು
ಅವನಜ್ಜ ಮುತ್ತಜ್ಜರಿಗೆ ದೂತನು !
ಹಳೆಯ ಕಾಲದ ಮರದ ಕುಂಟೆಯ ಹೊಲದಿ ಊಳಿಹನು.
ಹೊಲದ ಮಣ್ಣನು ಹದವ ಮಾಡಲು ಪ್ಲ್ಯಾನು ಹಾಕಿಹನು.
ರೈತ ಬಿತ್ತುವುದೇನು ! ಗೆಳೆಯರೇ ಬೀಜಗಳೊ ?
ಅಲ್ಲ, ಹುಳುಹತ್ತಿತಿಂದುಳಿದ ಸಿಪ್ಪೆಗಳು !
ಮಳೆಯೊ, ಕಾಲೇಜು ವಿದ್ಯಾರ್ಥಿಗಳ ಶಿಸ್ತು !
ಲೆಕ್ಚರಿಗೆ ಒಂದೊಂದು ಸಲ ಕಿವಿಯ ಕೊಡುವಂತೆ
ನೆನಪು ಆದಾಗ ಬರುವುದು ಅಷ್ಟು—ಇಷ್ಟು " !
" ಮಗಳ ಮದುವೆಯು ಬಂತು
ಧಣಿಯರೇ, ಸ್ವಲ್ಪ ಸಾಲವ ಕೊಡಿ " ಎನುವ
ಕಟ್ಟೆಕೆಳಗಡೆ ನಿಂತು;
ನೂರು ರೂಪಾಯಿಗಿನ್ನೂರು ಬಿದ್ದಿತು ಖರ್ಚು
ಧಣಿಯರಂಗಡಿಗಳು ಸುಲಿದು ಮೋಸಪಡಿಸಲಿಹ ಚರ್ಚು!
ಇನ್ನೂ ಇದೆಯಲ್ಲ ಕೋರ್ಟು ವ್ಯವಹಾರ
ಹಣವನದಕಂತೂ ಜೋಡಿಸಲೆ ಬೇಕು.
" ಜಾತ್ರೆಯಾತ್ರೆ ಕೂಡ ಹುಡುಕಬೇಕು
ಹೋಗದಿರೆ ಸ್ವಾಮಿ ಸಿಟ್ಟಾದಾನು
ಹರಕೆ ಹೊತ್ತಿರುವೆ ಹೋದವರ್ಷ ಜ್ವರ ಬರಲು ನಾನು
ಎಲ್ಲಿಯಾದರೂ ಸಿಕ್ಕಷ್ಟೆ ಸಿಗಲಿ ಸಂಚುಕಾರ "
" ನೋಡಿ ! ಎಷ್ಟು ಅವಿದ್ಯಾವಂತ ನಮ್ಮ ರೈತ.
ಇವನೇ ನಮ್ಮ ರಾಷ್ಟ್ರದ ಪಿತ.
ನಿಮ್ಮ ಕೈಲಿದೆ ಗೆಳೆಯರೇ, ಭಾರತದ ಭವ್ಯಭವಿಷ್ಯ !
ಓದು ಬರೆಹವ ಕಲಿಯಬೇಕು—ನಮ್ಮ ರೈತ
ಜಗದರೀತಿ ತಿಳಿಯಬೇಕು ಹೊಸದು ಹಾದಿ ಹಿಡಿಯಬೇಕು
ಇಲ್ಲದಿರೆ ಎಂದೂ ಇಲ್ಲ—ಭಾರತಕ್ಕೆ ಹಿತ ! "

× × × ×

ಸುಗ್ಗಿ ಬಂದಿತು ರಜವು ಬಿಟ್ಟಿತು ಹಳ್ಳಿಗೋಡುತ ನಡೆದೆನು
ರೈತ ಕಣವನು ಮಾಡಿ ಕೆಲಸದಿ ಮುಳುಗಿ ತೇಲುತಲಿದ್ದನು
ಅತ್ತ ಜೋಳವ ಕೊಯ್ಯುತಿದ್ದರು ಕೆಂಗ ಕೇಳಲು ಕೆಲವರು
ಗಾಳಿಬೀಸಲು ನೆಲ್ಲು ತೂರುತ ಚೀಲ ತುಂಬುತಲಿದ್ದರು.
ಮೇಷ್ಟ್ರು ಹೇಳಿದುದೆಲ್ಲ ಹೇಳಿದೆ ರೈತನೆದುರಿಗೆ ಹೊಲದಲಿ
" ವಿದ್ಯೆ ಕಲೆಯಿರಿ ! ಮರದ ನೇಗಿಲು ಊಳದಿರಿ ನಿಮ್ಮಿಳೆಯಲಿ
ಬಿತ್ತಬೇಡಿರಿ ಹುಳುಕು ಬೀಜವ ! ಸಾಲ ಮಾಡದೆ ದುಡಿಯಿರಿ
ಜಾತ್ರೆ, ಕೋರ್ಟನು ಬಿಟ್ಟು ಮನೆಯಲಿ ಇರುತ ಕೆಲಸವ ಗೈಯಿರಿ"
" ಸಾಕು ಸುಮ್ಮನಿರೊ ! ನಿನ್ನ ಬೋಧನೆ....ಮೂರು ಕಾಸಿನ ವಿದ್ಯೆಯ
ತೋರದಿರು ಇಲ್ಲಿಂದು ನಡೆಯದು ನಮಗೆ ನೀನೇ ಹಿರಿಯನೆ ?
ನಮ್ಮ ವಿದ್ಯೆಯೆ ಬೇರೆ ! ಬಲ್ಲೆಯ ? ಅನುಭವವೆ ಬಹು ಮುಖ್ಯವು !"
ಸುಮ್ಮನಾದೆನು; ರೈತಗೊರೆಯಲು ದೇವರಿಂದಲೆ ಶಕ್ಯವು.

× × × ×

ಕೋಣ ಕರೆಗೆಳೆದಂತೆ ಎತ್ತು ಎರೆಗೆಳೆಯುತಿರೆ
ಮೇಷ್ಟ್ರು-ರೈತನ ಮಾತು ಸಾಕು
ಓದುವೊಲು ಓದೋಣ ಡಿಗ್ರಿ ದೊರೆಯುವ ತನಕ
ಬೇಸಾಯ ಶಾಸ್ತ್ರ ನಮಗೇಕೆ ಬೇಕು ?
ಭಾರತದ ಪಂಚವಾರ್ಷಿಕ ಯೋಜನೆಯಲೆಲ್ಲ ಇದೆ
ನಮಗೇಕೆ ಹಾಳು ತ್ರಾಸು,
ಸರಕಾರದ ಕೆಲಸವೇ ಪಾಸು !
" ನಿಮ್ಮ ಕೈಲಿದೆ ಗೆಳೆಯರೇ, ಭಾರತದ ಭವ್ಯ ಭವಿಷ್ಯ !
ಓದು ಬರೆಹವ ಕಲಿತು ಜಗದ ರೀತಿಯ ತಿಳಿದು
ಹೊಸ ಹಾದಿ ಹಿಡಿಯಬೇಕೆಮ್ಮ ರೈತ "
" ನಮ್ಮ ವಿದ್ಯೆಯೆ ಬೇರೆ ! ಬಲ್ಲೆಯಾ ?
ಅನುಭವವೆ ಬಹು ಮುಖ್ಯವು. "
ಮೇಷ್ಟ್ರು ಈ ಕಡೆ, ರೈತ ಆ ಕಡೆ
ನಡುವೆ ಹೊಳೆ ಬೋರಿಡುತಿದೆ !
ಎಲ್ಲಿ ಸೇತುವೆ ? ಇಲ್ಲ ನಾವೆ !
ಮೇಷ್ಟ್ರು-ರೈತನ ಕೃತಿಯ ಮಿಲನವು ದೇವರಿಂದಲೆ ಶಕ್ಯವು !

ಭಕ್ತಿಯ ಹಿರಿಮೆ

(ಪರಿಚಯಾತ್ಮಕ ಪ್ರಬಂಧ)

ಶ್ರೀ. ಉ. ವೆಂಕಟಕೃಷ್ಣರಾವ್ ಎಂ. ಎ. ಮದ್ರಾಸ್

ಈ ಜಗತ್ತಿನಲ್ಲಿ ಆಸ್ತಿಕರೆನಿಸಿಕೊಳ್ಳುವವರೆಲ್ಲರೂ ಭಕ್ತಿಯ ಘನತೆಯನ್ನು ಒಪ್ಪಿಕೊಂಡಿರುವರು. ಕರ್ಮಪ್ರಧಾನವಾದ ಭಾರತೀಯ ವೈದಿಕ ಸಮಾಜದಲ್ಲಿ ಭಕ್ತಿಲತೆ ಬೆಳೆದು ಹಬ್ಬಿದುದು ಹೇಗೆ?

ಭಾರತೀಯರ ದರ್ಶನಶಾಸ್ತ್ರದಲ್ಲಿ ಭಕ್ತಿತತ್ತ್ವದ ಪ್ರವೇಶವಾದೊಡನೆ, ಜನರ ನೈತಿಕ ಮತ್ತು ಧಾರ್ಮಿಕ ಮತದಲ್ಲಿ ವಿಶೇಷವಾದ ಬದಲಾವಣೆಗಳು ತಲೆದೋರಿದುವು. ಈ ಭಕ್ತಿತತ್ತ್ವವೆಂಬುದು, ದ್ರಾವಿಡರಲ್ಲಿ ಅವರ ದೇವತೆಗಳ ಪೂಜೆಯ ಸಂದರ್ಭದಲ್ಲಿ ಹುಟ್ಟಿ, ಕ್ರಮೇಣ ಭಾರತೀಯರ ಗ್ರಂಥಗಳನ್ನು ಹೊಕ್ಕು, ಉಚ್ಚವಾದ ಸ್ಥಾನವನ್ನು ಪಡೆದಿರಬೇಕು. ಇದನ್ನು ಭಾಗವತ ಮಾಹಾತ್ಮ್ಯದ ಸೊಗಸಾದ ಕಥೆಯಲ್ಲಿಯೇ ಸ್ಪಷ್ಟವಾಗಿ ಉಲ್ಲೇಖಿಸಿದ್ದಾರೆ. ದಶೋಪನಿಷತ್ತುಗಳಲ್ಲಿ ಒಂದಾದ ಶ್ವೇತಾಶ್ವತರೋಪನಿಷತ್ತಿನ ಕಡೆಯ ಶ್ಲೋಕದಲ್ಲಿ (vi ೨೩) ಈ ಶಬ್ದವು ಮೊತ್ತಮೊದಲು ತೋರುವುದು:

ಯಸ್ಯ ದೇವೇ ಪರಾಭಕ್ತಿಃ ಯಥಾ ದೇವೇ ತಥಾ ಗುರೌ ।
ತಸ್ಯೈತೇ ಕಥಿತಾ ಹ್ಯರ್ಥಾಃ ಪ್ರಕಾಶಂತೇ ಮಹಾತ್ಮನಃ ॥

ಆದರೆ ಆಗಲೇ ಋಗ್ವೇದದ I ೧೬೪. ೪೬ ರಲ್ಲಿಯೇ:

ಇಂದ್ರಂ ಮಿತ್ರಂ ವರುಣಂ ಅಗ್ನಿಮಾಹುರಥೋ
ದಿವ್ಯಃ ಸ ಸುಪರ್ಣೋ ಗರುತ್ಮಾನ್ ।
ಏಕಂ ಸದ್ವಿಪ್ರಾ ಬಹುಧಾ ವದಂತಿ
ಅಗ್ನಿಂ ಯಮಂ ಮಾತರಿಶ್ವಾನಮಾಹುಃ ॥

ಎಂಬಲ್ಲಿ ಮಹಾಮಹಿಮನಾದ ಸರ್ವೇಶ್ವರನ ಉಲ್ಲೇಖವು ಮೊತ್ತಮೊದಲು ಬಂದು, ಆ ಸರ್ವೇಶ್ವರನಿಗೆ ಇತರ ಚಿಲ್ಲರೆ ದೇವತೆಗಳೆಲ್ಲಾ ಕಪ್ಪಕೊಡುವರೆಂದು ವರ್ಣಿಸಿರುವರು. ಹೀಗೆಯೇ ವರುಣಸೂಕ್ತದಲ್ಲಿ ಉಪಾಸಕರ ಪ್ರಾರ್ಥನೆಗಳನ್ನು ಆ 'ಮಹಾದೇವ'ನು ಸಲ್ಲಿಸಬೇಕೆಂದು ಉಲ್ಲೇಖಬಂದಿದೆ. ಕೀಥ್ ಎಂಬ ಪಾಶ್ಚಾತ್ಯತತ್ತ್ವಶಾಸ್ತ್ರವೇತ್ತರ ಅಭಿಪ್ರಾಯದ ಪ್ರಕಾರ, ಇಲ್ಲಿ ಅರ್ವಾಚೀನ ಭಕ್ತಿಪಂಥದ ಬೇರುಗಳನ್ನು ನಾವು ಕಾಣುತ್ತೇವೆ; ಆದರೆ ಯಜ್ಞವನ್ನೇ ಸರ್ವಶ್ರೇಷ್ಠವಾಗಿ ನಂಬಿದ ಈ ಉಪಾಸಕರು ಇಂದ್ರ, ಅಗ್ನಿ, ಸೋಮಾದಿಗಳನ್ನೇ ಕೊಂಡಾಡುತ್ತ 'ಮಹಾದೇವ'ನ ಪ್ರಾಶಸ್ತ್ಯವನ್ನೆತ್ತಿಹಿಡಿಯದೆ ಹೋದರು. ಆದರೂ ಹತ್ತನೆಯ ಮಂಡಲದ ೧೨೫ನೆಯ ಸೂಕ್ತದಲ್ಲಿ, ವಾಗ್ದೇವತೆಯು ತಾನೇ ಯಜ್ಞಾಧಿದೇವತೆಯೆಂದೂ, ತನ್ನ ದ್ವಾರಾ ಎಲ್ಲರೂ ತಿಂದುಸುರಾಡಿಸಿ, ಕಂಡುಕೇಳುವುದೆಂದೂ, ತನ್ನ ಪ್ರಸಾದದಿಂದಲೇ ಉಪಾಸಕನು ಪುರೋಹಿತನೋ, ಋಷಿಯೋ, ತಪಸ್ವಿಯೋ ಆಗಬಹುದೆಂದೂ ಸಾರುವಳು. ಈಲಿಯಟ್ ಎಂಬ ಇನ್ನೊಬ್ಬ ಪಾಶ್ಚಾತ್ಯ ತತ್ತ್ವವೇತ್ತನು, ಇಲ್ಲಿ ಭಗವದ್ಗೀತೆಯ 'ಮಾಮೇಕಂ ಶರಣಂ ವ್ರಜ' ಎಂಬುದರ ಸೂಕ್ಷ್ಮರೂಪವಾದ ಬೀಜವನ್ನು ನಾವು ಕಾಣುವೆವೆಂದು ವಾದಿಸುವನು. ಈವಾಗಲೇ ಉದಹರಿಸಿದ ಶ್ವೇತಾಶ್ವತರೋಪನಿಷತ್ತಿನಲ್ಲಿ ಮಹಾದೇವನ ಪ್ರಸಾದದಿಂದಲೇ ಮುಕ್ತಿಯು ಲಭ್ಯವೆಂದು ಹೇಳಿದುದನ್ನೇ ರಾಮಾನುಜಾದಿಗಳುಪಜೀವಿಸಿ, ಭಕ್ತಿಯ ಹಿರಿಮೆಗೆ ಬಂಗಾರದ ಕಲಶವನ್ನಿಟ್ಟಿರುವರು. ಇದನ್ನೇ ಕಠೋಪನಿಷತ್ತಿನಲ್ಲಿಯೂ 'ಧಾತುಃ ಪ್ರಸಾದಾನ್ಮಹಿಮಾನಮೀಶಂ' ಎಂದು ಸಾರಿರುವರು.

ವಿಶ್ವಾತ್ಮನಾದ ಪರಮಾತ್ಮನಿಗೂ ನಮ್ಮ ಜೀವಾತ್ಮನಿಗೂ ಇರುವ ಸಂಬಂಧವನ್ನು ಬಿಡಿಸಿ ವರ್ಣಿಸಲು ಹೊರಟ ಉಪನಿಷತ್ತುಗಳು, ಇವೆರಡರ ತತ್ತ್ವವು ಒಂದೇ ಎಂಬ ನಿರ್ಣಯಕ್ಕೆ ಬಂದುವು. ಅದ್ವೈತಿಗಳಾದರೋ ಈ ಉಪನಿಷತ್ತುಗಳಿಗೆ ಟೀಕಿಸುವಾಗ, ಜೀವಾತ್ಮವೇ ಅಜ್ಞಾನದಿಂದಾವೃತವಾಗಿ ತನ್ನ ನಿಜಾಂಶವನ್ನರಿಯದೆ ತಾನು ಪರಮಾತ್ಮನಿಂದ ಭಿನ್ನವೆಂಬ ಮೋಹವನ್ನು ತಪ್ಪಾಗಿ ಹೊಂದುವುದೆಂದು ಪ್ರತಿಪಾದಿಸುವರು. ಉಳಿದ ಎಲ್ಲಾ ಟೀಕಾಕಾರರಾದರೂ, ಜೀವಾತ್ಮನು ಪರಮಾತ್ಮನ ಅಂಶವೆಂದೇ ಸ್ಥಾಪಿಸುವರು. ಅದ್ವೈತತತ್ತ್ವವನ್ನು ಸರಿಯಾಗಿ ಅರಿತರೆ, ಜೀವಾತ್ಮ–ಪರಮಾತ್ಮರೊಂದೇ ಆದರೂ ಅಜ್ಞಾನದಿಂದ ಬೇರೆ—ಎಂದು ಮೋಹಿಸಿಯೇ ನಾವು ದುಃಖಭಾಗಿಗಳಾಗುವುದೆಂದು ತಿಳಿದರೆ, ಪರಮಾತ್ಮನ ಮಹಾತ್ಮೆಯ ಕಥೆಯೇ ಉಳಿಯದಿರುವುದರಿಂದ. ಭಕ್ತಿಯ ಸುದ್ದಿಯೇ ಬರಲವಕಾಶವಿರುವುದಿಲ್ಲ. ಆದರೆ ವ್ಯಾವಹಾರಿಕದೆಶೆಯಲ್ಲಿ ಎಂದರೆ ಈ ಲೋಕದಲ್ಲಿ ತಾರತಮ್ಯವು ಹೇಗೋ ತಲೆದೋರಿ, ಪರಮಾತ್ಮ ದೊಡ್ಡವ, ಆತನ ಅನುಗ್ರಹಕ್ಕೆ ನಾವೆಲ್ಲರೂ ಪಾತ್ರರಾಗಿ, ಈ ದುಃಖಾಲಯವಾದ, ಅಶಾಶ್ವತವಾದ ಸಂಸಾರವನ್ನು ದಾಟಿ, ಆತನ ಪಾದಾರವಿಂದವನ್ನು ಸೇರಿ, ದುಃಖದಿಂದ

ಬಿಡುಗಡೆಯನ್ನು ಪಡೆದು, ನಿಜವಾದ ಶಾಶ್ವತವಾದ ಮೋಕ್ಷಾನಂದವನ್ನು ಪಡೆಯಬೇಕೆಂಬುದೇ ಸರ್ವಸಿದ್ಧಾಂತಗಳ ಸಾರವಾಗಿದೆ. ಹೀಗಾಗಿ ಈ ಭಕ್ತಿಯನ್ನು ಉತ್ಕಟ ಅದ್ವೈತಿಗಳು ತತ್ತ್ವಾನ್ವೇಷಣಪರರಾಗಿ ಅಲ್ಲಗಳೆದರೂ, ವ್ಯಾವಹಾರಿಕ ದಶೆಯಲ್ಲಿ ಅವರೇ ಮಧುಸೂದನ ಸರಸ್ವತಿಯಂತವರು-ಉತ್ಕೃಷ್ಟ ಭಕ್ತರಾಗಿದ್ದುದನ್ನು ನಾವು ಕಂಡೇ ಕಾಣುತ್ತೇವಷ್ಟೆ! ಉಳಿದವರೆಲ್ಲರಿಗೂ ಭಕ್ತಿಯೇ ಮುಕ್ತಿಗೆ ಮುಖ್ಯ ಸೋಪಾನ ಅಥವಾ ಮೆಟ್ಟಲು. ಹೀಗಾಗಿ ಭಕ್ತಿಯ ಹಿರಿಮೆಯನ್ನು ಬೌದ್ಧ-ಜೈನಾದಿ ಅವೈದಿಕಪಂಥಗಳೂ, ವೈದಿಕಪಂಥಗಳೂ ಒಪ್ಪಿಕೊಂಡಿವೆಯೆಂಬುದು ಹದಿನಾರಾಣೆ ಸತ್ಯ. ಒಂದೇ ಮಾತಿನಲ್ಲಿ ಹೇಳುವುದಾದರೆ, ಚಾರುವಾಕರೆಂಬ ನಿರೀಶ್ವರವಾದಿಗಳನ್ನು ಬಿಟ್ಟು, ಭಾರತೀಯರಲ್ಲಿ ಬೇರೆಯೆಲ್ಲರೂ ಭಕ್ತಿಯ ಮಹಿಮೆಯನ್ನು ಒಪ್ಪುವವರೇ, ದೇವರ ಅಪಾರಮಹಿಮೆಯಲ್ಲಿಯೂ – ತಮ್ಮ ಸ್ವಂತ ಅಲ್ಪಸ್ವ ಅಶಕ್ತತೆಯಲ್ಲಿಯೂ — ನಂಬಿಗೆಯುಳ್ಳವರೇ. ಈ ಚಾರ್ವಾಕರು ಸಾಧಾರಣ ಹತ್ತಿಪ್ಪತ್ತು ಲಕ್ಷ ಜನರಲ್ಲಿ ನೂರರಷ್ಟು ವಿರಲರಾದ್ದರಿಂದ, ಅಂಥವರು ನಮ್ಮ ದೇಶದಲ್ಲಿಯೇ ಇಲ್ಲವೆಂದರೂ ತಪ್ಪಾಗಲಾರದು.

ಪಾಣಿನಿಯು ಅಷ್ಟಾಧ್ಯಾಯಿಯ iv. 3. 95—' ಯೇಷಾಂ ಭಕ್ತಿಃ ಯತ್ ' ಎಂಬ ಸೂತ್ರದಲ್ಲಿ ಭಕ್ತಿ ಶಬ್ದದ ವ್ಯುತ್ಪತ್ತಿಯನ್ನು ವಿವರಿಸುವನು. ಪತಂಜಲಿಯು ಪಾಣಿನಿಯ v 2 26ಕ್ಕೆ ಟೀಕಿಸುವ ಸಂದರ್ಭದಲ್ಲಿ, ಶೂಲಧಾರಿಯಾದ ಈಶ್ವರನನ್ನು ಪೂಜಿಸುವ, ಆವನಲ್ಲಿ ಭಕ್ತಿಯನ್ನಿಡುವ ಶಿವಭಾಗವತರನ್ನು ನಿರ್ದೇಶಿಸಿರುವನು. ಹೀಗೆಯೇ ಪ್ರಾಚೀನ ಬೌದ್ಧಗ್ರಂಥಗಳು ಮತ್ತು ಪ್ರಾಚ್ಯ ಭಾರತದಲ್ಲಿ ಬುದ್ಧನ ಕಾಲದಲ್ಲಿದ್ದ ಭಕ್ತಿ—ಪೂಜಾಕ್ರಮಗಳನ್ನು ವರ್ಣಿಸಿವೆ. ಭಾಂಡಾರಕರರೆಂಬ ಮಹನೀಯರು ತಮ್ಮ ' ಧಾರ್ಮಿಕ ಪಂಥಗಳ ಚರಿತ್ರೆ ' ಎಂಬ ಪುಸ್ತಕದ ೩ನೆಯ ಪುಟದಲ್ಲಿ, ನಿದ್ದೇಸ ಎಂಬ ಬೌದ್ಧಗ್ರಂಥದಲ್ಲಿ ಆಗಿನ ಕಾಲದ ವಿವಿಧ ಧಾರ್ಮಿಕಪಂಥಗಳ ಪಾರ್ಮಿಕ ವಿಚಾರಗಳನ್ನುಲ್ಲೇಖಿಸಿ, ಅವರಲ್ಲಿಯ ಭಕ್ತಿಯ ಸೂಕ್ಷ್ಮವಾದ ರೂಪರೇಷೆಗಳನ್ನು ನಿರ್ದೇಶಿಸುವ ವಾಕ್ಯವೊಂದನ್ನುದಹರಿಸಿರುವರು. ಕ್ರಿಸ್ತಪೂರ್ವ ೪ನೆಯ ಶತಮಾನದಲ್ಲಿ ಭಾರತದಲ್ಲಿ ಸಂಚರಿಸಿದ ಯವನ ಐತಿಹಾಸಿಕನಾದ ಮೆಗೇಸ್ಥನೀಸ್ ಎಂಬವನು, ಸೌರಸೆನ್ಯೊ (ಶೂರಸೇನ) ಎಂಬ ಜಿಲ್ಲೆಯ ಜನರು ಹೆರೆಕ್ಲಿಸ್=ಹರಿಕುಲೇಶನನ್ನು ಭಕ್ತಿಯಿಂದ ಆಗಲೇ ಪೂಜಿಸಲಾರಂಭಿಸಿದ್ದರೆಂದು ಒಪ್ಪಿರುವನು. ಆಗಲೇ ಒಂದು ಆರಣ್ಯಕದೊಳಗೆ ವಾಸುದೇವನೇ ಕೃಷ್ಣ—ದೇವಕೀಪುತ್ರನೆಂದೂ, ವಿಷ್ಣು ನಾರಾಯಣನೆಂದೂ ಪ್ರತಿಪಾದಿಸಿ, ಛಾಂದೋಗ್ಯೋಪನಿಷತ್ತಿನಲ್ಲಿ ಈತನು ಸೂರ್ಯೋಪಾಸಕನೆಂದೂ ಸೂಚಿಸಲ್ಪಟ್ಟಿದೆ. ಮಹಾಭಾರತದಲ್ಲಿ ಈತನೇ ಸಾತ್ವತ=ವೃಷ್ಣಿ=ಯಾದವ ಕುಲದಲ್ಲಿ ಹುಟ್ಟಿದವನೆಂದೂ, ಇವನೇ ಮಾನುಷ ಯಜ್ಞಗಳನ್ನು ನಿಷೇಧಿಸಿ, ಹೆಂಗುಸರ ಮಾನಾಭಿಮಾನವನ್ನು ಕಾಯ್ದವನೆಂತಲೂ ಬಣ್ಣಿಸಿ, ಸರ್ವಶಾಸ್ತ್ರಸಾರವಾದ ಭಗವದ್ಗೀತೆಯನ್ನೂ ಅವನ ಬಾಯಿಯಿಂದಲೇ ಉಪದೇಶಿಸುವರು. ಶ್ರೀಕೃಷ್ಣನ ಮಹಿಮೆಯಿಂದಲೇ ಎಂದೊಪ್ಪಬೇಕು, ಇದೇ ಸಮಯದಲ್ಲಿ ತಲೆದೋರಿದ ಶಿವಭಾಗವತರು, ಮಾಹೇಶ್ವರರು, ಪಾಶುಪತರು, ಇನ್ನಿತರರೂ ತಮ್ಮ ತಮ್ಮ ಹಿರಿಮೆಯನ್ನು ಕಳಕೊಂಡು, ಭಾಗವತರೆಂದರೆ ಭಗವಂತ=ವಿಷ್ಣು=ಕೃಷ್ಣನ ಉಪಾಸಕರೇ—ಎಂದು ಬಾದರಾಯಣನ ವೇದಾಂತಸೂತ್ರಗಳಿಂದಲೂ, ನಾರದರ ಭಕ್ತಿಸೂತ್ರಗಳಿಂದಲೂ ಸಿದ್ಧಾಂತವಾಯಿತು. ಈ ಪಂಥಗಳನ್ನೆಲ್ಲಾ ಸುಸ್ಪಷ್ಟವಾಗಿ ಬಾಣನು ಹರ್ಷಚರಿತದಲ್ಲಿ ವರ್ಣಿಸಿದ್ದಾನೆ. ಯವನರ ಹೆಲಿಯೋದೊರಸ್ ಎಂಬ ಪ್ರತಿನಿಧಿಯು, ತನ್ನ ಧ್ವಜದಲ್ಲಿ ಗರುಡನನ್ನು ಚಿತ್ರಿಸಿ, ವಿಷ್ಣುವಿನಲ್ಲಿ ವಿದೇಶೀಯನಾದ್ದರೂ ತನ್ನ ಭಕ್ತಿಯನ್ನು ಸಾರಿದನು. ಮಹಾಯಾನ ಬೌದ್ಧರೂ ಬುದ್ಧನನ್ನೇ ದೇವರೆಂದಾಗಿ ಗೌರವಿಸಿ, ಭಕ್ತಿಯ ಹಿರಿಮೆಯನ್ನು ಮತ್ತಷ್ಟು ಹೆಚ್ಚಿಸುವವರಾದರು. ಇದಕ್ಕೆ ಭಗವದ್ಗೀತೆಯೇ ಕಾರಣವೆಂದು ವಿಂಟರ್ ನಿಟ್ಝ್ ಇತ್ಯಾದಿ ಪಾಶ್ಚಾತ್ಯ ವಿದ್ವಾಂಸರೊಪ್ಪಿರುವರು. ಕಾಲಕ್ರಮೇಣ ಪಾಂಚರಾತ್ರಾಗಮರೀತ್ಯಾ ಸಂಕರ್ಷಣ, ಪ್ರದ್ಯುಮ್ನ, ಅನಿರುದ್ಧ, ವಾಸುದೇವರೆಂಬ ಚತುರ್ವ್ಯೂಹಗಳನ್ನು ಕೃಷ್ಣನ ಆವಿರ್ಭಾವಗಳೆಂದಲೇ ಸಾಧಿಸಿ, ಭಕ್ತಿಮಾರ್ಗದ ಹಿರಿಮೆಯನ್ನು ಮತ್ತಷ್ಟು ಹೆಚ್ಚಿಸಿದರು. ಇದನ್ನು ಭಾಗವತಪುರಾಣದ ಹತ್ತನೆಯ ಸ್ಕಂಧ ಪೂರ್ವಾರ್ಧ ೧೬ನೆಯ ಅಧ್ಯಾಯ ೪೫ನೆಯ ಶ್ಲೋಕದಲ್ಲಿ, ನಾಗಪತ್ನೀ ಸ್ತುತಿಯಲ್ಲಿ:

' ನಮಃ ಕೃಷ್ಣಾಯ ರಾಮಾಯ ವಸುದೇವಸುತಾಯ ಚ
ಪ್ರದ್ಯುಮ್ನಾಯಾನಿರುದ್ಧಾಯ ಸಾತ್ವತಾಂ ಪತಯೇ ನಮಃ '

ಎಂಬಲ್ಲಿ ಪ್ರತಿಪಾದಿತವಾದುದನ್ನು ನಾವು ಕಾಣುತ್ತೇವೆ.

ಈ ಭಕ್ತಿಯನ್ನು ಪರಮಾತ್ಮನೊಡನೆ ಸೇರಿಸಿ, ಅದಕ್ಕೆ ಭಕ್ತಿಯೋಗವೆಂಬ ಹೆಗ್ಗಳಿಕೆಯನ್ನು ಕಲ್ಪಿಸಿದ ಕೀರ್ತಿಯು ಭಗವದ್ಗೀತೆಗೇ ಸಲ್ಲಬೇಕಾಗಿದೆ. ಈ ಭಕ್ತಿಯೋಗವೆಂಬ ಪದಕ್ಕೆ ಪರಮಾತ್ಮನ ಸತತಧ್ಯಾನವೆಂದರ್ಥವನ್ನು ಕಲ್ಪಿಸಬಹುದು. ಈ ಭಕ್ತಿಗೂ ಅಂಧವಿಶ್ವಾಸಕ್ಕೂ ಏನೂ ಸಂಬಂಧವೇ ಇಲ್ಲ. ಉಪನಿಷತ್ತುಗಳಲ್ಲಿದನ್ನು ಉಪಾಸನೆಯೆಂದು ಕರೆದಿರುವರು. ಸಂಪ್ರೀತಿಪೂರ್ವಕವಾದ ಧ್ಯಾನಾಸಕ್ತಿಯೆಂಬುದೇ ಇದೆಂದು ಹೇಳಬಹುದು. ಈ ಧ್ಯಾನವು ಧ್ರುವಾನುಸ್ಮೃತಿಗೆ ಎಂದರೆ ಪರಮಾತ್ಮನ ದೃಢವಾದ ನೆನಪಿಗೆ ಕಾರಣವಾಗುತ್ತದೆ. ಇಲ್ಲಿ ಬರಿ ಸಾದಾ ನೆನಪು ಮಾತ್ರವಲ್ಲ, ಧ್ಯೇಯನಾದ ಪರಮಾತ್ಮನೇ ನಮ್ಮ ಕಣ್ಣೆದುರಿಗೇ ಇರುವನೋ ಎಂಬ ಉತ್ಕಟ ಭಾವನೆಯೇ ನಮ್ಮ ಮನಸ್ಸನ್ನಾವರಿಸಬೇಕು. ಇದನ್ನು ಪ್ರತ್ಯಕ್ಷಜ್ಞಾನಸದೃಶವಾದ ಸ್ಮೃತಿಯೆಂದು ಕರೆದು, ಈ ಜನ್ಮದಲ್ಲಿಯೇ ಲಭ್ಯವಾದೀತೆಂದು ಹಿರಿಯರು ಸಾಧಿಸಿರುವರು. ಒಂದೇ ಮಾತಿನಲ್ಲಿ ಹೇಳುವುದಾದರೆ, ಪರಮಾತ್ಮನ ಸಾಕ್ಷಾತ್ಕಾರವು ಮರಣಾನಂತರ ಕಾರಣಶರೀರದ ವಿಲಯದ ಅನಂತರವೇ ಲಭ್ಯವೆಂದು ಅದ್ವೈತಿಗಳನ್ನುಳಿದವರೆಲ್ಲರೂ ಸಾಧಿಸಿರುವರು. ಅದ್ವೈತಿಗಳು ಮಾತ್ರ ಈ ದೇಹದಲ್ಲಿಯೇ ಮುಕ್ತಿಯು ಸಾಧ್ಯ, ಮುಕ್ತಿಯೆಂಬ ವೈಕುಂಠ-ಕೈಲಾಸಗಳೆಲ್ಲಾ ಕವಿಕಲ್ಪಿತವೆಂದು ಸಾರುವರು. ಪರಮಾತ್ಮನ ಮಹಾತ್ಮೆಯನ್ನು ಸಂಪೂರ್ಣವಾಗಿ ಮನನ ಮಾಡುವುದೇ ಭಕ್ತಿ. ಇದರಿಂದಲೇ ಮೋಕ್ಷವು ಪರಮಾತ್ಮನ ಪ್ರಸಾದದಿಂದ ಲಭ್ಯ—

ದಿ ನ್ಯಾಶನಲ್ ಮ್ಯುಜಿಕಲ್ ಹಾಲ್

ಧಾರವಾಡ

ಗಡಿಯಾರ, ಚಾಳೀಸು, ರೇಡಿಯೊ, ಗ್ರಾಮೊಫೋನ್
ಮಾರಾಟಮಾಡುವವರು, ರಿಪೇರಿ ಮಾಡುವವರು·

ನಂಬುಗೆಯ ಮಾಲು! ಪ್ರಾಮಾಣಿಕ ವ್ಯವಹಾರ!

ಧಾರವಾಡದಲ್ಲಿ ಹಲವು ವರ್ಷಗಳಿಂದ ನಮ್ಮ ವ್ಯವಹಾರ ನಡೆದಿದ್ದು, ಗ್ರಾಹಕರ ವಿಶ್ವಾಸಾದರಗಳನ್ನು ಗಳಿಸಿದೆ.

ಮಾಲಕರು: ಬಿ. ಜಿ. ನುತ್ತಗಿ

ಮೋಕ್ಷಸ್ತು ವಿಷ್ಣುಪ್ರಸಾದೇನ ವಿನಾ ನ ಲಭ್ಯತೇ — ಎಂದು ಸಾಧಾರಣ ಎಲ್ಲರೂ ಒಪ್ಪುವರು ಅದ್ವೈತಿಗಳಿಗೆ ಮಾತ್ರ ವಿಷ್ಣುವಿನ ಪ್ರಸಾದದ ವಿಷಯದಲ್ಲಿ ಒಪ್ಪಿಗೆಯಿಲ್ಲ. ಬಾಕಿ ಎಲ್ಲಾ ವಿಷಯ ಅಭಿಮತ. ಈ ಭಕ್ತಿಯೆಂಬುದು ಪ್ರೀತಿಯ ರೂಪಾಂತರ ನಮ್ಮ ಹೆಂಡಿರು ಮಕ್ಕಳಲ್ಲಿ, ಅಥವಾ ನಮ್ಮಲ್ಲಿ ನಾವು ಇಟ್ಟುಕೊಳ್ಳುವ ಪ್ರೀತಿಗಿಂತಲೂ ಈ ಪ್ರೀತಿ ಉತ್ಕಟವಾಗಿರಬೇಕು. ಕಡೆಯ ಪಕ್ಷಕ್ಕೆ ನಮ್ಮ ಬಂಧು-ಬಳಗದಲ್ಲಿಡುವ ಪ್ರೀತಿಯನ್ನಾದರೂ ಪರಮಾತ್ಮನಲ್ಲಿಟ್ಟರೆ ಸಾಕೆಂದು ವಿಷ್ಣುಪುರಾಣವು ಸಾರುವುದು.

ಯಾ ಪ್ರೀತಿರವಿವೇಕಾನಾಂ ವಿಷಯೇಷ್ವನಪಾಯಿನೀ ।
ತ್ವಾಮನುಸ್ಮರತಃ ಸಾ ಮೇ ಹೃದಯಾನ್ಮಾಪಸರ್ಪತು ॥

ಎಷ್ಟೆಷ್ಟು ಎಡರುಗಳಿದ್ದರೂ ನಾವು ಅವನ್ನು ಎಣಿಸಬಾರದು. ಗೀತೆಯಲ್ಲಿ ಉಪದಿಷ್ಟವಾದ ಕರ್ಮಯೋಗದಿಂದಲೂ ಶ್ರವಣ, ಮನನ, ನಿಧಿಧ್ಯಾಸನಗಳಿಂದಲೂ ಪರಿಪೂರ್ಣ ಭಕ್ತಿಯು ಹುಟ್ಟಬೇಕು. ನಮ್ಮ ನಮ್ಮ ಸ್ಥಾನ-ಮಾನಗಳಿಗೆ ವಿಹಿತವಾದ ಕರ್ಮಗಳನ್ನು ನಿರಂತರವಾಗಿ ನಿಯಮದಿಂದ ಮಾಡಿಕೊಂಡು ಬರುವುದೇ ನಮ್ಮ ಕರ್ತವ್ಯ. ಇದೇ ಭಕ್ತಿಯ ಪ್ರಥಮ-ಸೋಪಾನ

ಆನಂದವರ್ಧನನೆಂಬ ಪ್ರಸಿದ್ಧ ಆಲಂಕಾರಿಕನು ತಾನು ಸ್ವತಃ ಪ್ರತಿಭೆಯ ಉಚ್ಚಶಿಖರವನ್ನು ಮುಟ್ಟಿ, ಲೌಕಿಕ ವಿಜ್ಞಾನಗಳಲ್ಲಿಯೂ ಅಪಾರವಾದ ಪಾಂಡಿತ್ಯವನ್ನೂ ಸಂಪಾದಿಸಿ ದಣಿದಿದ್ದರೂ, ಮನಃಶಾಂತಿಯನು ಪಡೆಯಲಾರದೆ, ಭಕ್ತಿಗೇ ಶರಣು ಹೋಗುವೆ. ಎಂದೊಪ್ಪಿಕೊಂಡು, ಭಕ್ತಿಯ ಹಿರಿಮೆಯನ್ನು ಬಾಯಿತುಂಬ ಕೊಂಡಾಡಿದ್ದಾನೆ. ಈ ಸಂದರ್ಭದಲ್ಲಿ ಭಾಗವತಪುರಾಣದ ರಚನೆಗೆ ಕಾರಣವಾದ ಕಥೆಯೊಂದನ್ನು ನಾವು ನೆನಪಿಗೆ ತಂದುಕೊಳ್ಳಬಹುದಾಗಿದೆ. ಭಾರತಾದಿ ಉದ್ಗ್ರಂಥಗಳನ್ನೂ ವೇದಾಂತಸೂತ್ರಗಳನ್ನೂ ಲೋಕಕ್ಕೆ ಕರುಣಿಸಿಯೂ ಮನಃಶಾಂತಿಪಡೆಯದೆ ಶ್ರೀ ಬಾದರಾಯಣನು, ಗಂಗಾತೀರದಲ್ಲಿ ಅತ್ತಿತ್ತ ಅಲೆಯುತ್ತಿರುವಾಗ ನಾರದ ಋಷಿಗಳು ಬಂದು, ಭಾಗವತ ಪುರಾಣವನ್ನು ಬರೆದರೆ ನಿಮ್ಮ ಮನಸ್ಸಿನ ದುಗುಡವು ತನ್ನಷ್ಟಕ್ಕೆ ದೂರವಾಗುವದೆಂದು ಉಪದೇಶಿಸಿದನಂತರ ಇದನ್ನು ಬರೆದು, ಇದರಲ್ಲಿದ್ದ ಭಗವದ್ಭಕ್ತರ, ಭಗವಂತನ ಚರಿತ್ರ ಶ್ರವಣದಿಂದಲೇ ಇಷ್ಟಪ್ರಾಪ್ತಿಯಾಯಿತೆಂದು ಕೇಳಿ ನಾವು ಚಮತ್ಕೃತರಾಗುತ್ತೇವೆ. ಮಧುಸೂದನ ಸರಸ್ವತಿಯೆಂಬ ಉತ್ಕಟ ಅದ್ವೈತಯತಿಗಳೇ ಭಗವದ್ಭಕ್ತಿಯನ್ನು ರಸಾಯನಕ್ಕೆ ಹೋಲಿಸಿ 'ಭಗವದ್ಭಕ್ತಿರಸಾಯನ'ವೆಂಬ ಉತ್ಕೃಷ್ಟಗ್ರಂಥವನ್ನು ನಮಗೆ ಕರುಣಿಸಿದ್ದಾರೆ. ಅದ್ವೈತವನ್ನು ಸಾರಿದ ಆದಿಶಂಕರರೇ ಅದ್ವಿತೀಯ ಭಕ್ತರಾಗಿ 'ಡುಕೃಞ್ ಕರಣೇ' ಎಂಬ ವ್ಯಾಕರಣಶಾಸ್ತ್ರದ ಅಧ್ಯಯನವೂ ಇತರ ಲೌಕಿಕ ಶಾಸ್ತ್ರಗಳ ಪಾಂಡಿತ್ಯವೂ ಮರಣಕಾಲದಲ್ಲಿ ಉದ್ಧರಿಸಲಶಕ್ಯವಾಗುವುವೆಂದು ಮುಕ್ತಕಂಠವಾಗಿ ಸಾರುವರು. ಕುಲಶೇಖರರೆಂಬ ಭಕ್ತೋತ್ತಮರು ತಮ್ಮ 'ಮುಕುಂದಮಾಲಾ' ಸ್ತೋತ್ರದಲ್ಲಿ, ಸಂಸಾರವೆಂಬ ಸಾಗರವನ್ನು ದಾಟುವುದಕ್ಕೆ ಭಕ್ತಿಯೆಂಬ ದೋಣಿಯೇ ಬೇಕೆಂದು ಸೊಗಸಾಗಿ ಹೇಳಿರುವರು:

ತೃಷ್ಣಾತೋಯೇ ಮದನಪವನೋದ್ಧೂತಮೋಹೋರ್ಮಿಮಾಲೇ
ದಾರಾವರ್ತೇ ತನಯಸಹಜ ಗ್ರಾಹಸಂಘಾಕುಲೇ ಚ ।
ಸಂಸಾರಾಖ್ಯೇ ಮಹತಿ ಜಲಧೌ ಮಜ್ಜತಾಂ ನಃ ತ್ರಿಧಾಮನ್
ಪಾದಾಂಭೋಜೇ ವರದ ಭವತೋ ಭಕ್ತಿನಾವಂ ಪ್ರಯಚ್ಛ ॥

ಜಗದ್ಗುರುಗಳಾದ ಆದಿ ಶಂಕರಾಚಾರ್ಯರೇ ಈ ಭಕ್ತಿಯನ್ನು ಸೂಜಿಗಲ್ಲು ಕಬ್ಬಿಣವನ್ನಾಕರ್ಷಿಸುವ ಶಕ್ತಿಗೂ, ಪತಿವ್ರತಾಶಿರೋಮಣಿಯು ತನ್ನ ಗಂಡನ ಮನಸ್ಸನ್ನೊಲಿಸುವ ಚೇತೋವೃತ್ತಿಗೂ ಹೋಲಿಸಿ, ಇದರ ಕ್ರಮವನ್ನು ಹೃದಯಂಗಮವಾಗಿ ಬಣ್ಣಿಸಿರುವರು; ಬರೀ ಪತ್ರ, ಪುಷ್ಪ, ಫಲ, ತೋಯಗಳಿಂದಲೂ ತೃಪ್ತನಾಗುವ ಪರಮಾತ್ಮನನ್ನು ದೂರಮಾಡಿ, ಸಣ್ಣಪುಟ್ಟ ಲೌಕಿಕ ಪ್ರಭುಗಳನ್ನಾಶ್ರಯಿಸುವುದು ಶುದ್ಧವಾದ ಮೂಢತನವೆಂದಿವರೇ 'ತ್ವಯಿಸತಿ ಶಿವದಾತರ್ಯಸ್ಮದಭ್ಯರ್ಥಿತಾನಾಂ । ಇತರಮನುಸರಂತೋ ದರ್ಶಯಂತೋಂಽರ್ಥಿವಂದ್ಯಾಂ । ಚರಮ ಲವಣಭಾಂಡೈಃ ದುಗ್ಧಹಂ ದೋಗ್ಧುಕಾಮಾಃ । ಕರಭಮನುಸರಾಮಃ ಕಾಮಧೇನೌ ಸ್ಥಿತಾಯಾ' ಎಂದು ಸರ್ವಾಭೀಷ್ಟಗಳನ್ನೂ ಕರುಣಿಸುವ ಕಾಮಧೇನುವನ್ನೇ ಅಲ್ಲಗಳೆದು, ಒಂಟೆಯ ಹಿಂಗಾಲಿನ ಕುಳಿತವನ್ನೇ ಬಯಸುವ ಮೌಢ್ಯವೆಂದು ಸೊಗಸಾಗಿ ಸಾರಿರುವರು. ಈ ಭಕ್ತಿಯನ್ನು ರಾಮಾನುಜರು ಪ್ರಪತ್ತಿಯೆಂದು ನಾಮಾಂತರವನ್ನು ಕಲ್ಪಿಸಲಿ, ನಮ್ಮ ಭಾರತೀಯ ಜಗದ್ಗುರುಗಳೆಲ್ಲಾ ಏಕಕಂಠವಾಗಿ ಭಕ್ತಿಯ ಸೌಲಭ್ಯವನ್ನೂ ಹಿರಿಮೆಯನ್ನೂ ಸಾರುವುದೇ ಇದರ ಮಹತ್ತ್ವಕ್ಕೆ ಸಾಕಷ್ಟು ನಿದರ್ಶನವಾಗಿದೆಯೆಂದು ಹೇಳಿ ವಿರಮಿಸುವೆವು ಗೀತೆಯ ಸಾರಸರ್ವಸ್ವವೇ ಇದರಲ್ಲಿದೆಯೆಂದು ೧೮ನೆಯ ಅಧ್ಯಾಯದ ಅಂತ್ಯಶ್ಲೋಕದ ಟೀಕೆಯಲ್ಲಿ ಶಂಕರ ಭಗವತ್ಪಾದರೂ ಒಪ್ಪಿದ್ದಾರೆ:

ಭಕ್ತಿಶ್ಚ ರಕ್ಷತಿ ನರಂ ನ ಧನಂ ಬಲಂ ವಾ
ಭಕ್ತಿಃ ಸುಖಾಯ ಮಹತೇ ನ ವಧೂವಿಲಾಸಃ
ಭಕ್ತ್ಯಾತ್ಮನಃ ಚ ಮುದಮೇವ ಕರೋತಿ ಮೃತ್ಯುಃ
ನಸ್ಯಾತ್ತಿ ದುರ್ಗತಿಭಯಂ ನಿರತಸ್ಯ ಭಕ್ತ್ಯಾ ॥

ಇದೂ ಪ್ರೇಮವೆ?

(ಒಂದು ಸಣ್ಣ ಕತೆ)

ಶ್ರೀ. ನಾ. ನರಸಿಂಹಮೂರ್ತಿ, ಮೈಸೂರು

卐

ರಾಘುವಿನಂತಹ ಪ್ರೇಮಗ್ರಹಪೀಡಿತರು ನಮ್ಮ ಸಮಾಜದಲ್ಲಿ ಎಷ್ಟು ಜನರೇನೊ! ಇಂತಹರ ಈ ಏಕಮುಖಿಯಾದ ಲಾಲಸೆಯನ್ನು 'ಪ್ರೇಮ' ಎಂದು ಕರೆಯಬಹುದೆ? 'ಪ್ರೇಮ' ಎಂಬುದು ಎರಡು ವ್ಯಕ್ತಿಗಳ ಗುಣ-ಶೀಲ-ಸ್ವಭಾವಗಳ ಪರಿಚಯ ಸಾಮೀಪ್ಯದಿಂದ ಉಂಟಾಗಬೇಕಾದ ಸ್ನೇಹದ ಪರಿಣಾಮವಲ್ಲವೆ?

卐

ಎರಡು ತಿಂಗಳಿನಿಂದ ಖಾಲಿಯಿದ್ದ—ರಾಘುವಿನ ಎದುರು ಮನೆಗೆ ಯಾರೋ ವಾಸಕ್ಕೆ ಬಂದಿದ್ದರು. ರಾಘು ಬೆಳಗ್ಗೆ ತನ್ನ ಕೊಠಡಿಯಲ್ಲಿ ಕನ್ನಡಿಯ ಮುಂದೆ ನಿಂತು ತಲೆ ಬಾಚಿಕೊಳ್ಳುತ್ತಿದ್ದ. ಕಿಟಕಿಯಲ್ಲಿ ಎದುರುಮನೆ, ಸೂರ್ಯನ ಎಳೆಬಿಸಿಲಲ್ಲಿ ಮುಗುಳ್ನಗುತ್ತಿರುವುದು ಕಾಣಿಸುತ್ತಿತ್ತು. ಎದುರುಮನೆಯ ಜಗುಲಿಯ ಮೇಲೆ ಮೂರು ನಾಲ್ಕು ಮಕ್ಕಳು ಕಲ್ಲು ಮತ್ತು ಬಳೆಯ ಚೂರುಗಳನ್ನಿಟ್ಟುಕೊಂಡು ಆಡುತ್ತಿದ್ದುವು.

ಇದ್ದಕ್ಕಿದ್ದ ಹಾಗೆ, ಆಡುತ್ತಿದ್ದ ಮಕ್ಕಳಲ್ಲಿ ಜಗಳಹತ್ತಿತು. ಒಂದು—ನೀಲಿಯ ಅಂಗಿಯನ್ನು ತೊಟ್ಟಿದ್ದ ಸುಮಾರು ನಾಲ್ಕು ವರ್ಷದ ಗುಂಡುಮಗು, ಇನ್ನೊಂದು—ಕೆಂಪುಲಂಗದ ಮೂರು ವರ್ಷದ ಮಗುವನ್ನು ಪರಚಿತು. ಕೆಂಪುಲಂಗದ ಮಗು ಅಳಲು ಮೊದಲು ಮಾಡಿತು. ಇದನ್ನು ನೋಡಿದ ಎರಡು ವರ್ಷದ ಹಸಿರು-ಲಂಗದ ಮಗುವೂ ಅಳಲು ಪ್ರಾರಂಭಿಸಿತು. ಇದೆಲ್ಲವನ್ನೂ ಐದು ವರ್ಷದ ಹುಡುಗಿಯೊಂದು ಗಂಭೀರವಾಗಿ ನೋಡುತ್ತ ಕುಳಿತಿತ್ತು.

"ಒಳ್ಳೆ ಬೆಕ್ಕಿನ ಮರಿಗಳ ಹಾಗೆ ಜಗಳ ಕಾಯುತ್ತವೆ" ಎಂದುಕೊಂಡ ರಾಘು ಅವನ ಮುಖದಲ್ಲಿ ತೆಳುನಗೆಯೊಂದು ತೇಲಿತು.

ಮಕ್ಕಳ ಅಳು ಬಲು ಬಿರುಸಾಯಿತು ಇದನ್ನು ಕೇಳಿ ಒಳಗಿನಿಂದ, ಹಸಿರುಸೀರೆಯನ್ನುಟ್ಟಿದ್ದ—ನಸುಗೆಂಪು ಬಣ್ಣದ ಹುಡುಗಿಯೊಬ್ಬಳು ಈಚೆಗೆ ಬಂದಳು. ಅವಳಿಗೆ ಸುಮಾರು ಹದಿನಾರು ವರ್ಷವಿರಬಹುದು. ತೆಳ್ಳಗೆ—ನೀಳವಾದ ದೇಹ. ಅವಳು ಏನನ್ನೋ ಗೊಣಗುತ್ತಾ, ಅಳುತ್ತಿದ್ದ ಎರಡು ಮಕ್ಕಳನ್ನೂ ಒಂದೊಂದು ಕೈಯಲ್ಲಿ ಒಂದೊಂದರಂತೆ—ಎತ್ತಿಕೊಂಡು ಒಳಕ್ಕೆ ಹೋದಳು. ಈಚೆ ಗಂಭೀರವಾಗಿ ಕುಳಿತಿದ್ದ ಐದು ವರ್ಷದ ಹುಡುಗಿ ಮೆಲ್ಲನೆ ಎದ್ದು, ಬೀದಿಯಲ್ಲಿ ನಡೆಯುತ್ತಾ ಹೋಯಿತು. ಜಗಳವನ್ನೆತ್ತಿದ್ದ ಗಂಡು ಮಗು ಅನಂತರ ಮನೆಯೊಳಕ್ಕೆ ಹೋಯಿತು.

ರಾಘುವಿನ ಮನಸ್ಸು ತಳಮಳಗೊಂಡಿತು. ಅವನೆಂದೂ ಅಂತಹ ಅನುಭವವನ್ನು ಪಡೆದಿರಲಿಲ್ಲ. 'ತಾನಾಯಿತು, ತನ್ನ ಪಾಠ-ಪ್ರವಚನಗಳಾಯಿತು' ಎಂದಿರುತ್ತಿದ್ದ ಅವನಿಗೆ, ಅಂದಿನ ಅನುಭವದ ಅರ್ಥವಾಗಲಿಲ್ಲ.

ರಾಘುವಿನ ಮನಸ್ಸಿನಲ್ಲಿ ದೊಡ್ಡ ಪ್ರಶ್ನೆಯೆದ್ದಿತು: "ಇದೇಕೆ ಹೀಗೆ?" ಅವನು ಅದನ್ನು ಉತ್ತರಿಸುವ ಸ್ಥಿತಿಯಲ್ಲಿರಲಿಲ್ಲ. "ಆ ಹುಡುಗಿ ಇನ್ನೊಂದು ಕ್ಷಣವಾದರೂ ಈಚೆ ನಿಂತಿರಬಾರದಾಗಿತ್ತೇ? ಅವಳ ಮುಖವನ್ನು ಸರಿಯಾಗಿ ನೋಡುವ ಮೊದಲೇ—ಮಿದುಳ ಮೊದಲೇ—ಅವಳು ಒಳಕ್ಕೆ ಹೊರಟುಹೋಗಬೇಕೇ?" ಎಂದು ಕೊಂಡ ಅನಂತರ, "ಹುಂ, ಎದುರು ಮನೆಯಲ್ಲೇ ಇರುವ ಹುಡುಗಿಯನ್ನು ಪುನಃ ನೋಡಲು ಸಾಧ್ಯವಾಗುವುದಿಲ್ಲವೇ" ಎಂದು ಸಮಾಧಾನದ ನಿಟ್ಟುಸಿರನ್ನು ಬಿಟ.

ರಾಘುವಿನ ತಾಯಿ ರೂಮಿಗೆ ಬಂದವರೇ, "ಇದೇನೋ ಇನ್ನೂ ಮುಗೀಲಿಲ್ವೇ ತಲೆ ಬಾಚಿಕೊಳ್ಳೋದು?" ಎಂದರು.

"ಇನ್ನೇನು ಆಯ್ತಮ್ಮಾ!" ಎಂದ ರಾಘು, ಶೂನ್ಯಮನಸ್ಕನಾಗಿ.

ರಾಘುವಿಗೆ ಊಟಕ್ಕೆ ಬಡಿಸುತ್ತಾ ಅವನ ತಾಯಿ ಹೇಳಿದರು "ಎದುರು ಮನೆಯೋರು ತುಂಬ ಒಳ್ಳೇ ತುಂಬಿದ ಸಂಸಾರ. ಗಂ ಹೆಂಡತಿ, ನಾಲ್ಕು ಗಂಡು, ಎರಡು ಹೆಣ್ಣು! ಒಬ್ಬರಿಗಾದರೂ ಜ ಇಲ್ಲ. ಹಿರಿಯ ಹುಡುಗಿ ಎಸ್. ಎಸ್. ಎಲ್. ಸಿ. ಓದ್ತಿದಾಳಂತೆ."

ರಾಘುವಿನ ತಾಯಿ ಮುಂದೆ ಇನ್ನೂ ಏನೇನೋ ಹೇಳಿದ ಆದರೆ ರಾಘುವಿಗೆ ಅದೊಂದೂ ಕೇಳಿಸಲಿಲ್ಲ. "ಹಿರಿ ಹು

ಎಸ್. ಎಸ್. ಎಲ್. ಸಿ. ಓದ್ತಿದಾಳಂತೆ" ಎಂದು ಮನಸ್ಸಿನಲ್ಲೇ ಎಂದುಕೊಂಡ.

ಗಂಟೆ ಹನ್ನೊಂದರ ಹತ್ತಿರಕ್ಕೆ ಬಂದಿತ್ತು. ರಾಘು ಕಾಲೇಜಿಗೆ ಹೊರಡಲು ಸಿದ್ಧನಾದ. "ಹೊತ್ತಾಗಲಿಲ್ಲವೇ ರಾಘು, ಕಾಲೇಜಿಗೆ?" ಎಂದರು ಅವನ ತಾಯಿ.

"ಹ್ನ್ಞ, ಹೊರಟೆ" ಎನ್ನುತ್ತಾ ರಾಘು, ಎದುರುಮನೆಯ ಕಡೆಗೇ ನೋಡುತ್ತಾ ಹೊರಬಿದ್ದ.

ಬೀದಿಯ ಕೊನೆಯನ್ನು ತಲುಪುವುದರೊಳಗೆ ಅವನು, ಐದಾರು ಸಲ ಹಿಂದಿರುಗಿ ಎದುರು ಮನೆಯ ಕಡೆಗೆ ದೃಷ್ಟಿ ಹಾಯಿಸಿದ್ದ. ಆದರೆ ಕಣ್ಣಿಗೆ ಆ ಹುಡುಗಿ ಬೀಳದಿರಲು, ನಿಟ್ಟುಸಿರು ಬಿಡುತ್ತಾ ಅವನು ಕಾಲೇಜಿನ ಕಡೆಗೆ ಹೊರಟ.

\+ \+ \+ \+

ರಾಘು ಕಾಲೇಜಿನಿಂದ ಮನೆಗೆ ಬಂದ. ಮನೆಯಲ್ಲಿ ತನ್ನ ತಾಯಿ ಎದುರುಮನೆಯ ಹುಡುಗಿಯ ಜೊತೆ ಮಾತನಾಡುತ್ತ ಕುಳಿತಿದ್ದರು! ರಾಘುವಿನ ಮೈಯಲ್ಲಿ ವಿದ್ಯುತ್ಸಂಚಾರವಾಯಿತು. ಮಿಂಚನ್ನು ನೋಡಿದಂತಾಗಿ, ಅವನು ಬೇರೆಯ ಕಡೆ ನೋಡುತ್ತಾ ತನ್ನ ರೂಮಿಗೆ ನಡೆದ. "ಬರ್ತೀನ್ರಿ" ಸಂಗೀತದಷ್ಟು ಮಧುರವಾದ ಮಾತು ರಾಘುವಿನ ಕಿವಿಗೆ ಬಡಿಯಿತು.

"ಕೂತ್ಕೋಮ್ಮಾ ರಾಧಾ, ಹೊರವಾಗಿಲ್ಲ." ರಾಘುವಿನ ತಾಯಿ ಎಂದರು

"ರಾಧಾ!" ಮೆಲ್ಲನೆ ಹೇಳಿಕೊಂಡ ರಾಘು, ತನ್ನ ಮನಸ್ಸಿನಲ್ಲಿ.

ರಾಧಾ "ಇಲ್ಲಾರೀ, ಆಮೇಲೆ ಬರ್ತೀನಿ"! ಎಂದು ನಡೆದಳು. ಅವಳು ಹೋಗುವಾಗ ಉಂಟಾದ ಸೀರೆಯ ಸರಸರ ಸದ್ದು, ರಾಘುವಿಗೆ ಗಂಧರ್ವಗಾನದಂತೆ ಕೇಳಿಸಿತು. ರಾಘು ಈಚೆಗೆ ಬಂದ ಅವನ ತಾಯಿ ಎಂದರು: "ತಾಯಿಯೂ ಅಷ್ಟೆ, ಮಕ್ಕಳು ಅಷ್ಟೆ. ಒಂದು ಚೂರೂ ಜಂಭ ಇಲ್ಲ. ಎಷ್ಟೋ ವರ್ಷದಿಂದ ಗುರುತಿದ್ದೋರ ಹಾಗ ನನ್ನ ಜೊತೆ ಮಾತನಾಡ್ತಾಳೆ, ಪಾಪ!"

ರಾಘು ತಿಂಡಿತಿಂದು ಬಂದು, ತನ್ನ ಕೋಣೆಯಲ್ಲಿ ಯೋಚಿಸುತ್ತಾ ಕುಳಿತ. ಅವನ ತಾಯಿ ಕೇಳಿದರು: "ಇದೇನೋ, ಎಲ್ಲೂ ಹೋಗೋಲ್ವೇ?"

"ಏನೋ, ಬೇಜಾರಮ್ಮಾ. ಇವತ್ತು ಎಲ್ಲೂ ಹೋಗೋಲ್ಲ!"

\+ \+ \+ \+

ಎದುರು ಮನೆಯಲ್ಲೇ ಇದ್ದರೂ, ಎಂಟು ಹತ್ತು ದಿನಗಳಿಂದ ರಾಧೆ ರಾಘುವಿನ ಕಣ್ಣಿಗೆ ಬಿದ್ದಿರಲಿಲ್ಲ. ಅವನು ಮನೆಯಲ್ಲಿಲ್ಲದಾಗ ಒಂದೆರಡು ದಿನ, ಅವಳು ಅವನ ಮನೆಗೆ ಬಂದಿದ್ದು ಹೋಗಿದ್ದಳು ರಾಘು ಕಾಲೇಜಿಗೆ ಹೋಗುವ ವೇಳೆಯನ್ನು ಬಿಟ್ಟು, ಬಾಕಿಯಂತೆಲ್ಲಾ—ಸಾಧ್ಯವಾದಮಟ್ಟಿಗೂ—ಮನೆಯಲ್ಲೇ ಇರುತ್ತಿದ್ದ. ಆದರೂ ರಾಧೆ ಇವನಿಗೆ ಕಣ್ಣು ತಪ್ಪಿಸಿ ಒಂದೆರಡು ಸಲ ಮನೆಗೆ ಬಂದು ಹೋಗಿದ್ದಳು!

ತರಗತಿಯಲ್ಲಿ ಪಾಠ ನಡೆಯುತ್ತಿತ್ತು. ಹುಡುಗರ ಗಲಾಟೆ ಮಾಡುತ್ತಿದ್ದರು. ಪ್ರೊಫೆಸರರು ಗಟ್ಟಿಯಾಗಿ ಹೇಳುತ್ತಿದ್ದರು: "ಬಿ. ಎಸ್ ಸಿ ಯೆಂದರೆ ನಿಮಗೆ ಹುಡುಗಾಟವಾಗಿದೆ! ಪರೀಕ್ಷೆ ಇನ್ನು ಮೂರು ತಿಂಗಳ ಇದೆ ಎನ್ನುವುದು ನಿಮಗೆ ಜ್ಞಾನವೇ ಇಲ್ಲ. ಗಲಾಟೆ ಮಾಡುತ್ತಿದ್ದೀರಿ."

ರಾಘುವಿನ ಮನಸ್ಸು ವ್ಯಗ್ರಗೊಂಡಿತು. "ಮೂರೇ ತಿಂಗಳು! ನಾನಿನ್ನೂ ಏನನ್ನೂ ಸರಿಯಾಗಿ ಓದಿಲ್ಲ." ಎಂದುಕೊಂಡ ಅವನು.

ಅವನ ಮನಸ್ಸಿನ ಒಂದು ಭಾಗ ಮೂದಲಿಸಿತು: "ಹ್ಞೂ, ಎಲ್ಲಾ ಪರೀಕ್ಷೆಗಳಲ್ಲೂ ಫಸ್ಟ್‌ಕ್ಲಾಸು ಬಂದವನು, ಈ ವರ್ಷ ಫೇಲಾದರೆ ಬಲು ಚೆನ್ನ. ನಿಮ್ಮ ತಾಯಿಗೆ ನಿನ್ನನ್ನು ಬಿಟ್ಟು ಇನ್ನು ಯಾರೂ ಇಲ್ಲ. ಅವರು ನಿನ್ನಲ್ಲೇ ಎಲ್ಲ ಆಶೆಗಳನ್ನೂ ಇಟ್ಟುಕೊಂಡಿದ್ದಾರೆ. ನೀನು ಈ ವರ್ಷ ಫೇಲಾದರೆ ಅವರಿಗೆಷ್ಟು ದುಃಖವಾಗುವುದಿಲ್ಲ!"

ರಾಘುವಿನ ತಾಯಿ ಗಂಡನನ್ನು ಕಳೆದುಕೊಂಡು ಹತ್ತು ವರ್ಷದ ಮೇಲಾಗಿತ್ತು. ಗಂಡ ಬಿಟ್ಟುಹೋದ ಶೂನ್ಯತೆಯನ್ನು, ರಾಘು ತುಂಬಿ ಅವರ ಬಾಳಿನಲ್ಲಿ ಉತ್ಸಾಹ ಮೂಡಿಸಿದ್ದ. ಒಬ್ಬನೇ ಮಗ, ಮತ್ತು ಅವನನ್ನು ಮುಂದಕ್ಕೆ ತರಲು ಬೇಕಾಗುವಷ್ಟು ಆಸ್ತಿ—ಇವನ್ನು ಪಡೆದಿದ್ದ ಅವರು, ಸುಖವಾಗಿಯೇ ಇದ್ದರೆನ್ನಬೇಕು.

ಕ್ಷಣಕಾಲದ ನಂತರ ರಾಘುವಿನ ಮನಸ್ಸು ಮೊದಲಿನಂತೆಯೇ ಯೋಚಿಸಲಾರಂಭಿಸಿತು. "ಹ್ಞು. ಅವಳ ಜೊತೆ ಹೇಗಾದರೂ ಮಾಡಿ ಮಾತನಾಡಬೇಕು. ಒಂದು ಮಾತು, ಒಂದೇ ಒಂದು ಮಾತು. ನನಗೆ ಇನ್ನೇನೂ ಬೇಡ!"

"ಅವಳನ್ನು ಕತ್ತೆತ್ತಿ ನೋಡುವಷ್ಟು ಧೈರ್ಯವೂ ಇಲ್ಲ ನಿನಗೆ. ನೀನು ಅವಳೊಡನೆ ಮಾತನಾಡುವೆಯಾ! ಹ್ಞು. ನಿನಗೆಲ್ಲೋ ಭ್ರಾಂತಿ!"

"ಅವಳೇ ನಿನ್ನನ್ನು ಮಾತನಾಡಿಸಿದರೆ?"

"ಓಹ್, ಆಗ ನಾನು ಅವಳ ಜೊತೆ ಮಾತನಾಡಬಲ್ಲೆ"

ರಾಘುವಿನ ಸ್ನೇಹಿತ ರಂಗನಾಥ ಕೇಳಿದ: "ಏನೋ, ಈಚೀಚೆಗೆ ಸಂಜೆಹೊತ್ತು ಸಿಕ್ಕೋಲ್ಲ ನೀನು?"

"ಹ್ನ್ಞ, ಕಣೋ! ಓದೋದು ಮುಣಗಟ್ಟಲೆ ಇದೆ. ಒಂದೂ ಓದಿಲ್ಲ"

"ಓಹೋ. ಸಂಜೆಯ ಹೊತ್ತು ಓದ್ತೀಯೋ ನೀನು?"

"ಹಾಗೆ ಓದಿದರೂ ಪಾಸಾಗುತ್ತೀನೋ ಇಲ್ವೋ ಅನುಮಾನ!"

"ನೋಡ. ಯಾಂತ್ರ ಹೊಡೀತೀ ಇದೆಲ್ಲಾ?"

"ಇಲ್ಲಾ ಕಣೋ ನಿಜವಾಗ್ಲೂ ನನ್ನ ಸ್ಥಿತಿ ಹಾಗಿದೆ ಈ ವರ್ಷ!"

ಬೆಲ್ಲಾಯಿತು. ರಾಘು ಯಾಂತ್ರಿಕವಾಗಿ ಹೊರಬಿದ್ದ.

× × × ×

ರಾಘು ಕಾಲೇಜಿನ ರಸ್ತೆಯಲ್ಲಿ ನಡೆದು ಬರುತ್ತಿದ್ದ. ಸಂಜೆ ಆರು ಗಂಟೆಯ ಸಮಯ. ಸುತ್ತಮುತ್ತ ಜನಸಂಚಾರವೇ ಇರಲಿಲ್ಲ.

"ಹ್ಞ, ಈಗ ರಾಧೆ ಸಿಕ್ಕಿದ್ದರೆ?............ಖಂಡಿತ ಮಾತನಾಡಿಸಿ ಬಿಡುತ್ತೇನೆ" ಎಂದುಕೊಂಡ ರಾಘು.

"ಅವಳನ್ನು ಕಣ್ಣುತುಂಬ ನೋಡಿಯೂ ಬಿಡುತ್ತೇನೆ"

"ಹ್ಞ. ಅಂತಹ ಪುಣ್ಯ, ಅದೃಷ್ಟ ಎಲ್ಲಿ ಬರಬೇಕು?" ರಾಘು ನಿಟ್ಟುಸಿರಿಟ್ಟ.

ಆದರೆ ಸ್ವಲ್ಪ ದೂರದಲ್ಲಿ ರಾಧೆ ನಡೆದು ಬರುತ್ತಿದ್ದಳು! ರೈಲು ಬರುವ ಸಮಯಕ್ಕೆ ಕೈವಾರ ಕೆಳಕ್ಕೆ ಬೀಳುವಂತೆ ರಾಘುವಿನ ತಲೆ ಕೆಳಕ್ಕೆ ತಗ್ಗಿತು. ತಲೆ ಎತ್ತಬೇಕೆಂದು ರಾಘು ಎಷ್ಟೋ ಪ್ರಯತ್ನಿಸಿದ. ಆದರೆ ಅದೊಂದು ಅಸಾಧ್ಯವಾದ ಅಂಗಸಾಧನೆಯಾಗಿ ಪರಿಣಮಿಸಿತು, ಅವನಿಗೆ. "ಇಂತಹ ಸೌಂದರ್ಯವನ್ನು ದೃಷ್ಟಿಸಿ ನೋಡುವುದು ಸೂರ್ಯನನ್ನು ನೋಡಲು ಯತ್ನಿಸಿದಂತೆ!" ರಾಘುವಿನ ಮನಸ್ಸು ನುಡಿಯಿತು.

ರಾಧೆ ಇವನ ಹತ್ತಿರಕ್ಕೆ ಬಂದು ನಿಂತಳು. ರಾಘುವಿನ ಮೈಯೆಲ್ಲಾ ಅದುರಲಾರಂಭಿಸಿತು.

ರಾಘು ರಾಧೆಯ ಪಾದಗಳನ್ನೇ ನೋಡುತ್ತಾ ನಿಂತಿದ್ದ. "ಹ್ಞ. ಅದನ್ನನ್ನೇ ನೋಡುತ್ತಿದ್ದರೂ ಸಾಕು. ನನಗಿನ್ನೇನೂ ಬೇಡ" ಎಂದುಕೊಂಡ, ಅವನು.

ರಾಧೆ ಕ್ಷಣಕಾಲ ಸುಮ್ಮನಿದ್ದಳು. ರಾಘು ತಲೆಯನ್ನು ಮೇಲೆ ಎತ್ತಲೇ ಇಲ್ಲ. ರಾಧೆಯೇ ಮಾತನಾಡಿಸಿದಳು: "ರಾಘೂ!...."

ರಾಘುವಿನ ನರನರಗಳಲ್ಲೂ ವಿದ್ಯುತ್ಸಂಚಾರವಾಯಿತು ಮತ್ತೊಮ್ಮೆ. ಆದರೆ ಬಾಯಿ ಕಟ್ಟಿಹೋಗಿತ್ತು. ಅವನು ಮೌನವಾಗಿಯೇ ಇದ್ದ.

"ಮಾತಾಡು ರಾಘು!"

"..................."

"ನನ್ನನ್ನು ಕತ್ತೆತ್ತಿಯೂ ನೋಡೊಲ್ವೇ ರಾಘು?"

"..................."

"ನೀನು ಮೂಕನೇನು ರಾಘು?"

ಮಾತು ಬಾರದ ಹಸುಗೂಸಿನಂತಾಗಿದ್ದ ರಾಘು. ಅವನ ವ್ಯಕ್ತಿತ್ವವೆಲ್ಲಾ ಆ ಸೌಂದರ್ಯಕಾಂತಿಯ ಮುಂದೆ ಕರಗಿ ಹೋಗಿತ್ತು

ರಾಧೆಗೆ ಅವನನ್ನು ರೇಗಿಸಬೇಕೆನ್ನಿಸಿತು. ಅವಳೆಂದಳು: "ನೀನು ಮಾತಾಡದಿದ್ರೆ, ಎಲ್ಲರ ಹತ್ತಿರಾನೂ ನೀನು ಮೂಕಾಂತ ಹೇಳಿಬಿಡ್ತೀನಿ ನೋಡು!" ಅವಳೊಮ್ಮೆ ನಕ್ಕಳು. ವಿಶ್ವವನ್ನೇ ಅಲುಗಾಡಿಸುವಂತಿತ್ತು ಆ ನಗು. ರಾಘುವಿಗೆ ಅಸಹಾಯಕತೆಯಿಂದ ಅಳು ಬರುವಂತಾಯಿತು. ಏನಾದರೂ ಮಾಡಿ ಅಲ್ಲಿಂದ ತಾನು ಓಡಿಹೋಗಬೇಕೆನ್ನಿಸಿತು. ಆದರೆ ರಾಧೆ ಎಂದಳು: "ನೀನು ನನ್ನ ಜೊತೆ ಮಾತನಾಡದ ಹೊರತೂ ಇಲ್ಲಿಂದ ಹೋಗಕೂಡದು!"

ರಾಘುವಿನ ಮನಸ್ಸು ತನ್ನೆಲ್ಲ ಶಕ್ತಿಯನ್ನು ಉಪಯೋಗಿಸಿದ ಮೇಲೆ ಅವನ ನಾಲಗೆ ಮೆಲ್ಲನೆ ಅಲ್ಲಾಡಿತು. ಅನಂದ: "ನಾ... ನು....ಹೋ....ಗ ಬೇಕು....ಬಿ...ಡು...."

"ಕಡೆಗೂ ಮಾತು ಬರುತ್ತೆ ನಿಂಗೇಂತಾಯಿತು" ಎನ್ನುತ್ತಾ ರಾಧೆ, ರಘುವಿನ ಹೆಗಲ ಮೇಲೆ ಕೈ ಹಾಕಿದಳು. ರಾಘುವಿಗೆ ಎಂದೂ ಉಂಟಾಗಿರದಿದ್ದ ಅನುಭವ ಆಗ ಉಂಟಾಯಿತು. ರಾಧೆ ರಾಘುವಿನ ಕತ್ತನ್ನು ತನ್ನ ಕೈಯಿಂದ ಮೇಲಕ್ಕೆತ್ತಿ, "ನನ್ನನ್ನು ನೋಡು ರಾಘು" ಎಂದಳು. ರಾಘು ಒದ್ದಾಡುತ್ತ ಒಮ್ಮೆ ಅವಳ ಮುಖವನ್ನು ನೋಡಿದಕ್ಷಣದಲ್ಲೆ ಪುನಃ ಕತ್ತು ತಗ್ಗಿತು.

"ಒಳ್ಳೇ ಹುಚ್ಚ ಹುಡುಗ ಕಿಟಕಿಯಲ್ಲಿ ನನ್ನ ಕದ್ದು ನೋಡುತ್ತಿದ್ದೋನು ಈಗೇಕೆ ಹೀಗೆ?" ರಾಧೆ ಕೇಳಿದಳು.

ಅಷ್ಟರಲ್ಲಿ.... "ಟ್ರಿಣ್, ಟ್ರಿಣ್, ಟ್ರಿಣ್." ಅಲಾರಂ ಹೊಡೆಯಿತು. ರಾಘು ಕಣ್ಣುಬಿಟ್ಟ. ನಿಟ್ಟುಸಿರು ಬಿಡುತ್ತಾ ಮೇಲಕ್ಕೆದ್ದು ದೀಪವನ್ನು ಹಾಕಿದ.

× × × ×

ಪರೀಕ್ಷೆಯ ಫಲಿತಾಂಶಗಳು ಹೊರಬಿದ್ದುವು. ರಾಘುವಿಗೆ ಫೇಲಾಗಿತ್ತು. ರಾಘು ತಲೆಯ ಮೇಲೆ ಕೈ ಹೊತ್ತು ಕುಳಿತಿದ್ದ ಅವನ ತಾಯಿ ಕೇಳಿದರು: "ಒಂದರಲ್ಲೂ ಆಗಿಲ್ಲವೇ ರಾಘು?"

"ಇಲ್ಲಾಮ್ಮಾ....ಮೂರು ಪಾರ್ಟನಲ್ಲೂ ಹೋಗಿದೆ."

"ಇದೇನು ರಾಘು, ಹೀಗಾಯ್ತು ಈ ಸಲ?"

"..................."

"ಹೋಗ್ಲಿ ಬಿಡು. ಇನ್ನೊಂದು ಸಲ ಆಗುತ್ತೆ. ನೀನೂ ಮಾಡೋ ಅಷ್ಟೂ ಪ್ರಯತ್ನ ಮಾಡಲಿಲ್ಲವೇ?"

"ಹ್ಞ! ಮಾಡೋ ಅಷ್ಟೂ ಪ್ರಯತ್ನ ಮಾಡಿದ್ದರೆ ಹೀಗೇಕಾಗುತ್ತಿತ್ತು?" ಎಂದುಕೊಂಡ ರಾಘು—ಮನಸ್ಸಿನಲ್ಲಿ.

ರಾಘುವಿನ ತಾಯಿ ಯೋಚಿಸುತ್ತ ಸ್ವಲ್ಪ ಹೊತ್ತು ಕುಳಿತಿದ್ದು, ಅನಂತರ ನುಡಿದರು: "ನೋಡೋ, ರಾಧಾಗೆ ಎಸ್. ಎಸ್. ಎಲ್. ಸಿ. ಫಸ್ಟ್‌ಕ್ಲಾಸ್ನಲ್ಲಿ ಪಾಸಾಯಿತಂತೆ."

ರಾಘುವಿಗೆ ಮೈ ಪುಳಕಿತವಾದಂತಾಯಿತು. "ರಾಧಾಗೆ ಫಸ್ಟ್‌ಕ್ಲಾಸಿನಲ್ಲಿ ಪಾಸಾಯಿತೇ? ಹಾಗಾದರೆ ಅವಳು ತುಂಬ ಬುದ್ಧಿವಂತಳೂ ಇರಬೇಕು" ಎಂದುಕೊಂಡ. ಅವನಿಗೆ ತಾನು ಫೇಲಾಗಿದ್ದುದು ಮರೆತುಹೋಯಿತು.

"ರಾಧಾ ಫೇಲಾಗೋದೂಂದ್ರೇನು!" ರಾಘುವಿನ ಮನಸ್ಸು ಅಭಿಮಾನದಿಂದ ಅಂದುಕೊಂಡಿತು.

ರಾಘುವಿನ ತಾಯಿ, "ಹ್ಞ, ಏಳು ರಾಘು ಊಟಕ್ಕೆ! ಎಷ್ಟು ಯೋಚನೆ ಮಾಡಿದರೂ ಅಷ್ಟೆ! ಈ ಸಲ ಆಗದೇ ಇದ್ರೆ ಮುಂದಲ ಸಲ ಆಗುತ್ತೆ!" ಎಂದು ಮೇಲಕ್ಕೆದ್ದರು.

ರಾಘು "ಅವಳು ಮುಂದಕ್ಕೂ ಓದುತ್ತಾಳೋ ಏನೋ!" ಎಂದುಕೊಂಡು ಮೇಲಕ್ಕೆದ್ದ.

\+ + + +

"ಎದುರು ಮನೆಯವರಿಗೆ ಶಿವಮೊಗ್ಗಾಕ್ಕೆ ವರ್ಗ ಆಯಿತಂತೆ ರಾಘೂ" ರಾಘುವಿನ ತಾಯಿ ಹೇಳಿದರು.

"ಆ!!!" ಸಿಡಿಲು ಬಡಿಸಿಕೊಂಡವನಂತೆ ಕೇಳಿದ ರಾಘು.

"ಏಕೋ?" ಆಶ್ಚರ್ಯದಿಂದ ಕೇಳಿದರು ಅವನ ತಾಯಿ.

ರಾಘುವಿಗೆ ತನ್ನ ವರ್ತನೆಯಿಂದ ನಾಚಿಕೆಯಾದಂತಾಗಿ, "ಯಾಕೂ ಇಲ್ಲ" ಎಂದ ಮೆಲ್ಲನೆ. ಅವನ ತಾಯಿ ಸಂಶಯದಿಂದ ಅವನನ್ನು ನೋಡಿ, ಅನಂತರ "ಹೆಚ್ಚು ಕೆದಕೇಕೆ ಕೇಳಲಿ" ಎಂದು ಕೊಂಡು ಮಾತನ್ನು ಮುಂದುವರಿಸಿದರು; "ಪಾಪ ಒಳ್ಳೇ ಜನ.... ನಾಳೇನೇ ಹೊರಟುಬಿಡ್ತಾರಂತೆ"

"ಹಾಗಾದರೆ ರಾಧೆ ನನ್ನ ಪಾಲಿಗೆ ಎಂದೆಂದಿಗೂ ಕನಸೇ?" ರಾಘು ಎಂದುಕೊಂಡ.

"ಎದುರಿಗಿದ್ದಾಗಲೇ ಕನಸಾಗಿದ್ದ ಅವಳು, ಇನ್ನು ಹೊರಟು ಹೋದಮೇಲೆ ಏನಾಗಿರಲು ಸಾಧ್ಯ?" ಅವನ ಮನಸ್ಸು ಆಟಾಕ. ವಾಡಿತು. ಅವನಿಗೆ ಅಳು ಬರುವಂತಾಯಿತು. "ರಾಧೆ! ಒಂದು ದಿನ ಅವಳೊಡನೆ ಮಾತನಾಡಿಲ್ಲ. ಅಂತಹುದರಲ್ಲಿ ಅವಳು ಹೊರಟು ಹೋಗುತ್ತಾಳೆಂದು ಕೇಳಿದ್ದಕ್ಕೇ ಇಷ್ಟು ದುಃಖ." ಎಂದುಕೊಂಡ?

ಮಾರನೆಯ ದಿನ ಎದುರುಮನೆಯ ಮುಂದೆ ಲಾರಿ ಬಂದು ನಿಂತಿತು. ಮನೆಯ ಸಾಮಾನೆಲ್ಲ ಲಾರಿಯನ್ನು ಸೇರಿತು. ಲಾರಿ ಹೊರಟುಹೋಯಿತು. ರಾಧೆ ಮತ್ತು ಅವಳ ತಾಯಿ ರಾಘುವಿನ ತಾಯಿಯ ಹತ್ತಿರಕ್ಕೆ ಬಂದರು. ರಾಘು ಕೊಠಡಿಯಲ್ಲಿ ನಿಂತಿದ್ದ. ಅವನಿಗೆ ಈಚೆಗೆ ಬರಲು ಧೈರ್ಯವಾಗಲಿಲ್ಲ. ಮೈಯನ್ನೆಲ್ಲಾ ಕಿವಿಯಾಗಿ ಮಾಡಿಕೊಂಡು ನಿಂತಿದ್ದ.

ರಾಧೆಯ ತಾಯಿ ರಾಘುವಿನ ತಾಯಿಗೆ, "ಹೋಗಿಬಿಟ್ಟು ಬರ್ತೀವಿ ಅಂದ್ರೆ. ಜ್ಞಾಪಕ ಇರ್ಲಿ" ಎಂದಿದ್ದು, ಕೂಡಲೇ, "ಹೋಗಿ ಬರ್ತೀನ್ರೀ" ಎಂದ ರಾಧೆಯ ಸುಮಧುರವಾದ ಮಾತುಗಳೂ, ರಾಘುವಿನ ತಾಯಿ, "ಆಗಲೀಮ್ಮ. ನೀವು ಜ್ಞಾಪಕ ಇಟ್ಕೊಂಡಿರ ಬೇಕಷ್ಟೇ ನಮ್ಮನ್ನ" ಎಂದು ಉತ್ತರಿಸಿದ್ದು, ಅನಂತರ ಸೀರೆಗಳ ಸರಸರ ಸದ್ದು—ಕೇಳಿಸಿದುವು.

"ಇನ್ನೇನು, ಒಂದೈದು ನಿಮಿಷಗಳ ನಂತರ ರಾಧೆ ಹೊರಟು ಹೋಗುತ್ತಾಳೆ" ಮೈಯೇ ಭಸ್ಮವಾಗಿ ಹೋಗುವಂತಹ ಬಿಸಿಯಾದ ನಿಟ್ಟುಸಿರು ಹೊರಟಿತು—ರಾಘುವಿನ ಬಾಯಿಂದ. ಅವನು ಕಿಟಕಿಯಲ್ಲಿ ನೋಡಿದ. ರಾಧೆ ಮತ್ತು ಅವಳ ತಾಯಿ ತಮ್ಮ ಮನೆಯ ಮೆಟ್ಟಿಲನ್ನು ಹತ್ತುತ್ತಿದ್ದರು. ರಾಧೆ ರಾಘು ಮೊದಲ ದಿನ ನೋಡಿದ್ದ ಹಸಿರು ಸೀರೆಯನ್ನೇ ಉಟ್ಟಿದ್ದಳು.

ಕ್ಷಣದಲ್ಲಿ ಮನೆಯ ಮುಂದೆ ಜಟಕಾ ಬಂದು ನಿಂತಿತು. ರಾಧೆಯ ತಂದೆ, ತಂಗಿ ಮತ್ತು ತಮ್ಮಂದಿರು, ಅನಂತರ ಅವಳ ತಾಯಿ ಗಾಡಿಯನ್ನೇರಿದರು. ಬಳಿಕ—ರಾಧೆ ಗಾಡಿಯ ಹಿಂಭಾಗದಲ್ಲಿ ಕುಳಿತಳು.

ರಾಘುವಿಗೆ ಸ್ವಲ್ಪ ಧೈರ್ಯಬಂದಂತಾಗಿತ್ತು. "ಹ್ಞ. ಈಗಲಾದರೂ ಧೈರ್ಯವಾಗಿ ಅವಳ ಮುಖವನ್ನು ನೋಡಿಬಿಡುತ್ತೇನೆ." ಎಂದುಕೊಂಡ. ಅಂತೆಯೇ ಕಿಟಕಿಯ ಮೂಲಕ ರಾಧೆಯನ್ನ ಕ್ಷಣ ಕಾಲ ಕಣ್ಣುತುಂಬ ನೋಡಿದ. ಗಾಡಿ ಹೊರಟಿತು. ಮನೆಯ ಮುಂದೆ ನಿಂತಿದ್ದ ರಾಘುವಿನ ತಾಯಿಗೆ ರಾಧೆ ಮತ್ತು ಅವಳ ತಾಯಿ ಮತ್ತೊಮ್ಮೆ, "ಹೋಗಿ ಬಿಟ್ಟು ಬರ್ತೀವ್ರೀ" ಎಂದು ಹೇಳಿದರು. ಗಾಡಿ ಇನ್ನೇನು ಕಣ್ಮರೆಯಾಗಬೇಕು ಎನ್ನುವಾಗ, ರಾಧೆಯೊಮ್ಮೆ ರಾಘುವಿನ ಕಿಟಕಿಯ ಕಡೆಗೆ ತಿರುಗಿ, ಮುಗುಳ್ನಕ್ಕು, ಕಣ್ಣುಗಳಿಂದಲೇ ರಾಘುವಿಗೆ, "ಹೋಗಿ ಬಿಟ್ಟು ಬರ್ತೀನಿ" ಎಂದು ಹೇಳಿದ ಹಾಗೆ ತೋರಿತು, ರಾಘುವಿಗೆ.

ಒಂಟಿ ಚಂದ್ರ

"ರಂಜನ" ಭಟ್ಟ, ನಾಗಪುರ

ನೂರಾರು ನಕ್ಷತ್ರ ಮಿನುಗಿರುವ ಬಾನಿನಲಿ
ನೀನೊಬ್ಬಳೇ ಏಕೆ ತಿರುಗುತಿರುವೆ?
ಕಾಣದಿಹ ಕತ್ತಲೆಯ ತೊಟ್ಟಿಲನು ತೂಗುತ್ತ
ನೀನೊಬ್ಬಳೇ ಇಲ್ಲಿ ಏಕೆ ಕಾದಿರುವೆ?
ಎಲ್ಲಿಯೋ ಹುಟ್ಟಿರುವ, ಎಲ್ಲಿಗೋ ಹೊರಟಿರುವ
ನದಿಯ ರೀತಿ –
ಯಾರದೋ ಮಗುವಾಗಿ, ಎಲ್ಲಿಯೋ ಸತಿಯಾದ
ಹೆಣ್ಣ ಹೋಲಿ –
ಆಫ್ರಿಕೆಯ ವನದಲ್ಲಿ ಹಸಿರೆಲೆಯ ಜೋತಿರುವ
ಹೂವದಾಗಿ—
ಮೂಡಣದ ಮಗು ನೀನು, ಪಡುವಣವೆ ನಿನ್ನ ಮುಖ
ನಿಂತ ನೆಲೆ ನಿಲ್ಲದಲೆ, ಗೊತ್ತು ಗುರಿಯಿಲ್ಲದಲೆ.
ಬಾನಬಟ್ಟೆಯ ಸವೆದ ಅರ್ಧಚಂದ್ರ,
(ಹೋದ ಹೋದೆಡೆ ಏಕೆ ನಿನಗರ್ಧಚಂದ್ರ!)

ನೀನು ನುಡಿದಿಹ ಗಾನ ಮಧ್ಯರಾತ್ರಿಯ ಮೌನ,
ಗೋರಿಯಲ್ಲಿಯ ಮಿಡಿತ ನಿನ್ನೆದೆಯ ಬಡಿತ;
ನಿನ್ನ ಮಾನಸದಲ್ಲಿ ಎದ್ದಿರುವ ಚಿಂತೆಯಲೆ
ಏಳು ಸಾಗರವನ್ನೆ ಕಡೆಯುತಿಹುದು—

× × ×

ಕೇಳದೆಯೂ ಹಾಡಿಹುದ ಬನದ ಹಕ್ಕಿ,
ಕಾಣದೆಯೂ ಚಿಮ್ಮಿಹುದು ಪುಟಿವ ಬುಗ್ಗೆ
ಒಂಟಿಯಾದರೂ ಭೂಮಿ ತಾಳಹಾಕಿಹಳಲ್ಲಾ—!
ಒಂಟಿಯಾದರೂ ಕುತ್ತು, ಒಂಟಿ ನಾನೆನ್ನದಿರು,
ಹಿಂದು ಮುಂದಿನ ಚಿಂತೆ ಏಕೆ ನಿನಗೆ?
ಏಕದೊಳು ಸರ್ವವಿರೆ, ಸರ್ವರೊಳು ಏಕವಿದೆ
ಇಲ್ಲಿ ಎಲ್ಲರೂ ಒಂದೆ : ಬಾಳ ಸಾಧಕರು.
ಒಂಟಿಯಾದರೂ ಕುತ್ತು, ಒಂಟಿ ನಾನೆನ್ನದಲೆ
ಹೇಳ ಹೆಸರಿನ ಚಿಂತೆ ಬೇಡ ನಿನಗೆ.

ಗೆಳೆತನದ ಗುಟ್ಟು

(ಒಂದು ವಿವೇಚನೆ)

ಶ್ರೀ. ಎನ್. ಸಿ. ಶಿರಹಟ್ಟಿ ಬಿ. ಎ. ಶಿರಹಟ್ಟಿ

ಮಾನವಸಮಾಜದಲ್ಲಿ ಗೆಳೆಯರನ್ನು ಅಪೇಕ್ಷಿಸುವವರು ಬಹಳ ಜನರು; ಆದರೆ ಗೆಳೆಯರನ್ನು ಪಡೆಯಲು ವೈಯಕ್ತಿಕ ಹೃದಯ-ಮನಸ್ಸುಗಳ ಹಣ್ಣುತನ ಬೇಕಾಗುವುದು. ಅಪರಿಪಕ್ವ ಮನಸ್ಸು-ಬುದ್ಧಿಗಳುಳ್ಳವನಿಗೆ ಗೆಳೆಯರು ದೊರೆತರೂ ಹೆಚ್ಚುಕಾಲ ಉಳಿಯುವುದಿಲ್ಲ.

ಜಗತ್ತಿನಲ್ಲಿ ಮನುಷ್ಯನು ಎಲ್ಲಕ್ಕೂ ಹೆಚ್ಚಾಗಿ ಏನನ್ನು ಬಯಸುವನು? ಹಣವನ್ನೇ? ಅಲ್ಲ. ಸಮಾಜದಲ್ಲಿ ಪ್ರತಿಯೊಬ್ಬನೂ ಹಣಕ್ಕಾಗಿ ಹಾತೊರೆಯುವನೆಂದು ಎಲ್ಲರಿಗೂ ಗೊತ್ತಿದ್ದ ಮಾತು. ಹಣವಿಲ್ಲದಿದ್ದರೆ ದೈನಂದಿನ ಜೀವನವನ್ನು ನಡೆಸುವುದು ದುಸ್ತರವಾಗುವುದೇನೊ ಸರಿ! ಆದರೆ ಹಣವನ್ನು ಗಳಿಸಿದ ಮೇಲೆಯೂ ಏನೋ ಒಂದು ಅತೃಪ್ತಿಯು ಮೂಡುವುದು.

ಮನುಷ್ಯನು ಹೆಚ್ಚಾಗಿ ಬಯಸುವುದು ಅಧಿಕಾರವನ್ನೇ? ಇದಕ್ಕೂ ನಾವು ಇಲ್ಲವೆಂದು ಹೇಳಬೇಕಾಗುವುದು. ಕುಟುಂಬ, ಸಹಕಾರಿ ಸಂಘ, ಸರಕಾರ ಮೊದಲಾದ—ಸಮಾಜದಲ್ಲಿಯ—ಪ್ರತಿಯೊಂದು ಸಂಸ್ಥೆಯಲ್ಲಿ ಅಧಿಕಾರಸ್ಥಾನವನ್ನು ದೊರೆಕಿಸಲು ಬಡಿದಾಟ ನಡೆದೇ ಇರುವುದು. ಅಧಿಕಾರಲಾಲಸೆ ಹವೆಯ ಹಾಗೆ ಸಮಾಜದಲ್ಲಿ ಎಲ್ಲ ಕಡೆಗೆ ಪಸರಿಸಿದೆ; ಆದರೆ ಉಚ್ಚ ಅಧಿಕಾರ ಸ್ಥಾನದಲ್ಲಿದ್ದವರನ್ನು ಸೂಕ್ಷ್ಮವಾಗಿ ಅವಲೋಕಿಸಿದರೆ, ಅವರಲ್ಲಿ ಕಂಡು ಬರುವ ಅತೃಪ್ತಿ ಸಾಮಾನ್ಯಜನರಲ್ಲಿ ಕಂಡುಬರುವ ಅತೃಪ್ತಿಗಿಂತ ಸ್ವಲ್ಪ ಹೆಚ್ಚೇ ಇರುವುದೆಂದು ತೋರುವುದು.

ಇದಕ್ಕೆ ಕಾರಣವೇನು? ಹಣವಾಗಲಿ, ಅಧಿಕಾರವಾಗಲಿ—ಇವು ಸಾಧ್ಯಗಳಲ್ಲ; ಕೇವಲ ಸಾಧನಗಳು. ಹಾಗಾದರೆ ಸಾಧ್ಯವು ಯಾವುದು? ಸುಖವೆಂದು ನಾವು ಹೇಳಬಹುದು! 'ಸುಖವೆಂದರೆ ಸ್ವಯಂತೃಪ್ತಿ ಮತ್ತು ವ್ಯಸನವಿಲ್ಲದ ಮನಃಸ್ಥಿತಿ" ಎಂದು ಸ್ವಲ್ಪದರಲ್ಲಿ ಅದರ ವ್ಯಾಖ್ಯೆಯನ್ನೂ ನಾವು ಕೊಡಬಹುದು ಮನುಷ್ಯನು ಜಗತ್ತಿನಲ್ಲಿ ಎಲ್ಲಕ್ಕೂ ಹೆಚ್ಚಾಗಿ ಬಯಸುವುದು ಸುಖವನ್ನು - ನಿಜವಾದ ಸುಖವನ್ನು.

ಮನುಷ್ಯನು ಸಮಾಜಜೀವಿ; ಆದುದರಿಂದ ಅವನು ಬೇರೆಯವರ ಸಹಾನುಭೂತಿ ಪ್ರೀತ್ಯಾನುರಾಗಗಳನ್ನು ಗಳಿಸಲು ಸಮರ್ಥನಾದರೆ ಮಾತ್ರ ಅವನಿಗೆ ಸುಖವು ಲಭಿಸುವುದು. ಇದನ್ನೇ ನಾವು ಗೆಳೆತನವೆಂದು ಕರೆಯಬಹುದು. "ಬೇರೆ ವ್ಯಕ್ತಿಯ ಜೊತೆಗಿದ್ದ ಸಹಾನುಭೂತಿಪರ ಪ್ರೀತಿಯುಕ್ತ ಸಂಬಂಧವೇ ಗೆಳೆತನ," ಎಂದು ಸ್ವಲ್ಪದರಲ್ಲಿ ನಾವು ಹೇಳಬಹುದು. ಗೆಳೆತನವನ್ನು ಗಳಿಸಲು ಹಣ ಮತ್ತು ಅಧಿಕಾರಗಳಿಂದ ಸಹಾಯವಾಗುವುದೇನೋ ನಿಜ; ಆದರೆ ಬಹುತರವಾಗಿ ಹಣವಂತನಿಗೆ ಅಥವಾ ಅಧಿಕಾರಿಗೆ ಅಂಟಿಕೊಂಡ ಜನರು, ಸ್ವಂತದ ಬೇಳೆಯನ್ನು ಬೇಯಿಸಿಕೊಳ್ಳಲು ಪ್ರೀತಿಯ ನಾಟಕವನ್ನು ಆಡುವವರೇ ಇರುವರು. ಅವರು ಗೆಳೆಯರಲ್ಲ, ಜಿಗಣೆಗಳು. ಕಲ್ಚರ್ ಮುತ್ತು ನಿಜವಾದ ಮುತ್ತಿಗಿಂತ ಹೆಚ್ಚು ಆಕರ್ಷಕವಾಗಿರುವ ಹಾಗೆ, ನಿಜವಾದ ಗೆಳೆಯರು ಅವರೆದುರಿಗೆ ಕಾಂತಿಹೀನರಾಗುವರು. ಮುಖಸ್ತುತಿ ಮಾಡುವ ಈ ಗೆಳೆತನದ ಗಿಲೀಟಿನಿಂದ ಪ್ರಕಾಶಿಸುವ ಜನರ ಮೃಗಜಲದಂತಿರುವ ಸಹಾನುಭೂತಿಯನ್ನು ಸಂಪಾದಿಸಲು, ಮನುಷ್ಯನು ಅಧಿಕಾರ ಮತ್ತು ಹಣಗಳ ಹಿಂದೆ ಹುಚ್ಚನ ಹಾಗೆ ಧಾವಿಸುವನು. ಈ ವಿಷಸುಳಿಯಲ್ಲಿ ಸಿಕ್ಕನೆಂದರೆ, ಇದರಿಂದ ಹೊರಗೆ ಬರುವುದು ಬಹಳ ಕಠಿಣವಾಗುವುದು. ಆದುದರಿಂದಲೇ ಇಚ್ಛಿಸಿದ ಅಧಿಕಾರ ಅಥವಾ ಹಣವನ್ನು ದೊರೆಕಿಸಿದ ಮನುಷ್ಯನ ಮುಖದ ಮೇಲೆ ಖಿನ್ನತೆಯ ರೇಷೆಗಳು ಕಾಣಿಸಿಕೊಳ್ಳುವುವು ಕೃತಕ ಮತ್ತು ನಿಜವಾದ ಗೆಳೆತನಗಳ ನಡುವಿನ ಅಂತರ ಅವನಿಗೆ ತಿಳಿದಿದೆ ಮತ್ತು ಅವನು ಅತೃಪ್ತನಿರುವನೆಂದು ಆ ರೇಷೆಗಳು ಹೇಳುವುವು.

ಹಣ ಮತ್ತು ಅಧಿಕಾರಗಳ ಸಂಪಾದನೆಯಿಂದ ಸಂಪಾದಿಸಲಸಾಧ್ಯವಾದ ಗೆಳೆತನವನ್ನು ನಾವು ಹೇಗೆ ಗಳಿಸಬಹುದು? ಹಣ ಮತ್ತು ಅಧಿಕಾರಗಳಿಗಿಂತ ಅಮೌಲ್ಯವಾದ ನಮ್ಮ ನಡೆವಳಿಯಿಂದ! ನಮ್ಮ ನಡೆವಳಿಯಲ್ಲಿ ಈ ಮುಂದಿನ ೫ ಮಾತುಗಳನ್ನು ಅಥವಾ ವಿಷಯಗಳನ್ನು ಅಳವಡಿಸಿಕೊಂಡುಬಿಟ್ಟರೆ, ಅವೇ ಗೆಳೆತನದ ಗುಟ್ಟಾಗಿ ಪರಿಣಮಿಸುವುವೆಂದು ನಾವು ಹೇಳಬಹುದು —

೧ ಗುಣಗ್ರಹಣ
೨ ಮುಗುಳ್ನಗೆ
೩ ಶ್ರವಣ
೪ ಸೌಮ್ಯಭಾಷಣ
೫ ಗೌರವ.

ಇವುಗಳನ್ನು ಒಂದೊಂದಾಗಿ ನಾವೀಗ ವಿಚಾರಮಾಡೋಣ—

೧ ಗುಣಗ್ರಹಣ

ಜಗತ್ತಿನಲ್ಲಿ ದೋಷರಹಿತನಾದ ಪೂರ್ಣ ಮನುಷ್ಯನು ಯಾರೂ ಇಲ್ಲ—ಎಂಬುದನ್ನು ನಾವು ನೆನಪಿನಲ್ಲಿಡಬೇಕು ಮನುಷ್ಯನು ತನ್ನನ್ನು ಬೇರೆ ಯಾರನ್ನೂ ಪ್ರೀತಿಸುವುದಿಲ್ಲ; ಆದುದರಿಂದ ಅವನ ದೃಷ್ಟಿಗೆ

ಬೇರೆಯವರಲ್ಲಿರುವ ಗುಣಗಳಿಗಿಂತ ದೋಷಗಳೇ ಸ್ಫುಟವಾಗಿ ಕಾಣು-ವುವು. ನಾನು ಒಬ್ಬ ಸುಂದರ ಸ್ತ್ರೀಯನ್ನು ನೋಡಿದರೆ, ಅವಳ ಸೌಂದರ್ಯದ ಕಲ್ಪನೆ ಬರುವ ಮೊದಲು, ಅವಳ ಗಲ್ಲದ ಮೇಲಿನ ಸುಕ್ಕು ಕಲೆಯು ನನ್ನ ಅವಗಾಹನೆಗೆ ಬರುವುದು. ಈ ನೈಸರ್ಗಿಕ ದೋಷದರ್ಶಕ ಸ್ವಭಾವವನ್ನು ನಿಗ್ರಹಿಸಿ, ಪರರಲ್ಲಿಯು ಗುಣಗ್ರಹಣ ಮಾಡಲು ಪ್ರಯತ್ನಿಸಬೇಕು. ಈ ವಿಷಯದಲ್ಲಿ ನಾವು ಜೇನ್ನೊಣ-ವನ್ನು ಅನುಕರಿಸಬೇಕು. ಪುಷ್ಪಗಳಲ್ಲಿಯು ಮಕರಂದವನ್ನಷ್ಟೇ ಅದು ಹೀರಿಕೊಳ್ಳುವಂತೆ, ಪರರಲ್ಲಿಯು ಪರಿಮಳವನ್ನಷ್ಟೇ ಹೀರಿಕೊಳ್ಳಬೇಕು. ಆದುದರಿಂದಲೆ ವಿನೋಬಾ ಭಾವೆಯವರು, ಮನುಷ್ಯನು ಲೋಹ-ಚುಂಬಕದಂತೆ ಗುಣಚುಂಬಕನಾಗಬೇಕೆಂದು ಹೇಳುವರು. ಗುಣ-ಗ್ರಹಣ ಮಾಡಿದ ನಂತರ ಸುಮ್ಮನೆ ಕೂಡಬಾರದು. ಅದನ್ನು ನಮ್ಮ ಹೃದಯಾಂತರಾಳದಿಂದ ಉಕ್ಕಿಬರುವ ಅಕ್ಕರತೆಯಿಂದ, ಸಂಬಂಧಪಟ್ಟ ವ್ಯಕ್ತಿಗೆ ಹೇಳಬೇಕು. ಅವನು ಸಂತುಷ್ಟನಾಗಿ ತನ್ನ ಶೀಲವನ್ನು ಇನ್ನೂ ಹೆಚ್ಚು ಸುಧಾರಿಸಿಕೊಳ್ಳುವನಲ್ಲದೆ ನಮ್ಮ ಗಾಢಮಿತ್ರನೂ ಆಗುವನು.

೨ ಮುಗುಳ್ನಗೆ

ಮುಗುಳ್ನಗೆಗೆ ಏನೂ ಬೆಲೆ ಬೀಳುವುದಿಲ್ಲ. ಆದರೆ ಅದು ಎಲ್ಲ-ವನ್ನೂ ಕೊಳ್ಳಬಹುದು. ನಾನು ಒಬ್ಬನನ್ನು ನೋಡಿ ಮುಗುಳ್ನಗೆ ನಕ್ಕರೆ, ಅವನ ಮನಸ್ಸಿನಲ್ಲಿ, " ನನ್ನನ್ನು ನೋಡಿ ಇವನಿಗೆ ಸಂತೋಷ-ವಾಗಿದೆ. ಇವನು ನನ್ನ ಹಿತೈಷಿ–ನನ್ನ ಮಿತ್ರ, " ಈ ಮೊದಲಾದ ವಿಚಾರಗಳು ಮೂಡಿ, ಅವನ ಮುಖವು ಕೂಡ ತಕ್ಷಣವೇ ಮಂದಸ್ಮಿತ-ದಿಂದ ಅರಳಿದ ಗುಲಾಬಿ ಹೂವಿನಂತಾಗುವುದು. ಈ ಮಂದಸ್ಮಿತವು ಹೃದಯದಿಂದ ಹೊರಹೊಮ್ಮಬೇಕೇ ವಿನಾಃ ಕೃತಕವಾಗಿರಬಾರದು. ಜೀವನದ ವಿವಿಧ ರಂಗಗಳಲ್ಲಿ ಜನಾನುರಾಗವನ್ನು ಜಯಿಸಿದ ಜನರು ಈ ಮಂದಸ್ಮಿತದ ಮಹತ್ತ್ವವನ್ನು ಮರೆಯುವುದಿಲ್ಲ. ಪರಿಚಿತ ಜನರು ನನ್ನನ್ನು ನೋಡಿ ನನ್ನ ಜೊತೆಗೆ ಮಾತನಾಡದೆ ಮುಖವನ್ನು ಹೊರಳಿಸಿಕೊಂಡು ಹೋಗುತ್ತಿದ್ದರೆ, ಅದಕ್ಕೆ ಕಾರಣ— ಮುಗುಳ್ನಗೆ ಇಲ್ಲದ ನನ್ನ ಮುಖ.

ಮುಖವು ಮುಗುಳ್ನಗೆಯ ಮಂದಿರವಾದರೆ ಮನುಷ್ಯನು ಆತ್ಮೀಯರಾದ ಎಷ್ಟೋ ಗೆಳೆಯರನ್ನು ಗಳಿಸಲು ಶಕ್ತನಾಗುವನು.

೩ ಶ್ರವಣ

ಮನಶ್ಶಾಸ್ತ್ರದ ಪ್ರಕಾರ, ಪ್ರತಿಯೊಬ್ಬನಲ್ಲಿ— ಅದುಮಿ ಇಟ್ಟಲ್ಪ-ಟ್ಟದರಿಂದ ಹೊರಗೆ ಬರಲಿಚ್ಛಿಸುವ ಎಷ್ಟೋ ವಿಚಾರಗಳು ಇರುವುವು ನಾನು ಒಬ್ಬನ ಸ್ನೇಹವನ್ನು ಬಯಸುತ್ತಿದ್ದರೆ, ಅವನು ವ್ಯಕ್ತಪಡಿಸ-ಲಿಚ್ಛಿಸುವ ವಿಚಾರಗಳನ್ನು ಆಸ್ಥೆಯಿಂದ ಕೇಳುವ ಸಿದ್ಧತೆ ನನ್ನಲ್ಲಿ ಇರಬೇಕು. ಅವನು ಮಾತಾಡುವಾಗ ನಾನು ಎಂದೂ ಅಡ್ಡ ಮಾತಾ-ಡಲು ಪ್ರಯತ್ನಿಸಬಾರದು. ಅವನ ಮಾತು ಮುಗಿದ ಮೇಲೆಯೇ ನನ್ನ ಮಾತಿನ ಪ್ರಾರಂಭವಾಗಬೇಕು. ಅವನು ನನ್ನ ಮಾತುಗಳನ್ನು ಕೇಳಲು ಸಿದ್ಧನಾಗಿರುವನು— ಎಂದರೆ, ಅವನ ಮನಸ್ಸಿನ ಮೇಲಿನ ವಿಚಾರಗಳ ಭಾರ ಇಳಿದಂತಾಗಿದೆ ಎಂದು ಅರ್ಥ. ಅವನ ಮನಸ್ಸು ಬರಿಯ ಕೊಡದಂತಾದ ಮೇಲೆ ನನ್ನ ವಿಚಾರಗಳನ್ನು ಅದು ಗ್ರಹಿಸು-ವುದು. ಅವನ ಮಾತುಗಳನ್ನು ಲಕ್ಷ್ಯಗೊಟ್ಟು ಕೇಳಿದ್ದಕ್ಕಾಗಿ ಅವನು ಮರ್ಯಾದಿತನಾಗಿ ನನ್ನ ಆಪ್ತಮಿತ್ರರ ವಲಯದಲ್ಲಿ ಒಬ್ಬನಾಗುವನು.

೪ ಸೌಮ್ಯಭಾಷಣ

ಇಬ್ಬರು ಕೂಡಿದಾಗ ಒಬ್ಬರ ಜೊತೆಗೊಬ್ಬರು ಮಾತನಾಡ-ಬೇಕಾಗುವುದು. ಇಂತಹ ಸಮಯದಲ್ಲಿ ಮಾತಾಡುವ ನಮ್ಮ ಶೈಲಿಯು ಸೌಮ್ಯವಾಗಿರುವುದು ಅವಶ್ಯ. ಮಾತಾಡುವಾಗ ಕೆಲವು ವಿಷಯಗಳ ಬಗ್ಗೆ ಚರ್ಚೆ ಉದ್ಭವಿಸಬಹುದು. ಚರ್ಚೆಯಲ್ಲಿ ನಾನು ಮೈಮರೆತು ಭಾಗವಹಿಸಿದಾಗ, ನನ್ನ ಭಾಷಣದ ವೈಖರಿಯಿಂದಾಗಲಿ ಅಥವಾ ತರ್ಕದ ತೀಕ್ಷ್ಣತೆಯಿಂದಾಗಲಿ, ಮತ್ತೊಬ್ಬನನ್ನು ಸೋಲಿಸಿ ನಾನು ವಿಜಯಶ್ರೀಯನ್ನು ಹೊಂದಬಹುದು. ಸೋತವನ ಮುಖ-ದಿಂದ ಒಂದು ಶಬ್ದವೂ ಹೊರಬರುವುದಿಲ್ಲವೇನೋ ನಿಜ; ಆದರೆ ಅವನ ಮನಸ್ಸು ಸುಪ್ತಜ್ವಾಲಾಮುಖಿಯಂತಿರುವುದು. ಸೋಲಿನಿಂದ ಅವಮಾನಿತನಾಗಿ, ನನ್ನ ಬಗ್ಗೆ ಅವನಲ್ಲಿ ತಪ್ಪು ಕಲ್ಪನೆಗಳು ಉದಯ ಹೊಂದಿ, ಕುದಿಯಲು ಪ್ರಾರಂಭಿಸುವುವು. ಯಾವಾಗಲಾದರೂ ಒಮ್ಮೆ ಈ ಕಲ್ಪನೆಗಳಿಗೆ ಸ್ಫೋಟವಾಗಲು ಆಸ್ಪದ ದೊರೆತರೆ, ಆದರ ಜೊತೆಗೆ ನಮ್ಮಿಬ್ಬರ ನಡುವಿನ ಗೆಳೆತನವೂ ಚೂರುಚೂರಾಗಿ ಹೋಗುವುದು. ಚರ್ಚೆಯಲ್ಲಿ ತೊಡಗಿದಾಗ ಮೈತುಂಬ ಕಣ್ಣಾಗಿ-ವನಾಗಿ ಬೇರೆಯವನ ಮನಸ್ಸು ನೋಯದ ಹಾಗೆ ಮತ್ತು " ನಾನು ಸೋತೆನು " ಎಂಬ ಭಾವನೆ ಅವನಲ್ಲಿ ಮೂಡದ ಹಾಗೆ, ಸೌಮ್ಯ-ಭಾಷಣವನ್ನು ನಾನು ಉಪಯೋಗಿಸಬೇಕು

ನಮ್ಮ ಚರ್ಚೆಯು ಕರಜಿಕಾಯಿಯಂತೆ ರುಚಿಯಾಗಿರಬೇಕು. ಬೇರೆಯವನನ್ನು ಆ ಚರ್ಚೆಯು ಬರ್ಚಿಯಂತೆ ಚುಚ್ಚಬಾರದು.

೫ ಗೌರವ

ನಾವು ಭೂಪೃಷ್ಠದ ಮೇಲೆ ಜೀವಿಸಿರಬೇಕಾದರೆ ಗೌರವವು ಹವೆಯಷ್ಟೇ ಅವಶ್ಯವಾಗಿರುವುದು. ಆದುದರಿಂದಲೇ ಆತ ಗೌರವ-ಕ್ಕಾಗಿ ಆಶಿಬಡುವುದು. ಆತ್ಮಗೌರವದ ಭಾವನೆ ಮೂಡಿದುದರಿಂದ ಮೂಲತಃ ಪ್ರಾಣಿಯಾಗಿದ್ದ ಮನುಷ್ಯನು ಮಾನವನಾದನು. ಆತ್ಮ-ಗೌರವವೆಂದರೆ ನನ್ನ ವ್ಯಕ್ತಿತ್ವಕ್ಕೆ ಸಲ್ಲಬೇಕಾದ ಮರ್ಯಾದೆಯೇ ವಿನಾ ಅಹಂಕಾರವಲ್ಲ; ನಾನು ಗೌರವವನ್ನು ಬಯಸುತ್ತೇನೆ— ಎಂದ ಮೇಲೆ, ಬೇರೆಯವರ ವ್ಯಕ್ತಿತ್ವಕ್ಕೆ ಗೌರವವನ್ನು ಸಲ್ಲಿಸು-ವುದು ನನ್ನ ಕರ್ತವ್ಯವಾಗುವುದು. ನಾನು ಮತ್ತೊಬ್ಬನಿಗೆ ಗೌರವ-ವನ್ನು ಸಲ್ಲಿಸಿದರೆ ಅವನು ನಿಶ್ಚಿತವಾಗಿ ನನ್ನ ಗೆಳೆಯರ ಬಳಗದಲ್ಲಿ ಸೇರುವನು. ಪರಸ್ಪರ ಗೌರವ ಸ್ನೇಹವೃದ್ಧಿಗೆ ಸಹಾಯಕವಾಗುವುದು.

ಮೇಲೆ ಹೇಳಿದ ಮಾತುಗಳು ಬಹಳ ಸುಲಭ ಮತ್ತು ಸರಳ-ವಿರುವುವು. ಈ ಗೆಳೆತನದ ಗುಟ್ಟನ್ನು ನಿಯಂತ್ರಿಸುವ ಪಂಚಸೂತ್ರಗಳು ನಮ್ಮಲ್ಲಿಯೇ ಇರುವುವು. ಇವು ಸರಳ ಮತ್ತು ಸಮೀಪವಿದ್ದರೂ, ನಮ್ಮ ಮನಸ್ಸಿನಲ್ಲಿಯ ಸಾವಿರಾರು ಸೂತ್ರಗಳಲ್ಲಿ ಇವನ್ನು ಆರಿಸಿ ತೆಗೆಯುವ ಕೆಲಸ ಕಠಿಣ. ಒಮ್ಮೆ ಪ್ರಯತ್ನಪಟ್ಟು ಈ ಸೂತ್ರಗಳನ್ನು ಕೈಯಲ್ಲಿ ಹಿಡಿದುಕೊಂಡರೆ, ಗೆಳೆತನದ ಗುಟ್ಟು ನಮ್ಮ ನಿಯಂತ್ರಣ-ದಲ್ಲಿ ಉಳಿಯುವುದು. ಅನಂತರ ಸಂಪರ್ಕದಲ್ಲಿ ಬರುವ ಪ್ರತಿಯೊಬ್ಬ-ರನ್ನೂ ನಮ್ಮ ಗೆಳೆಯರ ಗುಂಪಿನಲ್ಲಿ ಸೇರಿಸಿಕೊಳ್ಳಲು ಸಾಧ್ಯ-ವಾಗುವುದು.

ಓಂ ನಮಃ ಸರ್ವೇಶ್ವರಾಯ ಚಕ್ರಾಯ

ಡಾ. ಎಚ್. ಜಿ. ಉಪಾಧ್ಯಾಯ ಎಂ. ಎ. ಹೈದರಾಬಾದ್

卐

ಭಗವತಿ ಅಮರ ಭಾರತಿಯ ಯಶೋಮಂಡನ ದೀಪ್ತಿ-
ಭಾಸನಾಟಕಚಕ್ರಪೂರ್ಣೇಂದು ಸುಧಾಮಾಧುರ್ಯಮಂ
ಒಲವಿಂದೆ ಸವಿದಿಹೆನು.

ಅಪ್ರತಿಮ ಕವಿವರನ ವಿಮಲವಿಶ್ರುತ ಪ್ರತಿಭೆ
ನಿರ್ಮಿಸಿದ ಪಾತ್ರಗಳ ಶೀಲ–ಗುಣ–ಸೌಂದರ್ಯದುನ್ನತಿಗೆ
ಬೆರಗಾಗಿ ತಲೆಬಾಗಿಹೆನು.

ಸಚ್ಚಿದಾನಂದಘನರಾದ ಪೂರ್ವಋಷಿಪುಂಗವರು
ಕಂಡ ಪಳನುಡಿಯೊಳೊರೆದಿರುವ ಧರ್ಮಚಕ್ರದ ಮಹಿಮೆ
ಕೇಳಿ ಅರಿತಿಹೆನು.

'ಅಹಶ್ಚರಾತ್ರಿಶ್ಚ ಉಭೇಚ ಸಂಧ್ಯೇ
ಧರ್ಮೋಽಪಿ ಜಾನಾತಿ ನರಸ್ಯ ವೃತ್ತಂ'
ಎಂಬ ತಿರುಳ್ನುಡಿಯ ಮಹಿಮೆಯನು ಭಾಗ್ಯದ
ಮೂಡು-ಮುಳುಗುಗಳಲ್ಲು ನಂಬಿ ನಡೆದಿಹೆನು.
ತ್ಯಾಗತಪಃಸಿದ್ಧಿಯಲಿ ಸಮನಿಸಿದ ಸ್ವಾತಂತ್ರ್ಯ-
ಧ್ವಜ ಮಧ್ಯದಲಿ ಮೆರೆವಶೋಕಚಕ್ರವ ಕಂಡು
ಹಿರಿದಾಗಿ ಹಿಗ್ಗಿಹೆನು.

ದಾರಿದ್ರ್ಯ–ಮೌಢ್ಯ–ನಿರಕ್ಷರತೆ–ನಿಷ್ಕರ್ಮ–ನೈರಾಶ್ಯಗಳಳಿದು
ಮತ್ತೆ ಭಾರತವು ಸತ್‌ಸಾಧನದ ತವರಾಗಿ
ಜಗದ ಗುರುವಾಗಿ ನಿಲ್ಲುವುದೆಂದು ನಂಬಿಹೆನು.
'ರಸೋವೈಸಃ' ಎಂಬ ತತ್ತ್ವವಧಾನದಲಿ ಪ್ರವರ್ತಿತವಾದ
ಸದಭಿರುಚಿ ಸದ್‌ಭಾವದಿಂ ಸಂದೀಪ್ತಮಾದ ಸಾರಸ್ವತ-
ಸೌಂದರ್ಯಚಕ್ರಂ'

'ಧರ್ಮಾದರ್ಥಶ್ಚಕಾಮಶ್ಚ' ಎಂಬ ಸದಸದ್‌ವಿವೇಕಸಂದೇಶವನು
ಸಾರುತಿಹ ಸನಾತನ ಮೇಣ್ ಚಿರನೂತನವಾದ ಸದ್ಧರ್ಮಚಕ್ರಂ,
ಲೋಕಸಂಗ್ರಹ ಸಾಧನಾಪ್ರೇರಕಂ ಸಂಪೂರಕಂ ಅಶೋಕ-
ಶ್ರೀ ಚಕ್ರಂ,

ಇವೆಲ್ಲಕೂ ಮೂಲಪ್ರವೃತ್ತಿಯಂತಿರ್ಪುದೊಂದು ಚಕ್ರಂ—
ವಿಶ್ವಜೀವನಗತಿಗೆ ನಿತ್ಯದಾಧಾರಂ, ಮನುಕುಲದ ಯೋಗ
ಕ್ಷೇಮದಾಲಂಬನಂ

ವಿಜ್ಞಾನತಂತ್ರನಿರ್ಮಿತಂ ಸರ್ವತಂತ್ರಸ್ವತಂತ್ರ ಯಂತ್ರಾತ್ಮ
ಚಕ್ರಂ!

ಓಂ ನಮಃ ತ್ರಿಗುಣಾತ್ಮನೇ ವಿಜ್ಞಾನರೂಪಾಯ ತಂತ್ರಾಯ

ಓಂ ನಮಃ ಯಂತ್ರಾತ್ಮನೇ ಸರ್ವೇಶ್ವರಾಯ ಚಕ್ರಾಯ
ಓಂ ನಮಃ ಮಹೀತಲಾಧಿಪಾಯ ಭೌತಿಕ ಸುಖಪ್ರದಾಯ-
ಚಕ್ರಾಯ

ಪ್ರಸೀದ ಪಾಲಯ ಲಾಲಯ—
ಮಾಮಂಚ ಕುಲಿಶಂ ಸರ್ವನಾಶಾಯ!

ನೆಲವೆ ಅಡಿಯಿಡುವ ಪೀಠಂ, ಬಾಂದಳವೆ ಮುಡಿಯನಲಂಕರಿಪ
ಮಣಿಮಯ ಮಹಾಕಿರೀಟಂ, ಅಂತರಿಕ್ಷವನೆ ಅನರ್ಘಾಸನಂ ಗೈದ
ಕಲಿಯುಗದ ದೈವತಂ, ಭಯ-ಭಕುತಿಯುಲ್ಲಿ ಆರಾಧ್ಯನೀತಂ—
ಭೂಗರ್ಭದಿಂದೊಗೆದ ರಾಶೀಭೂತಮಾದ ಖನಿಜಸಂಪದ
ಈತನಿಗೆ ನಿತ್ಯ ನೈವೇದ್ಯಂ—

ಭೂ ತಿಲಾತಲದಿಂದೊಗೆದ ಪುಷ್ಕರಿಣಿ ತೀರ್ಥಮೆ ಈತನಿಗೆ
ನಿತ್ಯಾಭಿಷೇಕಂ.
ಓ ಚಕ್ರಾಧಿಪತಿ! ವಕ್ರೀ ಭೂತನಾಗದಿರು,
ಮಹಾನಕ್ರನಾಗಿ ನರನ ನಾಗರಿಕತೆಯ
ವಿಭವದ್ವೈರಾವತವ ಸರ್ವನಾಶದ ಮಡುವಿಂಗೆ ಸೆಳೆದೊಯ್ಯದಿರು!
ಕೈಗಾಯ್ದು ಕಾಪಿಡುವ ಗರುಡಗಮನರು ಇಲ್ಲಿ ಯಾರಿಹರು?
ದುಡುಕದಿರು ಮೇಣ್ ಸಿಡುಕ ತೋರದಿರು;
ನೀನೊಮ್ಮೆ ದುಡುಕಿರಲು ತಾಳಲಯ ತಪ್ಪಿರಲು.
ಅದೊ ಅಲ್ಲಿ ಶೂನ್ಯತೆಯ ರೌರವದ ಮಡುವಿನಲಿ
ಕೊನೆಯಿರದ ನಿದ್ರೆಯಲಿ ನೂರಾರು ಹಂಬಲು—ಆಸೆ—
ನಲುಮೆ-ನಚ್ಚಿಕೆ ತಮ್ಮ ಮುರಿದ ಕನಸುಗಳ ಕನಕರಿಸುತಿಹವಿನ್ನು,
ನೀ ಸಿಡುಕುಗೊಂಡಿರಲು ಲಕ್ಷ ದೀಪಗಳಿಂದ
ಪ್ರಜ್ವಲಿಪ ಮಹಾನಗರ ಮಧ್ಯದಲಿ ಗಾಢಾಂಧಕಾರ—
ಮತ್ತೆ ಅನಾಗರಿಕ ಕಾಡು ಮಿಗಗಳ ಸ್ವಚ್ಛಂದ ಮೃಗಯಾವಿಹಾರ,
ನೆರವಿಂದ ನಾರಿಯರ ಶೀಲ ಸಂಹಾರ,
ನೆರೆದಿರುವ ವರ್ತಕರ ಸಿರಿಯ ಅಪಹಾರ,
ಬದುಕು ಬೆಳೆಸಲು ಪಡೆದ ಉಪಕರಣ ವಿಜ್ಞಾನ
ಅದನೆ ಮಾರಕವಾಗಿ ಗೈದ ನರ ಅಜ್ಞಾನ—
ಚಕ್ರವ್ಯೂಹವ ರಚಿಸಿ ಅರಿಗೆ ಸೆರೆ ಸಿಕ್ಕಿರುವ
ಬಾಲವೀರನ ತೆರದಿ ಯಂತ್ರವಶ ನರಪ್ರಾಣಿ.
ಯಂತ್ರಜಾಲದಿ ಸಿಲುಕಿ ಸಂತ್ರಸ್ತವಾಗಿಹುದು ಪಂಚಕರಣ-ಹರಣ-
ಅಶಾಂತಿಸಾಗರ ಕಡೆದು ಶಾಂತಿಸುಧೆಯನು ತರುವುದೆಂತು ಈ ಮಥನ?
ಜೀವಿತದ ಗುರಿಯೇನು? ಪರಿಯೇನು? ನರನು ಅರಸುವುದೇನು?

ಜಯಂತಿ

ಇದ್ದುದನು ಹರಿಗೈವ ಇರುವಿಕೆಯು ಸರಿಬಾರದೇನು !
ಹಸಿವು-ದಣಿವನು ಕಳೆಯೆ ಸರ್ವಶಂಕರಿಯಿತ್ತ
ಸಸ್ಯಶಾದ್ವಲ ಸಿರಿಯು ಸಾಲದೇನು ?
ಮನಕೆ ಮುದವೀಯದೇ ಬಾನಿನಿಂದಿಳಿದುಬಹ
ತಿಂಗಳಿನ ತಣಿವೀವ ಹಾಲುಜೇನು ?
ಓಂ ನಮಃ ಸರ್ವೇಶ್ವರಾಯ ಚಕ್ರಾಯ
ಪ್ರಸೀದ ಪಾಲಯ ಲಾಲಯ !
ಉಷೆಯ ಶಾಂತಿಯುತ ಕಾಂತಿಯೊಲು ಜೀವನದ ಉತ್‌ಕ್ರಾಂತಿ-
ಯಾಗು,

ಪರ್ವತಾಗ್ರದಿ ಪ್ರವಹಿಸುವ ಪವನನೊಲು ವಿಶ್ವಪಾವನನಾಗು,
ಹಿತವಾಗು, ಮಿತವಾಗು, ಧೃತಿಯಾಗು, ಮತಿಯಾಗು—
ಬಾಳ ಸುಪ್ರಗತಿಪಥ ಮಹಾರಥಿಗೆ ಸಾರಥಿಯಾಗು !

ನಿಲ್ಲುಗೆ ಕೃಪಾಛತ್ರವಾಗಿ ನಿನ್ನ ಸತ್‌ಕರ್ಮಯಶೋವಿತಾನಂ
ಆದರ ನೆರಲೊಳು ಬದುಕು ಮಾಡಿ ಬಾಳ್ಗೆ ಸತತಂ ಮನುಜ
ಸಂತಾನಂ !

ಪ್ರತಿಹತಂ ಸರ್ವಾರಿಷ್ಟ ಸಂಕುಲಂ—
ಭಯಾತ್ ಸದಾ ಮಂಗಲಂ !

ತಲೆಯ ಹುಳು

ಅ. ರಾ. ಸೇ., ದಾವಣಗೆರೆ

ತಲೆಯ ಹುಳು, ಹೇನಲ್ಲ—ಸೀರಲ್ಲ—ಕೂದಲಲಿ
ಹೊಕ್ಕ ತಿಗಣೆಯು ಅಲ್ಲ, ಮೆದುಳಿನಲಿ ಇರುವ ಹುಳು
ತಲೆಯ ಹುಳು, ಮಲಗಿದ್ದ ನನ್ನನೆಚ್ಚರಿಸಿತ್ತು;
ತೃಪ್ತಿಯಲಿ ಮೈಮರೆತು ಇನ್ನಾರೂ ಏನನೂ
ಮಾಡರೆಂದೊರಗಿದ್ದೆ
ಎದೆಗೊದ್ದು ಮುಖಕೆ ಕನ್ನಡಿಯ ಹಿಡಿದಿತ್ತು.
ತಂದು ತಟ್ಟೆಯಲಿ ಹೋಳಿಗೆಯ ಮುಂದಿಟ್ಟಾಗ
ದೋಸೆಯನು ತಿನಲು ಹೋಟಲಿಗೆ ಹೋಗಿತ್ತು.
ನಂದಲಾಲನ ಚಿತ್ರವನು ನೋಡುವುದ ಬಿಟ್ಟು
ಅರೆಬೆತ್ತಲೆಯ ನಟಿಯ ಜೊತೆಗೆ ಕುಣಿದಿತ್ತು.
ಮನೆಯ ಸಿಹಿಕಿತ್ತಳೆಯ ಮರೆತು ಜಾಲಿಯ ಮರದ
ಗೀಜಗನ ಗೂಡಿನಲಿ ಹಣಿಕಿ ಹಾಕಿತ್ತು;
ಚೆಂಗುಲಾಬಿಯ ದಳವ ನೋಡಿ ಆನಂದಿಸದೆ
ಗಿಡದ ಮುಳ್ಳಿಗೆ ಕೈಯನಿಟ್ಟು ಒರಲಿತ್ತು.
ರಾಜ್ಯ ಭಂಡಾರವೇ ಕೈಗೆ ವಶವಾದರೂ
ಕೊಂಚ ಲಂಚಕೆ ಕೈಯನೊಡ್ಡಿ ನಕ್ಕಿತ್ತು—
ಇಂದ್ರಿಯಕೆ ಗೋಚರಿಸುವೀ ವಿಶ್ವಮಿಥ್ಯವೆನೆ
ಆ ಮಾತೆ ಮಿಥ್ಯವೆಂದೆನುತ ನಕ್ಕಿತ್ತು—
ಮುಕ್ತಿರಾಹುವೆ ಹಿಂದೆ ಬೆನ್ನಟ್ಟಿ ಬಂದಾಗ
ಶತ್ರುಗಳ ವ್ಯೂಹದಲಿ ಕಾವು ಪಡೆದಿತ್ತು

× × ×

ಬಲದಿಂದ ಎಡಕೆ ಬೀಸಿತ್ತು ಗಾಳಿ,
ಆಗಸದಿ ತೇಲಿತ್ತು ಹಂಜಿ–ಅರಳೆ,
ನೆಲಕೆಲ್ಲ ಹಾಸಿತ್ತು ಹಸಿರ ಕಂಬಳಿ,
ಚಂದ್ರನೂದಿದನು ಕೊಂಬು ಕಹಳೆ.
ಜೀವನದ ಸುಖವ ಕೊಳ್ಳೋ ಅಣ್ಣ ಬಿಟ್ಟ
ಮರೆತು ಬಿಡೊ ಚಿಂತೆಯನು ಕಾಡಿಗಟ್ಟಿ !
ಹುಡಿಮಣ್ಣು ಸೇರುವುದು ಮತ್ತೆ ಹುಡಿಮಣ್ಣು
ನೋಡೊ ಈ ಆಟವನು ತೆರೆದು ಕಣ್ಣು !
‘ಇರುವುತನಕ ಕುಡಿ, ಸೊಗವನನುಭವಿಸು, ಬಾಳು’

ನಾನೇನೋ ಒಪ್ಪಿದೆನು ಈ ಮಾತ, ಆದರೂ, ಒಪ್ಪಲಿಲ್ಲಣ್ಣ
ತಲೆಯ ಹುಳು; ಮುಖಕುಗಿದು ತಿಪರಾಕಿ ಬಿಗಿದು
ಕುತ್ತಿಗೆಯ ಹಿಡಿದಲುಗಿ “ಮೂಢ ತೆರೆ ತೆರೆ ಕಣ್ಣ
ಕುಡಿ, ಕುತ್ತಿಗೆಯ ಮಟ್ಟ, ಬಾಳಾಗಲೋ ಸುಣ್ಣ
ಬಳಿಕ ಕಣ್ಮುಚ್ಚಿ ನರಕಕೆ ಸಾರು” ಎಂದಿತಣ್ಣ.
ಸೈತಾನಗೆನ್ನ ನಾ ಮಾರಿಕೊಂಡವನಲ್ಲ;
ಬೇಕಿಲ್ಲ ನನಗೆ ಸುಖ, ನಿಮ್ಮ ಸುಖ ಕೇಳು ಸಖ
ಏಕೆ ಆನಂದ ?
ತಲೆಯ ಹುಳು ಕಡಿಯುತಿರೆ
‘Paradise were wilderness enow’

ಅಜೀಜಾ

(ಐತಿಹಾಸಿಕ ಲಘುಕಥೆ)

ಶ್ರೀ. ಅನಂತರಾವ ಕೆ. ಭೋಸಗೆ, ಸೇಡಬಾಳ

ಸ್ವಾರ್ಥ, ಕರುಳಿನ ಮೇಲೆ ಬಿದ್ದ ಆಘಾತ, ಇವು ಮನುಷ್ಯನಿಂದ ಎಂತೆಂತಹ ದುರಂತ ಕಾರ್ಯಗಳನ್ನೂ ಮಾಡಿಸಬಲ್ಲವು. ಮೊದಲು ಫಿರಂಗಿಗಳಿಗೆ ವಶಳಾಗಿ ಹಿಂದುಗಳನ್ನು ಕೊಲೆ ಮಾಡಲಿದ್ದ ಅಜೀಜಾ, ಫಿರಂಗಿಗಳ ರುಂಡಗಳನ್ನು ಚೆಂಡಾಡಿದಳೇಕೆ?

ಜೂನ್ ತಿಂಗಳು—ಸುಡುಬೇಸಗೆಯ ದಿನಗಳು. ಕಾನಪುರದಲ್ಲಿ ಆ ಬೇಸಗೆ ಎಂದಿಗಿಂತಲೂ ವಿಪರೀತವಾಗಿಯೆ ಇತ್ತು. ಎಲ್ಲಿಲ್ಲಿಯೂ ಬಿರುಬಿಸಿಲಿನ ತಾಪ.

ಆ ತಾಪವನ್ನು ತಡೆಯಲಾರದೆ ಕಾನಪುರ ನಗರವು ನಿಟ್ಟುಸಿರನ್ನು ಬಿಡುತ್ತಲಿದೆ. ಸೈನಿಕರ ಬೀಡಾರದಲ್ಲಿಯ ವಿಶಾಲವಾದ ಬಂಗ್ಲೆಯ ಕೋಣೆಯೊಂದರಲ್ಲಿ, ಜನರಲ್ ವೀಲರ್ ಸಾಹೇಬನು ಮಂಚದ ಮೇಲೆ ಮಲಗಿಕೊಂಡಿದ್ದಾನೆ. ದೀರ್ಘವಾದ ಉಸಿರು ಬಿಡುತ್ತ ಮಗ್ಗುಲನ್ನು ಹೊರಳಿಸಿದನು. ಕ್ಷಣಕಾಲ ಕಣ್ಣು ಮುಚ್ಚಿ ನಿದ್ದೆ ಬರುವುದೇನೋ ನೋಡಿದನು; ಮತ್ತೆ ಕಣ್ತೆರೆದನು. ಬಳಿಯಲ್ಲಿದ್ದ ಕೈವಸ್ತ್ರದಿಂದ ಕಿರುಬೆವರು ಮೂಡಿದ ಮೈಯನ್ನೊಮ್ಮೆ ಒರಸಿಕೊಂಡನು. ಏನು ಮಾಡಿದರೂ ದೇಹಕ್ಕೆ ಸೊಗಸಿಲ್ಲ, ಮನಸ್ಸಿಗೆ ಶಾಂತಿಯಿಲ್ಲ; ತಲೆತುಂಬ ಯೋಚನೆ; ಆಲೋಚನೆ!

ಬಂಗಲೆಯ ಹೊರವಲಯದಲ್ಲಿ ಕಟ್ಟಿದ ಸಾಹೇಬರ ನಾಯಿ ಒಮ್ಮೆಲೇ 'ಬೊಕ್‌ಃ' ಎಂದಿತು. ಅದರ ಕೊರಳ ಸರಪಣಿಯೂ ಮೃದುವಾಗಿ ಬಾರಿಸಿತು. ಹೊರಚಾವಡಿಯಲ್ಲಿದ್ದ ಕಾವಲುಗಾರ ಚಟ್ಟನೆ ಎದ್ದು, ಹೊರಗೆ ಬಂದು ನೋಡಿದನು. ನಡುಹರೆಯದ ಹೆಂಗುಸೊಬ್ಬಳು ಕಂಪೌಂಡಿನ ಕಿರುಬಾಗಿಲನ್ನು ದಾಟಿ ಒಳಗೆ ಬರುತ್ತಿದ್ದಳು.

"ಯಾರು ನೀನು? ಒಳಗೆಲ್ಲಿ ಬರುತ್ತಿರುವೆ?" ಕಾವಲುಗಾರನು ದರ್ಪದಿಂದ ಪ್ರಶ್ನೆ ಮಾಡಿದನು.

"ಒಳಗೆ ಸಾಹೇಬರಿಲ್ಲವೆ?" ಸಹಜವಾಗಿಯೇ ಕೇಳಿದಳವಳು.

"ಇದ್ದಾರೆ. ಆದರೆ ಈಗ ಯಾರೂ ಒಳಗೆ ಹೋಗಲಾರರು. ಮೇಲಾಗಿ ನಿನ್ನಂತಹ ಹೆಂಗುಸಿನ ಕೆಲಸವೇನು ಅವರ ಬಳಿಯಲ್ಲಿ?"

"ಹುಂಃ"

ಎಂದು ಹುಬ್ಬು ಮೇಲೇರಿಸುತ್ತ, ಪರಿಹಾಸದ ಸ್ವರದಲ್ಲಿ ಆಕೆ ನಕ್ಕಳು; ಬಿರಬಿರನೆ ಮುಂದೆ ನಡೆದಳು.

ಕಾವಲುಗಾರ ಕುಪಿತನಾಗಿದ್ದರೂ ಹುಚ್ಚನಂತಾದ. ಅವಳನ್ನು ತಡೆಯುವುದಾಗಲಿಲ್ಲ. ಧಾವಿಸಿ ಹೋಗಿ ಅವಳನ್ನು ಹಿಂಬಾಲಿಸಬೇಕಾದರೆ ಸಾಕುಬೇಕಾಯಿತವನಿಗೆ.

ಜನರಲ್ ವೀಲರ್ ಈಗ ಎದ್ದು ಕುಳಿತಿದ್ದನು. ಒಬ್ಬರ ಹಿಂದೊಬ್ಬರು ಸಾಹೇಬನ ಕೋಣೆಯನ್ನು ಪ್ರವೇಶಿಸಿದರು. ಬಂದವಳನ್ನು ನಗೆಮೊಗದಿಂದ ಸ್ವಾಗತಿಸುತ್ತ ಹರಕುಮುರುಕು ಹಿಂದಿಯಲ್ಲಿ "ಇತ್ತ ಬಾ. ಕುಳಿತುಕೊಳ್ಳು." ಎಂದು ನುಡಿದು, ಕಾವಲುಗಾರನಿಗೆ ಹೊರಗೆ ಹೋಗುವಂತೆ ಕಣ್ಣನ್ನೆ ಮಾಡಿದನು, ವೀಲರ್ ಸಾಹೇಬ. ಕಾವಲುಗಾರ ಹೊರಟುಹೋದ ಮೇಲೆ ವೀಲರ್ ಕೇಳಿದ:

"ಹೇಳಿದ ಕೆಲಸ ಏನಾಯಿತು?"

"ಈಗ ನಾಲ್ಕು ದಿನಗಳಿಂದ ಅದೇ ಕೆಲಸದಲ್ಲಿಯೆ ಇದ್ದೇನೆ. ನೀವು ಹೇಳಿದಂತೆ, ಈ ಬರಾಕಿನಲ್ಲಿಯ ಎಲ್ಲ ಹಿಂದೀ ಸೈನಿಕರಿಗೂ ಹಾಲು ಪೂರಯಿಸುವ ಗೌಳಿಗರನ್ನು ಭೆಟ್ಟಿಯಾಗಿ ಬಂದಿದ್ದೇನೆ."

"ಅವರು ಕೆಲಸಮಾಡಲಿಕ್ಕೆ ಒಪ್ಪಿರುವರಲ್ಲವೇ ಹಾಗಾದರೆ?" ಕುತೂಹಲವುಳ್ಳವನಾಗಿ ಕೇಳಿದನು ವೀಲರ್:

"ಒಪ್ಪಿಸುವ ಕೆಲಸ ನನ್ನದು ಸಾಹೇಬರೇ! ಆ .. ದ....ರೆ?"

"ಆದರೆ ಮತ್ತೇನು? ಹಾಲಿನಲ್ಲಿ ಬೆರೆಸಬೇಕಾದುದನ್ನು ಈಗಲೇ ನಿನ್ನ ಕಡೆಗೆ ಕೊಡುತ್ತೇನೆ!"

ಮತ್ತೂ ಮಾತನ್ನು ಮುಂದುವರಿಸಿದನು ವೀಲರ್:

"ಇಲ್ಲಿ ನೋಡು, ಮತ್ತೊಂದು ಮಾತು—ಈ ಕೆಲಸ ನಾಳೆಯೇ ಆಗಬೇಕು. ನಾಳೆ ನೀವು ಹಾಲನ್ನು ಎಲ್ಲ ಸೈನಿಕರಿಗೂ ಮುಟ್ಟಿಸುವಂತೆ ಮಾಡಬೇಕು. ಅವರಿಂದ ದುಡ್ಡಿನ ಅಪೇಕ್ಷೆ ಮಾಡಬೇಡಿರಿ! ಆ ಹಾಲಿನ ಎಲ್ಲ ಬೆಲೆಯನ್ನೂ ನಾವು ಕೊಡುತ್ತೇವೆ."

ವೀಲರನು ಉತ್ತರದ ದಾರಿಯನ್ನು ಕಾಯುತ್ತ ನಿಂತರೂ, ಆವನಿಗೆ ಅವಳಿಂದ ಬೇಗನೆ ಉತ್ತರವೇನೂ ದೊರೆಯಲಿಲ್ಲ.

"ಯಾಕೆ ಅಜೀಜಾ?"

"ಜನರಲ್ ಸಾಹೇಬ್!"

"ಕೆಲಸವನ್ನು ಬಹಳ ಜಾಗರೂಕಳಾಗಿ ಮಾಡಬೇಕು"

ಜಯ

" ಅದರ ಅರಿವು ನನಗಿದೆ ಸಾಹೇಬರೇ! "

" ಅದು ನಾಳೆಯೇ ಆಗಬೇಕು. "

" ಇಷ್ಟು ತೀವ್ರ ? "

" ಹೌದು. ಶಕ್ಯವಿದ್ದಷ್ಟು ತೀವ್ರ. ನಾವು ಇಲ್ಲಿಂದ ಬೇರೆಯ ಕಡೆಗೆ ಹೋಗುವವರಿದ್ದೇವೆ. ಸಾಧ್ಯವಾದರೆ, ನಾಳೆಯೇ! "

" ಹಾಗಾದರೆ, ಆ ನಾಟಕವನ್ನು ನೋಡಿಯೇ ಹೋಗಬೇಕೆನ್ನುತ್ತೀರಾ ? "

" ಹಾಗೇನಿಲ್ಲ. "

ಸಾಹೇಬರ ಮುಖದಲ್ಲಿ ಮಂದಹಾಸ ಮೂಡಿತು. ಅದನ್ನು ತೋರಗೊಡದೆ, ಅಜೀಜಾಳಿಗೆ ಅವರು ಆಜ್ಞಾಪಿಸಿದರು :

" ಕೆಲಸ ಮಾಡುವವರೆಲ್ಲ ನಿನ್ನ ವಿಶ್ವಾಸದವರಿರುವರಲ್ಲವೇ ಅಜೀಜಾ ? ಬೇರೆ ಯಾವ ಒಂದು ಹಿಂದೂ ಕೂಸಿಗೂ ಈ ಸುದ್ದಿ ಹತ್ತದಂತೆ ಎಚ್ಚರಪಡಬೇಕು! "

" ಸಾಹೇಬರೇ, ಹಾಲು ಮಾರಿ ಹೊಟ್ಟೆತುಂಬಿಕೊಳ್ಳುವ ಆ ಜನರು ತುಂಬ ವಿಶ್ವಾಸಿಕರು; ಅದರಂತೆಯೆ ಅತಿ ಬಡವರೂ ಇದ್ದಾರೆ. ಇಂತಹ ಕೆಲಸಕ್ಕೆ ಕೈಹಾಕುವರೆಂದಮೇಲೆ ಅವರಿಗೆ ಏನಾದರೂ ...."

" ಏನು, ಅವರಿಗೆ ಹಣ ಕೊಡಬೇಕಾಗುವುದೋ ? "

" ಇದನ್ನು ನೀವೇ ವಿಚಾರಿಸಿರಿ! "

ಅಜೀಜಾ ಸೌಮ್ಯವಾಗಿಯೇ ಸೂಚಿಸಿದಳು. ವೀಲರನೂ ಕ್ಷಣಕಾಲ ಆಲೋಚಿಸಿ, ಅವಳನ್ನು ಬೇರೊಂದು ಕೋಣೆಯೆಡೆಗೆ ಕರೆದೊಯ್ದನು. ಒಂದು ಅರೆಗಳಿಗೆ ಕಳೆದಿರಬೇಕು. ಒಳಗಿನಿಂದ ಬಂದ ಅಜೀಜಾ ಗಂಭೀರಳಾಗಿಯೇ ಹೊರಗೆ ನಡೆದಳು. ತಲೆಯ ಮೇಲೆ ಸಣ್ಣ ಬುಟ್ಟಿ ಇತ್ತು. ಬಾಗಿಲಲ್ಲಿದ್ದ ಕಾವಲುಗಾರ ಅವಳೆಡೆಗೆ ತೀಕ್ಷ್ಣ ನೋಟದಿಂದ ನೋಡಿದನು. ಅವಳು ಹುಸಿನಗೆ ನಕ್ಕು ಮುಂದಾದಳು. ಈ ಬಾರಿ ಸಾಹೇಬರ ನಾಯಿಯೂ ಕಣ್ಣು ತೆರೆದು ಪಿಳಿಪಿಳಿ ನೋಡಿತೇ ಹೊರತು ಬಾಯಿ ಬಿಡಲಿಲ್ಲ. ಅಜೀಜಾ ಮುಂದಾಲೋಚನೆಗಳನ್ನು ಮಾಡುತ್ತ ವೇಗವಾಗಿ ತನ್ನ ಮನೆಯ ಕಡೆಗೆ ಸಾಗಿದಳು.

\+ \+ \+ \+

ಕ್ರಿ. ಶ ೧೮೫೭ ರ ಸ್ವಾತಂತ್ರ್ಯ ಸಮರದ ಸಂದರ್ಭ.

ಅದೊಂದು ಕ್ರಾಂತಿಯ ಕಾಲ. ಭಾರತದ ಮೂಲೆಲ್ಲ-ಮೂಲೆಗಳಲ್ಲಿಯೂ ಕ್ರಾಂತಿ ಕಿಡಿಯಾಗಿ ಹಾರುತ್ತಲಿದೆ; ಜ್ವಾಲೆಯಾಗಿ ಉರಿಯುತ್ತಲಿದೆ. ಫಿರಂಗಿ ಸೇನಾಧಿಕಾರಿಗಳ ಆಜ್ಞೆಗೆ ತಲೆಬಾಗಿ, ಸಾಯಲೂ ಸಿದ್ಧರಿದ್ದ ಹಿಂದೀಸೈನಿಕರು, ಇಂದು ಅವರಿಗೇ ಕತ್ತಿ ಹಿರಿದು ನಿಂತಿದ್ದಾರೆ; ದೇಶವನ್ನು ಬಿಟ್ಟುಹೋಗಿರೆಂದು ಹೇಳುತ್ತಿದ್ದಾರೆ. ಸೈನಿಕರು ಅಷ್ಟೇ ಏಕೆ ? ರಾಜರು-ಪ್ರಜೆಗಳು, ಹಿಂದುಗಳು-ಮುಸಲ್ಮಾನರು, ಸ್ತ್ರೀಯರು-ಪುರುಷರು, —ಎಲ್ಲರೂ ಒಟ್ಟಾಗಿಯೇ ನಾಡಿನ ಸ್ವಾತಂತ್ರ್ಯಕ್ಕಾಗಿ ಕತ್ತಿಹಿರಿದು ನಿಂತಿದ್ದಾರೆ. ಪ್ರತಿಯೊಬ್ಬ ಭಾರತೀಯನಲ್ಲಿಯೂ ನವಜಾಗೃತಿ ನಿರ್ಮಾಣವಾಗಿದೆ; ಸ್ವಾತಂತ್ರ್ಯದ ದಾಹ ಪ್ರಬಲಗೊಂಡಿದೆ. ಇದರ ಫಲವಾಗಿ ನಾಡೇ ಒಂದು ಸಮರ ಭೂಮಿಯಾಗಿದೆ. ಕಂಪನಿಸರಕಾರವು ಕ್ರಾಂತಿಕಾರರೊಡನೆ ಹೋರಾಡಿ ಹೌಹಾರಿಹೋಗಿದೆ. ಆದರೆ ಅದೇನೂ ನಿರಾಶೆಗೊಂಡಿಲ್ಲ! 'ಏನೇ ಆದರೂ ಭಾರತವನ್ನು ಬಿಡಲಾರೆವು' ಎಂಬ ಮಾತನ್ನು ಗಟ್ಟಿಯಾಗಿ ಹಿಡಿದುಕೊಂಡು, ಎಲ್ಲ ಪ್ರಯತ್ನಗಳಿಗಾಗಿ ಕಂಪನಿಯ ಜನ ಸಿದ್ಧರಾಗಿಯೇ ಇದ್ದಾರೆ ಯಾವುದಕ್ಕೂ ಎಂತಹುದಕ್ಕೂ ಹೇಸಬಾರದೆಂಬುದೇ ಆ ಇಂಗ್ಲಿಷರ ರಾಜಕೀಯ ತತ್ತ್ವ.

ಈ ತತ್ತ್ವಕ್ಕನುಗುಣವಾಗಿಯೇ ಕಾನಪುರದ ಸೇನಾಧಿಕಾರಿಯಾಗಿದ್ದ ಜನರಲ್ ವೀಲರ್‌ಸಾಹೇಬನು ಹಂಚಿಕೆಯೊಂದನ್ನು ಹೂಡಿದ್ದಾನೆ. ಕ್ರಾಂತಿಯ ಹೊಗೆಯಾಡುತ್ತಿದ್ದ ಕಾನಪುರದಲ್ಲಿಯೂ ಉರಿಯೇಳದೆ ಇರಲಾರದು —ಎಂಬುದನ್ನು ತಿಳಿದುಕೊಂಡಿದ್ದ ಅವನು, ಬೇರೆ-ಬೇರೆ ಯೋಜನೆಗಳನ್ನೇ ಮಾಡಿದ್ದಾನೆ. ತನಗನುಕೂಲವಾದ ಸೈನ್ಯವನ್ನು ವಿಭಾಗಿಸಿ, ಅದು ಒಡೆದು ಹೋಗದಂತೆ ತಕ್ಕ ವ್ಯವಸ್ಥೆಯನ್ನು ಮಾಡಿದ್ದಾನೆ. ವಿರೋಧಮಾಡಲು ಹವಣಿಸುತ್ತಿದ್ದ ಹಿಂದೀ ಸೈನಿಕರನ್ನು ನಾಶಗೊಳಿಸಲು ಹೊಸದೊಂದು ಉಪಾಯವನ್ನೇ ಹುಡುಕಿದ್ದಾನೆ. ಅದೊಂದು ರಾಕ್ಷಸೀ ಕಾರಸ್ಥಾನ.

ಕೆಲಸದ ಭಾರವನ್ನು ಹೊತ್ತ ಅಜೀಜಾ, ವಿಚಾರದ ಚಕ್ರಗಳಲ್ಲಿ ಸುತ್ತಾಡುತ್ತ ಬೀದಿ-ಬೀದಿಗಳನ್ನು ದಾಟುತ್ತ ತನ್ನ ಮನೆಯ ಅಂಗಳದಲ್ಲಿ ಕಾಲಿಟ್ಟಳು. ಮನೆಯಲ್ಲಿ ಅಳುವುದನ್ನು ಕೇಳಿ ಗಾಬರಿಗೊಂಡಳು. ಹಾಗೆಯೆ ಸಾವರಿಸಿಕೊಂಡು ಮನೆಯ ಮೆಟ್ಟಲುಗಳನ್ನೇರಿದಳು. ಒಳಗೆ ನರಳಾಟ—ಧಸ್ಸೆಂದಿತು ಅವಳ ಎದೆ. ಹೋಗಿ ನೋಡುತ್ತಾಳೆ. ತನ್ನ ತಂಗಿ ಹಾಸಿಗೆಯಲ್ಲಿ ಬಿದ್ದು ಹೊರಳಾಡುತ್ತ, ಒರಲುತ್ತಿದ್ದಾಳೆ. ಮುಪ್ಪಿನ ತಾಯಿ ಬಳಿಯಲ್ಲಿ ಕುಳಿತು ಒಂದೇ ಸವನೆ ರೋದಿಸುತ್ತಿದ್ದಾಳೆ. ಅಜೀಜಾ ಒಮ್ಮೆಲೇ ಪಾತಾಳಕ್ಕೇ ಇಳಿದು ಹೋದಳು. ತಂಗಿಯ ಹಾಸಿಗೆಯ ಬದಿಯಲ್ಲಿ ಕುಸಿದು ಬಿದ್ದು ಕೇಳಿದಳು :

" ಕಾಶಿಯಿಂದ ಯಾವಾಗ ಬಂದೆ ತಂಗೀ ? ಹೀಗೇಕೆ ಒರಲುತ್ತಿರುವೆ ? ಅವ್ವಾ ಏನಾಗಿದೆ ತಂಗಿಗೆ ? ನನ್ನ ತಂಗಿಗೆ!........"

" ಆಗುವುದೆಲ್ಲ ಆಗಿಹೋಗಿದೆ ಮಗಳೇ! ಇಲ್ಲಿ ನೋಡು ನಿನ್ನ ತಂಗಿಯ ಅವಸ್ಥೆಯನ್ನು !...."

ಬೋರಾಡಿ ಅಳುತ್ತಿರುವಂತೆಯೇ ಅಜೀಜಳ ತಾಯಿ ಮಗಳ ಮೇಲಿನ ಹೊದಿಕೆಯನ್ನು ಬದಿಗೆ ಸರಿಸಿದಳು ನೋಡಿದ ಅಜೀಜಳ ಕಣ್ಣಿಗೆ ಕತ್ತಲುಗವಿಯಿತು. ರಕ್ತದ ಮಡುವಿನಲ್ಲಿ ಕಡಿದ ಕೈಗಳೆರಡೂ ಹೊರಳಾಡುತ್ತಿದ್ದುವು.

" ಅಯ್ಯೋ! ಇದೇನು ತಂಗೀ ? ದೇವರೇ, ಇದೇನು ಮಾಡಿಬಿಟ್ಟಿರುವೆ ? "

ಕರುಳು ಕತ್ತರಿಸುವಂತೆ ದುಃಖ ಉಕ್ಕಿಬಂತು ಅಜೀಜಳಿಗೆ.

" ದೇವರೇನು ಮಾಡುತ್ತಾನವ್ವಾ ಮನುಷ್ಯಪಿಶಾಚಿಗಳು ಮಾಡಿದರು. " ಅಜೀಜಳ ತಾಯಿ ಅಳುತ್ತಲೇ ಹೇಳಿದಳು.

"ಆದದ್ದಾದರೂ ಏನು, ತಂಗೀ? ನೀನೇ ಹೇಳು. ನನಗೆ ಯಾವುದೂ ತಿಳಿಯದಾಗಿದೆ."

"ಏನು ಹೇಳಲಕ್ಕಾ! ನೀಚ ಫಿರಂಗಿಯರು ಮಾಡಿದ ಕಾರ್ಯ ಇದು. ಕ್ರಾಂತಿಕಾರರಿಗೆ ನಾವು ಸಹಾಯ ಮಾಡಿದೆವೆಂಬ ಸಂಶಯದಿಂದ ಆ ಪಿಶಾಚಿಗಳು ನಮ್ಮನ್ನು ಈ ಪರಿ ಮಾಡಿದರು." ನೋವನ್ನು ನುಂಗಿ ವೇದನಾಯುಕ್ತ ಕಂಠದಿಂದ ಒರಲುತ್ತ ಹೇಳಿದಳು ಅವಳು.

"ಯಾರು? ಫಿರಂಗಿ ಅಧಿಕಾರಿಗಳು? ಎಂಥ ಪಶುಗಳವ್ವ! ಆ ಕಟುಕರಿಗೆ ಸ್ವಲ್ಪಾದರೂ ದಯಾ ಬರಬಾರದೇನೆ ತಂಗೀ!"

"ಎಲ್ಲಿಯ ದಯಾ ಅಕ್ಕಾ ಆ ಪಿಶಾಚಿಗಳಿಗೆ! ನೂರಾರು ಹಿಂದುಗಳನ್ನು ಒಂದು ಕೋಣೆಯಲ್ಲಿ ಹಾಕಿ ಬೆಂಕಿಹಚ್ಚಿದರು. ನಿದ್ದೆಯಲ್ಲಿದ್ದವರನ್ನು ಗುಂಡುಹಾಕಿ ಕೊಂದರು. ಖಡ್ಗದಿಂದ ಕೈ-ಕಾಲು ಕತ್ತರಿಸಿದರು. ಒಂದೋ, ಎರಡೋ, ಏನು ಹೇಳಲಿ ಅಕ್ಕಾ ಅವರು ಮಾಡಿದ ದುರಾಚಾರವನ್ನ."

ತಡೆ-ತಡೆದು ಉಸಿರೆಳೆದುಕೊಳ್ಳುತ್ತ, ನೋವಿನ ಬಾಧೆಯಿಂದ ನರಳಾಡುತ್ತ, ಅಜೀಜಳ ತಂಗಿ ಹಾಸಿಗೆಯಲ್ಲಿ ಹೊರಳಾಡುತ್ತಿದ್ದಳು. ಅವಳ ಚಿತ್ರ, ಅವಳ ಒಂದೊಂದು ನುಡಿ ಅಜೀಜಳ ಹೃದಯವನ್ನು ಕರಗಸದಿಂದ ಕೊರೆಯುತ್ತಿದ್ದುವು. ಕಾದ ಕುಲುಮೆಯಲ್ಲಿ ಸಿಕ್ಕ ಕೀಡೆಯಂತೆ ಅವಳು ಬೆಂದಳು—ನೊಂದಳು—ಗಳ-ಗಳನೆ ಕಣ್ಣೀರಿಟ್ಟು ಅತ್ತಳು. ಅವಳ ಕೆಂಪಡರಿದ ಕಣ್ಣುಗಳ ಎದುರು, ತಾನು ವೀಲರನ ಕಡೆಯಿಂದ ತಂದ ಹಣ್ಣು ಬುಟ್ಟಿ ಕಂಡಿತು. ಅದು ಕಾಯ್ದ ಕಬ್ಬಿಣದ ಅಲಗಾಗಿ ಹೃದಯವನ್ನು ಕೊರೆಯಿತು; ಮನಸ್ಸನ್ನು ಮುರಿಯಿತು. ಅವಳಿಗೆ ತಾನು ಮಾಡಬೇಕಾದ, ಮಾಡಿಸಬೇಕಾದ ಕಾರ್ಯದ ಸ್ಮರಣೆಯೊಮ್ಮೆ ಸುಳಿದುಹೋಯಿತು. ಲಕ್ಷಾವಧಿ ಹಣ ಬಾಗಿಲಿಗೆ ಬಂದು ನಿಂತಿದೆ. ಬಡತನದ ಭೂತದ ದವಡೆಯೊಳಗಿಂದ ಪಾರಾಗುವ ಸುಸಂಧಿ. ತನ್ನೊಬ್ಬಳದೇ ಅಲ್ಲ; ತನ್ನಂತೆಯೆ ಬೇರೆಯ ಹತ್ತಿಪ್ಪತ್ತು ಶ್ರಮಜೀವಿಗಳ ಭಾಗ್ಯ ಉದಯವಾಗುವ ಮಂಗಲ ಸಮಯ. ನಾಳೆಯೇ ಆಗಬೇಕು!

"ಶಕ್ಯವಿದ್ದಷ್ಟು ಶೀವ್ರ ನಾವು ಇಲ್ಲಿಂದ ಬೇರೆ ಕಡೆಗೆ ಹೋಗುವವರಿದ್ದೇವೆ. ಸಾಧ್ಯವಾದರೆ ನಾಳೆಯೇ!" ಎಂದ ವೀಲರ್‌ಸಾಹೇಬನ ಮಾತು ಅಜೀಜಳ ಮನದಲ್ಲಿ ಚಕ್ರಾಕಾರವಾಗಿ ಸುತ್ತಿತು. ಬತ್ತಿತು ಅವಳ ಹೃದಯ. ನಾಳೆಯೇ ಹಿಂದು ಸಿಪಾಯಿಗಳ ಕೊನೆ! ನಾಳೆಯೇ ಸಾಹೇಬರ ಪ್ರಯಾಣ!

ಒಂದೆಡೆಗೆ ತಂಗಿ, ಕತ್ತರಿಸಿದ ಕೈಗಳನ್ನು ನೆಲಕ್ಕೆ ಚೆಲ್ಲಿ, ವೇದನಾ ಜ್ವಾಲೆಯಲ್ಲಿ ಉರಿಯುವ ಚಿತ್ರ; ಇನ್ನೊಂದೆಡೆಗೆ ಹೇರಳವಾದ ಹಣವನ್ನು ಗಳಿಸಲು ಮಾಡುವ ಕಾರ್ಯದ ಸಾಧನದ ಚಿತ್ರ, ಎರಡೂ ಕಡೆಗೂ ದೃಷ್ಟಿ ಹರಿದಾಡಿತು. ಮನಸ್ಸು ಓಡಾಡಿತು. ಕಡೆಗೆ ತಂಗಿಯ ಚಿತ್ರ ಅವರ ಕರುಳನ್ನು ಹಿಂಡಿತು. ಹೃದಯಗರ್ಭದಲ್ಲಿ ಕುದಿಯುತ್ತಿದ್ದ ಶೋಕಾಗ್ನಿ ಜ್ವಾಲಾಮುಖಿಯಂತೆ ಮೇಲೆದ್ದಿತು. ವಿಚಾರಚಕ್ರದಲ್ಲಿ ಭ್ರಮಿಸುತ್ತಿದ್ದ ಮನಸ್ಸು ಒಂದು ನಿರ್ಣಯದ ನಿಟ್ಟಿಗೆ ಬಂದು ನಿಂತಿತು. ಎದ್ದಳು ಅಜೀಜಾ—ಒಮ್ಮೆಲೇ ಮಾರಿಯಮ್ಮನಂತೆ ಮನೆಯಿಂದ ಎದ್ದು ಹೊರಬಿದ್ದಳು. ಎಲ್ಲಿಯೋ ಮಾಯವಾದಳು.

+ + + +

ಈಗ ವೀಲರ್‌ಸಾಹೇಬನಿಗೂ ನೆಮ್ಮದಿಯಿರಲಿಲ್ಲ. ಒಮ್ಮೆ ಮನಸ್ಸು ಅಜೀಜಾಳಿಗೆ ಒಪ್ಪಿಸಿಕೊಟ್ಟ ಕೆಲಸವನ್ನು ನೆನೆಯುವುದು. ಅದರ ಪರಿಣಾಮವನ್ನು ಒಗೆಗಣ್ಣಿನೆದುರಿಗೆ ಚಿತ್ರಿಸುವುದು. ಸಾವಿರಾರು ಹಿಂದೀ ಸಿಪಾಯಿಗಳು ತಮ್ಮ ತಮ್ಮ ಬರಾಕುಗಳಲ್ಲಿ ಹಾಲು ಕುಡಿದು ಸೆಟೆದುಬಿದ್ದ ಚಿತ್ರ, ಏನು ವಿಚಿತ್ರ! ತನ್ನ ಜಾಣತನದ ಕಾರ್ಯಕ್ಕಾಗಿ ಹೆಮ್ಮೆಪಡುವರವರು. ರಕ್ತವರ್ಣದ ಮುಖದಲ್ಲಿ ಅಭಿಮಾನದ ಮಿಂಚು ಮೂಡುವುದು. "ಎಂಥ ಭಯಂಕರ ಹೆಂಗುಸು ಅಜೀಜಾ!" ಎನ್ನುವ ಉದ್ಗಾರ ಸಾಹೇಬನಿಗರಿಯದಂತೆಯೇ ಬಾಯಿಂದ ಹೊರಟಿತು. ಮರುಕ್ಷಣದಲ್ಲಿಯೇ ಮತ್ತೊಂದು ಸಂಗತಿ ಅವರನ್ನು ತುಂಬ ಕಳವಳಕ್ಕೀಡು ಮಾಡಿತು. ಒಂದು ಗಂಟೆಯ ಹಿಂದೆ ದಾದಿ ಹೇಳಿದ ಮಾತು ಅವರನ್ನು ಚಿಂತೆಯ ಮಡುವಿನಲ್ಲಿ ನೂಕಿತು. 'ಪೇಟೆಯಲ್ಲಿ ಸಭೆ ಕೂಡಿತ್ತು, ನಾಳೆ ಇಲ್ಲಿಯೂ ಕ್ರಾಂತಿ ಆರಂಭವಾಗುವಂತೆ ಕಾಣುತ್ತದೆ. ನೀವೆಲ್ಲರೂ ಕೂಡಲೇ ಇಲ್ಲಿಂದ ಬೇರೆ ಕಡೆಗೆ ಹೊರಡಿರಿ.' ಈ ಮಾತುಗಳು ವೀಲರನ ಮರ್ಮಸ್ಥಳವನ್ನು ಮೇಲಿಂದ ಮೇಲೆ ಗಾಸಿಗೊಳಿಸುತ್ತಿದ್ದುವು. ಸಾಹೇಬನ ಒಗೆಗಣ್ಣಿನೆದುರಿಗೆ ತನ್ನ ಮಡದಿ-ಮಕ್ಕಳ ರೂಪ ಬಂದು ನಿಂತಿತು. ತಳಮಳವುಂಟಾಯಿತು ಹೃದಯದಲ್ಲಿ; ನೀರಾಡಿದುವು ಕಣ್ಣುಗಳಲ್ಲಿ ಹೊರಗೆ ನೋಡಿದನು ಸಾಹೇಬ. ಸುತ್ತಲೆಲ್ಲ ಕತ್ತಲೆ ಕವಿಯುತ್ತಲಿತ್ತು. ಹೋಗಿ ಮಂಚದ ಮೇಲೆ ಕುಸಿದು ಬಿದ್ದನು. ಮತ್ತೆ ಗಡಬಡಿಸಿ ಎದ್ದನು ಹೊರ ಬಾಗಿಲೆಡೆಗೆ ಬಂದು ಎವೆಯಿಕ್ಕದೆ ಬೀದಿಯೆಡೆಗೆ ನೋಡತೊಡಗಿದನು.

ಕಾದ ತವೆಯಲ್ಲಿಯ ಹುರಿಗಾಳಿನಂತೆ ಮನಸ್ಸು ಒಂದೇ ಸವನೆ ಸುಡುತ್ತಲಿದೆ. ಒಂದೊಂದು ಕ್ಷಣ ಒಂದೊಂದು ಯುಗದಂತೆ ಸರಿಯುತ್ತಿದೆ. ಸಾಹೇಬನಿಗೆ ನೆಟ್ಟ ನೋಟದಿಂದ ಆಗಾಗ ದಾರಿಯೆಡೆಗೆ ನೋಡುತ್ತಿದ್ದಾನೆ. ಯಾರದೋ ಆಗಮನಕ್ಕಾಗಿ ತುಂಬ ಕಾತರಿಸಿ ನಿಂತಿದ್ದಾನೆ.

ಕೆಲವು ಸಮಯ ಹ್ಯಾಗೋ ಜಾರಿತು. ಆ ಕಾರ್ಗತ್ತಲೆಯೂ ಬಂಗಲೆಯ ಎದುರಿಗೆ ಪಂಜಿನ ಬೆಳಕು ಕಾಣಿಸಿತು. ಸಾಹೇಬನ ಮುಖದಲ್ಲಿ ಆಶೆಯ ಗೆರೆ ಮೂಡಿತು. ಹರ್ಷಚಿತ್ತನಾಗಿ ಓಡುತ್ತ ಗೇಟಿನ ಬಳಿಗೆ ಬಂದನು. ಬರುತ್ತಿರುವವರನ್ನು ಭಕ್ತಿಯಿಂದ ಸ್ವಾಗತಿಸಿ ಮನೆಯೊಳಗೆ ಕರೆತಂದನು. ಪಂಜು ಹಿಡಿದುಕೊಂಡು ಬಂದ ಆಳು ಹೊರಗೆಯೇ ಉಳಿದನು.

"ಮೇಲೆ ಕುಳಿತುಕೊಳ್ಳಿರಿ ಪೀರ್ಜೀ, ತಮ್ಮ ದಾರಿಯನ್ನೇ ಕಾಯುತ್ತಲಿದ್ದೆ." ಆಸನವನ್ನು ತೋರಿಸುತ್ತ ಪ್ರಾರ್ಥಿಸಿದನು ವೀಲರ್.

“ಯಾಕೆ ಜನರಲ್ ಸಾಹೇಬ್, ಬಹಳ ಗಾಬರಿಯಾದಂತೆ ತೋರುತ್ತದೆ?”

“ಪೇಶ್ವೇಜೀ, ನೀವಿಂದು ನಮ್ಮ ಪಾಲಿನ ಏಸೂ! ನಮ್ಮನ್ನು ಉಳಿಸುವ ಭಾರ ನಿಮ್ಮದು!”

ದೀನವಾಣಿಯಿಂದ ಅಂಗಲಾಚಿ ಬೇಡಿಕೊಂಡನು ಆ ಸೇನಾಧಿಕಾರಿ. ಕಣ್ಣುಗಳಲ್ಲಿ ದೈನ್ಯತೆಯಿತ್ತು, ಮುಖದಲ್ಲಿ ಬೇಡಿಕೆಯ ಭಾವವಿತ್ತು. ನಾನಾಸಾಹೇಬ್ ಪೇಶ್ವೆಯವರು ಆ ಅಸಹಾಯಸ್ವರವನ್ನು ಕೇಳಿ ಸಾಹೇಬರೆಡೆಗೆ ನೋಡಿದರು. ಹೃದಯದಲ್ಲಿ ಕಾರುಣ್ಯದ ಹೊಳೆ ತುಂಬಿ ಹೊರಚೆಲ್ಲಿತು. “ಇದಕ್ಕೇಕೆ ಇಷ್ಟು ಚಿಂತೆ ಸಾಹೇಬರೇ, ಮೊನ್ನೆಯೇ ಹೇಳಿದ್ದೇವಲ್ಲ! ನಿಮ್ಮ ಇಂಗ್ಲಿಷರ ಎಲ್ಲ ಪರಿವಾರವನ್ನೂ ಸುರಕ್ಷಿತವಾದ ಸ್ಥಳಕ್ಕೆ ಮುಟ್ಟಿಸುವ ವ್ಯವಸ್ಥೆ ಮಾಡುತ್ತೇವೆಂದು!”

“ಬಹಳ ಉಪಕಾರ....ದಯಾಳು ಪೇಶ್ವೇಜೀ!”

“ಇದರಲ್ಲಿ ಉಪಕಾರವೇತರದು ಸಾಹೇಬರೇ? ಸಂಕಟ ಸಮಯದಲ್ಲಿ ಒಬ್ಬರಿಗೆ ನೆರವಾಗುವುದು ಮನುಷ್ಯನ ಧರ್ಮವಾಗಿದೆ.”

“ಪೇಶ್ವೇಜೀ. ತಪ್ಪಾದುದು ದೊಡ್ಡ ಮನಸ್ಸು. ಈ ಹೊತ್ತು ಮತ್ತೊಂದು ಸುದ್ದಿ!”

“ಮತ್ತೇನು?”

ಕುತೂಹಲದಿಂದ ಕೇಳಿದರು ಪೇಶ್ವೆಯವರು. ದೀನವಾಣಿಯಿಂದ ನಿವೇದಿಸಿದನು ಸಾಹೇಬ.

“ಈ ಹೊತ್ತು ಪೇಟೆಯಲ್ಲಿ ಸಭೆ ಸೇರುತ್ತಂತೆ! ನಾಳೆ ಇಲ್ಲಿಯೂ ಕ್ರಾಂತಿ ಆರಂಭವಾಗುವ ಸಂಭವವಿದೆ. ಮುಖ್ಯವಾಗಿ ನಮ್ಮೆಲ್ಲರ ಜೀವಕ್ಕೆ ಗಂಡಾಂತರ!”

ಪೇಶ್ವೆಯವರು ಕ್ಷಣಕಾಲ ಆಲೋಚನಾಮಗ್ನರಾಗಿ ಹೇಳಿದರು: “ಬೇರೆ ಏನು ಆಗುವುದೋ ಆಗಲಿ. ನಾಳೆ ಬೆಳಗಿನಲ್ಲಿಯೇ ನಿಮ್ಮನ್ನೆಲ್ಲ ಸುರಕ್ಷಿತವಾಗಿ ಸಾಗಿಸುವ ವ್ಯವಸ್ಥೆಯನ್ನು ಮಾಡುತ್ತೇನೆ. ಸೂರ್ಯೋದಯಕ್ಕಿಂತ ಮುಂಚೆಯೇ ದೋಣಿಗಳು ಸಿದ್ಧವಾಗುವುವು.” ಜೀವನಕ್ಕೆ ಗಂಡಾಂತರವಿರುವ ಸಮಯದಲ್ಲಿ ಪೇಶ್ವೆಯವರು ನೀಡುವ ನೆರವು, ಮರುಭೂಮಿಯಲ್ಲಿ ನೀರಿನ ಬುಗ್ಗೆ ಕಂಡಂತಾಯಿತು – ಜನರಲ್ ವೀಲರನಿಗೆ.

“ಮಾಯ್ ಗಾಡ್!!”

ಎಂದು ಪೇಶ್ವೆಯವರ ಕೈ ಕುಲುಕಿದನು, ಫಿರಂಗಿಯರ ದಳಪತಿ. “ಇರಲಿ, ನಾನೀಗ ಹೊರಡುತ್ತೇನೆ. ಈ ರಾತ್ರಿಯಲ್ಲಿಯೇ ಎಲ್ಲವೂ ಸಿದ್ಧವಾಗಬೇಕು.”

ನಾನಾಸಾಹೇಬ ಪೇಶ್ವೆಯವರು ಉತ್ತರದ ದಾರಿ ಕಾಯುವ ಹೊರಟೇಬಿಟ್ಟರು. ಮೂಕಭಾವ ತಳೆದ ಜನರಲ್ ವೀಲರನೂ ಅವರನ್ನು ಹಿಂಬಾಲಿಸಿದನು. ಆಳು ‘ಪಂಜು’ ಹಿಡಿದುಕೊಂಡು ಮುಂದಾಗಿ ಸಾಗಿದನು. ಬಂಗಲೆಯ ಗೇಟನ್ನು ದಾಟಿ ಬೀದಿಗಿಳಿದ ಪೇಶ್ವೆಯವರು ಹಿಂದೊಮ್ಮೆ ನೋಡಿ, ‘ನೀವು ನಿಲ್ಲಿರಿ.’ ಎಂದವರೇ ಬಿರಬಿರನೆ ಹೊರಡಲನುವಾದರು. ‘ಹಾಂ ಹಾಂ–’ ಅನ್ನುವುದರೊಳಗಾಗಿ ಆ ಕಾರ್ಗತ್ತಲೆಯಲ್ಲಿ ಮಾಯವಾದರವರು. ಆದರೆ ಆ ಪಂಜಿನ ಬೆಳಕು ಮಾತ್ರ ಸಾಹೇಬನ ದೃಷ್ಟಿಯಿಂದ ಬೇಗ ದೂರವಾಗಲಿಲ್ಲ. ನಿಂತವರು ಗರಬಡಿದವರಂತೆ ಎಷ್ಟು ಹೊತ್ತು ನಿಂತಿದ್ದರೋ ಯಾರಿಗೆ ಗೊತ್ತು?

× × × ×

ಕಾನಪುರದ ಸತೀಚೌರಾ ಘಾಟ ಭಾಗೀರಥಿ ಧೀರೆಯಾಗಿ, ಗಂಭೀರೆಯಾಗಿ ಸಾಗಿದ್ದಳು. ಅರುಣೋದಯಕಾಲದ ಸ್ವರ್ಣವರ್ಣದ ರಶ್ಮಿಗಳು ನದಿಯ ತೆರೆಗಳನ್ನು ಮೃದುವಾಗಿ ತುಳಿಯುತ್ತಿದ್ದುವು. ಶುಭ್ರ ಜಲರಾಶಿ ಆಗ ನಸುಗೆಂಪು ಬಣ್ಣ ತಳೆದಂತೆ ಭಾಸವಾಗುತ್ತಿತ್ತು. ಆಗಲೇ ಘಾಟದ ದಂಡೆಗೆ ನಿಂತ ದೋಣಿಗಳು ದಾರಿಯನ್ನು ಕಾಯುತ್ತಲಿದ್ದುವು ಅಷ್ಟರಲ್ಲಿ ಮೇಣೆಗಳೂ ಒಂದೊಂದಾಗಿ ಬರತೊಡಗಿದುವು ಬೋಯಿಗಳು ಅವುಗಳನ್ನು ಹೊತ್ತು ತಂದು ನದಿಯ ದಂಡೆಗೆ ಇಳಿಸಿದರು ಅವುಗಳಲ್ಲಡಗಿದ ನೂರಾರು ಫಿರಂಗಿಯರ ಸ್ತ್ರೀ-ಪುರುಷರು ದೋಣಿಗಳನ್ನೇರಿ ಕುಳಿತರು. ಆಗ ಆ ಮುಖಗಳ ಮೇಲೆ ಸಂತಸದ ಛಾಯೆ ಒಡಮೂಡಿತು. ಬೀಳ್ಕೊಡಲು ಬಂದಿದ್ದ ನಾನಾಸಾಹೇಬ ಪೇಶ್ವೆ ಹಾಗೂ ತಾತ್ಯಾ ಟೋಪಿಯವರಿಗೆ, ಮನವಾರೆ ಕೃತಜ್ಞತೆಯ ವಂದನೆಗಳನ್ನು ಅರ್ಪಿಸಿತು ಆ ಜನತೆ. ಅವರೂ ಪ್ರವಾಸಿಕರಿಗೆ ಶುಭ ಕೋರಿ ಬೀಳ್ಕೊಟ್ಟರು. ಜನರಲ್ ವೀಲರನು ತಿರುತಿರುಗಿ ವಂದನೆಗಳನ್ನರ್ಪಿಸಿದನು.

ನೀರನ್ನು ಮೃದುವಾಗಿ ನೂಕುತ್ತ ಚಲಿಸಲಾರಂಭಿಸಿದುವು ದೋಣಿಗಳು. ಒಮ್ಮೆಲೇ ನೂರಾರು ಕುದುರೆಗಳ ಖುರಪುಟದ ರವ, ಅವುಗಳ ಪಾದಗಳಿಂದ ಚಿಮ್ಮಿದ ಧೂಳಿ ಗಗನವನ್ನೇ ಮುಟ್ಟುವಂತೆ ಏರುತ್ತಲಿತ್ತು. ಅಶ್ವಾರೋಹಿಗಳು ವಾಯುವೇಗದಿಂದಲೇ ಬಂದರು. ಎಲ್ಲೆಡೆಗೂ ಕೇಕೆ–ಕೋಲಾಹಲಗಳು. ಸ್ತ್ರೀ ವ್ಯಕ್ತಿಯೊಂದು ರಣಕಹಳೆಯನ್ನೂದಿತು. ದೋಣಿಗಳ ಮೇಲೆ ಗುಂಡುಗಳ ಸುರಿಮಳೆ. ನದಿಯಲ್ಲಿ ಹೊಗೆಮಂಜು ಹರಡಿತು.

ಮಹಾದೇವನ ಮಂದಿರದ ಬಳಿಗೆ ಬಂದಿದ್ದ ನಾನಾಸಾಹೇಬ ಪೇಶ್ವೆಯವರು, ತಾತ್ಯಾ ಟೋಪಿಯವರೊಡನೆ ಅದನ್ನೆಲ್ಲ ದಿಙ್ಮೂಢರಾಗಿ ನೋಡುತ್ತ ನಿಂತರು.

ಕಾವ್ಯದಲ್ಲಿ ಪ್ರತಿಮಾಸಂವಿಧಾನ

ಶ್ರೀ. ಜಿ. ವ್ಹಿ. ಕುಲಕರ್ಣಿ, ಬಿ. ಎ. (ಆನರ್ಸ್), ಧಾರವಾಡ
ಶ್ರೀ. ಅನಿಲಕುಮಾರ ಗೋಕಾಕ, ಧಾರವಾಡ

ಲೇಖಾಂಕ - ೬

ಚಿರಂತನ ಚೈತನ್ಯದ ಚಿರಂತನ ಲೀಲೆ (ಭಾಗ ೨)

ಕವಿತೆಯು ನಮ್ಮನ್ನು ಆನಂದಿತರನ್ನಾಗಿ ಮಾಡುತ್ತದೆ. ಯಾಕೆಂದರೆ ಅದು ಒಂದು ಸಂಪೂರ್ಣವಾದ ವಿಷಯುವಾಗಿದ್ದು; 'ಪೂರಿತವಾದ ಇಚ್ಛೆಗಳ ಒಂದು ಮೃದುವಾದ ಪ್ರತಿಮೆ'ಯಾಗಿ ನಮ್ಮಲ್ಲಿ ಸಂಪೂರ್ಣತೆಯ ಭ್ರಮೆಯನ್ನು ಹುಟ್ಟಿಸುತ್ತದೆ. ಕವಿತೆಯನ್ನು ಅನುಭವಿಸುವುದರಿಂದ ನಾವು ಪುನರುಜ್ಜೀವಿತರಾಗುತ್ತೇವೆ; ಆದರೆ ಇದು ಸಂಪೂರ್ಣವಾದುದಲ್ಲ. ಈ ಜಗತ್ತಿನಲ್ಲಿ ಸಂಪೂರ್ಣತೆ ಕೇವಲ ಕಲೆಯ ಸ್ವಾಧೀನದಲ್ಲಿದೆ. ಈ ಕಾವ್ಯದ ಭ್ರಮೆಯು ಫಲವನ್ನೀಯುವಂತಹುದಾಗಿರುವುದರಿಂದಲೇ ನಮ್ಮ ಆತ್ಮಗಳು ಸಂಪೂರ್ಣತೆಯ ಹತ್ತಿರದ ಅನುಭವಗಳನ್ನು ಪಡೆಯುತ್ತವೆ. ನಿಟ್‌ಶೇ (Nietzche) ಹೇಳಿದಂತೆ, ಸಂಪೂರ್ಣ ವಸ್ತುಗಳು ನಮ್ಮಲ್ಲಿ ಆಶೆಯನ್ನು ಹುಟ್ಟಿಸುತ್ತವೆ.

ಈ ಸಂಪೂರ್ಣತೆಯು ಕವಿಯ ತಾಂತ್ರಿಕ ನೈಪುಣ್ಯವನ್ನು ಬಿಟ್ಟು ಬೇರೆ ಏನನ್ನಾದರೂ ತೋರುತ್ತಿದೆಯೋ? ಇದು ಎಷ್ಟರ ಮಟ್ಟಿಗೆ ಸುಪ್ತಚೇತನದಲ್ಲಿ ನಡೆಯುವ ಕಾರ್ಯವನ್ನವಲಂಬಿಸಿದೆ? ಕವಿಯು ತನ್ನ ಕೌಶಲ್ಯದ ಭಾರವನ್ನು ಸುಪ್ತಚೇತನದ ಮೇಲೆ ಹಾಕಲಾರ. ಕವಿಯ ತಾಂತ್ರಿಕಕೌಶಲ್ಯವು ಆಳವಾದ ಭಾವನೆ, ವಿಚಾರ, ಪ್ರತಿಮೆ ಮತ್ತು ಕಾವ್ಯವಸ್ತು ಇವುಗಳ ಏಕೀಕರಣವನ್ನು ಸಾಧಿಸದಿದ್ದರೆ ವ್ಯರ್ಥವಾಗುತ್ತದೆ ಎಂಬುದನ್ನು ನಾವು ನಂಬಿದರೆ, ಜಾಗೃತಚೇತನ ಮತ್ತು ಸುಪ್ತಚೇತನ ಇವುಗಳಲ್ಲಿಯ ಸಹಕಾರದ ಸ್ವಭಾವವನ್ನು ನಾವು ಅರಿತಿರಬೇಕು. ಸಿ. ಡೆ. ಲ್ಯುಯಿಸ್ ಅವರ ಪ್ರಕಾರ, ಕವಿಯು ಉತ್ತಮ ಶಬ್ದಗಳನ್ನು ಉತ್ತಮಕ್ರಮಗಳಲ್ಲಿ (The best words in the best order) ಉಪಯೋಗಿಸುವಾಗ, ತನ್ನ ತಾಂತ್ರಿಕಕೌಶಲ್ಯವನ್ನು ಪ್ರದರ್ಶಿಸುತ್ತಾನೆ; ಆದರೆ ಕೇವಲ ತಾಂತ್ರಿಕಕೌಶಲ್ಯವು ಅಪ್ರತಿಮ ಪ್ರತಿಮೆಗಳನ್ನು ನಿರ್ಮಿಸುವುದಿಲ್ಲ; ಪ್ರತಿಮೆಗಳು ದೃಢವಾಗಿದ್ದು ಧ್ವನಿಯ ಪ್ರತಿನಿಧಿಗಳಾಗಿರುತ್ತವೆ. ಈ ಧ್ವನಿಯು ಪ್ರತಿಯೊಂದು ಸಾಲು ಹಾಗೂ ಪದ್ಯದ ಹಿಂದೆ ಕೇಂದ್ರೀಕೃತವಾಗಿರುತ್ತದೆ. ಭಾವಪೂರ್ವ ಅರ್ಥದ ಕೇಂದ್ರೀಕರಣಕ್ಕೆ ಒಂದು ಜೋಡಿಸುವಂತಹ ಪದ್ಧತಿಯು ಬೇಕಾಗಿದ್ದು, ಕಾವ್ಯಮಯ ಕೌಶಲ್ಯವು ಇದೇ ಪದ್ಧತಿಯ ಕೊನೆಯ ಜಾಗೃತಮೆಟ್ಟಿಲಾಗಿರುತ್ತದೆ. ಕವಿತೆಯು ಒಂದು ಅವ್ಯಕ್ತ ಕಾವ್ಯವಸ್ತು ಪ್ರತಿಮೆಗಳ ಮುಖಾಂತರ ಬೆಳೆಯುತ್ತದೆ. ಕವಿಯು ಈ ಅವ್ಯಕ್ತ ಕಾವ್ಯವಸ್ತುವಿನ ಸಾಧನೆಯನ್ನು ನಡೆಸಬೇಕು. ಈ ಸಾಧನೆಯು ಮೊದಲು ಸುಪ್ತಚೇತನದಲ್ಲಿ ನಡೆದಿರುತ್ತದೆ; ಆಮೇಲೆ ಜಾಗೃತ ಮೆಟ್ಟಲುಗಳಿಂದ ಹಾಯ್ದು ಬಂದು ಪ್ರತಿಮೆಗಳ ಸಂಬಂಧವನ್ನು ನಿರ್ಮಿಸುತ್ತದೆ.

ಕವಿತೆಯು ಒಂದು ಸಮ್ಮಿಶ್ರ ಪ್ರತಿಮೆಯೆಂಬುದನ್ನು ಈಗ ವಿಚಾರಿಸುವಾ: ಪ್ರತಿಮೆಯು ತನ್ನನ್ನೇ ಚಿತ್ರಿಸುವುದಿಲ್ಲ. ಒಂದು ಕವಿತೆ ಸಮ್ಮಿಶ್ರ ಪ್ರತಿಮೆಯಾಗಬೇಕಾದರೆ, ಅದು ಒಂದು ಪೂರ್ಣತೆಯನ್ನು ಪ್ರತಿನಿಧೀಕರಿಸಬೇಕು. 'ರುದ್ರವೀಣೆ' ಕವಿತೆಯಲ್ಲಿದ್ದ ಅನುಭವವು ವೈಯಕ್ತಿಕವಾಗಿಲ್ಲ; ಅದು ವಿಶ್ವವ್ಯಾಪಿಯಾಗಿದೆ. ಕವಿಯ ಅನುಭವವು ವಿಶ್ವವ್ಯಾಪಿಯಾಗಿದ್ದರೆ, ಅವನ ಕವನಗಳಲ್ಲಿ ಅಡಗಿದ ಸಾಮಾನ್ಯ ಸತ್ಯವನ್ನು ಸುಲಭವಾಗಿ ತಿಳಿದುಕೊಳ್ಳಬಹುದು; ಆದರೆ ಕವಿಯ ವೈಯಕ್ತಿಕ ಅನುಭವ—ಅನುಕಂಪನೆಗಳ ಮೂಲಕ ಕಾವ್ಯದಲ್ಲಿರುವ ಸತ್ಯಕ್ಕೆ ಅಮುಖ್ಯಸ್ಥಾನ ದೊರೆತಿದ್ದರೆ, ಅದನ್ನು ಹೇಗೆ ಗುರುತಿಸಬೇಕು? ಹೀಗಿದ್ದಾಗ ಕವಿತೆಯೇ ಒಂದು ಸಮ್ಮಿಶ್ರ ಪ್ರತಿಮೆಯಾಗಬಲ್ಲದೇ?

ಈಗ ಶ್ರೀ. ಪಿ. ಸೀತಾರಾಮಯ್ಯನವರ ಒಂದು ಕವಿತೆಯನ್ನು ನೋಡೋಣ: ಅದು ವೈಯಕ್ತಿಕವಾಗಿದೆ. ಕೆಳೆಯರೊಡನೆ ಹೊರಟಾಗ ದಾರಿಯು ಕವಲು ಒಡೆದು, ಮುಂದೆ ತಮ್ಮ ದಾರಿಯನ್ನು ಹಿಡಿದು ನಡೆದಿರುವ ಚಿತ್ರಣವಿಲ್ಲಿದೆ. ಕವಿತೆ ದೊಡ್ಡದಾಗಿರುವುದರಿಂದ ಅನುಕೂಲತೆಯ ದೃಷ್ಟಿಯಿಂದ ಕೆಲವೇ ಪದ್ಯಗಳನ್ನಿಲ್ಲಿ ನೋಡಬಹುದು:

ಮುಂದೆ ದಾರಿ

ನಿಮ್ಮ ಪುಣ್ಯಕೆ ಎಣೆಗಳಿಲ್ಲ
ನಮ್ಮ ಪಾಪಕೆ ಮಿತಿಗಳಿಲ್ಲ
ಮುಂದೆ ನಿಡಿದಿಹ ದಾರಿಯಲ್ಲಿ
ನಿಲ್ಲಲಿಲ್ಲ—ಕಡೆಗಳಿಲ್ಲ.

ಇಲ್ಲಿವರೆಗೇ ನೆರೆಯು ನೆರವು,
ಇಲ್ಲಿವರೆಗೇ ಆಯ್ತು ಕೆಳೆಯು,
ಮುಂದೆ ಕವಲಿಹ ದಾರಿಯಿಂದದಿ
ಇಲ್ಲಿ ಸಂಗವು ಒಡೆದಿದೆ.
ಇಷ್ಟುದಿವಸದ ಕೆಳೆಗೆ ಕೈಮುಗಿ-
ವಷ್ಟು ಪುಣ್ಯವು ಸಂದಿದೆ,
ಎಷ್ಟು ದೂರವ ನಡೆದುದಾಯ್ತೋ
ಅಷ್ಟು ಸಂತಸ ಉಂಡಿದೆ.

× × ×

ಇಲ್ಲೆ ಶಾಂತಿಯ ಕಂಡ ಕೆಳೆಯರೆ
ನಿಮ್ಮ ಪುಣ್ಯವೆ ಪುಣ್ಯವು,
ಎಮಗೆ ಎಂದಿಗೆ ನೆಲೆಯು ಕಾಂಬುದೊ
ಅಂದುವರೆಗೂ ಪಯಣವೇ.
ನೂರು ಜನ್ಮಕೆ ದಾರಿಯಾದರೆ
ನೂರು ಜನ್ಮಕು ಪಯಣವೇ—
ಕಾಣಲಾದೀತೇನೊ ಗಡಿಯನು
ಎಂಬ ನಚ್ಚಲಿ ನಡೆವೆವು.
ನಡುವೆ ದಾರಿಗಳಡ್ಡ ಕವಲಲಿ
ಭಾಗ್ಯವಿದ್ದರೆ ಬೆರೆವೆವು—
ಅಲ್ಲಿ ಮನಗಳು ಹೊಂದಿಕೊಂಡರೆ
ಕೆಳೆಯ ಗುರುತನು ಕಾಂಬೆವು.

× × ×

ಬರುವ ಬೇನೆಗಳೆಲ್ಲ ಬರಲಿ
ಒಂಟಿತನಗಳು ಕಾಡಲಿ
ನೀರು ಸುರಿಯುವ ಕಣ್ಣುಗಳಲಿ
ನೆತ್ತರೊಸರುತ ಹರಿಯಲಿ.

× × ×

ಮುಂದೆ ನಡೆಯುವ ಕೆಳೆಯರೇ
ಇಗೊ ಇಲ್ಲಿ ದಾರಿಗಳೊಡೆದಿವೆ;
ಇಲ್ಲಿ ದಾರಿಯು ಸೇರದಾದರೆ
ಸೇರದೆಂದಿಗು ಹೋಹುದೇ ?

× × ×

ಇಂದಿನೆತ್ತಿಗೆ ಬೆಳೆದ ಮನಗಳು
ಹೊಂದಿ ಬೆಳೆದರೆ ಸಗ್ಗವು
ಮುಂದೆ ಹೊಂದದೆ ಬೆರೆಯವಾದರೆ
ಸಂದ ಸೊದೆಗೇ ಋಣಿಗಳು.

ಈ ಕವಿತೆಯ ಸಂದರ್ಭ ಹೃದಯಸ್ಪರ್ಶಿಯಾಗಿದೆ. ಎಷ್ಟೋ ವರುಷ ಕೂಡಿಯೇ ಇದ್ದ ಗೆಳೆಯರು ಕವಲೊಡೆಯುವ ಪ್ರಸಂಗ ಬಂದಿದೆ. ವೈಯಕ್ತಿಕ ವಿಚಾರದಲ್ಲಿಯ ಭಿನ್ನಾಭಿಪ್ರಾಯ ಈ ಬೇರೆ ದಾರಿಗಳಿಗೆ ಕಾರಣವಾಗಿದೆ.

" ಕುಟಿಗೆ ನಾಲಗೆ ಇಕ್ಕದಿದ್ದರು
ಮನವು ಒಡಕನು ಕಂಡಿದೆ "— ಎಂಬ ಮಾತಿನಲ್ಲಿ— ಈ ಭಿನ್ನಾಭಿಪ್ರಾಯವನ್ನು ಒಳಗೇ ಅರಿತುಕೊಂಡದ್ದು ಗೊತ್ತಾಗುತ್ತದೆ. ಇಲ್ಲಿಯ ವರೆಗೆ ಕಳೆದ ಒಂದು ಸ್ನೇಹಕ್ಕೆ ಇವರು ಋಣಿಯಾಗಿದ್ದಾರೆ. ಮತ್ತು ಗೆಳೆಯರಿಗೆ ತಮ್ಮ ತಮ್ಮ ಸರಿಯಾದ ಮಾರ್ಗದಲ್ಲಿ ನಡೆಯಲು ಹೇಳಿ, ತಮ್ಮ ಮಾರ್ಗಕ್ಕೆ ಬಿಡುಗಡೆಯನ್ನು ನೀಡಲು ಕೋರುತ್ತಾರೆ. ಇಲ್ಲಿಯೇ ಶಾಂತಿಯನ್ನು ಪಡೆದ ಗೆಳೆಯರು "ಪುಣ್ಯವಂತರೆಂದೂ," ಮುಂದೆ ನೆಲೆಯು ಹತ್ತುವ ವರೆಗೂ ತಮಗೆ ಪಯಣವೇ ಪಯಣವೆಂದೂ ಹೇಳುತ್ತಾರೆ. ನೂರು ಜನ್ಮಗಳು ಬಂದರು ಕೂಡ ತಮಗೆ ಒಂದು ಗಡಿಯು ಸಿಗುವುದೆಂಬ ನೆಚ್ಚಿಕೆಯಿಂದಲೇ ಈ ಪಯಣವನ್ನು ಮುಂದುವರೆಸಲಪೇಕ್ಷಿಸುತ್ತಾರೆ. ದಾರಿಯಲ್ಲಿ ಎಂತಹ ಕಷ್ಟಗಳು ಬಂದರೂ ಎದುರಿಸಲು ಸಮರ್ಥರಾಗಿದ್ದಾರೆ. ನೀರು ಸುರಿಯುವ ಕಣ್ಣುಗಳಲ್ಲಿ ನೆತ್ತರು ಹರಿದರೂ ಇವರಲ್ಲಿ ತಮ್ಮ ಧ್ಯೇಯ ಸಾಧನೆಯನ್ನು ಮುಂದುವರಿಸುವ ದಾರ್ಢ್ಯವಿದೆ. ದಾರಿಯಲ್ಲಿ ಏನಾದರೂ ಗೆಳೆಯರೊಡನೆ ಸಂಧಿಸಿದರೆ, ಮತ್ತು ಅಲ್ಲಿ ಮನಗಳು ಬೆರೆತರೆ, ಹಿಂದಿನ ಕೆಳೆಯ ಗುರುತನ್ನು ಕಾಣುವರು. ಮುಂದೆ ಮನಗಳು ಹೊಂದಿ ಬೆರೆಯದಿದ್ದರು ಕೂಡ ಹಿಂದೆ ಸಂದ ಅಮೃತಸಮಯಕ್ಕೆ ಋಣಿಯಾಗಿರಲು ಬಯಸುತ್ತಾರೆ.

ಈ ಕವನದಲ್ಲಿ ನಮ್ಮ ಇಂದ್ರಿಯಗಳಿಗೆ ಆನಂದ ಕೊಡುವಂತಹ ಯಾವ ಪ್ರತಿಮೆಗಳೂ ಇಲ್ಲ. ವಿಶ್ವವ್ಯಾಪೀ ಸತ್ಯವೂ ಕೂಡ ಈ ಕವಿತೆಯಲ್ಲಿಲ್ಲ. ಕವಿಯ ಅನುಭವ ವೈಯಕ್ತಿಕವಾದದ್ದು. ಈ ಕವಿತೆಯು ಗಂಭೀರವಿಚಾರಗಳ ಪರಂಪರೆಯೇ ಆಗಿದೆ; ಆದರೆ ಈ ಗೂಢ ವಿಚಾರಗಳಲ್ಲಿ ಆಳವಾದ ಕಾವ್ಯಪ್ರತಿಮೆಗಳಲ್ಲಿರುವ ಶಕ್ತಿಯಿದೆ. ಅವು ಹೃದಯಸ್ಪರ್ಶಿಯಾಗಿದ್ದು ನಮ್ಮ ಸಹಾನುಭೂತಿಯನ್ನು ಹೆಚ್ಚಿಸುತ್ತವೆ. ಈ ಕವಿತೆಯ ಪ್ರಗತಿಯು ಗಂಭೀರವಾದ ಸಾಗರದಂತಿದೆ. ಕವಿತೆಯು ಈ ಸಾಗರದಿಂದ ಸ್ವಲ್ಪ ಕೂಡ ಹೊರಬೀಳದೆಯೆ ಇರುವುದೇ ಈ ಕವಿತೆಯ ಇಂದ್ರಜಾಲ. ಪ್ರತಿಮೆಗಳು ಇಲ್ಲದಲ್ಲಿ ಪ್ರತಿಮೆಗಳನ್ನು ನಿರ್ಮಿಸುವಂತಹ ಈ ಅದ್ಭುತ ಶಕ್ತಿಯಾವುದು ? ಸ್ಪಷ್ಟಾರ್ಥವನ್ನೂ ಹಾಗೂ ಭಾವನಾಪರವಶತೆಯನ್ನೂ ಮೀರಿ ವಿಜಯಾನಂದದಿಂದ ನರ್ತಿಸುವ ಈ ಶಕ್ತಿ ಯಾವುದು ? ಯಾವ ಭಾವನೆಗೆ ಮಾನವರು ಕಾಲಕಾಲಕ್ಕೆ ಶರಣು ಹೋಗುತ್ತಾರೋ ಅಂಥ ಭಾವನೆಯ ಆತ್ಮಪ್ರೇರಿತವಾದ ಒಂದು ಮಾನವೀ ಉಕ್ತಿಯಿದು. ಇದು ವಿವರಣೆಯ ಒಂದು ಭಾಗ ಮಾತ್ರ.

ಆದರೆ ವಿ. ಸಿ ಯವರ ಕವಿತೆಯು ಸೃಷ್ಟಿಸುವ ಪ್ರತಿಮೆಯಾವುದು ? ಈ ಕವಿತೆಯು ಮುಂದಿರುವ ದಾರಿಯ ಪ್ರತಿಮೆಯನ್ನು ನಿರ್ಮಿಸುವುದಿಲ್ಲ. ಮಾನವನ ಸ್ಥಿತಿಗತಿಯ ಪ್ರತಿಮೆಯನ್ನೂ ಈ ಕವಿತೆಯು ನಿರ್ಮಿಸುವುದಿಲ್ಲ. ಈ ಕವನದಿಂದ ಯಾವ ಪ್ರತಿಮೆಯು ಬರದಿದ್ದರೂ. ಇಲ್ಲಿ ಕವಿಯ ಪ್ರತಿಮೆಯೇ ಬಂದಿದೆ; ಅಥವಾ ಕವಿಯ ದೊಡ್ಡತನದ ಪ್ರತಿಮೆಯೇ ಇಲ್ಲಿ ಮೂಡಿದೆ. ಜೀವನದಲ್ಲಿದ್ದ ಅನಿವಾರ್ಯತೆಯ ಅರಿವಿನೊಡನೆ ತನ್ನ ಧ್ಯೇಯ ಸಾಧನೆಯ ಬಗ್ಗೆ

ಇನ್ನೊಬ್ಬರಲ್ಲಿಲ್ಲದ ಸಂಕಲ್ಪಶಕ್ತಿಯು ಕಂಡುಬರುತ್ತದೆ. (ನನಗೆ ಎಂದಿಗೆ ನೆಲೆಯು ಕಾಣುವುದೊ ಅಂದುವರೆಗೂ ಪಯಣವೆ) ಈ ಕವಲೊಡೆದ ದಾರಿಯ ಬಗ್ಗೆ ಇದ್ದ ಒಂದು ಆಶೆಯನ್ನು ಕವಿತೆಯು ಚಿತ್ರಿಸಿದೆ. 'ಇಲ್ಲಿ ದಾರಿಯು ಸೇರದಾದರೆ। ಸೇರದೆಂದಿಗು ಹೋಹುದೆ?' ಎಂದೆನ್ನುವಾಗ, ಒಂದಿಲ್ಲ ಒಂದು ದಿನ ಈ ದಾರಿಗಳು ಸೇರಿಯೆ ಸೇರುವುವು; ಇವು ಮುಟ್ಟುವ ತಾಣವು ಒಂದೇ ಆಗಿದೆ ಎಂಬುದು ಧ್ವನಿತವಾಗಿದೆ. ಇದು ಕವಿಯ ಮನಸ್ಸಿನ ಎರಕವನ್ನೇ ಪ್ರಕಟ ಮಾಡಿದೆ. ಕವಿಯ ಸರಳತೆ, ಔದಾರ್ಯ, ಆತುರತೆ ಹಾಗೂ ಇಂತಹ ವಿರಸ ಪ್ರಸಂಗಗಳಲ್ಲಿ ಕೂಡ ಕವಿಯು ತೋರುವ ಹೃದಯದ ಮಾಧುರ್ಯ ಇಲ್ಲಿ ಸ್ಫುಟವಾಗಿ ಕಂಡುಬರುತ್ತವೆ.

ಭಾವಶುದ್ಧತೆಯು ವಿಮರ್ಶೆಯಲ್ಲಿ ಯಾವಾಗಲೂ ಪ್ರಮಾದವನ್ನುಂಟುಮಾಡುತ್ತದೆ. ಭಾವನೆಗಳ ತಿಕ್ಕಾಟವನ್ನು ಏಕರೂಪದಲ್ಲಿ ಮೂಡಿಸುವಂತಹ ಹಾಗೂ ಅಲ್ಲಲ್ಲಿ ಕಂಡುಬರುವ ಗದ್ಯರೂಪೀ ವಿಷಯಗಳನ್ನು ಒಂದುಗೂಡಿಸಿ, ಒಂದೇ ಆದ ರಸದ ಪ್ರವಾಹದಲ್ಲಿ ಹರಿಬಿಡುವಂತಹ ಶಕ್ತಿ ಯಾವುದು? 'ಭಾವಶುದ್ಧಿ' ಎಂಬುದೇ ಈ ಶಕ್ತಿಯನ್ನು ಸೂಚಿಸುವ ಸರ್ವೋತ್ತಮ ಶಬ್ದ. ಈ ಕವಿತೆಯ ಪ್ರತಿಯೊಂದು ಸಾಲಿನಲ್ಲಿ ಕೂಡ ಭಾವಶುದ್ಧಿಯು ಸ್ಪಷ್ಟವಾಗಿ ಕಂಡುಬರುತ್ತದೆ. ಈ ಕವಿತೆಯು ಸಂಪೂರ್ಣವಾಗಿದೆ; ಯಾಕೆಂದರೆ ಅದು ಸಂಪೂರ್ಣವ್ಯಕ್ತಿತ್ವವನ್ನು ಪಡೆದ ಒಬ್ಬ ಕವಿಯ ಕೃತಿಯಾಗಿದೆ. ಕವಿಯ ವ್ಯಕ್ತಿತ್ವದ ಪರಿಪೂರ್ಣ ಪ್ರತಿಮೆಯನ್ನು ನಿರ್ಮಿಸುವಂತಹ ಕವಿತೆಯೇ ವೈಯಕ್ತಿಕ ಕವಿತೆ.

ಈ ತತ್ತ್ವವನ್ನು ನಾವು ಒಪ್ಪಿಕೊಂಡರೆ, ವೈಯಕ್ತಿಕ ಕಾವ್ಯದ ಬಗ್ಗೆ ಇದ್ದ ನಮ್ಮ ಅಭಿಪ್ರಾಯ ಮತ್ತು ಕಾವ್ಯಪ್ರತಿಮೆಯ ಬಗ್ಗೆ ಇದ್ದ ನಮ್ಮ ವಿಚಾರವನ್ನು ಬದಲಿಸಬೇಕು. ತನ್ನ ಅನುಭವದ ಬೇರುಗಳ ರಹಸ್ಯವನ್ನು ಪರಿಶೋಧಿಸದೆ, ತನ್ನ ಅನೇಕ ವರ್ಣೀಯ ಸಂವೇದನೆಗಳಲ್ಲಿ ಮುಳುಗದೆ, ಮಾನವೀಯ ಸ್ಥಿತಿಗತಿಗಳನು ಸ್ವತಂತ್ರವಾಗಿ ನೋಡಿ, ನೈಮರಿತು—ತನ್ನದೇ ಆದ ಒಂದು ಸ್ವಸ್ವಾತ್ಮಕ ಪ್ರತಿಮೆಯನ್ನು ನಿರ್ಮಿಸುವಂತಹ ಕಾವ್ಯವೂ ಕವಿಗೆ ಇದೆ—ಎಂದು ತೋರುತ್ತದೆ. ನೈಮರಿತು ಕವಿಯು ಇಂತಹ ಕಾವ್ಯ ನಿರ್ಮಿಸಬೇಕು; ಏಕೆಂದರೆ ಸ್ವಾರ್ಥವಿಲ್ಲದಿರುವುದೇ ಇಂತಹ ಕಾವ್ಯಗಳ ಆವಶ್ಯಕ ಗುಣ. ಸ್ವಸ್ವಾತ್ಮಕ ಪ್ರತಿಮೆಯು ಯಾವ ಮಾನವೀಯ ಸದ್ಗುಣದಿಂದ ಹುಟ್ಟುತ್ತದೆಯೊ, ಆ ಮಾನವೀಯ ಸದ್ಗುಣದ ಬಗ್ಗೆ ನಮ್ಮಲ್ಲಿ ಉತ್ತಮತರದ ತಿಳಿವಳಿಕೆ, ಸಹಾನುಭೂತಿ, ಅನುಕಂಪಗಳನ್ನು ಹುಟ್ಟಿಸುತ್ತದೆ.

ಇಂದಿನ ಕಾವ್ಯವು ಅಂತರ್ಮುಖಿಯಾಗಿ ಪ್ರತಿಮೆಗಳನ್ನು ನಿರ್ಮಿಸುತ್ತದೆ. ಅವು ಬಾಹ್ಯಜಗತ್ತಿಗೂ ಸಮ್ಮತವಾಗುತ್ತವೆ. ಮತ್ತು ಈ ಕಾವ್ಯ ತೊಡಕಿನಿಂದ ತುಂಬಿರುವ ತನ್ನ ಮಾರ್ಗವನ್ನು ಬೆಳಗಿಸುತ್ತದೆ. ಮೇಲಿನ ಕಾವ್ಯಕ್ಕೂ ಇದಕ್ಕೂ ತುಂಬಾ ಅಂತರವಿದ್ದುದು ಕಂಡುಬರುತ್ತದೆ. ಆಧುನಿಕ ಕನ್ನಡಕಾವ್ಯದಲ್ಲಿ ಕೆಲವು ತರುಣರು ಈ ಮಾರ್ಗವನ್ನು ಅನುಸರಿಸಿರುವುದು ಕಂಡುಬರುತ್ತದೆ.

ಬಾಹ್ಯಜಗವನ್ನು ಅವಲೋಕಿಸಿ, ಅದರೊಳಗಿನ ವಸ್ತುಗಳ ಮೇಲೆ ತನ್ನ ನಿರೀಕ್ಷಣೆಯನ್ನು ಕೇಂದ್ರೀಕರಿಸಿ, ಆ ಶಕ್ತಿಯಿಂದ ಅವುಗಳ ಬಗೆಗೆ ಧೇನಿಸುವಂತಹ ಕಾವ್ಯ—ಆ ವಸ್ತುಗಳ ಮೂಲ್ಯ ಮತ್ತು ಜೀವನದಲ್ಲಿರುವ ಆವಶ್ಯಕತೆಯನ್ನು ಅರಿತುಕೊಂಡು ನಿಸ್ವಾರ್ಥಪೂರ್ವಕವಾಗಿ ಮಾನವೀಯ ಸದ್ಗುಣದ ಪ್ರತಿಮೆಯನ್ನು ಆ ವಸ್ತುಗಳಲ್ಲಿ ಪ್ರತಿಬಿಂಬಿಸುವ ಕಾವ್ಯ, ಇಂದು ಬೇಕಾಗಿದೆಯೇ? ಕಾವ್ಯವು ಸಂಸ್ಕಾರದ ಕೆಲಸವನ್ನು ಮುಂದುವರಿಸಬೇಕಾದರೆ ಇಂತಹ ಕಾವ್ಯದ ಅವಶ್ಯಕತೆ ಇದೆ. ನೈತಿಕ ಮತ್ತು ಬೌದ್ಧಿಕ ಮನೋವಿಕಾರಗಳ ಮಾನವನನ್ನು ಸಮಾಜಜೀವಿಯೆಂದು ಬೇರೆ ಪ್ರಾಣಿಗಳಿಂದ ಬೇರ್ಪಡಿಸುತ್ತವೆ. ಈ ರೀತಿಯ ಕಾವ್ಯವಿರದಿದ್ದರೆ, ಮೇಲೆ ಹೇಳಿದ ಮನೋವಿಕಾರಗಳು ಪ್ರತಿಮೆಗಳ ರೂಪದಲ್ಲಿ ಬರುವುದಿಲ್ಲ. ಈ ಮನೋವಿಕಾರಗಳ ಸಂಬಂಧವನ್ನು ಕಳೆದುಕೊಂಡ ಕಾವ್ಯವು ಶಕ್ತಿಹೀನವಾಗುತ್ತದೆ. ಕವಿಗೆ ಧೇನಿಸಲು ನಮ್ಮ ಜಗತ್ತು ಯೋಗ್ಯವಾದುದಲ್ಲ—ಎಂದು ಕೆಲವರ ಭಾವನೆಯಿರಬಹುದು; ಆದರೆ ಎಮ್ಪ್‌ಸನ್ ಎಂಬ ಕವಿ ಬರೆದಂತೆ :—

' All those large dreams by which men long live well
Are magic-lanterned on the smoke of hell;
This then is real, I have implied,
A painted, small transparent slide. '

ನಾವು ಕಲ್ಪಿಸಿದಂತಹ ಧ್ಯೇಯವೆಂದರೆ ಬಣ್ಣಬಳಿದ ಚಿಕ್ಕ ಸ್ಲಾಯಿಡು ಇದ್ದಂತೆ ಅದು ವಾಸ್ತವಿಕವಾಗಿರುತ್ತದೆ. ಆದರೆ ಸ್ಲಾಯಿಡಿನಂತೆಯೇ ಅದರ ಪ್ರತಿಮೆಯನ್ನು ಕ್ಷಣಿಕ ಮತ್ತು ಭೀತಿಯುಕ್ತವಾದ ಜಗತ್ತಿನಲ್ಲಿ ಕಂಡಾಗಲೇ ಅದು ಕ್ರಿಯಾತ್ಮಕವಾಗುತ್ತದೆ. ಮುಂದಿನ ಸಾಲುಗಳು ಇಂತಿವೆ :—

' These the inventive can hand-paint at leisure,
Or most emporia would stock our measure;
And feasting in their dappled shade
We should forget how they are made. '

ಈ ಸ್ಲಾಯಿಡುಗಳನ್ನು ಹೇಗೆ ಮಾಡುತ್ತಾರೆ? ನಿಜವಾದ ಜಗತ್ತಿಗೆ ಸ್ವಲ್ಪವೂ ಸಂಬಂಧವಿಲ್ಲದೆಯೆ, ಕೇವಲ ಶೋಧಿಸುವ ಮೇಧಾಶಕ್ತಿಯ ಫಲವಾಗಿ ಅಥವಾ ಮೊದಲೇ ಸಿದ್ಧಪಡಿಸಿದ ವಿಚಾರಗಳ ಸ್ಥಾನದಿಂದ ಈ ಸ್ಲಾಯಿಡುಗಳು ಹೊರಬರುವುದಿಲ್ಲ. ಸ್ಲಾಯಿಡುಗಳ ಮೇಲಿನ ಚಿತ್ರಗಳ ಆದರ್ಶಗಳಾಗಿರಬಹುದು; ಆದರೆ ಅವುಗಳು ವ್ಯಕ್ತಿಗತ ಅಥವಾ ಗೂಢವಾಗಿರುವುದಿಲ್ಲ. ಈ ಸ್ಲಾಯಿಡುಗಳು ಪರದೆಯ ಮೇಲೆ ಮೂಡಿಸಿದ ಕನಸುಗಳು ಮನುಷ್ಯತ್ವಕ್ಕೆ ಸಂಬಂಧಿಸಿದುವಿರುತ್ತವೆ ಇಂತಹ ಕನಸುಗಳಿಂದಲೇ ಮನುಷ್ಯತ್ವ ಇಂದಿನ

ವರೆಗೆ ಬದುಕಿದೆ. ಇಂತಹ ಕನಸುಗಳು ಜಗತ್ತನ್ನು ಅತಿಕ್ರಮಿಸಿದರೂ ಕೂಡ ಅವು ಇದ್ದಂತೆಯೇ ಇವೆ. ಅವುಗಳ ಮೇಲೆ ಮಾನವೀಯ ಅವಶ್ಯಕತೆ, ಪರಿಸರ, ಸದ್ಗುಣಗಳ ರೂಪ ಮತ್ತು ಮುದ್ರೆ ಕಂಡುಬರುತ್ತದೆ

ಇದೇ ರೀತಿ ಕಾವ್ಯದಲ್ಲಿಯೂ ಇದೆ. ಇನ್ನೂ ಗರ್ಭದಲ್ಲಿದ್ದ ಕವಿಗಳಿಗೆ ಕಿವಿಗಳಿದ್ದರೆ ತಾವು ಈ ಮಾತುಗಳನ್ನು ಹೇಳುತ್ತಿರುವುದಾಗಿ ಸಿ. ಡೇ. ಲ್ಯೂಯಿಸರು ಹೇಳುತ್ತಾರೆ:—' ನಮಗೆ ದುಸ್ತರ ಮತ್ತು ಕರಾಳವಾಗಿದ್ದ ಪ್ರದೇಶದಲ್ಲಿ ನೀನು ಹೆಚ್ಚು ವಿಶ್ವಾಸದಿಂದ ಕಾಲಿಡುವಿ ಮನುಷ್ಯನ ಮನದ ಚಕ್ರವ್ಯೂಹವನ್ನು ಹೆಚ್ಚು ಆಳವಾಗಿ ಪ್ರವೇಶಿಸಿದಾಗ, ತಿರುಗಿ ಬೆಳಕಿನೆಡೆಗೆ ತರುವ ಒಂದು ಸೂತ್ರವನ್ನು ಮರೆಯಬೇಡ. ಕತ್ತಲೆಯಿಂದ ಹಾಯ್ದು ಮರಳಿ ಬೆಳಕಿನ ಕಡೆಗೆ ಬರುವ ಪ್ರವಾಸದಿಂದಲೆ ಪ್ರತಿಯೊಂದು ಕವಿತೆ ನಿರ್ಮಿತವಾಗುತ್ತದೆ. ಬೆಳಕಿನಿಂದ ಬೆಳಕಿಗೆ ಹೊರಟ ಪ್ರವಾಸಕ್ಕೆ ಕತ್ತಲೆಯ ಮಾರ್ಗ ಅನಿವಾರ್ಯ; ಸಂಪೂರ್ಣವಾದ ಕವಿತೆ ಈ ಪ್ರವಾಸದ ಪ್ರತಿಮೆ. ಕವಿತೆಯಲ್ಲಿ ನೀನು ಮತ್ತೆ ಹುಟ್ಟುತ್ತೀ; ಅದೊಂದು ನವಸೃಷ್ಟಿ. ನಿನ್ನ ಅನುಭವಕ್ಕೆ ರಕ್ತ, ಮಾಂಸ, ಅಸ್ಥಿಗಳನ್ನು ಕೊಟ್ಟಿರುವ ದೇಹದ ಒಂದು ಪುನರುತ್ಥಾನ. ಕವಿತೆ ಒಬ್ಬನಿಗೆ ಹೃದಯಸ್ಪರ್ಶಿಯಾದರೆ ಅನಂತರ ಅವನು ಮೊದಲಿನವನಾಗಿಯೇ ಉಳಿಯಲಾರ ಕವಿತೆಯು ಪರಿಣಾಮಕಾರಿಯಾದ ಸತ್ಯದೊಳಗಿಂದ ಹುಟ್ಟುವ ಆನಂದ ಸಾಂಸರ್ಗಿಕ ಮತ್ತು ಸಮಾಧಾನಕಾರಕವಾಗಿರುತ್ತದೆ. ಕವಿತೆಯು ಮನುಷ್ಯರ ಹೃದಯದ ಮೇಲೆ ಇಂತಹ ಪರಿಣಾಮವನ್ನುಂಟು ಮಾಡುವುದರಿಂದ, ನೀನು ಮನುಷ್ಯನಿಗೆ ಮತ್ತು ನಿನ್ನೊಳಗಿದ್ದ ಮನುಷ್ಯತ್ವಕ್ಕೆ ಸಂಬಂಧಿಸಿದ ಕರ್ತವ್ಯವನ್ನು ಮರೆಯಬಾರದು. ನಿನ್ನಷ್ಟಕ್ಕೆ ನೀನು ಹಾಡಿಕೊಳ್ಳಬಹುದು; ಆದರೆ ನಿನಗಾಗಿಯೇ ಹಾಡಿಕೊಳ್ಳಲಾರೆ. ಕವಿಯೇ ಏಕಾಂತದ ಮಗು. ಅವನು ತನ್ನ ಏಕಾಂತವನ್ನು ಸಂರಕ್ಷಿಸಿ ಸಂಸ್ಕರಿಸಬೇಕು ತನ್ನ ಏಕಾಂತದಲ್ಲಿಯೇ ತೊಡಗಿದಾಗ ಅವನು ತನ್ನ ಬೇರೆ ಕರ್ತವ್ಯವನ್ನು ಮರೆಯಬಾರದು ಮನಸ್ಸಿನ ಚಕ್ರವ್ಯೂಹವನ್ನು ಪ್ರವೇಶಿಸುವಾಗ ಸೂತ್ರವನ್ನು ಬಿಡಬಾರದು.

ಆ ಸೂತ್ರವೆಂದರೆ ತನ್ನಲ್ಲಿದ್ದ ಮನುಷ್ಯತ್ವ; ಮನುಷ್ಯರ ಬಗ್ಗೆ ಹಾಗೂ ಸೃಷ್ಟಿಯ ಬಗ್ಗೆ ಇರುವ ಸಹಾನುಭೂತಿ. ಇದು ಕವಿಯ ಅವಶ್ಯಕತೆಯೊಡನೆ ಹೊಂದಿಕೊಂಡು ಅವನಿಗೆ ಪ್ರತಿಮೆಗಳನ್ನು ಕೊಡುತ್ತದೆ ಮನುಷ್ಯನ ಮನದ ರಹಸ್ಯಮಯ ಆಳದಲ್ಲಿ ಅನುಭವದ ಮೂಲರೂಪದ ಮಾದರಿಗಳ ಸಂಗ್ರಹವಾಗಿರಬಹುದು. ಇವುಗಳಿಂದ ಕಲ್ಪಕತೆಯು ಸೃಷ್ಟ್ಯಾತ್ಮಕ ಕಲ್ಪಕತೆಗೆ, ಕತ್ತಲೆಯಿಂದ ಹೊರಬರಲೂ ತನ್ನ ಮಾರ್ಗವನ್ನು ಪಡೆಯಲೂ ಸಾಧ್ಯಮಾಡುವಂತಹ ಸತ್ಯಗಳನ್ನು ಹೊರತರಬಹುದು. ಅಂತರ್ಯದ ಸ್ಫುರಣೆಯಂತೆ ಅದು ಈ ಕಾರ್ಯವನ್ನು ಮಾಡಬಹುದು. ಯಾವ ಕಟ್ಟುನಿಟ್ಟಿಲ್ಲದೆ, ಕವಿಯು ಪೂರ್ವಜರಿಗೆ ಶರಣುಹೋಗದೆ ಇರಬಹುದು. ಕಾರಣರೂಪದಲ್ಲಿದ್ದ ಪೂರ್ವಜರಿಂದ ಅವನಿಗೆ ಶಕ್ತಿ ಬರಲಿ ಮತ್ತು ಅವನು ಉಪದೇಶ ಪಡೆಯಲಿ. ಆದರೆ ಅವನು ಬೆಳಕಿನ ಕಡೆಗೆ ಹಾಗೂ ಜೀವನದ ಕಡೆಗೆ ಅನಂತರ ತೆರಳಬೇಕು.

ನೀವು ಇನ್ನೂ ಹುಟ್ಟದಿರುವ ಕವಿಗಳು ನಮ್ಮಿಂದ ದೂರವಾಗಿದ್ದೀರಿ ಯಾಕೆಂದರೆ, ನಮ್ಮ ನಡುವೆ ಜಗತ್ತಿನ ಮುಖವನ್ನೇ ಬದಲು ಮಾಡುವ ಅಥವಾ ಹಾಳು ಮಾಡುವ ವೈಜ್ಞಾನಿಕ ಸಂಶೋಧನೆಯು ಅಡ್ಡ ಬಂದಿದೆ. ಈ ಮರುಭೂಮಿಯ ದಂಡೆಯ ಮೇಲೆ ನಿಂತು ನಾವು ಮಾತನಾಡುತ್ತಲಿದ್ದೇವೆ; ಇದನ್ನು ನಮ್ಮ ಪೀಳಿಗೆಯೇ ನಿರ್ಮಿಸಿದೆ ಮತ್ತು ಅದನ್ನೇ ಶಾಂತಿಯೆಂದು ಕರೆದಿದೆ. ಇಷ್ಟಾದರೂ ನಾವು ಸಹೋದರರಿಗಿಂತಲೂ ಸಮೀಪದವರಾಗಿದ್ದೇವೆ ಯಾಕೆಂದರೆ ಮರುಭೂಮಿಯನ್ನೇ ಹೂಬಿಡುವಂತೆ ಮಾಡಲು ಕವಿಗಳು ಶಕ್ತರಾಗುತ್ತಾರೆ ಆಶಾಭಂಗ, ದುಃಖ—ಅಷ್ಟೇ ಏಕೆ ನಿರಾಶೆಯನ್ನು ಕೂಡ—ಹೊಸದನ್ನು ಸೃಷ್ಟಿಸುವ ಕೈಗಳಿಗೆ ವಿಧೇಯಕ ಮತ್ತು ಉತ್ತೇಜಕವಾಗುವಂತೆ ಮಾಡುವ ಕವಿಗಳೇ ಮರ್ತ್ಯರಲ್ಲಿ ಅತ್ಯಂತ ಧೈರ್ಯಶಾಲಿಗಳು.

ಒಂದು ಹಿಡಿ ಮಣ್ಣಿನಲ್ಲಿಯೂ ಭೀತಿಯನ್ನು ಮತ್ತು ಉಸುಕಿನ ಒಂದು ಕಣದಲ್ಲಿಯೂ ಚಿರಂತನತೆಯನ್ನು ತೋರಿಸುವುದು ಇನ್ನೂ ನಿಮ್ಮ ಕರ್ತವ್ಯವಾಗಿರುತ್ತದೆ. ಇ. ಎಂ. ಫೋಸ್ಟರ್ ಹೇಳಿದಂತೆ—' ಕಲೆಯು, ನಾವು ಹೀರ ಚಿಕ್ಕವರೆಂಬುದನ್ನು ಅನುಭವಿಸುವಂತೆ ಮಾಡಿಯೇ ನಮ್ಮನ್ನು ವೃದ್ಧಿಗೊಳಿಸುತ್ತದೆ. ' ನೀವು ಈ ಕೆಲಸವನ್ನು ಸಾಧಿಸುವಾಗ ನಮ್ಮ ಜಗತ್ತಿನಷ್ಟೇ ಸಂಕೀರ್ಣ ಮತ್ತು ಗಾಬರಿಗೊಳಿಸುವಂತಹ ಜಗತ್ತು ನಿಮ್ಮದಾಗಿರಬಹುದು. ನೀವು ಯಾವುದೇ ರೂಪದಲ್ಲಿ ಬರೆದರೂ, ನೀವು ವಿಶ್ವಮಾದರಿಯ ಯಾವುದೇ ಭಾಗವನ್ನು ಬೆಳಕಿಗೆ ತಂದರೂ, ನಮ್ಮಂತೆಯೆ ನಿಮಗೂ ಋತುಮಾನಗಳು ಬಂದುಹೋಗುವುವು ಗಾಳಿಯು ಗೋಧಿಯ ಹೊಲಗಳ ಮೇಲೆ ಬೀಸುವುದು, ನೆಲವು ಸಮುದ್ರದೆದುರು ತನ್ನ ಎದೆ ತೆರೆದಿರುವುದು; ಮತ್ತು ಮನುಷ್ಯರು ನಗರಗಳಲ್ಲಿ ಅಲೆದಾಡುವಾಗ ಸಂಜೆದೀಪಗಳು ಒಮ್ಮೆಲೇ ಒಂದರ ಹಿಂದೊಂದು ಬೆಳಗುವುವು ಈ ದೀಪಗಳು ನಿಮ್ಮ ಕವಿತೆಗಳಂತೆ ಸಾಗುತ್ತಿರುವ ಜೀವನದ ಮಧ್ಯೆ ನಿಂತ ಶಾಶ್ವತೆಯ ಪ್ರತೀಕಗಳು ಛಾಯೆಯ ಕೋಣೆಯಲ್ಲಿ ಪ್ರೀತಿಯ ಗುರುತುಗಳು! ನೀವು ಕವಿಗಳಿರುವುದರಿಂದ ಏಕಾಗ್ರತೆಯೇ ಸರ್ವಸ್ವವೆಂಬುದನ್ನು ಬೇರೆ ಹೇಳಬೇಕಾಗಿಲ್ಲ.

ಆದರೆ ನಮ್ಮಲ್ಲಿ ಒಂದು ಇಚ್ಛೆ ಇದೆ; ನಾವು ಎಲ್ಲಿ ಅಸಫಲರಾದೆವೋ ಅಲ್ಲಿ ನೀವು ಸಫಲರಾಗಿರಿ. ನಿಮ್ಮ ಪೀಳಿಗೆಗೆ ಸ್ವಾಭಾವಿಕ, ಸಮಾಧಾನಕಾರಕ, ಆನಂದದಾಯಕವಾಗಿರುವ ಪವಿತ್ರ ಪ್ರತಿಮೆಗಳನ್ನು ನೀಡುವಂತಹ ಸಂದೈವ ಮತ್ತು ಶಕ್ತಿ ಬರಲಿ ನಾವು ಮೇಲಿಂದ ಮೇಲೆ ಪ್ರತಿಬಿಂಬಿಸಿದಂತೆ ಮಾನವೀಯದೃಶ್ಯವು ಒಂದು ಸಮಸ್ಯೆಯಾಗಿಲ್ಲ ಇದು ಚಿತ್ತವನ್ನಾಕರ್ಷಿಸುವ ಸೂತ್ರದ ಗೊಂಬೆಗಳಾಟವಲ್ಲ ದಾರಿಯಿಲ್ಲದ ಒಂದು ಘನಘೋರವಾದ ಅರಣ್ಯದಲ್ಲಿ ನಮ್ಮ ಚಿತ್ತ ಒಂದು ಪುಕ್ಕತನದ ಛಾಯೆಯಾಗಿಲ್ಲ. ಹಾಗಾದರೆ ನಿನ್ನೊಳಗೆ ನೋಡು, ಅಷ್ಟೇ ಸ್ಥೈರ್ಯದಿಂದ ಹೊರಗೂ ನೋಡು!

ಕುಟುಂಬದ ರೂಪದಲ್ಲಿ ಮತ್ತು ಸಮಾಜದ ರೂಪದಲ್ಲಿ ಮನುಷ್ಯ ಜಾತಿಯನ್ನೇ ಏಕೀಕರಿಸುವ ಸದ್ಗುಣಗಳೇ—ಕವಿತೆಯನ್ನು ನಿರ್ಮಿಸಲು, ಹೊಂದಿಕೆಯಿಲ್ಲದ ಸ್ಮೃತಿಗಳನ್ನು ಮತ್ತು ಹೊಯ್ದಾಡುವ ಮನಸ್ಥಿತಿಗಳನ್ನು ಏಕೀಕರಿಸುವ ಆ ಒಂದೇ ಕಾವ್ಯವಸ್ತುವಿನ ವ್ಯತ್ಯಾಸಗಳಾಗಿವೆ. ಭೂಮಿಯು ಹೊಸ ನಿಯಮಗಳು ಮತ್ತು ಪ್ರದೇಶಗಳು, ಕ್ರಮೇಣ ಪರಿಶೋಧಿಸಲ್ಪಟ್ಟಂತೆ ಮಾನವನ ಸುತ್ತಲಿದ್ದ ಅಪರಿಚಿತ ಭೂಮಿಯ ಪಟ್ಟಿಯು ಇಂದು ಕ್ಷೀಣವಾಗಿದೆ. ಹೊಸ ಶೋಧಗಳ ಮೂಲಕ ಮಾನವನಿಗೆ ಭೂಮಾತೆಯ ಎಲ್ಲ ರಹಸ್ಯಗಳು ಗೊತ್ತಾಗುವುದರಿಂದ, ಜಗತ್ತಿನಲ್ಲಿ ರಹಸ್ಯಗಳೇ ಉಳಿಯಲಿಕ್ಕಿಲ್ಲ. ಹಾಗಾದರೆ ಈ ಕಾವ್ಯದ ಉಗಮವೆಲ್ಲಿ? ಆದರೆ ಕಾವ್ಯಕ್ಕೆ ಎಂದೆಂದೂ ಬತ್ತದಂತಹ ಉಗಮಸ್ಥಾನವಿದೆ. ಕಾವ್ಯವು ಗೊತ್ತಿದ್ದ ವಿಷಯಗಳೊಡನೆ ಪರಿಚಿತವಿದ್ದಷ್ಟೇ, ಗೊತ್ತಿಲ್ಲದ ವಿಷಯಗಳೊಡನೆ ಪರಿಚಿತವಾಗಿರುತ್ತದೆ. ಕವಿಗೆ ಸ್ಫೂರ್ತಿಯು ಒಂದು ದರ್ಶನದಂತೆ ಬರುತ್ತದೆ.

Now a thing was secretly brought to me and
mine ear received a little there of……
Then a spirit passed before my face, the hair
of my flesh stood up
It stood still, but I could not discern the
form there of an image
was before my eyes, there was silence and
I heard a voice

ಇದೊಂದು ತೆರೆಯಲ್ಲಿಯ ದರ್ಶನವಾಗಿದೆ. ಇದೊಂದು ಅಪೂರ್ಣ ಸಹಜ ಜ್ಞಾನ. ಮಾನವಿಯ ಹೃದಯದ ಆಳದೊಳಗಿಂದ ಇದು ಹೊರಬಂದಿದೆ. ಅವನಿಗೆ ರಹಸ್ಯವು ಬೇಕಾಗಿದ್ದರೆ ಕೊನೆಯ ರಹಸ್ಯವಿದೆ. ಮನುಷ್ಯನ ಹೃದಯದೊಳಗಿಂದ ಹೊರಬರುವ ಯಾವ ವಸ್ತುವೂ ಸದ್ಗುಣದಷ್ಟು ರಹಸ್ಯಮಯವಾಗಿಲ್ಲ. ನೈತಿಕ ಆಸಕ್ತಿ ಹಾಗೂ ಬೌದ್ಧಿಕ ಜಿಜ್ಞಾಸೆ—ಇವುಗಳ ನಿಸ್ವಾರ್ಥ ಚಲನೆ; ಕಾರುಣ್ಯ ದಯೆ, ಶಾಂತಿ ಮತ್ತು ಪ್ರೀತಿ ಇವುಗಳ ಆತ್ಮಪ್ರೇರಿತ—ಇವೇ ಸದ್ಗುಣಗಳಾಗಿವೆ. ಕವಿಯು ಆಸಕ್ತಿಯಿಂದ ಇವುಗಳೊಡನೆ ಅನುಕಂಪನೆ ಹೊಂದಿದಾಗ ಮತ್ತು ಆನಂದದಾಯಕ ಪ್ರತಿಮೆಗಳ ರೂಪದಲ್ಲಿ ಇವುಗಳನ್ನು ಹೆಚ್ಚು ಸತ್ಯಗಳೆಂಬ ಮನವರಿಕೆ ಮಾಡುವಾಗ ಅವನು ಜಗತ್ತಿನಲ್ಲಿ ತನ್ನ ಅದ್ವಿತೀಯವಾದ ಪಾತ್ರವನ್ನು ವಹಿಸುತ್ತಾನೆ. ಆ ಜಗತ್ತಿನಲ್ಲಿ ಕವಿಗಳಷ್ಟೇ ಏಕೆ? ಎಲ್ಲ ಮನುಷ್ಯರು ಅವರ ಎಲ್ಲ ಕೃತಿಗಳು ಚಿರಂತನ ಚೈತನ್ಯದ ಚಿರಂತನ ಲೀಲೆಯಂತೆ ತೋರುತ್ತವೆ.

ಸ್ವಾತಂತ್ರ್ಯದಿನೋತ್ಸವದ ನಿಮಿತ್ತ

ಒಲವಿನ ಕಾಣಿಕೆ!

ನಮ್ಮ ಕೋಟ್ಯವಧಿ ಗ್ರಾಹಕರಿಗೆ, ಸಹಸ್ರಾವಧಿ ಠೋಕ-ವ್ಯಾಪಾರಿಗಳಿಗೆ ಮತ್ತು ಕಿರುಕೋಳ ವ್ಯಾಪಾರಿಗಳಿಗೆ

ESTRELA
REGD TRADE MARK

ಎಸ್ಟ್ರೇಲಾ ನಿರ್ಮಾತೃಗಳ
ಬೆಲೆಬಾಳುವ ಟಾರ್ಚುಗಳು, ಸೆಲ್ಲುಗಳು.
ಬ್ಯಾಟರಿಗಳು!

ವಧೂವರರ ಜ್ಯೋತಿಷ್ಯ

ಕನ್ನಡದಲ್ಲಿಯೆ ಒಂದು ಹೊಸಪುಸ್ತಕ!

ಈಗಾಗಲೇ ಬೆಳಕಿಗೆ ಬಂದಿದೆ.

ಲೇಖಕರು:— ಜ್ಯೋತಿಷಿ ಎನ್. ಕೆ. ಜೋಗಳೇಕರ

ಮದುವೆಗೆ ಮೊದಲು ವಧೂ-ವರರ ಸಲುವಳಿಯನ್ನು ಕೂಡಿಸಿ ನೋಡುವುದಕ್ಕೆ ಬೇಕಾಗುವ ಜ್ಯೋತಿಷ್ಯದ ಪ್ರತಿಯೊಂದು ಸಂಗತಿಯನ್ನೂ ವಿವರ-ವಿವರವಾಗಿ ಈ ಪುಸ್ತಕದಲ್ಲಿ ನಿರೂಪಿಸಲಾಗಿದೆ.

ಬೇಕಾದವರು ಕೂಡಲೆ ಬೇಡಿಕೆಗಳನ್ನು ಕಳುಹಿರಿ!
ಕ್ರೌ. ೮. ೧೨೮ ಪುಟಗಳು. ಬೆಲೆ ೧ ರೂಪಾಯಿ
ವ್ಯಾಪಾರಸ್ಥರಿಗೆ ಯೋಗ್ಯ ಕಮಿಶನ್ನು ಕೊಡಲಾಗುವುದು.

ಜ್ಯೋತಿಷಿ ಎನ್. ಕೆ. ಜೋಗಳೇಕರ
ಶಿವಾಜಿ ರೋಡ್, ಮಂಗಳವಾರಪೇಟೆ, ಧಾರವಾಡ

ಸಾಹಿತ್ಯವಿಮರ್ಶೆಯ ಶಿಕ್ಷಣರಂಗ

ಕಳೆದ ಸಂಚಿಕೆಯಲ್ಲಿ ಅಪೇಕ್ಷಿಸಿದಂತೆ 'ದೇವರ ಸಾನ್ನಿಧ್ಯಕ್ಕೆ' ಕತೆಯ ವಿಮರ್ಶೆಗಳು ಐದು ಜನರಿಂದ ಬಂದಿವೆ. 'ವನ್ಯಮೃಗ ಪಶುಸಂಕುಲ' ಶ್ರುತಿಚಿತ್ರವನು ಕುರಿತ ವಿಮರ್ಶೆಗಳು ಒಂದೂ ಬಂದಿಲ್ಲ. ಒಬ್ಬರು ಮಾತ್ರ ಬರದಿದ್ದರಿಂದೂ ಬರೆದಿಟ್ಟ ವಿಮರ್ಶೆಯನ್ನು ಸರಿಯಾದ ವೇಳೆಯಲ್ಲಿ ಕಳುಹಲು ಸಾಧ್ಯವಾಗಲಿಲ್ಲವೆಂದೂ ಬರೆದು ತಿಳುಹಿದ್ದಾರೆ.

ಕಥೆಯ ವಿಮರ್ಶಕರ ಪರಿಚಿತಿ:

೧. ಶ್ರೀ ಜಿ. ಎಸ್. ಹೆಗಡೆ, ಕೇರಿಮನೆ—ಶಿರಸಿ; ೨. ಶ್ರೀ. ಬಿ ಜಯರಾಚಾರ್ಯ ಬಿ. ಎಸ್‌ಸಿ. ಬೆಂಗಳೂರು ೩. ಶ್ರೀ. ಕೆ. ಎಸ್. ಶರ್ಮಾ, 'ವಾಣೀಮಂದಿರಂ' ಕಾಸರಗೋಡು; ೪. ಶ್ರೀ ಮಹೇಶ, ಗೋಗಿ; ೫. ಶ್ರೀ. ಎಸ್. ಸೂರ್ಯನಾರಾಯಣ, ಮದ್ರಾಸ್.

ಎಲ್ಲ ವಿಮರ್ಶೆಗಳನೂ ಸಂಪಾದಕ ಸಮಿತಿಯವರು ನೋಡಿ, ತಮ್ಮ ನಿರ್ಣಯವನ್ನು ಕೊಟ್ಟಿದ್ದಾರೆ ಶ್ರೀ. ಕೆ. ಎಸ್. ಶರ್ಮಾ ಅವರ ವಿಮರ್ಶೆ ಅತ್ಯುತ್ತಮ. ಶ್ರೀ. ಮಹೇಶ, ಗೋಗಿ ಮತ್ತು ಶ್ರೀ. ಬಿ. ಜಯರಾಚಾರ್ಯ ಅವರ ವಿಮರ್ಶೆಗಳು ಉತ್ತಮವಾಗಿವೆ. ಮಿಕ್ಕುವೆರಡು ಕೂಡ ಒಳ್ಳೆಯ ವಿಮರ್ಶೆಗಳೆ.

'ಕಂಕಣ' ಎಂಬ ಕಾದಂಬರಿಯ ವಿಮರ್ಶೆಯನ್ನು ಈ ಸಂಚಿಕೆಯಲ್ಲಿ ಪ್ರಕಟಿಸಬೇಕಾಗಿತ್ತು; ಕಾರಣಾಂತರದಿಂದ ಅದನ್ನು ಮುಂದಿನ ಸಂಚಿಕೆಯಲ್ಲಿ ಪ್ರಕಟಿಸುವುದಾಗಿ ನಿರ್ಣಯಿಸಿದ್ದೇವೆ.

ಮುಂದಿನ ತಿಂಗಳ ವಿಮರ್ಶೆಯ ಮೇಲಾಟಕ್ಕಾಗಿ, ಈ ಸಂಚಿಕೆಯಲ್ಲಿ ಪ್ರಕಟವಾದ '**ಯಾರ ಗೆಲುವು?**' ಎಂಬ ಕಥೆಯನ್ನಾಗಲಿ, '**ಇದೂ ಪ್ರೇಮವೆ?**' ಎಂಬ ಕಥೆಯನ್ನಾಗಲಿ ಕುರಿತು ವಿಮರ್ಶೆ ಬರೆದು ಕಳುಹಬೇಕು.

— **ಸಂಪಾದಕರು**

ದೇವರ ಸಾನ್ನಿಧ್ಯಕ್ಕೆ

(ಕಥೆಯ ವಿಮರ್ಶೆ)

ಶ್ರೀ. ಕೆ. ಎಸ್. ಶರ್ಮಾ ವಾಣೀಮಂದಿರಂ, ಕಾಸರಗೋಡು

"ದೇವರ ಸಾನ್ನಿಧ್ಯಕ್ಕೆ" ಕತೆಯಿದು ಒಡಲ—ಕರುಳ ಬೇಗೆಯನ್ನು ಬಿಂಬಿಸಿದ ಒಂದು ದುರಂತಜೀವನದ ಚಿತ್ರ. ತನ್ನದೇ ಸಂತಾನವು ತನ್ನ ಕಣ್ಣ ಮುಂದೆಯೆ ಕುಡಿಯೊಡೆದು ಸಾಗುತ್ತಿರುವಾಗಲೆ ಮುರುಟುವಂತಾದ ಭೀಕರಪರಿಸ್ಥಿತಿಯಲ್ಲಿ ತಲ್ಲಣಿಸಿ, ಕೊನೆಗೆ ದೇವರ ಸಾನ್ನಿಧ್ಯದಲ್ಲಿ ಜೀವನದ ಉಸಿರ ನಿಲುವನ್ನರಿಸಿ ಸಾಗಿ—ಅಲ್ಲಿಯೂ ತಮ್ಮ ಅಜ್ಞಾನದಿಂದಲೋ ಇಲ್ಲವೆ ಪರಿಸ್ಥಿತಿಯ ಪ್ರಭಾವದಿಂದಲೋ ಇನ್ನೊಂದು ನೂತನದುಃಖಕ್ಕೆ ಎಡೆಮಾಡಿಕೊಂಡು ನವೆದಾಡುವಂತಾದ ಜೀವಿತದ ಕರುಣಾಮಯ ಚಿತ್ರ! ಇಂತಹ ಜೀವಿತ ಕಥೆಯು "ದುರ್ದೈವಿಗಳ ಮಾಲಿಕೆಯಲ್ಲಿ ಹೊಂದಿಕೊಳ್ಳುವುದೋ, ಇಲ್ಲವೆ ಅಜ್ಞಾನಿಗಳ ಮಾಲಿಕೆಯಲ್ಲಿ ಹೊಂದಿಕೊಳ್ಳುವುದೋ" ಅದು ಆ ಪರಿಸ್ಥಿತಿಯ ಮುಂದೆ ನಿಂತ ಸಮಾಜಕ್ಕೇ ಗೊತ್ತು! ಜೀವನದ ಸಾಗನ್ನರಿಯದೆ, ಪರಿಸ್ಥಿತಿಯನ್ನರಿಯದೆ, ಎಂತಹ ಸುಸಂಸ್ಕೃತ ಜನತೆಯಾದರೂ ಮೊದಲೇ ತೀರ್ಮಾನವನ್ನು ಕೊಡಲು ಸಾಧ್ಯವಾಗಲಾರದು! ಇದು ಮಾತ್ರ ಸತ್ಯ!

ಅತಿ ವಿಶಾಲವಾಗಿರುವ ಜೀವನದ ಒಂದು ವಿಶಿಷ್ಟವಾದ ಭಾಗ. ವನ್ನೆತ್ತಿಕೊಂಡು, ಅದನ್ನು ಮಾರ್ಮಿಕವಾಗಿ ರೂಪಿಸಿ ಹೇಳುವುದು ಕಥನಕಾರನ ಕೌಶಲ್ಯವು. ಕಥನಕಾರನು ಮಾತ್ರ ತಾನೆತ್ತಿಕೊಂಡ ವಸ್ತುವಿನ ಪೂರ್ಣವಾದ ನಿಲುವನ್ನರಿಯಬೇಕು ಮಾತ್ರವಲ್ಲ; ಕಥಾಭಾಗದ ಯಾವ ಸಂಧಿಯೂ ಕೆಡದಂತೆ, ಕುಸಿಯದಂತೆ ಬಹು ಜಾಗರೂಕತೆಯಿಂದ ವಸ್ತು, ಅಂತರ್ಗತ ಘಟನೆಗಳನ್ನು ವಿಶ್ಲೇಷಿಸಿ ತೋರಬೇಕು. ಹೀಗೆ ತೋರುವಾಗ ಓದುಗನ ಮನಸ್ಸಿನಲ್ಲದು ಪರಿಣಾಮಕಾರಿಯಾಗುವಂತೆ 'ಮಾನಸಿಕ-ವಿಶ್ಲೇಷಣೆ' ಯನ್ನೂ ಮಾಡುವುದು ಚೆಲುವಿಗೆರವಾಗದೆ. ಅಲ್ಪಕಾಲದ ಓದಿನಲ್ಲಿ ಮುಗಿಯು. ಬಹುದಾದ ಈ ಬಗೆಯ ಕತೆಗಳಲ್ಲಿ, ಬಹುಕಾಲ ಪರಿಣಾಮಕಾರಿಯಾದ ವಿಚಾರಾಂದೋಲನವೆಸಗುವ ಒಂದು ಬಗೆಯ ಆತಂಕವಾದ ಸೆಳೆತ ಇರಬೇಕು. ಇದುವೆ ಚಿಕ್ಕಕತೆಯ ಹೃದಯದಲ್ಲಿ ನೆಲೆಗೊಂಡ ಆಕರ್ಷಕ ರಸಚುಂಬಿ!— ಈ ದೃಷ್ಟಿಯಿಂದ ಕಥೆಯಿದನ್ನು ಪರಿಶೀಲಿಸುವ!

ಪ್ರಸ್ತುತ ಕಥೆಯ ಲೇಖಕರು, ಜಯಂತಿಯ ಮುಂದೆ ಕಥಾಲೇಖಕರಾಗಿ ಹೊಸಬರಲ್ಲ! ಈ ಮೊದಲು ಇವರ ಅನೇಕ ಕಥೆಗಳು ಜಯಂತಿಯಲ್ಲಿ ಬಂದಿವೆ; ಆದರೆ ಇಂದು ಬಂದ ಕಥೆ ಮಾತ್ರ ಈ ಲೇಖಕರಿಂದ ತುಸು ಹೊಸ ಬಗೆಯಲ್ಲಿ ಹೊರಬಂದಿದೆಯೆನ್ನಬೇಕು. ಆ ಹೊಸತನದ ಮುಂದೆ—ವಿಮರ್ಶೆಯನ್ನು ಮಾಡುವವನು ಕೇವಲ ಸ್ವಾಭಿಮತವನ್ನು ಕೊಡಬಹುದೇ ಹೊರತು, ಕಥಾಶ್ರವಣ ಮಾರ್ಗವನ್ನು ನಿರ್ದೇಶಿಸುವುದು ಸಮುಚಿತವೆನಿಸಲಾರದು! ವಿಮರ್ಶಕನು ಗುಣ-ದೋಷಗಳನ್ನು ಸೂಚಿಸಬೇಕು; ಆದರೆ ಮಾರ್ಗವನ್ನು ತೋರುವುದು ನ್ಯಾಯವೇ? ನ್ಯಾಯವೆನಿಸಿದರೂ ನಿರುಪಾಯನಾಗಿ ಕೆಲವೊಮ್ಮೆ ಸಮರ್ಥನೆಗಾಗಿ ಈ ಅಕ್ರಮವನ್ನು ಮಾಡಬೇಕಾಗಿದೆ. ಅರ್ಥಾತ್ "ಈ ಕಥೆಯಲ್ಲಿ ಅಲ್ಲಲ್ಲಿ ಕೆಲವು ದೋಷಗಳು ಬಂದಂತೆ ಕೊನೆಯ ತೆರೆಯೂ ಇಳಿದ ಬಗೆ ಏನೂ ಸಮುಚಿತವಾಗಿಲ್ಲ; ಬದಲಾಗಿ ಕಥಾತಂತ್ರವನ್ನೇ ಬೀಳುಗೆಡಹುವೆ"ಯೆಂಬೆನ್ನುವ ಮಾತಿಗಾಗಿಯೇ— ಮಾತಿನ ಪರಿಶೀಲನೆಗಾಗಿಯೇ ಮೇಲಿನ ಆ ಮಾತನ್ನು ಎತ್ತಿಕೊಳ್ಳಲಾಯಿತು!

ಕಥಾವಸ್ತು—

ಬಡತನದಲ್ಲಿ ಬೇಯುವ ಒಂದು ಸಂಸಾರ. ಈ ಸಂಸಾರದ ನಿಲುವೆಂದರೆ ಅದು ಅಸಹ್ಯವೇದನಾಪೀಡಿತವಾದ ಒಂದು ಜೀವಿತ ಗರ್ತ! ಸಂಸಾರವದು ತಮ್ಮ ಪಾಲಿಗೆ— ದೇವರಿತ್ತ, ದೇವರೇ ಕೊಂಡೊಯ್ದ ಸಂತತಿಯನ್ನು ಕಂಡು, ಕಷ್ಟದಿಂದಾ ದುಃಖವನ್ನು ನುಂಗಿ ತತ್ತರಿಸಿದ ಬೆಂದೊಡಲ ಸಂಸಾರ! ಜನಿಸಿದ ಆರು ಮಕ್ಕಳು, ಕುಡಿಯೊಡೆದು ಚಿಗುರಿ ಬೆಳಗುವಾಗಲೇ ಸಾಗಿದುವೆಂದಾದರೆ, ಆ ಸಾಗಿನ ನಿಲುವಿನಲ್ಲೇ ಅವು ಅನೇಕ ದೈವಗಳ ಹರಕೆಯ ಹೊರೆಯಲ್ಲಿ ಸಾಗಿದುವೆಂದಾದರೆ, ಆ ದಂಪತಿಗಳು ಮುಂದೆ ಯಾರೋ ಒಬ್ಬ ಮಹನೀಯರ ಮತಿತಂತೆ—ಧರ್ಮಸ್ಥಳದಲ್ಲಿ ನೆಲಸಿರುವ ಹೆಣ್ಣು ಶಿಶುವಿನ ಉಳಿವಿಗಾಗಿ, ಹೊಟ್ಟೆಯಲ್ಲಿ ನೆಲೆಗೊಂಡ ಮತ್ತೊಂದ ಅವ್ಯಕ್ತಜೀವನದ ಭದ್ರತೆಗಾಗಿ—ಧರ್ಮಪುರದ ಶ್ರೀನಾಥನಿಗೆ ಹರಕೆ ಹೊತ್ತರು. ಈ ಹರಕೆಯನ್ನು ಸಲ್ಲಿಸುವುದಕ್ಕಾಗಿ, ಆಕೆ ಗರ್ಭಿಣಿಯಿರುವಾಗಲೇ ಅವರು—ಎಂದರೆ ಆ ದಂಪತಿಗಳು ಧರ್ಮಪುರಕ್ಕೆ ತೆರಳಿದರು. ದಾರಿಯಲ್ಲಿ ಮಳೆ ಬಿದ್ದುದರಿಂದ—ಮಗು ನೆನೆದು, ಜ್ವರವೇರಿ ಕಂಗಾಲಾಗಿತ್ತು. ಆದರೂ ಪುರಕ್ಕೆ ಬಂದಾಗ ಸ್ಥಳದ ವಿಧಿಯಂತೆ, ಪುರದ ಕೆರೆಯಲ್ಲಿ ಮಿಂದು, ಸನ್ನಿಧಿಯಲ್ಲಿ ಹರಕೆ ಮುಗಿಸಿ ಹಿಂದಿರುಗಿದರು. ಬರುವಾಗ ಸಿಕ್ಕ ಮಳೆ, ಹೋಗುವಾಗಲೂ ಇವರನ್ನು ಬಿಡಲಿಲ್ಲ! ಅವರೂ ಊರನ್ನು ಸೇರುವ ಹಂಬಲದಿಂದ ಸಾಗಿದರು ದಾರಿಯಲ್ಲಿ ದಾಟಲು ಒಂದು ಚಿಕ್ಕ ಹೊಳೆಯಿತ್ತು! ಮಗುವನ್ನು ತಂದೆ ಹೊತ್ತಂತೆ, ತಾಯಿ ಮತ್ತೊಂದು ಮಗುವನ್ನು ಒಡಲಲ್ಲಿ ತುಂಬಿ ಸಾಗಿದ್ದಳು. ದಿಟ್ಟತನದ ಹೆಜ್ಜೆಯ ಮುಂದೆ ಗಂಡ ಆ ಹೊಳೆ ದಾಟಿದ: ಆದರೆ ಆಕೆ ಮಾತ್ರ ಬೆದರಿ ಬೆದರಿ ದಾಟಿ, ಕೊನೆಗೆ ಜಾರಿ ನೀರಪಾಲಾದಳು, ಆತ ಇದನ್ನು ಕಂಡರೂ ಮಗುವನ್ನುಳಿಸಲು, ಆ ಮಗುವಿನ ಕೂಗನ್ನು ನಿಲ್ಲಿಸಲು ತನ್ನ ಶಕ್ತಿಯ ಅಳಿವನ್ನು ಸ್ವಾಗತಿಸಿದ! ಅದೇ ನಿಲುವಿನಲ್ಲಿ ಮಗುವಿಗೊಂದೇಟು ಬಿಗಿದು ಊರತ್ತ ಸಾಗಿದ!—

ಕಥಾತಂತ್ರದ ಪ್ರಥಮವೇದಿಕೆ—

"ಧರ್ಮಪುರ"ಕ್ಕೆ ತೆರಳುವ ಉದ್ಯಮದಲ್ಲಿ ತೊಡಗಿ ಸಾಗಿದ ದಂಪತಿಗಳ ಪಥಕ್ರಮಣ, ಪಥಸನ್ನಿವೇಶ, ಜೀವನದ ಒಳಬೇಗುದಿಯ ನೊಂದೆದೆಯ ನೋವಿನ ಮಾತುಗಳ ದೂರ ದೂರದ ಜೋತಣೆ, ಇವುಗಳಿಂದ ಸಾಗಿನಿಂತ ಕಥೆಯಿದು, ದಿಟ್ಟತನದ ಅಲ್ಪಾಶ್ರಯದ ಮಾನುಭಾವವಿರದ ಒಬ್ಬಾತ 'ಗಂಡ'ನ— "ಎಲ್ಲಾದರೊಂದೆಡೆ ನೆಲೆ ಸಿಕ್ಕಿದರೆ ಮಾಡಿಸೋಣ'—ಎಂಬಂದು-ಹೊತ್ತ ಗರ್ಭದ ನೋವಿನೊಡನೆ ದಾರಿಯುದ್ದಕ್ಕೂ ನೆಲೆನಿಂತ ಮರ್ಗಮ-ದುಸ್ಸಂಧಾನ ಪಥದ ಕ್ರಮದ ಏಂಕಷ್ಟದಲ್ಲಿದ್ದ "ಹೆಣ್ಣದೆ"ಯ ಜೀವನ ಚಿತ್ರವನ್ನಿಲ್ಲಿ ಕುಶಲ ಕಥಾಕಾರರು ಚಿತ್ರಿಸಿದ್ದಾರೆ. ಈ ಚಿತ್ರಣಕ್ಕನುಗುಣವಾಗಿ ವರ್ಣನೆಯನ್ನೂ ಸಹಜ ಮಾರ್ಗದಲ್ಲಿಯೇ ತೇಲಿಸಿ ಹಾಯಿಸಿದ್ದಾರೆಂಬುದು ಗಮನೀಯವಿದ್ದಂತೆ, ಕತೆಯ ಮೊದಲ ಪುಟದ ಮೂರನೆಯ ಪ್ಯಾರದಲ್ಲಿ ಬಂದ ಸೂರ್ಯಾಸ್ತಮಾನದ ಒಂದು ವರ್ಣನೆಯು, ವರ್ಣನೆಯ ದೃಷ್ಟಿಯಿಂದ ರುಚಿರವಿದ್ದರೂ, ಪ್ರಸ್ತುತ ಭಾಗಕ್ಕೆ ತೀರಾ ಹೊಂದಿಕೊಂಡಿಲ್ಲವೆಂಬುದನ್ನು ಗಮನಿಸಬೇಕು. ಚಿಕ್ಕ ಕತೆಗಳಿಗುಚಿತವಾದ ರೀತಿಯ ವರ್ಣನೆಯಿದಾಗಿದ್ದರೂ, ಈ ಕತೆಯ ಜೀವಿತದ ನೆಲೆಗೆ, ಭದ್ರತೆಗೆ ಇಂತಹ ವರ್ಣನೆಯುಪಯೋಗಿಸದು; ಬದಲಾಗಿ ಕತೆ ಕುಸಿಯುವುದು. ಅಂತೆಯೆ ದಾರಿಯನ್ನು ಸಾಗುತ್ತಿದ್ದ ಅವರು ದೂರದ ಮನೆಯೊಂದರಲ್ಲಿ ದೀಪವನ್ನು ಕಂಡು ಅಲ್ಲಿಗೆ ಹೋಗ ಬಯಸುವವರು; ಸರಿ. ಹೋಗುವ ದಾರಿ, ಕಾಣುವ ದೃಶ್ಯ ಹಳ್ಳಿಯ ವಾತಾವರಣಕ್ಕೆ ಮೆಚ್ಚಾಗಿ ಹೊಂದಿಕೊಳ್ಳುವ ರೀತಿ! ಸಾಗುತ್ತಿದ್ದಂತೆ ಅವರ ಮುಂದೆ 'ತಡಮೆ' ಯೊಂದು ಸಿಗುವುದು. ದಿಟ್ಟತನದ ಆ

ಉದ್ಧಟಗಂಡು ವ್ಯಕ್ತಿ, ಇಷ್ಟು ದೂರ ಬಂದಾಗಲೂ ಮನುಷ್ಯನಿರದವನು—ಈಗ ಆಕೆಯನ್ನು ತಡಮೆ ದಾಟಿಸಲು ಸಹಾಯ ಮಾಡಿದನು. ಮಳೆಯಿಂದ ನೆನೆದು ಕಂಗಾಲಾದ ಆಕೆಯನ್ನು ಆತ "ನಾಚಿಕೆಯನ್ನು ಬಿಟ್ಟು ಕೈಹಿಡಿದು ದಾಟಿಸಿ"ದನು ಎಂದೆನ್ನುವಾಗ ಮಾತಿದು ತೀರಾ ಕೆಳಮಟ್ಟಕ್ಕೆ ಬರುತ್ತದೆ. ತಡಮೆ ದಾಟುವಾಗಲೂ ಆತ ಮುಂದುವರಿದೇ ಹೋಗಬಹುದಾಗಿತ್ತು. ಹೊರತು ಕೆಲವಾರು ವರ್ಷಗಳಿಂದ ಆಕೆಯೊಡನೆ ಬಳಕೆಯಿದ್ದ ಆತ, ಕಾಯ್ತನದ ಹೊರೆಹೊತ್ತು ಬಳಲಿದ ಆಕೆಯನ್ನು, ಚಿರಪರಿಚಿತೆಯಾದ ಆಕೆಯನ್ನು ದಾಟಿಸುವಾಗ ನಾಚಿಕೆಯನ್ನು ಬಿಡಬೇಕೇ?—ಆ ಏಕಾಂತದಲ್ಲಿ ಆ ಪರಿಸ್ಥಿತಿಯಲ್ಲಿ ನಾಚಿಕೆಯೆ? ಅಲ್ಲೂ ಆ ನಾಚಿಕೆಯು ಲೋಕವನ್ನೇ ಹತ್ತಿಕ್ಕಿ ನಿಂತ ಆ ದಂಪತಿಗಳಲ್ಲೇ ನಾಚಿಕೆ? ಆದುದರಿಂದ ಪರಿಸ್ಥಿತಿಯಿದು ತೀರಾ ಅಸಹಜವಾಗಿ ಕಾಣಿಸುತ್ತದೆ.

ದ್ವಿತೀಯ ವೇದಿಕೆ :—

ಮುಂದೆ ಅವರೊಂದು ಮನೆಗೆ ಹೋಗುವರು. ಅಲ್ಲಿ ಅವರಿಗೆ ಆ ದಿನ ಊಟ, ಉಳಕೊಳ್ಳಲು ವಾಸ ಸಿಗುವುದು. ರಾತ್ರಿ ಆ ಮನೆಯ ಹೆಂಗುಸೊಬ್ಬಳ ಮಾತಿನ ಸಂದರ್ಭದಿಂದ "ದೇವರ ಸಾನ್ನಿಧ್ಯಕ್ಕೆ" ಕತೆಯ ಚರಿತ್ರೆಯು ಹೊರಬರುವುದು. ಬಸುರಿಯಾದ ಹೆಣ್ಣು—ಧರ್ಮಪುರಕ್ಕೆ ತಾವು ಹೊರಟ ಕತೆಯನ್ನು ಆ ಹೆಂಗುಸಿಗೆ ತಿಳಿಯಪಡಿಸುವಳು. ಲೇಖಕರು ಕಥಾವತರಣಕ್ಕೆ ಯೋಗ್ಯವಾದ ಕಾಲವನ್ನು ಕಂಡೇ, ಚರಿತ್ರೆಯನ್ನು ಆರಿಸಿದ್ದಾರೆ. ಈ ಭಾಗದ ಎಲ್ಲಾ ಚಿತ್ರಣ ಬಹು ಸೊಗಸಾಗಿದೆ. ದಂಪತಿಗಳ ಸಾಗು, ಮನೆಯವರ ಎರಕ, ಆ ರಾತ್ರಿಯ ಶೈತ್ಯಯುಕ್ತ ವಾತಾವರಣದ ನಿಲುವು, ರಾತ್ರಿಯ ಹೊತ್ತು ಸಾಗಿನಿಂತ ಜೀವನೋದ್ದೇಶಕಥಾವಿಸ್ತಾರದ ಥಾಟ ಬಹು ಮಾರ್ಮಿಕವಿದೆ; ಸೊಗಸಾಗಿದೆ. ಈ ಸೊಗಸು—ಕಳೆಯೇರುತ್ತಾ ಹೋಗುವ ಬಗೆಯಲ್ಲಿ ಲೇಖಕರ ಜಾಣ್ಮೆಯನ್ನು ಕೊಂಡಾಡಲೇಬೇಕು. ಆದರೆ ಇದೇ ಭಾಗದಲ್ಲಿ ಒಂದೆಡೆ ಬಂದ "ಬೇಡುವ ಮಲೆಯಾಳಿಗಳಲ್ಲವೆಂಬುದನ್ನು ಕೇಳಿ ಮನೆಯ ಯಜಮಾನನಿಗೆ, ಅವರ ಕೆಟ್ಟವರೂ ಕಳ್ಳರೂ ಇರಲಾರರೆಂದು ನಂಬಿಕೆ ಹುಟ್ಟಿತು" ಎಂಬೀ ಮಾತು, ತುಸು ಭಾರವಾಯಿತು—ಎಂದು ಮಾತ್ರ ನಾನು ಹೇಳುವೆನು! ಯಾಕೆಂದರೆ ಮಾತಿದರ ನಿಲುವು ಏಕದೇಶವ್ಯಾಪಿಯಾಗುವುದು ಬಹುಮಟ್ಟಿಗೆ ಪರಿಸ್ಥಿತಿಗೆ ಅನುಕೂಲ! ಈ ಸಂದರ್ಭದಲ್ಲಿ—ಆ ಮನೆಯಲ್ಲಿರಗಿ ಬೇಗ್ಗೆ ಧರ್ಮಪುರಕ್ಕೆ ಹೊರಡಲು ಸಿದ್ಧನಾದ ಆತ, ತನ್ನ ಹೆಂಡತಿಯನ್ನು ದನಿಗೂಡುವಾಗ, ತನ್ನ ಹೆಂಡತಿಯ ಹೆಸರು ಹೇಳಿ ಕೂಗಿದನು. "ದೀರ್ಘಕಾಲದ ಸಂಸಾರ ಅವನ ನಾಚಿಕೆಯನ್ನು ಕಳೆದಿತ್ತು" ತಲೆಗಾಣಿಸಿದ ಮಾತಿದನ್ನು—ಹಿಂದೆ ತಡಮೆ ದಾಟುವಾಗ ಬಂದ ಮಾತಿನೊಡನೆ ತೂಗಿ ನೋಡಬೇಕು. ಇಂತಹ ಪೂರ್ವಾಪರ ವಿರುದ್ಧವಿಚಾರಗಳು ಈ ಬಗೆಯ ವಿಷಾದಾಂತ ಕತೆಗಳಲ್ಲಿ ಕಾಲಿಕ್ಕಲೇಬಾರದು! ಇಂತಹ ವಿರುದ್ಧ ವಿಚಾರಗಳು ಕಥೆಯ ಹೃದಯವನ್ನೇ ಕಲಕಿ ಬಿಡುತ್ತವೆ!—

ತೃತೀಯ ವೇದಿಕೆ :—

ಉಷಃಕಾಲದಲ್ಲಿ ಮನೆಯಿಂದ ಹೊರಬಿದ್ದ ಅವರು ಪುನಃ ಮುಂದುವರಿದರು. ಮುನ್ನಾದಿನ ರಾತ್ರಿ ಮಳೆ ನೆನೆದಿದ್ದ ಮಗುವೀಗ ತತ್ತರಿಸುತ್ತಿದೆ. ಗಂಡುಸು—ದಿಟ್ಟತನದ ಹೆಜ್ಜೆಯಲ್ಲಿದ್ದರೂ, ಮಗುವಿನ ಜ್ವರವನ್ನರಿತ, ಆ ಹೆತ್ತೊಡಲು ತತ್ತರಿಸುವುದು. ಒಂದು ಬಗೆಯಲ್ಲಿ ಗಂಡುಸು ತೋರಿದ ದಿಟ್ಟತನ ಸಹಜವಾಗಿದೆ. ಹೆಣ್ಣಿದೆಯಂತೆ ಆತನೂ ಅಧೀರನಾದರೆ, ಜೀವನೋದ್ದೇಶ ಸಾಧನೆಯೆಂತಾಗಬೇಕು! ಆದರೆ ಆತನ ಮನೋಧರ್ಮವು ಮಾತ್ರ ನಿರ್ಲಕ್ಷ್ಯವಾಗಿರಬಹುದೇ? ಅವನ ಎದೆಯಾಳದಲ್ಲಿ ಮರುಕ ಬೇಡವೆ? ಅಳಿಸುಳಿದ ಒಂದು ಸಂತಾನವಲ್ಲವೇ ಅದು! ಇವೆಲ್ಲವನ್ನೂ ಆತ ಉಳಿದಿರುವನೆಂದರೆ, ಏನು ಹೇಳಬೇಕೋ ತಿಳಿಯದಾಗಿದೆ. ಈ ಬಗೆಯಲ್ಲಿ ಸಾಗಿ ನಿಂತ ಚರಿತ್ರಚಿತ್ರಣದಲ್ಲಿ ಸೊಗಸಿರಬಹುದೇ?

ಈ ವೇದಿಕೆಯಲ್ಲಿ ಬಂದ ವರ್ಣನೆಗಳೂ, ಕಥಾಘಟಕಗಳೂ ಚೆಲುವಾಗಿವೆ. ಕತೆಯು ಲಘುಕಥಾತಂತ್ರದ ಹಿರಿಮೆಯಲ್ಲೇ ಸಾಗುತ್ತಿದೆ. ಸಾಗುದಾರಿಯಲ್ಲಿದ್ದ ಆ ದಂಪತಿಗಳನ್ನು ಲೇಖಕರು ಪರಿಸ್ಥಿತಿಯ ರುದ್ರತೆಗನುವಾಗಿ ವರ್ಣಿಸುವುದೂ, ಅವರ ಮಾನಸಿಕ ಭಾವವನ್ನು ಕೆದರುವುದೂ ರುಚಿರವಿದೆ! ಅರ್ಥಾತ್—ತಂತ್ರದ ಸಾಗು ಚೆಲುವಾಗಿದೆಯೆಂದರ್ಥ!—ಇಲ್ಲಿ ಮಾನಸಿಕ ವಿಶ್ಲೇಷಣೆಯ ಚೆಲುವು ಸಾಗಿ ನಿಂತಿದೆ. ಲೇಖಕರು ಮಾನಸಸಂಚಾರಿಯಾದ ಭಾವವನ್ನು ಇಲ್ಲಿ ಚೆಲುವಾಗಿ ರೂಪಿಸಿ ಅಂತರ್ಮುಖ—ಬಹಿರ್ಮುಖ ಸಂಚಾರವನ್ನೆಸಗಿರುವುದು ಪ್ರಶಂಸನೀಯವಿದೆ!

ಮುಂದೆ ಧರ್ಮಪುರದ ವರ್ಣನೆ. ಈ ದಂಪತಿಗಳ ಮುಂದೆ ಅಲ್ಲಿಯ ಪಾರುಪತ್ಯಗಾರನು ತೋರಿದ ಅನಾದರ; ಆದರೂ ಭಕ್ತಿಭಾವದಿಂದ ತುಂಬಿದ ಆ ದಂಪತಿಗಳು ತಾವೂ ಮಿಂದು, ಜ್ವರಪೀಡಿತವಾದ ಮಗುವನ್ನು ಮಿಂಯಿಸಿದುದು; ಶ್ರೀನಾಥನ ಎದುರಿನಲ್ಲಿ ಸಾಗುವ ನಾನಾವಿಧಗಳಾದ ಹರಕೆಗಳ ವಿಸ್ತಾರ, ಪರಿಹಾರ—ಇತ್ಯಾದಿ ವಿಚಾರಗಳು ಕತೆಯ ಹೃದಯವನ್ನು ಹಿಡಿದು ಹಿಡಿದೇ ಸಾಗುತ್ತಿವೆ; ಅಲ್ಲೂ ಈ ದಂಪತಿಗಳ ಮುಂದೆ ವಿಧಿಸಿದ ಅಪ್ಪಣೆ, ಆ ಆಜ್ಞೆಯಂತೆ ಕಾಣಿಕೆಯಾಯಲು ಹಣವಿಲ್ಲದಾಗ ಆಕೆ—ಆ ಹೆತ್ತೊಡಲು—ತನ್ನ ಬೆಂಡೋಲೆಯನ್ನು ಕಳಚಿಕೊಡುವ ಸಂದರ್ಭ, ಆ ಬಳಿಕಲೂ ನಡೆದ ಕಲಶಸ್ನಾನ ಇವೇ ಮೊದಲಾದ ಕೆಲವೊಂದು ಸಂದರ್ಭಗಳು, ಕಥಾರಚನೆಯ ಕೌಶಲ್ಯವನ್ನೇ ಸಾಧಿಸಿ ನಿಂತಿವೆಯೆನ್ನಬೇಕಾಗಿದೆ. ಈ ಭಾಗದಲ್ಲಿ ಯಾವ ವಿಧವಾದ ದೋಷವೂ ತಲೆಗಾಣಿಸುವುದಿಲ್ಲ—ಸಾಮಾನ್ಯವಾಗಿ ಧರ್ಮದ ಸ್ಥಳಗಳಲ್ಲಿ—ದೈವದ ನೆಲೆವೀಡೆಂದು ಭಾವಿಸಬಹುದಾದ ಸ್ಥಳಗಳಲ್ಲಿ ನಡೆಯುತ್ತಿರುವ, ಅರ್ಚಕ ಹಾಗೂ ಪಾರುಪತ್ಯಗಾರರ ವ್ಯಾಪಾರ ಭಾವಾತ್ಮಕ ಮನೋಭಾವವನ್ನು ಲೇಖಕರು ಸರ್ವದೇಶ ಸಮವಾಯಿಯಾಗಿ ವರ್ಣಿಸಿರುವುದು, ಇಂತಹ ಸ್ಥಳಗಳನ್ನು ಸಂದರ್ಶಿಸಿದವರ ಮುಂದೆ ಹೊಸತಲ್ಲ; ಇದು ಸತ್ಯದ ಪರಮಾವಧಿಯ ಮಾತಾಗಿದೆ.

ಚತುರ್ಥ ವೇದಿಕೆ— ಅರ್ಥಾತ್ ಉಪಸಂಹಾರ ಭಾಗ :

ಪುನಃ ಆ ದಂಪತಿಗಳ ಹಿಂತಿರುಗುವಿಕೆ! ದಾರಿಯಲ್ಲಿ, ಬಂದ ಹೊತ್ತಿನಂತೆಯೇ ಮಳೆ ಬರುತ್ತಿದೆ. ಅವಸರದಿಂದ ಬಂದುದರ ಕುರಿತು ಅವರಿಬ್ಬರಿಗೂ ಬೇಸರವಾಗುತ್ತಿದೆ. ಮಗು ಜ್ವರದಿಂದ ಕುದಿಯುತ್ತದೆ! ಮಳೆ ಬಂದುದರಿಂದ, ಅವರು ಸಾಗುವ ದಾರಿಯಲ್ಲಿದ್ದ ಒಂದು ತೋಡು ಕೆಂಪು ನೀರಿನಿಂದ ತುಂಬಿ ನಿಂತಿದೆ. ಮಗುವನ್ನು ಹೆಗಲ ಮೇಲೆ ಹಾಕಿಕೊಂಡ ವ್ಯಕ್ತಿ ತೋಡನ್ನು ದಾಟಿ—ಆಚೆಯ ದಡದಲ್ಲಿ ನಿಂತು ಹೆಂಡತಿಯನ್ನು ಅವಸರಪಡಿಸುತ್ತಾನೆ. ಆಕೆ ಧೈರ್ಯದಿಂದ ನೀರಿಗಿಳಿದಳು; ಒಂದೆಡೆ ಜಾರಿದಳು. ಜಾರಿದವಳು ಜಾರಿಯೇ ತೇಲಿದಳು. ಆತ ಮಗುವಿಗಾಗಿ ನೀರಿಗೆ ಹಾರುವ ಕೆಲಸವನ್ನುಳಿದನು! ಮುಗಿಯಿತಿಲ್ಲಿಗೆ ದೇವರ ಸಾನ್ನಿಧ್ಯಕ್ಕೆ!

ಈ ಉಪಸಂಹಾರ ಭಾಗವು ಏನೂ ಚೆನ್ನಾಗಿಲ್ಲ! ಆಕೆ ನೀರಿಗೆ ಇಳಿವಾಗಲೇ ಆತ ದೂರದಲ್ಲಿರುವುದೆಂದರೆ! ಗರ್ಭಿಣಿಯಾದ ಆಕೆಯನ್ನು ದಾಟುವಾಗ ಕೈ ಹಿಡಿದುಕೊಳ್ಳದೆ, ಒಂದಿಷ್ಟೂ ಕರುಣೆಯಿಲ್ಲದೆ, ಯಂತ್ರದಂತೆ ಸಾಗುವ ಆತ ಮನುಷ್ಯನೇ! ಏನೊಂದು ಅಸಹಜವಾದ ಮಾರ್ಗವಿದು! ಇಂತಹ ಗಂಡುಸು ಇರಬಹುದು; ಆದರೆ ಮಗುವಿಗಾಗಿ ಹೆಂಡತಿಯೊಡನೆ ಪುಣ್ಯಸ್ಥಳಕ್ಕೆ ಸಾಗುವ ಹೊಣೆ ಹೊತ್ತು, ಮಗುವನ್ನು ಹೋಗುವಾಗಲೂ ಬರುವಾಗಲೂ ಎತ್ತಿಕೊಳ್ಳುವ ಗಂಡುಸು— ಈ ಕೃತ್ಯ ಮಾಡಲಾರನು! ಆತ ಈಕೆ ಜಾರುವುದನ್ನು ಕಂಡನು! ತೇಲುವುದನ್ನೂ ಕಂಡನು! ಮೊಣಕಾಲವರೆಗೆ ಮಾತ್ರ ಕಾಣಬಂದ ಆ ನೀರಿನಲ್ಲಿ ಮಾತ್ರ ಆಕೆಯನ್ನು ಉಳಿಸಲು ಹಿಂದಾದನು. ಮಗುವನ್ನು—ಜ್ವರದಲ್ಲಿ ಚಡಪಡಿಸುತ್ತಿದ್ದರೂ ಮಗುವಿಗಾಗಿ ಜೀವನವನ್ನೇ ಮುಡಿಪಾಗಿಟ್ಟು ಸಾಗಿದ ತಾಯಿಯು ಆ ಮಗುವನ್ನು ಎಲ್ಲಾದರೊಂದೆಡೆ ಇರಿಸಿ—ಕೂಗಿದರೂ ಕೂಗಲಿ ಎಂಬ ಮನೋಧರ್ಮದೊಡನೆ ದಡದಲ್ಲಿರಿಸಿ—ಸಾಗಬಹುದಾಗಿದ್ದ ಆತ, ಮಾಡಿದ ಕೆಲಸ ತೀರ ಹೇಯವಾಗಿದೆ! ಆ ಬಗೆಯಲ್ಲೂ ಆತ ಹಿಂದಾಗಿ—ಮಾಡಿದ ಕೆಲಸ ಮಗುವಿಗೆ ಒಂದೇಟು ಬಿಗಿದದ್ದು! ಬಿಗಿಯಬಹುದಿತ್ತು! ಆದರೆ ಸಂದರ್ಭ ಅದಲ್ಲ! ಕೈ ಜಾರಿ ಹೋಗಿದ್ದರೆ, ಸಿರುಪಾಯ ರುದ್ರ ಪರಿಸ್ಥಿತಿಯಾಗಿದ್ದರೆ,—ಒಂದೇಟು ಬಿಗಿಯಬಹುದಿತ್ತು; ನೂರೇಟು ಬಿಗಿಯಬಹುದಿತ್ತು! ಆತ ಮಾಡಿದ್ದು ಮಾತ್ರ ಸರಿಯಲ್ಲ! ಅಬಲೆಯಾದ ಆಕೆ ನೀರಪಾಲಾದಳು! ಆಕೆಗಾಗಿ ನಮ್ಮೆದೆಯಲ್ಲಿ ಅಯ್ಯೋ, ಎನಿಸಬಹುದು! ಕತೆ ಮುಗಿವಾಗ ಮಾತ್ರ ಭಾವ ಬದಲಾಗುತ್ತದೆ. ಆದುದರಿಂದಲೇ ಈ ಕಥೆಯ ಉಪಸಂಹಾರ ಚೆನ್ನಾಗಿಲ್ಲವೆನ್ನಬೇಕು! ಇರಲಿ!

ಇಡೀ ಕಥೆಯಲ್ಲಿ—ನಮ್ಮ ಮುಂದೆ ಹಾದು ಹೋದ ವ್ಯಕ್ತಿಗಳಲ್ಲಿ 'ಹೆಣ್ಣೆ'ಯ ಚಿತ್ರವು ರುಚಿರವಾಗಿ ಹೊಸೆಯಲ್ಪಟ್ಟಿದೆ ಆ ಬೆಂದೊಡಲಲ್ಲಿ ಸಾಗಿನಿಂತ ಅನೇಕ ದುಸ್ಸಹ ಯಾತನೆಗಳ ಪರಿಪಿಡಿಯು ಮಾರ್ಮಿಕವಾಗಿ ರೂಪಿಸಲ್ಪಟ್ಟಿದೆ. ಕಥೆಯಲ್ಲಿ ಅಲ್ಲಲ್ಲಿ ಬಂದ ಆಕೆಯ ಮಾತುಗಳೂ, ಮಾನಸಿಕವಾದ ವಿಚಾರಗಳೂ, ಆಕೆಯ ದುರಂತಜೀವನಕ್ಕೆ ಸಹಜವಿದ್ದು ಮಾರ್ಮಿಕವಿವೆ! ಯಾವುದೊಂದು ದೋಷವೂ ತಲೆಗಾಣಿಸದಂತೆ ಲೇಖಕರೀ ಪಾತ್ರವನ್ನು ರಸಾನುಗುಣವಾದ ಪರಿಳಿತಗಳಲ್ಲಿ ಸಾಗಿಸಿದ್ದಾರೆ! ಆದರೆ ಗಂಡುಸಿನ ಚಿತ್ರಣ ಮಾತ್ರ ಸರಿಯಾದ ರೀತಿಯಲ್ಲಿ ಮೂಡಿ ಬರಲಿಲ್ಲ. ಅಲ್ಲಲ್ಲಿ ಕುಸಿದಿದೆ.—

ಉತ್ತಮ ಭಾಷಾಭಾವಬಂಧದಿಂದ ಬಿಗುವೇರಿದ ಕತೆಯಿದು, ಚರಿತ್ರರೂಪಣೆಯ ನಿಲುವಿನಲ್ಲಿ, ಪರಸ್ಪರ ವಿರುದ್ಧ ಭಾವದೆರಕದಲ್ಲಿ ಕುಸಿದಿದೆಯೆಂದು ಮಾತ್ರ ನುಡಿದು, ಲೇಖಕರಿಂದ ಇನ್ನಷ್ಟು ಉತ್ತಮ ಕಥೆಗಳನ್ನು ಹಾರೈಸುವ.

ಜಯಂತಿಯ ೧೮-೧೯ನೆಯ ಸಂಪುಟಗಳು!

ಬೇಕಾದವರು ಬರೆಯಿರಿ !!

ಮಾರಲಿಕ್ಕೆ ದೊರೆಯುವುವು!

ಹಲವು ಬಗೆಯ ಉಪಯುಕ್ತ ಲೇಖನಗಳಿಂದಲೂ, ಮನೋಹರವಾದ ಕಥೆ, ನಾಟಕ ಕವನಗಳಿಂದಲೂ ತುಂಬಿ, ಯಾವಾಗಲೂ ಓದಲು ತಕ್ಕುವಾದ ಜಯಂತಿಯ ೧೮-೧೯ನೆಯ ವರ್ಷದ ಎಲ್ಲ ಸಂಚಿಕೆಗಳೂ ಮಾರಾಟಕ್ಕೆ ದೊರೆಯುತ್ತವೆ. ಬೇಕಾದವರು ೫ ರೂಪಾಯಿಗಳನ್ನು M. O. ಮೂಲಕ ಕಳುಹಬೇಕು. ಅಂಚೆಯ ವೆಚ್ಚವನ್ನು ನಾವೇ ವಹಿಸಿ ಸಂಚಿಕೆಗಳನ್ನು ಕಳುಹುವೆವು. ನಮ್ಮ ನಾಡಿನಲ್ಲಿಯ ವಾಚನಾಲಯಗಳು ಈ ಸಂದರ್ಭದ ಪ್ರಯೋಜನವನ್ನು ಪಡೆದುಕೊಳ್ಳಬೇಕು.

ವ್ಯವಸ್ಥಾಪಕ 'ಜಯಂತಿ' ಧಾರವಾಡ

ಪುಸ್ತಕ ವಿಮರ್ಶೆ

ಇನ್ನೊಂದು ಹೆಜ್ಜೆ

ಇದೊಂದು ಕವನಸಂಕಲನ. ಲೇಖಕರು — ಶ್ರೀ. ಎಸ್. ಎಸ್. ಗದಗಕರ. ಪುಟ ೪೮, ಬೆಲೆ ಹದಿನಾಲ್ಕು ಆಣೆ

ರಾಮಾಶ್ವಮೇಧವನ್ನು ಬರೆದ ಮುದ್ದಣ "ಪದ್ಯಂ ವಧ್ಯಂ ಗದ್ಯಂ ಹೃದ್ಯಂ" ಎಂದು ಹೇಳಿದ ಕಾರಣವೇನೇ ಇದ್ದರೂ, ಗದ್ಯ ಲೇಖಕರಾದ ಶ್ರೀ. ಗದಗಕರರು ಇತ್ತೀಚೆಗೆ ಪದ್ಯ ಬರೆಯುವ ಪರಿಪಾಠವನ್ನು ಪ್ರಾರಂಭ ಮಾಡಿದ್ದಾರೆ. ಪದ್ಯಕ್ಕೆ ಉತ್ಕಟವಾದ ಭಾವನೆಗಳು ಅವಶ್ಯವೆಂದು ಬೇರೆ ಹೇಳುವ ಕಾರಣವಿಲ್ಲ. 'ಧ್ವನಿ'ಯು ಕಾವ್ಯದ ಜೀವಾಳವೆಂದು ಹೇಳುವ ಪರಂಪರೆಯನ್ನು ನಾವು ಎತ್ತಿ ಹಿಡಿದರೂ 'ನವ್ಯ' ಜೀವನವನ್ನು ಚಿತ್ರಿಸಲು ಸರಳತೆ ಸಹಜತೆ ಅವಶ್ಯವಷ್ಟೆ! 'ರವಿ ಕಾಣದುದನ್ನು ಕವಿ ಕಾಣುತ್ತಾನೆ' ಎಂಬ ಹಳೆಯ ಹೇಳಿಕೆಯನ್ನು ನಾವು ಹೀಯಾಳಿಸದಿದ್ದರೂ, ಕಾಣದ್ದನ್ನು ಕಲ್ಪನೆಯಿಂದ ಬರೆಯುವುದಕ್ಕಿಂತ ಕಂಡ ಸತ್ಯವನ್ನು ಕಂಡಂತೆ ಬರೆದರೇನು ತಪ್ಪು? ಹೀಗೆ ಪ್ರಶ್ನೆ ಹಾಕಿದರೆ ಪದ್ಯ-ಗದ್ಯಗಳ ಅಂತರ ಬಹು ಮಟ್ಟಿಗೆ ಕಡಮೆಯಾಗುವ ಈಗಿನ ದಿನಗಳಲ್ಲಿ ಯಾರೂ ಕೆರಳುವ ಕಾರಣವಿಲ್ಲ. ಶ್ರೀ. ಗದಗಕರರು ಪರಂಪರೆಯನ್ನು ಮುರಿದಿಲ್ಲ. ಸರಳತೆಯನ್ನು ಕಾಯ್ದುಕೊಂಡು ತಮ್ಮ ಅನುಭವಗಳನ್ನು ಕಾವ್ಯ ರಂಗಕ್ಕೆ ತಿರುಗಿಸಿದ್ದಾರೆ. ಅವರ ಈ ಪ್ರಯತ್ನ ಬಹುಮಟ್ಟಿಗೆ ಯಶಸ್ವಿಯಾಗಿದೆ. ಲೇಖಕರು ಆಯ್ದುಕೊಂಡ ವಿಷಯಗಳನ್ನು ವಿಭಾಗಿಸಿ ಹೇಳಬಹುದಾದರೂ 'ಉಪನಿಷತ್' 'ಗೀತೆ'ಗಳಂತಹ ವಿಷಯಗಳನ್ನು ಸಹ ಸಾಮಾನ್ಯ ಓದುಗನ ಹೃದಯಕ್ಕೆ ಮುಟ್ಟುವಂತೆ ಮಾಡಿದ್ದಾಗಿದೆ. 'ಅಂತಃಪುರದಿಂದ ವಿಪಿನದೆಡೆಗೆ' 'ಇಪ್ಪತ್ತು ವರುಷ' 'ಸತ್ಯಕಾಮ' 'ಓದು ಸಾಲದು' 'ಆನಂದತೀರ್ಥ' — ಮೊದಲಾದ ಕವನಗಳು ಲೇಖಕರ ಅಭ್ಯಾಸದ ರೀತಿಯನ್ನು ಎತ್ತಿ ತೋರಿಸುತ್ತವೆ. ವ್ಯಂಗ್ಯವಾಣಿಯಿಂದ ಹಾಡಿದ 'ಕತ್ತೆ' 'ಕಾಗೆ' 'ಆ ಕೊಡೆ' 'ಕೈಚಿಮಣಿಯೊಡನೆ' — ಮೊದಲಾದ ಪದ್ಯಗಳು ವಸ್ತುವಿಗೆ ತಕ್ಕ ಸರಣಿಯಲ್ಲಿ ಬರೆದುವುಗಳೆಂದು ಹೇಳಬಹುದು. "As civilisation advances poetry almost necessarily declines" ಎಂಬ ಉದ್ಗಾರ ಈ ನಮ್ಮ ಮನ್ವಂತರಕ್ಕೆ ಸರಿ ಹೊಂದುವಂತಿದೆ. ನಮ್ಮ ಬಾಳಿನ ರೀತಿ ನೀತಿಯಂತೆ ನಮ್ಮ ಕವಿತ್ವವಲ್ಲವೆ? ಈ ಮಾತನ್ನು ನಾವು ತತ್ತ್ವತಃ ಒಪ್ಪಲೇಬೇಕಾದುದರಿಂದ, ಈಗಿನ ಕವನ ಕಟ್ಟುವ ಜಾಡು ಅದೇ ದಿಸೆಯಲ್ಲಿದೆ ಎಂದು ಹೇಳದೆ ವಿಧಿ ಇಲ್ಲ. ಈ ಸಂಕಲನದಲ್ಲಿ ಸಾಕಷ್ಟು ಛಂದೋವೈವಿಧ್ಯವಿರುವುದಲ್ಲದೆ, ಬಳಸಿಕೊಂಡ ವಸ್ತುವಿನಲ್ಲಿಯೂ ನಾವೀನ್ಯ ಕಂಡುಬರುತ್ತಿದೆ. ಶ್ರೀ. ಗದಗಕರರು ಮಾಡಿದ ಸಾಹಸ ಯತ್ನ ಫಲಕಾರಿಯಾಗಿಲ್ಲವೆಂದು ಹೇಳುವುದೆಂತು? ಕವನಗಳನ್ನು ಓದಿದಂತೆ, ತುಂಬಿ ಬರುವ ನಾದಮಾಧುರ್ಯದ ಕೊರತೆ ಎನಿಸಿದರೂ, ಅಂದಚಂದದ ಮಾತುಗಳು ಆಗೀಗ ನಮ್ಮನ್ನು ತಡೆದು ನಿಲ್ಲಿಸದೆ ಬಿಡವು. 'ಚಿಂತೆ ಹೆಚ್ಚಾದಂತೆ ಶುದ್ಧಲೀಕೆ' 'ಕೋಕಿಲೆಯ ರವವ ನಾಚಿಸುವ ಆ ಗೀತವನು' ಚೈತ್ರವಿಂತು 'ಒಯ್ಯಾರದಿ ಬರುತಿರೆ ಚೆಲ್ವಿಕೆ ಚಿಮ್ಮುತಲಿಹುದಾಗಸಕೆ' ಎಂಬಂತಹ ಅನೇಕ ಪಂಕ್ತಿಗಳು ಓದುಗನನ್ನು ಮುಗ್ಧಗೊಳಿಸುವುವು. ಈ ಕವನಸಂಕಲನ ಚಿಕ್ಕದಾಗಿದ್ದರೂ ಚೊಕ್ಕಟವಾಗಿದೆ. ಮುದ್ರಣದೋಷಗಳಿಲ್ಲದ-ಸುಂದರ ರಕ್ಷಾಕವಚದಿಂದ ಒಪ್ಪುವ ಈ ಕಿರುಹೊತ್ತಿಗೆಯು ಎಲ್ಲರಿಗೂ ನಿಲುಕುವ ಸುಲಭ ಬೆಲೆಗೆ ಸಿಕ್ಕುವಂತಹದಾಗಿದೆ. ಶ್ರೀ. ಗದಗಕರರನ್ನು ಅರಿಯುವ ಕನ್ನಡ ಓದುಗರಿಲ್ಲ, ಅವರ ಈ 'ಇನ್ನೊಂದು ಹೆಜ್ಜೆ' ನೂರೊಂದು ಹೆಜ್ಜೆಯಾಗಲಿ!

— ಶ್ರೀ. 'ಭಾರತೀಶ'

ತಾರಕಂಬಗಳು

(ಲಲಿತ ಪ್ರಬಂಧ ಸಂಕಲನ)

ಶ್ರೀಮಾನ್ ಬಿ. ಆರ್. ವಾಡಪ್ಪಿ, ಎಂ. ಎ. ಅವರು. ಬರೆದುದು.

'ಯಾರು ಹೊಣೆ?' 'ಜೀವನರಾಗ' ಎಂಬ ಕಥಾ ಸಂಕಲನಗಳಿಂದ, 'ಗಾಳಿಗುದುರೆ' ಎಂಬ ಲಲಿತ ಪ್ರಬಂಧಸಂಗ್ರಹದಿಂದ ಕನ್ನಡ ವಾಚಕವರ್ಗಕ್ಕೆ ಸುಪರಿಚಿತರಾದ ಬಿ. ಆರ್. ವಾಡಪ್ಪಿಯವರ ಕಲಾಕೃತಿ ಇದು — ತಾರಖಂಬಗಳು. ಪ್ರಸ್ತುತ ಹೊತ್ತಿಗೆ ಇನ್ನೊಂದು ಲಲಿತ ಪ್ರಬಂಧ ಸಂಕಲನ.

'ಲಲಿತ ಪ್ರಬಂಧ' ಎಂಬ ಹೆಸರಿನ ಸಾಹಿತ್ಯಿಕ ರೂಪವು ಕನ್ನಡ ವಾಙ್ಮಯಲೋಕದಲ್ಲಿಂದು ಲೋಕಪ್ರಿಯವಾಗುತ್ತಿದೆ; ಆದರೂ ಇದರ ಸ್ವರೂಪ ಬೆಳವಣಿಗೆ ಆಂಗ್ಲ ಸಾಹಿತ್ಯದ 'Essay' ಎಂಬ ಅಂಗಕ್ಕೆ ಅತ್ಯಂತ ನಿಕಟವರ್ತಿಯಾಗಿದೆಯಷ್ಟೆ!

ಲಲಿತ ಪ್ರಬಂಧದ ವ್ಯಾಖ್ಯೆಯನ್ನು ಥಟ್ಟನೆ ಸಮರ್ಪಕವಾಗಿ ಹೇಳುವುದು ಕೊಂಚ ಬಿಗಿ ಎನಿಸಿದರೂ, ಅದರ ಉದಾತ್ತಮಟ್ಟವನ್ನು

ಹೃದಯವನ್ನೂ ಸಹಜವಾಗಿ--ಇಂದು ನಾವು ಗುರುತಿಸಬಹುದು. ಮೊತ್ತಮೊದಲು ಸ್ವಚ್ಛಂದ ವಿಚಾರಲಹರಿಯೇ ಅದರ ಜೀವಾಳವೆಂದು ಬಲ್ಲವರು ಉಸಿರುವಲ್ಲಿ ಔಚಿತ್ಯವೇ ಇದೆ. ಸಣ್ಣಕತೆಯಷ್ಟು ಲೋಕಪ್ರಿಯವಿದಾಗಲಾರದಾದರೂ, ಅದರನಂತರ ಇದನ್ನು ಓದಿಯೇ ತೀರಬೇಕೆಂದು ಪ್ರೈಮರಿಸುವಷ್ಟು ಇದರ ಸ್ವರೂಪ ಮೋಹಕವಾಗಿದೆ. ಸಣ್ಣಕತೆಗೆ ಇರಲಾಗದ ಸ್ವಾತಂತ್ರ್ಯ ಇದರ ವಸ್ತುವಿನ ಆಯ್ಕೆಯಲ್ಲಿ ಇದೆ—ಎಂದರೆ ಯಾರಿಗೂ ತಪ್ಪು ಗ್ರಹಿಕೆಯಾಗದು. "From the waste paper basket up to the star in the firmament" ಎಂಬ ಭಾವಗರ್ಭಿತ ಉಕ್ತಿಯೇ ಇದರ ವ್ಯಾಪ್ತಿಗೆ ಜೀವಂತ ಸಾಕ್ಷಿ. ಕೆಲಸಕ್ಕೆ ಬಾರದ ಹತ್ತು ಮಾತು ಹೇಳಿದರೇನು ಬಂತು? ಅಂತೇ ಪ್ರಬಂಧಕಾರನ ಮನಸ್ಸು ಗಾಳಿಯಂತೆ ಹಗುರಾಗಿ ನೀರಿಗಿಂತ ತಿಳಿಯಾಗಿರಬೇಕಾಗಿದೆ. ಅವನು ತನ್ನ ತತ್ತ್ವ, ಹೃದಯವನ್ನೇ ಶಬ್ದಶಬ್ದಗಳಲ್ಲಿ ಹುದುಗಿಸಿರುವನೆಂದರೆ ಅತಿಶಯೋಕ್ತಿಯ ಆರೋಪ ಬರಲಿಕ್ಕಿಲ್ಲ. ಈ ಮಾನದಂಡದಿಂದ ಅಳೆಯಲಾಗಿ ಪ್ರಬಂಧಕಾರನ (ಒಳ್ಳೆಯ!) ಸ್ಥಾನಮಾನ ಯಾವ ನಾಮಾಂಕಿತ ಸಣ್ಣ ಕತೆಗಾರ-ಭಾವಗೀತೆಯ ನಿರ್ಮಾತೃವಿಗೂ ಕಡಿಮೆಯಾಗಿಲ್ಲವೆಂಬುದು ಮನನೀಯ ಮಾತು!

ಪ್ರಸ್ತುತ ಸಂಕಲನದಲ್ಲಿ 'ಪ್ರಬಂಧಕ್ಕೆ ವಿಷಯ ಸಿಗದಾಗ' ಎಂಬುದರಿಂದ ಮೊದಲು ಮಾಡಿ 'ಪ್ರವಾಸದ ಫಲಶ್ರುತಿಯ'ವರೆಗೆಂದರೆ ಒಟ್ಟು ೧೨ ಬರಹಗಳಿವೆ. ಇವುಗಳಲ್ಲಿ 'ನಮಸ್ಕಾರ, ನಾನು' ಎಂಬುವು ವೈಯಕ್ತಿಕ ವಿಚಾರಲಹರಿಗೆ ತತ್ತ್ವಚಿಂತನೆಗೆ ವಿಶೇಷವಾಗಿ ಮೀಸಲೆನಿಸಿದರೆ, ಮುಪ್ಪು–ಹೊಗಳಿಕೆ–ಆಡಿಕೆ–ಚಿಂತೆ–ಸೊಕ್ಕು—ಕೇವಲ ಲಲಿತಪ್ರಬಂಧಗಳೆ! ಅಲ್ಲಿ ವಿಚಾರಕ್ಕೆ ಸಂಪೂರ್ಣ ಪ್ರಾಧಾನ್ಯ. ಸಾಮಾನ್ಯರು ಇಂತಹವುಗಳ ಗಹನತೆಗೆ, ಒಲವಿಗೆ ತಲೆಯಲ್ಲಾಡಿಸಿದರೂ ಪರವಾ ಇಲ್ಲ. ಬುದ್ಧಿವಂತರು ಮಾತ್ರ ಛಾಚೂ ತಪ್ಪದೆ ಎದೆಗವಚಿಕೊಳ್ಳುವರು. ಅಂತಹ ಅಭ್ಯಾಸಬಲ, ವ್ಯಂಗ್ಯ, ಸಂತತ-ವಿಚಾರಧಾರೆ ಇಲ್ಲಿ ಹೊರಸೂಸುವುವು.

'ಗೆಳೆಯನ ಮದುವೆ' ಎಷ್ಟಾದರೂ ಗೆಳೆಯನ ಮದುವೆ! ಆ ವೈಭವ ಅನುಭವಿಸಿಯೇ ಜೀವನದಲ್ಲಿ ಉನ್ಮಾದ ತಂದುಕೊಳ್ಳಬೇಕು. ಅಲ್ಲಿ ಕ್ರಮಬದ್ಧತೆ ಬೇಡುವುದು ಹೆಡ್ಡತನವೇ ಎನಿಸೀತು! ಪರಿಶುದ್ಧ ವಿನೋದಕ್ಕೆ ಮಾತ್ರ ಎರವಾಗಕೂಡದು.

ಚಹದ 'ಅಂಗಡಿ ಮುಚ್ಚಿದರೆ' ನಿಜವಾಗಿಯೂ ಜೀವಂತ ವಿಷಯ. ಅಂಗಡಿ ತೆಗೆದ ಸುಖ, ಮುಚ್ಚಿದ ಅಸುಖ ಸುಸಂಸ್ಕೃತ ನಾಗರಿಕರಿಗೇ ಗೊತ್ತು! ಅಂತೇ ಇಲ್ಲಿಯ ನಿರೂಪಣೆ ರುಚಿಕಟ್ಟು.

ರೈಲು 'ಪ್ರವಾಸ'ದಲ್ಲಿ ತಾರಕಂಬಗಳು ಬಂದರೂ, ಆ ನಿರ್ಜೀವ ವಸ್ತುಗಳಲ್ಲಿಯೇ ಸಜೀವತೆ ಕಂಡು, ಬೇರೆಯವರಿಗೆ ಬೆರಳುಮಾಡಿ ತೋರಿಸುವುದು ಪ್ರಬಂಧಕಾರನ ಜಾದೂಗಾರಿಕೆಯಾಗಿದೆ. ಆ ಕಣ್ಕಟ್ಟನ್ನು ವಾಡಪ್ಪಿಯವರಿಗೆ ಕಲಿಸಬೇಕಾಗಿಲ್ಲ!

ತಾರಕಂಬಗಳು

(ಲಲಿತ ಪ್ರಬಂಧಗಳ ಸಂಕಲನ)

ಲೇಖಕರು :

ಶ್ರೀ. ಬಿ. ಆರ್. ವಾಡಪ್ಪಿ, ಎಂ. ಎ.

ಇದೀಗ ಪ್ರಕಟವಾಗಿದೆ.

ಹಿರಿಯ ಕವಿಗಳಾದ ಶ್ರೀಮಾನ್ ಬೇಂದ್ರೆ ದತ್ತಾತ್ರೇಯರ ಮುನ್ನುಡಿಯೂ ಇದೆ.

ಬೆಲೆ ೧-೩೨ ನ. ಪೈ. ಕ್ರಾ. ೯೬ ಪುಟಗಳು.

ಮಾರಾಟಗಾರರು :

ಮನೋಹರ ಗ್ರಂಥಭಾಂಡಾರ, ಧಾರವಾಡ

ಮತ್ತು

ಸಮಾಜ ಪುಸ್ತಕಾಲಯ, ಭಗತ್‌ಸಿಂಗ ಬೀದಿ, ಧಾರವಾಡ

'ಪ್ರವಾಸದ ಫಲಶ್ರುತಿ'ಯಲ್ಲಿ ಪ್ರವಾಸವೂ ಇದೆ; ಫಲಶ್ರುತಿಯೂ ಇದೆ. ಎಂದಮೇಲೆ ಹನುಮಪ್ಪನ ಬಾಲದಂತೆ ಅದು ಬೆಳೆದಿದ್ದರೆ ಪಾಪವಲ್ಲ! ಅಸಂಖ್ಯಾತ ಮಾತುಗಳನ್ನು ದಿನಚರಿಯ ಧರ್ತಿಯಲ್ಲಿ ಹೇಳುವುದು ಅನಿವಾರ್ಯವಾದುದರಿಂದ, ವರ್ಣನೆಗಳಿಗೆ ಅವಕಾಶ ಕಡಿಮೆ ದೊರೆಯಿತೆಂದು ವಾಚಕರು ಇಲ್ಲಿ ಹಳಹಳಿಸುವುದು ಸಹಜ; ಆದರೆ ಇದ್ದ ವರ್ಣನೆಗಳು ಅನಿರೀಕ್ಷಿತವಾಗಿ ಕಾವ್ಯದ ಮಟ್ಟಕ್ಕೇರುವುವು. ಕತೆಗಾರನ ಕೈಚಳಕದ ನೆನಪು ತರುವುವು.

ಪ್ರಬಂಧಗಳಲ್ಲಿ ಘಟನೆಗಳಿಗೆ ಎಡೆ ಇರದ್ದರಿಂದ, ಆಗೀಗ 'ಕುಂಟಗೊ ಕೂರಿಗೊ' ಎನ್ನುವುದು ತಪ್ಪದು. ತಾಸಿನ ಮುಳ್ಳಿನ ಗತಿ; ಹಾಗೆ ಇಲ್ಲಿಯ ಕೆಲವು ಪ್ರಬಂಧಗಳಲ್ಲಿ ಬಂದಿದೆ ಎನಿಸಿದರೆ–ಅದಕ್ಕೆ ಲೇಖಕರು ಪೂರ್ಣ ಹೊಣೆಗಾರರಲ್ಲ. ಪ್ರಬಂಧಸಾಹಿತ್ಯದ್ದೂ ಅದು ಅಹುದು. ಕನ್ನಡದ ಪ್ರಬಂಧಗಳಿಗಂತೂ ಈ ಮಾತನ್ನು ಅನ್ವಯಿಸದೆ ವಿಧಿ ಇಲ್ಲ!

ಸಾಮಾನ್ಯತಃ ಕಡಮೆ ಬರೆಯುವ, ಬರೆದದ್ದನ್ನೆಲ್ಲ ಅಚ್ಚು ಹಾಕಿಸದ ವಾಡಪ್ಪಿಯವರ ಈ ನವೀನಕೃತಿಗೆ ಸ್ವಾಗತ. ಮುದ್ರಣದೋಷ ಕಡಿಮೆಯಾದ ಹಾಗೂ ಅಚ್ಚುಕಟ್ಟಾದ ಇಂತಹ ಒಂದು ಪ್ರಬಂಧ ಸಂಕಲನವನ್ನು ಪ್ರಕಟಿಸಿ, ಸಾಹಿತ್ಯದ ಇನ್ನಿತರ ಅಂಗಗಳಲ್ಲಿಯೂ ಉಪಾಸನೆ ನಡಿಸುವರಾಗಿ ಭರವಸೆ ತೋರುವ ವಾಡಪ್ಪಿಯವರು ಅಭಿನಂದನಾರ್ಹರೆಂಬಲ್ಲಿ ಸಂದೇಹವಿಲ್ಲ. ಸಾಹಿತ್ಯದ ಸಂಧಿ (?) ಕಾಲದ ಅವರ ಆ ಹೊಂಗನಸುಗಳೆಲ್ಲ ನನಸಾಗಲೆಂದು ನಮ್ಮ ಹಾರಯಿಕೆ.

—ಎಸ್. ಎಸ್. ಜಿ.

ಸಾದರ ಸ್ವೀಕಾರ

೭೪. **ಮರೆಯಲಾಗದ ಯಾತ್ರೆ.** (ಲಲಿತಪ್ರಬಂಧ ಸಂಕಲನ) ಲೇಖಕರು ಶ್ರೀಮಾನ್ ಎನ್. ಎಸ್ ಗದಗಕರ್, ಶುಕ್ರವಾರ ಪೇಟೆ, ನವಿಲೂರ ಅಗಸಿ, ಧಾರವಾಡ. ಲೇಖಕರೇ ಪ್ರಕಾಶಕರು. ಕ್ರೌ. ಅ. ೭೮ ಪುಟಗಳು. ಬೆಲೆ ೦-೧೫-೦.

೭೫. **ಪತಂಗ** (ಶಿಶುಗೀತ ಸಂಕಲನ). ಲೇಖಕರು ಶ್ರೀಮಾನ್ ಪರಶುರಾಮ ಹಣಮಂತ ಚಿತ್ರಗಾರ—ಜಾಲೀಹಾಳ. ಪ್ರಕಾಶಕರು ಶ್ರೀ. ಬಸವಣ್ಣದೇವರು, ಶಿವಾನಂದಮಠ, ಪಟ್ಟದಕಲ್ಲು, ಜಿ. ವಿಜಾಪುರ. ಕ್ರೌ. ಅ. ೩೩ ಪುಟಗಳು, ಬೆಲೆ ೫೭ ನ. ಪೈ.

೭೬. **ಸಾಹಿತ್ಯದ ಹಿನ್ನೆಲೆ** (ಸಂಶೋಧನಾತ್ಮಕ ಲೇಖನ ಸಂಕಲನ). ಲೇಖಕರು ವಿದ್ವಾನ್ ಕೆ. ವೆಂಕಟರಾಯಾಚಾರ್ಯರು, ಸುರಕಲ್ಲು (ದ. ಕ.) ಪ್ರಕಾಶಕರು ಶ್ರೀ. ಮಂಗಳೂರು ಗೋವಿಂದ. ರಾಯರು, ಸಾಹಿತ್ಯಭಾಂಡಾರ, ಹುಬ್ಬಳ್ಳಿ. ಕ್ರೌ. ಅ. ೧೧೩ ಪುಟಗಳು. ಬೆಲೆ ೧-೮-೦.

೭೭. **ಮದುವೆಯ ಪತ್ತಲ** (ಮತ್ತು ಇತರ ನಗೆಯಾಟಗಳು.) ಬರೆದವರು ಶ್ರೀಮಾನ್ ಬೇಂದ್ರೆ ಲಕ್ಷ್ಮಣರಾಯರು; ಪ್ರಕಾಶಕರು : ಸಾಹಿತ್ಯಭಾಂಡಾರ, ಹುಬ್ಬಳ್ಳಿ. ಕ್ರೌ. ಅ. ೧೩೦ ಪುಟಗಳು. ಬೆಲೆ ೧ ರೂ. ೭೫ ನ. ಪೈಸೆಗಳು.

೭೮. **ಧಾರವಾಡ ಜಿಲ್ಹಾ ಅರವಟ್ಟಿಗೆಯ ಸರ್ವೋದಯ ಯೋಜನೆ** (ಜೂನ್ ೧೯೪೯ ರಿಂದ ಅಕ್ಟೋಬರ್ ೧೯೫೭ರ ವರೆಗಿನ ಎಂಟು ವರ್ಷಗಳ ವರದಿ) ಪ್ರಕಾಶಕರು, ಶ್ರೀ. ನರಸಿಂಹ ದಾಬಡೆ, ಸಂಚಾಲಕ, ಧಾರವಾಡ ಜಿಲ್ಹಾ ಸರ್ವೋದಯ ಯೋಜನೆ, ಅರವಟ್ಟಿಗೆ. ಡೆ. ಅ ೪೮ ಪುಟಗಳು.

ವರದಿಯ ಅವಧಿಯಲ್ಲಾದ ಕಾರ್ಯ ಅದ್ಭುತವೆನಿಸುವಂತಿದೆ. ಕಾಡನ್ನು ಬೀಡನ್ನಾಗಿ ಮಾಡಿದುದೂ, ಬರಿಹೊಟ್ಟೆಯ ಜನರಿಗೆ ಆಹಾರ ದೊರಕಿಸಿ ಕೊಟ್ಟುದೂ, ನಿರುದ್ಯೋಗಿಗಳಿಗೆ ಉದ್ಯೋಗ ಕಲ್ಪಿಸಿಕೊಟ್ಟುದೂ, ಅಶಿಕ್ಷಿತರನ್ನು ಸುಶಿಕ್ಷಿತರನ್ನಾಗಿ ಪರಿವರ್ತಿಸಿದುದೂ ಈ ಸಂಸ್ಥೆಯ ಒಂದು ಪವಾಡಕಾರ್ಯವೆಂದೇ ಎನಿಸುವಂತಿದೆ— ಈ ವರದಿಯಲ್ಲಿಯ ಅಂಕಿಸಂಖ್ಯೆಗಳಿಂದ, ಇಷ್ಟೊಂದು ವಿಧಾಯಕ ಚಟುವಟಿಕೆಗಳನ್ನು ಕೈಕೊಂಡು, ಯಶಸ್ವಿಯಾಗಿ ನೆರವೇರಿಸಿದುದಕ್ಕಾಗಿ ಈ ಸಂಸ್ಥೆಯ ಸಂಚಾಲಕರೂ, ಕಾರ್ಯಕರ್ತರೂ ನಾಡಿಗರ ಅಭಿನಂದನೆಗೆ ಪಾತ್ರರಾಗಿದ್ದಾರೆ.

೭೯. **ಗಮಕ ಕಾವ್ಯಮಂಜರಿ.** (ಕವನ ಸಂಕಲನ) ಪ್ರಕಾಶಕರು, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು. ಕ್ರೌ. ಅ. ೧೧೩ ಪುಟಗಳು. ಬೆಲೆ ೧—೦೦.

೮೦. **ಭಗವಾನ್ ಬುದ್ಧ.** (ಸಂಶೋಧನಾತ್ಮಕ ವ್ಯಕ್ತಿಚಿತ್ರ). ಮೂಲ ಮರಾಠಿ ಲೇಖಕರು: ದಿವಂಗತ ಧರ್ಮಾನಂದ ಕೋಸಂಬಿಯವರು. ಕನ್ನಡ ಭಾಷಾಂತರಕಾರರು ಶ್ರೀಮಾನ್ ಆದ್ಯ ರಂಗಾಚಾರ್ಯರು. ಪ್ರಕಾಶಕರು, ಸಾಹಿತ್ಯ ಅಕಾಡೆಮಿ, ಹೊಸ-ದಿಲ್ಲಿ. ಕ್ರೌ. ಅ. ೪೩೦ ಪುಟಗಳು. ಬೆಲೆ ೩ ರೂಪಾಯಿಗಳು.

೮೧. **ಸುಕುಮಾರ.** (ಕನ್ನಡ ಮಾಸಪತ್ರಿಕೆ) ಸಂಪಾದಕರು ಶ್ರೀಮಾನ್ ಪಂಡಿತ ಗುರುಸಿದ್ಧದೇವರು ಗಲಗಲಿ, 'ವೇದಾಂತಾಚಾರ್ಯ'— ಶಿವಯೋಗ ಮಂದಿರ, ತಾ. ಬಾದಾಮಿ, ಜಿಲ್ಹಾ ವಿಜಾಪುರ. ಡೆ. ಅ. ೩೭ ಪುಟಗಳು. ವಾ. ಚಂ ೬ ರೂಪಾಯಿ

೮೨. **ವಧೂ-ವರ ಜ್ಯೋತಿಷ್ಯ** (ಫಲಜ್ಯೋತಿಷ್ಯ ವಿಷಯಕ ಪುಸ್ತಕ) ಲೇಖಕರು ಶ್ರೀಮಾನ್ ಎಸ್. ಕೆ. ಜೋಗಳೇಕರರು, ಜ್ಯೋತಿಷ್ಯ ಕಾರ್ಯಾಲಯ, ಮಿಣಜಗಿ ಬಿಲ್ಡಿಂಗ್, ಮಾರ್ಕೆಟ್, ಧಾರವಾಡ ಕ್ರೌ. ಅ. ೧೦೮ ಪುಟಗಳು. ಬೆಲೆ ೧—೦೦

೮೩ **ಸಂಸ್ಕೃತ ಕವಯಿತ್ರಿಯರು.** (ಸಾಹಿತ್ಯ ಪರಿಚಯಾತ್ಮಕ ಕಿರುಹೊತ್ತಿಗೆ). ಲೇಖಕರು, ಶ್ರೀಮಾನ್ ಕೆ. ಟಿ. ಪಾಂಡುರಂಗಿ, ವಿದ್ವಾನ್, 'ಶಿರೋಮಣಿ' ಎಂ. ಎ. ಅವರು. ಪ್ರಕಾಶಕರು, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ. ಪ್ರೂ. ಕ್ರಾ. ಅ, ೮೦ ಪುಟಗಳು. ಬೆಲೆ ೨—೪—೦.

೮೪. **ಆಕಾಶವಾಣಿ ಪ್ರಸಾರಿಕಾ.** (ಕನ್ನಡ ಷಾಣ್ಮಾಸಿಕ ಪತ್ರಿಕೆಯ ೨ನೆಯ ಸಂಚಿಕೆ) ಸಂಪಾದಕರು, ಶ್ರೀಮಾನ್ ದ. ರಾ. ಬೇಂದ್ರೆ ಎಂ. ಎ. ಅವರು. ಪ್ರಕಾಶಕರು, ಕೇಂದ್ರ ಸರಕಾರದ ಪಬ್ಲಿಕೇಶನ್ ಡಿವಿಜನ್, ದಿಲ್ಲಿ—೮. ರೊಯಲ್ ಅ. ೭೪ ಪುಟಗಳು ಬೆಲೆ ೫೦ ನಯೆಪೈಸೆ.

ಇದರಲ್ಲಿ ಮೊದಲನೆಯ ಲೇಖನವಾಗಿ, ಅಖಿಲಭಾರತ ಆಕಾಶವಾಣಿಯ ಮುಖ್ಯಾಧಿಕಾರಿಗಳಾದ ಶ್ರೀ. ಜೆ. ಸಿ. ಮಾಥೂರವರು ಬರೆದ 'ಆಕಾಶವಾಣಿ' ಎಂಬುದು ಪ್ರಕಟವಾಗಿದೆ. ಆ ಮೇಲಿನ ಲೇಖನಗಳೆಲ್ಲ ಧಾರವಾಡ, ಬೆಂಗಳೂರು ಬಾನುಲಿಕಟ್ಟೆಗಳಲ್ಲಿ ಬಿತ್ತರಗೊಂಡ ಕವನ, ಲಘುಪ್ರಬಂಧ, ಸಣ್ಣಕತೆ, ಭಾಷಣ, ಪ್ರಬಂಧಗಳಿವೆ ನವ್ಯಕವನಗಳಿಗೆ ಹೆಚ್ಚು ಅವಕಾಶ ದೊರೆತುದು, ಇಲ್ಲಿಯ ಲೇಖನಗಳ ಆಯ್ಕೆಯದೊಂದು ವೈಶಿಷ್ಟ್ಯ. ಶ್ರೀ. ಎ. ಎನ್. ಮೂರ್ತಿರಾಯರ 'ಮನೆ ಕಟ್ಟಿನೋಡು' ಎಂಬ ಹರಟೆ, ಶ್ರೀ. ಯ. ಗು. ಬಿರಾದಾರ ಅವರ 'ಸಿದ್ದ' ಎಂಬ ಕತೆ ಚೆನ್ನಾಗಿವೆ. ಶ್ರೀ. ಪು. ತಿ. ನರಸಿಂಹಾಚಾರ್ಯರ 'ನವ್ಯಕಾವ್ಯ-ಛಂದಸ್ಸು' ಎಂಬ ಲೇಖನದಲ್ಲಿಯ ವಿಚಾರಗಳು ಹೆಚ್ಚಿನ ವಿಮರ್ಶೆಗೆ ಮಾರ್ಗದರ್ಶಕವಾಗಿವೆ. ಶ್ರೀಮಾನ್ ಉತ್ತಂಗಿಯವರ 'ಕನ್ನಡ ಗಾದೆಗಳು' ಎಂಬ ಲೇಖನ, ಶ್ರೀಮಾನ್ ಬೆಟಗೇರಿ ಕೃಷ್ಣಶರ್ಮರ 'ನಮ್ಮ ಜಾನಪದ ನಾಟ್ಯಭೂಮಿ' ಎಂಬ ಲೇಖನದಲ್ಲಿಯ ಉತ್ತರ ಕರ್ನಾಟಕದ ವಿವಿಧ ದೊಡ್ಡಾಟಗಳ ಪರಿಚಯ, ಶ್ರೀಮಾನ್ ರಂ. ರಾ. ದಿವಾಕರ ಅವರ ಕನ್ನಡದಲ್ಲಿ 'ಅನುಭಾವ ಸಾಹಿತ್ಯ' ಎಂಬ ಲೇಖನ —ಇವೆಲ್ಲ ಅಭ್ಯಾಸಪೂರ್ಣವಾಗಿದ್ದು ಹೊಸ ಸಾಹಿತ್ಯಾಭ್ಯಾಸಿಗಳಿಗೆ ತುಂಬ ಉಪಯುಕ್ತವೆನಿಸುವಂತಿವೆ. ಮುದ್ರಣ-ಕಾಗದಗಳು ಅಚ್ಚುಕಟ್ಟಾಗಿವೆ. ನಮ್ಮ ವಾಚಕವರ್ಗ ಈ ಸುಂದರ ಸಂಚಿಕೆಯನ್ನು ಅವಶ್ಯವಾಗಿ ಓದಿನೋಡಬೇಕೆಂದು ನಮ್ಮ ಬಿನ್ನಹ.

ಕರ್ನಾಟಕದಲ್ಲಿ ಭಾವಗೀತ ಗಾಯನ ಬೆಳೆಯಬೇಕಾಗಿದೆ!

ಹಾಡಲಿಕ್ಕೆ ಬರುವಂತಹ ಕವಿತೆಗಳೇ ನಮ್ಮಲ್ಲಿ ಇಲ್ಲವೆಂದು
ಸಂಗೀತಗಾರರ ಆಕ್ಷೇಪಣೆ!

ಇದು ನಿಜವಾದ ಆಕ್ಷೇಪಣೆಯೆಂದು ನಂಬುವಿರಾ ?

ನಿಜವಲ್ಲವೆಂಬುದರ ಪ್ರತ್ಯಕ್ಷ ಸಾಕ್ಷಿಗಳಾಗಿ

'ಆನಂದಕಂದ' ಅವರ ಈ ಗೀತಸಂಕಲನಗಳಿವೆ :

ಮುದ್ದನ ಮಾತು (ಶಿಶುಭಾವದ ಗೀತಗಳು)	...	....	೦—೧೨—೦
ಒಡನಾಡಿ (ನಲ್ವಾಡುಗಳು)	....	....	೧—೦—೦
ವಿರಹಿಣಿ (ತತ್ತ್ವರೂಪಕ ಗೀತಗಳು)	....	....	೧—೪—೦
ಕಾರಹುಣ್ಣಿವೆ (ವಿವಿಧ ಭಾವಗೀತಗಳು)	....	....	೨—೦—೦

ಕಾವ್ಯಪ್ರೇಮಿಗಳೂ ಸಂಗೀತಗಾರರೂ ಇವುಗಳನ್ನು ಒಮ್ಮೆ ಓದಿ ನೋಡಬೇಕು.

ಬೇಕಾದವರು ಕೆಳಗಿನ ವಿಳಾಸಕ್ಕೆ ಬರೆಯಿರಿ !

'ಜಯಂತಿ' ಕಾರ್ಯಾಲಯ, ಧಾರವಾಡ

Printed by N. A. Hoskeri at the Vijaya Press, Dharwar and published for the Proprietors Jayanti Publications, by K. S. Betgeri at the Jayanti Office, Dharwar